UNIVERSAL
LIBRARY
OU_200955
UNIVERSAL
LIBRARY

OSMANIA UNIVERSITY LIBRARY

Call No. K. 294.2 / U65 Accession No. K 5301

Author సుబ్రహ్మణ్యశర్మ మున్నంబళ్ళి

Title ఆంధ్ర సంస్కృతి. Vol. I. 1945.

This book should be returned on or before the date last marked below.

ಶ್ರೀಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಶ್ರೀ ಶಂಕರಾಚಾರ್ಯರವರ ಗ್ರಂಥಗಳು

ಉಪನಿಷದ್ಭಾಷ್ಯಗಳು,

ಸಂಪುಟ ೧

(ಈಶ, ಕೇನ, ಕಠ)

ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮ

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
೧೯೪೫

ಕರ್ನಾಟಕ ಸಾಹಿತ್ಯ ಮಂದಿರ,
ಧಾರವಾಡ.



ಶ್ರೀ ಕರ್ನಾಟಕ ರತ್ನಸಿಂಹಾಸನಾಧೀಶ್ವರರಾದ

ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್
ಜಿ ಸಿ. ಎಸ್. ಐ., ಮಹಾಪ್ರಭುಗಳವರು, ಮೈಸೂರು.

ಪ್ರಕಾಶಕರ ವಿಜ್ಞಾಪನೆ

ಶ್ರೀಶಂಕರಾಚಾರ್ಯರವರ ಅಮೋಘವಾದ ಕೃತಿಗಳನ್ನೆಲ್ಲ ಕನ್ನಡಿಸಿ ಮಹಾಜನರ ಮುಂದೆ ಇಡುವ ಸುಯೋಗವು ಕಾರ್ಯಾಲಯಕ್ಕೆ ಇದೀಗ ಲಭಿಸಿರುತ್ತದೆ. ನಮ್ಮನ್ನಾಳುವ ಶ್ರೀಮತ್ಕರ್ಣಾಟಕಸಿಂಹಾಸನಾಧೀಶ್ವರರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ. ರವರು ಜಗತ್ಪ್ರಸಿದ್ಧರಾದ ಆಚಾರ್ಯರವರ ಗ್ರಂಥಗಳೆಲ್ಲವನ್ನೂ ಪರಿಶೋಧಿಸಿ ಸಮೂಲವಾಗಿ ಕನ್ನಡಿಸಿ ಪ್ರಕಟಿಸಬೇಕೆಂದು ಕೊಡಿಸಿರುವ ಉದಾರಾಜ್ಞೆಯನ್ನು ಶಿರಸಾವಹಿಸಿ ಈ ಮಹಾಕಾರ್ಯವನ್ನು ನಾವು ಕೈಗೊಂಡಿರುತ್ತೇವೆ.

ಇದುವರೆಗೆ ನಾವು ಪ್ರಕಟಿಸಿದ್ದ ಕೆಲವು ಗ್ರಂಥಗಳನ್ನು ಈಸಲ ಸಂಪೂರ್ಣವಾಗಿ ಪರಿಷ್ಕರಿಸಿ, ಸಂಸ್ಕೃತಮೂಲ, ಕನ್ನಡಭಾಷಾನುವಾದ, ಮುಖ್ಯವಿಷಯಗಳನ್ನು ವಿಶದೀಕರಿಸುವ ಟಿಪ್ಪಣಿಗಳು, ಆಚಾರ್ಯರ ಮಿಕ್ಕ ಗ್ರಂಥಗಳಲ್ಲಿರುವ ವಿಷಯ ವಿವೇಚನೆಯ ಹೋಲಿಕೆಯನ್ನು ಸುಲಭಗೊಳಿಸುವ ಗ್ರಂಥಪರಾಮರ್ಶಿಕೆಗಳು, ಆಯಾ ಗ್ರಂಥದ ಸಾರ, ಮಂತ್ರಗಳ ಅಥವಾ ಶ್ಲೋಕಗಳ ಅಕ್ಷರಾನುಕ್ರಮಣಿಕೆ, ಶಬ್ದಾನುಕ್ರಮಣಿಕೆ—ಇಷ್ಟನ್ನೂ ಸೇರಿಸಿ ಪರಿಪೂರ್ತಿಗೊಳಿಸಿರುತ್ತದೆ. ಉಳಿದ ಗ್ರಂಥಗಳನ್ನು ಮೊದಲನೆಯ ಸಲಕ್ಕೆ ಕನ್ನಡಿಸಿ, ಇದೇ ರೀತಿಯ ಸಲಕರಣೆಗಳೊಡನೆ ಹೊರಕ್ಕೆ ತರಲಾಗಿದೆ. ಗ್ರಂಥದ ಪೀಠಿಕೆಯಲ್ಲಿ ಕಾಣುವ ವಿಷಯವಿವೇಚನೆಯು ವಿಚಾರಪ್ರಚೋದಕವಾಗಿರುವಂತೆ ಏರ್ಪಡಿಸಲಾಗಿದೆ. ಮೂಲಭಾಷ್ಯವನ್ನು ತಕ್ಕಂತೆ ಪ್ರಭುಟ್ಟಗಳಾಗಿ ವಿಂಗಡಿಸಿ ತಲೆಬರಹಗಳನ್ನು ಸೇರಿಸಿರುವದು; ಮುಖ್ಯಪಾರಭೇದವನ್ನು ಸೂಚಿಸಿರುವದು; ಪ್ರಮಾಣವಚನಗಳ ಸ್ಥಾನವನ್ನು ಅಲ್ಲಲ್ಲಿಯೇ ತೋರಿಸಿರುವದು, ಭಾಷ್ಯ, ಅನುವಾದ, ಟಿಪ್ಪಣಿಗಳು—ಮುಂತಾದವುಗಳು ವಿಂಗಡವಾಗಿ ಕಾಣುವಂತೆ ಬೇರೆಬೇರೆಯ ತರದ ಅಚ್ಚಿನ ಅಕ್ಷರಗಳನ್ನು ಆರಿಸಿಕೊಂಡಿರುವದು—ಇವಿಷ್ಟೂ ಈ ಗ್ರಂಥರತ್ನಮಾಲೆಯ ವಿಶೇಷಗಳು.

ಈ ಗ್ರಂಥಾವಳಿಯ ಪ್ರಯೋಜನವು ಕನ್ನಡನಾಡಿನ ಮಹಾಜನರಿಗೆ ಸತತವಾಗಿ ಲಭಿಸುವಂತೆಯೂ, ಇದಕ್ಕೆ ಉದಾರಹಸ್ತಾವಲಂಬನವನ್ನಿತ್ತಿರುವ ಮಹಾಪ್ರಭುಗಳವರಿಗೆ ಇತೋಪ್ಯತಿಶಯವಾದ ಆಯುರಾರೋಗ್ಯೈಶ್ವರ್ಯವಿಜಯಕೀರ್ತಿವಂಶಾಭಿವೃದ್ಧ್ಯಾದಿಗಳನ್ನು ಸುರಿಮಳೆಗೈಯುವಂತೆಯೂ ಅನುಗ್ರಹಿಸಬೇಕೆಂದು ಅಖಿಲಾತ್ಮನೂ ಲೋಕಶಂಕರನೂ ಆದ ಭಗವಂತನನ್ನು ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ

ಸಂಖ್ಯೆ ೨೦

ಶ್ರೀ ಶಾಂಕರಭಾಷ್ಯಸಮೇತ

ಈ ಶಾ ವಾ ಸ್ಯೋ ಪ ನಿ ಷ ತ್ತು

ಉಪನಿಷತ್ತಿನ ಮತ್ತು ಭಾಷ್ಯದ ಸಂಸ್ಕೃತಮೂಲ, ಅನುವಾದ, ಟಿಪ್ಪಣಿ, ಸಾರ ಮುಂತಾದವುಗಳೊಡನೆ

ಬರೆದವರು :

ಅಧ್ಯಾತ್ಮಗ್ರಂಥಾವಳಿಯ ಸಂಪಾದಕ

ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮ

ಎರಡನೆಯ ಸಂಸ್ಕರಣ

ಅಧ್ಯಾತ್ಮಗ್ರಂಥಾವಳಿ ಕ್ರಮಾಂಕ ೧

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

೧೯೪೫

ಮೊದಲನೆಯ ಸಂಸ್ಕರಣ : ೧೯೭೫
ಎರಡನೆಯ ಸಂಸ್ಕರಣ : ೧೯೮೫
(೧,೦೦೦ ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶ ಕಾರ್ಯಾಲಯದವು
All Rights Reserved

ಮುದ್ರಣಕಾರರು.
ಜಿ. ಎಚ್. ರಾಮರಾವ್, ಬಿ.ಎಸ್ಸಿ.
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು

ಹೊಸ ಸಂಸ್ಕರಣದ ಪೀಠಿಕೆ

ಈ ಗ್ರಂಥವು ಅಚ್ಚಾಗಿ ಈಗ ಸುಮಾರು ಇಪ್ಪತ್ತು ವರ್ಷಗಳಾದವು. ಅಧ್ಯಾತ್ಮ ಪ್ರಕಾಶಕಾರ್ಯಾಲಯದ ಉದ್ದೇಶಕ್ಕೆ ಅನುಗುಣವಾಗಿ ಈ ಉಪನಿಷತ್ತನ್ನು ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲೆಗೆ ಸೇರಿಸುವದಕ್ಕೆ ಅನುಕೂಲಿಸುವಂತೆ ಈಸಲ ಗ್ರಂಥವನ್ನು ಸಂಪೂರ್ಣವಾಗಿ ಪರಿಷ್ಕರಿಸಿರುತ್ತೇನೆ.

ಈ ಸಂಸ್ಕರಣದಲ್ಲಿ ಸಂಸ್ಕೃತಮೂಲವನ್ನು ಮುಖ್ಯವಾಗಿ ಆನಂದಾಶ್ರಮದ ಪ್ರಕಟನೆಯ ಆಧಾರದಿಂದಲೇ ಬರೆದುಕೊಂಡಿರುತ್ತದೆಯಾದರೂ ವಾಣೀವಿಲಾಸ ಮುದ್ರಣಾಲಯ, ಗೀತಾಪ್ರೆಸ್–ಮುಂತಾದ ಕಡೆಗಳಲ್ಲಿ ಅಚ್ಚಾಗಿರುವ ಪಾಠಗಳನ್ನೂ ಹೋಲಿಸಿಕೊಂಡು ಹೆಚ್ಚು ಸಮ್ಮತವಾಗಿರುವ ಪಾಠವನ್ನೇ ಗ್ರಂಥಶರೀರದಲ್ಲಿಟ್ಟು ಕೊಂಡಿರುತ್ತೇನೆ. ಅನುವಾದವು ಆದಷ್ಟುಮಟ್ಟಿಗೂ ಮೂಲಭಾಷ್ಯಕ್ಕೆ ಹತ್ತಿರವಿರು ವಂತೆ ನೋಡಿಕೊಂಡಿರುತ್ತೇನೆ. ಭಾಷ್ಯದಲ್ಲಿ ಚರ್ಚೆಯು ನಡೆದಿರುವಾಗ ಪೂರ್ವಪಕ್ಷ ಸಿದ್ಧಾಂತಗಳು ಸ್ಫುಟವಾಗಿ ಕಾಣಿಸುವಂತೆ ವಿಂಗಡಿಸಿ ಬರೆದಿರುತ್ತೇನೆ. ಟಿಪ್ಪಣಿಗಳನ್ನು ಆದಷ್ಟು ಸಂಗ್ರಹವಾಗಿ ಬರೆದು ಅವುಗಳ ಸಂಖ್ಯೆಯನ್ನು ಹೆಚ್ಚಿಸಿರುತ್ತೇನೆ. ಶಬ್ದಾನುಕ್ರಮಣಿಕೆಯನ್ನು ಹಿಗ್ಗಿಸಿ ತಕ್ಕಂತೆ ಮಾರ್ಪಡಿಸಿ ಭಾಷ್ಯಭಾಗಸಂಖ್ಯೆಗಳನ್ನೂ ಕೊಟ್ಟಿರುತ್ತೇನೆ. ಈ ಮಾರ್ಪಾಡುಗಳಿಂದ ಓದುಗರಿಗೆ ಭಾಷ್ಯಾರ್ಥವನ್ನು ತಿಳಿದು ಕೊಳ್ಳುವದಕ್ಕೆ ಮೊದಲಿಗಿಂತಲೂ ಹೆಚ್ಚಿನ ಸಹಾಯವು ದೊರಕೀತೆಂದು ನನ್ನ ನಂಬಿಕೆ.

ಈ ಸಂಸ್ಕರಣದ ಕೈಬರಹದ ಪುಸ್ತಕವನ್ನು ಓದುವದು, ಉಪಯುಕ್ತವಾದ ಸೂಚನೆಗಳನ್ನು ಕೊಡುವದು, ಅಚ್ಚಿನ ಕರಡುಗಳನ್ನು ತಿದ್ದುವದು–ಮುಂತಾದ ಹಲವು ಬಗೆಗಳಿಂದ ನನಗೆ ಉಪಕಾರವನ್ನು ಮಾಡಿರುವ ' ವೇದಾಂತಶಿರೋಮಣಿ ', ' ವೇದಾಂತವಿಶಾರದ ', ' ವಿದ್ಯಾವಾಚಸ್ಪತಿ ' ಇತ್ಯಾದಿ ಬಿರುದಾಂಕಿತರಾದ **ಬ್ರ॥ ಶ್ರೀ॥ ಎಸ್. ವಿಟ್ಠಲಶಾಸ್ತ್ರಿಗಳವರಿಗೂ ಶ್ರೀಯುತ ಹೊಳೆನರಸೀಪುರದ ಪ್ಲೀಡರ್ ಪಿ. ಎಸ್. ನರಸಿಂಹಯ್ಯನವರಿಗೂ** ನಾನು ಕೃತಜ್ಞನಾಗಿರುತ್ತೇನೆ.

ಯ. ಸುಬ್ರಹ್ಮಣ್ಯಶರ್ಮ.

ಒಂದನೆಯ ಮುದ್ರಣದ ಪೀಠಿಕೆ

ಶುಕ್ಲಯಜುರ್ವೇದಕ್ಕೆ ಹದಿನೈದು ಶಾಖೆಗಳಿವೆಯೆಂದೂ ಹದಿನೇಳು ಶಾಖೆಗಳಿವೆಯೆಂದೂ ಮತಭೇದವುಂಟು. **ಕಾಣ್ವ, ಮಾಧ್ಯಂದಿನ** ಎಂಬ ಎರಡು ಶಾಖೆಗಳು ಮಟ್ಟಿಗೆ ಈಗ ಪ್ರಸಿದ್ಧವಾಗಿವೆ. ಕಣ್ವ, ಮಧ್ಯಂದಿನ ಎಂಬ ಋಷಿಗಳಿಗೆ ಯಾಜ್ಞವಲ್ಕ್ಯರು ಹೇಳಿಕೊಟ್ಟ ಅಧ್ಯಯನಕ್ರಮದಿಂದ ಈ ಶಾಖೆಗಳಾದವಂತೆ ಭಗವತ್ಪಾದರವರು ಕಾಣ್ವಶಾಖೆಯ ಕ್ರಮವನ್ನು ಅನುಸರಿಸಿ ತಮ್ಮ ಭಾಷ್ಯವನ್ನು ಮಾಡಿರುತ್ತಾರೆ. ಇದೇ ಉಪನಿಷತ್ತಿಗೆ ಮತ್ತೆ ಕೆಲವರು ತಮ್ಮ ತಮ್ಮ ಮತದ ಅನುಸಾರವಾಗಿ ಮಾಧ್ಯಂದಿನ ಶಾಖೆಯ ಕ್ರಮದಲ್ಲಿ ವ್ಯಾಖ್ಯಾನಮಾಡಿರುತ್ತಾರೆ ಈ ಎರಡು ಶಾಖೆಗಳ ಪಾಠಕ್ರಮಗಳನ್ನೂ ಹೋಲಿಕೆಗಾಗಿ ಪುಸ್ತಕದ ಕೊನೆಯಲ್ಲಿ[1] ಕೊಟ್ಟಿರುತ್ತದೆ.

ಈ ಉಪನಿಷತ್ತು ಯಜುಸ್ಸಂಹಿತೆಯ ನಲವತ್ತನೆಯ ಅಧ್ಯಾಯವಾಗಿರುತ್ತದೆ ಮಿಕ್ಕ ಉಪನಿಷತ್ತುಗಳು ಬ್ರಾಹ್ಮಣರ ಭಾಗವಾದ ಆರಣ್ಯಕದಲ್ಲಿದ್ದು ಇದುಮಟ್ಟಿಗೆ ಸಂಹಿತೆಗೇ ಸೇರಿರುವದರಿಂದ ಇದನ್ನು **ಸಂಹಿತೋಪನಿಷತ್ತು** ಎಂದು ಕರೆಯುವರು. ಇದರ ಮೊದಲನೆಯ ಮಂತ್ರವು " ಈಶಾವಾಸ್ಯಮ್ " ಎಂದು ಮೊದಲಾಗಿರುವದರಿಂದ ಇದಕ್ಕೆ **ಈಶಾವಾಸ್ಯೋಪನಿಷತ್ತು, ಈಶೋಪನಿಷತ್ತು**—ಎಂಬ ಹೆಸರುಗಳೂ ಪ್ರಸಿದ್ಧವಾಗಿವೆ

ಈ ಉಪನಿಷತ್ತು ಕರ್ಮಕಾಂಡದ ಕೊನೆಯಲ್ಲಿರುವದರಿಂದ ಕರ್ಮಕ್ಕೆ ಸಂಬಂಧಪಟ್ಟಿರುವ ಜ್ಞಾನವನ್ನು ಹೇಳುತ್ತದೆಯೆಂದೂ ಇದರ ಹನ್ನೊಂದನೆಯ ಮಂತ್ರದಲ್ಲಿ ಜ್ಞಾನಕರ್ಮಸಮುಚ್ಚಯವನ್ನು ಹೇಳಿದೆಯೆಂದೂ ಹದಿನಾಲ್ಕನೆಯ ಮಂತ್ರದಲ್ಲಿ **ಪರಿಣಾಮವಾದ**ವನ್ನು ಹೇಳಿದೆಯೆಂದೂ ದ್ವೈತಾದ್ವೈತಮತದವರಾದ **ಭರ್ತೃಪ್ರಪಂಚ, ಭಾಸ್ಕರಾಚಾರ್ಯ**–ಮೊದಲಾದವರು ಅಭಿಪ್ರಾಯಪಡುತ್ತಾರೆ ಭಗವತ್ಪಾದರವರು ಈ ಉಪನಿಷತ್ತಿನಲ್ಲಿ ಪ್ರವೃತ್ತಿ, ನಿವೃತ್ತಿ–ಎಂದು ಎರಡು ಬಗೆಯಾಗಿ ವೇದೋಕ್ತಧರ್ಮಗಳನ್ನು ವಿಭಾಗಮಾಡಿರುವರು. ಪರಮಾತ್ಮಸ್ವರೂಪವನ್ನು ತಿಳಿಸುವದೇ ಈ ಉಪನಿಷತ್ತಿನ ಮುಖ್ಯೋದ್ದೇಶವೆಂದು ಇವರು ನಿರ್ಣಯ ಮಾಡಿರುತ್ತಾರೆ.

---

1. ಈ ಎರಡನೆಯ ಸಂಸ್ಕರಣದಲ್ಲಿ ಮಾಧ್ಯಂದಿನ ಕ್ರಮವನ್ನು ಮಾತ್ರ ಕೊನೆಯಲ್ಲಿ ಬರೆದಿದೆ ; ಕಾಣ್ವಪಾಠಕ್ರಮವು ಪುಸ್ತಕದ ಒಳಗಡೆಯಲ್ಲಿಯೇ ಇರುತ್ತದೆ.

ಹನ್ನೊಂದು, ಹದಿನಾಲ್ಕು–ಈ ಎರಡು ಮಂತ್ರಗಳಿಗೆ ಇಲ್ಲಿ ಬರೆದಿರುವ ಭಾಷ್ಯಕ್ಕೂ ಐತರೇಯ, ತೈತ್ತಿರೀಯ, ಗೌಡಪಾದರಕಾರಿಕೆ–ಇವುಗಳಲ್ಲಿರುವ ಭ್ಯಾಷಕ್ಕೂ ವ್ಯತ್ಯಾಸವು ಕಂಡುಬರುತ್ತದೆ. ಇದಲ್ಲದೆ ಮಿಕ್ಕ ಕಡೆಗಳಲ್ಲಿ ಮಾಧ್ಯಂದಿನ ಕ್ರಮವನ್ನು ಅನುಸರಿಸಿ ಈ ಮಂತ್ರಗಳನ್ನು ವಿವರಿಸಿರುವಂತೆಯೂ ತೋರುತ್ತದೆ. ಈ ಹೆಚ್ಚುಕಡಿಮೆಗೆ ಕಾರಣವೇನೋ ಗೊತ್ತಿಲ್ಲ ಈ ವಿಷಯದಲ್ಲಿ ಟೀಕಾಕರ್ತರೂ ಏನೂ ಹೇಳಲಿಲ್ಲ. ಆದ್ದರಿಂದ ಇದ್ದಂತೆ ಭಾಷ್ಯವನ್ನು ಕನ್ನಡಿಸಿ ಪರಿಶಿಷ್ಟದಲ್ಲಿ ಮಿಕ್ಕ ಕಡೆಗಳಲ್ಲಿರುವ ಈ ಮಂತ್ರಗಳ ಭಾಷ್ಯವನ್ನೂ * ವಾಚಕರ ಸಲುವಾಗಿ ಕೊಟ್ಟಿರುತ್ತದೆ

ಈಶಾವಾಸ್ಯಭಾಷ್ಯವು ಈ ಮೊದಲೇ ಕನ್ನಡಿಸಲ್ಪಟ್ಟಿರಬಹುದಾದರೂ **ಈಗಿನ** ಪರಿವರ್ತನದಲ್ಲಿ ಭಾಷ್ಯದ ವಿಶೇಷಾಂಶಗಳಿಗೆ ಲಕ್ಷ್ಯಕೊಡುವಂತೆ ಬರೆದ **ಟಿಪ್ಪಣಿ, ಉಪನಿಷತ್ತಿನಸಾರ,** ಪಾಠಭೇದಗಳೊಡನೆ **ಸಂಸ್ಕೃತಮೂಲ, ಪರಿಶಿಷ್ಟ**, ಕ್ಲಿಷ್ಟ ಪದಗಳ ಅರ್ಥವುಳ್ಳ ಅನುಕ್ರಮಣಿಕೆ ಇವು ವಿಶೇಷವಿಷಯಗಳಾಗಿರುತ್ತವೆ

ಈ ಗ್ರಂಥವನ್ನು ಪ್ರಚಾರಪಡಿಸಬೇಕೆಂದು ಪರೋಪಕಾರಬುದ್ಧಿಯಿಂದ ಇದರ ಮುದ್ರಣವ್ಯಯವನ್ನೆಲ್ಲ ತಾವೇ ವಹಿಸಿಕೊಂಡು ಇದನ್ನು ಪ್ರಕಟಿಸುವದಕ್ಕೆ ಉತ್ತೇಜನವನ್ನು ಕೊಟ್ಟ **ಎ. ಆರ್ ನಾಗೇಶ್ವರಯ್ಯರ್, ಬಿ.ಎ., ಬಿ.ಎಲ್., ಅಡ್ವೊಕೇಟ್**[1] ಇವರ ಔದಾರ್ಯವು ಚಿರಸ್ಮರಣೀಯವಾಗಿರುವದು. ಉಪನಿಷದ್ಗ್ರಂಥಗಳಲ್ಲಿ ಇವರಿಗಿರುವ ಅಭಿಮಾನವು ತುಂಬ ಸ್ತುತ್ಯವಾದದ್ದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ವೇದಾಂತವಿಚಾರದಲ್ಲಿ ಬದ್ಧಾದರರಾಗಿ ಬಹುಕಾಲ ಲೋಕೋಪಕಾರವನ್ನೆಸಗುವದಕ್ಕೆ ಬೇಕಾದ ಆಯುರಾರೋಗ್ಯೈಶ್ವರ್ಯಗಳನ್ನು ಭಗವಂತನು ಇವರಿಗೆ ಅನುಗ್ರಹಿಸಲೆಂದು ಪ್ರಾರ್ಥಿಸಿ ಇಲ್ಲಿ ನನ್ನ ಕೃತಜ್ಞತೆಯನ್ನು ಸೂಚಿಸಿ ಈ ಪೀಠಿಕೆಯನ್ನು ಸಮಾಪ್ತಿಗೊಳಿಸುವೆನು.

ಚಾಮರಾಜಪೇಟೆ,
27–6–1925

ಗ್ರಂಥಕರ್ತರ.

---

* ಈ ಸಂಸ್ಕರಣದಲ್ಲಿ ಮಾಧ್ಯಂದಿನಪಾರಡ ಕೆಳಗೇ ಈ ಭಾಷ್ಯದ ಸಾರವನ್ನು ಸಂಗ್ರಹಿಸಿ ಬರೆದಿರುತ್ತದೆ.

1. ಈಗ ಹೈಕೋರ್ಟು ಜಡ್ಜಿಗಳಾಗಿ 'ರಾಜಧರ್ಮಪ್ರಸಕ್ತ' ಬಿರುದಾಂಕಿತರಾಗಿರುವರು.


ಸಂಕ್ಷೇಪಾಕ್ಷರಗಳ ವಿವರಣೆ

ಭಾಷ್ಯದಲ್ಲಿ (೭, ೮) ಹೀಗೆ ಕೊಟ್ಟಿರುವವುಗಳು ಮಂತ್ರವನ್ನು ಸೂಚಿಸುವದು.

(ಆ॥)	ಆನಂದಾಶ್ರಮದಲ್ಲಿ ಪ್ರಕಾಶವಾಗಿರುವ ಪುಸ್ತಕದಲ್ಲಿರುವ ಪಾಠ
ಕ.	ಕಠೋಪನಿಷತ್
ಗೀ.	ಭಗವದ್ಗೀತೆ
ಗೀ. ಭಾ.	ಗೀತಾಭಾಷ್ಯ
ಛಾ.	ಛಾಂದೋಗ್ಯೋಪನಿಷತ್ತು
ಜೈ. ಸೂ.	ಜೈಮಿನಿಯ ಪೂರ್ವಮೀಮಾಂಸಸೂತ್ರಗಳು
ತೈ.	ತೈತ್ತಿರೀಯೋಪನಿಷತ್ತು
ತೈ. ಭಾ.	ತೈತ್ತಿರೀಯೋಪನಿಷತ್ತಿನ ಭಾಷ್ಯ
ಪ್ರ.	ಪ್ರಶ್ನೋಪನಿಷತ್ತು
ಬೃ.	ಬೃಹದಾರಣ್ಯಕೋಪನಿಷತ್ತು
ಬೃ. ಬಾ.	ಬೃಹದಾರಣ್ಯಕೋಪನಿಷತ್ತಿನ ಭಾಷ್ಯ
ಮನು	ಮನುಸ್ಮೃತಿ
ಮಹಾ ನಾ.	ಮಹಾನಾರಾಯಣೋಪನಿಷತ್ತು "ಅಂಥಸಿ"; ತೈತ್ತಿರೀಯಾರಣ್ಯಕದ ಭಾಗ.
ಮುಂ.	ಮುಂಡಕೋಪನಿಷತ್ತು
ಮುಂ. ಭಾ.	ಮುಂಡಕೋಪನಿಷತ್ತಿನ ಭಾಷ್ಯ
ಮೋ. ಧ.	ಮೋಕ್ಷಧರ್ಮ
(ವಾ॥)	ವಾಣೀವಿಲಾಸ ಮುದ್ರಣಾಲಯದ ಪುಸ್ತಕದಲ್ಲಿರುವ ಪಾಠ
ವಿ. ಪು	ವಿಷ್ಣುಪುರಾಣ
ಶತ.	ಶತಪಥಬ್ರಾಹ್ಮಣ; ಶುಕ್ಲಯಜುರ್ವೇದದ ಬ್ರಾಹ್ಮಣವು
ಶಾ.ಭಾ.ಜೈ.ಸೂ.	ಶಾಬರಭಾಷ್ಯ, ಜೈಮಿನಿಯ ಸೂತ್ರಗಳಮೇಲೆ ಬರೆದದ್ದು
ಶ್ವೇ.	ಶ್ವೇತಾಶ್ವತರೋಪನಿಷತ್ತು
(ಹಿ॥)	ಶ್ರೀಯುತ ಎಂ. ಹಿರಿಯಣ್ಣ, ಎಂ.ಎ., ರವರು ಮಾಡಿರುವ ಇಂಗ್ಲಿಷು ಭಾಷಾಂತರದಲ್ಲಿ ಒಪ್ಪಿರುವ ಪಾಠ.

ವಿಷಯಾನುಕ್ರಮಣಿಕೆ

	ಪುಟ
ಭಾಷ್ಯಾವತರಣಿಕೆ . . .	೧
ಉಪನಿಷತ್ತು . . .	೪
ಜ್ಞಾನನಿಷ್ಠೆ . . .	೪
ಕರ್ಮನಿಷ್ಠೆ . . .	೭
ಮೊದಲನೆಯ ಎರಡು ಮಂತ್ರಗಳ ಅರ್ಥದ ವಿಷಯದಲ್ಲಿ ವಿಚಾರ	೯
ಆತ್ಮನ ಯಾಥಾತ್ಮ್ಯ . . .	೧೧
ಜ್ಞಾನನಿಷ್ಠೆಕರ್ಮನಿಷ್ಠೆಗಳ ವಿಂಗಡ .	೨೭
ಕರ್ಮೋಪಾಸನೆಗಳ ಸಮುಚ್ಚಯ . .	೩೧
ವ್ಯಾಕೃತಾವ್ಯಾಕೃತೋಪಾಸನೆಗಳ ಸಮುಚ್ಚಯ .	೩೫
ಸಮುಚ್ಚಯೋಪಾಸಕನು ಮಾಡುವ ಮರಣಕಾಲದ ಪ್ರಾರ್ಥನೆ	೪೦
ಸಮುಚ್ಚಯವಿಷಯದಲ್ಲಿ ಚರ್ಚೆ . .	೪೯
ಉಪನಿಷತ್ತಿನ ಸಾರ . . .	೫೪
ಉಪನಿಷತ್ತಿನ ಮಾಧ್ಯಂದಿನಪಾಠ . .	೫೫
ಮಂತ್ರಗಳ ಅನುಕ್ರಮಣಿಕೆ . . .	೫೭
ಶಬ್ದಾನುಕ್ರಮಣಿಕೆ . . .	೫೮



ಶಿಷ್ಯಸಮೇತ ಶ್ರೀ ಶಂಕರಭಗವತ್ಪಾದರವರು

॥ ಓಂ ॥

ಶ್ರೀ ಶಾಂಕರ ಭಾಷ್ಯಸಮೇತವಾದ

ಈ ಶಾ ವಾ ಸ್ಯೋ ಪ ನಿ ಷ ತ್ತು

ಭಾಷ್ಯಾವತರಣಿಕೆ

(ಭಾಷ್ಯ)

೧. 'ಈಶಾವಾಸ್ಯಮ್' ಇತ್ಯಾದಯೋ ಮನ್ತ್ರಾಃ ಕರ್ಮಸ್ವವಿನಿಯುಕ್ತಾಃ, ತೇಷಾಮ್ ಅಕರ್ಮಶೇಷಸ್ಯಾತ್ಮನೋ ಯಾಥಾತ್ಮ್ಯಪ್ರಕಾಶಕತ್ವಾತ್। ಯಾಥಾತ್ಮ್ಯಂ ಚಾತ್ಮನಃ ಶುದ್ಧತ್ವಾಪಾಪವಿದ್ಧತ್ವೈಕತ್ವನಿತ್ಯತ್ವಾಶರೀರತ್ವಸರ್ವಗತತ್ವಾದಿ ವಕ್ಷ್ಯಮಾಣಮ್ (೭, ೮)। ತಚ್ಚ ಕರ್ಮಣಾ ವಿರುಧ್ಯತೇ ಇತಿ ಯುಕ್ತ ಏವೈಷಾಂ ಕರ್ಮಸ್ವವಿನಿಯೋಗಃ। ನ ಹ್ಯೇವಂಲಕ್ಷಣಮಾತ್ಮನೋ ಯಾಥಾತ್ಮ್ಯಮ್ ಉತ್ಪಾದ್ಯಂ ವಿಕಾರ್ಯಮ್ ಆಪ್ಯಂ ಸಂಸ್ಕಾರ್ಯಂ ವಾ ಕರ್ತೃಭೋಕ್ತೃರೂಪಂ ವಾ। ಯೇನ ಕರ್ಮಶೇಷತಾ ಸ್ಯಾತ್। ಸರ್ವಾಸಾಮುಪನಿಷದಾಮಾತ್ಮಯಾಥಾತ್ಮ್ಯನಿರೂಪಣೇನೈವೋಪಕ್ಷಯಾತ್, **ಗೀತಾನಾಂ ಮೋಕ್ಷಧರ್ಮಾಣಾಂ** ಚೈವಂಪರತ್ವಾತ್। ತಸ್ಮಾತ್, ಆತ್ಮನೋಽನೇಕತ್ವಕರ್ತೃತ್ವಭೋಕ್ತೃತ್ವಾದಿ ಚಾಶುದ್ಧತ್ವಾಪಾಪವಿದ್ಧತ್ವಾದಿ ಚೋಪಾದಾಯ ಲೋಕಬುದ್ಧಿಸಿದ್ಧಂ ಕರ್ಮಾಣಿ ವಿಹಿತಾನಿ। ಯೋ ಹಿ ಕರ್ಮಫಲೇನಾರ್ಥೀ ದೃಷ್ಟೇನ ಬ್ರಹ್ಮವರ್ಚಸಾದಿನಾ ಅದೃಷ್ಟೇನ ಸ್ವರ್ಗಾದಿನಾ ಚ 'ದ್ವಿಜಾತಿರಹಮ್ ನ ಕಾಣತ್ವಕುಬ್ಜತ್ವಾದ್ಯನಧಿಕಾರಪ್ರಯೋಜಕಧರ್ಮವಾ' ಇತ್ಯಾತ್ಮಾನಂ ಮನ್ಯತೇ ಸೋಽಧಿಕ್ರಿಯತೇ ಕರ್ಮಸ್ವಿತಿ **ಹ್ಯಧಿಕಾರವಿದೋ** ವದನ್ತಿ ॥

(ಭಾಷ್ಯಾರ್ಥ)

"ಈಶಾವಾಸ್ಯಮ್" ಎಂದು ಮೊದಲಾಗಿರುವ ಮಂತ್ರಗಳು ಕರ್ಮಗಳಲ್ಲಿ ವಿನಿಯೋಗವಾಗಿರುವದಿಲ್ಲ[1], ಏಕೆಂದರೆ ಇವು ಕರ್ಮಕ್ಕೆ ಅಂಗವಾಗದಿರುವ[2] ಆತ್ಮನ

---

1. ಈ ಸಂಹಿತೆಯಲ್ಲಿ ಮೂವತ್ತೊಂಬತ್ತನೆಯ ಅಧ್ಯಾಯದವರೆಗೂ ಹೇಳಿರುವ ಮಂತ್ರಗಳನ್ನು ಕರ್ಮದಲ್ಲಿ ವಿನಿಯೋಗಿಸಿರುತ್ತದೆ. ಈ ನಲವತ್ತನೆಯ ಅಧ್ಯಾಯದ ಮಂತ್ರಗಳೂ ಹಾಗೆಯೇ ಇರಬಹುದೆಂಬ ಶಂಕೆಯನ್ನು ತೊಲಗಿಸುವುದಕ್ಕಾಗಿ ಹೀಗೆಂದು ಹೇಳಿದೆ.

2. ಕರ್ಮದಲ್ಲಿ ವಿನಿಯುಕ್ತವಾಗುವ ಮಂತ್ರಗಳು ಎರಡು ಬಗೆ: (೧) ಇಂಥ ಮಂತ್ರ

ನಿಜವಾದ ಸ್ವರೂಪವನ್ನು ತಿಳಿಸಿಕೊಡುತ್ತವೆ. ಆತ್ಮನ ನಿಜವಾದ ಸ್ವರೂಪವು ಯಾವದೆಂದರೆ (ಈ ಉಪನಿಷತ್ತಿನಲ್ಲಿ) ಮುಂದೆ (೭, ೮ನೆಯ ಮಂತ್ರಗಳಲ್ಲಿ) ಹೇಳುವ ಶುದ್ಧವಾಗಿರುವದು, ಪಾಪದ ಹೊಡೆತವಿಲ್ಲದಿರುವದು, ಒಬ್ಬನಾಗಿರುವದು, ನಿತ್ಯನಾಗಿರುವದು, ಶರೀರವಿಲ್ಲದವನಾಗಿರುವದು, ಎಲ್ಲೆಲ್ಲಿಯೂ ಇರುವದು–ಮುಂತಾದದ್ದು. ಅದು ಕರ್ಮಕ್ಕೆ ವಿರುದ್ಧವಾಗಿರುವದರಿಂದ ಈ (ಮಂತ್ರಗಳನ್ನು) ಕರ್ಮಗಳಲ್ಲಿ ವಿನಿಯೋಗಮಾಡದೆ ಇರುವದು ಯುಕ್ತವೇ (ಆಗಿದೆ). ಈ ಬಗೆಯ ಆತ್ಮನ ನಿಜವಾದ ಸ್ವರೂಪವು ಹೊಸದಾಗಿ ಉಂಟುಮಾಡತಕ್ಕದ್ದಾಗಲಿ, ಮಾರ್ಪಡಿಸಿಕೊಳ್ಳತಕ್ಕದ್ದಾಗಲಿ, ಪಡೆಯತಕ್ಕದ್ದಾಗಲಿ, ಶುದ್ಧಿಗೊಳಿಸತಕ್ಕದ್ದಾಗಲಿ, ಕರ್ತೃಭೋಕ್ತೃರೂಪವಾಗಿರುವದಾಗಲಿ ಅಲ್ಲವೇ ಅಲ್ಲ, ಹಾಗಿದ್ದರೆ (ಮಾತ್ರ ಅದು) ಕರ್ಮಕ್ಕೆ ಅಂಗವಾಗಿರಬಹುದಾಗಿತ್ತು[1]. ಎಲ್ಲಾ ಉಪನಿಷತ್ತುಗಳೂ[2] ಆತ್ಮನ ನಿಜವಾದ ಸ್ವರೂಪವನ್ನು ತಿಳಿಯಪಡಿಸುವುದರಲ್ಲಿಯೇ ಕೊನೆಗಂಡಿರುವದರಿಂದಲೂ **ಗೀತೆ, ಮೋಕ್ಷಧರ್ಮ**–ಇವುಗಳೂ ಇದೇ ತಾತ್ಪರ್ಯ[3] ವುಳ್ಳವುಗಳಾಗಿರುವದರಿಂದಲೂ (ಹೀಗೆಂದು ತಿಳಿಯಬೇಕು)

ಆದ್ದರಿಂದ ಆತ್ಮರು ಅನೇಕರು, (ಆತ್ಮನು ಕರ್ಮವನ್ನು) ಮಾಡುವವನು, (ಫಲವನ್ನು) ಅನುಭವಿಸುವವನು-ಎಂದು ಮುಂತಾಗಿಯೂ (ಅವನು) ಅಶುದ್ಧನು, ಪಾಪದ ಹೊಡೆತವುಳ್ಳವನು ಎಂದು ಮುಂತಾಗಿಯೂ (ಸಾಮಾನ್ಯ) ಜನರು ತಿಳಿದು

ವನ್ನು ಇಂಥ ಕರ್ಮಕ್ಕೆ ಉಪಯೋಗಿಸಬೇಕೆಂದು ವೇದದಲ್ಲಿಯೇ ತಿಳಿಸಿರುವ ಮಂತ್ರಗಳು, (೨) ಕರ್ಮದಲ್ಲಿ ಉಪಯೋಗಿಸಬೇಕಾಗುವ ದ್ರವ್ಯವನ್ನು ತಿಳಿಸುವ ಮಂತ್ರಗಳು.

1. ಕರ್ಮಕ್ಕೆ ಅಂಗವಾಗಬಹುದಾದ ವಸ್ತುಗಳು ನಾಲ್ಕು ಬಗೆ ಪುರೋಡಾಶವು ಉಂಟುಮಾಡತಕ್ಕದ್ದು (ಉತ್ಪಾದ್ಯ), ಮೊಸರು ಮಾರ್ಪಡಿಸತಕ್ಕದ್ದು (ವಿಕಾರ್ಯ), ಸ್ವರ್ಗವು ಪಡೆಯತಕ್ಕದ್ದು (ಆಪ್ಯ); ಬತ್ತವು ಕುಟ್ಟಿ ಶುದ್ಧಿಗೊಳಿಸಿಕೊಳ್ಳತಕ್ಕದ್ದು. (ಸಂಸ್ಕಾರ್ಯ) ಜೀವನು ಕರ್ಮವನ್ನು ಮಾಡಿ ಫಲವನ್ನನುಭವಿಸುವವನಾದ್ದರಿಂದ ಅವನೂ ಕರ್ಮಾಂಗವಾಗುವನು. ಆದರೆ ವೇದಾಂತದಲ್ಲಿ ಹೇಳಿರುವ ಆತ್ಮಸ್ವರೂಪವು ಇವುಗಳಲ್ಲಿ ಒಂದು ರೂಪದಲ್ಲಿಯೂ ಇರತಕ್ಕದ್ದಲ್ಲವಾದ್ದರಿಂದ ಅದು ಕರ್ಮಕ್ಕೆ ಅಂಗವಾಗಲಾರದು–ಎಂದು ಆಚಾರ್ಯರು ತಮ್ಮ ಭಾಷ್ಯಗಳಲ್ಲೆಲ್ಲ ಮತ್ತೆಮತ್ತೆ ಹೇಳುತ್ತಾರೆ. ಉದಾಹರಣೆಗೆ–ಸೂ. ಭಾ. ೧-೧-೪; ಬೃ ಭಾ. ೩-೩-೧; ತೈ. ಭಾ. ೧-೧೨ ನೋಡಿರಿ.

2. ಉಪನಿಷತ್ತುಗಳು ಆತ್ಮಸ್ವರೂಪವನ್ನು ತಿಳಿಯಪಡಿಸಿ ಆ ತಿಳಿವಳಿಕೆಯಿಂದಲೇ ಮುಕ್ತಿಯಾಗುವದೆಂದು ಹೇಳುತ್ತವೆ; ಯಾವ ಉಪನಿಷತ್ತಿನಲ್ಲಿಯೂ ಈ ಸ್ವರೂಪವನ್ನು ಕರ್ಮಕ್ಕೆ ಅಂಗವಾಗಿ ಹೇಳಿಲ್ಲ.

3. ಇವುಗಳಲ್ಲಿ ಕರ್ಮವನ್ನೂ ಹೇಳಿದ್ದರೂ ತಾತ್ಪರ್ಯದಿಂದ ಹೇಳಿರುವದು ಆತ್ಮಜ್ಞಾನದಿಂದ ಮುಕ್ತಿಯಾಗುವದೆಂಬುದೇ.

ಕೊಂಡಿರುವುದನ್ನೇ ಇಟ್ಟುಕೊಂಡು[1] ಕರ್ಮಗಳನ್ನು ವಿಧಿಸಿರುತ್ತದೆ. ಯಾವನಿಗೆ (ಇಲ್ಲಿ) ಕಾಣುವ ಬ್ರಹ್ಮವರ್ಚಸ್ಸು ಮುಂತಾದ ಮತ್ತು ಕಾಣದ ಸ್ವರ್ಗವೇ ಮುಂತಾದ ಕರ್ಮಫಲದಲ್ಲಿ ಬಯಕೆಯಿರುವದೋ ಯಾವನು 'ನಾನು ದ್ವಿಜನು, ಕುರುಡು ಗುಜ್ಜು—[2] ಮುಂತಾದ ಅನಧಿಕಾರಕ್ಕೆ ಬೇಕಾದ ಧರ್ಮಗಳು ನನ್ನಲ್ಲಿಲ್ಲ' ಎಂದು ತನ್ನನ್ನು ತಿಳಿದುಕೊಂಡಿರುವನೋ ಅವನೇ ಕರ್ಮಗಳಿಗೆ ಅಧಿಕಾರಿಯಾಗಿರುತ್ತಾನೆ ಎಂದಲ್ಲವೆ, ಅಧಿಕಾರ(ದ ತತ್ತ್ವ)ವನ್ನು ಬಲ್ಲವರು[3] ಹೇಳುತ್ತಾರೆ?

(ಭಾಷ್ಯ)

೨. ತಸ್ಮಾದೇತೇ ಮನ್ತ್ರಾ ಆತ್ಮನೋ ಯಾಥಾತ್ಮ್ಯಪ್ರಕಾಶನೇನ ಆತ್ಮವಿಷಯಂ ಸ್ವಾಭಾವಿಕಮಜ್ಞಾನಂ ನಿವರ್ತಯನ್ತಃ, ಶೋಕಮೋಹಾದಿಸಂಸಾರಧರ್ಮವಿಚ್ಛಿತ್ತಿಸಾಧನಮಾತ್ಮೈಕತ್ವಾದಿವಿಜ್ಞಾನಮುತ್ಪಾದಯನ್ತೀತ್ಯೇವಮುಕ್ತಾಧಿಕಾರ್ಯಭಿಧೇಯಸಮ್ಬನ್ಧಪ್ರಯೋಜನಾನ್ ಮನ್ತ್ರಾನ್ ಸಜಕ್ಷ್ಯೀಪತೋ ವ್ಯಾಖ್ಯಾಸ್ಯಾಮಃ ॥

(ಭಾಷ್ಯಾರ್ಥ)

ಆದ್ದರಿಂದ[4] ಈ ಮಂತ್ರಗಳು ಆತ್ಮನ ನಿಜವಾದ ಸ್ವರೂಪವನ್ನು ತಿಳಿಸಿಕೊಟ್ಟು ಆತ್ಮನ ವಿಷಯಕವಾದ ಸ್ವಾಭಾವಿಕವಾಗಿರುವ[5] ಅಜ್ಞಾನವನ್ನು ತೆಗೆದು ಹಾಕಿ ಶೋಕ, ಮೋಹ—ಮುಂತಾದ ಸಂಸಾರದ ಧರ್ಮಗಳನ್ನು ನಾಶಮಾಡುವದಕ್ಕೆ ಉಪಾಯವಾಗಿರುವ ಆತ್ಮನು ಒಬ್ಬನೇ ಎಂಬುದೇ ಮುಂತಾದ ತಿಳಿವಳಿಕೆಯನ್ನುಂಟುಮಾಡುತ್ತವೆಯಾದ್ದರಿಂದ ಈ ಮಂತ್ರಗಳಿಗೆ ಮೇಲೆ ಹೇಳಿದಂತೆ ಅಧಿ

---

1. ವೇದದಲ್ಲಿ ಕರ್ಮವನ್ನು ವಿಧಿಸಿದ್ದರೂ ಆತ್ಮರು ಅನೇಕರೆಂಬುದಾಗಲಿ ಕರ್ತೃ ಭೋಕ್ತೃಗಳೆಂಬುದಾಗಲಿ ಸತ್ಯವೆಂದು ಎಲ್ಲಿಯೂ ಹೇಳಿಲ್ಲ, ಸಾಮಾನ್ಯಜನರ ತಿಳಿವಳಿಕೆಯ ದೃಷ್ಟಿಯಿಂದ ಕರ್ಮವನ್ನು ವಿಧಿಸಿದೆ ಅಷ್ಟೆ.

2. "ಕಾಣತ್ವಕಾಣತ್ವಾದ್ಯನಧಿಕಾರ." ಎಂಬ (ವಾ॥) ಪಾಠದಲ್ಲಿ ಕುರುಡು, ಮೋಟುಗೈ ಇರುವದು—ಎಂದು ಕನ್ನಡಿಸಬೇಕು

3. ಜೈ. ಸೂ. ೬-೧-೩೫ ರಿಂದ ೪೩ನೆಯ ಸೂತ್ರದವರೆಗಿನ ಶಾಬರಭಾಷ್ಯವನ್ನು ನೋಡಿರಿ. ಕರ್ಮಕ್ಕೆ ಬೇಕಾದ ಯೋಗ್ಯತೆಯನ್ನು ಅಲ್ಲಿ ನಿರ್ಣಯಿಸಿರುತ್ತದೆ.

4. ಮೇಲೆ ವಿವರಿಸಿದಂತೆ ಈ ಮಂತ್ರಗಳು ಕರ್ಮದಲ್ಲಿ ವಿನಿಯುಕ್ತವಾಗದೆ ಇರುವದರಿಂದ.

5. ಅವಿಚಾರದ ಸ್ಥಿತಿಯಲ್ಲಿ ಸ್ವಭಾವದಿಂದ ಇದ್ದುಕೊಂಡಿರುವ. "ಸ್ವಾಭಾವಿಕಕರ್ಮವಿಜ್ಞಾನಮ್" ಎಂಬ (ವಾ॥) ಪಾರಕ್ಕಿಂತ "ಸ್ವಾಭಾವಿಕಮಜ್ಞಾನಮ್" ಎಂಬ ಪಾಠವೇ ಮೇಲು.

ಕಾರಿ, ವಿಷಯ, ಸಂಬಂಧ, ಪ್ರಯೋಜನಗಳುಂಟಾದಕಾರಣ [1] (ಈ) ಮಂತ್ರಗಳನ್ನು ಸಂಕ್ಷೇಪದಿಂದ ವ್ಯಾಖ್ಯಾನಮಾಡುವೆವು.

ಉಪನಿಷತ್ತು

ಜ್ಞಾನನಿಷ್ಠೆ

ಈಶಾ ವಾಸ್ಯಮಿದಗ್ಂ ಸರ್ವಂ । ಯತ್ಕಿಂ ಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಞ್ಜೀಥಾ । ಮಾ ಗೃಧಃ ಕಸ್ಯಸ್ವಿದ್ಧನಮ್ ॥ ೧ ॥

೧. ಜಗತ್ತಿನಲ್ಲಿ (ಸ್ಥಾವರ)ಜಂಗಮಾತ್ಮಕವಾದದ್ದು ಏನೇನಿದೆಯೋ ಅದೆಲ್ಲವೂ ಈಶನಿಂದ ಮುಚ್ಚಲ್ಪಡತಕ್ಕದ್ದು ಆದ್ದರಿಂದ ತ್ಯಾಗದಿಂದ ಕಾಪಾಡಿಕೊ; ಯಾರ ಧನವನ್ನೂ ಬಯಸಬೇಡ.

(ಭಾಷ್ಯ)

೧. ಈಶಾ ಈಷ್ಟೇ ಇತಿ ಈಟ್, ತೇನ ಈಶಾ । ಈಶಿತಾ ಪರಮೇಶ್ವರಃ ಪರಮಾತ್ಮಾ ಸರ್ವಸ್ಯ । ಸ ಹಿ ಸರ್ವಮಿಷ್ಟೇ ಸರ್ವಜನ್ತೂನಾಮಾತ್ಮಾ ಸನ್ ಪ್ರತ್ಯಗಾತ್ಮತಯಾ । ತೇನ ಸ್ವೇನ ರೂಪೇಣಾತ್ಮನಾ ಈಶಾ ವಾಸ್ಯಮ್ ಆಚ್ಛಾದನೀಯಮ್ । ಕಿಮ್ ? ಇದಂ ಸರ್ವಂ ಯತ್ಕಿಂ ಚ ಯತ್ಕಿಂಚಿತ್ ಜಗತ್ಯಾಂ ಪೃಥಿವ್ಯಾಂ ಜಗತ್ ತತ್ ಸರ್ವಮ್ ಸ್ವೇನಾತ್ಮನಾ ಈಶೇನ ಪ್ರತ್ಯಗಾತ್ಮತಯಾ 'ಅಹಮೇವೇದಂ ಸರ್ವಮ್' ಇತಿ **ಪರಮಾರ್ಥಸತ್ಯ**ರೂಪೇಣ ಅನೃತಮಿದಂ ಸರ್ವಂ ಚರಾಚರಮ್ ಆಚ್ಛಾದನೀಯಂ ಪರಮಾತ್ಮನಾ । ಯಥಾ ಚನ್ದನಾಗರ್ವಾದೇರುದಕಾದಿಸಮ್ಬನ್ಧಜಕ್ಲೇದಾದಿಜಮ್ ಔಪಾಧಿಕಂ ದಾರ್ಗನ್ಧ್ಯಂ ತತ್ಸ್ವರೂಪನಿಘರ್ಷಣೇನಾಚ್ಛಾದ್ಯತೇ ಸ್ವೇನ ಪಾರಮಾರ್ಥಿಕೇನ ಗನ್ಧೇನ । ತದ್ವದೇವ ಹಿ ಸ್ವಾತ್ಮನ್ಯಧ್ಯಸ್ತಂ ಸ್ವಾಭಾವಿಕಂ ಕರ್ತೃತ್ವಭೋಕ್ತೃತ್ವಾದಿಲಕ್ಷಣಂ ಜಗದ್ದ್ವೈತರೂಪಮ್ ಜಗತ್ಯಾಂ ಪೃಥಿವ್ಯಾಮ್ । 'ಜಗತ್ಯಾಮ್' ಇತ್ಯುಪಲಕ್ಷಣಾರ್ಥತ್ವಾತ್ ಸರ್ವಮೇವ ನಾಮರೂಪಕರ್ಮಾಖ್ಯಂ ವಿಕಾರಜಾತಂ ಪರಮಾರ್ಥಸತ್ಯಾತ್ಮಭಾವನಯಾ ತ್ಯಕ್ತಂ ಸ್ಯಾತ್ । ಏವಮೀಶ್ವರಾತ್ಮಭಾವನಯಾ ಯುಕ್ತಸ್ಯ ಪುತ್ರಾದ್ಯೇಷಣಾತ್ರಯಸಂನ್ಯಾಸೇ ಏವಾಧಿಕಾರೋ ನ ಕರ್ಮಸು ॥

---

6. ಆತ್ಮಯಾಥಾತ್ಮ್ಯವನ್ನು ತಿಳಿದುಕೊಂಡು ಮುಕ್ತನಾಗಬೇಕೆಂದು ಬಯಸುವವನು ಅಧಿಕಾರಿ; ಆತ್ಮಯಾಥಾತ್ಮ್ಯವೇ ವಿಷಯ; ಕರ್ಮಕ್ಕೆ ಕಾರಣವಾದ ಅಜ್ಞಾನವನ್ನು ತೊಲಗಿಸಿ ಇಲ್ಲಿ ಹೇಳಿರುವ ಜ್ಞಾನವು ಮುಕ್ತಿಯನ್ನು ಕೊಡುವದೆಂಬುದೇ ಸಂಬಂಧವು, ಮುಕ್ತಿಯೇ ಪ್ರಯೋಜನವು. ಈ ನಾಲ್ಕನ್ನು ಅನುಬಂಧಚತುಷ್ಟಯವೆನ್ನುವರು.

(ಭಾವಾರ್ಥ)

ಆಳುವದರಿಂದ (ಇವನಿಗೆ) ಈಟ್ (ಎಂದು ಹೆಸರು); ಆ ಈಶನಿಂದ. ಆಳುವವನೆಂದರೆ (ಇಲ್ಲಿ) ಪರಮೇಶ್ವರನು, ಎಲ್ಲರ ಪರಮಾತ್ಮನು.[1] ಏಕೆಂದರೆ ಆತನೇ **ಪ್ರತ್ಯಗಾತ್ಮರೂಪದಿಂದ**[2] ಎಲ್ಲಾ ಪ್ರಾಣಿಗಳಿಗೂ ಆತ್ಮನಾಗಿದ್ದುಕೊಂಡು ಎಲ್ಲವನ್ನೂ ಆಳುತ್ತಿರುವನು. ಆ ತನ್ನ ಸ್ವರೂಪವಾದ ಆತ್ಮನೆಂಬ ಈಶನಿಂದ ಮುಚ್ಚಬೇಕು, ಹೊದಿಸಬೇಕು. ಏನನ್ನು? ಇದೆಲ್ಲವನ್ನೂ. ಈ ಜಗತ್ತಿನಲ್ಲಿ ಅಂದರೆ ಪೃಥ್ವಿಯಲ್ಲಿ ಏನೇನು ಯಾವಯಾವದು ಜಂಗಮಾತ್ಮಕವಾದದ್ದು (ಇದೆಯೋ) ಅದೆಲ್ಲವನ್ನೂ ಪ್ರತ್ಯಗಾತ್ಮರೂಪದಿಂದ ಈಶನಾಗಿರುವ ತನ್ನ ಆತ್ಮನಿಂದ 'ಇದೆಲ್ಲವೂ ನಾನೇ' ಎಂದು **ಪರಮಾರ್ಥಸತ್ಯ**ವಾಗಿರುವ ರೂಪದ[3] ಪರಮಾತ್ಮನಿಂದ ಸುಳ್ಳಾಗಿರುವ ಈ ಚರಾಚರವೆಲ್ಲವನ್ನೂ ಹೊದಿಸಬೇಕು ಹೇಗೆ ಚಂದನ, ಅಗಿಲು **ಮುಂತಾದವು**ಗಳಿಗೆ ನೀರು ಮುಂತಾದವುಗಳ ಸಂಬಂಧದಿಂದಾದ ಕೊಳೆಯುವದೇ ಮುಂತಾದದ್ದರಿಂದಾದ **ಉಪಾಧಿ**ಯಿಂದುಂಟಾದ[4] ಕೆಟ್ಟ ನಾತವು ಅವುಗಳನ್ನು ತೇಯುವದರಿಂದ (ಹುಟ್ಟುವ) ತಮ್ಮ ನಿಜವಾದ ವಾಸನೆಯಿಂದ ಮುಚ್ಚಿಹೋಗುವದೋ ಅದರಂತೆಯೇ ತನ್ನ ಆತ್ಮನಲ್ಲಿ ಅಧ್ಯಸ್ತವಾಗಿರುವ ಸ್ವಾಭಾವಿಕವಾದ[5] ಕರ್ತೃತ್ವಭೋಕ್ತೃತ್ವ ಮುಂತಾದ ರೂಪದ ದ್ವೈತರೂಪವಾದ ಜಗತ್ತು ಜಗತ್ತಿನಲ್ಲ ಅಂದರೆ ಪೃಥ್ವಿಯಲ್ಲಿ; ಜಗತ್ತಿನಲ್ಲಿ ಎಂಬುದನ್ನು **ಉಪಲಕ್ಷಣಕ್ಕಾಗಿ** (ಉಪಯೋಗಿಸಿರುವದರಿಂದ)[6] **ನಾಮ,**

---

1. ಯಾವಯಾವದನ್ನು ನಾವು ನಮ್ಮ ಆತ್ಮನೆಂದು ತಪ್ಪುತಿಳಿವಳಿಕೆಯಿಂದ ತಿಳಿಯುತ್ತೇವೆಯೋ ಅವೆಲ್ಲಕ್ಕಿಂತಲೂ ಹೆಚ್ಚಿನ ನಿಜವಾದ ಆತ್ಮನು. ಗೀ. ಭಾ. ೧೩-೩೨ ನೋಡಿರಿ.

2 ಎಲ್ಲಕ್ಕೂ ಒಳಗಿರುವ ನಮ್ಮ ಆತ್ಮನ ರೂಪದಿಂದ. ಪರಮೇಶ್ವರನು ನಮ್ಮ ಆತ್ಮನೇ, ಬೇರೆಯಲ್ಲ. ಈಶ್ವರನು ಆತ್ಮನಿಗಿಂತ ಬೇರೆಯಾದರೆ ಆತನು ಅನಾತ್ಮವಾಗಿ ಜಡವಸ್ತುವಾಗಬೇಕಾಗುವದು, ಆಗ 'ಈಶ್ವರನು' (ಆಳುವವನು) ಎಂಬ ಹೆಸರು ಅವನಿಗೆ ಉಪಚಾರದ ಮಾತಾಗುವದೆಂದು ಭಾವ.

3. ನಿಜವಾಗಿ ಸತ್ಯವಾಗಿರುವದು ನಮ್ಮ ಆತ್ಮನೊಬ್ಬನೇ. ನಾವು ಸತ್ಯವೆಂದು ತಿಳಿದುಕೊಂಡಿರುವ ಮಿಕ್ಕ ವಸ್ತುಗಳು ನಿಜವಾಗಿರುವವಲ್ಲ; ವ್ಯವಹಾರದಲ್ಲಿ ಎಲ್ಲರೂ ಸತ್ಯವೆನ್ನುವ ವಸ್ತುಗಳು **ವ್ಯಾವಹಾರಿಕಸತ್ಯ**ವಾಗಿರುತ್ತವೆ. ಭ್ರಾಂತಿಯಲ್ಲಿ ಸತ್ಯವೆಂದು ತೋರುವ ವಸ್ತುಗಳು **ಪ್ರಾತಿಭಾಸಿಕಸತ್ಯ**.

4 ತನ್ನಲ್ಲಿ ಸೇರಿದ ನೀರೇ ಮುಂತಾದ ಮತ್ತೊಂದು ವಸ್ತುವಿನಿಂದಾದ.

5. ಅಜ್ಞಾನಸ್ವಭಾವದಿಂದಾಗಿರುವ. ಜನಸಾಮಾನ್ಯಕ್ಕೆ ಅಜ್ಞಾನವೇ ಸ್ವಾಭಾವಿಕವಾಗಿದೆಯೆಂಬುದನ್ನು 'ಸ್ವಾಭಾವಿಕ' ಎಂಬ ಮಾತು ಸೂಚಿಸುತ್ತದೆ. ಗೀ. ಭಾ. ೫-೧೪ ನೋಡಿರಿ.

6. 'ಪೃಥ್ವಿಯಲ್ಲಿರುವ ಜಂಗಮಾತ್ಮವಾದದ್ದು' ಎಂಬುದು ಉಪಲಕ್ಷಣವು. ಧನು

ರೂಪ, ಕರ್ಮ[1] –ಎಂಬ ಹೆಸರಿನ ಕಾರ್ಯಸಮೂಹವೆಲ್ಲವೂ ಪರಮಾರ್ಥಸತ್ಯವಾಗಿರುವ ಆತ್ಮಭಾವನೆಯಿಂದ ಬಿಟ್ಟುಹೋಗುವದು.

ಹೀಗೆ ಈಶ್ವರಾತ್ಮ(ನೇ ನಾನೆಂಬ) ಭಾವನೆಯಿಂದ ಕೂಡಿರುವಾತನು ಪುತ್ರನೇ ಮುಂತಾದ **ಏಷಣಾತ್ರಯವನ್ನು**[2] ಬಿಡುವದಕ್ಕೆ ತಕ್ಕವನೇ ಹೊರತು ಕರ್ಮಗಳಿಗೆ (ತಕ್ಕವ)ನಲ್ಲ.

(ಭಾಷ್ಯ)

೪. ತೇನ ತ್ಯಕ್ತೇನ ತ್ಯಾಗೇನೇತ್ಯರ್ಥಃ। ನ ಹಿ ತ್ಯಕ್ತೋ ಮೃತಃ ಪುತ್ರೋ ಭೃತ್ಯೋವಾ ಆತ್ಮಸಂಬನ್ಧಿತಾಯಾ ಅಭಾವಾದಾತ್ಮಾನಂ ಪಾಲಯತಿ। ಅತಸ್ತ್ಯಾಗೇನೇತ್ಯಯ ಮೇವಾರ್ಥಃ। ಭುಞ್ಜೀಥಾಃ ಪಾಲಯೇಥಾಃ ॥

ಏವಂ ತ್ಯಕ್ತೈಷಣಸ್ತ್ವಂ ಮಾ ಗೃಧಃ। ಗೃಧಿಮ್ ಆಕಾಙ್ಕ್ಷಾಂ ಮಾ ಕಾರ್ಷೀರ್ಧನವಿಷಯಾಮ್। ಕಸ್ಯಸ್ವಿತ್ ಕಸ್ಯಚಿತ್ ಪರಸ್ಯ ಸ್ವಸ್ಯ ವಾ ಧನಂ ಮಾ ಕಾಙ್ಕ್ಷೀರಿತ್ಯರ್ಥಃ। ಸ್ವಿತ್ ಇತ್ಯನರ್ಥಕೋ ನಿಪಾತಃ ॥ ಅಥವಾ ಮಾ ಗೃಧಃ। ಕಸ್ಮಾತ್? 'ಕಸ್ಯಸ್ವಿದ್ಧನಮ್' ಇತ್ಯಾಕ್ಷೇಪಾರ್ಥಃ। ನ ಕಸ್ಯಚಿದ್ಧನಮಸ್ತಿ ಯದ್ಗೃಧ್ಯೇತ। "ಆತ್ಮೈವೇದಂ ಸರ್ವಮ್" (ಛಾ. ೭-೨೫-೧) ಇತೀಶ್ವರಭಾವನಯಾ ಸರ್ವಂ ತ್ಯಕ್ತಮ್। ಅತ ಆತ್ಮನ ಏವೇದಂ ಸರ್ವಮ್, ಆತ್ಮೈವ ಚ ಸರ್ವಮ್। ಅತೋ ಮಿಥ್ಯಾವಿಷಯಾಂ ಗೃಧಿಂ ಮಾಕಾರ್ಷೀರಿತ್ಯರ್ಥಃ ॥

(ಭಾಷ್ಯಾರ್ಥ)

ಆದ್ದರಿಂದ, ತ್ಯಕ್ತದಿಂದ ಎಂದರೆ ತ್ಯಾಗದಿಂದ ಎಂದರ್ಥ, (ಬಿಡಲ್ಪಟ್ಟ ಎಂದರ್ಥವಲ್ಲ). ಏಕೆಂದರೆ ಬಿಡಲ್ಪಟ್ಟ ಸತ್ತುಹೋದ ಮಗನಾಗಲಿ ಆಳಾಗಲಿ ತನಗೆ ಸಂಬಂಧವಿಲ್ಲದವನಾದ್ದರಿಂದ ತನ್ನನ್ನು ಕಾಪಾಡಲಾರನು[3]. ಆದ್ದರಿಂದ ತ್ಯಾಗದಿಂದ ಎಂಬುದೇ (ಸರಿಯಾದ) ಅರ್ಥವು. (ತ್ಯಾಗದಿಂದ ನಿನ್ನನ್ನು) 'ಭುಞ್ಜೀಥಾಃ' ಕಾಪಾಡಿಕೊ.

ರ್ಥರರು ಎಂಬಲ್ಲಿ ಧನುಶ್ಶಬ್ದದಿಂದ ಬಿಲ್ಲು, ಬಾಣ, ಬತ್ತಳಿಕೆ ಮುಂತಾದದ್ದೆಲ್ಲವನ್ನೂ ಆರಿಯುವಂತೆ 'ಎಲ್ಲಾ ದ್ವೈತವೂ' ಎಂಬುದೇ ಈ ಮಾತಿಗೆ ಅರ್ಥವೆಂದು ಭಾವ. ಉಪಲಕ್ಷಣವೆಂದರೆ ಹೆಗ್ಗುರುತು

1. ಬೃ. ಭಾ ೧-೬-೧, ೨, ೩ ನೋಡಿ.

2. ಪುತ್ರರ ಬಯಕೆ, ವಿತ್ತದ ಬಯಕೆ, ಲೋಕದ ಬಯಕೆ—ಇವಕ್ಕೆ ಏಷಣಾತ್ರಯ ವೆಂದು ಹೆಸರು. ಬೃ. ೩-೫-೧ ನೋಡಿರಿ.

3. 'ತ್ಯಕ್ತ'ವೆಂಬ ಮಾತಿಗೆ ತ್ಯಾಗ, ಬಿಡಲ್ಪಟ್ಟ—ಎಂದು ಎರಡು ಅರ್ಥಗಳನ್ನು ಮಾಡಬಹುದು, ಆದರೆ ಬಿಡಲ್ಪಟ್ಟ ವಸ್ತುಗಳು ತನಗೆ ಸಂಬಂಧಪಟ್ಟಿರುವದಿಲ್ಲವಾದ್ದರಿಂದ

ಹೀಗೆ ಬಯಕೆಗಳನ್ನು ಬಿಟ್ಟ ನೀನು ಬಯಸಬೇಡ, ಬಯಕೆಯನ್ನು ಅಂದರೆ ಧನವಿಷಯದ ಆಸೆಯನ್ನು ಮಾಡಬೇಡ. ಯಾರ ಧನವನ್ನೂ ಮತ್ತೊಬ್ಬನ ಅಥವಾ ನಿನ್ನ ಧನವನ್ನು ಬಯಸದಿರು ಎಂದರ್ಥ. (ಕಸ್ಯಸ್ವಿತ್) ಎಂಬಲ್ಲಿ ಸ್ವಿತ್ ಎಂಬ ನಿಪಾತಕ್ಕೆ ಯಾವ ಅರ್ಥವೂ ಇಲ್ಲ. ಅಥವಾ (ಈ ವಾಕ್ಯಕ್ಕೆ ಮತ್ತೊಂದು ರೀತಿಯಲ್ಲಿ ಅರ್ಥವನ್ನು ಮಾಡಬಹುದು). ಬಯಸಬೇಡ, ಏಕೆಂದರೆ 'ಹಣವು ಯಾರದ್ದು ? ಎಂದು (ಕಸ್ಯಸ್ವಿತ್ ಎಂಬ ಮಾತನ್ನು) ಆಕ್ಷೇಪಾರ್ಥ(ದಲ್ಲಿ ತೆಗೆದು ಕೊಳ್ಳಬೇಕು). ಬಯಸುವದಕ್ಕೆ ಯಾರ ಹಣವೂ ಇರುವದಿಲ್ಲ.[1] 'ಇದೆಲ್ಲವೂ ಆತ್ಮನೇ' ಎಂದು ಈಶ್ವರಭಾವನೆಯಿಂದ ಎಲ್ಲವನ್ನೂ ಬಿಟ್ಟದ್ದಾಯಿತು ಆದ್ದರಿಂದ ಇದೆಲ್ಲವೂ ಆತ್ಮನದೇ, ಇದೆಲ್ಲವೂ ಆತ್ಮನೇ. ಆದ್ದರಿಂದ ಸುಳ್ಳಾದ[2] ವಿಷಯದಲ್ಲಿ ಬಯಕೆಯನ್ನು ಮಾಡಬೇಡ ಎಂದರ್ಥ. ॥ ೧ ॥

ಕರ್ಮನಿಷ್ಠೆ

(ಭಾಷ್ಯ)

ಓಂ ಏವಮಾತ್ಮವಿದಃ ಪುತ್ರಾದ್ಯೇಷಣಾತ್ರಯಸಂನ್ಯಾಸೇನ ಆತ್ಮಜ್ಞಾನನಿಷ್ಠತಯಾ ಆತ್ಮಾ ರಕ್ಷಿತವ್ಯ ಇತ್ಯೇಷ ವೇದಾರ್ಥಃ। ಅಥೇತರಸ್ಯ ಅನಾತ್ಮಜ್ಞತಯಾ ಆತ್ಮಗ್ರಹಣಾಶಕ್ತಸ್ಯ ಇದಮುಪದಿಶತಿ ಮನ್ತ್ರಃ—

(ಭಾಷ್ಯಾರ್ಥ)

ಹೀಗೆ ಆತ್ಮನನ್ನು ಅರಿತಿರುವವನು ಪುತ್ರನೇ ಮುಂತಾದ ಏಷಣಾತ್ರಯವನ್ನು ಬಿಟ್ಟು **ಆತ್ಮಜ್ಞಾನನಿಷ್ಠನಾಗಿ** ತನ್ನನ್ನು ತಾನು ಕಾಪಾಡಿಕೊಳ್ಳಬೇಕೆಂಬುದು[3]

ಆವುಗಳಿಂದ ತನ್ನನ್ನು ಕಾಪಾಡಿಕೊಳ್ಳುವದು ಆಗಲಾರದು. ತ್ಯಕ್ತದಿಂದ ಕಾಪಾಡಿಕೊ ಎಂದು ಶ್ರುತಿಯಲ್ಲಿರುವದರಿಂದ 'ತ್ಯಾಗದಿಂದ' ಎಂದೇ ಈ ಮಾತಿಗೆ ಅರ್ಥವನ್ನು ಮಾಡಬೇಕು ಎಂದು ಭಾವ. 'ಅಯಮೇವ ವೇದಾರ್ಥಃ' ಎಂಬ (ಆ॥) ಪಾರಕ್ಕಿಂತ ಈಗ ಕೊಟ್ಟಿರುವ (ವಾ॥) ಪಾರವೇ ಉತ್ತಮ.

1. ಸರ್ವಾತ್ಮಭಾವವು ಬಂದರೆ ಬಯಕೆಗೆ ವಿಷಯವೇ ಇರುವದಿಲ್ಲ. ಆಪ್ತಕಾಮನಾಗುತ್ತಾನೆ ಎಂದು ಜ್ಞಾನದಿಂದಾಗುವ ಪ್ರಯೋಜನವನ್ನು ಸೂಚಿಸಿರುತ್ತದೆ.

2. 'ಈಶಾವಾಸ್ಯಮಿದಂ ಸರ್ವಮ್' ಎಂಬ ವಾಕ್ಯಕ್ಕೆ 'ಆತ್ಮೈವೇದಂ ಸರ್ವಮ್' ಎಂಬ (ಛಾ. ೭-೨೫-೨) ಛಾಂದೋಗ್ಯವಾಕ್ಯದ ಅರ್ಥವೇ ಇರುವದು. ಸರ್ವಶಬ್ದವಾಚ್ಯವಾದ ಜಗತ್ತು ತನ್ನ ರೂಪದಿಂದ ಹುಸಿತೋರಿಕೆ, ಆತ್ಮರೂಪದಿಂದಲೇ ಸತ್ಯವು ಎಂಬುದು ಈ ಉಪದೇಶದ ತಿರುಳು.

3 ಆತ್ಮಜ್ಞಾನನಿಷ್ಠೆಯನ್ನು ಪಡೆದರೆ ತನ್ನನ್ನು ತಾನು ಉದ್ಧಾರಮಾಡಿಕೊಂಡಂತೆ ಎಂದರ್ಥ.

(ನೊದಲನೆಯ) ವೇದ(ವಾಕ್ಯದ) ಅರ್ಥವು. ಇನ್ನು ಅನಾತ್ಮಜ್ಞರಾಗಿ[1] ಆತ್ಮನನ್ನು ಅರಿತುಕೊಳ್ಳುವದಕ್ಕೆ ಶಕ್ತಿಯಿಲ್ಲದ ಮಿಕ್ಕವರಿಗೆ (ಈ ಎರಡನೆಯ) ಮಂತ್ರವು ಇದನ್ನು ಉಪದೇಶಮಾಡುತ್ತದೆ:

ಕುರ್ವನ್ನೇವೇಹ ಕರ್ಮಾಣಿ
ಜಿಜೀವಿಷೇಚ್ಛತಗ್ಂ ಸಮಾಃ।
ಏವಂ ತ್ವಯಿ ನಾನ್ಯಥೇತೋಽಸ್ತಿ
ನ ಕರ್ಮ ಲಿಪ್ಯತೇ ನರೇ ॥ ೨ ॥

೨. ಕರ್ಮಗಳನ್ನು ಮಾಡುತ್ತಲೇ ಇಲ್ಲಿ ನೂರು ವರ್ಷಗಳು ಬಾಳುವದಕ್ಕೆ ಬಯಸಬೇಕು. ಹೀಗಿರುವ ಮನುಷ್ಯನಾದ ನಿನಗೆ ಇದಕ್ಕಿಂತ ಬೇರೆಯಾಗಿ ಕರ್ಮವು ಲೇಪವಾಗದ (ಯಾವ ಮಾರ್ಗವೂ) ಇರುವದಿಲ್ಲ.

(ಭಾಷ್ಯ)

೬. ಕುರ್ವನ್ನೇವ ನಿರ್ವರ್ತಯನ್ನೇವ ಇಹ ಕರ್ಮಾಣಿ ಅಗ್ನಿಹೋತ್ರಾದೀನಿ ಜಿಜೀವಿಷೇತ್ ಜೀವಿತುಮಿಚ್ಛೇತ್ ಶತಂ ಶತಸಙ್ಖ್ಯಾಃ ಸಮಾಃ ಸಂವತ್ಸರಾನ್। ತಾವದ್ಧಿ ಪುರುಷಸ್ಯ ಪರಮಾಯುರ್ನಿರೂಪಿತಮ್। ತಥಾ ಚ ಪ್ರಾಪ್ತಾನುವಾದೇನ 'ಯಜ್ಜಿಜೀವಿಷೇಚ್ಛತಂ ವರ್ಷಾಣಿ, ತತ್ ಕುರ್ವನ್ನೇವ ಕರ್ಮಾಣಿ' ಇತ್ಯೇತದ್ವಿಧೀಯತೇ। ಏವಂ ಏವಂಪ್ರಕಾರೇ ತ್ವಯಿ ಜಿಜೀವಿಷತಿ ನರೇ ನರಮಾತ್ರಾಭಿಮಾನಿನಿ ಇತಃ ಏತಸ್ಮಾದಗ್ನಿಹೋತ್ರಾದೀನಿ ಕರ್ಮಾಣಿ ಕುರ್ವತೋ ವರ್ತಮಾನಾತ್ ಪ್ರಕಾರಾತ್ ಅನ್ಯಥಾ ಪ್ರಕಾರಾನ್ತರಂ ನಾಸ್ತಿ। ಯೇನ ಪ್ರಕಾರೇಣ ಅಶುಭಂ ಕರ್ಮ ನ ಲಿಪ್ಯತೇ ಕರ್ಮಣಾ ನ ಲಿಪ್ಯಸೇ ಇತ್ಯರ್ಥಃ। ಅತಃ ಶಾಸ್ತ್ರವಿಹಿತಾನಿ ಕರ್ಮಾಣ್ಯಗ್ನಿಹೋತ್ರಾದೀನಿ ಕುರ್ವನ್ನೇವ ಜಿಜೀವಿಷೇತ್ ॥

(ಭಾಷ್ಯಾರ್ಥ)

ಅಗ್ನಿಹೋತ್ರವೇ ಮುಂತಾದ ಕರ್ಮಗಳನ್ನು ಮಾಡುತ್ತಲೇ ಇಲ್ಲಿ ಈ ಲೋಕದಲ್ಲಿ ನೂರು, ನೂರು ಸಂಖ್ಯೆಯ, 'ಸಮಾಃ' ಅಂದರೆ ಸಂವತ್ಸರಗಳವರೆಗೆ ಬಾಳುವದಕ್ಕೆ ಬಯಸಬೇಕು ಅಷ್ಟೇ ಅಲ್ಲವೆ, ಮನುಷ್ಯನಿಗೆ ಪರಮಾವಧಿಯ ಆಯುಸ್ಸೆಂದು ಗೊತ್ತಾಗಿರುವದು? ಆದ್ದರಿಂದ (ಹೀಗೆ) ತಿಳಿದಿರುವದನ್ನು **ಅನುವಾದಮಾಡಿ ಕೊಂಡು**[2] 'ನೂರು ವರ್ಷಗಳು ಬಾಳಬೇಕೆಂದಿಚ್ಛಿಸುವದಾದರೆ ಕರ್ಮಗಳನ್ನು

---

1. ಹೊರಗಿನ ವಿಷಯಗಳಲ್ಲಿ ನೆಟ್ಟ ದೃಷ್ಟಿಯುಳ್ಳವರಾಗಿ.

2. ಇಲ್ಲಿ "ನೂರುವರ್ಷ ಬಾಳಬೇಕೆಂದು ಇಚ್ಛಿಸಬೇಕು" ಎಂದು ವಿಧಿಸುವದಕ್ಕೆ ಶಾಸ್ತ್ರವಚನವು ಬಂದಿರುವದಿಲ್ಲ. ಮನುಷ್ಯನ ಆಯಸ್ಸು ನೂರು ವರ್ಷವಷ್ಟೆ. ಆ ಕಾಲವನ್ನೆಲ್ಲ

ಮಾಡುತ್ತಲೇ ಹಾಗೆ ಬಾಳಲಿಚ್ಛಿಸಬೇಕು ' ಎಂಬದನ್ನು ವಿಧಿಸಿರುತ್ತದೆ.[1]

ಹೀಗೆ ಎಂದರೆ ಈ ರೀತಿಯಲ್ಲಿ ಬದುಕಬೇಕೆಂದು ಬಯಸುತ್ತಿರುವ, ಮನುಷ್ಯನಾದ ಎಂದರೆ ನಾನು ಬರಿಯ ಮನುಷ್ಯನೇ ಎಂಬ ತಿಳಿವಳಿಕೆಯಿಂದಿರುವ, ನಿನಗೆ ಇದಕ್ಕಿಂತ ಅಂದರೆ ಅಗ್ನಿಹೋತ್ರವೇ ಮುಂತಾದ ಕರ್ಮಗಳನ್ನು ಮಾಡಿಕೊಂಡಿರುವ ರೀತಿಗಿಂತ ಬೇರೆಯಾಗಿ ಮತ್ತೊಂದು ರೀತಿಯು ಇರುವದಿಲ್ಲ. ಯಾವ ರೀತಿಯಿಂದ ನಿನಗೆ ಕೆಟ್ಟ ಕರ್ಮವು ಅಂಟುವದಿಲ್ಲವೋ, (ಯಾವ ರೀತಿಯಿಂದಿದ್ದರೆ ನೀನು) ಕರ್ಮದ ಅಂಟಿಲ್ಲದೆ ಇರುವೆಯೋ (ಅಂಥ ರೀತಿಯು ಬೇರೆ ಯಾವುದೊಂದೂ ಇರುವದಿಲ್ಲ) ಎಂದರ್ಥ. ಆದ್ದರಿಂದ ಶಾಸ್ತ್ರದಲ್ಲಿ ವಿಧಿಸಿರುವ ಅಗ್ನಿಹೋತ್ರವೇ ಮುಂತಾದ ನಿತ್ಯ ಕರ್ಮಗಳನ್ನು [2] ಮಾಡುತ್ತಲೇ ಬಾಳಲಿಚ್ಛಿಸಬೇಕು [3]

ಮೊದಲನೆಯ ಎರಡು ಮಂತ್ರಗಳ ಅರ್ಥದ ವಿಷಯದಲ್ಲಿ ವಿಚಾರ

(ಭಾಷ್ಯ)

೭ ಕಥಂ ಪುನರಿದಮವಗಮ್ಯತೇ ಪೂರ್ವೇಣ ಮನ್ತ್ರೇಣ ಸಂನ್ಯಾಸಿನೋ ಜ್ಞಾನನಿಷ್ಠೋಕ್ತಾ । ದ್ವಿತೀಯೇನ ತದಶಕ್ತಸ್ಯ ಕರ್ಮನಿಷ್ಠೇತಿ ? ಉಚ್ಯತೇ । ಜ್ಞಾನ ಕರ್ಮಣೋರ್ವಿರೋಧಂ ಪರ್ವತವದಕಮ್ಪ್ಯಂ ಯಥೋಕ್ತಂ ನ ಸ್ಮರಸಿ ಕಿಮ್ ? ಇಹಾಪ್ಯುಕ್ತಮ್ " ಯೋ ಹಿ ಜಿಜೀವಿಷೇತ್, ಸ ಕರ್ಮಾಣಿ ಕುರ್ವನ್ನೇವ " ಇತಿ। " ಈಶಾವಾಸ್ಯಮಿದಂ ಸರ್ವಮ್, ತೇನ ತ್ಯಕ್ತೇನ ಭುಞ್ಜೀಥಾ, ಮಾಗೃಧಃ ಕಸ್ಯಸ್ವಿದ್ಧನಮ್ " ಇತಿ ಚ । " ನ ಜೀವಿತೇ ಮರಣೇ ವಾ ಗೃಧಿಂ ಕುರ್ವೀತಾರಣ್ಯಮಿಯಾದಿತಿ ಚ ಪದಮ್ , ತತೋ ನ ಪುನರೇಯಾತ್ " (?) ಇತಿ ಸಂನ್ಯಾಸಶಾಸನಾತ್ । ಉಭಯೋಃ ಫಲಭೇದಂ ಚ ವಕ್ಷ್ಯತಿ । " ಇಮೌ ದ್ವಾವೇವ ಪನ್ಥಾನಾವನುನಿಷ್ಕ್ರಾನ್ತರೌ

ಕರ್ಮಗಳನ್ನು ಮಾಡುತ್ತಲೇ ಕಳೆಯಬೇಕು ಎಂದು ತಿಳಿಸುವದಕ್ಕೆ ಬಂದಿದೆ. ನೂರು ವರ್ಷ ಬಾಳಬೇಕು ' ಎಂಬುದು **ಅನುವಾದ**, ಎಂದರೆ ಗೊತ್ತಿರುವದನ್ನೇ ಹೇಳಿಕೊಂಡಿರುವ ಮಾತು.

1. ಯಾವದನ್ನು ವಿಧಿಸಿರುತ್ತದೆಯೋ ಅದರಲ್ಲಿ ಶ್ರುತಿಯ ತಾತ್ಪರ್ಯವಿರುತ್ತದೆ; ಅನುವಾದವು ತಾನೇ ಪ್ರಾಪ್ತವಾಗಿರುವದರಿಂದ ಅದರಲ್ಲಿ ತಾತ್ಪರ್ಯವಿರುವದಿಲ್ಲ.

2. ಶಾಸ್ತ್ರದಲ್ಲಿ ಹೇಳಿರುವ ' ಕರ್ಮ 'ವನ್ನೇ ಇಲ್ಲಿ ಕರ್ಮವೆಂದು ಕರೆದಿರುತ್ತದೆ. ಕರ್ಮವೆಂಬ ಶಬ್ದಕ್ಕೆ ಕ್ರಿಯೆ, ಕೆಲಸ ಎಂಬ ಅರ್ಥವಾದರೂ ಅದನ್ನು ಹೇಳುವದಕ್ಕೆ ಶಾಸ್ತ್ರವು ಬೇಕಿಲ್ಲ.

3. ಈ ಮಂತ್ರಕ್ಕೆ ಮತ್ತೊಂದು ಬಗೆಯಾಗಿ ಅರ್ಥವನ್ನು ಮಾಡಿರುವದನ್ನು ಸೂ.ಭಾ. ೩-೪-೧೪ ರಲ್ಲಿ ಕಾಣಬಹುದು.

ಭವತಃ ಕ್ರಿಯಾಪಥಶ್ಚೈವ ಪುರಸ್ತಾತ್ ಸಂನ್ಯಾಸಶ್ಚೋತ್ತರೇಣ ನಿವೃತ್ತಿಮಾರ್ಗೇಣ **ಏಷಣಾತ್ರಯಸ್ಯ** ತ್ಯಾಗಃ । ತಯೋಃ ಸಂನ್ಯಾಸ ಏವಾತಿರೇಚಯತಿ" (?) ನ್ಯಾಸ ಏವಾತ್ಯರೇಚಯತ್ (ಮಹಾ ನಾರಾ ೭೮) ಇತಿ **ತೈತ್ತಿರೀಯಕೇ**। " ದ್ವಾವಿಮಾವಥ ಪನ್ಥಾನೌ ಯತ್ರ ವೇದಾಃ ಪ್ರತಿಷ್ಠಿತಾಃ । ಪ್ರವೃತ್ತಿಲಕ್ಷಣೋ ಧರ್ಮೋ ನಿವೃತ್ತಶ್ಚ ವಿಭಾಷಿತಃ ॥ (ಮೋ. ಧ. ೨೪೧-೬) ಇತ್ಯಾದಿ ಪುತ್ರಾಯ ವಿಚಾರ್ಯ ನಿಶ್ಚಿತಮುಕ್ತಂ **ವ್ಯಾಸೇನ** ವೇದಾಚಾರ್ಯೇಣ ಭಗವತಾ । ವಿಭಾಗಂಚಾನಯೋರ್ದರ್ಶಯಿಷ್ಯಾಮಃ॥

(ಭಾಷ್ಯಾರ್ಥ)

(ಪ್ರಶ್ನೆ) - ಮೊದಲನೆಯ ಮಂತ್ರದಲ್ಲಿ ಸಂನ್ಯಾಸಿಗೆ **ಜ್ಞಾನನಿಷ್ಠೆ**ಯನ್ನು ಹೇಳಿದೆಯೆಂತಲೂ ಎರಡನೆಯ (ಮಂತ್ರದ)ಲ್ಲಿ ಅದಕ್ಕೆ ಶಕ್ತಿಯಿಲ್ಲದವರಿಗೆ **ಕರ್ಮನಿಷ್ಠೆ**ಯನ್ನು ಹೇಳಿದೆಯೆಂತಲೂ ಹೇಗೆ ಇದನ್ನು ನಿಶ್ಚಯಿಸಬೇಕು?

(ಉತ್ತರ) - ಹೇಳುತ್ತೇವೆ (ಕೇಳು).[1] ಹಿಂದೆ ಹೇಳಿದ ಜ್ಞಾನಕರ್ಮಗಳೆರಡಕ್ಕೂ ಇರುವ ವಿರೋಧವೆಂಬುದು ಬೆಟ್ಟದಂತೆ ಅಲುಗಾಡದೆ ಇರುವದೆಂಬುದು (ನಿನಗೆ) ನೆನಪಿಲ್ಲವೇನು? ಇಲ್ಲಿಯೂ[2] " ಯಾವನು ಬಾಳಲಿಚ್ಛಿಸುತ್ತಾನೋ ಅವನು ಕರ್ಮಗಳನ್ನು[3] ಮಾಡುತ್ತಲೇ ಇರಬೇಕು", " ಇದೆಲ್ಲವೂ ಈಶ್ವರನಿಂದ ಮುಚ್ಚಲ್ಪಡತಕ್ಕದ್ದು ; ಆದ್ದರಿಂದ ತ್ಯಾಗದಿಂದ ಕಾಪಾಡಿಕೊ, ಯಾರ ಧನವನ್ನೂ ಬಯಸಬೇಡ" ಎಂದು ಹೇಳಿರುತ್ತದೆ. " ಬದುಕಿರುವದರಲ್ಲಾಗಲಿ ಸಾಯುವದರಲ್ಲಾಗಲಿ ಆಸೆಯನ್ನು ಮಾಡಬಾರದು, ಅರಣ್ಯವನ್ನು ಹೊಂದಬೇಕು ಎಂಬುದು ಹಾದಿಯು. ಮತ್ತೆ ಅಲ್ಲಿಂದ ಬರಬಾರದು" (?) [4] ಎಂದು ಸಂನ್ಯಾಸವನ್ನು ಶಾಸ್ತ್ರದಲ್ಲಿ ವಿಧಿಸಿರುತ್ತದೆ. ಈ ಎರಡಕ್ಕೂ ಬೇರೆಬೇರೆಯ ಫಲವನ್ನು (ಈ ಉಪನಿಷತ್ತಿನಲ್ಲಿ) ಮುಂದೆ

---

1. ಈ ಉಪನಿಷತ್ತಿನಲ್ಲಿ ಭಾಷ್ಯದ ಅವತರಣಿಕೆಯಲ್ಲಿ. ಜ್ಞಾನದಿಂದ ತಿಳಿದುಬರುವ ಶುದ್ಧವಾಗಿರುವದು, ಪಾಪದಂಜಿಕೆಯಿಲ್ಲದಿರುವದು—ಮುಂತಾದ ಆತ್ಮಸ್ವಭಾವವು ಕರ್ಮಕ್ಕೆ ವಿರುದ್ಧವಾಗಿರುತ್ತದೆ ಎಂದು ಅಲ್ಲಿ ಹೇಳಿರುತ್ತದೆ.

2. ಉಪನಿಷತ್ತಿನಲ್ಲಿಯೂ,

3. ‘‘ ಕರ್ಮ ಕುರ್ವನ್ ಎಂಬ " (ವಾ॥) ಪಾರಕ್ಕಿಂತ ಈ ಪಾರವೇ ಮೇಲು

4. ಈ ವಾಕ್ಯವು ಯಾವ ಶ್ರುತಿಯಲ್ಲಿದೆಯೋ ತಿಳಿಯದು. ಸೂತ್ರಭಾಷ್ಯ (೩-೪-೪೦) ದಲ್ಲಿರುವ ಈ ವಾಕ್ಯದ ಕೊನೆಯಲ್ಲಿ ‘ ಇತ್ಯುಪನಿಷತ್ ’ ಎಂಬ ಮಾತುಗಳಿವೆ. ಏಯಾತ್ ಎಂಬ ಪಾಠವನ್ನೇ ಇಟ್ಟುಕೊಂಡಿದೆ. ‘ ಇಯಾತ್ ’ ಎಂಬ (ಆ॥) ಪಾರಕ್ಕಿಂತ ಇದು ಉತ್ತಮ. ಉಪನಿಷತ್ತಿನಲ್ಲಿ ಆಯುಷ್ಕಾಮನಿಗೆ ಕರ್ಮವನ್ನು ಹೇಳಿ ಮುಮುಕ್ಷುಗಳಿಗೆ ತ್ಯಾಗವನ್ನೇ ಹೇಳಿರುವದೂ ಸಂನ್ಯಾಸವನ್ನು ಶಾಸ್ತ್ರದಲ್ಲಿ ವಿಧಿಸಿರುವುದೂ ಜ್ಞಾನಕರ್ಮಗಳನ್ನು ಒಬ್ಬನೇ ಮಾಡುವ ಸಮುಚ್ಚಯಸಾಧನೆಗೆ ಶಾಸ್ತ್ರಸಮ್ಮತಿಯಿಲ್ಲವೆಂಬುದಕ್ಕೆ ಪ್ರಮಾಣ ಎಂದು ಭಾವ.

ಹೇಳಿರುತ್ತದೆ[1] "ಈ ಎರಡೇ ಹಾದಿಗಳು ಹೊರಟುಬಂದಿವೆ: ಕರ್ಮದ ಹಾದಿಯೇ ಮೊದಲು, ಬಳಿಕ ಸಂನ್ಯಾಸವು ಎಂದರೆ ನಿವೃತ್ತಿಮಾರ್ಗದಿಂದ ಏಷಣಾತ್ರಯವನ್ನು ಬಿಡುವದು ಇವೆರಡರಲ್ಲಿ ಸಂನ್ಯಾಸನೇ ಹೆಚ್ಚಿನದಾಗಿರುವದು." (?)[2] "ಸಂನ್ಯಾಸನೇ ಹೆಚ್ಚಿನದು" (ಮಹಾ. ನಾ ೭೮) ಎಂದು **ತೈತ್ತಿರೀಯದಲ್ಲಿ** (ಹೇಳಿದೆ). **ವೇದಾಚಾರ್ಯರಾದ ಭಗವಾನ್ ವ್ಯಾಸರು** ವಿಚಾರಮಾಡಿ "ಇನ್ನು ವೇದಗಳು ಹೊರಟಿರುವದು **ಈ** ಎರಡು ಹಾದಿಗಳಲ್ಲಿ, ಪ್ರವೃತ್ತಿರೂಪವಾಗಿರುವ ಧರ್ಮ(ವೊಂದು), ನಿವೃತ್ತಿ ಎಂದೆನಿಸಿಕೊಂಡಿರುವದು (ಇನ್ನೊಂದು)"[3] (ಮೋ. ಧ. ೨೪೧-೬) ಎಂದು ನಿಶ್ಚಯಿಸಿ (ತಮ್ಮ) ಮಕ್ಕಳಾದ (ಶುಕರಿಗೆ) ಹೇಳಿರುತ್ತಾರೆ ಇವೆರಡಕ್ಕೂ ಇರುವ ತಾರತಮ್ಯವನ್ನು ನಾವು ಮುಂದೆಯೂ ತಿಳಿಯಪಡಿಸುವೆವು.

ಆತ್ಮನ ಯಾಥಾತ್ಮ್ಯ

(ಭಾಷ್ಯ)

ಲ ಅಥೇದಾನೀಮವಿದ್ವನ್ನಿನ್ದಾರ್ಥೋಽಯಂ ಮನ್ತ್ರ ಆರಭ್ಯತೇ—

(ಭಾಷ್ಯಾರ್ಥ)

ಇನ್ನು ಈಗ ಅಜ್ಞಾನಿಗಳನ್ನು ನಿಂದಿಸುವದಕ್ಕಾಗಿ ಈ ಮಂತ್ರವನ್ನು ಪ್ರಾರಂಭಿಸಿರುತ್ತಾರೆ

ಅಸುರ್ಯಾ ನಾಮ ತೇ ಲೋಕಾ
ಅನ್ಧೇನ ತಮಸಾವೃತಾಃ।
ತಾಗ್ಂಸ್ತೇ ಪ್ರೇತ್ಯಾಭಿಗಚ್ಛನ್ತಿ
ಯೇ ಕೇ ಚಾತ್ಮಹನೋ ಜನಾಃ ॥ ೩ ॥

---

1. ಆತ್ಮಜ್ಞಾನದಿಂದ ಶೋಕಮೋಹಗಳು ನಿವೃತ್ತಿಯಾಗುವವೆಂದು ೭ನೆಯ ಮಂತ್ರದಲ್ಲಿ ಹೇಳಿರುತ್ತದೆ, ಕರ್ಮದಿಂದ ಸ್ವಾಭಾವಿಕವಾದ ಕರ್ಮವನ್ನೂ ಆರಿವನ್ನೂ ಮೀರುವದೆಂಬ ಫಲವಾಗುವದೆಂದೂ ಉಪಾಸನೆಯಿಂದ ಉಪಾಸ್ಯದೇವತೆಯ ಸ್ವರೂಪವನ್ನು ಪಡೆಯುತ್ತಾರೆಂದೂ ೧೧ನೆಯ ಮಂತ್ರದಲ್ಲಿ ಹೇಳಿದೆ.

2. ಈ ವಾಕ್ಯವು ಯಾವ ಶ್ರುತಿಯದೋ ತಿಳಿಯದು. **ಬೃಹದಾರಣ್ಯಕ** (೪-೫-೧೫) ಭಾಷ್ಯದಲ್ಲಿ ಇದರ ಅನುಕ್ರಮವು ಹೀಗಿದೆ. ದ್ವಾವೇವ ಪನ್ಥಾನಾವನುನಿಷ್ಕ್ರಾನ್ತ್ಯನ್ತರೌ **ಭವತಃ** ಕ್ರಿಯಾಪಥಶ್ಚೈವ ಪುರಸ್ತಾತ್ ಸಂನ್ಯಾಸಶ್ಚ ತಯೋಃ ಸಂನ್ಯಾಸ ಏವಾತ್ಯರೇಚಯತಿ" ಈ ಎರಡು ಕಡೆಯಲ್ಲಿಯೂ ಕೊಟ್ಟಿರುವದು ಮೂಲದ ಅರ್ಥಮಾತ್ರವೆಂದು ತೋರುತ್ತದೆ. ಇಲ್ಲಿ ಟೀಕಾಕಾರರು "ಅನುನಿಷ್ಕ್ರಾನ್ತರೌ" ಎಂಬ ಮಾತಿಗೆ ಒಂದೊಂದು ಉಪನಿಷತ್ತಿನಲ್ಲಿ ಒಂದೊಂದು ಬಗೆಯಾಗಿ ಅರ್ಥಮಾಡಿರುತ್ತಾರೆ.

3. ಮೋಕ್ಷಧರ್ಮದಲ್ಲಿ ಶುಕಾನುಪ್ರಶ್ನದಲ್ಲಿರುವ ವಾಕ್ಯವಿದು. ನಮ್ಮಲ್ಲಿರುವ ಮುದ್ರಿತ ಪುಸ್ತಕದಲ್ಲಿ "ನಿವೃತ್ತೌ ಚ ಸುಭಾಷಿತಃ" ಎಂದಿದೆ. "ವಿಭಾವಿತಃ" (೪೩) ಎಂದೂ ಪಾಠವುಂಟು.

೩. ಅಸುರ್ಯವೆಂಬಾ ಲೋಕಗಳು ಕುರುಡುಗತ್ತಲೆಯಿಂದ ಮುಚ್ಚಿಕೊಂಡಿರುತ್ತವೆ. ಯಾರು ಯಾರು ಆತ್ಮನನ್ನು ಕೊಲ್ಲುವರೋ (ಆ) ಜನರು ಸತ್ತಬಳಿಕ ಆ ಲೋಕಗಳನ್ನು ಪಡೆಯುತ್ತಾರೆ

(ಭಾಷ್ಯ)

೩. ಅಸುರ್ಯಾಃ ಪರಮಾತ್ಮಭಾವಮದ್ವಯಮಪೇಕ್ಷ್ಯ ದೇವಾದಯೋಽಪ್ಯಸುರಾಃ। ತೇಷಾಂ ಚ ಸ್ವಭೂತಾ ಲೋಕಾ ಅಸುರ್ಯಾ ನಾಮ। ನಾಮಶಬ್ದೋಽನರ್ಥಕೋ ನಿಪಾತಃ। ತೇ ಲೋಕಾಃ ಕರ್ಮಫಲಾನಿ ಲೋಕ್ಯನ್ತೇ ದೃಶ್ಯನ್ತೇ ಭುಜ್ಯನ್ತೇ ಇತಿ ಜನ್ಮಾನಿ। ಅನ್ಧೇನ ಅದರ್ಶನಾತ್ಮಕೇನ ಅಜ್ಞಾನೇನ ತಮಸಾ ಆವೃತಾಃ ಆಚ್ಛಾದಿತಾಃ। ತಾನ್ ಸ್ಥಾವರಾನ್ತಾನ್ ಪ್ರೇತ್ಯ ತ್ಯಕ್ತ್ವೇಮಂ ದೇಹಂ ಅಭಿಗಚ್ಛನ್ತಿ ಯಥಾಕರ್ಮ ಯಥಾಶ್ರುತಮ್ (ಕ ೩-೭-೭)। ಯೇ ಕೇ ಚ ಆತ್ಮಹನಃ ಆತ್ಮಾನಂ ಘ್ನನ್ತೀತ್ಯಾತ್ಮಹನಃ। ಕೇ ತೇ? ಜನಾಃ ಯೇಽವಿದ್ವಾಂಸಃ। ಕಥಂ ತೇ ಆತ್ಮಾನಂ ನಿತ್ಯಂ ಹಿಂಸನ್ತಿ? ಅವಿದ್ಯಾದೋಷೇಣ ವಿದ್ಯಮಾನಸ್ಯಾತ್ಮನಸ್ತಿರಸ್ಕರಣಾತ್ ವಿದ್ಯಮಾನಸ್ಯ ಆತ್ಮನೋ ಯತ್ಕಾರ್ಯಂ ಫಲಮ್ ಅಜರಾಮರತ್ವಾದಿಸಂವೇದನಲಕ್ಷಣಮ್, ತದ್ಧತಸ್ಯೇವ ತಿರೋಭೂತಂ ಭವತೀತಿ ಪ್ರಾಕೃತಾ ಅವಿದ್ವಾಂಸೋ ಜನಾ ಆತ್ಮಹನ ಇತ್ಯುಚ್ಯನ್ತೇ। ತೇನ ಹ್ಯಾತ್ಮಹನನದೋಷೇಣ ಸಂಸರನ್ತಿ ತೇ॥

(ಭಾಷ್ಯಾರ್ಥ)

ತನಗೆರಡನೆಯದಿಲ್ಲದ ಪರಮಾತ್ಮಸ್ವರೂಪಕ್ಕೆ ಹೋಲಿಸಿದರೆ ದೇವತೆಗಳು ಮೊದಲಾದವರೂ ಅಸುರರೇ, ಮತ್ತು ಅವರಿಗೆ ಸೇರಿರುವ ಲೋಕಗಳು ಅಸುರ್ಯವೆನಿಸುವವು. (ಮೂಲದಲ್ಲಿ) 'ನಾಮ' ಎಂಬ ಮಾತು ಅರ್ಥವಿಲ್ಲದ ನಿಪಾತವು. ಆ ಲೋಕಗಳು ಎಂದರೆ ಕರ್ಮಗಳಿಗೆ ಫಲವಾದ ಜನ್ಮಗಳು[1], ಅವಲೋಕಿಸಲ್ಪಡುತ್ತವೆ, ಕಾಣಲ್ಪಡುತ್ತವೆ, ಎಂದರೆ ಅನುಭವಿಸಲ್ಪಡುತ್ತವೆ, ಆದ್ದರಿಂದ (ಇವುಗಳಿಗೆ ಲೋಕಗಳೆಂದು[2] ಹೆಸರು). ಕುರುಡುಗತ್ತಲೆಯಿಂದ ಎಂದರೆ (ತತ್ತ್ವವನ್ನು) ಕಾಣದಿರುವ

---

1. ಆತ್ಮಹತ್ಯವನ್ನು ಮಾಡಿದವರು ಒಂದಾನೊಂದು ಲೋಕಕ್ಕೆ ಹೋಗುವರೆಂದು ಅಭಿಪ್ರಾಯವಲ್ಲ; ಆತ್ಮನನ್ನು ಅರಿಯದ್ದೇ ಆತ್ಮಹತ್ಯ, ಬೇರೆಬೇರೆಯ ಜನ್ಮಗಳೇ ಅವರು ಪಡೆಯುವ ಲೋಕಗಳು.

2. ಲೋಕ್ಯನ್ತ ಇತಿ ಲೋಕಾಃ ಎಂಬ ಕರ್ಮಾರ್ಥಕವ್ಯುತ್ಪತ್ತಿಯಿಂದ ಜನ್ಮಗಳು ಎಂಬರ್ಥವನ್ನು ತೆಗೆದಿದೆಯೆಂದು ಭಾವ.

ಅಜ್ಞಾನವೆಂಬ ಕತ್ತಲೆಯಿಂದ (ಇವು) ಮುಚ್ಚಿಕೊಂಡಿರುತ್ತವೆ,[1] ಹೊದಿಸಲ್ಪಟ್ಟಿರುತ್ತವೆ. ಈ ಸ್ಥಾವರ(ಜನ್ಮದ)ವರೆಗಿನ[2] ಆ (ಲೋಕಗಳನ್ನು) ಈ ದೇಹವನ್ನು ಬಿಟ್ಟು ಸತ್ತುಹೋದಮೇಲೆ "(ಅವರವರ) ಆ ಕರ್ಮಕ್ಕೆ ತಕ್ಕಂತೆಯೂ ಭಾವನೆಗೆ ತಕ್ಕಂತೆಯೂ" (ಕ. ೩-೨-೭) ಪಡೆಯುತ್ತಾರೆ. ಯಾರು ಯಾರು ಆತ್ಮನನ್ನು ಕೊಲ್ಲುತ್ತಾರೆಯೋ (ಅವರೆಲ್ಲರೂ ಆ ಜನ್ಮಗಳನ್ನು ಪಡೆಯುತ್ತಾರೆ).

(ಪ್ರಶ್ನೆ) :—ಅವರು ಯಾರು?

(ಉತ್ತರ) —ಯಾರು (ಆತನನ್ನು) ಅರಿಯರೋ (ಆ) ಜನರು.[3]

(ಪ್ರಶ್ನೆ):—ಅವರು ಆತ್ಮನನ್ನು ಯಾವಾಗಲೂ ಕೊಲ್ಲುತ್ತಲೇ ಇರುವರೆಂಬುದು ಹೇಗೆ?[4]

(ಉತ್ತರ).—(ಹೇಗೆಂದರೆ ಅವರು) ಇರುವ ಆತ್ಮನನ್ನು ಅಜ್ಞಾನದ ದೋಷದಿಂದ ಮರೆಮಾಡುತ್ತಿರುವರು **ಆತ್ಮನು ಇದ್ದರೆ ಆಗಬೇಕಾದ ಮುಪ್ಪಿಲ್ಲದ್ದು, ಸಾವಿಲ್ಲದ್ದು—ಎಂದು ಮುಂತಾದದ್ದನ್ನು ಅರಿತುಕೊಳ್ಳುವ ರೂಪವಾದ ಯಾವ ಫಲವೆಂಬ ಕಾರ್ಯವಾಗಬೇಕೋ ಅದು (ಆತ್ಮನನ್ನು) ಕೊಂದಿದ್ದರೆ ಹೇಗೋ ಹಾಗೆ (ಅವರಿಗೆ) ಮರೆಯಾಗಿರುತ್ತದೆ. ಆದ್ದರಿಂದ ಪ್ರಾಕೃತರಾದ ಅಜ್ಞಾನಿಜನರನ್ನು ಆತ್ಮನನ್ನು ಕೊಲ್ಲುವವರು ಎಂದು ಕರೆದಿರುತ್ತದೆ.** ಆ ಆತ್ಮಹತ್ಯದ ದೋಷದಿಂದಲೇ ಅವರು ಸಂಸಾರವನ್ನು ಅನುಭವಿಸುತ್ತಿರುವರು. ॥೩॥

(ಭಾಷ್ಯ)

೧೦. ಯಸ್ಯಾತ್ಮನೋ ಹನನಾದವಿದ್ವಾಂಸಃ ಸಂಸರನ್ತಿ, ತದ್ವಿಪರ್ಯಯೇಣ ವಿದ್ವಾಂಸೋ ಮುಚ್ಯನ್ತೇಽನಾತ್ಮಹನಃ, ತತ್ಕೀದೃಶಮಾತ್ಮತತ್ತ್ವಮಿತಿ? ಉಚ್ಯತೇ—

---

1. ತತ್ತ್ವವನ್ನು ಕಾಣದಿರುವದರಿಂದ ಹೊರಗಿನ ವಸ್ತುಗಳೇ ಇವರಿಗೆ ಮುಖ್ಯವಾಗಿ ಕಾಣುತ್ತಿರುವವು ಜ್ಞಾನವು ಅಜ್ಞಾನದಿಂದ ಆವೃತವಾಗಿರುತ್ತದೆ ಎಂಬ (೫-೧೫) ಗೀತೋಕ್ತಿಯನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು

2 ಉಪಾಸನಾಮಿಶ್ರಿತಕರ್ಮದ ಫಲವು ಬ್ರಹ್ಮಲೋಕದವರೆಗೂ ಇರುವದು. ಬರಿಯ ಕರ್ಮವು ಪಿತೃಲೋಕಾದಿಗಳನ್ನು ಕೊಡುವದು. ಅಧರ್ಮಮಿಶ್ರಿತವಾದ ಕರ್ಮವು ಮನುಷ್ಯತ್ವದಿಂದ ಹಿಡಿದು ಸ್ಥಾವರಜನ್ಮದವರೆಗೂ ಫಲವನ್ನು ಕೊಡುವದು. ಆದ್ದರಿಂದ ಬ್ರಹ್ಮಾದಿ ಸ್ಥಾವರಾಂತವಾದ ಫಲವೆಲ್ಲವೂ ಅಜ್ಞಾನದ ಫಲವೇ.

3. ಜನರೆಂದರೆ ಜನ್ಮವುಳ್ಳವರೆಂದರ್ಥ. ಆತ್ಮಹನನದೋಷದಿಂದ ಅನೇಕ ಜನ್ಮಗಳುಂಟಾಗುವವೆಂಬುದನ್ನು ಸೂಚಿಸುವದಕ್ಕಾಗಿ ಶ್ರುತಿಯು ಈ ಮಾತನ್ನುಪಯೋಗಿಸಿದೆ ಎಂದು ಭಾವ.

4. ಆತ್ಮನಿಗೆ ಸಾವೇ ಇಲ್ಲದಿರುವಾಗ ಅಜ್ಞಾನಿಗಳು ಆತ್ಮನನ್ನು ಕೊಲ್ಲುವರೆಂದರೇನು? ಎಂದು ಆಕ್ಷೇಪ.

(ಭಾಷ್ಯಾರ್ಥ)

ಯಾವ ಆತ್ಮನನ್ನು ಕೊಲ್ಲುವದರಿಂದ ಅಜ್ಞಾನಿಗಳು ಸಂಸಾರದಲ್ಲಿ ತೊಳಲುತ್ತಿರುವರೋ ಅದಕ್ಕೆ ವಿರುದ್ಧವಾಗಿ ಆತ್ಮಹತ್ಯವನ್ನು ಮಾಡದ ಜ್ಞಾನಿಗಳು ಮುಕ್ತಿಯನ್ನು ಪಡೆಯುವರೋ, ಆ ಆತ್ಮತತ್ತ್ವವು ಎಂಥದ್ದು ಎಂಬುದನ್ನು (ಇಲ್ಲಿ) ಹೇಳಲಾಗುವದು :–

ಅನೇಜದೇಕಂ ಮನಸೋ ಜವೀಯೋ
ನೈನದ್ದೇವಾ ಆಪ್ನುವ್ ಪೂರ್ವಮರ್ಷತ್।
ತದ್ಧಾವತೋಽನ್ಯಾನತ್ಯೇತಿ ತಿಷ್ಠತ್
ತಸ್ಮಿನ್ನಪೋ ಮಾತರಿಶ್ವಾ ದಧಾತಿ ॥ ೪ ॥

೪. ಅದು ಅಲುಗಾಡದಿರುವದು, ಒಂದೇ, ಮನಸ್ಸಿಗಿಂತಲೂ ವೇಗವುಳ್ಳದ್ದು. ಇದನ್ನು ದೇವತೆಗಳೂ ಪಡೆಯಲಾರರು. (ಏಕೆಂದರೆ) ಮೊದಲೇ ಹೋಗಿರುತ್ತದೆ. ನಿಂತುಕೊಂಡಿದ್ದೇ (ಅದು) ಓಡಿಹೋಗುತ್ತಿರುವ ಮಿಕ್ಕವರನ್ನು ದಾಟಿಹೋಗಿರುವದು ಅದು (ಇರುವಲ್ಲಿ) ಮಾತರಿಶ್ವನು ನೀರುಗಳನ್ನು ವಿಂಗಡಿಸುವನು.

(ಭಾಷ್ಯ)

೧೧. ಅನೇಜತ್ ನ ಏಜತ್ । ಏಜೃಕಮ್ಪನೇ । ಕಮ್ಪನಂ ಚಲನಂ ಸ್ವಾವಸ್ಥಾಪ್ರಚ್ಯುತಿಃ । ತದ್ವರ್ಜಿತಮ್ । ಸರ್ವದಾ ಏಕರೂಪಮಿತ್ಯರ್ಥಃ । ತಚ್ಚ ಏಕಂ ಸರ್ವಭೂತೇಷು । ಮನಸಃ ಸಙ್ಕಲ್ಪಾದಿಲಕ್ಷಣಾತ್ ಜವೀಯಃ ಜವವತ್ತರಮ್ । ಕಥಂ ವಿರುದ್ಧಮುಚ್ಯತೇ “ ಧ್ರುವಂ ನಿಶ್ಚಲಮಿದಮ್, ಮನಸೋ ಜವೀಯ” ಇತಿ ಚ । ಮನಸೋಽನ್ತಃಕರಣಸ್ಯ ಸಙ್ಕಲ್ಪವಿಕಲ್ಪಲಕ್ಷಣಸ್ಯೋಪಾಧೇರನುವರ್ತನಾತ್ ಇಹ ದೇಹಸ್ಥಸ್ಯ ಮನಸೋ ಬ್ರಹ್ಮಲೋಕಾದಿದೂರಗಮನಂ ಸಙ್ಕಲ್ಪೇನ ಕ್ಷಣಮಾತ್ರಾದ್ಭವತೀತ್ಯತೋ ಮನಸೋ ಜವಿಷ್ಠತ್ವಂ ಲೋಕೇ ಪ್ರಸಿದ್ಧಮ್ । ತಸ್ಮಿನ್ ಮನಸಿ ಬ್ರಹ್ಮಲೋಕಾದೀ ದ್ರುತಂ ಗಚ್ಛತಿ ಸತಿ ಪ್ರಥಮಪ್ರಾಪ್ತ ಇವಾತ್ಮಚೈತನ್ಯಾಭಾಸೋ ಗೃಹ್ಯತೇ । ಅತೋ “ ಮನಸೋ ಜವೀಯ ” ಇತ್ಯಾಹ ॥

ನೈನದ್ದೇವಾ ದ್ಯೋತನಾದ್ದೇವಾಃ ಚಕ್ಷುರಾದೀನ್ದ್ರಿಯಾಣಿ ಏನತ್ ಪ್ರಕೃತಮಾತ್ಮತತ್ತ್ವಂ ನಾಪ್ನುವ್ ನ ಪ್ರಾಪ್ತವನ್ತಃ । ತೇಭ್ಯೋ ಮನೋ ಜವೀಯಃ । ಮನೋವ್ಯಾಪಾರವ್ಯವಹಿತತ್ವಾದಾಭಾಸಮಾತ್ರಮಪ್ಯಾತ್ಮನೋ ನೈವ ದೇವಾನಾಂ ವಿಷಯೀಭವತಿ । ಯಸ್ಮಾಜ್ಜವನಾನ್ಮನಸೋಽಪಿ ಪೂರ್ವಮರ್ಷತ್ ಪೂರ್ವಮೇವ ಗತಮ್ । ದ್ಯೋಮನದ್ವ್ಯಾಪಿತ್ವಾತ್ ॥

ಸರ್ವವ್ಯಾಪಿ ತದಾತ್ಮತತ್ತ್ವಂ ಸರ್ವಸಂಸಾರಧರ್ಮವರ್ಜಿತಂ ಸ್ವೇನ ನಿರುಪಾಧಿ
ೇನ ಸ್ವರೂಪೇಣ ಅವಿಕ್ರಿಯಮೇವ ಸತ್, ಉಪಾಧಿಕೃತಾಃ ಸರ್ವಾಃ ಸಂಸಾರ
ಿಕ್ರಿಯಾ ಅನುಭವತೀವಾವಿವೇಕಿನಾಂ ಮೂಢಾನಾಮನೇಕಮಿವ ಚ ಪ್ರತಿದೇಹಂ
ೃತ್ಯವಭಾಸತ ಇತ್ಯೇತದಾಹ—ತತ್ ಧಾವತಃ ದ್ರುತಂ ಗಚ್ಛತಃ, ಅನ್ಯಾ ಆತ್ಮ
ಲಕ್ಷಣಾ ಮನೋವಾಗಿನ್ದ್ರಿಯಪ್ರಭೃತೀ ಅತ್ಯೇತಿ ಅತೀತ್ಯ ಗಚ್ಛತೀವ । ಇಮ
ುರ್ಧಂ ಸ್ವಯಮೇವ ದರ್ಶಯತಿ—ತಿಷ್ಠದಿತಿ । ಸ್ವಯಮವಿಕ್ರಿಯಮೇವ ಸದಿ
್ಯರ್ಥಃ ॥

(ಭಾಷ್ಯಾರ್ಥ)

ಅನೇಜತ್ ಎಂದರೆ ಅಲುಗಾಡದಿರುವದು ಅಲುಗಾಡು ಎಂಬರ್ಥದ ಏಜೃ
ಾತುವಿನಿಂದ (ಈ ಶಬ್ದರೂಪ)ವಾಗಿರುತ್ತದೆ. ಅಲುಗಾಡುವದು ಎಂದರೆ ಚಲಿಸು
ುದು, ತನ್ನ ಸ್ಥಿತಿಯನ್ನು ಬಿಟ್ಟು ಜಾರುವದು ; ಅದಿಲ್ಲದ್ದು (ಅನೇಜತ್) ಯಾವಾ
ಗಲೂ ಒಂದೇ ರೂಪವಾಗಿರುವದು ಎಂದರ್ಥ. ಮತ್ತು ಅದು ಎಲ್ಲಾ ಪ್ರಾಣಿ
ಳಲ್ಲಿಯೂ ಒಂದೇ[1] ಸಂಕಲ್ಪವೇ ಮುಂತಾದ ರೂಪದ ಮನಸ್ಸಿಗಿಂತಲೂ ಜವೀಯ,
ಂದರೆ ಹೆಚ್ಚು ವೇಗವುಳ್ಳದ್ದು.

(ಆಕ್ಷೇಪ).—" ಇದು ಇದ್ದಂತೆಯೇ ಇರುವದು, ಅಲುಗಾಡುವದಿಲ್ಲ" ಎಂದೂ
ುನಸ್ಸಿಗಿಂತಲೂ ವೇಗವಾದದ್ದೆಂದೂ (ಒಂದಕ್ಕೊಂದು) ವಿರುದ್ಧವಾಗಿ ಹೇಳಿದೆಯಲ್ಲ!
ಇದು ಹೇಗೆ (ಸರಿ) ?

(ಪರಿಹಾರ) :—ಇದೇನೂ ತಪ್ಪಲ್ಲ. **ನಿರುಪಾಧಿಕಸೋಪಾಧಿಕ**ರೂಪದಿಂದ[2]
ಇದು ಹೊಂದುತ್ತದೆ ಇವೆರಡರೊಳಗೆ ಯಾವ ಉಪಾಧಿಯೂ ಇಲ್ಲದ ತನ್ನ
ರೂಪದಿಂದ " ಅಲುಗಾಡುವುದಿಲ್ಲ, ಒಂದೇ " ಎಂದು ಹೇಳಿರುತ್ತದೆ. ಅಂತಃ

---

1. ಆರನೆಯ ಮಂತ್ರವನ್ನು ನೋಡಿರಿ. ಒಂದೊಂದು ಶರೀರಕ್ಕೆ ಒಂದೊಂದರಂತೆ
ಅನೇಕ ಆತ್ಮರು ಇಲ್ಲವೆಂದರ್ಥ.

2. ಉಪಾಧಿಯೆಂದರೆ ಯಾವದಾದರೊಂದು ವಸ್ತುವಿನ ಭಾಗವಾಗಿರದೆ ಆ ವಸ್ತುವನ್ನು
ಂಗಡಿಸಿ ತೋರಿಸುವ ಮತ್ತೊಂದು ವಸ್ತು. ಬಯಲಿನಲ್ಲಿ ಒಂದು, ಎರಡು—ಎಂಬ
ಂಖ್ಯೆ ನಿಜವಾಗಿ ಇಲ್ಲ. ಆದರೂ ಗಡಿಗೆಯ ಬಯಲು, ಮಡಕೆಯ ಬಯಲು—ಎಂದು
ಬಯಲು ಬೇರೆಬೇರೆಯಾಗಿರುವಂತೆ ತೋರುವದು ಗಡಿಗೆಮಡಕೆಗಳೆಂಬ ಉಪಾಧಿಗಳ
ಂಬಂಧದಿಂದ. ಗಡಿಗೆಮಡಕೆಗಳು ಬಯಲಿನ ಭಾಗವಲ್ಲದೆ ಇದ್ದು ಬಯಲಿನಲ್ಲಿಲ್ಲದ ಭೇದ
ನ್ನು ತೋರಿಸುತ್ತವೆಯಾದ್ದರಿಂದ ಆ ಭೇದವು ಸೋಪಾಧಿಕವಾಯಿತು. ಯಾವ ಉಪಾಧಿ
ಯನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ನೋಡಿದ ವಸ್ತುಸ್ವರೂಪವು ನಿರುಪಾಧಿಕರೂಪವೆನಿಸುವದು.

ಕರಣದ ಸಂಕಲ್ಪವಿಕಲ್ಪ[1] ರೂಪವಾದ **ಮನಸ್ಸೆಂಬ ಉಪಾಧಿಯನ್ನನುಸರಿಸಿ**(ದ ದೃಷ್ಟಿಯಿಂದ) ಇಲ್ಲಿ[2] ದೇಹದಲ್ಲಿಯೇ ಮನಸ್ಸು ಇದ್ದುಕೊಂಡೇ **ಬ್ರಹ್ಮಲೋಕವೇ** ಮುಂತಾದ ದೂರದೇಶಕ್ಕೆ ಹೋಗುವದು (ಒಂದು) ಕ್ಷಣದಲ್ಲಿಯೇ ಆಗುವದರಿಂದ ಮನಸ್ಸು ಅತ್ಯಂತ ವೇಗವುಳ್ಳದ್ದೆಂದು ಲೋಕದಲ್ಲಿ ಪ್ರಸಿದ್ಧವಾಗಿರುತ್ತದೆಯಷ್ಟೆ; ಹಾಗೆ ಮನಸ್ಸು ಬ್ರಹ್ಮಲೋಕವೇ ಮುಂತಾದ (ದೇಶಗಳಿಗೆ) ಬೇಗನೆ ಹೋಗುವಾಗ ಮೊದಲೇ (ತಾನು ಅಲ್ಲಿಗೆ) ತಲುಪಿದ್ದಂತೆ **ಆತ್ಮಚೈತನ್ಯಾಭಾಸವು**[3] ತೋರಿಕೊಳ್ಳುತ್ತದೆ. ಆದ್ದರಿಂದ (ಆತ್ಮತತ್ತ್ವವು) ಮನಸ್ಸಿಗಿಂತಲೂ ಹೆಚ್ಚು ವೇಗವುಳ್ಳದ್ದು ಎಂದು (ಮಂತ್ರದಲ್ಲಿ) ಹೇಳಿರುತ್ತದೆ.

ಹೊಳೆಯುವದರಿಂದ ಚಕ್ಷುಸ್ಸೇ ಮುಂತಾದ ಇಂದ್ರಿಯಗಳಿಗೆ ದೇವತೆಗಳೆಂದು (ಹೆಸರು. ಆ ದೇವತೆಗಳು) ಈ ಪ್ರಕೃತವಾಗಿರುವ ಆತ್ಮತತ್ತ್ವವನ್ನು ಪಡೆಯಲಾರವು. ಅವುಗಳಿಗಿಂತಲೂ ಮನಸ್ಸು ವೇಗವಾಗಿರುತ್ತದೆ. (ಈ ಇಂದ್ರಿಯಗಳಿಗೆ) ಮನಸ್ಸಿನ ವ್ಯಾಪಾರವು ನಡುವೆ ಆಗಿರಬೇಕಾಗಿರುವದರಿಂದ[4] (ಈ) ದೇವತೆಗಳಿಗೆ **ಆತ್ಮನ ಆಭಾಸವು ಕೂಡ** ವಿಷಯವಾಗುವ ಹಾಗಿಲ್ಲ[5] ಏಕೆಂದರೆ ಆಕಾಶದಂತೆ (ಎಲ್ಲವನ್ನೂ) ವ್ಯಾಪಿಸಿಕೊಂಡಿರುವದರಿಂದ (ಈ ಆತ್ಮತತ್ತ್ವವು) ವೇಗವಾದ ಮನಸ್ಸಿಗಿಂತಲೂ ಮೊದಲೇ ಹೋಗಿರುತ್ತದೆ.

---

1. ಸಂಕಲ್ಪವೆಂದರೆ ಹೀಗೆ ಮಾಡುವೆನೆಂದು ಮನಸ್ಸುಮಾಡುವದು, ವಿಕಲ್ಪವೆಂದರೆ ವಸ್ತುವನ್ನು ಅರಿಯುವಾಗ ಅದರ ಸ್ವಭಾವದ ವಿಷಯವಾಗಿ ವಿವಿಧವಾಗಿ ಕಲ್ಪಿಸಿಕೊಳ್ಳುವದು.

2. ಈ ಲೋಕದಲ್ಲಿ.

3. ಸೂರ್ಯಪ್ರತಿಬಿಂಬದಂತೆ ಕಲ್ಪಿತವಾದ ರೂಪವುಳ್ಳ ಕರ್ತೃಭೋಕ್ತೃರೂಪನಾದ ಜೀವನು. ಜೀವಾತ್ಮನಿಗೇ ಮನಸ್ಸು ಇಂಥ ಕಡೆಗೆ ಹೋಯಿತೆಂದು ತಿಳಿಯುವದು. ಆದ್ದರಿಂದ ಮನಸ್ಸು ಎಲ್ಲಿಗೆ ಹೋದರೂ ಅದು ಅಲ್ಲಿಗೆ ಹೋಯಿತೆಂದು ಅರಿಯುವ ಆತ್ಮನು ಮೊದಲೇ ಅಲ್ಲಿದ್ದಂತೆ ಆಗಿರುತ್ತದೆ. ನಿಜವಾಗಿ ಆತ್ಮನು ಎಲ್ಲಿಗೂ ಹೋಗಿರುವುದಿಲ್ಲ. ಚಿದಾಭಾಸದ ವಿಷಯಕ್ಕೆ ಛಾ. ೬-೩-೩, ಪ್ರ. ೪-೯ ಈ ಭಾಷ್ಯಗಳನ್ನು ನೋಡಿರಿ.

4. ಮನಸ್ಸಿನ ವ್ಯಾಪಾರವಿಲ್ಲದೆ ಇಂದ್ರಿಯವ್ಯಾಪಾರವಿಲ್ಲ; ಮನಸ್ಸಿಗೂ ಆಚೆ ಇರುವ ಆತ್ಮತತ್ತ್ವವು ಇಂದ್ರಿಯಗಳಿಗಿಂತ ಆಚೆ ಎಂದು ಹೇಳುವದೇನಿದೆ?-ಎಂದು ಭಾವ.

5. ಮನಸ್ಸಿನಲ್ಲಿ ತೋರುವ ಆತ್ಮನ ಆಭಾಸವು ಇಂದ್ರಿಯಗಳಿಗೆ ವಿಷಯವಲ್ಲವಷ್ಟೆ; ಇನ್ನು ಬಿಂಬದಂತಿರುವ ಆತ್ಮತತ್ತ್ವವು ಹೇಗೆ ವಿಷಯವಾದೀತು?

ಎಲ್ಲವನ್ನೂ ವ್ಯಾಪಿಸಿರುವ[1] ಈ ಆತ್ಮತತ್ತ್ವವು ಯಾವ ಸಂಸಾರಧರ್ಮವೂ[2] ಇಲ್ಲದೆ ತನ್ನ ಯಾವ ಉಪಾಧಿಯೂ ಇಲ್ಲದ ಸ್ವರೂಪದಲ್ಲಿ ಯಾವ ಮಾರ್ಪಾಡುಗಳೂ ಇಲ್ಲದೆ ಇದ್ದುಕೊಂಡೇ ಉಪಾಧಿಯಿಂದಾಗಿರುವ ಸಂಸಾರದ ಮಾರ್ಪಾಡುಗಳನ್ನೆಲ್ಲ ಅನುಭವಿಸುತ್ತಿರುವಂತೆಯೂ ಒಂದೊಂದು ದೇಹಕ್ಕೂ (ಒಂದೊಂದರಂತೆ) ಅನೇಕವಾಗಿರುವಂತೆಯೂ ವಿವೇಕವಿಲ್ಲದ ಮೂಢರಿಗೆ ತೋರುತ್ತದೆ[3] ಎಂಬೀ (ಅರ್ಧವನ್ನು ಈಗ ಮಂತ್ರವು) ಹೇಳುತ್ತದೆ ಅದು ಒಡಿಹೋಗುತ್ತಿರುವ ಬೇಗಬೇಗನೆ ಹೋಗುತ್ತಿರುವ ಮಿಕ್ಕವರನ್ನು ತನಗಿಂತ ಬೇರಯ ಸ್ವಭಾವದವರಾಗಿರುವ ಉಳಿದ ಮನಸ್ಸು, ವಾಕ್ಕು, ಇಂದ್ರಿಯ-ಮುಂತಾದವುಗಳನ್ನು ದಾಟಿಹೋಗಿರುವದು, ಅವುಗಳನ್ನು ಮೀರಿ ಹೋಗಿರುವಂತೆ ಇರುತ್ತದೆ. (ಹೋಗಿರುವಂತೆ, ನಿಜವಾಗಿ ಹೋಗಿರುವದಿಲ್ಲ ಎಂಬ) "ಅಂತೆ" ಎಂಬ ಮಾತಿನರ್ಥವನ್ನು (ಮಂತ್ರವು) ತಾನೇ 'ನಿಂತುಕೊಂಡಿದ್ದೇ" ಎಂಬ (ಮಾತಿನಿಂದ) ತಿಳಿಸಿಕೊಟ್ಟಿರುತ್ತದೆ. (ನಿಂತುಕೊಂಡಿದ್ದೇ ಎಂದರೆ) ತಾನು ಯಾವ ಮಾರ್ಪಾಡುಗಳೂ ಇಲ್ಲದ್ದಾಗಿಯೇ ಇದ್ದುಕೊಂಡು ಎಂದರ್ಥ

(ಭಾಷ್ಯ)

೧೨. ತಸ್ಮಿನ್ ಆತ್ಮತತ್ತ್ವೇ ಸತಿ ನಿತ್ಯಚೈತನ್ಯಸ್ವಭಾವೇ ಮಾತರಿಶ್ವಾ ಮಾತರಿ ಅನ್ತರಿಕ್ಷೇ ಶ್ವಯತಿ ಗಚ್ಛತೀತಿ ಮಾತರಿಶ್ವಾ ವಾಯುಃ। ಸರ್ವಪ್ರಾಣಿಭೃತ್ಕ್ರಿಯಾತ್ಮಕೋ ಯದಾಶ್ರಯಾಣಿ ಕಾರ್ಯಕರಣಜಾತಾನಿ। ಯಸ್ಮಿನ್ನೋತಾನಿ ಪ್ರೋತಾನಿ ಚ। ಯತ್ **ಸೂತ್ರಸಂಜ್ಞಕಂ** ಸರ್ವಸ್ಯ ಜಗತೋ ವಿಧಾರಯಿತೃ ಸ ಮಾತರಿಶ್ವಾ ಅಪಃ ಕರ್ಮಾಣಿ ಪ್ರಾಣಿನಾಂ ಚೇಷ್ಟಾಲಕ್ಷಣಾನಿ ಅಗ್ನ್ಯಾದಿತ್ಯಪರ್ಜನ್ಯಾದೀನಾಂ ಜ್ವಲನದಹನಪ್ರಕಾಶಾಭಿವರ್ಷಣಾದಿಲಕ್ಷಣಾನಿ ದಧಾತಿ ವಿಭಜತೀತ್ಯರ್ಥಃ। ಧಾರಯತೀತಿ ವಾ। "ಭೀಷಾಸ್ಮಾದ್ವಾತಃ ಪವತೇ" (ತೈ ೨-೮) ಇತ್ಯಾದಿಶ್ರುತಿಭ್ಯಃ। ಸರ್ವಾ ಹಿ ಕಾರ್ಯಕರಣವಿಕ್ರಿಯಾ ನಿತ್ಯಚೈತನ್ಯಾತ್ಮಸ್ವರೂಪೇ ಸರ್ವಾಸ್ಪದಭೂತೇ ಸತ್ಯೇವ ಭವನ್ತೀತ್ಯರ್ಥಃ ॥

---

1. "ಸರ್ವವ್ಯಾಪಿ" ಎಂಬ ಮೂಲಕ್ಕೆ ಬದಲು "ಸರ್ವದಾಪಿ" (ಹಿ॥) ಎಂಬ ಪಾಠವೂ ಉಂಟು ಆಗ ಯಾವಾಗಲೂ ಸಂಸಾರಧರ್ಮವಿಲ್ಲದ್ದು—ಎಂಬ ಅರ್ಥಸ್ವಾರಸ್ಯವು ಬರುತ್ತದೆ. ನಿಜವಾಗಿ ಸಂಸಾರಿಯಲ್ಲದ ಆತ್ಮನಲ್ಲಿ ಕಲ್ಪಿತವಾದ ಸಂಸಾರಿತ್ವವು ತೋರುವದು ವಿರುದ್ಧವಲ್ಲ ಎಂದು ಭಾವ.

2. ಕರ್ಮವನ್ನು ಮಾಡುವದು, ಲೋಕಾಂತರಜನ್ಮಾಂತರಗಳನ್ನು ಪಡೆಯುವದು, ಸುಖದುಃಖಗಳನ್ನು ಹೊಂದುವದು—ಮುಂತಾದವು ಸಂಸಾರಧರ್ಮಗಳು.

3. ನಿಜವಾಗಿ ಅವರ ಆತ್ಮನೂ ಅಸಂಸಾರಿಯೇ, ಅದ್ವಿತೀಯನೇ ಗೀ. ಭಾ. ೧೩-೧೪, ೧೬.

(ಭಾಷ್ಯಾರ್ಥ)

ನಿತ್ಯವಾದ ಅರಿವಿನ ರೂಪವಾಗಿರುವ ಆ ಆತ್ಮತತ್ತ್ವವು ಇರುವದರಿಂದಲೇ **ಮಾತರಿಶ್ವನು** ಎಂದರೆ ಮಾತೃವಾದ ಅಂತರಿಕ್ಷದಲ್ಲಿ[1] ನಡೆಯುವ [ಶ್ವಯತಿ] ವಾಯುವು **ಎಲ್ಲಾ** ಪ್ರಾಣಧಾರಿಗಳ[2] ಕ್ರಿಯಾರೂಪನಾಗಿರುವ[3] (ಪ್ರಾಣನು), ಈತನನ್ನು ಆಶ್ರಯಿಸಿಕೊಂಡೇ (ಎಲ್ಲಾ) ದೇಹೇಂದ್ರಿಯಸಮೂಹಗಳೂ (ಇರುವವು), (ಅವು) ಈತನಲ್ಲಿಯೇ ಹಾಸುಹೊಕ್ಕಾಗಿ ಹೆಣೆದುಕೊಂಡಿರುವವು, ಈತನೇ **ಸೂತ್ರವೆಂಬ** ಹೆಸರಿನಿಂದ[4] ಜಗತ್ತೆಲ್ಲವನ್ನೂ ಹಿಡಿದೆತ್ತಿಕೊಂಡಿರುವವನು ಆ ಮಾತರಿಶ್ವನು ನೀರುಗಳನ್ನು ಎಂದರೆ ಪ್ರಾಣಿಗಳ ವ್ಯಾವಾರರೂಪವಾದ ಕರ್ಮಗಳನ್ನು[5], ಬೆಂಕಿ ಸೂರ್ಯ ಮೋಡ ಮುಂತಾದವುಗಳ ಉರಿಯುವದು, ಸುಡುವದು, ಬೆಳಗುವದು, ಮಳೆಗರೆಯುವದು—ಮುಂತಾದ (ಆಯಾ ಕರ್ಮಗಳನ್ನು)[6] 'ದಧಾತಿ' ಎಂದರೆ ವಿಂಗಡಿಸಿಕೊಡುವನು—ಎಂದರ್ಥ ಅಥವಾ ನಿಲ್ಲಿಸಿಕೊಂಡಿರುತ್ತಾನೆ ಎಂದರ್ಥ, "ಇವನ ಹೆದರಿಕೆಯಿಂದ ವಾಯು ಬೀಸುತ್ತದೆ" (ತೈ ೨-೮) ಎಂದು ಮುಂತಾಗಿರುವ ಶ್ರುತಿಗಳು (ಇದಕ್ಕೆ ಆಧಾರವು) ಶರೀರೇಂದ್ರಿಯಗಳ ಮಾರ್ಪಾಡುಗಳೆಲ್ಲವೂ ಎಲ್ಲಕ್ಕೂ ಆಧಾರವಾಗಿರುವ ನಿತ್ಯಚೈತನ್ಯವಾದ ಆತ್ಮಸ್ವರೂಪವು ಇದ್ದರೇ ಆಗುವವು ಎಂದರ್ಥ ॥ ೪ ॥

1 ಮಾತೃ ಎಂದರೆ ಆಳೆಯುವವನು, ಇಲ್ಲಿ ವಾಯುವನ್ನು ಆಳೆಯುವ ಅಂತರಿಕ್ಷವು

2 ಜೀವರುಗಳ. ಜೀವ ಎಂಬ ಮಾತೇ ಪ್ರಾಣವನ್ನು ಧರಿಸಿರುವವನು ಎಂಬರ್ಥವುಳ್ಳದ್ದು.

3. ಶರೀರದಲ್ಲಿ ನಡೆಯುವ ಕ್ರಿಯೆಯೆಲ್ಲವೂ ಪ್ರಾಣರೂಪವಾಗಿರುವ ವಾಯುವಿನ ವ್ಯಾಪಾರವು

4 ಆಪಸ್ತಂಬನವೆನಿಸಿದ ಪ್ರಾಣನನ್ನು ಕ್ರಿಯಾಪ್ರಧಾನವಾಗಿ ವಾಯು ಅಥವಾ ಸೂತ್ರಾತ್ಮನಂದೂ ಜ್ಞಾನಪ್ರಧಾನವಾಗಿ ಹಿರಣ್ಯಗರ್ಭನಂದೂ ಕರೆಯುತ್ತಾರೆ. 'ಸೂತ್ರ'ದ ವಿಷಯಕ್ಕೆ ಬೃ. ೩-೭-೩ನ್ನು ನೋಡಿರಿ.

5. ವೈದಿಕಕರ್ಮಗಳನ್ನು ಸೋಮ, ತುಪ್ಪ, ಹಾಲು—ಮುಂತಾದ ನೀರಾದ ವಸ್ತುಗಳಿಂದಲೇ ಮುಖ್ಯವಾಗಿ ಮಾಡುವರು, ಆದ್ದರಿಂದ ಇಲ್ಲಿ 'ಆಪಃ' (ನೀರುಗಳನ್ನು) ಎಂದರೆ ಕರ್ಮಗಳನ್ನು ಎಂದರ್ಥ ಈ ಅರ್ಥದಲ್ಲಿ 'ಆಪ್' ಎಂಬ ಮಾತನ್ನು ವೇದದಲ್ಲಿ ಅಲ್ಲಲ್ಲಿ ಉಪಯೋಗಿಸಿದೆ

6 ಬೆಂಕಿ ಮುಂತಾದವುಗಳ ವ್ಯಾಪಾರಗಳೂ ಅಗ್ನಿ ಮುಂತಾದ ದೇವತೆಗಳ ವ್ಯಾಪಾರವೇ ಆದ್ದರಿಂದ ಪ್ರಾಣಿಗಳ ಕೆಲಸವೆಲ್ಲವೂ ವಾಯುವಿನ ಸಹಾಯದಿಂದಲೇ ನಡೆಯುವವು, ಆ ವಾಯುವಿಗೆ ಆಧಾರವಾಗಿ ಪರಮಾತ್ಮಚೈತನ್ಯವಿರುವದರಿಂದಲೇ ಅವು ನಡೆಯುವವು. **ಗೀ. ೯—೧೪** ನೋಡಿ.

(ಭಾಷ್ಯ)

೧೩. ನ ಮನ್ತ್ರಾಣಾಂ ಜಾಮಿತಾಸ್ತೀತಿ ಪೂರ್ವಮನ್ತ್ರೋಕ್ತಮರ್ಥಂ ಪುನರಾಹ—

(ಭಾಷ್ಯಾರ್ಥ)

ಮಂತ್ರಗಳಲ್ಲಿ ಪುನರುಕ್ತಿ[1] ದೋಷವಿಲ್ಲ, ಆದ್ದರಿಂದ ಹಿಂದೆ ಹೇಳಿದರ್ಥವನ್ನೇ ಮತ್ತೊಮ್ಮೆ (ಈ ಮಂತ್ರವೂ) ಹೇಳುತ್ತದೆ

ತದೇಜತಿ ತನ್ನೈಜತಿ
ತದ್ದೂರೇ ತದ್ವನ್ತಿಕೇ ।
ತದನ್ತರಸ್ಯ ಸರ್ವಸ್ಯ
ತದು ಸರ್ವಸ್ಯಾಸ್ಯ ಬಾಹ್ಯತಃ ॥ ೫ ॥

೫. ಅದು ಅಲುಗಾಡುವದು, ಅದು ಅಲುಗಾಡುವದಿಲ್ಲ; ಅದು ದೂರದಲ್ಲಿ(ರುವದು), ಅದೇ ಹತ್ತಿರವಲ್ಲಿರುವದು. ಅದು ಇದೆಲ್ಲದರ ಒಳಗೂ ಇರುವದು, ಅದೇ ಈ ಎಲ್ಲಕ್ಕೂ ಹೊರಗೆ ಇರುವದು.

(ಭಾಷ್ಯ)

೧೪. ತತ್ ಆತ್ಮತತ್ತ್ವಂ ಯತ್ ಪ್ರಕೃತಮ್ ಏಜತಿ ಚಲತಿ, ತದೇವ ಚ ನೈಜತಿ ಸ್ವತೋ ನೈವ ಚಲತಿ । ಸ್ವತೋಽಚಲಮೇವ ಸತ್ ಚಲತೀವೇತ್ಯರ್ಥಃ ॥

ಕಿಂ ಚ ತದ್ದೂರೇ ವರ್ತಕೋಟಿಶತೈರಪ್ಯವಿದುಷಾಮಪ್ರಾಪ್ಯತ್ವಾದ್ದೂರೇ ಇವ । ತತ್ ಉ ಅನ್ತಿಕೇ ಸಮೀಪೇ ಅತ್ಯನ್ತಮೇವ ವಿದುಷಾಮ್, ಆತ್ಮತ್ವಾತ್ । ನ ಕೇವಲಂ ದೂರೇ ಅನ್ತಿಕೇ ಚ ತತ್ ಅನ್ತಃ ಅಭ್ಯನ್ತರೇ ಅಸ್ಯ ಸರ್ವಸ್ಯ । ಯ ಆತ್ಮಾ ಸರ್ವಾನ್ತರಃ" (ಬೃ ೩-೪-೧) ಇತಿ ಶ್ರುತೇಃ । ಅಸ್ಯ ಸರ್ವಸ್ಯ ಜಗತೋ ನಾಮರೂಪ ಕ್ರಿಯಾತ್ಮಕಸ್ಯ । ತತ್ ಉ ಸರ್ವಸ್ಯಾಸ್ಯ ಬಾಹ್ಯತಃ, ವ್ಯಾಪಕತ್ವಾತ್ ಆಕಾಶವತ್ । ನಿರತಿಶಯಸೂಕ್ಷ್ಮತ್ವಾತ್ ಅನ್ತಃ । "ಪ್ರಜ್ಞಾನಘನ ಏವ" (ಬೃ. ೪-೫-೧೩) ಇತಿ ಶಾಸನಾತ್ ನಿರನ್ತರಂ ಚ ॥

(ಭಾಷ್ಯಾರ್ಥ)

ಆ ಪ್ರಕೃತವಾಗಿರುವ[2] ಆತ್ಮತತ್ತ್ವವು ಅಲುಗಾಡುತ್ತದೆ, ಅದೇ ತನ್ನ ರೂಪದಿಂದ ಅಲುಗಾಡುವದಿಲ್ಲ. ತನ್ನ ರೂಪದಿಂದ ಅಲುಗಾಡದೆ ಇದ್ದುಕೊಂಡೇ ಅಲುಗಾಡುವಂತೆ[3] ತೋರುತ್ತದೆ ಎಂದರ್ಥ.

---

1. ಭಾಷ್ಯದಲ್ಲಿರುವ 'ಜಾಮಿತಾ' ಎಂಬ ಮಾತಿಗೆ ಹೋಲಿಕೆ, ಒಂದೇ ರೂಪವಾಗಿ ಎರಡು ಸಲ ಹೇಳುವದು ಎಂದರ್ಥ ಶಾ. ಭಾ ಜೈ 'ಸೂ ೧೦-೮-೬೩
2. ತತ್ ಎಂಬ ಸರ್ವನಾಮವು ಪ್ರಕೃತವಾದ ಆತ್ಮನನ್ನು ತಿಳಿಸುವದಕ್ಕೆ ಬಂದಿದೆ.
3. ಉಪಾಧಿಯಿಂದ ಹಾಗೆ ತೋರುತ್ತದೆ

ಮತ್ತು ಅದು ದೂರದಲ್ಲಿರುತ್ತದೆ, ನೂರು ಕೋಟಿ ವರ್ಷಗಳಾದರೂ ಅಜ್ಞಾನಿಗಳಿಗೆ ಸಿಕ್ಕದೆ ಇರುವದರಿಂದ ದೂರದಲ್ಲಿರುವಂತೆ ಇರುವದು ಅದೇ ಹತ್ತಿರದಲ್ಲಿರುವದು, ಜ್ಞಾನಿಗಳಿಗೆ ತೀರ ಸಮೀಪದಲ್ಲಿರುವದು, ಏಕೆಂದರೆ (ಅದು ಅವರ) ಆತ್ಮನೇ ಆಗಿರುತ್ತದೆ ದೂರದಲ್ಲಿಯೂ ಹತ್ತಿರದಲ್ಲಿಯೂ[1] ಇರುವದು ಮಾತ್ರವೇ ಅಲ್ಲ, ಅದು ಎಲ್ಲದರ ಒಳಗೂ ಇರುವದು, "ಯಾನ ಆತ್ಮನು ಎಲ್ಲಕ್ಕೂ ಒಳಗಿರುವನೋ" (ಬೃ. ೩-೪-೧) ಎಂಬ ಶ್ರುತಿ ಇಪಕ್ಕೆ ಆಧಾರವು "ಈ ಎಲ್ಲಕ್ಕೂ" ಎಂದರೆ ನಾಮ, ರೂಪ, ಕ್ರಿಯೆ–ಇವುಗಳ ರೂಪದಲ್ಲಿರುವ ಜಗತ್ತಿಗೆ[2] ಅದೇ ಈ ಎಲ್ಲಕ್ಕೂ ಹೊರಗೆ ಇರುವದು, ಏಕೆಂದರೆ ಆಕಾಶದಂತೆ (ಎಲ್ಲವನ್ನೂ) ವ್ಯಾಪಿಸಿಕೊಂಡಿರುವದು. ಮಿಗಿಲಿಲ್ಲದಷ್ಟು ಸೂಕ್ಷ್ಮವಾಗಿರುವದರಿಂದ[3] ಒಳಗೆ ಇರುವದು, "ಪ್ರಜ್ಞಾನದ ಗಟ್ಟಿಯೇ" (ಬೃ. ೪-೫-೧೩) ಎಂದು ಶಾಸ್ತ್ರವಿರುವದರಿಂದ ತನ್ನೊಳಗೆ ಬಿಡುವಿಲ್ಲದೆಯೂ[4] ಇರುವದು. ॥ ೫ ॥

ಯಸ್ತು ಸರ್ವಾಣಿ ಭೂತಾನಿ
ಆತ್ಮನ್ಯೇವಾನುಪಶ್ಯತಿ ।
ಸರ್ವಭೂತೇಷು ಚಾತ್ಮಾನಂ
ತತೋ ನ ವಿಜುಗುಪ್ಸತೇ ॥ ೬ ॥

೬. ಯಾವನಾದರೆ ಎಲ್ಲಾ ಭೂತಗಳನ್ನೂ (ತನ್ನ) ಆತ್ಮನಲ್ಲಿಯೇ ಕಾಣುವನೋ ಮತ್ತು ಎಲ್ಲಾ ಭೂತಗಳಲ್ಲಿಯೂ (ತನ್ನ) ಆತ್ಮನನ್ನು (ಕಾಣುವನೋ ಆತನು) ಅದರಿಂದ ಜುಗುಪ್ಸೆಯನ್ನು ಮಾಡದೆ ಇರುವನು.

(ಭಾಷ್ಯ)

೧೫. ಯಸ್ತು ಪರಿವ್ರಾಟ್ ಮುಮುಕ್ಷುಃ ಸರ್ವಾಣಿ ಭೂತಾನಿ ಅವ್ಯಕ್ತಾದೀನಿ ಸ್ಥಾವರಾನ್ತಾನಿ ಆತ್ಮನ್ಯೇವ ಅನುಪಶ್ಯತಿ, ಆತ್ಮವ್ಯತಿರಿಕ್ತಾನಿ ನ ಪಶ್ಯತೀತ್ಯರ್ಥಃ ।

---

1 ಮುಂ ಭಾ. ೩-೧-೩.

2 ಅನಾತ್ಮವಾದ ಜಗತ್ತೆಲ್ಲವೂ ನಾಮರೂಪಕರ್ಮಗಳಿಂದಾಗಿರುವದೆಂದು ಮುಂದೆ ಬೃಹದಾರಣ್ಯಕದ ೧-೬-೧೧ರಲ್ಲಿ ವಿವರಿಸಿ ಹೇಳಿರುತ್ತದೆ.

3. ಅತೀಂದ್ರಿಯವಾಗಿರುವದರಿಂದ. ಇಂದ್ರಿಯಗಳಿಗ ಗೋಚರವಾವದ್ದು ಸ್ಥೂಲ, ಅಲ್ಲದ್ದು ಸೂಕ್ಷ್ಮ ಎಂದು ವ್ಯವಹಾರ.

4. ಆತ್ಮನಲ್ಲಿ ಚೈತನ್ಯವನ್ನು ಬಿಟ್ಟರೆ ಮತ್ತೆ ಯಾವ ಬಗೆಯ ವಸ್ತುವೂ ಇರುವದಿಲ್ಲ. ಆದ್ದರಿಂದ ಅದರಲ್ಲಿ ನಡುನಡುವೆ ಮತ್ತೇನಾದರೂ ಇದ್ದೀತೆಂದು ಶಂಕಿಸುವದಕ್ಕೆ ಬರುವ ಹಾಗಿಲ್ಲ. ಒಳಗೆ, ಹೊರಗೆ, ನಡುವೆ–ಎಂಬುದೆಲ್ಲವೂ ಆಕಾಶದಿಂದ ತೋರುವ ಭಾವನೆಯಾದ್ದರಿಂದ ಆತ್ಮನಿಗೆ ಒಳಗುಹೊರಗುನಡುವೆಗಳು ಇಲ್ಲವೆಂಬುದೇ ಇಲ್ಲಿ ವಿವಕ್ಷಿತವಾಗಿರುತ್ತದೆ.

ಸರ್ವಭೂತೇಷು ತೇಷ್ವೇವ ಚ ಆತ್ಮಾನಂ ತೇಷಾಮಪಿ ಭೂತಾನಾಂ ಸ್ವಮಾತ್ಮಾನ ಮಾತ್ಮತ್ವೇನ "ಯಥಾ ಅಸ್ಯ **ದೇಹಸ್ಯ ಕಾರ್ಯಾಕರಣಸಙ್ಘಾತಸ್ಯ** ಆತ್ಮಾ ಅಹಂ ಸರ್ವಪ್ರತ್ಯಯಸಾಕ್ಷಿಭೂತಶ್ಚೇತಯಿತಾ ಕೇವಲೋ ನಿರ್ಗುಣಃ, ಅನೇನೈವ ಸ್ವರೂಪೇಣ **ಅವ್ಯಕ್ತಾದೀನಾಂ ಸ್ಥಾವರಾನ್ತಾನಾಮ್** ಅಹಮೇವ ಆತ್ಮಾ" ಇತಿ ಸರ್ವಭೂತೇಷು ಚಾತ್ಮಾನಂ ನಿರ್ವಿಶೇಷಂ ಯಸ್ತ್ವನುಪಶ್ಯತಿ ಸಃ ತತಃ ತಸ್ಮಾದೇವ ದರ್ಶನಾತ್ ನ ವಿಜುಗುಪ್ಸತೇ ವಿಜುಗುಪ್ಸಾಂ ಘೃಣಾಂ ನ ಕರೋತಿ ॥

ವ್ಯಾವೃತ್ತ್ಯೈವಾನುವಾದೋಽಯಮ್ । ಸರ್ವಾ ಹಿ ಘೃಣಾ ಆತ್ಮನೋಽನ್ಯ ದ್ದುಷ್ಟಂ ಪಶ್ಯತೋ ಭವತಿ । ಆತ್ಮಾನಮೇವ ಅತ್ಯನ್ತವಿಶುದ್ಧಂ ನಿರನ್ತರಂ ಪಶ್ಯತೋ ನ ಘೃಣಾನಿಮಿತ್ತಮರ್ಹನ್ತರಮಿತಿ ಪ್ರಾವೃತ್ತಮೇವ ತತೋ ನ ವಿಜುಗುಪ್ಸತೇ ಇತಿ ॥

(ಭಾಷ್ಯಾರ್ಥ)

ಯಾವ **ಪರಿವ್ರಾಜಕನಾದ**[1] ಮುಮುಕ್ಷುವು ಸಮಸ್ತ ಭೂತಗಳನ್ನೂ ಅಂದರೆ ಅವ್ಯಕ್ತ ಮೊದಲಾಗಿ ಸ್ಥಾವರದವರೆಗೆ ಇರುವ (ಭೂತಗಳನ್ನು)[2] ಆತ್ಮನಲ್ಲಿಯೇ ಕಾಣುವನೋ, ಎಂದರೆ ಆತ್ಮನಿಗಿಂತ ಬೇರೆಯಾಗಿ ಕಾಣುವದಿಲ್ಲವೋ ಎಂದರ್ಥ ಎಲ್ಲಾ ಭೂತಗಳಲ್ಲಿ ಎಂದರೆ ಅದೇ (ಅವ್ಯಕ್ತಾದಿಗಳಲ್ಲಿ) ಆತ್ಮನನ್ನು ಆ ಭೂತಗಳಿಗೂ ತನ್ನ ಆತ್ಮನೇ ಆತ್ಮನಾಗಿರುವನೆಂದು –"ಹೇಗೆ **ಕಾರ್ಯಕರಣಗಳ ಸಂಘಾತವನಾಗಿರುವ** ಈ ದೇಹಕ್ಕೆ ಎಲ್ಲಾ ಪ್ರತ್ಯಯಗಳಿಗೂ **ಸಾಕ್ಷಿ**ಯಾಗಿ ಚೇತನರೂಪನಾಗಿ, ಕೇವಲನಾಗಿ ನಿರ್ಗುಣನಾಗಿರುವ[3] ನಾನು ಆತ್ಮನೋ (ಇದರಂತೆ) **ಇದೇ ಸ್ವರೂಪದಿಂದಲೇ ಅವ್ಯಕ್ತ ಮೊದಲಾಗಿ ಸ್ಥಾವರದವರೆಗಿನ (ಭೂತಗಳಿಗೆ) ನಾನೇ ಆತ್ಮನು**" ಎಂದು—ಎಲ್ಲಾ ಭೂತಗಳಲ್ಲಿಯೂ ಯಾವ **ವಿಶೇಷ**ವೂ[4] ಇಲ್ಲದ ಆತ್ಮನನ್ನು ಯಾವನಾದರೆ ಕಾಣುವನೋ, ಅವನು ಅದರಿಂದ ಎಂದರೆ ಹಾಗೆ ಕಾಣುವದರಿಂದಲೇ[5] ಜುಗುಪ್ಸೆಯನ್ನು ಮಾಡದೆ ಇರುವನು

---

1. ಏಷಣಾತ್ರಯವನ್ನು ಬಿಟ್ಟ ನಿರಭಿಮಾನಿಗೇ ತತ್ತ್ವಜ್ಞಾನವುಂಟಾಗುವದೆಂದು ಸೂಚಿಸುವದಕ್ಕೆ ಈ ವಿಶೇಷಣವನ್ನು ಕೊಟ್ಟಿದೆ.

2 ಎಲ್ಲಾ ಪ್ರಾಣಿಗಳನ್ನೂ. ಶರೀರವನ್ನೂ ಸೇರಿಸಿಕೊಂಡೇ ಎಲ್ಲಾ ಜೀವರುಗಳನ್ನೂ ಭೂತಗಳೆಂದು ಕರೆದಿದೆ ಅವ್ಯಕ್ತವೆಂದರೆ ಜಗತ್ತಿನ ಕಾರಣವಾದ ಬೀಜ (ಸ್ಥಿತಿ)

3. ಶ್ವೇ ೬-೧೧ರ ಅಭಿಪ್ರಾಯ ಪರಮಾತ್ಮರೂಪವಿಂದಲೇ ನಾನು ಎಲ್ಲರ ಆತ್ಮನು ಎಂದಭಿಪ್ರಾಯ

4 ಇಂಥದ್ದೆಂಬ ಗುಣಕ್ರಿಯಾದಿಗಳಿಗೆ ವಿಶೇಷಗಳೆಂದು ಹೆಸರು.

5. ಸರಿಯಾದ ಜ್ಞಾನದ ಫಲವಿದು ಎಂದರ್ಥ ಈ ಜ್ಞಾನವನ್ನು ಗೀತೆಯ ೬-೨೯ರಲ್ಲಿಯೂ ತಿಳಿಸಿದೆ.

ಇದು (ತಾನೇ) ತಿಳಿದಿರುವದನ್ನೇ ಅನುವಾದಮಾಡಿದ್ದು.[1] ಏಕೆಂದರೆ ತನಗಿಂತ ಬೇರೆಯಾಗಿರುವ ಕೆಟ್ಟ (ವಸ್ತು)ವನ್ನು ಕಂಡವನಿಗೇ ಅಲ್ಲವೆ, ಯಾವದರ ನಿಂದೆಯಾದರೂ ಸಂಭವಿಸಬೇಕು? ಅತ್ಯಂತಪರಿಶುದ್ಧವಾಗಿರುವ, ತನ್ನೊಳಗೆ ಯಾವ ಬಿಡುವೂ ಇಲ್ಲದ, ಆತ್ಮನನ್ನೊಬ್ಬನನ್ನೇ ಕಂಡುಕೊಂಡವನಿಗೆ ನಿಂದಿಸುವದಕ್ಕೆ ಕಾರಣವಾದ ಬೇರೆಯ ವದಾರ್ಥನೇ ಇರುವದಿಲ್ಲವಾದ್ದರಿಂದ (ಜ್ಞಾನಿಯು) ಆ ಜ್ಞಾನವಾಗಿರುವದರಿಂದ ಯಾವ ನಿಂದೆಯನ್ನೂ ಮಾಡುವದಿಲ್ಲವೆಂಬುದು ಸಿದ್ಧವಾಗಿಯೇ ಇರುತ್ತದೆ.

(ಭಾಷ್ಯ)

ಇಮಮೇವಾರ್ಥಮ್ ಅನ್ಯೋಽಪಿ ಮನ್ತ್ರ ಆಹ--

(ಭಾಷ್ಯಾರ್ಥ)

ಇದೇ ಅಭಿಪ್ರಾಯವನ್ನು ಮತ್ತೊಂದು ಮಂತ್ರವೂ ಹೇಳುತ್ತಿದೆ

ಯಸ್ಮಿನ್ ಸರ್ವಾಣಿ ಭೂತಾನಿ
ಆತ್ಮೈವಾಭೂದ್ವಿಜಾನತಃ ।
ತತ್ರ ಕೋ ಮೋಹಃ ಕಃ ಶೋಕ
ಏಕತ್ವಮನುಪಶ್ಯತಃ ॥ ೭ ॥

೭. ಎಲ್ಲಿ ಎಲ್ಲಾ ಭೂತಗಳೂ ತಿಳಿದವನಿಗೆ ಆತ್ಮನೇ ಆಯಿತೋ ಅಲ್ಲಿ (ಎಲ್ಲವೂ) ಒಂದೆಂಬುದನ್ನು ಕಂಡುಕೊಂಡವನಿಗೆ ಯಾವ ಮೋಹವು? ಯಾವ ಶೋಕವು?

(ಭಾಷ್ಯ)

೧೬ ಯಸ್ಮಿನ್ ಕಾಲೇ ಯಥೋಕ್ತಾತ್ಮನಿ ವಾ ತಾನ್ಯೇವ ಭೂತಾನಿ ಸರ್ವಾಣಿ ಪರಮಾರ್ಥಾತ್ಮದರ್ಶನಾತ್ ಆತ್ಮೈವಾಭೂತ್ ಆತ್ಮೈವ ಸಂವೃತ್ತಃ ಪರಮಾರ್ಥವಸ್ತು ವಿಜಾನತಃ, ತತ್ರ ತಸ್ಮಿನ್ ಕಾಲೇ ತತ್ರಾತ್ಮನಿ ವಾ ಕೋ ಮೋಹಃ, ಕಃ ಶೋಕಃ? ಶೋಕಶ್ಚ ಮೋಹಶ್ಚ ಕಾಮಕರ್ಮಬೀಜಮ್ ಅಜಾನತೋ ಭವತಿ, ನ ತ್ವಾತ್ಮೈಕತ್ವಂ ವಿಶುದ್ಧಂ ಗಗನೋಪಮಂ ಪಶ್ಯತಃ ॥

1. ತನ್ನ ಆತ್ಮನೊಬ್ಬನೇ ಎಲ್ಲರಿಗೂ ಆತ್ಮನು. ಈ ಆತ್ಮನನ್ನು ಬಿಟ್ಟರೆ ಮತ್ತೆ ಯಾವದೊಂದೂ ಇರುವದೇ ಇಲ್ಲ-ಎಂಬ ಜ್ಞಾನವುಂಟಾದಾಗ ಕೆಟ್ಟ ವಸ್ತುವೆಂದು ಯಾವದೂ ತೋರುವದಕ್ಕೆ ಅವಕಾಶವಿರುವದಿಲ್ಲವೆಂಬುದು ತಾನೇ ಸಿದ್ಧವಾಗಿರುತ್ತದೆ ಆದ್ದರಿಂದ ಹೀಗೆ ಸಿದ್ಧವಾದ ಮಾತನ್ನೇ ಇಲ್ಲಿ ಶ್ರುತಿಯು ಬಿಡಿಸಿ ಹೇಳಿದೆ, ಹೊಸ ವಿಷಯವನ್ನೇನೂ ಪ್ರತಿಪಾದನೆ ಮಾಡಿಲ್ಲ—ಎಂದರ್ಥ.

" ಕೋ ಮೋಹಃ ಕಃ ಶೋಕಃ ?" ಇತಿ ಶೋಕಮೋಹಯೋರವಿದ್ಯಾಕಾರ್ಯ ಯೋರಾಕ್ಷೇಪೇಣ ಅಸಮ್ಭವಪ್ರದರ್ಶನಾತ್ ಸಕಾರಣಸ್ಯ ಸಂಸಾರಸ್ಯ ಅತ್ಯನ್ತ ಮೇವೋಚ್ಛೇದಃ ಪ್ರದರ್ಶಿತೋ ಭವತಿ ॥

(ಭಾಷ್ಯಾರ್ಥ)

ಎಲ್ಲಿ ಅಂದರೆ ಯಾವ ಕಾಲದಲ್ಲಿ ಅಥವಾ ಹಿಂದೆ ಹೇಳಿದ (ಯಾವ) ಆತ್ಮನಲ್ಲಿ ಅದೇ ಭೂತಗಳೆಲ್ಲವೂ ನಿಜವಾದ ಆತ್ಮನನ್ನು [1] ಕಂಡುಕೊಂಡದ್ದರಿಂದ ಪರಮಾರ್ಥ ವಸ್ತುವನ್ನು ತಿಳಿದವನಿಗೆ ಆತ್ಮನೇ ಆಯಿತೋ (ಎಲ್ಲವೂ) ಆತ್ಮನೇ ಆಗಿಬಿಟ್ಟಿತೋ,[2] ಅಲ್ಲ ಅಂದರೆ ಆ ಕಾಲದಲ್ಲಿ ಅಥವಾ ಆ ಆತ್ಮನಲ್ಲಿ[3] ಯಾವ ಮೋಹವು ? ಯಾವ ಶೋಕವು ? **ಶೋಕವೂ ಮೋಹವೂ ಕಾಮುಕರ್ಮಗಳಿಗೆ ಬೀಜವು** (ಇದು) ಅಜ್ಞಾನಿಗೆ ಆಗುವದೇ ಹೊರತು ಆಕಾಶದಂತೆ ವಿಶುದ್ಧವಾಗಿರುವ ಆತ್ಮೈಕತ್ವವನ್ನು ಕಂಡುಕೊಂಡವನಿಗೆ ಆಗಲಾರದು.

" ಯಾವ ಮೋಹವು ? ಯಾವ ಶೋಕವು ?" ಎಂದು **ಅವಿದ್ಯಾಕಾರ್ಯ ವಾದ**[4] ಶೋಕಮೋಹಗಳನ್ನು ಆಕ್ಷೇಪಿಸಿ (ಅವುಗಳಿಗೆ) ಅಸಂಭವವನ್ನು ತೋರಿಸಿರುವದರಿಂದ ಕಾರಣಸಹಿತವಾದ ಸಂಸಾರವು[5] (ಜ್ಞಾನಿಗೆ) ಅತ್ಯಂತವಾಗಿ[6] ನಾಶವಾಗುವದೆಂದು ತೋರಿಸಿಕೊಟ್ಟಂತಾಯಿತು ॥ ೭ ॥

(ಭಾಷ್ಯ)

ಯೋಽಯಮತೀತೈರ್ಮನ್ತ್ರೈರುಕ್ತ ಆತ್ಮಾ, ಸ ಸ್ವೇನ ರೂಪೇಣ ಕೀದೃಲ್ಲಕ್ಷಣ ಇತ್ಯಾಹಾಯಂ ಮನ್ತ್ರಃ—

(ಭಾಷ್ಯಾರ್ಥ)

ಹಿಂದಿನ ಮಂತ್ರಗಳಲ್ಲ ಹೇಳಿದ ಆತ್ಮನು ತನ್ನ ರೂಪದಲ್ಲಿ ಹೇಗಿರುವನೆಂಬುದನ್ನು ಈ ಮಂತ್ರವು ಹೇಳುತ್ತದೆ—

---

1 ದೇಹಾದಿಗಳು ನಾವು ಕಲ್ಪಿಸಿಕೊಂಡಿರುವ ಹುಸಿಯಾದ ಆತ್ಮಗಳು. ಪರಮಾತ್ಮನೇ ನಿಜವಾಗಿ ನಮ್ಮ ಆತ್ಮನು

2 ಮೊದಲು ಎಲ್ಲವೂ ಆತ್ಮನೇ ಆಗಿತ್ತಾದರೂ ಅದು ತಿಳಿದಿರಲಿಲ್ಲ; ಹಗ್ಗವೆಂದು ತಿಳಿದ ಕೂಡಲೆ ಭ್ರಾಂತಿಯ ಹಾವು ಹಗ್ಗನೇ ಆಗಿಬಿಡುವಂತೆ ಆತ್ಮ ಜ್ಞಾನವು ಬಂದಕೂಡಲೆ ಎಲ್ಲವೂ ಆತ್ಮನೇ ಆಗಿಬಿಡುವದು

3 ' ಆ ಕಾಲದಲ್ಲಿ ' ಎಂದದ್ದರಿಂದ ಜ್ಞಾನಸಮಕಾಲದಲ್ಲಿ ಶೋಕಮೋಹಗಳು ತೊಲಗುವವು ಎಂದು ಹೇಳಿದಂತೆ ಆಯಿತು ' ಆತ್ಮನಲ್ಲಿ ' ಎಂದದ್ದರಿಂದ ಆತ್ಮದೃಷ್ಟಿಯಿಂದ ಯಾವಾಗಲೂ ಶೋಕಮೋಹಗಳು ಇರಲೇ ಇಲ್ಲ ಎಂದು ಹೇಳಿದಂತೆ ಆಯಿತು.

4 ಆತ್ಮನನ್ನು ಅರಿಯದೆ ತಪ್ಪುತಿಳಿವಳಿಕೆಯಿಂದಾಗಿದ್ದ.

5. ಅವಿದ್ಯೆಯೇ ಕಾರಣವು, ಸಂಸಾರವು ಅದರಿಂದಲೇ ತೋರುತ್ತಿರುವ ಕಾರ್ಯವು.

6. ಮತ್ತೆ ಬಾರದಂತೆ.

ಸ ಪರ್ಯಗಾಚ್ಛುಕ್ರಮಕಾಯಮವ್ರಣಮ್
ಅಸ್ನಾವಿರಗ್ಂ ಶುದ್ಧಮಪಾಪವಿದ್ಧಮ್ ।
ಕವಿರ್ಮನೀಷೀ ಪರಿಭೂಃ ಸ್ವಯಮ್ಭೂ
ರ್ಯಾಥಾತಥ್ಯತೋಽರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ ॥

೮. ಅವನು ಹಬ್ಬಿಕೊಂಡಿರುವವನು, ಬೆಳ್ಳಗಿರುವವನು, ಕಾಯವಿಲ್ಲದವನು, ವ್ರಣವಿಲ್ಲದವನು, ನರಗಳಿಲ್ಲದವನು, ಶುದ್ಧನಾಗಿರುವವನು, ಪಾಪದ ಹೊಡೆತವಿಲ್ಲದವನು, ಕವಿಯು, ಮನೀಷಿಯು, ಎಲ್ಲರ ಮೇಲೂ ಇರುವಾತನು, ಸ್ವಯಂಭು. (ಆತನೇ) ಶಾಶ್ವತರಾಗಿರುವ ವರ್ಷಗಳಿಗೆ ಸತ್ಯವಾಗಿ ಅರ್ಥಗಳನ್ನು ವಿಂಗಡಿಸಿಕೊಟ್ಟಿರುತ್ತಾನೆ.

(ಭಾಷ್ಯ)

೧೭ ಸಃ ಯಥೋಕ್ತ ಆತ್ಮಾ ಪರ್ಯಗಾತ್ ಪರಿ ಸಮನ್ತಾತ್ ಅಗಾತ್ ಗತವಾನ್ । ಆಕಾಶವದ್ವ್ಯಾಪೀತ್ಯರ್ಥಃ । ಶುಕ್ರಂ ಶುಭ್ರಮ್, ಜ್ಯೋತಿಷ್ಮತ್ । ದೀಪ್ತಿರ್ವಾ ಇತ್ಯರ್ಥಃ । ಅಕಾಯಮ್ ಅಶರೀರಮ್ । **ಲಿಙ್ಗಶರೀರವರ್ಜಿತ** ಇತ್ಯರ್ಥಃ । ಅವ್ರಣಮ್ ಅಕ್ಷತಮ್ । ಅಸ್ನಾವಿರಮ್ ಸ್ನಾವಾಃ ನಿರಾಃ ಯಸ್ಮಿನ್ ನ ವಿದ್ಯನ್ತ ಇತ್ಯಸ್ನಾವಿರಮ್ । ಅವ್ರಣಮಸ್ನಾವಿರಮಿತ್ಯೇತಾಭ್ಯಾಂ **ಸ್ಥೂಲಶರೀರ** ಪ್ರತಿಷೇಧಃ । ಶುದ್ಧಂ ನಿರ್ಮಲಮ್, **ಅವಿದ್ಯಾಮಲರಹಿತಮಿತಿ ಕಾರಣಶರೀರ** ಪ್ರತಿಷೇಧಃ । ಅಪಾಪವಿದ್ಧಂ ಧರ್ಮಾಧರ್ಮಾದಿಪಾಪವರ್ಜಿತಮ್ । ಶುಕ್ರಮ್ ಇತ್ಯಾದೀನಿ ವಚಾಂಸಿ ಪುಲ್ಲಿಙ್ಗತ್ವೇನ ಪರಿಣೇಯಾನಿ । “ಸ ಪರ್ಯಗಾತ್” ಇತ್ಯುಪಕ್ರಮ್ಯ ‘ಕವಿರ್ಮನೀಷೀ’ ಇತ್ಯಾದಿನಾ ಪುಲ್ಲಿಙ್ಗತ್ವೇನೋಪಸಂಹಾರಾತ್ । ಕವಿಃ ಕ್ರಾನ್ತದರ್ಶೀ ಸರ್ವದೃಕ್ । “ನಾನ್ಯೋಽತೋಽಸ್ತಿ ದ್ರಷ್ಟಾ” (ಬೃ ೩-೭-೨೩) ಇತ್ಯಾದಿಶ್ರುತೇಃ । ಮನೀಷೀ ಮನಸ ಈಶಿತಾ ಸರ್ವಜ್ಞ ಈಶ್ವರ ಇತ್ಯರ್ಥಃ । ಪರಿಭೂಃ ಸರ್ವೇಷಾಂ ಪರಿ ಉಪರಿ ಭವತೀತಿ ಪರಿಭೂಃ । ಸ್ವಯಮ್ಭೂಃ ಸ್ವಯಮೇವ ಭವತೀತಿ । ಯೇಷಾಮ್ ಉಪರಿ ಭವತಿ, ಯಶ್ಚೋಪರಿ ಭವತಿ ಸ ಸರ್ವಃ ಸ್ವಯಮೇವ ಭವತೀತಿ ಸ್ವಯಮ್ಭೂಃ । ಸ ನಿತ್ಯಮುಕ್ತ ಈಶ್ವರೋ ಯಾಥಾತಥ್ಯತಃ ಸರ್ವಜ್ಞತ್ವಾತ್ ಯಥಾತಥಾಭಾವೋ ಯಾಥಾತಥ್ಯಮ್ । ತಸ್ಮಾತ್ ಯಥಾಭೂತಕರ್ಮಫಲಸಾಧನತಃ । ಅರ್ಥಾನ್ ಕರ್ತವ್ಯಪದಾರ್ಥಾನ್ ವ್ಯದಧಾತ್ ವಿಹಿತವಾನ್, ಯಥಾನುರೂಪಂ ವ್ಯಭಜತ್ ಇತ್ಯರ್ಥಃ । ಶಾಶ್ವತೀಭ್ಯಃ ನಿತ್ಯಾಭ್ಯಃ ಸಮಾಭ್ಯಃ **ಸಂವತ್ಸರಾಖ್ಯೇಭ್ಯಃ** ಪ್ರಜಾಪತಿಭ್ಯ ಇತ್ಯರ್ಥಃ ॥

(ಭಾಷ್ಯಾರ್ಥ)

ಅವನು ಎಂದರೆ ಹಿಂದೆ ಹೇಳಿರುವ ಆತ್ಮನು ಹಬ್ಬಿಕೊಂಡಿರುವನು, (ಪರ್ಯ

ಗಾತ್ ಎಂಬ ಮೂಲದಲ್ಲಿ) ಪರಿ ಎಂದರೆ ಎಲ್ಲಾ ಕಡೆಯಲ್ಲಿಯೂ ಅಗಾತ್ ಎಂದರೆ ಹೋಗಿರುವನು. ಆಕಾಶದಂತೆ (ಎಲ್ಲವನ್ನೂ) ವ್ಯಾಪಿಸಿಕೊಂಡಿರುವವನು, ಪ್ರಕಾಶ ವುಳ್ಳವನು[1], ಹೊಳಪುಳ್ಳವನು ಎಂದರ್ಥ. ಕಾಯವಿಲ್ಲದವನು ಎಂದರೆ ಶರೀರವಿಲ್ಲ ದವನು, **ಲಿಂಗಶರೀರ**ವಿಲ್ಲದವನು[2] ಎಂದರ್ಥ ವ್ರಣವಿಲ್ಲದವನು ಎಂದರೆ ಗಾಯ ವಿಲ್ಲದವನು. ಅಸ್ನಾವಿರಮ್ (ಎಂಬಲ್ಲಿ) ಸ್ನಾವಗಳಿಂದರೆ ನರಗಳು, ಅವಿಲ್ಲದವನು ಅಸ್ನಾವಿರನು. ವ್ರಣವಿಲ್ಲದವನು, ನರಗಳಿಲ್ಲದವನು ಎಂಬ ಈ ಎರಡು (ವಿಶೇಷಣ) ಗಳಿಂದ **ಸ್ಥೂಲಶರೀರವು**[3] ಇಲ್ಲವೆಂದಿದೆ ಶುದ್ಧನಾಗಿರುವವನು, **ಅವಿದ್ಯೆ**ಯೆಂಬ ಕಶ್ಮಲವಿಲ್ಲದವನು, ಇದರಿಂದ **ಕಾರಣಶರೀರವು**[4] ಇಲ್ಲವೆಂದಿದೆ ಪಾಪದ ಹೊಡೆತ ವಿಲ್ಲದವನು ಎಂದರೆ ಧರ್ಮ, ಅಧರ್ಮ–ಮುಂತಾದ ಪಾಪಗಳಿಲ್ಲದವನು. (ಮಂತ್ರ ದಲ್ಲಿರುವ) 'ಶುಕ್ರಮ್' ಮುಂತಾದ (ನಪುಂಸಕಲಿಂಗದ) ಮಾತುಗಳನ್ನು ಪುಲ್ಲಿಂಗಕ್ಕೆ ತಿರುಗಿಸಿಕೊಳ್ಳಬೇಕು ಏಕೆಂದರೆ, 'ಅವನು ಹಬ್ಬಿಕೊಂಡಿರುವನು' ಎಂದು (ಪುಲ್ಲಿಂಗದ ಲ್ಲಿ) **ಉಪಕ್ರಮ**ಮಾಡಿ 'ಕವಿಯು' 'ಮನೀಷಿಯು'–ಎಂದು ಮುಂತಾಗಿ ಪುಲ್ಲಿಂಗ ದಲ್ಲಿಯೇ **ಉಪಸಂಹಾರ**[5] ಮಾಡಿರುತ್ತದೆ ಕವಿಯು ಎಂದರೆ ಆಚೆ ಇರುವದನ್ನು ನೋಡಬಲ್ಲವನು, ಎಲ್ಲವನ್ನೂ[6] ನೋಡಬಲ್ಲವನು, "ಇವನಿಗಿಂತ ಬೇರೊಬ್ಬ ನೋಡುವಾತನಿಲ್ಲ" (ಬೃ ೩-೭-೨೩) ಎಂದು ಮುಂತಾಗಿರುವ ಶ್ರುತಿ ಇದಕ್ಕೆ

---

1. **ಚೈತನ್ಯಸ್ವರೂಪನು, ಮತ್ತೊಂದರ ಹಂಗಿನಿಂದ ತೋರದೆ ತಾನೇ ತೋರಿಸಿಕೊಳ್ಳುವವನು.**

2. **ಲಿಂಗಶರೀರ**ವೆಂದರೆ ಮನಸ್ಸು, ಪ್ರಾಣ ಮುಂತಾದ ನಮ್ಮ ಒಳಗಿನ ಭಾಗವು. ಲಿಂಗವೆಂದರೆ ಗುರುತು. ಲಿಂಗಶರೀರವು ಆತ್ಮನನ್ನು ಅರಿಯುವದಕ್ಕೆ ಸಾಮಾನ್ಯಜನರಿಗೆ ಗುರುತಾಗಿರುವದು.

3. **ಸ್ಥೂಲಶರೀರ**ವೆಂದರೆ ರಕ್ತಮಾಂಸಾದಿಗಳಿಂದ ಕೂಡಿರುವ ಪ್ರಸಿದ್ಧವಾದ ದೇಹವು. ಲಿಂಗಶರೀರದಂತೆ ಇದು ಅತೀಂದ್ರಿಯವಲ್ಲ.

4. ಶರೀರವೆಂದರೆ ನಾಶವಾಗತಕ್ಕದ್ದು ಆತ್ಮಜ್ಞಾನದಿಂದ ನಾಶವಾಗುವದರಿಂದಲೂ ನಮಗೆ ಶರೀರಾದಿಗಳಿವೆಯೆಂಬ ಅರಿವಿಗೆ ಕಾರಣವಾಗಿರುವದರಿಂದಲೂ ಅವಿದ್ಯೆಯನ್ನು **ಕಾರಣ ಶರೀರ**ವೆಂದಿದೆ 'ಕಾರಣಶರೀರ'ವೆಂಬ ಮಾತು ಪ್ರಸ್ಥಾನತ್ರಯಭಾಷ್ಯದಲ್ಲಿ ಮತ್ತೆಲ್ಲಿಯೂ ಇರುವಂತಿಲ್ಲ.

5 ಉಪಕ್ರಮ (ಮೊದಲು), ಉಪಸಂಹಾರ (ಕೊನೆ)–ಇವುಗಳಲ್ಲಿ ಒಂದೇ ಬಗೆಯಾಗಿ ಪುಲ್ಲಿಂಗವನ್ನು ಹೇಳಿರುವದರಿಂದ ಪುಲ್ಲಿಂಗವೇ ವಿವಕ್ಷಿತವೆಂದು ಏರ್ಪಡುತ್ತದೆ.

6. ಇಂದ್ರಿಯಗಳನ್ನು ಮೀರಿರುವ ಭೂತಭವಿಷ್ಯತ್ಕಾಲಗಳಲ್ಲಿರುವದನ್ನು ಕೂಡ ಎಂದರ್ಥ. ಏಕೆಂದರೆ ಕಾಲವೂ ದೃಶ್ಯವಾಗಿರುತ್ತದೆ.

ಪ್ರಮಾಣವು. 'ಮನೀಷೀ' ಎಂದರೆ ಮನಸ್ಸನ್ನು ಆಳುವವನು, **ಸರ್ವಜ್ಞನಾದ**[1] **ಈಶ್ವರನೆಂದರ್ಥ.** (ಮಂತ್ರದಲ್ಲಿರುವ) ಪರಿಭೂಃ ಎಂಬಲ್ಲ ಪರಿ (ಎಂದರೆ) ಎಲ್ಲರ ಮೇಲೂ (ಭೂಃ) ಇರುವವನು (ಎಂದರ್ಥ) 'ಸ್ವಯಂಭು' ಎಂದರೆ ತಾನೇ ಆಗಿರುವವನು, ಯಾವವುಗಳ[2] ಮೇಲಿರುವನೋ ಯಾವನು ಮೇಲೆ ಇರುವನೋ ಅದೆಲ್ಲವೂ ತಾನೇ ಆಗಿರುವದರಿಂದ ಸ್ವಯಂಭು. ಆ ನಿತ್ಯಮುಕ್ತನಾಗಿರುವ[3] (ಈಶ್ವರನು) ಎಲ್ಲವನ್ನೂ ಬಲ್ಲವನಾಗಿರುವದರಿಂದ[4] ಯಾಥಾತಥ್ಯವಾಗಿ—ಹೇಗೆ ಇರಬೇಕೋ ಹಾಗಿರುವದೇ[5] ಯಾಥಾತಥ್ಯವು ಅದರಿಂದ, ಎಂದರೆ ಕರ್ಮಫಲಗಳನ್ನು ಸತ್ಯವಾಗಿ ಸಾಧಿಸುವಂತೆ (ಎಂದರ್ಥ) ಅರ್ಥಗಳನ್ನು, ಮಾಡಬೇಕಾದ ಕೆಲಸಗಳೆಂಬ ಪದಾರ್ಥಗಳನ್ನು, 'ವ್ಯದಧಾತ್' ಎಂದರೆ ವಿಧಿಸಿರುತ್ತಾನೆ, ಅವರವರಿಗೆ ತಕ್ಕಂತೆ ಹಂಚಿಕೊಟ್ಟಿರುತ್ತಾನೆ ಶಾಶ್ವತವಾಗಿರುವ ಎಂದರೆ ಎಂದೆಂದಿಗೂ ಇರುವ[6] ವರ್ಷಗಳಿಗೆ ಎಂದರೆ **ಸಂವತ್ಸರ**ರೂಪ[7] ಹೆಸರಿನ **ಪ್ರಜಾಪತಿ**ಗಳಿಗೆ (ಹಂಚಿಕೊಟ್ಟಿರುತ್ತಾನೆ) ಎಂದರ್ಥ ॥ ೮ ॥

---

1 ಮಿಕ್ಕದ್ದೆಲ್ಲವೂ ಮನಸ್ಸಿಗೆ ಅಧೀನವಾಗಿರುತ್ತದೆಯಾದರೂ ಮನಸ್ಸು ಆತ್ಮ ನಿಗಧೀನವಾಗಿರುತ್ತದೆ ಮನಸ್ಸನ್ನು ಆತ್ಮನೇ ತನ್ನ ಚೈತನ್ಯರೂಪದಿಂದ ಬೆಳಗಬೇಕಾಗುತ್ತದೆ

2. ಹಗ್ಗವು ಹಾವಿಗಿಂತ ಬೇರೆಯಾದರೂ ಹಾವು ಹಗ್ಗಕ್ಕಿಂತ ಬೇರೆಯಾಗಿರಲಾರದು ಇದರಿಂದ ಅನಾತ್ಮಕ್ಕಿಂತ ಆತ್ಮನು ಬೇರೆಯಾಗಿ ಅದಕ್ಕಿಂತ ಮೇಲು (ಉತ್ಕೃಷ್ಟ) ಎನಿಸಿಕೊಂಡಿರುತ್ತಾನಾದರೂ ಅನಾತ್ಮವು ಆತ್ಮನಿಗಿಂತ ಬೇರೆಯಿಲ್ಲ. ಆತ್ಮನೇ ಆ ರೂಪದಿಂದ ಕಲ್ಪಿತನಾಗಿರುತ್ತಾನೆ.

3. ಸಾಧನವನ್ನು ಮಾಡಿ ಮುಕ್ತನಾಗಬೇಕಾಗಿಲ್ಲದ, ಮುಕ್ತಿಸ್ವರೂಪನೇ ಆಗಿರುವ

4. ಇಂಥ ಕರ್ಮಕ್ಕೆ ಇಂಥ ಫಲವೆಂಬುದನ್ನೂ ಇಂಥವನು ಇಂಥ ಕರ್ಮವನ್ನು ಮಾಡಿರುವನೆಂಬುದನ್ನೂ ಬಲ್ಲವನು ಇದ್ದರೊರತು ಕರ್ಮಗಳಿಗೆ ನಿಯತವಾದ ಫಲಗಳಾಗಲಾರವು ಎಂದು ಭಾವ.

5 ಕರ್ಮಗಳು ಸತ್ಯವಾಗಿರುವವು ಎಂದರೆ ಅವುಗಳ ಫಲವು ಅವಶ್ಯವಾಗಿ ಆಗಿಯೇ ತೀರುತ್ತದೆ ಎಂದರ್ಥ ಮುಂ ೧-೩-೧ ಭಾಷ್ಯವನ್ನು ನೋಡಿರಿ

6. ಪ್ರಜಾಪತಿಗಳು ಆಯಾ ಕಲ್ಪವಾಗುವವರೆಗೂ ಇರುವರು, ನಡುವೆ ಅವರಿಗೆ ನಾಶವಿಲ್ಲ.

7. ಪ್ರಜಾಪತಿಗೆ ಸಂವತ್ಸರನೆಂಬ ಹೆಸರುಂಟಾಗಿರುವದಕ್ಕೆ ಕಾರಣವನ್ನು ತಿಳಿಯುವದಕ್ಕೆ ಪ್ರ. ೧-೯, ಬೃ. ೧-೫-೧೪ ಇವುಗಳನ್ನು ನೋಡಬೇಕು

ಜ್ಞಾನನಿಷ್ಠೆ ಕರ್ಮನಿಷ್ಠೆಗಳ ವಿಂಗಡ

(ಭಾಷ್ಯ)

೧೪. ಅತ್ರಾದ್ಯೇನ ಮನ್ತ್ರೇಣ ಸರ್ವೈಷಣಾವರಿತ್ಯಾಗೇನ ಜ್ಞಾನನಿಷ್ಠೋಕ್ತಾ ಪ್ರಥಮೋ ವೇದಾರ್ಥಃ—"ಈಶಾವಾಸ್ಯಮಿದಂ ಸರ್ವಮ್ . ಮಾ ಗೃಧಃ ಕಸ್ಯ ಸ್ವಿದ್ಧನಮ್" (೧) ಇತಿ। ಅಜ್ಞಾನಾಂ ಜಿಜೀವಿಷೂಣಾಂ ಜ್ಞಾನನಿಷ್ಠಾಸಮ್ಭವೇ "ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್" ॥ (೨) ಇತಿ ಕರ್ಮನಿಷ್ಠೋಕ್ತಾ ದ್ವಿತೀಯೋ ವೇದಾರ್ಥಃ। ಅನಯೋಶ್ಚ ನಿಷ್ಠಯೋರ್ವಿಭಾಗೋ ಮನ್ತ್ರದ್ವಯಪ್ರದರ್ಶಿತಯೋರ್**ಬೃಹದಾರಣ್ಯಕೇಽಪಿ** ಪ್ರದರ್ಶಿತಃ। ಸೋಽಕಾಮಯತ ಜಾಯಾ ಮೇ ಸ್ಯಾತ್॥ (ಬೃ ೧-೪-೧೭) ಇತ್ಯಾದಿನಾ ಅಜ್ಞಸ್ಯ ಕಾಮಿನಃ ಕರ್ಮಾಣೀತಿ। "ಮನ ಏವಾಸ್ಯಾತ್ಮಾ ವಾಗ್ಜಾಯಾ" (ಬೃ ೧-೪-೧೭) ಇತ್ಯಾದಿವಚನಾತ್ ಅಜ್ಞತ್ವಂ ಕಾಮಿತ್ವಂ ಚ ಕರ್ಮನಿಷ್ಠಸ್ಯ ನಿಶ್ಚಿತಮವಗಮ್ಯತೇ। ತಥಾ ಚ ತತ್ಫಲಂ **ಸಪ್ತಾನ್ನ ಸರ್ಗಃ** (ಬೃ ೧-೫-೨), ತೇಷಾಮ್ಪ್ರತ್ಯಭಾವೇನಾತ್ಮಸ್ವರೂಪಾವಸ್ಥಾನಮ್। ಜಾಯಾದ್ಯೇಷಣಾತ್ರಯಸಂನ್ಯಾಸೇನ ಚಾತ್ಮವಿದಾಂ ಕರ್ಮನಿಷ್ಠಾವ್ಯಾತಿಕೂಲ್ಯೇನ ಆತ್ಮಸ್ವರೂಪನಿಷ್ಠೈವ ದರ್ಶಿತಾ "ಕಿಂ ಪ್ರಜಯಾ ಕರಿಷ್ಯಾಮೋ ಯೇಷಾಂ ನೋಽಯಮಾತ್ಮಾಯಂ ಲೋಕಃ' (ಬೃ ೪-೪-೨೨) ಇತ್ಯಾದಿನಾ ॥

ಯೇ ತು ಜ್ಞಾನನಿಷ್ಠಾಃ ಸಂನ್ಯಾಸಿನಃ ತೇಭ್ಯಃ "ಅಸುರ್ಯಾ ನಾಮ ತೇ" (೩) ಇತ್ಯಾದಿನಾ ಅವಿದ್ವನ್ನಿನ್ದಾದ್ವಾರೇಣ ಆತ್ಮನೋ ಯಾಥಾತ್ಮ್ಯಮ್ 'ಸ ಪರ್ಯಗಾತ್" (೪) ಇತ್ಯೇತದನ್ತೈರ್ಮನ್ತ್ರೈರುಪದಿಷ್ಟಮ್, ತೇಷ್ಯತ್ಯಾಧಿಕೃತಾ ನ ಕಾಮಿನ ಇತಿ। ತಥಾ ಚ **ಶ್ವೇತಾಶ್ವತರಾಣಾಂ** ಮನ್ತ್ರೋಪನಿಷದಿ "ಅತ್ಯಾಶ್ರಮಿಭ್ಯಃ ಪರಮಂ ಪವಿತ್ರಂ ಪ್ರೋವಾಚ ಸಮ್ಯಗೃಷಿಸಙ್ಘಜುಷ್ಟಮ್" (ಶ್ವೇ. ೬-೨೧) ಇತ್ಯಾದಿ ವಿಭಜ್ಯೋಕ್ತಮ್। ಯೇ ತು ಕಾಮಿನಃ ಕರ್ಮನಿಷ್ಠಾಃ ಕರ್ಮ ಕುರ್ವನ್ತ ಏವ ಜಿಜೀವಿಷವಃ, ತೇಭ್ಯ ಇದಮುಚ್ಯತೇ "ಅನ್ಧಂ ತಮಃ" (೯) ಇತ್ಯಾದಿ ॥

(ಭಾಷ್ಯಾರ್ಥ)

ಇಲ್ಲಿ "ಈಶಾವಾಸ್ಯಮಿದಂ ಸರ್ವಮ್ ಮಾಗೃಧಃ ಕಸ್ಯಸ್ವಿದ್ಧನಮ್" (ಇದೆಲ್ಲವೂ ಈಶನಿಂದ ಮುಚ್ಚಲ್ಪಡತಕ್ಕದ್ದು ಯಾರ ಧನವನ್ನೂ ಬಯಸಬೇಡ) ಎಂಬ ಮೊದಲನೆಯ ಮಂತ್ರದಲ್ಲಿ ಎಲ್ಲಾ ಬಯಕೆಗಳನ್ನೂ ಬಿಟ್ಟು ಜ್ಞಾನನಿಷ್ಠನಾಗಿರ ಬೇಕೆಂದು ಹೇಳಿರುವದು **ಮೊದಲನೆಯ ವೇದಾರ್ಥವು** ಬದುಕಿಕೊಂಡಿರ ಬೇಕೆಂದು ಬಯಸುವ ಅಜ್ಞರಿಗೆ ಈ ಜ್ಞಾನನಿಷ್ಠೆಯು ಸಂಭವಿಸುವದಿಲ್ಲವಾಗಿ 'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್" (ಇಲ್ಲಿ ಕರ್ಮಗಳನ್ನೇ ಮಾಡುತ್ತಾ ಬದುಕ

ಲೆಳಸಬೇಕು, ಎಂಬ ಎರಡನೆಯ ಮಂತ್ರದಲ್ಲಿ) ಹೇಳಿರುವ **ಕರ್ಮನಿಷ್ಠೆಯು ಎರಡನೆಯ ವೇದಾರ್ಥವು.** ಈ ಎರಡು ನಿಷ್ಠೆಗಳೂ ಬೇರೆಬೇರೆಯೆಂದು ಎರಡು ಮಂತ್ರಗಳಲ್ಲಿ ಹೇಳಿರುವಂತೆಯೇ **ಬೃಹದಾರಣ್ಯಕ**ದಲ್ಲಿಯೂ[1] "ಆವನು ನನಗೆ ಹೆಂಡತಿಯಾಗಲಿ ಎಂದು ಬಯಸಿದನು" (ಬೃ. ೧-೪-೧೭) ಎಂದು ಕರ್ಮಗಳು ಅಜ್ಞಾನಾದ ಕಾಮಿಗೆ ಎಂದು ತಿಳಿಸಿರುತ್ತದೆ. "ಇವನಿಗೆ ಮನಸ್ಸೇ ಆತ್ಮನು, ವಾಕ್ಕೇ ಹೆಂಡತಿಯು"[2] (ಬೃ ೧-೪-೧೭) ಎಂದು ಮುಂತಾಗಿ ಹೇಳಿರುವದರಿಂದ ಕರ್ಮನಿಷ್ಠನಾದವನು ಅಜ್ಞನೂ ಕಾಮಿಯೂ ಆಗಿರುವನೆಂದು ನಿಶ್ಚಯವಾಗಿ ಗೊತ್ತಾಗುತ್ತದೆ ಆದ್ದರಿಂದಲೇ ಅದಕ್ಕೆ ಫಲವಾಗಿ **ಸಪ್ತಾನ್ನ ಸೃಷ್ಟಿ**[3]ಯಾಗುವದು, ಎಂದರೆ ಅವುಗಳೇ ತಾನೆಂದು ತನ್ನ ಸ್ವರೂಪವನ್ನಿಟ್ಟುಕೊಂಡಿರುವದು. ಆತ್ಮಜ್ಞಾನಿಗಳಾದವರಿಗೆ **ಹೆಂಡತಿಯೇ ಮೊದಲಾದ ಏಷಣಾತ್ರಯ**[4]ವನ್ನು ಬಿಟ್ಟು ಕರ್ಮನಿಷ್ಠೆಗೆ ಪ್ರತಿಕೂಲವಾದ ಆತ್ಮಸ್ವರೂಪನಿಷ್ಠೆಯ(ಲ್ಲಿರಬೇಕೆಂಬು)ದನ್ನೇ "ಯಾವ ನಮಗೆ ಈತನೇ ಆತ್ಮನೋ, ಈತನೇ ಲೋಕವೋ, ಆ ನಾವು ಪ್ರಜೆಯಿಂದೇನು ಮಾಡೋಣ?"[5] (ಬೃ ೪-೪-೨೨) ಎಂದು ಮುಂತಾದ (ವಾಕ್ಯದಿಂದ) ಹೇಳಿರುತ್ತದೆ

---

1. ಇವೇ ವೇದಕ್ಕೆ ಸೇರಿದ ಬ್ರಾಹ್ಮಣಭಾಗವಾದ ಬೃಹದಾರಣ್ಯಕದಲ್ಲಿ ಇದೇ ಅಭಿಪ್ರಾಯವನ್ನು ವಿಸ್ತರಿಸಿರುವದರಿಂದ ಜ್ಞಾನಕರ್ಮಗಳು ಬೇರೆಬೇರೆಯ ಅಧಿಕಾರಿಗಳಿಗೆ ಹೇಳಿದ್ದೆಂದು ನಿರ್ಣಯವಾಗುತ್ತದೆ. ಏಕೆಂದರೆ ವೇದದಲ್ಲೆಲ್ಲ ಮಂತ್ರದಲ್ಲಿ ಹೇಳಿರುವದನ್ನೇ ಬ್ರಾಹ್ಮಣದಲ್ಲಿ ವಿವರಿಸಿರುತ್ತದೆ

2 ಹೊರಗಿನ ಹೆಂಡತಿಯೇ ಮುಂತಾದವಿಲ್ಲದೆ ಅಪೂರ್ಣತೆಯನ್ನು ತೊಲಗಿಸುವದಕ್ಕಾಗಿ ಮನಸ್ಸೇ ಆತ್ಮನು, ವಾಕ್ಕೇ ಹೆಂಡತಿಯು, ಪ್ರಾಣವೇ ಪ್ರಜಾಸಂತಾನವು ಎಂದು ಮುಂತಾಗಿ ಅಧ್ಯಾತ್ಮವಾಗಿರುವ ಮನಆದಿಗಳನ್ನೇ ಕರ್ಮಕ್ಕೆ ಬೇಕಾಗಿರುವ ಉಪಕರಣಗಳನ್ನಾಗಿ ಭಾವನೆಯಿಂದ ಸಂಪತ್ತಿಮಾಡಿಕೊಂಡು ಪೂರ್ಣನಾಗಬೇಕು—ಎಂದು ಈ ವಚನದಲ್ಲಿ ಹೇಳಿದೆ. ಕರ್ಮಕ್ಕೆ ಹೆಂಡತಿಯೇ ಮುಂತಾದವುಗಳಿಲ್ಲದೆ ಆಗುವದೇ ಇಲ್ಲವೆಂಬುದು ಇದರಿಂದ ಸ್ಪಷ್ಟ

3. ಎಲ್ಲರೂ ತಿನ್ನುವ ಅನ್ನವೊಂದು, ದೇವತೆಗಳಿಗೆ ಕೊಡುವ ಹುತಪ್ರಹುತ ಆಧವಾ ದರ್ಶಪೂರ್ಣಮಾಸಗಳು ಎರಡು, ಮನಸ್ಸು, ವಾಕ್ಕು, ಪ್ರಾಣ—ಎಂಬ ಭೋಗಸ್ಥಾನಗಳು ಮೂರು, ಹಾಲು ಒಂದು—ಹೀಗೆ ಏಳು ಅನ್ನಗಳು ಬೃ. ೧-೫-೨ರಲ್ಲಿ ಇವನ್ನು ಹೇಳಿದೆ. ಇಲ್ಲಿ 'ಆತ್ಮಸ್ವರೂಪಾವಸ್ಥಾನಮ್' ಎಂಬುದು 'ಅನಾತ್ಮಸ್ವರೂಪಾವಸ್ಥಾನಮ್' ಎಂದಿದ್ದರೆ 'ಅನಾತ್ಮಸ್ವರೂಪದಲ್ಲಿದ್ದುಕೊಂಡಿರುವದು' ಎಂದು ಸ್ಪಷ್ಟವಾದ ಅರ್ಥವಾಗುತ್ತಿತ್ತು.

4. ಪುತ್ರಾದ್ಯೇಷಣಾತ್ರಯ ಎಂದರ್ಥ.

5. ಮಗನಿಂದ ಹೊರಗಿನ ಲೋಕವನ್ನು ಪಡೆಯಬಹುದೇ ಹೊರತು ಆತ್ಮಲೋಕವನ್ನು ಪಡೆಯುವದಾಗಲಾರದು ಎಂದು ಭಾವ.

ಯಾರಾದರೆ ಜ್ಞಾನನಿಷ್ಠರಾದ ಸಂನ್ಯಾಸಿಗಳೋ ಅವರಿಗೆ "ಅಸುರ್ಯಾ ನಾಮ ತೇ" (೩) (ಅಸುರ್ಯವೆಂಬ ಆ) ಎಂದು ಮುಂತಾಗಿ ಅಜ್ಞಾನಿಗಳನ್ನು ನಿಂದಿಸುವದರ ಮೂಲಕ "ಸ ಪರ್ಯಗಾತ್" (೮) (ಅವನು ಹಬ್ಬಿಕೊಂಡಿರುವನು) ಎಂಬವರೆಗಿನ ಮಂತ್ರಗಳಲ್ಲಿ ಆತ್ಮನ ನಿಜವಾದ ಸ್ವರೂಪವನ್ನು ಹೇಳಿದ್ದಾಯಿತು, ಏಕೆಂದರೆ ಇದಕ್ಕೆ ಅವರೇ ಅಧಿಕಾರಿಗಳೇ ಹೊರತು ಕಾಮಿಗಳಲ್ಲ. ಆದ್ದರಿಂದಲೇ **ಶ್ವೇತಾಶ್ವತರಶಾಖೆಯವರ ಮುಂತ್ರೋಪನಿಷತ್ತಿನಲ್ಲಿ** "ಋಷಿಸಮೂಹವು ಚೆನ್ನಾಗಿ ಸೇವಿಸುತ್ತಿರುವ (ಈ) ಪರಮಪವಿತ್ರವಾದ (ಜ್ಞಾನವನ್ನು) ಪೂಜ್ಯವಾದ ಆಶ್ರಮದಲ್ಲಿರುವವರಿಗೆ ಹೇಳಿದನು" (ಶ್ವೇ. ೬-೨೧) ಎಂದು ಮುಂತಾಗಿ ವಿಂಗಡಿಸಿ[1] ಹೇಳಿರುತ್ತದೆ. ಇನ್ನು ಯಾರು ಕಾಮಿಗಳಾಗಿ ಕರ್ಮನಿಷ್ಠರಾಗಿರುವರೋ, ಕರ್ಮವನ್ನು ಮಾಡುತ್ತಲೇ ಬಾಳಬೇಕೆಂದು ಬಯಸುತ್ತಿರುವರೋ ಅವರಿಗೆ "ಅನ್ಧಂ ತಮಃ" ಎಂದು ಮುಂತಾಗಿರುವ ಈ (ಮುಂದಿನ ಕರ್ಮಜ್ಞಾನಸಮುಚ್ಚಯ)ವನ್ನು ಹೇಳಿರುತ್ತದೆ.

(ಭಾಷ್ಯ)

೧೯ ಕಥಂ ಪುನರೇವಮವಗಮ್ಯತೇ, ನ ತು ಸರ್ವೇಷಾಮಿತಿ? ಉಚ್ಯತೇ। ಅಕಾಮಿನಃ ಸಾಧ್ಯಸಾಧನಭೇದೋಪಮರ್ದೇನ "ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ। ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ" ಇತಿ (೮) ಯದಾತ್ಮೈಕತ್ವವಿಜ್ಞಾನಮ್ (ಉಕ್ತಮ್) ತನ್ನ ಕೇನಚಿತ್ ಕರ್ಮಣಾ ಜ್ಞಾನಾನ್ತರೇಣ ವಾ ಹ್ಯಮೂಢಃ ಸಮುಚ್ಚಿಚೀಷತಿ। ಇಹ ತು ಸಮುಚ್ಚಿಚೀಷಯಾ ಅವಿದ್ವದಾದಿನಿನ್ದಾ ಕ್ರಿಯತೇ। ತತ್ರ ಚ ಯಸ್ಯ ಯೇನ ಸಮುಚ್ಚಯಃ ಸಮ್ಭವತಿ ನ್ಯಾಯತಃ ಶಾಸ್ತ್ರತೋ ವಾ ತದಿಹೋಚ್ಯತೇ। ತದ್ದೈವಂ ವಿತ್ತಂ ದೇವತಾವಿಷಯಂ ಜ್ಞಾನಂ ಕರ್ಮಸಮ್ಬನ್ಧಿತ್ವೇನೋಪನ್ಯಸ್ತಮ್, ನ ಪರಮಾತ್ಮಜ್ಞಾನಮ್। "ವಿದ್ಯಯಾ ದೇವಲೋಕಃ" (ಬೃ. ೧-೫-೧೬) ಇತಿ ಪೃಥಕ್ಫಲಶ್ರವಣಾತ್। ತಯೋರ್ಜ್ಞಾನಕರ್ಮಣೋರಿಹೈಕೈಕಾನುಷ್ಠಾನಸಿನ್ದಾ ಸಮುಚ್ಚಿಚೀಷಯಾ ನ ನಿನ್ದಾ ಪರೈವ। ಏಕೈಕಸ್ಯ ಪೃಥಕ್ಫಲಶ್ರವಣಾತ್ "ವಿದ್ಯಯಾ ತದಾರೋಹನ್ತಿ" (ಶತ. ೧೦-೫-೪-೧೬), "ವಿದ್ಯಯಾ ದೇವಲೋಕಃ" (ಬೃ. ೧-೫-೧೬) "ನ ತತ್ರ ದಕ್ಷಿಣಾ ಯನ್ತಿ" (ಶತ. ೧೦-೫-೪-೧೬), "ಕರ್ಮಣಾ ಪಿತೃಲೋಕಃ" (ಬೃ. ೧-೫-೧೬) ಇತಿ। ನ ಹಿ ಶಾಸ್ತ್ರವಿಹಿತಂ ಕಿಞ್ಚಿದಕರ್ತವ್ಯತಾಮಿಯಾತ್॥

---

1. ಕರ್ಮಾಧಿಕಾರಿಗಳಿಂದ ಬೇರ್ಪಡಿಸಿ ಸಂನ್ಯಾಸಿಗಳಿಗೇ ಜ್ಞಾನವನ್ನು ಹೇಳಿರುತ್ತದೆ.

(ಭಾಷ್ಯಾರ್ಥ)

(ಪ್ರಶ್ನೆ):-(ಇದು) ಹೀಗೆಯೇ, ಎಲ್ಲರಿಗೂ[1] (ಹೇಳಿದ್ದಲ್ಲ) ಎಂದು ಹೇಗೆ ಗೊತ್ತು ?

(ಉತ್ತರ):-ಹೇಳುತ್ತೇವೆ (ಕೇಳಿ). "ಎಲ್ಲಿ ಎಲ್ಲಾ ಭೂತಗಳೂ ತಿಳಿದವನಿಗೆ ಆತ್ಮನೇ ಆಯಿತೋ ಅಲ್ಲಿ (ಎಲ್ಲವೂ) ಒಂದೆಂಬುದನ್ನು ಕಂಡುಕೊಂಡವನಿಗೆ ಯಾವ ಮೋಹವು ? ಯಾವ ಶೋಕವು ?" (೭) ಎಂದು ಕಾಮಿಯಲ್ಲದವನಿಗೆ ಸಾಧ್ಯ, ಸಾಧನ–ಎಂಬ ಭೇದವನ್ನು ಅರೆದುಹಾಕಿ ಆತ್ಮನು ಒಬ್ಬನೇ ಎಂಬ ಯಾವ ಜ್ಞಾನವನ್ನು (ಹೇಳಿದೆಯೋ) ಅದನ್ನು ಯಾವ ಕರ್ಮದೊಡನೆಯಾಗಲಿ ಮತ್ತೊಂದು ಜ್ಞಾನದೊಡನೆಯಾಗಲಿ[2] ಕೂಡಿಸಿಕೊಂಡು (ಅನುಷ್ಠಾನಮಾಡ)ಬೇಕೆಂದು ಮೂಢನಲ್ಲದವನು (ಯಾವನೂ) ಬಯಸಲಾರನಷ್ಟೆ ಆದರೆ ಇಲ್ಲಿ (ಎರಡನ್ನೂ) ಕೂಡಿಸಿಕೊಂಡು (ಅನುಷ್ಠಾನಮಾಡಬೇಕೆಂಬ) ಅಭಿಸ್ಸಾಯದಿಂದ ಅಜ್ಞಾನಿಯೇ ಮುಂತಾದವರನ್ನು ನಿಂದೆಮಾಡಿರುತ್ತದೆ. ಹೀಗಿರುವದರಿಂದ ಯಾವದನ್ನು ಯಾವದರೊಡನೆ ಕೂಡಿಸಿ (ಅನುಷ್ಠಾನಮಾಡುವದು) ಯುಕ್ತಿಯಿಂದಲಾಗಲಿ ಶಾಸ್ತ್ರದಿಂದಲಾಗಲಿ ಹೊಂದುಗಡೆಯಾಗುವದೋ ಅದನ್ನು ಇಲ್ಲಿ ಹೇಳಿರುತ್ತದೆ (ಎನ್ನಬೇಕು). ಅದು (ಯಾವದೆಂದರೆ) **ದೈವವಿತ್ತವೆನಿಸುವ**[3] ದೇವತಾವಿಷಯವಾದ ಜ್ಞಾನವು, ಕರ್ಮಕ್ಕೆ ಸಂಬಂಧಪಟ್ಟಂತೆ (ಅದನ್ನೇ) ಹೇಳಿರುತ್ತದೆ(ಯೇ ಹೊರತು) ಪರಮಾತ್ಮಜ್ಞಾನವನ್ನಲ್ಲ. ಏಕೆಂದರೆ "ವಿದ್ಯೆಯಿಂದ ದೇವಲೋಕವನ್ನು (ಗೆಲ್ಲಬೇಕು)" (ಬೃ. ೧-೫-೧೬) ಎಂದು (ಅದಕ್ಕೆ) ಬೇರೆಯ[4] ಫಲವನ್ನು ಹೇಳಿರುತ್ತದೆ. ಆ ಜ್ಞಾನಕರ್ಮಗಳನ್ನು ಒಂದೊಂದನ್ನೇ ಅನುಷ್ಠಾನಮಾಡುವದನ್ನು ಇಲ್ಲಿ ನಿಂದಿಸಿರುವದು (ಎರಡನ್ನೂ) ಕೂಡಿಸಿ (ಅನುಷ್ಠಾನಮಾಡಬೇಕೆಂದು ತಿಳಿಸು)ವದಕ್ಕೇ[5] ಹೊರತು (ಅದಕ್ಕೆ) ಬರಿಯ

---

1. ಕರ್ಮಿಗಳಂತೆ ಜ್ಞಾನಿಗಳಿಗೂ ಹೇಳಿದ್ದಲ್ಲವೆಂದು ಹೇಗೆ ಗೊತ್ತು ? ಎಂದು ಪ್ರಶ್ನೆ.

2. ಕರ್ಮವಾಗಲಿ, ಉಪಾಸನೆಯಾಗಲಿ ಒಂದೊಂದು ಫಲಕ್ಕೆ ಸಾಧನವು. ಆದರೆ ಆತ್ಮಜ್ಞಾನವು ಸಾಧ್ಯಸಾಧನಭೇದವನ್ನು ಸುಳ್ಳೆಂದು ತೋರಿಸಿಕೊಡುವದು. ಆದ್ದರಿಂದ ಜ್ಞಾನದೊಡನೆ ಕರ್ಮವನ್ನಾಗಲಿ ಉಪಾಸನೆಯನ್ನಾಗಲಿ ಸೇರಿಸುವ ಪ್ರಯತ್ನವು ಕತ್ತಲೆಬೆಳಕುಗಳೆರಡನ್ನೂ ಒತ್ತಟ್ಟಿಗೆ ಸೇರಿಸುವದಕ್ಕಿಚ್ಛಿಸುವಂಥ ಮೂಢರ ಯತ್ನವು.

3. ಗವಾದಿಗಳು ಕರ್ಮಕ್ಕೆ ಬೇಕಾಗಿರುವ ಮಾನುಷವಿತ್ತವು; ಉಪಾಸನೆಯು ದೈವವಿತ್ತವು. ಬೃ. ೧-೪-೧೭ನ್ನೆ ಆದರೆ ಭಾಷ್ಯವನ್ನು ನೋಡಿ.

4. ಜ್ಞಾನದ ಫಲವಾದ ಮೋಕ್ಷಕ್ಕಿಂತ ಬೇರೆಯಾದ.

5. ಕೂಡಿಸಿ ಅನುಷ್ಠಾನಮಾಡಬೇಕೆಂದು ಶ್ರುತಿಯಲ್ಲಿ ಹೇಳಿರುವದರಿಂದ ಅದೇ ಶ್ರುತಿಯ ಅಭಿಪ್ರಾಯ.

ನಿಂದೆಯಲ್ಲಿಯೇ ತಾತ್ಪರ್ಯವಿರುವದಿಲ್ಲ; ಏಕೆಂದರೆ "ವಿದ್ಯೆಯಿಂದ ಅದನ್ನು ಏರುವರು" (ಶತ. ೧೦-೫-೪-೧೬), "ವಿದ್ಯೆಯಿಂದ ದೇವಲೋಕವನ್ನು (ಗೆಲ್ಲಬೇಕು)" (ಬೃ. ೧-೫-೧೬), "ಅಲ್ಲಿಗೆ ದಕ್ಷಿಣಮಾರ್ಗದವರು ಹೋಗುವದಿಲ್ಲ"[1] (ಶತ. ೧೦-೫-೪-೧೬), "ಕರ್ಮದಿಂದ ಪಿತೃಲೋಕವನ್ನು (ಗೆಲ್ಲಬೇಕು)" (ಬೃ. ೧-೫-೧೬) ಎಂದು ಒಂದೊಂದಕ್ಕೂ ಬೇರೆ ಫಲವನ್ನು ಹೇಳಿರುತ್ತದೆ.[2] ಶಾಸ್ತ್ರದಲ್ಲಿ (ಯಾವದನ್ನು) ವಿಧಿಸಿರುತ್ತದೆಯೋ (ಅದು) ಯಾವದೂ ಮಾಡತಕ್ಕದ್ದಲ್ಲವೆಂದು (ಎಂದಿಗೂ) ಆಗಲಾರದು.

ಕರ್ಮೋಪಾಸನೆಗಳ ಸಮುಚ್ಚಯ

ಅನ್ಧಂ ತಮಃ ಪ್ರವಿಶನ್ತಿ
ಯೇಽವಿದ್ಯಾಮುಪಾಸತೇ ।
ತತೋ ಭೂಯ ಇವ ತೇ
ತಮೋ ಯ ಉ ವಿದ್ಯಾಯಾಗ್ಂ ರತಾಃ ॥ ೯ ॥

೯. ಯಾರು ಅವಿದ್ಯೆಯನ್ನು ಉಪಾಸನೆಮಾಡುತ್ತಾರೋ ಅವರು ಕುರುಡುಗತ್ತಲೆಯನ್ನು ಪ್ರವೇಶಿಸುವರು. ಮತ್ತು ಯಾರು ವಿದ್ಯೆಯಲ್ಲಿ ನಿರತರಾಗಿರುವರೋ ಅವರು ಅದಕ್ಕಿಂತ ಹೆಚ್ಚಿನ ಕತ್ತಲೆಯನ್ನು ಪ್ರವೇಶಿಸುವರು.

(ಭಾಷ್ಯ)

೧೦ ತತ್ರ —ಅನ್ಧಂ ತಮಃ ಅದರ್ಶನಾತ್ಮಕಂ ತಮಃ ಪ್ರವಿಶನ್ತಿ। ಕೇ? ಯೇ ಅವಿದ್ಯಾಮ್—ವಿದ್ಯಾಯಾ ಅನ್ಯಾ ಅವಿದ್ಯಾ, ಕರ್ಮೇತ್ಯರ್ಥಃ, ಕರ್ಮಣೋ ವಿದ್ಯಾವಿರೋಧಿತ್ವಾತ್। ತಾಮ್ ಅವಿದ್ಯಾಮ್–ಅಗ್ನಿಹೋತ್ರಾದಿಲಕ್ಷಣಾಮೇವ ಕೇವಲಾಮ್ ಉಪಾಸತೇ ತತ್ಪರಾಃ ಸನ್ತೋಽನುತಿಷ್ಠನ್ತೀತ್ಯಭಿಪ್ರಾಯಃ। ತತಃ ತಸ್ಮಾದನಾತ್ಮಕಾತ್ತಮಸಃ ಭೂಯ ಇವ ಬಹುತರಮೇವ ತೇ ತಮಃ ಪ್ರವಿಶನ್ತಿ। ಕೇ? ಕರ್ಮ ಹಿತ್ವಾ ಯೇ ಉ ಯೇ ತು ವಿದ್ಯಾಯಾಮೇವ ದೇವತಾಜ್ಞಾನೇ ಏವ ರತಾಃ ಅಭಿರತಾಃ ॥

---

1 ಈ ವಚನವು ಪೂರ್ಣರೂಪದಲ್ಲಿ ಹೀಗಿದೆ: ವಿದ್ಯಯಾ ತದಾರೋಹನ್ತಿ ಯತ್ರ ಕಾಮಾಃ ಪರಾಗತಾಃ। ನ ತತ್ರ ದಕ್ಷಿಣಾ ಯನ್ತಿ ನಾವಿದ್ವಾಂಸಸ್ತಪಸ್ವಿನಃ ॥ (ಎಲ್ಲಿ ಕಾಮಗಳು ತೊಲಗಿರುವವೋ ಆ ಸ್ಥಲವನ್ನು ವಿದ್ಯೆಯಿಂದ ಏರುವರು; ಅಲ್ಲಿಗೆ ದಕ್ಷಿಣಮಾರ್ಗದವರು ಹೋಗುವದಿಲ್ಲ, ಅಜ್ಞಾನಿಗಳಾದ ತಪಸ್ವಿಗಳೂ ಹೋಗುವದಿಲ್ಲ).

2. ಫಲವುಳ್ಳದ್ದನ್ನು ವಿಧಿಸಿ ಅದನ್ನೇ ಶ್ರುತಿಯು ನಿಂದಿಸುತ್ತದೆ ಎಂಬುದು ಯುಕ್ತವಾಗಲಾರದು.

ಇಲ್ಲಿ[1] ಕುರುಡುಗತ್ತಲೆಯನ್ನು ಅಂದರೆ (ತತ್ತ್ವವನ್ನು) ತಿಳಿಯದೆ ಇರುವ ದೆಂಬ ಕತ್ತಲೆಯನ್ನು ಪ್ರವೇಶಿಸುವರು. ಯಾರು? ಯಾರು ಅವಿದ್ಯೆಯನ್ನು—ವಿದ್ಯೆ ಗಿಂತ ಬೇರೆಯಾದದ್ದು ಅವಿದ್ಯೆ, ಆ ಅವಿದ್ಯೆ (ಎಂದರೆ)—ಕರ್ಮವನ್ನು ಎಂದರ್ಥ, ಏಕೆಂದರೆ ಕರ್ಮವು ವಿದ್ಯೆಗೆ ವಿರುದ್ಧವಾಗಿರುತ್ತದೆ.[2] ಅಂಥ ಅಗ್ನಿಹೋತ್ರವೇ ಮುಂತಾದ ರೂಪದ ಬರಿಯ (ಅವಿದ್ಯೆ)ಯನ್ನೇ ಉಪಾಸನೆಮಾಡುತ್ತಾರೋ, ಅಂದರೆ ಅದನ್ನೇ ಹೆಚ್ಚೆಂದು ತಿಳಿದುಕೊಂಡು ಅನುಷ್ಠಾನಮಾಡುತ್ತಿರುವರೋ, (ಅವರು) ಎಂದಭಿಪ್ರಾಯ.[3] ಅದಕ್ಕಿಂತ ಅಂದರೆ ಆ ಕುರುಡನ್ನುಂಟುಮಾಡುವ ಕತ್ತಲೆಗಿಂತ ಹೆಚ್ಚಿನದೇ ಆಗಿರುವ ಬಲವಾಗಿರುವ ಕತ್ತಲೆಯನ್ನೇ[4] ಪ್ರವೇಶಿಸುವರು. ಯಾರು? ಕರ್ಮವನ್ನು ಬಿಟ್ಟು ಯಾರು ಯಾರಾದರೆ ವಿದ್ಯೆಯಲ್ಲಿಯೇ ದೇವತಾಜ್ಞಾನ ದಲ್ಲಿಯೇ ನಿರತರಾಗಿರುತ್ತಾರೋ ಎಂದರೆ ಆಸಕ್ತರಾಗಿರುತ್ತಾರೋ (ಅವರು). ॥ ೯ ॥

(ಭಾಷ್ಯ)

೨೧. ತತ್ರಾವಾನ್ತರಫಲಭೇದಂ ವಿದ್ಯಾಕರ್ಮಣೋಃ ಸಮುಚ್ಚಯಕಾರಣ ಮಾಹ। ಅನ್ಯಥಾ ಫಲವದಫಲವತೋಃ ಸನ್ನಿಹಿತಯೋರಜ್ಞಾಜ್ಞಿತಯಾ ಜಾಘಿ ತೈವದಿ ಸ್ಯಾದಿತಿ—

(ಭಾಷ್ಯಾರ್ಥ)

ಈಗ ವಿದ್ಯೆ ಕರ್ಮ--ಇವೆರಡಕ್ಕೂ ಒಳಫಲಗಳು ಬೇರೆಬೇರೆಯೆಂಬುದೇ ಇವುಗಳೆರಡನ್ನೂ ಕೂಡಿಸಿ (ಅನುಷ್ಠಾನ) ಮಾಡಬೇಕೆಂಬುದಕ್ಕೆ ಕಾರಣವೆಂದು (ಮುಂದಿನ ಮಂತ್ರವು) ಹೇಳುತ್ತದೆ. ಹಾಗಿಲ್ಲದಿದ್ದರೆ ಫಲವುಳ್ಳದ್ದು (ಒಂದು), ಫಲ

---

1. "ತತ್ರ" ಎಂಬ ಮೂಲಶಬ್ದದ ಅರ್ಥವಿದು. ಕರ್ಮೋಪಾಸನೆಗಳನ್ನು ಮಾಡುವವರಲ್ಲಿ ಎಂದರ್ಥ. 'ಹೀಗಿರುವದರಿಂದ' ಎಂದರ್ಥವನ್ನು ಮಾಡಿದರೆ ಇದುವರೆಗಿನ ಚರ್ಚೆಯಿಂದ ಜ್ಞಾನಿಗಳಿಗೆ ಕರ್ಮನಿಷ್ಠೆಯು ಹೊಂದುವದಿಲ್ಲವಾದ್ದರಿಂದ ಎಂದಭಿಪ್ರಾಯ.

2. ಅವಿದ್ಯೆಯೆಂಬಲ್ಲಿ ಅಕಾರಕ್ಕೆ ವಿರೋಧವೆಂಬರ್ಥವೆಂದು ಸೂಚಿಸಿದೆ.

3. ಅವರು ತಮಸ್ಸನ್ನು ಎಂದರೆ ತತ್ತ್ವವನ್ನು ತಿಳಿಯದೆ ನಾನುನನ್ನದೆಂದು ವ್ಯವಹರಿಸುವ ತಪ್ಪುತಿಳಿವಿನ ವ್ಯವಹಾರವನ್ನು ಹೊಗುವರು.

4. 'ಭೂಯ ಇವ' ಎಂಬ ಮೂಲವನ್ನು ಬಹುತರಮೇವ ಎಂಬ ಭಾಷ್ಯದಂತೆ ಕನ್ನಡಿಸಿದೆ. ಇವ ಎಂದೇ ಭಾಷ್ಯದಲ್ಲಿದೆ ಎಂದಿಟ್ಟುಕೊಂಡರೆ 'ಹೆಚ್ಚಾಗಿರುವಂತೆ ಇರುವ' ಎಂಬರ್ಥವಾಗುವದು; ಅದಕ್ಕಿಂತ ಏವ ಎಂಬ ಪಾಠವೇ ಉತ್ತಮ. ಕರ್ಮವನ್ನು ಮಾಡಿದ ಮೇಲೆ ಉಪಾಸನೆಗೆ ಅಧಿಕಾರವು ಬರುತ್ತದೆ. ಆದ್ದರಿಂದ ಕರ್ಮಕ್ಕೆ ಅಧಿಕಾರಿಗಳಾಗಿರುವವರು ಕರ್ಮವನ್ನು ಬಿಟ್ಟು ಉಪಾಸನೆಗೆ ಹೋಗಬಾರದೆಂಬುದನ್ನು ಇಲ್ಲಿ "ಬಲವಾದ ಕತ್ತಲೆಯನ್ನು ಹೊಂದುವರು" ಎಂಬ ಮಾತುಗಳಿಂದ ನಿಂದಿಸಿದೆ. ಗೀತೆಯಲ್ಲಿ "ಕರ್ಮಯೋಗೋ ರಿಶಿಷ್ಯತೇ" "ನ ನಿರಗ್ನಿಃ" (೫-೩) (೬-೧) ಎಂಬ ವಾಕ್ಯಗಳಂತೆ ಇಲ್ಲಿಯೂವಾಕ್ಯಾರ್ಥವನ್ನು ಮಾಡಬೇಕು.

ವಿಲ್ಲದ್ದು (ಮತ್ತೊಂದು)—ಹೀಗೆ (ಒಂದಕ್ಕೊಂದು) ಹತ್ತಿರವಾಗಿದ್ದರೆ ಅಂಗಾಂಗಿ ಭಾವವಾಗಿ ಪುನರುಕ್ತಿಯೇ[1] ಆದೀತು ಎಂಬುದೇ ಇದಕ್ಕೆ ಕಾರಣ.

(ಭಾಷ್ಯ)

ಅನ್ಯದೇವಾಹುರ್ವಿದ್ಯಯಾ
ಅನ್ಯದಾಹುರವಿದ್ಯಯಾ ।
ಇತಿ ಶುಶ್ರುಮ ಧೀರಾಣಾಂ
ಯೇನಸ್ತದ್ವಿಚಚಕ್ಷಿರೇ ॥ ೧೦ ॥

೧೦. ವಿದ್ಯೆಯಿಂದ ಬೇರೆಯೇ ಎನ್ನುವರು, ಅವಿದ್ಯೆಯಿಂದ ಬೇರೆ ಯೆನ್ನುವರು. ಹೀಗೆಂದು ಧೀರರಿಂದ ಕೇಳಿರುತ್ತೇವೆ; ಅವರು ನಮಗೆ ವಿವರಿಸಿ ಹೇಳಿರುತ್ತಾರೆ.

(ಭಾಷ್ಯ)

೬೨. ಅನ್ಯತ್ ಪೃಥಗೇವ ವಿದ್ಯಯಾ ಕ್ರಿಯತೇ ಫಲಮಿತಿ ಆಹುಃ ವದನ್ತಿ । "ವಿದ್ಯಯಾ ದೇವಲೋಕಃ" (ಬೃ. ೧-೫-೧೬), "ವಿದ್ಯಯಾ ತದಾರೋಹನ್ತಿ" (ಶತ. ೧೦-೫-೪-೧೬)[2] ಇತಿ ಶ್ರುತೇಃ । ಅನ್ಯತ್ ಆಹುಃ ಅವಿದ್ಯಯಾ ಕರ್ಮಣಾ ಕ್ರಿಯತೇ ಫಲಮಿತಿ । "ಕರ್ಮಣಾ ಪಿತೃಲೋಕಃ" (ಬೃ. ೧-೫-೧೬) ಇತಿ ಶ್ರುತೇಃ । ಇತಿ ಏವಂ ಶುಶ್ರುಮ ಶ್ರುತವನ್ತೋ ವಯಂ ಧೀರಾಣಾಂ ಧೀಮತಾಂ ವಚನಮ್ । ಯೇ ಆಚಾರ್ಯಾಃ ನಃ ಅಸ್ಮಭ್ಯಂ ತತ್ ಕರ್ಮ ಚ ಜ್ಞಾನಂ ಚ ವಿಚಚಕ್ಷಿರೇ ವ್ಯಾಖ್ಯಾತವನ್ತಃ, ತೇಷಾಮ್ । ಅಯಮಾಗಮಃ ಪಾರಮ್ಪರ್ಯಾಗತ ಇತ್ಯರ್ಥಃ ॥

(ಧಾಷ್ಯಾರ್ಥ)

ವಿದ್ಯೆಯಿಂದ ಬೇರೆ ಮತ್ತೊಂದೇ ಫಲವು ಉಂಟುಮಾಡಲ್ಪಡುವದು ಎಂದು ಎನ್ನುವರು, ಎಂದು ಹೇಳುವರು. "ವಿದ್ಯೆಯಿಂದ ದೇವಲೋಕವನ್ನು ಗೆಲ್ಲಬೇಕು". (ಬೃ. ೧-೫-೧೬) "ವಿದ್ಯೆಯಿಂದ ಅದನ್ನು ಏರುವರು" (ಶತ. ೧೦-೫-೪-೧೬) ಎಂಬ ಶ್ರುತಿಯು ಇದಕ್ಕೆ ಆಧಾರವು. ಅವಿದ್ಯೆಯಿಂದ ಅಂದರೆ

---

1. "ಅಂಗಾಂಗಿತ್ವೈವ ಸ್ಯಾತ್" ಎಂಬ (ಅ॥) ಪಾರಕ್ಕಿಂತ ಇದೇ ಉತ್ತಮವೆಂದು ತೋರುತ್ತದೆ. ಒಂದಕ್ಕೆ ಫಲ, ಮತ್ತೊಂದಕ್ಕೆ ಫಲವಿಲ್ಲದಿದ್ದರೆ ಕರ್ಮೋಪಾಸನೆಗಳಲ್ಲಿ ಫಲವಿಲ್ಲದ್ದು ಲಿಂಗ, ಫಲವಿರುವದು ಅಂಗಿ (ಪ್ರಧಾನ)—ಎಂದು ಅಂಗಾಂಗಿಭಾವವಾಗುತ್ತಿತ್ತು. ಆಗ ಅಂಗಾಂಗಿಗಳಿಗೆ ಸಮುಚ್ಚಯವು ತಾನೇ ಸಿದ್ಧವಾಗುವದರಿಂದ ಮತ್ತೆ ಸಮುಚ್ಚಯವನ್ನು ವಿಧಾನಮಾಡುವದು ಪುನರುಕ್ತಿಯೆಂದಾಗುತ್ತಿತ್ತು. ಆದ್ದರಿಂದ ಎರಡಕ್ಕೂ ಬೇರೆಬೇರೆಯ ಫಲವಿರುವದರಿಂದ ಇಲ್ಲಿ ಸಮಪ್ರಧಾನವಾಗಿ ಎರಡನ್ನೂ ಕೂಡಿಸಿ ಅನುಷ್ಠಾನಮಾಡಬೇಕೆಂಬು ದಕ್ಕೆ ಕಾರಣವನ್ನು ಹೇಳಿರುತ್ತದೆ—ಎಂದಭಿಪ್ರಾಯ.

2. (ವಾ॥) ಪಾಠದಲ್ಲಿ ಭಾಷ್ಯವು ಸ್ವಲ್ಪ ಬೇರೆಯಾಗಿದೆ; ಆದರೆ ಅರ್ಥದಲ್ಲಿ ಯಾವ ಹೆಚ್ಚುಕಡಿಮೆಯೂ ಆಗಿರುವದಿಲ್ಲ.

ಕರ್ಮದಿಂದ ಬೇರೆಯ (ಫಲವೇ) ಉಂಟುಮಾಡಲ್ಪಡುವದು ಎಂದು ಹೇಳುತ್ತಾರೆ. "ಕರ್ಮದಿಂದ ಪಿತೃಲೋಕ(ವನ್ನು ಗೆಲ್ಲಬೇಕು)" (ಬೃ. ೧-೫-೧೬) ಎಂಬ ಶ್ರುತಿ ಇದಕ್ಕೆ ಆಧಾರವಾಗಿದೆ. ಹೀಗೆಂದು ನಾವು ಧೀರರ ಎಂದರೆ ಪಂಡಿತರ ವಚನವನ್ನು ಕೇಳಿರುತ್ತೇವೆ. ಆ ಆಚಾರ್ಯರು ನಮಗೆ ಆ ಕರ್ಮವನ್ನೂ ಜ್ಞಾನವನ್ನೂ ತಿಳಿಸಿರುತ್ತಾರೆ ಎಂದರೆ ವಿವರಿಸಿ ಹೇಳಿರುತ್ತಾರೆ. ಅವರ[1] ಈ ಆಗಮವು[2] ಪರಂಪರೆಯಿಂದ ಬಂದದ್ದು ಎಂದರ್ಥ.

(ಭಾಷ್ಯ)

ಯತ ಏವಮ್ ಅತಃ—

(ಭಾಷ್ಯಾರ್ಥ)

ಹೀಗಿರುವದರಿಂದ—

ವಿದ್ಯಾಂ ಚಾವಿದ್ಯಾಂ ಚ
ಯಸ್ತದ್ವೇದೋಭಯಗ್ಂ ಸಹ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ
ವಿದ್ಯಯಾಮೃತಮಶ್ನುತೇ ॥ ೧೧ ॥

೧೧. ವಿದ್ಯೆಯನ್ನೂ ಅವಿದ್ಯೆಯನ್ನೂ ಯಾವಾತನು ಎರಡನ್ನೂ ಸೇರಿಸಿ ತಿಳಿಯುತ್ತಾನೋ (ಆತನು) ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತವನ್ನು ಪಡೆಯುತ್ತಾನೆ.

(ಭಾಷ್ಯ)

೨೩. ವಿದ್ಯಾಂ ಚ ಅವಿದ್ಯಾಂ ಚ ದೇವತಾಜ್ಞಾನಂ ಕರ್ಮ ಚೇತ್ಯರ್ಥಃ । ಯಃ ತತ್ ಏತದುಭಯಂ ಸಹ ಏಕೇನ ಪುರುಷೇಣ ಅನುಷ್ಠೇಯಂ ವೇದ, ತಸ್ಯೈವಂ ಸಮುಚ್ಚಯಕಾರಿಣ ಏವ ಏಕಪುರುಷಾರ್ಥಸಮ್ಬನ್ಧಃ ಕ್ರಮೇಣ ಸ್ಯಾದಿತ್ಯುಚ್ಯತೇ । ಅವಿದ್ಯಯಾ ಮೃತ್ಯುಂ ಸ್ವಾಭಾವಿಕಂ ಕರ್ಮ ಜ್ಞಾನಂ ಚ **ಮೃತ್ಯುಶಬ್ದವಾಚ್ಯಮ್** ಉಭಯಂ ತೀರ್ತ್ವಾ ಅತಿಕ್ರಮ್ಯ, ವಿದ್ಯಯಾ ದೇವತಾಜ್ಞಾನೇನ ಅಮೃತಂ ದೇವತಾತ್ಮಭಾವಮ್ ಅಶ್ನುತೇ ಪ್ರಾಪ್ನೋತಿ । ತದ್ಧಿ ಅಮೃತತ್ವಮುಚ್ಯತೇ ಯದ್ದೇವತಾತ್ಮಗಮನಮ್ ॥

---

1. 'ತೇಷಾಮ್' ಎಂಬ ಮಾತನ್ನು ಹಿಂದಿನ ವಾಕ್ಯಕ್ಕೂ ಅನ್ವಯಿಸಬಹುದು. ಆಗ ಕರ್ಮವನ್ನೂ ಉಪಾಸನೆಯನ್ನೂ ನಮಗೆ ತಿಳಿಯಹೇಳಿದ ಜ್ಞಾನಿಗಳ ಉಪದೇಶವಿದು— ಎಂದರ್ಥ. ಕರ್ಮಕ್ಕೂ ಉಪಾಸನೆಗೂ ಬೇರೆಬೇರೆಯ ಫಲಗಳುಂಟೆಂಬುದು ಹಿಂದಿನಿಂದಲೂ ನಡೆದುಬಂದಿರುವ ವೈದಿಕಸಂಪ್ರದಾಯದಿಂದ ನಮಗೆ ಬಂದದ್ದು, ನಾವೇ ಊಹಿಸಿದ್ದಲ್ಲ— ಎಂಬುದು ವಾಕ್ಯಾರ್ಥವು.

2. ಗುರುಪರಂಪರೆಯಿಂದ ಬಂದ ಉಪದೇಶವು.

(ಭಾಷ್ಯಾರ್ಥ)

ವಿದ್ಯೆಯನ್ನೂ ಅವಿದ್ಯೆಯನ್ನೂ ಅಂದರೆ ದೇವತಾಜ್ಞಾನವನ್ನೂ [1] ಮತ್ತು ಕರ್ಮವನ್ನೂ ಎಂದರ್ಥ. ಇವೆರಡನ್ನೂ ಸೇರಿಸಿ ಒಬ್ಬ ಪುರುಷನೇ ಅನುಷ್ಠಾನಮಾಡತಕ್ಕದ್ದು ಎಂದು ಯಾವಾತನು ತಿಳಿಯುತ್ತಾನೋ ಆತನಿಗೇ ಎಂದರೆ ಹೀಗೆ (ಎರಡನ್ನೂ) ಸೇರಿಸಿಕೊಂಡು ಅನುಷ್ಠಾನಮಾಡುತ್ತಿರುವವನಿಗೇ ಒಂದೇ [2] ಪುರುಷಾರ್ಥದ ಸಂಬಂಧವು ಕ್ರಮವಾಗಿ [3] ಆಗುತ್ತದೆ ಎಂದು (ಈಗ) ಹೇಳಲಾಗುತ್ತದೆ: ಅವಿದ್ಯೆಯಿಂದ ಎಂದರೆ ಅಗ್ನಿಹೋತ್ರವೇ ಮುಂತಾದ ಕರ್ಮದಿಂದ ಮೃತ್ಯುವನ್ನು—ಸ್ವಭಾವದಿಂದ [4] ಇದ್ದುಕೊಂಡಿರುವ ಕರ್ಮವೂ ತಿಳಿವಳಿಕೆಯೂ **ಮೃತ್ಯುವೆನಿಸುವದು**; ಇವೆರಡನ್ನೂ—ದಾಟಿ, ವಿದ್ಯೆಯಿಂದ ಎಂದರೆ ದೇವತಾಜ್ಞಾನದಿಂದ **ಅಮೃತವನ್ನು** [5] ಎಂದರೆ ದೇವತಾತ್ಮಭಾವವನ್ನು [6] ಪಡೆಯುತ್ತಾನೆ. ಈ ದೇವತಾಸ್ವರೂಪವನ್ನು ಪಡೆಯುವದನ್ನಲ್ಲವೆ, ಅಮೃತವೆನ್ನುವರು? [7]

ವ್ಯಾಕೃತಾವ್ಯಾಕೃತೋಪಾಸನೆಗಳ ಸಮುಚ್ಚಯ

(ಭಾಷ್ಯ)

೨೪. ಅಥುನಾ ವ್ಯಾಕೃತಾವ್ಯಾಕೃತೋಪಾಸನಯೋಃ ಸಮುಚ್ಚಿಚೀಷಯಾ ಪ್ರತ್ಯೇಕಂ ನಿನ್ದೋಚ್ಯತೇ—

---

1. ದೇವತಾಜ್ಞಾನವೆಂದರೆ ದೇವತೆಯ ಉಪಾಸನೆಯು. ಇದರಲ್ಲಿ ಕಾರ್ಯಬ್ರಹ್ಮೋಪಾಸನೆಯೂ ಸೇರಿರುತ್ತದೆ

2. "ಏಕೈಕಪುರುಷಾರ್ಥಸಮ್ಬನ್ಧಃ" ಎಂಬ (ವಾ॥) ಪಾರಕ್ಕಿಂತ "ಏಕಪುರುಷಾರ್ಥಸಮ್ಬನ್ಧಃ" ಎಂಬ (ಆ॥) ಪಾರವೇ ಉತ್ತಮ ಉಪಾಸನೆಯಿಂದ ಆಯಾ ದೇವತೆಯ ಸ್ವರೂಪವನ್ನು ಪಡೆಯುತ್ತಾರೆ ಎಂಬುದು ಶ್ರುತಿವಾದ. ಬೃ. ೪-೧-೩ನ್ನು ನೋಡಿರಿ.

3. ಮೊದಲು ಅಡ್ಡಿಯನ್ನು ಕಳೆದುಕೊಳ್ಳುವದು, ಬಳಿಕ ಉಪಾಸನೆಯನ್ನು ಮಾಡಿ ಫಲವನ್ನು ಪಡೆಯುವದು ಎಂಬ ಕ್ರಮದಿಂದ.

4. ಅವಿಚಾರಸ್ವಭಾವದಿಂದ. ಜನರಲ್ಲಿ ಸಹಜವಾಗಿರುವ ಇವು ಅವರನ್ನು ಮರ್ತ್ಯರನ್ನಾಗಿ ಮಾಡಿರುವವು. ಆದ್ದರಿಂದ ಇವಕ್ಕೆ ಮೃತ್ಯುವೆಂದು ಹೆಸರು.

5. ಮರಣವಿಲ್ಲದಿರುವಿಕೆ.

6. ದೇವತೆಯ ಸ್ವರೂಪವನ್ನು ಸತ್ತ ಬಳಿಕ ಪಡೆಯುವವರು. ಉಪಾಸನೆಯಿಂದ ಸಾಕ್ಷಾತ್ಕಾರವನ್ನು ಹೊಂದಿರುವವರಿಗೆ ಈ ಫಲವಾಗುವದು.

7. ಕಲ್ಪವು ಮುಗಿದು ಪ್ರಲಯವಾಗುವವರೆಗೂ ಇರುವ ಸ್ಥಾನವನ್ನು "ಅಮೃತ" ಎನ್ನುತ್ತಾರೆ. ಮುಕ್ತಿಯು ಅತ್ಯಂತಿಕವಾದ ಅಮೃತ, ಇದು ಆಪೇಕ್ಷಿಕವಾದ ಅಮೃತ. ಕ. ೨-೩-೧೬, ಛಾ. ಭಾ. ೫-೧೦-೧,೨ ರ ಭಾಷ್ಯವನ್ನು ನೋಡಿರಿ. ಆದ್ವೈತಪ್ರಕರಣ ೨೫, ಐತರೇಯ ಸಂಬಂಧಭಾಷ್ಯ, ತೈತ್ತಿರೀಯಭಾಷ್ಯ ೧-೧೧—ಇವುಗಳಲ್ಲಿ ಈ ವಾಕ್ಯದ ಅರ್ಥವನ್ನು ಬೇರೆಯಾಗಿಯೇ ಕೊಟ್ಟಿರುತ್ತದೆ.

(ಭಾಷ್ಯಾರ್ಥ)

ಈಗ ವ್ಯಾಕೃತ, ಅವ್ಯಾಕೃತ– (ಈ ಎರಡು) ಉಪಾಸನೆಗಳನ್ನೂ ಸೇರಿಸ ಬೇಕೆಂಬ ಇಚ್ಛೆಯಿಂದ ಒಂದೊಂದರ ನಿಂದೆಯನ್ನು ಮಾಡಲಾಗುತ್ತದೆ :—

ಅನ್ಧಂ ತಮಃ ಪ್ರವಿಶನ್ತಿ
ಯೇಽಸಮ್ಭೂತಿಮುಪಾಸತೇ ।
ತತೋ ಭೂಯ ಇವ ತೇ
ತಮೋ ಯ ಉ ಸಮ್ಭೂತ್ಯಾಗ್ಂ ರತಾಃ ॥ ೧೨ ॥

೧೨. ಯಾರು ಅಸಂಭೂತಿಯನ್ನು ಉಪಾಸನೆಮಾಡುತ್ತಾರೋ ಅವರು ಕುರುಡುಗತ್ತಲೆಯನ್ನು ಪ್ರವೇಶಿಸುವರು. ಯಾರು ಸಂಭೂತಿಯಲ್ಲಿ ರತರಾಗಿರುತ್ತಾರೋ ಅವರು ಅದಕ್ಕಿಂತಲೂ ಹೆಚ್ಚಿನ ಕತ್ತಲೆಯನ್ನು ಪ್ರವೇಶಿಸುವರು.

(ಭಾಷ್ಯ)

೨೫. ಅನ್ಧಂ ತಮಃ ಪ್ರವಿಶನ್ತಿ ಯೇ ಅಸಮ್ಭೂತಿಮ್—ಸ ಮ್ಭ ವ ನ ಂ ಸಮ್ಭೂತಿಃ | ಸಾ ಯಸ್ಯ ಕಾರ್ಯಸ್ಯ ಸಾ ಸಮ್ಭೂತಿಃ, ತಸ್ಯಾ ಅನ್ಯಾ ಅಸಮ್ಭೂತಿಃ **ಪ್ರಕೃತಿಃ ಕಾರಣಮ್ ಅವಿದ್ಯಾ ಅವ್ಯಾಕೃತಾಖ್ಯಾ ;** ತಾಮ್ ಅಸಮ್ಭೂತಿಮ್—ಅವ್ಯಾಕೃತಾಖ್ಯಾಂ ಪ್ರಕೃತಿಂ ಕಾರಣಮ್ ಅವಿದ್ಯಾಂ ಕಾಮಕರ್ಮಬೀಜಭೂತಾಮ್ ಅದರ್ಶನಾತ್ಮಿಕಾಮ್ ಉಪಾಸತೇ ಯೇ । ತೇ ತದನುರೂಪಮೇವ ಅನ್ಧಂ ತಮಃ ಅದರ್ಶನಾತ್ಮಕಂ ಪ್ರವಿಶನ್ತಿ | ತತಃ ತಸ್ಮಾದಪಿ ಭೂಯಃ ಬಹುತರಮಿವ ತಮಃ ಪ್ರವಿಶನ್ತಿ ಯೇ ಉ ಸಮ್ಭೂತ್ಯಾಂ **ಕಾರ್ಯಬ್ರಹ್ಮಣಿ ಹಿರಣ್ಯಗರ್ಭಾಖ್ಯೇ** ರತಾಃ ॥

(ಭಾಷ್ಯಾರ್ಥ)

ಯಾರು ಅಸಂಭೂತಿಯನ್ನು—ಸಂಭೂತಿಯೆಂದರೆ ಹುಟ್ಟುವದು, ಅದು ಕಾರ್ಯಕ್ಕೆ ಇರುವ (ಧರ್ಮವಾದ್ದರಿಂದ) ಅದಕ್ಕೆ "ಸಂಭೂತಿ" ಎಂದು ಹೆಸರು, ಅದಕ್ಕಿಂತ ಬೇರೆಯಾದದ್ದು **ಅಸಂಭೂತಿಯು.** (ಇದೇ) **ಪ್ರಕೃತಿ, ಕಾರಣ, ಅವ್ಯಾಕೃತವೆಂಬ ಹೆಸರಿನ ಅವಿದ್ಯೆ.**[1] ಆ ಅಸಂಭೂತಿಯನ್ನು ಎಂದರೆ ಅವ್ಯಾಕೃತವೆಂಬ

---

1. ವ್ಯಾಕೃತ ಎಂದರೆ ಸಾಧ್ಯಸಾಧನರೂಪದಲ್ಲಿ ವಿಂಗಡವಾಗಿರುವ ನಾಮರೂಪಕರ್ಮಗಳ ಸಮೂಹವಾದ ಜಗತ್ತು ; ಅವ್ಯಾಕೃತ ಎಂದರೆ ಹೀಗೆ ಬಿಡಿಯಾಗುವದಕ್ಕೆ ಮೊದಲು ಇದ್ದ ಸೂಕ್ಷ್ಮವಾದ ಜಗದ್ರೂಪ. ಈ ಅವ್ಯಾಕೃತವು ಅವಿದ್ಯೆಯಿಂದ ಕಲ್ಪಿತವಾಗಿದ್ದುಕೊಂಡು ಅವಿದ್ಯೆಯಿರುವವರೆಗೂ ನಿಜವಾಗಿ ತೋರುವದು ; ಅವಿದ್ಯೆಯಿಂದ ಕಲ್ಪಿತವಾಗಿರುವದರಿಂದಲೇ ಇದನ್ನು ಅವಿದ್ಯೆಯೆಂದು ಕರೆದಿದೆ. ಇದನ್ನು ಮಾಯೆ, ಶಕ್ತಿ, ಬೀಜ—ಮುಂತಾದ ಹೆಸರುಗಳಿಂದಲೂ ಕರೆಯುವದುಂಟು. ಸೂ. ಭಾ. ೨-೧-೧೪, ೧-೪-೩, ೧-೩-೨೩ ನೋಡಿರಿ.

ಹೆಸರಿನ ಪ್ರಕೃತಿಯನ್ನು, ಕಾರಣವನ್ನು, ಕಾಮಕರ್ಮಗಳಿಗೆ ಬೀಜವಾಗಿರುವ[1] (ತತ್ತ್ವವನ್ನು) ಅರಿಯದೆ ಇರುವದೆಂಬ ಅವಿದ್ಯೆಯನ್ನು ಯಾರು ಉಪಾಸನೆಮಾಡುತ್ತಾರೋ, ಅವರು ಅದಕ್ಕನುರೂಪವಾಗಿಯೇ ಇರುವ ಕುರುಡುಗತ್ತಲೆಯನ್ನು ಎಂದರೆ ಏನೂ ಕಾಣದಿರುವ ಸ್ಥಿತಿಯನ್ನು ಪ್ರವೇಶಿಸುವರು. ಅದಕ್ಕಿಂತಲೂ ಆ (ಕತ್ತಲೆಗಿಂತಲೂ) ಹೆಚ್ಚಿನ ಹೆಚ್ಚಾಗಿಯೇ[2] ಇರುವ ಕತ್ತಲೆಯನ್ನು ಯಾರಾದರೆ ಸಂಭೂತಿಯಲ್ಲಿ ಎಂದರೆ ಹಿರಣ್ಯಗರ್ಭನೆಂಬ[3] ಕಾರ್ಯಬ್ರಹ್ಮದಲ್ಲಿ ರತರಾಗಿರುತ್ತಾರೋ ಆಸಕ್ತರಾಗಿರುತ್ತಾರೋ (ಅವರು) ಪ್ರವೇಶಿಸುವರು. ॥ ೧೨ ॥

(ಭಾಷ್ಯ)

೧೬. ಅಥುನಾ ಉಭಯೋರುಪಾಸನಯೋಃ ಸಮುಚ್ಚಯಕಾರಣಮವ ಯವಫಲಭೇದಮಾಹ—

(ಭಾಷ್ಯಾರ್ಥ)

ಈಗ (ಈ) ಎರಡು ಉಪಾಸನೆಗಳನ್ನೂ ಸೇರಿಸಿಕೊಂಡು (ಅನುಷ್ಠಾನಮಾಡಬೇಕೆಂಬುದಕ್ಕೆ) ಕಾರಣವಾಗಿ (ಒಟ್ಟಿನ) ಅವಯವಗಳಿಗೆ[4] ಬೇರೆಬೇರೆಯ ಫಲವನ್ನು (ಮಂತ್ರವು) ಹೇಳುತ್ತಿದೆ —

ಅನ್ಯದೇವಾಹುಃ ಸಮ್ಭವಾ-
ದನ್ಯದಾಹುರಸಮ್ಭವಾತ್ ।
ಇತಿ ಶುಶ್ರುಮ ಧೀರಾಣಾಂ
ಯೇ ನಸ್ತದ್ವಿಚಚಕ್ಷಿರೇ ॥ ೧೩ ॥

೧೩. ಸಂಭವದಿಂದ ಬೇರೆಯೆನ್ನುವರು, ಅಸಂಭವದಿಂದ ಬೇರೆ

---

1. ತಪ್ಪು ತಿಳಿವಳಿಕೆಯೇ ಇದು ಬೇಕೆಂಬ ಕಾಮುಕ್ಕೂ ಇದನ್ನು ಮಾಡಬೇಕೆಂಬ ಕರ್ಮಕ್ಕೂ ಮೂಲವು. ತಪ್ಪುತಿಳಿವಳಿಕೆಯಿಂದಾಗಿರುವ ಅವ್ಯಾಕೃತವಿಲ್ಲದಿದ್ದರೆ ವ್ಯಾಕೃತ ಜಗತ್ತಿಲ್ಲ, ಜಗತ್ತಿಲ್ಲದಿದ್ದರೆ ಕಾಮುಕರ್ಮಗಳಿಲ್ಲ. ಆದ್ದರಿಂದ ಅವ್ಯಾಕೃತವು ಕಾಮುಕರ್ಮಗಳಿಗೆ ಬೀಜವಾಗಿರುತ್ತದೆ. ಬೃ. ೧-೪-೭ನ್ನು ನೋಡಿರಿ.

2 ಹಿಂದೆ (೯)ನೆಯ ಮಂತ್ರದ ಭಾಷ್ಯದಂತೆಯೇ ಇಲ್ಲಿ 'ಇವ' ಎಂಬ ಶಬ್ದವನ್ನು ಏವ ಎಂಬರ್ಥದಲ್ಲಿಟ್ಟುಕೊಂಡು ಕನ್ನಡಿಸಿರುತ್ತದೆ.

3. ವ್ಯಾಕೃತೋಪಾಸನೆ ಎಂದರೆ ಬರಿಯ ಜಗದ್ರೂಪದ ಉಪಾಸನೆಯಲ್ಲಿ ಜಗದ್ರೂಪದಲ್ಲಿ ತೋರಿಕೊಂಡಿರುವ ಬ್ರಹ್ಮದ ಉಪಾಸನೆ ಇದಕ್ಕೆ ಕಾರ್ಯಬ್ರಹ್ಮ, ಹಿರಣ್ಯಗರ್ಭ- ಎಂದೂ ಹೆಸರು. (ಆಯಾ ಕಲ್ಪದ ಜಗತ್ತಿನ ಅಭಿಮಾನಿಯನ್ನು ಹಿರಣ್ಯಗರ್ಭನೆಂದು ಕರೆಯುವರು. ಆ ಹಿರಣ್ಯಗರ್ಭನು ಸತ್ಯಲೋಕವೆಂಬ ಕಾರ್ಯಬ್ರಹ್ಮಲೋಕದಲ್ಲಿ ಇರುವನೆಂದೂ ವರ್ಣಿಸುವದುಂಟು) ಹೀಗೆಯೇ ಅವ್ಯಾಕೃತೋಪಾಸನೆ ಎಂದರೆ ಜಗತ್ತಿನ ಬೀಜರೂಪದಲ್ಲಿರುವ ಬ್ರಹ್ಮದ ಉಪಾಸನೆ. ವ್ಯಾಕೃತಾವ್ಯಾಕೃತರೂಪಗಳೆರಡೂ ಅವಿದ್ಯಾಕಲ್ಪಿತವೆಂದು ತಿಳಿದಾಗ ಗೊತ್ತಾಗುವ ಬ್ರಹ್ಮಕ್ಕೆ ಶುದ್ಧಬ್ರಹ್ಮನೆಂದು ಹೆಸರು. ಅದು ಕಾರಣವೂ ಅಲ್ಲ, ಕಾರ್ಯವೂ ಅಲ್ಲ; ಅದೇ ನಮ್ಮ ಆತ್ಮನು. ಸೂ. ಭಾ. ೩-೧-೩೭ನ್ನು ನೋಡಿ.

4. ಒಟ್ಟಿನಲ್ಲಿ ಸೇರಿರುವ ಬೇರೆಬೇರೆಯ ಉಪಾಸನೆಗಳಿಗೆ.

ಯೆನ್ನುವರು; ಹೀಗೆಂದು ಧೀರರಿಂದ ಕೇಳಿರುತ್ತೇವೆ, ಅವರು ನಮಗೆ ಏವರಿಸಿ ಹೇಳಿರುತ್ತಾರೆ.

(ಭಾಷ್ಯ)

೨೭. ಅನ್ಯದೇವ ಪೃಥಗೇವ ಆಹುಃ ಫಲಂ ಸಮ್ಭವಾತ್ ಸಮ್ಭೂತೇಃ ಕಾರ್ಯಬ್ರಹ್ಮೋಪಾಸನಾತ್ ಅಣಿಮಾದ್ಯೈಶ್ವರ್ಯಲಕ್ಷಣಂ ವ್ಯಾಖ್ಯಾತವನ್ತ ಇತ್ಯರ್ಥಃ । ತಥಾ ಚ ಅನ್ಯತ್ ಆಹುಃ ಅಸಮ್ಭವಾತ್ ಅಸಮ್ಭೂತೇಃ ಅವ್ಯಾಕೃತೋಪಾಸನಾತ್ । ಯದುಕ್ತಮ್ "ಅನ್ಧಂ ತಮಃ ಪ್ರವಿಶನ್ತಿ" (೯) ಇತಿ । **ಪ್ರಕೃತಿಲಯ** ಇತಿ ಚ **ಪೌರಾಣಿಕೈ**ರುಚ್ಯತೇ । ಇತಿ ಏವಂ ಶುಶ್ರುಮ ಧೀರಾಣಾಂ ವಚನಮ್, ಯೇ ನಃ ತತ್ ವಿಚಚಕ್ಷಿರೇ ವ್ಯಾಕೃತಾವ್ಯಾಕೃತೋಪಾಸನಫಲಂ ವ್ಯಾಖ್ಯಾತವನ್ತ ಇತ್ಯರ್ಥಃ ॥

(ಭಾಷ್ಯಾರ್ಥ)

ಬೇರೆಯೇ ಮತ್ತೊಂದು ಫಲವೇ ಸಂಭವದಿಂದ ಎಂದರೆ ಸಂಭೂತಿಯಿಂದ, **ಕಾರ್ಯಬ್ರಹ್ಮದ ಉಪಾಸನೆಯಿಂದ, ಅಣಿಮಾ** ಮುಂತಾದ ಐಶ್ವರ್ಯರೂಪವಾದ (ಫಲವೇ ಆಗುವದೆಂದು) ಎನ್ನುವರು ಎಂದು ಹೇಳಿರುತ್ತಾರೆಂದರ್ಥ. ಮತ್ತು ಇದರಂತೆ ಅಸಂಭವದಿಂದ ಎಂದರೆ ಅಸಂಭೂತಿಯಿಂದ, ಅವ್ಯಾಕೃತದಿಂದ; ಅವ್ಯಾಕೃತದ ಉಪಾಸನೆಯಿಂದ ಬೇರೆಯ (ಫಲವೇ ಆಗುವದೆಂದು) ಹೇಳಿರುತ್ತಾರೆ. ಇದನ್ನೇ "ಕುರುಡುಗತ್ತಲೆಯನ್ನು ಪ್ರವೇಶಿಸುತ್ತಾರೆ" ಎಂದು (ಹಿಂದಿನ ಮಂತ್ರದಲ್ಲಿ) ಹೇಳಿರುತ್ತದೆ. **ಪೌರಾಣಿಕರು** (ಇದನ್ನು) **ಪ್ರಕೃತಿಲಯ**[2] ವೆಂದು ಕರೆಯುತ್ತಾರೆ. ಹೀಗೆ ತಿಳಿದವರ ವಚನವನ್ನು ಕೇಳಿರುತ್ತೇವೆ, ಅವರು ನಮಗೆ ಅದನ್ನು ಎಂದರೆ ವ್ಯಾಕೃತಾವ್ಯಾಕೃತೋಪಾಸನೆಗಳ ಫಲವನ್ನು ವಿವರಿಸಿ ಹೇಳಿರುತ್ತಾರೆ ಎಂದರ್ಥ ॥೧೩॥

(ಭಾಷ್ಯ)

೨೮. ಯತ ಏವಮ್, ಅತಃ ಸಮುಚ್ಚಯಃ ಸಮ್ಭೂತ್ಯಸಮ್ಭೂತ್ಯುಪಾಸನಯೋರ್ಯುಕ್ತ ಏವ । ಏಕಪುರುಷಾರ್ಥತ್ವಾಜ್ಜ್ಯೇತ್ಯಾಹ—

---

1. ಅಣಿಮಾ (ತೀರ ಸಣ್ಣವನಾಗುವದು), ಮಹಿಮಾ (ತೀರ ದೊಡ್ಡವನಾಗುವದು), ಗರಿಮಾ (ತೀರ ತೂಕವಾಗುವದು), ಲಘಿಮಾ (ತೀರ ಹಗುರವಾಗುವದು), ಪ್ರಾಪ್ತಿ (ಎಷ್ಟು ದೂರದಲ್ಲಿದ್ದ ವಸ್ತುವನ್ನಾದರೂ ಮುಟ್ಟುವದು), ಪ್ರಾಕಾಮ್ಯ (ಕೋರಿದ್ದನ್ನು ಹೊಂದುವದು), ಈಶಿತ್ವಮ್ (ಯಾವದನ್ನು ಬೇಕಾದರೂ ಸ್ವಾಧೀನಪಡಿಸಿಕೊಳ್ಳುವದು), ವಶಿತ್ವಮ್ (ಶರೀರೇಂದ್ರಿಯಾದಿಗಳನ್ನು ಅಧೀನದಲ್ಲಿಟ್ಟುಕೊಂಡಿರುವದು)—ಇವು ಎಂಟು ಐಶ್ವರ್ಯಗಳೆಂದು ಯೋಗಶಾಸ್ತ್ರದ ಪ್ರಸಿದ್ಧಿ.

2. ಪ್ರಕೃತಿಲಯವೆಂದರೆ ಅವ್ಯಾಕೃತವೆಂಬ ಅವ್ಯಕ್ತದಲ್ಲಿ ಸೇರಿಹೋಗುವದು; ನಿದ್ರೆಯಲ್ಲಿರುವಂತೆ ದುಃಖವಿಲ್ಲದೆ ಸುಖದಿಂದ ಬಹುಕಾಲವಿರುವಂಥ ಸ್ಥಿತಿ. ವಿ.ಪು. ೧-೬-೪೧.

(ಭಾಷ್ಯಾರ್ಥ)

ಹೀಗಿರುವದರಿಂದ ಸಂಭೂತಿ, ಅಸಂಭೂತಿ—ಇವುಗಳನ್ನು ಸೇರಿಸಿ (ಉಪಾಸನೆ ಮಾಡುವದು) ಯುಕ್ತವೇ (ಆಗಿದೆ). ಇವುಗಳಿಗೆ ಒಂದೇ ಪುರುಷಾರ್ಥವಾಗಬೇಕಾಗಿರುವದರಿಂದಲೂ (ಸೇರಿಸಿಕೊಂಡು ಉಪಾಸನೆಮಾಡುವದು ಯುಕ್ತವಾಗಿದೆ)—ಎಂದು (ಮುಂದಿನ ಮಂತ್ರವು) ಹೇಳುತ್ತಿದೆ:

ಸಮ್ಭೂತಿಂ ಚ ವಿನಾಶಂ ಚ
ಯಸ್ತದ್ವೇದೋಭಯಗ್ಂ ಸಹ।
ವಿನಾಶೇನ ಮೃತ್ಯುಂ ತೀರ್ತ್ವಾ
ಸಮ್ಭೂತ್ಯಾಮೃತಮಶ್ನುತೇ ॥ ೧೪ ॥

೧೪. ಸಮ್ಭೂತಿಯನ್ನೂ ವಿನಾಶವನ್ನೂ ಯಾವಾತನು ಆ ಎರಡನ್ನೂ ಸೇರಿಸಿಕೊಂಡು ಅರಿಯುತ್ತಾನೋ (ಆತನು) ವಿನಾಶದಿಂದ ಮೃತ್ಯುವನ್ನು ದಾಟಿ ಸಂಭೂತಿಯಿಂದ ಅಮೃತವನ್ನು ಪಡೆಯುವನು.

(ಭಾಷ್ಯ)

೧೪. ಸಮ್ಭೂತಿಂ ಚ ವಿನಾಶಂ ಚ ಯಸ್ತದ್ವೇದ ಉಭಯಂ ಸಹ, ವಿನಾಶೇನ ವಿನಾಶೋ ಧರ್ಮೋ ಯಸ್ಯ ಕಾರ್ಯಸ್ಯ ಸ ತೇನ ಧರ್ಮಿಣಾ ಅಭೇದೇನೋಚ್ಯತೇ 'ವಿನಾಶ' ಇತಿ। ತೇನ ತದುಪಾಸನೇನ ಅನೈಶ್ವರ್ಯಮ್ ಅಧರ್ಮಕಾಮಾದಿದೋಷಜಾತಂ ಚ ಮೃತ್ಯುಂ ತೀರ್ತ್ವಾ। ಹಿರಣ್ಯಗರ್ಭೋಪಾಸನೇನ ಹಿ ಅಣಿಮಾದಿಪ್ರಾಪ್ತಿಃ ಫಲಮ್। ತೇನ ಅನೈಶ್ವರ್ಯಾದಿ ಮೃತ್ಯುಮ್ ಅತೀತ್ಯ। ಅಸಮ್ಭೂತ್ಯಾ ಅವ್ಯಾಕೃತೋಪಾಸನಯಾ ಅಮೃತಂ ಪ್ರಕೃತಿಲಯಲಕ್ಷಣಮ್ ಅಶ್ನುತೇ। "ಸಮ್ಭೂತಿಂ ಚ ವಿನಾಶಂ ಚ" ಇತ್ಯತ್ರ ಅವರ್ಣಲೋಪೇನ ನಿರ್ದೇಶೋ ದ್ರಷ್ಟವ್ಯಃ ಪ್ರಕೃತಿಲಯಫಲಶ್ರುತ್ಯನುರೋಧಾತ್ ॥

(ಭಾಷ್ಯಾರ್ಥ)

ಸಂಭೂತಿಯನ್ನೂ ವಿನಾಶವನ್ನೂ ಯಾವಾತನು ಎರಡನ್ನೂ ಸೇರಿಸಿ ಅರಿಯುತ್ತಾನೋ (ಆತನು) ವಿನಾಶದಿಂದ—ವಿನಾಶವು[1] ಕಾರ್ಯದ ಧರ್ಮವಷ್ಟೆ, ಆ ಧರ್ಮಿಗೂ ತನಗೂ ಭೇದವಿಲ್ಲವೆಂದಿಟ್ಟುಕೊಂಡು (ಕಾರ್ಯವನ್ನು) ವಿನಾಶವೆಂದೇ (ಇಲ್ಲಿ) ಕರೆದಿರುತ್ತದೆ. ಆ (ವಿನಾಶದಿಂದ)[2] ಎಂದರೆ ಅದರ ಉಪಾಸನೆಯಿಂದ

1. ಕಾರ್ಯಕ್ಕೆ ವಿನಾಶವೆಂಬುದು ಧರ್ಮವು; ವ್ಯಾಕೃತವು ಕಾರ್ಯವಾದ್ದರಿಂದ ವಿನಾಶಿಯಾಗಿರುತ್ತದೆ. ವಿನಾಶಿಯಾದ ವ್ಯಾಕೃತವನ್ನು ವಿನಾಶವೆಂದು ಕರೆದಿರುವದು ಧರ್ಮ ಧರ್ಮಿಗಳ ಅಭೇದೋಪಚಾರದಿಂದ. "ವಿದ್ಯಾವರತರಿಗೆ ಗೌರವ" ಎಂಬರ್ಥದಲ್ಲಿ "ವಿದ್ಯೆಗೆ ಗೌರವ" ಎಂಬ ಪ್ರಯೋಗದಂತೆಯೇ ಇದು.

2. ವಿನಾಶದಿಂದ ಎಂಬ ಮಾತು ಭಾಷ್ಯದಲ್ಲಿ ಬಿಟ್ಟುಹೋಗಿರಬೇಕೆಂದು ತೋರುವದು.

ಐಶ್ವರ್ಯವಿಲ್ಲದಿರುವದು, ಅಧರ್ಮ, ಕಾಮ—ಮುಂತಾದ ದೋಷಸಮೂಹವೆಂಬ **ಮೃತ್ಯುವನ್ನು** ದಾಟಿ—ಹಿರಣ್ಯಗರ್ಭನ ಉಪಾಸನೆಯಿಂದಲ್ಲವೆ[1], ಅಣಿಮಾದಿಗಳ ಪ್ರಾಪ್ತಿಯಾಗುವದು? ಆದರಿಂದ ಐಶ್ವರ್ಯವಿಲ್ಲದಿರುವದೇ ಮುಂತಾದ ಮೃತ್ಯುವನ್ನು ಮೀರಿ ಹೋಗಿ—ಅಸಂಭೂತಿಯಿಂದ[2] ಎಂದರೆ ಅವ್ಯಾಕೃತೋಪಾಸನೆಯಿಂದ **ಅಮೃತವನ್ನು** ಎಂದರೆ ಪ್ರಕೃತಿಲಯರೂಪವಾದ (ಅಮೃತವನ್ನು) ಪಡೆದುಕೊಳ್ಳುವನು.

"ಸಮ್ಭೂತಿಂ ಚ ವಿನಾಶಂ ಚ" (ಸಂಭೂತಿಯನ್ನೂ ವಿನಾಶವನ್ನೂ) ಎಂಬಲ್ಲಿ ಅಕಾರವನ್ನು ಲೋಪಿಸಿ (ಸಮ್ಭೂತಿಮ್ ಎಂದು) ಪ್ರಯೋಗವನ್ನು ಮಾಡಿರುತ್ತದೆ ಎಂದು ತಿಳಿಯಬೇಕು, ಏಕೆಂದರೆ (ಮುಂದೆ ಇರುವ) ಪ್ರಕೃತಿಲಯವೆಂಬ ಫಲ ಶ್ರುತಿಗೆ[3] ಇದು ಅನುಗುಣವಾಗುತ್ತದೆ. ॥ ೧೪ ॥

ಸಮುಚ್ಚಯೋಪಾಸಕನು ಮಾಡುವ ಮರಣಕಾಲದ ಪ್ರಾರ್ಥನೆ

(ಭಾಷ್ಯ)

೩೦. ಮಾನುಷದೈವವಿತ್ತಸಾಧ್ಯಂ ಫಲಂ ಶಾಸ್ತ್ರಲಕ್ಷಣಂ ಪ್ರಕೃತಿಲಯಾನ್ತಮ್ । ಏತಾವತೀ ಸಂಸಾರಗತಿಃ । ಅತಃ ಪರಂ ಪೂರ್ವೋಕ್ತಂ "ಆತ್ಮೈವಾಭೂದ್ವಿಜಾನತಃ ॥ (೭) ಇತಿ ಸರ್ವಾತ್ಮಭಾವ ಏವ ಸರ್ವೈಷಣಾಸಂನ್ಯಾಸಜ್ಞಾನನಿಷ್ಠಾಫಲಮ್ । ಏವಂ ದ್ವಿಪ್ರಕಾರಃ ಪ್ರವೃತ್ತಿನಿವೃತ್ತಿಲಕ್ಷಣೋ ವೇದಾರ್ಥೋಽತ್ರ ಪ್ರಕಾಶಿತಃ । ತತ್ರ ಪ್ರವೃತ್ತಿಲಕ್ಷಣಸ್ಯ ವೇದಾರ್ಥಸ್ಯ ವಿಧಿಪ್ರತಿಷೇಧಲಕ್ಷಣಸ್ಯ ಕೃತ್ಸ್ನಸ್ಯ ಪ್ರಕಾಶನೇ **ಪ್ರವರ್ಗ್ಯಾನ್ತಂ ಬ್ರಾಹ್ಮಣಮ್** ಉಪಯುಕ್ತಮ್ । ನಿವೃತ್ತಿಲಕ್ಷಣಸ್ಯ ಪ್ರಕಾಶನೇ ಅತ ಊರ್ಧ್ವಂ **ಬೃಹದಾರಣ್ಯಕಮ್** । ತತ್ರ ನಿಷೇಕಾದಿಶ್ಮಶಾನಾನ್ತಂ ಕರ್ಮ ಕುರ್ವನ್ ಜಿಜೀವಿಷೇದ್ ಯೋ ವಿದ್ಯಯಾ ಸಹ **ಅಪರಬ್ರಹ್ಮವಿಷಯಯಾ** ತದುಕ್ತಂ "ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಗ್ಂ ಸಹ । ಅವಿದ್ಯಯಾ ಮೃತ್ಯುಂ ತೀತ್ವಾ ವಿದ್ಯಯಾಮೃತಮಶ್ನುತೇ" (೧೧) ಇತಿ । ತತ್ರ ಕೇನ ಮಾರ್ಗೇಣ ಅಮೃತತ್ವಮಶ್ನುತ ಇತಿ? ಉಚ್ಯತೇ ।

---

1. ಹಿರಣ್ಯಗರ್ಭನು ಸಮಗ್ರವಾದ ಐಶ್ವರ್ಯ, ಧರ್ಮ, ವೈರಾಗ್ಯ—ಮುಂತಾದ ಧರ್ಮಗಳಿಂದ ಕೂಡಿರುವವನು, ಅವನ ಉಪಾಸನೆಯಿಂದ ಅನೈಶ್ವರ್ಯ (ಪಾರತಂತ್ರ್ಯ)ವೇ ಮುಂತಾದ ದೋಷಗಳು ತೊಲಗುವವು, ಏಕೆಂದರೆ ಉಪಾಸಕನಿಗೆ ಉಪಾಸ್ಯದ ಸ್ವರೂಪವೇ ಬರುವದು.

2. "ತೀರ್ತ್ವಾಸಮ್ಭೂತ್ಯಾ" ಎಂಬಲ್ಲಿ ತೀರ್ತ್ವಾ ಅಸಮ್ಭೂತ್ಯಾ ಎಂದು ಪದಚ್ಛೇದವನ್ನು ಮಾಡಿಕೊಳ್ಳಬೇಕೆಂದು ಭಾವ.

3. ಅಸಂಭೂತಿಯಿಂದ ಪ್ರಕೃತಿಯಲಯಫಲವಾಗುತ್ತದೆ ಎಂದು ಫಲವಾಕ್ಯದಲ್ಲಿದೆ; ಆದ್ದರಿಂದ ಅಲ್ಲಿ ವಿನಾಶವೆಂದರೆ ಸಂಭೂತಿಯೇ ಆಯಿತು. ಇದಕ್ಕನುಗುಣವಾಗಿ ಅರ್ಥಮಾಡಿದರೆ ಮೊದಲಿನ ವಾಕ್ಯದಲ್ಲಿ 'ವಿನಾಶವೆಂದರೆ ಸಂಭೂತಿಯೆಂದೂ 'ಸಂಭೂತಿ' ಎಂಬುದು ಅಸಂಭೂತಿಯೆಂಬರ್ಥದಲ್ಲಿ ಬಂದಿದೆಯೆಂದೂ ನಿರ್ಣಯವಾಗುತ್ತದೆ.

(ಭಾಷ್ಯಾರ್ಥ)

ಮಾನುಷದೈವವಿತ್ತಗಳಿಗೆ[1] ಶಾಸ್ತ್ರಪ್ರಮಾಣದಿಂದ ಸಿಕ್ಕುವ ಫಲಕ್ಕೆ ಪ್ರಕೃತಿಲಯವೇ ಕೊನೆ. ಇಲ್ಲಿಯವರೆಗೇ ಸಂಸಾರಗತಿ[2] ಯಿರುವದು. ಇನ್ನು ಮುಂದಕ್ಕೆ "ತಿಳಿದವನಿಗೆ ಆತ್ಮನೇ ಆಯಿತೋ" (೭) ಎಂದು (೫) ಮೊದಲೇ ಹೇಳಿರುವ ಏಷಣೆಗಳನ್ನೆಲ್ಲ ಬಿಟ್ಟು ಜ್ಞಾನನಿಷ್ಠೆಯಿಂದ ಸಿಕ್ಕುವ ಸರ್ವಾತ್ಮಭಾವವೆಂಬ ಫಲವು.[3] ಹೀಗೆ ಪ್ರವೃತ್ತಿ, ನಿವೃತ್ತಿ—ಎಂಬ ಎರಡು ಬಗೆಯ ವೇದಾರ್ಥವನ್ನು ಇಲ್ಲಿ[4] ತಿಳಿಸಿ ಕೊಟ್ಟಿರುತ್ತದೆ ಇವೆರಡರಲ್ಲಿ ವಿಧಿ, ಪ್ರತಿಷೇಧ—ಎಂಬ ರೂಪದಲ್ಲಿರುವ **ಪ್ರವೃತ್ತಿರೂಪವಾದ** ವೇದಾರ್ಥವೆಲ್ಲವನ್ನೂ ವಿವರಿಸುವದಕ್ಕೆ **ಪ್ರವರ್ಗ್ಯದವರೆಗಿನ ಬ್ರಾಹ್ಮಣವು** ಬೇಕಾಗುತ್ತದೆ. ನಿವೃತ್ತಿರೂಪವಾದ (ವೇದಾರ್ಥವನ್ನು) ವಿವರಿಸುವದಕ್ಕೆ ಇಲ್ಲಿಂದ ಮುಂದಕ್ಕಿರುವ **ಬೃಹದಾರಣ್ಯಕವು**[5] (ಉಪಯೋಗವಾಗುವದು). ಹೀಗಿರುವಲ್ಲಿ ನಿಷೇಕವು ಮೊದಲಾಗಿ ಶ್ಮಶಾನದವರೆಗಿನ[6] ಕರ್ಮವನ್ನು ಮಾಡುತ್ತಾ ಬಾಳಬೇಕೆಂದೂ **ಅಪರಬ್ರಹ್ಮವಿಷಯವಾದ** ವಿದ್ಯೆಯೊಡನೆ[7] (ಆ ಕರ್ಮವನ್ನು ಮಾಡಿಕೊಂಡಿರಬೇಕೆಂದೂ) ಯಾವನು ಬಯಸುವನೋ ಅವನ ವಿಷಯದಲ್ಲಿ[8] "ವಿದ್ಯೆಯನ್ನೂ ಅವಿದ್ಯೆಯನ್ನೂ ಆ ಎರಡನ್ನೂ ಸೇರಿಸಿ ಯಾವಾತನು ಅರಿಯುತ್ತಾನೋ

---

1. ಮಾನುಷವಿತ್ತವೆಂದರೆ ಕರ್ಮ, ದೈವವಿತ್ತವೆಂದರೆ ಉಪಾಸನೆ ಬೃ. ಭಾ. ೧-೪-೧೭ ನೋಡಿರಿ.

2. ಮನು. ೧೨-೧೩ರಲ್ಲಿ ಉತ್ತಮಸಾತ್ತ್ವಿಕಗತಿಯನ್ನು ಹೇಳುವ ಪ್ರಸಂಗದಲ್ಲಿ 'ಅವ್ಯಕ್ತ'ವೆಂಬ ಹೆಸರಿನಿಂದ ಪ್ರಕೃತಿಲಯವನ್ನು ಹೇಳಿರುತ್ತದೆ. ಸಂಸಾರಗತಿಯ ಕೊನೆಯನ್ನು ವಿವರಿಸುವ ಮುಂ. ೧-೨ ೧೧ ಬೃ. ೩-೨-೧೩, ೩-೩-೧ ಈ ಭಾಷ್ಯವಾಕ್ಯಗಳನ್ನು ನೋಡಿರಿ.

3. ಸರ್ವಾತ್ಮಭಾವವು ನಿತ್ಯಸಿದ್ಧವಾಗಿದೆಯಾದರೂ ಜ್ಞಾನನಿಷ್ಠೆಯ ಹೊರತು ಅದರ ಅಪರೋಕ್ಷವಾದ ಅರಿವಾಗುವದಿಲ್ಲವಾದ್ದರಿಂದ ಅದನ್ನು ಫಲವೆಂದು ಉಪಚಾರಕ್ಕೆ ಕರೆದಿರುತ್ತದೆ.

4 ಇದುವರೆಗಿನ ಅಧ್ಯಾಯಗಳಲ್ಲಿ ಕರ್ಮವನ್ನೇ ಹೇಳಿರುತ್ತದೆಯಾದರೂ ಈ ನಲವತ್ತನೆಯ ಅಧ್ಯಾಯದಲ್ಲಿ ಕರ್ಮ, ಉಪಾಸನೆ, ಜ್ಞಾನ—ಎಲ್ಲವನ್ನೂ ಹೇಳಿರುತ್ತದೆ. ಕರ್ಮೋಪಾಸನೆಗಳೆರಡೂ ಪ್ರವೃತ್ತಿಧರ್ಮದಲ್ಲಿ ಸೇರಿರುತ್ತವೆ ಜ್ಞಾನವು ನಿವೃತ್ತಿಧರ್ಮವು.

5. ಈ ವೇದಕ್ಕೆ ಸೇರಿದ ಶತಪಥಬ್ರಾಹ್ಮಣದಲ್ಲಿ ಏಕಪಾತ್ ಮುಂತಾಗಿ 'ಪ್ರವರ್ಗ್ಯ' ವೆಂಬವರೆಗೆ ಹದಿನಾರು ಕಾಂಡಗಳಿವೆ. ಪ್ರವರ್ಗ್ಯದ ಎರಡು ಅಧ್ಯಾಯಗಳು ಮುಗಿಯುವವರೆಗೆ ವಿಧಿಪ್ರತಿಷೇಧರೂಪವಾದ ಧರ್ಮವನ್ನೇ ಹೇಳಿರುತ್ತದೆ. ಪ್ರವರ್ಗ್ಯದ ಮೂರನೆಯ ಅಧ್ಯಾಯವು ಬೃಹದಾರಣ್ಯಕೋಪನಿಷತ್ತಿನ ಮೊದಲನೆಯ ಅಧ್ಯಾಯವು; ಆ ಉಪನಿಷತ್ತಿನಲ್ಲಿ ನಿವೃತ್ತಿಧರ್ಮವನ್ನು ಹೇಳಿರುತ್ತದೆ.

6. ಗರ್ಭಾಧಾನದಿಂದ ಅಂತ್ಯೇಷ್ಟಿಯವರೆಗಿನ ಮನು ೨-೧೬.

7. ಹಿರಣ್ಯಗರ್ಭನ ಉಪಾಸನೆಯೊಡನೆ.

8. ತತ್=ತಸ್ಮಿನ್ ವಿಷಯೇ.

(ಆತನು) ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತವನ್ನು ಪಡೆಯುವನು" ಎಂದು ಹೇಳಿದ್ದಾಯಿತು. ಅಲ್ಲಿ ಯಾವ ಮಾರ್ಗದಿಂದ[1] ಅಮೃತತ್ವವನ್ನು ಪಡೆಯುವನು?—ಎಂಬುದನ್ನು ಈಗ ಹೇಳುತ್ತಾರೆ.

(ಭಾಷ್ಯ)

೩೧. "ತದ್ಯತ್ ಸತ್ಯಮಸೌ ಸ ಆದಿತ್ಯೋ ಯ ಏಷ ಏತಸ್ಮಿನ್ಮಂಡಲೇ ಪುರುಷೋ ಯಶ್ಚಾಯಂ ದಕ್ಷಿಣೇಽರ್ಕ್ಷ ಪುರುಷಃ" (ಬೃ. ೫-೫-೨) ಏತದುಭಯಂ ಸತ್ಯಂ ಬ್ರಹ್ಮೋಪಾಸೀನೋ ಯಥೋಕ್ತಕರ್ಮಕೃಚ್ಚ ಯಃ, ಸೋಽನ್ತಕಾಲೇ ಪ್ರಾಪ್ತೇ ಸತ್ಯಾತ್ಮಾನಮಾತ್ಮನಃ ಪ್ರಾಪ್ತಿದ್ವಾರಂ ಯಾಚತೇ—

(ಭಾಷ್ಯಾರ್ಥ)

"ಆ ಸತ್ಯವೆಂಬುದು ಈ ಮಂಡಲದಲ್ಲಿರುವ ಪುರುಷನಿದ್ದಾನಲ್ಲ, ಆ ಆದಿತ್ಯನೇ; ಮತ್ತು ಈ ಬಲಗಣ್ಣಿನಲ್ಲಿರುವ ಪುರುಷನಿದಾನಲ್ಲ (ಅವನೇ)" (ಬೃ. ೫-೫-೨) ಈ ಎರಡು (ಬಗೆಯಾದ) ಸತ್ಯವೆಂಬ[2] ಬ್ರಹ್ಮವನ್ನು ಉಪಾಸನೆಮಾಡುತ್ತಾ (ಶಾಸ್ತ್ರದಲ್ಲಿ) ಹೇಳಿರುವಂತೆ ಕರ್ಮವನ್ನು ಮಾಡುತ್ತಾ ಇರುವವನು ಯಾರೋ ಆತನು ಮರಣಕಾಲವು ಒದಗಲಾಗಿ ಆತ್ಮನನ್ನು ಪಡೆಯುವದಕ್ಕೆ ದ್ವಾರವನ್ನು (ಕೊಡಬೇಕೆಂದು) ಸತ್ಯಾತ್ಮನನ್ನು (ಈ ರೀತಿಯಲ್ಲಿ) ವ್ಯಾರ್ಥಿಸುತ್ತಾನೆ.—

ಹಿರಣ್ಮಯೇನ ಪಾತ್ರೇಣ
ಸತ್ಯಸ್ಯಾಪಿಹಿತಂ ಮುಖಮ್ ।
ತತ್ತ್ವಂ ಪೂಷನ್ನಪಾವೃಣು
ಸತ್ಯಧರ್ಮಾಯ ದೃಷ್ಟಯೇ ॥ ೧೫ ॥

೧೫. ಹಿರಣ್ಯಮಯವಾದ ಪಾತ್ರೆಯಿಂದ ಸತ್ಯದ ಮುಖವು ಮುಚ್ಚಿರುತ್ತದೆ. ಅದನ್ನು ಎಲೈ ಪೂಷನೆ, ಸತ್ಯಧರ್ಮನಾದ ನನಗೆ (ಸತ್ಯವು) ಕಾಣುವದಕ್ಕಾಗಿ ತೆರೆಯುವವನಾಗು.

---

1. ಉಪಾಸನೆಯಲ್ಲಿ ಧ್ಯೇಯವಾದ ದೇವತೆಯನ್ನೇ ಅಲ್ಲದೆ ಆ ದೇವತೆಯನ್ನು ಪಡೆಯುವದಕ್ಕೆ ಸತ್ತಬಳಿಕ ಅನುಸರಿಸಬೇಕಾದ ಮಾರ್ಗವನ್ನೂ ಧ್ಯಾನಿಸಬೇಕಾಗುವದು.

2. ಸಮಷ್ಟಿಹೃದಯ(ಬುದ್ಧಿ)ಯನ್ನು ಸತ್ಯಬ್ರಹ್ಮವೆಂದು ಉಪಾಸನೆಮಾಡಬೇಕೆಂದು ಹೇಳುವದಕ್ಕೆ ಪ್ರಾರಂಭಿಸಿ ಸತ್ಯಬ್ರಹ್ಮವು ಸೂರ್ಯಮಂಡಲದಲ್ಲಿಯೂ ಪುರುಷನ ಬಲಗಣ್ಣಿನಲ್ಲಿಯೂ ಇದೆ ಎಂದು ಉಪಾಸನೆಮಾಡಬೇಕೆಂದು ಬೃಹದಾರಣ್ಯಕದಲ್ಲಿ ವಿಧಿಸಿದೆ. ಅಧ್ಯಾತ್ಮ, ಅಧಿದೈವತ—ಹೀಗೆ ಎರಡು ರೂಪದಿಂದಿರುವ ಈ ಸತ್ಯಬ್ರಹ್ಮವನ್ನು.

(ಭಾಷ್ಯ)

೩೨. ಹಿರಣ್ಮಯೇನ ಪಾತ್ರೇಣ । ಹಿರಣ್ಮಯಮಿವ ಹಿರಣ್ಮಯಮ್, ಜ್ಯೋತಿರ್ಮಯಮಿತ್ಯೇತತ್ । ತೇನ ಪಾತ್ರೇಣೇವ ಅಪಿಧಾನಭೂತೇನ ಸತ್ಯಸ್ಯ ಆದಿತ್ಯಮಂಡಲಸ್ಥಸ್ಯ ಬ್ರಹ್ಮಣಃ ಅಪಿಹಿತಮ್ ಆಚ್ಛಾದಿತಂ ಮುಖಂ ದ್ವಾರಮ್ । ತತ್ ತ್ವಂ ಹೇ ಪೂರ್ಷನ್, ಅಪಾವೃಣು ಅಪಸಾರಯ । ಸತ್ಯಧರ್ಮಾಯ । ತವ ಸತ್ಯಸ್ಯ ಉಪಾಸನಾತ್ ಸತ್ಯಂ ಧರ್ಮೋ ಯಸ್ಯ ಸೋಽಹಂ ಸತ್ಯಧರ್ಮಾ; ತಸ್ಮೈ ಮಹ್ಯಮ್ । ಅಥವಾ ಯಥಾಭೂತಸ್ಯ ಧರ್ಮಸ್ಯ ಅನುಷ್ಠಾತ್ರೇ । ದೃಷ್ಟಯೇ ತವ ಸತ್ಯಾತ್ಮನ ಉಪಲಬ್ಧಯೇ ॥

(ಭಾಷ್ಯಾರ್ಥ)

ಹಿರಣ್ಮಯವಾದ ಪಾತ್ರೆಯಿಂದ, ಹಿರಣ್ಮಯನೆಂದರೆ "ಚಿನ್ನದಿಂದಾಗಿರುವಂತೆ ಇರುವದು, ಪ್ರಕಾಶಮಯವಾದದ್ದು[1] ಎಂದರ್ಥ. ಪಾತ್ರೆಯಂತೆ ಮರೆಯಾಗಿರುವ ಆದರಿಂದ ಆದಿತ್ಯಮಂಡಲದಲ್ಲಿರುವ ಸತ್ಯಬ್ರಹ್ಮದ ಮುಖವು ಎಂದರೆ ದ್ವಾರವು ಮುಚ್ಚಿರುತ್ತದೆ, ಹೊದಿಸಲ್ಪಟ್ಟಿರುತ್ತದೆ.[2] ಅದನ್ನು ನೀನು, ಎಲೈ ಪೂಷನೆ, ತೆರೆಯುವವನಾಗು, (ತೆಗೆದು) ಅತ್ತ ಸರಿಯಿಸುವವನಾಗು ಸತ್ಯಧರ್ಮನಾದ (ನನಗೆ) ಸತ್ಯನಾಗಿರುವ ನಿನ್ನನ್ನು ಉಪಾಸನೆಮಾಡುತ್ತಿರುವದರಿಂದ ಸತ್ಯವೇ ಧರ್ಮವಾಗುಳ್ಳವನು ನಾನು, ಅಂಥ ನನಗೆ. ಅಥವಾ ಸತ್ಯವಾಗಿರುವ[3] ಧರ್ಮವನ್ನು ಅನುಷ್ಠಾನಮಾಡುತ್ತಿರುವ ನನಗೆ. ಕಾಣುವದಕ್ಕೋಸ್ಕರ, ಎಂದರೆ (ನಾನು) ಸತ್ಯಾತ್ಮನಾದ ನಿನ್ನನ್ನು ಕಾಣುವದಕ್ಕೋಸ್ಕರ (ಮುಚ್ಚಳವನ್ನು ತೆರೆಯುವವನಾಗು). ॥ ೧೫ ॥

ಪೂಷನ್ನೇಕರ್ಷೇ ಯಮ ಸೂರ್ಯ ಪ್ರಾಜಾಪತ್ಯ ವ್ಯೂಹ ರಶ್ಮೀನ್ । ಸಮೂಹ ತೇಜೋ ಯತ್ತೇ ರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ। ಯೋಽಸಾವಸೌ ಪುರುಷಃ ಸೋಽಹಮಸ್ಮಿ ॥ ೧೬ ॥

---

1. ಸೂರ್ಯಮಂಡಲವು ಚಿನ್ನದಿಂದಾಗಿರುವಂತೆ ಥಳಥಳಿಸುತ್ತಿರುವದು.

2. ಸೂರ್ಯಮಂಡಲದ ಕಿರಣಗಳು ಅದರಲ್ಲಿರುವ ಸತ್ಯಬ್ರಹ್ಮವನ್ನು ಕಾಣದಂತೆ ಮುಚ್ಚಿರುತ್ತವೆ. ಇಲ್ಲಿ ಮಂಡಲವೇ ಮುಚ್ಚಳವಾದ ಪಾತ್ರೆ; ಸತ್ಯಬ್ರಹ್ಮವೇ ಅದರೊಳಗೆ ಅಡಗಿರುವ ನಮಗೆ ಇಷ್ಟವಾದ ವಸ್ತು.

3. ಸತ್ಯಬ್ರಹ್ಮದಲ್ಲಿ ವ್ರತದಿಂದ ಉಪಾಸನೆಮಾಡುವವನು ಸತ್ಯಧರ್ಮನು ಎಂದು ಮೊದಲನೆಯ ಅರ್ಥ; ಸತ್ಯವಾದ ಎಂದರೆ ಅವಶ್ಯವಾಗಿ ಫಲವನ್ನು ಕೊಡುವ ಕರ್ಮೋಪಾಸನೆಗಳನ್ನು ಅನುಷ್ಠಾನ ಮಾಡುತ್ತಿರುವವನು ಎಂದು ಈಗಿನ ಅರ್ಥ. ಇಲ್ಲಿ **ಸೂರ್ಯದ್ವಾರವೆಂಬುದು ಉತ್ತರಾಯಣ** ಅಥವಾ **ದೇವಯಾನಮಾರ್ಗಕ್ಕೆ ಉಪಲಕ್ಷಣ.** ಮುಂ. ಭಾ. ೧-೨-೧೧ ನೋಡಿ.

೧೬. ಪೂಷನೆ, ಏಕರ್ಷಿಯೆ, ಯಮನೆ, ಸೂರ್ಯನೆ, ಪ್ರಾಜಾಪತ್ಯನೆ, ಕಿರಣಗಳನ್ನು ಹೋಗಲಾಡಿಸು; ತೇಜಸ್ಸನ್ನು ಕೂಡಿಸು; ನಿನ್ನ ಕಲ್ಯಾಣತಮವಾದ ರೂಪವು ಯಾವದುಂಟೋ ಆ ನಿನ್ನ (ರೂಪವನ್ನು) ನೋಡುವೆನು. ಆ ಪುರುಷನು ಯಾವನೋ ಅವನೇ ನಾನಾಗಿರುವೆನು.

(ಭಾಷ್ಯ)

೩೩. ಹೇ ಪೂರ್ಷ ಜಗತಃ ಪೋಷಣಾತ್ ಪೂಷಾ ರವಿಃ । ತಥಾ ಏಕ ಏವ ಋಷತಿ ಗಚ್ಛತೀತಿ ಏಕರ್ಷಿಃ । ಹೇ ಏಕರ್ಷೇ । ತಥಾ ಸರ್ವಸ್ಯ ಸಂಯಮನಾತ್ ಯಮಃ । ಹೇ ಯಮ । ತಥಾ ರಶ್ಮೀನಾಂ ಪ್ರಾಣಾನಾಂ ರಸಾನಾಂ ಚ ಸ್ವೀಕರಣಾತ್ ಸೂರ್ಯಃ । ಹೇ ಸೂರ್ಯ । ಪ್ರಜಾಪತೇರಪತ್ಯಂ ಪ್ರಾಜಾಪತ್ಯಃ । ಹೇ ಪ್ರಾಜಾಪತ್ಯ । ವ್ಯೂಹ ವಿಗಮಯ ರಶ್ಮೀನ್ ಸ್ವಾ । ಸಮೂಹ ಏಕೀಕುರು । ಉಪಸಂಹರ ತೇಜಃ ತಾವಕಂ ಜ್ಯೋತಿಃ । ಯತ್ ತೇ ತವ ರೂಪಂ ಕಲ್ಯಾಣತಮಮ್ ಅತ್ಯನ್ತ ಶೋಭನಂ ತತ್ ತೇ ತವಾತ್ಮನಃ ಪ್ರಸಾದಾತ್ ಪಶ್ಯಾಮಿ । ಕಿಂ ಚ ಅಹಂ ನ ತು ತ್ವಾಂ ಭೃತ್ಯವತ್ ಯಾಚೇ । ಯೋಽಸೌ ಆದಿತ್ಯಮಣ್ಡಲಸ್ಥಃ ಅಸೌ ವ್ಯಾಹೃತ್ಯವ ಯವಃ ಪುರುಷಃ ಪುರುಷಾಕಾರತ್ವಾತ್ । ಪೂರ್ಣಂ ವಾ ಅನೇನ ಪ್ರಾಣಬುದ್ಧಾಶ ತ್ಮನಾ ಜಗತ್ ಸಮಸ್ತಮಿತಿ ಪುರುಷಃ । ಪುರಿ ಶಯನಾದ್ವಾ ಪುರುಷಃ । ಸಃ ಅಹಮ್ ಅಸ್ಮಿ ಭವಾಮಿ ॥

(ಭಾಷ್ಯಾರ್ಥ)

'ಎಲೈ ಪೂಷನೆ,' ಜಗತ್ತನ್ನು ಪೋಷಿಸುವದರಿಂದ ಸೂರ್ಯನಿಗೆ **ಪೂಷ**ನೆಂದು ಹೆಸರು. ಮತ್ತು ಒಬ್ಬನೇ ಋಷತಿ ನಡೆಯುತ್ತಾನೆ. ಆದ್ದರಿಂದ (ಅವನು) **ಏಕರ್ಷಿ**ಯು, ಆದ್ದರಿಂದ ಎಲೈ ಏಕರ್ಷಿಯೆ (ಎಂದು ಕರೆದಿದೆ). ಹಾಗೂ ಎಲ್ಲವನ್ನೂ ತಡೆಯಲ್ಲಿಟ್ಟುಕೊಂಡಿರುವದರಿಂದ ಯಮನು; (ಆದ್ದರಿಂದ) ಎಲೈ ಯಮನೆ, (ಎಂದು ಕರೆದಿದೆ). ರಶ್ಮಿಗಳನ್ನೂ ಪ್ರಾಣಗಳನ್ನೂ ರಸಗಳನ್ನೂ ಸ್ವೀಕರಿಸುವದರಿಂದ (ಅವನು) **ಸೂರ್ಯನು**, (ಆದ್ದರಿಂದ) ಎಲೈ ಸೂರ್ಯನೆ (ಎಂದು ಕರೆದಿದ). ಪ್ರಜಾಪತಿಯ ಮಗನಾದ್ದರಿಂದ ಇವನು **ಪ್ರಾಜಾಪತ್ಯನು**, (ಆದ್ದರಿಂದ) ಎಲೈ ಪ್ರಾಜಾಪತ್ಯನೆ (ಎಂದು ಕರೆದಿದೆ). ನಿನ್ನ ಕಿರಣಗಳನ್ನು ಹೋಗಲಾಡಿಸು, ಅತ್ತ ತೊಲಗಿಸು. ತೇಜಸ್ಸನ್ನು ಎಂದರೆ ಸುಡುವ ನಿನ್ನ ಬೆಳಕನ್ನು ಕೂಡಿಸು, ಒಕ್ಕಡೆಗೆ ತರುವನಾಗು, ಹಿಂದಕ್ಕೆಳೆದುಕೊ. ನಿನ್ನ ಕಲ್ಯಾಣತಮವಾದ ಎಂದರೆ ಅತ್ಯಂತ ಸುಂದರವಾದ ನಿನ್ನ ರೂಪವು ಯಾವದುಂಟೋ ಅದನ್ನು ಆತ್ಮನಾದ ನಿನ್ನ ಪ್ರಸಾದದಿಂದ ನೋಡುವೆನು. ಮತ್ತು ನಾನು ನಿನ್ನನ್ನು ಸೇವಕನಂತೆ ಯಾಚಿಸುತ್ತಿರುವದಿಲ್ಲ.

ಆದಿತ್ಯಮಂಡಲದಲ್ಲಿರುವ ಅ (ಪುರುಷನುಂಟಲ್ಲ), ಅ ವ್ಯಾಹೃತಿಗಳೆಂಬ ಅವಯವ[1] ಗಳುಳ್ಳ ಪುರುಷನುಂಟಲ್ಲ—ಪುರುಷನ ಆಕಾರದಿಂದಿರುವದರಿಂದಲೋ[2] ಜಗತ್ತೆಲ್ಲವೂ ಪ್ರಾಣಬುದ್ಧಿಗಳ ರೂಪದಿಂದ[3] ಈತನಿಂದ ಪೂರ್ಣವಾಗಿರುವದರಿಂದಲೋ ಇವನು **ಪುರುಷನೆನಿಸಿರುವನು.** ಪುರದಲ್ಲಿದ್ದು[4] ಕೊಂಡಿರುವದರಿಂದಲಾದರೂ (ಇವನು) ಪುರುಷನು. (ಇಂಥ ಪುರುಷನುಂಟಲ್ಲ)—ಅವನು ನಾನಾಗಿರುವೆನು. ॥ ೧೬ ॥

ವಾಯುರನಿಲಮಮೃತ-
ಮಥೇದಂ ಭಸ್ಮಾನ್ತಗ್ಂ ಶರೀರಮ್ ।
ಓಂ ಕ್ರತೋ ಸ್ಮರ ಕೃತಗ್ಂ ಸ್ಮರ
ಕ್ರತೋ ಸ್ಮರ ಕೃತಗ್ಂ ಸ್ಮರ ॥ ೧೭ ॥

೧೭. ವಾಯುವು ಸಾವಿಲ್ಲದ ಅನಿಲನನ್ನು (ಸೇರಲಿ); ಆಮೇಲೆ ಈ ಶರೀರವು ಭಸ್ಮಾಂತ(ವಾಗಲಿ)! ಓಂ ಕ್ರತುವೆ ಸ್ಮರಿಸು, ಮಾಡಿರುವದನ್ನು ಸ್ಮರಿಸು. ಕ್ರತುವೆ ಸ್ಮರಿಸು, ಮಾಡಿರುವದನ್ನು ಸ್ಮರಿಸು.

(ಭಾಷ್ಯ)

೩೪. ಅಥೇದಾನೀಂ ಮಮ ಮರಿಷ್ಯತೋ ವಾಯುಃ ಪ್ರಾಣಃ ಅಧ್ಯಾತ್ಮಪರಿಚ್ಛೇದಂ ಹಿತ್ವಾ ಅಧಿದೈವತಾತ್ಮಾನಂ ಸರ್ವಾತ್ಮಕಮ್ ಅನಿಲಮ್ ಅಮೃತಂ ಸೂತ್ರಾತ್ಮಾನಂ 'ಪ್ರತಿಪದ್ಯತಾಮ್' ಇತಿ ವಾಕ್ಯಶೇಷಃ। 'ಲಿಙ್ಗಂ ಚೇದಂ ಜ್ಞಾನಕರ್ಮಸಂಸ್ಕೃತಮ್ ಉತ್ಕ್ರಾಮತು' ಇತಿ ದ್ರಷ್ಟವ್ಯಮ್ | ಮಾರ್ಗಯಾಚನಸಾಮರ್ಥ್ಯಾತ್। ಅಥ ಇದಂ ಶರೀರಮ್ ಅಗ್ನೌ ಹುತಂ ಭಸ್ಮಾನ್ತಂ ಭಸ್ಮಾವಶೇಷಂ ಭೂಯಾತ್। 'ಓಂ' ಇತಿ ಯಥೋಪಾಸನಮ್ ಓಂ ಪ್ರತೀಕಾತ್ಮ

---

1. ಮೊದಲನೆಯ ಅಸೌ (ಅ) ಎಂಬ ಮಾತಿಗೆ ಆದಿತ್ಯಮಂಡಲದಲ್ಲಿರುವ ಎಂದರ್ಥ. ಎರಡನೆಯ ಅಸೌ ಎಂಬುದಕ್ಕೆ ವ್ಯಾಹೃತಿಗಳಂಬ ಅವಯವವುಳ್ಳವನೆಂದು ಪ್ರಸಿದ್ಧನಾದ ಎಂದರ್ಥ. ಭೂಃ ಎಂಬುದು ಶಿರಸ್ಸು, ಭುವಃ ಎಂಬುದು ಬಾಹುಗಳು, ಸ್ವಃ ಎಂಬುದು ಪಾದಗಳು, ಬೃ. ೫-೫-೩, ೪ ನೋಡಿರಿ.

2. ಬಾಹ್ಯಪುರುಷನು ಯಾವ ಆಕಾರವೋ ಅದರಿಂದ ಪರಿಚ್ಛಿನ್ನವಾದ ಲಿಂಗಶರೀರವೂ ಅದೇ ಆಕಾರವೇ.

3. ಕ್ರಿಯಾಶಕ್ತಿ, ಜ್ಞಾನಶಕ್ತಿ—ಇವೆರಡೂ ಹಿರಣ್ಯಗರ್ಭನಿಗೆ ಸೇರಿದವು. ಮುಂ. ಭಾ. ೧-೧-೪ ನೋಡಿ.

4. ಶರೀರವೆಂಬ ಪುರದಲ್ಲಿ ಹೃದಯದಲ್ಲಿರುವಾತಮ ಬೃ. ೫-೬-೧. ಈ ಮಂತ್ರವನ್ನೂ ಮುಂದಿನ ಮಂತ್ರ ಎರಡು ಮಂತ್ರಗಳನ್ನೂ ಬೃ. ೫-೧೫-೧ ರಲ್ಲಿ ವಿವರಿಸಿರುವ ರೀತಿಯನ್ನು ಹೋಲಿಸಿ ನೋಡಿರಿ.

ಕತ್ವಾತ್ ಸತ್ಯಾತ್ಮಕಮ್ ಅಗ್ನ್ಯಾಖ್ಯಂ ಬ್ರಹ್ಮ ಅಭೇದೇನೋಚ್ಯತೇ । ಹೇ ಕ್ರತೋ ಸಙ್ಕಲ್ಪಾತ್ಮಕ ಸ್ಮರ ಯನ್ಮಮ ಸ್ಮರ್ತವ್ಯಮ್ । ತಸ್ಯ ಕಾಲೋಽಯಂ ಪ್ರತ್ಯುಪಸ್ಥಿತಃ । ಅತಃ ಸ್ಮರ ಏತಾವನ್ತಂ ಕಾಲಂ ಭಾವಿತಮ್ । ಕೃತಮ್ ಅಗ್ನೇ ಸ್ಮರ ಯನ್ಮಯಾ ಬಾಲ್ಯಪ್ರಭೃತ್ಯನುಷ್ಠಿತಂ ಕರ್ಮ ತಚ್ಚ ಸ್ಮರ । "ಕ್ರತೋ ಸ್ಮರ ಕೃತಂ ಸ್ಮರ" ಇತಿ ಪುನರ್ವಚನಮಾದರಾರ್ಥಮ್ ॥

(ಭಾಷ್ಯಾರ್ಥ)

ಇನ್ನು ಸಾಯುತ್ತಿರುವ ನನ್ನ ವಾಯುವು ಎಂದರೆ ಪ್ರಾಣವು ಈಗ ಅಧ್ಯಾತ್ಮದ ಕಟ್ಟಳತೆಯನ್ನು[1] ಬಿಟ್ಟು **ಅಧಿದೈವತ**ವಾಗಿರುವ ಸರ್ವಾತ್ಮನಾಗಿರುವ ಸಾವಿಲ್ಲದ ಅನಿಲನನ್ನು ಎಂದರೆ ಸೂತ್ರಾತ್ಮನನ್ನು[2] 'ಸೇರಿಕೊಳ್ಳಲಿ' ಎಂದು ವಾಕ್ಯಕ್ಕೆ ಸೇರಿಸಿ ಪೂರ್ತಿಮಾಡಿಕೊಳ್ಳಬೇಕು. ಈ **ಲಿಂಗ** (ಶರೀರವೂ) ಜ್ಞಾನ **ಕರ್ಮ**ಗಳಿಂದ[3] ಸಂಸ್ಕಾರವನ್ನು ಹೊಂದಿ (ದೇಹವನ್ನು ಬಿಟ್ಟು) ಮೇಲಕ್ಕೆ ಹೋಗಲಿ ಎಂದು ಅಧ್ಯಾಹಾರಮಾಡಿಕೊಳ್ಳಬೇಕು; (ಇಲ್ಲಿ) ಮಾರ್ಗವನ್ನು ಬೇಡಿಕೊಂಡಿರುವದರ ಸಾಮರ್ಥ್ಯದಿಂದ (ಹೀಗೆಂದು ಏರ್ಪಡುತ್ತದೆ).[4] ಇನ್ನು ಈ ಸ್ಥೂಲಶರೀರವು ಅಗ್ನಿಯಲ್ಲಿ ಹೋಮವಾಗಿ[5] ಭಸ್ಮಾಂತವಾಗಲಿ, ಬೂದಿ ಮಾತ್ರವೇ ಉಳಿಯುವ ದಾಗಲಿ! ಉಪಾಸನೆಗನುಗುಣವಾಗಿ ಓಂ ಎಂಬುದೇ (ಬ್ರಹ್ಮಕ್ಕೆ) **ಪ್ರತೀಕ**ವಾಗಿರುವದರಿಂದ[6] ಸತ್ಯಸ್ವರೂಪವಾಗಿರುವ ಅಗ್ನಿ ಎಂಬ ಹೆಸರಿನ ಬ್ರಹ್ಮವನ್ನು (ಓಂಕಾರವೂ ಅದೂ) ಒಂದೇ ಎಂದೆಣಿಸಿ[7] (ಓಂ ಎಂದು) ಕರೆದಿರುತ್ತದೆ. ಎಲೈ ಕ್ರತುವೆ,

---

1. ಶರೀರಕ್ಕೆ ಮಾತ್ರ ಕಟ್ಟುಬಿದ್ದಿರುವದನ್ನು ಬಿಟ್ಟು. ನಿಜವಾಗಿ ಇದು ಅಧಿದೈವತಕ್ಕೆ ಸೇರಿದ್ದೇ ಆದರೂ ಅಭಿಮಾನದಿಂದ ಶರೀರಕ್ಕೆ ಕಟ್ಟುಬಿದ್ದಿರುತ್ತದೆ.

2. ಹಿಂದೆ (೪ನೆಯ ಮಂತ್ರದಲ್ಲಿ) ಮಾತರಿಶ್ವನೆಂದು ಹೇಳಿದ ಕ್ರಿಯಾಪ್ರಧಾನನಾದ ಪ್ರಾಣನನ್ನು.

3. ಕರ್ಮೋಪಾಸನೆಗಳಿಂದ.

4. ಜ್ಞಾನಿಗೆ ಇಲ್ಲಿಯೇ ಬ್ರಹ್ಮಪ್ರಾಪ್ತಿಯಾಗುವದರಿಂದ ಅವನ ಪ್ರಾಣವು ಶರೀರವನ್ನು ಬಿಟ್ಟು ಹೋಗುವದಿಲ್ಲ, ಆತ್ಮನಲ್ಲಿಯೇ ಅಡಗುತ್ತದೆ; ಆದರೆ ಉಪಾಸಕನು ದೇವಯಾನ ಮಾರ್ಗದ ಮೂಲಕವಾಗಿ ಬ್ರಹ್ಮಲೋಕಕ್ಕೆ ಹೋಗಿ ಫಲವನ್ನು ಪಡೆಯಬೇಕಾಗಿರುತ್ತದೆ.

5. ಸತ್ತವನ ಶರೀರವನ್ನು ಅಗ್ನಿಯಲ್ಲಿ ಹಾಕುವದೂ ಒಂದು ಬಗೆಯ ಹೋಮವು; ಆದರಿಂದಲೂ ಒಂದು ಸಂಸ್ಕಾರವಾಗುವದು. ಬೃ. ೬-೨-೧೪.

6. ಓಂಕಾರವನ್ನೇ ಸತ್ಯವೆಂಬ ಹೆಸರಿನ ಬ್ರಹ್ಮವೆಂದು ಉಪಾಸನೆಮಾಡುವದರಿಂದ ಓಂಕಾರವು ಬ್ರಹ್ಮಕ್ಕೆ ಸಾಲಗ್ರಾಮವು ವಿಷ್ಣುವಿಗೆ ಗುರುತಾದಂತೆ ಗುರುತಾಗಿರುತ್ತದೆ. ಹೀಗೆ ಧ್ಯಾನಕ್ಕೆ ಸಹಾಯವಾಗಿ ಉಪಾಸ್ಯಕ್ಕೆ ಬದಲಾಗಿಟ್ಟುಕೊಂಡ ಗುರುತಿಗೆ ಪ್ರತೀಕವೆಂದು ಹೆಸರು.

7. ಪ್ರತೀಕಕ್ಕೂ ಬ್ರಹ್ಮಕ್ಕೂ ಭೇದವಿಲ್ಲವೆಂದಿಟ್ಟುಕೊಂಡು ಬ್ರಹ್ಮವನ್ನು ಓಂ ಎಂದು ಕರೆದಿದೆ.

ಸಂಕಲ್ಪಸ್ವರೂಪನಾದ (ಅಗ್ನಿಯೆ), ನಾನು ಯಾವದನ್ನು ಸ್ಮರಿಸಬೇಕೋ ಅದನ್ನು ಸ್ಮರಿಸು.[1] ಅದಕ್ಕೆ ಈಗ ಕಾಲವು ಬಂದೊದಗಿರುತ್ತದೆ; ಆದ್ದರಿಂದ ಇಷ್ಟು ಕಾಲವೂ (ನಾನು) ಭಾವನೆಮಾಡಿರುವದನ್ನು[2] ನೆನಪಿಗೆ ತಂದುಕೊಳ್ಳುವನಾಗು. ಅಗ್ನಿಯೆ, ಬಾಲ್ಯದಿಂದಲೂ ನಾನು ಮಾಡಿದ ಕರ್ಮವು[3] ಯಾವದುಂಟೋ ಅದನ್ನೂ ನೆನಪಿಗೆ ತಂದುಕೊಳ್ಳುವನಾಗು. "ಕ್ರತುವೆ, ಸ್ಮರಿಸು, ಮಾಡಿದ್ದನ್ನು ಸ್ಮರಿಸು" ಎಂದು ಮತ್ತೆ ಹೇಳಿರುವದು ಆದರಕ್ಕೋಸ್ಕರ. ॥ ೧೭ ॥

(ಭಾಷ್ಯ)

೩೫. ಪುನರನ್ಯೇನ ಮನ್ತ್ರೇಣ ಮಾರ್ಗಂ ಯಾಚತೇ—

(ಭಾಷ್ಯಾರ್ಥ)

ಇನ್ನೂ ಒಂದು ಮಂತ್ರದಿಂದ ಮಾರ್ಗವನ್ನು ಕೇಳಿಕೊಳ್ಳುತ್ತಾನೆ:

ಅಗ್ನೇ ನಯ ಸುಪಥಾ ರಾಯೇ ಅಸ್ಮಾ॑ನ್
ವಿಶ್ವಾನಿ ದೇವ ವಯುನಾನಿ ವಿದ್ವಾ॑ನ್।
ಯುಯೋಧ್ಯ॑ಸ್ಮಜ್ಜುಹುರಾಣಮೇನೋ
ಭೂಯಿಷ್ಠಾಂ ತೇ ನಮಉಕ್ತಿಂ ವಿಧೇಮ ॥ ೧೮ ॥

೧೮. ಅಗ್ನಿಯೆ, ಧನವು ಸಿಕ್ಕುವಂತೆ ನಮ್ಮನ್ನು ಒಳ್ಳೆಯ ಮಾರ್ಗದಿಂದ ಕರೆದುಕೊಂಡು ಹೋಗುವವನಾಗು ದೇವನೆ, (ನೀನು) ಎಲ್ಲಾ ಕರ್ಮಗಳನ್ನೂ ಬಲ್ಲವನು. ನಮ್ಮ ವಕ್ರವಾದ ಪಾಪವನ್ನು ಬಿಡಿಸು. ನಿನಗೆ ಬಹಳ ನಮಸ್ಕಾರೋಕ್ತಿಯನ್ನು ಹೇಳುತ್ತಿದ್ದೇವೆ.

(ಭಾಷ್ಯ)

೩೬. ಹೇ ಅಗ್ನೇ ನಯ ಗಮಯ ಸುಪಥಾ ಶೋಭನೇನ **ಮಾರ್ಗೇಣ**। ಸುಪಥಾ ಇತಿ ವಿಶೇಷಣಂ **ದಕ್ಷಿಣಮಾರ್ಗ**ನಿವೃತ್ತ್ಯರ್ಥಮ್। ನಿರ್ವಿಣ್ಣೋಽಹಂ ದಕ್ಷಿಣೇನ ಮಾರ್ಗೇಣ ಗತಾಗತಲಕ್ಷಣೇನ, ಅತೋ ಯಾಚೇ ತ್ವಾಂ ಪುನಃ ಪುನರ್ಗಮನಾಗಮನವರ್ಜಿತೇನ ಶೋಭನೇನ ಪಥಾ ನಯ ರಾಯೇ ಧನಾಯ, ಕರ್ಮಫಲಭೋಗಾಯೇತ್ಯರ್ಥಃ। ಅಸ್ಮಾ॑ನ್ ಯಥೋಕ್ತಧರ್ಮಫಲವಿಶಿಷ್ಟಾ॑ನ್।

---

1. ಸಂಕಲ್ಪರೂಪನಾದ ಅಗ್ನಿಯನ್ನು ಇಲ್ಲಿ ಪ್ರಾರ್ಥಿಸಿದೆ. ಅಗ್ನಿ ಎಂಬುದೂ ಸತ್ಯ ಬ್ರಹ್ಮದ ಹೆಸರೇ. ಉಪಾಸನೆಗೆ ಮರಣಕಾಲದಲ್ಲಿಯೂ ಉಪಾಸ್ಯದ ಸ್ಮರಣೆ ಇರುವದು ಅವಶ್ಯ. ಏಕೆಂದರೆ ಕೊನೆಯ ಪ್ರತ್ಯಯದಿಂದಲೇ ಫಲಪ್ರಾಪ್ತಿಯಾಗುವದು. ಸೂ. ಭಾ. ೪-೧-೧೨ ನೋಡಿ

2. ಉಪಾಸನೆಮಾಡಿರುವದನ್ನು.

3. ಕರ್ಮಗಳಿಗೂ ಮುಂದೆ ಆಗುವ ಫಲಕ್ಕನುಗುಣವಾಗಿ ಸ್ಮರಣೆಯಾಗತಕ್ಕದ್ದು ಅವಶ್ಯ ಸೂ. ಭಾ. ೪-೧-೧೨. ಇಲ್ಲಿ ಉಪಾಸನೆಯ ಫಲವೇ ಕರ್ಮಕ್ಕೂ ಫಲ. ಸೂ. ಭಾ. ೪-೧-೧೬ ನೋಡಿರಿ.

ವಿಶ್ವಾನಿ ಸರ್ವಾಣಿ ಹೇ ದೇವ ವಯುನಾನಿ ಕರ್ಮಾಣಿ ಪ್ರಜ್ಞಾನಾನಿ ವಾ ವಿದ್ವಾಞ್ಜಾನನ್ನ ಕಿಂ ಚ ಯುಯೋಧಿ ವಿಯೋಜಯ ವಿನಾಶಯ ಅಸ್ಮತ್ ಅಸ್ಮತ್ತಃ ಜುಹುರಾಣಂ ಕುಟಿಲಂ ವಞ್ಚನಾತ್ಮಕಮ್ ಏನಃ ಪಾಪಮ್ । ತತೋ ವಯಂ ವಿಶುದ್ಧಾಃ ಸನ್ತಃ ಇಷ್ಟಂ ಪ್ರಾಪ್ನ್ಯಾಮ ಇತ್ಯಭಿಪ್ರಾಯಃ । ಕಿಂ ತು ವಯಮಿದಾನೀಂ ತೇ ನ ಶಕ್ನುಮಃ ಪರಿಚರ್ಯಾಂ ಕರ್ತುಮ್ । ಭೂಯಿಷ್ಠಾಂ ಬಹುತರಾಮ್ ತೇ ತುಭ್ಯಂ ನಮಉಕ್ತಿಂ ನಮಸ್ಕಾರವಚನಂ ವಿಧೇಮ । ನಮಸ್ಕಾರೇಣ ಪರಿಚರೇಮ ಇತ್ಯರ್ಥಃ ॥

(ಭಾಷ್ಯಾರ್ಥ)

ಎಲೈ ಅಗ್ನಿಯೆ, (ನಮ್ಮನ್ನು) ಸುಪಥಾ ಎಂದರೆ ಒಳ್ಳೆಯ ಮಾರ್ಗದಿಂದ ಕರೆದುಕೊಂಡು ಹೋಗು. (ಇಲ್ಲಿ) 'ಒಳ್ಳೆಯ ಮಾರ್ಗದಿಂದ' ಎಂಬ ವಿಶೇಷಣವನ್ನು (ಕೊಟ್ಟಿರುವದು) ದಕ್ಷಿಣಮಾರ್ಗ(ದಿಂದ)ಲಲ್ಲವೆಂದು ತಿಳಿಸುವದಕ್ಕೆ. (ಮತ್ತೆ ಮತ್ತೆ) ಹೋಗುತ್ತಲೂ ಬರುತ್ತಲೂ ಇರುವ **ದಕ್ಷಿಣಮಾರ್ಗ**ದಲ್ಲಿ[1] ನಾನು ಬೇಸತ್ತಿರುವೆನು. ಆದ್ದರಿಂದ ನಿನ್ನನ್ನು ಬೇಡಿಕೊಳ್ಳುತ್ತಿದೇನೆ, ಮತ್ತೆ ಮತ್ತೆ ಹೋಗಿ ಬರುವದಿಲ್ಲದ ಒಳ್ಳೆಯ ಮಾರ್ಗದಿಂದ[2] ಕರೆದುಕೊಂಡು ಹೋಗು. (ಮೂಲದಲ್ಲಿರುವ) ರಾಯೇ ಎಂಬ ಮಾತಿಗೆ ಧನಕ್ಕೆ (ಎಂದರ್ಥ); ಕರ್ಮಗಳ ಫಲವನ್ನು ಅನುಭವಿಸುವದಕ್ಕಾಗಿ ಎಂದರ್ಥ. ನಮ್ಮನ್ನು ಎಂದರೆ ಹಿಂದೆ ಹೇಳಿದ ಧರ್ಮಫಲದಿಂದ[3] ಕೂಡಿರುವ (ನಮ್ಮನ್ನು ಕರೆದುಕೊಂಡು ಹೋಗು). ಎಲೈ ದೇವನೆ (ನೀನು) ಎಲ್ಲಾ ಕರ್ಮಗಳನ್ನೂ ಅಥವಾ ಜ್ಞಾನಗಳನ್ನೂ ತಿಳಿದಿರುವವನು. ಮತ್ತು ವಕ್ರವಾದ ಎಂದರೆ ಡೊಂಕಾಗಿರುವ ಮೋಸಗಾರಿಕೆಯ ಏನಃ ಎಂದರೆ ಪಾಪವನ್ನು[4] ನಮ್ಮಿಂದ ಎಂದರೆ ನಮ್ಮನ್ನು ಬಿಟ್ಟುಹೋಗುವಂತೆ 'ಯುಯೋಧಿ' ಎಂದರೆ ಬಿಡಿಸು, ನಾಶ ಮಾಡು. ಆಮೇಲೆ ನಾವು ವಿಶುದ್ಧರಾಗಿ ಇಷ್ಟವಾದ (ಗತಿಯನ್ನು) ಪಡೆಯುವೆವು ಎಂದಭಿಪ್ರಾಯ. ಆದರೆ ನಾವು ಈಗ ನಿನಗೆ ಸೇವೆಯನ್ನು ಮಾಡಲು ಶಕ್ತರಾಗಿರುವದಿಲ್ಲ, (ಆದ್ದರಿಂದ) ಬಹಳವಾಗಿ ಎಂದರೆ ಬಲು ಹೆಚ್ಚಾಗಿ ನಿನಗೆ ನಮಉಕ್ತಿಯನ್ನು

---

1. ಬರಿಯ ಕರ್ಮವನ್ನು ಮಾಡಿದವರು ಹೋಗುವ ಮಾರ್ಗಕ್ಕೆ ದಕ್ಷಿಣಮಾರ್ಗ ಅಥವಾ ಧೂಮಮಾರ್ಗವೇದು ಹೆಸರು. ಇದನ್ನು ಛಾ. ೫-೧೦-೩, ಬೃ. ೬-೨-೧೬ರಲ್ಲಿ ವರ್ಣಿಸಿದೆ.

2. ಉಪಾಸಕರು ಹೋಗುವ ಉತ್ತರಮಾರ್ಗ ಛಾ. ೫-೯-೧,೨; ಬೃ. ೬-೨-೧೫.

3. ಸತ್ಯಧರ್ಮದಿಂದ, ಸತ್ಯವೆಂಬ ಬ್ರಹ್ಮದ ಉಪಾಸನೆಯಿಂದ.

4. ಉಪಾಸನೆಯಿಂದ ಪಾಪವೂ ಕಾಮಕರ್ಮದ ಪುಣ್ಯವೂ ಎರಡೂ ನಾಶವಾಗುತ್ತವೆ. ಎರಡನ್ನೂ ಇಲ್ಲಿ ಪಾಪವೆಂದೇ ಕರೆದಿದೆ. ಸೂ. ಛಾ. ೪-೧-೧೩, ೧೪, ೧೬.

ಎಂದರೆ ನಮಸ್ಕಾರೋಕ್ತಿಯನ್ನು ಹೇಳುತ್ತಿದೇವೆ. ನಮಸ್ಕಾರದಿಂದಲೇ ಸೇವೆಯನ್ನು ಮಾಡುತ್ತೇವೆ ಎಂದರ್ಥ. ॥ ೧೪ ॥

ಸಮುಚ್ಚಯವಿಷಯದಲ್ಲಿ ಚರ್ಚೆ.

(ಭಾಷ್ಯ)

೩೭. "ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ" (೧೧) "ವಿನಾಶೇನ ಮೃತ್ಯುಂ ತೀರ್ತ್ವಾ ಅಸಮ್ಭೂತ್ಯಾಮೃತಮಶ್ನುತೇ" (೧೪) ಇತಿ ಶ್ರುತ್ವಾ ಕೇಚಿತ್ ಸಂಶಯಂ ಕುರ್ವನ್ತಿ । ಅತಸ್ತನ್ನಿರಾಕರಣಾರ್ಥಂ ಸಙ್ಕ್ಷೇಪತೋ ವಿಚಾರಣಾಂ ಕರಿಷ್ಯಾಮಃ ॥

(ಭಾಷ್ಯಾರ್ಥ)

"ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತವನ್ನು ಪಡೆಯುವನು" (೧೧) "ವಿನಾಶದಿಂದ ಮೃತ್ಯುವನ್ನು ದಾಟಿ ಅಸಂಭೂತಿಯಿಂದ ಅಮೃತವನ್ನು ಪಡೆಯುವನು" (೧೪)–ಎಂಬ ಶ್ರುತಿಯನ್ನು ಕೇಳಿ ಕೆಲವರಿಗೆ ಸಂಶಯವಾಗುತ್ತದೆ. ಆದ್ದರಿಂದ ಅದನ್ನು ಹೋಗಲಾಡಿಸುವದಕ್ಕಾಗಿ ಸಂಕ್ಷೇಪವಾಗಿ ವಿಚಾರವನ್ನು ಮಾಡುವೆವು.

(ಭಾಷ್ಯ)

೩೮. ತತ್ರ ತಾವತ್ ಕೆಂ ನಿಮಿತ್ತಃ ಸಂಶಯ ಇತಿ? ಉಚ್ಯತೇ । ವಿದ್ಯಾಶಬ್ದೇನ ಮುಖ್ಯಾ ಪರಮಾತ್ಮವಿದ್ಯೈವ ಕಸ್ಮಾನ್ನ ಗೃಹ್ಯತೇ? ಅಮೃತತ್ವಂ ಚ? ನನು ಉಕ್ತಾಯಾಃ ಪರಮಾತ್ಮವಿದ್ಯಾಯಾಃ ಕರ್ಮಣಶ್ಚ ವಿರೋಧಾತ್ ಸಮುಚ್ಚಯಾನುಪಪತ್ತಿಃ । ಸತ್ಯಮ್, ವಿರೋಧಸ್ತು ನಾವಗಮ್ಯತೇ, ವಿರೋಧಾವಿರೋಧಯೋಃ ಶಾಸ್ತ್ರಪ್ರಮಾಣಕತ್ವಾತ್ । ಯಥಾ ಅವಿದ್ಯಾನುಷ್ಠಾನಂ ವಿದ್ಯೋಪಾಸನಂ ಚ ಶಾಸ್ತ್ರಪ್ರಮಾಣಕಮ್, ತಥಾ ತದ್ವಿರೋಧಾವಿರೋಧಾವಪಿ । ಯಥಾ ಚ "ನ ಹಿಂಸ್ಯಾತ್ ಸರ್ವಾ ಭೂತಾನಿ" (?) ಇತಿ ಶಾಸ್ತ್ರಾವಗತಂ ಪುನಃ ಶಾಸ್ತ್ರೇಣೈವ ಬಾಧ್ಯತೇ "ಅಧ್ವರೇ ಪಶುಂ ಹಿಂಸ್ಯಾತ್" (?) ಇತಿ, ಏವಂ ವಿದ್ಯಾವಿದ್ಯಯೋರಪಿ ಸ್ಯಾತ್ । ವಿದ್ಯಾಕರ್ಮಣೋಶ್ಚ ಸಮುಚ್ಚಯಃ ॥

(ಭಾಷ್ಯಾರ್ಥ)

(ಪ್ರಶ್ನೆ):–ಇಲ್ಲಿ ಮೊದಲು ಸಂಶಯವೆಂಬುದಾದರೂ ಏಕೆ?

(ಉತ್ತರ):–ಹೇಳುತ್ತೇವೆ (ಕೇಳಿ). ವಿದ್ಯೆಯೆಂಬ ಮಾತಿಗೆ ಮುಖ್ಯವಾದ ಪರಮಾತ್ಮವಿದ್ಯೆಯೆಂದೇ ಏತಕ್ಕೆ ಅರ್ಥವನ್ನು ಇಟ್ಟುಕೊಳ್ಳಬಾರದು?[1] (ಹೀಗೆಯೇ)

---

1. ಕಾಣ್ವಪಾಠದಂತೆ ಇರುವ ಈ ಶ್ರುತಿಗೆ ಆಚಾರ್ಯರು "ಕರ್ಮದಿಂದ ಮೃತ್ಯುವನ್ನು ದಾಟಿ ಉಪಾಸನೆಯಿಂದ (ಅಪೇಕ್ಷಿಕವಾದ) ಅಮೃತತ್ವವನ್ನು ಪಡೆಯುವನು" ಎಂದು

ಅಮೃತವೆಂದರೆ (ಮುಖ್ಯವಾದ ಅಮೃತತ್ವವು, ಎಂದರೆ ಮುಕ್ತಿಯು ಎಂದೇ ಏಕೆ ಇಟ್ಟುಕೊಳ್ಳಬಾರದು? ಇದೀಗ ಸಂಶಯವು).

(ಸಿದ್ಧಾಂತಿ) –ಹಿಂದೆ ಹೇಳಿದ ಪರಮಾತ್ಮವಿದ್ಯೆಗೂ ಕರ್ಮಕ್ಕೂ ವಿರೋಧ ವಿರುವದರಿಂದ (ಎರಡನ್ನೂ) ಸೇರಿಸಿಕೊಂಡು (ಅನುಷ್ಠಾನಮಾಡುವದೆಂಬುದು) ಹೊಂದುವದಿಲ್ಲವಲ್ಲ!

(ಆಕ್ಷೇಪಕಾರ):–ನಿಜ. ಆದರೆ ವಿರೋಧ (ವೆಂಬುದು) ನಿರ್ಣಯವಾಗಿರುವದಿಲ್ಲ. ಏಕೆಂದರೆ ವಿರೋಧವಿದೆ, ವಿರೋಧವಿಲ್ಲ– ಎಂಬಿವೆರಡೂ ಶಾಸ್ತ್ರಪ್ರಮಾಣದಿಂದ ತಿಳಿಯಬರತಕ್ಕವಾಗಿರುತ್ತವೆ. ಅವಿದ್ಯೆಯನ್ನು ಅನುಷ್ಠಾನಮಾಡಬೇಕೆಂಬುದೂ ವಿದ್ಯೆಯನ್ನು ಉಪಾಸನೆಮಾಡಬೇಕೆಂಬುದೂ ಹೇಗೆ ಶಾಸ್ತ್ರಪ್ರಮಾಣದಿಂದಲೇ ಗೊತ್ತಾಗತಕ್ಕದ್ದೋ, ಅವೆರಡಕ್ಕೂ ವಿರೋಧವಿರುವದು, ಇಲ್ಲದ್ದು– ಇವೆರಡೂ ಹಾಗೆಯೇ (ಗೊತ್ತಾಗತಕ್ಕವಾಗಿವೆ.) ಮತ್ತು ಹೇಗೆ "ಯಾವ ಪ್ರಾಣಿಗಳನ್ನೂ ಕೊಲ್ಲಬಾರದು" (?) ಎಂದು ಶಾಸ್ತ್ರದಿಂದ ಗೊತ್ತಾದದ್ದು "ಯಜ್ಞದಲ್ಲಿ ಪಶುವನ್ನು ಕೊಲ್ಲಬೇಕು" (?) ಎಂಬ ಶಾಸ್ತ್ರದಿಂದಲೇ[1] ಬಾಧಿತವಾಗುತ್ತದೆಯೋ ಇದರಂತೆ ವಿದ್ಯಾವಿದ್ಯೆಗಳ ವಿಷಯದಲ್ಲಿಯೂ ಆಗಬಹುದಾಗಿರುತ್ತದೆ. ಮತ್ತು ವಿದ್ಯೆ, ಕರ್ಮ– ಇವುಗಳೆರಡರ ಸಮುಚ್ಚಯವೂ (ಆಗಬಹುದಾಗಿದೆ).

(ಭಾಷ್ಯ)

೩೯. ನ। "ದೂರಮೇತೇ ವಿಪರೀತೇ ವಿಷೂಚೀ ಅವಿದ್ಯಾಯಾ ಚ ವಿದ್ಯೇತಿ ಜ್ಞಾತಾ" (ಕ. ೧-೨-೪) ಇತಿ ಶ್ರುತೇಃ। "ವಿದ್ಯಾಂ ಚಾವಿದ್ಯಾಂಚ" ಇತಿ ವಚನಾದ ವಿರೋಧ ಇತಿ ಚೇತ್। ನ। ಹೇತುಸ್ವರೂಪಫಲವಿರೋಧಾತ್। ವಿದ್ಯಾವಿದ್ಯಾವಿರೋಧಾವಿರೋಧಯೋರ್ವಿಕಲ್ಪಾಸಮ್ಭವಾತ್। ಸಮುಚ್ಚಯವಿಧಾನಾದವಿರೋಧ ಏವೇತಿ ಚೇತ್। ನ। ಸಹಸಮ್ಭವಾನುಪಪತ್ತೇಃ। ಕ್ರಮೇಣ ಏಕಾಶ್ರಯೇ ಸ್ಯಾತಾಂ ವಿದ್ಯಾವಿದ್ಯೇ ಇತಿ ಚೇತ್। ನ। ವಿದ್ಯೋತ್ಪತ್ತೌ ಅವಿದ್ಯಾಯಾ ಹ್ಯಸ್ತತ್ವಾತ್ ತದಾಶ್ರಯೇ ಅವಿದ್ಯಾನುಪಪತ್ತೇಃ। ನ ಹಿ "ಅಗ್ನಿರುಷ್ಣಃ ಪ್ರಕಾಶಶ್ಚ" ಇತಿ ವಿಜ್ಞಾನೋ

ಅರ್ಥಮಾಡಿರುತ್ತಾರೆ. ಇಲ್ಲಿಯೂ ಮುಖ್ಯವಾದ ವಿದ್ಯೆಯಿಂದ ಮುಖ್ಯವಾದ ಮುಕ್ತಿಯನ್ನು ಪಡೆಯುವನು ಎಂದೇ ಏಕೆ ಅರ್ಥವನ್ನು ಮಾಡಬಾರದು? ಎಂದು ಪ್ರಶ್ನೆ.

1. ಶಾಸ್ತ್ರವು ನಿಷೇಧಿಸಿದ ಹಿಂಸೆಗೆ ವಿರುದ್ಧವಾಗಿ ಶಾಸ್ತ್ರವೇ ಯಜ್ಞದಲ್ಲಿ ಪಶುವನ್ನು ಕೊಲ್ಲಬೇಕೆಂದು ವಿಧಿಸಿರುವಂತೆ ಅವಿದ್ಯೆಯನ್ನೂ ವಿದ್ಯೆಯನ್ನೂ ಸಮುಚ್ಚಯಮಾಡಬೇಕೆಂದು ಶಾಸ್ತ್ರವೇ ವಿಧಿಸಿರುತ್ತದೆ. ಹಿಂಸಾವಿಧಿನಿಷೇಧಗಳಿಗೆ ವಿರೋಧವಿಲ್ಲವೆಂದು ಶಾಸ್ತ್ರವಿಧಿಯ ಸಾಮರ್ಥ್ಯದಿಂದ ನಿಶ್ಚಯಿಸುವಂತೆಯೇ ಸಮುಚ್ಚಯವಿಧಿಯ ಬಲದಿಂದ ವಿದ್ಯಾವಿದ್ಯೆಗಳಿಗೆ ವಿರೋಧವಿಲ್ಲವೆಂದು ನಿಶ್ಚಯಿಸಬೇಕು–ಎಂದು ಪೂರ್ವಪಕ್ಷಿಯ ಅಭಿಪ್ರಾಯ.

ತ್ಪತ್ತೌ ಯಸ್ಮಿನ್ ಆಶ್ರಯೇ ತದುತ್ಪನ್ನಮ್, ತಸ್ಮಿನ್ನೇವಾಶ್ರಯೇ "ಶೀತೋಷ್ಣಾದಿರ ಪ್ರಕಾಶೋ ವಾ" ಇತ್ಯವಿದ್ಯಾಯಾ ಉತ್ಪತ್ತಿಃ, ನಾಪಿ ಸಂಶಯೋಷಜ್ಞಾನಂ ವಾ। "ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ। ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ" (೭) ಇತಿ ಶೋಕಮೋಹಾದ್ಯಸಮ್ಭವಶ್ರುತೇಃ। ಅವಿದ್ಯಾಸಮ್ಭವಾತ್ ತದುಪಾದಾನಸ್ಯ ಕರ್ಮಣೋಷ್ಯನುಪಪತ್ತಿಮುಪೋಢಾಮ। "ಅಮೃತಮಶ್ನುತೇ" ಇತ್ಯಾಪೇಕ್ಷಿಕಮಮೃತಮ್। ವಿದ್ಯಾಶಬ್ದೇನ ಪರಮಾತ್ಮ ವಿದ್ಯಾಗ್ರಹಣೇ "ಹಿರಣ್ಮಯೇನ" (೧೫) ಇತ್ಯಾದಿನಾ ದ್ವಾರಮಾರ್ಗಾದಿಯಾಚನಮ್ ಅನುಪಪನ್ನಂ ಸ್ಯಾತ್। ತಸ್ಮಾದುಪಾಸನಯಾ ಸಮುಚ್ಚಯೋ ನ ಪರ ಮಾತ್ಮವಿಜ್ಞಾನೇನೇತಿ। ತಸ್ಮಾತ್ ಯಥಾವ್ಯಾಖ್ಯಾತ[1] ಏವ ಮನ್ತ್ರಾಣಾಮರ್ಥ ಇತ್ಯುಪರಮ್ಯತೇ॥

ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯಸ್ಯ ಶ್ರೀ ಗೋವಿನ್ದಭಗವತ್ಪೂಜ್ಯಪಾದ ಶಿಷ್ಯಸ್ಯ ಶ್ರೀಮಚ್ಛಙ್ಕರಭಗವತಃ ಕೃತೌ

ಈಶಾವಾಸ್ಯೋಪನಿಷದ್ಭಾಷ್ಯಂ ಸಮ್ಪೂರ್ಣಮ್.

(ಭಾಷ್ಯಾರ್ಥ)

(ಸಿದ್ಧಾಂತಿ):–ಹಾಗಲ್ಲ. ಏಕೆಂದರೆ (ಯಾವದು) ಅವಿದ್ಯೆಯೆಂದೂ ಯಾವದು ವಿದ್ಯೆಯೆಂದೂ ಗೊತ್ತಾಗಿರುವದೋ–ಈ ಎರಡೂ ಒಂದಕ್ಕೊಂದು ದೂರವಾಗಿ ವಿರುದ್ಧವಾಗಿ ಬೇರೆಬೇರೆಯ ಕಡೆಗೆ ಹೋಗಿರುತ್ತವೆ" (ಕ. ೧-೨-೪) ಎಂದು ಶ್ರುತಿ ಯಿರುವದು.

(ಪೂರ್ವಪಕ್ಷಿ):–"ವಿದ್ಯೆಯನ್ನೂ ಅವಿದ್ಯೆಯನ್ನೂ (ಯಾವಾತನು ಸೇರಿಸಿ ಅರಿಯುತ್ತಾನೋ।" ಎಂದು (ಶ್ರುತಿ)ವಚನವಿರುವದರಿಂದ[2] (ಅವೆರಡಕ್ಕೂ) ವಿರೋಧವಿಲ್ಲ.

(ಸಿದ್ಧಾಂತಿ):–ಹಾಗಲ್ಲ. ಏಕೆಂದರೆ (ಅವುಗಳ) ಹೇತು, ಸ್ವರೂಪ, ಫಲ–

---

1. "ಯಥಾಸ್ಮಾಭಿರ್ವ್ಯಾಖ್ಯಾತಃ" ಎಂದು (ಆ॥) ಪಾಠ. ನಾವು ಕೊಟ್ಟಿರುವದು (ವಾ॥) ಪಾಠ.

2. ಅವಿದ್ಯೆ, ವಿದ್ಯೆ–ಇವೆರಡೂ ವಿರುದ್ಧವಾಗಿರುವವು ಎಂಬುದು ವಚನಸಿದ್ಧವಾದರೆ ಅವೆರಡೂ ಅವಿರುದ್ಧವಾಗಿರುವವೆನ್ನುವದೂ ಸಮುಚ್ಚಯವಚನಸಿದ್ಧವಾಗಿರುತ್ತದೆ ಎಂದು **ಪೂರ್ವಪಕ್ಷಿಯ ಭಾವ.**

ಇವುಗಳು ಒಂದಕ್ಕೊಂದು ವಿರುದ್ಧವಾಗಿರುತ್ತವೆ. ವಿದ್ಯಾವಿದ್ಯೆಗಳಿಗೆ ವಿರೋಧವೂ ಇದೆ, ಅವಿರೋಧವೂ ಇದೆ–ಎಂದು (ಇವೆರಡಕ್ಕೂ) ವಿಕಲ್ಪವು[1] ಹೊಂದುವದಿಲ್ಲ.

(ಪೂರ್ವಪಕ್ಷಿ) :–ಸಮುಚ್ಚಯವನ್ನು (ಶಾಸ್ತ್ರದಲ್ಲಿ) ವಿಧಿಸಿರುವದರಿಂದ ವಿರೋಧವಿಲ್ಲವೇ ಇಲ್ಲ(ವೆಂದು ನಿಶ್ಚಯಿಸೋಣ).

(ಸಿದ್ಧಾಂತಿ) :–ಇದು ಸರಿಯಲ್ಲ. ಏಕೆಂದರೆ ಇವೆರಡೂ ಜೊತೆಯಲ್ಲಿರಲೇ ಆರವು.

(ಪೂರ್ವಪಕ್ಷಿ) :–ವಿದ್ಯೆ, ಅವಿದ್ಯೆ- ಇವೆರಡೂ ಒಂದಾಗುತ್ತ ಲೊಂದು ಒಬ್ಬನನ್ನೇ ಆಶ್ರಯಿಸಿಕೊಂಡು ಇರಬಹುದಲ್ಲ!

(ಸಿದ್ಧಾಂತಿ) :–ಹಾಗಲ್ಲ. ಏಕೆಂದರೆ ವಿದ್ಯೆಯು ಉಂಟಾದರೆ ಅವಿದ್ಯೆಯು ಹೋಗಿಬಿಟ್ಟಿರುತ್ತದೆಯಾದ್ದರಿಂದ ಅದರ ಆಶ್ರಯನಾದವನಲ್ಲಿ ಅವಿದ್ಯೆಯಿರುವ ದೆಂಬುದು ಹೊಂದಲಾರದು. ' ಬೆಂಕಿಯು ಬಿಸಿಯಾಗಿಯೂ ಹೊಳೆಯುತ್ತಲೂ ಇರುವದು ' ಎಂಬ ಅರಿವು ಉಂಟಾದರೆ ಯಾವನನ್ನು ಆಶ್ರಯಿಸಿಕೊಂಡು ಅದು ಉಂಟಾಗುವದೋ ಅವನನ್ನೇ ಆಶ್ರಯಿಸಿಕೊಂಡು ' ಬೆಂಕಿಯು ತಣ್ಣಗೆ, ಹೊಳೆಯದೆ, ಇರುವದು ' ಎಂಬ ಅವಿದ್ಯೆ ಉಂಟಾಗಲಾರದು, ಸಂಶಯವೂ ಉಂಟಾಗಲಾರದು; ಜ್ಞಾನವಿಲ್ಲದೆಯೂ ಹೋಗಲಾರದು[2] " ಎಲ್ಲಿ ಎಲ್ಲಾ ಭೂತಗಳೂ ತಿಳಿದಾತನಿಗೆ ಆತ್ಮನೇ ಆಯಿತೋ ಅಲ್ಲಿ ಒಂದೇ ಎಂದು ತಿಳಿದಾತನಿಗೆ ಯಾವ ಮೋಹವು? ಯಾವ ಶೋಕವು?" (೭) ಎಂದು ಶೋಕಮೋಹಾದಿಗಳು ಸಂಭವಿಸಲಾರವೆಂಬ ಶ್ರುತಿ ಇದಕ್ಕೆ ಪ್ರಮಾಣವು. ಅವಿದ್ಯೆಯು ಇರುವ ಸಂಭವವಿಲ್ಲದ್ದರಿಂದ[3] ಅದರಿಂದಾಗುವ ಕರ್ಮವೂ ಇರಲಾರದೆಂದು ಹಿಂದೆ[4] ಹೇಳಿರುತ್ತೇವೆ. " ಅಮೃತವನ್ನು ಪಡೆಯುವನು "

---

1. ಅವಿದ್ಯೆಯಿಂದಾದ ಕಾಮವೇ ಕರ್ಮಕ್ಕೆ ಹೇತು, ವಸ್ತುವನ್ನು ತಿಳಿಸುವ ಪ್ರಮಾಣವೇ ಜ್ಞಾನಕ್ಕೆ ಹೇತು; ಕರ್ಮವು ಅನುಷ್ಠಾನರೂಪವಾದದ್ದು, ವಿದ್ಯೆಯು ವಸ್ತುವನ್ನು ತಿಳಿಸ ತಕ್ಕದ್ದು; ಕರ್ಮದ ಫಲವು ಸಾಧ್ಯವು, ಜ್ಞಾನದ ಫಲವು ಸಿದ್ಧವು. ಹೀಗೆ ಅವಿದ್ಯೆಯೆಂಬ ಕರ್ಮಕ್ಕೂ ಜ್ಞಾನಕ್ಕೂ ಹೇತುಸ್ವರೂಪಫಲಗಳು ವಿರುದ್ಧವಾಗಿರುತ್ತವೆ. ಆದ್ದರಿಂದ ನಾವು ಹೇಳಿದ ವಚನವು ಯುಕ್ತಿಯಿಂದ ಕೂಡಿರುತ್ತದೆ, ಆದ್ದರಿಂದ ಪ್ರಬಲ. ಒಂದು ವಸ್ತುವಿನ ವಿಷಯದಲ್ಲಿ ವಿರುದ್ಧ, ಅವಿರುದ್ಧ–ಎಂಬ ಎರಡೂ ಹೊಂದುವದಿಲ್ಲವಾದ್ದರಿಂದ ನಿಮ್ಮ ಶ್ರುತಿಯು ಅವಿರೋಧವನ್ನು ಹೇಳುವದಿಲ್ಲವೆನ್ನುವದೇ ಯುಕ್ತ.

2. ತಪ್ಪು ತಿಳಿವಳಿಕೆ, ಸಂಶಯ, ಜ್ಞಾನಾಭಾವ–ಈ ಮೂರೂ ಅವಿದ್ಯೆಯ ರೂಪಗಳು.

3. ವಿದ್ಯೆಯೊಡನೆ ಅವಿದ್ಯೆಯಿರಲಾರದಾದ್ದರಿಂದ ವಿದ್ಯೆಯೊಡನೆ ಅವಿದ್ಯೆಯಿಂದ ಉಂಟಾಗುವ ಕರ್ಮವೂ ಇರಲಾರದು.

4. ಈ ಚರ್ಚೆಯ ಮೊದಲಿನ ಭಾಗದಲ್ಲಿ.

ಎಂಬುದು **ಅಪೇಕ್ಷಿಕವಾದ ಅನ್ಯತವು**.[1] ವಿದ್ಯೆಯೆಂಬ ಮಾತಿಗೆ ಪರಮಾತ್ಮ ವಿದ್ಯೆಯೆಂಬರ್ಥವನ್ನು ಮಾಡಿಕೊಂಡರೆ "ಹಿರಣ್ಮಯೇನ" (೧೫) ಮುಂತಾದ ಮಂತ್ರಗಳಲ್ಲಿ ದ್ವಾರಮಾರ್ಗ ಮುಂತಾದದ್ದನ್ನು ಬೇಡಿಕೊಂಡಿರುವದು[2] ಹೊಂದುಗಡೆಯಾಗದೆ ಹೋಗುವದು. ಆದ್ದರಿಂದ ಉಪಾಸನೆಯೊಡನೆ (ಕರ್ಮವನ್ನು) ಸೇರಿಸಿಕೊಳ್ಳಬೇಕು, (ಎಂಬುದೇ ಶ್ರುತಿಯ ತಾತ್ಪರ್ಯವೇ ಹೊರತು) ಪರಮಾತ್ಮಜ್ಞಾನದೊಡನೆ (ಸೇರಿಸಿಕೊಳ್ಳಬೇಕೆಂಬುದಲ್ಲ). ಆದ್ದರಿಂದ ಮಂತ್ರಗಳಿಗೆ ನಾವು ಮಾಡಿದ ಅರ್ಥವೇ ಸರಿ. ಆದ್ದರಿಂದ (ಈ ವಿಚಾರವನ್ನು ಇಲ್ಲಿಗೆ) ನಿಲ್ಲಿಸುತ್ತೇವೆ.



---

1. ಪ್ರಕೃತಿಲಯರೂಪವಾದ ಕಾರಣಬ್ರಹ್ಮಪ್ರಾಪ್ತಿ.

2. ಬ್ರಹ್ಮವನ್ನು ಪಡೆಯುವದಕ್ಕೆ ದ್ವಾರವನ್ನು ತೆರೆಯಬೇಕೆಂದು ಬೇಡಿಕೊಂಡಿರುವದು, ಸಂಕಲ್ಪಾತ್ಮಕನಾದ ಅಗ್ನಿಯನ್ನು ದೇವಯಾನಮಾರ್ಗದಿಂದ ಕರೆದುಕೊಂಡು ಹೋಗಬೇಕೆಂದು ಬೇಡಿಕೊಂಡಿರುವದು, ಕರ್ಮೋಪಾಸನೆಗಳನ್ನೆಲ್ಲ ಸ್ಮರಿಸಬೇಕೆಂದು ಬೇಡಿಕೊಂಡಿರುವದು ಮುಂತಾದವು ಮುಖ್ಯಮುಕ್ತಿಗೆ ಹೊಂದುವದಿಲ್ಲ.

ಉಪನಿಷತ್ತಿನ ಸಾರ

(ಮಂತ್ರ ೧-೩) ಈ ಜಗತ್ತಿನಲ್ಲಿ ತೋರಿಬರುತ್ತಿರುವ ಚರಾಚರವೆಲ್ಲವೂ ಆತ್ಮನೇ. ಆತ್ಮನ ನಿಜವನ್ನು ತಿಳಿದವನು ಏಷಣಾತ್ರಯವನ್ನು ತೊರೆದು ಆತ್ಮಜ್ಞಾನನಿಷ್ಠೆಯಲ್ಲಿರುವದಕ್ಕೇ ತಕ್ಕವನು. ಆತ್ಮನನ್ನು ಅರಿತುಕೊಳ್ಳುವದಕ್ಕೆ ಅಶಕ್ತನಾದವನಿಗೆ ವಿಧಿನಿಷೇಧರೂಪವಾದ ಕರ್ಮವನ್ನು ಮಾಡಿಕೊಂಡಿರುವ ಕರ್ಮನಿಷ್ಠೆಯಲ್ಲಿಯೇ ಅಧಿಕಾರವು. ಆದರೆ ನಿಜವಾದ ಆತ್ಮತತ್ತ್ವವನ್ನು ತಿಳಿಯದವರು ಅಸುರರಂತಿರುವರು; ಏಕೆಂದರೆ ಅವರು ಅಜ್ಞಾನದಿಂದ ಆವೃತರಾಗಿ ಆತ್ಮಹತ್ಯಾದೋಷದಿಂದ ಸತತವಾಗಿ ಸಂಸಾರದಲ್ಲಿ ತೊಳಲುತ್ತಿರುವರು.

(೪-೮) ಈ ಆತ್ಮತತ್ತ್ವವು ದೇಹ, ಇಂದ್ರಿಯ, ಮನಸ್ಸು—ಇವುಗಳ ಸಂಬಂಧವಿಲ್ಲದೆ ಶುದ್ಧಸ್ವರೂಪವಾಗಿರುವದಾದರೂ ಮೂಢರಿಗೆ ಇದು ಅನೇಕವಾಗಿರುವಂತೆಯೂ ಉಪಾಧಿಗಳಿಂದ ತೋರುವ ಸಂಸಾರವಿಕಾರಗಳನ್ನು ಅನುಭವಿಸುತ್ತಿರುವಂತೆಯೂ ಕಾಣುತ್ತಿರುವದು. ಆದರೆ ಯಾವ ಜ್ಞಾನಿಯು ಎಲ್ಲಾ ಭೂತಗಳಲ್ಲಿಯೂ ತನ್ನ ಆತ್ಮನೊಬ್ಬನೇ ಇರುವನೆಂದೂ ಆ ಆತ್ಮನು ಅಶರೀರನೆಂದೂ ಧರ್ಮಾಧರ್ಮಾದಿಗಳನ್ನು ಮೀರಿರುವನೆಂದೂ ಪರಮಾರ್ಥಸತ್ಯನೆಂದೂ ಅರಿತುಕೊಳ್ಳುವನೋ ಅವನಿಗೆ ಶೋಕ, ಮೋಹ ಮುಂತಾದ ಅನರ್ಥಗಳುಂಟಾಗುವದಿಲ್ಲ.

(೯-೧೪) ಕರ್ಮ, ಉಪಾಸನೆ—ಇವೆರಡನ್ನೂ ಒಟ್ಟಿಗೆ ಅನುಷ್ಠಾನಮಾಡುವದರಿಂದ ಅವನ್ನು ಒಂದೊಂದನ್ನೇ ಮಾಡುವದರಿಂದಾಗುವ ಫಲಕ್ಕಿಂತ ಹೆಚ್ಚಿನ ಫಲವುಂಟಾಗುವದು. ಹೀಗೆ ಸೇರಿಸಿ ಅನುಷ್ಠಾನಮಾಡುವವರು ಕರ್ಮದಿಂದ ಸ್ವಾಭಾವಿಕವಾದ ಜ್ಞಾನಕರ್ಮಗಳೆಂಬ ಮೃತ್ಯುವನ್ನು ದಾಟಿ ಉಪಾಸನೆಯಿಂದ ಉಪಾಸ್ಯದೇವತೆಯ ಸ್ವರೂಪವನ್ನು ಪಡೆಯುವದೆಂಬ ಅಮೃತತ್ವವನ್ನು ಪಡೆದುಕೊಳ್ಳುವರು. ಉಪಾಸ್ಯದೇವತೆಯಾದ ಬ್ರಹ್ಮವು ವ್ಯಾಕೃತವೆಂದೂ ಅವ್ಯಾಕೃತವೆಂದೂ ಎರಡು ಬಗೆಯಾಗಿರುತ್ತದೆ. ವ್ಯಾಕೃತಾವ್ಯಾಕೃತೋಪಾಸನೆಗಳೆರಡನ್ನೂ ಸೇರಿಸಿ ಉಪಾಸನೆಮಾಡುವವರು ವ್ಯಾಕೃತೋಪಾಸನೆಯಿಂದ ಅನೈಶ್ವರ್ಯವೇ ಮುಂತಾದ ರೂಪವಾದ ಮೃತ್ಯುವನ್ನು ದಾಟಿ ಅವ್ಯಾಕೃತೋಪಾಸನೆಯಿಂದ ಪ್ರಕೃತಿಲಯವೆಂಬ ಸುಖದುಃಖಗಳನ್ನು ಮೀರಿದ ಅಮೃತತ್ವವನ್ನು ಪಡೆದುಕೊಳ್ಳುತ್ತಾರೆ. ಇಲ್ಲಿಯವರೆಗೇ ಸಂಸಾರದ ಗತಿಯಿರುವದು. ಇಲ್ಲಿಂದ ಮುಂದಕ್ಕೆ ಈ ಮೊದಲೇ ಹೇಳಿದ ಜ್ಞಾನವೇ ಆಗಿ ಮುಖ್ಯಮುಕ್ತಿಯಾಗಬೇಕು.

(೧೫-೧೮) ಮೇಲೆ ಹೇಳಿದಂತೆ ಕರ್ಮೋಪಾಸನೆಗಳನ್ನು ಮಾಡುವವರು ಮರಣಕಾಲದಲ್ಲಿ ಆದಿತ್ಯಮಂಡಲದಲ್ಲಿರುವ ಅಪರಬ್ರಹ್ಮದ ಅನುಜ್ಞೆಯಿಂದ ಉತ್ತರಾಯಣಮಾರ್ಗವಾಗಿ ಹೋಗಿ ಅಪೇಕ್ಷಿಕವಾದ ಅಮೃತತ್ವವನ್ನು ಪಡೆದುಕೊಳ್ಳುವರು. ಹೀಗೆ ಶೋಕಮೋಹಾದಿಗಳನ್ನು ಆತ್ಯಂತವಾಗಿ ತೊಲಗಿಸುವ ನಿವೃತ್ತಿಧರ್ಮವೆಂದೂ ಬಹುಕಾಲ ಅನುಭವಿಸುವ ಅಮೃತತ್ವವನ್ನು ಕೊಡುವ ಪ್ರವೃತ್ತಿಧರ್ಮವೆಂದೂ ವೇದೋಕ್ತಧರ್ಮವು ಎರಡು ಬಗೆಯಾಗಿರುವದು.

ಈಶಾವಾಸ್ಯೋಪನಿಷತ್ತು

(ಮಾಧ್ಯಂದಿನಪಾಠ)

ಆಚಾರ್ಯರು ಕಾಣ್ವಪಾರದ ಉಪನಿಷತ್ತಿಗೆ ಭಾಷ್ಯವನ್ನು ಬರೆದಿರುತ್ತಾರಾದರೂ ಅದ್ವೈತ ಪ್ರಕರಣ, ಐತರೇಯದ ಸಂಬಂಧಭಾಷ್ಯ, ತೈತ್ತಿರೀಯ ಶೀಕ್ಷಾಧ್ಯಾಯದ ೧೧ನೆಯ ಅನುವಾಕ- ಇವುಗಳಲ್ಲಿ ಮಾಧ್ಯಂದಿನಪಾರಕ್ಕೆ ಹೊಂದುವಂತೆಯೇ ಈ ಉಪನಿಷತ್ತಿನ ೧೧ನೆಯ (ಮಾಧ್ಯಂದಿನ ಪಾರದಲ್ಲಿ ೧೪ನೆಯ) ಮಂತ್ರಕ್ಕೆ ಅರ್ಥವನ್ನು ಬರೆದಿರುತ್ತಾರೆ. "ಉವಟಾಚಾರ್ಯ" ಮುಂತಾದವರು ಇದಕ್ಕೆ ಮಾಧ್ಯಂದಿನಪಾರದಂತೆಯೇ ವ್ಯಾಖ್ಯಾನವನ್ನು ಮಾಡಿರುತ್ತಾರೆ. ಆದ್ದರಿಂದ ಆ ಪಾರವನ್ನೂ ಇಲ್ಲಿ ಹೋಲಿಕೆಗಾಗಿ ಕೊಡುವೆವು. ಸಂಖ್ಯೆಯ ಅನುಕ್ರಮದಲ್ಲಿ ಹೆಚ್ಚುಕಡಿಮೆಯಿರುವದನ್ನು ವಾಚಕರು ತಾವೇ ಊಹಿಸಿಕೊಳ್ಳಬಹುದು. ಆದರೆ ಮಂತ್ರಗಳಲ್ಲಿ ಶಬ್ದಗಳ ಹೆಚ್ಚುಕಡಿಮೆ ಇರುವದನ್ನು ಕಪ್ಪಕ್ಷರದಿಂದ ತೋರಿಸಿರುತ್ತೇವೆ.

ಈಶಾವಾಸ್ಯಮಿದಗ್ಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಞ್ಜೀಥಾ ಮಾಗೃಧಃ ಕಸ್ಯಸ್ವಿದ್ಧನಮ್ ॥ ೧ ॥
ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಗ್ಂ ಸಮಾಃ ।
ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ ॥ ೨ ॥
ಅಸುರ್ಯಾ ನಾಮ ತೇ ಲೋಕಾ ಅನ್ಧೇನ ತಮಸಾವೃತಾಃ ।
ತಾಗ್ಂಸ್ತೇ ಪ್ರೇತ್ಯಾಪಿಗಚ್ಛನ್ತಿ ಯೇ ಕೇಚಾತ್ಮಹನೋ ಜನಾಃ ॥ ೩ ॥
ಅನೇಜದೇಕಂ ಮನಸೋ ಜವೀಯೋನೈನದ್ದೇವಾ ಆಪ್ನುವ ಪೂರ್ವಮರ್ಶತ್ ।
ತದ್ಧಾವತೋಽನ್ಯಾನತ್ಯೇತಿ ತಿಷ್ಠತ್ತಸ್ಮಿನ್ನಪೋ ಮಾತರಿಶ್ವಾ ದಧಾತಿ ॥ ೪ ॥
ತದೇಜತಿ ತನ್ನೈಜತಿ ತದ್ದೂರೇ ತದ್ವನ್ತಿಕೇ ।
ತದನ್ತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ ॥ ೫ ॥
ಯಸ್ತು ಸರ್ವಾಣಿ ಭೂತಾನ್ಯಾತ್ಮನ್ನೇವಾನುಪಶ್ಯತಿ ।
ಸರ್ವಭೂತೇಷು ಚಾತ್ಮಾನಂ ತತೋ ನ ವಿಚಿಕಿತ್ಸತಿ[1] ॥ ೬ ॥
ಸ ಪರ್ಯಗಾಚ್ಛುಕ್ರಮಕಾಯಮವ್ರಣಮಸ್ನಾವಿರಗ್ಂ ಶುದ್ಧಮಪಾಪವಿದ್ಧಮ್ ।
ಕವಿರ್ಮನೀಷೀ ಪರಿಭೂಃ ಸ್ವಯಮ್ಭೂರ್ಯಾಥಾತಥ್ಯತೋಽರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ ॥ ೮ ॥

---

1. ನ ವಿಚಿಕಿತ್ಸತಿ-ಸಂಶಯಪಡುವದಿಲ್ಲ

ಅನ್ಧಂ ತಮಃ ಪ್ರವಿಶನ್ತಿ ಯೇಽಸಮ್ಭೂತಿಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ಸಮ್ಭೂತ್ಯಾಗ್ಂ ರತಾಃ ॥ ೯ ॥
ಅನ್ಯದೇವಾಹುಃ ಸಮ್ಭವಾದನ್ಯದಾಹುರಸಮ್ಭವಾತ್ ।
ಇತಿ ಶುಶ್ರುಮ ಧೀರಾಣಾಂ ಯೇ ನಸ್ತದ್ವಿಚಚಕ್ಷಿರೇ ॥ ೧೦ ॥
ಸಮ್ಭೂತಿಂ ಚ ವಿನಾಶಂ ಚ ಯಸ್ತದ್ವೇದೋಭಯಗ್ಂ ಸಹ ।
ವಿನಾಶೇನ ಮೃತ್ಯುಂ ತೀರ್ತ್ವಾ ಸಮ್ಭೂತ್ಯಾಮೃತಮಶ್ನುತೇ ॥ ೧೧ ॥
ಅನ್ಧಂ ತಮಃ ಪ್ರವಿಶನ್ತಿ ಯೇಽವಿದ್ಯಾಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಗ್ಂ ರತಾಃ ॥ ೧೨ ॥
ಅನ್ಯದೇವಾಹುರ್ವಿದ್ಯಾಯಾ ಅನ್ಯದಾಹುರವಿದ್ಯಾಯಾಃ ।
ಇತಿ ಶುಶ್ರುಮ ಧೀರಾಣಾಂ ಯೇನಸ್ತದ್ವಿಚಚಕ್ಷಿರೇ ॥ ೧೩ ॥
ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಗ್ಂ ಸಹ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ ॥ ೧೪ ॥
ವಾಯುರನಿಲಮಮೃತಮಥೇದಂ ಭಸ್ಮಾನ್ತಗ್ಂ ಶರೀರಮ್ ।
ಓಂ ಕ್ರತೋ ಸ್ಮರ ಕ್ಲಿಬೇ ಸ್ಮರ ಕೃತಗ್ಂ ಸ್ಮರ ॥ ೧೫ ॥
ಅಗ್ನೇ ನಯ ಸುಪಥಾ ರಾಯೇ ಅಸ್ಮಾ ವಿಶ್ವಾನಿ ದೇವ ವಯುನಾನಿ ವಿದ್ವಾನ್।
ಯುಯೋಧ್ಯಸ್ಮಜ್ಜುಹುರಾಣಮೇನೋ ಭೂಯಿಷ್ಠಾಂ ತೇ ನಮಉಕ್ತಿಂ
ವಿಧೇಮ ॥ ೧೬ ॥
ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್ ।
ಯೋಽಸಾವಾದಿತ್ಯೇ ಪುರುಷಃ ಸೋಽಸಾವಹಮ್ । ಓಂ ಖಂ ಬ್ರಹ್ಮ ॥

೧೪ನೆಯ ಮಂತ್ರದ ಅರ್ಥ—(೧) (ಅದ್ವೈತಪ್ರಕರಣದ ೨೫ನೆಯ ಕಾರಿಕಾಭಾಷ್ಯದಂತೆ) :-ಕರ್ಮಫಲದಲ್ಲಿ ಕಾಮದಿಂದ ಪ್ರವರ್ತಿಸುವದು ಮತ್ತು ಸಾಧ್ಯಸಾಧನಗಳನ್ನು ಬಯಸುವದು—ಎಂಬ ಎರಡು ವಿಧದ ಮೃತ್ಯುವನ್ನು ದೇವತೋಪಾಸನೆ, ಕರ್ಮ—ಇವುಗಳ ಸಮುಚ್ಚಯವೆಂಬ ಅವಿದ್ಯೆಯಿಂದ ದಾಟಿ ವಿಚಾರದಿಂದ ಹುಟ್ಟುವ ಪರಮಾತ್ಮವಿದ್ಯೆಯಿಂದ ಮೋಕ್ಷವನ್ನು ಪಡೆಯುವನು. ಅವಿದ್ಯೆಯೂ ವಿದ್ಯೆಯೂ ಒಬ್ಬ ಪುರುಷನಲ್ಲಿಯೇ (ಸಹ) ಸೇರುವದೇ ಅವುಗಳ ಸಮುಚ್ಚಯ.

(೨) (ಐತರೇಯದಂತೆ) :—ಅವಿದ್ಯೆಯೆಂದರೆ ವಿದ್ಯೆಗೆ ಬೇಕಾದ ತಪಸ್ಸು, ಗುರು ಶುಶ್ರೂಷೆ ಮುಂತಾದದ್ದು. ಇದರಿಂದ ವಿದ್ಯೆಯನ್ನುಂಟುಮಾಡಿಕೊಂಡು ಕಾಮರೂಪವಾದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಮುಕ್ತಿಯನ್ನು ಪಡೆಯುತ್ತಾನೆ.

(೩) (ತೈತ್ತಿರೀಯ ೧೧ನೆಯ ಅನುವಾಕದಂತೆ) :—ಪಾಪವನ್ನು ನಾಶಮಾಡಿಕೊಳ್ಳುವದಕ್ಕೆ ಕರ್ಮವೆಂಬ ಅವಿದ್ಯೆ, ಮುಕ್ತಿಗೆ ವಿದ್ಯೆ.

ಕ್ಲಿಬೇ—ಕ್ಲಿಪ್ತವಾದ ಲೋಕಕ್ಕಾಗಿ. ಓಂ ಖಂ ಬ್ರಹ್ಮ—ಓಂ ಎಂಬ ನಾಮದಿಂದ ಖಂ ಆಕಾಶದಂತೆ ಸರ್ವಗತರೂಪದಿಂದ ಬ್ರಹ್ಮವನ್ನು ಧ್ಯಾನಿಸಬೇಕು.

ಮಂತ್ರಗಳ ಅನುಕ್ರಮಣಿಕೆ

ಮಂತ್ರಪ್ರತೀಕ		ಮಂತ್ರಸಂಖ್ಯೆ	ಪುಟ
ಅಗ್ನೇ ನಯ ಸುಪಥಾ ರಾಯೇ	...	೧೮	೪೭
ಅನೇಜದೇಕಂ ಮನಸೋ ಜವೀಯೋ	...	೪	೧೪
ಅನ್ಧಂ ತಮಃ ಪ್ರವಿಶನ್ತಿ ಯೇಽವಿದ್ಯಾಮ್	...	೯	೩೧
ಅನ್ಧಂ ತಮಃ ಪ್ರವಿಶನ್ತಿ ಯೇಽಸಮ್ಭೂತಿಮ್		೧೨	೩೬
ಅನ್ಯದೇವಾಹುರ್ವಿದ್ಯಯಾ	....	೧೦	೩೩
ಅನ್ಯದೇವಾಹುಃ ಸಮ್ಭವಾತ್	....	೧೩	೩೭
ಅಸುರ್ಯಾ ನಾಮ ತೇ ಲೋಕಾ	....	೩	೧೧
ಈಶಾವಾಸ್ಯಮಿದಗ್ಂ ಸರ್ವಮ್	....	೧	೪
ಕುರ್ವನ್ನೇವೇಹ ಕರ್ಮಾಣಿ	....	೨	೮
ತದೇಜತಿ ತನ್ನೈಜತಿ	....	೫	೧೯
ಪೂಷನ್ನೇಕರ್ಷೇ ಯಮ ಸೂರ್ಯ	...	೧೬	೪೩
ಯಸ್ತು ಸರ್ವಾಣಿ ಭೂತಾನಿ	...	೬	೨೦
ಯಸ್ಮಿನ್ ಸರ್ವಾಣಿ ಭೂತಾನಿ	...	೭	೨೨
ವಾಯುರನಿಲಮಮೃತಮ್	....	೧೭	೪೫
ವಿದ್ಯಾಂ ಚಾವಿದ್ಯಾಂ ಚ	....	೧೧	೩೪
ಸ ಪರ್ಯಗಾಚ್ಛುಕ್ರಮಕಾಯಮವ್ರಣಮ್	....	೮	೬
ಸಮ್ಭೂತಿಂ ಚ ವಿನಾಶಂ ಚ	....	೧೪	೩೯
ಹಿರಣ್ಮಯೇನ ಪಾತ್ರೇಣ	....	೧೫	೪೨

ಶಬ್ದಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಸಂಸ್ಕೃತಭಾಷ್ಯದಲ್ಲಿ ಶಬ್ದವು ಯಾವ ಭಾಗದಲ್ಲಿ ಬಂದಿದೆ ಎಂಬುದನ್ನು ಸೂಚಿಸುವವು.

೧. **ಅಕರ್ಮಶೇಷಃ**—
ಕರ್ಮಕ್ಕೆ ಅಂಗವಾಗದ, ಸ್ವತಂತ್ರವಾದ ೧

೨. **ಅಜ್ಞಾಜ್ಞಿತಾ**—
ಒಂದು ಅಧೀನವಾಗಿಯೂ ಒಂದು ಪ್ರಧಾನವಾಗಿಯೂ ಇರುವದು. ಜ್ಞಾನ ಕರ್ಮಗಳೆರಡೂ ಅಂಗಾಂಗಿಭಾವದಿಂದ ಸಮುಚ್ಚಯವಾಗಲೆಂದಾಗಲಿ ವ್ಯಾಕೃತಾವ್ಯಾಕೃತೋಪಾಸನೆಗಳು ಅಂಗಾಂಗಿಭಾವದಿಂದ ಸಮುಚ್ಚಯವಾಗಲೆಂದಾಗಲಿ ಈ ಉಪನಿಷತ್ತಿನಲ್ಲಿ ಹೇಳಿಲ್ಲ. ೨೧, ೨೬.

೩. **ಅಜ್ಞಾನಮ್**—
೧. ತಪ್ಪಾಗಿ ತಿಳಿಯುವದು. ೨. ತಿಳಿಯದೆ ಇರುವದು. ೨, ೯, ೩೯.

೪. **ಅಣಿಮಾದ್ಯೈಶ್ವರ್ಯಮ್** —
ಹಿರಣ್ಯಗರ್ಭನ ಉಪಾಸನೆಯಿಂದ ಬರುವ ಸಿದ್ಧಿಗಳು. ೨೭.

೫. **ಅದೃಷ್ಟಂ (ಫಲಮ್)**—
ಕರ್ಮಕ್ಕೆ ಸಿಕ್ಕುವ ಸ್ವರ್ಗವೇ ಮುಂತಾದ ಪರಲೋಕದಲ್ಲಾಗುವ ಫಲ ೧.

೬. **ಅಧಿಕಾರಃ**—
ತಕ್ಕ ಯೋಗ್ಯತೆ; ಅಧಿಕಾರೀ—ಯೋಗ್ಯತೆಯುಳ್ಳವನು ೨, ೩.

೭. **ಅಧಿಕಾರವಿದಃ**—
ಕರ್ಮಕ್ಕೆ ಅಧಿಕಾರವು ಯಾವದೆಂಬುದನ್ನು ಬಲ್ಲ ಮಿಮಾಂಸಕರು. .

೮. **ಅಧಿದೈವತಾತ್ಮಾ**—
ದೇವತಾಸ್ವರೂಪನಾದ ೩೪.

೯ **ಅಧ್ಯಸ್ತಮ್**—
ಹುಟ್ಟುಗಟ್ಟಿದ, ಭ್ರಾಂತಿಯಿಂದ ಕಲ್ಪಿಸಿದ. ೩.

೧೦ **ಅಧ್ಯಾತ್ಮಪರಿಚ್ಛೇದಃ**—
ಶರೀರದೊಳಗೆ ಕಟ್ಟುಬಿದ್ದಿರುವದು, ೩೪

೧೧. **ಅನಧಿಕಾರಪ್ರಯೋಜಕ ಧರ್ಮಾಃ**—
ಅಧಿಕಾರವಿಲ್ಲದಿರುವದಕ್ಕೆ ಕಾರಣವಾದ ಧರ್ಮಗಳು. ೧

೧೨. **ಅನುವಾದಃ**—
ಗೊತ್ತಿರುವದನ್ನು ಅಥವಾ ಮತ್ತೊಂದುಕಡೆ ಹೇಳಿರುವದನ್ನು ಹೇಳಿಕೊಂಡಿರುವದು. ೧೫.

೧೩. **ಅನೃತಮ್**—
ಹುಸಿತೋರಿಕೆಯ ೩.

೧೪. **ಅನ್ತಃಕರಣಮ್** —
ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ—ಎಂಬ ವೃತ್ತಿಗಳುಳ್ಳ ಒಳಗಿನ ಕರಣ. ೧೧.

೧೫. **ಅಪರಬ್ರಹ್ಮ**—
ಕಡಿಮೆಯ ಬ್ರಹ್ಮ, ಹಿರಣ್ಯಗರ್ಭ. ೩೮.

೧೬. **ಅಭಿಧೇಯಮ್**—
ಹೇಳಬೇಕಾದ ವಿಷಯ. ೨.

೧೭. **ಅಮೃತಮ್—**
೧. ನಾಶವಿಲ್ಲದ ಮೋಕ್ಷ, ೨. ಬಹು ಕಾಲ ನಾಶವಿಲ್ಲದ ಪ್ರಕೃತಿಲಯವೇ ಮುಂತಾದ ಅಪೇಕ್ಷಿಕ ಉತ್ತಮಗತಿ. ೨೩, ೩೦, ೩೯.

೧೮. **ಅವಾನ್ತರಫಲಮ್—**
ಮುಖ್ಯವಲ್ಲದ ಒಳಫಲ. ೨೧

೧೯. **ಅವಿದ್ಯಾ—**
೧. ತಪ್ಪುತಿಳಿವಳಿಕೆ, ೯, ೧೭, ೩೯. ೨. ಆತ್ಮನನ್ನು ತಪ್ಪಾಗಿ ತಿಳಿದುಕೊಂಡದ್ದರಿಂದ ಮಾಡುವ ಕರ್ಮ, ೨೦, ೨೩. ೩. ತಪ್ಪುತಿಳಿವಳಿಕೆಯಿಂದ ಕಾರಣವೆಂದು ಕಲ್ಪಿಸಿರುವ ಅವ್ಯಾಕೃತ ೨೫.

೨೦. **ಅವಿದ್ಯಾಕಾರ್ಯಮ್—**
ಅವಿದ್ಯೆಯಿಂದಾಗಿರುವ ಶೋಕ, ಮೋಹ—ಮುಂತಾದದ್ದು. ೧೬

೨೧. **ಅವ್ಯಕ್ತಮ್**
ಜಗತ್ತಿನ ಸೂಕ್ಷ್ಮಸ್ಥಿತಿ, ಕಾರಣ ಬ್ರಹ್ಮ. ೧೫, ೨೭.

೨೨. **ಅವ್ಯಕ್ತಾದಿಸ್ಥಾವರಾನ್ತಾನಿ—**
ಬ್ರಹ್ಮದಿಂದ ಸ್ಥಾವರಪ್ರಾಣಿಗಳವರೆಗಿನ ೧೫.

೨೩. **ಅವ್ಯಾಕೃತಮ್—**
ಬಿಡಿಬಿಡಿಯಾಗಿ ತೋರದ ಸೂಕ್ಷ್ಮಸ್ಥಿತಿ ಅವ್ಯಕ್ತ ; ೨೪, ೨೫, ೨೭, ೨೯.

೨೪. **ಅಸುರಾಃ—**
ಆತ್ಮಜ್ಞಾನವಿಲ್ಲದ ಕಾಮಿಗಳು. ೯.

೨೫. **ಆಗಮಃ—**
ಪರಂಪರೆಯ ಉಪದೇಶ ೨೨.

೨೬. **ಆತ್ಮಾ**
(೧) ತಾನು, ೪, ೫, ೧೪, ೧೫.
(೨) ನಿಜವಾಗಿ ನಮ್ಮೆಲ್ಲರ ಸ್ವರೂಪವಾಗಿರುವ ಪರಮಾತ್ಮ ೧, ೩, ೪, ೧೫, ೧೭, ೧೮.

೨೭. **ಆತ್ಮಚೈತನ್ಯಮ್—**
ಆತ್ಮಸ್ವರೂಪವಾದ ಅರಿವು ೧೧.

೨೮. **ಆತ್ಮಜ್ಞಾನನಿಷ್ಠಾ—**
ಆತ್ಮನ ಅರಿವಿನಲ್ಲಿಯೇ ನೆಲೆನಿಲ್ಲುವದು. ೫.

೨೯. **ಆತ್ಮತತ್ತ್ವಮ್—**
ಆತ್ಮನು ಇದ್ದಂತೆ ಇರುವ ಸ್ವರೂಪ. ೧೦, ೧೧, ೧೨, ೧೪.

೩೦. **ಆತ್ಮಸ್ವರೂಪನಿಷ್ಠಾ, ಆತ್ಮಸ್ವರೂಪಾವಸ್ಥಾನಮ್—**
ಆತ್ಮನ ಸ್ವರೂಪದಲ್ಲಿಯೇ ನೆಲೆನಿಲ್ಲುವದು ೧೪.

೩೧. **ಆತ್ಮೈಕತ್ವವಿಜ್ಞಾನಮ್—**
ಆತ್ಮನು ಒಬ್ಬನೇ, ಎರಡನೆಯದಿಲ್ಲವೆಂಬ ಅರಿವು ೨, ೧೯.

೩೨. **ಆದಿತ್ಯಮಣ್ಡಲಸ್ಥಂ ಬ್ರಹ್ಮ—**
ಸೂರ್ಯಮಂಡಲದಲ್ಲಿರುವ ಹಿರಣ್ಯಗರ್ಭ ೩೨.

೩೩. **ಆಪೇಕ್ಷಿಕನ್ ಅಮೃತಮ್—**
ಹೋಲಿಕೆಯ ಮುಕ್ತಿ ; ಇತರ ಫಲಗಳಿಗೆ ಹೋಲಿಸಿದರೆ ಬಹುಕಾಲ ಇರುವ ಅಪರಬ್ರಹ್ಮಪ್ರಾಪ್ತಿ ೩೯.

೩೪. **ಆಪ್ಯಮ್—**
ಪಡೆಯತಕ್ಕದ್ದು ; ಕರ್ಮಫಲದ ನಾಲ್ಕು ರೂಪಗಳಲ್ಲಿ ಒಂದು ೧.

೩೫. **ಆಭಾಸಃ—**
ಅದರಂತೆ ತೋರುವದು, ನೆರಳು, ಮನಸ್ಸಿನಲ್ಲಿ ತೋರುವ ಆತ್ಮನ ಹೊಳಪು. ಇದನ್ನು ಚಿದಾಭಾಸವೆನ್ನುವರು. ೧೧.

೩೬. **ಈಶ್ವರಃ—**
ಪರಮಾತ್ಮನು ೧೭.

೩೭. **ಈಶ್ವರಭಾವನಾ, ಈಶ್ವರಾತ್ಮಭಾವನಾ—**
ಇದೆಲ್ಲವೂ ಆತ್ಮನೇ ಎಂದು ಚಿಂತಿಸುವದು ೩, ೪.

೩೮. **ಉತ್ಪಾದ್ಯಮ್—**
ಹುಟ್ಟಿಸತಕ್ಕದ್ದು ; ಕರ್ಮಫಲದ ನಾಲ್ಕುರೂಪಗಳಲ್ಲಿ ಒಂದು. ೧.

೫೯. ಉಪಾಧಿಃ—
ತಾನು ವಸ್ತುವಿನ ಭಾಗವಾಗಿರದೆ ಅದರಲ್ಲಿಲ್ಲದ ಧರ್ಮವನ್ನು ತೋರುವಂತೆ ಮಾಡುವ ವಸ್ತು. ಆತ್ಮನಿಗೆ ಅವನಲ್ಲಿಲ್ಲದ ಧರ್ಮವನ್ನು ಗಂಟುಹಾಕಿ ತೋರಿಸುವ ಶರೀರ, ಇಂದ್ರಿಯ, ಪ್ರಾಣ, ಮನಸ್ಸು-ಇವುಗಳು ಅವನ ಉಪಾಧಿಯಾಗಿರುವವು ೧೧.

೪೦. ಏಷಣಾತ್ರಯಮ್—
ಪುತ್ರ, ವಿತ್ತ, ಲೋಕ-ಇವುಗಳ ಬಯಕೆ. ೩, ೭, ೧೮, ೩೦.

೪೧. ಔಪಾಧಿಕಮ್—
ಉಪಾಧಿಯಿಂದಾಗಿರುವ ೩.

೪೨. ಕರ್ತೃತ್ವಭೋಕ್ತೃತ್ವಾದಿ—
ಮಾಡುವವನು, ಅನುಭವಿಸುವವನು ಎಂದು ಮುಂತಾಗಿ ಆತ್ಮನಲ್ಲಿ ಈಗ ಕಾಣುವ ಸಂಸಾರಧರ್ಮಗಳು, ೧.

೪೩. ಕರ್ಮ—
(೧) ಅಗ್ನಿಹೋತ್ರವೇ ಮುಂತಾದ ಕರ್ಮಗಳು ೧, ೬, ೩೮.
(೨) ಲೌಕಿಕವಾದ ಕೆಲಸ ೨೩.

೪೪. ಕರ್ಮನಿಷ್ಠಾ—
ಶಾಸ್ತ್ರೋಕ್ತ ಕರ್ಮಗಳಲ್ಲಿಯೇ ನೆಲೆನಿಲ್ಲುವದು ೭, ೧೮.

೪೫. ಕರ್ಮಶೇಷತಾ—
ಕರ್ಮಕ್ಕೆ ಅಂಗವಾಗಿರುವದು. ೧.

೪೬. ಕಾಮಕರ್ಮಬೀಜಮ್—
ಕಾಮಕರ್ಮಗಳಿಗೆ ಕಾರಣವಾಗಿರುವ ಶೋಕಮೋಹಗಳು, ೧೬; ಕಾಮಕರ್ಮಗಳಿಗೆ ಬೀಜವಾಗಿರುವ ಅವಿದ್ಯಾಕಲ್ಪಿತ ಅವ್ಯಾಕೃತ. ೨೫.

೪೭. ಕಾರಣಮ್—
ಜಗತ್ತಿನ ಸೂಕ್ಷ್ಮಸ್ಥಿತಿ, ಅವ್ಯಾಕೃತ, ೨೫.

೪೮. ಕಾರಣಶರೀರಮ್—
ಜೀವನಿಗೆ ಸಂಸಾರವಿದೆಯೆಂಬ ಭಾವನೆಗೆ ಕಾರಣವಾಗಿರುವ ಅವಿದ್ಯೆ. ೧೭.

೪೯. ಕಾರ್ಯಬ್ರಹ್ಮ—
ಸತ್ಯಲೋಕದಲ್ಲಿರುವ ಹಿರಣ್ಯಗರ್ಭ; ಅಪರಬ್ರಹ್ಮ ೨೫ ೨೭.

೫೦. ಕಾರ್ಯಕರಣಸಙ್ಘಾತಃ—
ಒಂದಕ್ಕೊಂದು ಸೇರಿಕೊಂಡು ಕೆಲಸ ಮಾಡುವ ಶರೀರೇಂದ್ರಿಯಗಳು ೧೫

೫೧. ಕಾರ್ಯಕರಣವಿಕ್ರಿಯಾ—
ಶರೀರೇಂದ್ರಿಯಗಳ ವ್ಯಾಪಾರ, ೧೭.

೫೨. ಕಾರ್ಯಕರಣಜಾತಾನಿ—
ದೇಹರಾಶಿಗಳು ೧೭.

೫೩. ಗೀತಾಃ—
ಭಗವದ್ಗೀತೆಯ ಶ್ಲೋಕಗಳು ೧

೫೪. ಚೇತಯಿತಾ—
ಅರಿಯುವ ಆತ್ಮ ೧೫.

೫೫. ಚೈತನ್ಯಾಭಾಸಃ—
ಅರಿವಿನ ತೋರಿಕೆ, ಚಿದಾಭಾಸ ೧೧

೫೬. ಜಾಮಿತಾ—
ಮಾಡಿದ್ದನ್ನೇ ಮಾಡುವದು, ಪುನರುಕ್ತಿ ೧೩, ೨೧.

೫೭. ಜಾಯಾದ್ಯೇಷಣಾತ್ರಯ —
ಹೆಂಡತಿಯೇ ಮುಂತಾದ ಮೂರರ ಬಯಕೆ ೧೮.

೫೮. ಜ್ಞಾನಮ್—
(೧) ಉಪಾಸನೆ ೨೦, ೨೨.
(೨) ಅರಿವು, ಆತ್ಮನನ್ನು ಅರಿಯುವದು. ೫, ೭, ೧೮, ೧೯, ೩೦.

೫೯. ಜ್ಞಾನನಿಷ್ಠಾ—
ಜ್ಞಾನದಲ್ಲಿಯೇ ನೆಲೆನಿಲ್ಲುವದು. ೭, ೧೮, ೩೦.

೬೦. ತಮಃ—
ಕತ್ತಲೆ, ಅಜ್ಞಾನ, ೨೦, ೨೫.

೬೧. ತೈತ್ತಿರೀಯಕಮ್—
ಯಜುರ್ವೇದದ ತೈತ್ತಿರೀಯಶ್ರುತಿ, ೭.

೬೨. ತ್ಯಕ್ತೈಷಣಃ—
ಏಷಣಾತ್ರಯವನ್ನು ಬಿಟ್ಟ ಜ್ಞಾನಿ, ೪,

೬೩. **ದಕ್ಷಿಣಮಾರ್ಗಃ**—
ಕರ್ಮಿಗಳು ಪಿತೃಲೋಕವನ್ನು ಪಡೆಯುವದಕ್ಕೆ ಹೋಗಬೇಕಾದ ಮಾರ್ಗ ೫೬.

೬೪. **ದೃಷ್ಟಂ ಫಲಮ್**—
ಕರ್ಮಕ್ಕೆ ಈ ಲೋಕದಲ್ಲಿಯೇ ಕಾಣಬರುವ ಬ್ರಹ್ಮವರ್ಚಸ್ಸೇ ಮುಂತಾದ ಫಲ ೧.

೬೫. **ದೇವತಾತ್ಮಗಮನಮ್**—
ದೇವತೆಯ ಸ್ವರೂಪವನ್ನೇ ಪಡೆಯುವದು ೨೩.

೬೬. **ದ್ವೈವಂ ನಿತ್ತಮ್**—
ಉಪಾಸನೆ ೧೯, ೩೦.

೬೭. **ದ್ವೈತರೂಪಮ್**—
ಬಗೆಬಗೆಯಾಗಿ ಭಿನ್ನವಾಗಿರುವ ಜಗತ್ತು ೩.

೬೮. **ಧರ್ಮಾಧರ್ಮಾದಿಸಾಪಮ್**—
ಪುಣ್ಯಪಾಪಗಳೆಂಬ ಪಾಪ, ಆತ್ಮನ ದೃಷ್ಟಿಯಿಂದ ಧರ್ಮವೂ ಪಾಪವೇ ೭

೬೯. **ನಾಮರೂಪಕರ್ಮಾಖ್ಯಮ್**—
ಹೆಸರು, ಆಕಾರ, ಕೆಲಸ—ಎಂಬ ಮೂರು ರೂಪಗಳುಳ್ಳ ೩.

೭೦. **ನಾಮರೂಪಕ್ರಿಯಾತ್ಮಕಮ್**
ನಾಮ, ರೂಪ, ಕರ್ಮ, ಎಂಬ ರೂಪದಲ್ಲಿ ವಿಂಗಡವಾಗಿ ತೋರುತ್ತಿರುವ ಜಗತ್ತು ೧೪

೭೧. **ನಿತ್ಯಚೈತನ್ಯಸ್ವರೂಪಮ್**—
ಯಾವಾಗಲೂ ಇರುವ ಅರಿವಿನ ರೂಪವಾದ ಆತ್ಮತತ್ತ್ವ ೧೨.

೭೨. **ನಿತ್ಯಮುಕ್ತಃ**—
ಎಂದೆಂದಿಗೂ ಮುಕ್ತನಾಗಿಯೇ ಇರುವ ಈಶ್ವರ ೧೭.

೭೩. **ನಿರುಪಾಧಿಕಮ್**—
ಉಪಾಧಿಯಿಲ್ಲದ (ಆತ್ಮ)ರೂಪ, ೧೧

೭೪. **ನಿರ್ಗುಣಃ**—
ಯಾವ ಧರ್ಮವೂ ಇಲ್ಲದ (ಆತ್ಮ), ೧೫.

೭೫. **ನಿರ್ವಿಶೇಷಃ**—
ಇಂಥದ್ದೆಂಬ ವಿಶೇಷವಿಲ್ಲದ. ೧೫.

೭೬. **ನಿವೃತ್ತಿಮಾರ್ಗಃ**—
ಎಲ್ಲವನ್ನೂ ಬಿಟ್ಟು ಜ್ಞಾನದಲ್ಲಿ ನಿಂತಿರುವ ಮಾರ್ಗ. ೭, ೩೦.

೭೭. **ನಿಷೇಕಾದಿಶ್ಮಶಾನಾನ್ತಮ್**—
ಗರ್ಭಾದಾನದಿಂದ ಹಿಡಿದು ಅಂತ್ಯೇಷ್ಟಿಯವರೆಗಿನ ಕರ್ಮ ೩೦.

೭೮. **ಪರಮಾತ್ಮಾ**—
ಎಲ್ಲಕ್ಕೂ ಹೆಚ್ಚಿನ ನಿಜವಾದ ಆತ್ಮನು ೩

೭೯. **ಪರಮಾತ್ಮಭಾವಃ**—
ಪರಮಾತ್ಮಸ್ವರೂಪ ೯.

೮೦. **ಪರಮಾತ್ಮವಿದ್ಯಾ, ಪರಮಾತ್ಮಜ್ಞಾನಮ್**—
ಪರಮಾತ್ಮನನ್ನು ಅರಿತುಕೊಳ್ಳುವದು. ೧೯, ೩೮, ೩೯

೮೧. **ಪರಮಾರ್ಥವಸ್ತು**—
ನಿಜವಾದ ವಸ್ತು ೧೬.

೮೨. **ಪರಮಾರ್ಥಸತ್ಯಮ್**—
ನಿಜವಾಗಿಯೂ ಸತ್ಯವಾಗಿರುವ ಆತ್ಮ ೩.

೮೩. **ಪರಮಾರ್ಥಾತ್ಮಾ**—
ನಿಜವಾಗಿಯೂ ಆತ್ಮನಾಗಿರುವ ಆತ್ಮನು ೧೬.

೮೪. **ಪರಮೇಶ್ವರಃ**—
ಹೆಚ್ಚಿನ ಈಶ್ವರನು, ಎಲ್ಲವನ್ನೂ ಆಳುವ ಆತ್ಮನು, ೬೩.

೮೫. **ಪರಿವ್ರಾಟ್**—
ಸಂಚರಿಸುತ್ತಿರುವ ಪರಮಹಂಸ ಸಂನ್ಯಾಸಿ ೧೫.

೮೬. **ಪುತ್ರಾದ್ಯೇಷಣಾತ್ರಯಮ್**—
ಮಗನೇ ಮುಂತಾದ ಮೂರರ ಬಯಕೆ ೩, ೫.

೮೭. **ಪುರುಷಃ**—
(೧) ಮನುಷ್ಯ, ೨೩, ೩೮.
(೨) ಪ್ರಾಣಬುದ್ಧ್ಯಾತ್ಮನಾದ ಹಿರಣ್ಯಗರ್ಭ. ೩೩.

೮೮. ಪುರುಷಾರ್ಥಃ—
ಪುರುಷನು ಬಯಸುವ ಗತಿ ೨೩, ೨೮.

೮೯. ಪೌರಾಣಿಕಾಃ—
ಪುರಾಣವನ್ನು ಬರೆದಿರುವವರು ಅಥವಾ ಬಲ್ಲವರು ೨೭.

೯೦. ಪ್ರಕೃತಿಃ—
ಜಗತ್ತಿನ ಸೂಕ್ಷ್ಮಕಾರಣ, ಅವ್ಯಾಕೃತ, ಅವ್ಯಕ್ತ, ೨೫

೯೧. ಪ್ರಕೃತಿಲಯಃ—
ಅವ್ಯಕ್ತದಲ್ಲಿ ಅಡಗುವ ಉತ್ತಮ ಸ್ಥಿತಿ ೨೭, ೨೯, ೩೦

೯೨. ಪ್ರಜಾಪತಯಃ—
ಜೀವರನ್ನು ಸೃಷ್ಟಿಸುವ ಬ್ರಹ್ಮರು ೧೭.

೯೩. ಪ್ರತೀಕಮ್—
ಉಪಾಸ್ಯದೇವತೆಗೆ ಬದಲಾಗಿಟ್ಟುಕೊಳ್ಳುವ ಓಂಕಾರವೇ ಮುಂತಾದ ಗುರುತು ೩೪.

೯೪. ಪ್ರತ್ಯಗಾತ್ಮಾ—
ಒಳಗಿರುವ ಆತ್ಮ ೩.

೯೫. ಪ್ರತ್ಯಯಃ—
ವಿಷಯವನ್ನು ತಿಳಿಸುವ ಮನಸ್ಸಿನ ವೃತ್ತಿ ೧೫

೯೬. ಪ್ರಯೋಜನಮ್—
ಫಲ. ಅಧಿಕಾರಿ, ಅಭಿಧೇಯ, ಪ್ರಯೋಜನ ಸಂಬಂಧ—ಎಂಬ ನಾಲ್ಕು ಅನುಬಂಧಗಳು ಗ್ರಂಥಕ್ಕೆ ಇರಬೇಕು ೨.

೯೭. ಪ್ರವರ್ಗ್ಯಾನ್ತಂ ಬ್ರಾಹ್ಮಣಮ್—
ಶುಕ್ಲಯಜುರ್ವೇದದ ಕರ್ಮಭಾಗವನ್ನು ವಿವರಿಸುವ ಭಾಗ ೩೦.

೯೮. ಪ್ರವೃತ್ತಿಲಕ್ಷಣಧರ್ಮಃ—
ವಿಧಿನಿಷೇಧಗಳನ್ನು ಪಾಲಿಸುವ ಧರ್ಮ ೩೦.

೯೯. ಬೃಹದಾರಣ್ಯಕಮ್—
ಶುಕ್ಲಯಜುರ್ವೇದದ ಸಂಹಿತೆಯೂ ಬ್ರಾಹ್ಮಣವೂ ಆದಬಳಿಕ ಜ್ಞಾನವನ್ನು ವಿವರಿಸುವದಕ್ಕೆ ಬಂದಿರುವ ಭಾಗ. ೩೦.

೧೦೦. ಬ್ರಹ್ಮಲೋಕೆ—
ಹಿರಣ್ಯಗರ್ಭನಿರುವ ಸತ್ಯಲೋಕ, ೧೧

೧೦೧. ಮನಃ—
ಸಂಕಲ್ಪವಿಕಲ್ಪಾತ್ಮಕವಾದ ಅಂತಃಕರಣ, ೧೧

೧೦೨. ಮಾನುಷವಿತ್ತಮ್—
ಗೋವು ಮುಂತಾದವುಗಳು, ಅವುಗಳ ಸಹಾಯದಿಂದ ಮಾಡುವ ಕರ್ಮ, ೩೦.

೧೦೩. ಮಾರ್ಗಯಾಚನಮ್—
ಉಪಾಸಕನು ಬ್ರಹ್ಮಲೋಕಕ್ಕೆ ಹೋಗುವ ಮಾರ್ಗವನ್ನು ಬೇಡಿಕೊಳ್ಳುವದು ೩೫, ೩೯.

೧೦೪. ಮಿಥ್ಯಾ—
ಹುಸಿತೋರಿಕೆಯ ೪.

೧೦೫. ಮುಮುಕ್ಷುಃ—
ಮೋಕ್ಷವನ್ನು ಬಯಸುವವನು ೧೫

೧೦೬. ಮೃತ್ಯುಃ—
(೧) ಲೌಕಿಕವಾದ ಜ್ಞಾನಕರ್ಮಗಳು. ೨೩.
(೨) ಅನೈಶ್ವರ್ಯವು, ಅಧರ್ಮಾದಿಗಳು ೨೯.

೧೦೭. ಮೋಕ್ಷಧರ್ಮಾಃ—
ಭಾರತದ ಶಾಂತಿಧರ್ಮದಲ್ಲಿ ಮೋಕ್ಷ ವಿಚಾರವನ್ನು ತಿಳಿಸುವ ಭಾಗ. ೧.

೧೦೮. ಲಿಙ್ಗಮ್, ಲಿಙ್ಗಶರೀರಮ್—
ಮನಸ್ಸು ಮುಂತಾದವುಗಳಿಂದಾಗಿರುವ ಸೂಕ್ಷ್ಮಶರೀರ ೧೭, ೩೪.

೧೦೯. ಲೋಕಬುದ್ಧಿಸಿದ್ಧಮ್—
ಸಾಮಾನ್ಯರ ತಿಳಿವಳಿಕೆಗೆ ಗೊತ್ತಿರುವ. ೧.

೧೧೦. **ಲೋಕಾಃ**—
ಕರ್ಮಫಲವನ್ನು ಅನುಭವಿಸುವ ಸ್ಥಲಗಳು ೯.

೧೧೧. **ವಿಕಲ್ಪಃ**—
(೧) ವಿಧವಿಧವಾಗಿ ಕಲ್ಪಿಸುವ ಮನಸ್ಸು ೧೧
(೨) ಹೀಗೂ ಇರಬಹುದು, ಹಾಗೂ ಇರಬಹುದು ಎಂದು ಕಲ್ಪಿಸುವದು ೩೯

೧೧೨. **ವಿಕಾರ್ಯಮ್**—
ಮಾರ್ಪಾಡಾಗತಕ್ಕದ್ದು. ಕರ್ಮದ ಫಲಕ್ಕಿರುವ ನಾಲ್ಕು ರೂಪಗಳಲ್ಲಿ ಒಂದು ೧.

೧೧೩. **ವಿಕಾರಜಾತಮ್**—
ಕಾರ್ಯಸಮೂಹವು ೩.

೧೧೪. **ವಿದ್ಯಾ**—
(೧) ಉಪಾಸನೆ, ೨೦, ೨೨, ೨೩
(೨) ಪರಮಾತ್ಮನನ್ನು ಅರಿತುಕೊಳ್ಳುವದು ೨೦, ೩೯

೧೧೫. **ವೇದಾಚಾರ್ಯಃ**—
ವೇದಗಳನ್ನು ವಿಂಗಡಿಸಿದ ವ್ಯಾಸರು, ೭

೧೧೬. **ವೇದಾರ್ಥಃ**—
ವೇದದಲ್ಲಿ ಉಪದೇಶಿಸಿರುವ ಧರ್ಮ, ೫, ೧೮, ೩೦

೧೧೭. **ವ್ಯಾಕೃತಮ್**—
ನಾಮ, ರೂಪ, ಕರ್ಮ ಎಂದು ವಿಂಗಡಿಸಿಕೊಂಡಿರುವ ಜಗತ್ತು ೨೪.

೧೧೮. **ವ್ಯಾಸಃ**—
ವೇದವನ್ನು ವಿಂಗಡಿಸಿರುವ ವ್ಯಾಸರು ೭.

೧೧೯. **ಶಾಸ್ತ್ರಮ್**—
ವೇದವು ೬, ೧೯, ೩೦, ೩೪

೧೨೦. **ಶಾಸ್ತ್ರಪ್ರಮಾಣಕಮ್, ಶಾಸ್ತ್ರಲಕ್ಷಣಮ್**—
ವೇದವೆಂಬ ಪ್ರಮಾಣದಿಂದ ತಿಳಿಯಬರತಕ್ಕದ್ದು. ೩೦, ೩೪.

೧೨೧. **ಶ್ವೇತಾಶ್ವತರಾಃ**—
ಕೃಷ್ಣಯಜುರ್ವೇದದ ಒಂದು ಶಾಖೆಯನ್ನು ಅಧ್ಯಯನಮಾಡುವವರು ೧೪.

೧೨೨. **ಸಂಶಯಃ**—
ಹೀಗೆ ಹಾಗೆ ಎಂದು ಒಂದು ಪದಾರ್ಥದಲ್ಲಿ ಎರಡು ಕಡೆಗೆ ತೂಗಾಡುವ ಮನಸ್ಸಿನ ವೃತ್ತಿ. ೩೯.

೧೨೩. **ಸಂಸಾರಧರ್ಮಾಃ**—
ಶೋಕ ಮೋಹ ಮುಂತಾದ ಸಂಸಾರಕ್ಕೆ ಕಾರಣವಾದ ಧರ್ಮಗಳು ೨, ೧೧.

೧೨೪. **ಸಂಸ್ಕಾರ್ಯಮ್**—
ಅತಿಶಯವನ್ನು ಹೊಂದತಕ್ಕದ್ದು, ಕರ್ಮಫಲದ ನಾಲ್ಕುರೂಪಗಳಲ್ಲಿ ಒಂದು. ೧

೧೨೫. **ಸಂವತ್ಸರಾಃ**—
ಪ್ರಜಾಪತಿಬ್ರಹ್ಮರು ೧೭.

೧೨೬. **ಸಙ್ಕಲ್ಪಃ**—
ಹೀಗೆ ಮಾಡುವೆನೆಂದು ಕಲ್ಪಿಸುವ ಮನಸ್ಸಿನ ವೃತ್ತಿ. ೧೧.

೧೨೭. **ಸತ್ಯಮ್**—
(೧) ನಿಜವಾಗಿರುವದು ೩.
(೨) ಅವಶ್ಯವಾಗಿ ಫಲವನ್ನು ಕೊಡುವದು ೩೨.
(೩) ಹಿರಣ್ಯಗರ್ಭನ ಮತ್ತು ಲಿಂಗಾತ್ಮನ ಹೆಸರು ೩೨.

೧೨೮. **ಸತ್ಯಾತ್ಮಾ**—
ಸೂರ್ಯನಲ್ಲಿಯೂ ಪುರುಷನಲ್ಲಿಯೂ ಇರುವ ಸತ್ಯವೆಂಬ ಹೆಸರಿನ ಅಪರಬ್ರಹ್ಮ, ಹಿರಣ್ಯಗರ್ಭ ೩೧, ೩೨.

೧೨೯. **ಸಂನ್ಯಾಸಃ**—
ಕರ್ಮವನ್ನು ಬಿಡುವದು ೩, ೩೦.

೧೩೦. **ಸಂನ್ಯಾಸೀ**
ಕರ್ಮವನ್ನು ಬಿಟ್ಟವನು, ೭, ೧೮.

೧೩೧. **ಸಪ್ತಾನ್ನಸರ್ಗಃ**—
ಕರ್ಮದ ಫಲವಾಗಿ ಹುಟ್ಟುವ ಏಳು ಅನ್ನಗಳು.

೧೩೨. **ಸಮುಚ್ಚಯಃ**—
ಕರ್ಮೋಪಾಸನೆಗಳನ್ನೂ ವ್ಯಾಕೃತಾವ್ಯಾಕೃತೋಪಾಸನೆಗಳನ್ನೂ ಕೂಡಿಸಿ ಅನುಷ್ಠಾನಮಾಡುವದು. ೨೧, ೨೬, ೨೮, ೩೮, ೩೯.

೧೩೩. ಸಂಬನ್ಧಃ—
ಹಿಂದಿನ ಗ್ರಂಥಕ್ಕೂ ಈ ಗ್ರಂಥಕ್ಕೂ ಈ ಗ್ರಂಥದಲ್ಲಿರುವ ವಿಷಯಕ್ಕೂ ಪ್ರಯೋಜನಕ್ಕೂ ಇರುವ ಸಂಬಂಧವು. ೨.

೧೩೪. ಸರ್ವಜ್ಞಃ—
ಎಲ್ಲವನ್ನೂ ಬಲ್ಲವನು, ಈಶ್ವರ. ೧೭.

೧೩೫. ಸರ್ವಪ್ರತ್ಯಯಸಾಕ್ಷೀ—
ಎಲ್ಲಾ ಅಂತಃಕರಣದ ಅರಿವುಗಳನ್ನು ನೇರಾಗಿ ನೋಡುವ ಆತ್ಮನು ೧೫.

೧೩೬. ಸರ್ವಭೂತಾನಿ—
ಸ್ಥಾವರಜಂಗಮಪ್ರಾಣಿಗಳೆಲ್ಲವೂ ೧೧, ೧೫, ೧೬.

೧೩೭. ಸರ್ವಾತ್ಮಭಾವಃ—
ಎಲ್ಲಕ್ಕೂ ಆತ್ಮನಾಗುವಿಕೆ ೭.

೧೩೮. ಸಾಕ್ಷೀ—
ತನ್ನಲ್ಲಿ ವಿಕಾರವಿಲ್ಲದೆಯೇ ನೇರಾಗಿ ನೋಡುವ ಆತ್ಮ. ೧೫.

೧೩೯. ಸಾಧ್ಯಸಾಧನಭೇದಃ—
ಇದನ್ನು ಪಡೆಯುವದಕ್ಕೆ ಇದು ಸಾಧನವು ಎಂಬ ಭೇದ. ೧೪.

೧೪೦. ಸೂತ್ರಮ್, ಸೂತ್ರಾತ್ಮಾ—
ಕ್ರಿಯಾಪ್ರಧಾನವಾಗಿರುವ ಅಪರಬ್ರಹ್ಮ, ವಾಯು. ೧೨.

೧೪೧. ಸೋಪಾಧಿಕಮ್—
ಉಪಾಧಿಯಿಂದ ತೋರುವ ಆತ್ಮರೂಪ. ೧೧.

೧೪೨. ಸ್ಥೂಲಶರೀರಮ್—
ಇಂದ್ರಿಯಗಳಿಗೆ ಗೋಚರವಾಗುವ. ಪ್ರಸಿದ್ಧವಾದ ಶರೀರವು. ೧೭.

೧೪೩. ಸ್ವಾಭಾವಿಕಮ್—
(೧) ವಿಚಾರವಿಲ್ಲದ ಸ್ವಭಾವದ, ೨, ೩
(೨) ಸ್ವರೂಪವಾದ. ೧೨.

೧೪೪. ಹಿರಣ್ಮಗರ್ಭಃ—
ಕಾರ್ಯಬ್ರಹ್ಮ, ಅಪರಬ್ರಹ್ಮ; ಉಪಾಸನೆಯಿಂದ ಪಡೆಯಬೇಕಾಗಿರುವ ಉತ್ತಮಗತಿ. ೨೫, ೨೯.

ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ

ಸಂಖ್ಯೆ ೨೦

ಶ್ರೀ ಶಾಂಕರಪದಭಾಷ್ಯವಾಕ್ಯಭಾಷ್ಯಸಮೇತ

ಕೇನೋಪನಿಷತ್ತು

ಉಪನಿಷತ್ತಿನ ಮತ್ತು ಭಾಷ್ಯದ ಸಂಸ್ಕೃತಮೂಲ, ಅನುವಾದ, ಟಿಪ್ಪಣಿ, ಸಾರ ಮುಂತಾದವುಗಳೊಡನೆ

ಬರೆದವರು :

ಅಧ್ಯಾತ್ಮಗ್ರಂಥಾವಳಿಯ ಸಂಪಾದಕ

ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮ

ಎರಡನೆಯ ಸಂಸ್ಕರಣ

ಅಧ್ಯಾತ್ಮಗ್ರಂಥಾವಳಿ ಕ್ರಮಾಂಕ ೨

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

ಮೊದಲನೆಯ ಸಂಸ್ಕರಣ : ೧೯೩೫
ಎರಡನೆಯ ಸಂಸ್ಕರಣ : ೧೯೪೫
(೧,೦೦೦ ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಮುದ್ರಣಕಾರರು :
ಜಿ. ಎಚ್. ರಾಮರಾವ್, ಬಿ.ಎಸ್ಸಿ.
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು

ಹೊಸ ಸಂಸ್ಕರಣದ ಮೊದಲಮಾತು

ಈ ಗ್ರಂಥವು ಅಚ್ಚಾಗಿ ಸುಮಾರು ಹತ್ತು ವರ್ಷಗಳಾದವು. ಅಧ್ಯಾತ್ಮ ಪ್ರಕಾಶಕಾರ್ಯಾಲಯದ ಉದ್ದೇಶಕ್ಕೆ ಅನುಗುಣವಾಗಿ ಈ ಉಪನಿಷತ್ತನ್ನು ಶ್ರೀ ಜಯಚಾಮರಾಜೇಂದ್ರಗ್ರಂಥಮಾಲೆಗೆ ಸೇರಿಸುವದಕ್ಕೆ ಅನುಕೂಲಿಸುವಂತೆ ಈ ಸಲ ಗ್ರಂಥವನ್ನು ಸಂಪೂರ್ಣವಾಗಿ ಪರಿಷ್ಕರಿಸಿರುತ್ತೇನೆ.

ಈ ಸಂಸ್ಕರಣದಲ್ಲಿ ಸಂಸ್ಕೃತಮೂಲವನ್ನು ಮುಖ್ಯವಾಗಿ ಆನಂದಾಶ್ರಮದ ಪ್ರಕಟನೆಯ ಆಧಾರದಿಂದಲೇ ಬರೆದುಕೊಂಡಿರುತ್ತದೆಯಾದರೂ ಬೇರೆಯು ಕಡೆಗಳಲ್ಲಿ ಅಚ್ಚಾಗಿರುವ ಪಾಠಗಳೊಡನೆ ಹೋಲಿಸಿಕೊಂಡು ಹೆಚ್ಚು ಸಮ್ಮತವಾದ ಪಾಠವನ್ನೇ ಗ್ರಂಥಶರೀರದಲ್ಲಿಟ್ಟುಕೊಂಡಿರುತ್ತೇನೆ. ಅನುವಾದ, ಟಿಪ್ಪಣಿ, ಸಾರ-ಇವುಗಳನ್ನು ಅವಶ್ಯವೆಂದು ಕಂಡುಬಂದ ಸ್ಥಳಗಳಲ್ಲಿ ಸರಿಪಡಿಸಿಕೊಂಡು ಶಬ್ದಾನುಕ್ರಮಣಿಕೆಯನ್ನು ಹಿಗ್ಗಿಸಿ ತಕ್ಕಂತೆ ಮಾರ್ಪಡಿಸಿ ಆಯಾ ಶಬ್ದಗಳಿಗೆ ಭಾಷ್ಯಭಾಗಸಂಖ್ಯೆಗಳನ್ನು ಕೊಟ್ಟಿರುತ್ತೇನೆ. ವಾಕ್ಯಭಾಷ್ಯವನ್ನೂ ಕನ್ನಡಿಸಿ ಹೊಸದಾಗಿ ಸೇರಿಸಿರುವದಲ್ಲದೆ ಪೀಠಿಕೆಯನ್ನು ಸಂಪೂರ್ಣವಾಗಿ ಪರಿಷ್ಕರಿಸಿ ಹೊಸದಾಗಿಯೇ ಬರೆದಿರುತ್ತೇನೆ. ಮೊದಲನೆಯ ಪ್ರಕಟನೆಯು "ಅಧ್ಯಾತ್ಮ ಪ್ರಕಾಶ" ಪತ್ರಿಕೆಯ ಸಂಚಿಕೆಗಳಲ್ಲಿ ಪ್ರಕಟವಾದಕಾರಣ ಆಗಿದ್ದ ತಪ್ಪುಗಳು ಈಗ ಇರಲಾರವೆಂದೂ ತಿದ್ದಿ ಬೆಳೆಯಿಸಿದ ಈ ಹೊಸ ಆವೃತ್ತಿಯ ಪ್ರಕಟನೆಯು ಓದುಗರಿಗೆ ಹೆಚ್ಚು ಪ್ರಯೋಜನಕರವಾದೀತೆಂದೂ ನನಗೆ ಪ್ರತೀಕ್ಷೆಯಿದೆ.

ಈಶಾವಾಸ್ಯೋಪನಿಷತ್ತಿನ ಪರಿಶೋಧನೆಗೆ ಮಾಡಿರುವಂತೆಯೇ ಈ ಉಪನಿಷತ್ತಿನ ತಿದ್ದುಪಡಿಗೂ ಸಹಾಯಮಾಡಿರುವ ವೇದಾಂತಶಿರೋಮಣೀತ್ಯಾದಿ ಬಿರುದಾಂಕಿತರಾದ ಬ್ರ॥ ಶ್ರೀ॥ ಎಸ್. ವಿಠಲಶಾಸ್ತ್ರಿಗಳವರಿಗೂ ಶ್ರೀಯುತ ಹೊಳೇನರಸೀಪುರದ ಪ್ಲೀಡರ್ ಪಿ. ಎಸ್. ನರಸಿಂಹಯ್ಯನವರಿಗೂ ನಾನು ಕೃತಜ್ಞನಾಗಿರುತ್ತೇನೆ.

ಯ. ಸುಬ್ರಹ್ಮಣ್ಯಶರ್ಮ.

ಪೀಠಿಕೆ

ಈ ಉಪನಿಷತ್ತು ಭಾಷ್ಯಕಾರರ ಮತದಂತೆ ತಲವಕಾರಶಾಖೆಯ ಸಾಮವೇದದ ಬ್ರಾಹ್ಮಣದಲ್ಲಿ ಒಂಭತ್ತನೆಯ ಅಧ್ಯಾಯವಾಗಿರುವದರಿಂದ ಇದನ್ನು "ತಲವಕಾರೋಪನಿಷತ್ತು" ಎಂದೂ ಕರೆಯುತ್ತಾರೆ. ಕೇನ ಎಂಬ ಮಾತಿನಿಂದ ಪ್ರಾರಂಭವಾಗಿರುವ ಇದನ್ನು "ಕೇನೋಪನಿಷತ್ತು" ಎಂದು ಕರೆಯುವ ವೈದಿಕ ರೂಢಿಯೇ ಬಹು ಕಡೆಗಳಲ್ಲಿರುತ್ತದೆ. ಡಾಕ್ಟರ್ ಬರ್ನೆಲ್ ಎಂಬ ಪಾಶ್ಚಾತ್ಯ ಪುರಾತತ್ತ್ವಶೋಧಕರು ಕಂಡುಹಿಡಿದಿರುವ ಒಂದಾನೊಂದು ಕೈಪ್ರತಿಯಲ್ಲಿ ಇದು ಬ್ರಾಹ್ಮಣದ ಒಂಭತ್ತನೆಯ ಅಧ್ಯಾಯವಾಗಿರದೆ ನಾಲ್ಕನೆಯ ಅಧ್ಯಾಯವಾಗಿದೆಯಂತೆ. ಈ ಹೆಚ್ಚು ಕಡಿಮೆಗೆ ಏನು ಕಾರಣವೋ ತಿಳಿಯದು.

ಉಪನಿಷತ್ತಿನ ಭಾಷ್ಯಗಳು

ಈ ಉಪನಿಷತ್ತಿಗೆ ಶ್ರೀ ಶಂಕರಾಚಾರ್ಯಕೃತವೆಂದು ಪ್ರಸಿದ್ಧವಾಗಿರುವ ಎರಡು ಭಾಷ್ಯಗಳಿರುತ್ತವೆ. ಈ ಎರಡು ಭಾಷ್ಯಗಳೂ ಒಬ್ಬರೇ ಆಚಾರ್ಯರು ಬರೆದವುಗಳೆ ? ಒಬ್ಬರೇ ಎರಡು ಭಾಷ್ಯಗಳನ್ನು ಏತಕ್ಕೆ ಬರೆದರು ?– ಎಂಬ ಪ್ರಶ್ನೆಗಳಿಗೆ ಚಿತ್ತಕ್ಕೆ ತೃಪ್ತಿಕರವಾಗಿರುವ ಉತ್ತರವನ್ನು ಕಂಡುಕೊಳ್ಳುವದು ಕಷ್ಟವಾಗಿರುತ್ತದೆ. ಈ ಭಾಷ್ಯಗಳೆರಡಕ್ಕೂ ವ್ಯಾಖ್ಯಾನವನ್ನು ಬರೆದಿರುವವರು ಇವುಗಳಲ್ಲಿ ಒಂದಕ್ಕೆ ಪದಭಾಷ್ಯವೆಂದೂ ಇನ್ನೊಂದಕ್ಕೆ ವಾಕ್ಯಭಾಷ್ಯವೆಂದೂ ಹೆಸರಿಟ್ಟಿರುತ್ತಾರೆ. ಅವರು ಎರಡನೆಯ ವ್ಯಾಖ್ಯಾನಾರಂಭದಲ್ಲಿ ಬರೆದಿರುವದೇನೆಂದರೆ : "ಕೇನೇಷಿತಮ್ ಇತ್ಯಾದಿಕಾಂ ಸಾಮವೇದಶಾಖಾಭೇದಬ್ರಾಹ್ಮಣೋಪನಿಷದಂ ಪದಶೋ ವ್ಯಾಖ್ಯಾಯಾಪಿ ನ ತುತೋಷ ಭಗವಾನ್ ಭಾಷ್ಯಕಾರಃ । ಶಾರೀರಕೈ ರ್ನ್ಯಾಯೈರನಿರ್ಣೀತಾರ್ಥತ್ವಾತ್ ಇತಿ ನ್ಯಾಯಪ್ರಧಾನಶ್ರುತ್ಯರ್ಥಸಙ್ಗ್ರಹಕೈರ್ವಾಕ್ಯೈರ್ವ್ಯಾಚಿಖ್ಯಾಸುಃ . . . . ." ಈ ವಾಕ್ಯದ ಅಭಿಪ್ರಾಯವಿದು : "ಕೇನೇಷಿತಮ್ ಮುಂತಾದ ಸಾಮವೇದದ ಒಂದಾನೊಂದು ಶಾಖೆಯ ಬ್ರಾಹ್ಮಣದ ಈ ಉಪನಿಷತ್ತಿಗೆ ಪದಶಃ ವ್ಯಾಖ್ಯಾನ ಮಾಡಿದಮೇಲೂ ಭಗವಾನ್ ಭಾಷ್ಯಕಾರರು ಸಂತುಷ್ಟರಾಗಲಿಲ್ಲ ; ಏಕೆಂದರೆ (ಈ ಉಪನಿಷತ್ತಿಗೆ ಪದಭಾಷ್ಯದಲ್ಲಿ) ಶಾರೀರಕನ್ಯಾಯಗಳಿಂದ ಅರ್ಥನಿರ್ಣಯವನ್ನು ಮಾಡಿರುವದಿಲ್ಲ. ಆದ್ದರಿಂದ ಈಗ ಶ್ರುತ್ಯರ್ಥವನ್ನು ಸಂಗ್ರಹವಾಗಿ ತಿಳಿ

ಸುವ ನ್ಯಾಯಪ್ರಧಾನವಾದ ವಾಕ್ಯಗಳಿಂದ ಉಪನಿಷತ್ತನ್ನು ವ್ಯಾಖ್ಯಾನಮಾಡಬೇಕೆಂಬ ಇಚ್ಛೆಯಿಂದ ಈ ವಾಕ್ಯಭಾಷ್ಯವನ್ನು ಪ್ರಾರಂಭಿಸಿರುತ್ತಾರೆ." ಈ ಕಾರಣ ನಿರ್ದೇಶವು ಎಷ್ಟರಮಟ್ಟಿಗೆ ಸರಿ ಎಂಬುದನ್ನು ನಿರ್ಣಯಿಸುವ ಮುಂಚೆ ಕೆಲವು ವಿಷಯಗಳನ್ನು ನಾವು ಲಕ್ಷ್ಯದಲ್ಲಿಡಬೇಕಾಗುತ್ತದೆ. ಮೊದಲನೆಯದಾಗಿ ಈ ವ್ಯಾಖ್ಯಾನಕಾರರು ಆನಂದಗಿರಿಗಳೆಂಬ ಹೆಸರಿನಿಂದ ಪ್ರಸಿದ್ಧರಾಗಿರುವವರೇ ಎಂದು ಆನಂದಾಶ್ರಮಮುದ್ರಿತಪುಸ್ತಕದಲ್ಲಿದೆ. ಆದರೆ "ಕೆಲವು ಕೈಪ್ರತಿಗಳಲ್ಲಿ ಈ ವ್ಯಾಖ್ಯಾನಕಾರರ ಹೆಸರನ್ನು ಬೇರೆಯಾಗಿ ತಿಳಿಸಿರುವದರಿಂದ ಇವರು ಮಿಕ್ಕ ಭಾಷ್ಯಗಳಿಗೆ ವ್ಯಾಖ್ಯಾನವನ್ನು ಬರೆದಿರುವ ಆನಂದಗಿರಿಗಳಲ್ಲವೆಂದು ಕಾಣುತ್ತದೆ" ಎಂತ ರಿ॥ ಪ್ರೊಫೆಸರ್ ಹಿರಿಯಣ್ಣನವರು ಅಭಿಪ್ರಾಯಪಟ್ಟಿರುತ್ತಾರೆ. ಒಂದು ವೇಳೆ ಈ ವ್ಯಾಖ್ಯಾನಕಾರರು ಆನಂದಗಿರಿಗಳೇ ಆಗಿದ್ದರೂ ಇವರಿಗೆ ಈ ಕಾರಣನಿರ್ದೇಶವು ಯಾವ ಆಧಾರದಿಂದ ದೊರೆತ ಸಂಪ್ರದಾಯೋಪದೇಶವು ?–ಎಂದು ಕೇಳಬೇಕಾಗುತ್ತದೆ. ಏಕೆಂದರೆ ಆನಂದಗಿರಿಗಳೇನೂ ಶ್ರೀ ಶಂಕರಾಚಾರ್ಯರ ಕಾಲದವರಲ್ಲ.

ಈ ಸಂದೇಹವನ್ನು ನಿವಾರಣೆಮಾಡಿಕೊಳ್ಳಬೇಕೆಂಬ ಜಿಜ್ಞಾಸುಗಳ ಕುತೂಹಲನಿವೃತ್ತಿಗಾಗಿ ನಾವು ಪದವಾಕ್ಯದ ಜೊತೆಗೆ ವಾಕ್ಯಭಾಷ್ಯವನ್ನೂ ಕನ್ನಡಿಸಿ ಜೋಡಿಸಿರುತ್ತೇವೆ. ಇವೆರಡು ಭಾಷ್ಯಾನುವಾದಗಳನ್ನೂ ವಿಮರ್ಶೆಮಾಡಿದರೆ ಕಂಡು ಬರುವದೇನೆಂದರೆ. (೧) ಆಚಾರ್ಯರು ತಾವು ಕೇನೋಪನಿಷತ್ತಿಗೆ ಎರಡು ಭಾಷ್ಯಗಳನ್ನು ಮಾಡಿರುವದಾಗಿ ಮತ್ತೆಲ್ಲಿಯೂ ಹೇಳಿಕೊಂಡಿರುವದಿಲ್ಲ, ವಾಕ್ಯಭಾಷ್ಯಕ್ಕೆ ಅಸಾಧಾರಣವಾಗಿರುವ ವಾದಸರಣಿಯನ್ನು ಅವರು ಮತ್ತೆಲ್ಲಿಯೂ ಅನುಸರಿಸಿರುವಂತೆಯೂ ಕಾಣುವದಿಲ್ಲ. (೨) ಈ ಎರಡು ಭಾಷ್ಯಗಳಲ್ಲಿ ಪದಭಾಷ್ಯವಾದ ಮೇಲೆ ವಾಕ್ಯಭಾಷ್ಯವನ್ನು ಆಚಾರ್ಯರು ಬರೆದರೆಂಬ ಅಭಿಪ್ರಾಯವು ವ್ಯಾಖ್ಯಾನದಲ್ಲಿ ಅಡಕವಾಗಿರುವದಷ್ಟೆ. ಇದಕ್ಕೆ ಪುಷ್ಟಿಕೊಡುವಂತೆ ವಾಕ್ಯಭಾಷ್ಯದಲ್ಲಿ ಪದಭಾಷ್ಯಕ್ಕೆ ಸಂಬಂಧಪಟ್ಟ ಪರಾಮರ್ಶಕವಾಕ್ಯಗಳು ಯಾವವೂ ಕಾಣುವದಿಲ್ಲ, ತಾವು ಎರಡು ಭಾಷ್ಯಗಳನ್ನು ಬರೆದಿರುವದಾಗಿ ಹೇಳಿಕೊಂಡಿರುವದಂತೂ ಇಲ್ಲವೇ ಇಲ್ಲ. (೩) ಮೊದಲನೆಯ ಭಾಷ್ಯದಲ್ಲಿರುವಂತೆ ಎರಡನೆಯ ಭಾಷ್ಯದಲ್ಲಿಯೂ ಪದಗಳ ಅರ್ಥವು ಕಂಡು ಬರುತ್ತದೆ. ಆದ್ದರಿಂದ 'ವಾಕ್ಯಭಾಷ್ಯ' ವೆಂಬ ಅಸಾಧಾರಣನಾಮವು ಆ ಭಾಷ್ಯಕ್ಕೆ ಬರುವದಕ್ಕೆ ಕಾರಣವು ಕಾಣುವದಿಲ್ಲ. (೪) ಈ ಎರಡು ಭಾಷ್ಯಗಳಲ್ಲಿ ಕೆಲವು ಪಾಠಭೇದಗಳೂ ಇರುತ್ತವೆ. ಉದಾಹರಣೆಗೆ ಎರಡನೆಯ ಖಂಡದ ಮೊದಲನೆಯ ಮಂತ್ರದಲ್ಲಿ "ನಾಹಂ ಮನ್ಯೇ" ಎಂದು ಒಂದರ ಪಾಠ, "ನಾಹ ಮನ್ಯೇ" ಎಂದು ಇನ್ನೊಂದರ ಪಾಠ. (೫) ಇವೆರಡು ಭಾಷ್ಯಗಳಲ್ಲಿ ಕೊಟ್ಟಿರುವ ಕೆಲವು ಪದಗಳ

ಅರ್ಥವಿವರವು ಬೇರೆಬೇರೆಯಾಗಿರುತ್ತದೆ. ಉದಾಹರಣೆಗೆ ಇಷಿತಮ್, ಪ್ರೇಷಿತಮ್, ವಾಚೋ ಹ ವಾಚಮ್, ಯದಸ್ಯ ದೇವೇಷು, ಪ್ರತಿಬೋಧವಿದಿತಮ್, ಇನ್ದ್ರಃ— ಇವುಗಳ ವಿವರವನ್ನು ನೋಡಿರಿ. (೬) ಕೆಲವು ಸಂದರ್ಭಗಳಲ್ಲಿ ಈ ಎರಡು ಭಾಷ್ಯಗಳಲ್ಲಿರುವ ವಿವರಣೆಗಳು ಪರಸ್ಪರವಿರುದ್ಧವಾಗಿರುತ್ತವೆ. ಉದಾಹರಣೆಗೆ "ಪ್ರತಿಬೋಧವಿದಿತಂ ಮತಮ್" "ಬ್ರಾಹ್ಮೀಂ ವಾವ ಉಪನಿಷದಮಬ್ರೂಮ" ಇವುಗಳ ವಿವರವನ್ನು ನೋಡಿರಿ.

'ವಾಕ್ಯಭಾಷ್ಯ" ವೆಂಬ ಹೆಸರು ಹೇಗೆ ಅನ್ವರ್ಥವಾಗಿದೆ ಎಂಬ ವಿಷಯದಲ್ಲಿ ವ್ಯಾಖ್ಯಾನಕಾರರ ಮತವನ್ನು ಆಗಲೆ ಕೊಟ್ಟಿರುತ್ತೇವೆ. ಪ್ರತಿಯೊಂದು ಮಂತ್ರಕ್ಕೂ ಅವತರಣಿಕೆಯಾಗಿ ಕೊಟ್ಟಿರುವ ಕೆಲವು "ಸಂಗ್ರಾಹಕ" ವಾಕ್ಯಗಳು ಪ್ರಸ್ಥಾನತ್ರಯಭಾಷ್ಯದಲ್ಲಿ ಬಹಳ ಅಪರೂಪವಾಗಿ ಕಾಣುವ ಅಥವಾ ಅತ್ಯಂತವಾಗಿ ಎಲ್ಲಿಯೂ ಕಾಣದೆಯೇ ಇರುವ ಶೈಲಿಯಲ್ಲಿರುತ್ತದೆ. ಉದಾಹರಣೆಗೆ "ಶ್ರೋತ್ರಸ್ಯ ಶ್ರೋತ್ರಮಿತ್ಯಾದಿಪ್ರತಿವಚನಂ ನಿರ್ವಿಶೇಷಸ್ಯ ನಿಮಿತ್ತತ್ವಾರ್ಥಮ್," "ಯದಿ ಮನ್ಯಸೇ ಸುವೇದೇತಿ ಶಿಷ್ಯವಿಚಾಲನಾ ಗೃಹೀತಸ್ಥಿರತಾಯೈ" ಮುಂತಾದ ವಾಕ್ಯಗಳನ್ನು ನೋಡಬಹುದು. ಸಂಗ್ರಹವಾಕ್ಯದಲ್ಲಿ ಹೇಳಿರುವದನ್ನು ಮುಂದೆ ವಿವರಿಸುವದು ಭಾಷ್ಯಗಳಲ್ಲೆಲ್ಲ ಕಾಣಬರುವದಾದರೂ ಇಲ್ಲಿರುವ ಕೆಲವು ಸಂಗ್ರಹವಾಕ್ಯಗಳು ಯಾವ ಅಭಿಪ್ರಾಯವನ್ನು ತಿಳಿಸುವದಕ್ಕೆ ಬಂದಿವೆ ಎಂಬುದು ವಿವರಣವಾಕ್ಯದ ಸಹಾಯವಿಲ್ಲದೆ ಊಹಿಸುವದೂ ಕಷ್ಟವಾಗಿರುವಷ್ಟು ಅತಿಸಂಕ್ಷಿಪ್ತವಾಗಿರುತ್ತವೆ. "ಕರ್ಮಾನಾರಭ್ಯ ಇತಿ ಚೇತ್ ನ" (ಭಾ.ಭಾ. ೯೨)* "ಅಪ್ರತಿಷೇಧಾಚ್ಚ" (೧೪೯) "ನ ಅನಭ್ಯುಪಗಮಾತ್" (೧೪೩)–ಮುಂತಾದವುಗಳು ಈ ಗುಂಪಿಗೆ ಸೇರಿದ ವಾಕ್ಯಗಳು.

ಪದಭಾಷ್ಯವನ್ನು ಬರೆದವರೇ ಪದಭಾಷ್ಯವನ್ನು ಬರೆದ ಬಳಿಕ ವಾಕ್ಯಭಾಷ್ಯವನ್ನು ಬರೆದರೆಂಬುದಕ್ಕೆ ಇರುವ ಇನ್ನೊಂದು ಅಡಚಣೆ ಏನೆಂದರೆ ಪದಭಾಷ್ಯದಲ್ಲಿ ಅಸ್ವಾರಸ್ಯವನ್ನು ತೋರಿಸಿರುವ ಪಕ್ಷವನ್ನೇ ವಾಕ್ಯಭಾಷ್ಯದಲ್ಲಿ ಒಪ್ಪಿರುವದು. ಉದಾಹರಣೆಗೆ "ಪ್ರತಿಬೋಧವಿದಿತಮ್" ಎಂಬ ಮಾತಿಗೆ ಒಂದೇ ಸಲಕ್ಕೆ ಆಗಿಬಿಡುವ ಅರಿವು ಎಂಬ ವ್ಯಾಖ್ಯಾನವನ್ನು ಕೊಡುವದು ಸರಿಯಲ್ಲವೆಂದು ಪದಭಾಷ್ಯದಲ್ಲಿ (೫೭) ಹೇಳಿದ್ದರೂ ವಾಕ್ಯಭಾಷ್ಯದಲ್ಲಿ (೧೨೯) ಅದೇ ವ್ಯಾಖ್ಯಾನವನ್ನು ಒಪ್ಪಿರುವದನ್ನು ನೋಡಬಹುದು. "ಅಬ್ರೂಮ" ಎಂಬುದಕ್ಕೆ ಭೂತಕಾಲದ ಅರ್ಥವನ್ನು ಪದ

---

* ಪೀಠಿಕೆಯಲ್ಲಿ ಕಂಸದಲ್ಲಿ ಕೊಟ್ಟಿರುವವುಗಳೆಲ್ಲ ಭಾಷ್ಯಭಾಗವ ಸಂಖ್ಯೆಗಳು.

ಭಾಷ್ಯದಲ್ಲಿ (೮೧) ಕೊಟ್ಟಿದ್ದರೂ ಆ ಅರ್ಥವು ಹೊಂದುವದಿಲ್ಲವೆಂದು ವಾಕ್ಯ ಭಾಷ್ಯದಲ್ಲಿ (೧೫೬) ಹೇಳಿರುವದನ್ನೂ ಲಕ್ಷ್ಯಕ್ಕೆ ತಂದುಕೊಳ್ಳಬಹುದಾಗಿದೆ.

ಇದಲ್ಲದೆ ವಾಕ್ಯಭಾಷ್ಯದಲ್ಲಿ ಕಾಣುವ ಪ್ರಯೋಗಗಳು ಕೆಲವು ವ್ಯಾಕರಣ ಬದ್ಧವಾಗಿಲ್ಲದಂತೆ ಕಾಣುತ್ತಿವೆ, ಕೆಲವು ಕಡೆ ವಾಕ್ಯಗಳು ಸರಿಯಾಗಿ ಅನ್ವಯವಾಗುವದಿಲ್ಲ, ಮತ್ತೆ ಕೆಲವು ಕಡೆ ಬರೆದವರ ತಪ್ಪಿನಿಂದ ವಾಕ್ಯಗಳ ಮಾತುಗಳು ಸ್ವಲ್ಪ ತಪ್ಪಾಗಿರುವಂತೆಯೂ ಕಾಣುತ್ತವೆ.

ವಾಕ್ಯಭಾಷ್ಯವು ಪದಭಾಷ್ಯಕಾರರದೇ ಎಂದು ನಂಬುವದಕ್ಕೂ ಆದು ಶ್ರೀ ಶಂಕರಾಚಾರ್ಯರದೇ ಎಂದು ನಂಬುವದಕ್ಕೂ ಹೀಗೆ ಕೆಲವು ಅಡ್ಡಿಗಳಿರುತ್ತಿದ್ದರೂ ಈ ಎರಡು ಭಾಷ್ಯಗಳನ್ನೂ ಶಂಕರಾಚಾರ್ಯರ ಭಾಷ್ಯಗಳಿಂದೇ ಹಿಂದೆ ಕೆಲವರು ಒಪ್ಪಿದ್ದರೆಂಬುದಕ್ಕೆ ಒಂದು ಪ್ರಬಲವಾದ ಸಾಧನವಿರುತ್ತದೆ. ಆನಂದಾಶ್ರಮದಲ್ಲಿ ಪ್ರಕಟಿತವಾಗಿರುವ **"ನಾರಾಯಣವಿರಚಿತಕೇನೋಪನಿಷದ್ದೀಪಿಕಾ"** ಎಂಬ ವ್ಯಾಖ್ಯಾನದಲ್ಲಿ ಗ್ರಂಥಕಾರನು ಈ ಉಪಸಂಹಾರ ಶ್ಲೋಕವನ್ನು ಬರೆದಿರುತ್ತಾನೆ: ನಾರಾಯಣೇನ ರಚಿತಾ ಶಂಕರೋಕ್ತ್ಯುಪಜೀವಿನಾ। ಅಸ್ಪಷ್ಟಪದವಾಕ್ಯಾನಾಂ ಕೇನೇಷಿತಪ್ರದೀಪಿಕಾ (?) ॥ (ಶಂಕರಾಚಾರ್ಯರ ವಚನವನ್ನು ಆಶ್ರಯಿಸಿ ನಾರಾಯಣನು 'ಕೇನೇಷಿತ್' ಉಪನಿಷತ್ತಿಗೆ ಅಸ್ಪಷ್ಟವಾಗಿರುವ ಪದವಾಕ್ಯಗಳರ್ಥವಾದ ಈ ದೀಪಿಕೆಯನ್ನು ಮಾಡಿರುತ್ತಾನೆ). ಈ ವ್ಯಾಖ್ಯಾನದಲ್ಲಿ ಪದಭಾಷ್ಯದ ವಾಕ್ಯಗಳನ್ನೂ ವಾಕ್ಯಭಾಷ್ಯದ ವಾಕ್ಯಗಳನ್ನೂ ಬಳಸಿರುವುದು ಕಂಡು ಬರುತ್ತದೆ. ಈ ನಾರಾಯಣನೆಂಬ ಪಂಡಿತನು ಕನಿಷ್ಠಪಕ್ಷಕ್ಕೆ ಶ್ರೀ ಶಂಕರಾನಂದರ ಕಾಲದವನಾಗಿಯಾದರೂ ಇರಬೇಕೆಂದು ತೋರುತ್ತದೆ. ವಾಕ್ಯಭಾಷ್ಯದ ವಿಷಯದಲ್ಲಿ ನಾವು ಇಲ್ಲಿ ಕೊಟ್ಟಿರುವ ತಿಳಿವಳಿಕೆಯು ಈ ವಿಷಯದಲ್ಲಿ ಹೆಚ್ಚು ಪರಿಶೋಧನೆ ಮಾಡಬೇಕೆನ್ನುವವರಿಗೆ ಸ್ವಲ್ಪ ಮಟ್ಟಿಗಾದರೂ ಸಹಾಯಕವಾಗಿರುವದೆಂದು ನಂಬುತ್ತೇವೆ. ಈ ಭಾಷ್ಯದಲ್ಲಿ ಸ್ವತಂತ್ರವಾದ ಹಲವು ಪ್ರೌಢವಿಚಾರಗಳು ಕಂಡು ಬರುವದರಿಂದ ಇದರ ಅನುವಾದವು ಸಪ್ರಯೋಜನವೆಂದೇ ನಾವು ಎಣಿಸಿರುತ್ತೇವೆ.

ಭಾಷ್ಯದ ವ್ಯಾಖ್ಯಾನ

ಈ ಉಪನಿಷತ್ತಿನ ವ್ಯಾಖ್ಯಾನಕಾರನು ಸುಪ್ರಸಿದ್ಧನಾದ ಆನಂದಗಿರಿಯಾಗಿರಲಾರನೆಂದು ಕೆಲವರ ಅಭಿಪ್ರಾಯವಿರುವದನ್ನು ಆಗಲೆ ತಿಳಿಸಿರುತ್ತೇವೆ. ಈ ವ್ಯಾಖ್ಯಾನದಲ್ಲಿ ಕಂಡು ಬರುವ ಕೆಲವು ಅಭಿಪ್ರಾಯಗಳು ಭಾಷ್ಯಸಮ್ಮತವಲ್ಲವೆಂದು ಕಂಡು ಬಂದ ಸ್ಥಳಗಳಲ್ಲಿ ಆ ವಿಷಯಕ್ಕೆ ಅಲ್ಲಲ್ಲಿ ಟಿಪ್ಪಣಿಯನ್ನು ಕೊಟ್ಟಿರುತ್ತೇವೆ. ಪದ

ಭಾಷ್ಯದ ವಿಷಯಕ್ಕೆ ಈ ವ್ಯಾಖ್ಯಾನದಲ್ಲಿ ಕೊಟ್ಟಿರುವ ಇಂಥ ಅಭಿಪ್ರಾಯಗಳಲ್ಲಿ
ಮುಖ್ಯವಾದವನ್ನು ಇಲ್ಲಿ ವಾಚಕರ ಲಕ್ಷ್ಯಕ್ಕೆ ತರುವದು ಸಪ್ರಯೋಜನವೆಂದು
ಭಾವಿಸಿರುತ್ತೇವೆ. (೧) ೧–೨ ರಲ್ಲಿ "ಅತಿಮುಚ್ಯ" ಎಂಬುದಕ್ಕೆ ಭಾಷ್ಯದಲ್ಲಿ ಎರಡು
ಅರ್ಥವನ್ನು ಕೊಟ್ಟಿರುತ್ತದೆ. ಇಲ್ಲಿ ಮೊದಲನೆಯದು ಜೀವನ್ಮುಕ್ತಿಯನ್ನೂ ಎರಡನೆ
ಯದು ವಿದೇಹಮುಕ್ತಿಯನ್ನೂ ಸೂಚಿಸುವದೆಂದು ವ್ಯಾಖ್ಯಾನದಲ್ಲಿದೆ. ಇದೂ
ಹೊಂದುತ್ತದೆಯಾದರೂ ಮುಂದೆ (ವಾಕ್ಯಭಾಷ್ಯ) ೨–೪ ರಲ್ಲಿ ಆಚಾರ್ಯರಿ
ನಿಗೆ "ಅವಿದ್ಯಾಲೇಶ" ವಿರುವದೆಂದು ವ್ಯಾಖ್ಯಾನಕಾರನು ಬರೆದಿರುವದರಿಂದ
ಜೀವನ್ಮುಕ್ತಿಯು ಗೌಣಮುಕ್ತಿಯೆಂಬ ಇವರ ಅಭಿಪ್ರಾಯವು ಭಾಷ್ಯಕ್ಕೆ ವಿರುದ್ಧ
ವಾಗಿರುತ್ತದೆ. (೨) "ಪ್ರತಿಬೋಧವೆಂದರೆ ಯಾವ ನಿಮಿತ್ತವೂ ಇಲ್ಲದ ಬೋಧವು,
ಗಾಢನಿದ್ರೆಯಲ್ಲಿರುವಾತನಿಗಿರುವಂಥ ಅರಿವು–ಎಂದು ಕೆಲವರು ಕಲ್ಪಿಸುತ್ತಾರೆ,
ಒಂದೇ ಸಲಕ್ಕೆ ಆಗುವ ಅರಿವು ಎಂದು ಕೆಲವರು ಕಲ್ಪಿಸಿರುತ್ತಾರೆ" ಎಂಬ
ಭಾಷ್ಯವಾಕ್ಯವು ಅಸಂಪ್ರಜ್ಞಾತಸಮಾಧಿಯನ್ನು ಸೂಚಿಸುವ ಮತ್ತು ಸದ್ಯೋ
ಮುಕ್ತಿವಾದವನ್ನು ಸೂಚಿಸುವ ಪೂರ್ವಪಕ್ಷವನ್ನು ಖಂಡಿಸಿದೆಯೆಂದೂ ಈ
ಪೂರ್ವಪಕ್ಷಗಳೆರಡೂ "ಅಪರಾಯತ್ತಬೇಧೋ ಹಿ ನಿಧಿಧ್ಯಾಸನಮುಚ್ಯತೇ"
"ಸಕೃತ್ಪ್ರವೃತ್ತ್ಯಾ ಮೃದ್ನಾತಿ" ಎಂಬ ವಾರ್ತಿಕಗಳಲ್ಲಿರುತ್ತದೆಯೆಂದೂ ಟೀಕೆಯಲ್ಲಿ
ಬರೆದಿರುತ್ತದೆ. ಆದರೆ ವಾಕ್ಯಭಾಷ್ಯದಲ್ಲಿ ಈ ಅಭಿಪ್ರಾಯವನ್ನು ವಿವರಿಸುವಾಗ
ಈ ವಿಚಾರವನ್ನೇ ಕೈಬಿಟ್ಟಿರುತ್ತದೆ. ವಾರ್ತಿಕದಲ್ಲಿ ನೋಡಿದರೆ ಅಸಂಪ್ರಜ್ಞಾತ
ಸಮಾಧಿಯ ಅಥವಾ ಸದ್ಯೋಮುಕ್ತಿವಾದದ ಸುಳಿವೇ ಇರುವದಿಲ್ಲ. ಆದ್ದರಿಂದ
ಭಾಷ್ಯವಾಕ್ಯದಲ್ಲಿ ಸೂಚಿಸಿರುವ ಈ ಪೂರ್ವಪಕ್ಷಗಳೆರಡೂ ವಾರ್ತಿಕಕಾರರಿಗೆ ಸಮ್ಮತ
ವೆಂದೂ ಭಾಷ್ಯಕಾರರಿಗೆ ಇವು ಸಮ್ಮತವಲ್ಲವೆಂದೂ ಹೇಳಿರುವದು ಸಮಂಜಸವಾಗಿ
ಕಾಣುವದಿಲ್ಲ. (೩) ಮೂರನೆಯ ಖಂಡದ ಸಂಬಂಧವನ್ನು ತಿಳಿಸುವಾಗ ಅಲ್ಲಿರುವ
ಯಕ್ಷನ ಕಥೆಯನ್ನು (ಅ) ಈಶ್ವರಾಸ್ತಿತ್ವಸಾಧಕವಾಗಿಯೂ (ಆ) ಬ್ರಹ್ಮವಿದ್ಯೆ
ಯನ್ನು ಹೊಗಳುವ ಆರ್ಥವಾದವಾಗಿಯೂ (ಇ) ಬ್ರಹ್ಮವನ್ನು ತಿಳಿದುಕೊಳ್ಳುವದು
ಬಲು ಕಷ್ಟ ಎಂಬುದನ್ನು ತಿಳಿಸುವ ವಾಕ್ಯವಾಗಿಯೂ (ಈ) ನಾಲ್ಕನೆಯ ಖಂಡ
ದಲ್ಲಿ ವಿಧಿಸಿರುವ ಉಪಾಸನೆಯನ್ನು ಹೊಗಳುವ ಅರ್ಥವಾದವಾಗಿಯೂ (ಉ)
ಕರ್ತೃತ್ವಭೋಕ್ತೃತ್ವಗಳು ಮಿಥ್ಯಾಭಿಮಾನಕೃತವೆಂದು ತಿಳಿಸುವ ಅರ್ಥವಾದ
ವಾಗಿಯೂ ಭಾಷ್ಯದಲ್ಲಿ ವಿವರಿಸಿರುತ್ತದೆ. ಈ ಐದು ಅರ್ಥಗಳಲ್ಲಿ ನಾಲ್ಕನೆಯ ಅರ್ಥ
ದಲ್ಲಿಯೇ ಭಾಷ್ಯಕ್ಕೆ ತಾತ್ಪರ್ಯವೆಂದೂ ಮಿಕ್ಕ ಸಂಬಂಧಗಳು ಸಂಭಾವನಾಮಾತ್ರ-
ಎಂದರೆ ಅವೂ ಹೊಂದುತ್ತವೆ ಎಂದು ತಿಳಿಸುವದಕ್ಕೇ ಹೊರತು ಬೇರೆಯಲ್ಲ-ಎಂದೂ

ಟೀಕಾಕಾರನು ಬರೆದಿರುತ್ತಾನೆ. ಆದರೆ ವಾಕ್ಯಭಾಷ್ಯದಲ್ಲಿ ಸಗುಣೋಪಾಸನೆಯ ವಿಚಾರವು ಬಂದಿರುವಾಗ "ಅಭಿಪ್ರಾಯಾನ್ತರಮ್ ಆಖ್ಯಾಯಿಕಾಯಾಃ ಸಙ್ಗ್ಹ್ಣಾತಿ" (ಈ ಕಥೆಗೆ ಮತ್ತೊಂದು ಅಭಿಪ್ರಾಯವನ್ನೂ ಸಂಗ್ರಹವಾಗಿ ಹೇಳುತ್ತಾರೆ) ಎಂದಿಷ್ಟೇ ಬರೆದು ಕೈ ಬಿಟ್ಟಿರುತ್ತಾನೆ. ಆದ್ದರಿಂದ ಮುಖ್ಯವಾಗಿ ಉಪಾಸನೆಯನ್ನೇ ಹೇಳುವದಕ್ಕಾಗಿ ಯಕ್ಷೋಪಾಖ್ಯಾನವು ಬಂದಿರುತ್ತದೆ ಎಂಬುದು ತರ್ಕದ ಹೊಡೆತಕ್ಕೆ ನಿಲ್ಲುವ ಅಭಿಪ್ರಾಯವಲ್ಲವೆಂದು ಆತನೇ ಎಣಿಸಿದ್ದನೆಂದು ಹೇಳಬೇಕಾಗಿದೆ. ಇದು ನಿಜವಾದದ್ದು. ಏಕೆಂದರೆ ಪದಭಾಷ್ಯದಲ್ಲಿ ಕೊಟ್ಟಿರುವ ನಾಲ್ಕು ಪಕ್ಷಗಳೂ ಸಂದರ್ಭಕ್ಕೆ ಹೊಂದುತ್ತವೆ. ಇದೂ ಅಲ್ಲದೆ ಉಪನಿಷತ್ತಿಗೆ ಮುಖ್ಯ ಪ್ರತಿಪಾದ್ಯವಾದ ಬ್ರಹ್ಮಾಭಿನ್ನಪ್ರತ್ಯಗಾತ್ಮಜ್ಞಾನವನ್ನು ಮುಟ್ಟದೆ ಬೇರೊಂದು ವಿಷಯವನ್ನು ತಿಳಿಸುವದಕ್ಕೆ ಉಪನಿಷತ್ತಿನ ಎರಡು ಖಂಡಗಳು ಬಂದಿರುತ್ತವೆ ಎಂಬುದು ಎಂದಿಗೂ ಯುಕ್ತವಾಗಲಾರದು. (೪) ಉಪನಿಷತ್ತಿನ ಮೊದಲನೆಯ ಎರಡು ಖಂಡಗಳಲ್ಲಿ ಉತ್ತಮಾಧಿಕಾರಿಗಳಿಗಾಗಿ ಬ್ರಹ್ಮಜ್ಞಾನವನ್ನು ಹೇಳಿದೆಯೆಂತಲೂ ಮಿಕ್ಕ ಎರಡು ಖಂಡಗಳಲ್ಲಿ ಮಂದಾಧಿಕಾರಿಗಳಿಗಾಗಿ ಸಗುಣಬ್ರಹ್ಮೋಪಾಸನೆಯನ್ನು ತಿಳಿಸಿದೆಯೆಂತಲೂ ಟೀಕಾಕಾರನು ವಿಂಗಡಿಸಿರುವದು ಇದೇ ಕಾರಣದಿಂದ ತತ್ತ್ವಸಮರ್ಪಕವಾಗಿರುವದಿಲ್ಲ. ಮುಖ್ಯ ವಿಷಯವಾದ ಬ್ರಹ್ಮಜ್ಞಾನವನ್ನೇ ಅರ್ಥವಾದದಿಂದ ಪುಷ್ಟಿಗೊಳಿಸಿ ಜ್ಞಾನಕ್ಕೆ ಬೇಕಾಗುವ ಸಾಧನವನ್ನು ತಿಳಿಸುವದಕ್ಕೇ ಮೂರನೆಯ ನಾಲ್ಕನೆಯ ಖಂಡಗಳು ಬಂದಿರುತ್ತವೆ, ನಿರುಪಾಧಿಕಬ್ರಹ್ಮವನ್ನು ನೇರಾಗಿ ಅರಿತುಕೊಳ್ಳಲು ಅಸಮರ್ಥರಾದವರಿಗೆ ಸೋಪಾಧಿಕವಾದ ಉಪಾಸನೆಯನ್ನು ತಿಳಿಸಿನೆ– ಎಂಬುದೇ ಭಾಷ್ಯಕಾರರಿಗೆ ಒಪ್ಪಾಗಿರುವ ಅಭಿಪ್ರಾಯವೆಂಬುದು "ಉಕ್ತಾ ತ ಉಪನಿಷತ್" ಎಂಬ (೪–೭) ವಾಕ್ಯದ ಚರ್ಚೆಯಿಂದ ಸ್ಪಷ್ಟವಾಗುತ್ತದೆ.

ಮೇಲಿನ ಅಭಿಪ್ರಾಯಗಳನ್ನು ಭಾಷ್ಯಕಾರರ ಸಿದ್ಧಾಂತವೇನೆಂಬುದನ್ನು ನಿರ್ಣಯಿಸಬಲ್ಲ ವಿದ್ವಾಂಸರು ಸಮಾಲೋಚನೆಮಾಡಬೇಕೆಂದು ನಾವು ಪ್ರಾರ್ಥಿಸುತ್ತೇವೆ. "ಆನಂದಗಿರಿ" ಎಂಬ ಹೆಸರಿನಿಂದ ಅನೇಕ ಟೀಕಾಕಾರರು ಶಾಂಕರಭಾಷ್ಯಗಳಿಗೆ ವ್ಯಾಖ್ಯಾನವನ್ನು ಬರೆದಿರುವಂತೆ ಕಾಣುತ್ತದೆ, ಅಥವಾ ವ್ಯಾಖ್ಯಾನಕಾರರು ಯಾರೆಂಬುದನ್ನು ವಿಚಾರಮಾಡುವ ಗೋಜಿಗೆ ಹೋಗದೆ ಹಸ್ತ ಪ್ರತಿಗಳಲ್ಲಿ ಬರೆಯುವವರು ಶ್ರದ್ಧೆಯಿಂದ ಆನಂದಗಿರಿಗಳ ಹೆಸರನ್ನು ಹಾಕಿರಲೂ ಬಹುದಾಗಿದೆ. ಆದ್ದರಿಂದ ಜಿಜ್ಞಾಸುಗಳಾದವರು ಕೇವಲ ವ್ಯಾಖ್ಯಾನಶರಣರಾಗಿ ಭಾಷ್ಯಕಾರರ ಮೂಲಾಭಿಪ್ರಾಯವನ್ನು ರೂಪಾಂತರಗೊಳಿಸಿಕೊಂಡು ತಿಳಿದುಕೊಳ್ಳದೆ ಇರಲೆಂಬ ಸದಿಚ್ಛೆಯಿಂದ ಈ ಪೀಠಿಕೆಯಲ್ಲಿ ವ್ಯಾಖ್ಯಾನಕಾರನ ಅಭಿಪ್ರಾಯಗಳನ್ನು ವಿಮರ್ಶೆಮಾಡಿದೆಯೇ ಹೊರತು ಬರಿಯ ಖಂಡನಾಭಿರುಚಿಯಿಂದಲ್ಲವೆಂದು ನಾವು ಬಿನ್ನವಿಸಿಕೊಂಡು ಈ ಪೀಠಿಕೆಯನ್ನು ಸಮಾಪ್ತಿಗೊಳಿಸುವೆವು.

ಯ. ಸುಬ್ರಹ್ಮಣ್ಯಶರ್ಮ.

ಸಂಕ್ಷೇಪಾಕ್ಷರಗಳ ವಿವರಣೆ

ವಿಶೇಷ ಸೂಚನೆ—ಉಪನಿಷತ್ತುಗಳ ಹೆಸರನ್ನು ಆಯಾ ಹೆಸರಿನ ಮೊದಲನೆಯ ಅಕ್ಷರದಿಂದ ಸೂಚಿಸಿದೆ. ಭಾ. ಎಂಬಕ್ಷರವು ಆಯಾ ಗ್ರಂಥದ ಭಾಷ್ಯವನ್ನು ಸೂಚಿಸುವದು. ಭಾಷ್ಯದಲ್ಲಿ (೧-೪) ಹೀಗೆ ತೋರಿಸಿರುವ ಸಂಖ್ಯೆಗಳು ಈ ಉಪನಿಷತ್ತಿನ ಖಂಡ, ಮಂತ್ರ–ಇವುಗಳನ್ನು ಸೂಚಿಸುವವು.

ಸಂಕೇತ	ವಿವರಣೆ
(ಗೀ॥)	ಗೀತಾಪ್ರೆಸ್ಸಿನಲ್ಲಿ ಅಚ್ಚಾಗಿರುವ ಪುಸ್ತಕದ ಪಾಠ.
(ಆ॥)	ಪೂನಾದ ಆನಂದಾಶ್ರಮದಲ್ಲಿ ಪ್ರಕಾಶವಾಗಿರುವ ಪುಸ್ತಕದಲ್ಲಿರುವ ಪಾಠ.
ಜೈ. ಸೂ.	ಜೈಮಿನಿಯ ಪೂರ್ವಮೀಮಾಂಸಾಸೂತ್ರಗಳು.
ಟೀ.	ಕೇನೋಪನಿಷತ್ತಿನ ಪದವಾಕ್ಯಭಾಷ್ಯಗಳ ಟೀಕೆ. "ಆನಂದಗಿರಿ" ಗಳೆಂಬ ಹೆಸರಿನವರದೆಂದು ಆನಂದಾಶ್ರಮದ ಪುಸ್ತಕದಲ್ಲಿ ಇರುತ್ತದೆ.
ತೈ. ನಾ.	ತೈತ್ತಿರೀಯಾರಣ್ಯಕದ ಭಾಗವಾದ ನಾರಾಯಣಪನ್ನ. "ಅಂಭಸಿ."
ತೈ. ಬ್ರಾ.	ತೈತ್ತಿರೀಯಬ್ರಾಹ್ಮಣ.
ಪಾ.	ಪಾಣಿನಿಯವರ ವ್ಯಾಕರಣಸೂತ್ರ.
ಮನು	ಮನುಸ್ಮೃತಿ.
(ಮೈ॥)	ಮೈಸೂರಲ್ಲಿ ವಿದ್ಯಾತರಂಗಿಣೀಮುದ್ರಾಕ್ಷರಶಾಲೆಯಲ್ಲಿ ತೆಲುಗಕ್ಷರದಲ್ಲಿ ಅಚ್ಚಾಗಿ ಪ್ರಕಟವಾಗಿರುವ ಉಪನಿಷತ್ಪುಸ್ತಕದ ಪಾಠ.
ಮೋ. ಧ.	ಮೋಕ್ಷಧರ್ಮ.
ವನ.	ವನಪರ್ವ, ಮಹಾಭಾರತದ ಭಾಗ.
(ವಾ॥)	ವಾಣೀವಿಲಾಸಮುದ್ರಣಾಲಯದ ಪುಸ್ತಕದಲ್ಲಿರುವ ಪಾಠ.
ಸೂ. ಭಾ.	ಬ್ರಹ್ಮಸೂತ್ರದ ಶಾಂಕರಭಾಷ್ಯ.
(ಹಿ॥)	ಶ್ರೀಯುತ ಎಂ. ಹಿರಿಯಣ್ಣ, ಎಂ.ಎ., ರವರು ತಮ್ಮ ಇಂಗ್ಲಿಷು ಭಾಷಾಂತರದಲ್ಲಿ ಉದಾಹರಿಸಿರುವ ಪಾಠ.

ವಿಷಯಾನುಕ್ರಮಣಿಕೆ

ಪೀಠಿಕೆ 4

ಭಾಷ್ಯಕಾರರ ಅವತರಣಿಕೆ

ಹಿಂದಿನ ಗ್ರಂಥಕ್ಕೂ ಈ ಉಪನಿಷತ್ತಿಗೂ ಇರುವ ಸಂಬಂಧ (೧)– ಬ್ರಹ್ಮಜ್ಞಾನಕ್ಕೆ ಅಧಿಕಾರಿ (೩)– ಬ್ರಹ್ಮಜ್ಞಾನದ ಪ್ರಯೋಜನ (೪)– ಸಮುಚ್ಚಯವಾದದ ಖಂಡನೆ (೫)– ಸದ್ಗುರುವಿನ ಉಪದೇಶದಿಂದಲೇ ಜ್ಞಾನವನ್ನು ಪಡೆಯಬೇಕು (೮) ೧–೯.

ಒಂದನೆಯ ಖಂಡ

ಶಿಷ್ಯನ ಪ್ರಶ್ನೆ (೧೦)– ಇಷಿತಮ್ ಎಂಬ ಮಾತಿನ ಅರ್ಥ (೧೦)– ಪ್ರೇಷಿತಮ್ ಎಂಬುದರ ಅರ್ಥ (೧೧)– ಮನಸ್ಸಿನ ವಿಷಯದ ಪ್ರಶ್ನೆಯ ಅಭಿಪ್ರಾಯ (೧೪)– ಪ್ರಾಣೇಂದ್ರಿಯಗಳನ್ನು ಕುರಿತ ಪ್ರಶ್ನೆ (೧೪)– ಗುರುವಿನ ಉತ್ತರ (೧೫)– ಆತ್ಮನು ಶ್ರೋತೃವೇ ಮುಂತಾದವುಗಳನ್ನೂ ಆರಿಯುವ ಚೈತನ್ಯವು (೧೫)– ವಿಷಣಾತ್ಯಾಗದಿಂದ ಸಾವನ್ನು ಗೆಲ್ಲಬಹುದು (೨೩)– ಬ್ರಹ್ಮವು ಇಂದ್ರಿಯಗಳಿಗೂ ಮನಸ್ಸಿಗೂ ಅಗೋಚರ (೨೬)– ತನ್ನ ಸ್ವರೂಪವೇ ಆಗಿರುವ ಬ್ರಹ್ಮವನ್ನು ಉಪದೇಶದಿಂದಲೇ ಅರಿತುಕೊಳ್ಳಬೇಕು (೨೮)– ಉಪಾಸ್ಯರೂಪವು ಬ್ರಹ್ಮದ ಪರಮಾರ್ಥ ರೂಪವಲ್ಲ (೩೩) . . . . . ೧೦–೩೩.

ಎರಡನೆಯ ಖಂಡ

ಬ್ರಹ್ಮವು ಜ್ಞಾನಕ್ಕೂ ವಿಷಯವಲ್ಲ (೪೪)– ಬ್ರಹ್ಮವನ್ನು ಹೇಗೆ ಅರಿಯಬೇಕು ? (೪೮)– ವಾಖ್ಯಾನಾಂತರದಲ್ಲಿ ದೋಷ (೫೦)– ಬ್ರಹ್ಮವನ್ನು ಸರಿಯಾಗಿ ತಿಳಿದುಕೊಂಡರೆ ಫಲ (೫೫)– ಬ್ರಹ್ಮವನ್ನು ಇಲ್ಲಿಯೇ ಅರಿತುಕೊಳ್ಳಬೇಕು (೫೭) . . . ೪೪–೫೯.

ಮೂರನೆಯ ಖಂಡ

ಈ ಖಂಡದ ಸಂಬಂಧ (೬೦)– ದೇವತೆಗಳಿಗೆ ಮಿಥ್ಯಾಭಿಮಾನವು ಬಂದದ್ದು (೬೨)– ಬ್ರಹ್ಮವು ದೇವತೆಗಳಿಗೆ ಕಾಣಿಸಿಕೊಂಡದ್ದು (೬೪)– ಅಗ್ನಿಯೇ ಮೊದಲಾದವರ ಗರ್ವಭಂಗ (೬೫) – ಇಂದ್ರನಿಗೆ ಉಮೆಯ ಉಪದೇಶ (೮೧) . . . ೬೦–೮೨.

ನಾಲ್ಕನೆಯ ಖಂಡ

ಇಂದ್ರ, ವಾಯು, ಅಗ್ನಿ–ಇವರುಗಳ ಹೆಚ್ಚುಗಾರಿಕೆ (೮೪)– ಬ್ರಹ್ಮದ ಸೋಪಾಧಿಕ ಉಪದೇಶ (೮೬)– ಬ್ರಹ್ಮವನ್ನು ತದ್ವನವೆಂದು ಉಪಾಸನೆಮಾಡಬೇಕು (೮೯)– ಉಪನಿಷತ್ತಿನ ಉಪಸಂಹಾರ (೯೦)–ತಪಸ್ಸೇ ಮುಂತಾದ ಸಾಧನಗಳಿಗೂ ಆತ್ಮಜ್ಞಾನಕ್ಕೂ ಸಂಬಂಧ (೯೩)– ಜ್ಞಾನಸಾಧನಗಳು (೯೬)– ಬ್ರಹ್ಮವಿದ್ಯೆಯ ಫಲದ ಉಪಸಂಹಾರ (೯೯). . ೮೩–೧೦೧.

ವಿಷಯ	ಪುಟಗಳು
ವಾಕ್ಯಭಾಷ್ಯೋಪೇತ ಕೇನೋಪನಿಷತ್ತು . . .	೧೦೨—೧೩೮
ಉಪನಿಷತ್ತಿನ ಸಾರ	೧೩೯—೧೪೧
ಮಂತ್ರಗಳ ಅನುಕ್ರಮಣಿಕೆ	೧೪೨—೧೪೩
ಶಬ್ದಾನುಕ್ರಮಣಿಕೆ	೧೪೪—೧೪೯

ಓಂ

ಶಾಂಕರ ಭಾಷ್ಯಸಮೇತ

ಕೇನೋಪನಿಷತ್ತು

ಭಾಷ್ಯಕಾರರ ಅವತರಣಿಕೆ

ಹಿಂದಿನ ಗ್ರಂಥಕ್ಕೂ ಈ ಉಪನಿಷತ್ತಿಗೂ ಇರುವ ಸಂಬಂಧ

(ಭಾಷ್ಯ)

೧. "ಕೇನೇಷಿತಮ್" ಇತ್ಯಾದ್ಯಾ ಉಪನಿಷತ್ ಪರಬ್ರಹ್ಮವಿಷಯಾವಕ್ತವ್ಯೇತಿ ನವಮಸ್ಯಾಧ್ಯಾಯಸ್ಯ ಆರಮ್ಭಃ। ಪ್ರಾಗೇತಸ್ಮಾತ್ ಕರ್ಮಾಣಿ ಅಶೇಷತಃ ಪರಿಸಮಾಪಿತಾನಿ। ಸಮಸ್ತಕರ್ಮಾಶ್ರಯಭೂತಸ್ಯ ಚ ಪ್ರಾಣಸ್ಯ ಉಪಾಸನಾನ್ಯುಕ್ತಾನಿ ಕರ್ಮಾಙ್ಗಸಾಮವಿಷಯಾಣಿ ಚ। ಅನನ್ತರಂ ಚ ಗಾಯತ್ರಸಾಮವಿಷಯದರ್ಶನಂ ವಂಶಾನ್ತಮ್ ಉಕ್ತಮ್ ॥

(ಭಾಷ್ಯಾರ್ಥ)

"ಕೇನೇಷಿತಮ್" ಎಂಬ (ಮಾತುಗಳಿಂದ) ಪ್ರಾರಂಭವಾಗಿರುವ ಉಪನಿಷತ್ತು ಪರಬ್ರಹ್ಮವಿಷಯವಾದದ್ದು, (ಅದನ್ನು) ಹೇಳಬೇಕೆಂದು **ಈ ಒಂಬತ್ತನೆಯ ಅಧ್ಯಾಯ**ವನ್ನು[1] ಪ್ರಾರಂಭಿಸಿರುತ್ತದೆ. ಇದಕ್ಕಿಂತ ಮುಂಚೆ ಕರ್ಮಗಳೆಲ್ಲವನ್ನೂ (ತಿಳಿಸಿ) ಮುಗಿಸಿದ್ದಾಗಿದೆ; ಸಮಸ್ತಕರ್ಮಗಳಿಗೂ ಆಶ್ರಯನಾದ **ಪ್ರಾಣನ**[2] ಉಪಾಸನೆಗಳನ್ನೂ ಕರ್ಮಕ್ಕೆ ಅಂಗವಾದ ಸಾಮದ ವಿಷಯವಾದ (ಉಪಾಸನೆಗಳನ್ನೂ) ಹೇಳಿದ್ದಾಗಿದೆ[3] ಆ ಬಳಿಕ ಗಾಯತ್ರಸಾಮದ ವಿಷಯವಾದ ಉಪಾಸನೆಯನ್ನು ಹೇಳಿ (ಶಿಷ್ಟಾಚಾರ್ಯರ) ವಂಶವನ್ನೂ[4] (ತಿಳಿಸಿದ್ದಾಗಿದೆ).

---

1. ತಲವಕಾರಬ್ರಾಹ್ಮಣದ ಒಂಬತ್ತನೆಯ ಅಧ್ಯಾಯವನ್ನು.

2. ಸೂತ್ರಾತ್ಮನೆಂದೂ ಹಿರಣ್ಯಗರ್ಭನೆಂದೂ ಕರೆಯಲ್ಪಡುವ ಕ್ರಿಯಾಶಕ್ತಿಜ್ಞಾನಶಕ್ತಿಗಳ ಸಮಷ್ಟಿಯ ಉಪಾಧಿಯುಳ್ಳ ಬ್ರಹ್ಮ, ಇದನ್ನೇ ಅಪರಬ್ರಹ್ಮವೆಂದು ಕರೆಯುತ್ತಾರೆ. "ಪ್ರಾಣನನ್ನು ಶುದ್ಧತ್ವವೇ ಮುಂತಾದ ಗುಣಗಳಿಂದ ಕೂಡಿದವನೆಂದು ಉಪಾಸನೆಮಾಡಬೇಕೆಂದು ಹಿಂದೆ ಹೇಳಿದೆ. (ಟೀ.)

3. "ಕರ್ಮಕ್ಕೆ ಅಂಗವಾಗಿ ಉಪಯೋಗಿಸುವ ಸಾಮದಲ್ಲಿ ಐದು ಭಕ್ತಿಗಳಿರುವವು, ಏಳು ಭಕ್ತಿಗಳೂ ಇರುವವು. ಅದನ್ನು ಪೃಥಿವ್ಯಾದಿದೃಷ್ಟಿಯಿಂದ ಉಪಾಸನೆಮಾಡಬೇಕೆಂದು ಹಿಂದೆ ಹೇಳಿರುತ್ತವೆ" (ಟೀ.) ಛಾಂದೋಗ್ಯೋಪನಿಷತ್ತಿನ ೩-೧ ರಿಂದ ೮ನೆಯ ಖಂಡದವರೆಗೆ ನೋಡಿರಿ.

4. ಗುರುಶಿಷ್ಯಪರಂಪರೆಯನ್ನು ನೆನಪಿನಲ್ಲಿಟ್ಟುಕೊಳ್ಳುವದೂ ಉಪಾಸನೆಯು

(ಭಾಷ್ಯ)

೨. ಸರ್ವಮೇತದ್ಯಥೋಕ್ತಂ ಕರ್ಮ ಚ ಜ್ಞಾನಂ ಚ ಸಮ್ಯಗನುಷ್ಠಿತಂ ನಿಷ್ಕಾಮಸ್ಯ ಮುಮುಕ್ಷೋಃ ಸತ್ತ್ವಶುದ್ಧ್ಯರ್ಥಂ ಭವತಿ। ಸಕಾಮಸ್ಯ ತು ಜ್ಞಾನರಹಿತಸ್ಯ ಕೇವಲಾನಿ ಶ್ರೌತಾನಿ ಸ್ಮಾರ್ತಾನಿ ಚ ಕರ್ಮಾಣಿ **ದಕ್ಷಿಣಮಾರ್ಗ**ಪ್ರತಿಪತ್ತಯೇ ಪುನರಾವೃತ್ತಯೇ ಚ ಭವನ್ತಿ। ಸ್ವಾಭಾವಿಕ್ಯಾ ತ್ವಶಾಸ್ತ್ರೀಯಯಾ ಪ್ರವೃತ್ತ್ಯಾ ಪಶ್ವಾದಿ ಸ್ಥಾವರಾನ್ತಾ ಅಧೋಗತಿಃ ಸ್ಯಾತ್। "ಅಥೈತಯೋಃ ಪಥೋರ್ನ ಕತರೇಣಚನ ತಾನೀಮಾನಿ ಕ್ಷುದ್ರಾಣ್ಯಸಕೃದಾವರ್ತೀನಿ ಭೂತಾನಿ ಭವನ್ತಿ ಜಾಯಸ್ವ ಮ್ರಿಯಸ್ವೇತ್ಯೇತತ್ತೃತೀಯಂ ಸ್ಥಾನಮ್" (ಛಾ ೫-೧೦-೮) ಇತಿ ಶ್ರುತೇಃ "ಪ್ರಜಾಹತಿಸ್ರೋ ಅತ್ಯಾಯಮಾಯಃ" (ಐ. ಆ. ೨-೧-೧-, ಋ. ಮಂ. ೮-೧೦೧-೧೪) ಇತಿ ಮನ್ತ್ರವರ್ಣಾತ್ ॥

(ಭಾಷ್ಯಾರ್ಥ)

ಇದುವರೆಗೆ ಹೇಳಿದ ಕರ್ಮ, ಜ್ಞಾನ[1]–ಇದೆಲ್ಲವೂ (ಇದನ್ನು) ಚೆನ್ನಾಗಿ ಅನುಷ್ಠಾನಮಾಡುವದಾದರೆ ನಿಷ್ಕಾಮನಾದ ಮುಮುಕ್ಷುವಿಗೆ ಸತ್ತ್ವಶುದ್ಧಿ ಎಂಬ ಪ್ರಯೋಜನವನ್ನುಂಟುಮಾಡುವದಾಗುವದು; ಜ್ಞಾನವಿಲ್ಲದ ಕಾಮಸಹಿತನಾಗಿರುವನಿಗಾದರೋ ಬರಿಯ ಶ್ರೌತ (ಕರ್ಮಗಳೂ) ಸ್ಮಾರ್ತಕರ್ಮಗಳೂ **ದಕ್ಷಿಣಮಾರ್ಗ**ವನ್ನು[2] ಪಡೆಯುವದಕ್ಕೂ (ಸಂಸಾರಕ್ಕೆ) ಹಿಂದಿರುಗಿ ಬರುವದಕ್ಕೂ ಕಾರಣವಾಗುವವು. ಶಾಸ್ತ್ರವಿರುದ್ಧವಾದ ಸ್ವಾಭಾವಿಕಪ್ರವೃತ್ತಿ[3] ಯಿಂದಲೋ (ಎಂದರೆ) ಪಶುಜನ್ಮದಿಂದ ಸ್ಥಾವರಪ್ರಾಣಿಗಳ ಜನ್ಮದವರೆಗಿನ ಅಧೋಗತಿಯುಂಟಾಗುವದು. "ಇನ್ನು (ಉಳಿದ ಜೀವರು) ಈ ಎರಡು ಮಾರ್ಗಗಳಿಂದಲೂ ಹೋಗುವದಿಲ್ಲ; ಆ ಈ (ಪ್ರಾಣಿಗಳು) ಅನೇಕ ವೇಳೆ (ಸಂಸಾರಕ್ಕೆ) ಮರಳಿ ಬರುವ ಕ್ಷುದ್ರಜಂತುಗಳಾಗುವವು,[4] ಮತ್ತೆ ಮತ್ತೆ ಹುಟ್ಟುವದು, ಸಾಯುವದು ಎಂಬಿದು ಮೂರನೆಯ ಸ್ಥಾನವು" (ಛಾ. ೫-೧೦-೮) ಎಂಬ ಶ್ರುತಿ ಇದಕ್ಕೆ ಪ್ರಮಾಣವು "ಮೂರು ಬಗೆಯ ಜೀವಿಗಳು (ಜ್ಞಾನಕರ್ಮ

ಫಲಕಾರಿಯಾಗುವದಕ್ಕೆ ಅವಶ್ಯವೆಂಬ ಅಭಿಪ್ರಾಯದಿಂದ ಅದನ್ನು ಶ್ರುತಿ ಹೇಳಿರುತ್ತದೆ. "ವಂಶಾನ್ತಂ ಕಾರ್ಯಮ್" ಎಂಬಲ್ಲಿ ಕಾರ್ಯಮ್ ಎಂಬ ಮಾತು ಟೀಕೆಯನ್ನು ನೋಡಿ ಯಾರೋ ಬರೆದವರು ತಪ್ಪಾಗಿ ಸೇರಿಸಿರಬೇಕೆಂದು ತೋರುವದು. (ಹಿ॥ ನೋಡಿರಿ).

1. ಇಲ್ಲಿ ಜ್ಞಾನವೆಂದರೆ ಉಪಾಸನೆ, ಮುಂದೆ ಹೇಳುವ ಆತ್ಮಜ್ಞಾನವಲ್ಲ.
2. ಛಾ. ೫-೧೦, ಬೃ. ೬-೨, ಪ್ರ ೧-೯-೧೦ ಇದನ್ನು ನೋಡಿರಿ.
3. ಅವಿಚಾರಸ್ವಭಾವದಿಂದ ಎಂದರೆ ಅಜ್ಞಾನದಿಂದ ವ್ಯವಹರಿಸುವದು.
4. ಕಾಡುನೊಣ, ಸೊಳ್ಳೆ, ಹುಳು–ಮುಂತಾದ ಜಂತುಗಳು.

ಮಾರ್ಗಗಳೆರಡನ್ನೂ ಬಿಟ್ಟು) ಅತಿಕ್ರಮಿಸುವ ದಾರಿಯನ್ನು ಹೊಂದಿಧವು" (ಐ. ಆ. ೨-೧-೧, ಋ. ಮಂ. ೪-೧೦೧-೧೪) ಎಂಬ ಮಂತ್ರವರ್ಣವೂ [1] ಇರುತ್ತದೆ.

ಬ್ರಹ್ಮಜ್ಞಾನಕ್ಕೆ ಅಧಿಕಾರಿ

(ಭಾಷ್ಯ)

ಇ ವಿಶುದ್ಧಸತ್ತ್ವಸ್ಯ ತು ನಿಷ್ಕಾಮಸ್ಯೈವ ಬಾಹ್ಯಾದನಿತ್ಯಾತ್ ಸಾಧ್ಯಸಾಧನ ಸಂಬನ್ಧಾತ್ ಇಹಕೃತಾತ್ ಪೂರ್ವಕೃತಾದ್ವಾ ಸಂಸ್ಕಾರವಿಶೇಷೋದ್ಭವಾತ್ ವಿರಕ್ತಸ್ಯ ಪ್ರತ್ಯಗಾತ್ಮವಿಷಯಾ ಜಿಜ್ಞಾಸಾ ಪ್ರವರ್ತತೇ। ತದೇತದ್ವಸ್ತು ಪ್ರಶ್ನಪ್ರತಿವಚನಲಕ್ಷಣಯಾ ಶ್ರುತ್ಯಾ ಪ್ರದರ್ಶ್ಯತೇ "ಕೇನೇಷಿತಮ್" ಇತ್ಯಾದ್ಯಯಾ। **ಕಾಠಕೇ** ಚೋಕ್ತಮ್—"ಪರಾಞ್ಚಿ ಖಾನಿ ವ್ಯತೃಣತ್ ಸ್ವಯಮೂಸ್ತಸ್ಮಾತ್ ಪರಾಙ್ ಪಶ್ಯತಿ ನಾನ್ತರಾತ್ಮನ್। ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷದಾವೃತ್ತ ಚಕ್ಷುರಮೃತತ್ವಮಿಚ್ಛನ್। (ಕ ೨-೧-೧) ಇತ್ಯಾದಿ। "ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ। ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್॥ (ಮುಂ ೧-೨-೧೨) ಇತ್ಯಾದ್ಯಾಥರ್ವಣೇ ಚ। ಏವಂ ಹಿ ವಿರಕ್ತಸ್ಯ ಪ್ರತ್ಯಗಾತ್ಮವಿಷಯಂ ವಿಜ್ಞಾನಂ ಶ್ರೋತುಂ ಮನ್ತುಂ ವಿಜ್ಞಾತುಂ ಚ ಸಾಮರ್ಥ್ಯಮುಪಪದ್ಯತೇ ನಾನ್ಯಥಾ॥

(ಭಾಷ್ಯಾರ್ಥ)

ಆದರೆ (ಯಾವನು) ಸತ್ತ್ವಶುದ್ಧಿಯನ್ನು[2] (ಪಡೆದುಕೊಂಡಿ)ರುವನೋ, (ಅದರಿಂದ) ನಿಷ್ಕಾಮನಾಗಿರುವನೋ, ಈ (ಜನ್ಮ)ದಲ್ಲಿ ಮಾಡಿರುವ ಅಥವಾ ಪೂರ್ವ ಜನ್ಮದಲ್ಲಿ ಮಾಡಿದ (ಕರ್ಮೋಪಾಸನೆಗಳಿಂದ)[3] ಒಂದಾನೊಂದು ಸಂಸ್ಕಾರವು ಉಂಟಾಗಿ ಹೊರಗಿನ ಅನಿತ್ಯವಾದ ಸಾಧ್ಯಸಾಧನಗಳು[4] ಸಂಬಂಧವಿಷಯಕ್ಕೆ ವಿರಕ್ತನಾಗಿರುವನೋ (ಅವನಿ)ಗೇ ಪ್ರತ್ಯಗಾತ್ಮವಿಷಯದ ಜ್ಞಾನವನ್ನು ಹೊಂದಬೇಕೆಂಬ) ಇಚ್ಛೆಯು ಉಂಟಾಗುತ್ತದೆ. ಅಂಥ ಈ (ಪ್ರತ್ಯಗಾತ್ಮರೂಪ)ವಸ್ತುವನ್ನು ಪ್ರಶ್ನೋತ್ತರ

1 ಇದು ಐತರೇಯಾರಣ್ಯಕದಲ್ಲಿ ಋಗ್ವೇದದಿಂದ ಉದ್ಧೃತವಾಗಿರುವ ಮಂತ್ರವು. ಮಂತ್ರವರ್ಣ ಎಂಬ ಮಾತು ಇದನ್ನು ಸೂಚಿಸುವಂತೆ ತೋರುತ್ತದೆ.

2. ಹಿಂದೆ ಹೇಳಿರುವಂತೆ ಕರ್ಮೋಪಾಸನೆಗಳಿಂದುಂಟಾಗುವ ಅಂತಃಕರಣಶುದ್ಧಿ.

3. ಹಿಂದಿನ ಜನ್ಮದ ಸಾಧನಗಳಿಂದಲೂ ಈಗ ಜ್ಞಾನವಾಗಬಹುದು. ಸೂ. ಭಾ. ೩-೪—೫೧, ೪-೨-೧೪.

4. ಪುತ್ರ ಕರ್ಮ, ಉಪಾಸನೆ—ಇವು ಸಾಧನಗಳು; ಮನುಷ್ಯಲೋಕ, ಪಿತೃಲೋಕ, ದೇವಲೋಕ—ಇವು ಸಾಧ್ಯಗಳು. ಈ ಸಾಧನಗಳಿಂದ ಈ ಸಾಧ್ಯಗಳನ್ನು ಪಡೆಯುವದರಲ್ಲಿ ಆಸಕ್ತಿ ಹೋಗಿ ಎಂದರ್ಥ ಬೃ. ೧-೫-೧೬.

ರೂಪವಾಗಿರುವ "ಕೇನೇಷಿತಮ್" ಎಂದು ಮೊದಲಾಗಿರುವ (೪) ಶ್ರುತಿಯಲ್ಲಿ ತೋರಿಸಿಕೊಟ್ಟಿರುತ್ತದೆ. **ಕಾಠಕ**ದಲ್ಲಿಯೂ (ಹೀಗೆಂದು ಮುಂತಾಗಿ) ಹೇಳಿರುತ್ತದೆ: "ಪರಮೇಶ್ವರನು ಇಂದ್ರಿಯಗಳನ್ನು ಹೊರಮುಖವಾಗಿ ಕೊರೆದಿರುವನು; ಆದ್ದರಿಂದ (ಜೀವನು) ಹೊರಗಡೆಗೇ ನೋಡುವನು, ಒಳಗಿನ ಆತ್ಮನನ್ನು (ನೋಡುತ್ತಲಿಲ್ಲ). ಯಾವನೋ ಒಬ್ಬ ಧೀರನು ಅಮರಣನಾಗಬೇಕೆಂಬ ಇಚ್ಛೆಯಿಂದ ಚಕ್ಷು(ರಾದಿ ಗಳನ್ನು) ಹಿಂತಿರುಗಿಸಿಕೊಂಡು ಪ್ರತ್ಯಗಾತ್ಮನನ್ನು ಕಾಣುತ್ತಾನೆ" (ಕ. ೨-೧-೧) "ಬ್ರಾಹ್ಮಣನಾದವನು ಕರ್ಮದಿಂದುಂಟಾಗುವ ಲೋಕಗಳನ್ನು ಪರೀಕ್ಷೆಮಾಡಿ, ಕೃತಕ ವಲ್ಲದ್ದು ಮಾಡತಕ್ಕ (ಸಾಧನದಿಂದ) ಉಂಟಾಗಲಾರದು ಎಂದು (ನಿಶ್ಚಯಿಸಿ), ವೈರಾಗ್ಯವನ್ನು ತಳೆಯತಕ್ಕದ್ದು. ಅದನ್ನು ಅರಿತುಕೊಳ್ಳುವದಕ್ಕಾಗಿ ಸಮಿತ್ಪಾಣಿ ಯಾಗಿ ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವಿನ ಬಳಿಗೇ ಹೋಗಬೇಕು" (ಮುಂ. ೧-೨-೧೨) ಎಂದು ಮುಂತಾಗಿ **ಅಥರ್ವಣ** (ದ ಮುಂಡಕೋಪನಿಷತ್ತಿ ನಲ್ಲಿಯೂ ಹೇಳಿರುತ್ತದೆ). ಹೀಗೆ ವಿರಕ್ತನಾದನವನಿಗೇ[1] ಪ್ರತ್ಯಗಾತ್ಮನ ವಿಷಯದ ಜ್ಞಾನವನ್ನು ಕುರಿತು[2] ಶ್ರವಣಮಾಡುವದಕ್ಕೂ ಮನನಮಾಡುವದಕ್ಕೂ ಅರಿತು ಕೊಳ್ಳುವದಕ್ಕೂ ಸಾಮರ್ಥ್ಯವು ಉಂಟಾಗುವದೇ ಹೊರತು ಬೇರೆಯ ಮಾರ್ಗದಿಂದ ಉಂಟಾಗಲಾರದು.

ಬ್ರಹ್ಮಜ್ಞಾನದ ಪ್ರಯೋಜನ

(ಭಾಷ್ಯ)

೪. ಏತಸ್ಮಾಚ್ಚ ಪ್ರತ್ಯಗಾತ್ಮಬ್ರಹ್ಮವಿಜ್ಞಾನಾತ್ ಸಂಸಾರಬೀಜಮಜ್ಞಾನಂ ಕಾಮಕರ್ಮಪ್ರವೃತ್ತಿಕಾರಣಮಶೇಷತೋ ನಿವರ್ತತೇ। "ತತ್ರ ಕೋ ಮೋಹ. ಕಃ ಶೋಕ ಏಕತ್ವಮನುಪಶ್ಯತಃ॥" (ಈ. ೭) ಇತಿ ಮನ್ತ್ರವರ್ಣಾತ್। "ತರತಿ ಶೋಕಮಾತ್ಮವಿತ್" (ಛಾ. ೭-೧-೩), "ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ

---

1. ಇಲ್ಲಿಯವರೆಗೆ ಸಾಧನಚತುಷ್ಟಯಸಂಪತ್ತಿಯುಳ್ಳವನಿಗೇ ಜ್ಞಾನಕ್ಕೆ ಅಧಿಕಾರ ವೆಂದು ಹೇಳಿದ್ದರೂ ಮುಖ್ಯವಾಗಿ ಸಾಧ್ಯಸಾಧನಗಳನ್ನು ತೊರೆದ ವಿರಕ್ತನಿಗೇ ಅಧಿಕಾರವೆಂಬು ದನ್ನು ಸ್ಪಷ್ಟಪಡಿಸಿರುತ್ತದೆ.

2. "ಹೀಗೆ ವಿರಕ್ತನಾದವನಿಗೆ ಪ್ರತ್ಯಗಾತ್ಮವಿಷಯವಾದ ವಿಜ್ಞಾನವೂ ಶ್ರವಣ ಮಾಡುವದಕ್ಕೂ ಮನನಮಾಡುವದಕ್ಕೂ ಅರಿತುಕೊಳ್ಳುವದಕ್ಕೂ ಸಾಮರ್ಥ್ಯವೂ ಉಂಟಾಗು ವವು" ಎಂದೂ ಮೂಲವಾಕ್ಯವನ್ನು ಕನ್ನಡಿಸಬಹುದು. ಜ್ಞಾನವೂ ಜ್ಞಾನಸಾಧನವಾದ ಶ್ರವಣಾದಿಗಳೂ ದಕ್ಕುವದು ಇಂಥ ಅಧಿಕಾರಿಗೇ ಎಂಬುದು ಇಲ್ಲಿ ಅಭಿಪ್ರಾಯ. ಬೃ. ೨-೪-೫ ನೋಡಿರಿ.

ಸರ್ವಸಂಶಯಾಃ । ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥" (ಮುಂ.೨-೨-೮) ಇತ್ಯಾದಿಶ್ರುತಿಭ್ಯಶ್ಚ ॥

(ಭಾಷ್ಯಾರ್ಥ)

ಈ ಪ್ರತ್ಯಗಾತ್ಮಬ್ರಹ್ಮದ[1] ವಿಜ್ಞಾನದಿಂದ ಸಂಸಾರಕ್ಕೆ ಬೀಜವಾಗಿ[2] ಕಾಮ ಕರ್ಮಗಳು ಮುಂಬರಿಯುವದಕ್ಕೆ ಕಾರಣವಾದ **ಅಜ್ಞಾನವು**[3] ಸ್ವಲ್ಪವೂ ಉಳಿಯದಂತೆ ತೊಲಗುವದು. "ಆಗ ಏಕತ್ವವನ್ನು ಕಂಡುಕೊಂಡ (ಜ್ಞಾನಿಗೆ) ಯಾವ ಮೋಹವು? ಯಾವ ಶೋಕವು?" (ಈ. ೭) ಎಂಬ **ಮಂತ್ರವರ್ಣವೂ,** "ಆತ್ಮನನ್ನರಿತುಕೊಂಡಾತನು ಶೋಕವನ್ನು ದಾಟುವನು" (ಛಾ. ೭-೧-೩), "ಆ ಕಾರ್ಯ ಕಾರಣರೂಪ (ಆತ್ಮನನ್ನು) ಕಂಡುಕೊಂಡರೆ ಹೃದಯದ ಗಂಟು ಬಿಚ್ಚಿಕೊಳ್ಳುವದು, ಸಂಶಯಗಳೆಲ್ಲ ಕತ್ತರಿಸಿಹೋಗುವವು, ಈತನ ಕರ್ಮಗಳು ನಾಶವಾಗುವವು" (ಮುಂ. ೨-೨-೮) ಮುಂತಾದ **ಶ್ರುತಿ**ಗಳೂ ಇದಕ್ಕೆ[4] ಪ್ರಮಾಣವು.

ಸಮುಚ್ಚಯವಾದದ ಖಂಡನೆ

(ಭಾಷ್ಯ)

೫. ಕರ್ಮಸಹಿತಾದಪಿ ಜ್ಞಾನಾದೇತತ್ ಸಿಧ್ಯತೀತಿ ಚೇತ್ । ನ । **ವಾಜಸನೇಯಕೇ** ತಸ್ಯಾನ್ಯಕಾರಣತ್ವವಚನಾತ್ । "ಜಾಯಾ ಮೇ ಸ್ಯಾತ್" (ಬೃ. ೧-೪-೧೭) ಇತಿ ಪ್ರಸ್ತುತ್ಯ "ಪುತ್ರೇಣಾಯಂ ಲೋಕೋ ಜಯ್ಯೋ ನಾನ್ಯೇನ ಕರ್ಮಣಾ । ಕರ್ಮಣಾ ಪಿತೃಲೋಕೋ ವಿದ್ಯಯಾ ದೇವಲೋಕಃ" (ಬೃ. ೧-೫-೧೬) ಇತ್ಯಾತ್ಮನೋಽನ್ಯಸ್ಯ ಲೋಕತ್ರಯಸ್ಯ ಕಾರಣತ್ವಮುಕ್ತಂ **ವಾಜಸನೇಯಕೇ**ಽತ್ರೈವ ಚ ಪಾರಿವ್ರಾಜ್ಯವಿಧಾನೇ ಹೇತುರುಕ್ತಃ "ಕಿಂ ಪ್ರಜಯಾ ಕರಿಷ್ಯಾಮೋ ಯೇಷಾಂ ನೋಽಯಮಾತ್ಮಾಯಂ ಲೋಕಃ" (ಬೃ. ೪-೪-೨೨) ಇತಿ । ತತ್ರಾಯಂ ಹೇತ್ವರ್ಥಃ— ಪ್ರಜಾಕರ್ಮತತ್ಸಂಯುಕ್ತವಿದ್ಯಾಭಿರ್ಮನುಷ್ಯಪಿತೃದೇವಲೋಕತ್ರಯಸಾಧನೈರನಾತ್ಮಲೋಕಪ್ರತಿಪತ್ತಿಕಾರಣೈಃ ಕಿಂ ಕರಿಷ್ಯಾಮಃ? ನ ಚಾಸ್ಮಾಕಂ ಲೋಕತ್ರಯ

---

1. ನಮ್ಮ ಒಳಗಿರುವ ಆತ್ಮನ ರೂಪವಾದ ಬ್ರಹ್ಮದ. "ಪ್ರತ್ಯಗಾತ್ಮಬ್ರಹ್ಮ" ಎಂಬ ಮಾತು ಪ್ರಸ್ಥಾನತ್ರಯಭಾಷ್ಯದಲ್ಲಿ ಮತ್ತೆಲ್ಲಿಯೂ ಕಾಣಬರುವದಿಲ್ಲ.

2. ಕಾರಣವಾಗಿ. ಬೀಜವು ಮರಕ್ಕೆ ಕಾರಣವಾಗಿರುವಂತೆ ಉಪಾದಾನಕಾರಣವಾಗಿ ಎಂದೇನೂ ಅರ್ಥವಲ್ಲ.

3. ಆತ್ಮಾನಾತ್ಮಗಳನ್ನು ಅನ್ಯೋನ್ಯವಾಗಿ ತಿಳಿಯುವ ಅಧ್ಯಾಸವು. ಬ್ರಹ್ಮಸೂತ್ರದ ಅಧ್ಯಾಸಭಾಷ್ಯವನ್ನು ನೋಡಿರಿ. ಕ. ಭಾ. ೧-೧-೪೦.

4. ಆತ್ಮಜ್ಞಾನವು ಬಂದೊಡನೆ ಅಜ್ಞಾನವು ಸ್ವಲ್ಪವೂ ಉಳಿಯದಂತೆ ಹೋಗುವದೆಂಬುದಕ್ಕೆ. ಈ. ಭಾ. ಉಪಸಂಹಾರ; ಕ. ಭಾ. ೧-೨-೪; ಬೃ. ಭಾ. ೧-೪-೧೦.

ಮನಿತ್ಯಂ ಸಾಧನಸಾಧ್ಯಮಿಷ್ಟಮ್ । ಯೇಷಾಮಸ್ಮಾಕಂ ಸ್ವಾಭಾವಿಕೋಽಜೋಽಜರೋಽಮೃತೋಽಭಯೋ ನ ವರ್ಧತೇ ಕರ್ಮಣಾ ನೋ ಕನೀಯಾನ್ ನಿತ್ಯಶ್ಚ ಲೋಕ ಇಷ್ಟಃ। ಸ ಚ ನಿತ್ಯತ್ವಾನ್ನಾ ವಿದ್ಯಾನಿವೃತ್ತಿವ್ಯತಿರೇಕೇಣಾನ್ಯಸಾಧನನಿಷ್ಪಾದ್ಯಃ। ತಸ್ಮಾತ್ ಪ್ರತ್ಯಗಾತ್ಮಬ್ರಹ್ಮವಿಜ್ಞಾನಪೂರ್ವಕಃ ಸರ್ವೈಷಣಾಸಂನ್ಯಾಸ ಏವ ಕರ್ತವ್ಯ ಇತಿ ॥

(ಭಾಷ್ಯಾರ್ಥ)

(ಆಕ್ಷೇಪ) :—ಕರ್ಮದಿಂದೊಡಗೂಡಿದ ಜ್ಞಾನದಿಂದಲೂ[1] ಈ (ಫಲವು) ಉಂಟಾಗಬಹುದಲ್ಲ ।

(ಪರಿಹಾರ) :—ಹಾಗಲ್ಲ; ಏಕೆಂದರೆ ಅದು ಬೇರೊಂದು (ಫಲಕ್ಕೆ) ಸಾಧನವಾಗಿರುವದೆಂದು **ವಾಜಸನೇಯಕ**ದಲ್ಲಿ[2] ಹೇಳಿರುತ್ತದೆ. " ನನಗೆ ಹೆಂಡತಿ ಆಗಲಿ! " (ಬೃ. ೧-೪-೧೭) ಎಂದು ಪ್ರಾರಂಭಿಸಿ " ಈ ಲೋಕವು ಪುತ್ರನಿಂದ ಗೆಲ್ಲಬಹುದಾದದ್ದೇ ಹೊರತು ಬೇರೆಯ ಕರ್ಮದಿಂದ (ಗೆಲ್ಲಬಹುದಾದ್ದ)ಲ್ಲ, ಪಿತೃಲೋಕವು ಕರ್ಮದಿಂದ (ಗೆಲ್ಲಬಹುದಾದದ್ದು), ದೇವಲೋಕವು ವಿದ್ಯೆಯಿಂದ " (ಬೃ ೧-೫-೧೬) ಎಂದು ಆತ್ಮನಿಗಿಂತಲೂ ಬೇರೆಯಾದ **ಲೋಕತ್ರಯಕ್ಕೆ** (ಪುತ್ರ, ಕರ್ಮ, ಉಪಾಸನೆಗಳು) ಕಾರಣವಾಗಿರುವವೆಂದು ವಾಜಸನೇಯಕದಲ್ಲ ಹೇಳಿರುತ್ತದೆ. ಅದೇ (ಶ್ರುತಿ) ಯಲ್ಲಿ **ಪಾರಿವ್ರಾಜ್ಯ**(ಸಂನ್ಯಾಸ)ವನ್ನು[3] ವಿಧಿಸಿರುವದಕ್ಕೆ (ಈ) ಕಾರಣವನ್ನು ಹೇಳಿರುತ್ತದೆ. " ಯಾವ ನಮಗೆ ಈತನೇ ಆತ್ಮನೋ, ಈತನೇ ಲೋಕವೋ (ಆ ನಾವು) ಪ್ರಜೆಯಿಂದ ಏನು ಮಾಡೋಣ ? " (ಬೃ. ೪-೪-೨೨) ಅಲ್ಲಿ ಹೇಳಿರುವ ಹೇತುವಿಗೆ ಅರ್ಥವಿದು : " ಪ್ರಜೆ, ಕರ್ಮ, ಆ (ಕರ್ಮ)ದಿಂದೊಡಗೂಡಿದ ವಿದ್ಯೆ[4] ಇವುಗಳು (ಕ್ರಮವಾಗಿ) ಮನುಷ್ಯಲೋಕ, ಪಿತೃಲೋಕ, ದೇವಲೋಕ—ಎಂಬ

---

1. ಉಪಾಸನೆಯಿಂದಲೂ. ಜ್ಞಾನಕರ್ಮಸಮುಚ್ಚಯವಾದಿಗಳಿಗೆಲ್ಲ ಜ್ಞಾನವೆಂದರೆ ಉಪಾಸನೆಯೇ ಈ ೯ನೆಯ ಮಂತ್ರಕ್ಕೆ ಅವತರಣಿಕೆ, ತೈತ್ತಿರೀಯ-ಶಿಕ್ಷಾವಲ್ಲಿಯ ಉಪಸಂಹಾರ ಭಾಷ್ಯ, ಐತರೇಯಾವತರಣಿಕೆ, ಛಾ ಭಾ. ೨-೨೩-೧, ಬೃ. ಭಾ. ೧-೫-೧೮, ಬೃ. ೩-೩ ಕ್ಕೆ ಅವತರಣಿಕೆ, ಗೀತಾಭಾಷ್ಯದ ಉಪಕ್ರಮೋಪಸಂಹಾರಗಳು ಮುಂತಾದ ಕಡೆಗಳಲ್ಲಿ ಆಚಾರ್ಯರು ಸಮುಚ್ಚಯವಾದವನ್ನು ಖಂಡಿಸಿರುತ್ತಾರೆ.

2. ವಾಜಸನೇಯನೆಂದರೆ ವಾಜಸನಿಯ ಮಗನಾದ ಯಾಜ್ಞವಲ್ಕ್ಯ; ಆತನು ಕಣ್ವ ಮಧ್ಯಂದಿನಾದಿಮುನಿಗಳಿಗೆ ಹೇಳಿಕೊಟ್ಟಿದ್ದಾದ್ದರಿಂದ ಶುಕ್ಲಯಜುರ್ವೇದಕ್ಕೆ ವಾಜಸನೇಯಕವೆಂದು ಹೆಸರಾಯಿತೆಂದು ಹೇಳುತ್ತಾರೆ.

3. ಜ್ಞಾನಾಂಗವಾದ ಸಂನ್ಯಾಸ.

4. ಶ್ರುತಿಯಲ್ಲಿರುವ ಮಾತು ಉಪಲಕ್ಷಣವು; ಆದರಿಂದ ಕರ್ಮ, ಉಪಾಸನೆ-ಇವನ್ನೂ ಗ್ರಹಿಸಬೇಕೆಂದು ಭಾವ.

ಲೋಕತ್ರಯಕ್ಕೇ ಸಾಧನವಾಗಿರುವದರಿಂದ, ಅನಾತ್ಮವಾದ ಲೋಕಗಳನ್ನು ಪಡೆಯುವದಕ್ಕೆ ಬೇಕಾಗಿರುವ (ಅವುಗಳಿಂದ) ನಾವು ಮಾಡತಕ್ಕದ್ದೇನು? ನಮಗೆ ಅನಿತ್ಯವಾದ, ಸಾಧನಗಳಿಂದ ಪಡೆಯತಕ್ಕದ್ದಾಗಿರುವ, ಲೋಕತ್ರಯವಂತೂ ಬೇಕಾಗಿರುವದಿಲ್ಲ; ಆ ನಮಗೆ ಸ್ವಾಭಾವಿಕವಾಗಿಯೂ[1] ಜನ್ಮರಹಿತವಾಗಿಯೂ ಮುಪ್ಪಿಲ್ಲದ್ದಾಗಿಯೂ ಮರಣವಿಲ್ಲದ್ದಾಗಿಯೂ ಭಯರಹಿತವಾಗಿಯೂ[2] ಕರ್ಮದಿಂದ ಹೆಚ್ಚದೆ ಕುಂದದೆ[3] ಇರುವದಾಗಿಯೂ ಇರುವ ನಿತ್ಯವಾದ (ಆತ್ಮ)ಲೋಕವೇ ಬೇಕಾಗಿರುತ್ತದೆ. ಅದು ನಿತ್ಯವಾಗಿರುವದರಿಂದ ಅವಿದ್ಯೆಯು ಹೋಗುವದೊಂದನ್ನು ಬಿಟ್ಟು[4] ಮತ್ತೆ ಯಾವ ಸಾಧನದಿಂದಲೂ ಉಂಟಾಗುವಹಾಗಿಲ್ಲ. ಆದ್ದರಿಂದ ಪ್ರತ್ಯಗಾತ್ಮ ಬ್ರಹ್ಮವನ್ನರಿತುಕೊಂಡು[5] ಸಕಲ ಏಷಣೆಗಳ ಸಂನ್ಯಾಸವನ್ನೇ ನಾವು ಮಾಡಬೇಕು."

(ಭಾಷ್ಯ)

೬. ಕರ್ಮಸಹಭಾವಿತ್ವವಿರೋಧಾಚ್ಚ ಪ್ರತ್ಯಗಾತ್ಮಬ್ರಹ್ಮವಿಜ್ಞಾನಸ್ಯ। ನ ಹ್ಯುಪಾತ್ತಕಾರಕಫಲಭೇದವಿಜ್ಞಾನೇನ ಕರ್ಮಣಾ ಪ್ರತ್ಯಸ್ತಮಿತಸರ್ವಭೇದದರ್ಶನಸ್ಯ ಪ್ರತ್ಯಗಾತ್ಮಬ್ರಹ್ಮವಿಷಯಸ್ಯ ಸಹಭಾವಿತ್ವಮುಪಪದ್ಯತೇ। ವಸ್ತುಪ್ರಾಧಾನ್ಯೇ ಸತಿ ಅಪುರುಷತನ್ತ್ರತ್ವಾತ್ ಬ್ರಹ್ಮವಿಜ್ಞಾನಸ್ಯ॥

(ಭಾಷ್ಯಾರ್ಥ)

ಕರ್ಮದೊಡನೆ ಪ್ರತ್ಯಗಾತ್ಮಬ್ರಹ್ಮವಿಜ್ಞಾನವು ಇರುವದೆಂಬುದು ವಿರುದ್ಧವಾಗಿರುವದರಿಂದಲೂ (ಸಿದ್ಧಾಂತವೇ ಸರಿ).[6] ಹೇಗೆಂದರೆ ಕಾರಕಗಳು, ಫಲ–ಇವು ಬೇರೆ ಬೇರೆ ಎಂಬ ಅರಿವನ್ನು ಸ್ವೀಕರಿಸಿರುವ ಕರ್ಮದೊಂದಿಗೆ ಯಾವ ಭೇದಜ್ಞಾನವೂ ಇಲ್ಲದ ಪ್ರತ್ಯಗಾತ್ಮಬ್ರಹ್ಮವಿಷಯಕವಾದ ಜ್ಞಾನವು ಇರುವದೆಂಬುದು ಹೊಂದುವ

---

1. ಮತ್ತೊಂದರಿಂದಾಗದೆ ಸ್ವಭಾವದಿಂದಲೇ ಹಾಗಿರುವ.

2. ಬೃ. ೪-೪-೨೫ರ ಸೂಚನೆ. ಅಲ್ಲಿ "ಅಮರೋಽಮೃತೋ" ಎಂದಿದೆ. ಇಲ್ಲಿ 'ಅಮರೋ' ಎಂಬ ಮಾತಿನಲ್ಲಿಯೇ ಎರಡು ಅರ್ಥಗಳನ್ನೂ ಆಚಾರ್ಯರು ಸೇರಿಸಿರಬಹುದು. ಅಮರ–ನಾಶವಿಲ್ಲದ್ದು, ಅಮೃತ–ಸಾಯುವ ಸ್ವಭಾವವಿಲ್ಲದ್ದು, ವಿಕಾರಗಳಿಂದಲೂ ಅವುಗಳಿಂದಾಗುವ ಕಾರಣಗಳಿಂದಲೂ ರಹಿತವಾದದ್ದು ಎಂದರ್ಥ.

3. ಬೃ. ೪-೪-೨೩

4. ಅವಿದ್ಯೆಯಿಂದ ಅಪ್ರಾಪ್ತವಾಗಿರುವವರಿಂದ ವಿದ್ಯೆಯಿಂದ ಎಂದರೆ ಬರಿಯ ಜ್ಞಾನದಿಂದಲೇ ಸಿಕ್ಕತಕ್ಕದ್ದು.

5 ಈಗ ನಮಗೆ ಲೋಕತ್ರಯವೂ ಬೇಕಿಲ್ಲವೆಂಬ ವಿರಕ್ತಿಯುಂಟಾಗಿದೆ; ಜ್ಞಾನದಿಂದ ಎಲ್ಲವೂ ಮಿಥ್ಯೆಯೆಂಬುದನ್ನರಿತುಕೊಂಡು ಬಯಕೆಯ ಬೇರನ್ನೇ ಕಡಿದುಹಾಕಬೇಕು ಎಂದಭಿಪ್ರಾಯ.

6. ಸಮುಚ್ಚಯವಾದವು ಸರಿಯಲ್ಲ.

ಹಾಗೆಯೇ ಇಲ್ಲ. ಏಕೆಂದರೆ, ಬ್ರಹ್ಮಜ್ಞಾನಕ್ಕೆ ವಸ್ತುವೇ ಮುಖ್ಯವಾಗಿರುವದರಿಂದ ಅದು ಪುರುಷತಂತ್ರವಾಗಿರುವದಿಲ್ಲ. [1]

(ಭಾಷ್ಯ)

೭. ತಸ್ಮಾತ್ ದೃಷ್ಟಾದೃಷ್ಟೇಭ್ಯೋ ಬಾಹ್ಯಸಾಧನಸಾಧ್ಯೇಭ್ಯೋ ವಿರಕ್ತಸ್ಯ ಪ್ರತ್ಯಗಾತ್ಮವಿಷಯಾ ಬ್ರಹ್ಮಜಿಜ್ಞಾಸೇಯಮ್ "ಕೇನೇಷಿತಮ್" ಇತ್ಯಾದಿ ಶ್ರುತ್ಯಾ ಪ್ರದರ್ಶ್ಯತೇ ॥

(ಭಾಷ್ಯಾರ್ಥ)

ಆದ್ದರಿಂದ ಹೊರಗಿನ ಸಾಧನಗಳಿಂದ ಪಡೆದುಕೊಳ್ಳಬೇಕಾಗಿರುವ (ಈ ಲೋಕದ) ಮತ್ತು ಕಾಣದ (ಪರಲೋಕದ ಫಲ)ಗಳಲ್ಲಿ ವಿರಕ್ತನಾದವನಿಗಾಗಿ ಪ್ರತ್ಯಗಾತ್ಮನ ವಿಷಯವಾದ ಈ ಬ್ರಹ್ಮಜಿಜ್ಞಾಸೆಯನ್ನು 'ಕೇನೇಷಿತಮ್' ಎಂದು ಮೊದಲಾಗಿರುವ ಶ್ರುತಿಯಲ್ಲಿ ವಿವರಿಸಿರುತ್ತದೆ.

ಸದ್ಗುರುವಿನ ಉಪದೇಶದಿಂದಲೇ ಜ್ಞಾನವನ್ನು ಪಡೆಯಬೇಕು

(ಭಾಷ್ಯ)

೮. ಶಿಷ್ಯಾಚಾರ್ಯಪ್ರಶ್ನಪ್ರತಿವಚನರೂಪೇಣ ಕಥನಂ ತು ಸೂಕ್ಷ್ಮವಸ್ತು ವಿಷಯತ್ವಾತ್ ಸುಖಪ್ರತಿಪತ್ತಿಕಾರಣಂ ಭವತಿ। ಕೇವಲತರ್ಕಾಗಮ್ಯತ್ವಂ ಚ ದರ್ಶಿತಂ ಭವತಿ। "ನೈಷಾ ತರ್ಕೇಣ ಮತಿರಾಪನೇಯಾ" (ಕ. ೧-೨-೯) ಇತಿ ಶ್ರುತೇಶ್ಚ। ಆಚಾರ್ಯವಾ ಪುರುಷೋ ವೇದ" (ಛಾ. ೬-೧೪-೨), "ಆಚಾರ್ಯಾದ್ಧೈವ ವಿದ್ಯಾ ವಿದಿತಾ ಸಾಧಿಷ್ಠಂ ಪ್ರಾಪದಿತಿ" (ಛಾ. ೪-೯-೩), "ತದ್ವಿದ್ಧಿ ಪ್ರಣಿಪಾತೇನ" (ಗೀ. ೪-೩೪)—ಇತ್ಯಾದಿಸ್ಮೃತಿನಿಯಮಾಚ್ಚ ॥

(ಭಾಷ್ಯಾರ್ಥ)

ಶಿಷ್ಯನು ಕೇಳಿದಂತೆಯೂ ಆಚಾರ್ಯನು ಉತ್ತರಕೊಟ್ಟಂತೆಯೂ ಹೇಳಿರುವದು (ಇದು) ಸೂಕ್ಷ್ಮವಸ್ತುವಿನ ವಿಷಯ(ದ ವಿಚಾರ)ವಾಗಿರುವದರಿಂದ ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗಿರುವದು, (ಇದು) ಕೇವಲ ತರ್ಕ

---

1. ಕರ್ಮವನ್ನು ಮಾಡುವವನಿಗೆ ನಾನು ಕರ್ತನು, ಇದು ಕರ್ಮದಿಂದ ಪಡೆಯುವ ಫಲವು—ಎಂಬ ಭೇದಜ್ಞಾನವಿರುತ್ತದೆ, ಆದ್ದರಿಂದ ಅವನಿಗೆ ಕರ್ತವ್ಯವಿರುತ್ತದೆ. ಆತ್ಮಜ್ಞಾನಿಗೆ ಕರ್ತ್ರಾದಿಭೇದವು ಸುಳ್ಳೆಂಬ ಅರಿವಾಗಿರುತ್ತದೆಯಾದ್ದರಿಂದ ಕರ್ತವ್ಯವಿರುವದಿಲ್ಲ. ಕರ್ಮವು ಪುರುಷತಂತ್ರವಾದ್ದರಿಂದ ಅದಕ್ಕೆ ಕರ್ತೃ ಮುಖ್ಯ, ಅದು ಪುರುಷತಂತ್ರ; ಜ್ಞಾನಕ್ಕೆ ತಾನು ತಿಳಿಸುವ ವಸ್ತು ಮುಖ್ಯ, ಪುರುಷನ ಇಚ್ಛೆಗೆ ಅಧೀನವಾಗಿ ಜ್ಞಾನವಾಗುವದಿಲ್ಲ. ಹೀಗೆ ವಿರುದ್ಧಗಳಾದ ಜ್ಞಾನಕರ್ಮಗಳು ಒಟ್ಟಿಗೆ ಇರಲಾರವು—ಎಂದು ಭಾವ. ಇಲ್ಲಿ ಪೂರ್ವಪಕ್ಷಿಯು ಹೇಳುವ ಜ್ಞಾನಕ್ಕಿಂತ ಬೇರೆಯಾದ ಆತ್ಮಜ್ಞಾನವಿದೆ ಎಂದು ತಿಳಿಸಿದೆ.

ದಿಂದ ಅರಿತುಕೊಳ್ಳುವದಕ್ಕೆ ಆಗುವದಿಲ್ಲವೆಂಬುದನ್ನೂ ಹೇಳಿದಂತೆ ಆಗುತ್ತದೆ. "ಈ ತಿಳಿವಳಿಕೆಯು ತರ್ಕದಿಂದ ಪಡೆಯತಕ್ಕದ್ದಲ್ಲ" (ಕ. ೧-೨-೯) ಎಂಬ ಶ್ರುತಿ ಇದಕ್ಕೆ ಪ್ರಮಾಣವು. "ಆಚಾರ್ಯನನ್ನುಳ್ಳ (ಪುರುಷನೇ) ಇದನ್ನು ತಿಳಿದುಕೊಳ್ಳುತ್ತಾನೆ" (ಛಾ. ೬-೧೪-೨). "ಆಚಾರ್ಯನಿಂದ ತಿಳಿದುಕೊಂಡ ವಿದ್ಯೆಯೇ ಉತ್ತಮ ತ್ವವನ್ನು ಹೊಂದುವದೆಂದು (ಕೇಳಿದೇನೆ)" (ಛಾ. ೪-೯-೩). "ಆ (ಜ್ಞಾನವನ್ನು ಗುರುಗಳಿಗೆ) ನಮಸ್ಕಾರಮಾಡುವದರಿಂದಲೂ (ತತ್ತ್ವವನ್ನು ಕುರಿತು ಅವರನ್ನು ಕೇಳುವದರಿಂದಲೂ, ಅವರ ಸೇವೆಯಿಂದಲೂ) ತಿಳಿದುಕೊ"[1] (ಗೀ ೪-೩೪) ಎಂಬಿವೇ ಮುಂತಾದ ಶ್ರುತಿಸ್ಮೃತಿಗಳಲ್ಲಿ (ಗುರುವಿನಿಂದಲೇ ಜ್ಞಾನವನ್ನು ಪಡೆದು ಕೊಳ್ಳಬೇಕೆಂಬ ನಿಯಮವನ್ನು ಹಾಕಿರುವದರಿಂದಲೂ (ಹೀಗೆಂದು ಸಿದ್ಧವಾಗುತ್ತದೆ).

---

1 "ಆ ಜ್ಞಾನಿಗಳು ಹೇಳಿದ್ದನ್ನು ಅರಿತುಕೊಂಡರೆ ಈ ರೀತಿಯಲ್ಲಿ ಮೋಹವಾಗುವದಿಲ್ಲ"_ಎಂದು ಈ ವಾಕ್ಯದ ಮುಂದೆ ಇರುವದರಿಂದ ಗುರುಗಳ ಉಪದೇಶದಿಂದಲೇ ಅಜ್ಞಾನದ ನಾಶವಾಗುವದೆಂದೂ ಬರಿಯ ತರ್ಕದಿಂದ ಆಗದೆಂದೂ ಹೇಳಿದಂತೆ ಆಗುತ್ತದೆ.

ಒಂದನೆಯ ಖಂಡ

(ಭಾಷ್ಯ)

೯. ಕಶ್ಚಿದ್ಗುರುಂ ಬ್ರಹ್ಮನಿಷ್ಠಂ ವಿಧಿವದುಪೇತ್ಯ ಪ್ರತ್ಯಗಾತ್ಮವಿಷಯಾದನ್ಯತ್ರ ಶರಣಮ್ ಅಪಶ್ಯನ್ ಅಭಯಂ ನಿತ್ಯಂ ಶಿವಮಚಲಮಿಚ್ಛನ್ ಪಪ್ರಚ್ಛ–ಇತಿ ಕಲ್ಪ್ಯತೇ—

(ಭಾಷ್ಯಾರ್ಥ)

ಯಾವನೋ ಒಬ್ಬನು ಪ್ರತ್ಯಗಾತ್ಮನೆಂಬ ವಿಷಯವನ್ನು ಬಿಟ್ಟು ಮತ್ತೆಲ್ಲಿಯೂ ಶರಣವನ್ನು ಕಾಣದೆ (ಶಾಸ್ತ್ರದಲ್ಲಿ) ವಿಧಿಸಿರುವಂತೆ ಬ್ರಹ್ಮನಿಷ್ಠನಾದ[1] ಗುರುವಿನ ಬಳಿಗೆ ಬಂದು ಭಯರಹಿತವಾಗಿಯೂ, ನಿತ್ಯವಾಗಿಯೂ, ಮಂಗಲಕರವಾಗಿಯೂ, ಚಲನೆಯಿಲ್ಲದ್ದಾಗಿಯೂ ಇರುವದನ್ನು ಇಚ್ಛಿಸುವವನಾಗಿ (ಹೀಗೆಂದು) ಕೇಳಿದನು–ಎಂದು ಕಲ್ಪಿಸಬೇಕು.

ಶಿಷ್ಯನ ಪ್ರಶ್ನೆ

ಕೇನೇಷಿತಂ ಪತತಿ ಪ್ರೇಷಿತಂ ಮನಃ
ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ ।
ಕೇನೇಷಿತಾಂ ವಾಚಮಿಮಾಂ ವದನ್ತಿ
ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ ॥ ೧ ॥

೧. ಯಾರ ಇಷ್ಟದಂತೆ ಕಳುಹಲ್ಪಟ್ಟು ಮನಸ್ಸು ಎರಗುವದು? ಮೊದಲನೆಯ ಪ್ರಾಣವು ಯಾರಿಂದ ಯುಕ್ತವಾಗಿ ಹೊರಡುತ್ತದೆ? ಯಾರ ಇಚ್ಛೆಯಿಂದ ಈ ವಾಕ್ಯನಮ್ನ ಆಡುತ್ತಾರೆ? ಮತ್ತು ಚಕ್ಷುಸ್ಸನ್ನೂ ಶ್ರೋತ್ರವನ್ನೂ ಯಾವ ದೇವನು ಕಟ್ಟುಮಾಡುತ್ತಿರುವನು?

'ಇಷಿತಮ್' ಎಂಬ ಮಾತಿನ ಅರ್ಥ

(ಭಾಷ್ಯ)

೧೦. ಕೇನ ಇಷಿತಮ್ ಕೇನ ಕರ್ತ್ರಾ ಇಷ್ಟಮ್ ಅಭಿಪ್ರೇತಂ ಸತ್, ಮನಃ ಪತತಿ ಗಚ್ಛತಿ ಸ್ವವಿಷಯಂ ಪ್ರತಿ-ಇತಿ ಸಮ್ಬಧ್ಯತೇ। ಇಷೇರಾಭಿಕ್ವಾಣ್ಯರ್ಥಸ್ಯ ಗತ್ಯರ್ಥಸ್ಯ ಚೇಹಾಸಮ್ಭವಾತ್, ಇಚ್ಛಾರ್ಥಸ್ಯೈವೈತದ್ರೂಪಮಿತಿ ಗಮ್ಯತೇ। 'ಇಷಿತಮ್' ಇತಿ ಇಷ್ಟ್ಯುಯೋಗಸ್ತು ಛಾನ್ದಸಃ ॥

---

1 ಮು. ೧-೩-೧೩ ರ ಸೂಚನೆ. ಅನಾತ್ಮವನ್ನು ತೊರೆದು ಬ್ರಹ್ಮದಲ್ಲಿಯೇ ನೆಲೆ ನಿಂತಿರುವ ಶ್ರೋತ್ರಿಯನಾದ ಗುರುವಿನ ಬಳಿಗೇ ಆತ್ಮಜ್ಞಾನಕ್ಕೆ ಹೋಗಬೇಕು ಎಂದು ಆ ಶ್ರುತಿಯಲ್ಲಿದೆ.

(ಭಾಷ್ಯಾರ್ಥ)

ಯಾವನಿಂದ ಇಷಿತವಾಗಿ ಎಂದರೆ ಯಾವ ಕರ್ತೃವಿನ ಇಷ್ಟವನ್ನನುಸರಿಸಿ, ಅಭಿಪ್ರಾಯ (ವನ್ನನುಸರಿಸಿ), ಮನಸ್ಸು ಎರಗುವುದು? (ಇಲ್ಲಿ) ತನ್ನ ವಿಷಯದ ಕಡೆಗೆ (ಎರಗುವದು?) ಎಂದು ಸೇರಿಸಿಕೊಳ್ಳಬೇಕು. ಇಷ್ ಧಾತುವಿಗೆ ಅತಿಶಯ ವೆಂಬರ್ಥವೂ ಹೋಗು ಎಂಬರ್ಥವೂ[1] (ಇವೆಯಾದರೂ ಇಲ್ಲಿ ಅವು) ಹೊಂದುವದಿಲ್ಲ ವಾದ್ದರಿಂದ ಇಚ್ಛೆಯನ್ನು ಹೇಳುವ ಇಷ್ ಧಾತುವಿನದೇ ಈ ರೂಪವೆಂದು ನಿರ್ಧರಿ ಸಬೇಕಾಗಿದೆ. (ಇಷ್ಟಮ್ ಎಂಬುದಕ್ಕೆ ಬದಲಾಗಿ) ಇಷಿತಮ್[2] ಎಂದು (ಮೂಲದಲ್ಲಿ) ಇಕಾರಸಹಿತವಾಗಿ (ಮಾಡಿರುವ) ಪ್ರಯೋಗವೋ ಎಂದರೆ (ಅದು) ವೈದಿಕವು,

"ಪ್ರೇಷಿತಮ್" ಎಂಬುದರ ಅರ್ಥ

(ಭಾಷ್ಯ)

೧೧. ತಸ್ಯೈವ ಪ್ರಪೂರ್ವಸ್ಯ ನಿಯೋಗಾರ್ಥೇ 'ಪ್ರೇಷಿತಮ್' ಇತ್ಯೇತತ್। ತತ್ರ 'ಪ್ರೇಷಿತಮ್' ಇತ್ಯೇವೋಕ್ತೇ ಪ್ರೇಷಯಿತೃಪ್ರೇಷಣವಿಶೇಷವಿಷಯಾ ಕಾಙ್ಕ್ಷಾಽಸ್ಯಾತ್ "ಕೇನ ಪ್ರೇಷಯಿತೃವಿಶೇಷೇಣ, ಕೀದೃಶಂ ವಾ ಪ್ರೇಷಣಮ್?" ಇತಿ। "ಇಷಿತಮ್" ಇತಿ ತು ವಿಶೇಷಣೇ ಸತಿ ತದುಭಯಂ ನಿವರ್ತತೇ। "ಕಸ್ಯೇಚ್ಛಾಮಾತ್ರೇಣ ಪ್ರೇಷಿತಮ್?" ಇತ್ಯರ್ಥವಿಶೇಷನಿರ್ಧಾರಣಾತ್॥

(ಭಾಷ್ಯಾರ್ಥ)

ಅದೇ (ಧಾತುವಿಗೆ) ಪ್ರ (ಎಂಬ ಉಪಸರ್ಗವನ್ನು)[3] ಮೊದಲು ಸೇರಿಸಿದರೆ ಕಟ್ಟುಮಾಡು ಎಂಬರ್ಥದಲ್ಲಿ "ಪ್ರೇಷಿತಮ್" ಎಂಬ ರೂಪವಾಗುವದು. ಇಲ್ಲಿ "ಪ್ರೇಷಿತಮ್" ಎಂದು ಮಾತ್ರ ಹೇಳಿದ್ದರೆ ಪ್ರೇಷಣಮಾಡುವಾತನು, ಪ್ರೇಷಣ ಇವುಗಳ ವಿಶೇಷವಿಷಯವಾದ ಪ್ರಶ್ನೆಯನ್ನು ಹಾಕಿದಂತೆ ಆಗುತ್ತಿತ್ತು; ಎಂದರೆ

---

1. ಇಷ ಅಬೀಕ್ಷ್ಣ್ಯೇ ಎಂಬ ಕ್ರ್ಯಾದಿಧಾತು, ಇಷ ಗತೌ ಎಂಬ ದಿವಾದಿಯೂ ಇಲ್ಲಿ ಅರ್ಥಕ್ಕೆ ಹೊಂದುವದಿಲ್ಲ. ಇಷು ಇಚ್ಛಾಯಾಮ್ ಎಂಬ ತುದಾದಿಧಾತುವನ್ನೇ ಇಲ್ಲಿ ತೆಗೆದು ಕೊಳ್ಳಬೇಕು.

2. ಮೊದಲನೆಯ ಎರಡು ಧಾತುಗಳಿಗೆ 'ಇಷಿತಮ್' ಎಂಬ ರೂಪವು ವ್ಯಾಕರಣದಂತೆ ಬರುತ್ತದೆ; ಇಷು ಧಾತುವಿಗೆ ವಿಕಲ್ಪವಾಗಿ 'ಇಟ್' ಉಂಟು (ಪಾ. ೭-೩-೪೪); ಆದರೆ ವಿಕಲ್ಪವಾಗಿ ಇಟ್ ಬರುವ ಧಾತುವಿಗೆ ಕೃದಂತವಾದಾಗ 'ಇಟ್' ಬರುವದಿಲ್ಲವಾದ್ದರಿಂದ "ಇಷ್ಟಮ್" ಎಂದೇ ರೂಪವಾಗಬೇಕು, "ಇಷಿತಮ್" ಎಂಬ ರೂಪವಾಗುವದಿಲ್ಲ. ಆದ್ದರಿಂದ ಇದು ವೈದಿಕರೂಪವು ಎಂದು ಭಾಷ್ಯಕಾರರು ಬರೆದಿರುತ್ತಾರೆ. ಮುಂದೆ "ಪ್ರೇಷಿತಮ್" ಎಂಬಲ್ಲಿ ಪ್ರೇರಣಾರ್ಥವಿರುವದರಿಂದ ಅಲ್ಲಿ ಈ ಆಕ್ಷೇಪವು ಹುಟ್ಟುವದಿಲ್ಲ.

3. ಧಾತುವಿಗೆ ಉಪಸರ್ಗದಿಂದ ಬೇರೆ ಅರ್ಥವು ಬರುತ್ತದೆ. ಉದಾ: ವಿಹಾರ, ಆಹಾರ,

" ಯಾವನು ಪ್ರೇರಣಮಾಡಿದ್ದರಿಂದ, ಅಥವಾ-" ಎಂಥ ಪ್ರೇರಣೆ ? " ಎಂಬುದು (ಪ್ರಶ್ನೆಯ) ಅಭಿಪ್ರಾಯವಾಗುತಿತ್ತು.[1] ' ಇಷಿತಮ್ ' ಎಂದು ಇದಕ್ಕೆ ವಿಶೇಷಣವನ್ನು ಹಾಕಿರುವದರಿಂದಲಾದರೋ ಆ ಎರಡು (ಅಭಿಪ್ರಾಯಗಳೂ) ವಾಕ್ಯಕ್ಕೆ ಉಂಟಾಗದಂತೆ ಆಯಿತು. (ಈಗ) " ಯಾವನ ಇಚ್ಛಾಮಾತ್ರದಿಂದ[2] ಪ್ರೇರಿಸಲ್ಪಟ್ಟು ? " ಎಂದು ಪ್ರಶ್ನೆಗೆ ವಿಶೇಷಾರ್ಥವೆಂದು ನಿಶ್ಚಯವಾಯಿತು.

(ಭಾಷ್ಯ)

೧೨. ಯದ್ಯೇಷೋಽರ್ಥೋಽಭಿಪ್ರೇತಃ ಸ್ಯಾತ್ " ಕೇನೇಷಿತಮ್ '' ಇತ್ಯೇತಾವತೈವ ಸಿದ್ಧತ್ವಾತ್ " ಪ್ರೇಷಿತಮ್ " ಇತಿ ನ ವಕ್ತವ್ಯಮ್ । ಅಪಿ ಚ ಶಬ್ದಾಧಿಕ್ಯಾದರ್ಥಾಧಿಕ್ಯಂ ಯುಕ್ತಮಿತಿ " ಇಚ್ಛಯಾ, ಕರ್ಮಣಾ, ವಾಚಾ ವಾ ಕೇನ ಪ್ರೇಷಿತಮ್?" ಇತ್ಯರ್ಥವಿಶೇಷೋಽವಗನ್ತುಂ ಯುಕ್ತಃ । ನ । ಪ್ರಶ್ನಸಾಮರ್ಥ್ಯಾತ್ । ದೇಹಾದಿಸಙ್ಘಾತಾದನಿತ್ಯಾತ್ ಕರ್ಮಕಾರ್ಯಾದ್ವಿರಕ್ತಃ, ಅತೋಽನ್ಯತ್ಕೂಟಸ್ಥಂ ನಿತ್ಯಂ ವಸ್ತು ಬುಭುತ್ಸಮಾನಃ ಪೃಚ್ಛತೀತಿ ಸಾಮರ್ಥ್ಯಾದುಪಪದ್ಯತೇ । ಇತರಥಾ ಇಚ್ಛಾವಾಕ್ಕರ್ಮಭಿರ್ದೇಹಾದಿಸಙ್ಘಾತಸ್ಯ ಪ್ರೇರಯಿತೃತ್ವಂ ಪ್ರಸಿದ್ಧಮಿತಿ ಪ್ರಶ್ನೋಽನರ್ಥಕ ಏವ ಸ್ಯಾತ್ । ಏವಮಪಿ ಪ್ರೇಷಿತಶಬ್ದಸ್ಯಾರ್ಥೋ ನ ಪ್ರದರ್ಶಿತ ಏವ । ನ । ಸಂಶಯವತೋಽಯಂ ಪ್ರಶ್ನ ಇತಿ ಪ್ರೇಷಿತಶಬ್ದಸ್ಯ ಅರ್ಥವಿಶೇಷ ಉಪಪದ್ಯತೇ । ಕಿಂ ಯಥಾಪ್ರಸಿದ್ಧಮೇವ ಕಾರ್ಯಕರಣಸಙ್ಘಾತಸ್ಯ ಪ್ರೇಷಯಿತೃತ್ವಮ್ ಕಿಂ ವಾ ಸಙ್ಘಾತವ್ಯತಿರಿಕ್ತಸ್ಯ ಸ್ವತನ್ತ್ರಸ್ಯ ಇಚ್ಛಾಮಾತ್ರೇಣೈವ ಮನಆದಿಪ್ರೇಷಯಿತೃತ್ವಮ್ ?–ಇತ್ಯಸ್ಯಾರ್ಥಸ್ಯ ಪ್ರದರ್ಶನಾರ್ಥಂ " ಕೇನೇಷಿತಮ್ ಪತತಿ ಪ್ರೇಷಿತಂ ಮನಃ '' ಇತಿ ವಿಶೇಷಣದ್ವಯಮುಪಪದ್ಯತೇ ॥

(ಭಾಷ್ಯಾರ್ಥ)

(ಆಕ್ಷೇಪ):—ಈ ಅರ್ಥವೇ (ಶ್ರುತಿಯ) ಅಭಿಪ್ರಾಯವಾಗಿದ್ದರೆ " ಕೇನ ಇಷಿತಮ್ " (ಯಾರ ಇಷ್ಟದಂತೆ) ಎಂಬುದರಿಂದಲೇ (ಅಭಿಪ್ರಾಯವು) ಹೊರಡುವದರಿಂದ " ಪ್ರೇಷಿತಮ್ " ಎಂದು ಹೇಳಬೇಕಾಗಿರಲಿಲ್ಲವಲ್ಲ ! ಇದೂ ಅಲ್ಲದೆ, ಮಾತುಗಳು ಹೆಚ್ಚಾದಷ್ಟೂ ಅರ್ಥವೂ ಹೆಚ್ಚಾಗತಕ್ಕದ್ದು ಯುಕ್ತವಾದ್ದರಿಂದ ಇಚ್ಛೆಯಿಂದಲೋ

---

1. ಕೇನ ಪ್ರೇಷಿತಮ್ ಎಂದರೆ ಕೇನ ಪುರುಷೇಣ ಪ್ರೇಷಿತಮ್ ಎಂದು ಅಭಿಪ್ರಾಯವಾಗಬಹುದು. ಆಗ ಪ್ರೇರಕನು ಯಾರು ಎಂದು ಪ್ರಶ್ನೆ ; ಕೇನ ಪ್ರಕಾರೇಣ ಪ್ರೇಷಿತಮ್ ಎಂದೂ ಆಗಬಹುದು. ಆಗ ಯಾವ ಪ್ರಕಾರದ ಪ್ರೇರಣೆ ಎಂದು ಪ್ರಶ್ನೆ.

2. ಪ್ರೇರಕನ ಸನ್ನಿಧಿಮಾತ್ರದಿಂದ, ಅವನಲ್ಲಿ ಯಾವ ಮಾರ್ಪಾಡೂ ಇಲ್ಲದೆ.

ಕರ್ಮದಿಂದಲೋ, ವಾಕ್ಯಿನಿಂದಲೋ, ಯಾವದರಿಂದ[1] ಪ್ರೇರಿತವಾಗಿ (ಮನಸ್ಸು ವಿಷಯದಲ್ಲಿ ಎರಗುವದು?) ಎಂಬ ಅರ್ಥವಿಶೇಷವು (ಈ ಪ್ರಶ್ನೆಗೆ ಇರುವದೆಂದು ನಿರ್ಣಯಿಸುವದು ಯುಕ್ತ(ವಲ್ಲವೆ?)

(ಪರಿಹಾರ):—ಅಲ್ಲ. ಏಕೆಂದರೆ (ಇಲ್ಲಿ) ಪ್ರಶ್ನೆಯ ಸಾಮರ್ಥ್ಯದಿಂದ (ನಮ್ಮ ಅಭಿಪ್ರಾಯವೇ ಸರಿಯೆಂದಾಗುತ್ತದೆ). ಕರ್ಮದ ಕಾರ್ಯವೂ ಅನಿತ್ಯವೂ ಆಗಿರುವ ದೇಹವೇ ಮುಂತಾದುವುಗಳ ಸಂಘಾತದಲ್ಲಿ[2] ವಿರಕ್ತನಾಗಿ ಇದಕ್ಕಿಂತ ಬೇರೆಯಾದ ಕೂಟಸ್ಥವಾದ[3] ನಿತ್ಯವಸ್ತು(ವಿದೆಯೇ) ತಿಳಿಯಬೇಕೆಂಬ ಇಚ್ಛೆಯಿಂದ ಕೇಳುತ್ತಾನೆಂದು (ಪ್ರಶ್ನೆಯ) ಸಾಮರ್ಥ್ಯದಿಂದ[4] ಯುಕ್ತವಾಗಿರುತ್ತದೆ. ಹಾಗಿಲ್ಲದಿದ್ದರೆ ಇಚ್ಛೆ, ವಾಕ್ಯ, ಕರ್ಮ ಇವುಗಳಿಂದ ದೇಹಾದಿಸಂಘಾತವು (ಮನಸ್ಸನ್ನು) ಪ್ರೇರಿಸುತ್ತದೆ ಎಂಬುದು (ಎಲ್ಲರಿಗೂ) ತಿಳಿದೇ ಇರುವದರಿಂದ (ಈ) ಪ್ರಶ್ನೆಯೇ ನಿರರ್ಥಕವಾಗಿ ಬಿಡುತ್ತಿತ್ತು.

(ಆಕ್ಷೇಪ)—ಈ ಪಕ್ಷದಲ್ಲಿಯೂ "ಪ್ರೇಷಿತಮ್" ಎಂಬ ಮಾತಿತ ಅರ್ಥವನ್ನೇನೂ ತೋರಿಸಿದಂತೆಯೇ ಆಗುವದಿಲ್ಲವಲ್ಲ!

(ಪರಿಹಾರ).—ಹಾಗಲ್ಲ. ಇದು ಸಂಶಯವುಳ್ಳಾತನ ಪ್ರಶ್ನೆಯಾದ್ದರಿಂದ 'ಪ್ರೇಷಿತಮ್" ಎಂಬ ಮಾತಿಗೂ ಒಂದಾನೊಂದು ಅರ್ಥವುಂಟು. ಕಾರ್ಯಕರಣಸಂಘಾತವು ಪ್ರೇರಕವೆಂದು ಪ್ರಸಿದ್ಧವಾಗಿದೆಯಷ್ಟೆ; ಹೀಗೆಯೇ (ಇದಕ್ಕೆ) ಪ್ರೇರಕತ್ವವಿದೆಯೇ ಅಥವಾ (ಈ) ಸಂಘಾತಕ್ಕಿಂತ ಬೇರೆಯಾಗಿರುವ ಸ್ವತಂತ್ರವಾದ (ಯಾವದಾದರೊಂದು ತತ್ತ್ವಕ್ಕೆ) ಇಚ್ಛಾಮಾತ್ರದಿಂದಲೇ ಮನಆದಿಗಳನ್ನು ಪ್ರೇರಿಸುವ ಕರ್ತೃತ್ವವಿದೆಯೆ ಎಂಬ ಅರ್ಥವನ್ನು ತಿಳಿಸುವದಕ್ಕಾಗಿ "ಯಾವದರ ಇಷ್ಟದಂತೆ ಪ್ರೇರಿತವಾಗಿ ಮನಸ್ಸು (ವಿಷಯದಲ್ಲಿ) ಎರಗುವದು?" ಎಂದು (ಇಷಿತ ಪ್ರೇಷಿತ ಎಂಬ) ಎರಡು ವಿಶೇಷಣಗಳನ್ನು (ಹಾಕಿರುವದು) ಯುಕ್ತವಾಗಿರುತ್ತದೆ.

---

1. ಕೇನೇಷಿತಮ್, ಕೇನ ಪ್ರೇಷಿತಮ್-ಕತಮೇನ ಇಷ್ಟಂ ಕತಮೇನ ಪ್ರೇರಿತಮ್? ಯಾವದರ ಇಚ್ಛೆಯಂತೆ, ಯಾವದರ ಪ್ರೇರಣೆಗೆ ಒಳಪಟ್ಟು? ಎಂದು ಪೂರ್ವಪಕ್ಷಿಯ ಅರ್ಥ.

2. ಒಟ್ಟುಗೂಡಿ ಕೆಲಸಮಾಡುವ ಗುಂಪಿನಲ್ಲಿ.

3. ನಿರ್ವಿಕಾರಿಯಾದ.

4. ವಾಕ್ಯದಲ್ಲಿ ಈ ಅಭಿಪ್ರಾಯದ ಶಬ್ದವಿಲ್ಲದಿದ್ದರೂ ಪ್ರಶ್ನೆಯ ಸಾರ್ಥಕ್ಯಕ್ಕಾಗಿ ಹೀಗೆಯೇ ಕಲ್ಪಿಸಬೇಕು.

5. ಇಚ್ಛಾದಿಗಳೇ ಮನುಷ್ಯನನ್ನು ತೊಡಗಿಸುತ್ತವೆ. ಆದ್ದರಿಂದ ಅವುಗಳೇ ಮನಸ್ಸಿಗೆ ಪ್ರೇರಕ ಎಂಬುದು ಎಲ್ಲರಿಗೂ ಗೊತ್ತಿರುವದು; ಅದನ್ನೇ ಶಾಸ್ತ್ರವು ಹೇಳಿದರೆ ಬರಿಯ ಅನುವಾದವಾಗುವದು.

ಮನಸ್ಸಿನ ವಿಷಯದ ಪ್ರಶ್ನೆಯ ಅಭಿಪ್ರಾಯ

(ಭಾಷ್ಯ)

೧೩. ನನು ಸ್ವತನ್ತ್ರಂ ಮನಃ ಸ್ವವಿಷಯೇ ಸ್ವಯಂ ಪತತೀತಿ ಪ್ರಸಿದ್ಧಮ್ । ತತ್ರ ಕಥಂ ಪ್ರಶ್ನ ಉಪಪದ್ಯತ ಇತಿ ? ಉಚ್ಯತೇ । ಯದಿ ಸ್ವತನ್ತ್ರಂ ಮನಃ ಪ್ರವೃತ್ತಿನಿವೃತ್ತಿವಿಷಯೇ ಸ್ಯಾತ್, ತರ್ಹಿ ಸರ್ವಸ್ಯಾನಿಷ್ಟಚಿನ್ತನಂ ನ ಸ್ಯಾತ್ । ಅನರ್ಥಂ ಚ ಜಾನನ್ ಸಙ್ಕಲ್ಪಯತಿ । ಅಭ್ಯಗ್ರದುಃಖೇ ಚ ಕಾರ್ಯೇ ವಾರ್ಯಮಾಣಮಪಿ ಪ್ರವರ್ತತ ಏವ ಮನಃ । ತಸ್ಮಾದ್ಯುಕ್ತ ಏವ "ಕೇನೇಷಿತಮ್" ಇತ್ಯಾದಿಪ್ರಶ್ನಃ ॥

(ಭಾಷ್ಯಾರ್ಥ)

(ಆಕ್ಷೇಪ) —ಮನಸ್ಸು ಸ್ವತಂತ್ರವೆಂದೂ ತನ್ನ ವಿಷಯದಲ್ಲಿ ತಾನೇ ಎರಗುತ್ತಿರುವದೆಂದೂ ಪ್ರಸಿದ್ಧವಾಗಿರುತ್ತದೆ. ಹೀಗಿರುವಲ್ಲಿ ಪ್ರಶ್ನೆಯು ಹೇಗೆ ಹೊಂದುತ್ತದೆ?

(ಪರಿಹಾರ) —ಹೇಳುತ್ತೇವೆ (ಕೇಳಿ). ಮುಂಬರಿಯುವ ಮತ್ತು ಹಿಂಜಗ್ಗುವ ವಿಷಯದಲ್ಲಿ ಮನಸ್ಸು ಸ್ವತಂತ್ರವಾಗಿದ್ದಿದ್ದರೆ ಆಗ ಯಾರಿಗೂ ಅನಿಷ್ಟವಾದ ಯೋಚನೆಯುಂಟಾಗಬಾರದಾಗಿತ್ತು (ಇದು) ಅನರ್ಥವೆಂದು ತಿಳಿದರೂ ಮನಸ್ಸು ಸಂಕಲ್ಪಿಸುತ್ತದೆ ಮತ್ತು ಕೂಡಲೆ[1] ದುಃಖವನ್ನು ಕೊಡುವ ಕೆಲಸದಲ್ಲಿ ಬೇಡವೆಂದರೂ ತೊಡಗುತ್ತದೆ. ಆದ್ದರಿಂದ ಯಾರ ಇಚ್ಛಾಮಾತ್ರದಿಂದ ಎಂದು ಮುಂತಾಗಿ ಕೇಳಿರುವ ಪ್ರಶ್ನೆಯು ಯುಕ್ತವೇ ಆಗಿದೆ.

ಪ್ರಾಣೇಂದ್ರಿಯಗಳನ್ನು ಕುರಿತ ಪ್ರಶ್ನೆ

೧೪. ಕೇನ ಪ್ರಾಣಃ ಯುಕ್ತಃ ನಿಯುಕ್ತಃ ಪ್ರೇರಿತಃ ಸನ್ ಪ್ರೈತಿ ಗಚ್ಛತಿ ಸ್ವವ್ಯಾಪಾರಂ ಪ್ರತಿ । "ಪ್ರಥಮಃ" ಇತಿ ಪ್ರಾಣವಿಶೇಷಣಂ ಸ್ಯಾತ್, ತತ್ಪೂರ್ವತ್ವಾತ್ ಸರ್ವೇನ್ದ್ರಿಯಪ್ರವೃತ್ತೀನಾಮ್ । ಕೇನ ಇಷಿತಾಂ ವಾಚಮ್ ಇಮಾಂ ಶಬ್ದಲಕ್ಷಣಂ ವದನ್ತಿ ಲೌಕಿಕಾಃ । ತಥಾ ಚಕ್ಷುಃ ಶ್ರೋತ್ರಂ ಚ ಸ್ವೇ ಸ್ವೇ ವಿಷಯೇ ಕಲು ದೇವಃ ದ್ಯೋತನವಾನ್ ಯುನಕ್ತಿ ನಿಯುಙ್ಕ್ತೇ ಪ್ರೇರಯತಿ ॥

(ಭಾಷ್ಯಾರ್ಥ)

ಯಾರಿಂದ ಯುಕ್ತವಾಗಿ ಎಂದರೆ ಕಟ್ಟುವಡೆದು ಎಂದರೆ ಪ್ರೇರಿತವಾಗಿ, ಪ್ರಾಣವು ತನ್ನ ಕೆಲಸದಲ್ಲಿ ಸಾಗುತ್ತದೆ ಎಂದರೆ ಹೋಗುತ್ತದೆ? ಪ್ರಥಮ ಎಂಬುದು ಪ್ರಾಣಕ್ಕೆ ವಿಶೇಷಣವಾಗಬಹುದು, ಏಕೆಂದರೆ ಸಕಲ ಇಂದ್ರಿಯಗಳ ಪ್ರವೃತ್ತಿಗಳೂ ಆ (ಪ್ರಾಣದ) ಸಹಾಯದಿಂದಲೇ (ನಡೆಯುತ್ತವೆ)[2] ಯಾರ ಇಚ್ಛೆಯಂತೆ ಈ ಶಬ್ದ

---

1. "ಅತ್ಯುಗ್ರದುಃಖೇ" ಎಂಬ (೧೩) ಪಾರಕ್ಕೆ ಒಹಳ ಉಗ್ರವಾದ ದುಃಖವನ್ನು ಕೊಡುವ ಎಂದರ್ಥ.

2. ಪ್ರ. ೩-೪; ಛಾ. ೫-೧-೧೩ ರಿಂದ ೧೫.

ರೂಪವಾದ[1] ವಾಕ್ಯನ್ನು ಜನರು ಆಡುತ್ತಿರುವರು? ಇದರಂತೆ ಚಕ್ಷುರಿಂದ್ರಿಯವನ್ನೂ ಶ್ರೋತ್ರೇಂದ್ರಿಯವನ್ನೂ ತನ್ನ ತನ್ನ ವಿಷಯದಲ್ಲಿ ಯಾವ ದೇವನು (ಯಾವ) ಪ್ರಕಾಶವುಳ್ಳವನು "ಯುನಕ್ತಿ" ಎಂದರೆ ಕಟ್ಟುಮಾಡುತ್ತಿರುವನು, ಪ್ರೇರಿಸುತ್ತಿರುವನು?

ಗುರುವಿನ ಉತ್ತರ

(ಭಾಷ್ಯ)

೧೫. ಏವಂ ಪೃಷ್ಟವತೇ ಯೋಗ್ಯಾಯ ಆಹ ಗುರುಃ ಶೃಣು ಯತ್ ತ್ವಂ ಪೃಚ್ಛಸಿ, ಮನಆದಿಕರಣಜಾತಸ್ಯ ಕೋ ದೇವ· ಸ್ವವಿಷಯಂ ಪ್ರತಿ ಪ್ರೇರಯಿತಾ ಕಥಂ ವಾ ಪ್ರೇರಯಿತೀತಿ ॥

(ಭಾಷ್ಯಾರ್ಥ)

ಹೀಗೆಂದು ಕೇಳಿದ ಯೋಗ್ಯನಾದ (ಶಿಷ್ಯನಿಗೆ) ಗುರು ಹೇಳುತ್ತಾನೆ. "ಮನಸ್ಸು ಮುಂತಾದ ಕರಣಸಮೂಹವನ್ನು ಯಾವ ದೇವನು ತನ್ನ ವಿಷಯದ ಕಡೆಗೆ ಪ್ರೇರಿಸಿ (ಕಳುಹಿಸುತ್ತಾನೆ?) ಮತ್ತು ಹೇಗೆ ಪ್ರೇರೇಪಿಸುತ್ತಾನೆ ಎಂದು ನೀನು ಕೇಳಿದೆಯಷ್ಟೆ. (ಅದನ್ನು ಹೇಳುವೆನು) ಕೇಳು.

ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯದ್
ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಃ।
ಚಕ್ಷುಷಶ್ಚಕ್ಷುರತಿಮುಚ್ಯ ಧೀರಾಃ
ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವನ್ತಿ ॥ ೨ ॥

೨. (ಅದು) ಶ್ರೋತ್ರಕ್ಕೆ ಶ್ರೋತ್ರವು, ಮನಸ್ಸಿಗೆ ಮನಸ್ಸು, ವಾಕ್ಕಿಗೆ ವಾಕ್ಕು ಮತ್ತು ಅದೇ ಪ್ರಾಣಕ್ಕೆ ಪ್ರಾಣವು, ಚಕ್ಷುವಿಗೆ ಚಕ್ಷುವು. ಹೀಗಿರುವದರಿಂದ ಧೀರರು (ತಪ್ಪು ತಿಳಿವಳಿಕೆಯನ್ನು) ಬಿಟ್ಟು ಈ ಲೋಕದಿಂದ ಹೊರಟು ಹೋಗಿ ಅಮೃತರಾಗುವರು.

ಆತ್ಮನು ಶ್ರೋತ್ರವೇ ಮುಂತಾದವುಗಳನ್ನೂ ಅರಿಯುವ ಚೈತನ್ಯವು

(ಭಾಷ್ಯ)

೧೬. ಶ್ರೋತ್ರಸ್ಯ ಶ್ರೋತ್ರಮ್। ಶೃಣೋತ್ಯನೇನೇತಿ ಶ್ರೋತ್ರಮ್। ಶಬ್ದಸ್ಯ

---

1. ಇಲ್ಲಿ ವದನ್ತಿ-ಮಾತಾಡುತ್ತಿರುವರು-ಎಂಬ ಕ್ರಿಯಾಪದಕ್ಕೆ ಅನುಗುಣವಾಗಿ ವ್ಯಕ್ತವಾಗಿರುವ ಶಬ್ದರೂಪವನ್ನೇ ಗ್ರಹಿಸಬೇಕು. ಕರಣಗಳ ವ್ಯಾಪಾರವು ಯಾರಿಂದ ನಡೆಯುವದು? ಎಂಬುದೇ ಪ್ರಶ್ನೆಯ ತಿರಳಾಗಿರುವದರಿಂದ ವಾಗಿಂದ್ರಿಯದ ವ್ಯಾಪಾರವಾದ **ಮಾತಾಡುವಿಕೆ** ಎಂಬುದು ಯಾರ ಇಚ್ಛೆಯಂತೆ ನಡೆಯುತ್ತಿರುವದು?—ಎಂದೇ ವಾಕ್ಯಾರ್ಥ.

ಶ್ರವಣಂ ಪ್ರತಿ ಕರಣಂ ಶಬ್ದಾಬಿವ್ಯಞ್ಜಕಂ ಶ್ರೋತ್ರಮಿನ್ದ್ರಿಯಮ್। ತಸ್ಯ ಶ್ರೋತ್ರಂ ತ ಯಸ್ತ್ವಯಾ ಪೃಷ್ಟಃ “ ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ” (೧) ಇತಿ। ಅಸೌ ಏವಂವಿಶಿಷ್ಟಃ ಶ್ರೋತ್ರಾದೀನಿ ನಿಯುಙ್ಕ್ತೇ—ಇತಿ ವಕ್ತವ್ಯೇ ನನ್ವೇತದನನುರೂಪಂ ಪ್ರತಿವಚನಂ ‘ ಶ್ರೋತ್ರಸ್ಯ ಶ್ರೋತ್ರಮ್ ’ ಇತಿ। ನೈಷ ದೋಷಃ। ತಸ್ಯ ಅನ್ಯಥಾ ವಿಶೇಷಾನವಗಮಾತ್। ಯದಿ ಹಿ ಶ್ರೋತ್ರಾದಿವ್ಯಾಪಾರವ್ಯತಿರಿಕ್ತೇನ ಸ್ವವ್ಯಾಪಾರೇಣ ವಿಶಿಷ್ಟಃ ಶ್ರೋತ್ರಾದಿನಿಯೋಕ್ತಾ ಅವಗಮ್ಯೇತ ದಾತ್ರಾದಿಪ್ರಯೋಕ್ತೃವತ್ ತದಾ ಇದಮ್ ಅನನುರೂಪಂ ಪ್ರತಿವಚನಂ ಸ್ಯಾತ್। ನ ತ್ವಿಹ ಶ್ರೋತ್ರಾದೀನಾಂ ಪ್ರಯೋಕ್ತಾ ಸ್ವವ್ಯಾಪಾರವಿಶಿಷ್ಟೋ ಲವಿತ್ರಾದಿವದ್ ಅಧಿಗಮ್ಯತೇ। ಶ್ರೋತ್ರಾದೀನಾಮೇವ ತು ಸಂಹತಾನಾಂ ವ್ಯಾಪಾರೇಣ ಆಲೋಚನಸಙ್ಕಲ್ಪಾದ್ಯವಸಾಯಲಕ್ಷಣೇನ ಫಲಾವಸಾನಲಿಙ್ಗೇನ ಅವಗಮ್ಯತೇ—ಅಸ್ತಿ ಹಿ ಶ್ರೋತ್ರಾದಿನಿರಸಂಹತೋ ಯತ್ಪ್ರಯೋಜನಪ್ರಯುಕ್ತಃ ಶ್ರೋತ್ರಾದಿಕಲಾಪಃ। ಗೃಹಾದಿವದಿತಿ ಸಂಹತಾನಾಂ ಪರಾರ್ಥತ್ವಾದವಗಮ್ಯತೇ ಶ್ರೋತ್ರಾದೀನಾಂ ಪ್ರಯೋಕ್ತಾ। ತಸ್ಮಾತ್ ಅನುರೂಪಮೇವೇದಂ ಪ್ರತಿವಚನಂ “ ಶ್ರೋತ್ರಸ್ಯ ಶ್ರೋತ್ರಮ್ ” ಇತ್ಯಾದಿ ॥

(ಭಾಷ್ಯಾರ್ಥ)

“ ಶ್ರೋತ್ರಕ್ಕೆ ಶ್ರೋತ್ರವು.” ಯಾವದರಿಂದ ಕೇಳುತ್ತಾರೋ ಅದು ಶ್ರೋತ್ರವು. ಶಬ್ದವನ್ನು ಕೇಳುವದಕ್ಕೆ ಕಾರಣವಾಗಿ ಶಬ್ದವನ್ನು ತೋರಿಸಿಕೊಡುವ ಇಂದ್ರಿಯವು ಶ್ರೋತ್ರವು. “ ಚಕ್ಷುವನ್ನೂ ಶ್ರೋತ್ರವನ್ನೂ ಯಾವ ದೇವನು ಕಟ್ಟುಮಾಡುತ್ತಿರುವನು ? ” (೧) ಎಂದು ನೀನು ಕೇಳಿದೆಯಷ್ಟೆ, ಆತನು ಅದಕ್ಕೆ ಶ್ರೋತ್ರವು.

(ಆಕ್ಷೇಪ) —“ ಇಂಥ ಗುಣಗಳಿಂದ ಕೂಡಿದ ಇಂಥವನು ಶ್ರೋತ್ರಾದಿಗಳನ್ನು ಕಟ್ಟುಮಾಡುತ್ತಿರುವನು ” ಎಂದು ಹೇಳುವದನ್ನು ಬಿಟ್ಟು “ ಶ್ರೋತ್ರಕ್ಕೂ ಶ್ರೋತ್ರವು ”ಎಂದು (ಹೇಳಿದ) ಈ (ಉತ್ತರವು) ಅನುಗುಣವಾಗಲಿಲ್ಲವೆನ್ನಬೇಕಲ್ಲವೆ ?

(ಪರಿಹಾರ) :—ಇದು ತಪ್ಪಲ್ಲ. ಏಕೆಂದರೆ ಆತನಿಗೆ ಬೇರೆ ರೀತಿಯಾದ (ಯಾವದೊಂದು) ವಿಶೇಷರೂಪವೂ ತಿಳಿಯಬರುವಂತಿಲ್ಲ. ಶ್ರೋತ್ರೇಂದ್ರಿಯವೇ ಮುಂತಾದವುಗಳ ವ್ಯಾಪಾರವಲ್ಲದೆ ತನ್ನ ಒಂದು ವ್ಯಾಪಾರದಿಂದೊಡಗೂಡಿದ ಶ್ರೋತ್ರಾದಿಗಳನ್ನು ಕಟ್ಟುಮಾಡುವಾತನು ಕುಡುಗೋಲು ಮುಂತಾದವುಗಳನ್ನು ಪ್ರಯೋಗಿಸುವವನಂತೆ[1] (ಬೇರೆಯಾಗಿ) ತಿಳಿಯಬರುವಹಾಗಿದ್ದಿದ್ದರೆ ಆಗ ಈ ಉತ್ತ

---

1. ಕುಡುಗೋಲಿನಿಂದ ಪೈರನ್ನು ಕೊಯ್ಯುತ್ತಿರುವವನೇ ರಾಮನು ಎಂಬಲ್ಲಿ ಕುಡುಗೋಲನ್ನುಪಯೋಗಿಸುವ ವ್ಯಾಪಾರವಿಶೇಷವು ರಾಮನಲ್ಲಿರುವದು ಕಂಡುಬರುತ್ತದೆ; ಆದರೆ ಶ್ರೋತ್ರಾದಿಗಳನ್ನು ಪ್ರೇರಿಸುವವನು ‘ ಆತ್ಮನು ’ ಎಂಬಲ್ಲಿ ಹಾಗಿಲ್ಲ, ಏಕೆಂದರೆ ಆತ್ಮನಲ್ಲಿ ಸ್ವತಃ ಯಾವ ವ್ಯಾಪಾರವೂ ಇರುವದಿಲ್ಲ. ಸೂ. ಭಾ. ೨-೩-೪೦.

ವು ಅನುಗುಣವಾಗಿಲ್ಲವೆಂದಾಗುತ್ತಿತ್ತು. ಆದರೆ ಶ್ರೋತ್ರಾದಿಗಳನ್ನು ಪ್ರೇರಿಸುವ (ಆತ್ಮನು) ಪೈರುಕೊಯ್ಯುವವನೇ ಮುಂತಾದವರಂತೆ ತನ್ನ ವ್ಯಾಪಾರದಿಂದೊಡ ಗೂಡಿದವನಾಗಿ (ಬೇರೆಯಾಗಿ) ಕಂಡುಬರುತ್ತಿರಲಿಲ್ಲ. ಮತ್ತೇನೆಂದರೆ ಶ್ರೋತ್ರಾದಿ ಗಳೇ ಒಟ್ಟು ಸೇರಿಕೊಂಡು (ತೋರಿಸುತ್ತಿರುವ) ಆಲೋಚನೆ, ಸಂಕಲ್ಪ, ಅಧ್ಯವ ಸಾಯ[1] ಎಂಬ ವ್ಯಾಪಾರಗಳು ಫಲದಲ್ಲಿ ಕೊನೆಗಾಣುವವೆಂಬ ಲಿಂಗದಿಂದ[2] (ಈ) ಶ್ರೋತ್ರಾದಿಗಳೊಡನೆ ಸೇರಿಕೊಳ್ಳದೆ ಇರುವವನೊಬ್ಬಾತನು ಇರುತ್ತಾನೆ; ಆತನ ಪ್ರಯೋಜನಕ್ಕಾಗಿಯೇ ಶ್ರೋತ್ರಾದಿಗಳ ಗುಂಪು ಮನೆಯೇ ಮುಂತಾದವು ಗಳಂತೆ ವ್ಯಾಪಾರಮಾಡುತ್ತಿದೆ'' ಎಂದು, ಒಟ್ಟುಗೂಡಿರುವ ವಸ್ತುಗಳು ಮತ್ತೊಂದ ಕ್ಕಾಗಿರುವದರಿಂದ,[3] ಶ್ರೋತ್ರಾದಿಗಳನ್ನು ಪ್ರೇರಿಸುವಾತನು ತಿಳಿದುಬರುತ್ತಿದಾನೆ. ಆದ್ದರಿಂದ " ಶ್ರೋತ್ರಕ್ಕೆ ಶ್ರೋತ್ರವು " ಎಂದು ಮುಂತಾಗಿ (ಕೊಟ್ಟಿರುವ) ಉತ್ತರವು ಅನುಗುಣವಾಗಿಯೇ ಇರುತ್ತದೆ.

(ಭಾಷ್ಯ)

೧೭. ಕಃ ಪುನರತ್ರ ಪದಾರ್ಥಃ ಶ್ರೋತ್ರಸ್ಯ ಶ್ರೋತ್ರಮಿತ್ಯಾದೇಃ ? ನ ಹ್ಯತ್ರ ಶ್ರೋತ್ರಸ್ಯ ಶ್ರೋತ್ರಾನ್ತರೇಣಾರ್ಥಃ, ಯಥಾ ಪ್ರಕಾಶಸ್ಯ ಪ್ರಕಾಶಾನ್ತರೇಣ । ನೈಷ ದೋಷಃ । ಅಯಮತ್ರ ಪದಾರ್ಥಃ—ಶ್ರೋತ್ರಂ ತಾವತ್ ಸ್ವವಿಷಯವ್ಯಞ್ಜನ ಸಮರ್ಥಂ ದೃಷ್ಟಮ್ । ತತ್ತು[4] ಸ್ವವಿಷಯವ್ಯಞ್ಜನಸಾಮರ್ಥ್ಯಂ ಶ್ರೋತ್ರಸ್ಯ ಚೈತನ್ಯೇ ಹ್ಯಾತ್ಮಜ್ಯೋತಿಷಿ ನಿತ್ಯೇಽಸಂಹತೇ ಸರ್ವಾನ್ತರೇ ಸತಿ ಭವತಿ, ನಾಸತಿ

---

1. ಇಂದ್ರಿಯಗಳಿಗೂ ವಿಷಯಕ್ಕೂ ಸಂಬಂಧವಾಗಲು ಕೂಡಲೆ ಆಗುವ ಅರಿವು ಆಲೋಚನವು (sensation); ಹೀಗೆ ಮಾಡತಕ್ಕದ್ದು, ಹಿಂದೆ ಮಾಡತಕ್ಕದ್ದಲ್ಲ ಎಂದು ನಿಂಗಡಿಸುವದು ಸಂಕಲ್ಪವು; ಇದು ಇಂಥದ್ದು, ಹೀಗೆ ಮಾಡಬೇಕು-ಎಂದು ನಿಶ್ಚಯಿಸುವದು ಅಧ್ಯವಸಾಯವು

2. ಆಲೋಚನೆ, ಸಂಕಲ್ಪ, ನಿಶ್ಚಯ-ಇವುಗಳು ಯಾವ ಅರಿವಿನಲ್ಲಿ ಕೊನೆಗಾಣುವೋ ಅದೇ ಫಲವು, ಆ ಫಲಚೈತನ್ಯವೇ ಆತ್ಮನು. ಆಲೋಚನವೇ ಮುಂತಾದ ವ್ಯಾಪಾರಗಳಿಂದಾಗುವ ಫಲವು ಯಾರಿಗೋಸ್ಕರವೋ ಅವನು ಆತ್ಮನು ಎಂದು ಸಾಮಾನ್ಯರು ಫಲರೂಪವಾದ ಲಿಂಗದಿಂದ ಆತ್ಮನನ್ನು ಊಹಿಸಿಕೊಳ್ಳಬೇಕಾಗಿದೆಯೇ ಹೊರತು ಆತ್ಮನ ವ್ಯಾಪಾರದಿಂದ ಇಂಥವನು ಆತ್ಮನೆಂದು ನಿಶ್ಚಯಿಸುವದಕ್ಕೆ ಬರುವದಿಲ್ಲ ಎಂದು ಭಾವ.

3. ಸಂಘಾತವು ಪರಾರ್ಥವಾಗಿರುತ್ತದೆ ಎಂಬ ಸಾಂಖ್ಯರ ಯುಕ್ತಿಯನ್ನು ವೇದಾಂತಿಗಳೂ ವ್ಯವಹಾರದಲ್ಲಿ ಉಪಯೋಗಿಸುವರು. ಕ. ಭಾ. ೨-೨-೧, ಪ್ರ. ಭಾ. ೪-೧, ತೈ ಭಾ ೨-೭, ಐ. ಭಾ. ೧-೩.

4. (ವಾ॥) ಪಾಠ.

ಇತ್ಯತಃ "ಶ್ರೋತ್ರಸ್ಯ ಶ್ರೋತ್ರಮ್" ಇತ್ಯಾದ್ಯುಪಪದ್ಯತೇ | ತಥಾ ಚ ಶ್ರುತ್ಯನ್ತರಾಣಿ "ಆತ್ಮನ್ಯೇವಾಯಂ ಜ್ಯೋತಿಷಾಽಽಸ್ತೇ" (ಬೃ. ೪-೩-೬) "ತಸ್ಯ ಭಾಸಾ ಸರ್ವಮಿದಂ ವಿಭಾತಿ" (ಮುಂ. ೨-೨-೧೦), "ಯೇನ ಸೂರ್ಯಸ್ತಪತಿ ತೇಜಸೇದ್ಧಃ" (ತೈ. ಬ್ರಾ ೩-೧೨-೯-೭) ಇತ್ಯಾದೀನಿ | "ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಮ್ ||" (ಗೀ. ೧೫-೧೨) "ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ ||" (ಗೀ. ೧೩-೩೩) ಇತಿ ಚ [1] ಗೀತಾಸು । ಕಾತಕೇ ಚ ನಿತ್ಯೋಽನಿತ್ಯಾನಾಂ ಚೇತನಶ್ಚೇತನಾನಾಮ್" (ಕ. ೨-೨-೧೩) | ಶ್ರೋತ್ರಾದ್ಯೇವ ಸರ್ವಸ್ಯಾತ್ಮಭೂತಂ ಚೇತನಮ್ ಇತಿ ಪ್ರಸಿದ್ಧಮ್ । ತದಿಹ ನಿವರ್ತ್ಯತೇ | ಅಸ್ತಿ ಕೆಮಪಿ ವಿದ್ವದ್ಬುದ್ಧಿಗಮ್ಯಂ ಸರ್ವಾನ್ತರತಮಂ ಕೂಟಸ್ಥಮಜಮಜರಮಮೃತಮಭಯಮ್ ಶ್ರೋತ್ರಾದೇರಪಿ ಶ್ರೋತ್ರಾದಿ ತತ್ಸಾಮರ್ಥ್ಯನಿಮಿತ್ತಮ್ ಇತಿ ಪ್ರತಿವಚನಂ ಶಬ್ದಾರ್ಥಶ್ಚೋಪಪದ್ಯತ ಏವ ||

(ಭಾಷ್ಯಾರ್ಥ)

(ಆಕ್ಷೇಪ) :—ಹಾಗಾದರೆ ಇಲ್ಲಿ "ಶ್ರೋತ್ರಕ್ಕೂ ಶ್ರೋತ್ರವು' ಎಂಬ ಮಾತಿನ ಅರ್ಥವೇನು? ಬೆಳಕಿಗೆ ಮತ್ತೊಂದು ಬೆಳಕಿನಿಂದ ಆಗಬೇಕಾದದ್ದೇನೂ ಹೇಗೆ ಇರುವದಿಲ್ಲವೋ, ಹಾಗೆಯೇ ಶ್ರೋತ್ರೇಂದ್ರಿಯಕ್ಕೆ ಮತ್ತೊಂದು ಶ್ರೋತ್ರದಿಂದ ಆಗಬೇಕಾದದ್ದೇನೂ ಇರುವದಿಲ್ಲವಲ್ಲ!

(ಪರಿಹಾರ) :—ಇದೇನೂ ತಪ್ಪಲ್ಲ. ಇಲ್ಲಿ ಈ ಮಾತಿಗೆ ಈ ಅರ್ಥವಿದೆ. ಶ್ರೋತ್ರವಂತೂ ತನ್ನ ವಿಷಯವನ್ನು ತಿಳಿಸಿಕೊಡುವದಕ್ಕೆ ಸಮರ್ಥವಾಗಿದೆ ಎಂಬುದು ಕಂಡೇ ಇದೆ. ಆದರೆ ಶ್ರೋತ್ರಕ್ಕೆ ತನ್ನ ವಿಷಯವನ್ನು ತಿಳಿಸುವ ಈ ಸಾಮರ್ಥ್ಯವು ಚೈತನ್ಯರೂಪವೂ ನಿತ್ಯವೂ ಮತ್ತೊಂದರೊಂದಿಗೆ ಸೇರಿಕೊಳ್ಳದೆ ಇರುವದೂ ಎಲ್ಲಕ್ಕೂ ಒಳಗಿರುವದೂ ಆದ ಆತ್ಮಜ್ಯೋತಿಯಿದ್ದರೆ ಉಂಟಾದೀತೇ ಹೊರತು ಇಲ್ಲದಿದ್ದರೆ (ಉಂಟಾಗಲಾರ)ದಾದ್ದರಿಂದ [2] "ಶ್ರೋತ್ರಕ್ಕೆ ಶ್ರೋತ್ರವು" ಎಂದು ಮುಂತಾಗಿ [3] (ಅದನ್ನು ಕರೆದಿರುವದು) ಯುಕ್ತವಾಗಿರುತ್ತದೆ. "ಈತನು ಆತ್ಮನ ಬೆಳಕಿನಿಂದಲೇ ಕುಳಿತಿರುವನು" (ಬೃ. ೪-೩-೬), "ಅತನ ಬೆಳಕಿನಿಂದ ಇದೆಲ್ಲವೂ ಬೆಳಗುತ್ತಿರುವದು" (ಮು. ೨-೨-೧೦), "ಯಾವ ತೇಜಸ್ಸಿನಿಂದ ಹೊತ್ತಿಕೊಂಡು

---

1. (ವಾ॥) ಪಾರ,

2. ಕವಿಯಿಂದ ಕೇಳುತ್ತಾನೆ ಎಂಬ ವ್ಯವಹಾರವು ಲೋಕದಲ್ಲಿದ್ದರೂ ನಿಜವಾಗಿ ಕೇಳುವಿಕೆ ಮುಂತಾದ ಅರಿವು ಆತ್ಮಚೈತನ್ಯದಿಂದಲೇ ಆಗುವದು. ಶ್ರೋತ್ರಾದಿಗಳು ಬರಿಯ ಕರಣಗಳು. ಬೃ. ಭಾ ೧-೪-೧೦, ೩-೪-೨; ಕ. ಭಾ. ೨-೧-೩; ಐ. ಭಾ ೩-೧.

4 ಬೃ. ಭಾ. ೩-೪-೨, ೪-೩-೩೦; ಐ. ೧ ಉಪಸಂಹಾರ ಭಾಷ್ಯ.

ಸೂರ್ಯನು ತಪಿಸುತ್ತಿರುವನೋ" (ತೈ. ಬ್ರಾ. ೩-೧೨-೯-೭) ಮುಂತಾದ ಬೇರೆಯ **ಶ್ರುತಿಗಳೂ** ಹಾಗೆಂದೇ (ಹೇಳುತ್ತವೆ). "ಆದಿತ್ಯನಲ್ಲಿರುವ ಯಾವ ಬೆಳಕು ಜಗತ್ತೆಲ್ಲವನ್ನೂ ಬೆಳಗುತ್ತಿರುವದೋ (ಅದು ನನ್ನದೇ)" (ಗೀ. ೧೫-೧೨), "ಎಲೈ ಭರತವಂಶೋತ್ಪನ್ನನೆ, (ಸೂರ್ಯನು ಲೋಕವೆಲ್ಲವನ್ನೂ ಹೇಗೆ ಬೆಳಗುತ್ತಿರುವನೋ ಹಾಗೆಯೇ) ಕ್ಷೇತ್ರಿ(ಯಾದ ಆತ್ಮನು) ಕ್ಷೇತ್ರವೆಲ್ಲವನ್ನೂ [1] ಬೆಳಗುತ್ತಿರುವನು" (ಗೀ. ೧೩-೩೩) ಎಂದು **ಭಗವದ್ಗೀತೆ**ಯಲ್ಲಿರುತ್ತದೆ. **ಕಠೋಪನಿಷತ್ತಿ**ನಲ್ಲಿಯೂ "ಅನಿತ್ಯರುಗಳಲ್ಲಿ ನಿತ್ಯನಾಗಿ ಚೇತನರಲ್ಲಿ ಚೇತನನಾಗಿ" (ಕ. ೨-೨-೧೩) ಎಂದಿದೆ. ಶ್ರೋತ್ರವೇ ಮುಂತಾದದ್ದು ಎಲ್ಲರಿಗೂ ಆತ್ಮನಾಗಿರುವ ಚೇತನವೆಂದು (ಲೋಕದಲ್ಲಿ) ಪ್ರಸಿದ್ಧವಾಗಿರುತ್ತದೆಯಷ್ಟೆ. ಆ(ತಪ್ಪು ತಿಳಿವಳಿಕೆಯನ್ನು)"ಜ್ಞಾನಿಗಳ ಬುದ್ಧಿಗೆ(ಮಾತ್ರ) ಗೋಚರವಾಗಿರುವದಾಗಿಯೂ [2] ಎಲ್ಲಕ್ಕಿಂತಲೂ ಒಳಗಿರುವ (ಆತ್ಮನಾಗಿಯೂ) [3] **ಕೂಟಸ್ಥ**ವಾಗಿಯೂ [4] ಜನ್ಮರಹಿತವಾಗಿಯೂ ಮುಪ್ಪಿಲ್ಲದ್ದಾಗಿಯೂ ಮರಣವಿಲ್ಲದ್ದಾಗಿಯೂ ಭಯರಹಿತವಾಗಿಯೂ [5] ಶ್ರೋತ್ರಾದಿಗಳಿಗೂ ಶ್ರೋತ್ರಾದಿಯಾಗಿದ್ದುಕೊಂಡು [6] ಅವುಗಳಲ್ಲಿರುವ ಸಾಮರ್ಥ್ಯಕ್ಕೂ ನಿಮಿತ್ತವಾಗಿಯೂ ಇರುವ ಯಾವದೋ ಒಂದು (ತತ್ತ್ವ)ವಿರುವದು" ಎಂದು ಹೇಳಿ ನಿವಾರಿಸಿರುತ್ತದೆ. ಆದ್ದರಿಂದ [7] ಇಲ್ಲಿ ಉತ್ತರವೂ ಶಬ್ದಾರ್ಥವೂ ಹೊಂದುಗೆಯಾಗಿಯೇ ಇರುತ್ತದೆ.

(ಭಾಷ್ಯ)

೧೮. ತಥಾ ಮನಸಃ ಅನ್ತಃಕರಣಸ್ಯ ಮನಃ । ನ ಹ್ಯನ್ತಃಕರಣಮ್ ಅನ್ತರೇಣ

---

1 ಸ್ಥೂಲಸೂಕ್ಷ್ಮದೇಹಗಳೆರಡನ್ನೂ. ಕ್ಷೇತ್ರಶಬ್ದದ ವಿವರಣೆಯನ್ನು ನೋಡಿದರೆ ಗೀತೆಯಲ್ಲಿ ಇಚ್ಛಾಜ್ಞಾನಾದಿಮನಶ್ಶಕ್ತಿಗಳೆಲ್ಲವೂ ಕ್ಷೇತ್ರವೇ ಎಂದು ಸ್ಪಷ್ಟವಾಗುತ್ತದೆ.

2 ತೋರತಕ್ಕದ್ದಾಗಿಯೂ ಎಂದರ್ಥ, ಅವರ ಜ್ಞಾನಕ್ಕೆ ವಿಷಯವೆಂದೇನೂ ಅರ್ಥವಲ್ಲ. ಬೃ ಭಾ ೧-೪-೧೦ ಈಗ ನಮಗೆ ಅಜ್ಞಾನದಿಂದಲೇ ಆತ್ಮಚೈತನ್ಯವಿಲ್ಲವೆಂಬ ಭ್ರಾಂತಿಯಾಗಿರುತ್ತದೆ ಎಂದು ಭಾವ. ಕ ಭಾ. ೨-೧-೧೧, ಗೀ. ಭಾ ೨-೨೧

3. ಬೃ. ೩-೪, ೩-೫.

4 ಯಾವ ಮಾರ್ಪಾಡೂ ಇಲ್ಲದೆ, ಇದ್ದಂತೆ ಇರುವದಾಗಿಯೂ.

5 ಬೃ. ೪-೪-೨೫ನ್ನು ಸೂಚಿಸುವ ವಿಶೇಷಣಗಳಿವು.

6. "ಶ್ರೋತ್ರಾದಿಸಾಮರ್ಥ್ಯನಿಮಿತ್ತಮ್" ಎಂದಿಷ್ಟೇ ಇರುವ (Hin) ಪಾಠದಲ್ಲಿ 'ಶ್ರೋತ್ರಾದಿಗಳಲ್ಲಿರುವ ಸಾಮರ್ಥ್ಯಕ್ಕೂ ನಿಮಿತ್ತವಾಗಿಯೂ' ಎಂದು ಕನ್ನಡಿಸಿದರೆ ಸಾಕಾಗುವದು.

7. 'ನಿಮಿತ್ತಮ್ ಇತಿ' ಎಂಬುದು 'ನಿಮಿತ್ತಮ್ ಇತೀತಿ' ಎಂದಿರಬೇಕೆಂದು ತೋರುತ್ತದೆ.

ಜ್ಯೈತನ್ಯಜ್ಯೋತಿಷೋ ದೀಧಿತಿಂ ಸ್ವವಿಷಯಸಙ್ಕಲ್ಪಾಧ್ಯವಸಾಯಾದಿಸಮರ್ಥಂ ಸ್ಯಾತ್। ತಸ್ಮಾನ್ಮನಸೋಽಪಿ ಮನ ಇತಿ । ಇಹ ಬುದ್ಧಿಮನಸೀ ಏಕೀಕೃತ್ಯ ನಿರ್ದೇಶೋ 'ಮನಸಃ' ಇತಿ ॥

(ಭಾಷ್ಯಾರ್ಥ)

ಇದರಂತೆ ಮನಸ್ಸಿಗೆ ಎಂದರೆ ಅಂತಃಕರಣಕ್ಕೂ (ಅದು) ಮನಸ್ಸು ಏಕೆಂದರೆ ಜ್ಯೈತನ್ಯಜ್ಯೋತಿಯ ಬೆಳಕಿದ್ದ ಹೊರತು[1] ಅಂತಃಕರಣವು ತನ್ನ ವಿಷಯವನ್ನು ಸಂಕಲ್ಪಿಸುವದು, ನಿಶ್ಚಯಿಸುವದು ಮುಂತಾದವುಗಳನ್ನು[2] (ನೆರವೇರಿಸಲು) ಸಮರ್ಥವಾಗಲಾರದು. ಆದ್ದರಿಂದ (ಅದು) ಮನಸ್ಸಿಗೂ ಮನಸ್ಸಾಗಿರುತ್ತದೆ. ಇಲ್ಲಿ ಬುದ್ಧಿಮನಸ್ಸುಗಳೆರಡನ್ನೂ[3] ಒಟ್ಟುಗೂಡಿಸಿ ಮನಸ್ಸೆಂದು ಕರೆದಿರುತ್ತದೆ.

(ಭಾಷ್ಯ)

೧೯. ಯದ್ವಾಚೋ ಹ ವಾಚಮ್ । ಯಚ್ಛಬ್ದೋ ಯಸ್ಮಾದರ್ಥೇ ಶ್ರೋತ್ರಾದಿಭಿಃ ಸರ್ವೈಃ ಸಮ್ಬಧ್ಯತೇ—"ಯಸ್ಮಾತ್ ಶ್ರೋತ್ರಸ್ಯ ಶ್ರೋತ್ರಮ್", "ಯಸ್ಮಾನ್ಮನಸೋ ಮನಃ" ಇತ್ಯೇವಮ್ । "ವಾಚೋ ಹ ವಾಚಮ್" ಇತಿ ದ್ವಿತೀಯಾ ಪ್ರಥಮಾತ್ವೇನ ವಿಪರಿಣಮ್ಯತೇ । "ಪ್ರಾಣಸ್ಯ ಪ್ರಾಣಃ" ಇತಿ ದರ್ಶನಾತ್ ।" "ವಾಚೋ ಹ ವಾಚಮ್" ಇತ್ಯೇತದನುರೋಧೇನ ಪ್ರಾಣಸ್ಯ ಪ್ರಾಣಮಿತಿ ಕಸ್ಮಾದ್ ದ್ವಿತೀಯೈವ ನ ಕ್ರಿಯತೇ? ನ । ಬಹೂನಾಮನುರೋಧಸ್ಯ ಯುಕ್ತತ್ವಾತ್ । 'ವಾಚಮ್' ಇತ್ಯಸ್ಯ 'ವಾಕ್' ಇತ್ಯೇತಾವದ್ವಕ್ತವ್ಯಮ್ "ಸ ಉ ಪ್ರಾಣಸ್ಯ ಪ್ರಾಣಃ" ಇತಿ ಶಬ್ದದ್ವಯಾನುರೋಧೇನ । ಏವಂ ಹಿ ಬಹೂನಾಮನುರೋಧೋ ಯುಕ್ತಃ ಕೃತಃ ಸ್ಯಾತ್। ಪೃಷ್ಟಂ ಚ ವಸ್ತು ಪ್ರಥಮಯೈವ ನಿರ್ದೇಷ್ಟುಂ ಯುಕ್ತಮ್॥

(ಭಾಷ್ಯಾರ್ಥ)

"ಯದ್ವಾಚೋ ಹ ವಾಚಮ್" ಎಂಬಲ್ಲಿ 'ಯತ್' ಎಂಬ ಮಾತಿಗೆ

---

1 'ಅನ್ತರೇಣ ಜ್ಯೈತನ್ಯಜ್ಯೋತಿಷಾ ದೀಪಿತಮ್" ಎಂಬ (ಆ॥) ಪಾಠದಲ್ಲಿ ದೀಪಿತಮ್ ಎಂಬುದು ದೀಪ್ತಿಮ್ ಎಂದಾದರೂ ಇರಬೇಕು, ದೀಪಿತಮ್ ಎಂಬುದನ್ನು ಭಾವಾರ್ಥದಲ್ಲಿಯಾದರೂ ತೆಗೆದುಕೊಂಡು ಅರ್ಥಮಾಡಿಕೊಳ್ಳಬೇಕು ಈಗ ನಾವು ಅಂಗೀಕರಿಸಿರುವ (ವಾ॥ ಗಿ॥) ಪಾಠದಲ್ಲಿ ಕ್ಲೇಶವಿಲ್ಲ

2 ಅಂತಃಕರಣಕ್ಕೆ ಸಂಕಲ್ಪಿಸುವದು, ನಿಶ್ಚಯಿಸುವದು, ಸ್ಮರಿಸುವದು ಮುಂತಾದ ಅನೇಕ ಕೆಲಸಗಳಿವೆ.

3 ಅಂತಃಕರಣವನ್ನು ಮನಸ್ಸು, ಬುದ್ಧಿ–ಎಂದು ಎರಡು ವಿಭಾಗವಾಗಿ ವಿಂಗಡಿಸುವದು ರೂಢಿ; ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ–ಎಂದೂ ವಿಂಗಡಿಸುವದುಂಟು ಗೀ ಭಾ ೧೨–೪, ಸೂ ಭಾ. ೨–೩–೩೨ ಆದರೆ ಇಲ್ಲಿ ಮನಸ್ಸೆಂಬ ಮಾತನ್ನು ಅಂತಃಕರಣವೆಂಬರ್ಥದಲ್ಲಿಯೇ ಉಪಯೋಗಿಸಿರುತ್ತದೆ.

'ಹೀಗಿರುವದರಿಂದ' ಎಂದರ್ಥ. ಇದನ್ನು ಶ್ರೋತ್ರವೇ ಮುಂತಾದವುಗಳಿಗೆಲ್ಲ ಸೇರಿಸಿಕೊಂಡು 'ಶ್ರೋತ್ರಕ್ಕೆ ಶ್ರೋತ್ರವಾಗಿರುವದರಿಂದ', 'ಮನಸ್ಸಿಗೆ ಮನಸ್ಸಾಗಿರುವದರಿಂದ' ಎಂದೀ ಪರಿಯಲ್ಲಿ ಅರ್ಥವನ್ನು ಮಾಡಿಕೊಳ್ಳಬೇಕು. (ಇಲ್ಲಿ) 'ವಾಚೋ ಹ ವಾಚಮ್' ಎಂದಿದೆಯಷ್ಟೆ. (ಇಲ್ಲಿರುವ 'ವಾಚಮ್' ಎಂಬ) ದ್ವಿತೀಯಾವಿಭಕ್ತಿಯನ್ನು ('ವಾಕ್' ಎಂದು) ಪ್ರಥಮಾವಿಭಕ್ತಿಯಾಗಿ ತಿರುಗಿಸಿಕೊಳ್ಳಬೇಕು, ಏಕೆಂದರೆ ಮುಂದೆ 'ಪ್ರಾಣಸ್ಯ ಪ್ರಾಣಃ' (ಎಂದು ಪ್ರಥಮಾವಿಭಕ್ತಿಯೇ) ಕಂಡುಬರುತ್ತದೆ.

(ಆಕ್ಷೇಪ):—'ವಾಚೋ ಹ ವಾಚಮ್' (ಎಂದಿರುವ) ಇದಕ್ಕೇ ಅನುಗುಣವಾಗಿ 'ಪ್ರಾಣಸ್ಯ ಪ್ರಾಣಮ್' ಎಂದು ದ್ವಿತೀಯಾವಿಭಕ್ತಿಯನ್ನೇ ಏಕೆ ಮಾಡಿಕೊಳ್ಳಬಾರದು?

(ಪರಿಹಾರ).—ಹಾಗಲ್ಲ. ಏಕೆಂದರೆ ಬಹಳ ಪ್ರಯೋಗವು[1] ಹೇಗಿದೆಯೋ ಅದನ್ನು ಅನುಸರಿಸುವದೇ ಯುಕ್ತವಾಗಿರುತ್ತದೆ. 'ಸ ಉ ಪ್ರಾಣಸ್ಯ ಪ್ರಾಣಃ' ಎಂಬ ಎರಡು ಶಬ್ದಗಳಿಗನುಗುಣವಾಗಿ 'ವಾಚೋ ಹ ವಾಕ್' ಎಂದಿಷ್ಟೇ[2] ಹೇಳಬೇಕಾಗುತ್ತದೆ, ಹೀಗೆ (ಮಾಡಿದರೆ) ಬಹಳ ಪ್ರಯೋಗಗಳಿಗೆ ಅನುಸಾರವಾಗಿ (ಅನ್ವಯ)ಮಾಡಿದ್ದು ಯುಕ್ತವೂ ಆಗುತ್ತದೆ. ಇದೂ ಅಲ್ಲದೆ ಏತರ ವಿಷಯದಲ್ಲಿ ಪ್ರಶ್ನೆಯನ್ನು ಮಾಡಿದೆಯೋ[3] ಅದನ್ನು ಪ್ರಥಮಾವಿಭಕ್ತಿಯಿಂದ ಹೇಳುವದೇ ಯುಕ್ತ.

(ಭಾಷ್ಯ)

೨೦. ಸ ಯಸ್ತ್ವಯಾ ಪೃಷ್ಟಃ, ಪ್ರಾಣಸ್ಯ ಪ್ರಾಣಾಖ್ಯವೃತ್ತಿವಿಶೇಷಸ್ಯ ಪ್ರಾಣಃ। ತತ್ಕೃತಂ ಹಿ ಪ್ರಾಣಸ್ಯ ಪ್ರಾಣನಸಾಮರ್ಥ್ಯಮ್। ನ ಹ್ಯಾತ್ಮನಾ ಅನಧಿಷ್ಠಿತಸ್ಯ ಪ್ರಾಣನಮುಪಪದ್ಯತೇ। "ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್। ಯದೇಷ ಆಕಾಶ ಆನನ್ದೋ ನ ಸ್ಯಾತ್" (ತೈ. ೨-೭), "ಊರ್ಧ್ವಂ ಪ್ರಾಣಮುನ್ನಯತ್ಯ

---

1 'ವಾಚೋ ಹ ವಾಚಮ್' ಎಂಬಲ್ಲಿ ಮಟ್ಟಿಗೆ ದ್ವಿತೀಯೆ ಇದೆ, ಮಿಕ್ಕ ಪ್ರಯೋಗಗಳಲ್ಲೆಲ್ಲ ಪ್ರಥಮಾವಿಭಕ್ತಿಯೇ ಇದೆ.

2 ವಾಚಮ್ ಎಂಬ ಒಂದು ಮಾತನ್ನು ವಾಕ್ ಎಂದು ಪ್ರಥಮೆಗೆ ತಿರುಗಿಸುವದು ಹಗುರ, 'ಸ ಉ ಪ್ರಾಣಸ್ಯ ಪ್ರಾಣಃ' ಎಂಬುದನ್ನು ದ್ವಿತೀಯೆಗೆ ತಿರುಗಿಸಿದರೆ ತಮು ಪ್ರಾಣಸ್ಯ ಪ್ರಾಣಮ್' ಎಂದು ಎರಡು ಮಾತುಗಳನ್ನು ತಿರುಗಿಸುವದು ಹೆಚ್ಚು ಅಯಾಸ ಗೌರವದೋಷವನ್ನು ಬಿಟ್ಟು ಲಾಘವವನ್ನು ಅನುಸರಿಸುವದು ನ್ಯಾಯ

3 'ಅಂಥ ದೇವನು ಯಾವನು?" ಎಂಬ ಪ್ರಶ್ನೆಗೆ 'ಇವನು' ಎಂದು ಪ್ರಥಮೆಯಿಂದ ಉತ್ತರವು ಬರುವದೇ ಯುಕ್ತ.

ಪಾನಂ ಪ್ರತ್ಯಗಸ್ಯತಿ" (ಕ. ೨.೨-೩) ಇತ್ಯಾದಿಶ್ರುತಿಭ್ಯಃ। ಇಹಾಪಿ ಚ ವಕ್ಷ್ಯತೇ "ಯೇನ ಪ್ರಾಣಃ ಪ್ರಣೀಯತೇ। ತದೇವ ಬ್ರಹ್ಮ ತ್ವಂ ವಿದ್ಧಿ" (೧-೮) ಇತಿ ॥

(ಭಾಷ್ಯಾರ್ಥ)

ನೀನು ಕೇಳಿದೆಯಲ್ಲ, ಆ (ಆತ್ಮನು) ಪ್ರಾಣಕ್ಕೂ ಪ್ರಾಣನು, ಎಂದರೆ ಪ್ರಾಣವೆಂಬ ವೃತ್ತಿಗೂ (ಪ್ರಾಣನು). ಏಕೆಂದರೆ ಪ್ರಾಣಕ್ಕೆ ಇರುವ ಉಸಿರಾಡುವ ಶಕ್ತಿಯು ಆತನಿಂದಲೇ ಆಗಿರುತ್ತದೆ; ಆತ್ಮನ ಆಸರೆಯಿಲ್ಲದೆ (ಯಾರಿಗೂ) ಉಸಿರಾಡುವದು ಆಗಲಾರದು. "ಆಕಾಶದಲ್ಲಿ (ಬುದ್ಧಿಗುಹೆಯಲ್ಲಿ) ಈ ಆನಂದ(ರೂಪನಾದ ಆತ್ಮನು) ಇಲ್ಲದಿದ್ದರೆ[1] ಯಾವನುತಾನೆ ಉಸಿರು ತೆಗೆದುಕೊಂಡಾನು, ಯಾವನು ಉಸಿರು ಬಿಟ್ಟಾನು?" (ತೈ. ೨-೭), "ಪ್ರಾಣವನ್ನು ಮೇಲಕ್ಕೇರಿಸುವನು, ಅಪಾನವನ್ನು ಕೆಳಕ್ಕಿಳಿಸುವನು" (ಕ. ೨-೨-೩) ಎಂಬಿವೇ ಮುಂತಾದ ಶ್ರುತಿಗಳು (ಇದಕ್ಕೆ ಪ್ರಮಾಣವು). ಇಲ್ಲಿಯೂ "ಯಾವದರಿಂದ ಪ್ರಾಣವು ತನ್ನ ಪ್ರಾಣನಕಾರ್ಯವನ್ನು ಮಾಡುತ್ತಿರುವದೋ ಅದನ್ನೇ ಬ್ರಹ್ಮವೆಂದು ನೀನು ತಿಳಿ" (೧-೮) ಎಂದು ಮುಂದೆ ಹೇಳಿರುತ್ತದೆ.

(ಭಾಷ್ಯ)

೨೧ ಶ್ರೋತ್ರಾದೀನ್ದ್ರಿಯಪ್ರಸ್ತಾವೇ ಘ್ರಾಣಪ್ರಾಣಸ್ಯ ನನು ಯುಕ್ತಂ ಗ್ರಹಣಮ್? ಸತ್ಯಮೇವಮ್। ಪ್ರಾಣಗ್ರಹಣೇನೈವ ತು ಘ್ರಾಣಪ್ರಾಣಸ್ಯ ಗ್ರಹಣಂ ಕೃತಮೇವ ಮನ್ಯತೇ ಶ್ರುತಿಃ। ಸರ್ವಸ್ಯೈವ ಕರಣಕಲಾಪಸ್ತ ಯದರ್ಥಪ್ರಯುಕ್ತಾ ಪ್ರವೃತ್ತಿಃ, ತದ್ಬ್ರಹ್ಮೇತಿ ಪ್ರಕರಣಾರ್ಥೋ ವಿವಕ್ಷಿತಃ ॥

(ಭಾಷ್ಯಾರ್ಥ)

(ಆಕ್ಷೇಪ):—ಶ್ರೋತ್ರವೇ ಮುಂತಾದ ಇಂದ್ರಿಯಗಳನ್ನು (ವಿಚಾರಮಾಡುವ) ಸಂದರ್ಭದಲ್ಲಿ ಘ್ರಾಣರೂಪವಾದ ಪ್ರಾಣವನ್ನು[2] ತೆಗೆದುಕೊಳ್ಳವದು ಯುಕ್ತವಲ್ಲವೆ?

(ಪರಿಹಾರ).—ನಿಜ, ಹಾಗೆಯೇ ಸರಿ. ಆದರೆ ಪ್ರಾಣವನ್ನು ಹೇಳಿದ್ದರಿಂದಲೇ ಘ್ರಾಣರೂಪವಾದ ಪ್ರಾಣವನ್ನು[3] ತೆಗೆದುಕೊಂಡು (ಹೇಳಿದಂತೆ ಆಯಿತು)

---

1. ಈ ಶ್ರುತಿಗೆ ಸೂ. ಭಾ. (೧-೧-೨೨) ದಲ್ಲಿ ಈ ಆಕಾಶರೂಪನಾದ ಆತ್ಮನೆಂಬ ಆನಂದವು ಎಂದು ಅರ್ಥ ಬರುವಂತೆ ಉದಾಹರಿಸಿದೆ.

2. ಪ್ರಾಣ ಎಂಬ ಮಾತಿಗೆ ಪ್ರಾಣವಾಯು, ಘ್ರಾಣೇಂದ್ರಿಯ—ಎಂಬ ಎರಡರ್ಥಗಳು ವೇದದಲ್ಲಿ ಕಂಡುಬರುವವು. ಇಂದ್ರಿಯಗಳನ್ನು ಪ್ರಸ್ತಾಪಿಸಿರುವದರಿಂದ ಘ್ರಾಣೇಂದ್ರಿಯವನ್ನೇ ಏಕೆ ತೆಗೆದುಕೊಳ್ಳಬಾರದು?—ಎಂಬುದು ಆಕ್ಷೇಪಕನ ಭಾವ.

3. "ಘ್ರಾಣಪ್ರಾಣಸ್ಯ" ಎಂಬ (ಆ॥) ಪಾಠವನ್ನಿಟ್ಟುಕೊಂಡೇ ಕನ್ನಡಿಸಿರುತ್ತದೆ. "ಘ್ರಾಣಸ್ಯೈವ ಪ್ರಾಣಸ್ಯ ನ ತು ಯುಕ್ತಂ ಗ್ರಹಣಮ್" (ವಾ॥) "ಘ್ರಾಣಸ್ಯೈವ ಗ್ರಹಣಂ

ಎಂದು ಶ್ರುತಿಯ ಅಭಿಪ್ರಾಯವಿರುತ್ತದೆ. ಇಡಿಯ ಕರಣಸಮೂಹದ ಪ್ರವೃತ್ತಿಯು ಯಾವದೊಂದಕ್ಕಾಗಿ[1] ಆಗುತ್ತಿರುವದೋ ಅದೇ ಬ್ರಹ್ಮವು–ಎಂಬುದೇ (ಈ) ಪ್ರಕರಣದಲ್ಲಿ ಹೇಳಬೇಕೆಂದಿರುವ ವಿಷಯವು.

(ಭಾಷ್ಯ)

೨೨. ತಥಾ ಚಕ್ಷುಷಶ್ಚಕ್ಷುಃ ರೂಪಪ್ರಕಾಶಕಸ್ಯ ಚಕ್ಷುಷೋ ಯದ್ರೂಪಗ್ರಹಣ ಸಾಮರ್ಥ್ಯಮ್, ತದಾತ್ಮಚೈತನ್ಯಾಧಿಷ್ಠಿತಸ್ಯೈವ । ಅತಶ್ಚಕ್ಷುಷಶ್ಚಕ್ಷುಃ ॥

(ಭಾಷ್ಯಾರ್ಥ)

ಇದರಂತೆ 'ಚಕ್ಷುವಿಗೂ ಚಕ್ಷುವು' ರೂಪವನ್ನು ಬೆಳಗುವ ಚಕ್ಷುರಿಂದ್ರಿಯಕ್ಕೆ ರೂಪವನ್ನು ಹಿಡಿಯುವ ಸಾಮರ್ಥ್ಯವಿದೆಯಷ್ಟೆ, ಅದು ಆತ್ಮಚೈತನ್ಯವನ್ನು ಆಶ್ರಯಿಸಿಕೊಂಡಿರುವದರಿಂದಲೇ ಅದಕ್ಕೆ (ಉಂಟಾಗಿರುತ್ತದೆ); ಆದ್ದರಿಂದ (ಆತ್ಮನು) ಚಕ್ಷುವಿಗೂ ಚಕ್ಷುವು.

ಏಷಣಾತ್ಯಾಗದಿಂದ ಸಾವನ್ನು ಗೆಲ್ಲಬಹುದು.

(ಭಾಷ್ಯ)

೨೩. ಪ್ರಷ್ಟುಃ ಪೃಷ್ಟಸ್ಯಾರ್ಧಸ್ಯ ಜ್ಞಾತುಮಿಷ್ಟತ್ವಾತ್ ಶ್ರೋತ್ರಾದೇಃ ಶ್ರೋತ್ರಾದಿಲಕ್ಷಣಂ ಯಧೋಕ್ತಂ ಬ್ರಹ್ಮ, 'ಜ್ಞಾತ್ವಾ' ಇತ್ಯಧ್ಯಾಹ್ರಿಯತೇ । "ಅಮೃತಾ ಭವನ್ತಿ" ಇತಿ ಫಲಶ್ರುತೇಶ್ಚ । ಜ್ಞಾನಾದ್ಧಿ ಅಮೃತತ್ವಂ ಪ್ರಾಪ್ಯತೇ । 'ಜ್ಞಾತ್ವಾ ಅತಿಮುಚ್ಯ' ಇತಿ ಸಾಮರ್ಥ್ಯಾತ್ ಶ್ರೋತ್ರಾದಿಕರಣಕಲಾಪಮ್ ಉಜ್ಝಿತ್ವಾ । ಶ್ರೋತ್ರಾದೌ ಹ್ಯಾತ್ಮಭಾವಂ ಕೃತ್ವಾ ತದುಪಾಧಿಃ ಸ್ಸ ತದಾತ್ಮನಾ ಜಾಯತೇ ಮ್ರಿಯತೇ, ಸಂಸರತಿ । ಅತಃ ಶ್ರೋತ್ರಾದೇಃ ಶ್ರೋತ್ರಾದಿಲಕ್ಷಣಂ ಬ್ರಹ್ಮಾತ್ಮೇತಿ ವಿದಿತ್ವಾ ಅತಿಮುಚ್ಯ ಶ್ರೋತ್ರಾದ್ಯಾತ್ಮಭಾವಂ ಪರಿತ್ಯಜ್ಯ । ಯೇ ಶ್ರೋತ್ರಾದ್ಯಾತ್ಮಭಾವಂ ಪರಿತ್ಯಜನ್ತಿ ತೇ ಧೀರಾಃ ಧೀಮನ್ತಃ । ನ ಹಿ ವಿಶಿಷ್ಟ ಧೀಮತ್ತ್ವಮನ್ತರೇಣ ಶ್ರೋತ್ರಾದ್ಯಾತ್ಮಭಾವಃ ಶಕ್ಯಃ ಪರಿತ್ಯಕ್ತುಮ್ । ಪ್ರೇತ್ಯ

ಯುಕ್ತಂ ನ ತು ಪ್ರಾಣಸ್ಯ" (೧೯॥) ಎಂಬ ಪಾಠಗಳಲ್ಲಿ ಪ್ರಾಣವನ್ನು ಇಲ್ಲಿ ಹೇಳಿರುವದು ಯುಕ್ತವಲ್ಲವೆಂಬ ಆಕ್ಷೇಪವು ಬರುತ್ತದೆ. ಆದರೆ ಇಲ್ಲಿ ಘ್ರಾಣವೇಕೆ ಬರಲಿಲ್ಲ?'–ಎಂಬ ಆಕ್ಷೇಪವೇ ಹೆಚ್ಚು ಹೊಂದುತ್ತದೆ.

1. ಕರಣಗಳು ಪರಾರ್ಥ, ಆತ್ಮನು ಸ್ವಾರ್ಥ, ಐ. ಭಾ. ೧-೩, ಕ. ಭಾ. ೨ ೨-೧. ಕರಣವ್ಯಾಪಾರವೆಲ್ಲ ಪ್ರಾಣದಿಂದಲೇ ಆಗುತ್ತಿರುವದರಿಂದ 'ಪ್ರಾಣ' ಎಂಬ ಮಾತು ಘ್ರಾಣವನ್ನೇ ಅಲ್ಲದೆ ಎಲ್ಲಾ ಕರಣವ್ಯಾಪಾರವೂ ಚೈತನ್ಯದ ಆಸರೆಯಿಂದ ನಡೆಯುತ್ತದೆ ಎಂಬುದನ್ನೂ ತಿಳಿಸುತ್ತದೆ ಎಂದು ಭಾವ.

ವ್ಯಾವೃತ್ಯ, ಅಸ್ಮಾತ್ ಲೋಕಾತ್ ಪುತ್ರಮಿತ್ರಕಲತ್ರಬನ್ಧುಷು ಮಮಾಹಂಭಾವ ಸಂವ್ಯವಹಾರಲಕ್ಷಣಾತ್ ತ್ಯಕ್ತಸರ್ವೈಷಣಾ ಭೂತ್ವೇತ್ಯರ್ಥಃ। ಅಮೃತಾಃ ಅಮರಣ ಧರ್ಮಾಣೋ ಭವನ್ತಿ। "ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ" (ತೈ. ನಾ ೨೮), "ಪರಾಞ್ಚಿ ಖಾನಿ ವ್ಯತೃಣತ್.. ಆವೃತ್ತ ಚಕ್ಷುರಮೃತತ್ವಮಿಚ್ಛನ್" (ಕ. ೨-೧-೧), "ಯದಾ ಸರ್ವೇ ಪ್ರಮುಚ್ಯನ್ತೇ..... ಅತ್ರ ಬ್ರಹ್ಮ ಸಮಶ್ನುತೇ" (ಕ ೨-೩-೧೪)–ಇತ್ಯಾದಿಶ್ರುತಿಭ್ಯಃ। ಅಥವಾ 'ಅತಿ ಮುಚ್ಯ' ಇತ್ಯನೇನೈವ ಏಷಣಾತ್ಯಾಗಸ್ಯ ಸಿದ್ಧತ್ವಾತ್ ಅಸ್ಮಾಲ್ಲೋಕಾತ್ ಪ್ರೇತ್ಯ ಅಸ್ಮಾತ್ ಶರೀರಾತ್ ಅಪೇಕ್ಷ್ಯತ್ಯ [1] ಮೃತ್ವೇತ್ಯರ್ಥಃ ॥

(ಭಾಷ್ಯಾರ್ಥ)

ಕೇಳುವಾತನಿಗೆ ಕೇಳಿದ ವಿಷಯವನ್ನು ಅರಿತುಕೊಳ್ಳಬೇಕೆಂಬ [2] ಇಚ್ಛೆ ಇರುವ ದಾದ್ದರಿಂದ 'ಶ್ರೋತ್ರಾದಿಗಳಿಗೂ ಶ್ರೋತ್ರಾದಿರೂಪವಾಗಿರುವ ಮೇಲೆ ಹೇಳಿದ ಬ್ರಹ್ಮವನ್ನು ಅರಿತುಕೊಂಡು'–ಎಂದು ಅಧ್ಯಾಹಾರಮಾಡಿಕೊಳ್ಳಬೇಕು. [3] "ಅಮೃತರಾಗುವರು" ಎಂದು ಫಲವನ್ನು ಹೇಳಿರುವ ಶ್ರುತಿಯಿಂದಲೂ (ಹೀಗೆ ಅಧ್ಯಾಹಾರಮಾಡಿಕೊಳ್ಳಬೇಕು.) ಜ್ಞಾನದಿಂದಲೇ ಅಲ್ಲವೆ, ಅಮೃತವನ್ನು ಹೊಂದ ಲಾಗುವದು? [4] (ಅದನ್ನು ಅರಿತುಕೊಂಡು 'ಬಿಟ್ಟು'..... ಎಂದರೆ ಶ್ರೋತ್ರಾದಿ ಕರಣಸಮೂಹವನ್ನು ಬಿಟ್ಟು ಎಂದು (ಶಬ್ದ)ಸಾಮರ್ಥ್ಯದಿಂದ [5] (ಅರ್ಥಮಾಡ ಬೇಕು). ಏಕೆಂದರೆ ಶ್ರೋತ್ರಾದಿಗಳಲ್ಲಿ (ಅವು) ತಾನೆಂಬ ಭಾವನೆಯನ್ನು ಮಾಡಿ

---

1. ವಾ॥ ಪಾಠ.

2. ಯಾವ ವಿಷಯವನ್ನು ಕೇಳುತ್ತೇನೆಯೋ ಅದರ ಅರಿವು ನಮಗೆ ಬೇಕಾಗಿರುತ್ತದೆ. ಆ ದೇವನು ಯಾರು?- ಎಂದು ಕೇಳಿರುವದರಿಂದ ಅಂಥ ಆತ್ಮನ ಜ್ಞಾನವು ಶಿಷ್ಯನಿಗೆ ಬೇಕಾದದ್ದೆಂದಾಯಿತು. ಆದ್ದರಿಂದ 'ಜ್ಞಾತ್ವಾ-ಅರಿತುಕೊಂಡು' ಎಂಬ ಮಾತನ್ನು ಅಧ್ಯಾಹಾರ ಮಾಡಿಕೊಳ್ಳಬೇಕು.

3. ಸುಮ್ಮನೆ 'ಬ್ರಹ್ಮವು ಇಂಥದ್ದು ಎಂದು ಹೇಳಿ ಅಮೃತರಾಗುವರು' ಎಂದಿಷ್ಟೇ ಹೇಳಿದರೆ ಈ ಎರಡು ವಾಕ್ಯಗಳಿಗೂ ಸಂಬಂಧವಿಲ್ಲದೆ ಹೋಗುವದು. ಆದ್ದರಿಂದ 'ಈ ಬ್ರಹ್ಮವನ್ನು ಅರಿತುಕೊಂಡರೆ' ಮುಕ್ತರಾಗುತ್ತಾರೆ ಎಂದು ಅನ್ವಯಮಾಡಿಕೊಳ್ಳಬೇಕು ಎಂದು ಭಾವ.

4. ಜ್ಞಾನದಿಂದಲೇ ಮುಕ್ತಿ ಎಂದು ಶ್ರುತಿಸಿದ್ಧವಾಗಿರುತ್ತದೆ; ಆದ್ದರಿಂದಲೂ ಹೀಗೆ ಅಧ್ಯಾಹಾರಮಾಡಿಕೊಳ್ಳುವದು ಯುಕ್ತ.

5. ಏನನ್ನು ಬಿಟ್ಟು? ಎಂಬ ಆಕಾಂಕ್ಷೆ ಉಂಟಾಗುವದರಿಂದ ಪ್ರಕೃತವಾಗಿರುವ ಶ್ರೋತ್ರಾದಿಗಳನ್ನು ಎಂದು ಕಲ್ಪಿಸಬೇಕಾಗುತ್ತದೆ.

ಕೊಂಡಿರುವದರಿಂದಲೇ ಆ ಉಪಾಧಿಗಳುಳ್ಳವನಾಗಿ ಅವುಗಳೇ ತಾನಾಗುವದರಿಂದ ಹುಟ್ಟುತ್ತಲೂ ಸಾಯುತ್ತಲೂ ಸಂಸಾರದಲ್ಲಿ ತೊಳಲುತ್ತಲೂ[1] ಇರುತ್ತಾನೆ. ಆದ್ದರಿಂದ ಶ್ರೋತ್ರಾದಿಗಳಿಗೂ ಶ್ರೋತ್ರಾದಿರೂಪವಾಗಿರುವ ಬ್ರಹ್ಮವೇ ಆತ್ಮನೆಂದು ಅರಿತುಕೊಂಡು ' ಅತಿಮುಚ್ಯ ' ಎಂದರೆ ಶ್ರೋತ್ರಾದಿಗಳೇ ತಾನೆಂಬ ಭಾವನೆಯನ್ನು ಬಿಟ್ಟುಬಿಟ್ಟು (ಎಂದರ್ಥ). ಯಾರು ಶ್ರೋತ್ರಾದಿಗಳೇ ತಾವೆಂಬ ಭಾವನೆಯನ್ನು ಬಿಡುವರೋ ಅವರು ಧೀರರು, ಬುದ್ಧಿವಂತರು. ಏಕೆಂದರೆ ಅಸಾಧಾರಣವಾದ[2] (ಬ್ರಹ್ಮವಿಷಯಕವಾದ) ಬುದ್ಧಿಯಿಲ್ಲದೆ ಶ್ರೋತ್ರಾದಿಗಳೇ ನಾವೆಂಬ ಬುದ್ಧಿಯನ್ನು ಬಿಟ್ಟುಬಿಡುವದು ಆಗಲೇ ಆರದು (ಅಂಧ) ಬುದ್ಧಿವಂತರು ಈ ಲೋಕದಿಂದ ಹೊರಟುಹೋಗಿ, ಎಂದರೆ ಮಕ್ಕಳು, ಸ್ನೇಹಿತರು, ಹೆಂಡತಿ, ನೆಂಟರು—ಇವರಲ್ಲಿ ನಾನುನನ್ನದೆಂಬ ಭಾವನೆಯ ವ್ಯವಹಾರರೂಪವಾಗಿರುವ (ಈ ಲೋಕದಿಂದ) ಹಿಂತಿರುಗಿ, ಎಲ್ಲ ಏಷಣೆಗಳನ್ನೂ ಬಿಟ್ಟು ಎಂದರ್ಥ.[3] ಅಮೃತರಾಗುವರು ಎಂದರೆ ಸಾವೆಂಬ ಧರ್ಮವಿಲ್ಲದವರಾಗುವರು. " ಕರ್ಮದಿಂದಲ್ಲ, ಪ್ರಜೆಯಿಂದಲ್ಲ, ಧನದಿಂದಲ್ಲ, ತ್ಯಾಗದಿಂದಲೇ ಕೆಲವರು ಅಮೃತತ್ವವನ್ನು ಪಡೆದಿರುತ್ತಾರೆ" (ತೈ. ನಾ. ೨೮) " ಪರಮೇಶ್ವರನು ಇಂದ್ರಿಯಗಳನ್ನು ಹೊರಗಡೆಗೆ ಕೊರೆದಿರುತ್ತಾನೆ,.. .. (ಯಾವನೋ ಒಬ್ಬ ಧೀರನು) ಇಂದ್ರಿಯಗಳನ್ನು ಹಿಂತಿರುಗಿಸಿ ಅಮೃತತ್ವದ ಬಯಕೆಯಿಂದ (ಪ್ರತ್ಯಗಾತ್ಮನನ್ನು ಕಾಣುತ್ತಾನೆ)" (ಕ ೨-೧-೧), ಯಾವಾಗ (ಕಾಮ) ಗಳೆಲ್ಲವೂ ಬಿಡುಗಡೆಯಾಗುವವೋ .....(ಆಗ) ಇಲ್ಲಿಯೇ[4] ಬ್ರಹ್ಮವನ್ನು ಪಡೆಯುವನು" (ಕ. ೨-೩-೧೪)—ಮುಂತಾದ ಶ್ರುತಿಗಳು ಇದಕ್ಕೆ ಪ್ರಮಾಣವು. ಅಥವಾ

---

1. ಆತ್ಮನಿಗೆ ಸ್ವತಃ ಸಂಸಾರವಿಲ್ಲ, ಶ್ರೋತ್ರಾದಿಗಳೆಂಬ ಉಪಾಧಿಗಳ ಸಂಬಂಧದಿಂದಲೇ ಸಂಸಾರವಾಗಿರುತ್ತದೆ.

2. ಶ್ರೋತ್ರಾದಿಗಳಿಗೂ ಶ್ರೋತೃವಾದ ಬ್ರಹ್ಮವೇ ತಾವೆಂಬ ಬುದ್ಧಿ ಸರ್ವಸಾಧಾರಣವಾಗಿಲ್ಲ.

3. ಪ್ರೇತ್ಯ ಎಂಬ ಮಾತಿಗೆ ಸತ್ತು ಎಂದು ಸಾಮಾನ್ಯವಾಗಿ ಅರ್ಥವಾಗುವದು; ಆದರೆ ಜ್ಞಾನಿಗಳ ವಿಷಯದಲ್ಲಿ ಫಲವು ಬದುಕಿರುವಾಗಲೇ ಆಗಿರುವದರಿಂದ ಏಷಣೆಗಳನ್ನು ಬಿಟ್ಟು ಎಂದರ್ಥ. ತೈ. ಭಾ. ೨-೮ ನೋಡಿ. ಮಕ್ಕಳು, ಕರ್ಮ, ಉಪಾಸನೆ ಎಂಬಿವುಗಳ ಬಯಕೆಯಿಂದಲೇ ಸಂಸಾರಲೋಕವು ತೋರಿಕೊಳ್ಳುವದರಿಂದ ಏಷಣೆಯನ್ನು ಬಿಡುವದೆಂದರೂ ಲೋಕವನ್ನು ಬಿಡುವದೆಂದರೂ ಒಂದೇ. ಬೃ ೧-೬-೧೬.

4. ಇದೇ ಆಚಾರ್ಯರಿಗೆ ಸಮ್ಮತವಾದ ಮುಖ್ಯಮುಕ್ತಿ. ಸೂ. ಭಾ. ೧-೧-೪. ಕ. ಭಾ. ೨-೩-೧, ಬೃ. ಭಾ. ೪-೪-೬, ಮುಂ. ಭಾ. ೩-೨-೬, ೩-೨-೯ ನೋಡಿರಿ.

ಅತಿಮುಚ್ಯ (ಬಿಟ್ಟು) ಎಂಬ ಮಾತಿನಿಂದಲೇ ಏಷಣಾತ್ಯಾಗವು ಸಿದ್ಧವಾಗಿರುವದರಿಂದ[1] ಈ ಲೋಕದಿಂದ ಹೊರಟುಹೋಗಿ (“ಪ್ರೇತ್ಯ”) ಎಂದರೆ ಈ ಶರೀರವನ್ನು ಬಿಟ್ಟುಹೋಗಿ ಎಂದರೆ ಸತ್ತು[2] ಎಂದರ್ಥವು. ॥ ೨ ॥

ಬ್ರಹ್ಮವು ಇಂದ್ರಿಯಗಳಿಗೂ ಮನಸ್ಸಿಗೂ ಅಗೋಚರ

(ಭಾಷ್ಯ)

ಯಸ್ಮಾತ್ ಶ್ರೋತ್ರಾದೇರಪಿ ಶ್ರೋತ್ರಾದ್ಯಾತ್ಮಭೂತಂ ಬ್ರಹ್ಮ ಅತಃ—

(ಭಾಷ್ಯಾರ್ಥ)

(ಹೀಗೆ) ಬ್ರಹ್ಮವು ಶ್ರೋತ್ರಾದಿಗಳಿಗೂ ಶ್ರೋತ್ರವೇ ಮುಂತಾದದ್ದಾಗಿರುವ ಸ್ವರೂಪವಾಗಿರುತ್ತದೆಯಾದ್ದರಿಂದ—

ನ ತತ್ರ ಚಕ್ಷುರ್ಗಚ್ಛತಿ
ನ ವಾಗ್ಗಚ್ಛತಿ ನೋ ಮನಃ।
ನ ವಿದ್ಮೋ ನ ವಿಜಾನೀಮೋ
ಯಥೈತದನುಶಿಷ್ಯಾತ್ ॥ ೩ ॥

೩. ಅಲ್ಲಿಗೆ ಚಕ್ಷುಸ್ಸು ಹೋಗುವದಿಲ್ಲ, ವಾಕ್ಕು ಹೋಗುವದಿಲ್ಲ, ಮನಸ್ಸು (ಹೋಗುವ)ದಿಲ್ಲ. (ಇದನ್ನು) ನಾವರಿಯೆವು, ಇದನ್ನು ಹೇಗೆ ತಿಳಿಯಪಡಿಸಬೇಕೋ ತಿಳಿಯೆವು.

೩. ನ ತತ್ರ ತಸ್ಮಿನ್ ಬ್ರಹ್ಮಣಿ ಚಕ್ಷುಃ ಗಚ್ಛತಿ। ಸ್ವಾತ್ಮನಿ ಗಮನಾಸಮ್ಭವಾತ್। ತಥಾ ನ ವಾಕ್ ಗಚ್ಛತಿ। ವಾಚಾ ಹಿ ಶಬ್ದ ಉಚ್ಚಾರ್ಯಮಾಣಃ, ಅಭಿಧೇಯಂ ಪ್ರಕಾಶಯತಿ ಯದಾ, ತದಾ ಅಭಿಧೇಯಂ ಪ್ರತಿ ವಾಕ್ ಗಚ್ಛತಿ ಇತ್ಯುಚ್ಯತೇ। ತಸ್ಯ ಚ ಶಬ್ದಸ್ಯ ತನ್ನಿರ್ವರ್ತಕಸ್ಯ ಚ ಕರಣಸ್ಯ ಆತ್ಮಾ ಬ್ರಹ್ಮ। ಅತೋ ನ ವಾಗ್ಗಚ್ಛತಿ। ಯಥಾ ಅಗ್ನಿರ್ದಾಹಕಃ ಪ್ರಕಾಶಕಶ್ಚಾಪಿ ಸನ್ ನ ಹ್ಯಾತ್ಮಾನಂ ಪ್ರಕಾಶಯತಿ ದಹತಿ ವಾ, ತದ್ವತ್। ನೋ ಮನಃ। ಮನಶ್ಚ ಅನ್ಯಸ್ಯ ಸಙ್ಕಲ್ಪಯಿತೃ

---

1. ಈ ಪಕ್ಷದಲ್ಲಿ ಅತಿಮುಚ್ಯ ಎಂದರೆ ಶ್ರೋತ್ರಾದಿಗಳ ಆತ್ಮನೇ ತಾನೆಂದು ತಿಳಿದುಕೊಂಡಿದ್ದರ ಫಲವಾಗಿ ಹೊರಗಿನ ವಿಷಯಗಳಲ್ಲಿ ನಾನು ನನ್ನದೆಂಬುದನ್ನು ಬಿಟ್ಟು ಎಂದರ್ಥ.

2. ಇದು ‘ವಿದೇಹಮುಕ್ತಿ’ಯು. ಇದೇ ಮುಖ್ಯಮುಕ್ತಿಯೆಂದು ಕೆಲವರು ಹೇಳುವರು; ಆದರೆ ಈ ಅಭಿಪ್ರಾಯಕ್ಕೆ ಭಾಷ್ಯದ ಬೆಂಬಲವಿಲ್ಲ. ಸತ್ತಮೇಲೆ ಅಜ್ಞರು ಮತ್ತೆ ಶರೀರವನ್ನು ಧರಿಸುವಂತೆ ಜ್ಞಾನಿಯು ಮತ್ತೆ ಧರಿಸುವದಿಲ್ಲವೆಂಬ ಅಭಿಪ್ರಾಯದಿಂದ ಇದನ್ನು ಮುಕ್ತಿಯೆಂದು ಉಪಚಾರಕ್ಕೆ ಕರೆದಿರುತ್ತದೆ ಎಂದು ಬೃ. ಭಾ. ೪-೪-೬ದಲ್ಲಿ ಬರೆದಿರುವದನ್ನು ನೋಡಿರಿ.

ಅಧ್ಯವಸಾತೃ ಚ ಸತ್ ನಾತ್ಮಾನಂ[1] ಸಙ್ಕಲ್ಪಯತಿ ಅಧ್ಯವ್ಯಸತಿ ಚ। ತಸ್ಯಾಪಿ ಬ್ರಹ್ಮ ಆತ್ಮೇತಿ ॥

(ಭಾಷ್ಯಾರ್ಥ)

ಅಲ್ಲಿಗೆ ಅಂದರೆ ಆ ಬ್ರಹ್ಮವಿದ್ದಲ್ಲಿಗೆ ಚಕ್ಷುಸ್ಸು ಹೋಗುವದಿಲ್ಲ ; ಏಕೆಂದರೆ ತನ್ನ ಆತ್ಮನ ಬಳಿಗೆ ಹೋಗುವದಕ್ಕೆ ಅದರಿಂದ ಆಗಲಾರದು ಇದರಂತೆ ವಾಕ್ಕು ಹೋಗುವದಿಲ್ಲ. ವಾಗಿಂದ್ರಿಯದಿಂದ ಉಚ್ಚರಿಸಿದ ಶಬ್ದವು ಹೇಳಬೇಕಾದ (ವಿಷಯ)ವನ್ನು ಯಾವಾಗ ಬೆಳಗುವದೋ ಆಗ ಆ ಹೇಳಬೇಕಾದ (ವಿಷಯ)ದ ಕಡೆಗೆ ವಾಕ್ಕು[2] ಹೋಗುತ್ತದೆ ಎನ್ನುವರು. ಆ ಶಬ್ದಕ್ಕೂ ಆದನ್ನು ಉಂಟು ಮಾಡುವ ಕರಣಕ್ಕೂ[2] ಬ್ರಹ್ಮವು ಆತ್ಮನಾಗಿರುವದು. ಆದ್ದರಿಂದ (ಅದರ ಬಳಿಗೆ) ವಾಕ್ಕು ಹೋಗಲಾರದು. ಹೇಗೆ ಬೆಂಕಿಯು ಸುಡತಕ್ಕದ್ದೂ ಬೆಳಗತಕ್ಕದ್ದೂ ಆಗಿದ್ದರೂ ತನ್ನನ್ನು ತಾನೇ ಸುಡಲಾರದೋ ಬೆಳಗಲೂ ಆರದೋ, ಅದರಂತೆಯೇ[3] (ಇದನ್ನು ಅರಿಯಬೇಕು) ಮನಸ್ಸು[4] ಹೋಗುವದಿಲ್ಲ ಮನಸ್ಸೆಂಬುದೂ (ತನಗಿಂತ) ಬೇರೆಯಾಗಿರುವ (ವಸ್ತು)ವನ್ನು ಸಂಕಲ್ಪಿಸತಕ್ಕದ್ದೂ ನಿಶ್ಚಯಿಸತಕ್ಕದ್ದೂ ಆಗಿದ್ದರೂ ಆತ್ಮನನ್ನು[5] ಸಂಕಲ್ಪಿಸಲಾರದು, ನಿಶ್ಚಯಿಸಲೂ ಆರದು. ಏಕೆಂದರೆ ಬ್ರಹ್ಮವು ಅದಕ್ಕೂ ಆತ್ಮನಾಗಿರುತ್ತದೆ

(ಭಾಷ್ಯ)

೨೫. ಇನ್ದ್ರಿಯಮನೋಭ್ಯಾಂ ಹಿ ವಸ್ತುನೋ ವಿಜ್ಞಾನಮ್ । ತದಗೋಚರತ್ವಾತ್ ನ ವಿದ್ಮಃ ತದ್ಬ್ರಹ್ಮ ಈದೃಶಮ್ ಇತಿ। ಅತೋ ನ ವಿಜಾನೀಮಃ ಯಥಾಯೇನ ಪ್ರಕಾರೇಣ ಏತತ್ ಬ್ರಹ್ಮ ಅನುಶಿಷ್ಯಾತ್ ಉಪದಿಶೇತ್ ಶಿಷ್ಯಾಯೇತ್ಯಭಿಪ್ರಾಯಃ । ಯದ್ಧಿ ಕರಣಗೋಚರಮ್ ತತ್ ಅನ್ಯಸ್ಮೈ ಉಪದೇಷ್ಟುಂ ಶಕ್ಯಂ ಜಾತಿಗುಣಕ್ರಿಯಾವಿಶೇಷಣೈಃ । ನ ತತ್ ಜಾತ್ಯಾದಿವಿಶೇಷಣವದ್ ಬ್ರಹ್ಮ । ತಸ್ಮಾತ್

---

1. ಇದು (ವಾ॥) ಪಾಠ ; (ಆ॥) ಪಾಠದಲ್ಲಿ ನ ಬಿಟ್ಟುಹೋಗಿದೆ.

2. ವಾಕ್ಕು ಎಂದರೆ ವಾಗಿಂದ್ರಿಯ, ಅದರ ವಿಷಯವಾದ ಶಬ್ದ—ಈ ಎರಡನ್ನೂ ಗ್ರಹಿಸಬೇಕೆಂದು ಭಾವ. ಮುಂದಿನ ಮಂತ್ರದ ಭಾಷ್ಯವನ್ನು ನೋಡಿರಿ.

3. ವಾಗಾದಿಗಳು ಆತ್ಮನಿಗಿಂತ ಬೇರೆಯಾಗಿ ಇಲ್ಲವೇ ಇಲ್ಲದ್ದರಿಂದ ಆತ್ಮನೇ ಅವುಗಳ ನಿಜವಾದ ಸ್ವರೂಪವು. ತನ್ನ ಸ್ವರೂಪವನ್ನು ತಾನು ವಿಷಯೀಕರಿಸುವದೆಂಬುದು ಆಗಲಾರದು.

4. ಅಂತಃಕರಣವು.

5. " ತನ್ನನ್ನು (ತಾನು) ಸಂಕಲ್ಪಿಸಲಾರದು, ನಿಶ್ಚಯಿಸಲೂ ಆರದು ; ಬ್ರಹ್ಮವು ಅದಕ್ಕೂ ಆತ್ಮನೇ ಆಗಿರುವದರಿಂದ (ಮನಸ್ಸು ಅದರ ಕಡೆಗೆ ಹೋಗಲಾರದು) " ಎಂದೂ ಕನ್ನಡಿಸಬಹುದು.

ವಿಷಯಂ ಶಿಷ್ಯಾಯ ಉಪದೇಶೇನ ಪ್ರತ್ಯಾಯಯಿತುಮ್ ಇತಿ ಉಪದೇಶೇ ತದರ್ಥ ಗ್ರಹಣೇ ಚ ಯತ್ನಾತಿಶಯಕರ್ತವ್ಯತಾಂ ದರ್ಶಯತಿ ||

(ಭಾಷ್ಯಾರ್ಥ)

ಇಂದ್ರಿಯ, ಮನಸ್ಸು– ಇವೆರಡರಿಂದಲೇ ಅಲ್ಲವೆ, ವಸ್ತುವಿನ ಅರಿವು ಆಗ ತಕ್ಕದ್ದು ? ಇವೆರಡಕ್ಕೂ ಗೋಚರವಾಗದೆ ಇರುವದರಿಂದ ಈ ಬ್ರಹ್ಮವು ಹೇಗಿರುವ ದೆಂಬುದನ್ನು ನಾವರಿಯೆವು. ಹೇಗೆ ಎಂದರ ಯಾವ ಪ್ರಕಾರದಿಂದ ಈ ಬ್ರಹ್ಮವನ್ನು ತಿಳಿಯಪಡಿಸಬೇಕೋ ಶಿಷ್ಯನಿಗೆ ಉಪದೇಶಮಾಡಬೇಕೋ ನಮಗೆ ತಿಳಿಯದು ಎಂದು ಅಭಿಪ್ರಾಯ. **ಯಾವದು ಕರಣಗಳಿಗೆ ಗೋಚರವಾಗಿರುವದೋ ಅದನ್ನು ಮತ್ತೊಬ್ಬನಿಗೆ (ಅದರ) ಜಾತಿ[1], ಗುಣ, ಕ್ರಿಯೆ–ಎಂಬ ವಿಶೇಷಣ ಗಳಿಂದ ತಿಳಿಸಬಹುದು. ಆದರೆ ಈ ಬ್ರಹ್ಮದಲ್ಲಿ ಜಾತಿಯೇ ಮುಂತಾದ ವಿಶೇಷಣಗಳಿರುವದಿಲ್ಲ.** ಆದ್ದರಿಂದ ಶಿಷ್ಯರಿಗೆ ಇದನ್ನು ತಿಳಿಸಿಕೊಡುವದು ಕಷ್ಟವು–ಎಂದು[2] ಉಪದೇಶಮಾಡುವದರಲ್ಲಿಯೂ ಅದರ ಅರ್ಥವನ್ನು ತಿಳಿದು ಕೊಳ್ಳುವದರಲ್ಲಿಯೂ ಹೆಚ್ಚಿನ ಪ್ರಯತ್ನವನ್ನು ಮಾಡಬೇಕು ಎಂದು ತಿಳಿಸಿರುತ್ತದೆ.

ತನ್ನ ಸ್ವರೂಪವೇ ಆಗಿರುವ ಬ್ರಹ್ಮವನ್ನು ಉಪದೇಶದಿಂದಲೇ ಅರಿತುಕೊಳ್ಳಬೇಕು.

(ಭಾಷ್ಯ)

೩ಟ. "ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾತ್" ಇತಿ ಅತ್ಯನ್ತಮೇವ ಉಪದೇಶಪ್ರಕಾರಪ್ರತ್ಯಾಖ್ಯಾನೇ ಪ್ರಾಪ್ತೇ ತದಪವಾದೋಽಯಮುಚ್ಯತೇ। ಸತ್ಯಮ್ ಏವಂ ಪ್ರತ್ಯಕ್ಷಾದಿಭಿಃ ಪ್ರಮಾಣೈರ್ನ ಪರಃ ಪ್ರತ್ಯಾಯಯಿತುಂ ಶಕ್ಯಃ। ಆಗಮೇನ ತು ಶಕ್ಯತ ಏವ ಪ್ರತ್ಯಾಯಯಿತುಮಿತಿ ತದುಪದೇಶಾರ್ಥಮಾಗಮಮಾಹ—ಅನ್ಯದೇವ ತದ್ವಿದಿತಾದಥೋ ಅವಿದಿತಾದಧೀತಿ ||

---

1. ಕರಿಯ ಗೋವು ಚಲಿಸುತ್ತದೆ–ಎಂಬಲ್ಲಿ ಗೋತ್ವವು ಜಾತಿಯು, ಕಪ್ಪು ಗುಣವು, ಚಲನೆಯು ಕ್ರಿಯೆ. ಹೀಗೆ ವಸ್ತುವಿನ ಜಾತಿಗುಣಕ್ರಿಯೆಗಳನ್ನು ಹೇಳುವ ವಿಶೇಷಣಗಳನ್ನು ಕೊಟ್ಟು ವಸ್ತುವನ್ನು ತಿಳಿಸಬಹುದು. ತೈ. ಭಾ. ೨-೧-೯, ಮಾಂ. ಭಾ. ೭, ಗೀ. ಭಾ. ೧೩-೧೨.

2. "ದರ್ಶಯತಿ ನ ವಿದ್ಮ ಇತ್ಯಾದಿ" ಎಂಬ (ಆ) ಪಾರವನ್ನು "ನಾವರಿಯೆವು ಎಂದು ಮುಂತಾಗಿ ಹೇಳಿದ್ದರಿಂದ ಉಪದೇಶಮಾಡುವದರಲ್ಲಿಯೂ. .. ತಿಳಿಸಿರುತ್ತದೆ" ಎಂದು ಕನ್ನಡಿಸಬೇಕು. ಇಲ್ಲಿ ತಿಳಿಯುವದು ಕಷ್ಟವು ಎಂದದ್ದರಿಂದ ಕಷ್ಟಪಟ್ಟಾದರೂ ತಿಳಿಯ ಬೇಕು ಎಂದರ್ಥವೇ ಹೊರತು ತಿಳಿಯುವದಕ್ಕೆ ದಾರಿಯೇ ಇಲ್ಲವೆಂದು ಅಭಿಪ್ರಾಯವಲ್ಲ ಎಂದು ಭಾವ.

(ಭಾಷ್ಯಾರ್ಥ)

"ಇದನ್ನು ಹೇಗೆ ತಿಳಿಯಪಡಿಸಬೇಕೋ ತಿಳಿಯೆವು" ಎಂಬುದರಿಂದ[1] (ಇದನ್ನು) ತಿಳಿಸಿಕೊಡುವದಕ್ಕೆ (ಯಾವದೊಂದು) ಪ್ರಕಾರವೂ ಇಲ್ಲವೇ ಎಂದಾಯಿತಲ್ಲ!—ಎಂದರೆ ಈ (ನಿಯಮಕ್ಕೆ) ಈ ಅಪವಾದವನ್ನು ಹೇಳುತ್ತಾರೆ. (ಮೇಲೆ ಹೇಳಿ)ದಂತೆ **ಪ್ರತ್ಯಕ್ಷಾದಿ**ಪ್ರಮಾಣಗಳಿಂದ[2] ಮತ್ತೊಬ್ಬರಿಗೆ ತಿಳಿಯಹೇಳುವದಕ್ಕೆ ಆಗುವದಿಲ್ಲವೆಂಬುದು ನಿಜವೇ. ಆದರೆ **ಆಗಮ**ದಿಂದ[3] ತಿಳಿಸುವದಕ್ಕೆ ಆಗಿಯೇ ಆಗುತ್ತದೆ–ಎಂದು ಅದನ್ನು ಹೇಳಿಕೊಡುವದಕ್ಕಾಗಿ "ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ" ಎಂಬ ಆಗಮವನ್ನು ಹೇಳುತ್ತಾರೆ

ಅನ್ಯದೇವ ತದ್ವಿದಿತಾ
ದಥೋ ಅವಿದಿತಾದಧಿ।
ಇತಿ ಶುಶ್ರುಮ ಪೂರ್ವೇಷಾಂ
ಯೇ ನಸ್ತದ್ವ್ಯಾಚಚಕ್ಷಿರೇ ॥ ೪ ॥

೪. ಅದು ತಿಳಿಯಲ್ಪಟ್ಟದ್ದಕ್ಕಿಂತಲೂ ಬೇರೆಯೇ ಮತ್ತು ತಿಳಿಯಲ್ಪಡದೆ ಇರುವದಕ್ಕಿಂತಲೂ ಬೇರೆಯೇ ಎಂದು ನಮಗೆ ಅದನ್ನು ವಿವರಿಸಿ ಹೇಳಿದ ಹಿರಿಯವರಿಂದ ನಾವು ಕೇಳಿರುತ್ತೇವೆ.

(ಭಾಷ್ಯ)

೨೨. ಅನ್ಯದೇವ ಪೃಥಗೇವ ತತ್। ಯತ್ ಪ್ರಕೃತಂ "ಶ್ರೋತ್ರಾದೀನಾಂ ಶ್ರೋತ್ರಾದಿ" ಇತ್ಯುಕ್ತಮ್ ಅವಿಷಯಶ್ಚ ತೇಷಾಮ್, ತತ್ ವಿದಿತಾತ್ ಅನ್ಯದೇವ ಹಿ। ವಿದಿತಂ ನಾಮ ಯದ್ ವಿದಿಕ್ರಿಯಯಾ ಅತಿಶಯೇನ ಆಪ್ತಮ್ ವಿದಿಕ್ರಿಯಾಕರ್ಮಭೂತಮ್। ಕ್ವಚಿತ್ ಕೆಂಚಿತ್ ಕಸ್ಯಚಿದ್ವಿದಿತಂ ಸ್ಯಾತ್ ಇತಿ ಸರ್ವಮೇವ

---

1. "ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾತ್" ಎಂಬ (ವಾ॥) ಪಾಠವು (ಆ॥) ಪಾಠದಲ್ಲಿ ಕಂಡುಬರುವದಿಲ್ಲ "ನ ವಿದ್ಮ ಇತ್ಯಾದಿ" (ಆ॥) ಎಂಬುದಕ್ಕೆ ಬದಲೇ ಈ ವಾಕ್ಯವು ಬಂದಿದೆ ಎಂದು ಇಟ್ಟುಕೊಂಡರೆ ಹಿಂದಿನ ಮಂತ್ರದ ಭಾಷ್ಯಕ್ಕೆ ಇದು ಸೇರುತ್ತದೆ.

2. ಪ್ರತ್ಯಕ್ಷಾದಿಗಳು ದ್ರವ್ಯ, ಗುಣ, ಕ್ರಿಯೆ, ಜಾತಿ–ಮುಂತಾದವನ್ನು ಮಾತ್ರ ತಿಳಿಸುತ್ತವೆ.

3. ಆಗಮವೆಂದರೆ ಅನುಭವವನ್ನು ಉಪದೇಶಿಸುವದು. ಪ್ರಮಾಣಕ್ಕೆ ತಿಳಿಯಬರದ ಜಾಗ್ರದಾದ್ಯವಸ್ಥೆಗಳನ್ನು ಅನುಭವದಿಂದ ತಿಳಿದುಕೊಂಡು ಮತ್ತೊಬ್ಬರಿಗೆ ತಿಳಿಸಿಕೊಡುವಂತೆ ಆತ್ಮನನ್ನು ಸಾರ್ವತ್ರಿಕವಾದ ಅನುಭವದ ಆಧಾರದಿಂದಲೇ ಮತ್ತೊಬ್ಬರಿಗೆ ತಿಳಿಯಹೇಳಬಹುದು–ಎಂದು ಭಾವ.

ವ್ಯಾಕೃತಂ ವಿದಿತಮೇವ । ತಸ್ಮಾದನ್ಯದೇವ ಇತ್ಯರ್ಥಃ । ಅವಿದಿತಮ್ ಅಜ್ಞಾತಂ ತರ್ಹಿ ಇತಿ ಪ್ರಾಪ್ತೇ ಆಹ—ಅಥೋ ಅಪಿ ಅವಿದಿತಾತ್ ವಿದಿತವಿಪರೀತಾತ್ **ಅವ್ಯಾಕೃತಾತ್ ಅವಿದ್ಯಾಲಕ್ಷಣಾತ್** ವ್ಯಾಕೃತಬೀಜಾತ್ । ಅಧಿ ಇತಿ ಉಪರ್ಯರ್ಥೇ । ಲಕ್ಷಣಯಾ ಅನ್ಯತ್ ಇತ್ಯರ್ಥಃ । ಯದ್ ಹಿ ಯಸ್ಮಾದ್ ಅಧಿ ಉಪರಿ ಭವತಿ, ತತ್ ತಸ್ಮಾತ್ ಅನ್ಯತ್ ಇತಿ ಪ್ರಸಿದ್ಧಮ್ ॥

(ಭಾಷ್ಯಾರ್ಥ)

ಅದು ಬೇರೆಯೇ ಎಂದರೆ ಬೇರ್ಪಟ್ಟೇ ಇರುತ್ತದೆ. ಯಾವದು ಶ್ರೋತ್ರಾದಿಗಳಿಗೂ ಶ್ರೋತ್ರಾದಿಯೆಂದೂ ಅವುಗಳಿಗೆ ವಿಷಯವಲ್ಲವೆಂದೂ[1] ಹೇಳಿ ಪ್ರಕೃತವಾಗಿದೆಯೋ[2] ಅದು ತಿಳಿಯಲ್ಪಟ್ಟದ್ದಕ್ಕಿಂತಲೂ ಬೇರೆಯೇ ಸರಿ. (ಇಲ್ಲ) ತಿಳಿಯಲ್ಪಟ್ಟದ್ದು ಎಂದರೆ ಯಾವದು ತಿಳಿಯೋಣವೆಂಬ ಕ್ರಿಯೆಯಿಂದ ತೀರ ಹೆಚ್ಚಾಗಿ ವ್ಯಾಪ್ತವಾಗಿರುವದೋ, ತಿಳಿಯೋಣವೆಂಬ ಕ್ರಿಯೆಗೆ ಕರ್ಮವಾಗಿರುವದೋ[3] (ಅದು). ಎಲ್ಲಿಯೇ ಇರಲಿ, ಏನೇ ಇರಲಿ, ಯಾರಿಗಾದರೊಬ್ಬರಿಗೆ ತಿಳಿಯ-ವದಾಗಿಯೇ ಇರಬಹುದಾದ್ದರಿಂದ **ವ್ಯಾಕೃತ**ವಾಗಿರುವದೆಲ್ಲವೂ ತಿಳಿಯಲ್ಪಟ್ಟದ್ದೇ (ಆಗಿರುತ್ತದೆ).[4] ಅದಕ್ಕಿಂತಲೂ (ಬ್ರಹ್ಮವು) ಬೇರೆಯೇ ಎಂದರ್ಥ." ಹಾಗಾದರೆ ಅದು ತಿಳಿಯಲ್ಪಟ್ಟದ್ದಲ್ಲ, ಅರಿಯಲ್ಪಡತಕ್ಕದ್ದಲ್ಲ ಎಂದಾಯಿತು " ಎಂದರೆ (ಅದಕ್ಕೆ) ಹೇಳುತ್ತಾರೆ .— ಅಥೋ ಎಂದರೆ ಮತ್ತು ಅವಿದಿತಕ್ಕಿಂತಲೂ, ಎಂದರೆ ತಿಳಿಯಲ್ಪಡತಕ್ಕದ್ದಕ್ಕೆ ವಿರುದ್ಧವಾಗಿ **ವ್ಯಾಕೃತಕ್ಕೆ ಕಾರಣವಾಗಿ ಅವಿದ್ಯೆಯಿಂದ ತೋರುವ ಅವ್ಯಾಕೃತಕ್ಕಿಂತಲೂ**[5], ಬೇರೆಯೇ. (ಮೂಲದಲ್ಲಿರುವ) ಅಧಿ ಎಂಬ (ಮಾತಿಗೆ) ಮೇಲೆ ಎಂದರ್ಥ. (ಇಲ್ಲಿ) ಲಕ್ಷಣೆಯಿಂದ (ಇದಕ್ಕೆ) ಬೇರೆ ಎಂದು ಅರ್ಥ(ವನ್ನು ಮಾಡಿಕೊಳ್ಳಬೇಕು);

---

1. ಎರಡುಮೂರನೆಯ ಮಂತ್ರಗಳಲ್ಲಿ ಹೇಳಿರುವದರ ಸಾರವಿದು.

2. ತತ್ ಎಂಬ ಸರ್ವನಾಮವು ಪ್ರಕೃತವಾದ ಬ್ರಹ್ಮವನ್ನೇ ಹೇಳುವದೆಂದು ಭಾವ.

3. ಕ್ರಿಯೆಯಿಂದ ಯಾವದು ಎಲ್ಲಕ್ಕೂ ಹೆಚ್ಚಾಗಿ ವ್ಯಾಪಿಸಲ್ಪಡುವದೋ ಅದು ಕರ್ಮವು ಎಂದು ವ್ಯಾಕರಣದಲ್ಲಿ ಹೇಳಿರುತ್ತದೆ. ತಿಳಿಯಲ್ಪಡತಕ್ಕ ವಿಷಯವನ್ನೇ ಇಲ್ಲಿ ವಿದಿತವೆಂದಿದೆ ಎಂದರ್ಥ.

4. ವಿದಿತವೆಂಬ ಮಾತಿನಲ್ಲಿ ನಮ್ಮಲ್ಲಿ ಯಾರಾದರೊಬ್ಬರಿಗೆ ತಿಳಿದಿರುವದು ಮಾತ್ರವೇ ಅಲ್ಲದೆ ತಿಳಿಯಬಹುದಾದ ಸ್ವರೂಪವುಳ್ಳದ್ದನ್ನೂ ಸೇರಿಸಿದೆ ಎಂದು ಅಭಿಪ್ರಾಯ. ಹೊರಗೆ ನಾಮರೂಪಕರ್ಮವಾಗಿ ತೋರಿಕೊಳ್ಳುವ ಪ್ರಪಂಚವೆಲ್ಲವೂ ವ್ಯಾಕೃತ, ವಿದಿತ.

5. ವ್ಯಾಕೃತಕ್ಕೆ ಕಾರಣವಾಗಿ ಸೃಷ್ಟಿಗೆ ಪೂರ್ವದಲ್ಲಿತ್ತೆಂದು ನಾವು ತಪ್ಪುತಿಳಿವಳಿಕೆಯಿಂದ ಕಲ್ಪಿಸುವ ಬೀಜವು ಅವ್ಯಾಕೃತ, ಅವಿದಿತ. ಸೂ. ಭಾ. ೨-೧-೧೪; ಬೃ. ಭಾ. ೧-೪-೭.

ಏಕೆಂದರೆ ಯಾವದಕ್ಕಿಂತ ಯಾವದು ಮೇಲೆ ಇರುವದೋ ಅದು ಅದಕ್ಕಿಂತಲೂ ಬೇರೆಯೇ ಎಂಬುದು ಪ್ರಸಿದ್ಧವಾಗಿರುತ್ತದೆ.

(ಭಾಷ್ಯ)

೨೮. ಯದ್ವಿದಿತಂ ತದಲ್ಪಂ ಮರ್ತ್ಯಂ ದುಃಖಾತ್ಮಕಂ ಚ ಇತಿ ಹೇಯಮ್ ತಸ್ಮಾತ್ ವಿದಿತಾದನ್ಯತ್ ಬ್ರಹ್ಮ ಇತ್ಯುಕ್ತೇ ತ್ವಹೇಯತ್ವಮ್ ಉಕ್ತಂ ಸ್ಯಾತ್ । ತಥಾ "ಅವಿದಿತಾತ್ ಅಧಿ" ಇತ್ಯುಕ್ತೇ ಅನುಪಾದೇಯತ್ವಮ್ ಉಕ್ತಂ ಸ್ಯಾತ್ । ಕಾರ್ಯಾರ್ಥಂ ಹಿ ಕಾರಣಮನ್ಯತ್ ಅನ್ಯೇನ ಉಪಾದೀಯತೇ । ಅತಶ್ಚ ನ ವೇದಿತುಃ ಅನ್ಯಸ್ಮೈ ಪ್ರಯೋಜನಾಯ ಅನ್ಯತ್ ಉಪಾದೇಯಂ ಭವತೀತಿ । ಏವಂ ವಿದಿತಾವಿದಿತಾಭ್ಯಾಮ್ ಅನ್ಯತ್ ಇತಿ ಹೇಯೋಪಾದೇಯಪ್ರತಿಷೇಧೇನ ಸ್ವಾತ್ಮನೋ ಽನನ್ಯತ್ವಾತ್ ಬ್ರಹ್ಮವಿಷಯಾ ಜಿಜ್ಞಾಸಾ ಶಿಷ್ಯಸ್ಯ ನಿವರ್ತಿತಾ ಸ್ಯಾತ್ । ನ ಹ್ಯನ್ಯಸ್ಯ ಸ್ವಾತ್ಮನೋ ವಿದಿತಾವಿದಿತಾಭ್ಯಾಮ್ ಅನ್ಯತ್ವಂ ವಸ್ತುನಃ ಸಮ್ಭವತೀತಿ ಆತ್ಮಾ ಬ್ರಹ್ಮ ಇತ್ಯೇಷ ವಾಕ್ಯಾರ್ಥಃ । "ಅಯಮಾತ್ಮಾ ಬ್ರಹ್ಮ" (ಬೃ. ೪-೪-೫) "ಯ ಆತ್ಮಾ ಅಪಹತಪಾಪ್ಮಾ" (ಛಾ. ೮-೭-೧), "ಯತ್ ಸಾಕ್ಷಾದಪರೋಕ್ಷಾದ್ ಬ್ರಹ್ಮ ....ಯ ಆತ್ಮಾ ಸರ್ವಾನ್ತರಃ" (ಬೃ. ೩-೪-೧) ಇತ್ಯಾದಿಶ್ರುತ್ಯನ್ತರೇಭ್ಯಶ್ಚೇತಿ ॥

(ಭಾಷ್ಯಾರ್ಥ)

ಯಾವದು ತಿಳಿಯಲ್ಪಡತಕ್ಕದ್ದಾಗಿರುವದೋ ಅದು ಅಲ್ಪವೂ ಮರ್ತ್ಯವೂ[1] ದುಃಖರೂಪವೂ ಆಗಿರುವದರಿಂದ ಬಿಡತಕ್ಕದ್ದಾಗಿರುವದು. ಆದ್ದರಿಂದ ತಿಳಿಯಲ್ಪಡತಕ್ಕದ್ದಕ್ಕಿಂತಲೂ ಬ್ರಹ್ಮವು ಬೇರೆ ಎಂದದ್ದರಿಂದ (ಅದು) ಬಿಡತಕ್ಕದ್ದಲ್ಲವೆಂದು ಹೇಳಿದಂತಾಗುವದು. ಇದರಂತೆ ತಿಳಿಯಲ್ಪಡಲಾರದ್ದಕ್ಕಿಂತ ಬೇರೆ ಎಂದದ್ದರಿಂದ ಅದು ತೆಗೆದುಕೊಳ್ಳತಕ್ಕದ್ದೂ ಅಲ್ಲವೆಂದು ಹೇಳಿದಂತಾಗುವದು. ಏಕೆಂದರೆ (ಯಾವದಾದರೊಂದು) ಕಾರ್ಯಕ್ಕಾಗಿ (ಅದರ) ಕಾರಣವಾದ ಬೇರೆ ಒಂದನ್ನು (ಅವೆರಡಕ್ಕಿಂತ) ಬೇರೆಯಾದ(ವನೊಬ್ಬನು)[2] ತಗೆದುಕೊಳ್ಳುತ್ತಾನೆ. ಆದ್ದರಿಂದ (ಬ್ರಹ್ಮವು) ತಿಳಿಯುವಾತನಿಗಿಂತ ಬೇರೆಯಾದ ಪ್ರಯೋಜನಕ್ಕಾಗಿ ತೆಗೆದುಕೊಳ್ಳಬೇಕಾಗಿರುವ ಬೇರೆ

---

1. ಅವಿದ್ಯೆಯ ಕಾಲದಲ್ಲಿ ಮಾತ್ರವಿರುವದಾದ್ದರಿಂದ ಅದು ಪರಿಚ್ಛಿನ್ನವಾಗಿರುವದರಿಂದಲೇ ನಾಶವಾಗತಕ್ಕದ್ದು. ಛಾ. ಭಾ. ೭-೨೪-೧. ವ್ಯಾಕೃತವೂ ಅವ್ಯಾಕೃತವೂ ಅವಿದ್ಯಾಕಲ್ಪಿತವಾಗಿರುವದಾದ್ದರಿಂದ ಬ್ರಹ್ಮಸ್ವರೂಪಕ್ಕೆ ಸೇರಿದ್ದಲ್ಲವೆಂದು ಭಾವ. ಸೂ. ಭಾ. ೨-೧-೨೭, ೧-೪-೩.

2. ಕಾರ್ಯವು ಪ್ರಯೋಜನವು, ಕಾರಣವೆಂಬುದು ಸಾಧನವು; ಕಾರಣವನ್ನು ತೆಗೆದುಕೊಂಡು ಕಾರ್ಯವನ್ನು ಪಡೆಯುವವನು ಕಾರ್ಯಕಾರಣಗಳೆರಡಕ್ಕಿಂತ ಬೇರೆಯಾಗಿರುತ್ತಾನೆ.

ಒಂದು ವಸ್ತುವಲ್ಲ[1] ಎಂದು (ಹೇಳಿದಂತೆ ಆಯಿತು). ಹೀಗೆ (ಬ್ರಹ್ಮವು) ತಿಳಿಂ
ಲ್ಪಡತಕ್ಕದ್ದು, ತಿಳಿಯಲ್ಪಡಲಾರದ್ದು–ಈ ಎರಡಕ್ಕಿಂತಲೂ ಬೇರೆಯೇ ಎಂಬ
ಬಿಡತಕ್ಕದ್ದೂ ತೆಗೆದುಕೊಳ್ಳದ್ದೂ ಅಲ್ಲವೆಂದದ್ದರಿಂದ[2] (ಅದು) ತನಗಿಂತಲೂ ಬೇ
ಯಲ್ಲವಾಗುವದರಿಂದ ಶಿಷ್ಯನಿಗೆ ಇರುವ ಬ್ರಹ್ಮವಿಷಯವಾದ ಜಿಜ್ಞಾಸೆಯನ್ನು ತೊ
ಗಿಸಿದಂತೆ[3] ಆಗುತ್ತದೆ. ತನಗಿಂತ ಬೇರೆಯಾದ ವಸ್ತುವು[4] ತಿಳಿಯಲ್ಪಡತಕ್ಕದ
ತಿಳಿಯಲ್ಪಡದೆ ಇರುವದು–(ಈ) ಎರಡಕ್ಕಿಂತಲೂ ಬೇರೆಯಾಗಿರುವದು ಸಂಭವಿಸು
ದಿಲ್ಲವಾದ್ದರಿಂದ (ತನ್ನ) ಆತ್ಮನೇ ಬ್ರಹ್ಮವು ಎಂಬುದು (ಒಟ್ಟು) ವಾಕ್ಯದ ಅರ್ಥ.
"(ಈ) ಆತ್ಮನೇ ಬ್ರಹ್ಮವು" (ಬೃ. ೪-೪-೫), "ಯಾವನು ಪಾಪದ ಹೊಡೆತವಿಲ್ಲ
... .ಆತ್ಮನೋ" ಛಾ. ೮-೭-೧), "ಯಾವದು ನೇರಾಗಿ ಅಪರೋಕ್ಷವಾಗಿರು
ಬ್ರಹ್ಮವೋ, ಯಾವನು ಎಲ್ಲಕ್ಕಿಂತಲೂ ಒಳಗಿರುವ ಆತ್ಮನೋ" (ಬೃ. ೩-೪-೧)
ಮುಂತಾದ ಬೇರೆಯ ಶ್ರುತಿಗಳಿಂದಲೂ (ಈ ಅಭಿಪ್ರಾಯವು ಸಿದ್ಧಿಸುತ್ತದೆ.

(ಭಾಷ್ಯ)

೯. ಏವಂ ಸರ್ವಾತ್ಮನಃ ಸರ್ವವಿಶೇಷರಹಿತಸ್ಯ ಚಿನ್ಮಾತ್ರಜ್ಯೋತಿಷೋ
ಬ್ರಹ್ಮತ್ವಪ್ರತಿಪಾದಕಸ್ಯ ವಾಕ್ಯಸ್ಯ ಆಚಾರ್ಯೋಪದೇಶ ಪರಮ್ಪರಯಾ ಪ್ರಾಪ್ತಃ
ಮಾಹ—ಇತಿ ಶುಶ್ರುಮೇತ್ಯಾದಿ । ಬ್ರಹ್ಮೈವಮ್ ಆಚಾರ್ಯೋಪದೇಶಪರಮ್ಪ
ಯೈವಾಧಿಗನ್ತವ್ಯಮ್ ನ ತರ್ಕತಃ ಪ್ರವಚನಮೇಧಾಬಹುಶ್ರುತತಪೋಯಜ್ಞಾ
ಭ್ಯಶ್ಚ । ಇತಿ ಏವಮ್ ಶುಶ್ರುಮ ವಯಂ ಪೂರ್ವೇಷಾಮ್ ಆಚಾರ್ಯಾಣಾಂ ವಃ

---

1. ಕಾರಣವಲ್ಲ. "ಉಪಾದೇಯಂ ನ ಭವತಿ" ಎಂಬ (ಮೈ॥) ಪಾಠಕ್ಕಿಂತ ನಮ್ಮ
ಪಾಠವೇ ಮೇಲು.

2. ಬೇಕಾದದ್ದು ಸಾಧನವು; ಬೇಡವಾದದ್ದನ್ನು ತಪ್ಪಿಸಿಕೊಳ್ಳುವದಕ್ಕಾಗಿ ಅದಕ
ಬೇಕಾದ ಸಾಧನವನ್ನು ತೆಗೆದುಕೊಳ್ಳುತ್ತಾರೆ. ಬ್ರಹ್ಮವು ಬೇಕು, ಬೇಡ–ಈ ಎರಡು
ಅಲ್ಲ.

3. ತನಗಿಂತ ಬೇರೆಯಾದದ್ದನ್ನೇ ತಿಳಿಯಬೇಕಾಗಿರುವದು, ತನ್ನನ್ನು ತಾನು ತಿಳಿಯ
ಬೇಕೆಂಬ ಇಚ್ಛೆಯಿಂದ ಯಾರೂ ವಿಚಾರವನ್ನು ಮಾಡುವದಕ್ಕೆ ತೊಡಗುವದಿಲ್ಲ. ಆದ್ದರಿಂ
ಬ್ರಹ್ಮವು ತಿಳಿಯಬೇಕಾಗಿರುವ ವಿಷಯವಲ್ಲ, ತಿಳಿಯುವಾತನ ಸ್ವರೂಪವೇ ಎಂದು ತಿಳಿ
ವಿಚಾರಪರಿಸಮಾಪ್ತಿಯನ್ನು ಮಾಡಿದಂತೆ ಆಯಿತು ಎಂದರ್ಥ. "ಸ್ವಾತ್ಮನೋಽನ್ಯಬ್ರಹ್ಮ
ವಿಷಯಾ" ಎಂಬ (ಆ॥) ಪಾಠದಲ್ಲಿ "ತನಗಿಂತ ಬೇರೆಯಾದ ಬ್ರಹ್ಮವನ್ನರಿಯಬೇಕೆಂಬ
ಇಚ್ಛೆಯನ್ನು ತೊಲಗಿಸಿದಂತೆ ಆಯಿತು" ಎಂದು ಕನ್ನಡಿಸಬೇಕು.

4. "ವಸ್ತುತಃ" (ನಿಜವಾಗಿ) ಎಂಬ (ಹಿ॥) ಪಾಠಕ್ಕಿಂತ ಈಗಿನ ಪಾಠವೇ ಉತ್ತಮ
ವೆಂದು ತೋರುತ್ತದೆ.

ನಮ್ । ಯೇ ಆಚಾರ್ಯಾಃ ನಃ ಅಸ್ಮಭ್ಯಂ ತತ್ ಬ್ರಹ್ಮ ವ್ಯಾಚಚಕ್ಷಿರೇ ವ್ಯಾಖ್ಯಾತವನ್ತಃ ವಿಸ್ಪಷ್ಟಂ ಕಥಿತವನ್ತಃ ತೇಷಾಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಹೀಗೆ ಯಾವ ವಿಶೇಷವೂ ಇಲ್ಲದವನೂ ಬರಿಯ ಚೈತನ್ಯದ ಜ್ಯೋತಿಯೂ ಆಗಿರುವ ಎಲ್ಲರ ಆತ್ಮನೇ ಬ್ರಹ್ಮವೆಂದು ಹೇಳುವ ಈ ವಾಕ್ಯವು[1] **ಆಚಾರ್ಯರುಗಳ ಉಪದೇಶಪರಂಪರೆ**ಯಿಂದ ಬಂದದ್ದೆಂದು "ಎಂದು ಕೇಳಿರುತ್ತೇವೆ" ಮುಂತಾದ (ವಾಕ್ಯದಲ್ಲಿ) ಹೇಳಿರುತ್ತದೆ. ಬ್ರಹ್ಮವನ್ನು ಹೀಗೆ ಆಚಾರ್ಯರುಗಳ ಉಪದೇಶಪರಂಪರೆಯೆಂದಲೇ[2] ತಿಳಿದುಕೊಳ್ಳಬಹುದೇ ಹೊರತು (ಬರಿಯ) ತರ್ಕದಿಂದಲಾಗಲಿ[3] (ಬರಿಯ) ಅಧ್ಯಯನ, ಗ್ರಂಥಾರ್ಥಧಾರಣಶಕ್ತಿ, ಬಹಳವಾಗಿ ಮಾಡಿದ ಶ್ರವಣ, ತಪಸ್ಸು, ಯಜ್ಞ[4] – ಮುಂತಾದವುಗಳಿಂದಲಾಗಲಿ (ತಿಳಿದುಕೊಳ್ಳುವದು) ಆಗಲಾರದು ಎಂದು ಹೀಗೆ ಹಿಂದಿನ ಆಚಾರ್ಯರುಗಳು ಹೇಳಿದ್ದನ್ನು ಕೇಳಿರುತ್ತೇವೆ. ಯಾವ ಆಚಾರ್ಯರು ನಮಗೆ ಆ ಬ್ರಹ್ಮವನ್ನು ವಿವರಿಸಿ ಸ್ಪಷ್ಟವಾಗಿ ಹೇಳಿದರೋ ಅವರ (ವಚನವನ್ನು ಕೇಳಿರುತ್ತೇವೆ) ಎಂದರ್ಥ.[5] ॥ ೪ ॥

ಉಪಾಸ್ಯರೂಪವು ಬ್ರಹ್ಮದ ಪರಮಾರ್ಥರೂಪವಲ್ಲ

(ಭಾಷ್ಯ)

೩೦. "ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ" ಇತ್ಯನೇನ ವಾಕ್ಯೇನ ಆತ್ಮಾ ಬ್ರಹ್ಮ–ಇತಿ ಪ್ರತಿಪಾದಿತೇ ಶ್ರೋತುಃ ಆಶಙ್ಕಾ ಜಾತಾ—"ಕಥಂ ನು[6] ಆತ್ಮಾ ಬ್ರಹ್ಮ? ಆತ್ಮಾ ಹಿ ನಾಮ ಅಧಿಕೃತಃ ಕರ್ಮಣಿ ಉಪಾಸನೇ ಚ ಸಂಸಾರೀ ಕರ್ಮ ಉಪಾಸನಂ ವಾ ಸಾಧನಮ್ ಅನುಷ್ಠಾಯ ಬ್ರಹ್ಮಾದಿದೇವಾ ಸ್ವರ್ಗಂ ವಾ ಪ್ರಾಪ್ತುಮ್ ಇಚ್ಛತಿ । ತತ್ ತಸ್ಮಾದನ್ಯ ಉವಾಸ್ಯೋ **ವಿಷ್ಣುಃ, ಈಶ್ವರಃ, ಇನ್ದ್ರಃ, ಪ್ರಾಣೋ** ವಾ ಬ್ರಹ್ಮ ಭವಿತುಮ್ ಅರ್ಹತಿ । ನತ್ವಾತ್ಮಾ ಲೋಕ

---

1. 'ವಾಕ್ಯಾರ್ಥಸ್ಯ' ಎಂದು ಅನೇಕ ಕೋತಗಳಲ್ಲಿವೆ. ಆದರೆ 'ವಾಕ್ಯಸ್ಯ' ಎಂಬ (ಮೈ॥) ಪಾಠವೇ ಉತ್ತಮ.

2. ಕ. ಭಾ. ೧-೨-೮; ಗೀ. ೪-೩೪.

3. ಕ. ೧-೨-೯.

4. ಮು. ೩-೨-೩, ೪; ಗೀ. ೧೧-೫೩. ಇಲ್ಲಿ ಬರಿಯ ತರ್ಕ, ಅಧ್ಯಯನ–ಮುಂತಾದವುಗಳಿಂದ ತಿಳಿಯುವದಕ್ಕೆ ಆಗಲಾರದು ಎಂದು ಹೇಳಿರುವದು ಅವುಗಳು ಆಚಾರ್ಯನ ಉಪದೇಶವಿಲ್ಲದೆ ಪ್ರಯೋಜನಕಾರಿಯಾಗಲಾರವೆಂಬ ಅಭಿಪ್ರಾಯದಿಂದ.

5. ಅವರ ವಚನದಿಂದಲೇ ನಮಗೆ ಆತ್ಮಜ್ಞಾನವಾಗಿದೆ ಎಂದಭಿಪ್ರಾಯ.

6 (ವಾ॥) ಪಾಠ.

ಪ್ರತ್ಯಯವಿರೋಧಾತ್ । ಯಥಾ ಅನ್ಯೇ ತಾರ್ಕಿಕಾ ಈಶ್ವರಾದನ್ಯ ಆತ್ಮಾ ಇತ್ಯಾಚಕ್ಷತೇ, ತಥಾ ಕರ್ಮಿಣಃ "ಅಮುಂ ಯಜಾಮುಂ ಯಜ" (ಬೃ. ೧-೪-೬) ಇತ್ಯನ್ಯಾ ಏವ ದೇವತಾ ಉಪಾಸತೇ । ತಸ್ಮಾತ್ ಯುಕ್ತಂ ಯದ್ ವಿದಿತಮ್ ಉಪಾಸ್ಯಂ ತದ್ ಬ್ರಹ್ಮ ಭವೇತ್, ತತೋಽನ್ಯ ಉಪಾಸಕ ಇತಿ । ತಾಮ್ ಏತಾಮ್ ಆಶಙ್ಕಾಂ ಶಿಷ್ಯಲಿಙ್ಗೇನ ಉಪಲಕ್ಷ್ಯ ತದ್ವಾಕ್ಯಾದ್ವಾ ಆಹ—

(ಭಾಷ್ಯಾರ್ಥ)

"ಅದು ತಿಳಿಯಲ್ಪಡತಕ್ಕದ್ದಕ್ಕಿಂತಲೂ ಬೇರೆಯೇ, ಮತ್ತು ತಿಳಿಯಲ್ಪಡದೆ ಇರುವದಕ್ಕಿಂತಲೂ ಬೇರೆಯೇ" (೪) ಎಂಬೀ (ವಾಕ್ಯ)ದಿಂದ (ತನ್ನ) ಆತ್ಮನೇ ಬ್ರಹ್ಮವು ಎಂದು ಹೇಳಿದ್ದರಿಂದ ಕೇಳುವ (ಶಿಷ್ಯ)ನಿಗೆ (ಈ) ಆಶಂಕೆಯುಂಟಾಯಿತು :— "ಆತ್ಮನೇ ಬ್ರಹ್ಮನೆಂಬುದು ಹೇಗೆ (ಸರಿಯಾದೀತು)? ಆತ್ಮನೆಂದರೆ ಕರ್ಮಕ್ಕೂ ಉಪಾಸನೆಗೂ ಅಧಿಕಾರಿಯಾಗಿರುವ ಸಂಸಾರಿಯು, ಸಾಧನವಾದ ಕರ್ಮವನ್ನೋ ಉಪಾಸನೆಯನ್ನೋ ಮಾಡಿ **ಬ್ರಹ್ಮನೇ** ಮೊದಲಾದ ದೇವತೆಗಳನ್ನೋ **ಸ್ವರ್ಗ**ವನ್ನೋ ಪಡೆಯುವದಕ್ಕೆ ಇಚ್ಛಿಸುತ್ತಾನೆ ಆದ್ದರಿಂದ ಬ್ರಹ್ಮವು ಅವನಿಗಿಂತ ಬೇರೆಯಾಗಿದ್ದು ಉಪಾಸನೆಮಾಡಲ್ಪಡತಕ್ಕ **ವಿಷ್ಣುವೋ ಈಶ್ವರನೋ ಇಂದ್ರನೋ ಪ್ರಾಣನೋ** ಆಗಿರಬಹುದೇ ಹೊರತು (ಅವನ) ಆತ್ಮನೇ ಆಗಿರಲಾರದು. ಏಕೆಂದರೆ (ಆತ್ಮನೇ ಬ್ರಹ್ಮವೆಂಬುದು) ಲೋಕದ ತಿಳಿವಳಿಕೆಗೆ ವಿರುದ್ಧವಾಗಿರುತ್ತದೆ (ವೇದಾಂತಿಗಳಿಗಿಂತ) ಬೇರೆಯಾಗಿರುವ **ತಾರ್ಕಿಕರು**[1] ಆತ್ಮನು ಈಶ್ವರನಿಗಿಂತ ಬೇರೆ ಎಂದು ಹೇಳುತ್ತಿರುವರೋ ಹಾಗೆಯೇ **ಕರ್ಮಿಗಳೂ**[2]" ಈ (ದೇವತೆಗೆ) ಯಾಗ ಮಾಡು, ಈ (ದೇವತೆಗೆ) ಯಾಗಮಾಡು" (ಬೃ. ೧-೪-೬) ಎಂದು (ಆತ್ಮನಿಗಿಂತಲೂ) ಬೇರೆಯಾದ ದೇವತೆಗಳನ್ನೇ ಉಪಾಸನೆಮಾಡುತ್ತಾರೆ. ಆದ್ದರಿಂದ ಯಾವದು ತಿಳಿಯಲ್ಪಡತಕ್ಕದ್ದಾಗಿ ಉಪಾಸ್ಯವಾಗಿರುವದೋ ಅದೇ ಬ್ರಹ್ಮವಾಗಿರಬೇಕು, (ಅದನ್ನು) ಉಪಾಸನೆಮಾಡುವ (ಆತ್ಮ)ನು ಅದಕ್ಕಿಂತ ಬೇರೆಯಾಗಿರಬೇಕು." ಹೀಗೆಂಬ ಈ ಆಶಂಕೆಯನ್ನ ಶಿಷ್ಯನ (ಮುಖ) ಚಿಹ್ನೆಯಿಂದಲೋ ಅಥವಾ ಅವನು ಹೇಳಿದ್ದರಿಂದಲೋ ಕಂಡುಕೊಂಡು (ಗುರು) ಹೇಳುತ್ತಾನೆ :—

---

1. ನೈಯಾಯಿಕರು, ವೈಶೇಷಿಕರು, ಸೇಶ್ವರಸಾಂಖ್ಯರು—ಮುಂತಾದವರು.

2. ಸೇಶ್ವರಮೀಮಾಂಸಕರು. ನಿರೀಶ್ವರಮೀಮಾಂಸಕರ ಮತದಲ್ಲಿ ಚೇತನರೂಪವಾದ ದೇವತೆಯೂ ಇಲ್ಲ. ಜೈ. ಸೂ ಶಾ. ಭಾ. ೯-೧-೯ ನೋಡಿರಿ. ಇಲ್ಲಿ ಜೀವೇಶ್ವರಭೇದವನ್ನು ಹೇಳುವ ವೇದಾಂತಿಗಳನ್ನು ಉದಾಹರಿಸಿಲ್ಲವಾದ್ದರಿಂದ ಆಚಾರ್ಯರ ಕಾಲಕ್ಕೆ ಅಂಥ ವೇದಾಂತಿಗಳು ಇರಲಿಲ್ಲವೆಂದು ತೋರುತ್ತದೆ.

ಯದ್ ವಾಚಾನಭ್ಯುದಿತಂ
ಯೇನ ವಾಗಭ್ಯುದ್ಯತೇ ।
ತದೇವ ಬ್ರಹ್ಮತ್ವಂ ವಿದ್ಧಿ
ನೇದಂ ಯದಿದಮುಪಾಸತೇ ॥ ೫ ॥

೫. ಯಾವದು ವಾಕ್ಯಿನಿಂದ ಹೇಳಲ್ಪಡುವದಿಲ್ಲವೋ ಯಾವದರಿಂದ ವಾಕ್ಯು ತಿಳಿಸಲ್ಪಡುವದೋ ಅದನ್ನೇ ಬ್ರಹ್ಮವೆಂದು ನೀನು ತಿಳಿ. ಯಾವದನ್ನು ಇದೆಂದು ಉಪಾಸನೆಮಾಡುತ್ತಾರೋ ಇದಲ್ಲ.

(ಭಾಷ್ಯ)

೫೧. ನೈವಂ ಶಙ್ಕಿಷ್ಠಾಃ । ಯತ್ ಚೈತನ್ಯಮಾತ್ರಸತ್ತಾಕಮ್ ವಾಚಾ ವಾಕ್ ಇತಿ ಜಿಹ್ವಾಮೂಲಾದಿಷು ಅಷ್ಟಸು ಸ್ಥಾನೇಷು ವಿಷಕ್ತಮ್ ಆಗ್ನೇಯಂ ವರ್ಣಾನಾಮ್ ಅಭಿವ್ಯಞ್ಜಕಂ ಕರಣಮ್ । ವರ್ಣಾಶ್ಚ ಅರ್ಥಸಙ್ಕೇತಪರಿಚ್ಛಿನ್ನಾ ಏತಾವನ್ತ ಏವಂಕ್ರಮಪ್ರಯುಕ್ತಾ ಇತ್ಯೇವಂ ತದಭಿವ್ಯಙ್ಗ್ಯಃ ಶಬ್ದಃ ಪದಂ ವಾಕ್ ಇತ್ಯುಚ್ಯತೇ । "ಅಕಾರೋ ವೈ ಸರ್ವಾ ವಾಕ್ ಸೈಷಾ ಸ್ಪರ್ಶಾನ್ತಸ್ಥೋಷ್ಮಭಿರ್ವ್ಯಜ್ಯಮಾನಾ ಬಹ್ವೀ ನಾನಾರೂಪಾ ಭವತಿ" (ಐ. ಆ. ೨-೩-೬) ಇತಿ ಶ್ರುತೇಃ । ಮಿತಮ್ ಅಮಿತಂ ಸ್ವರಃ ಸತ್ಯಾನೃತೇ ಏವ ವಿಕಾರೋ ಯಸ್ಯಾಃ ತಯಾ ವಾಚಾ ಪದತ್ವೇನ ಪರಿಚ್ಛಿನ್ನಯಾ ಕರಣಗುಣವತ್ಯಾ ಅನಭ್ಯುದಿತಮ್ ಅಪ್ರಕಾಶಿತಮ್, ಅನಭ್ಯುಕ್ತಮ್ । ಯೇನ ಬ್ರಹ್ಮಣಾ ವಿವಕ್ಷಿತೇ ಅರ್ಥೇ ಸಕರಣಾ ವಾಕ್ ಅಭ್ಯುದ್ಯತೇ ಚೈತನ್ಯಜ್ಯೋತಿಷಾ ಪ್ರಕಾಶ್ಯತೇ । ಪ್ರಯುಜ್ಯತೇ ಇತ್ಯೇತತ್ । "ಯದ್ವಾಚೋ ಹ ವಾಕ್" (೧-೨) ಇತ್ಯುಕ್ತಮ್ । "ವರ್ದ ವಾಕ್" (ಬೃ ೧-೪-೭) "ಯೋ ವಾಚಮನ್ತರೋಯಮಯತಿ" (ಬೃ. ೩-೭-೧೦) ಇತ್ಯಾದಿ ಚ **ವಾಜಸನೇಯಕೇ** । "ಯಾ ವಾಕ್ ಪುರುಷೇಷು ಸಾ ಘೋಷೇಷು ಪ್ರತಿಷ್ಠಿತಾ ಕಶ್ಚಿತ್ ತಾಂ ವೇದ ಬ್ರಾಹ್ಮಣಃ" ಇತಿ ಪ್ರಶ್ನಮ್ ಉತ್ಪಾದ್ಯ ಪ್ರತಿವಚನಮುಕ್ತಮ್ "ಸಾ ವಾಗ್ ಯಯಾ ಸ್ವಪ್ನೇ ಭಾಷತೇ" (?) ಇತಿ । ಸಾ ಹಿ ವಕ್ತುರ್ವಕ್ತೃಃ ನಿತ್ಯಾ ವಾಕ್ ಚೈತನ್ಯಜ್ಯೋತಿಃಸ್ವರೂಪಾ । "ನ ಹಿ ವಕ್ತುರ್ವಕ್ತೇರ್ ವಿಪರಿಲೋಪೋ ವಿದ್ಯತೇ" (ಬೃ. ೪-೩-೨೬) ಇತಿ ಶ್ರುತೇಃ ॥

(ಭಾಷ್ಯಾರ್ಥ)

ಹೀಗೆಂದು ಶಂಕಿಸಬೇಡ ಚೈತನ್ಯಮಾತ್ರವಾದ ಇರವಿನ[1] ಯಾವದು ವಾಕ್ಕಿನಿಂದ—ವಾಕ್ಕು ಎಂದರೆ ನಾಲಗೆಯ ಬುಡವೇ ಮುಂತಾದ ಎಂಟು ಸ್ಥಾನಗ

1. ಬ್ರಹ್ಮಸ್ವರೂಪವೇ ವಾಕ್ಯಿಗೆ ನಿಜವಾದ ಇರವು.

ಳಲ್ಲಿ[1] ಸೇರಿಕೊಂಡು ವರ್ಣಗಳನ್ನು ತೋರುವಂತೆ ಮಾಡುತ್ತಾ[2] ಇರುವ ಅಗ್ನಿ ದೇವತಾಕವಾದ[3] ಕರಣವು. ಮತ್ತು ಅರ್ಧಸಂಕೇತದಿಂದ[4] ಗೊತ್ತಾಗಿ ಇಂತಿಷ್ಟು ವರ್ಣಗಳು ಈ ಕ್ರಮದಲ್ಲಿರಬೇಕು–ಎಂಬೀ ಪರಿಯಾಗಿ[5] ಆ ಕರಣದಿಂದ ವ್ಯಕ್ತವಾಗುವ ಶಬ್ದವಾದ ಪದವೂ ವಾಕ್ಯ ಎನಿಸುತ್ತದೆ.'' ಅಕಾರವೇ ಎಲ್ಲಾ ವಾಕ್ಯ, ಆ ಈ (ವಾಕ್ಯ) ಸ್ಪರ್ಶಗಳು[6] ಅಂತಸ್ಥಗಳು, ಊಷ್ಮಗಳು–ಇವುಗಳಿಂದ ವ್ಯಕ್ತವಾಗಿ ಬಹುವಾಗಿಯೂ ನಾನಾರೂಪವಾಗಿಯೂ ಆಗುತ್ತದೆ.'' (ಐ. ಆ. ೨-೩-೬) ಎಂಬ **ಶ್ರುತಿಯು** ಇದಕ್ಕೆ ಪ್ರಮಾಣವು. ಮಿತ,[7] ಅಮಿತ, ಸ್ವರ, ಸತ್ಯ, ಅನೃತ–ಎಂಬುದು ಯಾವದರ ವಿಕಾರವೋ, ಆ ಪದರೂಪದಿಂದ ಪರಿಚ್ಛಿನ್ನವಾದ ಕರಣಗುಣದಿಂದೊಡಗೂಡಿರುವ[8] ವಾಕ್ಯಿನಿಂದ (ಯಾವ ಬ್ರಹ್ಮವು) ಹೇಳಲ್ಪಡುವದಿಲ್ಲವೋ, ಬೆಳಗಲ್ಪಡುವದಿಲ್ಲವೋ, ಇಂಥದ್ದೆಂದು ತಿಳಿಸಲ್ಪಡುವದಿಲ್ಲವೋ; ಯಾವ ಬ್ರಹ್ಮದಿಂದ ಹೇಳಬೇಕೆಂದೆಳಸಿರುವ ವಿಷಯದಲ್ಲಿ ಕರಣಸಹಿತವಾದ ವಾಕ್ಯು ಹೇಳಲ್ಪಡುವದೋ ಎಂದರೆ

---

1. ಎದೆ, ಕೊರಳು, ತಲೆ, ನಾಲಗೆಯ ಬುಡ, ಹಲ್ಲು, ಮೂಗು, ತುಟಿ, ದವಡೆ—ಎಂಬ ಎಂಟು (ಟೀ॥). ಭಾ. ೭-೨-೧ ನೋಡಿ ಈ ಎರಡು ಕಡೆಯಲ್ಲಿಯೂ ಜಿಹ್ವಾಮೂಲಾದಿ ಎಂದೇ ಇದೆ. ಅದಕ್ಕೆ ಮೂಲವು ಬೇರೆ ಯಾವದೋ ಒಂದು ವಾಕ್ಯವಾಗಿರಬೇಕೆಂದು ತೋರುತ್ತದೆ.

2. ''ತದಭಿವ್ಯಂಗ್ಯ'' ಎಂದರೆ ವರ್ಣಗಳಿಂದ ತೋರುವ ಸ್ಫೋಟವೆಂದು (ಟೀ॥) ವ್ಯಾಖ್ಯಾನಮಾಡಿರುವದು ಈ ಭಾಷ್ಯಕ್ಕೂ ಸೂ. ಭಾ. ೧-೩-೨೮ಕ್ಕೂ ವಿರುದ್ಧವಾಗಿದೆ.

3 ಅಗ್ನಿಯೇ ವಾಕ್ಯಿಗೆ ದೇವತೆಯೆಂದು ವೈದಿಕಪ್ರಸಿದ್ಧಿ.

4. ಈ ಮಾತಿನ ಅರ್ಥವು ಸ್ಪಷ್ಟವಾಗಿರುವದಿಲ್ಲ.

5. ಇಂತಿಷ್ಟು ವರ್ಣಗಳು ಈ ಕ್ರಮದಲ್ಲಿದ್ದರೆ ಇಂಥ ವಸ್ತುವನ್ನು ಹೇಳುವ ಶಬ್ದವಾಗುವದು ಎಂಬ ನಿಯಮವಿದೆ.

6. ಸ್ಪರ್ಶಗಳು ಕಾದಿವರ್ಗೀಯವ್ಯಂಜನಗಳು, ಅಂತಸ್ಥಗಳೆಂದರೆ ಯ ರ ಲ ವಗಳು, ಊಷ್ಮಗಳೆಂದರೆ ಶ ಷ ಸ ಹಗಳು (ಟೀ॥). ಇಲ್ಲಿ ಕೊಟ್ಟಿರುವ ಐತರೇಯಾರಣ್ಯಕಶ್ರುತಿಯಲ್ಲಿ ಸೈಷಾ ಸ್ಪರ್ಶೋಷ್ಮಭಿರ್ವ್ಯಜ್ಯಮಾನಾ ಎಂದಿಷ್ಟೇ ಇದೆ 'ಅನ್ತಸ್ಥ'' ಎಂಬ ಮಾತಿಲ್ಲ. ಇದೂ ಇರಬೇಕೆಂದು ಆಚಾರ್ಯರು ಅರ್ಥಕ್ಕಾಗಿ ಇಲ್ಲಿ ಬರೆದುಕೊಂಡಿರುವರೋ, ಬರೆದವರು ಸೇರಿಸಿರುವರೋ ತಿಳಿಯದು. ಸ್ಪರ್ಶಾದಿಗಳ ಸಂಬಂಧದಿಂದ ಅಕಾರರೂಪವಾದ ವಾಕ್ಯೇ ಬಹುವಾಗುವದು, ಆ ಅನೇಕ ವರ್ಣಗಳು ಒಂದಕ್ಕಿಂತ ಒಂದು ವಿಲಕ್ಷಣವಾಗಿರುವವು–ಎಂದು ಶ್ರುತಿಯ ತಾತ್ಪರ್ಯ.

7. ಮಿತವೆಂದರೆ ಪಾದಕ್ಕೆ ಇಷ್ಟು ಅಕ್ಷರಗಳೆಂದು ಗೊತ್ತಾಗಿರುವ ಋಕ್ಕು ಮುಂತಾದವು; ಅಮಿತವೆಂದರೆ ಅನಿಯತಾಕ್ಷರವುಳ್ಳ ಯಜುರಾದಿಗಳು; ಸಾಮವೂ ಸಾಮಸಂಧಿಯೂ ಸ್ವರವು; ಸತ್ಯವೆಂದರೆ ಓಂಕಾರವು; ಅನೃತವೆಂದರೆ ಇಲ್ಲವೆಂಬರ್ಥದ ನಕಾರವು. ಈ ಐದೂ ವಾಕ್ಯಿನ ವಿಕಾರವು. (ಐ ಆ. ೨-೩-೬)

8. ವಾಕ್ಯು ವರ್ಣಾತ್ಮಕವಾಗಿರುವದಲ್ಲದೆ ಧ್ವನ್ಯಾತ್ಮಕವಾಗಿಯೂ ಇರುತ್ತದೆ. ಕರಣದ ಗುಣವೆಂದರೆ ವಾಗಿಂದ್ರಿಯದ ವಿಷಯವಾಗಿರುವ ಶಬ್ದ; ವಾಕ್ಯು ಶಬ್ದಾತ್ಮಕವಾಗಿಯೇ ಇರುತ್ತದೆ.

ಚೈತನ್ಯದ ಬೆಳಕಿನಿಂದ ಬೆಳಗಲ್ಪಡುವದೋ, (ವ್ಯಾಪಾರಮಾಡುವಂತೆ) ಪ್ರೇರಿಸಲ್ಪಡುವದೋ[1] ಎಂದರ್ಥ. "(ಅದು) ವಾಕ್ಕಿಗೂ ವಾಕ್ಯಾಗಿರುವದರಿಂದ" (೧-೨) ಎಂದು ಹಿಂದೆಯೇ ಹೇಳಿರುತ್ತದೆ. "ಮಾತನಾಡುವಾಗ ವಾಕ್ಕಿನಿಸುವನು" (ಬೃ. ೧-೪-೭), "ಯಾವನು ವಾಕ್ಕನ್ನು ಒಳಗಿದ್ದುಕೊಂಡು ಆಳವಿನಲ್ಲಿಟ್ಟುಕೊಂಡಿರುವನೋ" (ಬೃ. ೩-೭-೧೭) ಎಂದು ಮುಂತಾಗಿ **ವಾಜಸನೇಯಕ**ದಲ್ಲಿಯೂ ಇರುತ್ತದೆ. "ಪುರುಷನಲ್ಲಿ ಯಾವ ವಾಕ್ಕಿರುವದೋ ಅದು ಘೋಷಗಳಲ್ಲಿ[2] ನಿಂತಿರುವದು, ಅದನ್ನು ಯಾವ ಬ್ರಾಹ್ಮಣನು ಅರಿತಿರುವನು?" ಎಂದು ಪ್ರಶ್ನೆಯನ್ನು ಹಾಕಿಕೊಂಡು "ಯಾವದರಿಂದ ಸ್ವಪ್ನದಲ್ಲಿ ಮಾತನಾಡುವನೋ ಅದೇ ವಾಕ್ಕು" (?)[3] ಎಂದು ಉತ್ತರವನ್ನು ಹೇಳಿರುತ್ತದೆ. ಏಕೆಂದರೆ ಮಾತನಾಡುವವನ ಆ ವಾಕ್ಕು[4] ಚೈತನ್ಯಜ್ಯೋತಿಯ ಸ್ವರೂಪವಾಗಿರುವದರಿಂದ ನಿತ್ಯವಾಗಿರುತ್ತದೆ. "ಮಾತನಾಡುವಾತನ ವಾಕ್ಕಿಗೆ ಲೋಪವೆಂಬುದು ಇಲ್ಲವೇ ಇಲ್ಲ" (ಬೃ. ೪-೩-೨೬) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು.

(ಭಾಷ್ಯ)

೩೨. ತದೇವ ಆತ್ಮಸ್ವರೂಪಂ ಬ್ರಹ್ಮ ನಿರತಿಶಯಂ ಭೂಮಾಖ್ಯಂ ಬೃಹತ್ತ್ವಾದ್ ಬ್ರಹ್ಮ ಇತಿ ವಿದ್ಧಿ ವಿಜಾನೀಹಿ ತ್ವಮ್। ಯೈ ರ್ವಾಗಾದ್ಯುಪಾಧಿಭಿಃ 'ವಾಚೋ ಹ ವಾಕ್' 'ಚಕ್ಷುಷಶ್ಚಕ್ಷುಃ' 'ಶ್ರೋತ್ರಸ್ಯ ಶ್ರೋತ್ರಮ್' 'ಮನಸೋ ಮನಃ' 'ಕರ್ತಾ' 'ಭೋಕ್ತಾ' 'ವಿಜ್ಞಾತಾ' 'ನಿಯನ್ತಾ' 'ಪ್ರಶಾಸಿತಾ' 'ವಿಜ್ಞಾನಮಾನನ್ದಂ ಬ್ರಹ್ಮ'–ಇತ್ಯೇವಮಾದಯಃ ಸಂವ್ಯವಹಾರಾ ಅಸಂವ್ಯವಹಾರ್ಯೇ ನಿರ್ವಿಶೇಷೇ ಪರೇ ಸಾಮ್ಯೇ ಬ್ರಹ್ಮಣಿ ಪ್ರವರ್ತನ್ತೇ ತಾನ್ ವ್ಯುದಸ್ಯ ಆತ್ಮಾನಮೇವ ನಿರ್ವಿಶೇಷಂ ಬ್ರಹ್ಮ ವಿದ್ಧಿ–ಇತಿ ಏವಶಬ್ದಾರ್ಥಃ॥

(ಭಾಷ್ಯಾರ್ಥ)

ಆ ಆತ್ಮಸ್ವರೂಪವೇ ಬ್ರಹ್ಮವು, (ತನಗೆ) ಮಿಗಿಲಿಲ್ಲದ **ಭೂಮ**[5] ಎಂಬ ಹೆಸರಿನ (ತತ್ತ್ವವು), (ಎಲ್ಲಕ್ಕಿಂತಲೂ) ದೊಡ್ಡದಾದ್ದರಿಂದ ಬ್ರಹ್ಮವು–ಎಂದು ನೀನು

---

1 ಈ ಮಂತ್ರದಿಂದ ಹಿಡಿದು ೯ನೆಯ ಮಂತ್ರವು ಮುಗಿಯುವವರೆಗೂ ಆತ್ಮನಿಂದ ಕರಣವು ಹೇಳಲ್ಪಡುತ್ತದೆ, ಅರಿಯಲ್ಪಡುತ್ತದೆ, ನೋಡಲ್ಪಡುತ್ತದೆ, ಕೇಳಲ್ಪಡುತ್ತದೆ ಎಂದು ಮುಂತಾಗಿ ಹೇಳಿರುವದಕ್ಕೆ ಆತ್ಮಚೈತನ್ಯಕ್ಕೆ ವಿಷಯವಾಗಿರುತ್ತದೆ ಎಂದಿಷ್ಟೇ ಅರ್ಥ.

2 ವರ್ಣಗಳಲ್ಲಿ.

3. ಇದು ಯಾವ ಶ್ರುತಿಯೆಂಬುದು ತಿಳಿಯದು. ಐ. ಭಾ. ೨-೧೮ರಲ್ಲಿ ಇಂಥ ಒಂದು ಶ್ರುತಿಯನ್ನು ಉದಾಹರಿಸಿದೆ.

4. ವಾಕ್ಕಿನ ತಿರುಳು. ಇಲ್ಲಿ ಮಾತನಾಡುವವನೂ ಅವನ ವಾಕ್ಕೂ ಎರಡೂ ಚೈತನ್ಯರೂಪವೆಂದೇ ತಿಳಿಯಬೇಕು. ಸೂರ್ಯನಿಗೂ ಅವನ ಬೆಳಕಿಗೂ ಅಭೇದವಿರುವಂತೆ ಇವೆರಡಕ್ಕೂ ಅಭೇದವಿರುತ್ತದೆ.

5. ಛಾ. ೭-೨೪-೧.

ತಿಳಿ, ಅರಿತುಕೊ. ಯಾವ ವಾಕ್ಯೇ ಮುಂತಾದ ಉಪಾಧಿಗಳಿಂದ 'ವಾಕ್ಯಿಗೆ ವಾಕ್ಯು', 'ಚಕ್ಷುಸ್ಸಿಗೆ ಚಕ್ಷುಸ್ಸು', 'ಶ್ರೋತ್ರಕ್ಕೆ ಶ್ರೋತ್ರವು', 'ಮನಸ್ಸಿಗೆ ಮನಸ್ಸು' 'ಕರ್ತನು', 'ಭೋಕ್ತನು', 'ವಿಜ್ಞಾತನು', 'ಕಟ್ಟನಲ್ಲಿಡುವಾತನು, 'ಆಳುವವನು', 'ವಿಜ್ಞಾನವೂ ಆನಂದವೂ ಆಗಿರುವ ಬ್ರಹ್ಮವು'—ಎಂದು ಮುಂತಾದ ವ್ಯವಹಾರಗಳು[1] ಯಾವ ವ್ಯವಹಾರಕ್ಕೂ ವಿಷಯವಲ್ಲದ ಯಾವ ವಿಶೇಷಗಳೂ ಇಲ್ಲದ, ಹೆಚ್ಚಿನ ಸಮತಾರೂಪವಾದ ಬ್ರಹ್ಮದಲ್ಲಿ ಉಂಟಾಗುತ್ತಿರುವವೋ ಆ (ಉಪಾಧಿಗಳನ್ನು) ತಳ್ಳಿಹಾಕಿ ನಿರ್ವಿಶೇಷನಾದ ಆತ್ಮನನ್ನೇ ಬ್ರಹ್ಮವೆಂದು ತಿಳಿ ಎಂಬುದು ಏವ ಎಂಬ (ಅವಧಾರಣೆಯ) ಶಬ್ದದ ಅರ್ಥವು.

(ಭಾಷ್ಯ)

೪೩. ನೇದಂ ಬ್ರಹ್ಮ ಯದ್ 'ಇದಮ್' ಇತಿ ಉಪಾಧಿಭೇದವಿಶಿಷ್ಟಮ್ ಅನಾತ್ಮ ಈಶ್ವರಾದಿ ಉಪಾಸತೇ ಧ್ಯಾಯನ್ತಿ । "ತದೇವ ಬ್ರಹ್ಮ ತ್ವಂ ವಿದ್ಧಿ" ಇತ್ಯುಕ್ತೇಽಪಿ 'ನೇದಂ ಬ್ರಹ್ಮ' ಇತ್ಯನಾತ್ಮನೋಽಬ್ರಹ್ಮತ್ವಂ ಪುನರುಚ್ಯತೇ ನಿಯಮಾರ್ಥಮ್, ಅನ್ಯಬ್ರಹ್ಮಬುದ್ಧಿಪರಿಸಙ್ಖ್ಯಾನಾರ್ಥಂ ವಾ ॥

(ಭಾಷ್ಯಾರ್ಥ)

ಯಾವದನ್ನು 'ಇದು' ಎಂದು[2] ಬೇರೆಬೇರೆ ಉಪಾಧಿಗಳಿಂದೊಡಗೂಡಿದ ಆತ್ಮನಲ್ಲದ **ಈಶ್ವರನೇ** ಮುಂತಾದದ್ದನ್ನು (ಜನರು) ಉಪಾಸನೆ ಮಾಡುತ್ತಾರೋ (ಆ) ಇದು ಬ್ರಹ್ಮವಲ್ಲ.[3] 'ಅದನ್ನೇ ಬ್ರಹ್ಮವೆಂದು ತಿಳಿ' ಎಂದು ಹೇಳಿದ ಮೇಲೂ 'ಇದು ಬ್ರಹ್ಮವಲ್ಲ' ಎಂದು ಆತ್ಮನಲ್ಲದ್ದನ್ನು ಬ್ರಹ್ಮವಲ್ಲವೆಂದು ಮತ್ತೂ ಹೇಳಿರುವದು ನಿಯಮಮಾಡುವದಕ್ಕೆ[4], ಅಥವಾ ಮತ್ತೊಂದು ಬ್ರಹ್ಮವೆಂಬ ಬುದ್ಧಿಯನ್ನು ತೆಗೆದುಹಾಕುವದಕ್ಕೆ.[5] ॥ ೫ ॥

---

1. ಆತ್ಮನನ್ನು ವಾಕ್ಯು, ಚಕ್ಷುಸ್ಸು—ಎಂದು ಮುಂತಾಗಿ ಕರೆಯುವದು ಆಯಾ ಉಪಾಧಿಯಿಂದಲೇ; ವಿಜ್ಞಾನ, ಆನಂದ' ಎಂದು ವಿಧಿರೂಪವಾಗಿ ಕರೆದಿರುವದೂ ಉಪಾಧಿಯಿಂದಲೇ ನಿರುಪಾಧಿಕವಾದ ಆತ್ಮರೂಪವೇ ಬ್ರಹ್ಮದ ನಿಜವಾದ ಸ್ವರೂಪವು.

2. ಇದು ಎಂದು ವಿಷಯವಾಗಿ ಮಾಡಿಕೊಂಡು ಎಂದರ್ಥ.

3. ಬ್ರಹ್ಮದ ನಿಜವಾದ ಸ್ವರೂಪವಲ್ಲ ಎಂದರ್ಥ.

4. ಆದು ಬ್ರಹ್ಮವು, ಇದು ಬ್ರಹ್ಮವಲ್ಲ—ಎಂದು ಎರಡನ್ನೂ ವಿಂಗಡಿಸಿಹೇಳುವದಕ್ಕೆ ಶ್ರುತಿ ಬಂದಿರುವದಿಲ್ಲ. ಏಕೆಂದರೆ ಆದು ಬ್ರಹ್ಮವು ಎಂದರೆ ಮತ್ತೊಂದಲ್ಲ ಎಂಬುದು ತಾನೇ ಏರ್ಪಡುತ್ತದೆ. ಯಾವ ಕರಣಕ್ಕೂ ವಿಷಯವಲ್ಲದೆ ಆತ್ಮನೇ ಬ್ರಹ್ಮವೆಂದು ತಿಳಿ ಎಂದು ನಿಯಮವಾಗಿ ಹೇಳುವದೇ ಇಲ್ಲಿ ಬೇಕಾಗಿರುವದು.

5 ಆತ್ಮನೂ ಬ್ರಹ್ಮವು ಆತ್ಮನಲ್ಲದ್ದೂ ಬ್ರಹ್ಮವು ಎಂದು ತಿಳಿಯಬಾರದು ಎಂದು ಅನಾತ್ಮದಲ್ಲಿ ಬ್ರಹ್ಮಬುದ್ಧಿಯನ್ನು ತೊಲಗಿಸುವದಕ್ಕೆ.

ಯನ್ಮನಸಾ ನ ಮನುತೇ
ಯೇನಾಹುರ್ಮನೋ ಮತಮ್ ।
ತದೇವ ಬ್ರಹ್ಮ ತ್ವಂ ವಿದ್ಧಿ
ನೇದಂ ಯದಿದಮುಪಾಸತೇ ॥ ೬ ॥

೬. ಯಾವದನ್ನು ಮನಸ್ಸಿನಿಂದ ಮನನಮಾಡುವದಿಲ್ಲವೋ, ಯಾವದರಿಂದ ಮನಸ್ಸು ಮನನಮಾಡಲ್ಪಡುವದೆಂದು ಹೇಳುವರೋ, ಅದೇ ಬ್ರಹ್ಮವೆಂದು ನೀನು ತಿಳಿ. ಯಾವದನ್ನು ಇದೆಂದು ಉಪಾಸನೆಮಾಡುತ್ತಾರೋ ಇದು ಬ್ರಹ್ಮವಲ್ಲ.

(ಭಾಷ್ಯ)

೩೪. 'ಯನ್ಮನಸಾ ನ ಮನುತೇ' । ಮನ ಇತ್ಯನ್ತಃಕರಣಂ ಬುದ್ಧಿ ಮನಸೋರೇಕತ್ವೇನ ಗೃಹ್ಯತೇ । ಮನುತೇಽನೇನೇತಿ ಮನಃ ಸರ್ವಕರಣಸಾಧಾರಣಮ್ । ಸರ್ವವಿಷಯವ್ಯಾಪಕತ್ವಾತ್ । "ಕಾಮಃ ಸಙ್ಕಲ್ಪೋ ವಿಚಿಕಿತ್ಸಾ ಶ್ರದ್ಧಾ ಶ್ರದ್ಧಾ ಧೃತಿರಧೃತಿರ್ಹ್ರೀರ್ಧೀರ್ಭೀರಿತ್ಯೇವಂ ಸರ್ವಂ ಮನ ಏವ" (ಬೃ. ೧-೫-೩) ಇತಿ ಶ್ರುತೇಃ ಕಾಮಾದಿವೃತ್ತಿಮನ್ಮನಃ । ತೇನ ಮನಸಾ ಯತ್ ಜೈತನ್ಯಜ್ಯೋತಿರ್ಮನಸೋಽವಭಾಸಕಂ ನ ಮನುತೇ ನ ಸಙ್ಕಲ್ಪಯತಿ ನಾಪಿ ನಿಶ್ಚಿನೋತಿ ಲೋಕಃ । ಮನಸೋಽವಭಾಸಕತ್ವೇನ ನಿಯನ್ತೃತ್ವಾತ್ । ಸರ್ವವಿಷಯಂ ಪ್ರತಿ ಪ್ರತ್ಯಗೇವ ಇತಿ ಸ್ವಾತ್ಮನಿ ನ ಪ್ರವರ್ತತೇಽನ್ತಃಕರಣಮ್ । ಅನ್ತಸ್ಥೇನ ಹಿ ಜೈತನ್ಯಜ್ಯೋತಿಷಾ ಅವಭಾಸಿತಸ್ಯ ಮನಸೋ ಮನನಸಾಮರ್ಥ್ಯಮ್ ॥

(ಭಾಷ್ಯಾರ್ಥ)

"ಯಾವದನ್ನು ಮನಸ್ಸಿನಿಂದ ಮನನಮಾಡುವದಿಲ್ಲವೋ": (ಇಲ್ಲಿ) ಮನಸ್ಸು ಎಂದರೆ ಬುದ್ಧಿ, ಮನಸ್ಸು ಈ ಎರಡನ್ನೂ [1] ಒಂದುಗೂಡಿಸಿದ **ಅಂತಃಕರಣ**ವನ್ನು ತೆಗೆದುಕೊಳ್ಳಬೇಕು ಯಾವದರಿಂದ ಮನನಮಾಡುತ್ತಾರೋ ಅದು ಮನಸ್ಸು, (ಈ ಮನಸ್ಸು) ಎಲ್ಲಾ ಕರಣಗಳಿಗೂ ಸಮಾನವಾಗಿರುವದು, ಏಕೆಂದರೆ (ಇದು) ಎಲ್ಲಾ ವಿಷಯಗಳನ್ನೂ ವ್ಯಾಪಿಸಿಕೊಂಡಿರುತ್ತದೆ. [2] "ಕಾಮ, ಸಂಕಲ್ಪ, ಸಂಶಯ, ಶ್ರದ್ಧೆ, ಅಶ್ರದ್ಧೆ, ಧೈರ್ಯ, ಅಧೈರ್ಯ, ನಾಚಿಕೆ, ಹೆದರಿಕೆ–ಇವೆಲ್ಲವೂ ಮನಸ್ಸೇ" (ಬೃ. ೧-೫-೩) ಎಂಬ ಶ್ರುತಿಯ ಪ್ರಮಾಣದಿಂದ ಮನಸ್ಸು ಕಾಮವೇ

---

1. ನಿಶ್ಚಯವೃತ್ತಿಗೆ ಬುದ್ಧಿ ಎಂದೂ ಸಂಕಲ್ಪವೃತ್ತಿಗೆ ಮನಸ್ಸೆಂದೂ ಹೆಸರು. ಈ ಎರಡೂ ಸೇರಿದ ಅಂತಃಕರಣವನ್ನೇ ಇಲ್ಲಿ ಮನಸ್ಸೆಂದು ಕರೆದಿದೆ.

2. ಅಂತಃಕರಣದ ಸಂಬಂಧವಿಲ್ಲದೆ ಯಾವ ಇಂದ್ರಿಯವೂ ತನ್ನ ವಿಷಯವನ್ನು ಬೆಳಗಲಾರದು.

ಯಚ್ಛ್ರೋತ್ರೇಣ ನ ಶೃಣೋತಿ
ಯೇನ ಶ್ರೋತ್ರಮಿದಗ್ಂ ಶ್ರುತಮ್ ।
ತದೇವ ಬ್ರಹ್ಮ ತ್ವಂ ವಿದ್ಧಿ
ನೇದಂ ಯದಿದಮುಪಾಸತೇ ॥ ೮ ॥

೮. ಯಾವದನ್ನು ಶ್ರೋತ್ರದಿಂದ ಕೇಳುವದಿಲ್ಲವೋ ಯಾವದರಿಂದ ಈ ಶ್ರೋತ್ರವು ಕೇಳಲ್ಪಡುವದೋ ಅದನ್ನೇ ಬ್ರಹ್ಮವೆಂದು ತಿಳಿ; ಯಾವದನ್ನು ಇದೆಂದು ಉಪಾಸನೆಮಾಡುತ್ತಾರೋ ಇದು ಬ್ರಹ್ಮವಲ್ಲ.

(ಭಾಷ್ಯ)

೩೭. ಯತ್ ಶ್ರೋತ್ರೇಣ ನ ಶೃಣೋತಿ ದಿಗ್ದೇವತಾಧಿಷ್ಠಿತೇನ ಆಕಾಶ ಕಾರ್ಯೇಣ ಮನೋವೃತ್ತಿಸಂಯುಕ್ತೇನ ನ ವಿಷಯೀಕರೋತಿ ಲೋಕಃ । ಯೇನ ಶ್ರೋತ್ರಮಿದಂ ಯತ್ಪ್ರಸಿದ್ಧಂ ಚೈತನ್ಯಾತ್ಮಜ್ಯೋತಿಷಾ ವಿಷಯೀಕೃತಮ್ । ತದೇವೇತ್ಯಾದಿ ಪೂರ್ವವತ್ ॥

(ಭಾಷ್ಯಾರ್ಥ)

ಯಾವದನ್ನು ಶ್ರೋತ್ರದಿಂದ ಕೇಳುವದಿಲ್ಲವೋ, ದಿಕ್ಕೆಂಬ ಅಭಿಮಾನದೇವತೆಯಿಂದ ಆಳಲ್ಪಟ್ಟು[1] ಆಕಾಶದ ಕಾರ್ಯವಾಗಿ ಮನಸ್ಸಿನ ವೃತ್ತಿಯಿಂದೊಡಗೂಡಿರುವ (ಶ್ರೋತ್ರೇಂದ್ರಿಯದಿಂದ) ಜನರು ವಿಷಯೀಕರಿಸಲಾರರೋ, ಈ ಪ್ರಸಿದ್ಧವಾದ ಶ್ರೋತ್ರವು ಯಾವ ಚೈತನ್ಯರೂಪವಾದ ಬೆಳಕಿನಿಂದ ವಿಷಯೀಕರಿಸಲ್ಪಡುತ್ತಿರುವದೋ (ಎಂದರ್ಥ). "ಅದನ್ನೇ (ಬ್ರಹ್ಮವೆಂದು ತಿಳಿ)" ಎಂದು ಮುಂತಾದ್ದನ್ನು ಹಿಂದಿನಂತೆಯೇ (ವಾಖ್ಯಾನಮಾಡಿಕೊಳ್ಳಬೇಕು).

ಯತ್ ಪ್ರಾಣೇನ ನ ಪ್ರಾಣಿತಿ
ಯೇನ ಪ್ರಾಣಃ ಪ್ರಣೀಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ
ನೇದಂ ಯದಿದಮುಪಾಸತೇ ॥ ೯ ॥

೯. ಯಾವದನ್ನು ಪ್ರಾಣದಿಂದ ಮೂಸುವದಿಲ್ಲವೋ ಯಾವದರಿಂದ ಪ್ರಾಣವು ಕಳುಹಿಸಲ್ಪಡುವದೋ ಅದನ್ನೇ ಬ್ರಹ್ಮವೆಂದು ನೀನು ತಿಳಿ; ಯಾವದನ್ನು ಇದೆಂದು ಉಪಾಸನೆಮಾಡುತ್ತಾರೋ ಇದು ಬ್ರಹ್ಮವಲ್ಲ.

---

1. ಪ್ರತಿಯೊಂದು ಇಂದ್ರಿಯಕ್ಕೂ ಅದರದರ ವ್ಯಾಪಾರವನ್ನು ಆಳುವ ಒಂದೊಂದು ದೇವತೆಯಿರುತ್ತದೆ. ಪ್ರತಿಯೊಂದು ಇಂದ್ರಿಯವೂ ತನತನಗೆ ವಿಷಯವಾಗಿರುವ ಭೂತದ ಕಾರ್ಯವೇ ಆಗಿರುವದು; ಪ್ರತಿಯೊಂದು ಇಂದ್ರಿಯಕ್ಕೂ ಅಂತಃಕರಣದ ಸಹಾಯವು ಬೇಕಾಗಿರುವದು-ಎಂಬುದನ್ನು ಇಲ್ಲಿರುವ ವರ್ಣನೆಯಿಂದ ತಿಳಿದುಕೊಳ್ಳಬೇಕು.

(ಭಾಷ್ಯ)

೩೮. ಯತ್ ಪ್ರಾಣೇನ ಘ್ರಾಣೇನ ಪಾರ್ಥಿವೇನ ನಾಸಿಕಾಪುಟಾನ್ತರವಸ್ಥಿತೇನ ಅನ್ತಃಕರಣಪ್ರಾಣವೃತ್ತಿಭ್ಯಾಂ ಸಹಿತೇನ ನ ಪ್ರಾಣಿತಿ ಗನ್ಧವತ್ ನ ವಿಷಯೀಕರೋತಿ, ಯೇನ ಚೈತನ್ಯಾತ್ಮಜ್ಯೋತಿಷಾ ಅವಭಾಸ್ಯತ್ವೇನ ಸ್ವವಿಷಯಂ ಪ್ರತಿ ಪ್ರಾಣಃ ಪ್ರಣೀಯತೇ । ತದೇವೇತ್ಯಾದಿ ಸರ್ವಂ ಸಮಾನಮ್ ॥

(ಭಾಷ್ಯಾರ್ಥ)

ಯಾವದನ್ನು ಪ್ರಾಣದಿಂದ ಅಂದರೆ ಪೃಥ್ವಿಯ ಕಾರ್ಯವಾಗಿಯೂ, ಮೂಗಿನ ಸೊಳ್ಳೆಯೊಳಗೆ ಇರುವದಾಗಿಯೂ ಅಂತಃಕರಣ, ಪ್ರಾಣ—ಇವೆರಡರ[1] ವೃತ್ತಿಗಳಿಂದೊಡಗೂಡಿದ್ದಾಗಿಯೂ ಇರುವ ಘ್ರಾಣೇಂದ್ರಿಯದಿಂದ ಮೂಸಲಾಗುವದಿಲ್ಲವೋ ಅಂದರೆ ವಾಸನೆಯನ್ನು (ವಿಷಯೀಕರಿಸು)ವಂತೆ ವಿಷಯೀಕರಿಸುವದಾಗುವದಿಲ್ಲವೋ; ಯಾವ ಚೈತನ್ಯರೂಪವಾದ ಬೆಳಕಿನಿಂದ ಬೆಳಗಲ್ಪಡುವದರಿಂದ (ಈ) ಪ್ರಾಣವು ತನ್ನ ವಿಷಯದ ಕಡೆಗೆ ಕಳುಹಿಸಲ್ಪಡುತ್ತಿರುವದೋ (ಎಂದರ್ಥ). "ಅದೇ (ಬ್ರಹ್ಮವೆಂದು ನೀನು ತಿಳಿ)" ಎಂದು ಮುಂತಾಗಿರುವದೆಲ್ಲವೂ (ಹಿಂದಿನ ಮಂತ್ರಗಳಿಗೂ ಈ ಮಂತ್ರಕ್ಕೂ) ಸಮಾನವಾಗಿರುತ್ತದೆ.[2]



1. ಘ್ರಾಣೇಂದ್ರಿಯದ ಕೆಲಸಕ್ಕೆ ಅಂತಃಕರಣದ ಮತ್ತು ಪ್ರಾಣದ ಸಹಾಯವು ಬೇಕೆಂಬುದು ಅನುಭವಸಿದ್ಧವು.

2. "ಅದೇ ಬ್ರಹ್ಮವು ಇದು ಎಂದು ಉಪಾಸನೆಮಾಡುವದು ಬ್ರಹ್ಮವಲ್ಲ"-ಎಂಬುದು ಈ ಎಲ್ಲಾ ಮಂತ್ರಗಳಿಗೂ ಸಮಾನವಾಗಿರುತ್ತದೆ. ವಿಷಯವಾದದ್ದು ಯಾವದೂ ಬ್ರಹ್ಮವಲ್ಲ; ಅಂತಃಕರಣವೇ ಮುಂತಾದದ್ದೆಲ್ಲವನ್ನೂ ತನ್ನ ಚೈತನ್ಯದಿಂದ ಬೆಳಗುತ್ತಿರುವ ಆತ್ಮನೇ ಬ್ರಹ್ಮವು ಎಂಬುದು ಈ ಪ್ರಕರಣದ ಒಟ್ಟರ್ಥವು.

ಎರಡನೆಯ ಖಂಡ

ಬ್ರಹ್ಮವು ಜ್ಞಾನಕ್ಕೂ ವಿಷಯವಲ್ಲ

(ಭಾಷ್ಯ)

೩೯. ಏವಂ ಹೇಯೋಪಾದೇಯವಿಪರೀತಸ್ತ್ವಮ್ ಆತ್ಮಾ ಬ್ರಹ್ಮ–ಇತಿ ಪ್ರತ್ಯಾಯಿತಃ ಶಿಷ್ಯಃ "ಅಹಮೇವ ಬ್ರಹ್ಮೇತಿ ಸುಷ್ಠು ವೇದಾಹಮ್" ಇತಿ ಮಾ ಗೃಹ್ಣೀಯಾತ್ ಇತ್ಯಾಶಯಾದಾಹಾಚಾರ್ಯಃ ಶಿಷ್ಯಬುದ್ಧಿವಿಚಾಲನಾರ್ಥಮ್-ಯದೀತ್ಯಾದಿ ॥

(ಭಾಷ್ಯಾರ್ಥ)

ಹೀಗೆ "ಬಿಡತಕ್ಕದ್ದೂ ತೆಗೆದುಕೊಳ್ಳತಕ್ಕದ್ದೂ ಅಲ್ಲದ ಆತ್ಮನಾದ ನೀನು ಬ್ರಹ್ಮವು" ಎಂದು ತಿಳಿಸಿಕೊಟ್ಟದ್ದರಿಂದ ಶಿಷ್ಯನು "ನಾನೇ ಬ್ರಹ್ಮವೆಂದು ನಾನು ಚೆನ್ನಾಗಿ ಅರಿತುಕೊಂಡೆನು" ಎಂದು ತಿಳಿದುಕೊಳ್ಳದೆ ಇರಲಿ ಎಂಬ ಅಭಿಪ್ರಾಯದಿಂದ[1] ಆಚಾರ್ಯನು ಶಿಷ್ಯನ ಬುದ್ಧಿಯನ್ನು ಅಲುಗಾಡಿಸುವದಕ್ಕಾಗಿ 'ಯದಿ' ಎಂದು ಮುಂತಾಗಿರುವ (ಮುಂದಿನ ವಾಕ್ಯವನ್ನು) ಆಡಿರುತ್ತಾನೆ.

(ಭಾಷ್ಯ)

೪೦. ನನ್ವಿಷ್ಟೈವ "ಸುವೇದಾಹಮ್" ಇತಿ ನಿಶ್ಚಿತಾ ಪ್ರತಿಪತ್ತಿಃ। ಸತ್ಯಮ್ ಇಷ್ಟಾ ನಿಶ್ಚಿತಾ ಪ್ರತಿಪತ್ತಿಃ, ನ ಹಿ ಸುವೇದಾಹಮ್ ಇತಿ। ಯದ್ ಹಿ ವೇದ್ಯಂ ವಸ್ತು ವಿಷಯಾಭವತಿ ತತ್ ಸುಷ್ಠು ವೇದಿತುಂ ಶಕ್ಯಮ್ ದಾಹ್ಯಮಿವ ದಗ್ಧುಮ್ ಅಗ್ನೇರ್ದಗ್ಧುಃ ನ ತ್ವಗ್ನೇಃ ಸ್ವರೂಪಮೇವ। ಸರ್ವಸ್ಯ ಹಿ ವೇದಿತುಃ ಸ್ವಾತ್ಮಾ ಬ್ರಹ್ಮ ಇತಿ ಸರ್ವವೇದಾನ್ತಾನಾಂ ಸುನಿಶ್ಚಿತೋರ್ಥಃ। ಇಹ ಚ ತದೇವ ಪ್ರತಿಪಾದಿತಂ ಪ್ರಶ್ನ ಪ್ರತಿವಚನೋಕ್ತ್ಯಾ "ಶ್ರೋತ್ರಸ್ಯ ಶ್ರೋತ್ರಮ್" (೧-೨) ಇತ್ಯಾದ್ಯಯಾ। "ಯದ್ವಾಚಾನಭ್ಯುದಿತಮ್" (೧-೫) ಇತಿ ಚ ವಿಶೇಷತೋಽವಧಾರಿತಮ್। ಬ್ರಹ್ಮವಿತ್ಸಮ್ಪ್ರದಾಯನಿಶ್ಚಯಶ್ಚೋಕ್ತಃ-"ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ" (೧-೪) ಇತಿ। ಉಪನ್ಯಸ್ತಮುಪಸಂಹರಿಷ್ಯತಿ ಚ "ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್" ಇತಿ। ತಸ್ಮಾದ್ ಯುಕ್ತಮೇವ ಶಿಷ್ಯಸ್ಯ 'ಸುವೇದ' ಇತಿ

---

1. ಇಲ್ಲಿ ನಾವು ಕೊಟ್ಟಿರುವದು (ವಾII) ಪಾಠವು. ಅಹಮೇವ ಬ್ರಹ್ಮೇತಿ ಸುಷ್ಠು ವೇದಾಹಂ ಮಾಮ್ ಇತಿ ಗೃಹ್ಣೀಯಾತ್ ಇತ್ಯಾಶಙ್ಕ್ಯಾಚಾರ್ಯಃ ಶಿಷ್ಯಬುದ್ಧಿವಿಚಾಲನಾರ್ಥಂ ಯದೀತ್ಯಾಹ-ಎಂಬ (ಆII) ಪಾಠದಲ್ಲಿ "ನಾನೇ ಬ್ರಹ್ಮವೆಂದು ನನ್ನನ್ನು ನಾನು ಚೆನ್ನಾಗಿ ಅರಿತುಕೊಂಡೆನು ಎಂದುಕೊಂಡಾನೆಂದು ಯೋಚಿಸಿ... .." ಎಂದು ಕನ್ನಡಿಸಬೇಕು.

ಬುದ್ಧಿಂ ನಿರಾಕರ್ತುಮ್ । ನ ಹಿ ವೇದಿತಾ ವೇದಿತುರ್ವೇದಿತುಂ ಶಕ್ಯಃ, ಅಗ್ನಿರಿವ ದಗ್ಧು ಮಗ್ನೇಃ । ನ ಚಾನ್ಯೋ ವೇದಿತಾ ಬ್ರಹ್ಮಣೋಽಸ್ತಿ ಯಸ್ಯ ವೇದ್ಯಮ್ ಅನ್ಯತ್ ಸ್ಯಾದ್ಬ್ರಹ್ಮ । "ನಾನ್ಯದತೋಽಸ್ತಿ ವಿಜ್ಞಾತೃ" (ಬೃ. ೩-೪-೧೧) ಇತ್ಯನ್ಯೋ ವಿಜ್ಞಾತಾ ಪ್ರತಿಷಿಧ್ಯತೇ । ತಸ್ಮಾತ್ ಸುಷ್ಠು ವೇದಾಹಂ ಬ್ರಹ್ಮೇತಿ ಪ್ರತಿಪತ್ತಿರ್ಮಿಥ್ಯೈವ । ತಸ್ಮಾದ್ ಯುಕ್ತಮೇವಾಹಾಚಾರ್ಯೋ ಯದೀತ್ಯಾದಿ ॥

(ಭಾಷ್ಯಾರ್ಥ)

(ಆಕ್ಷೇಪ)—ನಾನು "ಚೆನ್ನಾಗಿ ಅರಿತುಕೊಂಡಿರುವೆನು" ಎಂದು ನಿಶ್ಚಿತವಾದ[1] ತಿಳಿವಳಿಕೆಯು ಆಗಬೇಕೆಂಬುದು (ಸಿದ್ಧಾಂತಕ್ಕೂ) ಇಷ್ಟವಲ್ಲವೆ?

(ಪರಿಹಾರ)—ನಿಜ ನಿಶ್ಚಿತವಾದ ತಿಳಿವಳಿಕೆಯಾಗಬೇಕೆಂಬುದು ಇಷ್ಟವೇ. ಆದರೆ "ನಾನು (ಬ್ರಹ್ಮವನ್ನು) ಚೆನ್ನಾಗಿ ಅರಿತುಕೊಂಡೆನು" ಎಂದು (ತಿಳಿವಳಿಕೆಯಾಗ)ಬಾರದು. ಯಾವ ವಸ್ತು ತಿಳಿಯತಕ್ಕದ್ದಾಗಿದ್ದು (ಅರಿವಿಗೆ) ವಿಷಯವಾಗುತ್ತದೆಯೋ ಅದನ್ನು ಚೆನ್ನಾಗಿ[2] ಅರಿಯುವದಕ್ಕೆ ಆಗುತ್ತದೆ, ಸುಡಬಹುದಾದ ವಸ್ತುವನ್ನು ಸುಡುವ ಬೆಂಕಿಯು ಸುಡುವದಕ್ಕೆ ಆಗುವಂತೆಯೇ (ಇದು). ಆದರೆ ಬೆಂಕಿಯ ಸ್ವರೂಪವನ್ನೇ (ಆ ಬೆಂಕಿಯು ಸುಡ)ಲಾರದು.[3] **ಅರಿಯುವಾತನಾದ ಪ್ರತಿಯೊಬ್ಬನಿಗೂ ಬ್ರಹ್ಮವು ತನ್ನ ಆತ್ಮನೇ ಆಗಿರುವದೆಂಬುದು ಸಕಲ ಉಪನಿಷತ್ತುಗಳಲ್ಲಿಯೂ ಸುನಿಶ್ಚಿತವಾದ ವಿಷಯವಾಗಿದೆ.** ಪ್ರಶ್ನೋತ್ತರರೂಪವಾದ ವಾಕ್ಯಗಳಿಂದ "ಶ್ರೋತ್ರಕ್ಕೆ ಶ್ರೋತ್ರವು" (೧-೨) ಎಂದು ಮುಂತಾಗಿರುವ ಶ್ರುತಿಯಿಂದ ಇಲ್ಲಿಯೂ ಅದನ್ನೇ ಹೇಳಿರುತ್ತದೆ. "ಯಾವದು ವಾಕ್ಕಿನಿಂದ ಹೇಳಲ್ಪಡುವದಿಲ್ಲವೋ" (೧-೫) ಎಂದು ವಿಶೇಷವಾಗಿ ಇದನ್ನೇ ಒತ್ತಿ[4] ಹೇಳಿರುತ್ತದೆ. "ಅದು ತಿಳಿಯಲ್ಪಟ್ಟದ್ದಕ್ಕಿಂತಲೂ ಬೇರೆಯೇ ಮತ್ತು ತಿಳಿಯಲ್ಪಡದೆ ಇರುವದಕ್ಕಿಂತಲೂ (ಬೇರೆಯೇ)" (೧-೪) ಎಂದು ಬ್ರಹ್ಮಜ್ಞಾನಿಗಳ ಸಂಪ್ರದಾಯದ ನಿಶ್ಚಯವನ್ನೂ[5] ಹೇಳಿದ್ದಾಗಿದೆ ಹೀಗೆ ಉಪಕ್ರಮವಾಗಿರುವದನ್ನು (ಮುಂದೆ) ಉಪ

1. ಸಂಶಯವಿಪರ್ಯಯಗಳಿಲ್ಲದ 'ಚೆನ್ನಾಗಿ ಅರಿತೆನು' ಎಂಬಲ್ಲಿ 'ಚೆನ್ನಾಗಿ' ಎಂಬ ಮಾತಿಗೆ ಇದೇ ಅಭಿಪ್ರಾಯವೆಂದು ಪೂರ್ವಪಕ್ಷಿಯ ಭಾವ.

2 'ಜ್ಞಾನಕ್ಕೆ ವಿಷಯವಾಗಿ ಅರಿತುಕೊಂಡೆನು" ಎಂಬುದೇ ಚೆನ್ನಾಗಿ" ಎಂಬುದರ ಅಭಿಪ್ರಾಯವೆಂದು ಸಿದ್ಧಾಂತಿಯ ಭಾವ.

3 ಆದರಂತೆ ನಮ್ಮ ಆತ್ಮನಾದ ಬ್ರಹ್ಮವನ್ನು ನಾವೇ ವಿಷಯೀಕರಿಸಿ ಅರಿತುಕೊಳ್ಳುವದು ಆಗಲಾರದು–ಎಂದು ಭಾವ.

4. ವಾಕ್ಯ ಮುಂತಾದವುಗಳಿಗೆ ವಿಷಯವಾಗಿರುವದು ಬ್ರಹ್ಮವಲ್ಲ. ನಿತ್ಯವಿಷಯಿಯಾದ ಆತ್ಮನೇ ಬ್ರಹ್ಮವು ಎಂದು ಒತ್ತಿ ಹೇಳಿರುತ್ತದೆ

5. ಬ್ರಹ್ಮವು ನಮ್ಮ ಆತ್ಮನೇ ಆಗಿರುವದರಿಂದ ಅರಿವಿಗೆ ವಿಷಯವಲ್ಲವೆಂಬುದೇ ಸಂಪ್ರದಾಯದ ನಿಶ್ಚಯವು.

ಸಂಹಾರದಲ್ಲಿಯೂ[3] "ಅರಿಯುವವರಿಗೆ ತಿಳಿಯದೆ ಇರುವದು, ಅರಿಯದವರಿಗೆ ತಿಳಿದಿರುವದು" (೨-೩) ಎಂದು ಹೇಳಿರುತ್ತದೆ. ಆದ್ದರಿಂದ 'ಚೆನ್ನಾಗಿ' ಅರಿತುಕೊಂಡಿರುವೆನು ಎಂಬ ಶಿಷ್ಯನ ತಿಳಿವಳಿಕೆಯನ್ನು ಕಳೆಯುವದು ಯುಕ್ತವೇ. ಬೆಂಕಿಯನ್ನು ಸುಡುವದು ಬೆಂಕಿಗೆ ಹೇಗೆ (ಆಗಲಾರದೋ) ಹಾಗೆ ಅರಿಯುವಾತನನ್ನು ಅರಿಯುವದು ಅರಿಯುವಾತನಿಗೆ ಆಗಲೇ ಆರದು. ಬ್ರಹ್ಮಕ್ಕಿಂತ ಬೇರೆಯಾಗಿ ಅರಿಯುವಾತನೆಂಬುವನೂ ಇರುವದಿಲ್ಲ; ಹಾಗೆ ಇದ್ದಿದ್ದರೆ ಆತನಿಗೆ (ತನಗಿಂತ) ಬೇರೆಯಾದ ಬ್ರಹ್ಮವು ಅರಿಯತಕ್ಕ (ವಿಷಯ)ವಾಗಬಹುದಾಗಿತ್ತು "ಇದಕ್ಕಿಂತ ಬೇರೆಯಾಗಿ ಅರಿಯುವದು ಇಲ್ಲ" (ಬೃ. ೩-೮-೧೧) ಎಂದು (ಶ್ರುತಿಯಲ್ಲಿ ಬ್ರಹ್ಮಕ್ಕಿಂತ) ಬೇರೆಯಾದ ಅರಿಯುವಾತನು ಇಲ್ಲವೆಂದು ಹೇಳಿರುತ್ತದೆ ಆದ್ದರಿಂದ ನಾನು ಬ್ರಹ್ಮವನು-ಚೆನ್ನಾಗಿ ಅರಿತುಕೊಂಡಿರುವೆನು" ಎಂಬ ತಿಳಿವಳಿಕೆಯು ತಪ್ಪೇ. ಆದಕಾರಣ 'ಯದಿ' ಎಂದು ಮುಂತಾಗಿರುವ ವಾಕ್ಯವನ್ನು ಹೇಳಿರುವದು ಯುಕ್ತವೇ:

ಯದಿ ಮನ್ಯಸೇ ಸುವೇದೇತಿ ದಭ್ರಮೇವಾಪಿ ನೂನಂ
ತ್ವಂ ವೇತ್ಥ ಬ್ರಹ್ಮಣೋ ರೂಪಂ ಯದಸ್ಯ ತ್ವಂ
ಯದಸ್ಯ ದೇವೇಷ್ವಥ ನು ಮೀಮಾಂಸ್ಯಮೇವ ತೇ
ಮನ್ಯೇ ವಿದಿತಮ್ ॥ ೧ ॥

೧. (ಇದನ್ನು) ಚೆನ್ನಾಗಿ ಅರಿತುಕೊಂಡಿರುವೆನೆಂದು ನೀನು ಎಣಿಸುವೆಯಾದರೆ ನೀನು ಅರಿತಿರುವ ಈ (ಅಧ್ಯಾತ್ಮ ಬ್ರಹ್ಮದ) ಮತ್ತು ದೇವತೆಗಳಲ್ಲಿರುವ (ಬ್ರಹ್ಮದ) ರೂಪವು ನಿಜವಾಗಿಯೂ ಅಲ್ಪವೇ. ಆದ್ದರಿಂದ ನೀನು ಅರಿತಿರುವದು (ಇನ್ನು) ವಿಚಾರಿಸತಕ್ಕದ್ದೇ (ಆಗಿರುವದು) ಎಂದು ಎಣಿಸುವೆನು.*

(ಭಾಷ್ಯ)

೪೧. ಯದಿ ಕದಾಚಿತ್ ಮನ್ಯಸೇ ಸುವೇದ ಇತಿ ಸುಷ್ಠು ವೇದಾಹಂ ಬ್ರಹ್ಮ ಇತಿ । ಕದಾಚಿತ್ ಯಥಾಶ್ರುತಂ ದುರ್ವಿಜ್ಞೇಯಮಪಿ ಕ್ಷೀಣದೋಷಃ ಸುಮೇಧಾಃ

---

3. ಉಪಕ್ರಮದಲ್ಲಿ ಬ್ರಹ್ಮವು ಜ್ಞಾನಕ್ಕೆ ವಿಷಯವಲ್ಲವೆಂದು ಹೇಳಿರುವಂತೆಯೇ ಮುಂದೆ ಉಪಸಂಹಾರದಲ್ಲಿಯೂ ಹೇಳಲಾಗುವದು. ಆದ್ದರಿಂದಲೂ 'ಚೆನ್ನಾಗಿ' ಎಂಬ ಮಾತಿಗೆ ವಿಷಯವಾಗಿ ಎಂಬುದೇ ಅರ್ಥವೆಂದು ನಿಶ್ಚಯವಾಗುತ್ತದೆ.

* "ಮನ್ಯೇ ವಿದಿತಮ್" ಈ ವಾಕ್ಯವನ್ನು ಶಿಷ್ಯನ ಉತ್ತರವೆಂದು ಭಾವಿಸಿದರೆ: "ಅಥ ನು ಮೀಮಾಂಸ್ಯಮೇವ ತೇ" ಎಂಬುದಕ್ಕೆ "ಆದ್ದರಿಂದ ನಿನ್ನ (ಬ್ರಹ್ಮವು) ಇನ್ನೂ ವಿಚಾರಿಸತಕ್ಕದ್ದೇ" ಎಂದು ಕನ್ನಡಿಸಿ "(ಶಿಷ್ಯ): ತಿಳಿಯಿತೆಂದು ಎಣಿಸುತ್ತೇನೆ" ಎಂದು ಕನ್ನಡಿಸಬೇಕು.

ಕಶ್ಚಿತ್ ಪ್ರತಿಪದ್ಯತೇ ಕಶ್ಚಿನ್ನ–ಇತಿ ಸಾಶಙ್ಕ್ಯಮಾಹ-'ಯದಿ' ಇತ್ಯಾದಿ। ದೃಷ್ಟಂ ಚ "ಯ ಏಷೋಽಕ್ಷಿಣಿ ಪುರುಷೋ ದೃಶ್ಯತ ಏಷ ಆತ್ಮೇತಿ ಹೋವಾಚೈತದಮೃತ ಮಭಯಮೇತದ್ಬ್ರಹ್ಮ" (ಛಾ. ೮-೭-೪) ಇತ್ಯುಕ್ತೇ ಪ್ರಾಜಾಪತ್ಯಃ ಪಣ್ಡಿತೋಽಪಿ **ಅಸುರರಾಡ್ವಿರೋಚನಃ** ಸ್ವಭಾವದೋಷವಶಾತ್ ಅನುಪಪದ್ಯಮಾನಮಪಿ ಶರೀರಮ್ ಆತ್ಮೇತಿ ಪ್ರತಿಪನ್ನಃ। ತಥಾ ಇನ್ದ್ರೋ **ದೇವರಾಟ್**[1] ಸಕೃದ್ ದ್ವಿಸ್ತ್ರಿರುಕ್ತಂ ಚಾಪ್ರತಿಪದ್ಯಮಾನಃ ಸ್ವಭಾವದೋಷಕ್ಷಯಮ್ ಅಪೇಕ್ಷ್ಯ ಚತುರ್ಥೇ ಪರ್ಯಾಯೇ ಪ್ರಥಮೋಕ್ತಮೇವ ಬ್ರಹ್ಮ ಪ್ರತಿಪನ್ನವಾನ್। ಲೋಕೇಽಪಿ ಏಕಸ್ಮಾದ್ ಗುರೋಃ ಶೃಣ್ವತಾಂ ಕಶ್ಚಿದ್ ಯಥಾವತ್ ಪ್ರತಿಪದ್ಯತೇ, ಕಶ್ಚಿದ್ ಅಯಥಾವತ್, ಕಶ್ಚಿದ್ ವಿಪರೀತಮ್, ಕಶ್ಚಿನ್ನ ಪ್ರತಿಪದ್ಯತೇ। ಕಿಮು ವಕ್ತವ್ಯಮ್ ಅತೀನ್ದ್ರಿಯಮ್ ಆತ್ಮತತ್ತ್ವಮ್। ಅತ್ರ ಹಿ ವಿಪ್ರತಿಪನ್ನಾಃ ಸದಸದ್ವಾದಿನಸ್ತಾರ್ಕಿಕಾಃ ಸರ್ವೇ। ತಸ್ಮಾತ್ ವಿದಿತಂ ಬ್ರಹ್ಮ–ಇತಿ ಸುನಿಶ್ಚಿತೋಕ್ತಮಪಿ ವಿಷಮಪ್ರತಿಪತ್ತಿತ್ವಾತ್, "ಯದಿ ಮನ್ಯಸೇ" ಇತ್ಯಾದಿ ಸಾಶಙ್ಕಂ ವಚನಂ ಯುಕ್ತಮೇವಾಚಾರ್ಯಸ್ಯ॥

(ಭಾಷ್ಯಾರ್ಥ)

ಒಂದು ವೇಳೆ ಚೆನ್ನಾಗಿ ಅರಿತುಕೊಂಡಿರುವೆನು ಎಂದು, ಬ್ರಹ್ಮವನ್ನು ಸ್ಪಷ್ಟವಾಗಿ ಅರಿತುಕೊಂಡಿರುವೆನು ಎಂದು, ನೀನು ಎಣಿಸುವೆಯಾದರೆ. ತಿಳಿಯುವಪಕ್ಕೆ ಕಷ್ಟವಾಗಿದ್ದರೂ ಒಂದೊಂದುವೇಳೆ (ಅಂತಃಕರಣದ) ದೋಷಗಳೆಲ್ಲ ಕಳೆದಿರುವ ಒಳ್ಳೆಯ ಜಾಣನಾದ ಯಾವನಾಡರೊಬ್ಬ (ಶಿಷ್ಯನು) (ತಾನು) ಶ್ರವಣಮಾಡಿದಂತೆಯೇ ತಿಳಿದುಕೊಂಡುಬಿಡುತ್ತಾನೆ, ಮತ್ತೊಬ್ಬನು ತಿಳಿದುಕೊಳ್ಳಿವದಿಲ್ಲ; ಆದ್ದರಿಂದ "ಎಣಿಸುವೆಯಾದರೆ" ಎಂದು ಮುಂತಾಗಿ ಸಂಶಯದಿಂದ[1] ಹೇಳಿರುತ್ತಾನೆ. "ಯಾವ ಈ ಪುರುಷನು ಕಣ್ಣಿನಲ್ಲಿ ಕಾಣುತ್ತಿರುವನೋ ಇವನೇ ಆತ್ಮನು[2]; ಇದೇ ಅಮೃತವು, ಅಭಯವು, ಇದೇ ಅಮೃತವು, ಅಭಯವು, ಇದೇ ಬ್ರಹ್ಮವು" (ಛಾ. ೮-೭-೪) ಎಂದು ಹೇಳಲಾಗಿ **ಪ್ರಜಾಪತಿಯ ವಂಶದವನೂ** ಪಂಡಿತನೂ ಆಗಿದ್ದರೂ ಅಸುರರಾಜನಾದ[3] **ವಿರೋಚನನು** (ತನ್ನ) ಸ್ವಭಾವದೋಷಕ್ಕೆ ವಶನಾದ್ದರಿಂದ[4]

---

1 ತಪ್ಪಾಗಿ ತಿಳಿದುಕೊಳ್ಳುವದೂ ಉಂಟು; ಆದ್ದರಿಂದ ಗುರು 'ಎಣಿಸುವೆಯಾದರೆ' ಎಂದು ಸಂಶಯಸೂಚಕವಾದ ಮಾತನ್ನು ಆಡಿರುತ್ತಾನೆ.

2 ಇಲ್ಲಿ ಶ್ರುತಿಯಲ್ಲಿ ಇತಿ ಹೋವಾಚ ಎಂಬ ಮಾತುಗಳಿದ್ದರೂ ಪ್ರಕೃತಕ್ಕೆ ಹೊಂದುವದಿಲ್ಲವಾದ್ದರಿಂದ ಅವನ್ನು ಕನ್ನಡಿಸಿಲ್ಲ.

3 ಅಸುರರು, ದೇವತೆಗಳು–ಇಬ್ಬರೂ ಪ್ರಜಾಪತಿ ಬ್ರಹ್ಮನ ವಂಶದವರೇ.

4 ಈ ದೋಷವನ್ನೇ ಗೀತೆಯಲ್ಲಿ ಆಸುರಸಂಪತ್ತೆಂದು ಕರೆದಿರುತ್ತದೆ. ಇದಕ್ಕೆ ವಿರುದ್ಧವಾದ ದೈವಸಂಪತ್ತನ್ನು ಸಂಪಾದಿಸಿಕೊಂಡವರಿಗೆ ಜ್ಞಾನಪ್ರಾಪ್ತಿಯಾಗುವದೆಂದು ತಿಳಿಸುವದಕ್ಕಾಗಿ ಈ ಉದಾಹರಣೆಯನ್ನು ಇಲ್ಲಿ ಕೊಟ್ಟಿರುತ್ತದೆ.

(ಅನುಭವಕ್ಕೆ) ಹೊಂದದೆ ಇದ್ದರೂ[1] ಶರೀರವೇ ಆತ್ಮನೆಂದು ತಪ್ಪು ವಿಷಯವನ್ನೇ ತಿಳಿದುಕೊಂಡನು. ಮತ್ತು ದೇವರಾಜನಾದ **ಇಂದ್ರನು** ಒಂದು, ಎರಡು, ಮೂರು ಸಲ ಹೇಳಿದ್ದನ್ನು ತಿಳಿದುಕೊಳ್ಳದೆ (ತನ್ನ) ಸ್ವಭಾವದೋಷವು ಸವೆದಕಾರಣದಿಂದ[2] ನಾಲ್ಕನೆಯ ಸಲಕ್ಕೆ ಮೊದಲು ಹೇಳಿದ ಬ್ರಹ್ಮವನ್ನೇ[3] ತಿಳಿದುಕೊಂಡನು. ಲೋಕದಲ್ಲಿಯೂ ಒಬ್ಬನೇ ಗುರುವಿನಿಂದ (ಸಾಮಾನ್ಯ ವಿಷಯಗಳನ್ನು ಕುರಿತು) ಶ್ರವಣಮಾಡುವವರಲ್ಲಿ ಒಬ್ಬನು (ಗುರು) ಹೇಳಿದಂತೆ ತಿಳಿದುಕೊಳ್ಳುತ್ತಾನೆ, ಒಬ್ಬನು ಸರಿಯಾಗಿ ತಿಳಿದುಕೊಳ್ಳುವದಿಲ್ಲ,[4] ಒಬ್ಬನು ತಪ್ಪಾಗಿ ತಿಳಿದುಕೊಳ್ಳುತ್ತಾನೆ, ಒಬ್ಬನು ತಿಳಿದುಕೊಳ್ಳುವದೇ ಇಲ್ಲ.[5] (ಹೀಗಿರುವಲ್ಲಿ) ಅತೀಂದ್ರಿಯವಾದ ಆತ್ಮತತ್ತ್ವವನ್ನು ಎಲ್ಲರೂ ಒಂದೇ ಸಮನಾಗಿ ತಿಳಿದುಕೊಳ್ಳಲಾರರೆಂದು ಹೇಳತಕ್ಕದ್ದೇನಿದೆ? ಏಕೆಂದರೆ ಇದರ ವಿಷಯದಲ್ಲಿ ಸದ್ವಾದಿಗಳೂ ಅಸದ್ವಾದಿಗಳೂ ಆದ **ತಾರ್ಕಿಕರೆಲ್ಲರೂ**[6] ಒಬ್ಬರಿಗೊಬ್ಬರು ವಿರುದ್ಧವಾಗಿ ಅಭಿಪ್ರಾಯವುಳ್ಳವರಾಗಿರುತ್ತಾರೆ. ಆದ್ದರಿಂದ 'ಬ್ರಹ್ಮವನ್ನು ಅರಿತುಕೊಂಡೆನು' ಎಂದು ಅತ್ಯಂತ ನಿಶ್ಚಿತವಾಗಿ ಹೇಳಿದರೂ ನಿಜವಾಗಿಯೂ ಸರಿಯಾಗಿ ತಿಳಿದುಕೊಳ್ಳುವದು ಕಷ್ಟವಾಗಿರುವದರಿಂದ ಆಚಾರ್ಯನು ಸಂಶಯಪೂರ್ವಕವಾಗಿ 'ಎಣಿಸುವೆಯಾದರೆ' ಎಂದು ಮುಂತಾಗಿ ಹೇಳಿರುವದು ಯುಕ್ತವೇ ಆಗಿರುತ್ತದೆ.

(ಭಾಷ್ಯ)

೪೨. ದಭ್ರಮ್ ಅಲ್ಪಮೇವಾಪಿ ನೂನಂ ತ್ವಂ ವೇತ್ಥ ಜಾನೀಷೇ ಬ್ರಹ್ಮಣೋ ರೂಪಮ್ | ಕಿಮ್ ಅನೇಕಾನಿ ಬ್ರಹ್ಮಣೋ ರೂಪಾಣಿ ಮಹಾನ್ತಿ ಅರ್ಘಕಾಣಿ ಚ ಯೇನಾಹ "ದಭ್ರಮೇವ" ಇತ್ಯಾದಿ? ಬಾಢಮ್ | ಅನೇಕಾನಿ ಹಿ ನಾಮರೂಪೋಪಾಧಿಕೃತಾನಿ ಬ್ರಹ್ಮಣೋ ರೂಪಾಣಿ ನ ಸ್ವತಃ | ಸ್ವತಸ್ತು "ಅಶಬ್ದಮಸ್ಪರ್ಶಮ

---

1 ಶರೀರವು ಬೇರೆ ನಾವು ಬೇರೆ ಎಂಬುದು ಅನುಭವದಲ್ಲಿದೆ.

2. ಬ್ರಹ್ಮಚರ್ಯವೇ ಮುಂತಾದ ಸಾಧನಗಳಿಂದ ಸ್ವಭಾವದೋಷವು ತೊಲಗುವದೆಂಬುದನ್ನು ಈ ಉದಾಹರಣೆಯು ಸೂಚಿಸುತ್ತದೆ.

3 ಪ್ರಜಾಪತಿಯು ಒಂದೊಂದು ಸಲಕ್ಕೂ ಒಂದೊಂದು ಬೇರೆಯ ವಿಷಯವನ್ನೇ ತಿಳಿಸಿರುತ್ತಾನೆಂದು ಕೆಲವರು ಈ ಶ್ರುತಿಗೆ ಅರ್ಥವನ್ನು ಮಾಡಿದ್ದರು. ಅವರ ಅಭಿಪ್ರಾಯವು ತಪ್ಪೆಂಬುದನ್ನು ಛಾಂದೋಗ್ಯಭಾಷ್ಯ (೮-೧೨-೧) ಮತ್ತು ಸೂತ್ರಭಾಷ್ಯ (೧-೩-೧೯)-ಇವುಗಳಲ್ಲಿ ಆಚಾರ್ಯರು ತೋರಿಸಿಕೊಟ್ಟಿರುತ್ತಾರೆ.

4. ಸಂಶಯವುಳ್ಳವನಾಗಿರುತ್ತಾನೆ.

5. ಅತ್ಯಂತ ಮೂಢನಾಗಿರುತ್ತಾನೆ.

6. ಸತ್ಕಾರ್ಯವಾದಿಗಳಾದ ಸಾಂಖ್ಯರೂ ಅಸತ್ಕಾರ್ಯವಾದಿಗಳಾದ ವೈಶೇಷಿಕರೇ ಮುಂತಾದವರೂ. ಮಾ. ಕಾ. ಭಾ. ೪-೪೭.

ರೂಪಮವ್ಯಯಂ ತಥಾರಸಂ ನಿತ್ಯಮಗನ್ಧವಚ್ಚ ಯತ್ " (ಕ. ೧-೩-೧) ಇತಿ ಶಬ್ದಾದಿಭಿಃ ಸಹ ರೂಪಾಣಿ ಪ್ರತಿಷಿಧ್ಯನ್ತೇ । ನನು ಯೇನೈವ ಧರ್ಮೇಣ ಯದ್ ರೂಪ್ಯತೇ ತದೇವ ತಸ್ಯ ಸ್ವರೂಪಮಿತಿ ಬ್ರಹ್ಮಣೋಽಪಿ ಯೇನ ವಿಶೇಷೇಣ ನಿರೂಪಣಮ್ ತದೇವ ತಸ್ಯ ಸ್ವರೂಪಂ ಸ್ಯಾತ್ । ಅತ ಉಚ್ಯತೇ ಚೈತನ್ಯಂ ಪೃಥಿವ್ಯಾದೀನಾಮನ್ಯತಮಸ್ಯ ಸರ್ವೇಷಾಂ ವಿಪರಿಣತಾನಾಂ ವಾ ಧರ್ಮೋ ನ ಭವತೀತಿ ಬ್ರಹ್ಮಣೋ ರೂಪಮಿತಿ । ಬ್ರಹ್ಮ ರೂಪ್ಯತೇ ಚೈತನ್ಯೇನ । ತಥಾಚೋಕ್ತಮ್-" ವಿಜ್ಞಾನಮಾನನ್ದಂ ಬ್ರಹ್ಮ " (ಬೃ. ೩-೯-೭), ' ವಿಜ್ಞಾನಘನ ಏವ ' (ಬೃ. ೨-೪-೧೨), " ಸತ್ಯಂ ಜ್ಞಾನಮನನ್ತಂ ಬ್ರಹ್ಮ " (ತೈ. ೨-೧), " ಪ್ರಜ್ಞಾನಂ ಬ್ರಹ್ಮ " (ಐ ೩-೧) ಇತಿ ಚ ಬ್ರಹ್ಮಣೋ ರೂಪಂ ನಿರ್ದಿಷ್ಟಂ ಶ್ರುತಿಷು । ಸತ್ಯಮೇವಮ್ । ತಥಾಪಿ ತದನ್ತಃಕರಣದೇಹೇನ್ದ್ರಿಯೋಪಾಧಿದ್ವಾರೇಣೈವ ವಿಜ್ಞಾನಾದಿಶಬ್ದೈರ್ನಿರ್ದಿಶ್ಯತೇ, ತದನುಕಾರಿತ್ವಾದ್ ದೇಹಾದಿವೃದ್ಧಿಸಜಿಹ್ಮೀಚಚ್ಛೇದಾದಿಷು ನಾಶೇಷು ಚ, ನ ಸ್ವತಃ । ಸ್ವತಸ್ತು " ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್ " (೨-೩) ಇತಿ ಸ್ಥಿತಂ ಭವಿಷ್ಯತಿ ॥

(ಭಾಷ್ಯಾರ್ಥ)

(ಮೂಲದಲ್ಲಿರುವ) ದಭ್ರಂ (ಎಂಬ ಮಾತಿಗೆ) ಅಲ್ಪವೇ (ಎಂದರ್ಥ). ನೀನು ನಿಜವಾಗಿ (ಅಲ್ಪವಾದ) ಬ್ರಹ್ಮದ ರೂಪವನ್ನೇ ಅರಿತಿರುವೆ ತಿಳಿದುಕೊಂಡಿರುವೆ (ಎಂದರ್ಥ).

(ಆಕ್ಷೇಪ) —ಹಾಗಾದರೆ ಬ್ರಹ್ಮಕ್ಕೆ ದೊಡ್ಡವುಗಳು ಅಲ್ಪವಾದವುಗಳು ಎಂದು ಅನೇಕ ರೂಪಗಳಿವೆಯೇನು? ಅಲ್ಪ(ವಾದ ರೂಪ)ವನ್ನೇ (ಅರಿತಿರುವೆ) ಎಂದು ಹೇಳಿರುವದನ್ನು ನೋಡಿದರೆ (ಹಾಗೆಂದಾಗುವದಿಲ್ಲವೆ?)

(ಪರಿಹಾರ).—ನಿಜ. ನಾವುರೂಗಳೆಂದಾಗಿರುವ ರೂಪಗಳು ಬ್ರಹ್ಮಕ್ಕೆ ಅನೇಕವಾಗಿಯೇ ಇರುತ್ತವೆ. (ಆದರೆ) ಅದರ ಸ್ವರೂಪದಿಂದಲೇ (ಅನೇಕರೂಪ)ಗಳಿರುವದಿಲ್ಲ. ಸ್ವರೂಪದಿಂದ ನೋಡಿದರೆ " ಅದು ಯಾವಾಗಲೂ ಶಬ್ದವಿಲ್ಲದ್ದು, ಸ್ಪರ್ಶವಿಲ್ಲದ್ದು, ರೂಪವಿಲ್ಲದ್ದು, ನಾಶರಹಿತವಾದದ್ದು, ಮತ್ತು ಸವಿಯಿಲ್ಲದ್ದು, ವಾಸನೆಯಿಲ್ಲದ್ದು " (ಕ. ೧-೩-೧) ಎಂದು ಶಬ್ದಾದಿಗಳೊಡನೆ ರೂಪಗಳನ್ನೂ (ಶ್ರುತಿಯಲ್ಲಿ) ಇಲ್ಲವೆಂದಿರುತ್ತದೆ.

(ಭಾಷ್ಯಾರ್ಥ)

(ಆಕ್ಷೇಪ) :—ಯಾವ ಧರ್ಮದಿಂದಲೇ ಯಾವದು ಗೊತ್ತಾಗುವದೋ ಅದೇ ಅದರ ಸ್ವರೂಪವು; ಆದ್ದರಿಂದ ಬ್ರಹ್ಮವೂ ಯಾವ ವಿಶೇಷ (ಧರ್ಮದಿಂದ) ಗೊತ್ತಾಗುವದೋ ಅದೇ ಅದರ ರೂಪವಾಗಬೇಕು. ಆದ್ದರಿಂದ ಚೈತನ್ಯವು ಪೃಥಿವಿ

ಮುಂತಾದವುಗಳಲ್ಲಿ ಯಾವದೊಂದರ ಧರ್ಮವೂ ಅಲ್ಲ; ಇವೆಲ್ಲವೂ (ಸೇರಿ) ಪರಿಣಾಮವಾಗಿರುವ (ದೇಹದ) ಧರ್ಮವೂ ಅಲ್ಲ; ಇದರಂತೆ ಶ್ರೋತ್ರಾದಿಗಳ ಅಥವಾ ಅಂತಃಕರಣದ ಧರ್ಮವೂ ಅಲ್ಲ; ಆದ್ದರಿಂದ (ಅದು) ಬ್ರಹ್ಮದ ರೂಪವೆಂದು ಹೇಳಬಹುದು. (ಏಕೆಂದರೆ) ಬ್ರಹ್ಮವು ಚೈತನ್ಯ(ರೂಪ)ದಿಂದ ಗೊತ್ತಾಗುತ್ತದೆ.[1] "ವಿಜ್ಞಾನವೂ ಆನಂದವೂ ಆದದ್ದು ಬ್ರಹ್ಮವು" (ಬೃ. ೩-೯-೭), "ವಿಜ್ಞಾನದ ಗಟ್ಟಿಯೇ" (ಬೃ. ೨-೪-೧೨), "ಸತ್ಯವೂ ಜ್ಞಾನವೂ ಅನಂತವೂ ಆದದ್ದು ಬ್ರಹ್ಮವು" (ತೈ. ೨-೧), "ಪ್ರಜ್ಞಾನವು ಬ್ರಹ್ಮವು" (ಐ. ೩-೧) ಎಂದು ಬ್ರಹ್ಮದ ರೂಪವನ್ನು ಶ್ರುತಿಯಲ್ಲಿ ತಿಳಿಸಿಯೂ ಕೊಟ್ಟಿದೆಯಲ್ಲ?[2]

(ಪರಿಹಾರ):—ನಿಜ, ಹಾಗೆಯೇ ಸರಿ. ಹಾಗಿದ್ದರೂ ಅಂತಃಕರಣ, ದೇಹ, ಇಂದ್ರಿಯಗಳು-ಎಂಬ ಉಪಾಧಿಗಳ ಮೂಲಕವೇ ಆ (ಬ್ರಹ್ಮವು) ವಿಜ್ಞಾನವೇ ಮುಂತಾದ ಶಬ್ದಗಳಿಂದ ಹೇಳಲ್ಪಡುತ್ತದೆ, ಏಕೆಂದರೆ (ಅದು) ದೇಹಾದಿಗಳ ಹಿಗ್ಗುವಿಕೆ, ಕುಗ್ಗುವಿಕೆ, ಕತ್ತರಿಸಿಹೋಗುವಿಕೆ-ಮುಂತಾದವುಗಳಲ್ಲಿಯೂ (ಅವುಗಳ) ನಾಶದಲ್ಲಿಯೂ[3] ಅವುಗಳನ್ನೇ ಅನುಸರಿಸುತ್ತಿರುತ್ತದೆ. (ಇಷ್ಟೇ ಹೊರತು) ಸ್ವರೂಪದಿಂದಲೇ (ಅದು ಆ ಶಬ್ದಗಳಿಂದ ಹೇಳಲ್ಪಡು)ವದಿಲ್ಲ.[4] ಸ್ವರೂಪದಿಂದಲೋ ಎಂದರೆ "ಅರಿಯುವವರಿಗೆ ತಿಳಿಯದೆ ಇರುವದು, ಅರಿಯದವರಿಗೆ ತಿಳಿದಿರುವದು" (೨-೩) ಎಂದು ಮುಂದೆ ನಿರ್ಣಯಮಾಡಲಾಗುವದು.

(ಭಾಷ್ಯ)

೪೩. "ಯದಸ್ಯ ಬ್ರಹ್ಮಣೋ ರೂಪಮ್" ಇತಿ ಪೂರ್ವೇಣ ಸಮ್ಬನ್ಧಃ | ನ ಕೇವಲಮ್ ಅಧ್ಯಾತ್ಮೋಪಾಧಿಪರಿಚ್ಛಿನ್ನಸ್ಯ ಅಸ್ಯ ಬ್ರಹ್ಮಣೋ ರೂಪಂ ತ್ವಮ್ ಅಲ್ಪಂ ವೇತ್ಥ, ಯದಪ್ಯಧಿದೈವತೋಪಾಧಿಪರಿಚ್ಛಿನ್ನಸ್ಯ ಅಸ್ಯ ಬ್ರಹ್ಮಣೋ ರೂಪಂ ದೇವೇಷು

---

1. ಈ ಕಾರಣದಿಂದ ಚೈತನ್ಯವೇ ಬ್ರಹ್ಮದ ರೂಪವೆಂದು, ಏಕೆ ಹೇಳಬಾರದು?—ಎಂದು ಪೂರ್ವಪಕ್ಷಿಯ ಪ್ರಶ್ನೆ.

2. ತಥಾಚೋಕ್ತಮ್ ಎಂಬ ಮೂಲವನ್ನು ನಾವು ಕನ್ನಡಿಸಿಲ್ಲ. 'ತಥಾ ಚ' ಎಂದಿಷ್ಟೇ ಇದ್ದಿದ್ದರೆ 'ಇದಕ್ಕನುಗುಣವಾಗಿ' ಎಂದು ಕನ್ನಡಿಸಿ ಹೇಗೋ ಅನ್ವಯಮಾಡಬಹುದಾಗುವದು.

3. ನಾಶೇಷು ಎಂದು ಬಹುವಚನವನ್ನು ಏತಕ್ಕೆ ಪ್ರಯೋಗಿಸಿದೆಯೋ ತಿಳಿಯದು. ಈ ಭಾಷ್ಯಪಂಕ್ತಿಯು ಏನೋ ಸ್ವಲ್ಪ ಹೆಚ್ಚುಕಡಿಮೆಯಾಗಿರುವಂತೆ ತೋರುತ್ತದೆ.

4 ಸೋಪಾಧಿಕಬ್ರಹ್ಮವು ವಾಚ್ಯವಾಗಿದ್ದರೂ ನಿರುಪಾಧಿಕವಾದ ಬ್ರಹ್ಮವು ವಿಜ್ಞಾನ, ಆನಂದ-ಮುಂತಾದ ಶಬ್ದಗಳಿಗೆ ವಾಚ್ಯವಲ್ಲ; ಅವುಗಳಿಗೆ ಅದು ಲಕ್ಷ್ಯವಾಗಿರುತ್ತದೆ. ತೈ ಭಾ. ೨-೧ ನೋಡಿ. ನಿಷೇಧವಚನಗಳಿಗೂ ಅದು ವಾಚ್ಯವಲ್ಲ. ಮಾಂ. ಕಾ. ಭಾ. ೨-೩೨ ನೋಡಿ.

ವೇತ್ಥ ತ್ವಮ್ ತದಪಿ ನೂನಂ ದಭ್ರಮೇವ ವೇತ್ಥ ಇತಿ ಮನ್ಯೇಽಹಮ್ । ತದಪಿ ಚ ದೇವೇಷು ಉಪಾಧಿಪರಿಚ್ಛಿನ್ನತ್ವಾದ್ ದಭ್ರತ್ವಾನ್ನ ನಿವರ್ತತೇ । ಯತ್ತು ವಿಧ್ವಸ್ತಸರ್ವೋಪಾಧಿವಿಶೇಷಂ ಶಾನ್ತಮನನ್ತಮೇಕಮದ್ವೈತಂ ಭೂಮಾಖ್ಯಂ ನಿತ್ಯಂ ಬ್ರಹ್ಮ ನ ತತ್ ಸುವೇದ್ಯಮ್ ಇತ್ಯಭಿಪ್ರಾಯಃ । ಯತ ಏವಮ್ ಅಥ ನು ತಸ್ಮಾತ್ ಮನ್ಯೇ ಅದ್ಯಾಪಿ ಮಾಮಾಂಸ್ಯಂ ವಿಚಾರ್ಯಮೇವ ತೇ ತವ ಬ್ರಹ್ಮ ॥

(ಭಾಷ್ಯಾರ್ಥ)

"ಯದಸ್ಯ ಬ್ರಹ್ಮಣೋ ರೂಪಮ್" ಎಂದು ('ಯದಸ್ಯ' ಎಂಬ ಮಾತುಗಳನ್ನು 'ಬ್ರಹ್ಮಣೋ ರೂಪಮ್' ಎಂಬುದರ) ಹಿಂದಕ್ಕೆ ಜೋಡಿಸಿಕೊಳ್ಳಬೇಕು. ಅಧ್ಯಾತ್ಮದ ಉಪಾಧಿಯಿಂದ ಕಟ್ಟುವಡೆದಿರುವ ಈ ಬ್ರಹ್ಮದ ರೂಪವನ್ನು ನೀನು ಅರಿತುಕೊಂಡಿರುವದು ಅಲ್ಪವೇ ಎಂಬುದಿಷ್ಟೇ ಅಲ್ಲ, ಅಧಿದೈವತವಾದ ಉಪಾಧಿಯಿಂದ ಕಟ್ಟುವಡೆದಿರುವ ಈ ಬ್ರಹ್ಮದ ದೇವತೆಗಳಲ್ಲಿರುವ ರೂಪವನ್ನು ನೀನು ಅರಿತಿರುವೆಯಷ್ಟೆ, ಅದನ್ನು ನೀನರಿತಿರುವದೂ ನಿಜವಾಗಿ ಸ್ವಲ್ಪವೇ[1] ಎಂದು ನಾನು ಎಣಿಸುತ್ತೇನೆ. ದೇವತೆಗಳಲ್ಲಿರುವ ಅದೂ[2] ಉಪಾಧಿಗಳಿಂದ ಕಟ್ಟುವಡೆದಿರುವದರಿಂದ ಅಲ್ಪತೆಯನ್ನು ಬಿಟ್ಟು ಹೋಗಲಾರದು. ಆದರೆ ಯಾವದೊಂದು ಉಪಾಧಿಯ ವಿಶೇಷವೂ ಇಲ್ಲದೆ ಶಾಂತವೂ ಅನಂತವೂ ಏಕವೂ ಅದ್ವಿತೀಯವೂ ಆಗಿರುವ **ಭೂಮು**ವೆಂಬ ನಿತ್ಯವಾದ ಬ್ರಹ್ಮವಿದೆಯಲ್ಲ, ಅದು (ಮಾತ್ರ) 'ಚೆನ್ನಾಗಿ' ಅರಿಯಲ್ಪಡತಕ್ಕದ್ದಲ್ಲ[3]-ಎಂದಭಿಪ್ರಾಯ.

ಹೀಗಿರುವದರಿಂದ ನಿನ್ನ ಬ್ರಹ್ಮವು ಇನ್ನೂ ಮಾಮಾಂಸ್ಯವೇ, ಎಂದರೆ ವಿಚಾರ ಮಾಡಿ (ಗೊತ್ತುಪಡಿಸ)ತಕ್ಕದ್ದೇ[4] ಎಂದು ನನ್ನ ಅಭಿಪ್ರಾಯವು. ॥ ೧ ॥

---

1. ಅಧ್ಯಾತ್ಮದ ಉಪಾಧಿಯಿಂದ ಪರಿಚ್ಛಿನ್ನವಾದ ಬ್ರಹ್ಮದ ರೂಪವನ್ನೂ ಅಧಿದೈವತವಾದ ಉಪಾಧಿಯಿಂದ ಪರಿಚ್ಛಿನ್ನವಾದ ಬ್ರಹ್ಮದರೂಪವನ್ನೂ ನೀನು ಸ್ವಲ್ಪವೇ ತಿಳಿದುಕೊಂಡಿದ್ದೀಯೆ. ಪೂರ್ಣವಾಗಿ ಅವೆರಡನ್ನೂ ತಿಳಿದುಕೊ-ಎಂಬುದು ಆಚಾರ್ಯನ ಅಭಿಪ್ರಾಯವಲ್ಲ. ಈ ಎರಡು ಉಪಾಧಿಗಳಿಂದ ಕೂಡಿರುವದೇ ಬ್ರಹ್ಮವು, ಅದನ್ನು ನಾನು ಅರಿತುಕೊಂಡಿದ್ದೇನೆ—ಎಂದು ತಿಳಿದಿರುವೆಯಾದರೆ ಬ್ರಹ್ಮದ ಸ್ವರೂಪವನ್ನು ನೀನು ಸರಿಯಾಗಿ ತಿಳಿದುಕೊಂಡಂತೆ ಆಗಲಿಲ್ಲ ಎಂಬುದೇ ಅಭಿಪ್ರಾಯವು.

2 'ತದಪಿ ಚ ದೇವೇಷು' ಎಂದಿಷ್ಟೇ ಇಟ್ಟುಕೊಂಡಿದೆ. ಇದರ ಹಿಂದೆ 'ಯದಧ್ಯಾತ್ಮಂ ಯದಪಿ ದೇವೇಷು' (ಆ॥) "ಯದಧ್ಯಾತ್ಮಂ ಯದಧಿದೈವಂ" (ಆ॥) "ಯದಧ್ಯಾತ್ಮಮ್" (ಮೈ॥)-ಎಂದು ಬಗೆಬಗೆಯಾದ ಪಾಠಗಳಿವೆ; ಅವು ಯಾವವೂ ಪ್ರಕೃತಕ್ಕೆ ಹೊಂದುವದಿಲ್ಲವಾಗಿ ಲೇಖಕರ ಪ್ರಮಾದವೆಂದೆಣಿಸಿ ಕೈಬಿಟ್ಟಿರುತ್ತದೆ.

3. ವಿಷಯವಲ್ಲವೇ ಅಲ್ಲ

4. ಬ್ರಹ್ಮದ ಅರಿವು ನಿನಗೆ ಇನ್ನೂ ಸರಿಯಾಗಿ ಆಗಿಲ್ಲ.

(ಭಾಷ್ಯ)

ಳಳ ಏವಮ್ ಆಚಾರ್ಯೋಕ್ತಃ ಶಿಷ್ಯಃ ಏಕಾನ್ತೇ ಉಪವಿಷ್ಟಃ ಸಮಾಹಿತಃ ಸ್ಸ ಯಥೋಕ್ತಮಾಚಾರ್ಯೇಣ ಆಗಮಮ್ ಅರ್ಥತೋ ವಿಚಾರ್ಯ, ತರ್ಕತಶ್ಚ ನಿರ್ಧಾರ್ಯ ಸ್ವಾನುಭವಂ ಕೃತ್ವಾ ಆಚಾರ್ಯಸಕಾಶಮುಪಗಮ್ಯೋವಾಚ ಮನ್ಯೇಽಹಮಥೇದಾನೀಂ ವಿದಿತರಿ ಬ್ರಹ್ಮೇತಿ । ಕಥಮಿತಿ? ಶೃಣುತ—

(ಭಾಷ್ಯಾರ್ಥ)

ಹೀಗೆಂದು ಆಚಾರ್ಯನು ಹೇಳಲು ಶಿಷ್ಯನು ಏಕಾಂತದಲ್ಲಿ ಕುಳಿತು ಮನಸ್ಸನ್ನು ಸಮಾಧಾನಗೊಳಿಸಿಕೊಂಡು[1] ಆಚಾರ್ಯನು ಹಿಂದೆ ಹೇಳಿದ ಆಗಮಾರ್ಥವನ್ನು[2] ವಿಚಾರಮಾಡಿ, ತರ್ಕದಿಂದಲೂ ನಿಶ್ಚಯಿಸಿ, ತನ್ನ ಅನುಭವಕ್ಕೆ ತಂದುಕೊಂಡು[3] ಆಚಾರ್ಯನ ಬಳಿಗೆ ಬಂದು "ಈಗ ನನಗೆ ಬ್ರಹ್ಮವು ತಿಳಿಯಿತೆಂದು ತೋನುತ್ತದೆ" ಎಂದನು.* (ಆಚಾರ್ಯನು) "ಅದು ಹೇಗೆ" (ಎನ್ನಲು ಹೇಳುತ್ತಾನೆ:) ಕೇಳಿರಿ:—

ನಾಹಂ ಮನ್ಯೇ ಸುವೇದೇತಿ
ನೋ ನ ವೇದೇತಿ ವೇದ ಚ ।
ಯೋ ನ ಸ್ತದ್ವೇದ ತದ್ವೇದ
ನೋ ನ ವೇದೇತಿ ವೇದ ಚ ॥ ೨ ॥

೨. ನಾನು ಚೆನ್ನಾಗಿ ಅರಿತುಕೊಂಡಿರುವೆನೆಂದು ಎಣಿಸಿರುವದಿಲ್ಲ, ಅರಿತುಕೊಂಡಿಲ್ಲವೆಂದೂ (ಎಣಿಸಿರುವ)ದಿಲ್ಲ, ಅರಿತೂ ಇರುತ್ತೇನೆ "ಅರಿತುಕೊಂಡಿಲ್ಲವೆಂದೂ (ಎಣಿಸಿರುವ)ದಿಲ್ಲ, ಅರಿತೂ ಇರುತ್ತೇನೆ." ಎಂಬಿದನ್ನು ನಮ್ಮಲ್ಲಿ ಯಾವನು ಬಲ್ಲನೋ (ಅವನೇ) ಅದನ್ನು ಬಲ್ಲನು.

---

1. ಮನಸ್ಸಿನಲ್ಲಿ ವಿಕ್ಷೇಪವಿಲ್ಲದೆ ಇರುವಾಗಲೇ ತತ್ತ್ವವು ಹೊಳೆಯುವದು; ಆದ್ದರಿಂದ ಸಮಾಧಾನವೆಂಬುದು ಒಂದು ಅಂತರಂಗಸಾಧನವು.

2. ೧-ಳರಲ್ಲಿ ಹೇಳಿದ್ದ ಅನುಭವಿಗಳ ಉಪದೇಶದ ಅರ್ಥವನ್ನು

3. ಆಗಮದಿಂದ ಕೇಳಿ ತಿಳಿದುಕೊಳ್ಳುವದು, ಯುಕ್ತಿಯಿಂದ ಮನನಮಾಡುವದು, ತನ್ನ ಅನುಭವಕ್ಕೆ ಹೊಂದಿಸಿಕೊಳ್ಳುವದು-ಈ ಮೂರೂ ಒಂದಾಗಿ ಸೇರಿದರೇ ತತ್ತ್ವದ ಅರಿವಾಗುವದು. ಶ್ರವಣಮನನನಿದಿಧ್ಯಾಸನಗಳನ್ನು ಆತ್ಮದರ್ಶನಕ್ಕೆ ಸಾಧನವೆಂದು ಶಾಸ್ತ್ರದಲ್ಲಿ ಹೇಳಿರುವದು ಈ ಕಾರಣದಿಂದಲೇ ಎಂದು ಭಾವ.

(ಭಾಷ್ಯ)

೪೫. ನಾಹಂ ಮನ್ಯೇ ಸುವೇದೇತಿ ನೈವಾಹಂ ಮನ್ಯೇ ಸುವೇದ ಬ್ರಹ್ಮೇತಿ । 'ನೈವ ತರ್ಹಿ ವಿದಿತಂ ತ್ವಯಾ ಬ್ರಹ್ಮ' ಇತ್ಯುಕ್ತ ಆಹ 'ನೋ ನ ವೇದೇತಿ ವೇದ ಚ' । 'ವೇದ ಚ' ಇತಿ ಚಶಬ್ದಾತ್ ನ ವೇದ ಚ ॥

'ನಾನು ಚೆನ್ನಾಗಿ ಅರಿತುಕೊಂಡಿರುವೆನೆಂದು ಎಣಿಸಿರುವದಿಲ್ಲ' ಎಂದರೆ ಬ್ರಹ್ಮನನ್ನು ಚೆನ್ನಾಗಿ ಅರಿತಿರುವೆನೆಂದು ನಾನು ಎಣಿಸಿರುವದೇ ಇಲ್ಲ. "ಹಾಗಾದರೆ ನಿನಗೆ ಬ್ರಹ್ಮವು ತಿಳಿದೇ ಇಲ್ಲವೆಂದಾಯಿತಲ್ಲ!" ಎಂದರೆ ಅದಕ್ಕೆ ಹೇಳುತ್ತಾನೆ: "(ನಾನು) ಅರಿತುಕೊಂಡಿಲ್ಲವೆಂದೂ (ಎಣಿಸಿರುವ)ದಿಲ್ಲ, ಅರಿತೂ ಇರುತ್ತೇನೆ." ವೇದ ಚ ಎಂದು ಚಶಬ್ದವನ್ನು ಉಪಯೋಗಿಸಿರುವದರಿಂದ 'ಅರಿತೂ ಇಲ್ಲ' (ಎಂದು ಸೇರಿಸಿಕೊಳ್ಳಬೇಕು).

(ಭಾಷ್ಯ)

೪೬. ನನು ವಿಪ್ರತಿಷಿದ್ಧಂ ನಾಹಂ ಮನ್ಯೇ ಸುವೇದೇತಿ ನೋ ನ ವೇದೇತಿ ವೇದ ಚೇತಿ (ಚ) । ಯದಿ ನ ಮನ್ಯಸೇ ಸುವೇದೇತಿ ಕಥಂ ಮನ್ಯಸೇ ವೇದ ಚೇತಿ? ಅಥ ಮನ್ಯಸೇ ವೇದೈವೇತಿ ಕಥಂ ನಮನ್ಯಸೇ ಸುವೇದೇತಿ? ಏಕಂ ವಸ್ತು ಯೇನ ಜ್ಞಾಯತೇ ತೇನೈವ ತದೇವ ವಸ್ತು ನ ಸುವಿಜ್ಞಾಯತ ಇತಿ ವಿಪ್ರತಿಷಿದ್ಧಂ ಸಂಶಯವಿಪರ್ಯಯೌ ವರ್ಜಯಿತ್ವಾ । ನ ಚ ಬ್ರಹ್ಮ ಸಂಶಯಿತತ್ವೇನ ಜ್ಞೇಯಂ ವಿಪರೀತತ್ವೇನ ವಾ-ಇತಿ ನಿಯನ್ತುಂ ಶಕ್ಯಮ್ । ಸಂಶಯವಿಪರ್ಯಯೌ ಹಿ ಸರ್ವತ್ರಾನರ್ಥಕರತ್ವೇನೈವ ಪ್ರಸಿದ್ಧೌ ॥ ಏವಮಾಚಾರ್ಯೇಣ ವಿಚಾಲ್ಯಮಾನೋಽಪಿ ಶಿಷ್ಯೋ ನ ವಿಚಚಾಲ । "ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ" (೧-೪) ಇತ್ಯಾಚಾರ್ಯೋಕ್ತಾಗಮಸಮ್ಪ್ರದಾಯಬಲಾತ್ । ಉಪಪತ್ತ್ಯನುಭವಬಲಾಚ್ಚ । ಜಗರ್ಜ ಚ ಬ್ರಹ್ಮವಿದ್ಯಾಯಾಂ ದೃಢನಿಶ್ಚಯತಾಂ ದರ್ಶಯನ್ ಆತ್ಮನಃ ॥

(ಭಾಷ್ಯಾರ್ಥ)

(ಆಕ್ಷೇಪ):—"ನಾನು ಚೆನ್ನಾಗಿ ಅರಿತುಕೊಂಡಿರುವೆನೆಂದು ಎಣಿಸಿರುವದಿಲ್ಲ" ಎಂದೂ "ಅರಿತಿಲ್ಲವೆಂದೂ ಇಲ್ಲ, ಅರಿತೂ ಇದ್ದೇನೆ" ಎಂದೂ ಹೇಳುವದು (ಒಂದಕ್ಕೊಂದು) ವಿರುದ್ಧವಲ್ಲವೆ? ಚೆನ್ನಾಗಿ ಅರಿತುಕೊಂಡಿರುವೆನೆಂದು ನೀನು ಎಣಿಸಿಲ್ಲವಾದರೆ 'ಅರಿತೂ ಇದ್ದೇನೆ' ಎಂದು ಎಣಿಸಿರುವದು ಹೇಗೆ? ಹಾಗಿಲ್ಲದೆ ಅರಿತೇ ಇರುವೆನೆಂದು ಎಣಿಸಿರುವೆಯಾದರೆ ಚೆನ್ನಾಗಿ ಅರಿತಿರುವೆನೆಂದು ಎಣಿಸಿಲ್ಲವೆಂಬುದು ಹೇಗೆ? ಒಂದು ವಸ್ತು ಯಾವನಿಗೆ ತಿಳಿದಿರುವದೋ ಅವನಿಗೇ ಅದೇ ವಸ್ತು ಚೆನ್ನಾಗಿ

---

* ಇಲ್ಲಿಯವರೆಗಿನ ಭಾಷ್ಯವನ್ನು ಹಿಂದಿನ ಮಂತ್ರದ "ಮನ್ಯೇ ವಿದಿತಮ್" ಎಂಬುದರ ವಿವರಣೆಯೆಂದೂ ಭಾವಿಸಬಹುದಾಗಿದೆ. ಆ ಮಂತ್ರದ ಅನುವಾದಕ್ಕೆ ಕೊಟ್ಟಿರುವ ಟಿಪ್ಪಣಿಯನ್ನು ನೋಡಿ.

ತಿಳಿದಿಲ್ಲವೆಂಬುದು—ಸಂಶಯ ವಿಪರೀತ ಜ್ಞಾನಗಳಿದ್ದ ಹೊರತು—ವಿರುದ್ಧವಾದದ್ದು. ಬ್ರಹ್ಮವನ್ನು ಸಂಶಯವಾಗಿಯೇ ತಿಳಿಯತಕ್ಕದ್ದೆಂದಾಗಲಿ ವಿರುದ್ಧವಾಗಿಯೇ ತಿಳಿದು ಕೊಳ್ಳತಕ್ಕದ್ದೆಂದಾಗಲಿ ನಿಯಮವನ್ನು ಹೇಳುವದಕ್ಕೆ ಬರುವದಿಲ್ಲ. ಏಕೆಂದರೆ ಸಂಶಯ, ವಿಪರ್ಯಯ[1]-ಈ ಎರಡೂ ಅನರ್ಥಕ್ಕೆ ಕಾರಣವಾಗಿರುವವೆಂದೇ ಎಲ್ಲೆಲ್ಲಿಯೂ ಪ್ರಸಿದ್ಧವಾಗಿರುತ್ತದೆ.

ಹೀಗೆಂದು ಆಚಾರ್ಯನು (ಬುದ್ಧಿಯನ್ನು) ಕದಲಿಸಿದರೂ ಶಿಷ್ಯನು (ಸ್ವಲ್ಪವೂ) ಕದಲಲಿಲ್ಲ; ಏಕೆಂದರೆ (ಅವನಿಗೆ) "ಅದು ತಿಳಿಯಲ್ಪಟ್ಟದ್ದಕ್ಕಿಂತಲೂ ಬೇರೆಯೇ, ಮತ್ತು ತಿಳಿಯಲ್ಪಡದೆ ಇರುವದಕ್ಕಿಂತಲೂ ಬೇರೆಯೇ" (೧-೪) ಎಂದು (ಹಿಂದೆ) ಆಚಾರ್ಯನು ಹೇಳಿಕೊಟ್ಟದ್ದ **ಆಗಮಸಂಪ್ರದಾಯದ** ಬಲವಿತ್ತು, ಯುಕ್ತ್ಯನುಭವಗಳ ಬಲವೂ ಇತ್ತು. (ಆದ್ದರಿಂದ) ತನಗೆ **ಬ್ರಹ್ಮವಿದ್ಯೆ**ಯಲ್ಲಿ ದೃಢವಾದ ನಿಶ್ಚಯವಿದೆಯೆಂಬುದನ್ನು ತೋರಿಸುವದಕ್ಕಾಗಿ (ಹೀಗೆಂದು) ಗರ್ಜಿಸಿದನು.

(ಭಾಷ್ಯ)

೪೭. ಕಥಮಿತಿ? ಉಚ್ಯತೇ। ಯೋ ಯಃ ಕಶ್ಚಿತ್ ನಃ ಅಸ್ಮಾಕಂ ಸಬ್ರಹ್ಮಚಾರಿಣಾಂ ಮಧ್ಯೇ ತತ್ ಉಕ್ತಂ ವಚನಂ ತತ್ತ್ವತೋ ವೇದ ಸಃ ತತ್ ಬ್ರಹ್ಮ ವೇದ। ಕಿಂ ಪುನಸ್ತದ್ವಚನಮ್? ಇತ್ಯತ ಆಹ-"ನೋ ನ ವೇದೇತಿ ವೇದ ಚ" ಇತಿ। ಯದೇವ "ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ" (೧-೪) ಇತ್ಯುಕ್ತಮ್, ತದೇವ ವಸ್ತು ಅನುಮಾನಾನುಭವಾಭ್ಯಾಂ ಸಂಯೋಜ್ಯ ನಿಶ್ಚಿತಂ ವಾಕ್ಯಾನ್ತರೇಣ "ನೋ ನ ವೇದೇತಿ ವೇದ ಚ" ಇತ್ಯವೋಚತ್, ಆಚಾರ್ಯಬುದ್ಧಿಸಂವಾದಾರ್ಥಂ ಮನ್ದಬುದ್ಧಿಗ್ರಹಣವ್ಯಪೋಹಾರ್ಥಂ ಚ। ತಥಾ ಚ ಗರ್ಜಿತಮುಪಪನ್ನಂ ಭವತಿ "ಯೋ ನ ಸ್ತದ್ವೇದ ತದ್ವೇದ" ಇತಿ ॥

(ಭಾಷ್ಯಾರ್ಥ)

ಹೇಗೆ ಗರ್ಜಿಸಿದನು?-ಎಂದರೆ ಕೇಳಿರಿ. ನಮ್ಮಗಳಲ್ಲಿ ಎಂದರೆ ಜೊತೆಯ ಬ್ರಹ್ಮಚಾರಿಗಳಾದ ನಮ್ಮಗಳೊಳಗೆ ಯಾವನು ಯಾವನೇ ಆಗಲಿ ಈ (ನಾನು) ಹೇಳಿದ ಮಾತನ್ನು ಸರಿಯಾಗಿ ತಿಳಿದುಕೊಳ್ಳಬಲ್ಲನೋ ಅವನೇ ಆ ಬ್ರಹ್ಮವನ್ನು ಬಲ್ಲನು. ಆ ವಚನವಾದರೂ ಯಾವದು?-ಎಂದರೆ ಹೇಳುತ್ತಾನೆ: "ಅರಿತಿಲ್ಲವೆಂದೂ ಇಲ್ಲ, ಅರಿತೂ ಇರುತ್ತೇನೆ" "ಅದು ತಿಳಿಯಲ್ಪಟ್ಟದ್ದಕ್ಕಿಂತಲೂ ಬೇರೆಯೇ,

---

1. ಸಂಶಯ, ಮಿಥ್ಯಾಜ್ಞಾನ-ಇವೆರಡೂ ಅಜ್ಞಾನದಂತೆಯೇ ಜ್ಞಾನಬಾಧ್ಯವಾಗಿರುತ್ತವೆ. ಅವುಗಳಿರುವವರೆಗೆ ವಸ್ತುವಿನ ಪರಮಾರ್ಥಜ್ಞಾನವಿಲ್ಲದಿರುವದಿಲ್ಲ, ಅನರ್ಥವೂ ಆಗುತ್ತದೆ.

ಮತ್ತು ತಿಳಿಯಲ್ಪಡದೆ ಇರುವದಕ್ಕಿಂತಲೂ ಬೇರೆಯೇ" (೧-೪) ಎಂದು ಯಾವ ದನ್ನು ಹಿಂದೆ ಹೇಳಿತ್ತೋ ಅದೇ ವಸ್ತುವನ್ನೇ **ಅನುಮಾನ, ಅನುಭವ**-ಈ ಎರ ಡನ್ನೂ ಜೋಡಿಸಿಕೊಂಡು ನಿಶ್ಚಯಿಸಿ "ಅರಿತಿಲ್ಲವೆಂದೂ ಇಲ್ಲ, ಅರಿತೂ ಇರುತ್ತೇನೆ" ಎಂದು ಬೇರೆಯ ಮಾತಿನಿಂದ ಹೇಳಿರುತ್ತಾನೆ. (ಇದು) ಆಚಾರ್ಯರ ತಿಳಿವಳಿಕೆಗೆ ಹೊಂದಿಕೆಯಾಗುವದಕ್ಕೆ[1], ಮತ್ತು ಅಲ್ಪಬುದ್ಧಿಯವರು ತಿಳಿದುಕೊಂಡಿರುವದನ್ನು ಪರಿಹರಿಸುದದಕ್ಕೆ.[2] ಹೀಗೆಂದು ಇಟ್ಟುಕೊಂಡರೇ "ಇದನ್ನು ನಮ್ಮಗಳಲ್ಲಿ ಯಾವನು ಬಲ್ಲನೋ ಅವನೇ ಇದನ್ನು ಬಲ್ಲನು" ಎಂದು ಗರ್ಜಿಸಿರುವದು ಯುಕ್ತವಾಗುತ್ತದೆ.[3]

(ಭಾಷ್ಯ)

೪೮. ಶಿಷ್ಯಾಚಾರ್ಯಸಂವಾದಾತ್ ಪ್ರತಿನಿವೃತ್ಯ ಸ್ವೇನ ರೂಪೇಣ ಶ್ರುತಿಃ ಸಮಸ್ತಸಂವಾದನಿರ್ವೃತ್ತಮರ್ಥಮೇವ ಬೋಧಯತಿ-'ಯಸ್ಯಾಮತಮ್' ಇತ್ಯಾದಿನಾ ॥

(ಭಾಷ್ಯಾರ್ಥ)

ಶಿಷ್ಯಾಚಾರ್ಯರ ಸಂವಾದ (ರೂಪವನ್ನು) ಬಿಟ್ಟು ಶ್ರುತಿಯು ತನ್ನ ರೂಪ ದಿಂದಲೇ[4] ಒಟ್ಟು ಸಂವಾದದಿಂದ ಏರ್ಪಟ್ಟಿರುವ ವಿಷಯವನ್ನೇ[5] "ಯಸ್ಯಾಮತಮ್" ಎಂದು ಮುಂತಾಗಿ ತಿಳಿಸಿಕೊಡುತ್ತದೆ:

ಯಸ್ಯಾಮತಂ ತಸ್ಯ ಮತಂ
ಮತಂ ಯಸ್ಯ ನ ವೇದ ಸಃ।
ಅವಿಜ್ಞಾತಂ ವಿಜಾನತಾಂ
ವಿಜ್ಞಾತಮವಿಜಾನತಾಮ್ ॥ ೩ ॥

೩. ಯಾವನಿಗೆ (ಅದು) ತಿಳಿಯದಿರುವದೋ ಅವನಿಗೆ ತಿಳಿದಿರುವದು. ಯಾವನಿಗೆ ತಿಳಿದಿರುವದೋ ಅವನು ಅರಿಯನು. ಅರಿಯುವವರಿಗೆ ತಿಳಿಯದೆ ಇರುತ್ತದೆ, ಅರಿಯದವರಿಗೆ ತಿಳಿದಿರುತ್ತದೆ.

---

1 ಗುರುವು ಹೇಳಿದ್ದನ್ನು ತಾನು ತಿಳಿದುಕೊಂಡಿರುವೆನೆಂದು ತಿಳಿಸುವದಕ್ಕೆ.

2 ಆತ್ಮನು ವಿಷಯನಲ್ಲದಿದ್ದರೆ ಅವನನ್ನು ಅರಿಯುವದಕ್ಕೇ ಆಗಲಾರದೆಂದು ಎಣಿಸುವ ಸಾಮಾನ್ಯಬುದ್ಧಿಯ ಜನರ ತಪ್ಪು ತಿಳಿವಳಿಕೆಯನ್ನು ಕಳೆಯುವದಕ್ಕೆ

3. ಹಾಗಿಲ್ಲದಿದ್ದರೆ ಯಾರೊಬ್ಬರಿಗೂ ಅದನ್ನು ಅರಿಯಲೇ ಆರರು ಎನ್ನಬೇಕಾಗುತ್ತತ್ತೆಂದು ಭಾವ. ಆತ್ಮಜ್ಞಾನದ ಸ್ವಭಾವದ ವಿಷಯಕ್ಕೆ ಬೃ ಭಾ ೧-೪-೧೦, ೪-೪-೩೦ ನೋಡಿರಿ.

4. ಶ್ರುತಿಯೇ ಗುರುಶಿಷ್ಯರಾಗಿ ಸಂವಾದರೂಪವಾಗಿ ಹೇಳಿ ಈಗ ಶ್ರುತಿಯ ರೂಪದಿಂದ ಉಪಸಂಹಾರಮಾಡುತ್ತದೆ.

5 ಬ್ರಹ್ಮವು ಯಾವ ಜ್ಞಾನಕ್ಕೂ ವಿಷಯವಲ್ಲವೆಂಬುದನ್ನೇ ಇನ್ನೊಂದು ಸಲ ಹೇಳಿದರೂ ಪುನರುಕ್ತಿಯಿಲ್ಲ.

(ಭಾಷ್ಯ)

೪೯. ಯಸ್ಯ ಬ್ರಹ್ಮವಿದಃ ಅಮತಮ್ ಅವಿಜ್ಞಾತಮ್ ಅವಿದಿತಂ ಬ್ರಹ್ಮೇತಿ ಮತಮ್ ಅಭಿಪ್ರಾಯಃ ನಿಶ್ಚಯಃ ತಸ್ಯ ಮತಂ ಜ್ಞಾತಂ ಸಮ್ಯಗ್ ಬ್ರಹ್ಮ-ಇತ್ಯಭಿಪ್ರಾಯಃ। ಯಸ್ಯ ಪುನಃ ಮತಂ ವಿದಿತಂ ಮಯಾ ಬ್ರಹ್ಮ-ಇತಿ ನಿಶ್ಚಯಃ ನ ವೇದೈವ ಸಃ ನ ಬ್ರಹ್ಮ ವಿಜಾನಾತಿ ಸಃ ॥

(ಭಾಷ್ಯಾರ್ಥ)

ಯಾವ ಬ್ರಹ್ಮಜ್ಞಾನಿಗೆ (ಅದು) ತಿಳಿಯದಿರುವದೋ ಎಂದರೆ ಬ್ರಹ್ಮವು ಅರಿಯಲ್ಪಡತಕ್ಕದ್ದಲ್ಲ, ತಿಳಿದುಕೊಳ್ಳತಕ್ಕ (ವಿಷಯ)ವಲ್ಲ ಎಂದು ಮತವಿರುವದೋ, (ಹೀಗೆಂಬ) ಅಭಿಪ್ರಾಯವಿರುವದೋ ನಿಶ್ಚಯವಿರುವದೋ ಅವನಿಗೆ ತಿಳಿದಿರುವದು, ಬ್ರಹ್ಮವು ಸರಿಯಾಗಿ ತಿಳಿಯಬಂದಿರುವದು ಎಂದು ಅಭಿಪ್ರಾಯ. ಹಾಗಿಲ್ಲದೆ ಯಾವನಿಗೆ ತಿಳಿದಿರುವದೋ, ಎಂದರೆ (ಯಾವನಿಗೆ) ನಾನು ಬ್ರಹ್ಮವನ್ನು ತಿಳಿದುಕೊಂಡಿರುವೆನು ಎಂಬ ನಿಶ್ಚಯವಾಗಿರುವದೋ ಅವನು ಅರಿಯಲೇ ಇಲ್ಲ, ಅವನು ಬ್ರಹ್ಮವನ್ನು ತಿಳಿದಿರುವದಿಲ್ಲ

(ಭಾಷ್ಯ)

೫೦. ವಿದ್ವದವಿದುಷೋರ್ಯಥೋಕ್ತಾ ಪಕ್ಷಾವಿವಧಾರಯತಿ-"ಅವಿಜ್ಞಾತಂ ವಿಜಾನತಾಮ್" ಇತಿ[1]। ಅವಿಜ್ಞಾತಮ್ ಅಮತಮ್ ಅವಿದಿತಮೇವ ಬ್ರಹ್ಮ ವಿಜಾನತಾಮ್ ಸಮ್ಯಗ್ವಿದಿತವತಾಮ್ ಇತ್ಯೇತತ್। ವಿಜ್ಞಾತಂ ವಿದಿತಂ ಬ್ರಹ್ಮ ಅವಿಜಾನತಾಮ್ ಅಸಮ್ಯಗ್ದರ್ಶಿನಾಮ್, ಇನ್ದ್ರಿಯಮನೋಬುದ್ಧಿಷ್ವೇವಾತ್ಮದರ್ಶಿನಾಮ್ ಇತ್ಯರ್ಥಃ। ನ ತ್ವತ್ಯನ್ತಮೇವಾವ್ಯುತ್ಪನ್ನಬುದ್ಧೀನಾಮ್। ನ ಹಿ ತೇಷಾಂ "ವಿಜ್ಞಾತಮ್ ಅಸ್ಮಾಭಿರ್ಬ್ರಹ್ಮ" ಇತಿ ಮತಿರ್ಭವತಿ। ಇನ್ದ್ರಿಯಮನೋಬುದ್ಧ್ಯುಪಾಧಿಷ್ವಾತ್ಮದರ್ಶಿನಾಂ ತು ಬ್ರಹ್ಮೋಪಾಧಿವಿವೇಕಾನುಪಲಮ್ಭಾತ್ ಬುದ್ಧ್ಯಾದ್ಯುಪಾಧೇಶ್ಚ ವಿಜ್ಞಾತತ್ವಾತ್ "ವಿದಿತಂ ಬ್ರಹ್ಮ" ಇತ್ಯುಪಪದ್ಯತೇ ಭ್ರಾನ್ತಿಃ। ಇತ್ಯತಃ ಅಸಮ್ಯಗ್ದರ್ಶನಂ ಪೂರ್ವಪಕ್ಷತ್ವೇನೋಪನ್ಯಸ್ಯತೇ "ವಿಜ್ಞಾತಮವಿಜಾನತಾಮ್" ಇತಿ। ಅಥವಾ ಹೇತ್ವರ್ಥ ಉತ್ತರಾರ್ಧಃ "ಅವಿಜ್ಞಾತಮ್" ಇತ್ಯಾದಿಃ ॥

(ಭಾಷ್ಯಾರ್ಥ)

"ಅವಿಜ್ಞಾತಂ ವಿಜಾನತಾಮ್" (ಎಂಬ ಉತ್ತರಾರ್ಧದಲ್ಲಿ) ಮೇಲೆ ಹೇಳಿರುವ ಜ್ಞಾನಿ, ಅಜ್ಞಾನಿ-ಈ ಇಬ್ಬರ ಪಕ್ಷಗಳನ್ನು ನಿರ್ಣಯಿಸಿ ಹೇಳಿರುತ್ತದೆ.

---

1. ಅವಿಜ್ಞಾತಂ ವಿಜಾನತಾಮ್ ಇತಿ ಎಂಬುದು (ವಾ॥) ಪಾಠದಲ್ಲಿ ಮಾತ್ರ ಇದೆ.

ಅರಿಯುವವರಿಗೆ (ತತ್ತ್ವವನ್ನು) ಸರಿಯಾಗಿ ಬಲ್ಲವರಿಗೆ ಬ್ರಹ್ಮವು ತಿಳಿಯದೆ ಇರುತ್ತದೆ, ತಿಳಿಯತಕ್ಕದ್ದಲ್ಲದೆ ತಿಳಿವಿಗೆ ವಿಷಯವೇ ಅಲ್ಲದೆ ಇರುತ್ತದೆ ಎಂದಭಿಪ್ರಾಯ. ಅರಿಯದವರಿಗೆ ಎಂದರೆ ನಿಜವನ್ನು ಕಾಣದೆ ಇಂದ್ರಿಯ, ಮನಸ್ಸು, ಬುದ್ಧಿ–ಇವುಗಳಲ್ಲಿಯೇ ಆತ್ಮನನ್ನು ಕಾಣುವವರಿಗೆ ತಿಳಿದಿರುತ್ತದೆ, ಬ್ರಹ್ಮವು ತಿಳಿವಿಗೆ ವಿಷಯವಾಗಿರುತ್ತದೆ. (ಇಲ್ಲಿ ಅರಿಯದವರಿಗೆ ಎಂದರೆ ನಿಜವನ್ನರಿಯದವರಿಗೆ ಎಂದೇ ಅರ್ಥ), ಯಾವ ತಿಳಿವಳಿಕೆಯೂ ಇಲ್ಲದವರಿಗೆ ಎಂದರ್ಥವಲ್ಲ[1] ಏಕೆಂದರೆ ಅವರಿಗೆ "ನಾವು ಬ್ರಹ್ಮವನ್ನು ಅರಿತುಕೊಂಡಿರುವೆವು" ಎಂಬ ಅಭಿಪ್ರಾಯವುಂಟಾಗಿರುವದೇ ಇಲ್ಲ. ಇಂದ್ರಿಯ, ಮನಸ್ಸು, ಬುದ್ಧಿ–ಎಂಬ ಉಪಾಧಿಗಳನ್ನು ಆತ್ಮನೆಂದು ತಿಳಿದುಕೊಂಡವರಿಗೆ ಮಾತ್ರ ಬ್ರಹ್ಮದ (ಈ) ಉಪಾಧಿಗಳನ್ನು ವಿಂಗಡಿಸಿ ಅರಿತುಕೊಳ್ಳದೆ ಇರುವದರಿಂದಲೂ ಬುದ್ಧಿಯೇ ಮುಂತಾದ ಉಪಾಧಿಗಳನ್ನು[2] (ಆತ್ಮನೆಂದು) ತಿಳಿದುಕೊಂಡಿರುವದರಿಂದಲೂ "ಬ್ರಹ್ಮವನ್ನು ಅರಿತುಕೊಂಡಿರುವೆವು" ಎಂಬ ಭ್ರಾಂತಿಯುಂಟಾಗಬಹುದಾಗಿದೆ. ಆದ್ದರಿಂದ ಸರಿಯಲ್ಲದ (ಈ) ತಿಳಿವಳಿಕೆಯನ್ನೇ **ಪೂರ್ವಪಕ್ಷ**ವಾಗಿಟ್ಟುಕೊಂಡು[3] "ಅರಿಯುವವರಿಗೆ ತಿಳಿಯದೆ ಇರುತ್ತದೆ" ಎಂಬ ಮಾತನ್ನು ಹೇಳಿದೆ(ಯೆಂದು ತಿಳಿಯಬೇಕು). ಅಥವಾ "ಅರಿಯುವವರಿಗೆ ತಿಳಿಯದೆ ಇರುತ್ತದೆ" ಎಂದು ಮುಂತಾಗಿರುವ (ಮಂತ್ರದ) ಉತ್ತರಾರ್ಧವು (ಪೂರ್ವಾರ್ಧದಲ್ಲಿ ಹೇಳಿರುವ ವಿಷಯಕ್ಕೆ) ಕಾರಣವನ್ನು[4] ಹೇಳುವದಕ್ಕೆ (ಬಂದಿದೆ ಎಂದಾದರೂ ಇಟುಕೊಳ್ಳಬಹುದು).

---

1. ಅರಿತವರೆಂದರೆ ಚೆನ್ನಾಗಿ ತಿಳಿದುಕೊಂಡಿರುವವರು, ಅರಿಯದವರೆಂದರೆ ಏನೇನೂ ತಿಳಿಯದವರು ಎಂದೇ ಸರಳವಾಗಿ ಏಕೆ ಅರ್ಥವನ್ನು ಮಾಡಿಬಿಡಬಾರದು?–ಎಂಬ ಶಂಕೆಗೆ ಇದು ಸಮಾಧಾನ.

2. ಯಾವ ಪರಿಚ್ಛೇದವೂ ಇಲ್ಲದ ಆತ್ಮನಿಗೆ ಶರೀರ, ಪ್ರಾಣ, ಇಂದ್ರಿಯ, ಮನಸ್ಸು, ಬುದ್ಧಿ–ಎಂಬ ಉಪಾಧಿಗಳಿಂದಲೇ ಪರಿಚ್ಛೇದವುಂಟಾಗಿರುವದು ಎಂಬುದನ್ನರಿಯದೆ ಅವಿವೇಕಿಗಳು ಆ ಉಪಾಧಿಗಳನ್ನೇ ಆತ್ಮನೆಂದು ತಿಳಿದು ಮೋಸಹೋಗುವರು.

3. ಆವರ ಭಾವನೆಯನ್ನು ಪೂರ್ವಪಕ್ಷವಾಗಿಟ್ಟುಕೊಂಡು ಆತ್ಮನು ಅವಿಷಯನೆಂಬುದನ್ನು ತಿಳಿಸಿರುತ್ತದೆ ಎಂದು ಭಾವ.

4. ಬ್ರಹ್ಮನನ್ನು ಅರಿತವರಿಗೆ ಅಧ್ಯಸ್ತವಾದ ಜ್ಞೇಯತ್ವವು ಕಾಣುವದಿಲ್ಲ ಎಂದ ಟೀಕೆಯಲ್ಲಿದೆ. ನಿಜವನ್ನರಿತವನಿಗೆ ಬ್ರಹ್ಮವು ಎಂದಿಗೂ ವಿಷಯವಾಗಿರುವದಿಲ್ಲ; ಆದ್ದರಿಂದ ಅವನ ಮತವೇ ಸರಿಯಾದ ಮತವು–ಎಂದು ಭಾಷ್ಯಕಾರರು ಮಂತ್ರವಾಕ್ಯವನ್ನು ಅನ್ವಯಿಸಿರುವಂತೆ ತೋರುತ್ತದೆ.

ಬ್ರಹ್ಮವನ್ನು ಹೇಗೆ ಅರಿಯಬೇಕು?

(ಭಾಷ್ಯ)

೫೧. "ಅವಿಜ್ಞಾತಂ ವಿಜಾನತಾಮ್" ಇತ್ಯವಧೃತಮ್। ಯದಿ ಬ್ರಹ್ಮ ಅತ್ಯನ್ತಮೇವ ಅವಿಜ್ಞಾತಮ್, ಲೌಕಿಕಾನಾಂ ಬ್ರಹ್ಮವಿದಾಂ ಚ ಅವಿಶೇಷಃ ಪ್ರಾಪ್ತಃ। "ಅವಿಜ್ಞಾತಂ ವಿಜಾನತಾಮ್" ಇತಿ ಚ ಪರಸ್ಪರವಿರುದ್ಧಮ್। ಕಥಂ ತು ತದ್ಬ್ರಹ್ಮ ಸಮ್ಯಗ್ವಿದಿತಂ ಭವತಿ? ಇತ್ಯೇವಮರ್ಥಮಾಹ—

(ಭಾಷ್ಯಾರ್ಥ)

"ಅರಿಯುವವರಿಗೆ ತಿಳಿಯದೆ ಇರುತ್ತದೆ" ಎಂದು ನಿರ್ಣಯಿಸಿದ್ದಾಯಿತು. ಬ್ರಹ್ಮವು ತೀರ ತಿಳಿಯದೆ ಇದ್ದರೆ ಸಾಮಾನ್ಯ ಜನರಿಗೂ ಬ್ರಹ್ಮಜ್ಞಾನಿಗಳಿಗೂ ಯಾವ ಹೆಚ್ಚುಕಡಿಮೆಯೂ ಇಲ್ಲವೆಂದಾಗುವದು. ಇದಲ್ಲದೆ "ಅರಿಯುವವರಿಗೆ ತಿಳಿಯದೆ ಇರುತ್ತದೆ" ಎಂಬುದು ಒಂದಕ್ಕೊಂದಕ್ಕೆ ವಿರುದ್ಧವಾದ (ಮಾತು). ಆ ಬ್ರಹ್ಮವನ್ನು ಹೇಗೆ (ಅರಿತರೆ) ಸರಿಯಾಗಿ ಅರಿತಂತೆ ಆಗುವದು?—ಎಂಬದನ್ನು (ತಿಳಿಸುವ)ದಕ್ಕಾಗಿ[1] (ಮಂತ್ರವು ಹೀಗೆಂದು) ಹೇಳುತ್ತದೆ:

ಪ್ರತಿಬೋಧವಿದಿತಂ ಮತ-
ಮಮೃತತ್ವಂ ಹಿ ವಿನ್ದತೇ।
ಆತ್ಮನಾ ವಿನ್ದತೇ ವೀರ್ಯಂ
ವಿದ್ಯಯಾ ವಿನ್ದತೇಽಮೃತಮ್ ॥ ೪ ॥

೪. ಪ್ರತಿ ಬೋಧದಲ್ಲಿಯೂ ತಿಳಿದರೆ (ಸರಿಯಾಗಿ) ತಿಳಿದಂತೆ ಆಯಿತು. ಏಕೆಂದರೆ (ಆಗ) ಅಮೃತತ್ವವನ್ನು ಪಡೆಯುತ್ತಾನೆ. ಆತ್ಮನಿಂದ ವೀರ್ಯವನ್ನು ಪಡೆಯುತ್ತಾನೆ, ವಿದ್ಯೆಯಿಂದ ಅಮೃತತ್ವವನ್ನು ಪಡೆಯುತ್ತಾನೆ.

(ಭಾಷ್ಯ)

೫೨. ಪ್ರತಿಬೋಧವಿದಿತಂ ಬೋಧಂ ಬೋಧಂ ಪ್ರತಿ ವಿದಿತಮ್। ಬೋಧ ಶಬ್ದೇನ ಬೌದ್ಧಾಃ ಪ್ರತ್ಯಯಾ ಉಚ್ಯನ್ತೇ। ಸರ್ವೇ ಪ್ರತ್ಯಯಾ ವಿಷಯಿಣೋಭವನ್ತಿ ಯಸ್ಯ ಸ ಆತ್ಮಾ ಸರ್ವಬೋಧಾರ್ಹಾ ಪ್ರತಿಬುಧ್ಯತೇ ಸರ್ವಪ್ರತ್ಯಯದರ್ಶೀ ಚಿಚ್ಛಕ್ತಿಸ್ವರೂಪಮಾತ್ರಃ ಪ್ರತ್ಯಯೈರೇವ ಪ್ರತ್ಯಯೇಷ್ವವಿಶಿಷ್ಟತಯಾ ಲಕ್ಷ್ಯತೇ ನಾನ್ಯದ್

---

1. ಈ ಅಭಿಪ್ರಾಯವನ್ನು ಹಿಂದಿನ ಮಂತ್ರದ ಭಾಷ್ಯದಲ್ಲಿಯೇ ಹೇಳಿದೆಯಾದರೂ ಮಂತ್ರದಲ್ಲಿ ಅದು ಸ್ಪಷ್ಟವಾಗಿರುವದಿಲ್ಲ. ಅದನ್ನು ಈ ಮುಂದಿನ ಮಂತ್ರದಲ್ಲಿ ಸ್ಪಷ್ಟಗೊಳಿಸಲಾಗುತ್ತದೆ ಎಂದಭಿಪ್ರಾಯ.

ದ್ವಾರಮ್ ಅನ್ತರಾತ್ಮನೋ ವಿಜ್ಞಾನಾಯ । ಅತಃ ಪ್ರತ್ಯಯಪ್ರತ್ಯಗಾತ್ಮತಯಾ ವಿದಿತಂ ಬ್ರಹ್ಮ ಯದಾ ತದಾ ತತ್ ಮತಂ [1] ತತ್ಸಮ್ಯಗ್ದರ್ಶನಮ್ ಇತ್ಯರ್ಥಃ ॥

(ಭಾಷ್ಯಾರ್ಥ)

'ಪ್ರತಿ ಬೋಧದಲ್ಲಿಯೂ ತಿಳಿದರೆ' ಎಂದರೆ ಒಂದೊಂದು ಬೋಧದಲ್ಲಿಯೂ ತಿಳಿದರೆ ಎಂದರ್ಥ. ಇಲ್ಲಿ 'ಬೋಧೆ'ವೆಂಬ ಶಬ್ದವು ಬುದ್ಧಿಯ **ಪ್ರತ್ಯಯ**ಗಳನ್ನು ಹೇಳುತ್ತದೆ. ಎಲ್ಲಾ ಪ್ರತ್ಯಯಗಳೂ ಯಾವಾತನಿಗೆ ವಿಷಯವಾಗುವವೋ ಆ ಆತ್ಮನು [2] ಎಲ್ಲಾ ಬೋಧಗಳನ್ನೂ ಅರಿಯುತ್ತಾನೆ. ಎಲ್ಲಾ ಪ್ರತ್ಯಯಗಳನ್ನೂ ನೋಡುವ ಚೈತನ್ಯಶಕ್ತಿಯ ಸ್ವರೂಪವೇ ಆಗಿರುವ (ಆ ಆತ್ಮನು) ಪ್ರತ್ಯಯಗಳಿಂದಲೇ [3] (ಎಲ್ಲಾ) ಪ್ರತ್ಯಯಗಳಲ್ಲಿಯೂ ಸಮಾನವಾಗಿದ್ದುಕೊಂಡು [4] ತೋರುತ್ತಾನೆ; ಒಳಗಿರುವ ಆತ್ಮನನ್ನು ಅರಿಯುವದಕ್ಕೆ ಮತ್ತೊಂದು ದ್ವಾರವಿಲ್ಲ. ಆದ್ದರಿಂದ ಪ್ರತ್ಯಯಗಳ ಒಳ ಆತ್ಮನೆಂದು [5] ಯಾವಾಗ ಬ್ರಹ್ಮವನ್ನು ಅರಿಯುತ್ತೇವೆಯೋ ಆಗ ಅದನ್ನು ಅರಿತಂತಾಗುವದು. ಅದೇ ಸರಿಯಾದ ದರ್ಶನವು ಎಂದರ್ಥ.

(ಭಾಷ್ಯ)

೫೩. ಸರ್ವಪ್ರತ್ಯಯದರ್ಶಿತ್ವೇ ಚ ಉಪಜನಾಪಾಯವರ್ಜಿತದೃಕ್ಸ್ವರೂಪತಾ, ನಿತ್ಯತ್ವಂ, ವಿಶುದ್ಧಸ್ವರೂಪತ್ವಮ್, ಆತ್ಮತ್ವಂ, ನಿರ್ವಿಶೇಷತಾ, ಏಕತ್ವಂ ಚ ಸರ್ವಭೂತೇಷು ಸಿದ್ಧಂ ಭವೇತ್ । ಲಕ್ಷಣಭೇದಾಭಾವಾತ್ ವ್ಯೋಮ್ನ ಇವ ಘಟಗಿರಿಗುಹಾದಿಷು । ವಿದಿತಾವಿದಿತಾಭ್ಯಾಮ್ ಅನ್ಯದ್ ಬ್ರಹ್ಮ-ಇತ್ಯಾಗಮವಾಕ್ಯಾರ್ಥ ಏವಂ ಪರಿಶುದ್ಧ ಏವೋಪಸಂಹೃತೋ ಭವತಿ । "ದೃಷ್ಟೇರ್ದ್ರಷ್ಟಾ ಶ್ರುತೇಃ ಶ್ರೋತಾ ಮತೇರ್ಮನ್ತಾ ವಿಜ್ಞಾತೇರ್ವಿಜ್ಞಾತಾ" (ಬೃ. ೩-೪-೨) ಇತಿ ಹಿ ಶ್ರುತ್ಯನ್ತರಮ್ ॥

---

1. "ತದಾ ತತ್ಸಮ್ಯಗ್ದರ್ಶನಮ್" (ಆ॥) ಪಾಠ; ತದಾ ಇಲ್ಲದಿದ್ದರೂ ಸಾಗುತ್ತದೆ.

2. ಪ್ರತ್ಯಯಗಳನ್ನು ಪ್ರತ್ಯಯಗಳೇ ನೋಡಲಾರವು. ಅಯಾ ಪ್ರತ್ಯಯವು ತನ್ನನ್ನು ತಾನು ನೋಡಲಾರದೆಂಬುದು ಸಿದ್ಧವಷ್ಟೆ; ಆದೇ ಕಾಲದಲ್ಲಿ ಮತ್ತೊಂದು ಪ್ರತ್ಯಯವಿಲ್ಲದ್ದರಿಂದ ಮತ್ತೊಂದರಿಂದಲೂ ಅದು ನೋಡಲ್ಪಡಲಾರದು. ಎಲ್ಲಾ ಪ್ರತ್ಯಯಗಳ ಹುಟ್ಟು ಹೊಂದುಗಳನ್ನೂ ನೋಡುವವನು ಸಾಕ್ಷಿಯೇ.

3. ಪ್ರತ್ಯಯಗಳ ಮೂಲಕವೇ ಬ್ರಹ್ಮಾತ್ಮಸ್ವರೂಪವು ತಿಳಿಯಬರುತ್ತದೆ. ತೈ. ಭಾ. ೨-೬.

4. ಹಿಂದೆ ನೋಡಿದ ನಾನೇ ಈಗ ಕೇಳುತಿದ್ದೇನೆ ಎಂಬ ಅನುಭವಬಲದಿಂದ ಆತ್ಮನು ಎಲ್ಲಾ ಪ್ರತ್ಯಯಗಳಿಗೂ ಸಮಾನನಾಗಿರುತ್ತಾನೆಂದು ಏರ್ಪಡುತ್ತದೆ; ಅಪಂಕಾರವನ್ನು ಕೂಡ ನೋಡುತ್ತಿರುವ ಸಾಕ್ಷಿಯು ಎಲ್ಲಾ ಬುದ್ಧಿಗಳಿಗೂ ಸಾಕ್ಷಿಯೆಂದೂ ಏರ್ಪಡುತ್ತದೆ.

5. ಪ್ರತ್ಯಯಗಳನ್ನು ಬೆಳಗುವ ಪ್ರತ್ಯಯಗಳ ತಿರುಳಾದ ಆತ್ಮನೆಂದು.

(ಭಾಷ್ಯಾರ್ಥ)

(ಬ್ರಹ್ಮವು) ಎಲ್ಲಾ ಪ್ರತ್ಯಯಗಳನ್ನೂ ನೋಡುವದೆಂದು ಇಟ್ಟುಕೊಂಡರೆ (ಅದು)ಹುಟ್ಟುಹೊಂದುಗಳಿಲ್ಲದ[1] ದೃಕ್ಕಿನ ಸ್ವರೂಪವೆಂದೂ ನಿತ್ಯವೆಂದೂ ವಿಶುದ್ಧವಾದ ಸ್ವರೂಪವುಳ್ಳದ್ದೆಂದೂ ಆತ್ಮನೆಂದೂ ಯಾವ ವಿಶೇಷಗಳೂ ಇಲ್ಲದ್ದೆಂದೂ ಸರ್ವಪ್ರಾಣಿಗಳಲ್ಲಿಯೂ ಒಂದೇ[2] ಎಂದೂ ಸಿದ್ಧವಾಗುತ್ತದೆ. ಏಕೆಂದರೆ ಗಡಿಗೆ, ಬೆಟ್ಟದ ಗವಿ ಮುಂತಾದವುಗಳಲ್ಲಿರುವ ಆಕಾಶಕ್ಕೆ ಹೇಗೆ (ಸ್ವರೂಪದಲ್ಲಿ ಭೇದವಿರುವದಿಲ್ಲವೋ) ಹಾಗೆಯೇ (ಇಂಥ ಬ್ರಹ್ಮಕ್ಕೂ) ಸ್ವರೂಪದಲ್ಲಿ ಭೇದವಿರುವದಿಲ್ಲ. ಈ ರೀತಿಯಾಗಿ ಬ್ರಹ್ಮವು ಅರಿಯಲ್ಪಡತಕ್ಕದ್ದು, ಅರಿಯಲ್ಪಡತಕ್ಕದ್ದಲ್ಲದ್ದು–ಈ ಎರಡಕ್ಕೆಂತಲೂ ಬೇರೆಯೇ ಎಂಬ (೧-೪) **ಆಗಮ**ವಾಕ್ಯದ ಅರ್ಥವನ್ನೂ ಪರಿಶೋಧನೆಮಾಡಿಯೇ[3] ಉಪಸಂಹಾರಮಾಡಿದಂತಾಗುತ್ತದೆ. "ದೃಷ್ಟಿಯನ್ನು ನೋಡುವವನು, ಶ್ರುತಿಯನ್ನು ಕೇಳುವವನು, ಮತಿಯನ್ನು ಮನನಮಾಡುವವನು, ವಿಜ್ಞಾನವನ್ನು ಅರಿಯುವವನು"[4] (ಬೃ. ೩-೪-೨) ಎಂದಲ್ಲವೆ, ಮತ್ತೊಂದು ಶ್ರುತಿಯಲ್ಲಿದೆ?[5]

ವ್ಯಾಖ್ಯಾನಾಂತರದಲ್ಲಿ ದೋಷ

(ಭಾಷ್ಯ)

೫೪. ಯದಾ ಪುನರ್ಬೋಧಕ್ರಿಯಾಕರ್ತಾ ಇತಿ ಬೋಧಕ್ರಿಯಾಲಕ್ಷಣೇನ ತತ್ಕರ್ತಾರಂ ವಿಜಾನಾತೀತಿ ಬೋಧಲಕ್ಷಣೇನ ವಿದಿತಂ ಪ್ರತಿಬೋಧವಿದಿತಮ್–ಇತಿ ವ್ಯಾಖ್ಯಾಯತೇ ಯಥಾ ಯೋ ವೃಕ್ಷಶಾಖಾಶ್ಚಾಲಯತಿ ಸ ವಾಯುರಿತಿ, ತದ್ವತ್। ತದಾ ಬೋಧಕ್ರಿಯಾಶಕ್ತಿರ್ಮಾ ಆತ್ಮಾ ದ್ರವ್ಯಮ್, ನ ಬೋಧಸ್ವರೂಪ ಏವ।

---

1. ಆತ್ಮನಿಗೆ ಹುಟ್ಟುಹೊಂದುಗಳಿವೆಯೆಂಬುದು ನಿಸ್ಸಾಕ್ಷಿಕ.

2. ಕಾಲವೂ ವಿಷಯವಾಗಿರುವದರಿಂದ ಅದನ್ನು ನೋಡುವ ಸಾಕ್ಷಿಗೆ ಕಾಲಕೃತವಾದ ಅನಿತ್ಯತ್ವವಿಲ್ಲ. ಯಾವಾಗಲೂ ವಿಷಯಿಯಾಗಿರುವದರಿಂದ ಆತ್ಮನಿಗೆ ವಿಷಯದ ಸೋಂಕೆಂಬ ಅಶುದ್ಧಿ ಒಂದಿಷ್ಟೂ ಇರುವದಿಲ್ಲ. ಅಹಂಕಾರಕ್ಕೂ ಒಳತಿರುಳಾಗಿರುವದರಿಂದ ಈ ಸಾಕ್ಷಿಯೇ ಆತ್ಮನು. ಸಾಕ್ಷಿಗೆ ಕಾಲದೇಶಾದಿಸಂಬಂಧವಿಲ್ಲದ್ದರಿಂದ ಅವರಲ್ಲಿ ಸಜಾತೀಯವಿಜಾತೀಯ ಸ್ವಗತಭೇದಗಳೇನೂ ಇರಲಾರವಾಗಿ ಅದು ಒಂದೇ.

3. ವಿದಿತ, ಅವಿದಿತ-ಎಂಬಿವೆರಡೂ ಸೋಪಾಧಿಕರೂಪಗಳು, ಪ್ರತ್ಯಯಗಳಿಗೆ ಸಾಕ್ಷಿಯಾದದ್ದು ಆತ್ಮ, ಅದು ಅವೆರಡಕ್ಕಿಂತಲೂ ಬೇರೆ ಎಂಬುದನ್ನು ಪರಿಶುದ್ಧಿಮಾಡಿ ತಿಳಿಸಿದಂತಾಗುತ್ತದೆ.

4. ಇದು ಶ್ರುತಿಯ ಅರ್ಥವೇ ಹೊರತು ಯಥಾಕ್ಷರವಾಗಿ ಉದಾಹರಿಸಿದ ಶ್ರುತಿಯಲ್ಲ.

5. ನಾವು ಹೇಳಿದಂತೆ ಅರ್ಥಮಾಡಿದರೆ ಆ ಶ್ರುತಿಗೂ ಈ ಮಂತ್ರಕ್ಕೂ ಏಕವಾಕ್ಯತೆ ಬರುತ್ತದೆ ಎಂದು ಭಾವ.

ಬೋಧಸ್ತು ಜಾಯತೇ ವಿನಶ್ಯತಿ ಚ। ಯದಾ ಬೋಧೋ ಜಾಯತೇ ತದಾ ಬೋಧ ಕ್ರಿಯಯಾ ಸವಿಶೇಷಃ। ಯದಾ ಬೋಧೋ ನಶ್ಯತಿ ತದಾ ನಷ್ಟಬೋಧೋ ದ್ರವ್ಯ ಮಾತ್ರಂ ನಿರ್ವಿಶೇಷಃ। ತತ್ರ ಏವಂ ಸತಿ ವಿಕ್ರಿಯಾತ್ಮಕಃ ಸಾವಯವೋಽನಿತ್ಯೋಽ ಶುದ್ಧ ಇತ್ಯಾದಯೋ ದೋಷಾ ನ ಪರಿಹರ್ತುಂ ಶಕ್ಯಂತೇ॥

(ಭಾಷ್ಯಾರ್ಥ)

ಇದನ್ನು ಬಿಟ್ಟು ಬೋಧಕ್ರಿಯೆಯ ಕರ್ತೃವೇ ಆತ್ಮನು[1], ಆದ್ದರಿಂದ ಬೋಧ ಕ್ರಿಯೆಯೆಂಬ ಹೆಗ್ಗುರುತಿನಿಂದ ಅದರ ಕರ್ತೃವನ್ನು ತಿಳಿದುಕೊಳ್ಳುತ್ತಾರೆ. ಆದ್ದ ರಿಂದ ಬೋಧವೆಂಬ ಹೆಗ್ಗುರುತಿನಿಂದ ತಿಳಿದದ್ದು ಪ್ರತಿಬೋಧದಿಂದ ತಿಳಿದದ್ದಾಗು ವದು–ಎಂದು ವ್ಯಾಖ್ಯಾನಮಾಡಿದರೆ, ಎಂದರೆ 'ಮುರದ ಕೊಂಬೆಗಳನ್ನು ಯಾವದು ಅಲುಗಾಡಿಸುತ್ತಿರುವದೋ ಅದೇ ವಾಯು' ಎಂಬಂತೆ (ಯಾವನು ಅರಿಯುವದೆಂಬ ಕ್ರಿಯೆಯನ್ನು ಮಾಡುತ್ತಿರುವನೋ ಅವನೇ ಆತ್ಮನು–ಎಂದು ತಿಳಿದದ್ದು ಪ್ರತಿ ಬೋಧದಿಂದ ತಿಳಿದದ್ದಾಗುವದು) ಎಂದು ವ್ಯಾಖ್ಯಾನಮಾಡಿದರೆ[2] ಆಗ ಆತ್ಮನು ಬೋಧಕ್ರಿಯೆಯ ಶಕ್ತಿಯುಳ್ಳವನು, ದ್ರವ್ಯವು[3], ಅರಿವಿನ ಸ್ವರೂಪವೇ (ಆಗಿರುವವ) ನಲ್ಲ ಎಂದಾಗುವದು ಬೋಧವು ಮಾತ್ರ ಹುಟ್ಟುತ್ತಲೂ ನಾಶವಾಗುತ್ತಲೂ ಇರು ವದು. ಯಾವಾಗ ಬೋಧವು ಹುಟ್ಟುವದೋ ಆಗ ಅರಿಯುವದೆಂಬ ಕ್ರಿಯೆಯಿಂದ ವಿಶೇಷಸಹಿತನಾಗುತ್ತಾನೆ, ಯಾವಾಗ ಬೋಧವು ನಾಶವಾಗುವದೋ ಆಗ ಅರಿ ವನ್ನು ಕಳೆದುಕೊಂಡು ಯಾವ ವಿಶೇಷವೂ ಇಲ್ಲದ ಬರಿಯ ದ್ರವ್ಯವಾಗುತ್ತಾನೆ (ಎನ್ನ ಬೇಕಾಗುವದು). ಆಗ ಈ (ಪಕ್ಷದಲ್ಲಿ ಆತ್ಮನು) ಮಾರ್ಪಾಡುಗಳುಳ್ಳವನು, ಅವ ಯವಗಳಿಂದ ಕೂಡಿರುವವನು, ಅನಿತ್ಯನು, ಅಶುದ್ಧನು–ಎಂದು ಮುಂತಾಗಿ (ಉಂಟಾಗುವ) ದೋಷಗಳನ್ನು ಪರಿಹರಿಸುವದು (ಯಾರಿಂದಲೂ) ಆಗಲಾರದು.

(ಭಾಷ್ಯ)

೫೫. ಯದಪಿ **ಕಾಣಾದಾನಾಮ್** ಆತ್ಮಮನಃಸಂಯೋಗಜೋ ಬೋಧ ಆತ್ಮನಿ ಸಮವೈತಿ। ಅತ ಆತ್ಮನಿ ಬೋದ್ಧೃತ್ವಮ್, ನ ತು ವಿಕ್ರಿಯಾತ್ಮಕ ಆತ್ಮಾ।

---

1. ಇದು ಭರ್ತೃಪ್ರಪಂಚರ ವ್ಯಾಖ್ಯಾನ; ಬೃ. ಭಾ. ೩-೪-೩ನ್ನು ನೋಡಿ.

2. ಅನುಮಾನಪ್ರಮಾಣದಿಂದ ಅರಿಯುವ ಪ್ರಯತ್ನವಿದು; ಆತ್ಮನನ್ನು ನೇರಾಗಿ ಅರಿ ತಂತೆ ಆಗುವದಿಲ್ಲವೆಂಬುದಲ್ಲದೆ ಅವಿಷಯನಾದ ಆತ್ಮನನ್ನು ವಿಷಯನನ್ನಾಗಿ ತಿಳಿಯುವದಕ್ಕೆ ಹೊರಡುವದೆಂಬ ದೋಷವೂ ಈ ಪಕ್ಷಕ್ಕೆ ಗಂಟುಬೀಳುತ್ತದೆ. ಐ. ಭಾ. ದ ೧೯ನೆಯ ಅಧ್ಯಾ ಯದ ಕೊನೆಯಲ್ಲಿರುವ ಚರ್ಚೆಯನ್ನು ನೋಡಿರಿ.

3. ಆತ್ಮನಲ್ಲಿ ದ್ರವ್ಯಗುಣಕ್ರಿಯೆಗಳ ಸ್ವಭಾವವನ್ನು ಕಲ್ಪಿಸುವದು ಅವನ ಚೈತನ್ಯ ಸ್ವರೂಪವನ್ನರಿಯದ್ದರ ಫಲವೆಂದು ಭಾವ.

ದ್ರವ್ಯಮಾತ್ರಸ್ತು ಭವತಿ ಘಟ ಇವ ರಾಗಸಮವಾಯೀ। ಅಸ್ಮಿನ್ ಪಕ್ಷೇಽಪಿ ಅಚೇತನಂ ದ್ರವ್ಯಮಾತ್ರಂ ಬ್ರಹ್ಮ-ಇತಿ "ವಿಜ್ಞಾನಮಾನನ್ದಂ ಬ್ರಹ್ಮ" (ಬೃ. ೩-೯-೭) ಇತ್ಯಾದ್ಯಾಃ ಶ್ರುತಯೋ ಬಾಧಿತಾಃ ಸ್ಯುಃ। ಆತ್ಮನೋ ನಿರವಯವತ್ವೇನ ಪ್ರದೇಶಾಭಾವಾತ್ ನಿತ್ಯಸಂಯುಕ್ತತ್ವಾಚ್ಚ ಮನಸಃ ಸ್ಮೃತ್ಯುತ್ಪತ್ತಿನಿಯಮಾನುಪಪತ್ತಿರಪರಿಹಾರ್ಯಾ ಸ್ಯಾತ್। ಸಂಸರ್ಗಧರ್ಮಿತ್ವಂ ಚಾತ್ಮನಃ ಶ್ರುತಿಸ್ಮೃತಿನ್ಯಾಯವಿರುದ್ಧಂ ಕಲ್ಪಿತಂ ಸ್ಯಾತ್। "ಅಸಙ್ಗೋ ನ ಹಿ ಸಜ್ಜತೇ" (ಬೃ. ೩-೯-೨೫, ೪-೬-೧೫) "ಅಸಕ್ತಂ ಸರ್ವಭೃತ್" (ಗೀ ೧೩-೧೪) ಇತಿ ಹಿ ಶ್ರುತಿಸ್ಮೃತೀ। ನ್ಯಾಯಶ್ಚ-ಗುಣವದ್ಗುಣವತಾ ಸಂಸೃಜ್ಯತೇ ನಾತುಲ್ಯಜಾತೀಯಮ್। ಅತೋ ನಿರ್ಗುಣಂ ನಿರ್ವಿಶೇಷಂ ಸರ್ವವಿಲಕ್ಷಣಂ ಕೇನಚಿದಪ್ಯತುಲ್ಯಜಾತೀಯೇನ ಸಂಸೃಜ್ಯತೇ ಇತ್ಯೇತತ್ ನ್ಯಾಯವಿರುದ್ಧಂ ಭವೇತ್। ತಸ್ಮಾತ್ ನಿತ್ಯಾಲುಪ್ತಜ್ಞಾನಸ್ವರೂಪಜ್ಯೋತಿರಾತ್ಮಾ ಬ್ರಹ್ಮ-ಇತ್ಯಯಮರ್ಥಃ ಸರ್ವಬೋಧಬೋದ್ಧೃತ್ವೇ ಆತ್ಮನಃ ಸಿಧ್ಯತಿ ನಾನ್ಯಥಾ। ತಸ್ಮಾತ್ 'ಪ್ರತಿಬೋಧವಿದಿತಂ ಮತಮ್' ಇತಿ ಯಥಾವ್ಯಾಖ್ಯಾತ ಏವಾರ್ಥೋಽಸ್ಮಾಭಿಃ ॥

(ಭಾಷ್ಯಾರ್ಥ)

ಇನ್ನು **ಕಾಣಾದರ ಮತ**ವನ್ನು (ನೋಡೋಣ). ಆತ್ಮ, ಮನಸ್ಸು,-ಈ ಎರಡರ **ಸಂಯೋಗ**ದಿಂದ ಉಂಟಾಗುವ ಅರಿವು ಆತ್ಮನಲ್ಲಿ **ಸಮವಾಯ**[1] ಸಂಬಂಧದಿಂದ ಸೇರಿಕೊಂಡಿರುತ್ತದೆ. ಅದರಿಂದ ಆತ್ಮನು ಅರಿಯುವಾತನಾಗುತ್ತಾನೆಯೇ ಹೊರತು (ಅವನು ನಿಜವಾಗಿ) ಮಾರ್ಪಾಡುಗಳುಳ್ಳವನೇನೋ ಅಲ್ಲ. ಆದರೆ ಕೆಂಪು ಗುಣವು ಸಮವಾಯದಿಂದ ಸೇರಿಕೊಂಡಿರುವ ಗಡಿಗೆಯಂತೆ ಬರಿಯ ದ್ರವ್ಯವಾಗಿರುತ್ತಾನೆ (ಎಂಬುದು ಅವರ ಮತವು). ಈ ಪಕ್ಷದಲ್ಲಿಯೂ ಬ್ರಹ್ಮವು ಅಚೇತನವಾದ ಬರಿಯ ದ್ರವ್ಯವೆಂದಾಗುವದರಿಂದ "ವಿಜ್ಞಾನವೂ ಆನಂದವೂ ಆಗಿರುವದು ಬ್ರಹ್ಮವು" (ಬೃ. ೩-೯-೭) ಮುಂತಾದ[2] ಶ್ರುತಿಗಳು ಬಾಧಿತವಾಗುವವು. ಆತ್ಮ

---

1. ಬೇರೆಬೇರೆಯಾಗಿರುವ ಎರಡು ವಸ್ತುಗಳಿಗೆ ಆಗುವ ಸೇರುವಿಕೆಯನ್ನು ಸಂಯೋಗವೆಂದೂ ದ್ರವ್ಯಗುಣಗಳಂತೆ ನಿತ್ಯವಾಗಿ ಸೇರಿಕೊಂಡಿರುವ ಪದಾರ್ಥಗಳ ಸೇರುವಿಕೆಯನ್ನು ಸಮವಾಯವೆಂದೂ ವೈಶೇಷಿಕರು ಕರೆಯುತ್ತಾರೆ. ಇದರ ಖಂಡನೆಯನ್ನು ಸೂ. ಭಾ. ೨-೨-೧೭ ರಲ್ಲಿ ನೋಡಿ.

2. ಆತ್ಮನಲ್ಲಿ ಚೈತನ್ಯವಿಲ್ಲ, ಚೈತನ್ಯವು ಆತ್ಮನ ಗುಣ-ಎಂದು ತಾರ್ಕಿಕರು ಹೇಳುತ್ತಾರೆ. ಇತರಭಾಷ್ಯಕಾರರು ಆತ್ಮನು ಚೈತನ್ಯಸ್ವರೂಪನು, ಅವನಲ್ಲಿ ಚೈತನ್ಯಗುಣವೂ ಉಂಟು ಎನ್ನುತ್ತಾರೆ. ಗುಣದ ಮೂಲಕವಾಗಿ ಗುಣಿಯಾದ ಆತ್ಮನಲ್ಲಿ ವಿಕಾರವುಂಟಾಗುವದೆಂಬ ದೋಷವನ್ನು ಇಲ್ಲಿ ಆಚಾರ್ಯರು ಹೇಳಿರುತ್ತಾರೆ.

ನಲ್ಲಿ ಯಾವ ಅವಯವಗಳೂ ಇಲ್ಲದ್ದರಿಂದ ಅವನಲ್ಲಿ ಪ್ರದೇಶವೆಂಬುದಿಲ್ಲವಾದ್ದರಿಂದ[1] ಮನಸ್ಸಿನೊಡನೆ ಯಾವಾಗಲೂ **ಸಂಯೋಗವಾಗಿಯೇ** ಇರುವದರಿಂದಲೂ ಸ್ಮೃತಿಯು (ಇಂಥ ಕಾಲದಲ್ಲಿಯೇ) ಉಂಟಾಗಬೇಕೆಂಬ ನಿಯಮವು ಹೊಂದದೆ ಹೋಗುವದು[2] (ಎಂಬ ದೋಷವನ್ನು ಅವರು) ಪರಿಹರಿಸುವದು ಆಗಲಾರದು. **ಆತ್ಮನು ಮತ್ತೊಂದರೊಡನೆ ಸಂಬಂಧವಾಗಬಹುದಾದ ಧರ್ಮಿಯೆಂದು ಶ್ರುತಿಸ್ಮೃತಿಯುಕ್ತಿಗಳಿಗೆ ವಿರುದ್ಧವಾಗಿ ಕಲ್ಪಿಸಬೇಕಾಗುವದು.** "(ಆತ್ಮನು) ಅಸಂಗನಾಗಿರುತ್ತಾನೆ, ಏಕೆಂದರೆ ಅವನು ಏತಕ್ಕೂ ಅಂಟಿಕೊಳ್ಳುವದಿಲ್ಲ" (ಬೃ ೩-೯-೫೫, ೪-೬-೧೫), "(ಅದು) ಏತರೊಡನೆಯೂ ಸೇರಿರುವದಿಲ್ಲ, ಎಲ್ಲವನ್ನೂ ಧರಿಸಿರುವದು" (ಗೀ. ೧೩-೧೪) ಎಂದಲ್ಲವೆ, ಶ್ರುತಿಸ್ಮೃತಿಗಳೆರಡೂ (ಹೇಳುತ್ತವೆ)? ನ್ಯಾಯವೂ (ಇದಕ್ಕೆ ಅನುಗುಣವಾಗಿರುತ್ತದೆ). ಗುಣವುಳ್ಳದ್ದು ಗುಣವುಳ್ಳದ್ದರೊಡನೆ ಸೇರಿಕೊಳ್ಳುವದೇ ಹೊರತು ಬೇರೆಯ ಜಾತಿಯದು (ಸೇರಿಕೊಳ್ಳಲಾರದು), ಆದ್ದರಿಂದ ಯಾವ ಗುಣವೂ ಇಲ್ಲದೆ ಯಾವ ವಿಶೇಷವೂ ಇಲ್ಲದೆ ಎಲ್ಲಾ (ಪದಾರ್ಥಗಳಿಗಿಂತಲೂ) ಬೇರೆಯ ಸ್ವಭಾವದ (ವಸ್ತುವು) ಬೇರೆಯ ಜಾತಿಯ[3] ಯಾವದೋ ಒಂದು (ವಸ್ತುವಿನೊಡನೆ) ಸೇರಿಕೊಳ್ಳುವದೆಂಬುದು ಯುಕ್ತಿವಿರುದ್ಧವಾಗುವದು. ಆದ್ದರಿಂದ ಎಂದಿಗೂ ಲೋಪವಿಲ್ಲದ[4] ಜ್ಞಾನಸ್ವರೂಪದ ಬೆಳಕಾಗಿರುವ ಆತ್ಮನೇ ಬ್ರಹ್ಮವು ಎಂಬೀ ಅರ್ಥವು ಆತ್ಮನು ಸಕಲ ಪ್ರತ್ಯಯಗಳನ್ನೂ ಅರಿಯುವನೆಂದಾದರೇ ಸಿದ್ಧಿಸುವದೇ ಹೊರತು ಬೇರೆ ಯಾವ ರೀತಿಯಿಂದಲೂ (ಸಿದ್ಧಿಸು)ವದಿಲ್ಲ, ಆದ್ದರಿಂದ "ಪ್ರತಿಬೋಧದಲ್ಲಿಯೂ ತಿಳಿದರೆ (ಸರಿಯಾಗಿ) ತಿಳಿದಂತಾಯಿತು" ಎಂಬುದಕ್ಕೆ ನಾವು ವ್ಯಾಖ್ಯಾನಮಾಡಿದಂತೆಯೇ ಅರ್ಥ.

(ಭಾಷ್ಯ)

೫೬. ಯತ್ಪುನಃ ಸ್ವಸಂವೇದ್ಯತಾ 'ಪ್ರತಿಬೋಧವಿದಿತಮ್' ಇತ್ಯಸ್ಯ ವಾಕ್ಯಸ್ಯಾರ್ಥೋ ವರ್ಣ್ಯತೇ ತತ್ರ ಭವತಿ ಸೋಪಾಧಿಕತ್ವೇ ಆತ್ಮನೋ ಬುದ್ಧ್ಯುಪಾಧಿ

---

1. ಮರಕ್ಕೆ ಬುಡ, ಕೊನೆ-ಎಂಬ ಪ್ರದೇಶಗಳಿರುವದರಿಂದ "ಕೊನೆಯಲ್ಲಿ ಕಪಿಯ ಸಂಯೋಗವಿದೆ, ಬುಡದಲ್ಲಿಲ್ಲ" ಎಂದು ಹೇಳಬಹುದು; ಆತ್ಮನ ವಿಷಯದಲ್ಲಿ ಹೀಗೆ ಹೇಳುವದಕ್ಕೆ ಬರುವಂತಿಲ್ಲ.

2. ಅನುಭವವುಂಟಾದಬಳಿಕ ಸ್ಮೃತಿಯುಂಟಾಗಲು ಕಾರಣವೇನೆಂಬುದನ್ನು ಅವರು ಹೇಳಲಾರರು. ಮಾಂ. ಕಾ. ಭಾ. ೩-೫.

3. ಆತ್ಮನು ದ್ರವ್ಯಗುಣಕ್ರಿಯೆಗಳಲ್ಲದ್ದರಿಂದ ಅವನಲ್ಲಿ ಯಾವ ಜಾತಿಯೂ ಇಲ್ಲ; ಅಂಥ ಆತ್ಮನಿಗೂ ಅನಾತ್ಮಕ್ಕೂ ಸಂಯೋಗವು ಹೇಗಾದೀತು?

4. ಬೃ. ೪-೩-೩೦ರ ಸೂಚನೆ.

ಸ್ವರೂಪತ್ವೇನ ಭೇದಂ ಪರಿಕಲ್ಪ್ಯ "ಆತ್ಮನಾತ್ಮಾನಂ ವೇತ್ತಿ" ಇತಿ ಸಂವ್ಯವಹಾರಃ। "ಆತ್ಮನ್ಯೇವಾತ್ಮಾನಂ ಪಶ್ಯತಿ" (ಬೃ. ೪-೪-೨೩), "ಸ್ವಯಮೇವಾತ್ಮನಾತ್ಮಾನಂ ವೇತ್ಥ ತ್ವಂ ಪುರುಷೋತ್ತಮ" (ಗೀ. ೧೦-೧೫) ಇತಿ। ನ ತು ನಿರುಪಾಧಿಕಸ್ಯ ಆತ್ಮನ ಏಕತ್ವೇ ಸ್ವಸಂವೇದ್ಯತಾ ಪರಸಂವೇದ್ಯತಾ ವಾ ಸಮ್ಭವತಿ। ಯಥಾ ಪ್ರಕಾಶಸ್ಯ ಪ್ರಕಾಶಾನ್ತರಾಪೇಕ್ಷಯಾ ನ ಸಮ್ಭವಃ, ತದ್ವತ್। **ಬೌದ್ಧಪಕ್ಷೇ** ಸ್ವಸಂವೇದ್ಯತಾಯಾಂ ತು ಕ್ಷಣಭಙ್ಗುರತ್ವಂ ನಿರಾತ್ಮಕತ್ವಂ ಚ ವಿಜ್ಞಾನಸ್ಯ ಸ್ಯಾತ್। "ನ ಹಿ ವಿಜ್ಞಾತುರ್ವಿಜ್ಞಾತೇರ್ವಿಪರಿಲೋಪೋ ವಿದ್ಯತೇಽವಿನಾಶಿತ್ವಾತ್" (ಬೃ. ೪-೩-೩೦), "ನಿತ್ಯಂ ವಿಭುಂ ಸರ್ವಗತಮ್" (ಮು ೧-೧-೬), "ಸ ವಾ ಏಷ ಮಹಾನಜ ಆತ್ಮಾಜರೋಽಮರೋಽಮೃತೋಽಭಯಃ" (ಬೃ. ೪-೪-೨೫) ಇತ್ಯಾದ್ಯಾಃ ಶ್ರುತಯೋ ಬಾಧ್ಯೇರನ್॥

(ಭಾಷ್ಯಾರ್ಥ)

"ಪ್ರತಿಬೋಧವಿದಿತಮ್" ಎಂಬ ವಾಕ್ಯಕ್ಕೆ (ಆತ್ಮನು) ತನ್ನನ್ನು ತಾನೇ ಅರಿಯುವನೆಂಬುದು ಅರ್ಥವೆಂದು **(ಕೆಲವರು)**[1] ವರ್ಣಿಸುತ್ತಾರಷ್ಟೆ; ಅವರ ಪಕ್ಷದಲ್ಲಿ (ಆತ್ಮನು) ಸೋಪಾಧಿಕನೆಂದಾದರೆ ಬುದ್ಧಿಯೆಂಬ ಉಪಾಧಿ, (ಆತ್ಮನ) ಸ್ವರೂಪ-ಇವೆರಡನ್ನೂ ಬೇರೆಬೇರೆ ಎಂದು ಕಲ್ಪಿಸಿಕೊಂಡು ತನ್ನಿಂದ ತನ್ನನ್ನು ಅರಿತುಕೊಳ್ಳುತ್ತಾನೆ ಎಂಬ ವ್ಯವಹಾರವು ಆಗಬಹುದು.[2] "ತನ್ನಲ್ಲಿಯೇ ಆತ್ಮನನ್ನು ಕಾಣುತ್ತಾನೆ" (ಬೃ. ೪-೪-೨೩), "ಎಲೈ ಪುರುಷೋತ್ತಮನೆ, ನೀನೇ ನಿನ್ನನ್ನು ನಿನ್ನಿಂದ ಅರಿತುಕೊಳ್ಳಬಲ್ಲೆ" (ಗೀ. ೧೦-೧೫) ಎಂದು (ಹೇಳುವ ಶ್ರುತಿಸ್ಮೃತಿಗಳಿಗೆ ಇದೇ ಅರ್ಥ).[3] ಆದರೆ ಯಾವ ಉಪಾಧಿಯೂ ಇಲ್ಲದ ಆತ್ಮನು ತಾನೊಬ್ಬನೇ ಆಗಿರುವಲ್ಲಿ ತನ್ನನ್ನು ತಾನೇ ತಿಳಿದುಕೊಳ್ಳುವದೆಂಬುದಾಗಲಿ ಮತ್ತೊಬ್ಬರು ತಿಳಿದುಕೊಳ್ಳುವದೆಂಬುದಾಗಲಿ ಆಗಲಾರದು. ಅರಿವಿನ ರೂಪವಾಗಿಯೇ ಇರುವದರಿಂದ, ಒಂದು ಬೆಳಕಿಗೆ ಮತ್ತೊಂದು ಬೆಳಕಿನ ಅಪೇಕ್ಷೆ ಹೇಗೆ ಇರುವದಿಲ್ಲವೋ ಅದರಂತೆ, (ಆತ್ಮನಿಗೆ) ಮತ್ತೊಂದು ಅರಿವಿನ ಅಪೇಕ್ಷೆಯೂ ಇರುವದಿಲ್ಲ **ಬೌದ್ಧರು** ಹೇಳುವಂತೆ (ಆತ್ಮನು) ತನ್ನನ್ನು ತಾನು ಅರಿಯುವನೆನ್ನುವದಾದರೆ (ವಿಜ್ಞಾನವು) ಒಂದೊಂದು

---

1. ಇವರು ಯಾರೆಂಬುದು ತಿಳಿಯದು. ಇದು ಬೌದ್ಧರ ಅಭಿಪ್ರಾಯವನ್ನೇ ಹೋಲುವದು; ಬೌದ್ಧರ ಪಕ್ಷವನ್ನು ಇದರ ಮುಂದೆಯೇ ಖಂಡಿಸಿರುವದಕ್ಕೆ ಇದೇ ಕಾರಣ.

2. ಬುದ್ಧಿ ಎಂಬ ಉಪಾಧಿಯು ಮುಖ್ಯವಾದಾಗ ಅರಿಯುವ ಕ್ರಿಯೆಗೆ ಕರ್ತೃ, ಉಪಹಿತನಾದ ಆತ್ಮನು ಮುಖ್ಯವಾದಾಗ ಆ ಕ್ರಿಯೆಗೆ ಕರ್ಮ ಎಂದು ಕಲ್ಪಿಸಿಕೊಂಡು ವ್ಯವಹರಿಸಬಹುದು.

3. ಬೌದ್ಧರು ಹೇಳುವ ಪಕ್ಷವು ಶ್ರುತಿವಿರುದ್ಧವಾದ್ದರಿಂದಲೂ ಆಸ್ತಿಕರು ಒಪ್ಪತಕ್ಕದ್ದಲ್ಲ.

ಕ್ಷಣದಲ್ಲಿಯೂ ನಾಶವಾಗುತ್ತಿರುವದೆಂದೂ ಅದಕ್ಕೆ ಯಾವ ಆತ್ಮನೂ ಇಲ್ಲವೆಂದೂ ಆಗುವದು. "ಅರಿಯುವಾತನ ಅರಿವಿಗೆ ಲೋಪವೆಂಬುದು ಇಲ್ಲವೇ ಇಲ್ಲ, ಏಕೆಂದರೆ ಅದು ನಾಶವಿಲ್ಲದ್ದು" (ಬೃ. ೪-೩-೩೦), "ನಿತ್ಯನೂ ವ್ಯಾಪಕನೂ ಸರ್ವಗತನೂ" (ಮು. ೧-೧-೬), "ಈ ಆತ್ಮನು ಆ ದೊಡ್ಡ (ಪರಮಾತ್ಮನೇ), ಹುಟ್ಟಿಲ್ಲದವನು, ಮುಪ್ಪಿಲ್ಲದವನು, ಸಾವಿಲ್ಲದವನು, ಅಮೃತಸ್ವರೂಪನು, ಹೆದರಿಕೆ ಇಲ್ಲದವನು" (ಬೃ. ೪-೪-೨೫), ಇವೇ ಮುಂತಾದ ಶ್ರುತಿಗಳು (ಅವರ ಪಕ್ಷದಲ್ಲಿ) ಬಾಧಿತವಾಗುವವು.

(ಭಾಷ್ಯ)

೫೮. ಯತ್ಪುನಃ ಪ್ರತಿಬೋಧಶಬ್ದೇನ ನಿರ್ನಿಮಿತ್ತೋ ಬೋಧಃ ಪ್ರತಿಬೋಧಃ, ಯಥಾ ಸುಪ್ತಸ್ಯ ಇತ್ಯರ್ಥಂ ಪರಿಕಲ್ಪಯನ್ತಿ । ಸಕೃದ್ವಿಜ್ಞಾನಂ ಪ್ರತಿಬೋಧ ಇತ್ಯಪರೇ । ನಿರ್ನಿಮಿತ್ತಃ ಸನಿಮಿತ್ತಃ ಸಕೃದ್ವಾ ಅಸಕೃದ್ವಾ ಪ್ರತಿಬೋಧ ಏವ ಹಿ ಸಃ ॥

(ಭಾಷ್ಯಾರ್ಥ)

ಇದಲ್ಲದೆ ಪ್ರತಿಬೋಧವೆಂದರೆ ಯಾವ ನಿಮಿತ್ತವೂ ಇಲ್ಲದೆ ನಿದ್ರೆಯಲ್ಲಿರುವಾತನಿಗೆ ಇರುವಂಥ ಅರಿವು ಎಂದು **ಕೆಲವರು** ಕಲ್ಪಿಸಿರುತ್ತಾರೆ. ಒಂದೇ ಸಲಕ್ಕೆ ಆಗುವ ಅರಿವು ಪ್ರತಿಬೋಧವು ಎಂದು **ಮತ್ತೆ ಕೆಲವರು**[1] (ಕಲ್ಪಿಸಿರುತ್ತಾರೆ). ನಿಮಿತ್ತವಿಲ್ಲದೆ ಆಗಿರಲಿ ನಿಮಿತ್ತದಿಂದ ಆಗಿರಲಿ, ಒಂದೇ ಸಲಕ್ಕೆ ಆಗಿರಲಿ, ಅನೇಕ ಸಲ ಆಗಿರಲಿ-(ಅದೆಲ್ಲವೂ) ಅರಿವೇ ಅಲ್ಲವೆ?

ಬ್ರಹ್ಮವನ್ನು ಸರಿಯಾಗಿ ತಿಳಿದುಕೊಂಡರೆ ಫಲ

(ಭಾಷ್ಯ)

೫೮. ಅಮೃತತ್ವಮ್ ಅಮರಣಭಾವಂ ಸ್ವಾತ್ಮನ್ಯವಸ್ಥಾನಂ ಮೋಕ್ಷಂ ಹಿ ಯಸ್ಮಾತ್ ವಿನ್ದತೇ ಲಭತೇ ಯಥೋಕ್ತಾತ್ ಪ್ರತಿಬೋಧವಿದಿತಾತ್ಮಕಾತ್ । ತಸ್ಮಾತ್ ಪ್ರತಿಬೋಧವಿದಿತಮೇವ ಮತಮ್ ಇತ್ಯಭಿಪ್ರಾಯಃ । ಬೋಧಸ್ಯ ಹಿ ಪ್ರತ್ಯಗಾತ್ಮವಿಷಯತ್ವಂ ಚ ಮತಮ್ ಅಮೃತತ್ವೇ ಹೇತುಃ । ನ ಹ್ಯಾತ್ಮನೋಽನಾತ್ಮತ್ವಮ್ ಅಮೃತತ್ವಂ ಭವತಿ । ಆತ್ಮತ್ವಾದಾತ್ಮನೋಽಮೃತತ್ವಂ ನಿರ್ನಿಮಿತ್ತಮೇವ । ಏವಂ ಮರ್ತ್ಯತ್ವಮಾತ್ಮನೋ ಯದವಿದ್ಯಯಾ ಅನಾತ್ಮತ್ವಪ್ರತಿಪತ್ತಿಃ ॥

(ಭಾಷ್ಯಾರ್ಥ)

ಏಕೆಂದರೆ ಅಮೃತತ್ವವನ್ನು ಎಂದರೆ ಸಾವಿಲ್ಲದಿರುವಿಕೆಯನ್ನು **ತನ್ನ ಸ್ವರೂಪದಲ್ಲಿಯೇ ನಿಲ್ಲುವದೆಂಬ ಮೋಕ್ಷವನ್ನು** ಹೊಂದುತ್ತಾನೆ; ಮೇಲೆ ಹೇಳಿದಂತೆ

---

1. ಇಲ್ಲಿ ಹೇಳಿರುವ ಪಕ್ಷಗಳು ಯಾರವೆಂಬ ಬಗ್ಗೆ ಸಂಶಯವಿದೆ. ಈ ವಿಷಯದಲ್ಲಿ ಪೀಠಿಕೆಯನ್ನು ನೋಡಿರಿ.

ಪ್ರತಿಬೋಧದಲ್ಲಿಯೂ ತಿಳಿಯುವ ರೂಪದ(ಪ್ರತಿಬೋಧ)ದಿಂದ ಪಡೆದುಕೊಳ್ಳುತ್ತಾನೆ. ಆದ್ದರಿಂದ ಪ್ರತಿಬೋಧದಲ್ಲಿಯೂ ತಿಳಿದರೆ (ಸರಿಯಾಗಿ) ತಿಳಿದಂತಾಯಿತು ಎಂದಭಿಪ್ರಾಯ. ಬೋಧವು ಪ್ರತ್ಯಗಾತ್ಮನ ವಿಷಯವೆಂತ[1] ತಿಳಿದುಕೊಂಡಿದ್ದೇ ಅಮೃತತ್ವಕ್ಕೆ ಕಾರಣವಾಗುವದು. ಏಕೆಂದರೆ ಆತ್ಮನಿಗೆ ಅನಾತ್ಮತ್ವ(ವುಂಟಾದರೆ) ಎಂದಿಗೂ ಅಮೃತತ್ವವುಂಟಾಗಲಾರದು. ಆತ್ಮನ ಸ್ವರೂಪವಾಗಿರುವದರಿಂದ ಅಮೃತತ್ವವು ಯಾವ ನಿಮಿತ್ತದಿಂದಲೂ ಅಗತಕ್ಕದ್ದಾಗಿರುವದಿಲ್ಲ. ಇದರಂತೆ ಆತ್ಮನಿಗೆ ಮರ್ತ್ಯತ್ವವೆಂಬುದು ಅವಿದ್ಯೆಯಿಂದ (ತಾನು) ಅನಾತ್ಮನೆಂದು ತಿಳಿದುಕೊಳ್ಳುವದೇ.[2]

(ಭಾಷ್ಯ)

ಋ. ಕಥಂ ಪುನರ್ಯಥೋಕ್ತಯಾ ಆತ್ಮವಿದ್ಯಯಾ ಅಮೃತತ್ವಂ ವಿನ್ದತೀ? ಇತ್ಯತ ಆಹ–ಆತ್ಮನಾ ಸ್ವೇನ ರೂಪೇಣ ವಿನ್ದತೇ ಲಭತೇ ವೀರ್ಯಂ ಬಲಂ ಸಾಮರ್ಥ್ಯಮ್ । ಧನಸಹಾಯಮನ್ತ್ರೌಷಧತಪೋಯೋಗಕೃತಂ ವೀರ್ಯಂ ಮೃತ್ಯುಂ ನ ಶಕ್ನೋತ್ಯಭಿಭವಿತುಮ್ । ಅನಿತ್ಯವಸ್ತುಕೃತತ್ವಾತ್ । ಆತ್ಮವಿದ್ಯಾಕೃತಂ ತು ವೀರ್ಯಮ್ ಆತ್ಮನೈವ ವಿನ್ದತೇ ನಾನ್ಯೇನ । ಇತ್ಯತೋಽನನ್ಯಸಾಧನತ್ವಾತ್ ಆತ್ಮವಿದ್ಯಾವೀರ್ಯಸ್ಯ ತದೇವ ವೀರ್ಯಂ ಮೃತ್ಯುಂ ಶಕ್ನೋತ್ಯಭಿಭವಿತುಮ್ । ಯತ ಏವಮ್ ಆತ್ಮವಿದ್ಯಾಕೃತಂ ವೀರ್ಯಮ್ ಆತ್ಮನೈವ ವಿನ್ದತೇ, ಅತಃ ವಿದ್ಯಯಾ ಆತ್ಮವಿಷಯಯಾ ವಿನ್ದತೇ ಅಮೃತಮ್ ಅಮೃತತ್ವಮ್ । "ನಾಯಮಾತ್ಮಾ ಬಲಹೀನೇನ ಲಭ್ಯಃ" (ಮು. ೩-೨-೪) **ಇತ್ಯಾಥರ್ವಣೇ** । ಅತಃ ಸಮರ್ಥೋ ಹೇತುಃ 'ಅಮೃತತ್ವಂ ಹಿ ವಿನ್ದತೇ' ಇತಿ ॥

(ಭಾಷ್ಯಾರ್ಥ)

ಇನ್ನು ಮೇಲೆ ಹೇಳಿದ ಆತ್ಮವಿದ್ಯೆಯಿಂದ ಅಮೃತತ್ವವನ್ನು ಹೇಗೆ[3] ಪಡೆದುಕೊಳ್ಳುತ್ತಾನೆ?–ಎಂಬೀ (ಪ್ರಶ್ನೆಗೆ ಮಂತ್ರವು ಉತ್ತರವನ್ನು) ಹೇಳುತ್ತದೆ. ಆತ್ಮನಿಂದ, ತನ್ನ ಸ್ವರೂಪದಿಂದ, ವೀರ್ಯವನ್ನು ಎಂದರೆ ಬಲವನ್ನು, ಸಾಮರ್ಥ್ಯವನ್ನು ಪಡೆಯುತ್ತಾನೆ ದೊರಕಿಸಿಕೊಳ್ಳುತ್ತಾನೆ. **ಧನ, ಸಹಾಯ, ಮಂತ್ರ, ಔಷಧ,**

---

1. ಪ್ರತ್ಯಯರೂಪವಾಗಿರುವ ಬೋಧವು ಆತ್ಮನಿಗೆ ವಿಷಯವು, ಆತ್ಮನು ನಿರ್ವಿಷಯನಾದ ಚೈತನ್ಯವೇ ಎಂತ.

2. ಕೂಟಸ್ಥವಾದ ಚೈತನ್ಯರೂಪವಾಗಿರುವದರಿಂದ ಆತ್ಮನು ನಿಜವಾಗಿ ಮರ್ತ್ಯನಲ್ಲ, ಅನಾತ್ಮಧರ್ಮವನ್ನು ಅಧ್ಯಾಸಮಾಡಿಕೊಳ್ಳುವದರಿಂದಲೇ ನಾವು ಮರ್ತ್ಯರೆಂಬ ಭಾವನೆಯಾಗಿರುತ್ತದೆ.

3. ಆತ್ಮವಿದ್ಯೆಯಿಂದಲೇ ಅಮೃತತ್ವವನ್ನು ಪಡೆದುಕೊಳ್ಳುತ್ತಾನೆ ಎಂಬುದಕ್ಕೆ ಕಾರಣವೇನು?-ಎಂದು ಪ್ರಶ್ನೆ.

ತಪಸ್ಸು, ಯೋಗ–ಇವುಗಳಿಂದ ಉಂಟಾದ ವೀರ್ಯವು ಮೃತ್ಯುವನ್ನು ಹೊಡೆದುಹಾಕಲಾರದು; ಏಕೆಂದರೆ ಅದು ಅನಿತ್ಯವಸ್ತುವಿನಿಂದಾಗಿರುವದು.[1] ಆದರೆ ಆತ್ಮವಿದ್ಯೆಯಿಂದಾಗುವ ವೀರ್ಯವನ್ನು ಆತ್ಮನಿಂದಲೇ ಪಡೆಯುತ್ತಾನೆ, ಮತ್ತೊಂದರಿಂದಲ್ಲ; ಹೀಗೆ ಆತ್ಮವಿದ್ಯೆಯ ವೀರ್ಯವು ಮತ್ತೊಂದರಿಂದ ಬರುವದಲ್ಲವಾದ್ದರಿಂದ ಆ ವೀರ್ಯವೇ ಮೃತ್ಯುವನ್ನು ಹೊಡೆದುಹಾಕಬಲ್ಲದು.[2] ಈ ರೀತಿಯಲ್ಲಿ ಆತ್ಮವಿದ್ಯೆಯಿಂದಾಗುವ ವೀರ್ಯವನ್ನು ಆತ್ಮನಿಂದಲೇ ಪಡೆದುಕೊಳ್ಳುತ್ತಾನಾದ್ದರಿಂದ ಆತ್ಮವಿಷಯವಾದ ವಿದ್ಯೆಯಿಂದ ಅಮೃತವನ್ನು ಎಂದರೆ ಮರಣವಿಲ್ಲದ ಸ್ವಭಾವವನ್ನು ಹೊಂದುತ್ತಾನೆ. "ಈ ಆತ್ಮನು ಬಲಹೀನನಿಗೆ ದೊರಕಲಾರನು" (ಮು. ೩-೨-೪) ಎಂದು **ಅಥರ್ವಣದಲ್ಲಿ** ಹೇಳಿರುತ್ತದೆ. ಆದ್ದರಿಂದ "ಏಕೆಂದರೆ ಅಮೃತತ್ವವನ್ನು ಪಡೆಯುತ್ತಾನೆ" ಎಂದು ಹೇಳಿದ ಹೇತುವು ಸರಿಯಾದದ್ದು.

ಬ್ರಹ್ಮವನ್ನು ಇಲ್ಲಿಯೇ ಅರಿತುಕೊಳ್ಳಬೇಕು

(ಭಾಷ್ಯ)

೬೦. ಕಷ್ಟಾ ಖಲು ಸುರನರತಿರ್ಯಕ್‌ಪ್ರೇತಾದಿಷು ಸಂಸಾರದುಃಖಬಹುಲೇಷು ಪ್ರಾಣಿನಿಕಾಯೇಷು ಜನ್ಮಜರಾಮರಣರೋಗಾದಿಸಂಪ್ರಾಪ್ತಿರಜ್ಞಾನಾತ್ । ಅತಃ—

(ಭಾಷ್ಯಾರ್ಥ)

ದೇವತೆಗಳು, ಮನುಷ್ಯರು, ಮೃಗಾದಿಗಳು, ಪ್ರೇತಗಳು–ಮುಂತಾದ ಸಂಸಾರದುಃಖದಿಂದ ತುಂಬಿರುವ ಪ್ರಾಣಿಗಳಲ್ಲಿ ಹುಟ್ಟು, ಮುಪ್ಪು, ಸಾವು, ಬೇನೆ-ಮುಂತಾದವುಗಳನ್ನು ಅಜ್ಞಾನದಿಂದ ಹೊಂದುತ್ತಿರುವದೆಂಬುದು ಕಷ್ಟದಾಯಕವಾಗಿರುವದಲ್ಲವೆ? ಆದ್ದರಿಂದ—

ಇಹಚೇದವೇದೀದಥ ಸತ್ಯಮಸ್ತಿ
ನಚೇದಿಹಾವೇದೀನ್ಮಹತೀ ವಿನಷ್ಟಿಃ ।
ಭೂತೇಷು ಭೂತೇಷು ವಿಚಿತ್ಯ ಧೀರಾಃ
ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವನ್ತಿ ॥ ೫ ॥

---

1. ಹಣ, ಮತ್ತೊಬ್ಬರ ಉಪಕಾರ, ಮಂತ್ರಶಕ್ತಿ, ಮೂಲಿಕೆಗಳ ಉಪಯೋಗ, ತಪಸ್ಸು, ಯೋಗ-ಇವುಗಳಿಂದ ಉಂಟಾಗುವಂತೆ ಹೊರಗಿನ ವಸ್ತುವಿನಿಂದ ಆಗುವ ಬಲವು ಅನಿತ್ಯವು; ನಿತ್ಯವಾದ ಆತ್ಮಪ್ರಾಪ್ತಿಯಿಂದಾಗುವ ಬಲವು ನಿತ್ಯವಾಗಿಯೇ ಇರುವದು.

2. ಆತ್ಮಬಲವು ನಿತ್ಯವಾಗಿರುವದರಿಂದ ಆತ್ಮಪ್ರಾಪ್ತಿಯು ನಿತ್ಯವಾಗಿರುತ್ತದೆ; ಅದೇ ಅಮೃತತ್ವವು.

೫. ಇಲ್ಲಿಯೇ ಅರಿತುಕೊಂಡನಾದರೆ ಆಗ ಸತ್ಯವುಂಟು, ಇಲ್ಲಿ ಅರಿತುಕೊಳ್ಳಲಿಲ್ಲವಾದರೆ ದೊಡ್ಡ ವಿನಾಶವು. ಧೀರರಾದವರು ಭೂತಗಳಲ್ಲಿ ಅರಿತುಕೊಂಡು ಈ ಲೋಕದಿಂದ ಹೊರಟುಹೋಗಿ ಅಮೃತರಾಗುವರು.

(ಭಾಷ್ಯ)

೬೧. ಇಹೈವ ಚೇತ್ ಮನುಷ್ಯೋಽಧಿಕೃತಃ ಸಮರ್ಥಃ ಸ್ಯ ಯದಿ ಅವೇದೀತ್ ಆತ್ಮಾನಂ ಯಥೋಕ್ತಲಕ್ಷಣಂ ವಿದಿತವಾ ಯಥೋಕ್ತೇನ ಪ್ರಕಾರೇಣ, ಅಥ ತದಾ ಅಸ್ತಿ ಸತ್ಯಮ್ ಮನುಷ್ಯಜನ್ಮನ್ಯಸ್ಮಿ ಅವಿನಾಶಃ, ಅರ್ಥವತ್ತಾ ವಾ, ಸದ್ಭಾವೋ ವಾ । ಪರಮಾರ್ಥತಾ ವಾ ಸತ್ಯಂ ವಿದ್ಯತೇ । ನ ಚೇತ್ ಇಹ ಅವೇದೀತ್, ನ ಚೇತ್ ಇಹ ಜೀವಂಶ್ಚೇತ್ ಅಧಿಕೃತಃ ಅವೇದೀತ್ ನ ವಿದಿತವಾ ತದಾ ಮಹತೀ ದೀರ್ಘಾ ಅನನ್ತಾ ವಿನಷ್ಟಿಃ ವಿನಾಶನಂ ಜನ್ಮಜರಾಮರಣಾದಿಪ್ರಬನ್ಧಾ ವಿಚ್ಛೇದಲಕ್ಷಣಾ ಸಂಸಾರಗತಿಃ ॥

(ಭಾಷ್ಯಾರ್ಥ)

ಅಧಿಕಾರಿಯೂ ಸಮರ್ಥನೂ ಆಗಿರುವ ಮನುಷ್ಯನು[1] ಇಲ್ಲಿಯೇ ಅರಿತುಕೊಂಡನಾದರೆ, ಮೇಲೆ ಹೇಳಿದ ಸ್ವರೂಪದ ಆತ್ಮನನ್ನು ಮೇಲೆ ಹೇಳಿದ ಪ್ರಕಾರದಿಂದ (ತಿಳಿದುಕೊಂಡನಾದರೆ) ಆಗ ಸತ್ಯವುಂಟು, ಎಂದರೆ ಈ ಮನುಷ್ಯಜನ್ಮದಲ್ಲಿ ಅವಿನಾಶವುಂಟು, ಸಾರ್ಥಕ್ಯವುಂಟು, ಅಥವಾ ಒಳ್ಳೆಯತನವುಂಟು; ಅಥವಾ ಪರಮಾರ್ಥವಾದ ಸತ್ಯವುಂಟು.[2] ಇಲ್ಲಿ ಅರಿತುಕೊಳ್ಳಲಿಲ್ಲವಾದರೆ, ಇಲ್ಲಿ ಎಂದರೆ ಬದುಕಿರುವಾಗಲೇ (ಆ ತತ್ತ್ವವನ್ನು) ಅರಿತುಕೊಳ್ಳಲಿಲ್ಲವಾದರೆ ತಿಳಿದುಕೊಳ್ಳದೆ ಇದ್ದರೆ ಆಗ ದೊಡ್ಡ ದೀರ್ಘವಾದ ಅನಂತವಾದ ವಿನಷ್ಟಿಯು, ವಿನಾಶವುಂಟಾಗುವದು, ಹುಟ್ಟು, ಮುಪ್ಪು, ಸಾವು–ಮುಂತಾದವುಗಳ ಸಾಲು ಕತ್ತರಿಸಿಹೋಗದೆ ಇರುವದೆಂಬ ಸಂಸಾರಗತಿ (ಯುಂಟಾಗುವದು).

(ಭಾಷ್ಯ)

೬೨. ತಸ್ಮಾತ್ ಏವಂ ಗುಣದೋಷೌ ವಿಜಾನನ್ತೋ **ಬಾಹ್ಮಣಾಃ** ಭೂತೇಷು ಭೂತೇಷು ಸರ್ವಭೂತೇಷು ಸ್ಥಾವರೇಷು ಚರೇಷು ಚ ಏಕಮ್ ಆತ್ಮ

---

1. ಜೈ. ಸೂ. ೬-೨-೩೫ರಿಂದ ೪೨ರ ವರೆಗಿನ ಶಾಬರಭಾಷ್ಯದ ಸೂಚನೆ.

2. ಜನ್ಮಾಂತರವಿಲ್ಲದವರಾಗುವರು, ಜನ್ಮವು ಸಾರ್ಥಕವಾಗುವದು, ಅವರು ಸಾಧುಗಳೆನಿಸುವರು–ಎಂಬ ಅರ್ಥವಲ್ಲದೆ ಪರಮಾರ್ಥವು ಅವರಿಗೆ ದೊರಕಿದಂತಾಗುವದು ಎಂಬ ಫಲವನ್ನೂ ಇಲ್ಲಿ ಜ್ಞಾನಕ್ಕೆ ಹೇಳಿದೆ.

ತತ್ತ್ವಂ ಬ್ರಹ್ಮ ವಿಚಿತ್ಯ ವಿಜ್ಞಾಯ ಸಾಕ್ಷಾತ್ಕೃತ್ಯ ಧೀರಾಃ ಧೀಮನ್ತಃ **ಪ್ರೇತ್ಯ ವ್ಯಾವೃತ್ಯ ಮಮಾಹಂಭಾವಲಕ್ಷಣಾತ್ ಅವಿದ್ಯಾರೂಪಾತ್ ಅಸ್ಮಾಲ್ಲೋಕಾತ್ ಉಪರಮ್ಯ** ಸರ್ವಾತ್ಮೈಕತ್ವಮ್ ಅದ್ವೈತಮ್ ಅಪನ್ನಾಃ ಸನ್ತಃ ಅಮೃತಾ ಭವನ್ತಿ ಬ್ರಹ್ಮೈವ ಭವನ್ತಿ ಇತ್ಯರ್ಥಃ । " ಸ ಯೋ ಹ ವೈ ತತ್ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ " (ಮು. ೩-೨-೯) ಇತಿ ಶ್ರುತೇಃ ॥

(ಭಾಷ್ಯಾರ್ಥ)

ಆದ್ದರಿಂದ ಈ ಗುಣದೋಷಗಳನ್ನು ಬಲ್ಲ **ಬ್ರಾಹ್ಮಣರು**[1] ಭೂತಗಳಲ್ಲಿ ಭೂತಗಳಲ್ಲಿ ಎಂದರೆ ಸ್ಥಾವರಜಂಗಮಗಳೆಂಬ ಸಕಲ ಪ್ರಾಣಿಗಳಲ್ಲಿಯೂ ಒಂದೇ ಆತ್ಮತತ್ತ್ವವಾಗಿರುವ ಬ್ರಹ್ಮವನ್ನು ' ವಿಚಿತ್ಯ ' ಎಂದರೆ ಅರಿತುಕೊಂಡು ,ಸಾಕ್ಷಾತ್ಕಾರ ಮಾಡಿಕೊಂಡು ಧೀರರಾದವರು, ಎಂದರೆ ಬುದ್ಧಿವಂತರಾದವರು ಹೊರಟುಹೋಗಿ ಎಂದರೆ **ನನ್ನದು, ನಾನು ಎಂಬ ಭಾವನೆಯ ರೂಪವಾದ ಅವಿದ್ಯಾಸ್ವರೂಪದ ಈ ಲೋಕದಿಂದ ಹಿಂತಿರುಗಿ (ಎಲ್ಲವನ್ನೂ) ಬಿಟ್ಟು**[2] ಎಲ್ಲರಿಗೂ ಆತ್ಮನಾದ, ತನಗೆರಡನೆಯದಿಲ್ಲದ ಆತ್ಮನ ಭಾವವನ್ನು ಹೊಂದಿದವರಾಗಿ ಅಮೃತರಾಗುವರು ಎಂದರೆ ಬ್ರಹ್ಮವೇ ಆಗುವರು ಎಂದರ್ಥ. " ಯಾವಾತನಾದರೆ ಆ ಪರಮಬ್ರಹ್ಮವನ್ನು ಅರಿತುಕೊಳ್ಳುತ್ತಾನೋ (ಅವನು) ಬ್ರಹ್ಮವೇ ಆಗುವನು " (ಮು. ೩-೨-೯) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು.

1. ಬ್ರಾಹ್ಮಣರೇ ವಿಶೇಷಾಧಿಕಾರಿಗಳು.

2. ೧-೨ ಮಂತ್ರದಲ್ಲಿ ಅಮೃತಾ ಭವನ್ತಿ ಎಂಬುದರ ಭಾಷ್ಯವನ್ನು ನೋಡಿ.

ಮೂರನೆಯ ಖಂಡ

ಈ ಖಂಡದ ಸಂಬಂಧ

(ಭಾಷ್ಯ)

೬೩. "ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ" । ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್" (೨-೩) ಇತ್ಯಾದಿಶ್ರವಣಾತ್ ಯದಸ್ತಿ ತದ್ವಿಜ್ಞಾತಂ ಪ್ರಮಾಣೈಃ, ಯನ್ನಾಸ್ತಿ ತದವಿಜ್ಞಾತಂ ಶಶವಿಷಾಣಕಲ್ಪಮ್ ಅತ್ಯನ್ತಮೇವಾಸತ್ ದೃಷ್ಟಮ್ । ತಥಾ ಇದಂ ಬ್ರಹ್ಮ ಅವಿಜ್ಞಾತತ್ವಾತ್ ಅಸದೇವ-ಇತಿ ಮನ್ದಬುದ್ಧೀನಾಂ ವ್ಯಾಮೋಹೋ ಮಾ ಭೂತ್ ಇತಿ ತದರ್ಥಾ ಇಯಮ್ ಆಖ್ಯಾಯಿಕಾ ಆರಭ್ಯತೇ । ತದೇವ ಹಿ ಬ್ರಹ್ಮ ಸರ್ವಪ್ರಕಾರೇಣ ಪ್ರಶಾಸ್ತೃ ದೇವಾನಾಮಪಿ ಪರೋ ದೇವಃ, ಈಶ್ವರಾಣಾಮಪಿ ಪರಮೇಶ್ವರಃ,[1] ದುರ್ವಿಜ್ಞೇಯಃ, ದೇವಾನಾಂ ಜಯಹೇತುಃ, ಅಸುರಾಣಾಂ ಪರಾಜಯಹೇತುಃ । ತತ್ ಕಥಂ ನಾಸ್ತಿ ?-ಇತ್ಯೇತಸ್ಯಾರ್ಥಸ್ಯ ಅನುಕೂಲಾನಿ ಹಿ ಉತ್ತರಾಣಿ ವಚಾಂಸಿ ದೃಶ್ಯನ್ತೇ ॥

(ಭಾಷ್ಯಾರ್ಥ)

"ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ" (ಎಂದು ಮೊದಲಾಗಿರುವ ಈ ಖಂಡದ ಸಂಬಂಧವೇನೆಂದರೆ) : "ಅರಿಯುವವರಿಗೆ ತಿಳಿಯದೆ ಇರುತ್ತದೆ, ಅರಿಯದವರಿಗೆ ತಿಳಿದಿರುತ್ತದೆ" (೨-೩) ಎಂದು ಮುಂತಾಗಿ ಶ್ರುತಿಯಲ್ಲಿ ಹೇಳಿರುವದನ್ನು ಕಂಡು "ಯಾವದು ಇರುವದೋ ಅದು **ಪ್ರಮಾಣ**ಗಳಿಂದ ತಿಳಿಯುವದಕ್ಕೆ ಬರುತ್ತದೆ, ಯಾವದು ಇರುವದಿಲ್ಲವೋ ಅದು ತಿಳಿಯುವದಕ್ಕೆ ಬರುವದಿಲ್ಲ. ಮೊಲದ ಕೊಂಬಿನಂತೆ ಅತ್ಯಂತವಾಗಿ ಇಲ್ಲದ್ದಾಗಿರುವದು ಎಂದು ಕಂಡುಬಂದಿದೆ. ಅದರಂತೆ ಈ ಬ್ರಹ್ಮವು ಪ್ರಮಾಣಗಳಿಂದ ತಿಳಿಯುವದಕ್ಕೆ ಬರುವದಿಲ್ಲವಾದ್ದರಿಂದ ಇಲ್ಲವೇ ಇಲ್ಲ" ಎಂದು ಅಲ್ಪಬುದ್ಧಿಯವರು ಭ್ರಾಂತರಾಗದಿರಲಿ[2] ಎಂದು ಅದಕ್ಕಾಗಿ ಈ ಕಥೆಯನ್ನು ಆರಂಭಿಸಲಾಗಿರುತ್ತದೆ. ಏಕೆಂದರೆ ಮುಂದಿನ ವಾಕ್ಯಗಳು "ಈ ಬ್ರಹ್ಮವೇ ಎಲ್ಲಾ

---

1. ಇದು (ವಾ॥) ಪಾರ. ಶ್ವೇ. ೬-೭ರ ಸೂಚನೆ.

2. ಪ್ರಮಾಣಗಳಿಗೆ ಗೋಚರವಾಗಿರುವದು ಪ್ರಮೇಯವು ; ಬ್ರಹ್ಮವು ಪ್ರಮಾಣಗಳಿಗೆ ಗೋಚರವಲ್ಲದಿದ್ದರೂ ಪ್ರಮಾತೃವಿನ ಪರಮಾರ್ಥಸ್ವರೂಪವಾದ ಆತ್ಮನಾಗಿದೆ. ಈ ತತ್ತ್ವವನ್ನು ತಿಳಿಯಲಾರದ ಅಲ್ಪಮತಿಗಳು ಅದು ಇಲ್ಲವೇ ಇಲ್ಲವೆಂದು ತಪ್ಪಾಗಿ ತಿಳಿದುಕೊಳ್ಳುವರು.

ಬಗೆಯಿಂದಲೂ ಅಳತಕ್ಕದ್ದು[1], ದೇವತೆಗಳಿಗೆಲ್ಲ ಹೆಚ್ಚಿನ ದೇವನು[2], ಈಶ್ವರರಿಗೆಲ್ಲ ಹೆಚ್ಚಿನ ಈಶ್ವರನು[3], ತಿಳಿದುಕೊಳ್ಳುವದಕ್ಕೆ ಆಗದ ಸ್ವರೂಪವುಳ್ಳದ್ದಾಗಿ ದೇವತೆಗಳ ಜಯಕ್ಕೆ ಕಾರಣವಾಗಿರುವದು, ಅಸುರರ ಸೋಲಿಗೆ ಕಾರಣವಾಗಿರುವದು. ಹೀಗಿರುವಲ್ಲಿ (ಅದು) ಇಲ್ಲವೆಂಬುದು ಹೇಗೆ?" ಎಂಬೀ ಅಭಿಪ್ರಾಯಕ್ಕೆ ಅನುಕೂಲವಾಗಿಯಲ್ಲನೆ, ಕಾಣುತ್ತವೆ?

(ಭಾಷ್ಯ)

೬೪. ಅಥವಾ ಬ್ರಹ್ಮವಿದ್ಯಾಯಾಃ ಸ್ತುತಯೇ। ಕಥಮ್? ಬ್ರಹ್ಮವಿಜ್ಞಾನಾದ್ ಅಗ್ನ್ಯಾದಯೋ ದೇಹಾ ದೇವಾನಾಂ ಶ್ರೇಷ್ಠತ್ವಂ ಜಗ್ಮುಃ। ತತೋಽಪ ತಿತರಾಮ್ ಇನ್ದ್ರ ಇತಿ। ಅಥವಾ ದುರ್ವಿಜ್ಞೇಯಂ ಬ್ರಹ್ಮ—ಇತ್ಯೇತತ್ ಪ್ರದರ್ಶ್ಯತೇ। ಯೇನ ಅಗ್ನ್ಯಾದಯೋಽತಿತೇಜಸೋಽಪಿ ಕ್ಲೇಶೇನೈವ ಬ್ರಹ್ಮ ವಿದಿತವನ್ತಃ, ತಥಾ ಇನ್ದ್ರೋ ದೇವಾನಾಮಾಶ್ವರೋಽಪಿ ಸನ್ ಇತಿ। ವಕ್ಷ್ಯಮಾಣೋಪನಿಷದ್ವಿಧಿಪರಂ ವಾ ಸರ್ವಮ್। ಬ್ರಹ್ಮವಿದ್ಯಾವ್ಯತಿರೇಕೇಣ ಪ್ರಾಣಿನಾಂ ಕರ್ತೃತ್ವಭೋಕ್ತೃತ್ವಾದ್ಯಭಿಮಾನೋ ಮಿಥ್ಯಾ ಇತ್ಯೇತದ್ದರ್ಶನಾರ್ಥಂ ವಾ ಆಖ್ಯಾಯಿಕಾ। ಯಥಾ ದೇವಾನಾಂ ಜಯಾದ್ಯಭಿಮಾನಃ, ತದ್ವದಿತಿ॥

(ಭಾಷ್ಯಾರ್ಥ)

ಅಥವಾ ಬ್ರಹ್ಮವಿದ್ಯೆಯನ್ನು ಹೊಗಳುವದಕ್ಕೆ[4] (ಈ ಕಥೆಯು ಬಂದಿದೆ ಎಂದಾದರೂ ಹೇಳಬಹುದು). ಹೇಗೆಂದರೆ ಬ್ರಹ್ಮಜ್ಞಾನದಿಂದಲೇ ಅಲ್ಲವೆ, ಅಗ್ನಿಯೇ ಮೊದಲಾದ ದೇವತೆಗಳು ದೇವತೆಗಳಲ್ಲಿ ಶ್ರೇಷ್ಠತ್ವವನ್ನು ಹೊಂದಿದರು, ಅವರಿಗಿಂತಲೂ ಹೆಚ್ಚಿನ (ಸ್ಥಾನವನ್ನು) ಇಂದ್ರನು (ಹೊಂದಿದನು) ಎಂದು (ಈ ಕಥೆಯಲ್ಲಿ) ಹೇಳಿರುತ್ತದೆ. ಅಥವಾ ಬ್ರಹ್ಮವನ್ನು ತಿಳಿಯುವದು ಬಲು ಕಷ್ಟವೆಂಬುದನ್ನು (ಇಲ್ಲಿ) ತೋರಿಸಿದೆ (ಎಂದಾದರೂ ಹೇಳಬಹುದು). ಏಕೆಂದರೆ ಅಗ್ನಿಯೇ ಮೊದಲಾದವರು ಮಹಾಪರಾಕ್ರಮಿಗಳಾದರೂ ಕ್ಲೇಶದಿಂದಲೇ ಬ್ರಹ್ಮವನ್ನು ತಿಳಿದುಕೊಂಡರು; ಅದರಂತೆ ಇಂದ್ರನು ದೇವತೆಗಳಿಗೆಲ್ಲ ಒಡೆಯನಾಗಿದ್ದರೂ (ಕ್ಲೇಶದಿಂದಲೇ ಬ್ರಹ್ಮವನ್ನು ತಿಳಿದು

---

1. ಕಟ್ಟುಪಾಡಿನಲ್ಲಿಟ್ಟರತಕ್ಕದ್ದು. ಬೃ. ೩-೪-೯.
2. ಪ್ರಕಾಶಕವಾದವನು. ಶ್ವೇ. ೬-೭.
3. ಒಡೆಯನು, ಸರ್ವಸ್ವತಂತ್ರನು. ಶ್ವೇ. ೬-೭.
4. ಇದುವರೆಗೆ ಬ್ರಹ್ಮಜ್ಞಾನವನ್ನು ತಿಳಿಸಿದೆ. ಇದನ್ನು ಪಡೆಯುವದರಿಂದ ಪರಮ ಲಾಭವಾಗುವದು ಎಂಬುದನ್ನು ಕಥೆಯಮೂಲಕ ಹೊಗಳಿದೆ. ಆದ್ದರಿಂದ ಬ್ರಹ್ಮವಿದ್ಯೆಯನ್ನು ಸಂಪಾದಿಸಿಕೊಳ್ಳಬೇಕು ಎಂದು ಹೇಳಿದಂತಾಗುವದು. ವಿಧಿಗೆ ಅರ್ಥವಾದವಿರುವಂತೆ, ಬ್ರಹ್ಮಸ್ವರೂಪವನ್ನು ತಿಳಿಸುವ ವಾಕ್ಯಕ್ಕೆ ಇದು ಅರ್ಥವಾದವೆಂದು ಭಾವ.

ಕೊಂಡನು ಎಂದು ಇಲ್ಲಿ ಹೇಳಿದೆ)[1]. ಮುಂದೆ ಹೇಳುವ **ಉಪನಿಷತ್ತನ್ನು**[2] ವಿಧಿಸುವದಕ್ಕಾಗಿ ಇದೆಲ್ಲವೂ (ಬಂದಿರುತ್ತದೆ) ಎಂದಾದರೂ (ಹೇಳಬಹುದು). ಬ್ರಹ್ಮ ವಿದ್ಯೆಯಿಲ್ಲದಿರುವದರಿಂದ ಪ್ರಾಣಿಗಳಿಗೆ ಉಂಟಾಗಿರುವ "ನಾವು (ಕರ್ಮವನ್ನು) ಮಾಡುವವರು, (ಫಲವನ್ನು) ಅನುಭವಿಸುವವರು" ಎಂದು ಮುಂತಾದ ಅಭಿಮಾನವು ತಪ್ಪಾದದ್ದು, ದೇವತೆಗಳಿಗೆ (ಉಂಟಾದ) ಜಯವೇ ಮುಂತಾದದ್ದರ ಅಭಿಮಾನದಂತೆ[3]–ಎಂದು ತೋರಿಸಿಕೊಡುವದಕ್ಕೆ ಕಥೆಯು (ಬಂದಿದೆ) ಎಂದಾದರೂ ಹೇಳಬಹುದು.

ದೇವತೆಗಳಿಗೆ ಮಿಥ್ಯಾಭಿಮಾನವು ಬಂದದ್ದು

ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ ತಸ್ಯ ಹ ಬ್ರಹ್ಮಣೋ
ವಿಜಯೇ ದೇವಾ ಅಮಹೀಯನ್ತ । ತ ಐಕ್ಷನ್ತಾಸ್ಮಾಕಮೇವಾ
ಯಂ ವಿಜಯೋಽಸ್ಮಾಕಮೇವಾಯಂ ಮಹಿಮೇತಿ ॥ ೧ ॥

೧. ಬ್ರಹ್ಮವು ದೇವತೆಗಳಿಗೆ ವಿಜಯವನ್ನು ಕೊಟ್ಟತಂತೆ. ಆ ಬ್ರಹ್ಮದ ವಿಜಯದಲ್ಲಿ ದೇವತೆಗಳು ಮಹಿಮಾವಂತರಾದರು. ಅವರು "ಈ ವಿಜಯವು ನಮ್ಮದು, ಈ ಮಹಿಮೆಯು ನಮ್ಮದು" ಎಂದು ಯೋಚಿಸಿಕೊಂಡರು.

(ಭಾಷ್ಯ)

೧ಕ. ಬ್ರಹ್ಮ ಯತ್ತೋಕ್ತಲಕ್ಷಣಂ ಪರಂ ಹ ಕಿಲ ದೇವೇಭ್ಯೋಽರ್ಥಾಯ ವಿಜಿಗ್ಯೇ ಜಯಂ ಲಬ್ಧವತ್ । ದೇವಾನಾಂ ಚಾಸುರಾಣಾಂ ಚ ಸಜ್ಞಾನಾಮೇ ಅಸುರಾನ್ ಜಿತ್ವಾ ಜಗದರಾತೀನ್ ಈಶ್ವರನೇತುಭೇತ್ತ್ಯಾನ್ ದೇವೇಭ್ಯೋ ಜಯಂ ತತ್ಫಲಂ ಚ ಪ್ರಾಯಚ್ಛತ್ ಜಗತಃ ಸ್ಥೈಮ್ನೇ ॥

---

1. ಆದ್ದರಿಂದ ಬ್ರಹ್ಮವಿದ್ಯೆಯನ್ನು ಕಷ್ಟಪಟ್ಟಾದರೂ ಸಂಪಾದಿಸಬೇಕು. ಅನಾದರ ಮಾಡಬಾರದು ಎಂದು ಭಾವ.

2. ನಾಲ್ಕನೆಯಖಂಡದಲ್ಲಿ ವಿಧಿಸಿರುವ ಉಪಾಸನೆಯನ್ನು. ಈ ಅರ್ಥವೇ ಮುಖ್ಯವಾದ್ದೆಂದೂ ಮಿಕ್ಕ ಅರ್ಥಗಳನ್ನು ಹೇಳಿರುವದು ಬರಿಯ ಸಂಭಾವನೆ ಯೆಂದೂ ಟೀಕಾಕಾರರು ಬರೆದಿರುತ್ತಾರೆ. ಈ ಅಭಿಪ್ರಾಯಕ್ಕೆ ಭಾಷ್ಯದ ಬೆಂಬಲವು ಕಾಣುವದಿಲ್ಲ.

3. ಆದ್ದರಿಂದ ತಪ್ಪಾದ ಈ ತಿಳಿವಳಿಕೆಯನ್ನು ಕಳೆದುಕೊಳ್ಳುವದಕ್ಕಾಗಿ ಬ್ರಹ್ಮಜ್ಞಾನವನ್ನು ಸಂಪಾದಿಸಿಕೊಳ್ಳಬೇಕು-ಎಂದು ಭಾವ. ಬ್ರಹ್ಮವಿದ್ಯೆಯನ್ನು ಸಂಪಾದಿಸಿಕೊಳ್ಳಬೇಕೆಂಬುದಕ್ಕೆ ಅನೇಕ ಕಾರಣಗಳನ್ನು ಈ ಕಥೆಯು ತಿಳಿಸುತ್ತದೆ ಎಂಬುದೇ ಇಲ್ಲಿ ತಿಳಿಯತಕ್ಕದ್ದು.

(ಭಾಷ್ಯಾರ್ಥ)

ಬ್ರಹ್ಮವು ಎಂದರೆ ಹಿಂದೆ ಹೇಳಿದ ಸ್ವರೂಪವುಳ್ಳ[1] ಪರ(ಬ್ರಹ್ಮವು) ದೇವತೆಗಳಿಗೆ ಪ್ರಯೋಜನವಾಗಲೆಂದು ವಿಜಯವನ್ನು ಕೊಟ್ಟಿತಂತೆ[2], ಜಯವನ್ನು ಪಡೆದು (ಕೊಟ್ಟಿತಂತೆ). ದೇವತೆಗಳಿಗೂ ಅಸುರರಿಗೂ ಕಾಳಗವಾಗಲಾಗಿ ಜಗತ್ತಿಗೇ ವೈರಿಗಳಾಗಿ ಈಶ್ವರನ ಸೇತುವನ್ನು[3] ಒಡೆಯುವವರಾದ ಅಸುರರನ್ನು ಗೆದ್ದು ಜಗತ್ತಿನ ಸುಸ್ಥಿತಿಗಾಗಿ ದೇವತೆಗಳಿಗೆ ಗೆಲವನ್ನೂ ಅದರ ಫಲವನ್ನೂ ಕೊಟ್ಟಿತು[4]''.

(ಭಾಷ್ಯ)

೬೬. ತಸ್ಯ ಹ ಕಿಲ ಬ್ರಹ್ಮಣೋ ವಿಜಯೇ ದೇವಾಃ ಅಗ್ನ್ಯಾದಯಃ ಅಮಹೀಯನ್ತ ಮಹಿಮಾನಂ ಪ್ರಾಪ್ತವನ್ತಃ। ತದಾ ಆತ್ಮಸಂಸ್ಥಸ್ಯ ಪ್ರತ್ಯಗಾತ್ಮನ ಈಶ್ವರಸ್ಯ ಸರ್ವಜ್ಞಸ್ಯ ಸರ್ವಕ್ರಿಯಾಫಲಸಂಯೋಜಯಿತುಃ ಪ್ರಾಣಿನಾಂ ಸರ್ವಶಕ್ತೇಃ ಜಗತಃ ಸ್ಥಿತಿಂ ಚಿಕೀರ್ಷೋಃ ಅಯಂ ಜಯೋ ಮಹಿಮಾ ಚ ಇತ್ಯಜಾನನ್ತಃ, ತೇ ದೇವಾಃ ಐಕ್ಷನ್ತ ಈಕ್ಷಿತವನ್ತಃ "ಅಗ್ನ್ಯಾದಿಸ್ವರೂಪವಪರಿಚ್ಛಿನ್ನಾತ್ಮಕೃತಃ, ಅಸ್ಮಾಕಮೇವ ಅಯಂ ವಿಜಯಃ, ಅಸ್ಮಾಕಮೇವ ಅಯಂ ಮಹಿಮಾ ಅಗ್ನಿವಾಯ್ವಿನ್ದ್ರತ್ವಾದಿಲಕ್ಷಣೋ ಜಯಫಲಭೂತೋಽಸ್ಮಾಭಿರನುಭೂಯತೇ, ನಾನ್ಯತ್ಪ್ರತ್ಯಗಾತ್ಮಭೂತೇಶ್ವರಕೃತ ಇತಿ ॥

(ಭಾಷ್ಯಾರ್ಥ)

ಆ ಬ್ರಹ್ಮದ ಗೆಲವಿನಲ್ಲಿ ಅಗ್ನಿಯೇ ಮುಂತಾದ ದೇವತೆಗಳು ಮಹಿಮಾವಂತರಾದರಂತೆ, ಹೆಚ್ಚಿಗೆಯನ್ನು ಪಡೆದುಕೊಂಡ(ರಂತೆ). ಆಗ ತಮ್ಮಲ್ಲಿರುವ ಪ್ರತ್ಯಗಾತ್ಮನಾದ[5] ಸರ್ವಜ್ಞನೂ ಪ್ರಾಣಿಗಳ ಸಕಲ ಕರ್ಮಗಳಿಗೆ ಫಲವನ್ನು ಜೋಡಿಸಿ

---

1. ಶ್ರೋತ್ರಕ್ಕೆ ಶ್ರೋತ್ರವು ಮುಂತಾದ ಸ್ವರೂಪದ, ಎಲ್ಲಕ್ಕೂ ಪ್ರತ್ಯಗಾತ್ಮನಾಗಿರುವ.

2. ಆಂತೆ ಎಂದು ಹೇಳಿರುವದು ಈ ಕಥೆಯು ಅನಾದಿಸಂಪ್ರದಾಯಾಗತವೆಂದು ತಿಳಿಸುವದಕ್ಕೆ.

3. ಧರ್ಮದ ವ್ಯವಸ್ಥೆಯನ್ನು. ಸೇತು (ಎಂದರೆ ಅಣೆಗಟ್ಟು) ನೀರನ್ನು ಎರಡು ಭಾಗವಾಗಿ ವಿಂಗಡಿಸುವಂತೆ ಲೋಕದ ವ್ಯವಸ್ಥೆಯನ್ನು ವಿಂಗಡಿಸಿಡುವ ಧರ್ಮವನ್ನು ಈಶ್ವರನು ಏರ್ಪಡಿಸಿರುತ್ತಾನೆ.

4. ದೇವತೆಗಳು ಗೆದ್ದದ್ದೂ ಸುಖಿಗಳಾದದ್ದೂ ಬ್ರಹ್ಮದ ಬಲದಿಂದ.

5. ಈಶ್ವರನು ನಮ್ಮೆಲ್ಲರ ಆತ್ಮನೇ ಎಂದು ಹಿಂದೆ ಹೇಳಿರುವದನ್ನು ಇದು ನೆನಪಿಗೆ ತರುವದು.

ಕೊಡುವವನೂ[1] ಸರ್ವಶಕ್ತನೂ ಆದ ಈಶ್ವರನೇ ಜಗತ್ತಿನ ಸ್ಥಿತಿಯನ್ನು ಏರ್ಪಡಿಸುವದಕ್ಕಾಗಿ (ಪಡೆದುಕೊಟ್ಟ) ಗೆಲವಿದು, ಮತ್ತು (ಆತನದೇ) ಮಹಿಮೆಯಿದು–ಎಂದರಿಯದೆ ಆ ದೇವತೆಗಳು ಹೀಗೆಂದು ಯೋಚಿಸಿಕೊಂಡರು: "ಅಗ್ನಿಯೇ ಮುಂತಾದ ಸ್ವರೂಪದಿಂದ ಪರಿಚ್ಛಿನ್ನವಾಗಿರುವ[2] ನಮ್ಮ ಸ್ವರೂಪದಿಂದಾಗಿರುವದೇ, ನಮ್ಮದೇ ಈ ಗೆಲವು; ಗೆಲವಿನ ಫಲವಾಗಿ (ಬಂದಿರುವ) ಅಗ್ನಿ, ವಾಯು, ಇಂದ್ರ–ಮುಂತಾದ ಸ್ಥಾನದ ಈ ಮಹಿಮೆಯಿದೆಯಲ್ಲ (ಇದೂ) ನಮ್ಮದೇ, ನಾವೇ (ಗೆದ್ದು) ಇದನ್ನನು ಭವಿಸುತ್ತಿರುವೆವು. ಇದು ನಮ್ಮಗಳ ಪ್ರತ್ಯಗಾತ್ಮನಾದ ಈಶ್ವರನಿಂದಾಗಿರುವದಲ್ಲ."

ಬ್ರಹ್ಮವು ದೇವತೆಗಳಿಗೆ ಕಾಣಿಸಿಕೊಂಡದ್ದು

(ಭಾಷ್ಯ)

೬೭. ಏವಂ ಮಿಥ್ಯಾಭಿಮಾನೇಕ್ಷಣವತಾಮ್—

(ಭಾಷ್ಯಾರ್ಥ)

ಹೀಗೆ ತಪ್ಪುತಿಳಿವಳಿಕೆಯಿಂದ ಯೋಚಿಸಿಕೊಳ್ಳುತ್ತಿರುವ—

ತದ್ಧೈಷಾಂ ವಿಜಜ್ಞೌ ತೇಭ್ಯೋ ಹ ಪ್ರಾದುರ್ಬಭೂವ
ತನ್ನ ವ್ಯಜಾನತ ಕಿಮಿದಂ ಯಕ್ಷಮಿತಿ ॥ ೨ ॥

೨. ಇವರ (ಭಾವನೆಯನ್ನು) ಅದು ತಿಳಿದುಕೊಂಡಿತಂತೆ, ಅವರಿಗೆ ಕಾಣಿಸಿಕೊಂಡಿತಂತೆ. ಇದು ಯಾವ ಯಕ್ಷನೆಂಬುದನ್ನು (ಅವರು) ತಿಳಿಯಲಿಲ್ಲ.

(ಭಾಷ್ಯ)

೬೮. ತತ್ ಹ ಕಿಲ ಏಷಾಂ ಮಿಥ್ಯೇಕ್ಷಣಂ ವಿಜಜ್ಞೌ ವಿಜ್ಞಾತವದ್ ಬ್ರಹ್ಮ। ಸರ್ವೇಕ್ಷಿತೃ ಹಿ ತತ್ ಸರ್ವಭೂತಕರಣಪ್ರಯೋಕ್ತೃತ್ವಾತ್। ದೇವಾನಾಂ ಚ ಮಿಥ್ಯಾಜ್ಞಾನಮ್ ಉಪಲಭ್ಯ ಮೈವ ಅಸುರವದ್ದೇವಾ ಮಿಥ್ಯಾಭಿಮಾನಾತ್ ಪರಾಭವೇಯುಃ ಇತಿ ತದನುಕಮ್ಪಯಾ ದೇವಾನ್ ಮಿಥ್ಯಾಭಿಮಾನಾಪನೋದನೇನ ಅನುಗೃಹ್ಣೀಯಾಮ್ ಇತಿ ತೇಭ್ಯಃ ದೇವೇಭ್ಯಃ ಹ ಕಿಲ ಅರ್ಥಾಯ ಪ್ರಾದುರ್ಬಭೂವ ಸ್ವಯೋಗಮಾಹಾತ್ಮ್ಯನಿರ್ಮಿತೇನ ಅತ್ಯದ್ಭುತೇನ ವಿಸ್ಮಾಪನೀಯೇನ ರೂಪೇಣ

1. ಬರಿಯ ಕರ್ಮವು ಫಲವನ್ನು ಕೊಡುವದಿಲ್ಲ, ಈಶ್ವರನೇ ಕೊಡುವನು. ಸೂ. ಭಾ. ೩-೨-೩೮.

2. ತಮ್ಮ ಅಪರಿಚ್ಛಿನ್ನವಾದ ಆತ್ಮಸ್ವರೂಪವೇ ಈಶ್ವರನೆಂಬುದನ್ನರಿಯದೆ ವ್ಯಕ್ತಿರೂಪದಿಂದಿರುವ ತಾವೇ ಸ್ವತಂತ್ರರೆಂದು ಆಗ್ನ್ಯಾದಿಗಳು ತಿಳಿದುಕೊಂಡರು.

ೀವಾನಾಮ್ ಇನ್ದ್ರಿಯಗೋಚರೇ ಪ್ರಾದುರ್ಬಭೂವ ಪ್ರಾದುರ್ಭೂತವತ್ *।
ತ್ ಪ್ರಾದುರ್ಭೂತಂ ಬ್ರಹ್ಮ ನ ವ್ಯಜಾನತ ನೈವ ವಿಜ್ಞಾತವನ್ತಃ ದೇವಾಃ ಕಿಮಿದಂ
ಯಕ್ಷಂ ಪೂಜ್ಯಂ ಮಹದ್ಭೂತಮಿತಿ ॥

(ಭಾಷ್ಯಾರ್ಥ)

ಇವರ ತಪ್ಪುಭಾವನೆಯನ್ನು ಆ ಬ್ರಹ್ಮವು ತಿಳಿದುಕೊಂಡಿತಂತೆ. ಅದು ಸಮಸ್ತ ಪ್ರಾಣಿಗಳ ಕರಣಗಳನ್ನೂ ಪ್ರೇರಿಸುವದಾದ್ದರಿಂದ[1] ಎಲ್ಲವನ್ನೂ ನೋಡುತ್ತಿರುವ ದಲ್ಲವೆ? (ಆದ್ದರಿಂದ ತಿಳಿದುಕೊಂಡಿತು). ಮತ್ತು ದೇವತೆಗಳ ತಪ್ಪುತಿಳಿವಳಿಕೆ ಯನ್ನು ಕಂಡು ಅಸುರರಂತೆ ದೇವತೆಗಳು ಮಿಥ್ಯಾಭಿಮಾನದಿಂದ ಸೋತುಹೋಗಲೇ ಬಾರದು[2] ಎಂದು ಅವರಲ್ಲಿ ಮರುಕದಿಂದ ಮಿಥ್ಯಾಭಿಮಾನವನ್ನು ತೊಲಗಿಸಿ ದೇವತೆ ಗಳನ್ನು ಅನುಗ್ರಹಮಾಡೋಣವೆಂದು ಆ ದೇವತೆಗಳ ಪ್ರಯೋಜನಕ್ಕಾಗಿ ಕಾಣಿಸಿ ಕೊಂಡಿತಂತೆ, ತನ್ನ ಯೋಗದ[3] ಮಹಿಮೆಯಿಂದ ನಿರ್ಮಿತವಾದ ಅತ್ಯದ್ಭುತವಾದ ಯಾರನ್ನಾದರೂ) ಬೆರಗುಗೊಳಿಸುವ ರೂಪದಿಂದ ದೇವತೆಗಳ ಇಂದ್ರಿಯಕ್ಕೆ ಗೋಚರವಾಗುವಂತೆ ಕಾಣಿಸಿಕೊಂಡಿತಂತೆ, ಮೈದೋರಿತಂತೆ. ಆ ಮೈದೋರಿದ ಬ್ರಹ್ಮವನ್ನು ಇದು ಯಾವ ಯಕ್ಷವು, ಪೂಜ್ಯವಾದ ಮಹಾಭೂತವು, ಎಂಬುದನ್ನು ದೇವತೆಗಳು ತಿಳಿಯಲಿಲ್ಲ, ಅರಿತುಕೊಳ್ಳಲೇ ಇಲ್ಲ.

ಅಗ್ನಿಯೇ ಮೊದಲಾದವರ ಗರ್ವದ ಭಂಗ

ತೇಗ್ನಿಮಬ್ರುವನ್ ಜಾತವೇದ ಏತದ್ವಿಜಾನೀಹಿ
ಕಿಮೇತದ್ ಯಕ್ಷಮಿತಿ ತಥೇತಿ ॥ ೩ ॥

ತದಭ್ಯದ್ರವತ್ ತಮಭ್ಯವದತ್ ಕೋಽಸೀತ್ಯಗ್ನಿರ್ವಾ
ಅಹಮಸ್ಮೀತ್ಯಬ್ರವೀಜ್ಜಾತವೇದಾ ವಾ ಅಹಮಸ್ಮೀತಿ ॥ ೪ ॥

ತಸ್ಮಿಗ್ಂ ಸ್ತ್ವಯಿ ಕಂ ವೀರ್ಯಮಿತ್ಯಪೀದಗ್ಂ
ಸರ್ವಂ ದಹೇಯಂ ಯದಿದಂ ಪೃಥಿವ್ಯಾಮಿತಿ ॥ ೫ ॥

---

* (ವಾ॥) ಪಾಠದಲ್ಲಿದೆ.

1. ಒಂದನೆಯ ಖಂಡದಲ್ಲಿ ಹೇಳಿರುವಂತೆ ಪ್ರಾಣಿಗಳಿಲ್ಲದರ ಕರಣಗಳ ವ್ಯಾಪಾರಕ್ಕೆ ನ್ನ ಸನ್ನಿಧಿಮಾತ್ರದಿಂದ ಕಾರಣವಾಗಿರುವದರಿಂದ.

2. ಸೋಲಿಗೆಲ್ಲ ಆಸುರಸಂಪತ್ತೇ ಕಾರಣವೆಂದು ಇದರಿಂದ ಸೂಚಿಸಿದಂತಾಯಿತು.

3. ಇಲ್ಲಿ ಯೋಗವೆಂದರೆ ಗುಣತ್ರಯಗಳನ್ನು ಸೇರಿಸುವ ಮಾಯಾವಿಲಾಸವು. (ಟೀ॥)

ತಸ್ಮೈ ತೃಣಂ ನಿದಧಾವೇತದ್ದಹೇತಿ
ತದುಪಪ್ರೇಯಾಯ ಸರ್ವಜವೇನ
ತನ್ನ ಶಶಾಕ ದಗ್ಧುಂ ಸ ತತ ಏವ ನಿವವೃತೇ
ನೈತದಶಕಂ ವಿಜ್ಞಾತುಂ ಯದೇತದ್ಯಕ್ಷಮಿತಿ ॥ ೬ ॥

೩-೬. ಅವರು ಅಗ್ನಿಯನ್ನು (ಕುರಿತು) " ಜಾತವೇದನೆ, ಇದು ಯಾವ ಯಕ್ಷನೋ ಅದನ್ನು ತಿಳಿತುಕೊಂಡು ಬಾ " ಎಂದು ಹೇಳಿದರು. "ಆಗಲಿ !" ಎಂದು ಅದರ ಬಳಿಗೆ ಓಡಿದನು. ಅವನನ್ನು " ನೀನು ಯಾರು ?" ಎಂದು ಕೇಳಿತು. " ನಾನು ಅಗ್ನಿಯೇ ಆಗಿರುವೆನು, ನಾನು ಜಾತವೇದನೇ ಆಗರುವೆನು " ಎಂದನು. " ಆ ನಿನ್ನಲ್ಲಿರುವ ವೀರ್ಯವು ಯಾವದು ?" ಎನ್ನಲು " ಈ ಪೃಥಿವಿಯಲ್ಲಿ ಯಾವ ಯಾವದು ಇದೆಯೋ ಇದನ್ನೆಲ್ಲ ಸುಟ್ಟೀನು " ಎಂದನು. " ಇದನ್ನು ಸುಡು " ಎಂದು ಅವನೆದುರಿಗೆ ಹುಲ್ಲು ಕಡ್ಡಿಯನ್ನು ಇಟ್ಟಿತು. (ತನ್ನ) ಎಲ್ಲಾ ವೇಗದಿಂದಲೂ ಅದರ ಬಳಿಗೆ ಬಂದನು ; ಅದನ್ನು ಸುಡುವದಕ್ಕಾಗಲಿಲ್ಲ. ' ಇದು ಯಾವ ಯಕ್ಷನೆಂಬುದನ್ನು ತಿಳಿಯುವದಕ್ಕೆ ಶಕ್ತನಾಗಲಿಲ್ಲ " ಎಂದು ಅವನು ಅಲ್ಲಿಂದಲೇ ಹಿಂತಿರುಗಿದನು.

ಭಾಷ್ಯ

೬೯. ತೇ ತದಜಾನನ್ತೋ ದೇವಾಃ ಸಾನ್ತರ್ಭಯಾಃ ತದ್ವಿಜಿಜ್ಞಾಸವಃ, ಅಗ್ನಿಮ್ ಅಗ್ರಗಾಮಿನಂ ಜಾತವೇದಸಂ ಸರ್ವಜ್ಞಕಲ್ಪಮ್ ಅಬ್ರುವನ್ ಉಕ್ತವನ್ತಃ । ಹೇ ಜಾತವೇದಃ ಏತತ್ ಅಸ್ಮದ್ಗೋಚರಸ್ಥಂ ಯಕ್ಷಂ ವಿಜಾನೀಹಿ ವಿಶೇಷತೋ ಬುಧ್ಯಸ್ವ ತ್ವಂ ನಸ್ತೇಜಸ್ವೀ ಕಿಮೇತದ್ ಯಕ್ಷಮಿತಿ । ತಥಾ ಅಸ್ತು ಇತಿ ತತ್ ಯಕ್ಷಮ್ ಅಭ್ಯದ್ರವತ್ ಪ್ರತಿಗತವಾನ್ ಅಗ್ನಿಃ । ತಂ ಚ ಗತವನ್ತಂ ಪಿಪೃಚ್ಛಿಷುಂ ತತ್ಸಮೀಪೇ ಅಪ್ರಗಲ್ಭತ್ವಾತ್ ತೂಷ್ಣೀಂಭೂತಂ ತತ್ ಯಕ್ಷಮ್ ಅಭ್ಯವದತ್ ಅಗ್ನಿಂ ಪ್ರತಿ ಅಭಾಷತ " ಕೋಽಸಿ ?" ಇತಿ । ಏವಂ ಬ್ರಹ್ಮಣಾ ಪ್ರಶ್ನೋಽಗ್ನಿಃ ಅಬ್ರವೀತ್ " ಅಗ್ನಿರ್ವೈ ಅಗ್ನಿರ್ನಾಮಾಹಂ ಪ್ರಸಿದ್ಧೋ ಜಾತವೇದಾ " ಇತಿ ಚ ನಾಮದ್ವಯೇನ ಪ್ರಸಿದ್ಧತಯಾ ಆತ್ಮಾನಂ ಶ್ಲಾಘಯನ್ । ಇತ್ಯೇವಮುಕ್ತವನ್ತಂ ಬ್ರಹ್ಮ ಅವೋಚತ್ " ತಸ್ಮಿನ್ ಏವಂ ಪ್ರಸಿದ್ಧಗುಣನಾಮವತಿ ತ್ವಯಿ ಕಿಂ ವೀರ್ಯಂ ಸಾಮರ್ಥ್ಯಮ್ ?" ಇತಿ । ಸೋಽಬ್ರವೀತ್ " ಇದಂ ಜಗದ್ ಸರ್ವಂ ದಹೇಯಂ ಭಸ್ಮೀಕುರ್ಯಾಮ್, ಯತ್ ಇದಂ ಸ್ಥಾವರಾದಿ ಪೃಥಿವ್ಯಾಮ್ " ಇತಿ । ' ಪೃಥಿವ್ಯಾಮ್ ' ಇತ್ಯುಪಲಕ್ಷಣಮ್, ಯತೋಽನ್ತರಿಕ್ಷಸ್ಥಮಪಿ ದಹ್ಯತ ಏವಾಗ್ನಿನಾ ॥

(ಭಾಷ್ಯಾರ್ಥ)

ಅದನ್ನರಿಯಲಾರದೆ ಆ ದೇವತೆಗಳು ಒಳಗೆ ಅಂಜಿಕೆಯಿಂದ ಕೂಡಿದವರಾಗಿ ಅದನ್ನು ತಿಳಿದುಕೊಳ್ಳಬೇಕೆಂದು **ಅಗ್ನಿ**ಯನ್ನು, (ತಮ್ಮ) ಮುಂದಾಳಾದ[1] ಸರ್ವಜ್ಞ ಕಲ್ಪನಾದ[2] **ಜಾತವೇದ**ನನ್ನು ಕುರಿತು, (ಹೀಗೆ) ಹೇಳಿದರು, ಇಂತೆಂದರು : "ಎಲೈ ಜಾತವೇದನೆ, ಈ ನಮ್ಮ ಮುಂದೆ ಕಾಣಿಸುತ್ತಿರುವ ಯಕ್ಷನು ಯಾವದೋ ತಿಳಿದು ಕೊಂಡು ಬಾ, ಬಿಡಿಸಿ ಅರಿತುಕೊಂಡು ಬಾ, (ಏಕೆಂದರೆ) ನೀನು ನಮ್ಮಲ್ಲೆಲ್ಲ ತೇಜಸ್ವಿಯಾಗಿರುವೆ."

ಆ ಅಗ್ನಿಯು 'ಹಾಗೇ ಆಗಲಿ' ಎಂದು ಆ ಯಕ್ಷನ ಬಳಿಗೆ ಓಡಿದನು, ಅದನ್ನು ಕುರಿತು ಹೋದನು. ಹಾಗೆ ಹೋಗಿ ಪ್ರಶ್ನೆಯನ್ನು ಕೇಳಬೇಕೆಂದಿದ್ದರೂ ಆ (ಬ್ರಹ್ಮದ) ಬಳಿಯಲ್ಲಿ ಏನೂ ತೋಚದೆ[3] ಸುಮ್ಮನಾದ ಆ ಅಗ್ನಿಯನ್ನು ಆ ಯಕ್ಷನು ಮಾತನಾಡಿಸಿತು, "ನೀನು ಯಾರು?" ಎಂದು ಕೇಳಿತು. ಹೀಗೆಂದು ಬ್ರಹ್ಮವು ಕೇಳಲು ಅಗ್ನಿಯು "ಅಗ್ನಿಯೇ ನಾನು ಅಗ್ನಿ ಎಂಬ ಹೆಸರಿನಿಂದ ನಾನು ಪ್ರಸಿದ್ಧನಾಗಿರುವೆನು, ಜಾತವೇದನೆಂದೂ (ಪ್ರಸಿದ್ಧನಾಗಿರುವೆನು)" ಎಂದು ಎರಡು ಹೆಸರುಗಳಿಂದಲೂ ಪ್ರಸಿದ್ಧನಾಗಿರುವೆನೆಂದು ತನ್ನನ್ನು ಹೊಗಳಿಕೊಂಡು ಉತ್ತರವನ್ನು ಕೊಟ್ಟನು.

ಅವನು ಹೀಗೆನ್ನಲಾಗಿ ಬ್ರಹ್ಮವು "ಇಂಥ ಪ್ರಸಿದ್ಧವಾದ ಗುಣನಾಮಗಳಿಂದೊಡಗೂಡಿದ ನಿನ್ನಲ್ಲಿರುವ ವೀರ್ಯವು ಸಾಮರ್ಥ್ಯವು ಯಾವದು?" ಎಂದು ಕೇಳಿತು. ಅವನು "ಈ ಪೃಥಿವಿಯಲ್ಲಿ ಸ್ಥಾವರಾದಿಯಾಗಿ ಈ ಯಾವಯಾವದು ಇದೆಯೋ ಇದೆಲ್ಲವನ್ನೂ ಸುಟ್ಟೇನು, ಬೂದಿಗೈಯಬಲ್ಲೆನು" ಎಂದನು. (ಇಲ್ಲಿ) 'ಪೃಥಿವಿಯಲ್ಲಿ' ಎಂದು ಹೇಳಿರುವದು **ಉಪಲಕ್ಷಣವು**, ಏಕೆಂದರೆ ಅಂತರಿಕ್ಷದಲ್ಲಿರುವದಲ್ಲಿರುವದೂ ಅಗ್ನಿಯಿಂದ ಸುಟ್ಟೀಸಡುತ್ತದೆ.

---

1. ಅಗ್ನಿ ಎಂಬ ಮಾತಿಗೆ ಅಗ್ರಗಾಮಿ ಎಂಬರ್ಥವನ್ನು ಇಲ್ಲಿ ಕೊಟ್ಟಿರುತ್ತದೆ. ದೇವತೆಗಳಿಗೆ ಹವಿಸ್ಸನ್ನು ಒಯ್ದು ಒಪ್ಪಿಸುವವನು ಅಗ್ನಿಯು.

2. ಜಾತವೇದನೆಂದರೆ ನಡೆದದ್ದನ್ನೆಲ್ಲ ತಿಳಿಯುವವನು. ಎಲ್ಲಾ ಕರ್ಮಗಳೂ ಅಗ್ನಿ ಸಾಕ್ಷಿಕವಾಗಿಯೇ ನಡೆಯುವವು; ಆದ್ದರಿಂದ ಅಗ್ನಿಗೆ ತಿಳಿಯದ್ದೇ ಇಲ್ಲವೆಂದು ಭಾವ. ಸರ್ವಜ್ಞಕಲ್ಪನು, ಸ್ವಲ್ಪ ಹೆಚ್ಚುಕಡಮೆಯಾಗಿ ಸರ್ವಜ್ಞನೇ, ಎಂದು ಅಗ್ನಿಗೆ ವಿಶೇಷಣವನ್ನು ಕೊಟ್ಟಿರುವದಕ್ಕೆ ಇದೇ ಕಾರಣ.

3. ಅಗ್ನಿಯ ಆತ್ಮನೇ ಪರಮಾತ್ಮನು; ಆದ್ದರಿಂದ ಇವನಿಗೆ ತನ್ನ ಆತ್ಮನನ್ನು ವಿಷಯ ಮಾಡಿಕೊಂಡು ಅರಿಯುವದು ಆಗಲಿಲ್ಲ.

(ಭಾಷ್ಯ)

೭೦. ತಸ್ಮೈ ಏವಮಭಿಮಾನವತೇ ಬ್ರಹ್ಮ ತೃಣಂ ನಿದಧೌ ಪುರೋಽಗ್ನೇಃ ಸ್ಥಾಪಿತವತ್। ಬ್ರಹ್ಮಣಾ[1] "ಏತತ್ ತೃಣಮಾತ್ರಂ ಮಮಾಗ್ರತೋ ದಹ। ನ ಚೇದಸಿ ದಗ್ಧುಂ ಸಮರ್ಥಃ, ಮುಞ್ಚ ದಗ್ಧೃತ್ವಾಭಿಮಾನಂ ಸರ್ವತ್ರ" ಇತ್ಯುಕ್ತಃ ತತ್ ತೃಣಮ್ ಉಪಪ್ರೇಯಾಯ ತೃಣಸಮಾಪಂ ಗತವಾನ್ ಸರ್ವಜವೇನ ಸರ್ವೋತ್ಸಾಹ ಕೃತೇನ ವೇಗೇನ। ಗತ್ವಾ ತತ್ ನ ಶಶಾಕ ನಾಶಕತ್ ದಗ್ಧುಮ್। ಸ ಜಾತವೇದಾಃ ತೃಣಂ ದಗ್ಧುಮಶಕ್ತೋ ವ್ರೀಡಿತೋ ಹತಪ್ರತಿಜ್ಞಃ ತತ ಏವ ಯಕ್ಷಾದೇವ ತೂಷ್ಣೀಂ ದೇವಾನ್ ಪ್ರತಿ ನಿವವೃತೇ ನಿವೃತ್ತಃ ಪ್ರತಿಗತವಾನ್ ನೈತತ್ ಯಕ್ಷಮ್ ಅಶಕಂ ಶಕ್ತವಾನ್ ಅಹಂ ವಿಜ್ಞಾತುಂ ವಿಶೇಷತಃ ಯದೇತದ್ಯಕ್ಷಮಿತಿ ॥

(ಭಾಷ್ಯಾರ್ಥ)

ಇಂಥ ಅಭಿಮಾನವುಳ್ಳ[2] ಅಗ್ನಿಯ ಮುಂದುಗಡೆಯಲ್ಲಿ ಬ್ರಹ್ಮವು (ಒಂದು) ಹುಲ್ಲುಕಡ್ಡಿಯನ್ನು ಇಟ್ಟಿತು, ಹಾಕಿತು ಈ ಹುಲ್ಲುಕಡ್ಡಿಯೊಂದನ್ನು ನನ್ನ ಮುಂದೆ ಸುಡು (ನೋಡೋಣ); (ಹಾಗೆ) ಸುಡುವದಕ್ಕೆ ಕೈಯಲ್ಲಾಗದಿದ್ದರೆ ಎಲ್ಲವನ್ನೂ ಸುಡುವೆನೆಂಬ ಅಭಿಮಾನವನ್ನು ಬಿಟ್ಟುಬಿಡು" ಎಂದು ಬ್ರಹ್ಮವು ಹೇಳಲಾಗಿ (ಅಗ್ನಿಯು) ತನ್ನ ಎಲ್ಲಾ ವೇಗದಿಂದಲೂ ಪೂರ್ಣವಾದ ಉತ್ಸಾಹದಿಂದ ಕೂಡಿದ ವೇಗದಿಂದ, ಅದರ ಬಳಿಗೆ ಬಂದನು, ಆ ಹುಲ್ಲುಕಡ್ಡಿಯ ಹತ್ತಿರಕ್ಕೆ ಬಂದನು. ಅದನ್ನು ಸುಡುವದಕ್ಕೆ ಆಗಲಿಲ್ಲ, ಶಕ್ತನಾಗಲಿಲ್ಲ. ಆ ಜಾತವೇದನು ಹುಲ್ಲುಕಡ್ಡಿಯನ್ನು (ಕೂಡ) ಸುಡಲಾರದೆ ನಾಚಿಕೆಯಿಂದ ತಾನು ಹೇಳಿದ್ದನ್ನು ನಡೆಯಿಸಲಾರದವನಾಗಿ ಅಲ್ಲಿಂದಲೇ, ಆ ಯಕ್ಷನ ಬಳಿಯಿಂದಲೇ, "ಇದು ಯಾವ ಯಕ್ಷನೋ ಎಂಬುದನ್ನು ಬಿಡಿಸಿ ಗೊತ್ತುಪಡಿಸಲಾರದೆ ಹೋದೆನು" ಎಂದು ದೇವತೆಗಳ ಬಳಿಗೆ ಹಿಂತಿರುಗಿದನು.

ಅಥ ವಾಯುಮಬ್ರುವ ನಾಯನೇತ
ದ್ವಿಜಾನೀಹಿ ಕಿಮೇತದ್ಯಕ್ಷಮಿತಿ ತಥೇತಿ ॥ ೭ ॥

ತದಭ್ಯದ್ರವತ್ ತಮಭ್ಯವದತ್ ಕೋಽಸೀತಿ ವಾಯುರ್ವಾ
ಅಹಮಸ್ಮೀತ್ಯಬ್ರವೀನ್ಮಾತರಿಶ್ವಾ ವಾ ಅಹಮಸ್ಮೀತಿ ॥ ೮ ॥

ತಸ್ಮಿಗ್ಂಸ್ತ್ವಯಿ ಕಂ ವೀರ್ಯಮಿತ್ಯಪೀದಗ್ಂ
ಸರ್ವಮಾದದೀಯ ಯದಿದಂ ಪೃಥಿವ್ಯಾಮಿತಿ ॥ ೯ ॥

---

1. ಈ (ವಾ॥) ಪಾಠವೇ ಉತ್ತಮ.
2. ತಾನೇ ಎಲ್ಲವನ್ನೂ ಸುಡುವೆನು ಎಂಬ ಅಭಿಮಾನವುಳ್ಳ.

ತಸ್ಮೈ ತೃಣಂ ನಿದಧಾವೇತದಾದತ್ಸ್ವೇತಿ ತದುಪಪ್ರೇಯಾಯ
ಸರ್ವಜವೇನ ತನ್ನ ಶಶಾಕಾದಾತುಂ ಸ ತತ ಏವ
ನಿವವೃತೇ ನೈತದಶಕಂ ವಿಜ್ಞಾತುಂ ಯದೇತದ್ಯಕ್ಷಮಿತಿ ॥ ೧೦ ॥

೭-೧೦. ಆಮೇಲೆ ವಾಯುವನ್ನು ಕುರಿತು "ವಾಯುವೆ, ಇದು ಯಾವ ಯಕ್ಷನೋ ಅದನ್ನು ತಿಳಿದುಕೊಂಡು ಬಾ" ಎಂದರು. "ಆಗಲಿ!" ಎಂದು ಅದರ ಬಳಿಗೆ ಓಡಿದನು. ಅವನನ್ನು "ನೀನು ಯಾರು?" ಎಂದು ಕೇಳಿತು. "ವಾಯುವೇ ನಾನಾಗಿರುವೆನು, ನಾನು ಮಾತರಿಶ್ವನೇ ಆಗಿರುವೆನು" ಎಂದನು. 'ಆ ನಿನ್ನಲ್ಲಿರುವ ವೀರ್ಯವು ಯಾವದು?" ಎನ್ನಲು "ಈ ಪೃಥಿವಿಯಲ್ಲಿ ಯಾವ ಯಾವದು ಇದೆಯೋ ಇದನ್ನೆಲ್ಲ ಎತ್ತಿಕೊಂಡೇನು" ಎಂದನು. "ಇದನ್ನು ಎತ್ತಿಕೊ" ಎಂದು ಅವನೆದುರಿಗೆ ಹುಲ್ಲುಕಡ್ಡಿಯನ್ನು ಇಟ್ಟಿತು. ತನ್ನ ಎಲ್ಲಾ ವೇಗದಿಂದಲೂ ಅದರ ಬಳಿಗೆ ಬಂದನು; ಅದನ್ನು ಎತ್ತಿಕೊಳ್ಳುವದಾಗಲಿಲ್ಲ. "ಇದು ಯಾವ ಯಕ್ಷನೆಂಬುದನ್ನು ತಿಳಿಯುವದಕ್ಕೆ ಶಕ್ತನಾಗಲಿಲ್ಲ" ಎಂದು ಅವನು ಅಲ್ಲಿಂದಲೇ ಹಿಂತಿರುಗಿದನು.

(ಭಾಷ್ಯ)

೭೧. ಅಥ ಅನನ್ತರಂ ವಾಯುಮಬ್ರುವ್ರ್ ಹೇ ವಾಯೋ ಏತದ್ ವಿಜಾನೀಹಿ ಇತ್ಯಾದಿ ಸಮಾನಾರ್ಥಂ ಪೂರ್ವೇಣ । ವಾನಾತ್ ಗಮನಾತ್, ಗನ್ಧನಾದ್ವಾ ವಾಯುಃ । ಮಾತರಿ ಅನ್ತರಿಕ್ಷೇ ಶ್ವಯತೀತಿ ಮಾತರಿಶ್ವಾ । ಇದಂ ಸರ್ವಮಪಿ ಆದದೀಯ ಗೃಹ್ಣೀಯಾಮ್ । ಯದಿದಂ ಪೃಥಿವ್ಯಾಮ್ ಇತ್ಯಾದಿ ಸಮಾನಮೇವ ॥

(ಭಾಷ್ಯಾರ್ಥ)

ಆಮೇಲೆ ಆ ಬಳಿಕ (ಅವರು) ವಾಯುವನ್ನು ಕುರಿತು ಇಂತೆಂದರು: ಎಲೈ ವಾಯುವೆ, "ಅದನ್ನು ತಿಳಿದುಕೊಂಡು ಬಾ" (ಎಂದು ಮುಂತಾಗಿರುವ) ಗ್ರಂಥಭಾಗವು) ಹಿಂದಿನ (ಗ್ರಂಥಭಾಗದಂತೆ) ಅದೇ ಅರ್ಥವುಳ್ಳದ್ದಾಗಿರುತ್ತದೆ. ಬೀಸುವದರಿಂದ ಎಂದರೆ ಚಲಿಸುವದರಿಂದ ಅಥವಾ ವಾಸನೆಯನ್ನು ಕೊಡುವದರಿಂದ[1] **ವಾಯು** ವೆಂದು ಹೆಸರು. ಮಾತೃವಿನಲ್ಲಿ ಎಂದರೆ ಅಂತರಿಕ್ಷದಲ್ಲಿ [ಶ್ವಯತಿ] ಚಲಿಸುತ್ತಾನಾದ್ದರಿಂದ **ಮಾತರಿಶ್ವ**ನೆಂದು ಹೆಸರು. ಇದೆಲ್ಲವನ್ನೂ **ಎತ್ತಿಕೊಂಡೇನು**, ಎಂದರೆ ತೆಗೆದುಕೊಂಡೇನು (ಎಂದರ್ಥ). "ಈ ಪೃಥಿವಿಯಲ್ಲಿ ಯಾವ ಯಾವದು ಇದೆಯೋ" ಎಂದು ಮುಂತಾಗಿರುವ (ಗ್ರಂಥಭಾಗವು ಹಿಂದಿನ ಮಂತ್ರಕ್ಕೂ **ಈ** ಮಂತ್ರಕ್ಕೂ) ಸಮಾನವಾಗಿಯೇ (ಇದೆ).

---

1. ವಾ ಗತಿಗನ್ಧಯೋಃ । ಹೋಗು, ವಾಸನೆ ಕೊಡು ಎಂಬರ್ಥದ 'ವಾ' ಧಾತುವಿನಿಂದ ವಾಯುವೆಂಬ ಮಾತು ಹುಟ್ಟಿದೆ ಎಂದು ಭಾವ.

ಅಥೇನ್ದ್ರಮಬ್ರುವ॑ ಮಘವನ್ನೇತದ್ವಿಜಾನೀಹಿ
ಕಮೇತದ್ಯಕ್ಷಮಿತಿ ತಥೇತಿ । ತದಭ್ಯದ್ರವತ್ ತಸ್ಮಾತ್
ತಿರೋದಧೇ ॥ ೧೮ ॥

೧೮. ಆಮೇಲೆ ಇಂದ್ರನನ್ನು ಕುರಿತು "ಮಘವಂತನೆ, ಇದು ಯಾವ ಯಕ್ಷನೋ ಅದನ್ನು ತಿಳಿದುಕೊಂಡು ಬಾ" ಎಂದರು. "ಆಗಲಿ!" ಎಂದು ಅದರ ಬಳಿಗೆ ಓಡಿದನು. (ಅದು) ಅವನಿಂದ ಮರೆಯಾಯಿತು.

(ಭಾಷ್ಯ)

೭೨. ಅಥ ಇನ್ದ್ರಮಬ್ರುವ॑ "ಮಘವ॑ ಏತದ್ವಿಜಾನೀಹಿ" ಇತ್ಯಾದಿ ಪೂರ್ವವತ್ ಇನ್ದ್ರಃ ಪರಮೇಶ್ವರಃ, ಮಘವಾ[1] ಬಲವತ್ತ್ವಾತ್ । ತಥೇತಿ ತದಭ್ಯದ್ರವತ್ । ತಸ್ಮಾತ್ ಇನ್ದ್ರಾತ್ ಆತ್ಮಸಮೀಪಂ ಗತಾತ್ ತದ್ ಬ್ರಹ್ಮ ತಿರೋದಧೇ ತಿರೋಭೂತಮ್ । "ಇನ್ದ್ರಸ್ಯ ಇನ್ದ್ರತ್ವಾಭಿಮಾನೋಽತಿತರಾಂ ನಿರಾಕರ್ತವ್ಯಃ" ಇತ್ಯತಃ ಸಂವಾದಮಾತ್ರಮಪಿ ನಾದಾತ್ ಬ್ರಹ್ಮ ಇನ್ದ್ರಾಯ ॥

(ಭಾಷ್ಯಾರ್ಥ)

ಆಮೇಲೆ ಇಂದ್ರನನ್ನು ಕುರಿತು 'ಮಘವಂತನೆ' ಇದನ್ನು ತಿಳಿದುಕೊಂಡು ಬಾ" ಎಂಬುದೇ ಮುಂತಾದ (ಗ್ರಂಥಭಾಗಕ್ಕೆ ಹಿಂದಿನಂತೆಯೇ) ಸಮಾನವಾದ (ಅರ್ಥವನ್ನು) ಹೇಳಬೇಕು. ಇಂದ್ರನೆಂದರೆ ಹೆಚ್ಚಿನ ಒಡೆಯನು[2]. ಬಲವುಳ್ಳವನಾದ್ದರಿಂದ[3] **ಮಘವಂತ**(ನೆಂದು ಅವನಿಗೆ ಹೆಸರು). "ಆಗಲಿ!" ಎಂದು (ಇಂದ್ರನು) ಆ (ಬ್ರಹ್ಮದ) ಬಳಿಗೆ ಓಡಿದನು. ತನ್ನ ಬಳಿಗೆ ಬಂದ ಆ ಇಂದ್ರನಿಂದ ಆ ಬ್ರಹ್ಮವು ಮರೆಯಾಯಿತು. ಇಂದ್ರನ 'ತಾನು ಇಂದ್ರನು' ಎಂಬ ಅಭಿಮಾನವನ್ನು ತೀರ ತೊಲಗಿಸಬೇಕು ಎಂಬ ಕಾರಣದಿಂದ (ಇಂದ್ರನಿಗೆ) ಬ್ರಹ್ಮವು ಬರಿಯ ಸಂವಾದವನ್ನು ಕೂಡ ಕೊಡಲಿಲ್ಲ.[4]

---

1. "ಮಘವಾ" ಎಂದು (ವಾ॥) ಪಾಠ.

2 ಇಂದ್ರನೆಂದರೆ ಪರಮೇಶ್ವರನು, ಎಲ್ಲರಿಗೂ ಒಡೆಯನು. ನಿಜವಾಗಿ ನೋಡಿದರೆ ಪರಮಾತ್ಮನೇ ಇಂದ್ರನು, ಆ ಹೆಸರಿಗೆ ಮತ್ತೆ ಯಾವ ವ್ಯಕ್ತಿಯೂ ತಕ್ಕದ್ದಲ್ಲ. ಐ. ೧-೩ ನೋಡಿ. ಆದರೆ ದೇವತೆಗಳಿಗೆ ಒಡೆಯನೆಂಬ ಹೆಸರು ವ್ಯಾವಹಾರಿಕದೃಷ್ಟಿಯಿಂದ ಒಬ್ಬ ದೇವತೆಗೆ ಬಂದಿದೆ.

3 ಉವಾಷಕರಿಗೆ ಬಲವನ್ನು ಕೊಡುವದರಿಂದ ಮಘವಂತನೆಂಬ ಹೆಸರು ಇಂದ್ರನಿಗೆ ಬಂದಿದೆ ಎಂದು ಭಾವ. "ಯಜ್ಞವತ್ತ್ವಾತ್" ಎಂಬ (ಹಿ॥) ಪಾಠವೂ ಉಂಟು; ಆದರೆ ಮಘವೆಂಬ ಮಾತಿಗೆ ಯಜ್ಞವೆಂಬರ್ಥವು ಇರುವಂತೆ ತೋರುವದಿಲ್ಲ.

4 ಇದರಿಂದ ಇಂದ್ರನಿಗೆ ತನ್ನ ಒಡೆತನವು ಎಲ್ಲೆಲ್ಲಿಯೂ ನಡೆಯುವದೆಂಬ ದುರಭಿಮಾನವು ಹೋಗುವದಕ್ಕೆ ಕಾರಣವಾಯಿತು; ಯಕ್ಷನು ಯಾರೆಂಬುದನ್ನು ವಿಚಾರಿಸುವ ಬುದ್ಧಿಯೂ ಬಂದಿತು.

ಇಂದ್ರನಿಗೆ ಉಮೆಯ ಉಪದೇಶ

ಸ ತಸ್ಮಿನ್ನೇವಾಕಾಶೇ ಸ್ತ್ರಿಯಮಾಜಗಾಮ ಬಹುಶೋಭ-
ಮಾನಾಮುಮಾಗ್ಂ ಹೈಮವತೀಂ ತಾಗ್ಂ ಹೋವಾಚ
ಕಿಮೋತದ್ಯಕ್ಷಮಿತಿ ॥ ೧೨ ॥

೧೨. ಅವನು ಆದೇ ಆಕಾಶದಲ್ಲಿ (ಒಬ್ಬ) ಸ್ತ್ರೀಯನ್ನು—ಬಹುವಾಗಿ ಶೋಭಿಸುವ ಹೈಮವತಿಯಾದ ಉಮೆಯನ್ನು - ಬಳಿಸಾರಿದನು. ಆಕೆಯನ್ನು " ಇದು ಯಾವ ಯಕ್ಷನು " ಎಂದು ಕೇಳಿದನು.

(ಭಾಷ್ಯ)

೭೩. ತದ್ಯಕ್ಷಂ ಯಸ್ಮಿನ್ನಾಕಾಶೇ ಆಕಾಶಪ್ರದೇಶೇ ಆತ್ಮಾನಂ ದರ್ಶಯಿತ್ವಾ ತಿರೋಭೂತಮ್, ಇನ್ದ್ರಶ್ಚ ಬ್ರಹ್ಮಣಸ್ತಿರೋಧಾನಕಾಲೇ ಯಸ್ಮಿನ್ ಆಕಾಶೇ ಆಸೀತ್ ಸ ಇನ್ದ್ರಃ ತಸ್ಮಿನ್ನೇವಾಕಾಶೇ ತಸ್ಥೌ " ಕಿಂ ತದ್ ಯಕ್ಷಮ್ ?" ಇತಿ ಧ್ಯಾರ್ಯ । ನ ನಿವವೃತೇ ಅಗ್ನ್ಯಾದಿವತ್ । ತಸ್ಯ ಇನ್ದ್ರಸ್ಯ ಯಕ್ಷೇ ಭಕ್ತಿಂಬುದ್ಧಾವ ವಿದ್ಯಾ ಉಮಾರೂಪಿಣೀ ಪ್ರಾದುರಭೂತ್ ಸ್ತ್ರೀರೂಪಾ । ಸ ಇನ್ದ್ರಃ ತಾಮ್ ಉಮಾಂ ಬಹು ಶೋಭಮಾನಾಮ್ । ಸರ್ವೇಷಾಂ ಹಿ ಶೋಭಮಾನಾನಾಂ ಶೋಭ (ಮಾ)ನತಮಾ ವಿದ್ಯಾ । ತದಾ ' ಬಹು ಶೋಭಮಾನಾ ' ಇತಿ ವಿಶೇಷಣಮ್ ಉಪಪನ್ನಂ ಭವತಿ । ಹೈಮವತೀಂ ಹೇಮಕೃತಾಭರಣವತೀಮಿವ ಬಹುಶೋಭ ಮಾನಾಮಿತ್ಯರ್ಥಃ । ಅಥವಾ ಉಮೈವ **ಹಿಮವತೋ ದುಹಿತಾ ಹೈಮವತೀ** ನಿತ್ಯಮೇವ ಸರ್ವಜ್ಞೇನೇಶ್ವರೇಣ ಸಹ ವರ್ತತ ಇತಿ ಜ್ಞಾತುಂ ಸಮರ್ಥಾ ಇತಿ ಕೃತ್ವಾ ತಾಮ್ ಉಪಜಗಾಮ । ಇನ್ದ್ರಃ ತಾಂ ಹ ಉಮಾಂ ಕಿಲ ಉವಾಚ ಪಪ್ರಚ್ಛ ಬ್ರೂಹಿ ಕಿಮ್ ಏತದ್ ದರ್ಶಯಿತ್ವಾ ತಿರೋಭೂತಂ ಯಕ್ಷಮಿತಿ ॥


(ಭಾಷ್ಯಾರ್ಥ)

ಆ ಯಕ್ಷನು ಯಾವ ಆಕಾಶದಲ್ಲಿ ಎಂದರೆ ಆಕಾಶದ ಪ್ರದೇಶದಲ್ಲಿ[1] ತನ್ನನ್ನು (ತಾನೇ) ತೋರಿಸಿ ಮರೆಯಾಯಿತೋ, ಮತ್ತು ಬ್ರಹ್ಮವು ಮರೆಯಾದ ಕಾಲದಲ್ಲಿ ಇಂದ್ರನು ಯಾವ ಆಕಾಶದಲ್ಲಿ ಇದ್ದನೋ, ಆ ಇಂದ್ರನು ಅದೇ ಆಕಾಶದಲ್ಲಿಯೇ " ಆ ಯಕ್ಷನು ಯಾವದು ?" ಎಂದು ಯೋಚಿಸಿಕೊಳ್ಳುತ್ತಾ ನಿಂತುಕೊಂಡಿದ್ದನು, ಅಗ್ನಿಯೇ ಮೊದಲಾದವರಂತೆ ಹಿಂತಿರುಗಲಿಲ್ಲ. ಆ ಇಂದ್ರನಿಗೆ ಯಕ್ಷನಲ್ಲಿದ್ದ ಭಕ್ತಿಯನ್ನು ಮನದಂದು **ವಿದ್ಯೆಯು ಉಮಾರೂಪದಿಂದ** ಸ್ತ್ರೀಯಾಗಿ ಕಾಣಿಸಿಕೊಂಡಿತು.

---

1. ಆಕಾಶವು ಒಂದೇ ; ಆದ್ದರಿಂದ ಆ ಆಕಾಶ, ಈ ಆಕಾಶ ಎಂದು ವ್ಯವಹರಿಸುವಾಗ ಅದರ ಪ್ರದೇಶವೆಂದೇ ಅರ್ಥವನ್ನು ಮಾಡಬೇಕೆಂದು ಭಾವ.

ಆ ಇಂದ್ರನು ಬಹುವಾಗಿ ಶೋಭಿಸುತಲಿದ್ದ ಆ ಉಮೆಯನ್ನು–ಶೋಭಿಸುವ (ವಿದ್ಯೆ)ಗಳಲ್ಲೆಲ್ಲ (ಬ್ರಹ್ಮ) ವಿದ್ಯೆಯು[1] ಹೆಚ್ಚಾಗಿ ಶೋಭಿಸುತ್ತಿರುವದಲ್ಲವೆ? (ಆದ್ದರಿಂದ ಇಲ್ಲಿ ಬ್ರಹ್ಮವಿದ್ಯೆಯೆಂಬ ಅರ್ಥವನ್ನು ಇಟ್ಟುಕೊಂಡರೆ) ಆಗ 'ಬಹುವಾಗಿ ಶೋಭಿಸುವ' ಎಂಬ ವಿಶೇಷಣವು ಹೊಂದುತ್ತದೆ. ಹೈಮವತಿಯಾದ ಎಂದರೆ ಚಿನ್ನದಿಂದ ಮಾಡಿದ ಆಭರಣಗಳನ್ನು ತೊಟ್ಟವಳಂತೆ ಬಹುವಾಗಿ ಶೋಭಿಸುತ್ತಿರುವ ಎಂದರ್ಥ. ಅಥವಾ ಹಿಮವಂತನ ಮಗಳಾದ[2] **ಉಮೆಯೇ** ಇಲ್ಲಿ **ಹೈಮವತಿ** (ಎಂಬ ಶಬ್ದದಿಂದ ಹೇಳಲ್ಪಟ್ಟಿರುತ್ತಾಳೆಂದೂ ಅರ್ಥಮಾಡಬಹುದು ಆಕೆಯು) ಸರ್ವಜ್ಞನಾದ **ಈಶ್ವರ**ನೊಡನೆ[3] ಯಾವಾಗಲೂ ಇರುವಳಾದ್ದರಿಂದ (ಆತನ ಸ್ವರೂಪವನ್ನು ಆಕೆಯೇ) ಬಲ್ಲಳು ಎಂದು ಆಕೆಯ ಬಳಿಗೆ ಬಂದನು ಇಂದ್ರನು ಆ ಉಮಾದೇವಿಯನ್ನು–ಕುರಿತು ಇಂತೆಂದನಂತೆ "ಇಗೋ ಇಲ್ಲಿ ಕಾಣಿಸಿಕೊಂಡು ಮರೆಯಾಯಿತಲ್ಲ, ಇದು ಯಾವ ಯಕ್ಷನು?" ಎಂದು ಕೇಳಿದನಂತೆ.[4]



---

1. ಬ್ರಹ್ಮವಿದ್ಯೆಯು ಸರ್ವವಿದ್ಯೆಗಳಿಗಿಂತಲೂ ಹೆಚ್ಚಿನದು; ಏಕೆಂದರೆ ಅದರಲ್ಲಿಯೇ ಮಿಕ್ಕ ಎಲ್ಲಾ ವಿದ್ಯೆಗಳೂ ಪರಿಸಮಾಪ್ತಿಯಾಗುತ್ತವೆ. ಮು. ಭಾ. ೧–೧–೧; ಗೀ. ಭಾ. ೧೦–೩೨.

2. ಹೈಮವತಿ ಎಂಬ ಶಬ್ದಕ್ಕೆ ಚಿನ್ನದಿಂದ ಮಾಡಿದ ಆಭರಣವುಳ್ಳವಳು ಎಂದು ಒಂದು ಅರ್ಥ; ಹಿಮವಂತನ ಮಗಳಾದ ಎಂದು ಒಂದು ಅರ್ಥ. ಉಮಾ, ಹೈಮವತೀ–ಎಂಬಿವೆರಡೂ ಪಾರ್ವತಿಯ ಹೆಸರೆಂದು ಪುರಾಣಪ್ರಸಿದ್ಧಿಯಿರುತ್ತದೆ. ಪರಮಾತ್ಮನನ್ನು ಶಿವನೆಂಬ ಹೆಸರಿನಿಂದ ಭಾಷ್ಯದಲ್ಲಿ ಕರೆದಿರುವದು ದಶೋಪನಿಷತ್ತುಗಳಲ್ಲಿ ಮತ್ತೆಲ್ಲಿಯೂ ಕಾಣಬರುವದಿಲ್ಲ.

3. ಈಶ್ವರಶಬ್ದವನ್ನು ಶಿವನು ಎಂಬರ್ಥದಲ್ಲಿ ಪ್ರಯೋಗಮಾಡಿರುವದು ದಶೋಪನಿಷದ್ಭಾಷ್ಯಗಳಲ್ಲೆಲ್ಲ ಈ ಉಪನಿಷತ್ತು ಒಂದರಲ್ಲಿಯೇ.

4. ತನ್ನ ಬುದ್ಧಿಯಿಂದ ಊಹಿಸಿ ತಿಳಿಯುವದಕ್ಕಿಂತಲೂ ಬಲ್ಲವರನ್ನು ಕೇಳಿ ತಿಳಿದುಕೊಳ್ಳುವದೇ ಆತ್ಮಜ್ಞಾನಕ್ಕೆ ಸರಿಯಾದ ದಾರಿಯೆಂಬುದನ್ನು ಇದು ಸೂಚಿಸುವದು.

ನಾಲ್ಕನೆಯ ಖಂಡ

ಸಾ ಬ್ರಹ್ಮೇತಿ ಹೋವಾಚ ಬ್ರಹ್ಮಣೋ ವಾ ಏತದ್ವಿಜಯೇ ಮಹೀಯಧ್ವಮಿತಿ ತತೋ ಹೈವ ವಿದಾಂಚಕಾರ ಬ್ರಹ್ಮೇತಿ ॥ ೧ ॥

೧. ಆಕೆಯು "(ಅದು) ಬ್ರಹ್ಮವು" ಎಂದು ಹೇಳಿದಳಂತೆ ಬ್ರಹ್ಮದ ವಿಜಯದಲ್ಲಿಯೇ ಹೀಗ ಮಹಿಮಾವಂತರಾದಿರಿ" ಎಂದು (ನುಡಿದಳಂತೆ). ಅದರಿಂದಲೇ (ಅವನು ಅದು) ಬ್ರಹ್ಮವೆಂದು ತಿಳಿದುಕೊಂಡನಂತೆ.

(ಭಾಷ್ಯ)

೭೪. ಸಾ ಬ್ರಹ್ಮೇತಿ ಹೋವಾಚ। ಹ ಕಿಲ ಬ್ರಹ್ಮಣಃ ವೈ * ಈಶ್ವರ ಸ್ಯೈವ ವಿಜಯೇ, ಈಶ್ವರೇಣೈವ ಜಿತಾ ಅಸುರಾಃ, ಯೂಯಂ ತತ್ರ ನಿಮಿತ್ತ ಮಾತ್ರಮ್। ತಸ್ಯೈವ ವಿಜಯೇ ಯೂಯಂ ಮಹೀಯಧ್ವಂ ಮಹಿಮಾನಂ ಪ್ರಾಪ್ನುಥ। ಏತದಿತಿ ಕ್ರಿಯಾವಿಶೇಷಣಾರ್ಥಮ್। ಮಿಥ್ಯಾಭಿಮಾನಸ್ತು ಯುಷ್ಮಾಕಮ್ "ಅಸ್ಮಾಕಮೇವಾಯಂ ವಿಜಯೋಽಸ್ಮಾಕಮೇವಾಯಂ ಮಹಿಮಾ" ಇತಿ। ತತಃ ತಸ್ಮಾದುಮಾವಾಕ್ಯಾತ್ ಹ ಏವ ವಿದಾಂಚಕಾರ ಬ್ರಹ್ಮೇತಿ ಇನ್ದ್ರಃ। ಅವ ಧಾರಣಾತ್ 'ತತೋ ಹೈವ' ಇತಿ ನ ಸ್ವಾತನ್ತ್ರ್ಯೇಣ ॥

(ಭಾಷ್ಯಾರ್ಥ)

ಆಕೆಯು "(ಅದು) ಬ್ರಹ್ಮವೇ" ಎಂದಳಂತೆ. ಹ ಎಂದರೆ ಅಂತೆ (ಎಂದರ್ಥ).[1] ಬ್ರಹ್ಮದ ವಿಜಯದಲ್ಲಿಯೇ, ಈಶ್ವರನ ಗೆಲವಿನಿಂದಲೇ—ಈಶ್ವರನಿಂದಲೇ ಅಸುರರು ಜಿತರಾಗಿರುತ್ತಾರೆ, ನೀವು ಇದರಲ್ಲಿ ನಿಮಿತ್ತಮಾತ್ರರಾಗಿರುತ್ತೀರಿ.[2] ಆತನ ವಿಜಯದಲ್ಲಿಯೇ—ನೀವು ಮಹಿಮಾವಂತರಾದಿರಿ, ಮಹಿಮೆಯನ್ನು ಪಡೆದಿರುತ್ತೀರಿ. ಏತತ್ ಎಂಬುದು (ಹೀಗೆ ಮಹಿಮೆಯನ್ನು ಪಡೆದಿರುತ್ತೀರಿ) ಎಂದು (ಮಹೀಯ ಧ್ವಮ್ ಎಂಬ) ಕ್ರಿಯೆಗೆ ವಿಶೇಷಣವನ್ನು ಹೇಳುವದಕ್ಕೆ[3] (ಬಂದಿದೆ). ಆದರೂ ನಿಮಗೆ "ಈ ವಿಜಯವು ನಮ್ಮದೇ, ಈ ಮಹಿಮೆಯು ನಮ್ಮದೇ" ಎಂದು ತಪ್ಪಾದ ಅಭಿಮಾನವುಂಟಾಗಿರುತ್ತದೆ—ಎಂದು (ನುಡಿದಳಂತೆ).

---

* ಈ ಮಾತು (ಆ॥) ಪಾಠದಲ್ಲಿ ಬಿಟ್ಟುಹೋಗಿದೆ.

1. ಹ ಎಂಬದನ್ನು ಹಿಂದೆ ನಡೆದದ್ದರ ನೆನಪುಕೊಡುವದಕ್ಕಾಗಿ ಉಪಯೋಗಿಸಿದೆ. ಕೈ. ಭಾ. ೧-೫ ನೋಡಿ.

2. ನಿಮ್ಮನ್ನು ನೆಪವಾಗಿ ಉಪಯೋಗಿಸಿಕೊಂಡು ಪರಮೇಶ್ವರನೇ ಅಸುರರನ್ನು ಸೋಲಿಸಿರುತ್ತಾನೆ.

3. 'ಈ ವಿಜಯದಲ್ಲಿ' ಎಂದು ವಿಜಯಕ್ಕೆ ವಿಶೇಷಣವಲ್ಲ.

ಅದರಿಂದಲೇ ಎಂದರೆ ಆ ಉಮೆಯ ವಾಕ್ಯದಿಂದಲೇ ಇಂದ್ರನು (ಅದು) ಬ್ರಹ್ಮನೆಂದು ತಿಳಿದುಕೊಂಡನಂತೆ. "ಅದರಿಂದಲೇ" ಎಂದು ಒತ್ತಿ ಹೇಳಿರುವದರಿಂದ (ತಾನೇ) ಸ್ವತಂತ್ರವಾಗಿ[1] (ತಿಳಿದು)ಕೊಳ್ಳಲಿಲ್ಲ (ಎಂದು ಅಭಿಪ್ರಾಯ).

ಇಂದ್ರ, ವಾಯು, ಅಗ್ನಿ—ಇವರುಗಳ ಹೆಚ್ಚುಗಾರಿಕೆ

ತಸ್ಮಾದ್ವಾ ಏತೇ ದೇವಾ ಅತಿತರಾಮಿವಾನ್ಯಾ ದೇವಾ
ಯದಗ್ನಿರ್ವಾಯುರಿನ್ದ್ರಸ್ತೇಹ್ಯೇನನ್ನೇದಿಷ್ಠಂ ಪಸ್ಪ್ರಶು
ಸ್ತೇ ಹ್ಯೇನತ್ ಪ್ರಥಮೋ ವಿದಾಂಚಕಾರ ಬ್ರಹ್ಮೇತಿ ॥ ೨ ॥

೨. ಆದ್ದರಿಂದಲೇ ಅಗ್ನಿ, ವಾಯು, ಇಂದ್ರ–ಎಂಬ ಈ ದೇವತೆಗಳು ಮಿಕ್ಕ ದೇವತೆಗಳನ್ನು ಮೀರಿರುವರು. ಏಕೆಂದರೆ ಅವರೇ ಅತ್ಯಂತ ಸಮೀಪವಾದ ಇದನ್ನು ಮುಟ್ಟಿದರು; ಏಕೆಂದರೆ ಅವರೇ ಇದನ್ನು ಬ್ರಹ್ಮವೆಂದು ಮೊದಲು ತಿಳಿದುಕೊಂಡರು.

(ಭಾಷ್ಯ)

೨೫. ಯಸ್ಮಾತ್ ಅಗ್ನಿವಾಯ್ವಿನ್ದ್ರಾ ಏತೇ ದೇವಾ ಬ್ರಹ್ಮಣಃ ಸಂವಾದದರ್ಶನಾದಿನಾ ಸಾಮೀಪ್ಯಮುಪಗತಾಃ ತಸ್ಮಾತ್ ಸ್ವೈರ್ಗುಣೈಃ ಅತಿತರಾಮಿವ ಶಕ್ತಿಗುಣಾದಿಮಹಾಭಾಗ್ಯೈಃ ಅನ್ಯಾ ದೇವಾ ಅತಿತರಾಮ್ ಅತಿಶೇರತ ಇವ[2] ಏತೇ ದೇವಾಃ । ಇವಶಬ್ದೋಽನರ್ಥಕಃ, ಅವಧಾರಣಾರ್ಥೋ ವಾ । ಯತ್ ಅಗ್ನಿಃ ವಾಯುಃ ಇನ್ದ್ರಃ । ತೇ ಹಿ ದೇವಾ ಯಸ್ಮಾತ್ ಏನತ್ ಬ್ರಹ್ಮ ನೇದಿಷ್ಠಮ್ ಅನ್ತಿಕತಮಮ್ ಪ್ರಿಯತಮಂ ಪಸ್ಪೃಶುಃ ಸ್ಪೃಷ್ಟವನ್ತಃ, ಯಥೋಕ್ತೈರ್ಬ್ರಹ್ಮಣಃ ಸಂವಾದಾದಿಪ್ರಕಾರೈಃ । ತೇ ಹಿ ಯಸ್ಮಾಚ್ಚ ಹೇತೋಃ ಏನತ್ ಬ್ರಹ್ಮ ಪ್ರಥಮಃ ಪ್ರಥಮಾಃ ಪ್ರಧಾನಾಃ ಸನ್ತ ಇತ್ಯೇತತ್ । ವಿದಾಂಚಕಾರ[3] ವಿದಾಂಚಕ್ರುರಿತ್ಯೇತತ್ । ಬ್ರಹ್ಮೇತಿ ॥

(ಭಾಷ್ಯಾರ್ಥ)

ಅಗ್ನಿ, ವಾಯು, ಇಂದ್ರ–ಎಂಬ ಈ ದೇವತೆಗಳು ಬ್ರಹ್ಮದೊಡನೆ ಸಂಭಾಷಣೆ ಮಾಡುವದು, ಅದನ್ನು ಕಾಣುವದು–ಮುಂತಾದ ರೂಪದಿಂದ ಅದರ ಸಾಮೀಪ್ಯ

---

1. ಗುರೂಪದೇಶವಿಲ್ಲದೆ ತಾನೇ ಬ್ರಹ್ಮಸ್ವರೂಪವನ್ನು ತಿಳಿಯುವದು ಕಷ್ಟ. ಮು. ಭಾ. ೧-೨-೧೨ ನೋಡಿ.

2. "ಅತಿತರಾಮ್ ಅತಿಶಯೇನ ಶೇರತೇ ಇವ" ಎಂಬ (ಆ॥) ಪಾಠಕ್ಕಿಂತ ಈ (ವಾ॥) ಪಾಠವು ಮೇಲು.

3. (ಆ॥) ಪಾಠದಲ್ಲಿ ಈ ಮಾತು ಬಿಟ್ಟುಹೋಗಿದೆ.

ವನ್ನು ಹೊಂದಿದರಷ್ಟೆ ; ಈ ಕಾರಣದಿಂದ ತಮ್ಮ[1] ಗುಣಗಳಿಂದ ಮಿಾರಿರುತ್ತಾರೆ ; ಶಕ್ತಿ ಗುಣ ಮುಂತಾದ ಮಹಾಭಾಗ್ಯಗಳಿಂದ ಮಿಕ್ಕ ದೇವತೆಗಳನ್ನು ಬಹಳವಾಗಿ ಈ ದೇವತೆಗಳು ಮಿಾರಿರುತ್ತಾರೆ ಇಲ್ಲಿ ಇವ ಎಂಬ ಶಬ್ದಕ್ಕೆ ಅರ್ಥವಿಲ್ಲ ; ಅಥವಾ (ಅತಿತರಾಮೇವ ಮಿಾರಿಯೇ ಇರುತ್ತಾರೆ ಎಂದು) ಅವಧಾರಣೆಗೋಸ್ಕರ ಪ್ರಯೋಗವಾಗಿದೆ ಎಂದಾದರೂ (ಇಟ್ಟುಕೊಳ್ಳಬಹುದು). ಅಗ್ನಿ, ವಾಯು, ಇಂದ್ರ–ಎಂಬವರಿದಾರೆಲ್ಲ, (ಇವರು ಇತರರನ್ನು ಮಿಾರಿರುತ್ತಾರೆ). ಏಕೆಂದರೆ ಆ ದೇವತೆಗಳು ಅತ್ಯಂತ ಸಮಿಾಪವಾಗಿರುವ ತೀರ ಹತ್ತಿರವಾಗಿರುವ ಪ್ರಿಯತಮವಾಗಿರುವ[3] ಈ ಬ್ರಹ್ಮವನ್ನು ಹಿಂದೆ ಹೇಳಿದ ಬ್ರಹ್ಮದೊಡನೆ ಸಂಭಾಷಣೆಮಾಡುವದೇ ಮುಂತಾದ ಪ್ರಕಾರಗಳಿಂದ ಮುಟ್ಟಿದರು, ಸೋಕುವರಾದರು. ಮತ್ತು ಏಕೆಂದರೆ ಅವರೇ ಈ ಬ್ರಹ್ಮವನ್ನು 'ಪ್ರಥಮಃ' ಎಂದರೆ ಮೊದಲನೆಯವರಾಗಿ, ಮುಖ್ಯರಾಗಿ ಎಂದರ್ಥ, 'ವಿದಾಂಚಕಾರ' ಎಂದರೆ ಬ್ರಹ್ಮವೆಂದು ಅರಿತುಕೊಂಡರು ಎಂದರ್ಥ.

ತಸ್ಮಾದ್ವಾ ಇನ್ದ್ರೋಽತಿತರಾಮಿವಾನ್ಯಾ೯ ದೇವಾ೯
ಸ ಹ್ಯೇನನ್ನೇದಿಷ್ಠಂ ಪಸ್ಪರ್ಶ ಸ ಹ್ಯೇನತ್ ಪ್ರಥಮೋ
ವಿದಾಂಚಕಾರ ಬ್ರಹ್ಮೇತಿ ॥ ೩ ॥

೩. ಆದ್ದರಿಂದಲೇ ಇಂದ್ರನು ಮಿಕ್ಕ ದೇವತೆಗಳನ್ನು ಮಿಾರಿರುವನು. ಏಕೆಂದರೆ ಅವನೇ ಅತ್ಯಂತ ಸಮಿಾಪವಾದ ಇದನ್ನು ಮುಟ್ಟಿದನು, ಏಕೆಂದರೆ ಅವನೇ ಮೊದಲು ಇದನ್ನು ಬ್ರಹ್ಮವೆಂದು ತಿಳಿದುಕೊಂಡನು.

(ಭಾಷ್ಯ)

೩೬. ಯಸ್ಮಾತ್ ಅಗ್ನಿವಾಯೂ ಅಪೀನ್ದ್ರವಾಕ್ಯಾದೇವ ವಿದಾಂಚಕ್ರತುಃ। ಇನ್ದ್ರೇಣ ಹಿ ಉಮಾವಾಕ್ಯಾತ್ ಪ್ರಥಮಂ ಶ್ರುತಂ ಬ್ರಹ್ಮೇತಿ । [4]ತಸ್ಮಾದ್ವೈ ಇನ್ದ್ರಃ ಅತಿತರಾಮಿವ ಅತಿಶೇತೇ ಇವ[5] ಅನ್ಯಾ೯ ದೇವಾ೯ । 'ಸ ಹ್ಯೇನತ್ನೇ

---

1. ಐತ್ವರ್ಯಗುಣೈಃ (ಆ॥) ಎಂಬ ಪಾಠದಲ್ಲಿ ಈಶ್ವರನ ಗುಣಗಳಿಂದ ಎಂದು ಅರ್ಥ ಮಾಡಬೇಕಾಗುವದು. ಈಶ್ವರತ್ವವು ಬ್ರಹ್ಮಜ್ಞಾನವನ್ನು ನೇರಾಗಿ ಅಥವಾ ಪರಂಪರೆಯಿಂದ ಕಂಡುಕೊಂಡದ್ದಕ್ಕೆ ಅನುಗುಣವಾಗಿ ತೋರಿಕೊಂಡಿದೆ ಎಂಬರ್ಥವನ್ನು ಆಗ ತೆಗೆಯಬಹುದು.

3. ವಸ್ತು ಹತ್ತಿರವಾದಷ್ಟೂ ಪ್ರಿಯವಾಗಿರುತ್ತದೆ.

4. 'ಅತಃ' (ಆ॥) ಎಂಬ ಮಾತು ಹೆಚ್ಚು.

5. (ಮು॥) "ಅತಿತರಾಮ್ ಅತಿಶಯೇನ ಶೇತೇ" ಎಂಬ (ಆ॥) ಪಾಠಕ್ಕಿಂತ ಇದೇ ಮೇಲು.

ನೇದಿಷ್ಠಂ ಪಸ್ಪರ್ಶ ಯಸ್ಮಾತ್। ಸ ಹ್ಯೇನತ್ ಪ್ರಥಮೋ ವಿದಾಂಚಕಾರ ಬ್ರಹ್ಮೇತಿ।' ಉಕ್ತಾರ್ಥಂ ವಾಕ್ಯಮ್ ॥

(ಭಾಷ್ಯಾರ್ಥ)

ಅಗ್ನಿ, ವಾಯು–ಇವರಿಬ್ಬರುಕೂಡ ಇಂದ್ರನ ವಾಕ್ಯದಿಂದಲೇ ತಿಳಿದು ಕೊಂಡರು; ಇಂದ್ರನೇ ಉಮೆಯು ಹೇಳಿದ್ದನ್ನು ಕೇಳಿ ಮೊದಲು ಇದು ಬ್ರಹ್ಮವೆಂದು ತಿಳಿದುಕೊಂಡನು. ಆದ್ದರಿಂದಲೇ ಇಂದ್ರನು ಮಿಕ್ಕ ದೇವತೆಗಳನ್ನು ಮೀರಿರುತ್ತಾನೆ. "ಸ ಹ್ಯೇನತ್ " (ಏಕೆಂದರೆ ಅವನೇ ಅತ್ಯಂತ ಸಮೀಪವಾದ ಇದನ್ನು ಮುಟ್ಟಿದನು, ಏಕೆಂದರೆ ಅವನೇ ಮೊದಲು ಇದನ್ನು ಬ್ರಹ್ಮವೆಂದು ತಿಳಿದು ಕೊಂಡನು)–ಈ ವಾಕ್ಯಕ್ಕೆ (ಹಿಂದಿನ ಮಂತ್ರದಲ್ಲಿಯೇ) ಅರ್ಥವನ್ನು ಹೇಳಿದ್ದಾಗಿದೆ.

ಬ್ರಹ್ಮದ ಸೋಪಾಧಿಕ ಉಪದೇಶ

ತಸ್ಯೈಷ ಆದೇಶೋ ಯದೇತದ್ವಿದ್ಯುತೋ ವ್ಯದ್ಯುತದಾ ಇತೀನ್ನ್ಯಮಿಮಿಷದಾ ಇತ್ಯಧಿದೈವತಮ್ ॥ ೪ ॥

೪. ಅದಕ್ಕೆ ಇದು ಆದೇಶವು "ಮಿಂಚಿನ ಹೊಳಪಿನಂತೆ" ಎಂದು "ಕಣ್ಣು ಮಿಟುಕಿಸಿದಂತೆ" ಎಂದೂ ಇದೇ ಆದೇಶವು. ಇದು ಅಧಿದೈವತವು.

(ಭಾಷ್ಯ)

೭೭. ತಸ್ಯ ಪ್ರಕೃತಸ್ಯ ಬ್ರಹ್ಮಣಃ ಏಷ ಆದೇಶಃ ಉಪಮೋಪದೇಶಃ। ನಿರುಪಮಸ್ಯ ಬ್ರಹ್ಮಣೋ ಯೇನೋಪಮಾನೇನೋಪದೇಶಃ ಸೋಽಯಮಾದೇಶ ಇತ್ಯುಚ್ಯತೇ। ಕಿಂ ತತ್। ಯದೇತತ್ ಪ್ರಸಿದ್ಧಂ ಲೋಕೇ ವಿದ್ಯುತಃ ವ್ಯದ್ಯುತತ್ ವಿದ್ಯೋತನಂ ಕೃತವದಿತ್ಯೇತದನುಪಪನ್ನಮ್ ಇತಿ ವಿದ್ಯುತೋ ವಿದ್ಯೋತನಮ್ ಇತಿ ಕಲ್ಪ್ಯತೇ। ಆ ಇತ್ಯುಪಮಾರ್ಥೇ। ವಿದ್ಯುತೋ ವಿದ್ಯೋತನಮಿವ ಇತ್ಯರ್ಥಃ। "ಯಥಾ ಸಕೃದ್ವಿದ್ಯುತ್ತಮ್" (ಬೃ. ೨-೩-೬) ಇತಿ ಶ್ರುತ್ಯನ್ತರೇ ಚ ದರ್ಶನಾತ್। ವಿದ್ಯುದಿವ ಹಿ ಸಕೃದಾತ್ಮಾನಂ ದರ್ಶಯಿತ್ವಾ ತಿರೋಭೂತಂ ಬ್ರಹ್ಮ ದೇವೇಭ್ಯಃ। ಅಥವಾ ವಿದ್ಯುತಃ। ತೇಜಃ ಇತ್ಯಧ್ಯಾಹಾರ್ಯಮ್। ವ್ಯದ್ಯುತತ್ ವಿದ್ಯೋತಿತವತ್ ಆಸೀತ್ ಇವ। ವಿದ್ಯುತಸ್ತೇಜಃ ಸಕೃದ್ವಿದ್ಯೋತಿತವದಿವ ಇತ್ಯಭಿವ್ಯಾಯಃ। ಇತಿ ಶಬ್ದಃ ಆದೇಶಪ್ರತಿನಿರ್ದೇಶಾರ್ಥಃ 'ಇತ್ಯಯಮಾದೇಶಃ' ಇತಿ। 'ಇಚ್ಛಬ್ದಃ' ಸಮುಚ್ಚಯಾರ್ಥಃ। ಅಯಂ ಚಾಪರಸ್ತಸ್ಯಾದೇಶಃ। ಕೋಽಸೌ। ನ್ಯಮಿಮಿಷತ್ ಯಥಾ ಚಕ್ಷುಃ। ನ್ಯಮಿಮಿಷತ್ ನಿಮೇಷಂ ಕೃತವತ್। ಸ್ವಾರ್ಥೇ ಣಿಚ್। ಉಪಮಾರ್ಥ ಏವಾಕಾರಃ। ಚಕ್ಷುಷೋ ವಿಷಯಂ ಪ್ರತಿ ಪ್ರಕಾಶತಿರೋಭಾವ ಇವ ಚೇತ್ಯರ್ಥಃ। ಇತ್ಯಧಿದೈವತಂ ದೇವತಾವಿಷಯಂ ಬ್ರಹ್ಮಣ ಉಪಮಾನದರ್ಶನಮ್ ॥

(ಭಾಷ್ಯಾರ್ಥ)

ಆ ಪ್ರಕೃತವಾದ ಬ್ರಹ್ಮಕ್ಕೆ ಇದು ಆದೇಶವು, ಎಂದರೆ ಉಪಮೆಯ ಉಪದೇಶವು. ಯಾವ ಹೋಲಿಕೆಯೂ ಇಲ್ಲದ[1] ಬ್ರಹ್ಮಕ್ಕೆ ಯಾವ ಹೋಲಿಕೆಯನ್ನು ಕೊಟ್ಟು (ಅದನ್ನು) ಉಪದೇಶಿಸಿರುವದೋ ಅದನ್ನು ಇದು ಆದೇಶವು ಎಂದಿರುತ್ತದೆ. ಆ (ಉಪಮಾನವು) ಯಾವದು?—ಎಂದರೆ ಹೇಳಲಾಗುತ್ತದೆ: ಲೋಕದಲ್ಲಿ ಹೀಗೆಂದು ಪ್ರಸಿದ್ಧವಾಗಿರುತ್ತದೆಯಲ್ಲವೆ? (ಯಾವದೆಂದರೆ) 'ಮಿಂಚಿನ ಹೊಳಪಿನಂತೆ' ಮೂಲದಲ್ಲಿ ವ್ಯದ್ಯುತತ್ ಎಂಬ ಮಾತಿಗೆ ಹೊಳೆಯಿತು (ಎಂದೇ ಅರ್ಥವಾದರೂ) ಅದು ಹೊಂದುವದಿಲ್ಲವಾದ್ದರಿಂದ[2] "(ವಿದ್ಯುತೋ) ವಿದ್ಯೋತನಮ್" (ಮಿಂಚಿನ ಹೊಳಪು) ಎಂದೇ (ಅರ್ಥವನ್ನು) ಕಲ್ಪಿಸಿರುತ್ತೇವೆ. ಆ ('ಅಂತೆ') ಎಂಬ ಮಾತು ಹೋಲಿಕೆಯನ್ನು ತಿಳಿಸುವದಕ್ಕೆ (ಬಂದಿರುತ್ತದೆ). ಮಿಂಚಿನ ಹೊಳಪಿನಂತೆ ಎಂದು (ಒಟ್ಟು) ಅರ್ಥವಾಯಿತು. "ತಟ್ಟನೆ ಹೊಳೆದ ಮಿಂಚಿನಂತೆ" (ಬೃ. ೨-೩-೭) ಎಂದು ಬೇರೊಂದು ಶ್ರುತಿಯಲ್ಲಿ (ಹೇಳಿರುವದು) ಕಂಡುಬರುತ್ತದೆಯಾದ್ದರಿಂದ (ಇದೇ ಅರ್ಥವು ಸರಿಯಾದದ್ದು). ಬ್ರಹ್ಮವು ದೇವತೆಗಳಿಗೆ ಮಿಂಚಿನಂತೆ ಧಳಾರನೆ ಕಾಣಿಸಿಕೊಂಡು ಕಾಣದಂತಾಯಿತಲ್ಲವೆ? (ಈ ಉಪಮಾನವು ಅದನ್ನು ತಿಳಿಸುವದು). ಅಥವಾ ವಿದ್ಯುತಃ (ಮಿಂಚಿನ) ಎಂಬ (ಮಾತಿನಮುಂದೆ) 'ತೇಜಃ' (ಹೊಳಪು) ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು. ವ್ಯದ್ಯುತತ್ ಎಂದರೆ ಮಿಂಚಿತು, ಆ ಎಂದರೆ ಅಂತೆ; ಮಿಂಚಿನ ಹೊಳಪು ತಟ್ಟನೆ ಹೊಳೆದಂತೆ ಎಂದಭಿಪ್ರಾಯ. ಇತಿ ಎಂಬ ಶಬ್ದವು "ಹೀಗೆಂಬ ಇದೇ ಆದೇಶವು" ಎಂದು ಉಪಮಾನವನ್ನು ತೋರಿಸುವದಕ್ಕೆ ಬಂದಿರುತ್ತದೆ.

ಇತ್ (ಮತ್ತು) ಎಂಬ ಶಬ್ದವು ಸಮುಚ್ಚಯವೆಂಬ ಅರ್ಥದಲ್ಲಿ ಬಂದಿರುತ್ತದೆ. ಇದು ಅದಕ್ಕೆ ಮತ್ತೂ ಒಂದು ಆದೇಶವು. ಅದು ಯಾವದು?—ಎಂದರೆ 'ಕಣ್ಣಿ

1. ಬ್ರಹ್ಮವು ನಿರ್ಧರ್ಮಕವಾದ್ದರಿಂದ ಅದಕ್ಕೆ ಯಾವ ಉಪಮಾನವೂ ಇಲ್ಲವಾದರೂ ಅದರ ಸೋಪಾಧಿಕರೂಪವನ್ನು ತಿಳಿಸುವದಕ್ಕೆ ಮಿಂಚು, ಕಣ್ಣುಮಿಟುಕಿಸುವಿಕೆ—ಮುಂತಾದ ಉಪಮಾನಗಳನ್ನು ಕೊಟ್ಟಿರುತ್ತದೆ ಎಂದು ಭಾವ.

2. ವಿದ್ಯುತಃ ಎಂಬುದನ್ನು ಪಂಚಮ್ಯಾವಿಭಕ್ತ್ಯಂದು ಇಟ್ಟುಕೊಂಡರೆ ಮಿಂಚಿನ ದೆಸೆಯಿಂದ ಹೊಳೆಯಿತು ಎಂದರ್ಥವಾಗುತ್ತದೆ; ಸ್ವಯಂಪ್ರಕಾಶವಾದ ಬ್ರಹ್ಮಕ್ಕೆ ಇದು ಹೊಂದುವದಿಲ್ಲ. ವಿದ್ಯುತಃ ಎಂಬುದನ್ನು ಷಷ್ಠ್ಯಂದಿಟ್ಟುಕೊಂಡರೆ ಮಿಂಚಿನ ಸಂಬಂಧವಾದ ಬೆಳಕನ್ನು ಕೊಟ್ಟಿತು ಎಂದರ್ಥವಾಗುತ್ತದೆ. ಆದೂ ಪ್ರಕೃತಕ್ಕೆ ಬೇಕಾದ ಉಪಮಾನವಾಗುವದಿಲ್ಲ. ಆದ್ದರಿಂದ ವ್ಯದ್ಯುತತ್ ಎಂಬ ಕ್ರಿಯಾಪದಕ್ಕೆ ವಿದ್ಯೋತನಮ್ (ಹೊಳಪು) ಎಂಬರ್ಥವನ್ನು ಕಲ್ಪಿಸಿರುತ್ತದೆ ಎಂದರ್ಥ.

ನಂತೆ ಮಿಟುಕಿಸಿತು'. (ಇಲ್ಲಿ) ನ್ಯಮಿಮಿಷತ್ ಎಂಬಲ್ಲಿ ಕಾಣುವ ಣಿಚ್ ಪ್ರತ್ಯಯವು ಮೂಲಕ್ರಿಯಾಪದದ ಅರ್ಥವನ್ನೇ ತೋರಿಸುತ್ತದೆ (ಪ್ರೇರಣಾರ್ಥದಲ್ಲಿ ಬಂದಿರುವದಿಲ್ಲ). ಆಕಾರವು (ಇಲ್ಲಿಯೂ) ಹೋಲಿಕೆಯನ್ನೇ ತಿಳಿಸುತ್ತದೆ. ಕಣ್ಣು ವಿಷಯವನ್ನು ಬೆಳಗಿ ಮುಚ್ಚಿಕೊಂಡಂತೆಯೂ (ಬ್ರಹ್ಮವು ಥಟ್ಟನೆ ತೋರಿ ಮರೆಯಾಯಿತು) ಎಂದರ್ಥ.

ಇದು ಅಧಿದೈವತವು,[1] ಎಂದರೆ ದೇವತಾವಿಷಯವಾಗಿ ಬ್ರಹ್ಮಕ್ಕೆ ಕೊಟ್ಟ ಉಪಮಾನವು.

ಅಥಾಧ್ಯಾತ್ಮಂ ಯದೇತದ್ಗಚ್ಛತೀವ ಚ ಮನೋಽನೇನ
ಚೈತದುಪಸ್ಮರತ್ಯಭೀಕ್ಷ್ಣಂ ಸಙ್ಕಲ್ಪಃ ॥ ೫ ॥

೫. ಇನ್ನು ಅಧ್ಯಾತ್ಮವು: ಮನಸ್ಸು ಇದರ ಬಳಿಗೆ ಹೋಗುವಂತಿರುವದಲ್ಲವೆ, ಇದರಿಂದ ಇದನ್ನು ಚೆನ್ನಾಗಿ ಉಪಸ್ಮರಣೆಮಾಡುತ್ತಾ ನಲ್ಲವೆ, ಸಂಕಲ್ಪವೂ (ಅದರ ವಿಷಯದಲ್ಲಿ ಉಂಟಾಗುತ್ತದೆಯಲ್ಲವೆ? ಇದೇ ಅಧ್ಯಾತ್ಮವು).

(ಭಾಷ್ಯ)

೭೮. ಅಥ ಅನನ್ತರಮ್ ಅಧ್ಯಾತ್ಮಂ ಪ್ರತ್ಯಗಾತ್ಮವಿಷಯ ಆದೇಶ ಉಚ್ಯತೇ। ಯದೇತದ್ ಗಚ್ಛತೀವ ಚ ಮನಃ । ಏತದ್ ಬ್ರಹ್ಮ ಢೌಕತ ಇವ ವಿಷಯೀಕರೋತೀವ । ಯಚ್ಚ ಅನೇನ ಮನಸಾ ಏತದ್ ಬ್ರಹ್ಮ ಉಪಸ್ಮರತಿ ಸಮೀಪತಃ ಸ್ಮರತಿ ಸಾಧಕಃ ಅಭೀಕ್ಷ್ಣಂ ಭೃಶಮ್ । ಸಙ್ಕಲ್ಪಶ್ಚ ಮನಸೋ ಬ್ರಹ್ಮವಿಷಯಃ । ಮನ ಉಪಾಧಿಕತ್ವಾದ್ಧಿ ಮನಸಃ ಸಙ್ಕಲ್ಪಸ್ಯೈತ್ಯಾದಿ ಪ್ರತ್ಯಯೈರಭಿವ್ಯಜ್ಯತೇ ಬ್ರಹ್ಮ ವಿಷಯೀಕ್ರಿಯಮಾಣಮಿವ । ಅತಃ ಸ ಏಷ ಬ್ರಹ್ಮಣೋಽಧ್ಯಾತ್ಮಮಾದೇಶಃ । ವಿದ್ಯುನ್ಮೇಷಣವದಧಿದೈವತಂ ದ್ರುತಪ್ರಕಾಶನಧರ್ಮಿ ಅಧ್ಯಾತ್ಮಂ ಚ ಮನಃ ಪ್ರತ್ಯಯ ಸಮಕಾಲಾಭಿವ್ಯಕ್ತಿಧರ್ಮಿ ಇತ್ಯೇಷ ಆದೇಶಃ । ಏವಮ್ ಆದಿಶ್ಯಮಾನಂ ಹಿ ಬ್ರಹ್ಮ ಮನ್ದಬುದ್ಧಿಗಮ್ಯಂ ಭವತಿ ಇತಿ ಬ್ರಹ್ಮಣ ಆದೇಶೋಪದೇಶಃ । ನ ಹಿ ನಿರುಪಾಧಿಕಮೇವ ಮನ್ದಬುದ್ಧಿರಾಕಲಯಿತುಂ ಶಕ್ಯಮ್ ॥

---

1. ಕಣ್ಣು ಬಿಟ್ಟು ಮುಚ್ಚಿಕೊಳ್ಳುವದೆಂಬುದು ಅಧ್ಯಾತ್ಮವೇ ಆದರೂ ವಿಷಯವು ಕಣ್ಣಿಗೆ ಹೊಳೆಯುವದಕ್ಕೆ ಅಧಿದೈವಿಕವಾದ ಬೆಳಕು ಬೇಕು. ಆದ್ದರಿಂದ ಈ ಉಪಮಾನವನ್ನು ಅಧಿದೈವಿಕವೆಂದಿದೆ ಎಂದು ತೋರುತ್ತದೆ.

(ಭಾಷ್ಯಾರ್ಥ)

ಇನ್ನು (ಅಧಿದೈವತವನ್ನು ಹೇಳಿದ) ಬಳಿಕ ಅಧ್ಯಾತ್ಮವು, ಎಂದರೆ ಒಳಗಿನ ಆತ್ಮನ ವಿಷಯವಾದ ಆದೇಶವನ್ನು ಹೇಳಲಾಗುತ್ತದೆ. ಮನಸ್ಸು ಇದರ ಬಳಿಗೆ ಹೋಗುವಂತಿರುವದಲ್ಲವೆ, ಎಂದರೆ ಈ ಬ್ರಹ್ಮವನ್ನು ಮುಟ್ಟುವಂತೆ, ಅದನ್ನು ವಿಷಯೀಕರಿಸುವಂತೆ, ಇರುವದಲ್ಲವೆ? ಮತ್ತು ಈ ಮನಸ್ಸಿನಿಂದ ಈ ಬ್ರಹ್ಮವನ್ನು ಸಾಧಕನಾದವನು ಚೆನ್ನಾಗಿ ಬಲವಾಗಿ ಉಪಸ್ಮರಣೆ ಮಾಡುವನಲ್ಲವೆ, ಹತ್ತಿರವೇ ಇರುವಂತೆ ನೆನಸಿಕೊಳ್ಳುವನಲ್ಲವೆ? ಮತ್ತು ಬ್ರಹ್ಮವಿಷಯವಾಗಿ ಮನಸ್ಸಿನ ಸಂಕಲ್ಪವೂ ಆಗುವದಲ್ಲವೆ?–ಮನಸ್ಸು ಆತ್ಮನಿಗೆ ಉಪಾಧಿಯಾಗಿರುವದರಿಂದ ಮನಸ್ಸಿನ ಸಂಕಲ್ಪ, ಸ್ಮೃತಿ—ಮುಂತಾದ ಪ್ರತ್ಯಯಗಳಿಂದ ವಿಷಯೀಕರಿಸಲ್ಪಟ್ಟಂತೆ[1] ಅಭಿವ್ಯಕ್ತವಾಗಿ ತೋರುವದಲ್ಲವೆ? ಆದ್ದರಿಂದ—ಆ ಇದೇ ಬ್ರಹ್ಮಕ್ಕೆ ಅಧ್ಯಾತ್ಮವಾದ ಆದೇಶವು.

ಮಿಂಚು, ಕಣ್ಣಿನ ಮಿಟುಕಿಸುವಿಕೆ–ಇವುಗಳಂತೆ (ಬ್ರಹ್ಮವು) ಅಧಿದೈವತವಾಗಿ ಚಟ್ಟನೆ ಪ್ರಕಾಶವಾಗುವಂಥದ್ದು, ಅಧ್ಯಾತ್ಮವಾಗಿ ಮನಸ್ಸಿನ ಪ್ರತ್ಯಯಗಳು ಉಂಟಾಗುವ ಕಾಲದಲ್ಲಿಯೇ ತೋರಿಕೊಳ್ಳುವ ಸ್ವಭಾವವುಳ್ಳದ್ದು–ಎಂಬುದೇ[2] ಆದೇಶವು. ಹೀಗೆ ಉಪದೇಶಮಾಡಿದರೇ ಬ್ರಹ್ಮವು ಮಂದಬುದ್ಧಿಯವರಿಗೆ ತಿಳಿಯುತ್ತದೆ, ಆದ್ದರಿಂದ ಬ್ರಹ್ಮಕ್ಕೆ (ಈ) ಉಪಮಾನವನ್ನು ಉಪದೇಶಮಾಡಿರುತ್ತದೆ. ಏಕೆಂದರೆ ಯಾವ ಉಪಾಧಿಯೂ ಇಲ್ಲದ ಬ್ರಹ್ಮವನ್ನು ಗ್ರಹಿಸುವದು ಅಲ್ಪಬುದ್ಧಿಯುಳ್ಳ ಜನರಿಗೆ ಆಗಲೇ ಆರದು.

ಬ್ರಹ್ಮವನ್ನು 'ತದ್ವನ' ವೆಂದು ಉಪಾಸನೆಮಾಡಬೇಕು

ತದ್ಧ ತದ್ವನಂ ನಾಮ ಶದ್ವನಮಿತ್ಯುಪಾಸಿತವ್ಯಂ
ಸ ಯ ಏತದೇವಂ ವೇದಾಭಿಹೈನಗ್ಂ ಸರ್ವಾಣಿ
ಭೂತಾನಿ ಸಂವಾಞ್ಛಂತ್ಯಿ ॥ ೬ ॥

---

1. ವೃತ್ತಿಯುಂಟಾಗುವಾಗ ಆಗುವ ಅರಿವೇ ಬ್ರಹ್ಮವು ಎಂದರೆ ವೃತ್ತಿಗೆ ವಿಷಯವೆಂದು ತಿಳಿಯಬಾರದು; ಆದ್ದರಿಂದಲೇ ಮನಸ್ಸಿಗೂ ಮನಸ್ಸು ಎಂದು ೧-೩ರಲ್ಲಿ ಹೇಳಿದ್ದು.

2. ಬ್ರಹ್ಮವು ಕ್ಷಿಪ್ರಕಾರಿ, ನಿರತಿಶಯಪ್ರಕಾಶವುಳ್ಳದ್ದು, ಪರಮೈಶ್ವರ್ಯವುಳ್ಳದ್ದು–ಎಂದು ಉಪಮಾನಗಳ ಅರ್ಥವನ್ನು ಟೀಕಾಕಾರರು ತೆಗೆದಿರುತ್ತಾರೆ. ಉಪಾಧಿಗಳಿಂದ ಬ್ರಹ್ಮವು ತೋರಿದರೂ ಬ್ರಹ್ಮವು ಉಪಾಧಿಗಳ ಹಂಗಿಲ್ಲದೆ ಸ್ವತಂತ್ರವಾಗಿರುವದು ಎಂಬುದು ಭಾಷ್ಯಕಾರರ ಹೃದಯವೆಂದು ತೋರುತ್ತದೆ. "ಪ್ರತಿಬೋಧವಿದಿತಮ್" (೨-೪) ಎಂಬುದರ ಭಾಷ್ಯವನ್ನು ಇಲ್ಲಿ ಹೋಲಿಸಿ ನೋಡಿರಿ.

೬. ಅದು ತದ್ವನವೆನಿಸಿರುವದಂತೆ. ತದ್ವನವೆಂತ ಉಪಾಸನೆ ಮಾಡಬೇಕು. ಯಾವಾತನು ಇದನ್ನು ಹೀಗೆಂದು ತಿಳಿಯುವನೋ ಅವನನ್ನು ಎಲ್ಲಾ ಭೂತಗಳೂ ಬಯಸುತ್ತಲಿರುವವು.

(ಭಾಷ್ಯ)

೭. ಕಿಂ ಚ ತದ್ ಬ್ರಹ್ಮ ಹ ಕಿಲ ತದ್ವನಂ ನಾಮ ತಸ್ಯ ವನಂ ತದ್ವನಮ್ । ತಸ್ಯ ಪ್ರಾಣಿಜಾತಸ್ಯ ಪ್ರತ್ಯಗಾತ್ಮಭೂತತ್ವಾತ್ ವನಂ ವನನೀಯಂ ಸಮ್ಭಜನೀಯಮ್ । ಅತಃ ತದ್ವನಂ ನಾಮ ಪ್ರಖ್ಯಾತಂ ಬ್ರಹ್ಮ ತದ್ವನಮಿತಿ ಯತಃ ತಸ್ಮಾತ್ 'ತದ್ವನಮ್' ಇತ್ಯನೇನೈವ ಗುಣಾಭಿಧಾನೇನ ಉಪಾಸಿತವ್ಯಂ ಚಿನ್ತನೀಯಮ್ । ಅನೇನ ನಾಮ್ನಾ ಉಪಾಸನಸ್ಯ ಫಲಮಾಹ–ಸ ಯಃ ಕಶ್ಚಿತ್ ಏತತ್ ಯಥೋಕ್ತಂ ಬ್ರಹ್ಮ ಏವಂ ಯಥೋಕ್ತಗುಣಂ ವೇದ ಉಪಾಸ್ತೇ ಅಭಿ ಹ ಏನಮ್ ಉಪಾಸಕಂ ಸರ್ವಾಣಿ ಭೂತಾನಿ ಅಭಿಸಂವಾಞ್ಛನ್ತಿ ಹ ಪ್ರಾರ್ಥಯನ್ತೇ ಏವ ಯಥಾ ಬ್ರಹ್ಮ ॥

(ಭಾಷ್ಯಾರ್ಥ)

ಮತ್ತು ಆ ಬ್ರಹ್ಮವು ತದ್ವನವೆನಿಸಿರುವದಂತೆ. ತದ್ವನವೆಂದರೆ ಅದರ ವನವು, ಆ ಪ್ರಾಣಿಜಾತಕ್ಕೆ[1] ಒಳಗಿನ ಆತ್ಮನಾಗಿರುವದರಿಂದ ವನವು, ವನನ ಮಾಡತಕ್ಕದ್ದು, ಪ್ರೀತಿಮಾಡತಕ್ಕದ್ದು ಆದ್ದರಿಂದ ತದ್ವನವೆನಿಸಿರುವದು, ತದ್ವನವೆಂದು ಬ್ರಹ್ಮವು ಪ್ರಖ್ಯಾತವಾಗಿರುತ್ತದೆ[2] ಯಾದ್ದರಿಂದ ತದ್ವನವು ಎಂದು ಈ ಗುಣವನ್ನು ಹೇಳುವ ಹೆಸರಿನಿಂದಲೇ ಉಪಾಸನೆ ಮಾಡಬೇಕು, ಚಿಂತಿಸಬೇಕು. ಈ ಹೆಸರಿನಿಂದ ಉಪಾಸನೆಮಾಡುವವನಿಗೆ ಫಲವೇನೆಂಬುನ್ನು (ಈಗ ಮಂತ್ರವು) ಹೇಳುತ್ತದೆ. ಯಾವನೇ ಆಗಲಿ ಈ ಮೇಲೆ ಹೇಳಿದ ಬ್ರಹ್ಮವನ್ನು ಹೀಗೆಂದು ಮೇಲೆ ಹೇಳಿದ ಗುಣವುಳ್ಳದ್ದೆಂದು ತಿಳಿಯುವನೋ ಉಪಾಸನೆಮಾಡುವನೋ[3] ಅವನನ್ನು (ಆ) ಉಪಾಸಕನನ್ನು ಸುತ್ತಲಿರುವ ಸರ್ವಭೂತಗಳೂ–ಬ್ರಹ್ಮವನ್ನು ಹೇಗೋ ಹಾಗೆ–ಅವಶ್ಯವಾಗಿ ಬಯಸುವವು, ಬೇಕೆನ್ನುವವು.

ಉಪನಿಷತ್ತಿನ ಉಪಸಂಹಾರ

(ಭಾಷ್ಯ)

೮೦. ಏವಮನುಶಿಷ್ಟಃ ಶಿಷ್ಯ ಆಚಾರ್ಯಮುವಾಚ—

---

1. ಯಾವ ಪ್ರಾಣಿಯಾದರೂ ತನ್ನ ಆತ್ಮನಲ್ಲಿ ಪ್ರೀತಿಯುಳ್ಳದ್ದಾಗಿರುವದು; ಬ್ರಹ್ಮವು ಎಲ್ಲರಿಗೂ ಆತ್ಮನು.

2. ನಮ್ಮ ಆತ್ಮನಲ್ಲಿ ನಮಗೆ ಪ್ರೀತಿಯಿರುವದೆಂಬುದು ಪ್ರಸಿದ್ಧವಾಗಿರುತ್ತದೆ.

3. ಉಪಾಸನೆಯಿಲ್ಲದೆ ಮುಖ್ಯವಾಗಿ ಇಲ್ಲಿ ಮೇಲೆ ಜ್ಞಾನವಾದರೂ ಈ ಫಲವೇ ದೊರಕುವದೆಂಬುದು ಸ್ಪಷ್ಟ.

(ಭಾಷ್ಯಾರ್ಥ)

ಹೀಗೆ (ಆಚಾರ್ಯರು) ಅಪ್ಪಣೆಮಾಡಲು ಶಿಷ್ಯನು ಆಚಾರ್ಯರನ್ನು ಕುರಿತು ಇಂತೆಂದನು :—

ಉಪನಿಷದಂ ಭೋ ಬ್ರೂಹೀತ್ಯುಕ್ತಾ ತ
ಉಪನಿಷದ್ಬ್ರಾಹ್ಮೀಂ ವಾವ ತ ಉಪನಿಷದಮಬ್ರೂಮೇತಿ ॥ ೭ ॥

೭. "ಪೂಜ್ಯರೆ, ಉಪನಿಷತ್ತನ್ನು ಹೇಳಬೇಕು." "ನಿನಗೆ ಉಪನಿಷತ್ತನ್ನು ಹೇಳಿದ್ದಾಗಿದೆ. ಬ್ರಹ್ಮದ ಉಪನಿಷತ್ತನ್ನೇ ನಿನಗೆ ಹೇಳಿರುತ್ತೇವೆ."

(ಭಾಷ್ಯ)

೮೧. ಉಪನಿಷದಂ ರಹಸ್ಯಂ ಯಚ್ಚಿನ್ಮ್ಯಂ ಭೋ ಭಗವರ್ ಬ್ರೂಹಿ ಇತಿ । ಏವಮುಕ್ತವತಿ ಶಿಷ್ಯೇ ಆಹ ಆಚಾರ್ಯಃ–ಉಕ್ತಾ ಅಭಿಹಿತಾ ತೇ ತವ ಉಪನಿಷತ್ । "ಕಾ ಪುನಃ ಸಾ ?" ಇತಿ । ಆಹ—ಬ್ರಾಹ್ಮೀಂ ಬ್ರಹ್ಮಣಃ ಪರಮಾತ್ಮನ ಇಯಂ ಬ್ರಾಹ್ಮೀ । ತಾಮ್ । ಪರಮಾತ್ಮವಿಷಯತ್ವಾದತೀತವಿಜ್ಞಾನಸ್ಯ । ವಾವ ಏವ ತೇ ಉಪನಿಷದಮ್ ಅಬ್ರೂಮೇತಿ । ಉಕ್ತಾಮೇವ ಪರಮಾತ್ಮವಿಷಯಾಮ್ "ಉಪನಿಷದಮಬ್ರೂಮ" ಇತ್ಯವಧಾರಯತಿ ಉತ್ತರಾರ್ಧಮ್ ॥

(ಭಾಷ್ಯಾರ್ಥ)

ಎಲೈ ಪೂಜ್ಯರೆ, ಉವನಿಷತ್ತನ್ನು ಎಂದರೆ ಚಿಂತನೆಮಾಡಬೇಕಾದ ರಹಸ್ಯವನ್ನು ಹೇಳೋಣವಾಗಲಿ. ಹೀಗೆಂದು ಶಿಷ್ಯನು ಕೇಳಲು ಆಚಾರ್ಯನು ಹೇಳುತ್ತಾನೆ. ನಿನಗೆ ಉಪನಿಷತ್ತು ಉಕ್ತವಾಗಿದೆ, ಹೇಳಿದ್ದಾಗಿದೆ. ಹಾಗಾದರೆ ಅದು ಯಾವದು ? ಎಂದರೆ ಹೇಳುತ್ತಾನೆ. ಬ್ರಹ್ಮದ ಎಂದರೆ ಪರಮಾತ್ಮನ (ಉಪನಿಷತ್ತಾದ್ದರಿಂದ) ಇದಕ್ಕೆ ಬ್ರಾಹ್ಮಿ (ಎಂದು ಹೆಸರು), ಏಕೆಂದರೆ ಹಿಂದಿನ ವಿಜ್ಞಾನವು ಪರಮಾತ್ಮನ ವಿಷಯವಾಗಿರುತ್ತದೆ. ಪರಮಾತ್ಮವಿಷಯವಾದ ಉಪನಿಷತ್ತನ್ನು[1] (ಮೊದಲೇ) ಹೇಳಿರುವದನ್ನು ಬ್ರಹ್ಮದ್ದೇ ಆದ) ಉಪನಿಷತ್ತನ್ನು ನಿಮಗೆ ಹೇಳಿರುತ್ತೇವೆ–ಎಂದು ಅವಧಾರಣೆಮಾಡಿ ಹೇಳಿರುವದು ಮುಂದೆ (ಸಾಧನಗಳನ್ನು)[2] ಹೇಳುವದಕ್ಕೆ.

1. ಇಲ್ಲಿ ಉಪನಿಷತ್ತೆಂಬುದು ಸಗುಣೋಪಾಸನೆಯೇ ಅಲ್ಲದೆ ನಿರುಪಾಧಿಕವಾದ ಬ್ರಹ್ಮವಿದ್ಯೆಯನ್ನು ತಿಳಿಸುವ ಶಬ್ದವೆಂಬುದು ಮುಂದಿನ ಚರ್ಚೆಯಿಂದ ವ್ಯಕ್ತವಾಗುತ್ತದೆ.

2. ಬ್ರಹ್ಮಜ್ಞಾನಕ್ಕೆ ಅವಶ್ಯವಾಗಿರುವ ತಪಸ್ಸೇ ಮುಂತಾದ ಸಾಧನಗಳನ್ನು ತಿಳಿಸುವದಕ್ಕೆ.

ಮುಂದಿನ ಮಂತ್ರದಲ್ಲಿ ಹೇಳಿರುವ ಸಾಧನಗಳಿಗೂ ಆತ್ಮಜ್ಞಾನಕ್ಕೂ ಸಂಬಂಧ

(ಭಾಷ್ಯ)

೮೨. ಪರಮಾತ್ಮವಿಷಯಾಮ್ ಉಪನಿಷದಂ ಶ್ರುತವತಃ "ಉಪನಿಷದಂ ಭೋ ಬ್ರೂಹಿ" ಇತಿ ಪೃಚ್ಛತಃ ಶಿಷ್ಯಸ್ಯ ಕೋಽಭಿಪ್ರಾಯಃ? ಯದಿ ತಾವತ್ ಶ್ರುತಸ್ಯಾರ್ಥಸ್ಯ ಪ್ರಶ್ನಃ ಕೃತಃ ತತಃ ಪಿಷ್ಟಪೇಷಣವತ್ ಪುನರುಕ್ತೋ೨ನರ್ಥಕಃ ಪ್ರಶ್ನಃ ಸ್ಯಾತ್। ಅಥ ಸಾವಶೇಷಾ ಉಕ್ತೋಪನಿಷತ್ ಸ್ಯಾತ್, ತತಸ್ತಸ್ಯಾಃ ಫಲವಚನೇನೋಪಸಂಹಾರೋ ನ ಯುಕ್ತಃ "ಪ್ರೇತ್ಯಾಸ್ಮಾಲ್ಲೋಕಾದಮೃತಾಭವನ್ತಿ" (೨-೫) ಇತಿ। ತಸ್ಮಾತ್ ಉಕ್ತೋಪನಿಷಚ್ಛೇಷವಿಷಯೋಽಪಿ ಪ್ರಶ್ನೋ೨ನುಪಪನ್ನ ಏವ, ಅನವಶೇಷಿತತ್ವಾತ್। ಕಸ್ತರ್ಹಿ ಅಭಿಪ್ರಾಯಃ ಪ್ರಷ್ಟುರಿತಿ?

(ಭಾಷ್ಯಾರ್ಥ)

ಪರಮಾತ್ಮವಿಷಯವಾದ ಉಪನಿಷತ್ತನ್ನು ಕೇಳಿದ ಶಿಷ್ಯನು "ಪೂಜ್ಯರೆ, ಉಪನಿಷತ್ತನ್ನು ಹೇಳಿರಿ" ಎಂದು ಕೇಳಿದ್ದರ ಅಭಿಪ್ರಾಯವೇನು? ಮೊದಲು ಕೇಳಿದ ವಿಷಯವನ್ನೇ ಕೇಳಿರುತ್ತಾನೆಂದರೆ ಆಗ ಅರೆದ ಹಿಟ್ಟನ್ನೇ ಮತ್ತೆ ಅರೆದಂತೆ ಪ್ರಶ್ನೆಯು ಪುನರುಕ್ತಿಯಾಗಿ ವ್ಯರ್ಥವಾಗುವದು. ಹಾಗಿಲ್ಲದೆ ಹಿಂದೆ ಹೇಳಿದ ಉಪನಿಷತ್ತಿಗೆ ಇನ್ನೂ ಶೇಷವಿದೆಯೆಂದರೆ ಆಗ ಈ ಲೋಕವನ್ನು ಬಿಟ್ಟುಹೋಗಿ ಅಮೃತರಾಗುವರು" (೨-೫) ಎಂಬ ಫಲವಚನದೊಡನೆ ಅದನ್ನು ಉಪಸಂಹಾರಮಾಡಿರುವದು ಸರಿಯಾಗುವದಿಲ್ಲ. ಆದ್ದರಿಂದ ಹಿಂದೆ ಹೇಳಿದ ಉಪನಿಷತ್ತಿಗೆ ಶೇಷವಾದ ವಿಷಯವನ್ನು ಹೇಳಬೇಕೆಂದು ಕೇಳಿರುತ್ತಾನೆಂಬುದೂ ಹೊಂದುವದೇ ಇಲ್ಲ, ಏಕೆಂದರೆ ಮತ್ತೇನನ್ನೂ (ಅಲ್ಲಿ) ಉಳಿಸಿರುವದಿಲ್ಲ.

(ಪ್ರಶ್ನೆ):—ಹಾಗಾದರೆ ಪ್ರಶ್ನೆಯನ್ನು ಕೇಳಿರುವ (ಶಿಷ್ಯನ) ಅಭಿಪ್ರಾಯವೇನು?

(ಭಾಷ್ಯ)

೯. ಉಚ್ಯತೇ। ಕಿಂ ಪೂರ್ವೋಕ್ತೋಪನಿಷಚ್ಛೇಷತಯಾ ತತ್ಸಹಕಾರಿ ಸಾಧನಾನ್ತರಾಪೇಕ್ಷಾ, ಅಥ ನಿರಪೇಕ್ಷೈವ। ಸಾಽಪೇಕ್ಷಾ ಚೇತ್, ಅಪೇಕ್ಷಿತ ವಿಷಯಾಮುಪನಿಷದಂ ಬ್ರೂಹಿ। ಅಥ ನಿರಪೇಕ್ಷಾ ಚೇತ್ ಅವಧಾರಯ ಪಿಪ್ಪಲಾದವತ್ "ನಾತಃ ಪರಮಸ್ತಿ" (ಪ್ರ. ೬-೭) ಇತಿ। ಏವಮಭಿಪ್ರಾಯೇ ಏತದುಪಪನ್ನ ಮಾಚಾರ್ಯಸ್ಯಾವಧಾರಣವಚನಮ್, "ಉಕ್ತಾ ತ ಉಪನಿಷತ್" ಇತಿ॥

(ಭಾಷ್ಯಾರ್ಥ)

ಹೇಳುತ್ತೇವೆ, (ಕೇಳಿ). ಹಿಂದೆ ಹೇಳಿದ ಉಪನಿಷತ್ತಿಗೆ ಶೇಷವಾಗಿ ಅದಕ್ಕೆ ಸಹಕಾರಿಯಾದ ಬೇರೆಯ ಸಾಧನವೂ ಬೇಕಾಗಿರುವದೊ, ಅಥವಾ ಅದಕ್ಕೆ ಯಾವ

ಸಾಧನವೂ ಬೇಕೇ ಇಲ್ಲವೊ? ಬೇಕಾಗಿದ್ದರೆ ಯಾವದು ಬೇಕಾಗಿರುವದೋ ಅದರ ವಿಷಯವಾದ ಉಪನಿಷತ್ತನ್ನು ಹೇಳಿರಿ; ಬೇಕೇ ಇಲ್ಲದಿದ್ದರೆ **ಪಿಪ್ಪಲಾದನಂತೆ** "ಇದಕ್ಕಿಂತ ಬೇರೆಯಿಲ್ಲ" (ಪ್ರ. ೬-೭) ಎಂದು ಒತ್ತಿ ಹೇಳಿರಿ. ಹೀಗೆಂಬುದು ಶಿಷ್ಯನ ಅಭಿಪ್ರಾಯವಾದರೆ "ನಿನಗೆ ಉಪನಿಷತ್ತು ಉಕ್ತವಾಯಿತು" ಎಂದು ಆಚಾರ್ಯನು ಅವಧಾರಣಮಾಡಿ ಹೇಳಿದ ಈ ವಚನವು ಸರಿಯಾಗುತ್ತದೆ.

(ಭಾಷ್ಯ)

೪೪. ನನು ನಾವಧಾರಣಮಿದಮ್। ಯತೋಽನ್ಯದ್ವಕ್ತವ್ಯಮಾಹ "ತಸ್ಯೈ ತಪೋದಮಃ" (೪-೮) ಇತ್ಯಾದಿ। ಸತ್ಯಮ್, ವಕ್ತವ್ಯಮುಚ್ಯತೇ ಅಚಾರ್ಯೇಣ। ನ ತೂಕ್ತೋಪನಿಷಚ್ಛೇಷತಯಾ, ತತ್ಸಹಕಾರಿಸಾಧನಾನ್ತರಾಭಿಪ್ರಾಯೇಣ ವಾ। ಕಿಂ ತು ಬ್ರಹ್ಮವಿದ್ಯಾಪ್ರಾಪ್ತ್ಯುಪಾಯಾಭಿಪ್ರಾಯೇಣ। ವೇದೈಸ್ತದಬ್ಗೈಶ್ಚ ಸಹ ಪಾರೇನ ಸಮಾಕರಣಾತ್ ತಪಃಪ್ರಭೃತೀನಾಮ್। ನ ಹಿ ವೇದಾನಾಂ ಶಿಕ್ಷಾದ್ಯಙ್ಗಾನಾಂ ಚ ಸಾಕ್ಷಾದ್ ಬ್ರಹ್ಮವಿದ್ಯಾಶೇಷತ್ವಂ ತತ್ ಸಹಕಾರಿಸಾಧನತ್ವಂ ವಾ ಸಮ್ಭವತಿ। ಸಹಪಠಿತಾನಾಮಪಿ ಯಥಾಯೋಗಂ ವಿಭಜ್ಯ ವಿನಿಯೋಗಃ ಸ್ಯಾದಿತಿ ಚೇತ್। ಯಥಾ ಸೂಕ್ತವಾಕಾನುಮನ್ತ್ರಣಮನ್ತ್ರಾಣಾಂ ಯಥಾದೈವತಂ ವಿಭಾಗಃ। ತಥಾ ತಪೋದಮಕರ್ಮಸತ್ಯಾದೀನಾಮಪಿ ಬ್ರಹ್ಮವಿದ್ಯಾಶೇಷತ್ವಂ ತತ್ಸಹಕಾರಿ ಸಾಧನತ್ವಂ ವೇತಿ ಕಲ್ಪ್ಯತೇ। ವೇದಾನಾಂ ತದಬ್ಗಾನಾಂ ಚಾರ್ಥಪ್ರಕಾಶಕತ್ವೇನ ಕರ್ಮಾತ್ಮಜ್ಞಾನೋಪಾಯತ್ವಮಿತಿ। ಏವಂ ಹ್ಯಯಂ ವಿಭಾಗೋ ಯುಜ್ಯತೇ ಅರ್ಥ ಸಮ್ಬನ್ಧೋಪಪತ್ತಿಸಾಮರ್ಥ್ಯಾದಿತಿ ಚೇತ್। ನ। ಅಯುಕ್ತೇಃ। ನ ಹ್ಯಯಂ ವಿಭಾಗೋ ಘಟನಾಂ ಪ್ರಾಞ್ಚತಿ। ನ ಹಿ ಸರ್ವಕ್ರಿಯಾಕಾರಕಫಲಭೇದಬುದ್ಧಿತಿರಸ್ಕಾರಿಣ್ಯಾ ಬ್ರಹ್ಮವಿದ್ಯಾಯಾಃ ಶೇಷಾಪೇಕ್ಷಾ ಸಹಕಾರಿಸಾಧನಸಮ್ಬನ್ಧೋ ವಾ ಯುಜ್ಯತೇ। ಸರ್ವವಿಷಯವ್ಯಾವೃತ್ತಪ್ರತ್ಯಗಾತ್ಮವಿಷಯನಿಷ್ಠತ್ವಾಚ್ಚ ಬ್ರಹ್ಮವಿದ್ಯಾಯಾಃ, ತತ್ಫಲಸ್ಯ ಚ ನಿಶ್ರೇಯಸಸ್ಯ। "ಮೋಕ್ಷಮಿಚ್ಛನ್ ಸದಾ ಕರ್ಮ ತ್ಯಜೇದೇವ ಸಸಾಧನಮ್। ತ್ಯಜತೈವ ಹಿ ತಜ್ಜ್ಞೇಯಂ ತ್ಯಕ್ತುಃ ಪ್ರತ್ಯಕ್ಪರಂ ಪದಮ್॥" (?) ತಸ್ಮಾತ್ ಕರ್ಮಣಾಂ ಸಹಕಾರಿತ್ವಂ ಕರ್ಮಶೇಷಾಪೇಕ್ಷಾ ವಾ ನ ಜ್ಞಾನಸ್ಯೋಪಪದ್ಯತೇ। ತತೋಽಸದೇವ ಸೂಕ್ತವಾಕಾನುಮನ್ತ್ರಣವದ್ ಯಥಾಯೋಗಂ ವಿಭಾಗ ಇತಿ॥

(ಭಾಷ್ಯಾರ್ಥ)

(ಆಕ್ಷೇಪ):–ಇದು ಅವಧಾರಣೆಯಲ್ಲ; ಏಕೆಂದರೆ "ಇದಕ್ಕೆ ತಪಸ್ಸು, ದಮ" (೪-೮) ಎಂದು ಮುಂತಾಗಿ ಬೇರೆ ಹೇಳತಕ್ಕದ್ದನ್ನೂ (ಗುರು) ಹೇಳಿರುತ್ತಾನೆ[1].

1. ಆದ್ದರಿಂದ ಈ ನಿಮ್ಮ ಸಮಾಧಾನವು ಸರಿಯಲ್ಲ–ಎಂದು ಭಾವ.

(ಪರಿಹಾರ) :—ನಿಜ, ಗುರುವು ಮತ್ತೂ ಹೇಳತಕ್ಕದ್ದನ್ನು ಹೇಳಿರುತ್ತಾನೆ, ಆದರೆ ಅದು ಹಿಂದೆ ಹೇಳಿ ದಉಪನಿಷತ್ತಿಗೆ **ಶೇಷ**[1] ನೆಂಬ ಅಥವಾ **ಸಹಕಾರಿ**ಯಾದ ಮತ್ತೊಂದು ಸಾಧನನೆಂಬ ಅಭಿಪ್ರಾಯದಿಂದ (ಅದನ್ನು) ಹೇಳಿರುವದಿಲ್ಲ; ಮತ್ತೇ ನೆಂದರೆ ಬ್ರಹ್ಮವಿದ್ಯೆಯನ್ನು ಪಡೆದುಕೊಳ್ಳುವದಕ್ಕೆ (ಅದು) ಉಪಾಯವೆಂಬ ಅಭಿಪ್ರಾಯದಿಂದ (ಹೇಳಿರುತ್ತಾನೆ). ವೇದಗಳು, ಅದರ ಅಂಗಗಳು–ಇವುಗಳೊಡನೆ ಸಮವಾಗಿ ತಪಸ್ಸೇ ಮುಂತಾದವುಗಳನ್ನು (ಸೇರಿಸಿ ಹೇಳಿರು)ವದರಿಂದ (ಇದೇ ಅವನ ಅಭಿಪ್ರಾಯವೆಂದು ನಿಶ್ಚಯವಾಗುತ್ತದೆ). ವೇದಗಳೂ ಶಿಕ್ಷೆಯೇ ಮುಂತಾದ ಅಂಗಗಳೂ ನೇರಾಗಿ[2] ಬ್ರಹ್ಮವಿದ್ಯೆಗೆ ಶೇಷವೆಂದಾಗಲಿ ಅದಕ್ಕೆ ಸಹಕಾರಿಸಾಧನಗಳೆಂದಾಗಲಿ ಹೇಳುವದಕ್ಕಾಗಲಾರದಷ್ಟೆ?

(ಪೂರ್ವಪಕ್ಷಿ) —(ಇವನ್ನು) ಜೊತೆಯಲ್ಲಿಯೇ ಹೇಳಿದ್ದರೂ ಅವವುಗಳಿಗೆ ತಕ್ಕಂತೆ ವಿಂಗಡಿಸಿಕೊಂಡು ವಿನಿಯೋಗಮಾಡಬಹುದಲ್ಲ![3] ಸೂಕ್ತವಾಕದಲ್ಲಿ **ಅನುಮಂತ್ರಣಮಂತ್ರ**ಗಳನ್ನು (ಆಯಾ) ದೇವತೆಗಳಿಗೆ ತಕ್ಕಂತೆ ವಿಂಗಡಿಸಿಕೊಂಡು ಹೇಗೆ (ವಿನಿಯೋಗಿಸಿದೆಯೋ) ಹಾಗೆಯೇ ತಪಸ್ಸು, ದಮ, ಕರ್ಮ, ಸತ್ಯ–ಮುಂತಾದವುಗಳೂ ಬ್ರಹ್ಮವಿದ್ಯೆಗೆ **ಶೇಷ**ವಾಗಿರುತ್ತವೆಯೆಂದೋ **ಸಹಕಾರಿ**ಯಾಗಿರುತ್ತವೆಯೆಂದೋ (ಕಲ್ಪಿಸಿ) ವೇದಗಳೂ ಅದರ ಅಂಗಗಳೂ (ಆಯಾ) ವಿಷಯವನ್ನು ತಿಳಿಸುವ ಮೂಲಕ ಕರ್ಮ, ಆತ್ಮ–ಇವುಗಳನ್ನು ತಿಳಿದುಕೊಳ್ಳುವದಕ್ಕೆ ಸಾಧನವೆಂದು

---

1. ಶೇಷವೆಂದರೆ ಮತ್ತೊಂದು ಸಾಧನಕ್ಕೆ ಬೇಕಾಗಿರುವ ಅಂಗವು; ಸಹಕಾರಿ ಎಂದರೆ ಅದರ ಜೊತೆಯಲ್ಲಿಯೇ ಅನುಷ್ಠಾನಮಾಡಿ ಒಟ್ಟು ಅನುಷ್ಠಾನವು ಫಲವನ್ನು ಕೊಡುವಂತಿರುವದು. ಜ್ಞಾನಕ್ಕೆ ಕರ್ಮವು ಅಂಗವಲ್ಲ, ಸಮುಚ್ಚಯದಿಂದ ಫಲವನ್ನು ಕೊಡುವ ಸಹಕಾರಿಯೂ ಅಲ್ಲ-ಎಂಬುದು ಪ್ರಕೃತಚರ್ಚೆಯ ಫಲ.

2. ಸಾಂಗವೇದಾಧ್ಯಯನವು ಕರ್ಮವಿಚಾರಾದಿಗಳ ಮೂಲಕವೇ ಬ್ರಹ್ಮವಿದ್ಯೆಗೆ ಉಪಾಯವಾಗಿರುತ್ತದೆ; ಅಧ್ಯಯನವೆಂಬ ಅಂಗಸಹಿತವಾದ ಜ್ಞಾನಕ್ಕೆ ಮುಕ್ತಿಯೆಂದಾಗಲಿ ಅಧ್ಯಯನದೊಡನೆ ಅನುಷ್ಠಾನಮಾಡಿದ ಜ್ಞಾನಕ್ಕೇ ಮುಕ್ತಿಯೆಂದಾಗಲಿ ಹೇಳುವದಕ್ಕೆ ಬರುವದಿಲ್ಲ.

3. ಸೂಕ್ತವಾಕವನ್ನು ದರ್ಶಪೂರ್ಣಮಾಸಗಳಲ್ಲಿ ಉಪಯೋಗಿಸಬೇಕು. ಇದರಲ್ಲಿ ಪೌರ್ಣಮಾಸ್ಯದೇವತೆಗಳನ್ನು ಹೇಳುವ ಮಾತುಗಳಿರುವಷ್ಟು ಭಾಗವನ್ನು ಮಾತ್ರ ಆ ಯಾಗದ ದೇವತೆಗಳನ್ನು ವಿಸರ್ಜನೆಮಾಡುವದಕ್ಕೂ ಅಮಾವಾಸ್ಯೆಯ ದೇವತೆಗಳನ್ನು ಹೇಳುವ ಶಬ್ದಗಳನ್ನು ಮಾತ್ರ ದರ್ಶದಲ್ಲಿ ಆ ದೇವತೆಗಳನ್ನು ವಿಸರ್ಜನೆಮಾಡುವದಕ್ಕೂ ಉಪಯೋಗಿಸಬೇಕು–ಎಂದು (ಜೈ. ಸೂ. ೩-೩-೧೬ ರಿಂದ ೧೮) ಪೂರ್ವಮೀಮಾಂಸದಲ್ಲಿ ನಿರ್ಣಯಿಸಿದೆ. ಈ ನ್ಯಾಯದಂತೆ ಇಲ್ಲಿಯೂ ಬ್ರಹ್ಮವಿದ್ಯೆಗೆ ಬೇಕಾಗುವಷ್ಟು ಸಾಧನಗಳನ್ನು ಮಾತ್ರ ಶೇಷವೆಂದೋ ಸಹಕಾರಿಸಾಧನವೆಂದೋ ಏತಕ್ಕೆ ಇಟ್ಟುಕೊಳ್ಳಬಾರದು?–ಎಂಬುದು ಪೂರ್ವಪಕ್ಷಿಯ ಭಾವ.

ಕಲ್ಪಿಸಬಹುದಾಗಿದೆ. ಹೀಗೆ ಇವುಗಳನ್ನು ವಿಂಗಡಿಸಿಕೊಳ್ಳುವದೇ ಸರಿಯಾದದ್ದು ; ಏಕೆಂದರೆ ಆಯಾ ವಿಷಯಕ್ಕೆ ಅವು ಹೊಂದಿಕೊಳ್ಳುವ ಸಾಮರ್ಥ್ಯವುಳ್ಳವುಗಳಾಗಿರುತ್ತವೆ.

(ಸಿದ್ಧಾಂತಿ).—ಹಾಗಲ್ಲ. ಏಕೆಂದರೆ ಹೊಂದುವದಿಲ್ಲ ಹೀಗೆ ವಿಂಗಡಿಸುವದು ಹೊಂದುಗೆಯಾಗುವದೇ ಇಲ್ಲ. ಏಕೆಂದರೆ **ಕ್ರಿಯೆ, ಕಾರಕ, ಫಲ–ಎಂಬ ಭೇದಬುದ್ಧಿಯೆಲ್ಲವನ್ನೂ ನೀಗುವ ಬ್ರಹ್ಮವಿದ್ಯೆಗೆ ಶೇಷದ ಬಯಕೆಯಾಗಲಿ ಸಹಕಾರಿಯಾದ ಸಾಧನದ ಸಂಬಂಧವಾಗಲಿ (ಇದೆ ಎಂಬುದು) ಸರಿಯಾಗುವದಿಲ್ಲ.**[1] ಇದಲ್ಲದೆ ಎಲ್ಲಾ ವಿಷಯಗಳಿಗಿಂತಲೂ ಬೇರೆಯಾಗಿರುವ ನನ್ನೊಳಗಿನ ಆತ್ಮನೆಂಬ ವಿಷಯದಲ್ಲಿಯೇ ಬ್ರಹ್ಮವಿದ್ಯೆಗೆ ತಾತ್ಪರ್ಯವಿರುತ್ತದೆ. ಅದರ ಫಲವಾದ ಮುಕ್ತಿಯೂ (ಅದರಲ್ಲಿಯೇ ಕೊನೆಗಾಣುತ್ತದೆ)[2] "ಮೋಕ್ಷವನ್ನು ಬಯಸುವಾತನು ಕರ್ಮವನ್ನು ಸಾಧನಸಹಿತನಾಗಿ ಯಾವಾಗಲೂ ಬಿಡಬೇಕು ; ಬಿಡುವವನಿಗೇ ಅದು ತಿಳಿಯಬರತಕ್ಕದ್ದು, ಬಿಡುವಾತನ ಪ್ರತ್ಯಗಾತ್ಮನಗಿರುವ ಪರಮಪದವದು" (?)[3] ಆದ್ದರಿಂದ ಕರ್ಮಗಳು ಜ್ಞಾನಕ್ಕೆ ಸಹಕಾರಿಯೆಂಬುದಾಗಲಿ (ಅದಕ್ಕೆ) ಕರ್ಮವೆಂಬ ಶೇಷದ ಬಯಕೆಯಿರುವದೆಂಬುದಾಗಲಿ ಹೊಂದುವದಿಲ್ಲ. ಆದ್ದರಿಂದ ಸೂಕ್ತವಾಕದ ಅನುಮಂತ್ರಣದಂತೆ ಹೊಂದುವಷ್ಟನ್ನು ವಿಂಗಡಿಸಿಕೊಳ್ಳಬೇಕೆಂಬುದು ಸರಿಯೇ ಅಲ್ಲ.

(ಭಾಷ್ಯ)

೪೫. ತಸ್ಮಾದವಧಾರಣಾರ್ಥತೈವ ಪ್ರಶ್ನಸ್ರುತಿವಚನಸ್ಯೋಪಪದ್ಯತೇ । ಏತಾವತ್ಯೇವೇಯಮುಪನಿಷದುಕ್ತಾ ಅನ್ಯನಿರಪೇಕ್ಷಾ ಅಮೃತತ್ವಾಯ ॥

---

1. ಜ್ಞಾನವು ಕರ್ಮವಾಗಿದ್ದರೆ ಅದಕ್ಕೆ ಶೇಷವಾಗಲಿ ಸಹಕಾರಿಯಾಗಲಿ ಇರಬಹುದಾಗಿತ್ತು. ಆದರೆ ಅದು ಕರ್ಮದ ಸ್ವರೂಪವನ್ನೇ ಬಾಧಿಸುವ ಅರಿವಾಗಿರುತ್ತದೆ. ಸೂ. ಭಾ. ೧-೧-೪.

2 ಸಾಧನಸಾಧ್ಯಗಳ ವಿಚಾರವಾಗಿದ್ದರೆ ಶೇಷದ ಅಥವಾ ಸಹಕಾರಿಯ ಬಯಕೆ ಇರುತ್ತಿತ್ತು. ಜ್ಞಾನವು ಆತ್ಮನನ್ನು ತಿಳಿಸುತ್ತದೆ ಆತ್ಮನು ಹೇಯವೂ ಅಲ್ಲ, ಉಪಾದೇಯವೂ ಅಲ್ಲ ; ಆದ್ದರಿಂದ ಸಾಧ್ಯವಲ್ಲ ಜ್ಞಾನದಿಂದ ಆಗುವ ಮುಕ್ತಿಯೆಂಬುದು ಆತ್ಮ ಸ್ವರೂಪವಾಗಿಯೇ ಇರುತ್ತದೆ, ಮತ್ತೊಂದು ಸಾಧನದಿಂದ ಪಡೆಯತಕ್ಕದ್ದಲ್ಲ. ಆದ್ದರಿಂದ ಅದೂ ಸಾಧ್ಯವಲ್ಲ. ಜ್ಞಾನವು ವಿಧಿಸತಕ್ಕದ್ದಲ್ಲ. ಅದರ ಫಲವು ಪಡೆಯತಕ್ಕದ್ದಲ್ಲ ಇಲ್ಲಿ ಶೇಷಸಹಕಾರಿಗಳ ಸುದ್ದಿಯಾವರೂ ಹೇಗೆ ಬಂದೀತು ?—ಎಂದು ಭಾವ. ಸೂ.ಭಾ. ೩-೪-೩೩-

3. ಭಾಷ್ಯದಲ್ಲಿ ಹಿಂದೆಮುಂದೆ ವಾಕ್ಯಸಂಬಂಧವಿಲ್ಲದ ಈ ಶ್ಲೋಕವು ಇಲ್ಲಿ ಏತಕ್ಕೆ ಬಂದಿದೆಯೋ ತಿಳಿಯದು. ಈ ವಾಕ್ಯವು ಎಲ್ಲಿಯದೆಂಬುದೂ ತಿಳಿಯದು. "ತ್ಯಾಗ ಏವ ಹಿ ಸರ್ವೇಷಾಂ ಮೋಕ್ಷಸಾಧನಮುತ್ತಮಮ್ । ತ್ಯಜತೈವ ಹಿ ತಜ್ಜ್ಞೇಯಂ ತ್ಯಕ್ತುಃ ಪ್ರತ್ಯಕ್ಪರಂ ಪದಮ್" ಎಂಬ ವಾರ್ತಿಕದಲ್ಲಿ ಒಂದು ವಾಕ್ಯವಿದೆ. ಅದನ್ನು ಅಲ್ಲಿ ಭಾಷ್ಯವಿಶ್ರುತಿಯೆಂದು ಕರೆದಿದೆ.

(ಭಾಷ್ಯಾರ್ಥ)

ಆದ್ದರಿಂದ (ಶಿಷ್ಯನು ಕೇಳಿರುವ) ಪ್ರಶ್ನೆಗೆ (ಗುರುವು ಹೇಳಿರುವ) ಉತ್ತರವು ಅವಧಾರಣೆಮಾಡುವದಕ್ಕಾಗಿಯೇ (ಬಂದಿರುತ್ತದೆ) ಎಂಬುದೇ ಸರಿ. (ಇಲ್ಲಿಯವರೆಗೆ) ಹೇಳಿರುವ ಈ ಉಪನಿಷತ್ತು ಇಷ್ಟೇ; ಮತ್ತೊಂದರ ಬಯಕೆಯಿಲ್ಲದೆಯೇ ಮೋಕ್ಷವನ್ನು ಕೊಡುತ್ತದೆ.

ಜ್ಞಾನಸಾಧನಗಳು

ತಸ್ಯೈ ತಪೋ ದಮಃ ಕರ್ಮೇತಿ ಪ್ರತಿಷ್ಠಾ
ವೇದಾಃ ಸರ್ವಾಜ್ಞಾನಿ ಸತ್ಯಮಾಯತನಮ್ ॥ ೮ ॥

೮. ಅದಕ್ಕೆ ತಪಸ್ಸು, ದಮ, ಕರ್ಮ–ಎಂಬಿವು ಪ್ರತಿಷ್ಠೆಯು; ವೇದಗಳು ಎಲ್ಲಾ ಅಂಗಗಳು; ಸತ್ಯವು ಆಯತನವು.

(ಭಾಷ್ಯ)

೮ಬ. ಯಾಮಿಮಾಂ ಬ್ರಾಹ್ಮೀಮುಪನಿಷದಂ ತವಾಗ್ರೇಽಬ್ರೂಮೇತಿ ತಸ್ಯೈ ತಸ್ಯಾ ಉಕ್ತಾಯಾ ಉಪನಿಷದಃ ಪ್ರಾಪ್ತ್ಯುಪಾಯಭೂತಾನಿ ತಪಆದೀನಿ। ತಪಃ ಕಾಯೇಂದ್ರಿಯಮನಸಾಂ ಸಮಾಧಾನಮ್ । ದಮಃ ಉಪಶಮಃ । ಕರ್ಮ ಅಗ್ನಿಹೋತ್ರಾದಿ । ಏತೈ ಹಿ ಸಂಸ್ಕೃತಸ್ಯ ಸತ್ತ್ವಶುದ್ಧಿದ್ವಾರಾ ತತ್ತ್ವಜ್ಞಾನೋತ್ಪತ್ತಿರ್ದೃಷ್ಟಾ । ದೃಷ್ಟ್ವಾ ಹಿ ಅಮೃದಿತಕಲ್ಮಷಸ್ಯ ಉಕ್ತೇಽಪಿ ಬ್ರಹ್ಮಣಿ ಅಪ್ರತಿಪತ್ತಿಃ, ವಿಪರೀತಪ್ರತಿಪತ್ತಿಶ್ಚ । ಯಥೇಂದ್ರವಿರೋಚನಪ್ರಭೃತೀನಾಮ್ । ತಸ್ಮಾತ್ ಇಹ ವಾ ಅತೀತೇಷು ವಾ ಬಹುಷು ಜನ್ಮಾಂತರೇಷು ತಪಆದಿಭಿಃ ಕೃತಸತ್ತ್ವಶುದ್ಧೇ ಜ್ಞಾನಂ ಸಮುತ್ಪದ್ಯತೇ ಯಥಾಶ್ರುತಮ್ । “ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ । ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥” (ಶ್ವೇ. ೬-೨೩) ಇತಿ ಮಂತ್ರವರ್ಣಾತ್ । “ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ಪಾಪಸ್ಯ ಕರ್ಮಣಃ ।” (ಮೋ. ೨೦೪-೮) ಇತಿ ಸ್ಮೃತೇಶ್ಚ ॥

(ಭಾಷ್ಯಾರ್ಥ)

(ನಾವು) ನಿನಗೆ ಯಾವ ಬ್ರಾಹ್ಮೀ ಉಪನಿಷತ್ತನ್ನು ಮೊದಲು ಹೇಳಿದೆವೆಂದೆವೋ ಅದಕ್ಕೆ ಎಂದರೆ ಆ (ಹಿಂದೆ) ಹೇಳಿದ ಉಪನಿಷತ್ತನ್ನು[2] ಪಡೆದುಕೊಳ್ಳು

---

1. ಜ್ಞಾನವು ಹುಟ್ಟಿದ ಬಳಿಕ ಅದರ ಫಲವಾದ ಮುಕ್ತಿಯನ್ನು ಕೊಡುವದಕ್ಕೆ ಅದಕ್ಕೆ ಮತ್ತೇತರ ಸಹಾಯವೂ ಬೇಕಿರುವದಿಲ್ಲ. ಸೂ. ಭಾ. ೩-೪-೧, ೩-೪-೩೩.

2. ಸಗುಣವಿದ್ಯೆ, ನಿರ್ಗುಣವಿದ್ಯೆ–ಇವೆರಡನ್ನೂ ಉಪನಿಷತ್ತೆಂಬ ಶಬ್ದದಿಂದ ಹೇಳಿರುತ್ತದೆ ಎಂದು ಟೀಕೆಯಲ್ಲಿದೆ. ಮುಖ್ಯವಾಗಿ ಭಾಷ್ಯಕಾರರು ನಿರ್ಗುಣವಿದ್ಯೆಯನ್ನೇ ಲಕ್ಷ್ಯದಲ್ಲಿಟ್ಟಿರುತ್ತಾರೆಂಬುದು ಹಿಂದಿನ ಚರ್ಚೆಯಿಂದ ಸ್ಪಷ್ಟವಾಗುತ್ತದೆ.

ವದಕ್ಕೆ ತಪಸ್ಸೇ ಮುಂತಾದವುಗಳು ಸಾಧನಗಳು. ತಪಸ್ಸೆಂದರೆ ದೇಹ, ಇಂದ್ರಿಯಗಳು, ಮನಸ್ಸು–ಇವುಗಳನ್ನು ಸರಿಯಾಗಿ ತಡೆದಿಟ್ಟುಕೊಳ್ಳುವದು, ದಮವೆಂದರೆ ಉಪಶಾಂತಿಯು,[1] ಕರ್ಮವೆಂದರೆ ಅಗ್ನಿಹೋತ್ರಾದಿಗಳು. ಇವುಗಳಿಂದ **ಸಂಸ್ಕಾರವನ್ನು** ಪಡೆದಾತನಿಗೆ ಅಂತಃಕರಣಶುದ್ಧಿಯ ಮೂಲಕವಾಗಿ ತತ್ತ್ವಜ್ಞಾನವುಂಟಾಗುವದು ಕಂಡುಬಂದಿರುತ್ತದೆಯಲ್ಲವೆ? (ಆದ್ದರಿಂದ ಇವುಗಳು ಸಾಧನಗಳು). ಏಕೆಂದರೆ (ಮನಸ್ಸಿನ) ಕಲ್ಮಷಗಳು ನಾಶವಾಗದೆ ಇರುವವನಿಗೆ ಬ್ರಹ್ಮವನ್ನು ಹೇಳಿದರೂ ತಿಳಿಯದೆ ಇರುವದು, ತಪ್ಪಾಗಿ ತಿಳಿದುಕೊಳ್ಳುವದು–(ಇವು) ಕಂಡುಬಂದಿರುತ್ತವೆ.[2] **ಇಂದ್ರ, ವಿರೋಚನ** ಮುಂತಾದವರು ಇದಕ್ಕೆ ಉದಾಹರಣೆ[3]. ಆದ್ದರಿಂದ **ಈ ಜನ್ಮದಲ್ಲಿಯೋ ಕಳೆದುಹೋಗಿರುವ ಅನೇಕ ಬೇರೆಯ ಜನ್ಮಗಳಲ್ಲಿಯೋ[4] ತಪಸ್ಸೇ ಮುಂತಾದವುಗಳಿಂದ ಅಂತಃಕರಣವನ್ನು ಶುದ್ಧಿಮಾಡಿಕೊಂಡಿರುವಾತನಿಗೆ ಶ್ರವಣಮಾಡಿದಂತೆಯೇ ಜ್ಞಾನವುಂಟಾಗುತ್ತದೆ.** "ಯಾವಾತನಿಗೆ ದೇವನಲ್ಲಿ ಪರಭಕ್ತಿಯಿರುವದೋ ದೇವನಲ್ಲಿರುವಂತೆ ಗುರುವಿನಲ್ಲಿಯೂ (ಹೆಚ್ಚಿನ ಭಕ್ತಿಯಿರುವದೋ) ಆ ಮಹಾತ್ಮನಿಗೆ ಈ (ನಾನು) ಹೇಳಿರುವ ವಿಷಯಗಳು ಹೊಳೆಯುತ್ತವೆ" (ಶ್ವೇ. ೬-೨೩) ಎಂಬ **ಮಂತ್ರವರ್ಣ**ವೂ "ಪಾಪಕರ್ಮವು ಕ್ಷಯವಾಗಲು ಮನುಷ್ಯನಿಗೆ ಜ್ಞಾನವು ಹುಟ್ಟುವದು" (ಮೋ. ೨೦೪-೮) ಎಂಬ ಸ್ಮೃತಿಯೂ ಇದಕ್ಕೆ ಪ್ರಮಾಣವು.

(ಭಾಷ್ಯ)

೮೭. ಇತಿಶಬ್ದಃ ಉಪಲಕ್ಷಣತ್ವಪ್ರದರ್ಶನಾರ್ಥಃ । ಇತಿ ಏವಮಾದ್ಯನ್ಯದಪಿ ಜ್ಞಾನೋತ್ಪತ್ತೇರುಪಕಾರಕಮ್ "ಅಮಾನಿತ್ವಮದಮ್ಭಿತ್ವಮ್" (ಗೀ ೧೩-೭) ಇತ್ಯಾದಿ ಉಪದರ್ಶಿತಂ ಭವತಿ । ವ್ರತಿಷ್ಠಾ ಪಾದೌ ಪಾದಾವಿವಾಸ್ಯಾಃ । ತೇಷು ಹಿ ಸತ್ಸು ಬ್ರಹ್ಮವಿದ್ಯಾ ಪ್ರವರ್ತತೇ (ಪ್ರತಿತಿಷ್ಠತಿ?) ಪದ್ಭ್ಯಾಮಿವ ಪುರುಷಃ । ವೇದಾ

---

1. ದಮವೆಂಬ ಮಾತಿನಲ್ಲಿಯೇ ಶಮವನ್ನೂ ಸೇರಿಸಿಕೊಳ್ಳಬೇಕು ಎಂದರ್ಥ.

2. ಸಂಶಯವನ್ನೂ ಇಲ್ಲಿ ಸೇರಿಸಿಕೊಳ್ಳಬೇಕು. ಅಂತಃಕರಣವು ಅಶುದ್ಧಿಯಾಗಿದ್ದರೆ ಹೇಳಿದ್ದನ್ನು ಸರಿಯಾಗಿ ತಿಳಿದುಕೊಳ್ಳುವದು ಅಗಲಾರದೆಂಬುದು ಪ್ರಸಿದ್ಧ.

3. ಇದೇ ದೃಷ್ಟಾಂತವನ್ನು ೩-೧೩ನೆಯ ಮಂತ್ರದ ಭಾಷ್ಯದಲ್ಲಿ ಕೊಟ್ಟಿರುತ್ತದೆ. ಈ ಉದಾಹರಣೆಯಲ್ಲಿ ಇಂದ್ರನು ತಿಳಿದುಕೊಂಡದ್ದಕ್ಕೆ ಇಂದ್ರನು ಬ್ರಹ್ಮಚರ್ಯವನ್ನು ಆವಲಂಬಿಸಿ ಗುರುಕುಲವಾಸಮಾಡಿದ್ದು ಕಾರಣವೆಂದೂ ವಿರೋಚನನು ಸ್ವಭಾವದೋಷದಿಂದ ಹೆಚ್ಚು ತಿಳಿದುಕೊಳ್ಳಲಾರದೆ ತಿಳಿದಷ್ಟರಿಂದ ತೃಪ್ತನಾಗಿ ಹೊರಟುಹೋದನೆಂದೂ ಹಿಂದೆಯೇ ಹೇಳಿದೆ.

4. ಚಿತ್ತಶುದ್ಧಿಯಿಂದ ಜ್ಞಾನಕ್ಕೆ ಅರ್ಹತೆಯುಂಟಾಗುವದಕ್ಕೆ ಈ ಜನ್ಮದಲ್ಲಿಯೇ ಕರ್ಮಾದಿಗಳನ್ನು ಮಾಡಿರಬೇಕೆಂಬ ನಿಯಮವಿಲ್ಲ. ಸೂ. ಭಾ. ೪-೧-೫೧, ೪-೧-೧೪, ಗೀ. ಭಾ. ೬-೪ ಇವನ್ನು ನೋಡಿರಿ.

ಶ್ಚತ್ವಾರಃ ಸರ್ವಾಣಿ ಚಾಙ್ಗಾನಿ ಶಿಕ್ಷಾದೀನಿ ಷಟ್ । ಕರ್ಮಜ್ಞಾನಪ್ರಕಾಶಕತ್ವಾದ್ವೇದಾನಾಮ್ ತದ್ರಕ್ಷಣಾರ್ಥತ್ವಾದಙ್ಗಾನಾಂ ಪ್ರತಿಷ್ಠಾತ್ವಮ್ । ಅಥವಾ ಪ್ರತಿಷ್ಠಾಶಬ್ದಸ್ಯ ಪಾದರೂಪ(ಕ) ಕಲ್ಪನಾರ್ಥತ್ವಾತ್ ವೇದಾಸ್ತ್ವಿತರಾಣಿ ಸರ್ವಾಙ್ಗಾನಿ ಶಿರಆದೀನಿ । ಅಸ್ಮಿನ್ ಪಕ್ಷೇ ಶಿಕ್ಷಾದೀನಾಂ ವೇದಗ್ರಹಣೇನೈವ ಗ್ರಹಣಂ ಕೃತಂ ಪ್ರತ್ಯೇತವ್ಯಮ್ । ಅಙ್ಗಾನಿ ಹಿ ಗೃಹೀತೇಽಙ್ಗಾನಿ ಗೃಹೀತಾನ್ಯೇವ ಭವನ್ತಿ ತದಾಯತ್ತತ್ವಾದಙ್ಗಾನಾಮ್ ॥

(ಭಾಷ್ಯಾರ್ಥ)

(ಇಲ್ಲಿ) ಇತಿ ಎಂಬದು ಉಪಲಕ್ಷಣತ್ವವನ್ನು ತೋರಿಸುವದಕ್ಕಾಗಿ (ಬಂದಿದೆ). (ಆದ್ದರಿಂದ) ಎಂಬಿವೇ ಮುಂತಾದ ಜ್ಞಾನವುಂಟಾಗುವದಕ್ಕೆ ಕಾರಣವಾಗಿರುವ 'ಅಮಾನಿತ್ವ', 'ಅದಂಭಿತ್ವ' (ಗೀ. ೨೩-೭) ಮುಂತಾದದ್ದನ್ನೂ ತೋರಿಸಿದಂತೆ ಆಗಿರುತ್ತದೆ. (ಈ ಸಾಧನಗಳು) ಪ್ರತಿಷ್ಠೆಯು ಎಂದರೆ ಪಾದಗಳು, ಈ (ಉಪನಿಷತ್ತಿಗೆ ಅವು) ಪಾದಗಳಂತಿರುವವು ಏಕೆಂದರೆ ಅವುಗಳಿದ್ದರೆ ಬ್ರಹ್ಮವಿದ್ಯೆಯು ಕಾಲುಗಳಿಂದ ಮನುಷ್ಯನು ನಿಂತುಕೊಳ್ಳುವಂತೆ ನಿಂತುಕೊಳ್ಳುತ್ತದೆ. ನಾಲ್ಕು ವೇದಗಳೂ, ಎಲ್ಲಾ ಎಂದರೆ ಶಿಕ್ಷೆಯೇ ಮುಂತಾದ ಆರು ಅಂಗಗಳೂ, (ಪ್ರತಿಷ್ಠೆಯು). ವೇದಗಳು ಕರ್ಮವನ್ನೂ ಜ್ಞಾನವನ್ನೂ ತಿಳಿಸಿಕೊಡುವದರಿಂದಲೂ ಅಂಗಗಳು ಅದನ್ನು ರಕ್ಷಣೆಮಾಡುವದಕ್ಕೆ (ಹೊರಟಿರುವದ)ರಿಂದಲೂ (ಅವು ಉಪನಿಷತ್ತಿಗೆ) ಪ್ರತಿಷ್ಠೆಯಾಗಿರುವವು. ಅಥವಾ ಪ್ರತಿಷ್ಠೆ ಎಂಬ ಶಬ್ದವನ್ನು (ಉಪಯೋಗಿಸಿರುವದು) ಪಾದವೆಂಬ ರೂಪಕವನ್ನು ಕಲ್ಪಿಸುವದಕ್ಕಾದ್ದರಿಂದ ವೇದಗಳಾದರೋ ಉಳಿದ ತಲೆಯೇ ಮುಂತಾದ ಅಂಗಗಳು ಎಂದೂ ಅರ್ಥಮಾಡಬಹುದು. ಈ ಪಕ್ಷದಲ್ಲಿ ಶಿಕ್ಷೆ ಮುಂತಾದ (ಅಂಗ)ಗಳನ್ನು ವೇದ(ವನ್ನು) ಹೇಳಿದ್ದರಿಂದಲೇ ಹೇಳಿದಂತಾಯಿತೆಂದು ತಿಳಿಯಬೇಕು. ಏಕೆಂದರೆ ಪ್ರಧಾನವಾದದ್ದನ್ನು ತೆಗೆದುಕೊಂಡರೆ (ಅದರ) ಅಂಗಗಳನ್ನೂ ತೆಗೆದುಕೊಂಡು (ಹೇಳಿ)ದಂತೆಯೇ ಆಗುವದು, ಏಕೆಂದರೆ ಅಂಗಗಳು ಆ (ಪ್ರಧಾನವಾದದ್ದರ) ಅಧೀನವಾಗಿಯೇ ಇರುತ್ತವೆ.

(ಭಾಷ್ಯ)

೮೮. ಸತ್ಯಮ್ ಆಯತನಮ್ । ಯತ್ರ ತಿಷ್ಠತ್ಯುಪನಿಷತ್ ತತ್ ಆಯತನಮ್ । ಸತ್ಯಮಿತಿ ಅಮಾಯಿತಾ ಅಕಾಟಿಲ್ಯಂ ವಾಙ್ಮನಃಕಾಯಾನಾಮ್ । ತೇಷು ಹಿ ಆಶ್ರಯತಿ ವಿದ್ಯಾ ಯೇಽಮಾಯಾವಿನಃ ಸಾಧವಃ ನಾಸುರಪ್ರಕೃತಿಷು ಮಾಯಾವಿಷು । "ನ ಯೇಷು ಜಿಹ್ಮಮನೃತಂ ನ ಮಾಯಾ ಚ" (ಪ್ರ. ೧-೧೬) ಇತಿ ಶ್ರುತೇಃ । ತಸ್ಮಾತ್ ಸತ್ಯಮಾಯತನಮ್ ಇತಿ ಕಲ್ಪ್ಯತೇ । ತಪ ಆದಿಷ್ವೇವ ಪತ್ರಿಷ್ಠಾತ್ವೇನ ಪ್ರಾಪ್ತಸ್ಯ ಸತ್ಯಸ್ಯ ಪುನರಾಯತನತ್ವೇನ ಗ್ರಹಣಂ ಸಾಧನಾತಿಶಯತ್ವ

ಜ್ಞಾಪನಾರ್ಥಮ್ । "ಅಶ್ವಮೇಧಸಹಸ್ರಂ ಚ ಸತ್ಯಂ ಚ ತುಲಯಾ ಧೃತಮ್ । ಅಶ್ವಮೇಧಸಹಸ್ರಾಚ್ಚ ಸತ್ಯಮೇಕಂ ವಿಶಿಷ್ಯತೇ ॥" (ಆದಿ. ೭೪-೧೦೩) ಇತಿ ಸ್ಮೃತೇಃ॥

(ಭಾಷ್ಯಾರ್ಥ)

ಸತ್ಯವು ಆಯತನವು. ಉಪನಿಷತ್ತು ಯಾವದರಲ್ಲಿ (ಆಶ್ರಯಿಸಿಕೊಂಡು) ಇರುವದೋ ಅದು (ಅದರ) ಆಯತನವು.[1] ಸತ್ಯವೆಂದರೆ ಮಾಯೆಯಿಲ್ಲದಿರುವಿಕೆ; ವಾಕ್ಕು, ಮನಸ್ಸು, ಶರೀರ–ಇವುಗಳಲ್ಲಿ ಕೊಂಕಿಲ್ಲದಿರುವದು. ಯಾರು ಮಾಯಾವಿಗಳಲ್ಲದ ಸಾಧುಗಳಾಗಿರುವರೋ ಅವರಲ್ಲಿಯೇ ವಿದ್ಯೆಯು ಆಶ್ರಯಿಸಿರುತ್ತದೆಯೇ ಹೊರತು ಅಸುರರ ಸ್ವಭಾವದ ಮಾಯಾವಿಗಳಲ್ಲಿ (ಇರು)ವದಿಲ್ಲ. "ಯಾರಲ್ಲಿ ವಕ್ರತೆಯೂ ಸುಳ್ಳೂ ಮಾಯೆಯೂ ಇಲ್ಲವೋ (ಅವರಿಗೇ ಈ ಬ್ರಹ್ಮಲೋಕವು[2] ಸಿಕ್ಕುವದು)". (ಪ್ರ. ೧-೧೬) ಎಂಬ **ಶ್ರುತಿ**ಯು ಇದಕ್ಕೆ ಪ್ರಮಾಣವು. ಆದ್ದರಿಂದ ಸತ್ಯವು (ಉಪನಿಷತ್ತಿಗೆ) ಆಯತನವೆಂದು ಕಲ್ಪಿಸಲಾಗಿದೆ. ತಪಸ್ಸೇ ಮುಂತಾದವುಗಳು ಪ್ರತಿಷ್ಠೆ ಎಂದು (ಹೇಳಿದ್ದರಿಂದಲೇ) ಬಂದಿರುವ[3] ಸತ್ಯವನ್ನು ಮತ್ತೊಂದು ಸಲ ಆಯತನವೆಂದು ಹೇಳಿರುವದು (ಅದು) ಹೆಚ್ಚಿನ ಸಾಧನವೆಂದು ತಿಳಿಸುವದಕ್ಕೆ. "ಸಾವಿರ ಅಶ್ವಮೇಧವನ್ನೂ ಸತ್ಯವನ್ನೂ ತಕ್ಕಡಿಯಲ್ಲಿ ಇಟ್ಟರೆ ಸಾವಿರ ಅಶ್ವಮೇಧಕ್ಕಿಂತ ಸತ್ಯವೊಂದೇ ಹೆಚ್ಚಾಗುವದು" (ಆದಿ. ೭೪-೧೦೩) ಎಂಬ **ಸ್ಮೃತಿಯು** ಇದಕ್ಕೆ ಆಧಾರವು.

ಬ್ರಹ್ಮವಿದ್ಯೆಯ ಫಲದ ಉಪಸಂಹಾರ

ಯೋ ವಾ ಏತಾಮೇವಂ ವೇದಾಪಹತ್ಯ ಪಾಪ್ಮಾನ-
ಮನನ್ತೇ ಸ್ವರ್ಗೇ ಲೋಕೇ ಜ್ಯೇಯೇ ಪ್ರತಿಷ್ಠತಿ ಪ್ರತಿತಿಷ್ಠತಿ ॥ ೯ ॥

೯. ಯಾವನೇ ಇದನ್ನು ಹೀಗೆಂದು ತಿಳಿಯುತ್ತಾನೋ (ಅವನು) ಪಾಪವನ್ನು ನಾಶಮಾಡಿಕೊಂಡು ಅನಂತವಾದ ಹೆಚ್ಚಿನ ಸ್ವರ್ಗದಲ್ಲಿ ಪ್ರತಿಷ್ಠಿತನಾಗುವನು.

(ಭಾಷ್ಯ)

೯. ಯೋ ವೈ ಏತಾಂ ಬ್ರಹ್ಮವಿದ್ಯಾಮ್, "ಕೇನೇಷಿತಮ್" (೧-೧) ಇತ್ಯಾದಿನಾ ಯಥೋಕ್ತಾಮ್–ಏವಂ ಮಹಾಭಾಗಾಮ್ "ಬ್ರಹ್ಮ ಹ ದೇವೇಭ್ಯಃ"

---

1. ಆಶ್ರಯಸ್ಥಾನವು, ವಾಸಸ್ಥಲವು.

2. ಇಲ್ಲಿ ಸಗುಣಬ್ರಹ್ಮವನ್ನು ಹೇಳಿದ್ದರೂ ಸಮಾನನ್ಯಾಯದಿಂದ ನಿರ್ಗುಣಕ್ಕೂ ಇದು ಹೊಂದುವದು.

3 ಇತಿ ಎಂಬ ಮಾತು ಉಪಲಕ್ಷಣವೆಂದದ್ದರಿಂದ ಸತ್ಯವೂ ಪ್ರತಿಷ್ಠೆ ಎಂದು ಮೊದಲೇ ಸಿದ್ಧವಾಗಿರುವ ಸತ್ಯವನ್ನು.

(೩-೧) ಇತ್ಯಾದಿನಾ ಸ್ತುತಾಂ ಸರ್ವವಿದ್ಯಾಪ್ರತಿಷ್ಠಾಂ ವೇದ। "ಅಮೃತತ್ವಂ ಹಿ ವಿನ್ದತೇ" (೨-೪) ಇತ್ಯುಕ್ತಮಪಿ ಬ್ರಹ್ಮವಿದ್ಯಾಫಲಮನ್ತೇ ನಿಗಮಯತಿ ಅಪಹತ್ಯ ಪಾಪ್ಮಾನಮ್ ಅವಿದ್ಯಾಕಾಮಕರ್ಮಲಕ್ಷಣಂ ಸಂಸಾರಬೀಜಂ ವಿಧೂಯ ಅನನ್ತೇ ಅಪರ್ಯನ್ತೇ ಸ್ವರ್ಗೇ ಲೋಕೇ ಸುಖಾತ್ಮಕೇ ಬ್ರಹ್ಮಣಿ ಇತ್ಯೇತತ್। ಅನನ್ತೇ ಇತಿ ವಿಶೇಷಣಾನ್ನ ತ್ರಿವಿಷ್ಟಪೇ। ಅನನ್ತಶಬ್ದ ಔಪಚಾರಿಕೋಽಪಿ ಸ್ಯಾತ್ ಇತ್ಯತ ಆಹ– "ಜ್ಯೇಯೇ" ಇತಿ। ಜ್ಯೇಯೇ ಜ್ಯಾಯಸಿ ಸರ್ವಮಹತ್ತರೇ ಸ್ವಾತ್ಮನಿ ಮುಖ್ಯೇ ಏವ ಪ್ರತಿತಿಷ್ಠತಿ। ನ ಪುನಃ ಸಂಸಾರಮಾಪದ್ಯತ ಇತ್ಯಭಿಪ್ರಾಯಃ॥

(ಭಾಷ್ಯಾರ್ಥ)

ಯಾವನೇ ಆಗಲಿ ಈ ಬ್ರಹ್ಮವಿದ್ಯೆಯನ್ನು "ಕೇನೇಷಿತಮ್" (ಯಾರ ಇಷ್ಟದಂತೆ) (೧-೧) ಎಂದು ಮುಂತಾಗಿರುವ ಗ್ರಂಥಭಾಗದಿಂದ ಈವರೆಗೆ ಹೇಳಿರುವ ಇಂಥ[1] ಮಹತ್ತಿನದಾದ, "ಬ್ರಹ್ಮ ಹ ದೇವೇಭ್ಯಃ" (ಬ್ರಹ್ಮವು ದೇವತೆಗಳಿಗೆ ಜಯಿಸಿತು) (೩-೧) ಎಂದು ಮುಂತಾಗಿರುವ ಗ್ರಂಥಭಾಗದಿಂದ ಹೊಗಳಿರುವ[2] ಸರ್ವವಿದ್ಯೆಗಳಿಗೂ ಆಶ್ರಯವಾಗಿರುವ[3] (ಈ ವಿದ್ಯೆಯನ್ನು) ತಿಳಿದುಕೊಳ್ಳುವನೋ ಅವನು "ಏಕೆಂದರೆ ಆಗ ಅಮೃತತ್ವವನ್ನು ಪಡೆಯುತ್ತಾನೆ" (೨-೪) ಎಂದು ಬ್ರಹ್ಮವಿದ್ಯೆಯ ಫಲವನ್ನು ಮೊದಲೇ ಹೇಳಿದ್ದರೂ (ಗ್ರಂಥದ) ಕೊನೆಯಲ್ಲಿ ಅದನ್ನು (ಮತ್ತೊಮ್ಮೆ) ಮಂತ್ರವು ಉಪಸಂಹಾರಮಾಡಿ[4] ಹೇಳುತ್ತದೆ. ಪಾಪವನ್ನು ಹೋಗಲಾಡಿಸಿಕೊಂಡು ಎಂದರೆ **ಅವಿದ್ಯಾಕಾಮಕರ್ಮವೆಂಬ ಸಂಸಾರಬೀಜವನ್ನು ತೊಲಗಿಸಿಕೊಂಡು**[5] ಅನಂತವಾದ ಕೊನೆಗಾಣದ ಸ್ವರ್ಗಲೋಕದಲ್ಲಿ ಎಂದರೆ ಸುಖರೂಪ

---

1. ಆಗಮೋಪದೇಶವಿಲ್ಲದೆ ತಿಳಿಯತಕ್ಕದ್ದಲ್ಲದ, ತಿಳಿದರೆ ಹೆಚ್ಚಿನ ಫಲವನ್ನು ಕೊಡುವ.

2. ಆತ್ಮಜ್ಞಾನವನ್ನು ಹೊಗಳುವದಕ್ಕೇ ಈ ಅರ್ಥವಾದವನ್ನು ಕೊಟ್ಟಿರುತ್ತದೆ. ಇದು ವಿದ್ಯಮಾನಾರ್ಥವಾದ, ಎಂದರೆ ಬ್ರಹ್ಮದಲ್ಲಿರುವದನ್ನೇ ಹೊಗಳಿರುವದು.

3. ಮು. ೧-೧-೧ರ ಸೂಚನೆ.

4. ಉಪಕ್ರಮದಲ್ಲಿ "ಅಮೃತಾ ಭವನ್ತಿ" (ಅಮೃತರಾಗುವರು) ಎಂದಿರುವದನ್ನು ನಡುವೆ "ಅಮೃತತ್ವಂ ಹಿ ವಿನ್ದತೇ" (ಅಮೃತತ್ವವನ್ನು ಪಡೆದುಕೊಳ್ಳುತ್ತಾನಲ್ಲವೆ) ಎಂದು ಹೇಳಿರುವದಲ್ಲದೆ ಉಪಸಂಹಾರದಲ್ಲಿಯೂ ಹೇಳಿರುವದಂದ ಜ್ಞಾನದಿಂದ ಮುಕ್ತಿ ಎಂಬುದೇ ಉಪನಿಷತ್ತಿನ ಪರಮತಾತ್ಪರ್ಯವೆಂದು ಸಿದ್ಧವಾಗುತ್ತದೆ.

5. ಪಾಪವನ್ನು ಧರ್ಮದಿಂದ ತೊಲಗಿಸಿಕೊಂಡವರು ಸ್ವರ್ಗಲೋಕಕ್ಕೆ ಹೋಗುವರು; ಸಂಸಾರಕ್ಕೆ ಕಾರಣವಾಗಿರುವ ಅವಿದ್ಯಾಕಾಮಕರ್ಮವೆಂಬ ಪಾಪವನ್ನು ಜ್ಞಾನದಿಂದ ತೊಲಗಿಸಿಕೊಂಡವರು ಪರಮಾತ್ಮರೂಪವಾದ ಮುಕ್ತಿಯನ್ನು ಪಡೆಯುವರು ಎಂದು ಭಾವ.

ವಾದ ಬ್ರಹ್ಮದಲ್ಲಿ[1] ಎಂದರ್ಥ ; ಮೂರನೆಯ ಲೋಕದಲ್ಲಿ ಎಂದರ್ಥವಲ್ಲ, ಏಕೆಂದರೆ "ಅನಂತವಾದ" ಎಂಬ ವಿಶೇಷಣವನ್ನು (ಇಲ್ಲಿ) ಕೊಟ್ಟಿರುತ್ತದೆ.[2] ಅನಂತವೆಂಬ ಮಾತು ಉಪಚಾರಕ್ಕೂ[3] ಬಂದಿರಬಹುದು ಎಂದಾರೆಂದು "ಹೆಚ್ಚಿನ" ಎಂದು ಹೇಳಿರುತ್ತದೆ. ಹೆಚ್ಚಿನ ಎಂದರೆ ಮಿಗಿಲಾದ ಎಲ್ಲಕ್ಕೂ ಹೆಚ್ಚಿನ ಮುಖ್ಯನೇ ಆದ ತನ್ನ ಆತ್ಮನಲ್ಲಿ[4] ನೆಲೆನಿಲ್ಲುವನು, ಮತ್ತೆ ಸಂಸಾರವನ್ನು ಹೊಂದುವದಿಲ್ಲ ಎಂದರ್ಥ.

---

1. ಬ್ರಹ್ಮವನ್ನೂ ಲೋಕವೆಂದು ಕರೆಯುವದುಂಟು. ಛಾ. ಭಾ. ೪-೩-೨ ಬೃ. ಭಾ. ೪-೪-೨೩, ಸೂ. ಭಾ. ೧-೩-೧೫ ನೋಡಿ.

2. ಇಲ್ಲಿ ಸ್ವರ್ಗಲೋಕಕ್ಕೆ ಹೋಗುತ್ತಾನೆಂದಿದ್ದರೂ ಸ್ವರ್ಗವು ಅನಂತವಾಗಲಾರದಾದ್ದರಿಂದ ಬ್ರಹ್ಮವನ್ನು ಪಡೆಯುತ್ತಾನೆಂದೇ ಅರ್ಥವನ್ನು ಮಾಡಬೇಕು—ಎಂದು ಭಾವ.

3. ಉಳಿದದ್ದಕ್ಕೆ ಹೋಲಿಸಿದರೆ ಬ್ರಹ್ಮಲೋಕವು ಬಹುಕಾಲ ಎಂದರೆ ಒಂದು ಕಲ್ಪವು ಮುಗಿದಿರುವವರೆಗೆ ಇರುತ್ತದೆ. ಅದ್ದರಿಂದ ಅದನ್ನು ಅನಂತವೆಂದು ಉಪಚಾರಕ್ಕೆ ಕರೆದಿರಬಹುದಲ್ಲ !—ಎಂಬ ಶಂಕೆಗೆ ಪರಿಹಾರವಿದು.

4. ಪ್ರತ್ಯಗಾತ್ಮರೂಪವಾದ ಪರಬ್ರಹ್ಮದಲ್ಲಿ,

ಶಾಂಕರ ವಾಕ್ಯಧಾಷ್ಯೋಪೇತ

ಕೇನೋಪನಿಷತ್ತು

ಭಾಷ್ಯಕಾರರ ಅವತರಣಿಕೆ

ಹಿಂದಿನ ಗ್ರಂಥಕ್ಕೂ ಈ ಉಪನಿಷತ್ತಿಗೂ ಸಂಬಂಧ

(ಭಾಷ್ಯ)

೯೦. ಸಮಾಪ್ತಂ ಕರ್ಮಾತ್ಮಭೂತಪ್ರಾಣವಿಷಯಂ ವಿಜ್ಞಾನಮ್, ಕರ್ಮ ಚಾನೇಕಪ್ರಕಾರಮ್ । ಯಯೋರ್ವಿಕಲ್ಪಸಮುಚ್ಚಯಾನುಷ್ಠಾನಾದ್ ದಕ್ಷಿಣೋತ್ತರಾಭ್ಯಾಂ ಸೃತಿಭ್ಯಾಮ್ ಆವೃತ್ತ್ಯನಾವೃತ್ತೀ ಭವತಃ । ಅತ ಊರ್ಧ್ವಂ ಫಲಂ ನಿರಪೇಕ್ಷಜ್ಞಾನಕರ್ಮಸಮುಚ್ಚಯಾನುಷ್ಠಾನಾತ್ ಕೃತಾತ್ಮಸಂಸ್ಕಾರಸ್ಯ ಉಚ್ಛಿನ್ನಾತ್ಮಜ್ಞಾನಪ್ರತಿಬನ್ಧಕಸ್ಯ ದ್ವೈತವಿಷಯದೋಷದರ್ಶಿನೋ ನಿರ್ಜ್ಞಾತಾಶೇಷಬಾಹ್ಯವಿಷಯತ್ವಾತ್ ಸಂಸಾರಬೀಜಮುಚ್ಚಿಚ್ಚಿತ್ಸತಃ ಪ್ರತ್ಯಗಾತ್ಮವಿಷಯಜಿಜ್ಞಾಸೋಃ "ಕೇನೇಷಿತಮ್" ಇತ್ಯಾತ್ಮಸ್ವರೂಪತತ್ತ್ವವಿಜ್ಞಾನಾಯ ಅಯಮಧ್ಯಾಯ ಆರಭ್ಯತೇ । ತೇನ ಚ ಮೃತ್ಯುಪದಮಜ್ಞಾನಮುಚ್ಛೇತ್ತವ್ಯಂ ತತ್ತನ್ಮೂಲೋ ಹಿ ಸಂಸಾರೋ ಯತಃ । ಅನಧಿಗತತ್ವಾದಾತ್ಮನೋ ಯುಕ್ತಾ ತದಧಿಗಮಾಯ ತದ್ವಿಷಯಾ ಜಿಜ್ಞಾಸಾ ॥

(ಭಾಷ್ಯಾರ್ಥ)

ಕರ್ಮಕ್ಕೆ ಆತ್ಮಭೂತನಾಗಿರುವ ಪ್ರಾಣನ ವಿಷಯವಾದ ಉಪಾಸನೆಯೂ ಬಹುಪ್ರಕಾರವಾದ ಕರ್ಮವೂ ಮುಗಿಯಿತು. ಇವೆರಡನ್ನೂ ಬಿಡಿಸಿ ಮತ್ತು ಒಟ್ಟುಗೂಡಿಸಿಕೊಂಡು ಅನುಷ್ಠಾನಮಾಡುವದರಿಂದ ದಕ್ಷಿಣ ಮತ್ತು ಉತ್ತರ ಮಾರ್ಗಗಳಿಂದ ಹೋಗಿಬರುವದೂ ಹಿಂತೆರಳದಿರುವದೂ ಆಗುತ್ತವೆ. ಇನ್ನು ಮೇಲೆ ಫಲವನ್ನು ಬಯಸದೆ ಜ್ಞಾನಕರ್ಮಗಳೆರಡನ್ನೂ ಒಟ್ಟುಗೂಡಿಸಿ ಅನುಷ್ಠಾನಮಾಡಿದರಿಂದ ಆತ್ಮಸಂಸ್ಕಾರವನ್ನು ಹೊಂದಿ ಆತ್ಮಜ್ಞಾನದ ಅಡ್ಡಿಯನ್ನು ನಾಶಮಾಡಿಕೊಂಡು ದ್ವೈತದ ವಿಷಯದ ದೋಷಗಳನ್ನು ಕಂಡುಕೊಂಡು ಹೊರಗಿನ ವಿಷಯಗಳನ್ನೆಲ್ಲ ಸಂಪೂರ್ಣವಾಗಿ ಅರಿತುಕೊಂಡಿರುವದರಿಂದ ಸಂಸಾರಬೀಜವನ್ನು ನಾಶಮಾಡಬೇಕೆಂಬಿಚ್ಛೆಯಿಂದ ಪ್ರತ್ಯಗಾತ್ಮನೆಂಬ ವಿಷಯವನ್ನು ತಿಳಿಯಬೇಕೆಂದು ಬಯಸುತ್ತಿರುವಾತನಿಗೆ ಆತ್ಮಸ್ವರೂಪದ ತಿಳಿವಳಿಕೆಗಾಗಿ 'ಕೇನೇಷಿತಮ್' ಎಂಬ ಈ ಅಧ್ಯಾಯವನ್ನು ಪ್ರಾರಂಭಿಸಿರುತ್ತದೆ. ಅದರಿಂದ ಮೃತ್ಯುವಿಗೆ ಕಾರಣವಾಗಿರುವ ಅಜ್ಞಾನವನ್ನು ನಾಶ

ಮಾಡಿಕೊಳ್ಳಬೇಕಾಗಿರುತ್ತದೆ; ಏಕೆಂದರೆ ಸಂಸಾರವು ಆ (ಅಜ್ಞಾನಕ್ಕೆ) ಅಧೀನವಾಗಿರುತ್ತದೆ. ಆತ್ಮನನ್ನು (ಇನ್ನೂ) ಅರಿತುಕೊಳ್ಳದೆ ಇರುವದರಿಂದ ಅವನನ್ನು ಅರಿತುಕೊಳ್ಳುವದಕ್ಕಾಗಿ ಇಚ್ಛಿಸುವದು ಯುಕ್ತವಾಗಿರುತ್ತದೆ.

ಕರ್ಮಕ್ಕೂ ಜ್ಞಾನಕ್ಕೂ ವಿರೋಧ

(ಭಾಷ್ಯ)

೯೧. ಕರ್ಮವಿಷಯೇ ಚಾನುಕ್ತಿಸ್ತದ್ವಿರೋಧಿತ್ವಾತ್ । ಅಸ್ಯ ವಿಜಿಜ್ಞಾಸಿತವ್ಯಸ್ಯ ಆತ್ಮತತ್ತ್ವಸ್ಯ ಕರ್ಮವಿಷಯೇಽವಚನಮ್ । ಕಸ್ಮಾದಿತಿ ಚೇತ್ । ಆತ್ಮನೋ ಹಿ ಯಥಾವದ್ ವಿಜ್ಞಾನಂ ಕರ್ಮಣಾ ವಿರುಧ್ಯತೇ । ನಿರತಿಶಯಬ್ರಹ್ಮಸ್ವರೂಪೋ ಹ್ಯಾತ್ಮಾ ವಿಜಿಜ್ಞಾಪಯಿಷಿತಃ । “ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮ್ .....” (೧-೪) ಇತ್ಯಾದಿಶ್ರುತೇಃ । ನ ಹಿ ಸ್ವಾರಾಜ್ಯೇಽಭಿಷಿಕ್ತೋ ಬ್ರಹ್ಮತ್ವಂ ಗಮಿತಃ ಕಞ್ಚನ ನಮಿತುಮಿಚ್ಛತಿ * । ಅತೋ ಬ್ರಹ್ಮಾಸ್ಮೀತಿ ಸಮ್ಬುದ್ಧೋ ನ ಕರ್ಮ ಕಾರಯಿತುಂ ಶಕ್ಯತೇ । ನ ಹ್ಯಾತ್ಮಾನಮ್ ಅವಾಪ್ತಾರ್ಥಂ ಬ್ರಹ್ಮ ಮನ್ಯಮಾನಃ ಪ್ರವೃತ್ತಿಂ ಪ್ರಯೋಜನವತೀಂ ಪಶ್ಯತಿ । ನ ಚ ನಿಷ್ಪ್ರಯೋಜನಾ ಪ್ರವೃತ್ತಿಃ । ಅತೋ ವಿರುಧ್ಯತ ಏವ ಕರ್ಮಣಾ ಜ್ಞಾನಮ್ । ಅತಃ ಕರ್ಮವಿಷಯೇಽನುಕ್ತಿಃ । ವಿಜ್ಞಾನವಿಶೇಷವಿಷಯೈವ ಜಿಜ್ಞಾಸಾ ॥

(ಭಾಷ್ಯಾರ್ಥ)

ಕರ್ಮವಿಷಯದಲ್ಲಿ (ಇದನ್ನು) ಹೇಳದೆ ಇರುವದೇಕೆಂದರೆ ಅದಕ್ಕೆ ವಿರುದ್ಧವಾಗಿರುವದರಿಂದ. (ಇಲ್ಲಿ) ಅರಿತುಕೊಳ್ಳಬೇಕೆಂದು ಬಯಸುವ ಆತ್ಮತತ್ತ್ವವನ್ನು ಕರ್ಮವಿಷಯದಲ್ಲಿ ಹೇಳಿರುವದಿಲ್ಲ. ಏತಕ್ಕೆಂದರೆ ಆತ್ಮನ ಯಥಾರ್ಥಜ್ಞಾನವು ಕರ್ಮಕ್ಕೆ ವಿರುದ್ಧವಾಗಿರುತ್ತದೆ. ಮಿಗಿಲಿಲ್ಲದ ಬ್ರಹ್ಮದ ಸ್ವರೂಪನಾಗಿರುವನೆಂದಲ್ಲವೆ, ಆತ್ಮನನ್ನು (ಇಲ್ಲಿ) ತಿಳಿಸಿಕೊಡಬೇಕೆಂದಿರುವದು? “ಅದನ್ನೇ ಬ್ರಹ್ಮವೆಂದು ತಿಳಿ, (ಇದು ಎಂದು ಉಪಾಸನೆಮಾಡುವ) ಇದಲ್ಲ” (೧-೪) ಎಂದು ಮುಂತಾಗಿರುವ ಶ್ರುತಿಯು ಇದಕ್ಕೆ ಪ್ರಮಾಣವು. ಸ್ವಾರಾಜ್ಯದಲ್ಲಿ ಅಭಿಷಿಕ್ತನಾಗಿ ಬ್ರಹ್ಮವನ್ನು ಪಡೆದಿರುವಾತನು ಯಾರಿಗೂ ತಲೆಬಾಗುವದಕ್ಕೆ ಇಚ್ಛಿಸುವದಿಲ್ಲವಷ್ಟೆ. ಆದ್ದರಿಂದ ‘ಬ್ರಹ್ಮವಾಗಿರುವೆನು’ ಎಂದು ಚೆನ್ನಾಗಿ ತಿಳಿದುಕೊಂಡಿರುವಾತನನ್ನು ಕರ್ಮವನ್ನು ಮಾಡಿಸುವದು ಆಗಲಾರದು. ತಾನು ಪಡೆಯಬೇಕಾದದ್ದೆಲ್ಲವನ್ನೂ ಪಡೆದುಕೊಂಡಿರುವ ಬ್ರಹ್ಮವೆಂದು ಭಾವಿಸಿಕೊಂಡಿರುವಾತನು (ಕರ್ಮದಲ್ಲಿ) ಪ್ರವೃತ್ತಿಯು

---

* ಹೀಗೆ ಗುರುತುಮಾಡಿರುವ ರೂಪಗಳು ವ್ಯಾಕರಣಕ್ಕೆ ಸಮ್ಮತವಲ್ಲ.

ಪ್ರಯೋಜನವುಳ್ಳದ್ದೆಂದು ತಿಳಿಯಲಾರನಷ್ಟೆ. ಯಾವ ಪ್ರಯೋಜನವಿಲ್ಲದೆ ಪ್ರವೃತ್ತಿಯೂ ಆಗುವದಿಲ್ಲ. ಆದ್ದರಿಂದ ಕರ್ಮವು ಜ್ಞಾನಕ್ಕೆ ವಿರುದ್ಧವೇ. ಆದ್ದರಿಂದ ಕರ್ಮ ವಿಷಯದಲ್ಲಿ (ಆತ್ಮತತ್ತ್ವವನ್ನು) ಹೇಳಲಿಲ್ಲ. (ಇಲ್ಲಿ) ಈ ವಿಶೇಷವಾದ ತಿಳಿವಳಿಕೆಗಾಗಿಯೇ ಜಿಜ್ಞಾಸೆಯುಂಟಾಗುತ್ತದೆ.

ಕರ್ಮಜ್ಞಾನವು ಸಂಸ್ಕಾರಾರ್ಥವಾಗಿರಬೇಕು

(ಭಾಷ್ಯ)

೯೨. ಕರ್ಮಾನಾರಭ್ಯ ಇತಿ ಚೇತ್ । ನ । ನಿಷ್ಕಾಮಸ್ಯ ಸಂಸ್ಕಾರಾರ್ಥತ್ವಾತ್ । ಯದಿ ಹಿ ಆತ್ಮವಿಜ್ಞಾನೇನ ಆತ್ಮಾವಿದ್ಯಾವಿಷಯತ್ವಾತ್ಪರಿತಿತ್ಯಾಜಯಿಷಿತಂ ಕರ್ಮ ತತಃ “ ಪ್ರಕ್ಷಾಲನಾದ್ಧಿ ಪಙ್ಕಸ್ಯ ದೂರಾದಸ್ಪರ್ಶನಂ ವರಮ್ ” (?) ಇತ್ಯನಾರಭ್ಯ ಏವ ಕರ್ಮಣಃ ಶ್ರೇಯಾರ್ಥ, ಅಲ್ಪಫಲತ್ವಾತ್, ಆಯಾಸಬಹುಲತ್ವಾತ್, ತತ್ತ್ವಜ್ಞಾನಾದೇವ ಚ ಶ್ರೇಯಃಪ್ರಾಪ್ತೇಃ—ಇತಿ ಚೇತ್ । ಸತ್ಯಮೇತತ್ । ಅವಿದ್ಯಾವಿಷಯಂ ಕರ್ಮ ಅಲ್ಪಫಲತ್ವಾದಿದೋಷವದ್ ಬನ್ಧರೂಪಂ ಚ ಸಕಾಮಸ್ಯ । “ ಕಾರ್ಮಾ ಯಃ ಕಾಮಯತೇ ” (ಮು. ೩-೨-೨), “ ಇತಿ ನು ಕ್ರತುಮಯಮಾನಃ ” (ಬೃ. ೪-೪-೬) ಇತ್ಯಾದಿಶ್ರುತಿಭ್ಯಃ । ನ ನಿಷ್ಕಾಮಸ್ಯ । ತಸ್ಯ ತು ಸಂಸ್ಕಾರಾರ್ಥಾನ್ಯೇವ ಕರ್ಮಾಣಿ ಭವನ್ತಿ ತನ್ನಿರ್ವರ್ತಕಾಶ್ರಯಪ್ರಾಣವಿಜ್ಞಾನಸಹಿತಾನಿ । “ ದೇವಯಾಜೀ ಶ್ರೇಯಾನಾತ್ಮಯಾಜೀ ವಾ ” ಇತ್ಯುಪಕ್ರಮ್ಯ ಆತ್ಮಯಾಜೀ ತು ಕರೋತಿ “ ಇದಂ ಮೇಽನೇನಾಙ್ಗಂ ಸಂಸ್ಕ್ರಿಯತೇ ” (ಶತ.) ಇತಿ ಸಂಸ್ಕಾರಾರ್ಥಮೇವ ಕರ್ಮಾಣೀತಿ **ವಾಜಸನೇಯಕೇ** । “ ಮಹಾಯಜ್ಞೈಶ್ಚ ಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನುಃ ” (ಮನು. ೨-೨೮) “ ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ॥” (ಗೀ. ೧೮-೫) ಇತ್ಯಾದಿ ಸ್ಮೃತೇಶ್ಚ । ಪ್ರಾಣಾದಿವಿಜ್ಞಾನಂ ಚ ಕೇವಲಂ ಕರ್ಮಸಮುಚ್ಚಿತಂ ವಾ ಸಕಾಮಸ್ಯ ಪ್ರಾಣಾತ್ಮಪ್ರಾಪ್ತ್ಯರ್ಥಮೇವ ಭವತಿ । ನಿಷ್ಕಾಮಸ್ಯ ತು ಆತ್ಮಜ್ಞಾನಪ್ರತಿಬನ್ಧನಿರ್ಮಾಷ್ಟ್ಯರ್ಥಂ ಭವತಿ । ಆದರ್ಶನಿರ್ಮಾರ್ಜನವತ್ ॥

(ಭಾಷ್ಯಾರ್ಥ)

(ಶಂಕೆ):—(ಹಾಗಾದರೆ) ಕರ್ಮವನ್ನು ಮಾಡಬಾರದೆಂದೇ (ಆಯಿತು), ಎಂದರೆ ಹಾಗಲ್ಲ. ಏಕೆಂದರೆ ನಿಷ್ಕಾಮನಿಗೆ (ಅದು) ಸಂಸ್ಕಾರವನ್ನುಂಟುಮಾಡುತ್ತದೆ.

(ಶಂಕೆಯ ವಿವರ).—ಕರ್ಮವು ಆತ್ಮಾವಿದ್ಯೆಯ ವಿಷಯವಾಗಿರುವದರಿಂದ ಆತ್ಮಜ್ಞಾನದಿಂದ ಅದನ್ನು ಬಿಡಿಸಬೇಕೆಂಬುದೇ (ಶ್ರುತಿಯ) ಇಷ್ಟವಾಗಿದ್ದರೆ ಆಗ “ ಕೆಸರನ್ನು ತೊಳೆದುಕೊಳ್ಳದೆ ಇರುವದಕ್ಕಿಂತ ದೂರದಿಂದ ಅದನ್ನು ಮುಟ್ಟದಿರು

ವದೇ ಮೇಲು "[1] ಎಂಬಂತೆ ಕರ್ಮವನ್ನು ಮಾಡದೆ ಇರುವದೇ ಮೇಲೆಂದಾಗುತ್ತದೆ. ಏಕೆಂದರೆ ಅದರ ಫಲವು ಅಲ್ಪವಾಗಿರುತ್ತದೆ, ಆಯಾಸವು ಬಹಳವಾಗಿರುತ್ತದೆ, ತತ್ತ್ವಜ್ಞಾನದಿಂದಲೇ ಮುಕ್ತಿಯು ದೊರಕುತ್ತದೆ. ಅಲ್ಲವೆ?

(ಪರಿಹಾರದ ವಿವರ):—ಇದು ನಿಜವೇ. ಅವಿದ್ಯಾವಿಷಯವಾಗಿರುವ ಕರ್ಮವು ಅಲ್ಪಫಲವೇ ಮುಂತಾದ ದೋಷಗಳುಳ್ಳದ್ದೂ, ಸಕಾಮನಿಗೆ ಬಂಧಕವಾದದ್ದೂ ಆಗಿರುತ್ತದೆ. "ಯಾವನು ಕಾಮುಗಳನ್ನು ಬಯಸುವನೋ (ಅವನು ಅಲ್ಲಲ್ಲಿ ಜನಿಸುವನು)" (ಮು. ೩-೨-೨), "ಇದು ಕಾಮವುಳ್ಳವನ ವಿಷಯವು" (ಬೃ. ೪-೪-೬) ಮುಂತಾದ ಶ್ರುತಿಗಳು ಇದಕ್ಕೆ ಪ್ರಮಾಣವು. (ಆದರೆ) ನಿಷ್ಕಾಮನಿಗೆ (ಇದು) ಬಂಧಕವಲ್ಲ. ಅವನಿಗಾದರೆ ಕರ್ಮಗಳು ತಮ್ಮನ್ನು ಮಾಡುವದಕ್ಕೆ ಆಶ್ರಯನಾಗಿರುವ ಪ್ರಾಣನ ಉಪಾಸನೆಯೊಡಗೂಡಿದರೆ ಸಂಸ್ಕಾರವೆಂಬ ಪ್ರಯೋಜನವುಳ್ಳವೇ ಆಗಿರುತ್ತವೆ. "ದೇವಯಾಜಿಯು ಹೆಚ್ಚೊ, ಆತ್ಮಯಾಜಿಯೊ?" ಎಂದು ಉಪಕ್ರಮಿಸಿ ಆತ್ಮಯಾಜಿಯು "ನನ್ನ ಈ ಅಂಗವು ಸಂಸ್ಕಾರವಾಗುವದು" ಎಂದು ಕರ್ಮವನ್ನು ಮಾಡುತ್ತಾನೆಂಬುದಾಗಿ ಕರ್ಮಗಳು ಸಂಸ್ಕಾರಕ್ಕಾಗಿಯೇ ಎಂದು **ವಾಜಸನೇಯಕ**ದಲ್ಲಿ ಹೇಳಿರುತ್ತದೆ. "ಮಹಾಯಜ್ಞಗಳಿಂದಲೂ ಯಜ್ಞಗಳಿಂದಲೂ ಈ ಶರೀರವು ಬ್ರಾಹ್ಮಶರೀರವಾಗುವದು" (ಗೀ. ೧೮-೫) ಎಂದು ಮುಂತಾಗಿ **ಸ್ಮೃತಿ**ಯೂ ಹೇಳುತ್ತದೆ "ಪ್ರಾಣನೇ ಮುಂತಾದವುಗಳ ಉಪಾಸನೆಯು ಅದನ್ನೊಂದನ್ನೇ (ಮಾಡಲಿ) ಕರ್ಮದೊಡಗೂಡಿಸಿಕೊಂಡು (ಮಾಡಲಿ) ಪ್ರಾಣಸ್ವರೂಪವನ್ನು ಪಡೆಯುವದೆಂಬ ಫಲವನ್ನೇ ಕೊಡುತ್ತದೆ. ನಿಷ್ಕಾಮನಿಗಾದರೋ ಆತ್ಮಜ್ಞಾನಕ್ಕಿರುವ ಅಡ್ಡಿಯನ್ನು ತೊಳೆಯುವದಕ್ಕೆ ಉಪಯೋಗವಾಗುತ್ತದೆ; ಕನ್ನಡಿಯನ್ನು ತೊಳೆಯುವಂತೆ (ಅದು ಅಡ್ಡಿಯನ್ನು ತೊಳೆಯುವದು).

ಜ್ಞಾನಿಗೆ ಕರ್ಮವು ಬೇಕಿರುವದಿಲ್ಲ

(ಭಾಷ್ಯ)

೯೩. ಉತ್ಪನ್ನಾತ್ಮವಿದ್ಯಸ್ಯ ತು ಅನಾರಬ್ಧಃ। ನಿರರ್ಥಕತ್ವಾತ್। "ಕರ್ಮಣಾ ಬಧ್ಯತೇ ಜನ್ತುರ್ವಿದ್ಯಯಾ ಚ ವಿಮುಚ್ಯತೇ। ತಸ್ಮಾತ್ ಕರ್ಮ ನ ಕುರ್ವನ್ತಿ ಯತಯಃ ಪಾರದರ್ಶಿನಃ॥" (ಮೋ. ಧ. ೨೪೧-೭), "ಕ್ರಿಯಾಪಥಶ್ಚೈವ ಪುರಸ್ತಾತ್

---

1. ಇದು ಎಲ್ಲಿಯ ಶ್ಲೋಕವೋ ತಿಳಿಯದು. "ಪ್ರಕ್ಷಾಲನಾದ್ಧಿ ಪಙ್ಕಸ್ಯ ಶ್ರೇಯೋ ನ ಸ್ಪರ್ಶನಂ ನೃಣಾಮ್" (ವನ. ೨-೪೯) ಎಂಬ ಪಾಠವು **ಭಾರತ**ದಲ್ಲಿದೆ.

2. ಶತಪಥಬ್ರಾಹ್ಮಣದಲ್ಲಿ ಈ ವಾಕ್ಯವು ಯಾವ ರೂಪದಲ್ಲಿದೆ ಎಂಬುದು ತಿಳಿಯದು; ಬೃ. ಭಾ. ೩-೩ರಲ್ಲಿಯೂ ೪-೪-೨೧ರಲ್ಲಿಯೂ ಇದನ್ನು ಉದಾಹರಿಸಿದೆ.

ಸಂನ್ಯಾಸಶ್ಚ, ತಯೋಃ ಸಂನ್ಯಾಸ ಏವಾತ್ಯರೇಚಯತ್" (?), "ತ್ಯಾಗೇನೈಕೇ" (ತೈ. ನಾ. ೨೮), "ನಾನ್ಯಃ ಪನ್ಥಾ ವಿದ್ಯತೇ" (ಶ್ವೇ. ೩-೮) ಇತ್ಯಾದಿಶ್ರುತಿಭ್ಯಶ್ಚ। ನ್ಯಾಯಾಚ್ಚ। ಉಪಾಯಭೂತಾನಿ ಹಿ ಕರ್ಮಾಣಿ ಸಂಸ್ಕಾರದ್ವಾರೇಣ ಜ್ಞಾನಸ್ಯ। ಜ್ಞಾನೇನ ತ್ವಮೃತತ್ವಪ್ರಾಪ್ತಿಃ। "ಅಮೃತತ್ವಂ ಹಿ ವಿನ್ದತೇ" (೨-೪), "ವಿದ್ಯಯಾ ವಿನ್ದತೇಽಮೃತಮ್" (೨-೪)–ಇತ್ಯಾದಿಶ್ರುತಿಸ್ಮೃತಿಭ್ಯಶ್ಚ (?) ನ ಹಿ ನದ್ಯಾಃ ಪಾರಗೋ ನಾವಂ ನ ಮುಞ್ಚತಿ ಯಥೇಷ್ಟದೇಶಗಮನಂ ಪ್ರತಿ ಸ್ವಾತನ್ತ್ರ್ಯೇ ಸತಿ। ನ ಹಿ ಸ್ವಭಾವಸಿದ್ಧಂ ವಸ್ತು ಸಿಷಾಧಯಿಷತಿ ಸಾಧನೈಃ। ಸ್ವಭಾವಸಿದ್ಧತ್ವಾತ್ಕ್ರಿಯಾ। ತಥಾ* ನಾಪಿಪಯಿಷಿತಃ (?)। ಆತ್ಮತ್ವೇ ಸತಿ ನಿತ್ಯಾಪ್ತತ್ವಾತ್। ನಾಪಿ * ವಿಚಿಕಾರಯಿಷಿತಃ। ಆತ್ಮತ್ವೇ ಸತಿ ನಿತ್ಯತ್ವಾತ್, ಅವಿಷಯತ್ವಾತ್, ಅಮೂರ್ತತ್ವಾಚ್ಚ। ಶ್ರುತೇಶ್ಚ "ನ ವರ್ಧತೇ ಕರ್ಮಣಾ" (ಬೃ. ೪-೪-೨೩) ಇತ್ಯಾದಿ। ಸ್ಮೃತೇಶ್ಚ "ಅವಿಕಾರ್ಯೋಽಯಮುಚ್ಯತೇ" (ಗೀ. ೨-೨೫) ಇತಿ। ನ ಚ * ಸಞ್ಚಿಕೀರ್ಷಿತಃ। "ಶುದ್ಧಮಪಾಪವಿದ್ಧಮ್" (ಈ. ೮) ಇತ್ಯಾದಿಶ್ರುತಿಭ್ಯಃ। ಅನನ್ಯತ್ವಾಚ್ಚ। ಅನ್ಯೇನಾನ್ಯತ್ ಸಂಸ್ಕ್ರಿಯತೇ। ನ ಚಾತ್ಮನೋಽನ್ಯಭೂತಾ ಕ್ರಿಯಾ ಅಸ್ತಿ। ನ ಚ ಸ್ವೇನೈವಾತ್ಮನಾ ಸ್ವಮಾತ್ಮಾನಂ ಸಞ್ಚಿಕೀರ್ಷೇತ್। ನ ಚ ವಸ್ತ್ವನ್ತರಾಧಾನಂ ನಿತ್ಯ (?) ಪ್ರಾಪ್ತಿರ್ವಾ ವಸ್ತ್ವನ್ತರಸ್ಯ ನಿತ್ಯಾ। ನಿತ್ಯತ್ವಂ ಚೇಷ್ಟಂ ಮೋಕ್ಷಸ್ಯ। ಅತ ಉತ್ಪನ್ನವಿದ್ಯಸ್ಯ ಕರ್ಮಾರಮ್ಭೋಽನುಪಪನ್ನಃ॥

(ಭಾಷ್ಯಾರ್ಥ)

ಆತ್ಮಜ್ಞಾನವುಂಟಾದವನಿಗೆ ಮಾತ್ರ ಕರ್ಮವನ್ನು ಮಾಡಬೇಕಾದದ್ದಿರುವದಿಲ್ಲ, ಏಕೆಂದರೆ (ಅವನಿಗೆ ಅವುಗಳಿಂದ) ಯಾವ ಪ್ರಯೋಜನವೂ ಇರುವದಿಲ್ಲ. "ಜೀವನು ಕರ್ಮದಿಂದ ಬದ್ಧನಾಗುತ್ತಾನೆ, ಮತ್ತು ವಿದ್ಯೆಯಿಂದ ಮುಕ್ತನಾಗುತ್ತಾನೆ; ಆದ್ದರಿಂದ ಪಾರವನ್ನು ಕಂಡ ಯತಿಗಳು ಕರ್ಮವನ್ನು ಮಾಡುವದಿಲ್ಲ[2]" (ಮೋ. ದ. ೨೪೧-೭) ಎಂದು (ಸ್ಮೃತಿ ಇದೆ)[1]. "ಕ್ರಿಯೆಯ ಹಾದಿಯೇ ಮೊದಲನೆಯದು, ಸಂನ್ಯಾಸವೂ (ಎರಡನೆಯದು), ಅವೆರಡರಲ್ಲಿ ಸಂನ್ಯಾಸವೇ ಹೆಚ್ಚಿನದು"[2] (?) ಎಂದು, "ತ್ಯಾಗದಿಂದಲೇ ಕೆಲವರು ಅಮೃತತ್ವವನ್ನು ಪಡೆದರು" (ತೈ. ನಾ. ೨೮) "(ಅದನ್ನು ಪಡೆಯುವದಕ್ಕೆ) ಬೇರೆ ಯಾವ ಹಾದಿಯೂ ಇಲ್ಲ" (ಶ್ವೇ. ೩-೮)–ಎಂದು ಮುಂತಾದ ಶ್ರುತಿಗಳೂ ಇದಕ್ಕೆ ಪ್ರಮಾಣವು.

---

1. ಸ್ಮೃತಿಯನ್ನು ಮೊದಲು ಉದಾಹರಿಸಿ ಬಳಿಕ ಶ್ರುತಿಯನ್ನು ಏಕೆ ಉದಾಹರಿಸಿದೆಯೋ ತಿಳಿಯದು.

2, ಈ ಶ್ರುತಿಯನ್ನು ಈಶಾವಾಸ್ಯ ಭಾ. ೨ರಲ್ಲಿ ಉದಾಹರಿಸುವದನ್ನು ಇದಕ್ಕೆ ಹೋಲಿಸಿರಿ.

ಯುಕ್ತಿಯೂ (ಇದಕ್ಕೆ ಬೆಂಬಲವಾಗಿ)ರುತ್ತದೆ. ಹೇಗೆಂದರೆ: ಕರ್ಮಗಳು ಸಂಸ್ಕಾರವನ್ನುಂಟುಮಾಡುವ ಮೂಲಕ ಜ್ಞಾನಕ್ಕೆ ಸಾಧನವಾಗಿರುತ್ತವೆ; ಜ್ಞಾನ ದಿಂದಲಾದರೆ ಅಮೃತತ್ವವೇ ದೊರಕುತ್ತದೆ. "ಏಕೆಂದರೆ ಅಮೃತತ್ವವನ್ನು ಪಡೆದು ಕೊಳ್ಳುತ್ತಾನೆ" (೨-೪), "ವಿದ್ಯೆಯಿಂದ ಅಮೃತವನ್ನು ಪಡೆಯುತ್ತಾನೆ" (೨-೪) ಎಂದು ಮುಂತಾಗಿ ಶ್ರುತಿಸ್ಮೃತಿಗಳಿವೆ.[1] ನದಿಯ ದಡವನ್ನು ಸೇರಿದವನು ತನಗೆ ಇಷ್ಟವಾದ ಸ್ಥಲಕ್ಕೆ ಹೋಗುವ ಸ್ವಾತಂತ್ರ್ಯವಿರುವಾಗ ದೋಣಿಯನ್ನು ಬಿಡುವದಿಲ್ಲ ವೆನ್ನಲಾಗುವದೇ ಇಲ್ಲ. ಸ್ವಭಾವಸಿದ್ಧವಾದ[2] ವಸ್ತುವನ್ನು (ಯಾವನೂ) ಸಾಧನ ಗಳಿಂದ ಸಂಪಾದಿಸುವದಕ್ಕೆ ಇಚ್ಛಿಸುವದಿಲ್ಲವಲ್ಲವೆ? ಆತ್ಮನು ಸ್ವಭಾವಸಿದ್ಧನೇ (ಆಗಿರುತ್ತಾನೆ). ಇದರಂತೆ (ಆತ್ಮನು) ಪಡೆಯಲಿಕ್ಕೆ ಇಚ್ಛಿಸಬೇಕಾದವನೂ ಅಲ್ಲ;[3] ಏಕೆಂದರೆ ಆತ್ಮನೇ ಆಗಿರುವದರಿಂದ (ಅವನು) ಎಂದೆಂದಿಗೂ ಪಡೆಯಲ್ಪಟ್ಟವನೇ (ಆಗಿರುತ್ತಾನೆ). ವಿಕಾರಪಡಿಸುವದಕ್ಕೆ ಇಚ್ಛಿಸಬೇಕಾದವನೂ ಅಲ್ಲ; ಏಕೆಂದರೆ ಆತ್ಮನಾಗಿರುವದರಿಂದ ನಿತ್ಯನಾಗಿರುತ್ತಾನೆ, ವಿಕಾರವಾಗದವನೂ ಆಗಿರುತ್ತಾನೆ, (ಯಾವದಕ್ಕೂ) ವಿಷಯವಲ್ಲದವನೂ ಆಗಿರುತ್ತಾನೆ, ಮೂರ್ತದ್ರವ್ಯವಲ್ಲದವನೂ ಆಗಿರುತ್ತಾನೆ. "ಕರ್ಮದಿಂದ ಹೆಚ್ಚುವದಿಲ್ಲ" (ಬೃ. ೪-೪-೨೩) ಎಂಬ ಶ್ರುತಿ ಯಿಂದಲೂ "ಇವನು ಯಾವ ವಿಕಾರವೂ ಇಲ್ಲದವನೆನಿಸಿರುವನು" (ಗೀ. ೨-೨೫) ಎಂಬ ಸ್ಮೃತಿಯಿಂದಲೂ (ಹೀಗೆಂದು ನಿಶ್ಚಯಿಸಬೇಕು). ಸಂಸ್ಕಾರಮಾಡಬೇಕೆಂದು ಇಚ್ಛಿಸಬೇಕಾದವನೂ ಅಲ್ಲ; ಏಕೆಂದರೆ "ಶುದ್ಧನು, ಪಾಪದ ಹೊಡೆತವಿಲ್ಲದವನು" (ಈ. ೮) ಎಂಬುದೇ ಮುಂತಾದ ಶ್ರುತಿಗಳಿವೆ. (ತನಗಿಂತ) ಬೇರೆಯಲ್ಲವಾದ್ದ ರಿಂದಲೂ (ಸಂಸ್ಕಾರ್ಯನಲ್ಲ); ಬೇರೆಯಾದ(ದ್ದರಿಂದ) ಬೇರೆಯಾದದ್ದು ಸಂಸ್ಕಾರ ವನ್ನು ಹೊಂದುತ್ತದೆ. ಆತ್ಮನಿಗಿಂಸ ಬೇರೆಯಾದ ಕರ್ಮವೇ ಇಲ್ಲ; ಹಾಗಿಲ್ಲದೆ ಆತ್ಮನು ತನ್ನಿಂದಲೇ ತನ್ನನ್ನು ಎಂದರೆ ಆತ್ಮನನ್ನು ಸಂಸ್ಕಾರವನ್ನು ಮಾಡಲು ಇಚ್ಛಿಸುವನೆಂಬುದೂ ಸರಿಯಲ್ಲ. ಮತ್ತೊಂದು ವಸ್ತುವನ್ನು ಮೇಲಿಡುವದಾಗಲಿ

---

1. ಇಲ್ಲಿ ಸ್ಮೃತಿಗಳನ್ನು ಉದಾಹರಿಸಿಯೇ ಇಲ್ಲ. "ಸ್ಮೃತಿ" ಎಂಬ ಮಾತು ಬರೆದವರ ಕೈತಪ್ಪಿನಿಂದ ಬಿದ್ದಿರಲೂಬಹುದು.

2. ಆಪ್ತಿ, ಸಂಸ್ಕಾರ–ಮುಂತಾದವು ಆತ್ಮನ ಧರ್ಮಗಳಲ್ಲವೆಂಬುದು ಪ್ರಸ್ಥಾನತ್ರಯ ಭಾಷ್ಯದಲ್ಲಿ ಅನೇಕವೇಳೆ ಬಂದಿದೆಯಾದರೂ ಇಲ್ಲಿ ದಡಕ್ಕನೆ ಬಂದಂತೆ ಕಾಣುತ್ತದೆ.

3. ಆಪಿಪಯಿಷಿತಃ, ವಿಚಿಕಾರಯಿಷಿತಃ–ಮುಂತಾದ ಪುಲ್ಲಿಂಗಗಳು ಹಿಂದಿನ ವಾಕ್ಯ ದಲ್ಲಿರುವ 'ವಸ್ತು' ಶಬ್ದಕ್ಕೆ ಹೊಂದುವಂತೆ ಇಲ್ಲ. ಆದ್ದರಿಂದ ಅಧ್ಯಾಹಾರಮಾಡಿಕೊಂಡು ಕನ್ನಡಿಸಿದೆ.

ಮತ್ತೊಂದು ವಸ್ತುವಿನ ಪ್ರಾಪ್ತಿ[1]ಯಾಗಲಿ ನಿತ್ಯವಾಗಲಾರದು. ಆದರೆ ಮೋಕ್ಷವು ನಿತ್ಯವೆಂಬುದು (ವಾದಿಗಳಿಗೆಲ್ಲ) ಬೇಕಾದದ್ದು. ಆದ್ದರಿಂದ ಜ್ಞಾನವುಂಟಾದವನಿಗೆ ಕರ್ಮವನ್ನು ಮಾಡುವದೆಂಬುದು ಹೊಂದುವದಿಲ್ಲ.

(ಭಾಷ್ಯ)

೯ಳ. ಅತೋ ವ್ಯಾವೃತ್ತಬಾಹ್ಯಬುದ್ಧೇರಾತ್ಮವಿಜ್ಞಾನಾಯ "ಕೇನೇಷಿತಮ್" ಇತ್ಯಾದ್ಯಾರಭ್ಯತೇ ॥

(ಭಾಷ್ಯಾರ್ಥ)

ಆದ್ದರಿಂದ ಹೊರಗಿನ (ವಿಷಯಗಳಿಂದ) ಬುದ್ಧಿಯು (ಯಾವನಿಗೆ) ಹಿಂತಿರುಗಿರುವದೋ (ಅವನಿಗೆ) ಆತ್ಮನ ತಿಳಿವಳಿಕೆಯನ್ನುಂಟುಮಾಡುವದಕ್ಕಾಗಿ " ಕೇನೇಷಿತಮ್ " ಮುಂತಾದ (ಉಪನಿಷತ್ತು) ಪ್ರಾರಂಭವಾಗಿರುತ್ತದೆ.



1. " ನಿತ್ಯಪ್ರಾಪ್ತಿಃ '' ಎಂಬಲ್ಲಿ ' ನಿತ್ಯ ' ಎಂಬ ಮಾತು ಬರೆದವರ ಕೈತಪ್ಪಿನಿಂದ ಬಿದ್ದಿರಬೇಕೆಂದು ತೋರುತ್ತದೆ.

ಒಂದನೆಯ ಖಂಡ

ಶಿಷ್ಯನ ಪ್ರಶ್ನೆ

ಕೇನೇಷಿತಂ.....ದೇವೋ ಯುನಕ್ತಿ ॥ ೧ ॥

(ಭಾಷ್ಯ)

೯೫. ಪ್ರವೃತ್ತಿಲಿಙ್ಗಾದ್ವಿಶೇಷಾರ್ಥಃ ಪ್ರಶ್ನ ಉಪಪನ್ನಃ । ರಥಾದೀನಾಂ ಹಿ ಚೇತನಾವದಧಿಷ್ಠಿತಾನಾಂ ಪ್ರವೃತ್ತಿರ್ದೃಷ್ಟಾ ನಾನಧಿಷ್ಠಿತಾನಾಮ್ । ಮನ ಆದೀನಾಂ ಚ ಅಚೇತನಾನಾಂ ಪ್ರವೃತ್ತಿರ್ದೃಶ್ಯತೇ । ತದ್ಧಿ ಲಿಙ್ಗಂ ಚೇತನಾವತೋಽಧಿಷ್ಠಾತುರಸ್ತಿತ್ವೇ । ಕರಣಾನಿ ಹಿ ಮನಆದೀನಿ ನಿಯಮೇನ ಪ್ರವರ್ತನ್ತೇ । ತತ್ ನಾಸತಿ ಚೇತನಾವತ್ಯಧಿಷ್ಠಾತರಿ ಉಪಪದ್ಯತೇ । ತದ್ವಿಶೇಷಸ್ಯ ಚಾನಧಿಗಮಾತ್, ಚೇತನಾವತ್ಸಾಮಾನ್ಯೇ ಚಾಧಿಗತೇ ವಿಶೇಷಾರ್ಥಃ ಪ್ರಶ್ನ ಉಪಪದ್ಯತೇ ॥

(ಭಾಷ್ಯಾರ್ಥ)

ಪ್ರವೃತ್ತಿರೂಪವಾದ ಲಿಂಗದಿಂದ ವಿಶೇಷವಾದ ವಿಷಯದಲ್ಲಿ ಪ್ರಶ್ನೆಯನ್ನು ಮಾಡುವದು ಯುಕ್ತವಾಗಿರುತ್ತದೆ. ರಥವೇ ಮುಂತಾದ (ಅಚೇತನಗಳು) ಚೇತನಗಳ ವಶದಲ್ಲಿದ್ದುಕೊಂಡೇ ಪ್ರವರ್ತಿಸುವದು ಕಂಡುಬಂದಿದೆಯೇ ಹೊರತು, (ಚೇತನಗಳ ವಶದಲ್ಲಿಲ್ಲದೆ (ಪವರ್ತಿಸುವದು) ಕಂಡುಬಂದಿಲ್ಲ. ಮನಸ್ಸೇ ಮುಂತಾದ ಆ ಚೇತನಗಳು (ವಿಷಯಗಳಲ್ಲಿ) ಪ್ರವರ್ತಿಸುವದು ಕಾಣಬರುತ್ತಿದೆ. ಅದೇ ಅವುಗಳಿಗೆ (ಒಂದು) ಚೇತನಾವಂತವಾದ ಅಧಿಷ್ಠಾತೃವಿರಬೇಕೆಂಬುದಕ್ಕೆ ಲಿಂಗವಾಗಿರುತ್ತದೆ.[1] ಮನಸ್ಸೇ ಮುಂತಾದ ಕರಣಗಳು ನಿಯಮದಿಂದ ಪ್ರವರ್ತಿಸುತ್ತಿರುತ್ತವೆ. ಚೇತನವುಳ್ಳ ಅಧಿಷ್ಠಾತೃವಿಲ್ಲದೆ ಅದು ಹೊಂದುವಹಾಗಿಲ್ಲ.[2] ಅದರ ವಿಶೇಷರೂಪವು ತಿಳಿಯದೆ ಇರುವದರಿಂದ (ಪ್ರಶ್ನೆಯನ್ನು ಮಾಡಿರುತ್ತದೆ). ಸಾಮಾನ್ಯರೂಪದಿಂದ ಚೇತನವುಳ್ಳದ್ದಿರಬೇಕೆಂದು ಗೊತ್ತಿರುವಲ್ಲಿ (ಅದರ) ವಿಶೇಷರೂಪವನ್ನು ತಿಳಿಯುವದಕ್ಕಾಗಿ ಪ್ರಶ್ನೆಯನ್ನು ಹಾಕುವದು ಯುಕ್ತವಾಗುತ್ತದೆ.

---

1. ಹೊಗೆಯಿಂದ ಬೆಂಕಿಯನ್ನು ಅನುಮಾನಿಸುವಂತೆ ಪ್ರವೃತ್ತಿಯಿಂದ ಚೇತನವನ್ನು ಅನುಮಾನಿಸಬಹುದೆಂದು ಭಾವ.

2. ಇದು ಪುನರುಕ್ತಿಯೆಂತ ಕಾಣುತ್ತದೆ. ಮನಸ್ಸೇ ಮೊದಲಾದವುಗಳೇ ಚೇತನವಲ್ಲವೆ ?_ಎಂಬ ಶಂಕೆಗೆ ಉತ್ತರವಾಗಿ ಅವು ಕರಣವಾದದ್ದರಿಂದ ದೀಪದಂತೆ ಅಚೇತನ ಎಂದು ಉತ್ತರವನ್ನು ಕೊಡುವದಕ್ಕೆ ಈ ವಾಕ್ಯವು ಬಂದಿದೆಯೆಂದು ಟೀಕಾಕಾರರು ಹೇಳುತ್ತಾರೆ.

(ಭಾಷ್ಯ)

೯೬. ಕೇನೇಷಿತಂ ಕೇನೇಷ್ಟಂ ಕಸ್ಯೇಚ್ಛಾಮಾತ್ರೇಣ ಮನಃ ಪತತಿ ಗಚ್ಛತಿ ಸ್ವವಿಷಯೇ ನಿಯಮೇನ ವ್ಯಾಪ್ರಿಯತ ಇತ್ಯರ್ಥಃ । ಮನುತೇ-ನೇನೇತಿ ವಿಜ್ಞಾನ ನಿಮಿತ್ತಮನ್ತಃಕರಣಂ ಮನಃ ಪ್ರೇಷಿತಮಿವೇತ್ಯುಪಮಾರ್ಥಃ । ನತ್ವಿಷಿತಪ್ರೇಷಿತ ಶಬ್ದಯೋರರ್ಥಾವಿಹ ಸಮ್ಭವತಃ । ನ ಹಿ ಶಿಷ್ಯಾನಿವ ಮನಆದೀನಿ ವಿಷಯೇಭ್ಯಃ ಪ್ರೇಷಯತ್ಯಾತ್ಮಾ । ವಿವಿಕ್ತನಿತ್ಯಚಿತ್ಸ್ವರೂಪತಯಾ ತು ನಿಮಿತ್ತಮಾತ್ರಂ ಪ್ರವೃತ್ತೌ ನಿತ್ಯಚಿಕಿತ್ಸಾಧಿಷ್ಠಾತೃವತ್ ॥

(ಭಾಷ್ಯಾರ್ಥ)

ಕೇನೇಷಿತಂ ಎಂದರೆ ಯಾರಿಂದ ಇಷ್ಟವಾಗಿ; ಯಾರ ಇಚ್ಛಾಮಾತ್ರದಿಂದ ಮನಸ್ಸು ತನ್ನ ವಿಷಯದಲ್ಲಿ ಬೀಳುತ್ತದೆ, ತನ್ನ ವಿಷಯದ ಕಡೆಗೆ ಹೋಗುತ್ತದೆ; ನಿಯಮವಾಗಿ ವ್ಯಾಪಾರಮಾಡುತ್ತದೆ ಎಂದರ್ಥ. ಯಾವದರಿಂದ ಮನನಮಾಡುವರೋ ಅದು ಮನಸ್ಸು–ಎಂಬ ವ್ಯುತ್ಪತ್ತಿಯಿಂದ ವಿಜ್ಞಾನಕ್ಕೆ ಕಾರಣವಾಗಿರುವ ಅಂತಃಕರಣವೇ ಮನಸ್ಸು. (ಅದು) ಪ್ರೇರಿಸಿ ಕಳುಹಿಸಲ್ಪಟ್ಟಂತೆ (ಹೋಗುತ್ತದೆ) ಎಂದು ಉಪಮಾರ್ಥವು. ಹಾಗಲ್ಲದೆ 'ಇಷಿತ', 'ಪ್ರೇಷಿತ'–ಎಂಬೀ ಎರಡು ಶಬ್ದಗಳ[1] ವಾಚ್ಯಾರ್ಥಗಳೇ (ಆದರೆ) ಇಲ್ಲಿ ಹೊಂದುವದಿಲ್ಲ ಏಕೆಂದರೆ ಶಿಷ್ಯರನ್ನು (ಗುರು ಕಳುಹಿಸುವಂತೆ) ಆತ್ಮನು ಮನಸ್ಸೇ ಮುಂತಾದವನ್ನು ವಿಷಯಗಳ ಕಡೆಗೆ ಕಳುಹಿಸುವದಿಲ್ಲ. ಆದರೆ ಬೇರೆಯಾಗಿರುವ ನಿತ್ಯಚಿತ್ಸ್ವರೂಪನಾಗಿರುವದರಿಂದ **ನಿತ್ಯನಾದ ಚಿಕಿತ್ಸೆಯ ಅಧಿಷ್ಠಾತೃವಿನಂತೆ**[2] ಪ್ರವೃತ್ತಿಯಲ್ಲಿ ನಿಮಿತ್ತಮಾತ್ರನಾಗಿರುತ್ತಾನೆ.

(ಭಾಷ್ಯ)

೯೭. ಪ್ರಾಣ ಇತಿ ನಾಸಿಕಾಭವಃ । ಪ್ರಕರಣಾತ್ । ಪ್ರಥಮತ್ವಂ ಪ್ರಚಲನ ಕ್ರಿಯಾಯಾಃ ಪ್ರಾಣನಿಮಿತ್ತತ್ವಾತ್ । ಸ್ವತೋ ವಿಷಯಾವಭಾಸಮಾತ್ರಂ ಕರಣಾನಾಂ ಪ್ರವೃತ್ತಿಃ । ಚಲಿಕ್ರಿಯಾತು ಪ್ರಾಣಸ್ಯೈವ ಮನ ಆದಿಷು । ತಸ್ಮಾತ್ ಪ್ರಾಥಮ್ಯಂ ಪ್ರಾಣಸ್ಯ । ಪ್ರೈತಿ ಗಚ್ಛತಿ ಯುಕ್ತಃ ಪ್ರಯುಕ್ತ ಇತ್ಯೇತತ್ । ವಾಚೋ ವದನಂ

---

1. ಈ ಶಬ್ದಗಳ ವಿವರವನ್ನು ಹಿಂದಿನ ಪದಭಾಷ್ಯದಲ್ಲಿ ಕೊಟ್ಟಿರುವದನ್ನು ಹೋಲಿಸಿರಿ.

2. ಈ ದೃಷ್ಟಾಂತದ ಅಭಿಪ್ರಾಯವೇನೆಂಬುದು ಸ್ಪಷ್ಟವಿಲ್ಲ. ರಾಜನೇ ಮುಂತಾದವರಿಗೆ ನಿತ್ಯವೈದ್ಯನಾದವನು ಕೊಡುವ ಔಷಧಿಯನ್ನೂ ಊಟವನ್ನೂ ಮೊದಲು ಸೇವಿಸುತ್ತಾನೆಂದು ಹೇಳುತ್ತಾರೆ. ವೈದ್ಯನು ಒಪ್ಪುವದು ರಾಜನ ಪ್ರವೃತ್ತಿಗೆ ಕಾರಣವಾಗುವಂತೆ ಸನ್ನಿಧಿಯಿಂದ ಕಾರಣವೆಂದು ಅಭಿಪ್ರಾಯವಿರಬಹುದು. ಚಕೋರಪಕ್ಷಿಯು ಹತ್ತಿರವಿರುವಮಾತ್ರದಿಂದ ಅರಸನು ಊಟದಲ್ಲಿ ಪ್ರವರ್ತಿಸುವಂತೆ ಎಂದು ಟೀಕೆಯಲ್ಲಿ ಅರ್ಥವನ್ನು ಬರೆದಿದೆ; ವಿಷಮಿಶ್ರಿತಾನ್ನವನ್ನು ಚಕೋರದ ಮುಂದೆ ಇಟ್ಟರೆ ಅದರ ಕಣ್ಣಿನ ರಂಗು ಮಾರ್ಪಡುವದೆಂದು ನಂಬಿಕೆಯುಂಟಂತೆ ಈ ದೃಷ್ಟಾಂತವು ಭಾಷ್ಯದಲ್ಲಿ ಮತ್ತೆಲ್ಲಿಯೂ ಕಾಣುವದಿಲ್ಲ.

ಕಿಂನಿಮಿತ್ತಂ ಪ್ರಾಣೇನಾಂ ಚಕ್ಷುಃ ಶ್ರೋತ್ರಯೋಶ್ಚ ಕೋ ದೇವಃ ಪ್ರಯೋಕ್ತಾ ? ಕರಣಾನಾಮ್ ಅಧಿಷ್ಠಾತಾ ಚೇತನಾವಾ ಯಃ ಸ ಕಿಂವಿಶೇಷಣ ಇತ್ಯರ್ಥಃ ॥

(ಭಾಷ್ಯಾರ್ಥ)

ಪ್ರಾಣವೆಂದರೆ ಎಂದರೆ ನಾಸಿಕದಲ್ಲಿರುವ (ಇಂದ್ರಿಯವೆಂದು) ತಿಳಿಯಬೇಕು ; ಏಕೆಂದರೆ (ಇಲ್ಲಿ ಕರಣಗಳ) ಪ್ರಕರಣವೇ[1] ಇರುತ್ತದೆ. ಪ್ರಥಮನೆಂಬ (ವಿಶೇಷಣವನ್ನು ಪ್ರಾಣಕ್ಕೆ ಕೊಟ್ಟಿರುವದು) ಚಲಿಸುವದೆಂಬ ಕ್ರಿಯೆಯು ಪ್ರಾಣವೆಂಬ ನಿಮಿತ್ತದಿಂದ ಆಗುವದರಿಂದ[2]. ಇಂದ್ರಿಯಗಳು ತಾವಾಗಿ ಪ್ರವರ್ತಿಸುವದೆಂದರೆ ವಿಷಯಗಳನ್ನು ಬೆಳಗುವದು ಮಾತ್ರ, ಆದರೆ ಮನಸ್ಸೇ ಮುಂತಾದವುಗಳಲ್ಲಿ ಆಗುವ ಚಲನ ಕ್ರಿಯೆಯು ಮಾತ್ರ ಪ್ರಾಣದ್ದೇ. ಆದ್ದರಿಂದ ಪ್ರಾಣವು ಪ್ರಥಮವಾಗುತ್ತದೆ. ಪ್ರೈತಿ ಎಂದರೆ ಹೋಗುತ್ತದೆ, ಯುಕ್ತಃ ಎಂದರೆ ಪ್ರೇರಿಸಲ್ಪಟ್ಟು ಎಂದು ಅಭಿಪ್ರಾಯವಾಗಿಂದ್ರಿಯವು ಮಾತನಾಡುವದು ಯಾವ ನಿಮಿತ್ತದಿಂದ ? ಪ್ರಾಣಿಗಳ ಚಕ್ಷುಸ್ಸು ಶ್ರೋತ್ರ–ಇವೆರಡಕ್ಕೂ ಯಾವ ದೇವನು ಪ್ರೇರಕನು ? ಕರಣಗಳಿಗೆ ಚೇತನಾವಂತನಾದ ಅಧಿಷ್ಠಾತೃವಿದಾನಲ್ಲ, ಅವನು ಯಾನ ವಿಶೇಷಣಗಳುಳ್ಳವನು ? ಎಂದರ್ಥ.

ಗುರುವಿನ ಉತ್ತರ

(ಭಾಷ್ಯ)

೯೮. " ಶ್ರೋತ್ರಸ್ಯ ಶ್ರೋತ್ರಮ್ " ಇತ್ಯಾದಿಪ್ರತಿವಚನಂ ನಿರ್ವಿಶೇಷಸ್ಯ ನಿಮಿತ್ತತ್ವಾರ್ಥಮ್ । ವಿಕ್ರಿಯಾದಿವಿಶೇಷರಹಿತಸ್ಯಾತ್ಮನೋ ಮನಆದಿ ಪ್ರವೃತ್ತೌ ನಿಮಿತ್ತತ್ವಮ್ ಇತ್ಯೇತತ್ "ಶ್ರೋತ್ರಸ್ಯ ಶ್ರೋತ್ರಮ್ " ಇತಿ ಪ್ರತಿವಚನಸ್ಯಾರ್ಥಃ । ಅನುಗಮಾತ್ । ತದನುಗತಾನಿ ಹಿ ಅತ್ರಾಸ್ಮಿನ್ನರ್ಥೇಽಕ್ಷರಾಣಿ ॥

(ಭಾಷ್ಯಾರ್ಥ)

" ಶ್ರೋತ್ರಕ್ಕೂ ಶ್ರೋತ್ರವು " ಎಂದು ಮುಂತಾಗಿ (ಹೇಳಿರುವ ಗುರುವಿನ) ಉತ್ತರವು ನಿರ್ವಿಶೇಷನಾದ (ಆತ್ಮನಿಗೆ) ನಿಮಿತ್ತತ್ವವನ್ನು (ತಿಳಿಸುವ)ದಕ್ಕೆ. ವಿಕಾರವೇ ಮುಂತಾದ (ಯಾವ) ವಿಶೇಷವೂ ಇಲ್ಲದ ಆತ್ಮನು ಮನಸ್ಸೇ ಮುಂತಾದವುಗಳ ಪ್ರವೃತ್ತಿಗೆ ನಿಮಿತ್ತನಾಗಿರುತ್ತಾನೆ ಎಂಬುದು " ಶ್ರೋತ್ರಕ್ಕೂ ಶ್ರೋತ್ರವು " ಎಂಬ ಉತ್ತರದ ಅರ್ಥವು. ಏಕೆಂದರೆ ಅನುಗಮವಿದೆ ; ಇಲ್ಲಿರುವ ಮಾತುಗಳು ಈ ಅರ್ಥದಲ್ಲಿಯೇ ಹೊಂದುಗೆಯಾಗುತ್ತವೆ.

---

1. ಇದು ಆತ್ಮನ ಪ್ರಕರಣವಾಗಿದೆ ; ಆದ್ದರಿಂದ ಇಲ್ಲಿ ಪ್ರಕರಣವೆಂಬ ಭಾಷ್ಯಕ್ಕೆ ಕರಣಗಳ ಸನ್ನಿಧಿಯಿಂದ ಎಂಬ ಅರ್ಥವನ್ನು ಟೀಕೆಯಲ್ಲಿ ಬರೆದಿದೆ.

2. ಮೊದಲು ಘ್ರಾಣೇಂದ್ರಿಯವನ್ನು ಗ್ರಹಿಸಿ ಈಗ ಮತ್ತೆ ಪ್ರಾಣವನ್ನೇ ತೆಗೆದುಕೊಂಡಿರುವದನ್ನು ಲಕ್ಷಿಸಬೇಕು. ಪದಭಾಷ್ಯವನ್ನು ಇದಕ್ಕೆ ಹೋಲಿಸಿರಿ.

(ಭಾಷ್ಯ)

೯. ಕಥಮ್ ? ಶೃಣೋತ್ಯನೇನೇತಿ ಶ್ರೋತ್ರಂ ತಸ್ಯ ಶಬ್ದಾವಭಾಸಕತ್ವಂ ಶ್ರೋತ್ರತ್ವಮ್ । ಶಬ್ದೋಪಲಬ್ಧ್ಯರೂಪತಯಾ ಅವಭಾಸಕತ್ವಂ ನ ಸ್ವತಃ, ಶ್ರೋತ್ರಸ್ಯ ಅಚಿದ್ರೂಪತ್ವಾತ್ ಆತ್ಮನಶ್ಚ ಚಿದ್ರೂಪತ್ವಾತ್ । ಯತ್ ಶ್ರೋತ್ರಸ್ಯೋಪಲಬ್ಧೃತ್ವೇನಾವಭಾಸಕತ್ವಂ ತತ್ ಆತ್ಮನಿಮಿತ್ತತ್ವಾತ್ ಶ್ರೋತ್ರಸ್ಯ ಶ್ರೋತ್ರಮ್ ಇತ್ಯುಚ್ಯತೇ । ಯಥಾ ಕ್ಷತ್ರಸ್ಯ ಕ್ಷತ್ರಮ್, ಯಥಾ ವಾ ಉದಕಸ್ಯೌಷ್ಣ್ಯಮ್ ಅಗ್ನಿನಿಮಿತ್ತಮಿತಿ ದಗ್ಧುರಪ್ಯುದಕಸ್ಯ ದಗ್ಧಾಗ್ನಿರುಚ್ಯತೇ । ಉದಕಮಪಿ ಹ್ಯಗ್ನಿಸಂಯೋಗಾದಗ್ನಿರುಚ್ಯತೇ । ತದ್ವತ್ । ಅನಿತ್ಯಂ ಯತ್ಸಂಯೋಗಾದುಪಲಬ್ಧೃತ್ವಂ ತತ್ಕರಣಂ ಶ್ರೋತ್ರಾದಿ । ಉದಕಸ್ಯೇವ ದಗ್ಧೃತ್ವಂ । ಅನಿತ್ಯಂ ಹಿ ತತ್ರ ತತ್ । ಯತ್ರ ತು ನಿತ್ಯಮ್ ಉಪಲಬ್ಧೃತ್ವಮ್ ಅಗ್ನಾವಿವೌಷ್ಣ್ಯಮ್, ಸ ನಿತ್ಯೋಪಲಬ್ಧಿಸ್ವರೂಪತ್ವಾತ್ ದಗ್ಧೇವ “ ಉಪಲಬ್ಧಾ” ಉಚ್ಯತೇ । ಶ್ರೋತ್ರಾದಿಷು ಶ್ರೋತೃತ್ವಾದ್ಯುಪಲಬ್ಧಿರನಿತ್ಯಾ, ನಿತ್ಯಾ ಚಾತ್ಮನಿ। ಅತಃ “ಶ್ರೋತ್ರಸ್ಯ ಶ್ರೋತ್ರಮ್ ” ಇತ್ಯಾದ್ಯಕ್ಷರಾಣಾಮ್ ಅರ್ಥಾನುಗಮಾತ್ ಉಪಪದ್ಯತೇ ನಿರ್ವಿಶೇಷಸ್ಯೋಪಲಬ್ಧಿಸ್ವರೂಪಸ್ಯ ಆತ್ಮನೋ ಮನಆದಿಪ್ರವೃತ್ತಿನಿಮಿತ್ತತ್ವಮ್ ಇತಿ । ಮನಆದಿಷ್ವೇವಂ ಯಥೋಕ್ತಮ್ ॥

(ಭಾಷ್ಯಾರ್ಥ)

(ಅದು) ಹೇಗೆ? (ಎಂದರೆ): ಯಾವದರಿಂದ ಕೇಳುತ್ತಾರೋ ಅದು ಶ್ರೋತ್ರವು. ಅದಕ್ಕೆ ಶಬ್ದವನ್ನು ತಿಳಿಸುವ (ಶಕ್ತಿ) ಇದೆಯಷ್ಟೆ, (ಅದೇ) ಶ್ರೋತ್ರತ್ವವು. (ಶ್ರೋತ್ರವು) ಶಬ್ದವನ್ನು ಅರಿಯುವ ರೂಪದಿಂದ (ಅದನ್ನು) ತಿಳಿಸುವದಾಗಿರುವದು ತನ್ನಿಂದಲೇ ಅಲ್ಲ, ಏಕೆಂದರೆ ಶ್ರೋತ್ರವು ಜಡವಾಗಿರುತ್ತದೆ, ಆತ್ಮನು ಚಿದ್ರೂಪನಾಗಿರುತ್ತಾನೆ.[1] ಶ್ರೋತ್ರವು (ಶಬ್ದವನ್ನು) ಅರಿಯುವದಾಗಿ (ಅದನ್ನು) ತಿಳಿಸುವ (ಶಕ್ತಿಯಿದೆಯಲ್ಲ), ಅದು ಆತ್ಮನಿಮಿತ್ತಕವಾಗಿರುವದರಿಂದ (ಆತ್ಮನು) “ ಶ್ರೋತ್ರಕ್ಕೂ ಶ್ರೋತ್ರವು ” ಎನ್ನಿಸಿಕೊಳ್ಳುತ್ತಾನೆ. (ಧರ್ಮವು) ಹೇಗೆ “ ಕ್ಷತ್ರಕ್ಕೂ ಕ್ಷತ್ರ ”ವೆನಿಸುವದೋ[2] ಹಾಗೆ. ಅಥವಾ ನೀರಿನ ಬಿಸಿಯು ಬೆಂಕಿಯ ನಿಮಿತ್ತದಿಂದಾಗಿರುವದರಿಂದ ಸುಡುವ ನೀರನ್ನು ಬೆಂಕಿಯು ಸುಡುವದು ಎಂದು ಹೇಗೆ ಹೇಳುವರೋ—ನೀರೂ ಬೆಂಕಿಯ ಸಂಯೋಗದಿಂದ ಬೆಂಕಿಯೆನಿಸುವದಷ್ಟೆ[3]—ಅದರಂತೆ ಯಾವದರ ಸಂಯೋಗದಿಂದ ಅನಿತ್ಯವಾದ ‘ಉಪಲಬ್ಧೃತ್ವ’ (ಅರಿಯುವಾತನ ಧರ್ಮ)

---

1. ಜಡವಾಗಿರುವ ಶ್ರೋತ್ರೇಂದ್ರಿಯಕ್ಕೆ ಶಬ್ದವನ್ನು ತಿಳಿಯುವ ಶಕ್ತಿಯಿಲ್ಲ ; ಆದ್ದರಿಂದ ಚೇತನನಾಗಿರುವ ಆತ್ಮನ ಸಂಬಂಧದಿಂದಲೇ ಅದು ಶಬ್ದವನ್ನು ತಿಳಿಯುತ್ತದೆ.

2. ಬೃ. ೧-೪-೧೪ ನೋಡಿ.

3. ಸುಡುವದೆನಿಸುವದಷ್ಟೆ ಎಂದರ್ಥ.

ವಾಗಿರುವದೋ ಅದು ಶ್ರೋತ್ರವೇ ಮುಂತಾದ ಕರಣವಾಗಿರುತ್ತದೆ. ನೀರಿನ ದಗ್ಧೃತ್ವ (ಸುಡುವ ವಸ್ತುವಿನ ಸ್ವಭಾವ)ದಂತೆಯೇ (ಇದನ್ನು ಅರಿಯಬೇಕು), ಏಕೆಂದರೆ ಅದರಲ್ಲಿ ಅದು[1] ಅನಿತ್ಯವಾಗಿರುತ್ತದೆ. ಆದರೆ ಬೆಂಕಿಯಲ್ಲಿರುವ ಬಿಸಿಯಂತೆ ಉಪಲಬ್ಧೃತ್ವವು ಎಲ್ಲಿ ನಿತ್ಯವಾಗಿರುವದೋ ಆ (ಆತ್ಮನು ನಿತ್ಯವಾಗಿ) ಸುಡುವ (ಬೆಂಕಿ)ಯಂತೆ ಯಾವಾಗಲೂ ಚಿತ್ಸ್ವರೂಪನೇ ಆಗಿರುವದರಿಂದ ಉಪಲಬ್ಧೃ (ಅರಿಯುವಾತನು) ಎನಿಸುತ್ತಾನೆ. ಶ್ರೋತ್ರವೇ ಮುಂತಾದ (ಇಂದ್ರಿಯ)ಗಳಲ್ಲಿರುವ ಶ್ರೋತೃತ್ವವೇ ಮುಂತಾದ ಅರಿವು ಅನಿತ್ಯವಾಗಿರುತ್ತದೆ, ಆತ್ಮನಲ್ಲಿ ನಿತ್ಯವಾಗಿರುತ್ತದೆ, ಆದ್ದರಿಂದ "ಶ್ರೋತ್ರಕ್ಕೂ ಶ್ರೋತ್ರವು" ಮುಂತಾದ ಮಾತುಗಳು ಅರ್ಥಕ್ಕೆ ಹೊಂದುಗೆಯಾಗಿರುವದರಿಂದ ನಿರ್ವಿಶೇಷನಾಗಿ ಉಪಲಬ್ಧಿ (ಅರಿವಿನ) ಸ್ವರೂಪವೇ ಆಗಿರುವ ಆತ್ಮನು ಮನಸ್ಸೇ ಮುಂತಾದವುಗಳ ಪ್ರವೃತ್ತಿಗೆ ನಿಮಿತ್ತವಾಗಿರುತ್ತಾನೆಂಬುದು (ಹೊಂದುತ್ತದೆ) ಮನಸ್ಸೇ ಮುಂತಾದವುಗಳ ವಿಷಯದಲ್ಲಿಯೂ ಮೇಲೆ ಹೇಳಿರುವಂತೆ(ಅರ್ಥವನ್ನು ತಿಳಿಯಬೇಕು).

(ಭಾಷ್ಯ)

೧೦೦. "ವಾಚೋ ಹ ವಾಚಮ್", "ಪ್ರಾಣಸ್ಯ ಪ್ರಾಣಃ" ಇತಿ ವಿಭಕ್ತಿದ್ವಯಂ ಸರ್ವತ್ರೈವ ದ್ರಷ್ಟವ್ಯಮ್। ಕಥಮ್? ಪೃಷ್ಟತ್ವಾತ್ ಸ್ವರೂಪನಿರ್ದೇಶಃ। ಪ್ರಥಮಯೈವ ಚ ನಿರ್ದೇಶಃ। ತಸ್ಯ ಚ ಜ್ಞೇಯತ್ವಾತ್ ಕರ್ಮತ್ವಮಿತಿ ದ್ವಿತೀಯಾ। ಅತೋ "ವಾಚೋ ಹ ವಾಚಮ್" "ಪ್ರಾಣಸ್ಯ ಪ್ರಾಣಃ" ಇತ್ಯಸ್ಮಾತ್ ಸರ್ವತ್ರೈವ ವಿಭಕ್ತಿದ್ವಯಮ್ ॥

(ಭಾಷ್ಯಾರ್ಥ)

"ವಾಚೋ ಹ ವಾಚಮ್", "ಪ್ರಾಣಸ್ಯ ಪ್ರಾಣಃ" ಎಂದು (ತೋರಿಸಿರುವ ದ್ವಿತೀಯಾಪ್ರಥಮಾ) ವಿಭಕ್ತಿಗಳೆರಡನ್ನೂ ಎಲ್ಲಾ ಕಡೆಯಲ್ಲಿಯೂ ಊಹಿಸಿಕೊಳ್ಳಬೇಕು. (ಅದು) ಹೇಗೆ? (ಎಂದರೆ). ಪ್ರಶ್ನೆಯನ್ನು ಹಾಕಿರುವದರಿಂದ ಸ್ವರೂಪವನ್ನು ತಿಳಿಸಿದೆ, (ಅದನ್ನು) ಪ್ರಥಮಾವಿಭಕ್ತಿಯಿಂದಲೇ ತಿಳಿಸಿದೆ ಮತ್ತು ಅರಿಯಲ್ಪಡತಕ್ಕದ್ದಾಗಿರುವದರಿಂದ ಕರ್ಮವಾಯಿತಾಗಿ ದ್ವಿತೀಯೆ ಬಂದಿದೆ. ಆದ್ದರಿಂದ "ವಾಚೋ ಹ ವಾಚಮ್", "ಪ್ರಾಣಸ್ಯ ಪ್ರಾಣಃ"- ಎಂಬ ಈ (ಪ್ರಯೋಗ)ದಿಂದ ಎಲ್ಲಾ ಕಡೆಯಲ್ಲಿಯೂ ಎರಡು ವಿಭಕ್ತಿಗಳನ್ನು[2] (ಊಹಿಸಬೇಕು).

---

1. ನೀರಿನಲ್ಲಿ ಸುಡುವಿಕೆಯು ಅನಿತ್ಯ, ಇದರಂತೆ ಕರಣದಲ್ಲಿ ಉಪಲಬ್ಧೃತ್ವವೂ ಅನಿತ್ಯ; ಇವೆರಡೂ ಮತ್ತೊಂದರ ಸಂಯೋಗದಿಂದ ಆಗಿರುತ್ತವೆ.

2. ಇಲ್ಲಿ ಪ್ರಥಮಾವಿಭಕ್ತಿಯನ್ನೇ ಎಲ್ಲಾ ಕಡೆಯಲ್ಲಿಯೂ ಇಟ್ಟುಕೊಳ್ಳಬೇಕೆಂದು ಪದಭಾಷ್ಯ (೧೯) ದಲ್ಲಿ ಹೇಳಿರುವದನ್ನು ಇದಕ್ಕೆ ಹೋಲಿಸಿರಿ.

(ಭಾಷ್ಯ)

೧೦೧. ಯದೇತತ್ ಶ್ರೋತ್ರಾದ್ಯುಪಲಬ್ಧಿನಿಮಿತ್ತಂ "ಶ್ರೋತ್ರಸ್ಯ ಶ್ರೋತ್ರಮ್" ಇತ್ಯಾದಿಲಕ್ಷಣಂ ನಿತ್ಯೋಪಲಬ್ಧಿಸ್ವರೂಪಂ ನಿರ್ವಿಶೇಷಮಾತ್ಮ ತತ್ತ್ವಮ್, ತದ್ಬುದ್ಧ್ಯಾ ಅತಿಮುಚ್ಯ ಅನವಬೋಧ ನಿಮಿತ್ತಾಧ್ಯಾರೋಪಿತಾತ್ ಬುದ್ಧ್ಯಾದಿಲಕ್ಷಣಾತ್ ಸಂಸಾರಾತ್ ಮೋಕ್ಷಣಂ ಕೃತ್ವಾ, ಧೀರಾ ಧೀಮನ್ತಃ, ಪ್ರೇತ್ಯ ಅಸ್ಮಾತ್ ಲೋಕಾತ್ ಶರೀರಾತ್ ಪ್ರೇತ್ಯ ವಿಯುಜ್ಯ ಅನ್ಯಸ್ಮಿನ್ ಅಪ್ರತಿಸನ್ಧೀಯ ಮಾನೇ ನಿರ್ನಿಮಿತ್ತತ್ವಾತ್ ಅಮೃತಾ ಭವನ್ತಿ । ಸತಿ ಹ್ಯಜ್ಞಾನೇ ಕರ್ಮಣಿ ಶರೀ ರಾನ್ತರಂ ಪ್ರತಿಸನ್ದಧತೇ । ಆತ್ಮಾವಬೋಧೇತು ಸರ್ವಕರ್ಮಾರಮ್ಭನಿಮಿತ್ತಾ ಜ್ಞಾನವಿಪರೀತವಿದ್ಯಾಗ್ನಿವಿಪ್ಲುಷ್ಟತ್ವಾತ್ ಕರ್ಮಣಾಮಿತಿ ಅನಾರಮ್ಭೇ ಅಮೃತಾ ಏವ ಭವನ್ತಿ । ಶರೀರಾದಿಸನ್ತಾನಾವಿಚ್ಛೇದಪ್ರತಿಸನ್ಧಾನಾದ್ಯಪೇಕ್ಷಯಾ ಅಧ್ಯಾ ರೋಪಿತಮೃತ್ಯುವಿಯೋಗಾತ್ ಪೂರ್ವಮಪ್ಯಮೃತಾಃ ಸನ್ತೋ ನಿತ್ಯಾತ್ಮಸ್ವರೂಪ ತ್ವಾತ್ "ಅಮೃತಾ ಭವನ್ತಿ" ಇತ್ಯುಪಚರ್ಯತೇ ॥

(ಭಾಷ್ಯಾರ್ಥ)

ಶ್ರೋತ್ರವೇ ಮುಂತಾದವುಗಳನ್ನು ಅರಿಯುವ ನಿಮಿತ್ತದಿಂದ "ಶ್ರೋತ್ರಕ್ಕೂ ಶ್ರೋತ್ರವು" ಮುಂತಾದ ರೂಪದ ನಿತ್ಯವಾದ ಅರಿವಿನ ಸ್ವರೂಪವುಳ್ಳ ನಿರ್ವಿಶೇಷ ವಾದ ಈ ಆತ್ಮತತ್ತ್ವವಿದೆಯಲ್ಲ ಇದನ್ನು ಅರಿತುಕೊಂಡು, "ಬಿಟ್ಟು" ಎಂದರೆ ಅಜ್ಞಾನನಿಮಿತ್ತದಿಂದ ಕಲ್ಪಿಸಿಕೊಂಡಿರುವ ಬುದ್ಧಿಯೇ ಮುಂತಾದ ರೂಪದ ಸಂಸಾರ ದಿಂದ ಬಿಡುಗಡೆಯನ್ನು ಮಾಡಿಕೊಂಡು, ಧೀರರು ಎಂದರೆ ಬುದ್ಧಿವಂತರು ಈ ಲೋಕದಿಂದ ಬಿಟ್ಟು ಹೊರಟುಹೋಗಿ ಎಂದರೆ (ಈ) ಶರೀರದಿಂದ ಅಗಲಿ ನಿಮಿತ್ತ ವಿಲ್ಲದ್ದರಿಂದ ಮತ್ತೊಂದು (ಶರೀರವು) ಉಂಟಾಗದೆ ಇರುವದರಿಂದ ಅಮೃತರಾಗು ವರು. ಅಜ್ಞಾನವು ಇದ್ದರಲ್ಲವೆ, ಕರ್ಮಗಳು ಮತ್ತೊಂದು ಶರೀರವನ್ನುಂಟು ಮಾಡುವವು? ಆತ್ಮಜ್ಞಾನವುಂಟಾದರೋ ಯಾವ ಕರ್ಮವನ್ನಾದರೂ ಮಾಡು ವದಕ್ಕೆ ನಿಮಿತ್ತವಾದ ಅಜ್ಞಾನಕ್ಕೆ ವಿರುದ್ಧವಾದ ವಿದ್ಯೆಯೆಂಬ ಬೆಂಕಿಯಿಂದ ಕರ್ಮ ಗಳು ಸುಟ್ಟುಹೋಗಿರುವದರಿಂದ (ಕರ್ಮವನ್ನು) ಮಾಡದೆ ಇರುವದರಿಂದ ಅಮೃ ತರೇ ಇಗುವರು. ಶರೀರವೇ ಮುಂತಾದವುಗಳ ಪ್ರವಾಹವು ಕಡಿವಡೆಯದೆ ಇರು ವದನ್ನು ಭಾವಿಸುವದರಿಂದ ಕಲ್ಪಿತವಾಗಿರುವ ಮೃತ್ಯುವನ್ನು ಅಗಲುವದರಿಂದ, ನಿತ್ಯಾತ್ಮಸ್ವರೂಪರಾದ್ದರಿಂದ ಮೊದಲೂ ಅಮೃತರೇ ಆಗಿದ್ದು, (ಈಗ ಜ್ಞಾನದಿಂದ) ಅಮೃತರಾಗುವರು ಎಂದು ಉಪಚಾರಕ್ಕೆ[1] ಹೇಳಿರುತ್ತದೆ.

1. ಮೊದಲೇ ಮುಕ್ತರಾಗಿರುವದರಿಂದ ಮತ್ತೆ ಮುಕ್ತರಾಗಬೇಕಾದದ್ದೇನೂ ಇರುವ ದಿಲ್ಲ. ಆದ್ದರಿಂದ ವಿದೇಹಮುಕ್ತಿಯೆಂಬುದು ಗೌಣವು.

ನ ತತ್ರ ಚಕ್ಷುರ್ಗಚ್ಛತಿ.. .....ಯಥೈತದನುಶಿಷ್ಯಾತ್ ॥ ೩ ॥

(ಭಾಷ್ಯ)

೧೦೨. "ನ ತತ್ರ ಚಕ್ಷುರ್ಗಚ್ಛತಿ" ಇತ್ಯುಕ್ತೇಽಪಿ ಪರ್ಯನುಯೋಗೇ ಹೇತುರಪ್ರತಿಪತ್ತೇಃ। "ಶ್ರೋತ್ರಸ್ಯ ಶ್ರೋತ್ರಮ್" ಇತ್ಯಾದಿನಾ ಉಕ್ತೇಽಪ್ಯಾತು ತತ್ತ್ವೇ ಅಪ್ರತಿಪನ್ನತ್ವಾತ್ ಸೂಕ್ಷ್ಮತ್ವಹೇತೋರ್ವಸ್ತುನಃ ಪುನಃಪುನಃ ಪರ್ಯನ್ಯ ಯುಯುಕ್ಷಾಕಾರಣಮಾಹ–ನ ತತ್ರ ಚಕ್ಷುರ್ಗಚ್ಛತೀತಿ ॥

(ಭಾಷ್ಯಾರ್ಥ)

"ಅಲ್ಲಿಗೆ ಚಕ್ಷುಸ್ಸು ಹೋಗುವದಿಲ್ಲ" ಎಂಬುದು ಹೇಳಿದಮೇಲೂ ತಿಳಿಯದೆ ಕೇಳುವದಕ್ಕೆ ಕಾರಣವು. ಶ್ರೋತ್ರಕ್ಕೂ ಶ್ರೋತ್ರವು ಎಂದು ಮುಂತಾಗಿ (ಗುರು) ಆತ್ಮತತ್ತ್ವವನ್ನು ಹೇಳಿದಮೇಲೂ (ಅದನ್ನು) ತಿಳಿದುಕೊಳ್ಳದೆ ಇರುವದರಿಂದ ವಸ್ತುವು ಸೂಕ್ಷ್ಮವಾಗಿರುವದೆಂಬ ಕಾರಣದಿಂದ ಮತ್ತೆಮತ್ತೆ ಕೇಳುವದಕ್ಕೆ ಕಾರಣ ವನ್ನು ಅಲ್ಲಿಗೆ ಚಕ್ಷುಸ್ಸು ಹೋಗುವದಿಲ್ಲ–ಎಂದು ಹೇಳಿರುತ್ತದೆ.

(ಭಾಷ್ಯ)

೧೦೩. ತತ್ರ ಶ್ರೋತ್ರಾದ್ಯಾತ್ಮಭೂತೇ ಚಕ್ಷುರಾದೀನಿ, ವಾಕ್ಚಕ್ಷುಷೋಃ ಸರ್ವೇಷ್ವಿಂದ್ರಿಯೋಪಲಕ್ಷಣಾರ್ಥತ್ವಾತ್, ನ ವಿಜ್ಞಾನಮುತ್ಪಾದಯನ್ತಿ। ಸುಖಾದಿವತ್ ತರ್ಹಿ ಗೃಹ್ಯೇತಾನ್ತಃಕರಣೇನ। ಅತ ಆಹ–ನೋ ಮನಃ। ನ ಸುಖಾದಿವನ್ಮನಸೋ ವಿಷಯಸ್ತತ್। ಇನ್ದ್ರಿಯಾವಿಷಯತ್ವಾತ್ ॥

(ಭಾಷ್ಯಾರ್ಥ)

ಅಲ್ಲಿಗೆ ಎಂದರೆ ಶ್ರೋತ್ರವೇ ಮುಂತಾದವುಗಳ ಆತ್ಮನಾಗಿರುವ (ಬ್ರಹ್ಮದ) ಬಳಿಗೆ ಚಕ್ಷುಸ್ಸೇ ಮುಂತಾದವುಗಳು (ಹೋಗುವದಿಲ್ಲ ಎಂದರೆ) ಅರಿವನ್ನು ಉಂಟು ಮಾಡುವದಿಲ್ಲ. (ಇಲ್ಲಿ) ವಾಕ್ಕು, ಚಕ್ಷುಸ್ಸು–ಇವು ಎಲ್ಲಾ ಇಂದ್ರಿಯಗಳನ್ನೂ (ತಿಳಿಸುವ) ಉಪಲಕ್ಷಣವಾಗಿರುತ್ತವೆಯಾದ್ದರಿಂದ (ಮುಂತಾದವುಗಳು ಎಂದು ಅರ್ಥ ಮಾಡಿಕೊಳ್ಳಬೇಕು). ಹಾಗಾದರೆ ಸುಖವೇ ಮುಂತಾದವುಗಳಂತೆ ಅಂತಃಕರಣ ದಿಂದ ತಿಳಿಯುವದಕ್ಕೆ ಬರಬಹುದಲ್ಲ! ಎಂದರೆ (ಮಂತ್ರವು) ಹೇಳುತ್ತದೆ: ಮನಸ್ಸೂ (ಹೋಗುವ)ದಿಲ್ಲ. ಸುಖಾದಿಗಳಂತೆ ಅದು ಮನಸ್ಸಿಗೆ ವಿಷಯವಲ್ಲ. ಏಕೆಂದರೆ ಇಂದ್ರಿಯಗಳಿಗೆ (ಅದು)ವಿಷಯವಲ್ಲ.

(ಭಾಷ್ಯ)

೧೦೪. ನ ವಿದ್ಮೋ ನ ವಿಜಾನೀಮಃ, ಅನ್ತಃಕರಣೇನ। ಯಥಾ ಏತದ್ ಬ್ರಹ್ಮ ಮನಆದಿಕರಣಜಾತಮ್ ಅನುಶಿಷ್ಯಾತ್, ಅನುಶಾಸನಂ ಕುರ್ಯಾತ್, ಪ್ರವೃತ್ತಿನಿಮಿತ್ತಂ ಭವೇತ್, ತಥಾ ಅವಿಷಯತ್ವಾತ್ ನ ವಿದ್ಮೋ ನ ವಿಜಾನೀಮಃ। ಅಥವಾ ಶ್ರೋತ್ರಾದೀನಾಂ ಶ್ರೋತ್ರಾದಿಲಕ್ಷಣಂ ಬ್ರಹ್ಮ ವಿಶೇಷೇಣ ದರ್ಶಯ–ಇತ್ಯುಕ್ತ ಆಚಾರ್ಯ ಆಹ। ನ ಶಕ್ಯತೇ ದರ್ಶಯಿತುಮ್। ಕಸ್ಮಾತ್? ನ ತತ್ರ

ಚಕ್ಷುರ್ಗಚ್ಛತಿ' ಇತ್ಯಾದಿ ಪೂರ್ವವತ್ ಸರ್ವಮ್ । ಅತ್ರ ತು ವಿಶೇಷಃ "ಯಥೈತದನುಶಿಷ್ಯಾತ್" ಇತಿ । ಯಥೈತದನುಶಿಷ್ಯಾತ್ ಪ್ರತಿಪಾದಯೇತ್ । ಅನ್ಯೋಽಪಿ ಶಿಷ್ಯಾ ಇತೋಽನ್ಯೇನ ವಿಧಿನಾ–ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ನಾವು ತಿಳಿಯೆವು, ನಾವು ಅರಿಯೆವು, ಅಂತಃಕರಣದಿಂದ (ಇದನ್ನು ತಿಳಿಯೆವು) ;ಮನಸ್ಸೇ ಮುಂತಾದ ಕರಣಸಮೂಹವು ಆ ಬ್ರಹ್ಮವನ್ನು ಹೇಗೆ ತಿಳಿಸಿಕೊಟ್ಟೀತೋ, ಅನುಶಾಸನವನ್ನು ಮಾಡೀತೋ,[1] (ಆತ್ಮನು[2] ಹೇಗೆ ಅದಕ್ಕೆ) ಪ್ರವೃತ್ತಿನಿಮಿತ್ತವಾದಾನೋ, ಅದನ್ನು (ಹೇಳುವದಕ್ಕೆ) (ಅದು) ವಿಷಯವಲ್ಲದೆ ಇರುವದರಿಂದ ನಾವು ತಿಳಿಯೆವು ನಾವರಿಯೆವು (ಎಂದರ್ಥ). ಅಥವಾ ಶ್ರೋತ್ರಾದಿಗಳಿಗೂ ಶ್ರೋತ್ರಾದಿಯಾಗಿರುವ ಬ್ರಹ್ಮನನ್ನು ವಿಶೇಷರೂಪದಿಂದ ತೋರಿಸಿಕೊಡಿರಿ ಎಂದು (ಶಿಷ್ಯನು) ಕೇಳಲು ಆಚಾರ್ಯನು ಹೇಳುತ್ತಾನೆ (ಹಾಗೆ) ತೋರಿಸಿಕೊಡುವದಕ್ಕೆ ಆಗಲಾರದು. ಏಕೆಂದರೆ, "ಅಲ್ಲಿಗೆ ಚಕ್ಷುಸ್ಸು ಹೋಗುವದಿಲ್ಲ" ಇವೇ ಮುಂತಾದ (ವಾಕ್ಯಗಳಿಗೆಲ್ಲ) ಹಿಂದಿನಂತೆ (ಅರ್ಥವನ್ನು ಹೇಳಬೇಕು). ಆದರೆ ಇಲ್ಲಿ "ಯಥೈದನುಶಿಷ್ಯಾತ್" ಎಂಬ (ಮಾತಿಗೆ ಅರ್ಥ ಹೇಳುವದರಲ್ಲಿ) ವಿಶೇಷ (ವಿದೆ) ಯಥೈದನುಶಿಷ್ಯಾತ್ ಎಂದರೆ ಬೇರೊಬ್ಬ (ಆಚಾರ್ಯ)ನಾದರೂ ಶಿಷ್ಯರಿಗೆ ಈ ಮಾರ್ಗವನ್ನು ಬಿಟ್ಟು ಹೇಗೆ ತಿಳಿಸಿಕೊಡಬಲ್ಲನೋ ನಾವರಿಯೆವು ಎಂದು ಅಭಿಪ್ರಾಯ.

ಆತ್ಮನು ಜ್ಞಾತವೂ ಅಲ್ಲ, ಅಜ್ಞಾತವೂ ಅಲ್ಲವೆಂಬ ಆಗಮ

ಅನ್ಯದೇವ... . ಯೇನಸ್ತದ್ವ್ಯಾಚಚಕ್ಷಿರೇ ॥ ೪ ॥

(ಭಾಷ್ಯ)

೧೦೫ ಸರ್ವಥಾಪಿ ಬ್ರಹ್ಮ ಬೋಧೆಯ ಇತ್ಯುಕ್ತ ಆಚಾರ್ಯ ಆಹ "ಅನ್ಯದೇವ ತದ್ವಿದಿತಾದಧೋ ಅವಿದಿತಾದಧಿ" ಇತ್ಯಾಗಮಮ್ । ವಿದಿತಾವಿದಿತಾಭ್ಯಾಮ್ ಅನ್ಯತ್ । ಯೋ ಹಿ ಜ್ಞಾತಾ ಸ ಏವ ಸಃ । ಸರ್ವಾತ್ಮಕತ್ವಾತ್ । ಅತಃ ಸರ್ವಾತ್ಮನೋ ಜ್ಞಾತುರ್ಜ್ಞಾತೃನ್ತರಾಭಾವಾದ್ ವಿದಿತಾದನ್ಯತ್ವಮ್ । "ಸ ವೇತ್ತಿ ವೇದ್ಯಂ ನ ಚ ತಸ್ಯಾಸ್ತಿ ವೇತ್ತಾ" (ಶ್ವೇ. ೩-೧೯) ಇತಿ ಚ ಮನ್ತ್ರವರ್ಣಾತ್ । "ವಿಜ್ಞಾತಾರಮರೇ ಕೇನ ವಿಜಾನೀಯಾತ್ ।" (ಬೃ ೨-೪-೧೪) ಇತಿ ಚ ವಾಜಸನೇಯಕೇ ।

---

1. ಈ ಶಬ್ದವು ಇಲ್ಲಿಗೆ ಅಷ್ಟು ಹೊಂದುವದಿಲ್ಲ.

2. ಹೀಗೆ ಅಧ್ಯಾಹಾರಮಾಡಿಕೊಳ್ಳದೆ ಈಗಿರುವಂತೆ ವಾಕ್ಯದಲ್ಲಿ ಪದಗಳು ಅನ್ವಯವಾಗುವಂತಿಲ್ಲ.

ಅಪಿ ಚ ವ್ಯಕ್ತಮೇವ ವಿದಿತಮ್, ತಸ್ಮಾದನ್ಯತ್, ಇತ್ಯಭಿಪ್ರಾಯಃ। ಯದ್ ವಿದಿತಂ ವ್ಯಕ್ತಂ ತದನ್ಯವಿಷಯತ್ವಾತ್ ಅಲ್ಪಮ್, ಸವಿರೋಧಮ್, ತತೋಽನಿತ್ಯಮ್, ತತ ಏವಾನೇಕತ್ವಾದಶುದ್ಧಮ್, ಅತ ಏವ ತದ್ವಿಲಕ್ಷಣಂ ಬ್ರಹ್ಮೇತಿ ಸಿದ್ಧಮ್ ॥

(ಭಾಷ್ಯಾರ್ಥ)

ಯಾವ ಪ್ರಕಾರದಿಂದಾದರೂ ಬ್ರಹ್ಮವನ್ನು ತಿಳಿಸಿರಿ ಎಂದು (ಶಿಷ್ಯನು) ಕೇಳಲು ಆಚಾರ್ಯನು "ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ" ಎಂಬ ಆಗಮವನ್ನು ಹೇಳಿರುತ್ತಾನೆ. (ಅದು) ವಿದಿತ (ತಿಳಿಯಲ್ಪಟ್ಟದ್ದು) ಅವಿದಿತ (ತಿಳಿಯಲ್ಪಡದೆ ಇರುವದು)–ಇವೆರಡಕ್ಕಿಂತಲೂ ಬೇರೆ. ಹೇಗೆಂದರೆ· ಯಾವನು ಜ್ಞಾತೃವೋ ಅವನು ಅವನೇ,[1] ಏಕೆಂದರೆ (ಆತನು) ಸರ್ವರ ಆತ್ಮನಾಗಿರುತ್ತಾನೆ. ಆದ್ದರಿಂದ ಎಲ್ಲರಿಗೂ ಆತ್ಮನಾಗಿರುವ ಜ್ಞಾತೃವಿಗೆ (ಅವನನ್ನರಿಯದ) ಮತ್ತೊಬ್ಬ ಅರಿಯುವಾತನು ಇಲ್ಲದ್ದರಿಂದ (ಅವನು) ವಿದಿತಕ್ಕಿಂತಲೂ ಬೇರೆಯೆಂದಾಯಿತು. "ಆತನು ಬೇಕಾದದ್ದೆಲ್ಲವನ್ನೂ ಅರಿತುಕೊಳ್ಳುತ್ತಾನೆ, ಆತನನ್ನು ಅರಿಯುವವನು (ಬೇರೊಬ್ಬ) ನಿಲ್ಲ" (ಶ್ವೇ. ೩-೧೯) ಎಂದು **ಮಂತ್ರವರ್ಣ**ವೂ ಇದೆ. "ಎಲೆ, ಅರಿಯುವಾತನನ್ನು ಏತರಿಂದ ಅರಿತಾನು?" (ಬೃ. ೨-೪-೧೪) ಎಂದು **ವಾಜಸನೇಯಕ**ದಲ್ಲಿಯೂ ಇದೆ ಇದಲ್ಲದೆ ವಿದಿತವೆಂದರೆ ವ್ಯಕ್ತವಾದದ್ದೇ, ಅದಕ್ಕಿಂತ (ಬ್ರಹ್ಮವು) ಬೇರೆ ಎಂದಭಿಪ್ರಾಯ ಯಾವದು ವಿದಿತವೋ ಎಂದರೆ ವ್ಯಕ್ತವೋ ಅದು ಮತ್ತೊಂದಕ್ಕೆ ವಿಷಯವಾಗಿರುವದರಿಂದ ಅಲ್ಪವು, (ತನಗೆ) ವಿರುದ್ಧವಾದ (ಮತ್ತೊಂದು)ಳ್ಳದ್ದು. ಆದ್ದರಿಂದ ಅನಿತ್ಯವು, ಅದರಿಂದಲೇ ಅನೇಕವಾಗಿರುವದರಿಂದ ಅಶುದ್ಧವು. ಆದ್ದರಿಂದಲೇ ಅದಕ್ಕಿಂತ ಬ್ರಹ್ಮವು ಬೇರೆ ಎಂದು ಸಿದ್ಧವಾಯಿತು.

(ಭಾಷ್ಯ)

೧೦೬. ಅಸ್ತು ತರ್ಹ್ಯವಿದಿತಮ್। ನ[1] ವಿಜ್ಞಾನಾನಪೇಕ್ಷತ್ವಾತ್। ಯದ್ ಹಿ ಅವಿದಿತಂ ತದ್ ವಿಜ್ಞಾನಾಪೇಕ್ಷಮ್। ಅವಿದಿತವಿಜ್ಞಾನಾಯ ಹಿ ಲೋಕಪ್ರವೃತ್ತಿಃ। ಇದಂ ತು ವಿಜ್ಞಾನಾನಪೇಕ್ಷಮ್। ಕಸ್ಮಾತ್? ವಿಜ್ಞಾನಸ್ವರೂಪತ್ವಾತ್। ನ ಹಿ ಯಸ್ಯ ಯತ್ ಸ್ವರೂಪಂ ತತ್ ತೇನ ಅನ್ಯತೋಽಪೇಕ್ಷ್ಯತೇ। ನ ಚ ಸ್ವತ ಏವಾಪೇಕ್ಷಾ। ಅನಪೇಕ್ಷಮೇವ ಸಿದ್ಧತ್ವಾತ್। ಪ್ರದೀಪಃ ಸ್ವರೂಪಾಭಿವ್ಯಕ್ತೌ ನ ಪ್ರಕಾಶಾನ್ತರಮ್ ಅನ್ಯತೋಽಪೇಕ್ಷತೇ ಸ್ವತೋ ವಾ। ಯದ್ ಹಿ ಅನಪೇಕ್ಷಂ ತತ್ ಸ್ವತ ಏವ ಸಿದ್ಧಂ ಪ್ರಕಾಶಾತ್ಮಕತ್ವಾತ್। ಪ್ರದೀಪಸ್ಯಾನ್ಯೋಽಪೇಕ್ಷಿತೋಽಪ್ಯನರ್ಥಕಃ ಸ್ಯಾತ್, ಪ್ರಕಾಶೇ ವಿಶೇಷಾಭಾವಾತ್। ನ ಹಿ 'ಪ್ರದೀಪಸ್ಯ ಸ್ವರೂಪಾಭಿವ್ಯಕ್ತೌ

---

1. ಅವನು ಜ್ಞಾತೃವೇ, ಜ್ಞೇಯವಲ್ಲ.

ಪ್ರಕಾಶೋಽರ್ಥವಾನ್ । ನ ಚೈವಮಾತ್ಮನೋಽನ್ಯತ್ರ ವಿಜ್ಞಾನಮಸ್ತಿ । ಯೇನ ಸ್ವರೂಪವಿಜ್ಞಾನೇಽಸ್ಯಪೇಕ್ಷ್ಯೇತ ॥

(ಭಾಷ್ಯಾರ್ಥ)

ಹಾಗಾದರೆ ಅದು ಅವಿದಿತವೇ ಆಗಲಿ–ಎಂದರೆ ಹಾಗಲ್ಲ. ಏಕೆಂದರೆ ಅದಕ್ಕೆ ಅರಿವಿನ ಅಪೇಕ್ಷೆಯಿರುವದಿಲ್ಲ. ಯಾವದು ಅವಿದಿತವೋ (ತಿಳಿಯದೆ ಇರುವದೋ) ಅದಕ್ಕೆ ಅರಿವಿನ ಅಪೇಕ್ಷೆಯಿರುತ್ತದೆ. ಏಕೆಂದರೆ ಅರಿಯದೆ ಇರುವದನ್ನೇ ಅರಿಯುವದಕ್ಕೆಂದು ಜನರು ತೊಡಗುವರು. ಆದರೆ ಇದಕ್ಕೆ ಅರಿವಿನ ಅಪೇಕ್ಷೆಯಿರುವದಿಲ್ಲ. ಏಕೆಂದರೆ (ಇದು) ಅರಿವಿನ ಸ್ವರೂಪವೇ ಆಗಿರುತ್ತದೆ. ಯಾವದಕ್ಕೆ ಯಾವದು ಸ್ವರೂಪವೇ ಆಗಿರುವದೋ ಅದು ತನಗಿಂತ ಬೇರೆಯೊಂದರಿಂದ ಅದನ್ನು ಬಯಸುವದಿಲ್ಲ; ತನ್ನಿಂದಲೂ (ಅದನ್ನು) ಬಯಸುವದಿಲ್ಲ,[1] ಏಕೆಂದರೆ ಯಾವದರ ಬಯಕೆಯೂ ಇಲ್ಲದೆಯೇ ತಾನು ಸಿದ್ಧವಾಗಿರುತ್ತದೆ. ದೀಪವು ತನ್ನ ರೂಪವನ್ನು ತೋರಿಸಿಕೊಳ್ಳುವದಕ್ಕೆ ಮತ್ತೊಂದರಿಂದ ಇನ್ನೊಂದು ಬೆಳಕನ್ನಾಗಲಿ ತನ್ನಿಂದಲೇ ಆಗಲಿ ಬಯಸುವದಿಲ್ಲ. ಯಾವದು ಮತ್ತೊಂದನ್ನು ಬಯಸುವದಿಲ್ಲವೋ ಅದು ತನ್ನಿಂದತಾನೇ ಸಿದ್ಧವಾಗಿರುತ್ತದೆ, ಏಕೆಂದರೆ (ಅದು) ಪ್ರಕಾಶರೂಪವಾಗಿರುತ್ತದೆ. ದೀಪಕ್ಕೆ[2] (ಮತ್ತೊಂದು ಬೆಳಕು) ಬೇಕೆಂದರೂ ವ್ಯರ್ಥವಾಗುವದು, ಏಕೆಂದರೆ ಬೆಳಕಿನಲ್ಲಿ ಯಾವ ವಿಶೇಷವೂ ಇರುವದಿಲ್ಲ: ದೀಪವು ತನ್ನ ಸ್ವರೂಪವನ್ನು ತೋರಿಸಿಕೊಳ್ಳತಕ್ಕಬಗ್ಗೆ ದೀಪದ ಬೆಳಕು ಯಾವದಾದರೂ ಪ್ರಯೋಜನವುಳ್ಳದ್ದಾಗಿರುವದಿಲ್ಲವಲ್ಲವೆ? ಹೀಗೆಂದು ಇಟ್ಟುಕೊಂಡರೂ[3] ಆತ್ಮನಿಗಿಂತ ಬೇರೆಯಾದ ಬೆಳಕು ಇಲ್ಲವೂ ಇಲ್ಲ, ಇದಿದ್ದರೆ[4] ತನ್ನನ್ನು ಅರಿಯುವದಕ್ಕೂ ಬೇಕೆಂದು ಹೇಳಬಹುದಾಗಿತ್ತು.

(ಭಾಷ್ಯ)

೧೦೭. ವಿರೋಧ ಇತಿ ಚೇತ್ । ನ । ಅನ್ಯತ್ವಾತ್ । ಸ್ವರೂಪವಿಜ್ಞಾನೇ ವಿಜ್ಞಾನಸ್ವರೂಪತ್ವಾದ್ ವಿಜ್ಞಾನಾನ್ತರಂ ನಾಪೇಕ್ಷ್ಯತ ಇತ್ಯೇತದಸತ್ । ದೃಶ್ಯತೇ ಹಿ

---

1. ಆತ್ಮನು ವಿಜ್ಞಾನಸ್ವರೂಪನಾದರೂ ವಿಜ್ಞಾನವು ವಿಜ್ಞಾನವನ್ನೇ (ತನ್ನನ್ನೇ) ಬೆಳಗಬಹುದಲ್ಲ!–ಎಂಬ ವಿಜ್ಞಾನವಾದಿಗಳ ಶಂಕೆಗೆ ಉತ್ತರವಿದು.

2. ಇಲ್ಲಿ 'ದೀಪಕ್ಕೆ' ಎಂಬ ಮಾತು ಅನವಶ್ಯಕವೆಂದು ತೋರುವದು. ಏಕೆಂದರೆ ತಾನೇ ಪ್ರಕಾಶರೂಪವಾಗಿರುವ ವಸ್ತುವಿಗೆ ತನ್ನನ್ನು ಬೆಳಗುವ ಮತ್ತೊಂದು ಬೆಳಕಿನ ಬಯಕೆ ಬೇಕಿಲ್ಲ; ಬೇಕೆಂದರೂ ಅದು ವ್ಯರ್ಥವೂ ಆಗಮದು–ಎಂಬುದು ಇಲ್ಲಿ ವಾದವು.

3. ಬೆಳಕನ್ನು ತೋರಿಸುವದಕ್ಕೂ ಮತ್ತೊಂದು ಬೆಳಕು ಬೇಕೆಂದು ಇಟ್ಟುಕೊಂಡರೂ.

4. "ಯತ್" ಎಂದಿಷ್ಟೇ ಇದ್ದರೂ ಸಾಕಾಗುವದು.

ವಿಪರೀತಜ್ಞಾನಮಾತ್ಮನಿ ಸಮ್ಯಗ್ಜ್ಞಾನಂ ಚ ನ (?) ಜಾನಾಮ್ಯಾತ್ಮಾನಮಿತಿ | ಶ್ರುತೇಶ್ಚ "ತತ್ತ್ವಮಸಿ" (ಛಾ. ೬-೮-೭), "ಆತ್ಮಾನಮೇವಾವೇತ್" (ಬೃ. ೧-೪-೧೦), "ಏತಂ ವೈ ತಮಾತ್ಮಾನಂ ವಿದಿತ್ವಾ" (ಬೃ. ೩-೫-೧),—ಇತಿ ಚ ಸರ್ವತ್ರ ಶ್ರುತಿಷ್ವಾತ್ಮವಿಜ್ಞಾನೇ ವಿಜ್ಞಾನಾನ್ತರಾಪೇಕ್ಷತ್ವಂ ದೃಶ್ಯತೇ । ತಸ್ಮಾತ್ ಪ್ರತ್ಯಕ್ಷಶ್ರುತಿ ವಿರೋಧ ಇತಿ ಚೇತ್ । ನ । ಕಸ್ಮಾತ್ । ಅನ್ಯೋ ಹಿ ಸ ಆತ್ಮಾ ಬುದ್ಧ್ಯಾದಿಕಾರ್ಯಕರಣಸಙ್ಘಾತಾಭಿಮಾನಸನ್ತಾನವಿಚ್ಛೇದಲಕ್ಷಣೋಽವಿವೇಕಾತ್ಮಕೋ ಬುದ್ಧ್ಯವಭಾಸಪ್ರಧಾನಶ್ಚಕ್ಷುರಾದಿಕರಣೋ ನಿತ್ಯಚಿತ್ಸ್ವರೂಪಾತ್ಮಾನ್ತಃ ಸಾರೋ ಯತ್ರಾನಿತ್ಯಂ ವಿಜ್ಞಾನಮವಭಾಸತೇ । ಬೌದ್ಧಪ್ರತ್ಯಯಾನಾಮ್ ಆವಿರ್ಭಾವತಿರೋಭಾವಧರ್ಮಕತ್ವಾತ್ ತದ್ಧರ್ಮತಯೈವ ವಿಲಕ್ಷಣಮಪಿ ಜ್ಞಾವಭಾಸತೇ। ಅನ್ತಃಕರಣಸ್ಯ ಮನಸೋಽಪಿ ಮನೋಽನ್ತರ್ಗತತ್ವಾತ್ (?) ಸರ್ವಾನ್ತರಶ್ರುತೇಃ ಅನ್ತರ್ಗತೇನ ನಿತ್ಯವಿಜ್ಞಾನಸ್ವರೂಪೇಣ ಆಕಾಶವದಪ್ರಚಲಿತಾತ್ಮನಾ ಅನ್ತರ್ಗರ್ಭಭೂತೇನ ಸಬಾಹ್ಯೋ ಬುದ್ಧ್ಯಾತ್ಮಾ ತದ್ವಿಲಕ್ಷಣಃ ಅನಗ್ನಿರಿವಾಗ್ನಿರರ್ಚಿಭಿರಿವಾಗ್ನೇಃ ಪ್ರತ್ಯಯೈರಾವಿರ್ಭಾವತಿರೋಭಾವಧರ್ಮಕೈರ್ವಿಜ್ಞಾನಾಭಾಸರೂಪೈರನಿತ್ಯೈಃ ಅನಿತ್ಯ ವಿಜ್ಞಾನ ಆತ್ಮಾ, ಸುಖೀ, ದುಃಖೀ—ಇತ್ಯಭ್ಯುಪಗತೋ ಲೌಕಿಕೈಃ । ಅತೋಽನ್ಯೋ ನಿತ್ಯವಿಜ್ಞಾನಸ್ವರೂಪಾದಾತ್ಮನಃ । ತತ್ರ ಹಿ ವಿಜ್ಞಾನಾಪೇಕ್ಷಾ ವಿಪರೀತಜ್ಞಾನತ್ವಂ (?) ಚೋಪಪದ್ಯತೇ, ನ ಪುನರ್ನಿತ್ಯವಿಜ್ಞಾನೇ ॥

(ಭಾಷ್ಯಾರ್ಥ)

(ಶಂಕೆ) :—ವಿರುದ್ಧವಲ್ಲವೆ? ಎಂದರೆ ಅಲ್ಲ, ಏಕೆಂದರೆ ಅನ್ಯನಾಗಿರುತ್ತಾನೆ, ವಿಜ್ಞಾನಸ್ವರೂಪನೇ ಆಗಿರುವದರಿಂದ (ತನ್ನ) ಸ್ವರೂಪವನ್ನು ಅರಿಯುವದಕ್ಕೆ ಮತ್ತೊಂದು ಅರಿವನ್ನು ಬಯಸುವದಿಲ್ಲ ಎಂಬುದು ಸರಿಯಲ್ಲ, ಏಕೆಂದರೆ ಆತ್ಮನ ವಿಷಯಕ್ಕೆ ತಪ್ಪು ತಿಳಿವಳಿಕೆಯೂ ಆತ್ಮನನ್ನು ಅರಿತುಕೊಂಡೆನೆಂಬ[1] ಸರಿಯಾದ ತಿಳಿವಳಿಕೆಯೂ ಕಂಡುಬರುತ್ತದೆ. ಶ್ರುತಿಯಿಂದಲೂ (ಇದು ತಿಳಿಯಬರುತ್ತದೆ): "ಅದೇ ನೀನಾಗಿರುವೆ" (ಛಾ. ೬-೮-೭), "ತನ್ನನ್ನೇ ಅರಿತುಕೊಂಡಿತು" (ಬೃ. ೧-೪-೧೦), "ಈ ಆ ಆತ್ಮನನ್ನೇ ಅರಿತುಕೊಂಡು. ...." (ಬೃ. ೩-೫-೧)' ಎಂದು ಶ್ರುತಿಗಳಲ್ಲೆಲ್ಲ ಆತ್ಮನನ್ನರಿಯುವದಕ್ಕೆ ಬೇರೊಂದು ಅರಿವಿನ ಬಯಕೆಯಿರುವದು ಕಂಡುಬರುತ್ತದೆ. ಆದ್ದರಿಂದ (ನೀವು ಹೇಳುವದು) ಪ್ರತ್ಯಕ್ಷಕ್ಕೂ ಶ್ರುತಿಗೂ ವಿರೋಧವಾಗಿದೆಯಲ್ಲ!

(ಪರಿಹಾರ) :—ಹಾಗಲ್ಲ. ಏಕೆಂದರೆ ಬುದ್ಧಿಯೇ ಮುಂತಾದ ಕಾರ್ಯ ಕರಣಗಳ ಸಂಘಾತದಲ್ಲಿ ಅಭಿಮಾನವು ನಿಲ್ಲದೆ ನಡೆದಿರುವದೆಂಬ ಲಕ್ಷಣವುಳ್ಳವನೂ

1. "ನ ಜಾನಾಮ್ಯಾತ್ಮಾನಮ್" ಎಂಬಲ್ಲಿ ನ ಶಬ್ದವು ಹೆಚ್ಚೆಂದು ತೋರುತ್ತದೆ.

ಅವಿವೇಕಸ್ವರೂಪನೂ ಬುದ್ಧಿಯ ಆವಭಾಸವೇ ಪ್ರಧಾನವಾಗಿ ಉಳ್ಳವನೂ ಚಕ್ಷುಸ್ಸೇ ಮುಂತಾದ ಕರಣಗಳುಳ್ಳವನೂ ನಿತ್ಯಚಿತ್ಸ್ವರೂಪನಾದ ಆತ್ಮನೆಂಬ ಒಳಗಿನ ಸಾರವುಳ್ಳವನೂ (ಆಗಿರುವ) ಆ ಆತ್ಮನು ಬೇರೆಯಾಗಿರುತ್ತಾನೆ, ಅವನಲ್ಲಿ ಅನಿತ್ಯವಾದ ವಿಜ್ಞಾನವು ತೋರುತ್ತಿರುತ್ತದೆ. (ಆ ಆತ್ಮನು) ಬುದ್ಧಿಯ ಧರ್ಮಗಳು ತೋರಿಕೊಳ್ಳುವದು, ಮರೆಯಾಗುವದು–ಎಂಬ ಸ್ವಭಾವದವನಾಗಿರುವದರಿಂದ, (ವಿಜ್ಞಾನವು) ತಾನು ಬೇರೆಯ ಸ್ವಭಾವದ್ದಾದರೂ[1], ಆ (ಬುದ್ಧಿಯ ಪ್ರತ್ಯಯಗಳ) ಧರ್ಮವುಳ್ಳದ್ದಾಗಿಯೇ ತೋರುತ್ತಿರುವದು. ಅದು (ತನ್ನ ಸ್ವರೂಪದಿಂದ) ಅಂತಃಕರಣವಾದ "ಮನಸ್ಸಿಗೂ ಮನಸ್ಸು"; ಏಕೆಂದರೆ (ಅದರೊಳಗೆ) ಇದ್ದುಕೊಂಡಿರುತ್ತದೆ· (ಆತ್ಮನು) **ಸರ್ವಾಂತರನೆಂಬ ಶ್ರುತಿಯು**[2] ಇದಕ್ಕೆ ಪ್ರಮಾಣವು. ತನ್ನೊಳಗಿರುವ ನಿತ್ಯವಿಜ್ಞಾನಸ್ವರೂಪನಾದ, ಆಕಾಶದಂತೆ (ಸ್ವಲ್ಪವೂ) ಅಲುಗಾಡದ ಸ್ವರೂಪವುಳ್ಳ, ಒಳಗಿರುವ ಗರ್ಭವಾಗಿರುವ, (ಆ ಆತ್ಮ)ನಿಂದ ಹೊರಗಿನ ಆ ವಿಜ್ಞಾನಾತ್ಮನು ಈ (ಶುದ್ಧಾತ್ಮನಿಗಿಂತ) ವಿಲಕ್ಷಣನಾಗಿ, ಬೆಂಕಿಯ ಜ್ವಾಲೆಗಳಿಂದ ಬೆಂಕಿಯಲ್ಲದ್ದೂ ಬೆಂಕಿಯಾಗಿರುವಂತೆ,[3] ತೋರಿಕೊಳ್ಳುವದು ಮರೆಯಾಗುವದು–ಎಂಬ ಧರ್ಮಗಳುಳ್ಳ ವಿಜ್ಞಾನದಂತೆ ಹೊಳೆಯುವ ಅನಿತ್ಯವಾದ ಪ್ರತ್ಯಯಗಳಿಂದ ಅನಿತ್ಯವಿಜ್ಞಾನವುಳ್ಳವನಾಗಿ, ಆತ್ಮನು, ಸುಖಿಯು, ದುಃಖಿಯು–ಎಂದು ಲೋಕದ ಜನರು ಅಂಗೀಕರಿಸಿರುವರಲ್ಲ, ಅವನು ನಿತ್ಯವಿಜ್ಞಾನಸ್ವರೂಪನಾದ ಈ ಆತ್ಮನಿಗಿಂತ ಬೇರೆಯಾಗಿರುತ್ತಾನೆ. ಅವನ ವಿಷಯದಲ್ಲಿಯೇ ವಿಜ್ಞಾನದ ಬಯಕೆಯೂ ತಪ್ಪುತಿಳಿವಳಿಕೆಯೂ[4] ಹೊಂದುತ್ತದೆಯೇ ಹೊರತು ನಿತ್ಯವಿಜ್ಞಾನ (ರೂಪನಾದ ಆತ್ಮನ) ವಿಷಯದಲ್ಲಿ ಹೊಂದುವದಿಲ್ಲ.

(ಭಾಷ್ಯ)

೧೦೮. "ತತ್ತ್ವಮಸಿ" (ಛಾ. ೬-೮-೭) ಇತಿ ಬೋಧೋಪದೇಶೋ ನೋಪಪದ್ಯತ ಇತಿ ಚೇತ್? "ಆತ್ಮಾನಮೇವಾವೇತ್" (ಬೃ. ೧-೪-೧೦) ಇತ್ಯೇವಮಾದೀನಿ ಚ, ನಿತ್ಯಬೋಧಾತ್ಮಕತ್ವಾತ್। ನ ಹ್ಯಾದಿತ್ಯೋಽನ್ಯೇನ ಪ್ರಕಾಶ್ಯತೇ, ಅತಸ್ತ

---

1. ಪರಮಾರ್ಥರೂಪವಲ್ಲಿ ವಿಜ್ಞಾನವು, ಚೈತನ್ಯವು, ಕೂಟಸ್ಥವಾಗಿದ್ದರೂ ಅಂತಃಕರಣಧರ್ಮಗಳಿಂದ ವಿಕಾರವುಳ್ಳದ್ದಾಗಿ ತೋರುತ್ತದೆ ಎಂದರ್ಥ.

2. ಬೃ. ೩-೪-೧.

3. ಬೆಂಕಿಯಲ್ಲದ ನೀರೂ ಸುಡುವದಾಗುವಂತೆ.

4. "ವಿಪರೀತಜ್ಞಾನಂ" ಎಂದಿಷ್ಟೇ ಸಾಕು. ಅಹಂಪ್ರತ್ಯಯಗಮ್ಯನಾದ ಚಿದಾಭಾಸಸಹಿತನಾದ ಆತ್ಮನಲ್ಲಿಯೇ ವಿಜ್ಞಾನವಿಷಯತ್ವವಿರುವದು ಎಂದು ಭಾವ.

ದರ್ಥಬೋಧೋಪದೇಶೋಽನರ್ಥಕ ಇತಿ ಚೇತ್ । ನ । ಲೋಕಾಧ್ಯಾರೋಪಾಪೋಹಾರ್ಥತ್ವಾತ್ । ಸರ್ವಾತ್ಮನಿ ಹಿ ನಿತ್ಯವಿಜ್ಞಾನೇ ಬುದ್ಧ್ಯಾದ್ಯನಿತ್ಯಧರ್ಮಾ ಲೋಕೈರಧ್ಯಾರೋಪಿತಾ ಆತ್ಮವಿವೇಕತಃ । ತದಪೋಹಾರ್ಥೋ ಬೋಧೋಪದೇಶೋ ಬೋಧಾತ್ಮನಃ । ತತ್ರ ಚ ಬೋಧಾಬೋಧೌ ಸಮಞ್ಜಸೌ । ಅನ್ಯನಿಮಿತ್ತತ್ವಾತ್, ಉದಕ ಇವೌಷ್ಣ್ಯಮಗ್ನಿನಿಮಿತ್ತಮ್ । ರಾತ್ರ್ಯಹನೀ ಇವಾದಿತ್ಯನಿಮಿತ್ತೇ ಲೋಕೇ । ನಿತ್ಯಾವೌಷ್ಣ್ಯಪ್ರಕಾಶೌ ಅಗ್ನ್ಯಾದಿತ್ಯಯೋರನ್ಯತ್ರ ಭಾವಾಭಾವಯೋಃ ಸನಿಮಿತ್ತತ್ವಾತ್ [1] ಅನಿತ್ಯಾವಿವೋಪಚರ್ಯೇತೇ ಧರ್ಷ್ಟ್ಯತ್ಯಗ್ನಿಃ ಪ್ರಕಾಶಯತಿ ಸವಿತಾ ಇತಿ, ತದ್ವತ್ । ಏವಂ ಚ ಸುಖದುಃಖಬನ್ಧಾದ್ಯಧ್ಯಾರೋಪೋ ಲೋಕಸ್ಯ । ತದಪೇಕ್ಷ್ಯ “ತತ್ತ್ವಮಸಿ” (ಛಾ. ೬-೮-೭), “ಆತ್ಮಾನಮೇವಾವೇತ್” (ಬೃ. ೧-೪-೧೦) ಇತ್ಯಾತ್ಮಾವಬೋಧೋಪದೇಶಿನ್ಯಃ [2] ಶ್ರುತಯಃ ಕೇವಲಮಧ್ಯಾರೋಪಾಪೋಹಾರ್ಥಾಃ । ಯಥಾ “ಸವಿತಾಸೌ ಪ್ರಕಾಶಯತ್ಯಾತ್ಮಾನಮ್” ಇತಿ ತದ್ವತ್ ಬೋಧಕರ್ತೃತ್ವಂ [3] ಚ ನಿತ್ಯಬೋಧಾತ್ಮನಿ । ತಸ್ಮಾದನ್ಯದವಿದಿತಾತ್॥

(ಭಾಷ್ಯಾರ್ಥ)

(ಶಂಕೆ):—“ತತ್ತ್ವಮಸಿ”(ಛಾ. ೬-೮-೭) ಎಂಬ ಮತ್ತು “ಆತ್ಮಾನಮೇವಾವೇತ್” (ಛಾ. ೧-೪-೭) ಎಂಬುದೇ ಮುಂತಾದ ಜ್ಞಾನೋಪದೇಶವು ಹೊಂದುವದಿಲ್ಲವಲ್ಲ! ಏಕೆಂದರೆ (ಆತ್ಮನು) ನಿತ್ಯಜ್ಞಾನಸ್ವರೂಪನಾಗಿರುತ್ತಾನೆ. ಸೂರ್ಯನು ಮತ್ತೊಂದರಿಂದ ಬೆಳಗಲ್ಪಡುವದಿಲ್ಲವಷ್ಟೆ. ಆದ್ದರಿಂದ (ಜ್ಞಾನ)ಕ್ಕಾಗಿ ಉಪದೇಶ ಮಾಡಿರುವದು ವ್ಯರ್ಥವೇ ಆಯಿತಲ್ಲ!

(ಪರಿಹಾರ).—ಹಾಗಲ್ಲ. ಏಕೆಂದರೆ (ಅದು) ಜನರು (ಮಾಡಿಕೊಂಡಿರುವ) ಅಧ್ಯಾರೋಪವನ್ನು ಕಳೆಯುವದಕ್ಕಾಗಿ (ಬಂದಿರುತ್ತ)ದೆ. ಎಲ್ಲರ ಆತ್ಮನಾದ ನಿತ್ಯವಿಜ್ಞಾನ(ಸ್ವರೂಪನಾದ) ಆತ್ಮನಲ್ಲಿ ಅಂತಃಕರಣವೇ ಮುಂತಾದವುಗಳ ಅನಿತ್ಯಧರ್ಮಗಳು ಆತ್ಮನನ್ನು ವಿಂಗಡಿಸಿಕೊಂಡಿರಿಯದೆ ಇರುವದರಿಂದ ಅಧ್ಯಾರೋಪಿತವಾಗಿರುತ್ತವೆ ಜ್ಞಾನ(ಸ್ವರೂಪನಾದ) ಆತ್ಮನಿಗೆ ಜ್ಞಾನವನ್ನು ಉಪದೇಶಿಸಿರುವದು ಆ (ಅಧ್ಯಾರೋಪವನ್ನು) ಕಳೆಯುವದಕ್ಕೆ.

ಮತ್ತು ಆ (ಜ್ಞಾನಸ್ವರೂಪದಲ್ಲಿ) ಜ್ಞಾನಾಜ್ಞಾನಗಳೂ ಸಮಂಜಸವಾಗಿರುತ್ತವೆ; ಏಕೆಂದರೆ ಬೆಂಕಿಯಿಂದ ನೀರಿನಲ್ಲಿ ಆಗುವ ಬಿಸಿಯಂತೆಯೂ ಸೂರ್ಯನೆಂಬ ನಿಮಿತ್ತ

---

1. “ನಿಮಿತ್ತತ್ವಾತ್” ಎಂಬ (ಆ॥) ಪಾಠಕ್ಕಿಂತ ಈ (ವಾ॥) ಪಾಠವೇ ಮೇಲು.
2. ಇದೂ (ವಾ॥) ಪಾಠ.
3. “ಬೋಧಾಬೋಧ ಎಂಬ (ಆ॥) ಪಾಠವು ಬೇಕಿಲ್ಲ.

ದಿಂದ ಲೋಕದಲ್ಲಿ ರಾತ್ರಿಹಗಲುಗಳಂತೆಯೂ, (ಅವು) ಮತ್ತೊಂದರ ನಿಮಿತ್ತದಿಂದ (ಆಗಿರುತ್ತವೆ). ಬೆಂಕಿ, ಸೂರ್ಯ–ಇವರಲ್ಲಿ ನಿತ್ಯವಾಗಿರುವ ಬಿಸಿ, ಬೆಳಕು–ಇವು ಮಿಕ್ಕ ಕಡೆಗಳಲ್ಲಿ ಇರುವದಾಗಲಿ ಇಲ್ಲದ್ದಾಗಲಿ (ಒಂದಾನೊಂದು) ನಿಮಿತ್ತದಿಂದಾಗಿರುವದರಿಂದ (ಇಲ್ಲಿಯೂ) ಅನಿತ್ಯವೆಂಬಂತೆ "ಬೆಂಕಿಯು ಸುಡುವದು" "ಸೂರ್ಯನು ಬೆಳಗುವನು" ಎಂದು ಪ್ರಯೋಗಮಾಡುವರು; ಅದರಂತೆಯೇ (ಆತ್ಮನ ವಿಷಯದಲ್ಲಿಯೂ ತಿಳಿಯಬೇಕು). ಈರೀತಿಯಲ್ಲಿ (ಆತ್ಮನಲ್ಲಿ) ಜನರು ಸುಖ, ದುಃಖ, ಬಂಧ, ಮೋಕ್ಷ–ಮುಂತಾದ ಅಧ್ಯಾರೋಪವನ್ನು ಮಾಡುವರಷ್ಟೆ; ಅದನ್ನು ಲೆಕ್ಕದಲ್ಲಿಟ್ಟುಕೊಂಡು "ತತ್ತ್ವಮಸಿ" (ಅದೇ ನೀನು) "ಆತ್ಮಾನಮೇವಾವೇತ್" (ತನ್ನನ್ನೇ ತಿಳಿದುಕೊಂಡಿತು)–ಎಂದು ಆತ್ಮಜ್ಞಾನವನ್ನು ಉಪದೇಶಿಸುವ ಶ್ರುತಿಗಳು ಆಧ್ಯಾರೋಪವನ್ನು ಕಳೆಯುವದಕ್ಕೆ ಮಾತ್ರ (ಬಂದಿರುತ್ತವೆ). ಹೇಗೆ "ಸೂರ್ಯನು ತನ್ನನ್ನು (ತಾನು) ಬೆಳಗಿಕೊಳ್ಳುತ್ತಾನೆ" ಎನ್ನುವೆವೋ ಹಾಗೆಯೇ ನಿತ್ಯಜ್ಞಾನಸ್ವರೂಪನಾದ (ಆತ್ಮನಲ್ಲಿ) ಜ್ಞಾನಕರ್ತೃತ್ವವನ್ನು (ತಿಳಿಯಬೇಕು). ಆದ್ದರಿಂದ "(ಅದು) ಅವಿದಿತಕ್ಕಿಂತಲೂ ಬೇರೆಯೇ".

(ಭಾಷ್ಯ)

೧೦೯. ಅಧಿಶಬ್ದಶ್ಚ ಅನ್ಯಾರ್ಥೇ। ಯದ್ವಾ ಯದ್ ಹಿ ಯಸ್ಯ ಅಧಿ ತತ್ ತತೋಽನ್ಯತ್ ಸಾಮರ್ಥ್ಯಾತ್, ಯಥಾ ಅಧಿ ಭೃತ್ಯಾದೀನಾಂ ರಾಜಾ। ಅವ್ಯಕ್ತಮೇವ ಅವಿದಿತಮ್, ತತೋಽನ್ಯತ್ ಇತ್ಯರ್ಥಃ ॥

(ಭಾಷ್ಯಾರ್ಥ)

ಅಧಿ ಎಂಬ ಮಾತು ಬೇರೆ ಎಂಬರ್ಥದಲ್ಲಿ ಬಂದಿರುತ್ತದೆ. ಅಥವಾ ಯಾವದು ಏತರಮೇಲೆ ಇರುತ್ತದೆಯೋ ಅದು ಅದಕ್ಕಿಂತ ಬೇರೆಯೆಂದು (ಶಬ್ದ)ದ ಅರ್ಥದಿಂದ (ಗೊತ್ತಾಗುತ್ತದೆ). ಹೇಗೆಂದರೆ ಅರಸನು ಸೇವಕರೇ ಮುಂತಾದವರ ಮೇಲೆ, (ಆದ್ದರಿಂದ ಅವರಿಗಿಂತ ಬೇರೆ). ಅವ್ಯಕ್ತವೇ (ಇಲ್ಲಿ) ಅವಿದಿತವು; ಆ (ಅವ್ಯಕ್ತಕ್ಕಿಂತಲೂ ಆತ್ಮತತ್ತ್ವವು) ಬೇರೆ ಎಂದರ್ಥ.

(ಭಾಷ್ಯ)

೧೧೦. ವಿದಿತಮ್ ಅವಿದಿತಂ ಚ ವ್ಯಕ್ತಾವ್ಯಕ್ತೇ ಕಾರ್ಯಕಾರಣತ್ವೇನ ವಿಕಲ್ಪಿತೇ। ತಾಭ್ಯಾಮ್ ಅನ್ಯದ್ ಬ್ರಹ್ಮ ವಿಜ್ಞಾನಸ್ವರೂಪಂ ಸರ್ವವಿಶೇಷಪ್ರತ್ಯಸ್ತಮಿತಮ್ ಇತ್ಯಯಂ ಸಮುದಾಯಾರ್ಥಃ। ಅತ ಏವ ಆತ್ಮತ್ವಾನ್ನ ಹೇಯ ಉಪಾದೇಯೋ ವಾ। ಅನ್ಯದ್ ಹಿ ಅನ್ಯೇನ ಹೇಯಮ್, ಉಪಾದೇಯಂ ವಾ। ನ ತೇನೈವ ತದ್ ಯಸ್ಯ ಕಸ್ಯಚಿದ್ ಹೇಯಮ್ ಉಪಾದೇಯಂ ವಾ ಭವತಿ। ಆತ್ಮಾ ಚ ಬ್ರಹ್ಮ ಸರ್ವಾನ್ತರತ್ವಾದ್ ಅವಿಷಯಃ। ಅತೋಽನ್ಯಸ್ಯಾಪಿ ನ ಹೇಯಮುಪಾದೇಯಂ ವಾ। ಅನ್ಯಾಭಾವಾಚ್ಚ ॥

(ಭಾಷ್ಯಾರ್ಥ)

ವಿದಿತ ಮತ್ತು ಅವಿದಿತ–ಇವು ವ್ಯಕ್ತಾವ್ಯಕ್ತಗಳು, ಕಾರ್ಯಕಾರಣಭಾವದಿಂದ ಕಲ್ಪಿತವಾಗಿರುತ್ತವೆ. ಅವೆರಡಕ್ಕಿಂತಲೂ ಬ್ರಹ್ಮ ಬೇರೆಯಾಗಿದೆ, ವಿಜ್ಞಾನ ಸ್ವರೂಪವಾಗಿರುತ್ತದೆ, ಯಾವ ವಿಶೇಷಗಳೂ ಇಲ್ಲದ್ದಾಗಿದೆ–ಎಂಬುದು ಒಟ್ಟರ್ಥವು. ಆದ್ದರಿಂದಲೇ (ಎಲ್ಲರಿಗೂ) ಆತ್ಮನಾಗಿರುವದರಿಂದ (ಅದು) ಬಿಡತಕ್ಕದ್ದೂ ಅಲ್ಲ, ತೆಗೆದುಕೊಳ್ಳತಕ್ಕದ್ದೂ ಅಲ್ಲ. (ತನಗೆ) ಬೇರೆಯಾದದ್ದನ್ನಲ್ಲವೆ, (ಅದಕ್ಕಿಂತ) ಬೇರೆಯಾದವನು ಬಿಡುತ್ತಾನೆ, ಅಥವಾ ತೆಗೆದುಕೊಳ್ಳುತ್ತಾನೆ? ಯಾವದೇ ಆಗಲಿ ತನಗೆ ತಾನೇ ಬಿಡತಕ್ಕದ್ದಾಗಲಿ ತೆಗೆದುಕೊಳ್ಳತಕ್ಕದ್ದಾಗಲಿ ಆಗುವದಿಲ್ಲ. ಆತ್ಮನೇ ಬ್ರಹ್ಮವು, ಎಲ್ಲಕ್ಕೂ ಒಳಗಿರುವದರಿಂದ (ಏತಕ್ಕೂ) ವಿಷಯವಲ್ಲ. ಆದ್ದರಿಂದ (ಆ ಬ್ರಹ್ಮವು) ಮತ್ತೊಂದಕ್ಕೂ ಬಿಡತಕ್ಕದ್ದಲ್ಲ, ತೆಗೆದುಕೊಳ್ಳತಕ್ಕದ್ದೂ ಅಲ್ಲ. ಮತ್ತೊಂದು ಇಲ್ಲವೂ ಇಲ್ಲವಾದ್ದರಿಂದಲೂ (ಹೀಗೆಂದು ನಿಶ್ಚಯಿಸಬೇಕು).

(ಭಾಷ್ಯ)

೧೧೧. "ಇತಿ ಶುಶ್ರುಮ ಪೂರ್ವೇಷಾಮ್" ಇತ್ಯಾಗಮೋಪದೇಶಃ। ವ್ಯಾಚಚಕ್ಷಿರೇ ಇತ್ಯಸ್ವಾತನ್ತ್ರ್ಯಂ ತರ್ಕಪ್ರತಿಷೇಧಾರ್ಥಮ್। ಯೇ ನಃ ತದ್ ಬ್ರಹ್ಮ ಉಕ್ತವನ್ತಃ ತೇ ನಿತ್ಯಮೇವ ಆಗಮಂ ಬ್ರಹ್ಮಪ್ರತಿಪಾದಕಂ ವ್ಯಾಖ್ಯಾತವನ್ತಃ। ನ ಪುನಃ ಸ್ವಬುದ್ಧಿಪ್ರಭವೇಣ ತರ್ಕೇಣೋಕ್ತವನ್ತ ಇತ್ಯಾಗಮಪಾರಮ್ಪರ್ಯಾವಿಚ್ಛೇದಂ ದರ್ಶಯತಿ ವಿದ್ಯಾಸ್ತುತಯೇ। ತರ್ಕಸ್ತು ಅನವಸ್ಥಿತೋ ಭ್ರಾನ್ತೋಽಪಿ ಭವತಿ॥

(ಭಾಷ್ಯಾರ್ಥ)

"ಹೀಗೆಂದು ಹಿಂದಿನವರ (ವಚನವನ್ನು) ಕೇಳಿರುತ್ತೇವೆ" ಎಂಬುದು ಆಗಮದ ಉಪದೇಶವು. "ವ್ಯಾಚಚಕ್ಷಿರೇ" ಎಂದು ಸ್ವಾತಂತ್ರ್ಯವನ್ನು ಅಲ್ಲಗಳೆದಿರುವದು, ಕರ್ಮವನ್ನು ತಿರಸ್ಕರಿಸುವದಕ್ಕೆ. ಯಾರು ನಮಗೆ ಆ ಬ್ರಹ್ಮವನ್ನು ಹೇಳಿರುವರೋ ಅವರು ಬ್ರಹ್ಮವನ್ನು ತಿಳಿಸುವ **ನಿತ್ಯವಾದ ಆಗಮವನ್ನೇ** ವಿವರಿಸಿ ಹೇಳಿರುವರಲ್ಲದೆ ತಮ್ಮ ಬುದ್ಧಿಯಿಂದ ಉಂಟಾಗಿರುವ **ತರ್ಕದಿಂದ ಹೇಳಲಿಲ್ಲ** ಎಂದು ಆಗಮ ಪರಂಪರೆಯು ಕಡಿವಡೆಯದೆ ಬಂದಿರುವದೆಂದು, ಜ್ಞಾನವನ್ನು ಹೊಗಳುವದಕ್ಕಾಗಿ, ತಿಳಿಸಿರುತ್ತದೆ. ತರ್ಕವಾದರೋ ನಿಲುಗಡೆಯಿಲ್ಲದ್ದು, ಭ್ರಮೆಯಿಂದಾದದ್ದೂ ಆಗಿರಬಹುದು. ಆದ್ದರಿಂದ (ಹೀಗೆ ಹೇಳಿರುತ್ತದೆ).

ಹಿಂದೆ ಹೇಳಿದ್ದರ ಪುಷ್ಟೀಕರಣ

ಯದ್ವಾಚಾನಭ್ಯುದಿತಂ....ನೇದಂ ಯದಿದಮುಪಾಸತೇ॥ ೫॥

(ಭಾಷ್ಯ)

೧೧೨. "ಯದ್ವಾಚಾ" ಇತಿ ಮನ್ತ್ರಾನುವಾದೋ ದೃಢಪ್ರತೀತ್ಯೈ।

"ಅನ್ಯದೇವ ತದ್ವಿದಿತಾತ್" ಇತಿ ಯೋಽಯಮಾಗಮಾರ್ಥೋ ಬ್ರಾಹ್ಮಣೋಕ್ತಃ, ಅಸ್ಯೈವ ದ್ರಢಿಮ್ನೇ ಇಮೇ ಮನ್ತ್ರಾಃ "ಯದ್ವಾಚಾ" ಇತ್ಯಾದಯಃ ಪಠ್ಯನ್ತೇ ॥

(ಭಾಷ್ಯಾರ್ಥ)

"ಯದ್ವಾಚಾ" ಎಂಬಿನೇ (ಮುಂತಾದ) ಮಂತ್ರಗಳ(ಲ್ಲಿ ಕಾಣುವ) ಅನುವಾದವು ದೃಢವಾಗಿ ತಿಳಿಯುವದಕ್ಕಾಗಿ "ಅನ್ಯದೇವ ತದ್ವಿದಿತಾತ್" (ಅದು ತಿಳಿಯಲ್ಪಟ್ಟದ್ದಕ್ಕಿಂತಲೂ ಬೇರೆಯೇ) ಎಂದು ಯಾವ ಈ ಆಗಮಾರ್ಥವನ್ನು ಬ್ರಾಹ್ಮಣದಲ್ಲಿ ಹೇಳಿತ್ತೋ ಇದನ್ನೇ ಗಟ್ಟಿಗೊಳಿಸುವದಕ್ಕಾಗಿ ಈ "ಯದ್ವಾಚಾ" ಮುಂತಾದ ಮಂತ್ರಗಳನ್ನು ಹೇಳಲಾಗಿದೆ.

(ಭಾಷ್ಯ)

೧೧೩. ಯತ್ ಬ್ರಹ್ಮ ವಾಚಾ ಶಬ್ದೇನ ಅನಭ್ಯುದಿತಮ್ ಅನಭ್ಯುಕ್ತಮ್ । ಅಪ್ರಕಾಶಿತಮ್ ಇತ್ಯೇತತ್ । "ಯೇನ ವಾಗಭ್ಯುದ್ಯತೇ" ಇತಿ ವಾಕ್ಪ್ರಕಾಶಹೇತುತ್ವೋಕ್ತೇಃ । ಯೇನ ಪ್ರಕಾಶ್ಯತ ಇತಿ ವಾಚೋಽಭಿಧಾನಸ್ಯ ಅಭಿಧೇಯಪ್ರಕಾಶಕತ್ವಸ್ಯ ಹೇತುತ್ವಮುಚ್ಯತೇ ಬ್ರಹ್ಮಣಃ । ಉಕ್ತಂ ಚ "ಕೇನೇಷಿತಾಂ ವಾಚಮಿಮಾಂ ವದನ್ತಿ" (೧-೧), "ಯದ್ವಾಚೋ ಹ ವಾಚಮ್" (೧-೨) ಇತಿ ॥

(ಭಾಷ್ಯಾರ್ಥ)

ಯಾವ ಬ್ರಹ್ಮವು ವಾಕ್ಕಿನಿಂದ ಎಂದರೆ ಶಬ್ದದಿಂದ ಹೇಳಲ್ಪಡುವದಿಲ್ಲವೋ, ತಿಳಿಸಲ್ಪಡುವದಿಲ್ಲವೋ, ಬೆಳಗಲ್ಪಡುವದಿಲ್ಲವೋ ಎಂದರ್ಥ. "ಯೇನ ವಾಗಭ್ಯುದ್ಯತೇ" ಎಂಬುದರಿಂದ ವಾಕ್ಯನ್ನು ಪ್ರಕಾಶಗೊಳಿಸುವ ಹೇತುವೆಂದು ಹೇಳಲಾಗಿರುತ್ತದೆ. "ಯಾವದರಿಂದ (ಹೇಳಲ್ಪಡುವದೋ) ಬೆಳಗಲ್ಪಡುವದೋ" ಎಂದು ಅಭಿದಾನವಾದ ವಾಕ್ಕು ಅಭಿಧೇಯವಾದ (ವಸ್ತುವನ್ನು) ಬೆಳಗುತ್ತಿರುವದಕ್ಕೆ ಬ್ರಹ್ಮವೇ ಹೇತುವೆಂದು ಹೇಳಿರುತ್ತದೆ. ಹಿಂದೆಯೂ "ಯಾವದರ ಇಚ್ಛೆಯಿಂದ ಈ ವಾಕ್ಕನ್ನು ನುಡಿಯುತ್ತಾರೆ", (೧-೧) "ಯಾವದು ವಾಕ್ಕಿಗೆ ವಾಕ್ಕೋ" (೧-೨) ಎಂದು ಹೇಳಿರುತ್ತದೆ.

(ಭಾಷ್ಯ)

೧೧೪. "ತದೇವ ಬ್ರಹ್ಮ ತ್ವಂ ವಿದ್ಧಿ" ಇತ್ಯವಿಷಯತ್ವೇನ ಬ್ರಹ್ಮಣ ಆತ್ಮನ್ಯವಸ್ಥಾಪನಾರ್ಥ ಆಮ್ನಾಯಃ । ಯದ್ವಾಚಾ ಅನಭ್ಯುದಿತಂ ವಾಕ್ಪ್ರಕಾಶನಿಮಿತ್ತಂ ಚೇತಿ ಬ್ರಹ್ಮಣೋಽವಿಷಯತ್ವೇನ ವಸ್ತ್ವನ್ತರಜಿಘೃಕ್ಷಾಂ ನಿವರ್ತ್ಯ ಸ್ವಾತ್ಮನ್ಯೇವಾವಸ್ಥಾಪಯತ್ಯಾಮ್ನಾಯಃ "ತದೇವ ಬ್ರಹ್ಮ ತ್ವಂ ವಿದ್ಧಿ"[1]ತಿ । ಯತ್ಸತ ಉಪರಮಯತಿ "ನೇದಮ್" ಇತಿ, ಉಪಾಸ್ಯಪ್ರತಿಷೇಧಾಚ್ಚ ॥

---

1. ವಾ॥ ಸಾಶ.

(ಭಾಷ್ಯಾರ್ಥ)

" ತದೇವ ಬ್ರಹ್ಮ ತ್ವಂ ವಿದ್ಧಿ " (ಅದೇ ಬ್ರಹ್ಮವೆಂದು ನೀನು ತಿಳಿ) ಎಂದು ಬ್ರಹ್ಮವು ವಿಷಯವಲ್ಲವಾದ್ದರಿಂದ ಆತ್ಮನಲ್ಲಿಯೇ ನಿಲ್ಲಿಸುವದಕ್ಕಾಗಿ ವೇದವು ಬಂದಿರುತ್ತದೆ. " ಯಾವದು ವಾಕ್ಕಿನಿಂದ ಹೇಳಲ್ಪಡುವದಿಲ್ಲವೋ (ಯಾವದು) ವಾಕ್ಕು ಬೆಳಗುವದಕ್ಕೆ ನಿಮಿತ್ತವೂ ಆಗಿರುವದೋ " ಎಂದು ಬ್ರಹ್ಮವು ವಿಷಯವಲ್ಲವೆಂದು ಹೇಳಿ ಮತ್ತೊಂದು ವಸ್ತುವನ್ನು (ಬ್ರಹ್ಮವೆಂದು) ಗ್ರಹಣಮಾಡುವ ಹವಣಿಕೆಯನ್ನು ತಪ್ಪಿಸಿ, " ತದೇವ ಬ್ರಹ್ಮ ತ್ವಂ ವಿದ್ಧಿ " ಎಂಬ ವೇದವು ತನ್ನ ಆತ್ಮನಲ್ಲಿಯೇ (ಬ್ರಹ್ಮವನ್ನು) ನಿಲ್ಲಿಸುತ್ತದೆ. " ಇದಲ್ಲ " ಎಂದೂ " ಉಪಾಸ್ಯನಲ್ಲ "ವೆಂದೂ ಹೇಳಿ ಯತ್ನ ಪೂರ್ವಕವಾಗಿ (ಪುತ್ತೊಂದು ವಸ್ತುವನ್ನು) ಬಿಡಿಸುತ್ತದೆ,

ಯನ್ಮನಸಾ ಯದಿದಮುಪಾಸತೇ ॥ ೬ ॥
ಯಚ್ಚಕ್ಷುಷಾ ಯದಿದಮುಪಾಸತೇ ॥ ೭ ॥
ಯಚ್ಛ್ರೋತ್ರೇಣ. . .. ಯದಿದಮುಪಾಸತೇ ॥ ೮ ॥
ಯತ್ಪ್ರಾಣೇನ ... ಯದಿದಮುಪಾಸತೇ ॥ ೯ ॥

(ಭಾಷ್ಯ)

೧೧೫. " ಯನ್ಮನಸಾ " ಇತ್ಯಾದಿ ಸಮಾನಮ್ । " ಮನೋ ಮತಮ್ " ಇತಿ । ಯೇನ ಬ್ರಹ್ಮಣಾ ಮನೋಽಪಿ ವಿಷಯೀಕೃತಂ ನಿತ್ಯವಿಜ್ಞಾನಸ್ವರೂಪೇಣ– ಇತ್ಯೇತತ್ । ಸರ್ವಕರಣಾನಾಮವಿಷಯಸ್ತಾನಿ ಚ ಸವ್ಯಾಪಾರಾಣಿ ಸವಿಷಯಾಣಿ ನಿತ್ಯವಿಜ್ಞಾನಸ್ವರೂಪಾವಭಾಸತಂತ್ರಾ ಯೇನಾವಭಾಸ್ಯನ್ತೇ ಇತಿ ಶ್ಲೋಕಾರ್ಥಃ । " ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ " (ಗೀ. ೧೩-೩೩) ಇತಿ ಸ್ಮೃತೇಃ । " ತಸ್ಯ ಭಾಸಾ " (ಮೂ. ೨-೨-೧೦) ಇತಿ ಚಾಥರ್ವಣೇ । " ಯೇನ ಪ್ರಾಣ " ಇತಿ । ಕ್ರಿಯಾಶಕ್ತಿರಪ್ಯಾತ್ಮವಿಜ್ಞಾನನಿಮಿತ್ತಾ ಇತ್ಯೇತತ್ ॥

(ಭಾಷ್ಯಾರ್ಥ)

" ಯನ್ಮನಸಾ " ಮುಂತಾದ (ಮಂತ್ರಗಳಿಗೆ ಅರ್ಥವು) ಸಮಾನವಾಗಿರುತ್ತದೆ. " ಮನಸ್ಸು ಮನನಮಾಡಲ್ಪಡುವದೋ " ಎಂದರೆ ನಿತ್ಯವಿಜ್ಞಾನಸ್ವರೂಪವಾದ ಯಾವ ಬ್ರಹ್ಮದಿಂದ ಮನಸ್ಸುಕೂಡ ವಿಷಯೀಕರಿಸಲ್ಪಡುವದೋ ಎಂದರ್ಥ. (ಯಾವದು) ಯಾವ ಕರಣಗಳಿಗೂ ವಿಷಯವಲ್ಲವೋ, ಆ (ಕರಣಗಳು) ತಮ್ಮ ವ್ಯಾಪಾರದೊಡನೆ ತಮ್ಮ ವಿಷಯದೊಡನೆ ನಿತ್ಯ ವಿಜ್ಞಾನಸ್ವರೂಪದಿಂದ ಬೆಳಗುವ ಯಾವದರಿಂದ ಬೆಳಗುತ್ತಿರುವವೋ ಎಂದು ಶ್ಲೋಕಗಳ ಅರ್ಥವು. " ಹಾಗೆ ಕ್ಷೇತ್ರವೆಲ್ಲವನ್ನೂ ಕ್ಷೇತ್ರಿಯು ಬೆಳಗುತ್ತಿರುವನು " (ಗೀ. ೧೩-೩೩) ಎಂಬ ಸ್ಮೃತಿಯು ಇದಕ್ಕೆ ಪ್ರಮಾಣವು.

"ಆ (ಆತ್ಮನ) ಬೆಳಕಿನಿಂದ (ಇದೆಲ್ಲವೂ ಬೆಳಗುತ್ತಿರುವದು)" (ಮು. ೨-೨-೧೦) ಎಂದು ಆಥರ್ವಣದಲ್ಲಿಯೂ ಹೇಳಿರುತ್ತದೆ. "ಯಾವದರಿಂದ ಪ್ರಾಣವು....." ಎಂದರೆ ಕ್ರಿಯಾಶಕ್ತಿಯೂ ಆತ್ಮವಿಜ್ಞಾನದ ನಿಮಿತ್ತದಿಂದಲೇ (ಆಗಿರುತ್ತದೆ)– ಎಂದರ್ಥ.

ಎರಡನೆಯ ಖಂಡ

ಗುರು ಶಿಷ್ಯನ ಬುದ್ಧಿಯನ್ನು ಕದಲಿಸುವದು

ಯದಿ ಮನ್ಯಸೇ. . .. ವಿದಿತಮ್ ॥ ೧ ॥

(ಭಾಷ್ಯ)

೧೧೬. "ಯದಿ ಮನ್ಯಸೇ ಸುವೇದೇತಿ" (ಇತಿ) ಶಿಷ್ಯಬುದ್ಧಿವಿಚಾಲನಾ ಗೃಹೀತಸ್ಥಿರತಾಯೈ। ವಿದಿತಾವಿದಿತಾಭ್ಯಾಂ ನಿವರ್ತ್ಯ ಬುದ್ಧಿಂ ಶಿಷ್ಯಸ್ಯ ಸ್ವಾತ್ಮನ್ಯವ ಸ್ಥಾಪ್ಯ "ತದೇವ ಬ್ರಹ್ಮ ತ್ವಂ ವಿದ್ಧಿ" ಇತಿ ಸ್ವಾರಾಜ್ಯೇಽಭಿಷಿಚ್ಯ ಉಪಾಸ್ಯಪ್ರತಿ ಷೇಧೇನ, ಅಥಾಸ್ಯ ಬುದ್ಧಿಂ ವಿಚಾಲಯತಿ–ಯದಿ ಮನ್ಯಸೇ "ಸುವೇದಾಹಂ ಬ್ರಹ್ಮ" ಇತಿ ತ್ವಂ ತತೋಽಲ್ಪಮೇವ ಬ್ರಹ್ಮಣೋ ರೂಪಂ ವೇತ್ಥ ತ್ವಮಿತಿ ನೂನಂ ನಿಶ್ಚಿತಂ ಮನ್ಯತೇ ಇತ್ಯಾಚಾರ್ಯಃ। ಸಾ ಪುನರ್ವಿಚಾಲನಾ ಕಿಮರ್ಥೇತಿ? ಉಚ್ಯತೇ। ಪೂರ್ವ ಗೃಹೀತೇ ವಸ್ತುನಿ ಬುದ್ಧೇಃ ಸ್ಥಿರತಾಯೈ। ದೇವೇಷ್ವಪಿ ಸುವೇದಾಹಮಿತಿ ಮನ್ಯತೇ ಯಃ ಸೋಽಸ್ಯಸ್ಯ ಬ್ರಹ್ಮಣೋ ರೂಪಂ ದಹರಮೇವ[1] ವೇತ್ತಿ ನೂನಮ್। ಕಸ್ಮಾತ್? ಅವಿಷಯತ್ವಾತ್ ಕಸ್ಯಚಿದ್ ಬ್ರಹ್ಮಣಃ। ಅಥವಾಽಲ್ಪಮೇವಾ ಸ್ಯ ಆಧ್ಯಾತ್ಮಿಕಂ ಮನುಷ್ಯೇಷು, ದೇವೇಷು ಚಾಧಿದೈವಿಕಮ್ ಅಸ್ಯ ಬ್ರಹ್ಮಣೋ ಯದ್ರೂಪಂ ತತ್–ಇತಿ ಸಮ್ಬನ್ಧಃ ॥

(ಭಾಷ್ಯಾರ್ಥ)

"ಯದಿ ಮನ್ಯಸೇ ಸುವೇದೇತಿ" (ಎಂದು) ಶಿಷ್ಯನ ಬುದ್ಧಿಯನ್ನು ಕದಲಿಸಿರುವದು ಗ್ರಹಿಸಿದ್ದನ್ನು ಗಟ್ಟಿಗೊಳಿಸುವದಕ್ಕೆ. ತಿಳಿಯಲ್ಪಟ್ಟದ್ದು, ತಿಳಿಯಲ್ಪಡದ್ದು–ಈ ಎರಡರಿಂದಲೂ ಶಿಷ್ಯನ ಬುದ್ಧಿಯನ್ನು ಹಿಂತಿರುಗಿಸಿ ಅವನ ಆತ್ಮನಲ್ಲಿ ಅದನ್ನಿಟ್ಟು "ಅದೇ ಬ್ರಹ್ಮವೆಂದು ನೀನು ತಿಳಿ" ಎಂದು ಸ್ವಾರಾಜ್ಯದಲ್ಲಿ ಅಭಿಷೇಕ ಮಾಡಿ ಅದು ಉಪಾಸ್ಯವಲ್ಲವೆಂದು ಹೇಳಿದ ಬಳಿಕ ಈ (ಶಿಷ್ಯನ) ಬುದ್ಧಿಯನ್ನು "ನಾನು ಬ್ರಹ್ಮವನ್ನು ಚೆನ್ನಾಗಿ ಅರಿತುಕೊಂಡಿರುವೆನು ಎಂದು ನೀನು ಎಣಿಸುವೆಯಾದರೆ ಆಗ ಬ್ರಹ್ಮದ ರೂಪವನ್ನು ನೀನು ಅಲ್ಪವೇ ತಿಳಿದುಕೊಂಡಿರುವೆ ಎಂದು ನಿಜವಾಗಿ ನಿಶ್ಚಿತವಾಗಿ ತಿಳಿಯಬರುತ್ತದೆ" ಎಂದು ಆಚಾರ್ಯನು ಕದಲಿಸುತ್ತಾನೆ. ಆ ಕದಲಿಸುವಿಕೆಯಾದರೂ ಏತಕ್ಕೆ?–ಎಂದರೆ ಹೇಳುತ್ತೇವೆ. ಹಿಂದೆ ಗ್ರಹಿಸಿರುವ

---

1. "ದಭ್ರ" ಎಂಬ ಪಾಠದ ಬದಲು 'ದಹರ' ಎಂಬ ಪಾಠವೇ ವಾಕ್ಯಭಾಷ್ಯಕ್ಕೆ ಸಮ್ಮತವೆಂದು ತೋರುತ್ತದೆ.

(ಬ್ರಹ್ಮ) ವಸ್ತುವಿನಲ್ಲಿ ಬುದ್ಧಿಯು ನೆಲೆಯಾಗಿರುವದಕ್ಕೆ[1]. ದೇವತೆಗಳಲ್ಲಿಯ
ಯಾವನು 'ಬ್ರಹ್ಮವನ್ನು ಚೆನ್ನಾಗಿ ನಾನು ಅರಿತುಕೊಂಡಿರುವೆನು' ಎಂದೆಣಿಸಿ
ವನೋ ಅವನೂ ಬ್ರಹ್ಮದ ರೂಪವನ್ನು ಸ್ವಲ್ಪವಾಗಿಯೇ ತಿಳಿದಿರುತ್ತಾನೆಂಬು
ನಿಶ್ಚಯ. ಅದೇಕೆ? (ಎಂದರೆ) ಬ್ರಹ್ಮವು ಯಾವದಕ್ಕೂ ವಿಷಯವಲ್ಲವಾದ್ದರಿಂ
ಅಥವಾ[2] ಮನುಷ್ಯರಲ್ಲಿರುವ ಆಧ್ಯಾತ್ಮಿಕ, ದೇವತೆಗಳಲ್ಲಿರುವ ಆಧಿದೈವಿಕ–ಎಂಬ
ಬ್ರಹ್ಮದ ರೂಪವುಂಟಲ್ಲ, ಅದನ್ನು–ಎಂದು ಅನ್ವಯ (ಮಾಡಿಕೊಳ್ಳಬೇಕು).

(ಭಾಷ್ಯ)

೧೧೭. "ಅಥ ನು" ಇತಿ ಹೇತುರ್ಮೀಮಾಂಸಾಯಾಃ। ಯಸ್ಮಾದ್ದ್ರಹ
ಮೇವ ಸುವಿದಿತಂ ಬ್ರಹ್ಮಣೋರೂಪಮ್ "ಅನ್ಯದೇವ ತದ್ವಿದಿತಾದ್" ಇತ್ಯು
ತ್ವಾತ್। "ಸುವೇದ" ಇತಿ ಚ ಮನ್ಯಸೇ। ಅತೋ ಽಲ್ಪಮೇವ ವೇತ್ಥ ತ್ವಂ ಬ್ರಹ್ಮಣೋ
ರೂಪಂ ಯಸ್ಮಾತ್, ಅಥನು ತಸ್ಮಾತ್। ಮೀಮಾಂಸ್ಯಮೇವ ಅದ್ಯಾಪಿ ತೇ ತ
ಬ್ರಹ್ಮ। ವಿಚಾರ್ಯಮೇವ ಯಾವದ್ವಿದಿತಾವಿದಿತಪ್ರತಿಷೇಧಾಗಮಾರ್ಥಾನುಭ
ಇತ್ಯರ್ಥಃ॥

(ಭಾಷ್ಯಾರ್ಥ)

"ಅಥ ನು" ಎಂಬುದು (ಬ್ರಹ್ಮವನ್ನು) ಮೀಮಾಂಸೆಮಾಡತಕ್ಕದ್ದಿದೆ ಎಂಬ
ದಕ್ಕೆ ಕಾರಣವನ್ನು (ತಿಳಿಸುವದು). ಚೆನ್ನಾಗಿ ತಿಳಿದುಕೊಂಡೆನೆಂಬ ಬ್ರಹ್ಮದ ರೂಪ
ಅಲ್ಪವೇ ಆಗಿರುತ್ತದೆ; ಏಕೆಂದರೆ "ಅದು ತಿಳಿಯಲ್ಪಟ್ಟದ್ದಕ್ಕಿಂತಲೂ ಬೇರೆಯೇ
ಎಂದು (ಹಿಂದೆ) ಹೇಳಲಾಗಿದೆ. ಆದರೂ "ಚೆನ್ನಾಗಿ ಅರಿತುಕೊಂಡಿರುವೆನು
ಎಂದು ಎಣಿಸಿರುತ್ತೀಯೆ. ಆದ್ದರಿಂದ ನೀನು ಬ್ರಹ್ಮದ ರೂಪವನ್ನು ಸ್ವಲ್ಪವೇ ತಿಳಿದ
ಕೊಂಡಿರುತ್ತೀಯೆಯೆಂದಾಯಿತಷ್ಟೆ; 'ಅಥ ನು' ಎಂದರೆ ಆದಕಾರಣ ನಿನ್ನ ಬ್ರಹ್ಮ
ಇನ್ನೂ ಮೀಮಾಂಸೆಮಾಡತಕ್ಕದ್ದೇ; "ವಿದಿತವೂ ಅಲ್ಲ, ಅವಿದಿತವೂ ಅಲ್ಲ
ಎಂಬ ಆಗಮಾರ್ಥದ ಅನುಭವವು ಆಗುವವರೆಗೂ ವಿಚಾರಮಾಡತಕ್ಕದ್ದೇ (ಆಗಿರುತ್ತದೆ
ಎಂದರ್ಥ

(ಭಾಷ್ಯ)

೧೧೮. "ಮನ್ಯೇ ವಿದಿತಮ್" ಇತಿ ಶಿಷ್ಯಸ್ಯ ಮೀಮಾಂಸಾನನ್ತರೋಕ್ತಿ
ಪ್ರತ್ಯಯತ್ರಯಸಙ್ಗತೇಃ। ಸಮ್ಯಗ್ವಸ್ತುನಿಶ್ಚಯಾಯ ವಿಚಾಲಿತಃ ಶಿಷ್ಯಃ ಆಚ
ರ್ಯೇಣ "ಮೀಮಾಂಸ್ಯಮೇವ ತೇ" ಇತಿ ಚೋಕ್ತಃ ಏಕಾನ್ತೇ ಸಮಾಹಿತೋ

---

1. ಬ್ರಹ್ಮವು ಅವಿಷಯವೇ ಎಂಬುದನ್ನು ಗಟ್ಟಿಗೊಳಿಸುವದಕ್ಕೆ.

2. ಪದಭಾಷ್ಯದಲ್ಲಿರುವ ಈ ವ್ಯಾಖ್ಯಾನವನ್ನು ಮೊದಲು ಹೇಳದೆ ಎರಡನೆಯದಾ
ಹೇಳಿರುವದೇಕೆಂಬುದು ಯೋಚಿಸತಕ್ಕದ್ದಾಗಿದೆ.

ಭೂತ್ವಾ ವಿಚಾರ್ಯ ಯಥೋಕ್ತಂ ಸುಪರಿನಿಶ್ಚಿತಃ ಸ್ಯ ಆಹ ಆಗಮಾಚಾರ್ಯಾತ್ಮಾನುಭವಪ್ರತ್ಯಯತ್ರಯಸ್ಯ ಏಕವಿಷಯತ್ವೇನ ಸಙ್ಗತ್ಯರ್ಥಮ್ । ಏವಂ ಹಿ ಸುಪರಿನಿಷ್ಠಿತಾ (ನಿಶ್ಚಿತಾ?) ವಿದ್ಯಾ ಸಫಲಾ ಸ್ಯಾತ್, ನಾನಿಶ್ಚಿತಾ ಇತಿ ನ್ಯಾಯಃ ಪ್ರದರ್ಶಿತೋ ಭವತಿ "ಮನ್ಯೇ ವಿದಿತಮ್" ಇತಿ । ಪರಿನಿಷ್ಠಿತ (ನಿಶ್ಚಿತ?) ನಿಶ್ಚಿತವಿಜ್ಞಾನಪ್ರತಿಜ್ಞಾಹೇತೂಕ್ತೇಃ । ಪರಿನಿಷ್ಠಿತಂ ಸಫಲಂ ವಿಜ್ಞಾನಂ ಪ್ರತಿ ಜಾನೀತೇ ಆಚಾರ್ಯಾತ್ಮನಿಶ್ಚಯಯೋಸ್ತುಲ್ಯತಾಯೈ । ಯಸ್ಮಾದ್ ಹೇತುಮಾಹ "ನಾಹ ಮನ್ಯೇ ಸುವೇದೇತಿ" (ಇತಿ) ॥

(ಭಾಷ್ಯಾರ್ಥ)

"ಮನ್ಯೇ ವಿದಿತಮ್" (ತಿಳಿಯಲ್ಪಟ್ಟಿತೆಂದು ಎಣಿಸುತ್ತೇನೆ) ಎಂದು ಶಿಷ್ಯನು ವಿಚಾರಮಾಡಿದಬಳಿಕ ಹೇಳಿರುವದು ಮೂರು ಅರಿವುಗಳ ಹೊಂದಿಕೆಗಾಗಿ. ವಸ್ತುವನ್ನು ಚೆನ್ನಾಗಿ ನಿಶ್ಚಯಿಸಲಿ ಎಂದು (ಬುದ್ಧಿಯನ್ನು) ಕದಲಿಸಿ ಆಚಾರ್ಯನು "ನಿನ್ನ (ಬ್ರಹ್ಮವು) ವಿಚಾರಮಾಡತಕ್ಕದ್ದೇ" ಎಂದು ಹೇಳಿದ (ಬಳಿಕ) ಶಿಷ್ಯನು ಏಕಾಂತದಲ್ಲಿ ಸಮಾಹಿತ (ಚಿತ್ತ)ನಾಗಿ ಮೇಲೆ ಹೇಳಿದ್ದನ್ನು ವಿಚಾರಮಾಡಿ ಅತ್ಯಂತವಾಗಿ ಸರಿಯಾಗಿ ನಿಶ್ಚಯಿಸಿಕೊಂಡವನಾಗಿ **ಆಗಮ, ಆಚಾರ್ಯ, ಆತ್ಮಾನುಭವ–ಎಂಬ ಮೂರು ಅರಿವುಗಳೂ ಒಂದೇ ವಿಷಯದಲ್ಲಿ ಹೊಂದಿಕೊಳ್ಳುವದಕ್ಕಾಗಿ** (ಈಗ ತಿಳಿಯಿತೆಂದು ಎಣಿಸುತ್ತೇನೆ) ಎಂದು ಹೇಳಿರುತ್ತಾನೆ ಹೀಗೆ ಅತ್ಯಂತವಾಗಿ ನೆಲೆನಿಂತ ನಿಶ್ಚಯಿಸಿದ ವಿದ್ಯೆಯೇ ಸಫಲವಾದೀತೇ ಹೊರತು ನಿಶ್ಚಯವಿಲ್ಲದ್ದು (ಸಫಲ)ವಾಗಲಾರದು ಎಂಬ ನ್ಯಾಯವನ್ನು "ತಿಳಿಯಲ್ಪಟ್ಟಿತೆಂದು ಎಣಿಸುತ್ತೇನೆ" ಎಂಬ ವಾಕ್ಯದಿಂದ ತೋರಿಸಿಕೊಟ್ಟಂತೆ ಆಯಿತು. ಏಕೆಂದರೆ (ಮುಂದೆ) ನೆಲೆನಿಂತ ನಿಶ್ಚಯಿಸಿದ ಜ್ಞಾನವೆಂಬುದಕ್ಕೆ ಹೇತುವನ್ನು (ಶಿಷ್ಯನು) ಹೇಳಿರುತ್ತಾನೆ: ಆಚಾರ್ಯರ ಮತ್ತು ತನ್ನ ನಿಶ್ಚಯಗಳೆರಡೂ ಸಮಾನವೆಂದು (ತಿಳಿಸು)ವದಕ್ಕಾಗಿಯೇ (ಹೀಗೆ ಹೇಳಿರುತ್ತಾನೆನ್ನಬೇಕು), ಏಕೆಂದರೆ (ತನ್ನ ಅಭಿಪ್ರಾಯಕ್ಕೆ) ಹೇತುವನ್ನು "ನಾಹ ಮನ್ಯೇ" ಎಂಬ (ಮುಂದಿನ ಮಂತ್ರದಿಂದ) ಹೇಳಿರುತ್ತಾನೆ.

ಶಿಷ್ಯನ ಉತ್ತರ

ನಾಹ ಮನ್ಯೇ.....ನೋ ನ ವೇದೇತಿ ವೇದ ಚ ॥ ೨ ॥

(ಭಾಷ್ಯ)

೧೧೯. "ಅಹ" ಇತ್ಯವಧಾರಣಾರ್ಥೋ ನಿಪಾತಃ । ನೈವ ಮನ್ಯೇ ಇತ್ಯೇತತ್ । ಯಾವದಪರಿನಿಷ್ಠಿತಂ (ನಿಶ್ಚಿತಂ?) ವಿಜ್ಞಾನಮ್, ತಾವತ್ "ಸುವೇದ' ಸುಷ್ಠುವೇದಾಹಂ ಬ್ರಹ್ಮ–ಇತಿ ವಿಪರೀತೋ ಮಮ ನಿಶ್ಚಯ ಆಸೀತ್ । ಸೋಽಪ ಜಗಾಮ ಭವದ್ಭಿರ್ವಿಚಾಲಿತಸ್ಯ ಯಥೋಕ್ತಾರ್ಥಮಿಮಾಂಸಾಫಲಭೂತಾತ್,

ಸ್ವಾತ್ಮಬ್ರಹ್ಮತ್ವನಿಶ್ಚಯರೂಪಾತ್, ಸಮ್ಯಕ್ಪ್ರತ್ಯಯಾತ್ । ವಿರುದ್ಧತ್ವಾತ್ । ಅತೋ ನಾಹ ಮನ್ಯೇ ಸುವೇದೇತಿ । ಯಸ್ಮಾಚ್ಚ ತತ್ ನ ವೇದೇತಿ ನೋ 'ಮನ್ಯೇ' ಇತ್ಯನುವರ್ತತೇ, ಅವಿದಿತಬ್ರಹ್ಮಪ್ರತಿಷೇಧಾತ್ ॥

(ಭಾಷ್ಯಾರ್ಥ)

"ಅಹ"[1] ಎಂಬುದು ಅವಧಾರಣೆಯನ್ನು ಹೇಳುವ ನಿಪಾತವು ಎಣಿಸುವದೇ ಇಲ್ಲ ಎಂದರ್ಥ ಎಲ್ಲಿಯವರೆಗೆ ಸರಿಯಾಗಿ ನಿಶ್ಚಿತವಾದ ತಿಳಿವಳಿಕೆಯಾಗಿರಲಿಲ್ಲವೋ ಅಲ್ಲಿಯವರೆಗೆ ಚೆನ್ನಾಗಿ ಅರಿತಿರುವೆನು, ಬ್ರಹ್ಮವನ್ನು ಚೆನ್ನಾಗಿ ಅರಿತುಕೊಂಡಿದ್ದೇನೆ ಎಂಬ ತಪ್ಪು ನಿಶ್ಚಯವು ನನಗೆ ಆಗಿತ್ತು ನೀವು (ಬುದ್ಧಿಯನ್ನು) ಕದಲಿಸಿದಮೇಲೆ ಹಿಂದ ಹೇಳಿದ ವಿಷಯವನ್ನು ವಿಚಾರಮಾಡಿದ್ದರ ಫಲವಾಗಿ ನನ್ನ ಆತ್ಮನೇ ಬ್ರಹ್ಮವೆಂದು ನಿಶ್ಚಯಿಸಿರುವ ರೂಪದ ಸರಿಯೊದ ಜ್ಞಾನದಿಂದ ಆ (ತಪ್ಪು ನಿಶ್ಚಯವು) ತೊಲಗಿತು ಏಕೆಂದರೆ (ಸರಿಯಾದ ತಿಳಿವಳಿಕೆಗೆ ತಪ್ಪುತಿಳಿವಳಿಕೆಯು) ವಿರುದ್ಧವಾಗಿರುತ್ತದೆ ಆದ್ದರಿಂದ (ನಾನು) ಚೆನ್ನಾಗಿ ಅರಿತುಕೊಂಡಿರುವೆನೆಂದು ಎಣಿಸುವದೇ ಇಲ್ಲ. ಮತ್ತು ಆ (ಬ್ರಹ್ಮವನ್ನು) ಅರಿತುಕೊಂಡಿಲ್ಲವೆಂದೂ 'ಎಣಿಸಿಯೇ ಇಲ್ಲ' ಎಂದು (ಹಿಂದಿನ) ಮನ್ಯೇ ಎಂಬ ಮಾತನ್ನು ಸೇರಿಸಿಕೊಳ್ಳಬೇಕು. ಏಕೆಂದರೆ ಅವಿದಿತವಾದದ್ದು (ಅರಿಯಲ್ಪಡದೆ ಇದ್ದದ್ದು) ಬ್ರಹ್ಮವಲ್ಲವೆಂದೂ (ಹಿಂದೆ) ಹೇಳಿರುತ್ತದೆ.

(ಭಾಷ್ಯ)

೧೨೦. "ಕಥಂ ತರ್ಹಿ ಮನ್ಯಸೇ?" ಇತ್ಯುಕ್ತ ಆಹ–ವೇದ ಚ । ಚಶಬ್ದಾದ್ ವೇದ ಚ ನ ವೇದಚೇತ್ಯಭಿಪ್ರಾಯಃ । ವಿದಿತಾವಿದಿತಾಭ್ಯಾಮ್ ಅನ್ಯತ್ವಾದ್ ಬ್ರಹ್ಮಣಃ । ತಸ್ಮಾತ್ ಮಯಾ ವಿದಿತಂ ಬ್ರಹ್ಮ ಇತಿ ಮನ್ಯೇ ಇತಿ ವಾಕ್ಯಾರ್ಥಃ । ಅಥವಾ ವೇದ ಚ ಇತಿ ನಿತ್ಯವಿಜ್ಞಾನಬ್ರಹ್ಮಸ್ವರೂಪತಯಾ ನೋ ನ ವೇದ ವೇದೈವ ಚಾಹಮ್, ಸ್ವರೂಪವಿಕ್ರಿಯಾಭಾವಾತ್ । ವಿಶೇಷವಿಜ್ಞಾನಂ ಚ ಪರಾಧ್ಯಸ್ತಂ ನ ಸ್ವತ ಇತಿ ಪರಮಾರ್ಥತೋ ನ ಚ ವೇದೇತಿ ॥

(ಭಾಷ್ಯಾರ್ಥ)

"ಹಾಗಾದರೆ ಏನೆಂತ ಎಣಿಸಿರುವೆ ಎಂದು (ಆಚಾರ್ಯನು) ಕೇಳಲು ಹೇಳುತ್ತಾನೆ. ಅರಿತೂ ಇದ್ದೇನೆ. 'ಚ' (ಊ) ಎಂಬ ಶಬ್ದವನ್ನು ಪಯೋಗಿಸಿರುವದರಿಂದ ಅರಿತೂ ಇಲ್ಲ ಎಂದು ಅಭಿಪ್ರಾಯ ಏಕೆಂದರೆ ಬ್ರಹ್ಮವು ವಿದಿತ, ಅವಿದಿತ–ಈ ಎರಡಕ್ಕಿಂತಲೂ ಬೇರೆಯಾಗಿರುತ್ತದೆ. ಆದ್ದರಿಂದ ನಾನು ಬ್ರಹ್ಮವನ್ನು ಅರಿತಿರುವೆಂದು ಎಣಿಸುತ್ತೇನೆ ಎಂಬುದು (ಒಟ್ಟು) ವಾಕ್ಯದ ಅರ್ಥವು. ಅಥವಾ ವೇದ ಚ ಎಂಬುದಕ್ಕೆ

---

1. ಪದಭಾಷ್ಯದಂತೆ "ನಾಹವ್" ಎಂದು ಪಾಠ; ವಾಕ್ಯಭಾಷ್ಯದಂತೆ "ನಾಹ" ಎಂದು.

(ಹೀಗೂ ಅರ್ಥಮಾಡಬಹುದು), ನಿತ್ಯವಿಜ್ಞಾನವಾದ ಬ್ರಹ್ಮಸ್ವರೂಪನಾಗಿರುವದರಿಂದ ಅರಿತಿಲ್ಲವೆಂಬುದಿಲ್ಲ, ನಾನು ಅರಿತುಕೊಂಡೇ ಇದ್ದೇನೆ, ಏಕೆಂದರೆ ಸ್ವರೂಪವಾದ (ಜ್ಞಾನ)ದಲ್ಲಿ (ಯಾವ) ವಿಕಾರವೂ ಇರುವದಿಲ್ಲ.[1] ಬಿಡಿಯರಿವು ಎಂಬುದು ಮತ್ತೊಬ್ಬರಿಂದ ಆರೋಪಿತವಾಗಿರುವದೇ ಹೊರತು ತನ್ನಲ್ಲಿಯೇ ಇರುವದಿಲ್ಲ; ಆದ್ದರಿಂದ ಪರಮಾರ್ಥವಾಗಿ ಅರಿಯುವದೆಂಬುದೂ ಇಲ್ಲ ಎಂದು (ಅರ್ಥ).

(ಭಾಷ್ಯ)

೧೨೧. "ಯೋ ನ ಸ್ತದ್ವೇದ ತದ್ವೇದ" ಇತಿ ಪಕ್ಷಾನ್ತರನಿರಾಸಾರ್ಥಮಾಮ್ನಾಯಃ। ಉಕ್ತಾರ್ಥಾನುವಾದಾತ್। ಯೋ ನಃ ಅಸ್ಮಾಕಂ ಮಧ್ಯೇ ತದ್ವೇದ[2] ಸ ಏವ ತದ್ ಬ್ರಹ್ಮ ವೇದ ನಾನ್ಯಃ। ಉಪಾಸ್ಯ ಬ್ರಹ್ಮವಿತ್ತ್ವಾತ್। ಅತೋಽನ್ಯಸ್ಯ ಯಥಾಹಂ ವೇದೇತಿ ಪಕ್ಷಾನ್ತರೇ ಬ್ರಹ್ಮವಿತ್ತ್ವಂ ನಿರಸ್ಯತೇ। ಕುತೋಽಯಮರ್ಥೋಽವಸೀಯತೇ ಇತಿ ?। ಉಚ್ಯತೇ। ಉಕ್ತಾನುವಾದಾತ್। ಉಕ್ತಂ ಹ್ಯನುವದತಿ "ನೋ ನ ವೇದೇತಿ ವೇದ ಚ" ಇತಿ ॥

(ಭಾಷ್ಯಾರ್ಥ)

"ಯೋ ನ ಸ್ತದ್ವೇದ ತದ್ವೇದ" ಎಂದು ಬಂದಿರುವ ವೇದವಾಕ್ಯವು ಮತ್ತೊಂದು ಪಕ್ಷವನ್ನು ತಿರಸ್ಕರಿಸುವದಕ್ಕೆ, ಏಕೆಂದರೆ ಹೇಳಿದ್ದ ವಿಷಯವನ್ನು ಮತ್ತೆ ಅನುವಾದ ಮಾಡಿರುತ್ತದೆ. ಯಾವನು ನಮ್ಮಗಳ ಎಂದರೆ ನಮ್ಮಗಳೊಳಗೆ (ಯಾವನು) ಅದನ್ನು ತಿಳಿದಿರುವನೋ ಅವನೇ ಅದನ್ನು ತಿಳಿದಿರುವನೇ ಹೊರತು ಮಿಕ್ಕವನಲ್ಲ. ಏಕೆಂದರೆ (ಆ ಮಿಕ್ಕವನು) ಉಪಾಸ್ಯವೇ ಬ್ರಹ್ಮವೆಂದು ತಿಳಿದಿರುತ್ತಾನೆ. ಆದ್ದರಿಂದ "ನಾನು ಅರಿತುಕೊಂಡಿದೇನೆ ಅರಿತೂ ಇಲ್ಲ" ಎಂಬಂತೆ ತಿಳಿಯದೆ ಮತ್ತೊಂದು ಪಕ್ಷದಲ್ಲಿ ಯಾವನಿರುವನೋ ಅವನಲ್ಲಿ ಬ್ರಹ್ಮವಿತ್ತ್ವವನ್ನು ತಿರಸ್ಕರಿಸಿರುತ್ತದೆ.

(ಶಂಕೆ):—ಈ ಅರ್ಥವನ್ನು ಏತರಿಂದ ನಿಶ್ಚಯಿಸಲಾಗಿದೆ?

(ಪರಿಹಾರ):—ಹೇಳುತ್ತೇವೆ. ಏಕೆಂದರೆ ಹೇಳಿದ್ದನ್ನೇ (ಮತ್ತೆ) ಅನುವಾದಮಾಡಿದೆ. "ಅರಿತುಕೊಂಡಿಲ್ಲವೆಂತಲೂ ಇಲ್ಲ, ಅರಿತೂ ಇದ್ದೇನೆ" (ಎಂದು ಯಾವನು ಅರಿಯುತ್ತಾನೋ ಅವನೇ ಬಲ್ಲನು) ಎಂದು ಹಿಂದೆ ಹೇಳಿರುವದನ್ನೇ (ಇಲ್ಲಿ ಮತ್ತೆ) ಅನುವಾದಮಾಡಿಕೊಂಡಿರುತ್ತದೆಯಲ್ಲವೆ?[3] (ಆದ್ದರಿಂದ ಹೀಗೆಂದು ನಿಶ್ಚಯಿಸಬೇಕು).

---

1. ಆದ್ದರಿಂದ ಜ್ಞಾತೃತ್ವವಿಲ್ಲವೆಂದು ಹೇಳುವದಕ್ಕೆ ಬರುವದಿಲ್ಲ; ನಿತ್ಯಪ್ರಕಾಶನಾದ ಸೂರ್ಯನು ಬೆಳಗುವದಿಲ್ಲವೆನ್ನುವದಕ್ಕೆ ಹೇಗೆ ಬರುವದಿಲ್ಲವೋ ಹಾಗೆ.

2 (ವಾ॥) ಪಾಠವೇ ಉತ್ತಮ.

3. ಹೀಗೆ ಅರಿತುಕೊಂಡವನೇ ಬಲ್ಲನು ಎಂದದ್ದರಿಂದ ವಿಷಯವಾಗಿ ಅರಿತುಕೊಂಡವನು ಅರಿಯನು—ಎಂದು ಹೇಳಿದಂತಾಯಿತು.

ಶ್ರುತಿಯ ಉಪಸಂಹಾರ

ಯಸ್ಯಾಮತಂ.....ವಿಜ್ಞಾತಮವಿಜಾನತಾಮ್ ॥ ೩ ॥

(ಭಾಷ್ಯ)

೧೨೨. "ಯಸ್ಯಾಮತಮ್" ಇತಿ ಶ್ರೌತಮ್ ಆಖ್ಯಾಯಿಕಾರ್ಥೋಪಸಂಹಾರಾರ್ಥಮ್। ಶಿಷ್ಯಾಚಾರ್ಯೋಕ್ತಿಪ್ರತ್ಯುಕ್ತಿಲಕ್ಷಣಯಾ ಅನುಭವಯುಕ್ತಿಪ್ರಧಾನಯಾ ಆಖ್ಯಾಯಿಕಯಾ ಯೋಽರ್ಥಃ ಸಿದ್ಧಃ, ಸ ಶ್ರೌತೇನ ವಚನೇನ ಆಗಮಪ್ರಧಾನೇನ ನಿಗಮನಸ್ಥಾನೀಯೇನ ಸಙ್ಕ್ಷೇಪತ ಉಚ್ಯತೇ ॥

(ಭಾಷ್ಯಾರ್ಥ)

"ಯಸ್ಯಾಮತಮ್" ಎಂಬ ಶ್ರುತಿವಚನವು ಕಥೆಯ ಅರ್ಥವನ್ನು ಉಪಸಂಹಾರಮಾಡುವದಕ್ಕೆ. ಶಿಷ್ಯನೂ ಆಚಾರ್ಯನೂ ಕೇಳಿದಂತೆ ಉತ್ತರಕೊಟ್ಟಂತೆ ಇರುವ ಅನುಭವ ಮತ್ತು ಯುಕ್ತಿಗಳೇ ಮುಖ್ಯವಾಗಿರುವ ಕಥೆಯಲ್ಲಿ ಯಾವ ವಿಷಯವು ಸಿದ್ಧವಾಯಿತೋ ಅದನ್ನು ಆಗಮಪ್ರಧಾನವಾದ[1] ನಿಗಮನಸ್ಥಾನದಲ್ಲಿರುವ[2] ಶ್ರುತಿಯ ವಚನದಿಂದ ಸಂಕ್ಷೇಪವಾಗಿ ಹೇಳಿರುತ್ತದೆ.

(ಭಾಷ್ಯ)

೧೨೩. ಯದುಕ್ತಂ ವಿದಿತಾದನ್ಯದ್ ವಾಗಾದೀನಾಮಗೋಚರತ್ವಾತ್ ಮಿಮಾಂಸಿತಂ ಚ ಅನುಭವೋಪಪತ್ತಿಭ್ಯಾಂ ಬ್ರಹ್ಮ, ತತ್ ತಥೈವ ಜ್ಞಾತವ್ಯಮ್। ಕಸ್ಮಾತ್? ಯಸ್ಯಾಮತಂ ಯಸ್ಯ ವಿವಿದಿಷಾಪ್ರಯುಕ್ತಪ್ರವೃತ್ತಸ್ಯ ಸಾಧಕಸ್ಯ ಅಮತಮ್ ಅವಿಜ್ಞಾನಮ್। ಅವಿದಿತಂ ಬ್ರಹ್ಮ ಇತಿ ಆತ್ಮತತ್ತ್ವನಿಶ್ಚಯಫಲಾವಸಾನಾವಬೋಧತಯಾ ವಿವಿದಿಷಾ ನಿವೃತ್ತಾ ಇತ್ಯಭಿಪ್ರಾಯಃ। ತಸ್ಯ ಮತಂ ಜ್ಞಾತಮ್। ತೇನ ವಿದಿತಂ ಬ್ರಹ್ಮ ಯೇನ ಅವಿಷಯತ್ವೇನಾತ್ಮತ್ವೇನ ಪ್ರತಿಬುದ್ಧಮ್ ಇತ್ಯರ್ಥಃ। ಸ ಸಮ್ಯಗ್ದರ್ಶೀ ಯಸ್ಯ ವಿಜ್ಞಾನಾನನ್ತರಮೇವಬ್ರಹ್ಮಾತ್ಮಭಾವಸ್ಯಾವಸಿತತ್ವಾತ್ ಸರ್ವತಃ ಕಾರ್ಯಾಭಾವಃ। ವಿಪರ್ಯಯೇಣ ಮಿಥ್ಯಾಜ್ಞಾನೋ ಭವತಿ। ಕಥಮ್? ಮತಂ ವಿದಿತಮ್, ಜ್ಞಾತಂ ಮಯಾ ಬ್ರಹ್ಮ ಇತಿ ಯಸ್ಯ ವಿಜ್ಞಾನಮ್, ಸ ಮಿಥ್ಯಾದರ್ಶೀ ವಿಪರೀತವಿಜ್ಞಾನೋ, ವಿದಿತಾದ್ ಅನ್ಯತ್ವಾದ್ ಬ್ರಹ್ಮಣಃ, ನ ವೇದ ಸಃ ನ ವಿಜಾನಾತಿ ॥

(ಭಾಷ್ಯಾರ್ಥ)

ವಾಕ್ಯೇ ಮುಂತಾದವುಗಳಿಗೆ ವಿಷಯವಲ್ಲದಿರುವದರಿಂದ ವಿದಿತಕ್ಕಿಂತಲೂ ಬೇರೆ ಎಂದು ಯಾವದನ್ನು ಹೇಳಿದೆಯೋ, ಅನುಭವ ಮತ್ತು ಯುಕ್ತಿ—ಈ ಎರಡರಿಂದಲೂ (ಯಾವದನ್ನು) ವಿಚಾರಮಾಡಲಾಗಿದೆಯೋ ಆ ಬ್ರಹ್ಮವನ್ನು ಹಾಗೆಯೇ

---

1. ಉಪದೇಶಪ್ರಧಾನವಾದ.
2. ಹೇತುವಿನಿಂದ ಸಮರ್ಥನೆಮಾಡಿದಬಳಿಕ ಬರುವ ಉಪಸಂಹಾರವಾಕ್ಯದಂತಿರುವ.

ಅರಿತುಕೊಳ್ಳಬೇಕು. ಏಕೆ ?–ಎಂದರೆ: 'ಯಸ್ಯಾಮತಮ್' ಯಾವ ಜಿಜ್ಞಾಸೆಯಿಂದ ಪ್ರೇರಿತನಾಗಿ ತೊಡಗಿರುವ ಸಾಧಕನಿಗೆ ಅಮತವಾಗಿರುವದೋ ಅವಿಜ್ಞಾತವಾಗಿರುವದೋ, ಎಂದರೆ ಬ್ರಹ್ಮವು ತಿಳಿಯಲ್ಪಡತಕ್ಕದ್ದಲ್ಲ ಎಂದು ಆತ್ಮತತ್ತ್ವವನ್ನು ನಿಶ್ಚಯಿಸುವದೆಂಬ ಫಲದಲ್ಲಿ ಕೊನೆಗಾಣುವ ಜ್ಞಾನವುಂಟಾಗಿ ತಿಳಿದುಕೊಳ್ಳಬೇಕೆಂಬ ಇಚ್ಛೆಯು ನೀಗಿರುವದೋ ಎಂದು ಅಭಿಪ್ರಾಯ. ಅವನಿಗೆ ಮತವಾಗಿರುವದು, ಜ್ಞಾತವಾಗಿರುವದು. ಯಾವನಿಗೆ ಅವಿಷಯವಾಗಿರುವ ಆತ್ಮನೇ ಎಂದು ತಿಳಿದಿರುವದೋ ಅವನಿಗೇ ಬ್ರಹ್ಮವು ತಿಳಿದಿರುತ್ತದೆ ಎಂದರ್ಥ. ಯಾವನಿಗೆ ಜ್ಞಾನವುಂಟಾದಕೂಡಲೆ ಬ್ರಹ್ಮವು (ತನ್ನ) ಆತ್ಮನೇ ಎಂಬ ನಿಶ್ಚಯವಾಗಿರುವದರಿಂದ ಎಲ್ಲೆಲ್ಲಿಯೂ (ಯಾವ) ಕಾರ್ಯವೂ ಇರುವದಿಲ್ಲವೋ ಅವನಿಗೇ (ಬ್ರಹ್ಮವು) ಸರಿಯಾಗಿ ತಿಳಿದಿರುವದು. ಹಾಗಿಲ್ಲದೆ ಇದ್ದರೆ ತಪ್ಪುತಿಳಿವಳಿಕೆಯುಳ್ಳವನಾಗಿರುತ್ತಾನೆ. (ಅದು) ಹೇಗೆ? ಎಂದರೆ ಮತವಾಗಿದೆ, ವಿದಿತವಾಗಿದೆ, ನನಗೆ ಬ್ರಹ್ಮವು ತಿಳಿದಿರುತ್ತದೆ–ಎಂದು ಯಾವನಿಗೆ ಅರಿವಾಗಿರುವದೋ ಅವನು ತಪ್ಪುತಿಳಿವಳಿಕೆಯವನು, ವಿರುದ್ಧವಾಗಿ ತಿಳಿದುಕೊಂಡಿರುವವನು, ಏಕೆಂದರೆ ಬ್ರಹ್ಮವು (ನಿಜವಾಗಿ) ವಿದಿತಕ್ಕಿಂತ ಬೇರೆಯೇ ಆಗಿರುತ್ತದೆ (ಆದ್ದರಿಂದ) ಅವನು ತಿಳಿಯನು, ಅವನು (ತತ್ತ್ವವನ್ನು) ಅರಿಯನು.

(ಭಾಷ್ಯ)

೧೩೪. ತತಶ್ಚ ಸಿದ್ಧಮ್ ಅವೈದಿಕಸ್ಯ ವಿಜ್ಞಾನಸ್ಯ ಮಿಥ್ಯಾತ್ವಮ್ । ಅಬ್ರಹ್ಮವಿಷಯತಯಾ ನಿನ್ದಿತತ್ವಾತ್ । ತಥಾ ಕಪಿಲಕಣಭುಗಾದಿಸಮಯಸ್ಯಾಪಿ ವಿದಿತಬ್ರಹ್ಮವಿಷಯತ್ವಾತ್, ಅನವಸ್ಥಿತತರ್ಕಜನ್ಯತ್ವಾತ್, ವಿವಿದಿಷಾನಿವೃತ್ತೇಶ್ಚ ಮಿಥ್ಯಾತ್ವಮಿತಿ । ಸ್ಮೃತೇಶ್ಚ–" ಯಾ ವೇದಬಾಹ್ಯಾಃ ಸ್ಮೃತಯೋ ಯಾಶ್ಚ ಕಾಶ್ಚ ಕುದೃಷ್ಟಯಃ । ಸರ್ವಾಸ್ತಾ ನಿಷ್ಫಲಾಃ ಪ್ರೋಕ್ತಾ (?) ಸ್ತಮೋನಿಷ್ಠಾ ಹಿ ತಾಃ ಸ್ಮೃತಾಃ॥" (ಮನು. ೧೨-೯೫) ಇತಿ ॥

(ಭಾಷ್ಯಾರ್ಥ)

ಇದರಿಂದ ವೇದವಿರುದ್ಧವಾದ[1] ತಿಳಿವಳಿಕೆಯು ತಪ್ಪು (ತಿಳಿವಳಿಕೆ) ಎಂದು ಸಿದ್ಧವಾಯಿತು. ಏಕೆಂದರೆ (ಅದಕ್ಕೆ) ಬ್ರಹ್ಮವು ವಿಷಯವಲ್ಲವೆಂದು ನಿಂದಿಸಿರುತ್ತದೆ.[2] ಇದರಂತೆ ಕಪಿಲ, ಕಣಾದ–ಮುಂತಾದವರ ಶಾಸ್ತ್ರಜ್ಞಾನವೂ ವಿದಿತ ಬ್ರಹ್ಮವನ್ನೇ ತಿಳಿಸುವದರಿಂದಲೂ, ನಿಲುಗಡೆಯಿಲ್ಲದ ತರ್ಕದಿಂದ ಹುಟ್ಟುವದಾಗಿರು

---

1. ವೇದವು ಅನುಭವಾನುಸಾರಿಯಾಗಿದೆ; ಅವಿಷಯವನ್ನು ವಿಷಯವೆಂದು ತಿಳಿಸುವ ಬೌದ್ಧಾದಿಗಳ ಮತವು ಅನುಭವವಿರುದ್ಧ.

2. " ಮಿಕ್ಕವರು ತಿಳಿಯಲಾರರು " ಎಂಬ ವಚನವು ನಿಂದಿಸುತ್ತದೆ.

ವದರಿಂದಲೂ, ಜಿಜ್ಞಾಸೆಯನ್ನು ನೀಗದೆ ಇರುವದರಿಂದಲೂ (ಅದೂ) ತಪ್ಪು (ತಿಳಿವಳಿಕೆಯೇ) ಎಂದು (ಸಿದ್ಧವಾಯಿತು). " ಯಾವಯಾವವು ವೇದಕ್ಕೆ ಹೊರಚ್ಚಾಗಿರುವ ಸ್ಮೃತಿಗಳೋ, ಯಾವಯಾವವು ಕುದರ್ಶನಗಳಾಗಿರುವವೋ, ಅವುಗಳೆಲ್ಲವೂ ನಿಷ್ಫಲವೆನಿಸುವವು, ಏಕೆಂದರೆ ಅವು ತಮಸ್ಸಿನಲ್ಲಿ ಕೊನೆಗಾಣುವವಾಗಿರುತ್ತವೆ " (ಮನು. ೧೨-೯೫) ಎಂಬ ಸ್ಮೃತಿಯೂ ಇದಕ್ಕೆ ಪ್ರಮಾಣವು.

(ಭಾಷ್ಯ)

೧೨೫ " ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್ " ಇತಿ ಪೂರ್ವಹೇತೂಕ್ತೇಃ, ಅನುವಾದಸ್ಯಾನರ್ಥಕ್ಯಾತ್ । ಅನುವಾದಮಾತ್ರೇ ಅನರ್ಥಕಂ ವಚನಮ್, ವಿಪರೀತಮಿಥ್ಯಾಜ್ಞಾನಯೋ (?) ರ್ನಷ್ಟತ್ವಾತ್ [1] ಇತಿ ಪೂರ್ವೋಕ್ತಯೋ " ರ್ಯಸ್ಯಾಮತಮ್ " ಇತ್ಯಾದಿನಾ ಜ್ಞಾನಾಜ್ಞಾನಯೋರ್ಹೇತ್ವರ್ಥತ್ವೇನ ಇದಮುಚ್ಯತೇ । ಅವಿಜ್ಞಾತಮ್ ಅವಿದಿತಮ್, ಆತ್ಮತ್ವೇನಾವಿಷಯತಯಾ ಬ್ರಹ್ಮ ವಿಜಾನತಾಂ ಯಸ್ಮಾತ್, ತಸ್ಮಾತ್ ತದೇವ ಜ್ಞಾನಮ್ । ಯತ್ ತೇಷಾಂ (?) ವಿಜ್ಞಾತಂ ವಿದಿತಂ ವ್ಯಕ್ತಮೇವ ಬುದ್ಧ್ಯಾದಿವಿಷಯಂ ಬ್ರಹ್ಮ ಅವಿಜಾನತಾಮ್ ವಿದಿತಾವಿದಿತವ್ಯಾವೃತ್ತಾತ್ಮಭೂತಂ ನಿತ್ಯವಿಜ್ಞಾನಸ್ವರೂಪಮ್ ಆತ್ಮಸ್ಥಮ್ ಅವಿಕ್ರಿಯಮಮೃತಮಜರಮಭಯಮ್ ಅನನ್ಯತ್ವಾದವಿಷಯಮ್ ಇತ್ಯೇವಮವಿಜಾನತಾಂ ಬುದ್ಧ್ಯಾದಿವಿಷಯಾತ್ಮತಯೈವ ನಿತ್ಯಂ ವಿಜ್ಞಾತಂ ಬ್ರಹ್ಮ । ತಸ್ಮಾತ್, ವಿದಿತಾವಿದಿತವ್ಯಕ್ತಾವ್ಯಕ್ತಧರ್ಮಾಧ್ಯಾರೋಪೇಣ ಕಾರ್ಯಕಾರಣಭಾವೇನ ಸವಿಕಲ್ಪಮ್ ಅಯಥಾರ್ಥವಿಷಯತ್ವಾತ್, ಶುಕ್ತಿಕಾದೌ ರಜತಾದ್ಯಧ್ಯಾರೋಪಣಜ್ಞಾನವನ್ಮಿಥ್ಯಾಜ್ಞಾನಂ ತೇಷಾಮ್ ॥

(ಭಾಷ್ಯಾರ್ಥ)

" ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್ " ಎಂಬುದು ಹಿಂದೆ (ಹೇಳಿದ್ದಕ್ಕೆ) ಹೇತುವನ್ನು ಹೇಳಿದ್ದು, ಏಕೆಂದರೆ ಅನುವಾದವು ವ್ಯರ್ಥವಾಗುತ್ತದೆ. ಸುಮ್ಮನೆ (ಹಿಂದೆ ಹೇಳಿದ್ದನ್ನೇ ಇಲ್ಲಿಯೂ) ಅನುವಾದಮಾಡಿದ್ದರೆ [2] ವಚನವು ವ್ಯರ್ಥವಾಗುತ್ತದೆ, ಏಕೆಂದರೆ (ಹಿಂದಿನ ಜ್ಞಾನದಿಂದಲೇ) ವಿರುದ್ಧವಾದ ತಿಳಿವಳಿಕೆಯೂ ತಪ್ಪುತಿಳಿವಳಿ-ಯೂ (?) ಕಳೆದುಹೋಗಿರುತ್ತವೆ [3] ಆದ್ದರಿಂದ ಹಿಂದೆ

---

1 " ವಿಪರೀತಮಿಥ್ಯಾಜ್ಞಾನಯೋರ್ನಷ್ಟತ್ವಾತ್ " ಎಂಬ ಮಾತುಗಳು (ಆ॥) ಪಾಠದಲ್ಲಿ ಹೆಚ್ಚು.

2. ಪೂರ್ವಾರ್ಧದಲ್ಲಿ ಹೇಳಿರುವವನ್ನೇ ಉತ್ತರಾರ್ಧದಲ್ಲಿಯೂ ಹೇಳಿದ್ದರೆ.

3. ಇದು (ವಾ॥) ಪಾಠದಂತೆ. ಅಜ್ಞಾನವನ್ನು ಕಳೆದಮೇಲೆ ಮತ್ತೆ ಉಪದೇಶಮಾಡುವದು ವ್ಯರ್ಥವೆಂದು ಭಾವ.

" ಯಸ್ಯಾಮತಮ್ " ಎಂಬ (ಪೂರ್ವಾರ್ಧದಲ್ಲಿ) ಹೇಳಿರುವ ಜ್ಞಾನಾಜ್ಞಾನಗಳಿಗೆ ಹೇತುವನ್ನು (ತಿಳಿಸು)ವದಕ್ಕೋಸ್ಕರ (ಇದನ್ನು) ಹೇಳಿರುತ್ತದೆ (ಎನ್ನಬೇಕು).

ಅವಿಜ್ಞಾತವಾಗಿರುತ್ತದೆ, ಎಂದರೆ ತಿಳಿಯಲ್ಪಡದೆ ಇರುತ್ತದೆ; ಆತ್ಮನಾಗಿರುವದರಿಂದ ವಿಷಯವಲ್ಲವೆಂದು ಬ್ರಹ್ಮವನ್ನು ಅರಿತುಕೊಂಡಿರುವವರಿಗೆ (ಅವಿಜ್ಞಾತವಾಗಿರುತ್ತದೆ), ಆದಕಾರಣ ಅದೇ (ಸರಿಯಾದ) ಜ್ಞಾನವು. ಆದರೆ ಅರಿಯದವರಿಗೆ ವಿಜ್ಞಾತವಾಗಿರುತ್ತದೆ, ತಿಳಿಯಲ್ಪಟ್ಟಿರುತ್ತದೆ ಎಂದರೆ ಬ್ರಹ್ಮವು ಬುದ್ಧಿಯೇ ಮುಂತಾದವುಗಳಿಗೆ ವಿಷಯವೇ ಆಗಿರುತ್ತದೆ. ವಿದಿತ, ಅವಿದಿತ–ಇವೆರಡಕ್ಕಿಂತಲೂ ಬೇರೆಯಾಗಿರುವ ಸ್ವರೂಪವುಳ್ಳದ್ದಾಗಿ ನಿತ್ಯವಿಜ್ಞಾನಸ್ವರೂಪವುಳ್ಳದ್ದಾಗಿ ಆತ್ಮನೇ ಆಗಿ ವಿಕಾರವಿಲ್ಲದೆ ಅವ್ಯತಸ್ವರೂಪವಾಗಿ ಮುಪ್ಪಿಲ್ಲದೆ ಅಂಜಿಕೆಯಿಲ್ಲದೆ, ತನಗಿಂತ ಬೇರೆಯಲ್ಲದ್ದರಿಂದ ವಿಷಯವಲ್ಲದೆ ಇರುವದು ಎಂದು (ಬ್ರಹ್ಮವನ್ನು) ಅರಿತುಕೊಳ್ಳದೆ ಇರುವವರಿಗೆ ಬುದ್ಧಿಯೇ ಮುಂತಾದವುಗಳಿಗೆ ವಿಷಯವಾಗಿರುವ ಸ್ವರೂಪದಿಂದಲೇ ಬ್ರಹ್ಮವು ಯಾವಾಗಲೂ ವಿಜ್ಞಾತವಾಗಿರುತ್ತದೆ ಆದ್ದರಿಂದ ವಿದಿತ, ಅವಿದಿತ, ವ್ಯಕ್ತ, ಅವ್ಯಕ್ತ-ಎಂಬ ಧರ್ಮಗಳನ್ನು ಹುಟ್ಟುಗಟ್ಟಿಕೊಂಡು ಕಾರ್ಯಕಾರಣಭಾವದಿಂದ ಸವಿಕಲ್ಪವಾಗಿರುವ ಅವರ ಜ್ಞಾನವು ಯಥಾರ್ಥವಿಷಯವನ್ನು ತಿಳಿಸದ ಇರುವದರಿಂದ ಕಪ್ಪೆಯಚಿಪ್ಪು ಮುಂತಾದವುಗಳಲ್ಲ ಬೆಳ್ಳಿಯೇ ಮುಂತಾದವುಗಳನ್ನು ಹುಟ್ಟುಗಟ್ಟುವ ಜ್ಞಾನದಂತೆ ತಪ್ಪುತಿಳಿವಳಿಕೆಯೇ (ಆಗಿರುತ್ತದೆ)

ಪ್ರತಿಬೋಧವಿದಿತಂ . .ವಿನ್ದತೇಽಮೃತಮ್ ॥ ೪ ॥

ಪ್ರತ್ಯಯಗಳೇ ಆತ್ಮನನ್ನು ತಿಳಿದುಕೊಳ್ಳುವ ದ್ವಾರವು

(ಭಾಷ್ಯ)

೧೩೬ " ಪ್ರತಿಬೋಧವಿದಿತಮ್ " ಇತಿ ವೀಪ್ಸಾ ಪ್ರತ್ಯಯಾನಾಮ್ ಆತ್ಮಾವಬೋಧದ್ವಾರತ್ವಾತ್ । ಬೋಧಂ ಪ್ರತಿ ಬೋಧಂ ಪ್ರತಿ ಇತಿ ವೀಪ್ಸಾ ಸರ್ವಪ್ರತ್ಯಯವ್ಯಾಪ್ತ್ಯರ್ಥಾ । ಬೌದ್ಧಾ ಹಿ ಸರ್ವೇ ಪ್ರತ್ಯಯಾಃ ತಪ್ತಲೋಹವನ್ನಿತ್ಯವಿಜ್ಞಾನಸ್ವರೂಪಾತ್ಮವ್ಯಾಪ್ತತ್ವಾದ್ ವಿಜ್ಞಾನಸ್ವರೂಪಾವಭಾಸಾಃ । ತದನ್ಯಾವಭಾಸಶ್ಚಾತ್ಮಾ ತದ್ವಿಲಕ್ಷಣೋಽಗ್ನಿವದುಪಲಭ್ಯತೇ ಇತಿ ತೇನ ತೇ ದ್ವಾರೀಭವನ್ತಿ ಆತ್ಮೋಪಲಬ್ಧೌ । ತಸ್ಮಾತ್ ಪ್ರತಿಬೋಧಾವಭಾಸಪ್ರತ್ಯಗಾತ್ಮತಯಾ ಯದ್ ವಿದಿತಂ ಬ್ರಹ್ಮ ತದೇವ ಮತಮ್ ತದೇವ ಸಮ್ಯಗ್ಜ್ಞಾನಂ ಯತ್[1] ಪ್ರತ್ಯಗಾತ್ಮಜ್ಞಾನಂ, ನ ವಿಷಯವಿಜ್ಞಾನಮ್ ಆತ್ಮತ್ವೇನ (?) । " ಪ್ರತ್ಯಗಾತ್ಮಾನಮೈಕ್ಷತ್ "

———೧-೧) ಇತಿ ಚ ಕಾಣಕೇ ॥

(ಕ. ೨-

1 (ವಾ॥) ಸಾರ.

(ಭಾಷ್ಯಾರ್ಥ)

"ಪ್ರತಿಬೋಧವಿದಿತಮ್" ಎಂದು ವೀಪ್ಸೆಯನ್ನು (ತಿಳಿಸಿರುವದು) ಪ್ರತ್ಯಯಗಳು ಆತ್ಮಜ್ಞಾನಕ್ಕೆ ದ್ವಾರವಾಗಿರುವದರಿಂದ. "ಬೋಧದಲ್ಲಿ", "ಬೋಧದಲ್ಲಿ" ಎಂದು ವೀಪ್ಸೆಯನ್ನು (ತಿಳಿಸಿರುವದು) ಎಲ್ಲಾ ಪ್ರತ್ಯಯಗಳನ್ನೂ ವ್ಯಾಪಿಸುವದಕ್ಕಾಗಿ. ಬುದ್ಧಿಯ ಪ್ರತ್ಯಯಗಳೆಲ್ಲ ಕಾಯಿಸಿದ ಕಬ್ಬಿಣದಂತೆ ನಿತ್ಯವಿಜ್ಞಾನಸ್ವರೂಪನಾದ ಆತ್ಮನಿಂದ ವ್ಯಾಪ್ತವಾಗಿರುವದರಿಂದ ವಿಜ್ಞಾನಸ್ವರೂಪವುಳ್ಳವುಗಳಂತೆಯೇ ತೋರುತ್ತಿರುವವು. ಅವುಗಳಿಗಿಂತ ಬೇರೆಯಾಗಿ ತೋರುತ್ತಿರುವ ಅವುಗಳಿಗಿಂತ ಬೇರೆಯ ಸ್ವಭಾವದವನಾದ ಆತ್ಮನು ಬೆಂಕಿಯಂತೆ[1] (ಬೇರೆ) ತೋರುತ್ತಿರುತ್ತಾನೆ. ಆದ್ದರಿಂದ ಆ ಪ್ರತ್ಯಯಗಳು ಆತ್ಮನನ್ನು ಅರಿತುಕೊಳ್ಳುವದಕ್ಕೆ ದ್ವಾರವಾಗಿರುತ್ತವೆ.

ಆದ್ದರಿಂದ ಪ್ರತಿಯೊಂದು ಪ್ರತ್ಯಯದ ತೋರಿಕೆಗೆ ಒಳ ಆತ್ಮನಾಗಿರುವದೆಂದು ಯಾವ ಬ್ರಹ್ಮವನ್ನು ಅರಿಯುವೆವೋ ಅದೇ ಮತವು ಪ್ರತ್ಯಗಾತ್ಮನೆಂಬ ಜ್ಞಾನವೇ ಸರಿಯಾದ ತಿಳಿವಳಿಕೆ, ವಿಷಯವೆಂದು ತಿಳಿಯುವದಲ್ಲ ಏಕೆಂದರೆ ಅದು ಆತ್ಮನೇ ಆಗಿರುತ್ತದೆ[2] "(ವಿವೇಕಿಯಾದವನು) ಒಳಗಿನ ಆತ್ಮನನ್ನು ನೋಡುತ್ತಾನೆ" (ಕ. ೨-೧-೧) ಎಂದು ಕಾಠಕದಲ್ಲಿ ಹೇಳಿಯೂ ಇರುತ್ತದೆ

(ಭಾಷ್ಯ)

೧೨೭. "ಅಮೃತತ್ವಂ ಹಿ ವಿನ್ದತೇ" ಇತಿ ಹೇತುವಚನಂ ವಿಪರ್ಯಯೇ ಮೃತ್ಯುಪ್ರಾಪ್ತೇಃ। ವಿಷಯಾತ್ಮವಿಜ್ಞಾನೇ ಹಿ ಮೃತ್ಯುಃ ಪ್ರಾರಭತೇ (?) ಇತ್ಯಾತ್ಮವಿಜ್ಞಾನಮ್ ಅಮೃತತ್ವನಿಮಿತ್ತಮಿತಿ ಯುಕ್ತಂ ಹೇತುವಚನಮ್ "ಅಮೃತತ್ವಂ ಹಿ ವಿನ್ದತೇ" ಇತಿ। ಆತ್ಮಜ್ಞಾನೇನ ಕಿಮಮೃತತ್ವಮ್ ಉತ್ಪಾದ್ಯತೇ? ನ। ಕಥಂ ತರ್ಹಿ? ಆತ್ಮನಾ ವಿನ್ದತೇ ಸ್ವೇನೈವ ನಿತ್ಯಾತ್ಮಸ್ವಭಾವೇನ ಅಮೃತತ್ವಂ ವಿನ್ದತೇ, ನಾಲಬ್ಧ್ವಾಪೂರ್ವಕಮ್। "ವಿನ್ದತೇ" ಇತ್ಯಾತ್ಮವಿಜ್ಞಾನಾಪೇಕ್ಷಮ್। ಯದಿ ಹಿ ವಿದ್ಯೋತ್ಪಾದ್ಯಮ್ ಅಮೃತತ್ವಂ ಸ್ಯಾತ್, ಅನಿತ್ಯಂ ಭವೇತ್ ಕರ್ಮ ಕಾರ್ಯವತ್। ಅತೋ ನ ವಿದ್ಯೋತ್ಪಾದ್ಯಮ್॥

(ಭಾಷ್ಯಾರ್ಥ)

"ಏಕೆಂದರೆ ಅಮೃತತ್ವವನ್ನು ಹೊಂದುತ್ತಾನೆ" ಎಂದು ಹೇತುವನ್ನು ಹೇಳಿರುವದೇಕೆಂದರೆ ಹಾಗಿ ದಿದ್ದರೆ ಮೃತ್ಯುಪ್ರಾಪ್ತಿಯಾಗುವದರಿಂದ. ವಿಷಯರೂಪನಾದ

---

1. ಕಾಯಿಸಿದ ಕಬ್ಬಿಣಕ್ಕಿಂತ ಕಾವಿನಸ್ವರೂಪವಾದ ಬೆಂಕಿಯು ಬೇರೆಯಾಗಿರುವಂತೆ.

2. "ಆತ್ಮತ್ವೇನ" ಎಂಬ ಮಾತಿಗೆ ಟೀಕೆಯಲ್ಲಿ ಈ ಅರ್ಥವನ್ನು ಕೊಟ್ಟಿದೆ. ಈ ಮಾತು ಇಲ್ಲಿ ಅವಶ್ಯವೇ ಇಲ್ಲವೆಂದು ತೋರುವದು.

ಆತ್ಮನನ್ನು ಅರಿತುಕೊಂಡರೆ[1] ಮೃತ್ಯುವು (ಭಯವನ್ನುಂಟು)ಮಾಡುತ್ತದೆಯಾದ್ದರಿಂದ (?)[2] ಆತ್ಮವಿಜ್ಞಾನವೇ ಅಮೃತತ್ವಕ್ಕೆ ಕಾರಣವಾಗಿರುತ್ತದೆ. ಆದ್ದರಿಂದ "ಏಕೆಂದರೆ ಅಮೃತತ್ವವನ್ನು ಹೊಂದುತ್ತಾನೆ" ಎಂದು ಹೇತುವನ್ನು ಹೇಳಿರುವದು ಸರಿಯಾಗಿದೆ.

(ಶಂಕೆ) - ಆತ್ಮಜ್ಞಾನದಿಂದ ಅಮೃತತ್ವವು (ಹೊಸದಾಗಿ) ಹುಟ್ಟಿಸಲ್ಪಡುವದೇನು?

(ಪರಿಹಾರ) --ಇಲ್ಲ ಮತ್ತೇನೆಂದರೆ ತನ್ನಿಂದಲೇ ಪಡೆದುಕೊಳ್ಳುತ್ತಾನೆ. ತನ್ನದೇ ಆಗಿರುವ ನಿತ್ಯವಾದ ಆತ್ಮಸ್ವಭಾವದಿಂದ ಅಮೃತತ್ವವನ್ನು ಹೊಂದುತ್ತಾನೆ, (ಮತ್ತೊಂದನ್ನು) ಆಶ್ರಯಿಸುವ ಮೂಲಕವಾಗಿ (ಹೊಂದುವ)ದಿಲ್ಲ. (ಇಲ್ಲಿ) "ಹೊಂದುತ್ತಾನೆ" ಎಂದು (ಹೇಳಿರುವದು) ವಿಜ್ಞಾನದ ಅಪೇಕ್ಷೆಯಿಂದ[3], ಜ್ಞಾನದಿಂದ ಅಮೃತತ್ವವು (ಹೊಸವಾಗಿ) ಹುಟ್ಟುತಕ್ಕದ್ದಾಗಿದ್ದರೆ ಕರ್ಮದ ಕಾರ್ಯದಂತೆ (ಅದೂ) ಅನಿತ್ಯವಾಗುತ್ತಿತ್ತು. ಆದ್ದರಿಂದ (ಅದು) ಜ್ಞಾನದಿಂದ ಹುಟ್ಟುತಕ್ಕದ್ದಲ್ಲ

(ಭಾಷ್ಯ)

೧೫೮ ಯದಿ ಚಾತ್ಮನ್ಯೇವಾಮೃತತ್ವಂ ವಿನ್ದತೇ ಕಿಂ ಪುನರ್ವಿದ್ಯಯಾ ಕ್ರಿಯತ ಇತಿ । ಉಚ್ಯತೇ । ಅನಾತ್ಮವಿಜ್ಞಾನಂ ನಿವರ್ತಯನ್ತೀ ಸಾ ತನ್ನಿವೃತ್ತ್ಯಾ ಸ್ವಾಭಾವಿಕಸ್ಯ ಅಮೃತತ್ವಸ್ಯ ನಿಮಿತ್ತಮ್ ಇತಿ ಕಲ್ಪ್ಯತೇ । ಯತ ಆಹ "ವೀರ್ಯಂ ವಿದ್ಯಯಾ ವಿನ್ದತೇ" । ವೀರ್ಯಂ ಸಾಮರ್ಥ್ಯಮ್, ಅನಾತ್ಮಾಧ್ಯಾರೋಪಮಾಯಾ ಸ್ವಾನ್ತಧ್ವಾನ್ತಾನಭಿಭಾವ್ಯಲಕ್ಷಣಂ ಬಲಂ ವಿದ್ಯಯಾ ವಿನ್ದತೇ । ತಚ್ಚ ಕಿಂ ವಿಶಿಷ್ಟಮ್? ಅಮೃತಮ್, ಅವಿನಾಶಿ । ಅವಿದ್ಯಾಜಂ ಹಿ ವೀರ್ಯಂ ವಿನಾಶಿ । ವಿದ್ಯಯಾ ಅವಿದ್ಯಾಯಾ ಬಾಧ್ಯತ್ವಾತ್ । ನ ತು ವಿದ್ಯಾಯಾ ಬಾಧಕೋಽಸ್ತೀತಿ ವಿದ್ಯಾಜಮ್ ಅಮೃತಂ ವೀರ್ಯಮ್ । ಅತೋ ವಿದ್ಯಾ ಅಮೃತತ್ಪ್ರೇ ನಿಮಿತ್ತಮಾತ್ರಂ ಭವತಿ । 'ನಾಯಮಾತ್ಮಾ ಬಲಹೀನೇನ ಲಭ್ಯಃ" (ಮು. ೩-೨-೪) ಇತಿ ಚಾಥರ್ವಣೇ । ಲೋಕೇಽಪಿ ವಿದ್ಯಾಜಮೇವ ಬಲಮ್ ಅಭಿಭವತಿ ನ ಶರೀರಾದಿ ಸಾಮರ್ಥ್ಯಂ ಯಥಾ ಹಸ್ತ್ಯಾದೇಃ ॥

---

1 ಆತ್ಮನು ವಿಷಯನಿಂದೂ ಉಪಾಸ್ಯನೆಂದೂ ಅರಿತುಕೊಂಡರೆ.

2. ಇದು ಟೀಕಾನುಸಾರವಾಗಿ ಕನ್ನಡಿಸಿದ್ದು. "ಮೃತ್ಯುಂ ಪ್ರಾಪ್ನೋತಿ" ಅಥವಾ "ವಿಷಯಾತ್ಮಜ್ಞಾನಂ ಹಿ ಮೃತ್ಯುಂ ಪ್ರಾರಭತೇ" ಎಂದು ಮೂಲವಿದ್ದಿರಬೇಕೆಂದು ತೋರುವದು.

3. ಅರಿತುಕೊಂಡರೆ ಮೊದಲು ಇದ್ದದ್ದೇ ಹೊಸದಾಗಿ ಪ್ರಾಪ್ತವಾದಂತೆ ಆಗುತ್ತದೆ_ ಎಂದು ಭಾವ.

(ಭಾಷ್ಯಾರ್ಥ)

(ಶಂಕೆ) :—ಹೀಗೆ ಆತ್ಮನಿಂದಲೇ ಅಮೃತತ್ವವನ್ನು ಹೊಂದುತ್ತಾನೆಂದಾದರೆ ವಿದ್ಯೆಯಿಂದ ಆಗುವದಾದರೂ ಏನು ?

(ಪರಿಹಾರ) —ಹೇಳುತ್ತೇವೆ (ಕೇಳಿರಿ) : ಆ (ವಿದ್ಯೆಯು) ಅನಾತ್ಮದ ತಿಳಿವಳಿಕೆಯನ್ನು ತೊಲಗಿಸಿ ಅದರ ನಿವೃತ್ತಿಯಿಂದ(ಲೇ) ಸ್ವಾಭಾವಿಕವಾಗಿರುವ ಅಮೃತತ್ವಕ್ಕೆ ಕಾರಣವಾಗಿರುತ್ತದೆಯೆಂದು ಕಲ್ಪಿಸಲಾಗಿದೆ. ಆದ್ದರಿಂದಲೇ (ಮಂತ್ರವು) "ವಿದ್ಯೆಯಿಂದ ವೀರ್ಯವನ್ನು ಹೊಂದುತ್ತಾನೆ"[1] ಎಂದು ಹೇಳುತ್ತದೆ. ವೀರ್ಯವೆಂದರೆ ಸಾಮರ್ಥ್ಯವು. ಅನಾತ್ಮವನ್ನು ಹುಟ್ಟುಗಟ್ಟುವದೆಂಬ ಮಾಯೆಯ ಹೃದಯಭ್ರಾಂತಿಯಿಂದ[2] ಸೋಲಿಸಲಾಗದ ಸ್ವರೂಪವುಳ್ಳ ಬಲವನ್ನು ವಿದ್ಯೆಯಿಂದ ಹೊಂದುತ್ತಾನೆ. ಅದು ಎಂಥ ವಿಶೇಷಣವುಳ್ಳದ್ದು ? ಎಂದರೆ ಅಮೃತವಾದದ್ದು, ನಾಶವಿಲ್ಲದ್ದು[3] ಅವಿದ್ಯೆಯಿಂದ ಉಂಟಾಗಿರುವ ವೀರ್ಯವೇ ವಿನಾಶಿಯಾಗಿರುವದು, ಏಕೆಂದರೆ ವಿದ್ಯೆಯಿಂದ ಅವಿದ್ಯೆಯು ಬಾಧಿತವಾಗುತ್ತದೆ. ಆದರೆ ವಿದ್ಯೆಗೆ (ಯಾವ) ಬಾಧಕವೂ ಇರುವದಿಲ್ಲವಾದ್ದರಿಂದ ವಿದ್ಯೆಯಿಂದ ಉಂಟಾಗುವ ವೀರ್ಯವು ಅಮೃತವಾಗಿರುತ್ತದೆ. ಆದ್ದರಿಂದ ವಿದ್ಯೆಯು ಅಮೃತತ್ವಕ್ಕೆ ನಿಮಿತ್ತಮಾತ್ರವಾಗಿರುತ್ತದೆ, (ಅದನ್ನು ಹೊಸದಾಗಿ ಉಂಟುಮಾಡುವದಿಲ್ಲ). "ಈ ಆತ್ಮನು ಬಲಹೀನನಿಗೆ ಸಿಕ್ಕುವನಲ್ಲ" (ಮುಂ. ೩-೨ ೪) ಎಂದು ಅಥರ್ವಣದಲ್ಲಿ (ಹೇಳಿಯೂ ಇರುತ್ತದೆ) ಲೋಕದಲ್ಲಿಯೂ ವಿದ್ಯೆಯಿಂದ ಆಗಿರುವ ಬಲವೇ (ಮಿಕ್ಕದ್ದನ್ನು) ಗೆಲ್ಲುತ್ತದೆಯೇ ಹೊರತು ಆನೆಯೇ ಮುಂತಾದವುಗಳ ಶರೀರವೇ ಮುಂತಾದವುಗಳ ಸಾಮರ್ಥ್ಯವು (ಗೆಲ್ಲುವ)ದಿಲ್ಲ.

(ಭಾಷ್ಯ)

೧೫. ಅಥವಾ "ಪ್ರತಿಬೋಧವಿದಿತಂ ಮತಮ್" ಇತಿ ಸಕೃದೇವ ಅಶೇಷವಿಪರೀತನಿರಸ್ತಸಂಸ್ಕಾರೇಣ (?) ಸ್ವಪ್ನಪ್ರತಿಬೋಧವದ್ ಯದ್ ವಿದಿತಂ ತದೇವ ಮತಂ ಜ್ಞಾತಂ ಭವತೀತಿ । ಅಥವಾ ಗುರೂಪದೇಶಃ ಪ್ರತಿಬೋಧಃ । ತೇನ ವಾ ವಿದಿತಂ ಮತಮಿತಿ । ಉಭಯತ್ರ ಪ್ರತಿಬೋಧಶಬ್ದಪ್ರಯೋಗೋಽಸ್ತಿ "ಸುಪ್ತಪ್ರತಿಬುದ್ಧಃ", "ಗುರುಣಾ ಪ್ರತಿಬೋಧಿತಃ" ಇತಿ । ಪೂರ್ವಂ ತು ಯಥಾರ್ಥಮ್ ॥

1. ಪದಭಾಷ್ಯದಲ್ಲಿ ಆತ್ಮನಿಂದ ವೀರ್ಯವನ್ನು ಹೊಂದುತ್ತಾನೆ ಎಂದು ಅನ್ವಯಿಸಿದೆ.

2 ಈ ಸಮಸ್ತಪದಕ್ಕೆ ಟೀಕೆಯಲ್ಲಿ ಕೊಟ್ಟಿರುವ ವಿವರಣೆ ಹೀಗಿದೆ. (ಸ್ವಸ್ಯ ಎಂದರೆ) ತನ್ನ (?) ಅಂತವು ಯಾವ ಧ್ವಾಂತದಿಂದಾಗುವದೋ ಅದು ಸ್ವಾಂತಧ್ವಾಂತವು, ಅನಾತ್ಮರೋಪವು. ಮಾಯೆಯೆಂದರೆ ಪರಮೇಶ್ವರಶಕ್ತಿ ; ಜೀವತ್ವಸಮಿತ್ತವಾದ ಅಜ್ಞಾನವು ಸ್ವಾಂತಧ್ವಾಂತವು (?)—ಈ ಯಾವದರಿಂದಲೂ ಆತ್ಮನು ಸೋಲಿಸಲಾಗದವನಾಗುವದಕ್ಕೆ ಕಾರಣವಾದದ್ದು ವಿದ್ಯೆ.

3. ಪದಭಾಷ್ಯದಲ್ಲಿ ವೀರ್ಯಕ್ಕೆ ಅಮೃತವೆಂಬುದನ್ನು ವಿಶೇಷಣವಾಗಿ ಮಾಡಿಲ್ಲ.

(ಭಾಷ್ಯಾರ್ಥ)

ಅಥವಾ "ಪ್ರತಿಬೋಧವಿದಿತಂ ಮತಮ್" ಎಂಬುದಕ್ಕೆ ಒಂದೇಪಟ್ಟಿಗೆ ಸ್ವಲ್ಪವೂ ಉಳಿಯದಂತೆ ವಿಪರೀತಸಂಸ್ಕಾರವನ್ನು ಬಾಧಿಸಿರುವ (ಜ್ಞಾನದಿಂದ)[1] ಕನಸಿನಿಂದ ಎಚ್ಚತ್ತಂತೆ ಯಾವದು ವಿದಿತವಾಗುವದೋ ಅದೇ ಮತವು, ಜ್ಞಾತವಾಗುತ್ತದೆ-ಎಂದಾಗಲಿ, ಅಥವಾ ಗುರೂಪದೇಶವೇ ಪ್ರತಿಬೋಧವು, ಆ (ಪ್ರತಿಬೋಧದಿಂದ) ತಿಳಿದದ್ದೇ (ಸರಿಯಾಗಿ) ಮತವಾಗುತ್ತದೆ ಎಂದಾಗಲಿ (ಅರ್ಥವನ್ನು ಹೇಳಬಹುದು). ಈ ಎರಡು ಅರ್ಥ[2] ಗಳಲ್ಲಿಯೂ ಪ್ರತಿಬೋಧಶಬ್ದಕ್ಕೆ ಪ್ರಯೋಗವಿದೆ ಹೇಗೆಂದರೆ "ಸುಪ್ತಪ್ರತಿಬುದ್ಧಃ" (ನಿದ್ರಿಸುತ್ತಿದ್ದು ಎಚ್ಚತ್ತನು), "ಗುರುಣಾ ಪ್ರತಿಬೋಧಿತಃ" (ಗುರುವಿನಿಂದ ಉಪದಿಷ್ಟನಾದನು). ಆದರೆ ಮೊದಲನೆಯ ಅರ್ಥವೇ ಸರಿಯಾದದ್ದು.

ಆತ್ಮನನ್ನು ಇಲ್ಲಿಯೇ ಅರಿಯಬೇಕು

ಇಹ ಚೇದವೇದೀದಥ ... ಭವನ್ತಿ ॥ ೫ ॥

(ಭಾಷ್ಯ)

೧೩೦ "ಇಹ ಚೇದವೇದೀತ್" ಇತ್ಯವಶ್ಯಕರ್ತವ್ಯತೋಕ್ತೇಃ, ವಿಪರ್ಯಯೇ ವಿನಾಶಶ್ರುತೇಃ। ಇಹ ಮನುಷ್ಯಜನ್ಮನಿ ಸತಿ, ಅವಶ್ಯಮಾತ್ಮಾ ವೇದಿತವ್ಯಃ ಇತ್ಯೇತದ್ ವಿಧೀಯತೇ। ಕಥಮ್? ಇಹ ಚೇದವೇದೀತ್ ವಿದಿತವಾ। ಅಥ ಸತ್ಯಂ ಪರಮಾರ್ಥತತ್ತ್ವಮ್ ಅಸ್ಯವಾಪ್ತಮ್। ತಸ್ಯ ಜನ್ಮ ಸಫಲಮ್ ಇತ್ಯಭಿಪ್ರಾಯಃ। ನ ಚೇದಿಹಾವೇದೀತ್ ನ ವಿದಿತವಾ ವೃಥೈವ ಜನ್ಮ। ಅಪಿ ಚ ಮಹತೀ ವಿನಷ್ಟಿಃ ಮಹಾ ವಿನಾಶೋ ಜನ್ಮಮರಣಪ್ರಬನ್ಧಾವಿಚ್ಛೇದಪ್ರಾಪ್ತಿಲಕ್ಷಣಃ ಸ್ಯಾತ್। ಯತಃ ತಸ್ಮಾತ್ ಅವಶ್ಯಂ ತದ್ವಿಚ್ಛೇದಾಯ ಜ್ಞೇಯ ಆತ್ಮಾ ॥

(ಭಾಷ್ಯಾರ್ಥ)

"ಇಹ ಚೇದವೇದೀತ್" ಎಂಬುದು (ಆತ್ಮಜ್ಞಾನವನ್ನು) ಅವಶ್ಯವಾಗಿ ಮಾಡಿಕೊಳ್ಳಬೇಕೆಂದು ಹೇಳುತ್ತದೆ. ಏಕೆಂದರೆ ಹೀಗಿಲ್ಲದೆಹೋದರೆ ವಿನಾಶವಾಗುವದೆಂದು ಶ್ರುತಿಯು (ಹೇಳುತ್ತಿದೆ). ಇಲ್ಲಿ ಎಂದರೆ ಮನುಷ್ಯಜನ್ಮವಿರುವಾಗ ಅವಶ್ಯವಾಗಿ ಆತ್ಮನನ್ನು ತಿಳಿದುಕೊಳ್ಳಬೇಕು ಎಂಬುದನ್ನು ವಿಧಿಸಿರುತ್ತದೆ. ಹೇಗೆಂದರೆ: ಇಲ್ಲಿ ತಿಳಿದುಕೊಂಡರೆ, ತಿಳಿದುಕೊಂಡನಾದರೆ, ಆಗ ಸತ್ಯವಿದೆ ಎಂದರೆ ಪರ

---

1. ಟೀಕೆಯಂತೆ ಕನ್ನಡಿಸಿದೆ. 'ಸಮಸ್ತಾಶೇಷವಿಪರೀತಸಂಸ್ಕಾರೇಣ' ಎಂದು ಇವ್ವರಿ ಚೆನ್ನಾಗಿತ್ತು. ಇದು ಸದ್ಯೋಮುಕ್ತಿವಾದವೆಂದು ಟೀಕೆಯಲ್ಲಿದೆ. ಈ ವ್ಯಾಖ್ಯಾನವನ್ನು ಪದಭಾಷ್ಯದಲ್ಲಿ ನಿರಾಕರಿಸಿದೆ ಎಂಬುದನ್ನು ಲಕ್ಷ್ಯದಲ್ಲಿಡಬೇಕು.

2. ಪ್ರತಿಬೋಧಶಬ್ದಕ್ಕೆ ಎಚ್ಚರ, ಉಪದೇಶ-ಎಂಬ ಎರಡು ಅರ್ಥಗಳೂ ಇವೆಯೆಂದಭಿಪ್ರಾಯ.

ಮಾರ್ಥತತ್ತ್ವವನ್ನು ಪಡೆದಂತಾಯಿತು, ಅವನ ಜನ್ಮವು ಸಫಲವು ಎಂದಭಿಪ್ರಾಯ. ಇಲ್ಲಿ ತಿಳಿಯಲಿಲ್ಲವಾದರೆ ತಿಳಿತುಕೊಂಡನಿಲ್ಲವಾದರೆ ಜನ್ಮವು ವ್ಯರ್ಥವೇ. ಇದೂ ಅಲ್ಲದೆ ಮಹತ್ತಾದ ವಿನಷ್ಟಿಯು ಎಂದರೆ ಜನ್ಮಮರಣಗಳ ಸಾಲುಗಳು ಕಡಿವಡಿಯದೆ ಇರುವದೆಂಬ ದೊಡ್ಡ ವಿನಾಶವಾಗುವದು. ಹೀಗಿರುವದರಿಂದ ಅದನ್ನು ಕಡಿದುಹಾಕುವದಕ್ಕಾಗಿ ಅವಶ್ಯವಾಗಿ ಆತ್ಮನನ್ನು ತಿಳಿತುಕೊಳ್ಳಬೇಕು.

(ಭಾಷ್ಯ)

೧೩೧. ಜ್ಞಾನೇನ ತು ಕಿಂ ಸ್ಯಾತ್ ಇತಿ ? ಉಚ್ಯತೇ । ಭೂತೇಷು ಭೂತೇಷು ಚರಾಚರೇಷು ಸರ್ವೇಷ್ವಿತ್ಯರ್ಥಃ । ವಿಚಿತ್ಯ ಪೃಥಙ್ನಿಷ್ಪ್ಯ । ಏಕಮಾತ್ಮತತ್ತ್ವಂ ಸಂಸಾರಧರ್ಮ್ಯರಸ್ಪೃಷ್ಟಮ್ ಆತ್ಮಭಾವೇನೋಪಲಭ್ಯ ಇತ್ಯರ್ಥಃ । ಅನೇಕಾರ್ಥತ್ವಾದ್ಧಾತೂನಾಮ್ । ನ ಪುನಃ “ ಚಿತ್ವಾ ” ಇತಿ ಸಮ್ಭವತಿ, ವಿರೋಧಾತ್ । ಧೀರಾಃ ಧೀಮನ್ತಃ, ವಿವೇಕಿನಃ, ವಿನಿವೃತ್ತಬಾಹ್ಯವಿಷಯಾಭಿಲಾಷಾಃ । ಪ್ರೇತ್ಯ ಮೃತ್ವಾ ಅಸ್ಮಾಲ್ಲೋಕಾತ್ ಶರೀರಾದ್ಯನಾತ್ಮಲಕ್ಷಣಾದ್, ವ್ಯಾವೃತ್ತಮಮುತ್ವಾಹಙ್ಕಾರಾಃ ಸನ್ತ ಇತ್ಯರ್ಥಃ । ಅಮೃತಾ ಅಮರಣಧರ್ಮಾಣೋ ನಿತ್ಯವಿಜ್ಞಾನಾಮೃತಸ್ವಭಾವಾ ಏವ ಭವನ್ತಿ ॥

(ಭಾಷ್ಯಾರ್ಥ)

ಜ್ಞಾನದಿಂದ ಏನಾಗುವದು? ಎಂದರೆ ಹೇಳಲಾಗುತ್ತದೆ. ಭೂತಗಳಲ್ಲಿ ಭೂತಗಳಲ್ಲಿ ಚರಾಚರರೂಪವಾದ ಸಮಸ್ತಭೂತಗಳಲ್ಲಿ ಎಂದರ್ಥ. ವಿಚಿತ್ಯ ಎಂದರೆ ಬೇರೆಯಾಗಿ ವಿಂಗಡಿಸಿಕೊಂಡು, ಸಂಸಾರಧರ್ಮಗಳ ಸೋಂಕಿಲ್ಲದ ಒಂದೇ ಆಗಿರುವ ಆತ್ಮತತ್ತ್ವವನ್ನು (ತಮ್ಮ) ಆತ್ಮನೆಂದು ಕಂಡುಕೊಂಡು ಎಂದರ್ಥ. ಏಕೆಂದರೆ ಧಾತುಗಳಿಗೆ ಅನೇಕ ಅರ್ಥಗಳುಂಟು. ಇದಕ್ಕೆ ಬದಲು “ ವಿಚಿತ್ಯ ” ಎಂಬುದಕ್ಕೆ ರಾಶಿಹಾಕಿ ಎಂದು ಅರ್ಥವನ್ನು ಮಾಡುವದಕ್ಕೆ ಆಗುವದೇ ಇಲ್ಲ, ಏಕೆಂದರೆ ಅದು (ಪ್ರಕೃತಕ್ಕೆ) ವಿರುದ್ಧವಾಗುವದು. ಧೀರರಾಗಿ ಎಂದರೆ ಬುದ್ಧಿವಂತರಾಗಿ, ಹೊರಗಿನ ವಿಷಯಗಳಲ್ಲಿ ಅಭಿಲಾಷೆಯನ್ನು ತೊರೆದವರಾಗಿ ಎಂದರ್ಥ. ಪ್ರೇತ್ಯ ಎಂದರೆ ಸತ್ತು[1]. ಈ ಲೋಕದಿಂದ ಶರೀರವೇ ಮುಂತಾದ ಅನಾತ್ಮರೂಪವಾಗಿರುವ ಲೋಕದಿಂದ ನನ್ನದು ನಾನು ಎಂಬಿವನ್ನು ಬಿಟ್ಟು ಎಂದರ್ಥ. ಅಮೃತರು ಎಂದರೆ ಮರಣವೆಂಬ ಧರ್ಮವಿಲ್ಲದವರು, ನಿತ್ಯಜ್ಞಾನವಾದ ಅಮೃತಸ್ವಭಾವದವರೇ ಆಗುವರು.

1. ಇದು ಹೆಚ್ಚಗೆಯ ಮಾತೆಂದು ತೋರುವದು.

ಮೂರನೆಯ ಖಂಡ

ಯಕ್ಷೋಪಾಖ್ಯಾನದ ಸಂಬಂಧ

(ಭಾಷ್ಯ)

೧೩. ಬ್ರಹ್ಮ ಹ ದೇವೇಭ್ಯಃ '' ಇತಿ ಬ್ರಹ್ಮಣೋ ದುರ್ವಿಜ್ಞೇಯತೋಕ್ತೆರ್ಯತ್ನಾಧಿಕ್ಯಾರ್ಥಾ । ಸಮಾಪ್ತಾ ಬ್ರಹ್ಮವಿದ್ಯಾ ಯದಧೀನಃ ಪುರುಷಾರ್ಥಃ । ಅತ ಊರ್ಧ್ವಮ್ ಅರ್ಥವಾದೇನ ಬ್ರಹ್ಮಣೋ ದುರ್ವಿಜ್ಞೇಯತಾ ಉಚ್ಯತೇ । ತದ್ವಿಜ್ಞಾನೇ ಕಥಂ ನು ನಾಮ ಯತ್ನಮಧಿಕಂ ಕುರ್ಯಾತ್ ಇತಿ ॥

(ಭಾಷ್ಯಾರ್ಥ)

" ಬ್ರಹ್ಮ ಹ ದೇವೇಭ್ಯಃ " ಎಂಬ ಗ್ರಂಥದಲ್ಲಿ ಬ್ರಹ್ಮವು ತಿಳಿಯುವದಕ್ಕೆ ಕಷ್ಟವಾದದ್ದು ಎಂದು ಹೇಳಿರುವದು ಯತ್ನವು ಹೆಚ್ಚಾಗಲಿ ಎಂಬುದಕ್ಕಾಗಿ. ಬ್ರಹ್ಮ ವಿದ್ಯೆಯು ಮುಗಿಯಿತು , ಪುರುಷಾರ್ಥವು ಅದರ ಅಧೀನವಾಗಿರುತ್ತದೆ. ಇನ್ನು ಮೇಲೆ ಅರ್ಥವಾದಮೂಲಕವಾಗಿ ಬ್ರಹ್ಮವು ತಿಳಿಯುವದಕ್ಕೆ ಕಷ್ಟವಾಗಿರುವದು ಎಂದು ಹೇಳಲಾಗುತ್ತದೆ. (ಏಕೆಂದರೆ) ಹೇಗಾದರೂ ಆ ಬ್ರಹ್ಮವನ್ನು ತಿಳಿಯುವದರಲ್ಲಿ ಹೆಚ್ಚಿನ ಯತ್ನವನ್ನು (ಸಾಧಕರು) ಮಾಡಲಿ ಎಂಬುದೇ (ಉದ್ದೇಶವು).

(ಭಾಷ್ಯ)

೧೩. ಶಮಾದ್ಯರ್ಥೋ ವಾಮ್ನಾಯಃ, ಅಭಿಮಾನಶಾತನಾತ್ । ಶಮಾದಿ ವಾ ಬ್ರಹ್ಮವಿದ್ಯಾಸಾಧನಂ ವಿಧಿಪ್ಸಿತಮ್, ತದರ್ಥೋಽಯಮರ್ಥವಾದಾಮ್ನಾಯಃ । ನ ಹಿ ಶಮಾದಿಸಾಧನರಹಿತಸ್ಯ ಅಭಿಮಾನರಾಗದ್ವೇಷಾದಿಯುಕ್ತಸ್ಯ ಬ್ರಹ್ಮವಿಜ್ಞಾನೇ ಸಾಮರ್ಥ್ಯಮಸ್ತಿ । ವ್ಯಾವೃತ್ತಬಾಹ್ಯಮಿಥ್ಯಾಪ್ರತ್ಯಯಗ್ರಾಹ್ಯತ್ವಾದ್ ಬ್ರಹ್ಮಣಃ । ಯಸ್ಮಾಚ್ಚ ಅಗ್ನ್ಯಾದೀನಾಂ ಜಯಾಭಿಮಾನಂ ಶಾತಯತಿ ತತಶ್ಚ ಬ್ರಹ್ಮವಿಜ್ಞಾನಂ ದರ್ಶಯತ್ಯಭಿಮಾನೋಪಶಮೇ । ತಸ್ಮಾತ್ ಶಮಾದಿಸಾಧನವಿಧಾನಾರ್ಥೋಽಯಮರ್ಥವಾದ ಇತ್ಯವಸೀಯತೇ ॥

(ಭಾಷ್ಯಾರ್ಥ)

ಈ ವೇದವಾಕ್ಯವು ಶಮಾದಿಗಳಿಗೋಸ್ಕರ ಎಂದಾದರೂ (ಹೇಳಬಹುದು). ಏಕೆಂದರೆ (ಇಲ್ಲಿ) ಅಭಿಮಾನವನ್ನು ಕತ್ತರಿಸಿರುತ್ತದೆ. ಶಮವೇ ಮುಂತಾದ ಬ್ರಹ್ಮ ವಿದ್ಯಾಸಾಧನವನ್ನು (ಇಲ್ಲಿ) ವಿಧಿಸಬೇಕೆಂದಿರುತ್ತದೆ , ಅದಕ್ಕಾಗಿಯೇ ಈ ಅರ್ಥವಾದವನ್ನು ಹೇಳುವ ವೇದವಾಕ್ಯವು (ಬಂದಿದೆ). ಶಮವೇ ಮುಂತಾದ ಸಾಧನವಿಲ್ಲದೆ ಅಭಿಮಾನ, ರಾಗ, ದ್ವೇಷ ಮುಂತಾದವುಗಳಿಂದೊಡಗೂಡಿರುವಾತನಿಗೆ

ಬ್ರಹ್ಮವಿಜ್ಞಾನದಲ್ಲಿ ಸಾಮರ್ಥ್ಯವಿರುವದೇ ಇಲ್ಲ. ಏಕೆಂದರೆ ಹೊರಗಿನ (ವಿಷಯದ) ಮಿಥ್ಯಾಜ್ಞಾನವನ್ನು ಬಿಟ್ಟು ಹಿಂತಿರುಗಿದವರಿಗೇ ಬ್ರಹ್ಮವು ತಿಳಿಯಬರುವಂಥದ್ದು. ಮತ್ತು ಅಗ್ನಿಯೇ ಮೊದಲಾದವರ (ನಾವು) ಗೆದ್ದೆವೆಂಬ ಅಭಿಮಾನವನ್ನು ಕತ್ತರಿಸಿರುತ್ತದೆ, ಆಮೇಲೆ ಅಭಿಮಾನವು ಹೋದಮೇಲೆಯೇ ಬ್ರಹ್ಮವಿಜ್ಞಾನವನ್ನು (ಅವರಿಗೆ) ತೋರಿಸಿಕೊಟ್ಟಿರುತ್ತದೆ. ಆದ್ದರಿಂದಲೂ ಶಮವೇ ಮುಂತಾದ ಸಾಧನಗಳನ್ನು ವಿಧಾನಮಾಡುವದಕ್ಕೆ ಈ ಅರ್ಥವಾದವು ಬಂದಿದೆ ಎಂದು ನಿಶ್ಚಯವಾಗುತ್ತದೆ.

(ಭಾಷ್ಯ)

೧೩೪. ಸಗುಣೋಪಾಸನಾರ್ಥೋ ವಾ, ಅಪೋದಿತತ್ವಾತ್ । "ನೇದಂ ಯದಿದಮುಪಾಸತೇ" (೨-೫, ೬, ೭, ೮, ೯) ಇತ್ಯುಪಾಸ್ಯತ್ವಂ ಬ್ರಹ್ಮಣೋಽಪೋದಿತಮ್ । ಅಪೋದಿತತ್ವಾದನುಪಾಸ್ಯತ್ವೇ ಪ್ರಾಪ್ತೇ ತಸ್ಯೈವ ಬ್ರಹ್ಮಣಃ ಸಗುಣತ್ವೇನ, ಅಧಿದೈವಮ್ ಅಧ್ಯಾತ್ಮಂ ಚ, ಉಪಾಸನಂ ವಿಧಾತವ್ಯಮ್- ಇತ್ಯೇವಮರ್ಥೋ ವಾ । "ಇತ್ಯಧಿದೈವತಮ್" (೪-೪) "ತದ್ವನಮಿತ್ಯುಪಾಸಿತವ್ಯಮ್" (೪-೬) ಇತಿ ಹಿ ವಕ್ಷ್ಯತಿ ॥

(ಭಾಷ್ಯಾರ್ಥ)

ಅಥವಾ ಸಗುಣೋಪಾಸನೆಯನ್ನು (ವಿಧಿಸು)ವದಕ್ಕೆ ಎಂದಾದರೂ ಹೇಳಬಹುದು, ಏಕೆಂದರೆ (ಅದನ್ನು ಹಿಂದೆ) ನಿಷೇಧಿಸಿರುತ್ತದೆ "ಯಾವದನ್ನು ಇದೆಂದು ಉಪಾಸನೆ ಮಾಡುತ್ತಾರೋ ಇದು (ಬ್ರಹ್ಮ)ವಲ್ಲ" (೨-೫) ಎಂದು ಬ್ರಹ್ಮಕ್ಕೆ ಉಪಾಸ್ಯತ್ವವನ್ನು ನಿಷೇಧಿಸಿರುತ್ತದೆ. (ಹಾಗೆ) ನಿಷೇಧಿಸಿರುವದರಿಂದ (ಬ್ರಹ್ಮವನ್ನು) ಉಪಾಸನೆಮಾಡತಕ್ಕದ್ದಲ್ಲ ಎಂದು ಪ್ರಾಪ್ತವಾಯಿತಾದ್ದರಿಂದ ಅದೇ ಬ್ರಹ್ಮಕ್ಕೆ ಅಧಿದೈವವಾಗಿಯೂ ಅಧ್ಯಾತ್ಮವಾಗಿಯೂ ಸಗುಣವಾಗಿ ಉಪಾಸನೆಯನ್ನು ವಿಧಿಸಬೇಕಾಗಿರುತ್ತದೆ. ಈ ಪ್ರಯೋಜನಕ್ಕಾಗಿ (ಮುಂದಿನ ಭಾಗವು ಬಂದಿದೆ) ಎಂದಾದರೂ (ಹೇಳಬಹುದು). ಏಕೆಂದರೆ "ಹೀಗೆ ಅಧಿದೈವತವು" (೪-೪), "ತದ್ವನವೆಂದು ಉಪಾಸನೆಮಾಡಬೇಕು" (೪-೬) ಎಂದೇ ಮುಂದೆ ಹೇಳಿರುತ್ತದೆ.

ಬ್ರಹ್ಮಶಬ್ದದ ಅರ್ಥ

(ಭಾಷ್ಯ)

೧೩೫. "ಬ್ರಹ್ಮ" ಇತಿ ಪರಃ, ಲಿಙ್ಗಾತ್ । ನ ಹ್ಯನ್ಯತ್ರ ಪರಾದೀಶ್ವರಾತ್ ನಿತ್ಯಸರ್ವಜ್ಞಾತ್ ಪರಿಭೂಯಾಗ್ನ್ಯಾದೀ೯ ತೃಣಂ ವಜ್ರೀಕರ್ತುಂ ಸಾಮರ್ಥ್ಯಮಸ್ತಿ । ತನ್ನಶಶಾಕ ದಗ್ಧುಮ್" (೩-೬) ಇತ್ಯಾದಿಲಿಙ್ಗಾತ್ ಬ್ರಹ್ಮಶಬ್ದವಾಚ್ಯ

ಈಶ್ವರ ಇತ್ಯವಸೀಯತೇ। ನ ಹ್ಯನ್ಯಥಾ ಅಗ್ನಿಸ್ತೃಣಂ ದಗ್ಧುಂ ನೋತ್ಸಹತೇ, ವಾಯುರ್ವಾ ಆದಾತುಮ್। ಈಶ್ವರೇಚ್ಛಯಾ ತೃಣಮಪಿ ವಜ್ರೀಭವತೀತ್ಯುಪಪದ್ಯತೇ ॥

(ಭಾಷ್ಯಾರ್ಥ)

(ಇಲ್ಲಿ) ಬ್ರಹ್ಮ ಎಂದರೆ ಪರಮೇಶ್ವರನು, ಏಕೆಂದರೆ (ಅವನ) ಗುರುತಿರುತ್ತದೆ. ನಿತ್ಯಸರ್ವಜ್ಞನಾದ ಪರಮೇಶ್ವರನನ್ನು ಬಿಟ್ಟರೆ ಮಿಕ್ಕ ಯಾರಿಗೂ ಅಗ್ನಿಯೇ ಮೊದಲಾದವರನ್ನು ತಿರಸ್ಕರಿಸಿ ತೃಣವನ್ನು ವಜ್ರವಾಗಿ ಮಾಡಲು ಸಾಮರ್ಥ್ಯವಿರುವದೇ ಇಲ್ಲ. "ಅದನ್ನು ಸುಡಲಾರದೆಹೋದನು" (೩-೬) ಎಂದು ಮುಂತಾದ (ಈಶ್ವರನ) ಗುರುತು ಇರುವದರಿಂದ ಬ್ರಹ್ಮಶಬ್ದದಿಂದ (ಇಲ್ಲಿ) ಹೇಳಿರುವದು ಈಶ್ವರನನ್ನೇ ಎಂದು ನಿಶ್ಚಯವಾಗುತ್ತದೆ. ಹಾಗಿಲ್ಲದಿದ್ದರೆ ಅಗ್ನಿಯು ಹುಲ್ಲು ಕಡ್ಡಿಯನ್ನು ಸುಡಲಾರನೆಂದು ಹೇಳಲಾಗುವದಿಲ್ಲ, ವಾಯುವು (ಅದನ್ನು) ಎತ್ತಿಕೊಳ್ಳಲಾರನೆಂದೂ ಹೇಳಲಾಗುವದಿಲ್ಲ. (ಆದರೆ) ಈಶ್ವರನ ಇಚ್ಛೆಯಿಂದ ಹುಲ್ಲು ಕಡ್ಡಿಯೂ ವಜ್ರವಾಗುತ್ತದೆ ಎಂಬುದು ಯುಕ್ತವಾಗಿದೆ

ಈಶ್ವರಸಿದ್ಧಿ

(ಭಾಷ್ಯ)

೧೩೬ ತತ್ಸಿದ್ಧಿರ್ಜಗತೋ ನಿಯತಪ್ರವೃತ್ತೇಃ। ಶ್ರುತಿಸ್ಮೃತಿಪ್ರಸಿದ್ಧಿಭಿರ್ನಿತ್ಯಸರ್ವವಿಜ್ಞಾನೇ ಈಶ್ವರೇ ಸರ್ವಾತ್ಮನಿ ಸರ್ವಶಕ್ತೌ ಸಿದ್ಧೇಽಪಿ ಶಾಸ್ತ್ರಾರ್ಥನಿಶ್ಚಯಾರ್ಥಮುಚ್ಯತೇ। ತಸ್ಯೇಶ್ವರಸ್ಯ ಸದ್ಭಾವಸಿದ್ಧಿಃ ಕುತೋ ಭವತೀತಿ ? ಉಚ್ಯತೇ। ಯದಿದಂ ಜಗತ್ ದೇವಗನ್ಧರ್ವಯಕ್ಷರಕ್ಷಃಪಿತೃಪಿಶಾಚಾದಿಲಕ್ಷಣಂ ದ್ಯುವಿಯತ್ಪೃಥಿವ್ಯಾದಿತ್ಯಚನ್ದ್ರಗ್ರಹನಕ್ಷತ್ರವಿಚಿತ್ರಂ ವಿವಿಧಪ್ರಾಣ್ಯುಪಭೋಗಯೋಗ್ಯಸ್ಥಾನ ಸಾಧನಸಮ್ಬನ್ಧಿ, ತದತ್ಯನ್ತಕುಶಲಶಿಲ್ಪಿಭಿರಪಿ ದುರ್ನಿರ್ಮಾಣಮ್ ದೇಶಕಾಲನಿಮಿತ್ತಾನುರೂಪನಿಯತಪ್ರವೃತ್ತಿನಿವೃತ್ತಿಕ್ರಮಮ್, ಏತದ್ಯೋಕ್ತೃಕರ್ಮವಿಭಾಗಜ್ಞಪ್ರಯತ್ನಪೂರ್ವಕಂ ಭವಿತುಮರ್ಹತಿ। ಕಾರ್ಯತ್ವೇ ಸತಿ ಯಥೋಕ್ತಲಕ್ಷಣತ್ವಾತ್, ಗೃಹಪ್ರಾಸಾದರಥಶಯನಾಸನಾದಿವತ್। ವಿಪಕ್ಷೇ ಆತ್ಮಾದಿವತ್ ॥

(ಭಾಷ್ಯಾರ್ಥ)

ಜಗತ್ತು ನಿಯತವಾಗಿ ತೊಡಗುತ್ತಿರುವದರಿಂದ ಆ (ಈಶ್ವರನ) ಸಿದ್ಧಿಯಾಗುತ್ತದೆ. ಶ್ರುತಿ, ಸ್ಮೃತಿ, (ಲೋಕ)ಪ್ರಸಿದ್ಧಿ—ಇವುಗಳಿಂದ ಎಲ್ಲವನ್ನೂ (ತಿಳಿಯುವ) ನಿತ್ಯಜ್ಞಾನವುಳ್ಳ ಸರ್ವಾತ್ಮನಾದ ಸರ್ವಶಕ್ತಿಗಳುಳ್ಳ ಈಶ್ವರನು ಸಿದ್ಧನಾಗಿರುತ್ತಾನಾದರೂ ಶಾಸ್ತ್ರಾರ್ಥವನ್ನು ನಿಶ್ಚಯಿಸುವದಕ್ಕಾಗಿ (ಈ ಅನುಮಾನವನ್ನು) ಹೇಳುತ್ತೇವೆ. ಆ ಈಶ್ವರನ ಸಿದ್ಧಿಯು ಎತರಿಂದ ಆಗುತ್ತದೆ ? ಎಂದರೆ ಹೇಳುತ್ತೇವೆ. ದೇವತೆಗಳು, ಗಂಧರ್ವರು, ಯಕ್ಷರು, ರಾಕ್ಷಸರು, ಪಿತೃಗಳು, ಪಿಶಾಚಗಳು

ಮುಂತಾದ (ಪ್ರಾಣಿಗಳ) ಸ್ವರೂಪವಾಗಿಯೂ ಸ್ವರ್ಗ, ಆಕಾಶ, ಪೃಥಿವಿ, ಆದಿತ್ಯ, ಚಂದ್ರ, ಗ್ರಹಗಳು, ನಕ್ಷತ್ರಗಳು–ಇವುಗಳಿಂದ ವಿಚಿತ್ರವಾಗಿಯೂ ಇರುವ ಈ ಜಗತ್ತೆಂಬುದಿದೆಯಲ್ಲ, ಅದು ಅತ್ಯಂತ ಕುಶಲರಾದ ಶಿಲ್ಪಿಗಳಿಗೂ ನಿರ್ಮಿಸುವದಕ್ಕೆ ಆಗದ್ದಾಗಿ ದೇಶ, ಕಾಲ, ನಿಮಿತ್ತ–ಇವುಗಳಿಗೆ ಅನುಗುಣವಾಗಿ ಗೊತ್ತಾದ ಪ್ರವೃತ್ತಿ, ನಿವೃತ್ತಿ–ಇವುಗಳ ಕ್ರಮವುಳ್ಳದ್ದಾಗಿರುತ್ತದೆಯಷ್ಟೆ. ಇದು ಭೋಕ್ತೃಗಳ ಕರ್ಮಗಳ ವಿಂಗಡವನ್ನು ಬಲ್ಲಾತನ ಪ್ರಯತ್ನಪೂರ್ವಕವಾಗಿ ಆದದ್ದಾಗಿರಬೇಕು. ಏಕೆಂದರೆ ಇದು ಕಾರ್ಯವಾಗಿ ಮೇಲೆ ವರ್ಣಿಸಿದ ರೂಪವುಳ್ಳದ್ದಾಗಿದೆ. ಇದಕ್ಕೆ ಮನೆ, ಉಪ್ಪರಿಗೆ, ರಥ, ಹಾಸಿಗೆ, ಆಸನ–ಮುಂತಾದವುಗಳು ದೃಷ್ಟಾಂತವು[1], ಇದಕ್ಕೆ ವಿರುದ್ಧವಾದ ದೃಷ್ಟಾಂತಗಳು ಆತ್ಮನೇ ಮೊದಲಾದವುಗಳು.

ಕರ್ಮವೇ ಫಲವನ್ನು ಕೊಡಲಾರದು

(ಭಾಷ್ಯ)

೧೩೭. ಕರ್ಮಣ ಏವೇತಿ ಚೇತ್। ನ ಪರತನ್ತ್ರಸ್ಯ ನಿಮಿತ್ತಮಾತ್ರತ್ವಾತ್। ಯದಿದಮ್ ಉಪಭೋಗವೈಚಿತ್ರ್ಯಂ ಪ್ರಾಣಿನಾಮ್, ತದ್ಸಾಧನವೈಚಿತ್ರ್ಯಂ ಚ, ದೇಶಕಾಲನಿಮಿತ್ತಾನುರೂಪನಿಯತಪ್ರವೃತ್ತಿನಿವೃತ್ತಿಕ್ರಮಂ ಚ(?) ತನ್ನ ನಿತ್ಯಸರ್ವಜ್ಞಕರ್ತೃಕಮ್। ಕಿಂ ತರ್ಹಿ ಕರ್ಮಣ ಏವ, ತಸ್ಯಾಚೇನ್ಯಪ್ರಭಾವತ್ವಾತ್, ಸರ್ವೈಶ್ಚ ಫಲಹೇತುತ್ವಾಭ್ಯುಪಗಮಾತ್। ಸತಿ ಕರ್ಮಣಃ ಫಲಹೇತುತ್ವೇ ಕಿಮೀಶ್ವರಾಧಿಕಕಲ್ಪನಯಾ ಇತಿ ನ ನಿತ್ಯಸ್ಯೇಶ್ವರಸ್ಯ ನಿತ್ಯಸರ್ವಜ್ಞಶಕ್ತೇಃ ಫಲಹೇತುತ್ವಂ ಚೇತಿ (?) ಚೇತ್। ನ ಕರ್ಮಣ ಏವೋಪಭೋಗವೈಚಿತ್ರ್ಯಾದ್ಯುಪಪದ್ಯೇತ। ಕಸ್ಮಾತ್? ಕರ್ತೃತನ್ತ್ರತ್ವಾತ್ ಕರ್ಮಣಃ। ಚಿತಿಮತ್ಪ್ರಯತ್ನನಿವೃತ್ತಂ ಹಿ ಕರ್ಮ। ತತ್ಪ್ರಯತ್ನೋಪರಮಾದುಪರತಂ ಸತ್, ದೇಶಾನ್ತರೇ ವಾ ನಿಯತನಿಮಿತ್ತವಿಶೇಷಾಪೇಕ್ಷಂ ಕರ್ತುಃ ಫಲಂ ಜನಯಿಷ್ಯತೀತಿ ನ ಯುಕ್ತಮ್ ಅನಪೇಕ್ಷ್ಯಾನ್ಯದಾತ್ಮನಃ ಪ್ರಯೋಕ್ತೃ। ಕರ್ತೈವ ಫಲಕಾಲೇ ಪ್ರಯೋಕ್ತಾ ಇತಿ ಚೇತ್। "ಮಯಾ ನಿರ್ವರ್ತಿತೋ ಸಿ, ತ್ವಾಂ ಪ್ರಯೋಕ್ಷ್ಯೇ ಫಲಾಯ ಯದಾತ್ಮಾನುರೂಪಂ ಫಲಮ್"

---

1 ಮನೆಯೇ ಮುಂತಾದವುಗಳನ್ನು ಇದನ್ನು ಇಂಥವನಿಗಾಗಿ ಹೀಗೆ ಮಾಡಬೇಕು–ಎಂದು ತಿಳಿದೇ ಮಾಡುತ್ತಾರೆ. ಅವು ಕಾರ್ಯವೂ ವೈಚಿತ್ರ್ಯದಿಂದ ಕೂಡಿಯೂ ಇರುತ್ತವೆ. ಅದರಂತೆಯೇ ಜಗತ್ತು ಕಾರ್ಯವಾಗಿ ವೈಚಿತ್ರ್ಯದಿಂದ ಕೂಡಿರುವದರಿಂದ ಅದನ್ನು ಭೋಕ್ತೃ ಕರ್ಮವಿಭಾಗವನ್ನು ಬಲ್ಲ ಈಶ್ವರನೇ ಮಾಡಿರಬೇಕು.

2. ಆತ್ಮನು ಕಾರ್ಯವಲ್ಲ, ವೈಚಿತ್ರ್ಯದಿಂದ ಕೂಡಿಯೂ ಇಲ್ಲ; ಏಕೆಂದರೆ ಅದನ್ನು ವಿಭಾಗವನ್ನರಿತಾತನು ಮಾಡಿರುವದಿಲ್ಲವೆಂದು ಭಾವ.

ಇತಿ । ನ । ದೇಶಕಾಲನಿಮಿತ್ತವಿಶೇಷಾನಭಿಜ್ಞತ್ವಾತ್ । ಯದಿ ಹಿ ಕರ್ತಾ ದೇಶ ವಿಶೇಷಾಭಿಜ್ಞಃ ಸ್ಯ ಸ್ವಾತನ್ತ್ರ್ಯೇಣ ಕರ್ಮ ನಿಯುಞ್ಜ್ಯಾತ್, ತತೋಽನಿಷ್ಟಫಲಸ್ಯ ಅಪ್ರಯೋಕ್ತಾ ಸ್ಯಾತ್ ॥

(ಭಾಷ್ಯಾರ್ಥ)

"ಕರ್ಮದ್ದೇ ಆಗಲಿ" ಎಂದರೆ ಆಗಲಾರದು. ಏಕೆಂದರೆ ಪರತಂತ್ರವಾಗಿರುವ (ಕರ್ಮವು) ನಿಮಿತ್ತಮಾತ್ರವಾಗಿರುತ್ತದೆ.

(ಆಕ್ಷೇಪದ ವಿವರ):—ಪ್ರಾಣಿಗಳ ಉಪಭೋಗದ ವೈಚಿತ್ರ್ಯವು, ಅದಕ್ಕೆ ಬೇಕಾದ ಸಾಧನಗಳ ವೈಚಿತ್ರ್ಯವು, ದೇಶ ಕಾಲನಿಮಿತ್ತಗಳಿಗೆ ಅನುಗುಣವಾಗಿ ಗೊತ್ತಾದ ಪ್ರವೃತ್ತಿ ನಿವೃತ್ತಿ ಕ್ರಮ–ಇದು ನಿತ್ಯವಾದ ಸರ್ವಜ್ಞನಿಂದಾಗಿರುವದಲ್ಲ, ಮತ್ತೇನೆಂದರೆ ಕರ್ಮದಿಂದಲೇ ಆದದ್ದು. ಏಕೆಂದರೆ ಆ (ಕರ್ಮ)ಕ್ಕೆ ಅಚಿಂತ್ಯವಾದ ಶಕ್ತಿಯಿರುತ್ತದೆ, (ಅದು) ಫಲಕ್ಕೆ ಕಾರಣವೆಂದು ಎಲ್ಲರೂ ಒಪ್ಪಿರುತ್ತಾರೆ. (ಹೀಗೆ) ಕರ್ಮವೇ ಫಲಕ್ಕೆ ಕಾರಣವಾಗಿರುವಲ್ಲಿ ಈಶ್ವರನನ್ನು ಅಧಿಕವಾಗಿ ಕಲ್ಪಿಸುವದರಿಂದ ಏನು ಪ್ರಯೋಜನ? (ಏನೂ ಇಲ್ಲ)ವಾದ್ದರಿಂದ ನಿತ್ಯಸರ್ವಜ್ಞಶಕ್ತಿಯಿಂದ ಕೂಡಿರುವ ನಿತ್ಯನಾದ ಈಶ್ವರನು ಫಲಕ್ಕೆ ಕಾರಣನು ಎಂಬುದು ಸಿದ್ಧಿಸುವದಿಲ್ಲವಲ್ಲ!

(ಪರಿಹಾರದ ವಿವರ):—ಕರ್ಮದಿಂದಲೇ ಉಪಭೋಗವೈಚಿತ್ರ್ಯವೇ ಮುಂತಾದದ್ದು ಹೊಂದಲಾರದು. ಏಕೆಂದರೆ, ಕರ್ಮವು ಕರ್ತೃವಿಗೆ ಅಧೀನವಾಗಿರುತ್ತದೆ. ಚೈತನ್ಯವುಳ್ಳಾತನ ಪ್ರಯತ್ನದಿಂದಲೇ ಕರ್ಮವು ಆಗುವದಾದ್ದರಿಂದ ಆತನ ಪ್ರಯತ್ನವು ನಿಲ್ಲುತ್ತಲೂ (ತಾನೂ) ನಿಂತುಹೋಗಿದ್ದು, ಮತ್ತೊಂದು ದೇಶದಲ್ಲಿ ಅಥವಾ ಮತ್ತೊಂದು ಕಾಲದಲ್ಲಿ ಗೊತ್ತಾದ ಆಯಾ ನಿಮಿತ್ತವನ್ನು ಬಯಸಿಕೊಂಡೇ ಕರ್ತೃವಿಗೆ ಫಲವನ್ನುಂಟುಮಾಡುವದು. ಆದಕಾರಣ ತನ್ನನ್ನು ಪ್ರೇರಿಸುವ ಮತ್ತೊಂದನ್ನು ಬಯಸದೆ (ಅದು) ತನ್ನನ್ನು ತಾನೇ (ಫಲವನ್ನು ಕೊಡುವದಕ್ಕೆ) ಪ್ರೇರಿಸುವದು ಎನ್ನುವದು ಸರಿಯಲ್ಲ.

(ಶಂಕೆ):—ಕರ್ತೃವೇ ಫಲಕಾಲದಲ್ಲಿ ಪ್ರೇರಿಸುವವನು. "ನನ್ನಿಂದ ನೀನು ಆಗಿರುತ್ತೀಯೆ; ನಿನ್ನನ್ನು ನಿನ್ನ ಯೋಗ್ಯತೆಗೆ ಅನುಗುಣವಾದ ಫಲವನ್ನು ಕೊಡುವಂತೆ ಪ್ರೇರಿಸುತ್ತಿದ್ದೇನೆ" ಎಂದು (ಅವನು ಪ್ರೇರಿಸಬಹುದಲ್ಲ)!

(ಪರಿಹಾರ):—ಆಗದು. ಏಕೆಂದರೆ (ಅವನಿಗೆ) ದೇಶ, ಕಾಲ, ಆಯಾ ನಿಮಿತ್ತ–ಇವುಗಳು ತಿಳಿಯವು. ಕರ್ತೃವು ದೇಶ(ವೇ ಮುಂತಾದ) ಆಯಾ (ನಿಮಿತ್ತ)ವನ್ನು ಬಲ್ಲವನಾಗಿ ಸ್ವತಂತ್ರನಾಗಿ ಕರ್ಮವನ್ನು ಕಟ್ಟುಮಾಡುವಂತಿದ್ದರೆ ಆಗ ಅನಿಷ್ಟವಾದ ಫಲವನ್ನು (ಕೊಡುವಂತೆ) ಅವನು ಪ್ರೇರಿಸದೆ ಇರಬೇಕಾಗುವದು.

(ಭಾಷ್ಯ)

೧೩೮. ನ ಚ ನಿರ್ನಿಮಿತ್ತಂ ತದನಿಚ್ಛಯಾ ಆತ್ಮಸಮವೇತಂ ತಚ್ಚರ್ಮ ವದ್ ವಿಕರೋತಿ ಕರ್ಮ । ನ ಚಾತ್ಮಕೃತಮ್ ಅಕರ್ತೃಸಮವೇತಮ್ ಅಯಸ್ಕಾನ್ತ ಮಣಿವದಾಕರ್ಷಣೇ ಭವತಿ, ಪ್ರಧಾನಕರ್ತೃಸಮವೇತತ್ವಾತ್ ಕರ್ಮಣಃ । ಭೂತಾ ಶ್ರಯಮ್ ಇತಿ ಚೇತ್ । ನ । ಸಾಧನತ್ವಾತ್ । ಕರ್ತೃಕ್ರಿಯಾಯಾಃ ಸಾಧನ ಭೂತಾನಿ ಭೂತಾನಿ ಕ್ರಿಯಾಕಾಲೇ ಅನುಭೂತವ್ಯಾಪಾರಾಣಿ ಸಮಾಪ್ತೌ ಚ ಹಲಾದಿ ವತ್ ಕರ್ತ್ರಾ ಪರಿತ್ಯಕ್ತಾನಿ ನ ಫಲಂ ಕಾಲಾನ್ತರೇ ಕರ್ತುಮ್ ಉತ್ಸಹನ್ತೇ । ನ ಹಿ ಹಲಂ ಕ್ಷೇತ್ರಾದ್ ವ್ರೀಹೀ೯ ಗೃಹಂ ಪ್ರವೇಶಯತಿ । ಭೂತಕರ್ಮಣೋಶ್ಚಾ ಚೇತನತ್ವಾತ್ ಸ್ವತಃ ಪ್ರವೃತ್ತ್ಯನುಪಪತ್ತಿಃ । ವಾಯುವತ್ ಇತಿ ಚೇತ್ । ನ । ಅಸಿದ್ಧತ್ವಾತ್ । ನ ಹಿ ವಾಯೋರಚಿತಿಮತಃ ಸ್ವತಃ ಪ್ರವೃತ್ತಿಃ ಸಿದ್ಧಾ । ರಥಾದಿಷ್ವ ದರ್ಶನಾತ್ ॥

(ಭಾಷ್ಯಾರ್ಥ)

ಆತ್ಮನಲ್ಲಿ ನಿತ್ಯಸಂಬದ್ಧವಾಗಿರುವ ಕರ್ಮವು ಆತನ ಇಚ್ಛೆಯಿಲ್ಲದೆ, ಚರ್ಮ ದಂತೆ (ತಾನೇ) ವಿಕಾರವನ್ನು ಹೊಂದುವದೆಂದು ಹೇಳುವದೂ ಸರಿಯಲ್ಲ. ತಾನು ಮಾಡಿದ್ದನ್ನು ಕರ್ತೃವಿನ ಸಂಬಂಧವೇ ಇಲ್ಲದೆ (ತಾನೊಂದೇ) ಸೂಜಿಗಲ್ಲಿನಂತೆ ಎಳೆದುಕೊಳ್ಳುವದೆಂತಲೂ ಹೇಳುವದು ಸರಿಯಲ್ಲ, ಏಕೆಂದರೆ ಕರ್ಮವೆಂಬುದು ಮುಖ್ಯವಾಗಿರುವ ಕರ್ತೃ(ಕಾರಕಕ್ಕೆ) ನಿತ್ಯಸಂಬದ್ಧವಾಗಿರುತ್ತದೆ

(ಭಾಷ್ಯಾರ್ಥ)

(ಶಂಕೆ) :—ಭೂತಗಳನ್ನು ಆಶ್ರಯಿಸಿಕೊಂಡು (ಕರ್ಮವು ಫಲವನ್ನು) ಕೊಡಲಿ !

(ಪರಿಹಾರ) :—ಹಾಗಲ್ಲ. ಏಕೆಂದರೆ (ಅವು) ಸಾಧನವಾಗಿರುತ್ತವೆ. ಭೂತ ಗಳು ಕರ್ತೃವಿನ ಕ್ರಿಯೆಗೆ ಸಾಧನವಾಗಿದ್ದು, ಕ್ರಿಯಾಕಾಲದಲ್ಲಿ (ತಮ್ಮ) ವ್ಯಾಪಾರ ಗಳನ್ನು ಅನುಭವಿಸಿದಮೇಲೆ ನೇಗಿಲೇ ಮುಂತಾದವುಗಳಂತೆ ಅವನ್ನು ಕರ್ತೃವು ಬಿಟ್ಟುಬಿಟ್ಟ ಬಳಿಕ ಕಾಲಾಂತರದಲ್ಲಿ ಫಲವನ್ನುಂಟುಮಾಡುವದಕ್ಕೆ ಶಕ್ತವಾಗಲಾರವು. ನೇಗಿಲು ಗದ್ದೆಯಿಂದ ಬತ್ತವನ್ನು ಮನೆಗೆ ತಂದುಕೊಡುವದಿಲ್ಲವಷ್ಟೆ. ಇದಲ್ಲದೆ ಭೂತಗಳೂ ಕರ್ಮವೂ ಅಚೇತನವಾಗಿರುವದರಿಂದ ತಾವೇ (ವ್ಯಾಪಾರ) ಮಾಡ ಲಾರವು.

(ಶಂಕೆ) :—ಗಾಳಿಯಂತೆ (ತಾವೇ ವ್ಯಾಪಾರ) ಮಾಡಬಹುದಲ್ಲವೆ?

(ಪರಿಹಾರ) :—ಆಗದು. ಏಕೆಂದರೆ (ಗಾಳಿಯಲ್ಲೂ ಅದು) ಸಿದ್ಧವಾಗಿಲ್ಲ. ಜಡವಾಗಿರುವ ಗಾಳಿಯು ತಾನೇ ವ್ಯಾಪಾರಮಾಡುವದೆಂಬುದು ಸಿದ್ಧವಾಗಿಲ್ಲ; ಏಕೆಂ

ದರೆ (ಜಡವಾಗಿರುವ) ರಥವೇ ಮುಂತಾದವುಗಳಲ್ಲಿ (ತಾವೇ ವ್ಯಾಪಾರಮಾಡುವದು) ಕಂಡುಬಂದಿರುವದಿಲ್ಲ.

ಈಶ್ವರನೇ ಫಲದಾತನು ಕರ್ಮವಲ್ಲ

(ಭಾಷ್ಯ)

೧೩೯. ಶಾಸ್ತ್ರಾತ್ ಕರ್ಮಣ ಏವೇತಿ ಚೇತ್ । ಶಾಸ್ತ್ರಂ ಹಿ ಕ್ರಿಯಾತಃ ಫಲಸಿದ್ಧಿಮಾಹ ನೇಶ್ವರಾದೇಃ 'ಸ್ವರ್ಗಕಾಮೋ ಯಜೇತ" ಇತ್ಯಾದಿ । ನ ಚ ಪ್ರಮಾಣಾಧಿಗತತ್ವಾದಾನರ್ಥಕ್ಯಂ ಯುಕ್ತಮ್ । ನ ಚೇಶ್ವರಾಸ್ತಿತ್ವೇ ಪ್ರಮಾಣಾನ್ತರ ಮಸ್ತಿ ಇತಿ ಚೇತ್ । ನ । ದೃಷ್ಟನ್ಯಾಯಹಾನಾನುಪಪತ್ತೇಃ । ಕ್ರಿಯಾ ಹಿ ದ್ವಿವಿಧಾ ದೃಷ್ಟಫಲಾ, ಅದೃಷ್ಟಫಲಾ ಚ । ದೃಷ್ಟಫಲಾಪಿ ದ್ವಿವಿಧಾ ಅನನ್ತರಫಲಾ, ಕಾಲಾ ನ್ತರಫಲಾ ಚ । ಅನನ್ತರಫಲಾ ಗತಿಭುಜಿಲಕ್ಷಣಾ । ಕಾಲಾನ್ತರಫಲಾ ಕೃಷಿಸೇವಾದಿ ಲಕ್ಷಣಾ । ತತ್ರಾನನ್ತರಫಲಾ ಫಲಾಪವರ್ಗಿಣ್ಯೇವ । ಕಾಲಾನ್ತರಫಲಾ ತು ಉತ್ಪನ್ನ ಪ್ರಧ್ವಂಸಿನೀ । ಆತ್ಮ (?) ಸೇವ್ಯಾದ್ಯಧೀನಂ ಹಿ ಕೃಷಿಸೇವಾದೇಃ ಫಲಂ ಯತಃ । ನ ಚೋಭಯನ್ಯಾಯವ್ಯತಿರೇಕೇಣ ಸ್ವತನ್ತ್ರಂ ಕರ್ಮ, ತತೋ ವಾ ಫಲಂ ದೃಷ್ಟಮ್, ತಥಾ ಚ ಕರ್ಮಫಲಪ್ರಾಪ್ತೌ ನ ದೃಷ್ಟನ್ಯಾಯಹಾನಮ್ ಉಪಪದ್ಯತೇ । ತಸ್ಮಾತ್ ಶಾನ್ತೇ ಯಾಗಾದಿಕರ್ಮಣಿ ನಿತ್ಯಃ ಕರ್ತೃಕರ್ಮಫಲವಿಭಾಗಜ್ಞ ಈಶ್ವರಃ ಸೇವ್ಯಾದಿ ವದ್ ಯಾಗಾದ್ಯನುರೂಪಫಲದಾತಾ ಉಪಪದ್ಯತೇ । ಸ ಚಾತ್ಮಭೂತಃ ಸರ್ವಸ್ಯ ಸರ್ವಕ್ರಿಯಾಫಲಪ್ರತ್ಯಯಸಾಕ್ಷೀ ನಿತ್ಯವಿಜ್ಞಾನಸ್ವಭಾವಃ ಸಂಸಾರಧರ್ಮೈರಸಂ ಸ್ಪೃಷ್ಟಃ ॥

(ಭಾಷ್ಯಾರ್ಥ)

(ಶಂಕೆ) .—ಶಾಸ್ತ್ರದ (ಆಧಾರ)ದಿಂದ ಕರ್ಮದಿಂದಲೇ[1] (ಫಲ)ವೆಂದಾಗುತ್ತದೆ ಯಲ್ಲ! " ಸ್ವರ್ಗಕಾಮನಾದವನು ಯಾಗಮಾಡಬೇಕು " ಎಂಬುದೇ ಮುಂತಾದ ಶಾಸ್ತ್ರವು ಕರ್ಮದಿಂದ ಫಲಸಿದ್ಧಿಯಾಗುವದೆಂದು ಹೇಳುತ್ತದೆಯೇ ಹೊರತು, ಈಶ್ವ ರನೇ ಮುಂತಾದದ್ದರಿಂದ (ಆಗುವದೆಂದು) ಹೇಳುವದಿಲ್ಲ. ಪ್ರಮಾಣದಿಂದ ತಿಳಿಯ ಬಂದಿರುವದರಿಂದ (ಕರ್ಮವು) ನಿರರ್ಥಕವೆಂಬುದು ಸರಿಯಾಗುವದೂ ಇಲ್ಲ. ಈಶ್ವರ ನಿದಾನೆಂಬುದಕ್ಕೆ ಬೇರೆಯ ಪ್ರಮಾಣವೂ ಇಲ್ಲವಲ್ಲ!

(ಪರಿಹಾರ) .—ಹಾಗಲ್ಲ. ಏಕೆಂದರೆ ಅನುಭವದಲ್ಲಿ ಕಂಡಿರುವ ನ್ಯಾಯ ವನ್ನು ಕೈಬಿಡುವದು ಸರಿಯಲ್ಲ ಕ್ರಿಯೆಯೆಂಬುದು (ಇಲ್ಲಿಯೇ) ಕಾಣುವ ಫಲ ವುಳ್ಳದ್ದೆಂದೂ (ಇಲ್ಲಿ) ಕಾಣದಿರುವ ಫಲವುಳ್ಳದ್ದೆಂದೂ ಎರಡು ಬಗೆಯಾಗಿರುತ್ತದೆ.

---

1. ಇದು ಪೂರ್ವಮೀಮಾಂಸಕರ ಪಕ್ಷ, ಸೂ. ಭಾ. ೩-೩-೪೦.

(ಇಲ್ಲಿ)ಯೇ ಕಾಣುವ ಫಲವುಳ್ಳ ಕ್ರಿಯೆಯೂ ಎರಡು ಬಗೆಯಾಗಿದೆ. (ಒಂದು) ಕೂಡಲೆ ಫಲವಾಗತಕ್ಕದ್ದು, (ಇನ್ನೊಂದು) ಕಾಲಾಂತರದಲ್ಲಿ ಫಲವಾಗತಕ್ಕದ್ದು. ನಡೆಯುವದು, ಊಟಮಾಡುವದು–ಇಂಥ ಕ್ರಿಯೆಗೆ ಕೂಡಲೆ ಫಲವಾಗುತ್ತದೆ. ಬೇಸಾಯ, ಸೇವೆ–ಮುಂತಾದ ರೂಪದ ಕ್ರಿಯೆಗೆ ಕಾಲಾಂತರದಲ್ಲಿ ಫಲವಾಗುತ್ತದೆ. ಇವೆರಡರಲ್ಲಿ ಕೂಡಲೆ ಫಲವನ್ನು ಕೊಡುವ (ಕ್ರಿಯೆಯು) ಫಲವನ್ನು (ಕೊಟ್ಟಬಳಿಕ) ನಾಶವಾಗುತ್ತದೆ; ಕಾಲಾಂತರದಲ್ಲಿ ಫಲವನ್ನು ಕೊಡುವ (ಕ್ರಿಯೆ)ಯಾದರೋ ಹುಟ್ಟಿದಕೂಡಲೆ ನಾಶವಾಗುತ್ತದೆ. ಏಕೆಂದರೆ ಬೇಸಾಯ, ಸೇವೆ–ಮುಂತಾದವುಗಳ ಫಲವು ತನ್ನಿಂದ[1] ಸೇವಿಸಲ್ಪಡುವವನೇ ಮುಂತಾದವರ ಅಧೀನವಾಗಿರುತ್ತದೆ. ಈ ಎರಡು ಬಗೆಯನ್ನು ಬಿಟ್ಟರೆ (ಬೇರೊಂದು) ಸ್ವತಂತ್ರವಾದ ಕರ್ಮವಾಗಲಿ ಅದರಿಂದ ಫಲವಾಗುವದಾಗಲಿ ಕಂಡುಬಂದಿರುವದಿಲ್ಲ. ಹೀಗಿರುವದರಿಂದ ಕರ್ಮದ ಫಲವನ್ನು ಪಡೆಯುವ ವಿಷಯಕ್ಕೆ ಕಂಡಿರುವ ನ್ಯಾಯವನ್ನು ಬಿಡುವದು ಯುಕ್ತವಾಗುವದಿಲ್ಲ. ಆದಕಾರಣ ಯಾಗವೇ ಮುಂತಾದ ಕರ್ಮವು ಮುಗಿದಮೇಲೆ ನಿತ್ಯನೂ ಕರ್ತ, ಕರ್ಮ, ಫಲ–ಇವುಗಳ ವಿಂಗಡವನ್ನು ಬಲ್ಲವನೂ ಆದ ಈಶ್ವರನು ಸೇವಿಸಲ್ಪಡುವ ಪುರುಷನೇ ಮುಂತಾದವರಂತೆ ಯಾಗಾದಿಗಳಿಗೆ ಅನುಗುಣವಾದ ಫಲವನ್ನು ಕೊಡುವನು ಎಂಬುದೇ ಯುಕ್ತವಾಗಿದೆ ಆ ಈಶ್ವರನು ಎಲ್ಲರಿಗೂ ಆತ್ಮನಾಗಿರುವನು, ಎಲ್ಲಾ ಕರ್ಮಗಳಿಗೂ ಅವುಗಳ ಫಲಗಳಿಗೂ ಮತ್ತು (ಎಲ್ಲಾ) ಪ್ರತ್ಯಯಗಳಿಗೂ ಸಾಕ್ಷಿಯು, ನಿತ್ಯವಿಜ್ಞಾನಸ್ವರೂಪನು, ಯಾವ ಸಂಸಾರಧರ್ಮಗಳೂ ಸೋಂಕದವನು.

(ಭಾಷ್ಯ)

೧೪೦. ಶ್ರುತೇಶ್ಚ ! "ನ ಲಿಪ್ಯತೇ ಲೋಕದುಃಖೇನ ಬಾಹ್ಯಃ" (ಕ. ೨-೨-೧೧) "ಜರಾಂ ಮೃತ್ಯುಮತ್ಯೇತಿ" (ಬೃ. ೩-೫-೧), "ವಿಜರೋ ವಿಮೃತ್ಯುಃ" (ಛಾ. ೮-೭-೧), "ಸತ್ಯಕಾಮಃ ಸತ್ಯಸಙ್ಕಲ್ಪಃ" (ಛಾ. ೮-೭-೧), "ಏಷ ಸರ್ವೇಶ್ವರಃ" (ಬೃ. ೪-೪-೨೨), "ಪುಣ್ಯಂ ಕರ್ಮ ಕಾರಯತಿ" (? ಕೌ. ೩-೯), "ಅನಶ್ನನ್ನನ್ಯೋ ಅಭಿಚಾಕಶೀತಿ" (ಮು. ೩-೧-೧), "ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ" (ಬೃ. ೩-೮-೯) ಇತ್ಯಾದ್ಯಾ ಅಸಂಸಾರಿಣ ಏಕಸ್ಯಾತ್ಮನೋ ನಿತ್ಯಮುಕ್ತಸ್ಯ ಸಿದ್ಧಾಶ್ರುತಯಃ । ಸ್ಮೃತಯಶ್ಚ ಸಹಸ್ರಶೋ ವಿದ್ಯನ್ತೇ । ನಚಾರ್ಥವಾದಾಃ ಶಕ್ಯನ್ತೇ ಕಲ್ಪಯಿತುಮ್ । ಅನನ್ಯಯೋಗಿತ್ವೇ ಸತಿ ವಿಜ್ಞಾನೋತ್ಪಾದಕತ್ವಾತ್ । ನ ಚೋತ್ಪನ್ನಂ ವಿಜ್ಞಾನಂ ಬಾಧ್ಯತೇ ॥

1. ತಾನು ಮತ್ತು ತನ್ನಿಂದ ಸೇವಿಸಲ್ಪಡುವವನು ಎಂದೂ ಅರ್ಥಮಾಡಬಹುದು. ಮುಂದೆ ೧೪೧ನೆಯ ಭಾಷ್ಯಭಾಗವನ್ನು ನೋಡಿರಿ.

(ಭಾಷ್ಯಾರ್ಥ)

ಶ್ರುತಿಯಿಂದಲೂ (ಈ ವಿಷಯವು ಸಿದ್ಧವಾಗುತ್ತದೆ). "(ಕಲ್ಪಿತವಾದದ್ದಕ್ಕೆಲ್ಲ) ಹೊರಚ್ಚಾಗಿರುವ (ಈಶ್ವರನು) ಲೋಕದುಃಖದಿಂದ ಲಿಪ್ತನಾಗುವದಿಲ್ಲ" (ಕ. ೨-೨-೧೧), "ಮುಪ್ಪನ್ನೂ ಸಾವನ್ನೂ ಮೀರಿರುತ್ತಾನೆ" (ಬೃ. ೩-೫-೧), "ಮುಪ್ಪಿಲ್ಲದವನು, ಸಾವಿಲ್ಲದವನು" (ಛಾ. ೮-೭-೧), "ಸತ್ಯಕಾಮನು, ಸತ್ಯಸಂಕಲ್ಪನು" (ಛಾ. ೮-೭-೧), "ಈತನು ಸರ್ವೇಶ್ವರನು" (ಬೃ. ೪-೪-೨೨), "ಪುಣ್ಯಕರ್ಮವನ್ನು ಮಾಡಿಸುತ್ತಾನೆ" (? ಕೌ. ೩-೯) "ಮತ್ತೊಂದು (ಪಕ್ಷಿಯು) ತಿನ್ನದೆ ನೋಡುತ್ತಿರುತ್ತದೆ" (ಮು. ೩-೧-೧), "ಈ ಅಕ್ಷರನಾದ (ಪರಮೇಶ್ವರನ) ಅಪ್ಪಣೆಯಿಂದಲೇ (ಸೂರ್ಯಚಂದ್ರರು ನಿಂತಿರುವರು)" (ಬೃ. ೩-೮-೯)–ಇವೇ ಮುಂತಾದ ಶ್ರುತಿಗಳು ಅಸಂಸಾರಿಯೂ ಅದ್ವಿತೀಯನೂ ನಿತ್ಯಮುಕ್ತನೂ ಆದ ಆತ್ಮನ ಸಿದ್ಧಿಗೆ (ಪ್ರಮಾಣವಾಗಿರುತ್ತವೆ) ಸ್ಮೃತಿಗಳೂ ಸಾವಿರಾರು ಇರುತ್ತವೆ. (ಇವುಗಳು) ಅರ್ಥವಾದವೆಂದು ಕಲ್ಪಿಸುವದಕ್ಕೂ ಆಗುವಂತಿಲ್ಲ; ಏಕೆಂದರೆ (ಇವು) ಮತ್ತೊಂದು (ವಿಧಿಗೆ) ಶೇಷವಾಗಿರುವದಿಲ್ಲ, (ಸ್ವತಂತ್ರವಾಗಿ) ಜ್ಞಾನವನ್ನುಂಟು ಮಾಡುತ್ತಿವೆ, ಉಂಟಾದ ಜ್ಞಾನವು ಬಾಧಿತವೂ ಆಗುವದಿಲ್ಲ.

(ಭಾಷ್ಯ)

೧೪೧. ಅಪ್ರತಿಷೇಧಾಚ್ಚ । ನ ಚ "ಈಶ್ವರೋ ನಾಸ್ತಿ" ಇತಿ ನಿಷೇಧೋಽಸ್ತಿ । ಪ್ರಾಪ್ತ್ಯಭಾವಾದಿತಿ ಚೇತ್ । ನ । ಉಕ್ತತ್ವಾತ್ । "ನ ಹಿಂಸ್ಯಾತ್" (?) ಇತಿವತ್ ಪ್ರಾಪ್ತ್ಯಭಾವಾತ್ ಪ್ರತಿಷೇಧೋ ನಾರಭ್ಯತೇ ಇತಿ ಚೇತ್ । ನ । ಈಶ್ವರ ಸದ್ಭಾವೇ ನ್ಯಾಯಸ್ಯೋಕ್ತತ್ವಾತ್ । ಅಥವಾ "ಅಪ್ರತಿಷೇಧಾತ್" ಇತಿ ಕರ್ಮಣಃ ಫಲದಾನೇ ಈಶ್ವರಕಾಲಾದೀನಾಂ ನ ಪ್ರತಿಷೇಧೋ ಽಸ್ತಿ । ನ ಚ ನಿಮಿತ್ತಾನ್ತರನಿರಪೇಕ್ಷಂ ಕೇವಲೇನ ಕರ್ತ್ರೈವ ಪ್ರಯುಕ್ತಂ ಫಲದಂ ದೃಷ್ಟಮ್ । ನ ಚ ವಿನಷ್ಟೋಽಪಿ ಯಾಗಃ ಕಾಲಾನ್ತರೇ ಫಲದೋ ಭವತಿ । ಸೇವ್ಯಬುದ್ಧಿವತ್ ಸೇವಕೇನ ಸರ್ವಜ್ಞೇಶ್ವರಬುದ್ಧಾ ತು ಸಂಸ್ಕೃತಾಯಾಂಯಾಗಾದಿಕರ್ಮಣಾ, ವಿನಷ್ಟೇಽಪಿಕರ್ಮಣಿ ಸೇವ್ಯಾದಿನೇಶ್ವರಾತ್ ಫಲಂ ಕರ್ತುರ್ಭವತೀತಿ ಯುಕ್ತಮ್ । ನ ತು ಪುನಃ ಪದಾರ್ಥಾ ವಾಕ್ಯಶತೇನಾಪಿ ದೇಶಾನ್ತರೇ ಕಾಲಾನ್ತರೇ ವಾ ಸ್ವಂ ಸ್ವಂ ಸ್ವಭಾವಂ ಜಹತಿ । ನ ಹಿ ದೇಶಕಾಲಾನ್ತರೇಷು ಚಾಗ್ನಿರನುಷ್ಣೋ ಭವತಿ । ಏವಂ ಕರ್ಮಣೋಽಪಿ ಕಾಲಾನ್ತರೇ ಫಲಂ ದ್ವಿಪ್ರಕಾರಮೇವೋಪಲಭ್ಯತೇ । ಬೀಜಕ್ಷೇತ್ರಸಂಸ್ಕಾರಪರಿರಕ್ಷಾವಿಜ್ಞಾನವತ್ಕರ್ತೃಪೇಕ್ಷಫಲಂ ಕೃಷ್ಯಾದಿ, ವಿಜ್ಞಾನವತ್ಸೇವ್ಯಬುದ್ಧಿಸಂಸ್ಕಾರಾಪೇಕ್ಷಫಲಂ ಚ ಸೇವಾದಿ। ಯಾಗಾದೇಃ ಕರ್ಮಣಸ್ತಥಾವಿಜ್ಞಾನವತ್ಕರ್ತೃಪೇಕ್ಷಫಲತ್ವಾನುಪಪತ್ತೌ ಕಾಲಾನ್ತರಫಲತ್ವಾತ್ ಕರ್ಮದೇಶಕಾಲನಿಮಿತ್ತವಿಪಾಕವಿಭಾಗಜ್ಞಬುದ್ಧಿಸಂಸ್ಕಾರಾ

ಪೇಕ್ಷಂ ಫಲಂ ಭವಿತುಮರ್ಹತಿ । ಸೇವಾದಿಕರ್ಮಾನುರೂಪಫಲಜ್ಞಸೇವ್ಯಬುದ್ಧಿ ಸಂಸ್ಕಾರಾಪೇಕ್ಷಫಲಸ್ಯೇವ । ತಸ್ಮಾತ್ ಸಿದ್ಧಃ ಸರ್ವಜ್ಞಃ ಈಶ್ವರಃ ಸರ್ವಜನ್ತುಬುದ್ಧಿ ಕರ್ಮಫಲವಿಭಾಗಸಾಕ್ಷೀ । " ಸರ್ವಭೂತಾನ್ತರಾತ್ಮಾ " (ಶ್ವೇ. ೬-೧೧), " ಯತ್ಸಾಕ್ಷಾದಪರೋಕ್ಷಾದ್ ಬ್ರಹ್ಮ ಯ ಆತ್ಮಾ ಸರ್ವಾನ್ತರಃ " (ಬೃ. ೩-೪-೧) ಇತಿ ಶ್ರುತೇಃ । ಸ ಏವ ಚಾತ್ರಾತ್ಮಾ ಜನ್ತೂನಾಮ್ । " ನಾನ್ಯೋಽತೋಽಸ್ತಿ ದ್ರಷ್ಟಾ ..ಶ್ರೋತಾ ಮನ್ತಾ ವಿಜ್ಞಾತಾ " (ಬೃ. ೩-೭-೨೩), " ನಾನ್ಯದತೋಽಸ್ತಿ ವಿಜ್ಞಾತೃ " (ಬೃ. ೩-೪-೧೧) ಇತ್ಯಾದ್ಯಾತ್ಮಾನ್ತರಪ್ರತಿಷೇಧಶ್ರುತೇಃ । " ತತ್ತ್ವಮಸಿ " (ಛಾ. ೬-೮) ಇತಿ ಚಾತ್ಮತ್ವೋಪದೇಶಾತ್ ! ನ ಹಿ ಮೃತ್ಪಿಣ್ಡಃ ಕಾಞ್ಚನಾತ್ಮತ್ವೇನೋಪದಿಶ್ಯತೇ ॥

(ಭಾಷ್ಯಾರ್ಥ)

ಪ್ರತಿಷೇಧಮಾಡದೆ ಇರುವದರಿಂದಲೂ (ಹೀಗೆಂದು ತಿಳಿಯಬೇಕು). ಈಶ್ವರನು ಇಲ್ಲವೆಂದು (ಶಾಸ್ತ್ರದಲ್ಲಿ) ಅಲ್ಲಗಳೆದಿರುವದೂ ಇಲ್ಲ. ಪ್ರಾಪ್ತಿಯಿಲ್ಲದ್ದರಿಂದ (ಅಲ್ಲಗಳೆದಿಲ್ಲ) ಎಂದರೆ ಅದು ಸರಿಯಲ್ಲ, ಏಕೆಂದರೆ (ಅದಕ್ಕೆ ಆಗಲೇಉತ್ತರವನ್ನು) ಹೇಳಿದ್ದಾಗಿದೆ.

(ಶಂಕೆಯ ವಿವರ):—(ಯಾವ ಪ್ರಾಣಿಗಳನ್ನೂ) "ಹಿಂಸೆಮಾಡಬಾರದು" (?) ಎಂಬಂತೆ (ಈಶ್ವರನಿದಾನೆಂದು ಹೇಳಿದ) ಪ್ರಾಪ್ತಿಯಿಲ್ಲದ್ದರಿಂದ (ಶಾಸ್ತ್ರದಲ್ಲಿ) ಈಶ್ವರನಿಲ್ಲವೆಂದು ನಿಷೇಧವನ್ನು ಹೇಳಿಲ್ಲ

(ಪರಿಹಾರದ ವಿವರ):—ಹಾಗಲ್ಲ. ಈಶ್ವರನಿದಾನೆಂಬುದಕ್ಕೆ ನ್ಯಾಯವನ್ನು ಆಗಲೆ ಹೇಳಿದ್ದಾಗಿದೆ[1], (ಆದ್ದರಿಂದ ಈಶ್ವರಸಿದ್ಧಿಯಾಗಿರುತ್ತದೆ)

ಅಥವಾ " ಪ್ರತಿಷೇಧಮಾಡದೆ ಇರುವದರಿಂದಲೂ " ಎಂಬ (ಸಂಗ್ರಹವಾಕ್ಯಕ್ಕೆ ಇನ್ನೊಂದು ವಿವರಣೆಯನ್ನೂ ಕೊಡಬಹುದು) . ಕರ್ಮವು ಫಲವನ್ನು ಕೊಡಬೇಕಾದರೆ ಈಶ್ವರ, ಕಾಲ–ಮುಂತಾದವು (ಕಾರಣವಲ್ಲ)ವೆಂದು ನಿಷೇಧಿಸಿರುವದಿಲ್ಲ, (ಆದ್ದರಿಂದಲೂ ಈಶ್ವರನು ಸಿದ್ಧಿಸುತ್ತಾನೆ). ಮತ್ತೆ ಯಾವದೊಂದು ನಿಮಿತ್ತವನ್ನೂ ಬಯಸದೆ ಬರಿಯ ಕರ್ತೃವಿನಿಂದಲೇ ಪ್ರೇರಿತವಾಗಿ (ಕರ್ಮವು) ಫಲವನ್ನು ಕೊಟ್ಟದ್ದನ್ನು (ನಾವು) ಕಂಡಿರುವದಿಲ್ಲ ಯಾಗವು (ತಾನು) ನಾಶವಾದಬಳಿಕವೂ ಕಾಲಾಂತರದಲ್ಲಿ ಫಲವನ್ನು ಕೊಡುತ್ತದೆ (ಎಂದು ಹೇಳುವದಕ್ಕೆ) ಬರುವದಿಲ್ಲ. (ಇದಕ್ಕೆ ಬದಲು) ಸೇವ್ಯನಾದ(ಪುರುಷನ) ಬುದ್ಧಿಯನ್ನು ಸೇವಕನು (ಸಂಸ್ಕಾರಮಾಡುವಂತೆ) ಯಾಗವೇ

---

1. ಈಶ್ವರನಿದಾನೆಂದು ಮೊದಲು ಯಾವ ಪ್ರಮಾಣದಿಂದಲಾದರೂ ಸಿದ್ಧವಾಗಿದ್ದರೆ ಅವನ್ನು ಇಲ್ಲವೆಂದು ಶಾಸ್ತ್ರವು ಅಲ್ಲಗಳೆಯಬಹುದಾಗಿತ್ತು ಎಂಬ ಪೂರ್ವಪಕ್ಷಕ್ಕೆ ಇದು ಉತ್ತರ. ಈಶ್ವರನನ್ನು ಅರ್ಥಾಪತ್ತಿಪ್ರಮಾಣದಿಂದ ಇಲ್ಲಿ ಸಾಧಿಸಿದಂತೆ ಆಗುತ್ತದೆ.

ಮುಂತಾದ ಕರ್ಮದಿಂದ ಸರ್ವಜ್ಞನಾದ ಈಶ್ವರನ ಬುದ್ಧಿಯು ಸಂಸ್ಕಾರವನ್ನು ಹೊಂದುತ್ತದೆ (ಎಂಬ ನಮ್ಮ ಪಕ್ಷದಲ್ಲಿ)ಯೋ ಎಂದರೆ, ಕರ್ಮವು ನಷ್ಟವಾದರೂ ಸೇವ್ಯ (ಪುರುಷನಿಂದ ಫಲವುಂಟಾಗು)ವಂತೆ ಈಶ್ವರನಿಂದ (ಕರ್ಮವನ್ನು) ಮಾಡಿದವನಿಗೆ ಫಲವಾಗುವದು ಎಂಬುದು ಯುಕ್ತವಾಗುತ್ತದೆ. ಹಾಗಲ್ಲದೆ ನೂರು ವಾಕ್ಯಗಳ ಪ್ರಮಾಣಬಲವಿದ್ದರೂ ಪದಾರ್ಥಗಳು ದೇಶಾಂತರದಲ್ಲಿ ಅಥವಾ ಕಾಲಾಂತರದಲ್ಲಿ ತಮ್ಮ ತಮ್ಮ ಸ್ವಭಾವವನ್ನು ಬಿಡಲಾರವು ದೇಶಾಂತರಗಳಲ್ಲಿ ಅಥವಾ ಕಾಲಾಂತರಗಳಲ್ಲಿ ಬೆಂಕಿಯು ಬಿಸಿಯಲ್ಲದೆ ಹೋಗುವದಿಲ್ಲವಷ್ಟೆ. ಇದರಂತೆ ಕರ್ಮಕ್ಕೂ ಫಲವು ಕಾಲಾಂತರದಲ್ಲಿ(ಯೂ) ಎರಡು ಬಗೆಯೇ ಆಗಿ ಕಾಣಬರುವದು. ಬೀಜವನ್ನೂ ಹೊಲವನ್ನೂ ಸಂಸ್ಕಾರಮಾಡುವದು ಮತ್ತು ಕಾಪಾಡಿಕೊಳ್ಳುವದು— ಎಂಬ ತಿಳಿವಳಿಕೆಯುಳ್ಳ ಕರ್ತೃವನ್ನಪೇಕ್ಷಿಸಿ ಫಲವನ್ನು ಕೊಡುವ ಕೃಷ್ಯಾದಿ (ಕರ್ಮವೊಂದು ಬಗೆ), (ಮಾಡಿದ್ದನ್ನು) ತಿಳಿದಿರುವ ಸೇವ್ಯ (ಪುರುಷನ) ಬುದ್ಧಿಸಂಸ್ಕಾರವನ್ನಪೇಕ್ಷಿಸಿ ಫಲವನ್ನು ಕೊಡುವ ಸೇವೆಯೇ ಮುಂತಾದ (ಕರ್ಮವೊಂದು ಬಗೆ). ಯಾಗವೇ ಮುಂತಾದ ಕರ್ಮಕ್ಕೆ ಹಿಂದೆ ಹೇಳಿದ ತಿಳಿವಳಿಕೆಯುಳ್ಳ ಕರ್ತೃವನ್ನಪೇಕ್ಷಿಸಿ ಫಲವನ್ನು ಕೊಡುವದೆಂಬುದು ಯುಕ್ತವಲ್ಲವಾಗಿ ಕಾಲಾಂತರದಲ್ಲಿ ಫಲವು ಆಗಬೇಕಾಗಿರುವದರಿಂದ ಕರ್ಮ, ದೇಶ, ಕಾಲ, ನಿಮಿತ್ತ, ವಿಪಾಕ–ಇವುಗಳ ವಿವೇಕವನ್ನು ಬಲ್ಲಾತನ ಬುದ್ಧಿಯ ಸಂಸ್ಕಾರವನ್ನಪೇಕ್ಷಿಸಿಯೇ (ಅದಕ್ಕೆ) ಫಲವಾಗಬೇಕಾಗಿರುವದು ಸೇವೆಯೇ ಮುಂತಾದ ಕರ್ಮಕ್ಕೆ ಅನುಗುಣವಾದ ಫಲ(ವಿಂಥದ್ದೆಂಬುದನ್ನು) ಬಲ್ಲ ಸೇವ್ಯ (ಪುರುಷನ) ಬುದ್ಧಿಸಂಸ್ಕಾರವನ್ನಪೇಕ್ಷಿಸಿ ಫಲವನ್ನು ಕೊಡುವ (ಕರ್ಮ)ದಂತೆಯೇ (ಇದಕ್ಕೂ ಆಗಬೇಕಾಗಿದೆ). ಆದಕಾರಣ ಸರ್ವಜ್ಞನೂ ಸರ್ವ ಪ್ರಾಣಿಗಳ ಬುದ್ಧಿಗೂ ಕರ್ಮಫಲಗಳ ವಿಭಾಗಕ್ಕೂ ಸಾಕ್ಷಿಯಾಗಿರುವ ಈಶ್ವರನು (ಈರೀತಿಯಲ್ಲಿ) ಸಿದ್ಧನಾಗುತ್ತಾನೆ "ಎಲ್ಲಾ ಪ್ರಾಣಿಗಳಿಗೂ ಅಂತರಾತ್ಮನು" (ಶ್ವೇ ೬-೧೧), "ಯಾವದು ನೇರಾಗಿ ಅಪರೋಕ್ಷವಾಗಿರುವ ಬ್ರಹ್ಮವೋ, ಯಾವನು ಎಲ್ಲದಕ್ಕೂ ಒಳಗಿರುವ ಆತ್ಮನೋ" (ಬೃ ೩-೪-೧) ಎಂಬ ಶ್ರುತಿಯು ಇವಕ್ಕೆ ಪ್ರಮಾಣವು. ಆ (ಈಶ್ವರನೇ) ಇಲ್ಲಿ ಪ್ರಾಣಿಗಳಿಗೆಲ್ಲ ಆತ್ಮನಾಗಿರುತ್ತಾನೆ. "ಆತನಿಗಿಂತ ಬೇರೆ ನೋಡುವಾತನಿಲ್ಲ, ಕೇಳುವಾತನಿಲ್ಲ, ಆಲೋಚಿಸುವಾತನಿಲ್ಲ, ಅರಿಯುವಾತನಿಲ್ಲ" (ಬೃ. ೩-೭-೨೩), "ಇದಕ್ಕಿಂತ ಬೇರೆ ಅರಿಯುವದು ಇಲ್ಲ" (ಬೃ. ೩-೮-೧೧)–ಎಂಬುದೇ ಮುಂತಾದ ಬೇರೊಬ್ಬ ಆತ್ಮನನ್ನು ಅಲ್ಲಗಳೆಯುವ ಶ್ರುತಿ ಇದಕ್ಕೆ ಪ್ರಮಾಣವು ಇದಲ್ಲದೆ "ಅದೇ ನೀನಾಗಿರುವೆ" (ಛಾ. ೬-೮) ಎಂದು (ಈಶ್ವರನನ್ನು) ಆತ್ಮನೆಂದು ಉಪದೇಶಿಸಿರುವದರಿಂದಲೂ (ಹೀಗೆಂದು ತಿಳಿಯಬೇಕು.)

ಮಣ್ಣಿನ ಮುದ್ದೆಯನ್ನು ಚಿನ್ನದ ಆತ್ಮನೆಂದು (ಯಾರೂ) ಉಪದೇಶಿಸುವದಿಲ್ಲವಷ್ಟೆ. (ಅದರಂತೆಯೇ ಇಲ್ಲಿಯೂ ತಿಳಿಯಬೇಕು).

ಈಶ್ವರನಿಗೂ ಜೀವರಿಗೂ ಭೇದವಿಲ್ಲ

(ಭಾಷ್ಯ)

೧೪೨. ಜ್ಞಾನಶಕ್ತಿಕರ್ಮೋಪಾಸ್ಯೋಪಾಸಕಶುದ್ಧಾಶುದ್ಧಮುಕ್ತಾಮುಕ್ತ ಭೇದಾದಾತ್ಮಭೇದ ಏವೇತಿ ಚೇತ್ । ನ । ಭೇದದೃಷ್ಟ್ಯಪವಾದಾತ್ । ಯದುಕ್ತಂ ಸಂಸಾರಿಣ ಈಶ್ವರಾದನನ್ಯಾಃ ಇತಿ । ತನ್ನ, ಕಿಂ ತರ್ಹಿ ಭೇದ ಏವ ಸಂಸಾರ್ಯಾತ್ಮನಾಮ್ । ಕಸ್ಮಾತ್ ? ಲಕ್ಷಣಭೇದಾತ್, ಅಶ್ವಮಹಿಷವತ್ । ಕಥಂ ಲಕ್ಷಣಭೇದ ಇತಿ? ಉಚ್ಯತೇ । ಈಶ್ವರಸ್ಯ ತಾವನ್ನಿತ್ಯಂ ಸರ್ವವಿಷಯಂ ಜ್ಞಾನಮ್, ಸವಿತೃಪ್ರಕಾಶವತ್ । ತದ್ವಿಪರೀತಂ ಸಂಸಾರಿಣಾಮ್, ಖದ್ಯೋತಸ್ಯೇವ । ತಥೈವ ಶಕ್ತಿಭೇದೋಽಪಿ । ನಿತ್ಯಾ ಸರ್ವವಿಷಯಾಚೇಶ್ವರಶಕ್ತಿಃ, ವಿಪರೀತಾ ಇತರಸ್ಯ । ಕರ್ಮ ಚ ಚಿತ್ಸ್ವರೂಪಾತ್ಮಸತ್ತಾಮಾತ್ರನಿಮಿತ್ತಮ್ ಈಶ್ವರಸ್ಯ । ಔಷ್ಣ್ಯಸ್ವರೂಪದ್ರವ್ಯಸತ್ತಾಮಾತ್ರನಿಮಿತ್ತದಹನಕರ್ಮವತ್ । ರಾಜಾಯಸ್ಕಾನ್ತಪ್ರಕಾಶಕರ್ಮವಚ್ಚ ಸ್ವಾತ್ಮಾವಿಕ್ರಿಯಾರೂಪಮ್ । ವಿಪರೀತಮ್ ಇತರಸ್ಯ । "ಉಪಾಸೀತ" ಇತಿ ವಚನಾದುಪಾಸ್ಯ ಈಶ್ವರೋ ಗುರುರಾಜವತ್ । ಉಪಾಸಕಶ್ಚೇತರಃ ಶಿಷ್ಯಭೃತ್ಯವತ್ । ಅಪಹತಪಾಪ್ಮಾದಿಶ್ರವಣಾನ್ನಿತ್ಯಶುದ್ಧ ಈಶ್ವರಃ । "ಪುಣ್ಯೋ ವೈ ಪುಣ್ಯೇನ" (ಬೃ. ೩-೨-೧೩) ಇತಿ ವಚನಾದ್ವಿಪರೀತ ಇತರಃ । ಅತ ಏವ ನಿತ್ಯಮುಕ್ತ ಈಶ್ವರಃ । ನಿತ್ಯಾಶುದ್ಧಿಯೋಗಾತ್ ಸಂಸಾರೀತರಃ । ಯತ್ರ ಚ ಜ್ಞಾನಾದಿ(?) ಲಕ್ಷಣಭೇದೋಽಸ್ತಿ ತತ್ರ ಭೇದೋ ದೃಷ್ಟಃ । ಯಥಾ ಅಶ್ವಮಹಿಷಯೋಃ । ತಥಾ ಜ್ಞಾನಾದಿಲಕ್ಷಣ ಭೇದಾತ್ ಈಶ್ವರಾದಾತ್ಮನಾಂ ಭೇದೋಽಸ್ತೀತಿ ಚೇತ್ ॥

(ಭಾಷ್ಯಾರ್ಥ)

ಜ್ಞಾನ, ಶಕ್ತಿ, ಕರ್ಮ, ಉಪಾಸ್ಯ-ಉಪಾಸಕ, ಶುದ್ಧ-ಅಶುದ್ಧ, ಮುಕ್ತ-ಅಮುಕ್ತ (ಮುಂತಾದ) ಭೇದವಿರುವದರಿಂದ ಆತ್ಮರುಗಳಿಗೆ ಭೇದವೇ ಎಂದರೆ ಹಾಗಲ್ಲ. ಏಕೆಂದರೆ ಭೇದದೃಷ್ಟಿಯನ್ನು ನಿಂದೆಮಾಡಿರುತ್ತದೆ.

(ಪೂರ್ವಪಕ್ಷದ ವಿವರ).—ಸಂಸಾರಿಗಳು ಈಶ್ವರನಿಗಿಂತ ಬೇರೆಯಲ್ಲವೆಂದು ಹೇಳಿದಿರಲ್ಲ, ಅದು ಸರಿಯಲ್ಲ. ಮತ್ತೇನೆಂದರೆ ಸಂಸಾರಿಗಳಿಗೂ ಪರಮಾತ್ಮನಿಗೂ ಭೇದವೇ (ಸರಿ). ಏಕೆಂದರೆ ಕುದುರೆಕೋಣಗಳಿಗಿರುವಂತೆ (ಇಬ್ಬರಿಗೂ) ಲಕ್ಷಣ ಭೇದವಿರುತ್ತದೆ. ಲಕ್ಷಣಭೇದವು ಹೇಗೆಂದರೆ ಹೇಳುತ್ತೇವೆ. ಮೊದಲನೆಯದಾಗಿ ಸರ್ವವನ್ನೂ ಅರಿಯುವ ಈಶ್ವರನ ಜ್ಞಾನವು ಸೂರ್ಯನ ಬೆಳಕಿನಂತೆ ನಿತ್ಯವಾಗಿರುತ್ತದೆ; ಸಂಸಾರಿಗಳಿಗೆ ದೀಪದ ಹುಳುವಿನ(ಜ್ಞಾನದ)ಂತೆ ಅದಕ್ಕೆ ವಿರುದ್ಧವಾಗಿ (ಅನಿತ್ಯ

ವಾಗಿ)ರುತ್ತದೆ. ಇದರಂತೆಯೇ ಶಕ್ತಿಭೇದವೂ ಇರುತ್ತದೆ. ಈಶ್ವರನ ಶಕ್ತಿಯು ನಿತ್ಯವಾಗಿಯೂ ಸರ್ವವಿಷಯಕವಾಗಿಯೂ ಇರುತ್ತದೆ; ಇನ್ನೊಬ್ಬ(ನಾ ಜೀವ)ನದು (ಅದಕ್ಕೆ) ವಿರುದ್ಧವಾಗಿರುತ್ತದೆ. ಈಶ್ವರನ ಕರ್ಮವು ಜ್ಞಾನಸ್ವರೂಪವಾದ ಆತ್ಮನ ಇರವೆಂಬ ಒಂದೇ ನಿಮಿತ್ತದಿಂದ, ಬಿಸಿಯ ಸ್ವರೂಪವಾದ ದ್ರವ್ಯದ ಇರವೆಂಬು ದೊಂದೇ ನಿಮಿತ್ತದಿಂದ ಆಗುವ ಸುಡುವದೆಂಬ ಕರ್ಮದಂತೆ, ಆಗುವದು. ಮತ್ತು ರಾಜನ, ಸೂಜಿಕಲ್ಲಿನ ಮತ್ತು ಬೆಳಕಿನ ಕರ್ಮದಂತೆ ತನ್ನ ಸ್ವರೂಪದಲ್ಲಿ (ಯಾವ) ವಿಕಾರವನ್ನೂ ಮಾಡದೆ ಇರುವಂಥದ್ದು ಇನ್ನೊಬ್ಬ(ನಾದ ಜೀವ)ನ (ಕರ್ಮವು ಇದಕ್ಕೆ) ವಿರುದ್ಧವಾಗಿರುತ್ತದೆ. "ಉಪಾಸನೆ ಮಾಡಬೇಕು" ಎಂಬ (ಶ್ರುತಿ) ವಚನದಿಂದ ಈಶ್ವರನು ಗುರುವಿನಂತೆಯೂ ರಾಜನಂತೆಯೂ ಉಪಾಸ್ಯನು; ಇನ್ನೊಬ್ಬ(ನಾದ ಜೀವ)ನು ಶಿಷ್ಯನಂತೆಯೂ ಆಳಿನಂತೆಯೂ ಉಪಾಸಕನು "ಅಪಹತಪಾಪ್ಮನು" ಎಂದು ಮುಂತಾಗಿ ಶ್ರುತಿಯಿರುವದರಿಂದ ಈಶ್ವರನು ನಿತ್ಯಶುದ್ಧನಾಗಿರುತ್ತಾನೆ, "ಪುಣ್ಯದಿಂದ ಪುಣ್ಯವಾಗುತ್ತದೆ" (ಬೃ ೩-೨-೧೩) ಎಂಬ ವಚನವಿರುವದರಿಂದ ಇನ್ನೊಬ್ಬ(ನಾದ ಜೀವ)ನು (ಇದಕ್ಕೆ) ವಿರುದ್ಧವಾಗಿರುತ್ತಾನೆ ಆದ್ದರಿಂದಲೇ ಈಶ್ವರನು ನಿತ್ಯಮುಕ್ತನು, ಇನ್ನೊಬ್ಬ(ನಾದ ಜೀವ)ನು ಯಾವಾಗಲೂ ಅಶುದ್ಧಿಯ ಸಂಬಂಧ ವಿರುವದರಿಂದ ಸಂಸಾರಿಯು ಎಲ್ಲಿ (ಜ್ಞಾನವೇ ಮುಂತಾದ?)[1] ಲಕ್ಷಣಭೇದವಿರುವದೋ ಅಲ್ಲಿ (ವಸ್ತುಗಳಿಗೆ) ಭೇದವಿರುವದು ಕಂಡುಬಂದಿರುತ್ತದೆ; ಉದಾಹರಣೆಗೆ ಕುದುರೆ, ಕೋಣ–ಇವೆರಡಕ್ಕೂ (ಲಕ್ಷಣಭೇದವಿರುವದರಿಂದ ಭೇದವಿರುತ್ತದೆ). ಹೀಗೆಯೇ ಜ್ಞಾನವೇ ಮುಂತಾದವುಗಳ ವಿಷಯಕ್ಕೆ ಲಕ್ಷಣಭೇದವಿರುವದರಿಂದ ಈಶ್ವರನಿಗೂ ಆತ್ಮರುಗಳಿಗೂ ಭೇದವುಂಟು.

(ಭಾಷ್ಯ)

೧೪೩ ನ। ಕಸ್ಮಾತ್? "ಅನ್ಯೋಽಸಾವನ್ಯೋಽಹಮಸ್ಮೀತಿ ನ ಸವೇದ" (ಬೃ. ೧-೪-೧೦), "ತೇ ಕ್ಷಯ್ಯಲೋಕಾ ಭವನ್ತಿ" (ಛಾ. ೭-೨೫-೨), "ಮೃತ್ಯೋಃ ಸ ಮೃತ್ಯುಮಾಪ್ನೋತಿ" (ಕ ೨-೧-೧೦), ಇತಿ ಭೇದದೃಷ್ಟಿರ್ಹ್ಯಪೋದ್ಯತೇ। ಏಕತ್ವಪ್ರತಿಪಾದಿನ್ಯಶ್ಚ ಶ್ರುತಯಃ ಸಹಸ್ರಶೋ ವಿದ್ಯನ್ತೇ। ಯದುಕ್ತಂ ಜ್ಞಾನಾದಿ ಲಕ್ಷಣಭೇದಾತ್ ಇತಿ। ಉಚ್ಯತೇ। ನ। ಅನಭ್ಯುಪಗಮಾತ್। ಬುದ್ಧ್ಯಾದಿಭ್ಯೋ ವ್ಯತಿರಿಕ್ತಾ ವಿಲಕ್ಷಣಾಶ್ಚೇಶ್ವರಾದ್ ಭಿನ್ನಲಕ್ಷಣಾ ಆತ್ಮಾನೋ ನ ಸನ್ತಿ। ಏಕ ಏವೇಶ್ವರಶ್ಚ ಆತ್ಮಾ ಸರ್ವಭೂತಾನಾಂ ನಿತ್ಯಮುಕ್ತೋಽಭ್ಯುಪಗಮ್ಯತೇ।

---

1. "ಜ್ಞಾನಾದಿ" ಎಂಬುದು ಇಲ್ಲಿ ಅವಶ್ಯವಿಲ್ಲವೆಂದು ತೋರುವದು. ವಾ॥ ಪಾಠಕ್ಕನುಗುಣವಾಗಿ "ಅಪಿ ಚ" ಎಂಬುದನ್ನು ಬಿಟ್ಟುಬಿಟ್ಟಿದೆ.

ಬಾಹ್ಯಶ್ಚ ಬುದ್ಧ್ಯಾದಿಸಮಾಹಾರಸನ್ತಾನಾಪಜ್ಞ್ಯಾರಮಮತ್ವಾದಿವಿಪರೀತಪ್ರತ್ಯಯ ಪ್ರಬನ್ಧಾವಿಚ್ಛೇದಲಕ್ಷಣೋ ನಿತ್ಯಶುದ್ಧಬುದ್ಧಮುಕ್ತವಿಜ್ಞಾನಾತ್ಮೇಶ್ವರಗರ್ಭೋ ನಿತ್ಯ ವಿಜ್ಞಾನಾವಭಾಸಃ ಚಿತ್ತಚೈತ್ಯಬೀಜಬೀಜಿಸ್ವಭಾವಃ ಕಲ್ಪಿತೋ೨ನಿತ್ಯವಿಜ್ಞಾನ ಈಶ್ವರ ಲಕ್ಷಣವಿಪರೀತೋ೨ಭ್ಯುಪಗಮ್ಯತೇ । ಯಸ್ಯಾವಿಚ್ಛೇದೇ ಸಂಸಾರವ್ಯವಹಾರಃ, ವಿಚ್ಛೇದೇ ಚ ಮೋಕ್ಷವ್ಯವಹಾರಃ । ಅಸ್ಯಶ್ಚ ಮೃತ್ಪಲೇಪವತ್ ಪ್ರತ್ಯಕ್ಷಪ್ರಧ್ವಂಸೋ ದೇವಪಿತೃಮನುಷ್ಯಾದಿಲಕ್ಷಣೋ ಭೂತವಿಶೇಷಸಮಾಹಾರಃ । ನ ಪುನಶ್ಚತುರ್ಥೋ೨s ನ್ಯೋ ಭಿನ್ನಲಕ್ಷಣ ಈಶ್ವರಾದಭ್ಯುಪಗಮ್ಯತೇ । ಬುದ್ಯಾದಿತಲ್ಪಿತಾತ್ಮವ್ಯತಿರೇಕಾಭಿ ಪ್ರೇಯೇಣ ತು ಲಕ್ಷಣಭೇದಾತ್ (?) ಇತ್ಯಾಶ್ರಯಾಸಿದ್ಧೋ ಹೇತುಃ । ಈಶ್ವರಾದನ್ಯ ಸ್ಯಾತ್ಮನೋ೨ಸತ್ತ್ವಾತ್ ॥

(ಭಾಷ್ಯಾರ್ಥ)

ಇದು ಸರಿಯಲ್ಲ. ಏಕೆಂದರೆ " ಈ ದೇವತೆ ಬೇರೆ ನಾನು ಬೇರೆ–ಎಂದು ತಿಳಿಯುವವನು (ನಿಜವನ್ನು) ಅರಿಯನು " (ಬೃ. ೧-೪-೧೦) " ಅವರು ನಾಶವಾಗುವ ಲೋಕಗಳನ್ನು ಹೊಂದುವರು " (ಛಾ. ೭-೨೫-೨) " ಅವನು ಸಾವಿನಮೇಲೆ ಸಾವನ್ನು ಹೊಂದುವನು " (ಕ. ೨-೧-೧೦) ಎಂದು (ಶ್ರುತಿಯಲ್ಲಿ) ಭೇದದೃಷ್ಟಿಯನ್ನು ನಿಂದಿಸಿರುತ್ತದೆಯಲ್ಲವೆ? ಆತ್ಮನು ಒಬ್ಬನೇ ಎಂದು ಹೇಳುವ ಶ್ರುತಿಗಳೂ ಸಾವಿರಗಟ್ಟಲೆ ಇರುತ್ತವೆ. ಜ್ಞಾನವೇ ಮುಂತಾದ ಲಕ್ಷಣಭೇದವಿರುವದರಿಂದ (ಆತ್ಮರಿಬ್ಬರೂ ಬೇರೆಬೇರೆ) ಎಂದು (ನೀವು)ಹೇಳಿದಿರಷ್ಟೆ ಆ ವಿಷಯಕ್ಕೆ ನಾವು ಹೇಳುವದೇನೆಂದರೆ· ಇದು ಸರಿಯಲ್ಲ, ಏಕೆಂದರೆ (ನಾವು) ಒಪ್ಪಿರುವದಿಲ್ಲ. ಬುದ್ಧಿಯೇ ಮುಂತಾದವುಗಳಿಗಿಂತ ಬೇರೆಯಾಗಿಯೂ ಬೇರೆಯ ಸ್ವಭಾವದವರಾಗಿಯೂ ಇರುವ[1] ಈಶ್ವರನಿಗಿಂತ ಬೇರೆಯ ಲಕ್ಷಣವುಳ್ಳ ಆತ್ಮರುಗಳು ಇಲ್ಲವೇ ಇಲ್ಲ ಒಬ್ಬನೇ ಒಬ್ಬನಾದ ಈಶ್ವರನೇ ಸರ್ವಪ್ರಾಣಿಗಳಿಗೂ ಆತ್ಮನಾಗಿ ನಿತ್ಯಮುಕ್ತನಾಗಿರುವನೆಂದು (ನಾವು) ಒಪ್ಪುತ್ತೇವೆ. ಬುದ್ಧಿಯೇ ಮುಂತಾದವುಗಳ ಒಟ್ಟಿನ ಪ್ರವಾಹದಲ್ಲಿ ನಾನು ನನ್ನದು–ಮುಂತಾದ ತಪ್ಪುತಿಳಿವಳಿಕೆಯ ಸಾಲು ಕಡಿವಡೆಯದೆ ಇರುವವನೂ, ನಿತ್ಯಶುದ್ಧಬುದ್ಧಮುಕ್ತ ವಿಜ್ಞಾನಾತ್ಮನಾದ ·ಈಶ್ವರನನ್ನು ತನ್ನೊಳಗಿಟ್ಟುಕೊಂಡಿರುವವನೂ, ನಿತ್ಯಜ್ಞಾನದ ಆಭಾಸರೂಪನೂ, ಚಿತ್ತ ಮತ್ತು ವಿಷಯ ಮತ್ತು ಹೇತುಫಲ ಈ ಸ್ವಭಾವದವನೂ ಆಗಿ, ಅನಿತ್ಯವಾದ ವಿಜ್ಞಾನವುಳ್ಳ, ಈಶ್ವರಲಕ್ಷಣಕ್ಕೆ ವಿರುದ್ಧನಾಗಿರುವ, ಕಲ್ಪಿತ ಬಾಹ್ಯ ಜೀವನನ್ನು (ನಾವು) (ಒಪ್ಪಿರುತ್ತೇವೆ). ಈ (ಕಲ್ಪಿತರೂಪವು) ಕಡಿದುಹೋಗದೆ

---

[1] " ಬಾಹ್ಯಶ್ಚಕ್ಷುರ್ಬುದ್ಧ್ಯಾದಿ " ಎಂಬ (ಆ॥) ಪಾಠಕ್ಕಿಂತ ನಾವು ಅನುಸರಿಸಿರುವ (ವಾ॥) ಪಾಠವೇ ಮೇಲು.

ಇದ್ದರೆ ಸಂಸಾರವೆಂಬ ವ್ಯವಹಾರವುಂಟಾಗುವದು, ಕಡಿದುಹೋದರೆ ಮೋಕ್ಷವೆಂಬ ವ್ಯವಹಾರವುಂಟಾಗುವದು (ಇವೆರಡಕ್ಕಿಂತಲೂ) ಬೇರೆಯಾಗಿ ಮಣ್ಣಿನ ಬಳಿತ ದಂತೆ ಪ್ರತ್ಯಕ್ಷವಾಗಿಯೇ ನಾಶವಾಗುತ್ತಿರುವ ದೇವ, ಪಿತೃ, ಮನುಷ್ಯ–ಮುಂತಾದ ರೂಪದಲ್ಲಿರುವ ಭೂತವಿಶೇಷಗಳ ಸಂಘಾತವನ್ನೂ (ಒಪ್ಪಿರುತ್ತೇವೆ). ಆದರೆ (ಇವುಗಳೆಲ್ಲ ಕ್ಕಿಂತ) ಬೇರೆಯಾಗಿ ನಾಲ್ಕನೆಯವನಾದ ಈಶ್ವರನಿಗಿಂತ ಬೇರೆಯ ಸ್ವಭಾವದ (ಜೀವ ನನ್ನು) ನಾವು ಒಪ್ಪಿರುವದೇ ಇಲ್ಲ. ಬುದ್ಧಿಯೇ ಮುಂತಾದವುಗಳಲ್ಲಿ ಕಲ್ಪಿತನಾದ ಆತ್ಮನು ಬೇರೆ ಎಂಬ ಅಭಿಪ್ರಾಯದಿಂದ ಲಕ್ಷಣಭೇದವಿರುವದರಿಂದ (ಇಬ್ಬರೂ ಬೇರೆ ಎನ್ನುವದಾದರೆ) ಹೇತುವು ಆಶ್ರಯಾಸಿದ್ಧವಾಗಿರುತ್ತದೆ ಏಕೆಂದರೆ (ಆಗ) ಈಶ್ವರನಿಗಿಂತ ಬೇರೆಯಾಗಿರುವ ಆತ್ಮನು (ನಿಜವಾಗಿ) ಇರುವದೇ ಇಲ್ಲ

ಆತ್ಮನೊಬ್ಬನಲ್ಲಿಯೇ ಸಂಸಾರಿತ್ವ, ಅಸಂಸಾರಿತ್ವ ಇವುಗಳು ಕಲ್ಪಿತ

(ಭಾಷ್ಯ)

೧೫೪. ಈಶ್ವರಸ್ಯೈವ ವಿರುದ್ಧಲಕ್ಷಣತ್ವಮಯುಕ್ತಮ್ ಇತಿ ಚೇತ್, ಸುಖ ದುಃಖಾದಿಯೋಗಶ್ಚ । ನ । ನಿಮಿತ್ತತ್ವೇ ಸತಿ ಲೋಕವಿಪರ್ಯಯಾಧ್ಯಾರೋಪಣಾತ್ ಸವಿತೃವತ್ । ಯಥಾ ಹಿ ಸವಿತಾ ನಿತ್ಯಪ್ರಕಾಶರೂಪತ್ವಾತ್ ಲೋಕಾಭಿವ್ಯಕ್ತ್ಯನಭಿವ್ಯಕ್ತಿನಿಮಿತ್ತತ್ವೇ ಸತಿ ಲೋಕದೃಷ್ಟಿವಿಪರ್ಯಯೇಣ ಉದಯಾಸ್ತಮಯಾಹೋರಾತ್ರಾದಿಕರ್ತೃತ್ವಾಧ್ಯಾರೋಪಭಾಗ್ ಭವತಿ, ಏವಮ್ ಈಶ್ವರೇ ನಿತ್ಯವಿಜ್ಞಾನ ಶಕ್ತಿರೂಪೇ ಲೋಕಜ್ಞಾನಾಪೋಹಸುಖದುಃಖಸೃಷ್ಟ್ಯಾದಿನಿಮಿತ್ತತ್ವೇ ಸತಿ ಲೋಕ ವಿಪರೀತಬುದ್ಧ್ಯಾ ಅಧ್ಯಾರೋಪಿತಂ ವಿಪರೀತಲಕ್ಷಣತ್ವಂ ಸುಖದುಃಖಾದಯಶ್ಚ ನ ಸ್ವತಃ । ಆತ್ಮದೃಷ್ಟ್ಯನುರೂಪಾಧ್ಯಾರೋಪಾಚ್ಚ । ಯಥಾ ಘನಾದಿವಿಪ್ರಕೀರ್ಣೇ ಅವ್ಯತೇ ಯೇನೈವ ಸವಿತೃಪ್ರಕಾಶೋ ನ ದೃಶ್ಯತೇ ಸ ಆತ್ಮದೃಷ್ಟ್ಯನುರೂಪಮೇವಾ ಧ್ಯಸ್ಯತಿ "ಸವಿತಾ ಇದಾನೀಮಿಹ ನ ಪ್ರಕಾಶಯತಿ" ಇತಿ ಸತ್ಯೇವ ಪ್ರಕಾಶೇಽನ್ಯತ್ರ ಭ್ರಾನ್ತ್ಯಾ । ಏವಮ್ ಇಹ ಬ್ರಾದ್ಧಾದಿವೃತ್ತ್ಯುದ್ಭವಾಭಿಭವಾಕುಲಭ್ರಾನ್ತ್ಯಾ ಅಧ್ಯಾ ರೋಪಿತಃ ಸುಖದುಃಖಾದಿಯೋಗ ಉಪಪದ್ಯತೇ । ತತ್ಸ್ಮರಣಾಚ್ಚ । ತಸ್ಯೈವ ಈಶ್ವರಸ್ಯೈವ ಹಿ ಸ್ಮರಣಮ್ "ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ" (ಗೀ. ೧೫-೧೫), 'ನಾದತ್ತೇ ಕಸ್ಯಚಿತ್ ಪಾಪಮ್" (ಗೀ. ೫-೧೫) ಇತ್ಯಾದಿ । ಅತೋ ನಿತ್ಯಮುಕ್ತೇ ಏಕಸ್ಮಿನ್ ಸವಿತರೀವ ಲೋಕಾವಿದ್ಯಾಧ್ಯಾರೋಪಿತಮ್ ಈಶ್ವರೇ ಸಂಸಾರಿತ್ವಮ್ । ಶಾಸ್ತ್ರಾದಿಪ್ರಾಮಾಣ್ಯಾದಭ್ಯುಪಗತಮ್ ಅಸಂಸಾರಿತ್ವಮ್ ಇತ್ಯ ವಿರೋಧ ಇತಿ ॥

(ಭಾಷ್ಯಾರ್ಥ)

(ಶಂಕೆ):—ಈಶ್ವರ(ನೊಬ್ಬನಲ್ಲಿ)ಯೇ ವಿರುದ್ಧವಾದ ಸ್ವಭಾವಗ(ಳೆರಡಿ)ವದೂ ಸುಖದುಃಖಾದಿಗಳ ಸಂಬಂಧವಿರುವದೂ ಸರಿಯಲ್ಲ.

(ಪರಿಹಾರ):—ಹಾಗಲ್ಲ. ಏಕೆಂದರೆ ಸೂರ್ಯನಂತೆ (ಬರಿಯ) ನಿಮಿತ್ತವಾಗಿರುವಲ್ಲಿ ಜನರು ತಪ್ಪಾಗಿ ಆರೋಪಮಾಡುತ್ತಿರುತ್ತಾರೆ. ಸೂರ್ಯನು ನಿತ್ಯಪ್ರಕಾಶರೂಪನಾಗಿರುವದರಿಂದ ಲೋಕದ (ಪದಾರ್ಥಗಳನ್ನು) ತೋರಿಸುವದು, ತೋರಿಸದಿರುವದು ಎಂಬಿವೆರಡಕ್ಕೂ (ಬರಿಯ) ಕಾರಣನಾಗಿರುವಲ್ಲಿ ಜನರ ತಪ್ಪಾದ ತಿಳಿವಳಿಯಿಂದ ಹುಟ್ಟುವದು, ಮುಳುಗುವದು, ಹಗಲುರಾತ್ರೆಗಳನ್ನುಂಟುಮಾಡುವದು ಮುಂತಾದ ಆರೋಪಕ್ಕೆ ಹೇಗೆ ಪಾತ್ರನಾಗುತ್ತಾನೋ ಅದರಂತೆ ನಿತ್ಯವಿಜ್ಞಾನಶಕ್ತಿರೂಪನಾದ ಈಶ್ವರನು ಜನರ ಜ್ಞಾನ, ಅದರ ನಾಶ, ಸುಖ, ದುಃಖ, ಸ್ಮೃತಿ ಮುಂತಾದವುಗಳಿಗೆ (ಕೇವಲ) ನಿಮಿತ್ತನಾಗಿರುವಲ್ಲಿ ಜನರ ತಪ್ಪುತಿಳಿವಳಿಕೆಯಿಂದ ಆರೋಪಿತವಾಗಿ (ಅವನಲ್ಲಿ) ವಿರುದ್ಧಸ್ವಭಾವವೂ ಸುಖದುಃಖಾದಿಗಳೂ (ತೋರುವವೇ) ಹೊರತು ಅವನಲ್ಲಿಯೇ (ಅವು ನಿಜವಾಗಿರುವ)ದಿಲ್ಲ. ತಮ್ಮ ದೃಷ್ಟಿಗೆ ಅನುಗುಣವಾಗಿ ಆರೋಪಮಾಡುತ್ತಿರುವದರಿಂದಲೂ (ಹೀಗೆಂದು ತಿಳಿಯಬೇಕು). ಅಕಶವು ಮೋಡವೇ ಮುಂತಾದವುಗಳಿಂದ ಮುಚ್ಚಿರುವಾಗ ಯಾವನಿಗೆ ಸೂರ್ಯನು ಬೆಳಕು ಕಾಣುವದಿಲ್ಲವೋ ಅವನು ಮಾತ್ರವೇ "ಸೂರ್ಯನು ಈಗ ಇಲ್ಲಿ ಬೆಳಗುತ್ತಿಲ್ಲ" ಎಂದು ಮತ್ತೊಂದು ಕಡೆಯಲ್ಲಿ ಬೆಳಕು ಇರುತ್ತಿದ್ದರೂ ಭ್ರಾಂತಿಯಿಂದ ತನ್ನ ದೃಷ್ಟಿಗೆ ಅನುಗುಣವಾಗಿಯೇ ಆರೋಪಿಸುತ್ತಾನೆ. ಅದರಂತೆ ಇಲ್ಲಿ(ಯೂ) ಬುದ್ಧಿಯೆ ಮುಂತಾದವುಗಳ ವೃತ್ತಿಗಳು ಹುಟ್ಟುವದು, ಮರೆಯಾಗುವದು ಇವುಗಳಿಂದ ಏನೂ ತೋಚದ ಭ್ರಾಂತಿಯಿಂದ ಆರೋಪಿತವಾದ ಸುಖ, ದುಃಖ–ಮುಂತಾದವುಗಳ ಸಂಬಂಧವು (ಈಶ್ವರನಲ್ಲಿ) ಹೊಂದುತ್ತದೆ. ಅತನ ಸ್ಮೃತಿಯಿರುವದರಿಂದಲು (ಹೀಗೆಂದು ತಿಳಿಯಬೇಕು). ಅದೇ ಈಶ್ವರನ **ಸ್ಮೃತಿಯು** "ನನ್ನಿಂದ ಸ್ಮೃತಿಯು ಜ್ಞಾನವು ಮತ್ತು (ಜ್ಞಾನದ) ನಾಶ–ಇವುಗಳುಂಟಾಗುವವು" (ಗೀ. ೧೫-೧೫) "(ಈಶ್ವರನು) ಯಾವನ ಪಾಪವನ್ನೂ ಸ್ವೀಕರಿಸುವದಿಲ್ಲ" (ಗೀ. ೫-೧೫) ಎಂದ ಮುಂತಾಗಿರುತ್ತದೆ. ಆದ್ದರಿಂದ ನಿತ್ಯಮುಕ್ತನಾದ ಒಬ್ಬನೇ ಆದ ಈಶ್ವರನನ್ನು ಸೂರ್ಯನಲ್ಲಿ (ಉದಯಾದಿಗಳು ಆರೋಪಿತವಾಗಿರುವಂತೆ) ಜನರ ಅವಿದ್ಯೆಯಿಂದ ಸಂಸಾರಿತ್ವವು ಆರೋಪಿತವಾಗಿರುತ್ತದೆ ಶಾಸ್ತ್ರನೇ ಮುಂತಾದ ಪ್ರಾಮಾಣ್ಯದಿಂದ ಅವನಲ್ಲಿ ಅಸಂಸಾರಿತ್ವವನ್ನು ಒಪ್ಪಿರುತ್ತೇವೆ. ಆದ್ದರಿಂದ (ಇವೆರಡಕ್ಕೂ) ವಿರೋಧವಿಲ್ಲ

(ಭಾಷ್ಯ)

೧೪೫. ಏತೇನ ಪ್ರತ್ಯೇಕಂ ಜ್ಞಾನಾದಿಭೇದಃ ಪ್ರತ್ಯುಕ್ತಃ । ಸೌಕ್ಷ್ಮ್ಯಾಜ್ಜೈತನ

ಸರ್ವಗತತ್ವಾದ್ಯವಿಶೇಷೇ ಚ ಭೇದಹೇತ್ವಭಾವಾತ್ । ವಿಕ್ರಿಯಾವತ್ತ್ವೇ ಚಾನಿತ್ಯತ್ವಾತ್ । ಮೋಕ್ಷೇಚ ವಿಶೇಷಾನಭ್ಯುಪಗಮಾತ್, ಅಭ್ಯುಪಗಮೇ ಚಾನಿತ್ಯತ್ವ ಪ್ರಸಙ್ಗಾತ್ । ಅವಿದ್ಯಾವದುಪಲಭ್ಯತ್ವಾಚ್ಚ ಭೇದಸ್ಯ ತತ್ಕೃಯೇಽನುಪಪತ್ತಿಃ, ಇತಿ ಸಿದ್ಧಮೇಕತ್ವಮ್ । ತಸ್ಮಾತ್ ಶರೀರೇನ್ದ್ರಿಯಮನೋಬುದ್ಧಿವಿಷಯವೇದನಾ ಸನ್ತಾನಸ್ಯ ಅಹಙ್ಕಾರಸಮ್ಬನ್ಧಾದಜ್ಞಾನಬೀಜಸ್ಯ ನಿತ್ಯವಿಜ್ಞಾನಾನ್ಯನಿಮಿತ್ತಸ್ಯ ಆತ್ಮತತ್ತ್ವಯಾಥಾತ್ಮ್ಯವಿಜ್ಞಾನಾದ್ವಿನಿವೃತ್ತೌ ಅಜ್ಞಾನಬೀಜಸ್ಯ ವಿಚ್ಛೇದೇ ಆತ್ಮನೋ ಮೋಕ್ಷಸಂಜ್ಞಾ, ವಿಪರ್ಯಯೇ ಚ ಬನ್ಧಸಂಜ್ಞಾ । ಸ್ವರೂಪಾಪೇಕ್ಷತ್ವಾದುಭಯೋಃ ॥

(ಭಾಷ್ಯಾರ್ಥ)

ಇದರಿಂದ ಒಬ್ಬೊಬ್ಬ (ಜೀವನಲ್ಲಿಯೂ) ಜ್ಞಾನವೇ ಮುಂತಾದವುಗಳು ಬೇರೆ ಬೇರೆ ಇರುವವೆಂಬುದನ್ನೂ ನಿರಾಕರಿಸಿದಂತಾಯಿತು. ಏಕೆಂದರೆ ಸೂಕ್ಷ್ಮವಾಗಿರುವದು, ಚೈತನ್ಯ(ಸ್ವರೂಪ), ಸರ್ವಗತನಾಗಿರುವದು–ಮುಂತಾದವುಗಳು (ಎಲ್ಲರಲ್ಲಿಯೂ) ಸಮಾನವಾಗಿರುವಲ್ಲಿ ಭೇದಕ್ಕೆ (ಯಾವ) ಕಾರಣವೂ ಇರುವದಿಲ್ಲ. (ಆತ್ಮನು) ವಿಕಾರವುಳ್ಳವನೆಂದರೆ ಅನಿತ್ಯನೆಂದಾಗುವದಾದ್ದರಿಂದಲೂ ಮೋಕ್ಷದಲ್ಲಿ ಯಾವ ವಿಶೇಷವೂ (ಆತ್ಮನಲ್ಲಿ)ರುವದೆಂದು (ಯಾರೂ) ಒಪ್ಪುವದಿಲ್ಲವಾದ್ದರಿಂದಲೂ ಒಪ್ಪಿದರೆ (ಆತ್ಮನೇ) ಅನಿತ್ಯನಾಗುವದರಿಂದಲೂ (ಭೇದಕ್ಕೆ ಕಾರಣವಿರುವದಿಲ್ಲ). ಅವಿದ್ಯಾವಂತರಿಗೆ (ಮಾತ್ರ) ಕಾಣಿಸುವದರಿಂದಲೂ ಭೇದವು ಆ (ಅವಿದ್ಯೆ) ಹೋದ ಬಳಿಕ ಇರಲಾರದು. ಆದ್ದರಿಂದ ಆತ್ಮನು ಒಬ್ಬನೇ ಎಂದು ಸಿದ್ಧವಾಯಿತು. ಆದ್ದರಿಂದ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ, ವಿಷಯಗಳು, ವೇದನೆ–ಇವುಗಳ ಪ್ರವಾಹವು ಅಹಂಕಾರಸಂಬಂಧವುಳ್ಳದ್ದಾಗಿರುವದರಿಂದ ಇದಕ್ಕೆ ಅಜ್ಞಾನವೇ ಕಾರಣವು; ನಿತ್ಯವಿಜ್ಞಾನರೂಪವಾವ (ಆತ್ಮನಿಗಿಂತ) ಬೇರೆಯಾದದ್ದೇ ಇದಕ್ಕೆ ನಿಮಿತ್ತವಾಗಿರುತ್ತದೆ. (ಆದ್ದರಿಂದ) ಆತ್ಮತತ್ತ್ವವನ್ನು ಇದ್ದದ್ದು ಇದ್ದಂತೆ ಅರಿತುಕೊಂಡ ಮೇಲೆ (ಇದು) ಹೋಗಿ ಅಜ್ಞಾನವೆಂಬ ಕಾರಣವು ನಾಶವಾಗಲಾಗಿ ಆತ್ಮನಿಗೆ ಮೋಕ್ಷವೆಂಬ ವ್ಯವಹಾರವುಂಟಾಗುತ್ತದೆ; ಹಾಗಿಲ್ಲದಿದ್ದರೆ ಬಂಧವೆಂಬ ವ್ಯವಹಾರವುಂಟಾಗುತ್ತದೆ. ಏಕೆಂದರೆ ಈ ಎರಡಕ್ಕೂ (ಆತ್ಮನ) ಸ್ವರೂಪವೇ ಬೇಕಾಗಿರುತ್ತದೆ.[1]

ದೇವತೆಗಳ ಗರ್ವ

ಬ್ರಹ್ಮ ಹ.....ಅಮಹೀಯನ್ತ ॥ ೧ ॥

---

1. ಆತ್ಮಸ್ವರೂಪದಲ್ಲಿಯೇ ಬಂಧಮುಕ್ತಗಳೆರಡೂ ಕಲ್ಪಿತವಾಗಿರುತ್ತವೆ.

(ಭಾಷ್ಯ)

೧೪೬. "ಬ್ರಹ್ಮಹ" ಇತ್ಯೈತಿಹ್ಯಾರ್ಥಃ। ಪುರಾಕಿಲದೇವಾಸುರಸಙ್ಘ್ರಾಮೇ ಜಗತ್ಸ್ಥಿತಿಪರಿಪಾಲಯಿಷಯಾ ಆತ್ಮಾನುಶಾಸನಾನುವರ್ತಿಭ್ಯೋ ದೇವೇಭ್ಯೋಽರ್ಥಿಭ್ಯೋಽರ್ಥಾಯ ವಿಜಿಗ್ಯೇ ಅಜೈಷೀತ್ ಅಸುರಾನ್। ಬ್ರಹ್ಮಣ ಇಚ್ಛಾನಿಮಿತ್ತೋ ವಿಜಯೋ ದೇವಾನಾಂ ಬಭೂವ ಇತ್ಯರ್ಥಃ। ತಸ್ಯ ಹ ಬ್ರಹ್ಮಣೋ ವಿಜಯೇ ದೇವಾ ಅಮಹೀಯನ್ತ। ಯಜ್ಞಾದಿಲೋಕಸ್ಥಿತ್ಯಪಹಾರಿಷ್ವಸುರೇಷು ಪರಾಜಿತೇಷು ದೇವಾ ವೃದ್ಧಿಂ ಪೂಜಾಂ ವಾ ಪ್ರಾಪ್ತವನ್ತಃ ॥

(ಭಾಷ್ಯಾರ್ಥ)

"ಬ್ರಹ್ಮಹ" (ಎಂಬಲ್ಲಿ ಹ ಎಂಬುದು) ಹಿಂದೆ ನಡೆಯಿತೆಂಬುದನ್ನು ತಿಳಿಸುತ್ತದೆ. ಹಿಂದೆ ದೇವತೆಗಳಿಗೂ ಅಸುರರಿಗೂ ಯುದ್ಧವುಂಟಾಗಲಾಗಿ ಜಗತ್ತಿನ ಸ್ಥಿತಿಯನ್ನು ಕಾಪಾಡುವದಕ್ಕಾಗಿ (ಬ್ರಹ್ಮವು) ತನ್ನ ಆಪ್ತಣೆಯನ್ನು ಅನುಸರಿಸುವ ವಿಜಯಾರ್ಥಿಗಳಾದ ದೇವತೆಗಳಿಗೋಸ್ಕರ "ವಿಜಿಗ್ಯೇ" ಎಂದರೆ ಅಸುರರನ್ನು ಸೋಲಿಸಿತಂತೆ. ಬ್ರಹ್ಮದ ಇಚ್ಛೆಯ ನಿಮಿತ್ತದಿಂದ ದೇವತೆಗಳಿಗೆ ಗೆಲವಾಯಿತು ಎಂದರ್ಥ. ಆ ಬ್ರಹ್ಮದ ವಿಜಯದಲ್ಲಿ ದೇವತೆಗಳು ಮಹಿಮೆಯನ್ನು ಪಡೆದರು; ಯಜ್ಞವೇ ಮುಂತಾದ ಲೋಕದ ವ್ಯವಸ್ಥೆಯನ್ನು ಅಪಹರಿಸುತ್ತಿದ್ದ ಅಸುರರು ಸೋಲಲಾಗಿ ದೇವತೆಗಳು ಅಭಿವೃದ್ಧಿಯನ್ನು ಅಥವಾ ಪೂಜ್ಯತೆಯನ್ನು ಪಡೆದು ಕೊಂಡರು.

ಬ್ರಹ್ಮವು ಯಕ್ಷರೂಪದಿಂದ ಕಾಣಿಸಿಕೊಂಡದ್ದು

ತ ಐಕ್ಷನ್ತಾಸ್ಮಾಕಮೇವಾಯಂ.....ಯಕ್ಷಮಿತಿ ॥ ೨ ॥

(ಭಾಷ್ಯ)

೧೪೭. "ತ ಐಕ್ಷನ್ತ" ಇತಿ ಮಿಥ್ಯಾಪ್ರತ್ಯಯತ್ವಾದ್ ಹೇಯತ್ವಖ್ಯಾಪನಾರ್ಥ * ಆಮ್ನಾಯಃ। ಈಶ್ವರನಿಮಿತ್ತೋ ವಿಜಯೋ "ಸ್ವಸಾಮರ್ಥ್ಯನಿಮಿತ್ತೋಽಸ್ಮಾಕಮೇವಾಯಂ ವಿಜಯಃ, ಅಸ್ಮಾಕಮೇವಾಯಂ ಮಹಿಮಾ" ಇತ್ಯಾತ್ಮನೋ ಜಯಾದಿಶ್ರೇಯೋನಿಮಿತ್ತಂ ಸರ್ವಾತ್ಮಾನಮ್ ಆತ್ಮಸ್ಥಂ ಸರ್ವಕಲ್ಯಾಣಾಸ್ಪದಮ್ ಈಶ್ವರಮೇವಾತ್ಮತ್ವೇನಾಬುದ್ಧ್ವಾ ಪಿಣ್ಡಮಾತ್ರಾಭಿಮಾನಾಃ ಸನ್ತೋ ಯಂ ಮಿಥ್ಯಾಪ್ರತ್ಯಯಂ ಚಕ್ರುಃ, ತಸ್ಯ ಪಿಣ್ಡಮಾತ್ರ ವಿಷಯತ್ವೇನ ಮಿಥ್ಯಾಪ್ರತ್ಯಯತ್ವಾತ್ ಸರ್ವಾತ್ಮೇಶ್ವರಯಾಥಾತ್ಮ್ಯಾವಬೋಧೇನ ಹಾತವ್ಯತಾ ಖ್ಯಾಪನಾರ್ಥಃ "ತದ್ದ್ವೇಷಾಮ್" ಇತ್ಯಾದ್ಯಾಖ್ಯಾಯಿಕಾಮ್ನಾಯಃ ॥

---

1. "ಖ್ಯಾಪನಾರ್ಥಮಾಮ್ನಾಯಃ" ॥ (ಆ॥)

(ಭಾಷ್ಯಾರ್ಥ)

"ತ ಐಕ್ಷನ್ತ" ಎಂಬ ವೇದವಾಕ್ಯವು (ದೇವತೆಗಳದ್ದು) "ಮಿಥ್ಯಾಪ್ರತ್ಯಯವಾದ್ದರಿಂದ ಬಿಡತಕ್ಕದ್ದು ಎಂದು ತಿಳಿಸುವದಕ್ಕಾಗಿ ಬಂದಿರುತ್ತದೆ. ವಿಜಯವು ಈಶ್ವರನಿಂದಾದದ್ದಾದರೂ "ನಮ್ಮ ಸಾಮರ್ಥ್ಯದಿಂದಲೇ ಆದದ್ದು, ಇದು ನಮ್ಮದೇ ವಿಜಯವು, ಇದು ನಮ್ಮದೇ ಮಹಿಮೆಯು" ಎಂದು ತಮ್ಮ ವಿಜಯವೇ ಮುಂತಾದ ಶ್ರೇಯಸ್ಸಿಗೆ ಕಾರಣನಾದ ಎಲ್ಲರ ಆತ್ಮನಾದ ತಮ್ಮೊಳಗಿರುವ ಸರ್ವ ಕಲ್ಯಾಣಗಳಿಗೂ ಆಧಾರನಾದ ಈಶ್ವರನೇ (ತಮ್ಮ) ಆತ್ಮನೆಂದರಿಯದೆ ಶರೀರಮಾತ್ರದಲ್ಲಿಯೇ (ನಾವೆಂಬ) ಅಭಿಮಾನವುಳ್ಳವರಾಗಿ ಯಾವ ತಪ್ಪುತಿಳಿವಳಿಕೆಯನ್ನು (ದೇವತೆಗಳು) ಮಾಡಿಕೊಂಡರೋ ಅದು ಶರೀರಮಾತ್ರವಿಷಯಕವಾದ (ಆತ್ಮಜ್ಞಾನ)ವಾದ್ದರಿಂದ ತಪ್ಪುತಿಳಿವಳಿಕೆಯಾಗಿರುವದರಿಂದ ಎಲ್ಲರಿಗೂ ಆತ್ಮನಾದ ಈಶ್ವರನ ನಿಜವಾದ ಸ್ವರೂಪವನ್ನು ತಿಳಿದುಕೊಂಡು (ಅದನ್ನು) ಬಿಡತಕ್ಕದ್ದು ಎಂದು ತಿಳಿಸಿಕೊಡುವದಕ್ಕಾಗಿ "ತದ್ಧೈಷಾಮ್" ಮುಂತಾದ ಕಥಾರೂಪವಾದ ವೇದವಾಕ್ಯವು ಬಂದಿರುತ್ತದೆ.

(ಭಾಷ್ಯ)

ಓಳಲ. ತದ್ ಬ್ರಹ್ಮ ಹ ಕೆಲ ಏಷಾಂ ದೇವಾನಾಮ್ ಅಭಿಪ್ರಾಯಂ ಮಿಥ್ಯಾಹಂಕಾರರೂಪಂ ವಿಜಜ್ಞೌ ವಿಜ್ಞಾತವತ್ । ಜ್ಞಾತ್ವಾ ಚ ಮಿಥ್ಯಾಭಿಮಾನ ಶಾತನೇನ ತದನುಜಿಘೃಕ್ಷಯಾ ದೇವೇಭ್ಯೋಽರ್ಥಾಯ ತೇಷಾಮೇವ ಇನ್ದ್ರಿಯ ಗೋಚರೇ ನಾತಿದೂರೇ ಪ್ರಾದುರ್ಬಭೂವ । ಮಹೇಶ್ವರಶಕ್ತಿಮಾಯೋಪಾತ್ತೇನ ಅತ್ಯನ್ತಾದ್ಭುತೇನ ಪ್ರಾದುರ್ಭೂತಂ ಕಿಲ ಕೇನಚಿದ್ ರೂಪವಿಶೇಷೇಣ । ತತ್ ಕಿಲ ಉಪಲಭಮಾನಾ ಅಪಿ ದೇವಾ ನ ವ್ಯಜಾನತ ನ ವಿಜ್ಞಾತವನ್ತಃ । ಕಿಮಿದಂ ಯದೇತದ್ ಯಕ್ಷಂ ಪೂಜ್ಯಮ್ ಇತಿ ॥

(ಭಾಷ್ಯಾರ್ಥ)

ಆ ಬ್ರಹ್ಮವು ಈ ದೇವತೆಗಳ ಮಿಥ್ಯಾಹಂಕಾರರೂಪವಾದ ಅಭಿಪ್ರಾಯವನ್ನು ತಿಳಿದುಕೊಂಡಿತಂತೆ, ತಿಳಿದುಕೊಂಡದ್ದಾಯಿತಂತೆ. ತಿಳಿದುಕೊಂಡಬಳಿಕ ತಪ್ಪಾಗಿರುವ (ಅವರ) ಅಭಿಮಾನವನ್ನು ಕತ್ತರಿಸಿ ಅವರಿಗೆ ಅನುಗ್ರಹಮಾಡಬೇಕೆಂಬ ಇಚ್ಛೆಯಿಂದ ದೇವತೆಗಳಿಗೋಸ್ಕರ ಅವರಿಗೇ ಇಂದ್ರಿಯಗೋಚರವಾಗುವಂತೆ ಹತ್ತಿರದಲ್ಲಿ ತೋರಿಕೊಂಡಿತು. ಮಹೇಶ್ವರಶಕ್ತಿಯಾದ ಮಾಯೆಯಿಂದ ಸ್ವೀಕರಿಸಿದ ಅತ್ಯಂತ ಅದ್ಭುತವಾದ ಒಂದಾನೊಂದು ರೂಪವಿಶೇಷದಿಂದ ಕಾಣಿಸಿಕೊಂಡಿತಂತೆ. ಅದನ್ನು ಕಂಡರೂ ದೇವತೆಗಳು ಈ ಯಕ್ಷವು, ಪೂಜ್ಯತತ್ತ್ವವು, ಯಾವದು?—ಎಂಬುದನ್ನು ತಿಳಿಯಲಿಲ್ಲ, ತಿಳಿಯದವರಾದರು.

ಅಗ್ನಿ ವಾಯುಗಳ ಗರ್ವಭಂಗ

ತೇಽಗ್ನಿಮಬ್ರುವ... ....ತಥೇತಿ ॥ ೩ ॥
ತದಭ್ಯದ್ರವತ್.....ಅಹಮಸ್ಮೀತಿ ॥ ೪ ॥
ತಸ್ಮಿಗ್ಂಸ್ತ್ವಯಿ ....ಪೃಥಿವ್ಯಾಮ್ ಇತಿ ॥ ೫ ॥
ತಸ್ಮೈ .....ಯದೇತದ್ಯಕ್ಷಮಿತಿ ॥ ೬ ॥
ಅಥ ವಾಯುಮಬ್ರುವನ್.. ....ತಥೇತಿ ॥ ೭ ॥
ತದಭ್ಯದ್ರವತ್... ....ಅಹಮಸ್ಮೀತಿ ॥ ೮ ॥
ತಸ್ಮಿಗ್ಂಸ್ತ್ವಯಿ.....ಪೃಥಿವ್ಯಾಮಿತಿ ॥ ೯ ॥
ತಸ್ಮೈ.....ಯದೇತದ್ಯಕ್ಷಮಿತಿ ॥ ೧೦ ॥

(ಭಾಷ್ಯ)

೧೪೯. ತದ್ವಿಜ್ಞಾನಾಯಾಗ್ನಿಮಬ್ರುವ । ತೃಣನಿಧಾನೇಽಯಮಭಿಪ್ರಾಯಃ-ಅತ್ಯನ್ತಸಮ್ಭಾವಿತಯೋರಗ್ನಿಮಾರುತಯೋಃ ತೃಣದಹನಾದಾನಾಶಕ್ತ್ಯಾ ಆತ್ಮ ಸಮ್ಭಾವನಾ ಶಾತಿತಾ ಭವೇದಿತಿ ॥

(ಭಾಷ್ಯಾರ್ಥ)

ಅದನ್ನು ಅರಿತುಕೊಳ್ಳುವದಕ್ಕೆ ಅಗ್ನಿಯನ್ನು ಕುರಿತು ಇಂತೆಂದರು. (ಇತ್ಯಾದಿ ಗ್ರಂಥವು ಸ್ಪಷ್ಟವಾಗಿದೆ) ಹುಲ್ಲುಕಡ್ಡಿಯನ್ನು ಮುಂದೆ ಇಟ್ಟಿದ್ದರ ಅಭಿಪ್ರಾಯ ವೇನೆಂದರೆ ಅತ್ಯಂತ ಹೆಚ್ಚಿನವರೆಂದು (ಹೆಸರುವೆತ್ತ) ಅಗ್ನಿ, ವಾಯು ಇವರುಗಳಿಗೆ ಹುಲ್ಲುಕಡ್ಡಿಯನ್ನು ಸುಡುವದಕ್ಕೂ ಎತ್ತಿಕೊಳ್ಳುವದಕ್ಕೂ ಶಕ್ತಿಯಿಲ್ಲದೆ ಹೋಗಲು ತಮ್ಮಲ್ಲಿದ್ದ ಹೆಮ್ಮೆಯು ಕತ್ತರಿಸಿಹೋಗಲಿ ಎಂಬುದೇ.

ಇಂದ್ರನ ಗರ್ವಭಂಗ

ಅಥೇನ್ದ್ರಮಬ್ರುವ.....ತಿರೋದಧೇ ॥ ೧೧ ॥

(ಭಾಷ್ಯ)

೧೫೦. ಇನ್ದ್ರ ಆದಿತ್ಯೋ ವಜ್ರಭೃದ್ ವಾ । ಅವಿರೋಧಾತ್ । ಇನ್ದ್ರೋಽಪ ಸರ್ಪಣೇ ಬ್ರಹ್ಮ ತಿರೋದಧೇ ಇತ್ಯತ್ರಾಯಮಭಿಪ್ರಾಯಃ—"ಇನ್ದ್ರೋಽಹಮ್" ಇತ್ಯಧಿಕತಮೋಽಭಿಮಾನೋಽಸ್ಯ । "ಸೋಽಹಮ್ ಅಗ್ನ್ಯಾದಿಭಿಃ ಪ್ರಾಪ್ತಂ ವಾಕ್ಸಮ್ಭಾವಣಮಾತ್ರಮಪಿ ಅನೇನ ನ ಪ್ರಾಪ್ತೋಽಸ್ಮಿ" ಇತ್ಯಭಿಮಾನಂ ಕಥಂ ನ (?) ಸಾಮ ಜಹ್ಯಾತ್ ಇತಿ ತದನುಗ್ರಹಾಯೈವಾನ್ತರ್ಹಿತಂ ತದ್ಬ್ರಹ್ಮ ಬಭೂವ ॥

(ಭಾಷ್ಯಾರ್ಥ)

(ಇಲ್ಲಿ) ಇಂದ್ರನೆಂದರೆ ಆದಿತ್ಯನು,[1] ಅಥವಾ ವಜ್ರಾಯುಧಧಾರಿಯಾದ (ದೇವರಾಜನು); ಏಕೆಂದರೆ (ಈ ಎರಡು ಅರ್ಥಗಳನ್ನಿಟ್ಟುಕೊಂಡರೂ (ಯಾವ) ವಿರೋಧವೂ ಇರುವದಿಲ್ಲ. ಇಂದ್ರನು ಒಳಿಗೆ ಬರಲು ಬ್ರಹ್ಮ ಮರೆಯಾಯಿತು–ಎಂಬಲ್ಲಿ ಅಭಿಪ್ರಾಯವೇನೆಂದರೆ. "ನಾನು ಇಂದ್ರನು" ಎಂದು ಇವನಿಗೆ ಎಲ್ಲರಿಗಿಂತಲೂ ಹೆಚ್ಚಿನ ಅಭಿಮಾನವಿರುತ್ತದೆ. "ಇಂಥ ನನಗೆ ಅಗ್ನಿಯೇ ಮೊದಲಾದವರಿಗೆ ದೊರಕಿದ ಮಾತುಕಥೆಕೂಡ ಈ (ಯಕ್ಷನಿಂದ) ದೊರಕಲಿಲ್ಲವಲ್ಲ!" ಎಂದು ಹೆಮ್ಮೆಯನ್ನು ಹೇಗಾದರೂ ತೊರೆಯಲಿ ಎಂದು ಅವನ ಅನುಗ್ರಹಕ್ಕಾಗಿಯೇ ಆ ಬ್ರಹ್ಮವು ಕಣ್ಮರೆಯಾಯಿತು.

ಉಮಾದೇವಿಯ ದರ್ಶನ

ಸ ತಸ್ಮಿನ್ನೇವಾಕಾಶೇ.....ಕಮೇತದ್ಯಕ್ಷಮಿತಿ ॥ ೧೨ ॥

(ಭಾಷ್ಯ)

೧೫೧. ಸ ಶಾನ್ತಾಭಿಮಾನ ಇನ್ದ್ರೋಽತ್ಯರ್ಥಂ ಬ್ರಹ್ಮ ವಿಜಿಜ್ಞಾಸುಃ ಯಸ್ಮಿನ್ ಆಕಾಶೇ ಬ್ರಹ್ಮಣಃ ಪ್ರಾದುರ್ಭಾವ ಆಸೀತ್ ತಿರೋಧಾನಂ ಚ। ತಸ್ಮಿನ್ನೇವ ಸ್ತ್ರಿಯಮ್ ಅತಿರೂಪಿಣೀಂ ವಿದ್ಯಾಮ್ ಆಜಗಾಮ। ಅಭಿಪ್ರಾಯೋದ್ಬೋಧಹೇತುತ್ವಾತ್ ರುದ್ರಪ್ರತ್ನ್ಯಮಾ ಹೈಮವತೀವ ಸಾ ಶೋಭಮಾನ ವಿದ್ಯೈವ। ವಿರೂಪೋಽಪಿ ವಿದ್ಯಾವಾ ಬಹುಶೋಭತೇ॥

(ಭಾಷ್ಯಾರ್ಥ)

ಹೀಗೆ ಹೆಮ್ಮೆಯು ತೊಲಗಿದಬಳಿಕ ಇಂದ್ರನು ಬ್ರಹ್ಮವನ್ನು ತಿಳಿದುಕೊಳ್ಳಬೇಕೆಂಬ ಬಲವಾದ ಇಚ್ಛೆಯುಳ್ಳವನಾಗಿ ಬ್ರಹ್ಮವು ಯಾವ ಆಕಾಶದಲ್ಲಿ ತೋರಿಕೊಂಡು ಮರೆಯಾಯಿತೋ ಅದೇ ಆಕಾಶದಲ್ಲಿ ಪೂಜ್ಯರೂಪಳಾದ ವಿದ್ಯೆಯನ್ನು (ಕಂಡು) ಬಳಿಸಾರಿದನು. ಅಭಿಪ್ರಾಯವನ್ನು ಪ್ರಕಟಗೊಳಿಸುವದಕ್ಕೆ ಕಾರಣವಾಗಿರುವದರಿಂದ ರುದ್ರಪತ್ನಿಯಾದ ಹೈಮವತಿ ಉಮೆಯಂತೆ ಹೊಳೆಯುತ್ತಿದ್ದ (ಆಕೆಯು) ವಿದ್ಯೆಯೇ.[2] (ಏಕೆಂದರೆ) ವಿದ್ಯಾವಂತನು ರೂಪಹೀನನಾಗಿದ್ದರೂ ಬಹಳ ಶೋಭಿಸುತ್ತಿರುತ್ತಾನೆ.

1. ಈ ಅರ್ಥವು ಪದಭಾಷ್ಯದಲ್ಲಿಲ್ಲ; ಹೊಸ ಅರ್ಥಕ್ಕೆ ಇಲ್ಲಿ ಕಾರಣವನ್ನು ಕೊಟ್ಟಿಲ್ಲ.
2. ಉಮೆಯೆಂದೂ ಅರ್ಥವಾಗಬಹುದೆಂದು ಪದಭಾಷ್ಯದಲ್ಲಿದೆ.

ನಾಲ್ಕನೆಯ ಖಂಡ

ಉಮೆಯ ಉಪದೇಶದಿಂದ ಆದ ಜ್ಞಾನ

ಬ್ರಹ್ಮೇತಿ[1] ಹೋವಾಚ.....ಬ್ರಹ್ಮೇತಿ ॥ ೧ ॥

ತಸ್ಮಾದ್ವಾ ಏತೇ... . ಬ್ರಹ್ಮೇತಿ ॥ ೨ ॥

ತಸ್ಮಾದ್ವಾ ಇನ್ದ್ರೋ ....ಬ್ರಹ್ಮೇತಿ ॥ ೩ ॥

(ಭಾಷ್ಯ)

೧೫೨. ತಾಂ ಚ ಪೃಷ್ಟ್ವಾ ತಸ್ಯಾ ಏವ ವಚನಾದ್ ವಿದಾಂಚಕಾರ ವಿದಿತವಾನ್ । ಅತ ಇನ್ದ್ರಸ್ಯ ಬೋಧಹೇತುತ್ವಾದ್ ವಿದ್ಯೈವೋಮಾ । ವಿದ್ಯಾಸಹಾಯ ವಾ ಈಶ್ವರ ಇತಿ ಸ್ಮೃತಿಃ । ಯಸ್ಮಾತ್ ಇನ್ದ್ರವಿಜ್ಞಾನಪೂರ್ವಕಮ್ ಅಗ್ನಿವಾಯ್ವಿನ್ದ್ರಾಃ ತೇಭ್ಯೇನನ್ನೇರಿದಿಷ್ಠಮ್ ಅತಿಸಮೀಪಂ ಬ್ರಹ್ಮವಿದ್ಯಯಾ ಬ್ರಹ್ಮ ಪ್ರಾಪ್ತಾಃ ಸನ್ತಃ ಪಸ್ಪೃಶುಃ ಸ್ಪೃಷ್ಟವನ್ತಃ । ತೇ ಹಿ ಏನತ್ ಪ್ರಥಮಃ ಪ್ರಥಮಂ ವಿದಾಞ್ಚಕಾರ ವಿದಾಞ್ಚಕ್ರುರಿತ್ಯೇತತ್ । ತಸ್ಮಾತ್ ಅತಿತರಾಮ್ ಅತೀತ್ಯಾನ್ಯಾನ್ ಅತಿಶಯೇನ ದೀಪ್ಯನ್ತೇ ಅನ್ಯಾ ದೇವಾಃ । ತತೋಽಪೀನ್ದ್ರೋತಿತರಾಂ ದೀಪ್ಯತೇ । ಆದೌ ಬ್ರಹ್ಮವಿಜ್ಞಾನಾತ್ ॥

(ಭಾಷ್ಯಾರ್ಥ)

ಆಕೆಯನ್ನು ಕೇಳಿ ಆಕೆಯ ಮಾತಿನಿಂದಲೇ (ಬ್ರಹ್ಮವೆಂದು) ತಿಳಿದುಕೊಂಡನು, ತಿಳಿದುಕೊಂಡವನಾದನು. ಆದ್ದರಿಂದ ಇಂದ್ರನಿಗೆ ಜ್ಞಾನಕ್ಕೆ ಕಾರಣವಾಗಿರುವದರಿಂದ ಉಮೆಯೆಂದರೆ ವಿದ್ಯೆಯೇ. ಈಶ್ವರನು ವಿದ್ಯೆಯೊಡನೆ ಇರುತ್ತಾನೆ ಎಂದು ಸ್ಮೃತಿ (?) ಇದೆ. ಇಂದ್ರನ ಜ್ಞಾನದಮೂಲಕ ಅಗ್ನಿ, ವಾಯು, ಇಂದ್ರ–(?) ಈ ದೇವತೆಗಳು ಈ ಬ್ರಹ್ಮವನ್ನು ಅತ್ಯಂತ ಸಮೀಪವಾಗಿ ಬ್ರಹ್ಮವಿದ್ಯೆಯಿಂದ ಬ್ರಹ್ಮವನ್ನು ಪಡೆದು ಸ್ಪರ್ಶಿಸಿದರು, ಮುಟ್ಟಿದರು. ಅವರೇ ಮೊದಲನೆಯವರಾಗಿ ಮೊದಲು 'ವಿದಾಂಚಕಾರ' ಎಂದರೆ ತಿಳಿದುಕೊಂಡರು ಎಂದರ್ಥ. ಆದ್ದರಿಂದ ಅತಿತರಾಮ್ ಎಂದರೆ ಮಿಕ್ಕವರನ್ನು ಅತಿಕ್ರಮಿಸಿ, ಹೆಚ್ಚಾಗಿ ಬೆಳಗುತ್ತಿರುವರು. ಅದರಲ್ಲಿಯೂ

---

1. "ಸಾ ಬ್ರಹ್ಮೇತಿ" ಎಂಪೂ ಕೆಲವು ಪುಸ್ತಕಗಳಲ್ಲಿದೆ.

ಇಂದ್ರನು ಮಿಕ್ಕ ದೇವತೆಗಳನ್ನು ಮೀರಿ ಅತಿಶಯವಾಗಿ ದೀಪ್ತಿವಂತನಾಗಿರುತ್ತಾನೆ. ಏಕೆಂದರೆ ಅವನೇ ಮೊದಲು ಬ್ರಹ್ಮವನ್ನು ತಿಳಿದುಕೊಂಡನು.

ಬ್ರಹ್ಮದ ವಿಷಯದ ಉಪಾಸನೆಗಳು

ತಸ್ಯೈಷ ಆದೇಶೋ..... .ಇತ್ಯಧಿದೈವತಮ್ ॥ ೪ ॥

(ಭಾಷ್ಯ)

೧೫೩. ತಸ್ಯೈಷ ಆದೇಶಃ ತಸ್ಯ ಬ್ರಹ್ಮಣಃ ಏಷಃ ವಕ್ಷ್ಯಮಾಣಃ ಆದೇಶಃ ಉಪಾಸನೋಪದೇಶಇತ್ಯರ್ಥಃ। ಯಸ್ಮಾದ್ ದೇವೇಭ್ಯೋ ವಿದ್ಯುದಿವ ಸಹಸೈವ ಪ್ರಾದುರ್ಭೂತಂ ಬ್ರಹ್ಮದ್ಯುತಿಮತ್, ತಸ್ಮಾತ್ ವಿದ್ಯುತೋ ವಿದ್ಯೋತನಂ ಯಥಾ ಯದೇತದ್ ಬ್ರಹ್ಮವ್ಯದ್ಯುತತ್ ವಿದ್ಯೋತಿತವತ್। ಆ ಇವ ಇತ್ಯುಪಮಾರ್ಥ ಆಶಬ್ದಃ। ಯಥಾ ಘನಾನ್ಧಕಾರಂ ವಿದಾರ್ಯ ವಿದ್ಯುತ್ ಸರ್ವತಃ ಪ್ರಕಾಶತೇ, ಏವಂ ತದ್ ಬ್ರಹ್ಮ ದೇವಾನಾಂ ಪುರತಃ ಸರ್ವತಃ ಪ್ರಕಾಶವದ್ ವ್ಯಕ್ತೀಭೂತಮ್। ಅತೋ ವ್ಯದ್ಯುತದಿವ ಇತ್ಯುಪಾಸ್ಯಮ್, "ಯಥಾ ಸಕೃದ್ವಿದ್ಯುತ್ತಮ್" (ಬೃ. ೨-೩-೬) ಇತಿ ಚ ವಾಜಸನೇಯಕೇ। ಯಸ್ಮಾಚ್ಚೇನ್ದ್ರೋಪಸರ್ಪಣಕಾಲೇ ನ್ಯಮಿಮಿಷತ್ ನಿಮಿಷತವದಿವ ತಿರೋಭೂತಮ್। ಯಥಾಕಶ್ಚಿಚ್ಚಕ್ಷುರ್ನಿಮೇಷಣಂ ಕೃತವಾ ಇತಿ। 'ಇತಿ' 'ಇತ್' ಇತ್ಯನರ್ಥಕೌ ನಿಪಾತೌ।* ಇತಿ ಏವಮ್ ಅಧಿದೈವತಂ ದೇವತಾಯಾ ಅಧಿ ಯದ್ ದರ್ಶನಮ್ ಅಧಿದೈವತಂ ತತ್ ॥

(ಭಾಷ್ಯಾರ್ಥ)

"ತಸ್ಯೈಷ ಆದೇಶಃ" ಎಂಬಲ್ಲಿ ತಸ್ಯ ಎಂದರೆ ಆ ಬ್ರಹ್ಮಕ್ಕೆ ಏಷಃ ಎಂದರೆ ಮುಂದೆ ಹೇಳುವದು, ಆದೇಶಃ ಎಂದರೆ ಉಪಾಸನೆಯ ಉಪದೇಶವು ಎಂದರ್ಥ. ದೇವತೆಗಳಿಗೆ ಮಿಂಚಿನಂತೆ ತಟ್ಟನೆ ಪ್ರಕಾಶಮಯವಾದ ಬ್ರಹ್ಮವು ತೋರಿಕೊಂಡಿತಷ್ಟೆ; ಆ ಕಾರಣದಿಂದ ಈ ಬ್ರಹ್ಮವು ವ್ಯದ್ಯುತತ್ ಎಂದರೆ ಮಿಂಚಿತು[1] ಎಂಬುದು ಯಾವದುಂಟೋ ಅದು ಮಿಂಚಿನ ಮಿಂಚುವಿಕೆಯಂತೆ. ಆ ಎಂದರೆ ಅಂತೆ ಎಂಬ ಅರ್ಥದಲ್ಲಿ ಆ ಶಬ್ದವನ್ನುಪಯೋಗಿಸಿರುತ್ತದೆ. ದಟ್ಟವಾದ ಕತ್ತಲೆಯನ್ನು ಸೀಳಿಕೊಂಡು ಮಿಂಚು ಎಲ್ಲಾ ಕಡೆಯಲ್ಲಿಯೂ ಹೇಗೆ ಥಳಗುಟ್ಟುವದೋ ಅದರಂತೆ ಆ ಬ್ರಹ್ಮವು ದೇವತೆಗಳ ಮುಂದೆ ಎಲ್ಲಾ ಕಡೆಯಲ್ಲಿಯೂ ಥಳಗುಟ್ಟಿ ತೋರಿ

---

* ಈ ವಾಕ್ಯಗಳೆರಡೂ 'ನ್ಯಮಿಮಿಷತ್' ಎಂಬ ಮಾತಿನ ಮುಂದೆ ಮೂಲದಲ್ಲಿವೆ. ಆದರೂ ಇದ್ದರೆ ಇಲ್ಲಿಯೇ ಇರಬೇಕು.

1. ಪದಭಾಷ್ಯದಲ್ಲಿ ಈ ಅರ್ಥವು ಹೊಂದುವದಿಲ್ಲವೆಂದಿರುತ್ತದೆ.

ಕೊಂಡಿತು. ಆದ್ದರಿಂದ ಮಿಂಚಿತೋ ಎಂಬಂತೆ ಎಂದು (ಅದನ್ನು) ಉಪಾಸನೆ ಮಾಡಬೇಕು. "ಹೇಗೆ ಒಂದೇಸಲಕ್ಕೆ (ತಟ್ಟನೆ) ಮಿಂಚುವದೋ ಹಾಗೆ"[1] (ಬೃ. ೨-೩-೬) ಎಂದು ವಾಜಸನೇಯಕದಲ್ಲಿಯೂ ಹೇಳಿರುತ್ತದೆ. ಇಂದ್ರನು ಹತ್ತಿರಕ್ಕೆ ಬಂದಕಾಲದಲ್ಲಿ ನ್ಯಮಿಮಿಷತ್ ಕಣ್ಣುಮುಚ್ಚಿತೋ ಎಂಬಂತೆ ಮರೆಯಾಯಿತಷ್ಟೆ. (ಆದ್ದರಿಂದ "ಕಣ್ಣುಮುಚ್ಚಿತೋ ಎಂಬಂತೆ" ಎಂದು ಉಪಾಸನೆ ಮಾಡಬೇಕು). ಯಾವನಾದರೂ ಒಬ್ಬನು ಕಣ್ಣುಮುಚ್ಚಿದನು. ಕಣ್ಣು ಮುಚ್ಚಿದನು ಎಂಬುದು ಹೇಗೆ (ಬೇಗನೆ ಆಗುವದೋ ಹಾಗೆ).[2] ಇತಿ, ಇತ್-ಎಂಬ ಪಾಠಗಳಿಗೆ (ಹೆಚ್ಚಿಗೆ) ಅರ್ಥವಿಲ್ಲ. ಹೀಗೆ ಈ ರೀತಿಯಲ್ಲಿ ಅಧಿದೈವತವು, ದೇವತೆಯನ್ನು ಕುರಿತ ದರ್ಶನವುಂಟಲ್ಲ, ಅದೇ ಅಧಿದೈವತವು.[3]

ಅಥಾಧ್ಯಾತ್ಮಂ..... ಸಙ್ಕಲ್ಪಃ ॥ ೫ ॥

(ಭಾಷ್ಯ)

೧೫೪. ಅಥ ಅನನ್ತರಮ್ ಅಧ್ಯಾತ್ಮಮ್ | ಆತ್ಮನಃ ಅಧಿ[4] ಆತ್ಮವಿಷಯಮ್ ಅಧ್ಯಾತ್ಮಮ್ । ಉಚ್ಯತೇ ಇತಿ ವಾಕ್ಯಶೇಷಃ । ಯದೇತತ್ ಯಥೋಕ್ತಲಕ್ಷಣಂ ಬ್ರಹ್ಮ ಗಚ್ಛತೀವ ಪ್ರಾಪ್ನೋತೀವ ವಿಷಯೀಕರೋತೀವ ಇತ್ಯರ್ಥಃ । ನ ಪುನರ್ವಿಷಯೀಕರೋತಿ ಮನಃ[4] । ಅವಿಷಯತ್ವಾದ್ ಬ್ರಹ್ಮಣಃ । ಅತೋ ಮನೋ ನ ಗಚ್ಛತಿ । "ಯೇನಾಹುರ್ಮನೋ ಮತಮ್" (೧-೫) ಇತಿ ಚೋಕ್ತಮ್ । "ಗಚ್ಛತೀವ" ಇತಿ ತು ಮನಸೋಽಪಿ ಮನಸ್ತ್ವಾತ್ । ಆತ್ಮಭೂತತ್ವಾಚ್ಚ ಬ್ರಹ್ಮಣಃ | ತತ್ಸಮೀಪೇ ಮನೋ ವರ್ತತ ಇತಿ ಉಪಸ್ಮರತಿ ಅನೇನ ಮನಸ್ಯೇವ ತದ್ ಬ್ರಹ್ಮ ವಿದ್ಯಾ ಯಸ್ಮಾತ್, ತಸ್ಮಾದ್ ಬ್ರಹ್ಮ ಗಚ್ಛತೀವ ಇತ್ಯುಚ್ಯತೇ । ಅಭೀಕ್ಷ್ಣಂ ಪುನಃ ಪುನಶ್ಚ ಸಙ್ಕಲ್ಪಃ ಬ್ರಹ್ಮಪ್ರೇಷಿತಸ್ಯ ಮನಸಃ । ಅತ ಉಪಸ್ಮರಣಸಙ್ಕಲ್ಪಾದಿಭಿರ್ಲಿಙ್ಗೈಃ ಬ್ರಹ್ಮ ಮನಉದ್ಯಾತ್ಮಭೂತಮ್ ಇತ್ಯುಪಾಸ್ಯಮ್ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಇನ್ನು (ಅಧಿದೈವತವಾದ) ಬಳಿಕ ಅಧ್ಯಾತ್ಮವು ಆತ್ಮನಮೇಲೆ ಎಂದರೆ ಆತ್ಮನನ್ನು ಕುರಿತದ್ದು ಅಧ್ಯಾತ್ಮವು; (ಅದು) ಹೇಳಲ್ಪಡುವದು ಎಂದು ವಾಕ್ಯಕ್ಕೆ ಸೇರಿಸಿಕೊಳ್ಳಬೇಕು. ಯಾವ ಈ ಹಿಂದೆ ಹೇಳಿರುವ ಬ್ರಹ್ಮವನ್ನು ಪಡೆಯುವಂತೆ ಹೊಂದುವಂತೆ, ಎಂದರೆ ವಿಷಯೀಕರಿಸುವಂತೆ ಎಂದರ್ಥ. ಹಾಗಲ್ಲದೆ ಮನಸು

---

1. ಬೃ. ಭಾ. ದಲ್ಲಿ ಇದನ್ನು ಹಿರಣ್ಯಗರ್ಭನ ಅಭಿವ್ಯಕ್ತಿಗೆ ಹೋಲಿಕೆಯಾಗಿ ಕೊಟ್ಟಿದೆ.
2. ಪದಭಾಷ್ಯದಲ್ಲಿ ಕೊಟ್ಟಿರುವ ವಾಕ್ಯಾರ್ಥವನ್ನು ಹೋಲಿಸಿರಿ.
3. ಕಣ್ಣಿನ ದೃಷ್ಟಾಂತವು ಹೇಗೆ ಅಧಿದೈವತವೆಂಬುದನ್ನು ಎಲ್ಲಿಯೂ ವಿವರಿಸಿಲ್ಲ.
4. (ವಾ॥) ಪಾಠ.

(ನಿಜವಾಗಿ ಬ್ರಹ್ಮವನ್ನು) ವಿಷಯೀಕರಿಸುವದೆಂದೇ (ಹೇಳುವದಕ್ಕೆ ಬರುವದಿಲ್ಲ). ಆದ್ದರಿಂದ ಮನಸ್ಸು (ಅದನ್ನು) ಹೊಂದುವದಿಲ್ಲ. "ಯಾವದರಿಂದ ಮನಸ್ಸು ಮತವಾಗುವದು ಎಂದು ಹೇಳುವರೋ" (೧-೫) ಎಂದು ಹಿಂದೆಯೂ ಹೇಳಿರುತ್ತದೆ. "ಹೊಂದುವಂತೆ (ಇರುತ್ತದೆ)" ಎಂದು (ಇಲ್ಲಿ) ಹೇಳಿರುವದು (ಬ್ರಹ್ಮವು) ಮನಸ್ಸಿಗೂ ಮನಸ್ಸಾಗಿರುವದರಿಂದ ಅದರ ಸಮೀಪದಲ್ಲಿ ಮನಸ್ಸು ಇರುವದರಿಂದ ಈ ಮನಸ್ಸಿನಿಂದಲೇ ಜ್ಞಾನಿಯು ಆ ಬ್ರಹ್ಮವನ್ನು ನೆನಪಿಗೆ ತಂದುಕೊಳ್ಳುತ್ತಿರುತ್ತಾನೆಪ್ಪೆ; ಆದ್ದರಿಂದ (ಮನಸ್ಸು) ಬ್ರಹ್ಮವನ್ನು "ಹೊಂದುವಂತೆ (ಇರುತ್ತದೆ)" ಎಂದು ಹೇಳಿರುತ್ತದೆ. ಅಭೀಕ್ಷ್ಣವಾಗಿ ಎಂದರೆ ಮತ್ತೆಮತ್ತೆ ಬ್ರಹ್ಮದಿಂದ ಪ್ರೇಷಿತವಾದ ಮನಸ್ಸು ಸಂಕಲ್ಪವನ್ನೂ ಮಾಡುತ್ತಿರುತ್ತದೆ. ಆದ್ದರಿಂದ ಉಪಸ್ಮರಣ, ಸಂಕಲ್ಪ–ಮುಂತಾದ ಗುರುತುಗಳಿಂದ ಮನಸ್ಸೇ ಮುಂತಾದವುಗಳ ಆತ್ಮವಾಗಿರುವದು[1] ಬ್ರಹ್ಮವು ಎಂದು ಉಪಾಸನೆಮಾಡಬೇಕು ಎಂದು ಅಭಿಪ್ರಾಯ.

ತದ್ಧ ತದ್ವನಂ ನಾಮ ಸಂವಾಞ್ಛನ್ತಿ ॥ ೬ ॥

(ಭಾಷ್ಯ)

೧೫೫. ತಸ್ಯ ಚಾಧ್ಯಾತ್ಮಮ್ ಉಪಾಸನೇ ಗುಣೋ ವಿಧೀಯತೇ–ತದ್ಧ ತದ್ವನಮ್ ತದೇತದ್ ಬ್ರಹ್ಮ ತಚ್ಚ ತದ್ ವನಂ ಚ ತತ್ ಪರೋಕ್ಷಂ ವನಂ ಸಮ್ಭಜನೀಯಮ್ । ವನತೇಸ್ತತ್ಕರ್ಮಣಃ । ತಸ್ಮಾತ್ ತದ್ವನಂ ನಾಮ । ಬ್ರಹ್ಮಣೋ ಗೌಣಂ ಹೀದಂ ನಾಮ । ತಸ್ಮಾತ್, ಅನೇನ ಗುಣೇನ ತದ್ವನಮ್ ಇತಿ ಉಪಾಸಿತವ್ಯಮ್ । ಸ ಯಃ ಕಶ್ಚಿತ್ ಏತದ್ ಯಥೋಕ್ತಮ್ ಏವಂ ಯಥೋಕ್ತೇನ ಗುಣೇನ "ವನಮ್" ಇತ್ಯನೇನ ನಾಮ್ನಾ ಅಭಿಧೇಯಂ ಬ್ರಹ್ಮ ವೇದ ಉಪಾಸ್ತೇ । ತಸ್ಯ ಏತತ್ಫಲಮ್ ಉಚ್ಯತೇ । ಸರ್ವಾಣಿ ಭೂತಾನಿ ಏನಮ್ ಉಪಾಸಕಮ್ ಅಭಿಸಂವಾಞ್ಛನ್ತಿ । ಇಹಾಭಿಸಮ್ಭಜನ್ತೀ ಸೇವನ್ತೀ ಸ್ಮೇತ್ಯರ್ಥಃ । ಯಥಾ ಗುಣೋಪಾಸನಂ ಹಿ ಫಲಮ್ ॥

(ಭಾಷ್ಯಾರ್ಥ)

ಆ ಬ್ರಹ್ಮವನ್ನು ಅಧ್ಯಾತ್ಮವಾಗಿ ಉಪಾಸನೆಮಾಡುವದಕ್ಕಾಗಿ (ಬ್ರಹ್ಮಕ್ಕೆ) ಗುಣವನ್ನು ವಿಧಿಸಲಾಗುತ್ತದೆ. 'ತದ್ಧ ತದ್ವನಮ್' ಎಂದರೆ ಆ ಈ ಬ್ರಹ್ಮವು (ತದ್ವನವು) ಆದೂ ವನವೂ ಆಗಿದೆ; ಅದು ಎಂದರೆ ಪರೋಕ್ಷವು, ವನವೆಂದರೆ ಚೆನ್ನಾಗಿ ಭಜಿಸುವದಕ್ಕೆ ತಕ್ಕದ್ದು. (ಸಂಭಜನೆ ಎಂಬ) ಆ ಅರ್ಥವನ್ನು ಹೇಳುವ ವನ ಧಾತುವಿ

---

1. "ಮನೋಽಧ್ಯಾತ್ಮಭೂತಮ್" ಎಂಬ (೪।) ಪಾಠಕ್ಕೆ ಮನಸ್ಸೆಂದು ಅಧ್ಯಾತ್ಮವಾಗಿ ಉಪಾಸನೆಮಾಡಬೇಕು ಎಂಬರ್ಥವಾಗುತ್ತದೆ. ನಾವು ಕೊಟ್ಟಿರುವ (ವಾ॥) ಪಾಠವೇ ಮೇಲು.

ನಿಂದ (ಈ ಶಬ್ದರೂಪವು ಹುಟ್ಟಿರುತ್ತದೆ). ಆದ್ದರಿಂದ "ತದ್ವನಂ ನಾಮ" ಬ್ರಹ್ಮಕ್ಕೆ ಈ (ತದ್ವನವೆಂಬ) ನಾಮವು ಗುಣಕ್ಕೆ ಸಂಬಂಧಪಟ್ಟದ್ದು. ಆದ್ದರಿಂದ ಈ ಗುಣದಿಂದ (ಬ್ರಹ್ಮವನ್ನು) 'ತದ್ವನವು' ಎಂದು ಉಪಾಸನೆಮಾಡಬೇಕು. ಯಾವನೇ ಆಗಲಿ ಈ ಮೇಲೆ ಹೇಳಿದ (ಬ್ರಹ್ಮವನ್ನು) ಹೀಗೆ ಎಂದರೆ ಮೇಲೆ ಹೇಳಿದ ಗುಣದಿಂದ ಎಂದರೆ 'ವನ' ವೆಂಬ ಈ ಹೆಸರಿನಿಂದ ಕರೆಯುವದಕ್ಕೆ ಯೋಗ್ಯವಾದದ್ದು ಬ್ರಹ್ಮವು ಎಂದು ತಿಳಿಯುತ್ತಾನೋ ಎಂದರೆ ಉಪಾಸನೆಮಾಡುತ್ತಾನೋ ಅವನಿಗೆ ಈ ಫಲವನ್ನು ಹೇಳಲಾಗುತ್ತದೆ. ಸರ್ವ ಭೂತಗಳೂ ಈ ಉಪಾಸಕನನ್ನು ಅಭಿಸಂವಾಞ್ಛನ್ತಿ ಎಂದರೆ ಇಲ್ಲಿ ಅಭಿಪ್ರಾಯಪೂರ್ವಕವಾಗಿ ಚೆನ್ನಾಗಿ ಭಜಿಸುತ್ತವೆ, ಸೇವಿಸುತ್ತವೆ ಎಂದರ್ಥ ಏಕೆಂದರೆ ಯಾವ ಗುಣದಿಂದ ಉಪಾಸನೆಮಾಡುವರೋ ಅದಕ್ಕೆ ತಕ್ಕಂತೆ ಫಲವಾಗುತ್ತದೆ.

ಬ್ರಾಹ್ಮೀ ಉಪನಿಷತ್

ಉಪನಿಷದಂ ಭೋ.. ....ಉಪನಿಷದಮಬ್ರೂಮೇತಿ ॥ ೬ ॥

(ಭಾಷ್ಯ)

೧೫೬ "ಉಪನಿಷದಂ ಭೋ ಬ್ರೂಹಿ" ಇತ್ಯುಕ್ತಾಯಾಮುಪನಿಷದಿ ಶಿಷ್ಯೇಣೋಕ್ತ ಆಚಾರ್ಯ ಆಹ। "ಉಕ್ತಾ ಕಥಿತಾ ತೇ ತುಭ್ಯಮ್ ಉಪನಿಷದ್ ಆತ್ಮೋಪಾಸನಮ್, ಅಧುನಾ ಬ್ರಾಹ್ಮೀಂ ವಾವ ತೇ ತುಭ್ಯಂ ಬ್ರಹ್ಮಣೋ ಬ್ರಾಹ್ಮಣ ಜಾತೇಃ ಉಪನಿಷದಮ್ ಅಬ್ರೂಮ ವಕ್ಷ್ಯಾಮ ಇತ್ಯರ್ಥಃ। ವಕ್ಷ್ಯತಿ ಹಿ। ಬ್ರಾಹ್ಮೀ ನೋಕ್ತಾ, ಉಕ್ತಾ ತ್ವಾತ್ಮೋಪನಿಷತ್। ತಸ್ಮಾನ್ನ ಭೂತಾಭಿಪ್ರಾಯಃ "ಅಬ್ರೂಮ" ಇತ್ಯಯಂ ಶಬ್ದಃ ॥

(ಭಾಷ್ಯಾರ್ಥ)

"ಪೂಜ್ಯರೆ, ಉಪನಿಷತ್ತನ್ನು ಹೇಳಿರಿ" ಎಂದು ಹಿಂದೆ ಉಪನಿಷತ್ತನ್ನು ಹೇಳಿದ್ದರೂ ಶಿಷ್ಯನು (ಮತ್ತೆ) ಕೇಳಿದ್ದನ್ನು (ಕಂಡು) ಆಚಾರ್ಯನು ಹೇಳುತ್ತಿದ್ದಾನೆ: "ನಿನಗೆ ಉಪನಿಷತ್ತನ್ನು ಎಂದರೆ ಆತ್ಮನ ಉಪಾಸನೆಯನ್ನು ಹೇಳಿದ್ದಾಯಿತು. ಈಗ ಬ್ರಾಹ್ಮೀ ಉಪನಿಷತ್ತನ್ನು ಎಂದರೆ ಬ್ರಾಹ್ಮಣಜಾತಿಯ ಉಪನಿಷತ್ತನ್ನು ನಿನಗೆ, ನಿನಗೋಸ್ಕರ, "ಅಬ್ರೂಮ" ಎಂದರೆ ಹೇಳುವೆವು ಎಂದರ್ಥ. ಏಕೆಂದರೆ (ಇದನ್ನು) ಮುಂದೆ ಹೇಳುತ್ತಾರೆ. ಹಿಂದೆ ಬ್ರಾಹ್ಮೀ ಉಪನಿಷತ್ತನ್ನು ಹೇಳಿಲ್ಲ, ಆದರೆ ಆತ್ಮೋಪನಿಷತ್ತನ್ನು ಹೇಳಿರುತ್ತದೆ ಆದ್ದರಿಂದ "ಅಬ್ರೂಮ" ಎಂಬ ಈ ಮಾತು ಭೂತಕಾಲವನ್ನು ಹೇಳುವ ಅಭಿಪ್ರಾಯದಿಂದ ಬಂದದ್ದಲ್ಲ.[1]

---

1 ಈ ವ್ಯಾಖ್ಯಾನವು ಪದಭಾಷ್ಯಕ್ಕೆ ವಿರುದ್ಧವಾಗಿರುತ್ತದೆ. ಅಲ್ಲಿ ಮಾಡಿರುವ ಚರ್ಚೆಯನ್ನು ಇದಕ್ಕೆ ಹೋಲಿಸಿರಿ. ಬ್ರಾಹ್ಮಣಜಾತಿಯ ಉಪನಿಷತ್ತೆಂದರೆ ಅವರು ಮಾಡಬೇಕಾದ ಆತ್ಮಜ್ಞಾನಸಾಧನವೆಂದು ಟೀಕೆಯಲ್ಲಿ ಅರ್ಥವನ್ನು ಮಾಡಿದೆ.

ತಸ್ಯೈ..... ಸತ್ಯಮಾಯತನಮ್ ॥ ೮ ॥

(ಭಾಷ್ಯ)

೧೫೭. ತಸ್ಯಾ ವಕ್ಷ್ಯಮಾಣಾಯಾ ಉಪನಿಷದಃ ತಪೋ ಬ್ರಹ್ಮಚರ್ಯಾದಿ ದಮಃ ಉಪಶಮಃ ಕರ್ಮ ಅಗ್ನಿಹೋತ್ರಾದಿ ಇತ್ಯೇತಾನಿ ಪ್ರತಿಷ್ಠಾ ಆಶ್ರಯಃ। ಏತೇಷು ಹಿ ಸತ್ಸು ಬ್ರಾಹ್ಮ್ಯುಪನಿಷತ್ ಪ್ರತಿಷ್ಠಿತಾ ಭವತಿ। ವೇದಾಃ ಚತ್ವಾರಃ ಅಙ್ಗಾನಿ ಚ ಸರ್ವಾಣಿ। ಪ್ರತಿಷ್ಠಾ ಇತ್ಯನುವರ್ತತೇ। ಬ್ರಹ್ಮಾಶ್ರಯಾ ಹಿ ವಿದ್ಯಾ। ಸತ್ಯಂ ಯಥಾಭೂತವಚನಮ್ ಅಪೀಡಾಕರಮ್ ಆಯತನಂ ನಿವಾಸಃ। ಸತ್ಯವತ್ಸು ಹಿ ಸರ್ವಂ ಯಥೋಕ್ತಮ್ ಆಯತನೇ ಇವಾವಸ್ಥಿತಮ್ ॥

(ಭಾಷ್ಯಾರ್ಥ)

ಆ ಮುಂದೆ ಹೇಳುವ ಉಪನಿಷತ್ತಿಗೆ ತಪಸ್ಸು ಎಂದರೆ ಬ್ರಹ್ಮಚರ್ಯವೇ ಮುಂತಾದದ್ದು, ದಮ ಎಂದರೆ ಉಪಶಮವು, ಕರ್ಮವು ಎಂದರೆ ಅಗ್ನಿಹೋತ್ರವೇ ಮುಂತಾದದ್ದು – ಇವುಗಳು ಪ್ರತಿಷ್ಠೆಯು, ಎಂದರೆ ಆಶ್ರಯವು ಇವುಗಳು ಇದ್ದರೇ ಅಲ್ಲವೆ, ಬ್ರಾಹ್ಮೀ ಉಪನಿಷತ್ತು ನಿಂತಿರುವದು? ವೇದಗಳು ನಾಲ್ಕು, ಎಲ್ಲಾ ಅಂಗಗಳೂ 'ಪ್ರತಿಷ್ಠೆ' ಎಂಬ ಮಾತನ್ನು ಇಲ್ಲಿಯೂ ಸೇರಿಸಿಕೊಳ್ಳಬೇಕು. ಏಕೆಂದರೆ ವಿದ್ಯೆಯು ಬ್ರಹ್ಮವನ್ನು ಆಶ್ರಯಿಸಿರುತ್ತದೆ। ಸತ್ಯವೆಂದರೆ ಇರುವದನ್ನು ಮತ್ತೊಬ್ಬರಿಗೆ ತೊಂದರೆಯಾಗದಂತೆ ಹೇಳುವ ಮಾತು, ಆಯತನವು ಎಂದರೆ ನಿವಾಸವು. ಏಕೆಂದರೆ ಸತ್ಯವಂತರಲ್ಲಿಯೇ ಮೇಲೆ ಹೇಳಿದ್ದೆಲ್ಲವೂ ಆಯತನದಲ್ಲಿರುವಂತೆ ಇದ್ದುಕೊಂಡಿರುತ್ತದೆ.

ಉಪನಿಷತ್ತಿನ ಫಲ

ಯೋ ವಾ ಏತಾಮೇವಂ... .. ಪ್ರತಿಷ್ಠತಿ ಪ್ರತಿತಿಷ್ಠತಿ ॥ ೯ ॥

(ಭಾಷ್ಯ)

೧೫೮. ತಾಮ್ ಏತಾಂ ತಪಆದ್ಯಙ್ಗಾಂ ತತ್ಪ್ರತಿಷ್ಠಾಂ ಬ್ರಾಹ್ಮೀಮುಪನಿಷದಂ ಸಾಯತನಾಮ್ ಆತ್ಮಜ್ಞಾನಹೇತುಭೂತಾಮ್ ಏವಂ ಯಥೋಪದ್ ಯೋ ವೇದ ಅನುವರ್ತತೇ ಅನುತಿಷ್ಠತಿ, ತಸ್ಯ ಏತತ್ಫಲಮ್ ಆಹ–ಅಪಹತ್ಯ ಪಾಪ್ಮಾನಮ್ ಅಪಕ್ಷೀಯ ಧರ್ಮಾಧರ್ಮೌ ಇತ್ಯರ್ಥಃ। ಅನನ್ತೇಽಪಾರೇ ಅವಿದ್ಯಮಾನಾನ್ತೇ ಸ್ವರ್ಗೇ ಲೋಕೇ ಸುಖಪ್ರಾಯೇ ನಿರ್ದುಃಖಾತ್ಮನಿ ಪರೇ ಬ್ರಹ್ಮಣಿ ಜ್ಯೇಯೇ ಮಹತಿ ಸರ್ವಮಹತ್ತರೇ ಪ್ರತಿತಿಷ್ಠತಿ। ಸರ್ವವೇದಾನ್ತವೇದ್ಯಂ ಬ್ರಹ್ಮ ಆತ್ಮತ್ವೇನಾವಗಮ್ಯ ತದೇವ ಬ್ರಹ್ಮ ಪ್ರತಿಪದ್ಯತೇ ಇತ್ಯರ್ಥಃ ॥

---

1. ಈ ವಾಕ್ಯವು ಇಲ್ಲಿ ಏಕೆ ಬಂದಿರುವದೋ ತಿಳಿಯದು.

(ಭಾಷ್ಯಾರ್ಥ)

ತಪಸ್ಸೇ ಮುಂತಾದವುಗಳೆಂಬ ಅಂಗವುಳ್ಳ, ಅದನ್ನೇ ಆಶ್ರಯವಾಗಿ ಉಳ್ಳ ಆತ್ಮಜ್ಞಾನಕ್ಕೆ ಕಾರಣವಾಗಿದ್ದುಕೊಂಡಿರುವ ಅಂಥ ಈ ಬ್ರಾಹ್ಮೀ ಉಪನಿಷತ್ತನ್ನು ಯಾವನು ತಿಳಿದುಕೊಳ್ಳುತ್ತಾನೋ, ಅಂದರೆ ಅನುಸರಿಸುತ್ತಾನೋ, ಅನುಷ್ಠಾನ ಮಾಡುತ್ತಾನೋ, ಅವನಿಗೆ ಈ ಫಲವನ್ನು (ಮಂತ್ರವು) ಹೇಳುತ್ತದೆ: ಪಾಪವನ್ನು ಹೊಡೆದುಹಾಕಿ ಎಂದರೆ ಧರ್ಮಾಧರ್ಮಗಳನ್ನು ಸವೆಯಿಸಿಕೊಂಡು ಎಂದರ್ಥ. ಅನಂತವಾದ ಪಾರವಿಲ್ಲದ ಕೊನೆಯಿಲ್ಲದ ಸ್ವರ್ಗಲೋಕದಲ್ಲಿ ಎಂದರೆ ಆನಂದಮಯವಾಗಿರುವ ದುಃಖರಹಿತವಾದ ಪರಬ್ರಹ್ಮದಲ್ಲಿ ಹಿರಿಯದಾದ ದೊಡ್ಡ (ಸ್ವರ್ಗಲೋಕದಲ್ಲಿ ಎಂದರೆ) ಎಲ್ಲಕ್ಕಿಂತಲೂ ದೊಡ್ಡದಾಗಿರುವ (ಬ್ರಹ್ಮದಲ್ಲಿ) ನೆಲೆನಿಲ್ಲುವನು. ಸಕಲ ವೇದಾಂತಗಳಿಂದಲೂ ತಿಳಿಯುವ ವಿಷಯವಾದ ಬ್ರಹ್ಮವನ್ನು (ತನ್ನ) ಆತ್ಮನೆಂದು ತಿಳಿದುಕೊಂಡು ಅದೇ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ ಎಂದರ್ಥ.

ಉಪನಿಷತ್ತಿನ ಸಾರ

ಒಂದನೆಯ ಖಂಡ

೧-೨ ನಮ್ಮ ಮನಸ್ಸೂ ಇಂದ್ರಿಯಗಳೂ ತಾವುತಾವೇ ತಮ್ಮ ವಿಷಯಗಳನ್ನು ಅರಿಯುವದಿಲ್ಲ, ತಾವುತಾವೇ ತಮ್ಮ ವ್ಯಾಪಾರವನ್ನು ಮಾಡುವದಿಲ್ಲ. ತಮ್ಮ ಜೀವಾಳವಾಗಿರುವ ಆತ್ಮಚೈತನ್ಯದ ಸನ್ನಿಧಿಯ ಬಲದಿಂದಲೇ ಇವು ಕೆಲಸಮಾಡುತ್ತಿರುತ್ತವೆ. ಇವುಗಳಲ್ಲಿ ನಾನು ನನ್ನದೆಂಬ ಭಾವನೆಯನ್ನು ತೊರೆದ ಧೀರರು ಅಮೃತರಾಗುತ್ತಾರೆ.

೩-೪. ಆತ್ಮತತ್ತ್ವವನ್ನು ಇಂದ್ರಿಯಗಳಾಗಲಿ ಮನಸ್ಸಾಗಲಿ ವಿಷಯೀಕರಿಸಲಾರವು. ಆದ್ದರಿಂದ ಅದನ್ನು ಇಂಥದ್ದೆಂದು ವಿಷಯವಾಗಿಸಿಕೊಂಡು ಅರಿಯುವದಕ್ಕೆ ಆಗುವದಿಲ್ಲ; ಮತ್ತೊಬ್ಬರಿಗೆ ಇಂಥದ್ದೆಂದು ತಿಳಿಸುವದಕ್ಕೂ ಆಗುವದಿಲ್ಲ. ಆದು ಅರಿಯಲ್ಪಡತಕ್ಕದ್ದು, ಅರಿಯಲ್ಪಡಲಾಗದ್ದು—ಎಂದು ಎರಡು ಬಗೆಯಾಗಿರುವ ವಿಷಯರಾಶಿಗಿಂತಲೂ ಬೇರೆಯಾಗಿಯೇ ಇರುವದು. ಯಾವದನ್ನು ಇಂದ್ರಿಯಮನಆರಿಗಳು ಅರಿಯಲಾರವೋ ಯಾವದು ಅವುಗಳನ್ನೆಲ್ಲ ತನ್ನ ಸ್ವಭಾವವಾದ ಅರಿವಿನಿಂದ ಬೆಳಗುತ್ತಿರುವನೋ ಆ ನಮ್ಮ ಆತ್ಮನೇ ಆದು ಎಂದು ಮಾತ್ರ ಅದನ್ನು ತಿಳಿದುಕೊಳ್ಳಬಹುದು, ಇದು ಎಂದು ವಿಷಯೀಕರಿಸಬಹುದಾದದ್ದು ಯಾವದೂ ಆದಲ್ಲ. ಇಂಥ ಆತ್ಮತತ್ತ್ವವೇ ಬ್ರಹ್ಮವೆಂದು ವೇದಾಂತಿಗಳು ಹೇಳುವರು.

ಎರಡನೆಯ ಖಂಡ

೧-೪. ಬ್ರಹ್ಮವು ಜ್ಞಾನಕ್ಕೆ ವಿಷಯವಲ್ಲವಾದಕಾರಣ ಯಾರು ಇದನ್ನು ಇಂಥದ್ದೆಂದು ಅರಿತುಕೊಂಡೆವೆಂದು ಭಾವಿಸುವರೋ ಅವರು ಇದರ ಪರಮಾರ್ಥವನ್ನು ಅರಿಯರು. ಅದು ಯಾವದಕ್ಕೂ ವಿಷಯವಲ್ಲವೆಂದು ನಿಶ್ಚಯಿಸಿರುವವರೇ ಇದರ ನಿಜವನ್ನು ಬಲ್ಲರು. ಬ್ರಹ್ಮದ ಸ್ವರೂಪವು ನಮಗೆ ಹೇಗೂ ತಿಳಿಯಬರುವದೇ ಇಲ್ಲವೆಂದು ಎಣಿಸಬಾರದು. ಏಕೆಂದರೆ ಮನಸ್ಸಿನಲ್ಲಿ ಯಾವ ಯಾವ ಪ್ರತ್ಯಯವುಂಟಾದರೂ ಅದನ್ನು ಬೆಳಗುತ್ತಿರುವ ಸ್ವಯಂಪ್ರಕಾಶವಾದ ಆತ್ಮಚೈತನ್ಯರೂಪಸಾಕ್ಷಿಯಾಗಿ ಅದು ನಮಗೆ ತಿಳಿದುಬರುತ್ತಲೇ ಇರುವದು. ಹೀಗೆಂದು ಅರಿತವನಿಗೆ ಆತ್ಮನ ಸ್ವಭಾವವಾದ ಬಲವು ದಕ್ಕುವದು, ಈ ತಿಳಿವಳಿಕೆಯಿಂದ ಅಮೃತತ್ತ್ವವೂ ದೊರಕುವದು.

೫. ಮೇಲೆ ಹೇಳಿದ ರೀತಿಯಲ್ಲಿ ಬದುಕಿರುವಾಗಲೇ ಅರಿತುಕೊಂಡರೆ ಪರಮಾರ್ಥ ಸತ್ಯವು ಲಾಭವಾಗಿ ಜನ್ಮವು ಸಾರ್ಥಕವಾಗುವದು. ಇಲ್ಲದಿದ್ದರೆ ಸಂಸಾರದಲ್ಲಿ ತಪ್ಪದೆ ತೊಳಲಬೇಕಾಗುವದರಿಂದ ಜನ್ಮವು ವ್ಯರ್ಥವಾಗಿ ದೊಡ್ಡ ನಷ್ಟವಾದಂತೆ ಆಗುವದು. ಆದ್ದರಿಂದ ಜ್ಞಾನಿಗಳಾದವರು ಸರ್ವ ಪ್ರಾಣಿಗಳಿಗೂ ಆತ್ಮನಾಗಿರುವ ಈ ಬ್ರಹ್ಮವನ್ನು ಕಂಡುಕೊಂಡು ಈ ಅವಿದ್ಯಾಮಯವಾದ ಸಂಸಾರವನ್ನು ದಾಟಿ ಅಮೃತರಾಗಬೇಕು.

ಮೂರನೆಯ ಖಂಡ

೧. ಹಿಂದಕ್ಕೆ ದೇವತೆಗಳಿಗೂ ಅಸುರರಿಗೂ ಸಂಗ್ರಾಮವಾಗಲು ಬ್ರಹ್ಮವು ದೇವತೆಗಳಿಗೆ ಜಯವನ್ನು ತಂದುಕೊಟ್ಟಿತು. ಆದರೆ ದೇವತೆಗಳು ತಾವೇ ತಮ್ಮ ಶಕ್ತಿಯಿಂದಲೇ ಜಯಿಸಿ ತಮ್ಮತಮ್ಮ ಮಹಿಮೆಯನ್ನು ಪಡೆದುಕೊಂಡೆವೆಂದು ಭಾವಿಸಿಕೊಂಡರು.

೨. ಇವರ ಮಿಥ್ಯಾಭಿಮಾನವನ್ನರಿತುಕೊಂಡ ಬ್ರಹ್ಮವು ಒಂದು ಅದ್ಭುತವಾದ ಯಕ್ಷರೂಪವನ್ನು ಧರಿಸಿ ಅವರಿಗೆ ಕಾಣಿಸಿಕೊಂಡಿತು. ಆವರಿಗೆ ಯಾರಿಗೂ ಆ ರೂಪದ ನಿಜವು ತಿಳಿಯದೆಹೋಯಿತು.

೩-೬. ಆಗ ದೇವತೆಗಳು ಆದದ್ದೆಲ್ಲವನ್ನೂ ತಿಳಿಯಬಲ್ಲವನೆಂದು ಪ್ರಸಿದ್ಧನಾದ ಅಗ್ನಿಯನ್ನು ಈ ಯಕ್ಷನು ಯಾರೆಂಬುದನ್ನು ತಿಳಿದುಕೊಂಡು ಬಾರೆಂದು ಕಳುಹಿಸಿದರು. ಬ್ರಹ್ಮವು "ನೀನು ಯಾರು?" ಎಂದು ಕೇಳಲು "ಲೋಕದಲ್ಲಿರುವದನ್ನೆಲ್ಲ ಸುಡುವ ಅಗ್ನಿಯು ನಾನು, ಜಾತವೇದನು ನಾನು" ಎಂದು ಅಗ್ನಿಯು ಉತ್ತರವನ್ನು ಕೊಟ್ಟನು. "ಹಾಗಾದರೆ ಇದನ್ನು ಸುಡು" ಎಂದು ಒಂದು ಹುಲ್ಲುಕಡ್ಡಿಯನ್ನು ಬ್ರಹ್ಮವು ಅವನ ಮುಂದಿಡಲು ಅಗ್ನಿಯಿಂದ ಅದನ್ನು ಸುಡುವದು ಆಗಲಿಲ್ಲ, ಆದ್ದರಿಂದ ಅವನು ನಾಚಿಕೊಂಡು ಯಕ್ಷನ ನಿಜವನರಿಯಲಾರದೆ ಹಿಂದಿರುಗಿದನು.

೭-೧೦. ಆಮೇಲೆ ದೇವತೆಗಳು ವಾಯುವನ್ನು ಕಳುಹಿಸಿದರು. ಆವನಿಗೂ ಬ್ರಹ್ಮಕ್ಕೂ ಮೇಲಿನಂತೆಯೇ ಸಂಭಾಷಣೆಯು ನಡೆಯಿತು "ಪೃಥ್ವಿಯಲ್ಲಿರುವದನ್ನೆಲ್ಲ ಎತ್ತಬಲ್ಲೆನೆಂದು ಕೊಚ್ಚಿಕೊಂಡ ವಾಯುವಿನಿಂದ ಆ ಹುಲ್ಲುಕಡ್ಡಿಯನ್ನು ಎತ್ತುವದಾಗಲಿಲ್ಲ ವಾಯುವೂ ಯಕ್ಷನ ನಿಜವನ್ನರಿಯಲಾರದೆ ಹಿಂದಿರುಗಿದನು.

೧೧-೧೨. ಆಮೇಲೆ ದೇವತೆಗಳು ಇಂದ್ರನನ್ನು ಕಳುಹಿಸಿದರು. ಬ್ರಹ್ಮವು ಅವನಿಗೆ ದರ್ಶನವನ್ನು ಕೂಡ ಕೊಡದೆ ಅಲ್ಲಿಯೇ ಮಾಯವಾಯಿತು ಇಂದ್ರನು ಅಲ್ಲಿಯೇ ನಿಂತಿರಲು ಬ್ರಹ್ಮವಿದ್ಯಾದೇವಿಯು ಅವನಿಗೆ ಸುಂದರಿಯಾದ ಸ್ತ್ರೀಯ ರೂಪದಿಂದ ದರ್ಶನವನ್ನು ಕೊಟ್ಟಳು. ಆಕೆಯನ್ನು "ಈ ರೂಪದ ನಿಜವೇನು?" ಎಂದು ಇಂದ್ರನು ಕೇಳಿದನು.

ನಾಲ್ಕನೆಯ ಖಂಡ

೧. ಆಕೆಯು "ಇದು ಬ್ರಹ್ಮವು. ಈ ಬ್ರಹ್ಮವು ಜಯವನ್ನು ತಂದುಕೊಟ್ಟದ್ದರಿಂದಲೇ ನೀವು ಮಹಿಮಾವಂತರಾಗಿರುವಿರಿ" ಎಂದಳು. ಆಗ ಆಕೆಯ ಉಪದೇಶದಿಂದಲೇ ಇಂದ್ರನಿಗೆ ಇದು ಬ್ರಹ್ಮವು ಎಂಬ ಅರಿವಾಯಿತು.

೨-೩. ಹೀಗೆ ಅಗ್ನಿ, ವಾಯು, ಇಂದ್ರ—ಈ ಮೂವರೂ ಬ್ರಹ್ಮವನ್ನು ಕಂಡು ಮಾತನಾಡಿದವರಾದ್ದರಿಂದ ಮಿಕ್ಕ ದೇವತೆಗಳಿಗಿಂತ ಹೆಚ್ಚಿನವರಾದರು. ಅದರಲ್ಲಿಯೂ ಇಂದ್ರನು ಮೊಟ್ಟಮೊದಲು ಇದು ಬ್ರಹ್ಮವು ಎಂದು ತಿಳಿದುಕೊಂಡವನಾದಕಾರಣ ದೇವತೆಗಳಲ್ಲೆಲ್ಲ ಶ್ರೇಷ್ಠನೆನಿಸಿದನು.

೪-೫. ಆ ಬ್ರಹ್ಮಕ್ಕೆ ಉಪಮಾನವನ್ನು ಕೊಡಬೇಕಾದರೆ ಮಿಂಚು ಥಳಾರೆಂದು ಹೊಳೆದು ಮರೆಯಾಗುವಂತೆ, ಕಣ್ಣು ತೆರೆದು ತಟ್ಟನೆ ಮುಚ್ಚಿಕೊಳ್ಳುವಂತೆ ಎಂಬ ಅಧಿದೈವತ

ವಾದ ಹೋಲಿಕೆಗಳನ್ನೂ ಮನಸ್ಸಿನ ಪ್ರತ್ಯಯಗಳು ಹುಟ್ಟಿಹೋಗುವಾಗಲೆಲ್ಲ ಅಭಿವ್ಯಕ್ತವಾಗುವ ರೂಪವೆಂದು ಆಧ್ಯಾತ್ಮವಾದ ಹೋಲಿಕೆಯನ್ನೂ ಕೊಟ್ಟು ವರ್ಣಿಸಬಹುದು.

೬. ಆದು ಎಲ್ಲರಿಗೂ ಆತ್ಮಸ್ವರೂಪವಾಗಿರುವದರಿಂದ ಅದನ್ನು ಎಲ್ಲರೂ ಪ್ರೀತಿಯಿಂದ ಭಜಿಸುವರು; ಆದ್ದರಿಂದ ಆದನ್ನು "ತದ್ವನಮ್" (ಪ್ರಾಣಿಗಳಿಗೆಲ್ಲ ಪ್ರಿಯವಾಗಿರುವದು) ಎಂಬ ಹೆಸರಿನಿಂದ ಉಪಾಸನೆ ಮಾಡಬೇಕು

೭. ಪರಮಾತ್ಮನ ಉಪನಿಷತ್ತು ಇಷ್ಟೇ, ಇದಕ್ಕಿಂತ ಹೆಚ್ಚಿನದೇನೂ ಇರುವದಿಲ್ಲ. ಇದನ್ನು ಪಡೆದುಕೊಳ್ಳುವದಕ್ಕೆ ತಪಸ್ಸು, ದಮ, ಕರ್ಮ, ವೇದವೇದಾಂಗಗಳ ಜ್ಞಾನ–ಇವೆಲ್ಲವೂ ಬೇಕಾಗುವ ಸಾಧನಗಳು. ವಿಶೇಷವಾಗಿ ಸತ್ಯವೆಂಬ ಸಾಧನವು ಅವಶ್ಯವಾಗಿ ಬೇಕಾಗುವದು.

೮. ಇಲ್ಲಿ ವರ್ಣಿಸಿರುವ ಪ್ರಕಾರದಿಂದ ಬ್ರಹ್ಮವನ್ನು ಅರಿತುಕೊಂಡಾತನು ಸಕಲ ಕಲ್ಮಷಗಳನ್ನೂ ತೊಲಗಿಸಿಕೊಂಡು ಆ ಪರಬ್ರಹ್ಮದಲ್ಲಿಯೇ ನಿಲುಗಡೆಯನ್ನು ಪಡೆಯುವನು.

ಮಂತ್ರಗಳ ಅನುಕ್ರಮಣಿಕೆ

ವಿಶೇಷ :—ಇಲ್ಲಿ ಕೊಟ್ಟಿರುವ ಪುಟ ಸಂಖ್ಯೆಗಳಲ್ಲಿ ಮೊದಲನೆಯದು ಪದಭಾಷ್ಯದ್ದು ಎರಡನೆಯದು ವಾಕ್ಯಭಾಷ್ಯದ್ದು

	ಖಂಡ	ಮಂತ್ರ	ಪುಟ
ಅಥವಾಯುಮಬ್ರುವನ್ ...	೩	೭	೭೮–೧೬೦
ಅಥಾಧ್ಯಾತ್ಮಂ ಯದೇತತ್	೪	೫	೪೮–೧೬೪
ಅಥೇನ್ದ್ರಮಬ್ರುವನ್	೩	೧೧	೪೦–೧೬೦
ಅನ್ಯದೇವ ತದ್ ವಿದಿತಾದ್	೧	೪	೨೯–೧೧೬
ಇಹ ಚೇದವೇದೀದಥ	೨	೫	೬೭–೧೩೯
ಉಪನಿಷದಂ ಭೋ ಬ್ರೂಹಿ	೪	೭	೯೧–೧೬೬
ಕೇನೇಷಿತಂ ಪತತಿ ಪ್ರೇಷಿತಂ ಮನಃ .	೧	೧	೧೦–೧೦೯
ತದಭ್ಯದ್ರವತ್ ತಮಭ್ಯವದತ್	೩	೪	೭೫–೧೬೦
,, ,,	೩	೮	೭೮–೧೬೦
ತದ್ಧ ತದ್ವನಂ ನಾಮ	೪	೬	೮೯–೧೬೫
ತದ್ಧೈಷಾಂ ವಿಜಜ್ಞೌ .	೩	೨	೭೪–೧೫೮
ತಸ್ಮಾದ್ವಾ ಇನ್ದ್ರೋಽತಿತರಾಮ್	೪	೩	೮೫–೧೬೨
ತಸ್ಮಾದ್ವಾ ಏತೇ ದೇವಾಃ ...	೪	೨	೮೪–೧೬೨
ತಸ್ಮಿಗ್ಂಸ್ತ್ವಯಿ ಕಿಂ ವೀರ್ಯಮ್ .	೩	೫	೭೫–೧೬೦
,, ,, .	೩	೯	೭೮–೧೬೦
ತಸ್ಯೈ ತೃಣಂ ನಿದಧಾವೇತದ್ದಹೇತಿ	೩	೬	೭೬–೧೬೦
ತಸ್ಯೈ ತೃಣಂ ನಿದಧಾವೇತದಾದತ್ಸ್ವೇತಿ	೩	೧೦	೭೯–೧೬೦
ತಸ್ಯೈ ತಪೋ ದಮಃ ಕರ್ಮೇತಿ ...	೪	೮	೯೬–೧೬೭
ತಸ್ಯೈಷ ಆದೇಶೋ ಯದೇದ್ವಿದ್ಯುತೋ	೪	೪	೮೬–೧೬೩
ತೇಽಗ್ನಿಮಬ್ರುವನ್ ಜಾತವೇದಃ	೩	೩	೭೫–೧೬೦
ನ ತತ್ರ ಚಕ್ಷುರ್ಗಚ್ಛತಿ	೧	೩	೨೬–೧೧೫
ನಾಹಂ (ನಾಹ)ಮನ್ಯೇ ಸುವೇದೇತಿ .	೨	೨	೫೨–೧೪೯
ಪ್ರತಿಬೋಧವಿದಿತಮ್	೨	೪	೫೮–೧೩೫
ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ	೩	೧	೭೨–೧೫೭
ಯಚ್ಚಕ್ಷುಷಾ ನ ಪಶ್ಯತಿ	೧	೭	೪೧–೧೨೫

ಯಚ್ಛ್ರೋತ್ರೇಣ ನ ಶೃಣೋತಿ	..	೧	೮	೪೨–೧೫೫
ಯತ್ಪ್ರಾಣೇನ ನ ಪ್ರಾಣಿತಿ	....	೧	೯	೪೨–೧೫೫
ಯದಿ ಮನ್ಯಸೇ ಸುವೇದೇತಿ	...	೨	೧	೪೬–೧೨೭
ಯದ್ವಾಚಾನಭ್ಯುದಿತಮ್	..	೧	೫	೩೫–೧೨೩
ಯನ್ಮನಸಾ ನ ಮನುತೇ	....	೧	೬	೩೯–೧೫೫
ಯಸ್ಯಾಮತಂ ತಸ್ಯ ಮತಮ್	.	೨	೩	೫೫–೧೩೨
ಯೋ ವಾ ಏತಾಮೇಮಮ್	..	೪	೯	೯೯–೧೬೭
ಶ್ರೋತ್ರಸ್ಯ ಶ್ರೋತ್ರಂ	....	೧	೨	೧೫–೧೧೨
ಸ ತಸ್ಮಿನ್ನೇವಾಕಾಶೇ		೩	೧೨	೪೧–೧೬೧
ಸಾ ಬ್ರಹ್ಮೇತಿ ಹೋವಾಚ	....	೪	೧	೪೩–೧೬೨

ಶಬ್ದಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಸಂಸ್ಕೃತಭಾಷ್ಯದ ಯಾವ ಭಾಗದಲ್ಲಿ ಶಬ್ದವು ಬಂದಿದೆ ಎಂಬುದನ್ನು ಸೂಚಿಸುವವು.

೧. **ಅಜ್ಞಾನಮ್**—
ಆತ್ಮನನ್ನು ತಿಳಿಯದಿರುವದು, ತಪ್ಪಾಗಿ ತಿಳಿದುಕೊಂಡಿರುವದು, ೪.

೨. **ಅಧಿದೈವತಮ್**—
ದೇವತೆಗಳ ವಿಷಯವಾದದ್ದು, ೪೩, ೭೭.

೩. **ಅಧೋಗತಿಃ**—
ಪಶ್ವಾದಿಗಳಿಂದ ಹಿಡಿದು ಸ್ಥಾವರ ಪ್ರಾಣಿಗಳವರೆಗಿನ ಜನ್ಮಗಳನ್ನು ಪಡೆಯುವದು. ದಕ್ಷಿಣೋತ್ತರಮಾರ್ಗಗಳಿಗಿಂತ ಬೇರೆಯಾದ ಮೂರನೆಯ ಗತಿ-ಶಾಸ್ತ್ರೀಯ ಕರ್ಮವನ್ನಾಗಲಿ ಉಪಾಸನೆಯನ್ನಾಗಲಿ ಮಾಡದೆ ಸ್ವೇಚ್ಛೆಯಿಂದ ನಡೆಯುವವರಿಗೆ ಆಗುವ ಕೀಳುಗತಿ ೨.

೪. **ಅಧ್ಯವಸಾಯಃ**—
ಅಂತಃಕರಣದ ಬುದ್ಧಿವೃತ್ತಿಯ ವ್ಯಾಪಾರ, ನಿಶ್ಚಯಿಸುವದು, ೧೬, ೧೮, ೨೪.

೫. **ಅಧ್ಯಾತ್ಮಮ್**—
ತನ್ನೊಳಗಿನ, ಆತ್ಮವಿಷಯವಾದ, ೪೩, ೭೮.

೬. **ಅನ್ತಃಕರಣಮ್**—
ಒಳಗಿನ ಕರಣ; ಮನಸ್ಸು, ಬುದ್ಧಿ—ಎಂಬ ವೃತ್ತಿಗಳುಳ್ಳದ್ದು, ೩೮, ೪೪, ೪೬, ೧೮, ೪೨, ೭೮.

೭. **ಅಮೃತತ್ವಮ್**—
ಮರಣದ ಸಂಬಂಧವಿಲ್ಲದ ಮುಕ್ತಿ, ೨೩, ೫೮, ೫೯, ೮೫.

೮. **ಅವಿದ್ಯಾ**—
ಆತ್ಮನನ್ನು ತಿಳಿಯದೆ ಇರುವದು, ತಪ್ಪಾಗಿ ತಿಳಿದಿರುವದು, ತಪ್ಪಾಗಿ ತಿಳಿದಿರುವದು; ಅಜ್ಞಾನ, ೫೮, ೬೨.

೯. **ಅವಿದ್ಯಾಲಕ್ಷಣಮ್**—
ಅವಿದ್ಯಾಕಲ್ಪಿತವಾದ, ಅವ್ಯಾಕೃತ, ೨೭.

೧೦. **ಅವಿದ್ಯಾಕಾಮಕರ್ಮಲಕ್ಷಣಮ್**—
ಅವಿದ್ಯೆ, ಕಾಮ, ಕರ್ಮ ಎಂಬ ಸಂಸಾರ ಹೇತು, ೮೯.

೧೧. **ಅವ್ಯಾಕೃತಮ್**—
ಜಗತ್ತಿನ ಮೂಲಸ್ಥಿತಿ; ಅವಿದ್ಯೆಯಿಂದ ಕಲ್ಪಿತವಾದ ವ್ಯಾಕೃತನಾಮರೂಪಗಳ ಬೀಜ, ೨೭.

೧೨. **ಅಸಂಹತಃ**—
ಮತ್ತೊಂದರೊಡನೆ ಸೇರಿಕೊಳ್ಳದೆ ತಾನೇತಾನಾಗಿರುವ, ೧೬.

೧೩. **ಆಗಮಃ**—
ಸಂಪ್ರದಾಯಪರಂಪರೆಯಿಂದ ಬಂದಿ

ರುವ ಗುರುಗಳ ಉಪದೇಶ, ೨೯, ೪೪, ೪೬.

೧೪. ಆತ್ಮಲೋಕಃ—
ಆತ್ಮನೆಂಬ ಲೋಕ, ಹೊರಗೆ ಸಾಧನದಿಂದ ಸಂಪಾದಿಸಿಕೊಳ್ಳಬೇಕಾಗಿರುವ ಲೋಕಗಳಿಗಿಂತ ಬೇರೆಯಾದ ಆತ್ಮ, ೫.

೧೫. ಆತ್ಮವಿದ್ಯಾ—
ಪರಮಾತ್ಮಸ್ವರೂಪವನ್ನು ಅರಿತುಕೊಳ್ಳುವದು, ೫೯.

೧೬. ಆತ್ಮಮನಃಸಂಯೋಗ—
ಆತ್ಮ, ಮನಸ್ಸು—ಇವೆರಡೂ ಕೂಡಿಕೊಳ್ಳುವದು, ಇದು ಜ್ಞಾನವುಂಟಾಗುವದಕ್ಕೆ ಅವಶ್ಯವೆಂದು ಕಣಾದರ ಅನುಯಾಯಿಗಳ ಮತ, ೫೫.

೧೭. ಆಲೋಚನಮ್—
ಇಂದ್ರಿಯಗಳಿಗೂ ವಿಷಯಗಳಿಗೂ ಸಂಬಂಧವಾದಕೂಡಲೆ ಆಗುವ ಮೊದಲನೆಯ ಅರಿವು (sensation), ೧೬.

೧೮. ಉಪನಿಷತ್—
ಬ್ರಹ್ಮವಿದ್ಯೆ, ೪೧, ೪೫, ೪೬; ಉಪಾಸನೆ ೬೪, ಬ್ರಹ್ಮವಿದ್ಯೆಯನ್ನು ಎಂದರೆ ಜ್ಞಾನೋಪಾಸನೆಗಳನ್ನು ತಿಳಿಸುವ ಗ್ರಂಥ, ೧

೧೯. ಉಪಲಕ್ಷಣಮ್—
ಒಂದು ಪದಾರ್ಥವನ್ನು ಇನ್ನೂ ಕೆಲವನ್ನೂ ಗ್ರಹಿಸಬೇಕೆಂಬುದಕ್ಕೆ ಗುರುತಾಗಿ ಹೆಸರಿಸಿರುವದು, ೬೯, ೪೭.

೨೦. ಉಪಾದೇಯಮ್—
ಬೇಕೆಂದು ತೆಗೆದುಕೊಳ್ಳತಕ್ಕದ್ದು, ವ್ಯಾಕೃತ, ೨೮, ೬೯.

೨೧. ಉಪಾಧಿಃ—
ವಸ್ತುವಿನಲ್ಲಿ ತಾನು ಸೇರಿಕೊಂಡಿರದೆ ಅದರಲ್ಲಿಲ್ಲದ ಧರ್ಮವನ್ನು ಇರುವಂತೆ ತೋರಿಸಬಲ್ಲ ವಸ್ತು; ಆತ್ಮನಲ್ಲಿಲ್ಲದ ಧರ್ಮವನ್ನು ತೋರಿಸುವ ಶರೀರಾದಿಗಳು, ೨೩, ೨೩, ೪೨, ೪೩, ೫೬, ೭೮.

೨೨. ಉಪಾಸನಮ್—
ಧ್ಯಾನ ೧, ೩೦, ೭೯.

೨೩. ವಿಷಣಾ—
ಪುತ್ರ, ವಿತ್ತ, ಲೋಕಗಳ ಬಯಕೆ, ೨೩

೨೪. ಕರಣಾನಿ—
ವಾಗಾದಿ ಕರ್ಮೇಂದ್ರಿಯಗಳು ಐದು, ಚಕ್ಷುರಾದಿ ಜ್ಞಾನೇಂದ್ರಿಯಗಳು ಐದು, ಮನಸ್ಸು, ಬುದ್ಧಿ—ಎಂಬ ಹನ್ನೆರಡು ಸಾಧನಗಳು, ೧೫, ೧೬, ೬೮.

೨೫. ಕರ್ತೃತ್ವಭೋಕ್ತೃತ್ವೇ—
ಇದನ್ನು ಮಾಡಿ ಇದನ್ನು ಅನುಭವಿಸುವೆನೆಂಬ ಅಭಿಮಾನಗಳು, ೬೪.

೨೬. ಕರ್ಮ—
ಶಾಸ್ತ್ರದಲ್ಲಿ ವಿಧಿಸಿರುವ ಕೆಲಸಗಳು, ೧, ೨, ೫, ೬, ೩೦.

೨೭. ಕರ್ಮಾಂಗಸಾಮ—
ಕರ್ಮವನ್ನು ಮಾಡುವಾಗ ಹೇಳಬೇಕಾದ ಸಾಮವು. ಇದರ ಉಪಾಸನೆಯನ್ನು ಅಂಗಾವಬದ್ಧ ಉಪಾಸನೆಯೆನ್ನುವರು, ೧.

೨೮. ಕಾಮಕರ್ಮಪ್ರವೃತ್ತಿಕಾರಣಮ್—
ಕಾಮವೂ ಕರ್ಮವೂ ಉಂಟಾಗುವದಕ್ಕೆ ಕಾರಣವಾದ ಅಜ್ಞಾನ, ೪.

೨೯. ಕಾರ್ಯಕರಣಸಙ್ಘಾತಃ—
ದೇಹ, ಇಂದ್ರಿಯಗಳು—ಇವುಗಳ ಸಮೂಹ, ೧೩.

೩೦. **ಕೂಟಸ್ಥಮ್**—
ಯಾವ ವಿಕಾರವೂ ಇಲ್ಲದೆ ಇದ್ದಂತೆ ಇರುವ, ೧೨.

೩೧. **ಕೇವಲತರ್ಕಃ**—
ಅನುಭವದ ಆಧಾರವಿಲ್ಲದ ಅವೈದಿಕ ತರ್ಕ, ಬರಿಯ ಊಹೆ, ೮; ವೇದಕ್ಕೆ ಹೊಂದುವ ತರ್ಕವು ಅವಶ್ಯ, ೪೪.

೩೨. **ಕ್ರಿಯಾಕಾರಕಫಲಭೇದ ಬುದ್ಧಿಃ**—
ನಾನು ಕರ್ತನು, ಇಂಥ ಸಾಧನಗಳಿಂದ ಈ ಕರ್ಮವನ್ನು ಮಾಡಿ ಇಂಥ ಫಲವನ್ನು ಪಡೆಯುವೆನು ಎಂದು ಕ್ರಿಯೆ, ಕಾರಕ, ಫಲ—ಇವುಗಳನ್ನು ಬೇರೆಬೇರೆಯಾಗಿ ಕಾಣುವ ಬುದ್ಧಿ, ೬, ೪೪.

೩೩. **ಚಿಚ್ಛಕ್ತಿಸ್ವರೂಪಮಾತ್ರಃ**—
ಜ್ಞಾನಶಕ್ತಿಯೇ ತನ್ನ ಸ್ವರೂಪವಾಗಿ ಉಳ್ಳ ಆತ್ಮನು, ಜ್ಞಾನವುಳ್ಳವನಲ್ಲ, ೫೨.

೩೪. **ಚಿನ್ಮಾತ್ರಜ್ಯೋತಿಃ**—
ಬರಿಯ ಜ್ಞಾನವೆಂಬ ಬೆಳಕಿನ ಸ್ವರೂಪದ ಆತ್ಮ, ೨೯.

೩೫. **ಚೈತನ್ಯಾತ್ಮಜ್ಯೋತಿಃ**—
ಚೈತನ್ಯ ಸ್ವರೂಪದ ಬೆಳಕು, ಆತ್ಮನ ಜ್ಞಾನಸ್ವರೂಪ, ೩೬, ೩೮.

೩೬. **ಚೈತನ್ಯಮಾತ್ರಸತ್ತಾಕಮ್**—
ಜ್ಞಾನವೊಂದೇ ಇರವಾಗಿ ಉಳ್ಳ ಆತ್ಮ, ವಾಗಾದಿಗಳ ನಿಜವಾದ ಸ್ವರೂಪವು ಇದೇ, ೩೧.

೩೭. **ಜಾತಿಗುಣಕ್ರಿಯಾವಿಶೇಷಜ್ಞಾನಿ**—
ವಾಕ್ಯನಿಂದ ಹೇಳುವದಕ್ಕೆ ವಸ್ತುವಿನಲ್ಲಿ ನಿಮಿತ್ತವಾಗಿರಬೇಕಾದ ವಿಕಲ್ಪಗಳು, ೨೫.

೩೮. **ಜ್ಞಾನಮ್**—
ಉಪಾಸನೆ, ೨, ೫; ಆತ್ಮನನ್ನು ಅರಿತುಕೊಳ್ಳುವದು, ೪, ೬, ೨೬.

೩೯. **ತರ್ಕಃ**—
ಸುಮ್ಮನೆ ಊಹಿಸುವುದು ೮

೪೦. **ತಾರ್ಕಿಕಾಃ**—
ಬರಿಯ ತರ್ಕವನ್ನೇ ನಂಬಿರುವ ವಾದಿಗಳು, ೩೦.

೪೧. **ದಕ್ಷಿಣಮಾರ್ಗಃ**—
ಸಕಾಮಿಗಳು ಕರ್ಮವನ್ನು ಮಾಡಿ ಫಲವನ್ನು ಪಡೆಯುವದಕ್ಕೆ ಹೋಗುವ ಧೂಮಾದಿಮಾರ್ಗ.. ಇದರಲ್ಲಿ ಹೋದವರು ಸಂಸಾರಕ್ಕೆ ಮರಳುವರು, ೨.

೪೨. **ದೃಷ್ಟಾದೃಷ್ಟಾನಿ**—
ಈ ಲೋಕದಲ್ಲಿ ಕಾಣಬರುವ, ಮತ್ತು ಪರಲೋಕದ್ದಾದ್ದರಿಂದ ಕಾಣದಿರುವ ಶಾಸ್ತ್ರಮಾತ್ರದಿಂದ ತಿಳಿಯಬರುವ ಫಲಗಳು, ೭.

೪೩. **ದ್ರವ್ಯಮ್**—
ಗುಣಕ್ಕೂ ಕ್ರಿಯೆಗೂ ಆಧಾರವಾಗಿರುವ ವಸ್ತುರೂಪ, ೫೪, ೫೫.

೪೪. **ನಿರುಪಾಧಿಕಮ್**—
ಯಾವ ಉಪಾಧಿಯೂ ಇಲ್ಲದ, ೭೮.

೪೫. **ನಿರ್ವಿಶೇಷಮ್**—
ಇಂಥದ್ದೆಂದು ಹೇಳುವದಕ್ಕೆ ಬರುವ ವಿಶೇಷಗಳು ಯಾವವೂ ಇಲ್ಲದೆ, ೩೩, ೫೩, ೫೫.

೪೬. **ಪರಮಾತ್ಮಾ**—
ನಿಜವಾಗಿಯೂ ಆತ್ಮನಾಗಿರುವವನು, ಅವಿದ್ಯೆಯಿಂದ ಕಲ್ಪಿತವಾಗಿರುವ ಆತ್ಮಗಳಿಗೆಲ್ಲಕ್ಕೂ ಹೆಚ್ಚಿನವನು.

೪೭. **ಪರಾರ್ಥಃ**—
ಮತ್ತೊಂದರ ಪ್ರಯೋಜನಕ್ಕಾಗಿರತಕ್ಕದ್ದು, ೧೬.

೪೮. **ಪರಿಸಂಖ್ಯಾನ**—
ಅಲ್ಲಗಳೆಯುವದು, ೬೩.

೪೯. **ಪಾರಿವ್ರಾಜ್ಯಮ್**—
ಜ್ಞಾನಕ್ಕಾಗಿ ಸಂಪೂರ್ಣವಾಗಿಯೂ ಕರ್ಮವನ್ನು ಬಿಡುವ ಸಂನ್ಯಾಸ, ೫.

೫೦. **ಪುರುಷತನ್ತ್ರಮ್**—
ಕರ್ತೃವಿಗೆ ಅಧೀನವಾಗಿರುವದು, ೬

೫೧. **ಪ್ರತ್ಯಗಾತ್ಮಾ**—
ಒಳಗಿನ ಆತ್ಮ, ದೇಹೇಂದ್ರಿಯಗಳೇ ಮುಂತಾದವುಗಳೆಲ್ಲಕ್ಕೂ ಸಾಕ್ಷಿಯಾಗಿರುವ ಆತ್ಮ, ೩, ೬, ೭, ೯, ೫೮, ೬೬, ೭೮, ೮೪.

೫೨. **ಪ್ರತ್ಯಗಾತ್ಮಬ್ರಹ್ಮ**—
ನಮ್ಮೆಲ್ಲರ ತೀರ ಒಳಗಿನ ಆತ್ಮನೇ ಆಗಿರುವ ಪರಮಾರ್ಥ, ೪, ೬.

೫೩. **ಪ್ರತ್ಯಯಃ**—
ಮನಸ್ಸಿನ ವೃತ್ತಿಗಳ ರೂಪವಾದ ಜ್ಞಾನ, ೫೨, ೫೩.

೫೪. **ಪ್ರಾಣಃ**—
ಇಂದ್ರಿಯಗಳ ವ್ಯಾಪಾರಕ್ಕೆಲ್ಲ ಕಾರಣವಾಗಿರುವ ಪ್ರಾಣ, ಘ್ರಾಣೇಂದ್ರಿಯ, ೧೪, ೧೯, ೩೮.

೫೫. **ಬುದ್ಧಿಃ**—
ನಿಶ್ಚಯಮಾಡುವ ಅಂತಃಕರಣವೃತ್ತಿ, ಅಂತಃಕರಣ, ೧೮, ೫೬.

೫೬. **ಬ್ರಹ್ಮ**—
ಎಲ್ಲಕ್ಕೂ ದೊಡ್ಡದು, ಎಲ್ಲರ ಆತ್ಮನಾಗಿರುವ ಪರಮಾರ್ಥ, ೩೦, ೩೩, ೩೪, ೩೫, ೩೮, ೩೯, ೪೦, ೪೧, ೪೩, ೪೫, ೪೦, ೫೦, ೬೩, ೭೦, ೭೩, ೭೪, ೭೫, ೭೬, ೭೯.

೫೭. **ಬ್ರಹ್ಮನಿಷ್ಠಃ**—
ಬ್ರಹ್ಮದಲ್ಲಿಯೇ ನೆಲೆನಿಂತಿರುವನು, ೯.

೫೮. **ಬ್ರಹ್ಮವಿತ್ಸಮ್ಪ್ರದಾಯಃ**—
ಬ್ರಹ್ಮವನ್ನು ಬಲ್ಲವರು ತಮ್ಮ ಶಿಷ್ಯರಿಗೆ ತಿಳಿಸುತ್ತಾ ಬಂದಿರುವದು, ೪೦.

೫೯. **ಬ್ರಹ್ಮವಿದ್ಯಾ**—
ಬ್ರಹ್ಮವನ್ನು ಅರಿತುಕೊಳ್ಳುವದು, ೪೬, ೬೪, ೬೪, ೬೯.

೬೦. **ಭೂಮಾ**—
ಎಲ್ಲಕ್ಕೂ ಹೆಚ್ಚಿನ ಬ್ರಹ್ಮ, ೬೨, ೪೩

೬೧. **ಮನಃ**—
ಸಂಕಲ್ಪಿಸುವ ಅಂತಃಕರಣ ವೃತ್ತಿ, ಅಂತಃಕರಣ, ೧೦, ೧೩, ೧೫, ೧೮, ೨೫, ೩೪, ೫೫.

೬೨ **ಮಿಥ್ಯಾಜ್ಞಾನಮ್**—
ತಪ್ಪು ತಿಳಿವಳಿಕೆ, ೬೮.

೬೩. **ಮಿಥ್ಯಾಭಿಮಾನಃ**—
ಒಣಹೆಮ್ಮೆ, ತಪ್ಪು ತಿಳಿವಳಿಕೆ, ೬೭, ೬೮.

೬೪. **ಲೋಕಃ**—
ಭೋಗಸ್ಥಾನ, ೫, ನಾನು ನನ್ನದೆಂಬ ಮಿಥ್ಯಾಭಿಮಾನ, ಶರೀರ, ೨೩, ೬೨.

೬೫. **ಲೋಕತ್ರಯಮ್**—
ಮನುಷ್ಯಲೋಕ, ಪಿತೃಲೋಕ, ದೇವಲೋಕ—ಎಂಬ ಮೂರು ಲೋಕಗಳು, ೫.

೬೬. **ವಿದ್ಯಾ** —
ಉಪಾಸನ, ೫; ಜ್ಞಾನ, ೪೬, ೬೪, ೬೪, ೬೯.

೬೭. **ವಿಪರ್ಯಯಃ**—
ತಪ್ಪು ತಿಳಿವು, ೪೬.

೬೮. **ವಿಶುದ್ಧಸತ್ತ್ವಃ**—
ಅಂತಃಕರಣ ಶುದ್ಧಿಯಾದವನು, ೧.

೬೯. **ವೃತ್ತಿಃ**—
ಮನಸ್ಸಿನ ಅಥವಾ ಪ್ರಾಣದ ವ್ಯಾಪಾರ, ೩೦, ೩೪, ೩೫, ೩೬, ೩೮,

೭೦. **ವ್ಯಾಕೃತಮ್**—
ಬಿಡಿಬಿಡಿಯಾದ ನಾಮರೂಪಗಳಿಂದ ತೋರುವ ಜಗತ್ತು, ೨೭.

೭೧. **ವ್ಯಾಕೃತಬೀಜಮ್**—
ವ್ಯಾಕೃತಜಗತ್ತಿನ ಕಾರಣ, ಅವ್ಯಾಕೃತ, ೨೭.

೭೨. **ಶೇಷಃ**—
ಕರ್ಮಕ್ಕೆ ಅಥವಾ ಉಪಾಸನೆಗೆ ಅಂಗವಾದದ್ದು, ೬೩.

೭೩. **ಶ್ರೌತಕರ್ಮ**—
ಶ್ರುತಿಯಲ್ಲಿ ಹೇಳಿರುವ ಅಗ್ನಿಹೋತ್ರಾದಿಕರ್ಮಗಳು, ೨.

೭೪. **ಸಂಯೋಗಃ**—
ಬೇರೆಬೇರೆಯಾಗಿರುವ ಎರಡು ವಸ್ತುಗಳು ಸೇರಿಕೊಳ್ಳುವ ಸಂಬಂಧ, ೫೫.

೭೫. **ಸಂಸಾರಬೀಜಮ್**—
ಸಂಸಾರವೆಂದರೆ ಹುಟ್ಟಿ ಸತ್ತು ಹುಟ್ಟುತ್ತಾ ಸುಖದುಃಖಗಳನ್ನು ಅನುಭವಿಸುತ್ತಿರುವದು; ಸಂಸಾರ ಬೀಜವೆಂದರೆ ಅದಕ್ಕೆ ಕಾರಣವಾದ ಅಜ್ಞಾನ, ೪, ೬೯.

೭೬. **ಸಂಸ್ಕಾರಃ**—
ಚಿತ್ತವು ಶುದ್ಧಿಯೋಗಲು ಅದರಲ್ಲುಂಟಾಗುವ ಒಂದುಬಗೆಯ ಯೋಗ್ಯತೆ, ೩.

೭೭. **ಸಂಹತಃ**—
ಒಂದಕ್ಕೊಂದು ಸೇರಿಕೊಂಡಿರುವದು; ಉದಾಪರಣೆಗೆ ಕಂಬ, ತೊಲೆಗಳು ಮುಂತಾಗಿ ಸೇರಿಕೊಂಡು ಮನೆಯಾಗಿರುವವು. ಸಂಹತವಾದವುಗಳು ಪದಾರ್ಥವಾಗಿರುತ್ತವೆ, ೧೬.

೭೮. **ಸಙ್ಕಲ್ಪಃ**—
ಅಂತಃಕರಣದ ಮನೋವೃತ್ತಿ, ಹೀಗೆ ಮಾಡುವೆನೆಂದು ಯೋಚಿಸಿಕೊಳ್ಳುವದು, ೧೩, ೧೮, ೨೪.

೭೯. **ಸಜ್ಘಾತಃ**—
ಒಂದಕ್ಕೊಂದು ಕೂಡಿ ಆಗಿರುವ ಒಟ್ಟು, ೧೨.

೮೦. **ಸತ್ತ್ವಶುದ್ಧಿಃ**—
ಅಂತಃಕರಣದ ರಾಗಾದಿ ಮಲಗಳು ಹೋಗುವದು, ೨.

೮೧. **ಸದಸದ್ವಾದಿನಃ**—
ಸತ್ಕಾರ್ಯವಾದಿಗಳಾದ ಸಾಂಖ್ಯರು ಮತ್ತು ಅಸತ್ಕಾರ್ಯವಾದಿಗಳಾದ ವೈಶೇಷಿಕರು ೪೧.

೮೨. **ಸಮವಾಯಃ**—
ಗುಣವು ಗುಣಿಯಲ್ಲಿಯೂ, ಜಾತಿಯು ವ್ಯಕ್ತಿಯಲ್ಲಿಯೂ ಕ್ರಿಯೆಯು ಕ್ರಿಯಾವಂತವಾದ ದ್ರವ್ಯದಲ್ಲಿಯೂ ಸೇರಿಕೊಂಡಿರುವ ನಿತ್ಯಸಂಬಂಧ

೮೩. **ಸಮ್ಯಗ್ದರ್ಶನಮ್**—
ಸರಿಯಾದ ತಿಳಿವಳಿಕೆ, ೫೦.

೮೪. **ಸರ್ವಾತ್ಮಾ**—
ಎಲ್ಲರ ಆತ್ಮನಾದ ಬ್ರಹ್ಮ, ೨೯.

೮೫. **ಸರ್ವಾತ್ಮೈಕತ್ವಮ್**—
ಸರ್ವರ ಆತ್ಮನೂ ನನ್ನ ಆತ್ಮನೇ ಎಂಬ ಅದ್ವೈತಭಾವ, ೬೨.

೮೬. **ಸರ್ವಾನ್ತರಃ**—
ದೇಹಾದಿಗಳೆಲ್ಲಕ್ಕೂ ಒಳಗಿರುವ ಮುಖ್ಯಾತ್ಮ, ೧೭, ೨೮.

೮೭. **ಸಹಕಾರಿಸಾಧನಮ್**—
ಒಂದು ಸಾಧನದ ಜೊತೆಯಲ್ಲಿ ಕೆಲಸಮಾಡಿ ಒಂದೇ ಕಾರ್ಯಕ್ಕೆ ನೆರವಾಗುವ ಸಾಧನ, ೬೩, ೬೪.

೮೮. **ಸಾಧ್ಯಸಾಧನಸಮ್ಬನ್ಧಃ**—
ಪಾತ್ರ, ಮಾನುಷವಿತ್ತ, ದೈವವಿತ್ತ

ಎಂಬ ಸಾಧನಗಳು ಅವುಗಳಿಂದ ಪಡೆಯಬೇಕಾದ ಲೋಕತ್ರಯವೆಂಬ ಸಾಧ್ಯ—ಇವುಗಳ ಸಂಬಂಧ, ೩.

೮೯. ಸ್ಮಾರ್ತಕರ್ಮ—
ಸ್ಮೃತ್ಯುಕ್ತವಾದ ದೇವಯಜ್ಞವೇ ಮುಂತಾದ ಕರ್ಮಗಳು, ೨.

೯೦. ಸ್ವರ್ಗ:—
ಸ್ವರ್ಗಲೋಕ ; ಆನಂದರೂಪವಾದ ಬ್ರಹ್ಮ, ೮೯.

೯೧. ಸ್ವಭಾವದೋಷ:—
ಚಿತ್ತದಲ್ಲಿ ಸಹಜವಾಗಿ ಕಾಣುವ ದೋಷ, ೪೧.

೯೨. ಸ್ವಾಭಾವಿಕ:—
ಅವಿಚಾರಸ್ವಭಾವದಿಂದ ಆದ, ೨ ; ಸ್ವಭಾವದಿಂದಲೇ ಸಿದ್ಧವಾಗಿರುವ, ೫.

೯೩. ಹೇಯಮ್—
ಬೇಡವೆಂದು ಬಿಡತಕ್ಕ, ಅವ್ಯಾಕೃತ, ೨೮.



ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ

ಸಂಖ್ಯೆ ೨೦

ಶ್ರೀ ಶಾಂಕರಭಾಷ್ಯಸಮೇತ

ಕಾ ಠ ಕೋ ಪ ನಿ ಷ ತ್ತು

ಉಪನಿಷತ್ತಿನ ಮತ್ತು ಭಾಷ್ಯದ ಸಂಸ್ಕೃತಮೂಲ, ಅನುವಾದ, ಟಿಪ್ಪಣಿ, ಸಾರ ಮುಂತಾದವುಗಳೊಡನೆ

ಬರೆದವರು :

ಅಧ್ಯಾತ್ಮಗ್ರಂಥಾವಳಿಯ ಸಂಪಾದಕ

ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮ

ಎರಡನೆಯ ಸಂಸ್ಕರಣ

ಅಧ್ಯಾತ್ಮಗ್ರಂಥಾವಳಿ ಕ್ರಮಾಂಕ ೩

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
೧೯೪೫

ಮೊದಲನೆಯ ಸಂಸ್ಕರಣ . ೧೯೩೦
ಎರಡನೆಯ ಸಂಸ್ಕರಣ: ೧೯೪೫
(೧,೦೦೦ ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಮುದ್ರಣಕಾರರು:
ಜಿ. ಎಚ್. ರಾಮರಾವ್, ಬಿ.ಎಸ್‌ಸಿ.
ಮೈಸೂರು ಪ್ರಿಂಟಿಂಗ್ ಆಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಹೊಸ ಸಂಸ್ಕರಣದ ಮೊದಲ ಮಾತು

ಈ ಗ್ರಂಥವು ಈಗ ಸುಮಾರು ಹದಿನೈದು ವರ್ಷಗಳ ಹಿಂದೆ ಅಚ್ಚಾಗಿತ್ತು. ಈ ಸಲಕ್ಕೆ ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲೆಗೆ ಸೇರಿಸುವದಕ್ಕೆ ಅನುಕೂಲಿಸುವಂತೆ ಇದನ್ನು ಸಂಪೂರ್ಣವಾಗಿ ಪರಿಷ್ಕರಿಸಿರುತ್ತೇನೆ.

ಈಶಕೇನಗಳಂತೆಯೇ ಸಂಸ್ಕೃತ ಮೂಲವನ್ನು ಸೇರಿಸಿಕೊಂಡಿರುವದೂ, ಅನುವಾದ, ಟಪ್ಪಣಿ, ಸಾರ–ಇವುಗಳನ್ನು ಅವಶ್ಯಕಂಡಂತೆ ಮಾರ್ಪಡಿಸಿಕೊಂಡಿರುವದೂ ಶಬ್ದಾನುಕ್ರಮಣಿಕೆಯನ್ನು ಹಿಗ್ಗಿಸಿ ಆಯಾ ಶಬ್ದವು ಸಂತ್ಕೃತಭಾಷ್ಯದಲ್ಲಿ ಬಂದಿರುವ ಸ್ಥಲವನ್ನು ನಿರ್ದೇಶಿಸಿರುವದೂ ಈ ಸಂಸ್ಕರಣದ ವಿಶೇಷಗಳು. ಪೀಠಿಕೆಯನ್ನು ಪರಿಷ್ಕರಿಸಿ ಸಂಪೂರ್ಣವಾಗಿ ಹೊಸದಾಗಿಯೇ ಬರೆದಿರುತ್ತೇನೆ.

ಈ ಉಪನಿಷತ್ತನ್ನು **ಮೊದಲನೆಯ ಸಲ ಅಚ್ಚು ಮಾಡಿಸುವದಕ್ಕೆ ಒಬ್ಬ ಮಹನೀಯರು ಧನಸಹಾಯವನ್ನು ಮಾಡಿದ್ದರು.** ಅವರು ತಮ್ಮ ಹೆಸರನ್ನು ಪ್ರಕಟಿಸುವದಕ್ಕೆ ಈಗಲೂ ಅನುಮತಿಯನ್ನು ಕೊಟ್ಟಿಲ್ಲವಾದ್ದರಿಂದ ಅವರ ಗುಪ್ತ ದಾನವನ್ನು ಇಷ್ಟು ಮಾತುಗಳಿಂದಲೇ ಕೃತಜ್ಞತೆಯಿಂದ ಉಲ್ಲೇಖಿಸಿ ಅವರಿಗೂ ಅವರ ವಂಶಿಕರಿಗೂ ಇಷ್ಟಾರ್ಥಗಳನ್ನು ನೀಡುವಮೂಲಕ ಅನುಗ್ರಹಿಸಬೇಕೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ. ಅವರಂಥ ಮಹಾಶಯರು ಮೊಟ್ಟಮೊದಲು ಮಾಡಿದ ಪ್ರೇಮಪೂರ್ವಕವಾದ ಪ್ರೋತ್ಸಾಹವೇ ಈಗ ನಮ್ಮನ್ನಾಳುವ ಶ್ರೀ ಮಹಾಪ್ರಭುಗಳವರ ಕೃಪಾಕಟಾಕ್ಷಾಂಕುರಕ್ಕೆ ಬೀಜವಾಗಿರಬೇಕೆಂದು ನನ್ನ ಹೃದಯವು ನುಡಿಯುತ್ತಿದೆ.

ಗ್ರಂಥವು ಮುದ್ರಣಶಾಲೆಯಿಂದ ಹೊರಕ್ಕೆ ಬರುವ ಕಾಲದಲ್ಲಿ ಬಗೆಬಗೆಯಿಂದ ಸಹಾಯಮಾಡಿರುವ ವೇದಾಂತಶಿರೋಮಣೀತ್ಯಾದಿಬಿರುದಾಂಕಿತರಾದ **ಬ್ರ॥ ಶ್ರೀ॥ ಎಸ್. ವಿತಲಶಾಸ್ತ್ರಿಗಳವರಿಗೆ** ನಾನು ಕೃತಜ್ಞನಾಗಿರುತ್ತೇನೆ.

ತಾ॥ 26–7–45. **ಯ. ಸುಬ್ರಹ್ಮಣ್ಯಶರ್ಮ.**

ಪೀಠಿಕೆ

ಕಠೋಪನಿಷತ್ತು ಕೃಷ್ಣಯಜುರ್ವೇದಕ್ಕೆ ಸೇರಿದ್ದೆಂದು ಪ್ರಸಿದ್ಧಿ. ಆದರೆ ಉಪನಿಷತ್ತಿಗೂ ಹಿಂದಿನ ಗ್ರಂಥಕ್ಕೂ ಸಂಬಂಧವನ್ನು ಭಾಷ್ಯದಲ್ಲಿ ತಿಳಿಸಿರುವದಿಲ್ಲವಾದ್ದರಿಂದ ಈ ಉಪನಿಷತ್ತನ್ನು ಯಾವ ವೇದದ ಭಾಗವೆಂತ ಶಂಕರಭಗವತ್ಪಾದರವರು ಎಣಿಸಿದ್ದರೆಂಬುದು ಸ್ಪಷ್ಟವಾಗಿ ತಿಳಿಯುವಂತಿಲ್ಲ.

ನಚಿಕೇತನ ಕಥೆ

ಉಪನಿಷತ್ತಿನಲ್ಲಿ ನಚಿಕೇತನೆಂಬ ಬ್ರಹ್ಮಚಾರಿಗೆ ಮೃತ್ಯುದೇವತೆಯು ತತ್ತ್ವವನ್ನು ಉಪದೇಶಿಸಿದಂತೆ ಕಥೆ ಇದೆಯಷ್ಟೆ. ಈ ಕಥೆಯ ಅಂಶವು **ಮಹಾಭಾರತ** ದಲ್ಲಿಯೂ (ಅನುಶಾಸನ ೧೦೬) **ತೈತ್ತಿರೀಯಬ್ರಾಹ್ಮಣ**ದಲ್ಲಿಯೂ (೩-೧-೮) ಕಂಡು ಬರುತ್ತದೆ. ಮಹಾಭಾರತದ ಕಥೆಗೆ ಈ ಉಪನಿಷತ್ತೇ ಆಧಾರವಾಗಿದ್ದರೂ ಇರಬಹುದು ಆದರೆ ಅಲ್ಲಿ ಗೋದಾನವನ್ನು ಹೊಗಳುವದಿಷ್ಟೇ ಉದ್ದೇಶವಾಗಿರುತ್ತದೆ. ಆಜ್ಞೆಯನ್ನು ಉಲ್ಲಂಘಿಸಿದನೆಂಬ ಕಾರಣದಿಂದ ತಂದೆಯು "ಯಮನನ್ನು ನೋಡು" ಎಂದು ಮಗನನ್ನು ಶಪಿಸಿದಂತೆಯೂ ಯಮನು ನಚಿಕೇತನನ್ನು ಸತ್ಕರಿಸಿ ಅವನಿಗೆ ಪುಣ್ಯವಂತರ ಲೋಕಗಳನ್ನು ತೋರಿಸಿದಂತೆಯೂ ಅಲ್ಲಿ ಕಥೆಯಿದೆ. ಗೋದಾನವನ್ನು ಮಾಡಿದವರಿಗೆ ಆಗುವ ಉತ್ತಮಲೋಕಗಳನ್ನು ತಿಳಿದು ನಚಿಕೇತನು ತಂದೆಗೆ ಆ ಸಮಾಚಾರವನ್ನೆಲ್ಲ ತಿಳಿಸುತ್ತಾನೆ. ತೈತ್ತಿರೀಯಬ್ರಾಹ್ಮಣದಲ್ಲಿ ಉಪನಿಷತ್ತಿನಂತೆಯೇ ಕಥಾಸಂವಿಧಾನವಿದೆ. ಆದರೆ ಅಲ್ಲಿ ನಚಿಕೇತನು ಕೇಳಿಕೊಂಡ ವರಗಳು ಈ ಮೂರು: (೧) ತಾನು ತಂದೆಯ ಬಳಿಗೆ ಜೀವಂತನಾಗಿ ಹಿಂತಿರುಗಬೇಕು, (೨) ಇಷ್ಟಾಪೂರ್ತಗಳು ಅಕ್ಷಯವಾಗುವ ವಿಧಾನವನ್ನು ತನಗೆ ತಿಳಿಸಬೇಕು, (೩) ಮೃತ್ಯುವನ್ನು ಜಯಿಸುವ ವಿಧವನ್ನು ತಿಳಿಸಬೇಕು. ಕೊನೆಯ ಎರಡು ವರಗಳಿಗೂ ನಾಚಿಕೇತಾಗ್ನಿಯ ಚಯನವನ್ನೇ ಮೃತ್ಯುವು ಉಪದೇಶಿಸಿರುತ್ತಾನೆ. ಆ ಚಯನದಿಂದ ಅನೇಕ ದೃಷ್ಟಫಲಗಳೂ ಸ್ವರ್ಗಲೋಕಪ್ರಾಪ್ತಿಯೂ ಆದಿತ್ಯಸಾಯುಜ್ಯವೂ ಆಗುವದೆಂದು ಆ ಬ್ರಾಹ್ಮಣದಲ್ಲಿ ಹೇಳಿರುತ್ತದೆ. "ಯೋಽಗ್ನಿಂ ನಾಚಿಕೇತಂ ಚಿನುತೇ। ಯ ಉ ಚೈನಮೇವಂ ವೇದ" ಎಂಬ ವಾಕ್ಯವು ಅಲ್ಲಿ ಹಲವು ಬಾರಿ ಬಂದಿರುತ್ತದೆಯಾದ್ದರಿಂದ ಉಪಾಸನೆಯಲ್ಲಿ ಅನುವಾದಮಾಡಿಕೊಂಡಿರುವ ಕರ್ಮೋಪಾಸನೆಗಳ

ಸಮುಚ್ಚಯಾನುಷ್ಠಾನದ ಫಲದ ವಿಷಯವನ್ನು ತಿಳಿಸುವ ಕಥೆಯ ಪೂರ್ವರೂಪ ವಿದೆಂದು ನಾವು ಇಟ್ಟುಕೊಳ್ಳಬಹುದಾಗಿದೆ. ತೈತ್ತಿರೀಯಬ್ರಾಹ್ಮಣದ ಮೂರನೆಯ ಅಷ್ಟಕದ ಹತ್ತನೆಯ ಪ್ರಶ್ನೆಯಿಂದ ಮುಂದಕ್ಕಿರುವ ಭಾಗವನ್ನು 'ಕಾಠಕ'ವೆಂದೇ ವೈದಿಕರು ಕರೆಯುತ್ತಾರೆ. ಈ ಭಾಗವು ಮೊದಲು ಕಾಠಕಶಾಖೆಯ ಬ್ರಾಹ್ಮಣಕ್ಕೆ ಸೇರಿದ್ದು. ಈಚಿಗೆ ತೈತ್ತಿರೀಯದೊಳಗೆ ಸೇರಿಕೊಂಡಿರಬಹುದೆ?–ಎಂಬುದನ್ನು ಪುರಾತತ್ತ್ವವಿದರು ಶೋಧಿಸಬೇಕಾಗಿದೆ. ಮೊದಲನೆಯ ಎರಡು ಅಷ್ಟಕಗಳಲ್ಲಿ ಎಂಟೆಂಟೇ ಪ್ರಶ್ನೆಗಳಿರುವಲ್ಲಿ ಮೂರನೆಯ ಅಷ್ಟಕದಲ್ಲಿ ಮಾತ್ರ ಹನ್ನೆರಡು ಪ್ರಶ್ನೆಗಳಿರುವದೂ ಅಷ್ಟಕವೆಂಬ ಹೆಸರಿಗೆ ಹೊಂದುಗಡೆಯಾಗುವದಿಲ್ಲವೆಂಬುದೂ ಇಲ್ಲಿ ನೆನಪಿಡತಕ್ಕದ್ದಾಗಿದೆ.

ಬ್ರಹ್ಮವಿದ್ಯೆಯ ಸ್ವರೂಪ

ನಚಿಕೇತನು ಕೇಳಿಕೊಂಡ ಮೂರನೆಯ ವರದ ಸ್ವರೂಪವನ್ನು ಭಾಷ್ಯಕಾರರು ಹೇಗೆ ವಿವರಿಸಿರುವರೆಂಬದನ್ನು ಇಲ್ಲಿ ಒಂದಿಷ್ಟು ವಿಚಾರಿಸುವದು ಒಳ್ಳೆಯದು. ದೇಹ ವ್ಯತಿರಿಕ್ತನಾದ ಆತ್ಮನೊಬ್ಬನಿರುವನೆ? ಅವನ ಪರಮಾರ್ಥಸ್ವರೂಪವು ಹೇಗಿರುವದು? (೧-೧-೨೦, ೧-೨-೧೪) ಎಂಬುದು ನಚಿಕೇತನ ಪ್ರಶ್ನೆ. ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ- ಇವುಗಳೆಲ್ಲಕ್ಕಿಂತ ಬೇರೆಯಾಗಿ ಆತ್ಮನಿರುವನೆಂಬುದಕ್ಕೆ ಪ್ರತ್ಯಕ್ಷವಾಗಲಿ ಅನುಮಾನವಾಗಲಿ ಸಹಾಯಕವಾಗುವದಿಲ್ಲ ಏಕೆಂದರೆ ಇಂದ್ರಿಯಾದಿಗಳೇ ಅತೀಂದ್ರಿಯವಾಗಿವೆ, ಅವನ್ನು ಮೀರಿರುವ ವಸ್ತುವೊಂದಿದ್ದರೆ ಅದು ಹೇಗೆ ಇಂದ್ರಿಯಗೋಚರವಾದೀತು? ಇಂದ್ರಿಯಕ್ಕೆ ವಿಷಯವೂ ಅಲ್ಲದ ಇಂದ್ರಿಯಕ್ಕೆ ವಿಷಯವಾದ ಗುರುತಿನ ಸಂಬಂಧವೂ ಇಲ್ಲದ, ವಸ್ತುವನ್ನು ಪ್ರತ್ಯಕ್ಷದಿಂದಲಾಗಲಿ ಅನುಮಾನದಿಂದಲಾಗಲಿ ತಿಳಿಯುವದಕ್ಕೆ ಹೇಗೆ ಆದೀತು? ಆದ್ದರಿಂದ ಆತ್ಮವಸ್ತುವನ್ನು ತಿಳಿಯುವದಕ್ಕೆ ಪ್ರತ್ಯಕ್ಷಾದಿಗಳಿಗಿಂತ ಬೇರೆಯಾದ ಪ್ರಮಾಣವಿದ್ದರೆ ಅದನ್ನು ತಿಳಿಸು ಎಂಬುದು ನಚಿಕೇತನ ಪ್ರಶ್ನೆ.

ಇದಕ್ಕೆ ಯಮನ ಉತ್ತರವೇನೆಂದರೆ: ಆತ್ಮತತ್ತ್ವವನ್ನು ಸಾಮಾನ್ಯ ಜನರು ವಿಚಾರಮಾಡುವದೇ ಇಲ್ಲ. ಅವರು ವಿಚಾರಮಾಡಿದರೂ ಅದು ಅವರಿಗೆ ತಿಳಿಯುವದೂ ಇಲ್ಲ (೧-೨-೫, ೬, ೭). ಅದು ತರ್ಕಕ್ಕೆ ನಿಲುಕುವದಿಲ್ಲ (೧-೨-೮, ೯). ಅದು ನಮ್ಮ ಹೃದಯದಲ್ಲಿಯೇ ಇರುವದರಿಂದ ಅದನ್ನು ಅಧ್ಯಾತ್ಮಯೋಗದಿಂದ ತಿಳಿದುಕೊಂಡು ಶೋಕಾದಿಗಳಿಂದ ಬಿಡುಗಡೆಯನ್ನು ಹೊಂದಬಹುದು (೧-೨-೧೨, ೧೩). ಈ ಆತ್ಮನನ್ನು ತಿಳಿದುಕೊಳ್ಳುವದಕ್ಕೆ ಅವಿದ್ಯೆ

ಯೂ ಕಾಮವೂ ಅಡ್ಡಿಯಾಗಿರುವವು (೨-೧-೧, ೨). ಇದನ್ನು ತಿಳಿದುಕೊಳ್ಳುವ ವನೂ ಹೇಳಿಕೊಡುವವನೂ ಆಶ್ಚರ್ಯಪ್ರಾಯರು (೧-೨-೭). ಇದನ್ನು ತಿಳಿದುಕೊಳ್ಳ ಬೇಕೆನ್ನುವವನು ದುರಾಚಾರವನ್ನು ಬಿಟ್ಟು ಅಂತಃಕರಣಬಹಿಃಕರಣಗಳನ್ನು ಸ್ವಾಧೀನ ದಲ್ಲಿಟ್ಟುಕೊಂಡಿರಬೇಕು (೧-೨-೨೪), ಆತ್ಮನನ್ನೇ ಬಯಸುತ್ತಿರಬೇಕು (೧-೨-೨೩). ಉತ್ತಮನಾದ ಆಚಾರ್ಯನನ್ನು ಸೇವಿಸಿ, ತತ್ತ್ವವನ್ನು ಅರಿತುಕೊಳ್ಳಬೇಕು (೧-೩೧೪), ಹೇಳಿಕೊಡುವ ಆಚಾರ್ಯನು ಬ್ರಹ್ಮಜ್ಞಾನವನ್ನು ಹೊಂದಿ ಆ ಬ್ರಹ್ಮವೇ ತಾನೆಂಬ ಅರಿವಿನಲ್ಲಿ ನಿಂತವನಾಗಿರಬೇಕು (೧-೨-೯), ಹಾಗಾದರೆ ಮಾತ್ರ ಅದರ ಅರಿವಾಗುತ್ತದೆ.

ಅವಿದ್ಯೆಯೆಂದರೇನು ?

ಆತ್ಮನನ್ನು ಅರಿಯುವದಕ್ಕೆ ಅಡ್ಡಿಯಾಗಿರುವ ಅವಿದ್ಯೆಯ ಸ್ವರೂಪದ ಬಗೆ ಭಾಷ್ಯಕಾರರ ಅಭಿಪ್ರಾಯವೇನೆಂದರೆ ಆತ್ಮನಲ್ಲಿ ಅವಿಚಾರಸ್ವಭಾವದಿಂದ ಕ್ರಿಯಾ ಕಾರಕಫಲಗಳನ್ನು ಆರೋಪಿಸುವದೇ ಅಜ್ಞಾನವು (೧-೧-೨೦) ಈ ಅವಿದ್ಯೆಗೆ 'ಮಿಥ್ಯಾಜ್ಞಾನ'ವೆಂದೂ ಹೆಸರು. ಅವಿದ್ಯೆಯಿಂದ ತೋರುವ ಕ್ರಿಯಾಕಾರಕಫಲ ರೂಪವಾದ ಪ್ರಪಂಚವೇ ನಾಮರೂಪಕರ್ಮಾತ್ಮಕವಾದ ಅನಾತ್ಮವು (೧-೩-೧೪), ನಮ್ಮ ಹೊರಗೆ ಅನಾತ್ಮವನ್ನು ಸ್ವಭಾವದಿಂದ ನೋಡುತ್ತಿರುವದೇ ಅವಿದ್ಯೆ (೧-೧-೩); ಉಪಾಧಿಯ ಸ್ವಭಾವದಿಂದ ಆಗಿರುವ ಭೇದದರ್ಶನವೇ ಅವಿದ್ಯೆ (೧-೧-೨೦).

ಅಜ್ಞಾನವು ಅಥವಾ ಅವಿದ್ಯೆಯು ಸಂಸಾರಕ್ಕೆ 'ಬೀಜ' ವೆಂದು (೧ ೧-೨೦) ಹೇಳಿರುವದಲ್ಲದೆ ಅವ್ಯಕ್ತ (ಅಥವಾ ಅವ್ಯಾಕೃತ) ವೂ ಜಗತ್ತಿಗೆ 'ಬೀಜ' ವೆಂದು (೧-೩-೧೧) ಭಾಷ್ಯದಲ್ಲಿ ಬರೆದಿರುವದು ಅಜ್ಞಾನ (ಅಥವಾ ಅವಿದ್ಯೆ) ಮತ್ತು ಅವ್ಯಾ ಕೃತ (ಅಥವಾ ಮಾಯೆ)–ಇವೆರಡೂ ಒಂದೇ ಪದಾರ್ಥವೆಂದು ಕೆಲವರು ಭ್ರಮಿಸು ವದಕ್ಕೆ ಕಾರಣವಾಗಿರುತ್ತದೆ. ಆಚಾರ್ಯರು ಅವಿದ್ಯೆ, ಮಾಯೆ—ಎಂಬ ಶಬ್ದಗಳನ್ನು ಕೆಲವು ಕಡೆಗಳಲ್ಲಿ ಪರ್ಯಾಯವಾಗಿ ಪ್ರಯೋಗಿಸಿರುತ್ತಾರಾದರೂ **ಅವಿದ್ಯೆಯೆಂ ಬುದು** ವಿದ್ಯೆಯಿಂದ ಹೋಗುವ ಮಿಥ್ಯಾಜ್ಞಾನವೆಂದೂ [ಅಧ್ಯಾಸಭಾಷ್ಯ] **ಮಾಯೆ ಯೆಂಬುದು** ಅವಿದ್ಯಾಕಲ್ಪಿತವಾದ ನಾಮರೂಪಗಳ ಬೀಜರೂಪವೆಂದೂ, (ಸೂ.ಭಾ, ೨-೧-೧೪) ವಿವೇಚನೆಮಾಡಿರುವದಲ್ಲದೆ, 'ಅವ್ಯಕ್ತ' ವೆಂಬ ಶಬ್ದದ ಅರ್ಥವನ್ನು ವಿವೇಚನೆಮಾಡುವದಕ್ಕಾಗಿ ಹೊರಟಿರುವ ಒಂದು ಸೂತ್ರದ ಭಾಷ್ಯದಲ್ಲಿ ಅವ್ಯಕ್ತ ವೆಂದರೆ ಮಾಯೆಯೆಂದು ಒಂದು ಪಕ್ಷ, ಅವಿದ್ಯೆಯೆಂದು ಇನ್ನೊಂದು ಪಕ್ಷ–ಹೀಗೆ

ಎರಡರ್ಥಗಳ ಎರಡು ಪಕ್ಷಗಳನ್ನು ಬೇರೆಬೇರೆಯಾಗಿ ಬರೆದಿರುವದರಿಂದ (ಸೂ. ಭಾ. ೧-೪-೩) ಶಾಂಕರಪ್ರಸ್ಥಾನದಲ್ಲಿ ಅವಿದ್ಯೆಯು ಜ್ಞಾನಕೋಟಿಗೆ ಸೇರಿರುವದೆಂದೂ ಮಾಯೆಯು ಜ್ಞೇಯಕೋಟಿಗೆ ಸೇರಿರುವದೆಂದೂ ಸ್ಪಷ್ಟವಾಗುತ್ತದೆ. ಈ ಕಾರಣದಿಂದ ಅವಿದ್ಯೆಯು ಸಂಸಾರಕ್ಕೆ ಬೀಜವೆಂದರೆ ನಿಮಿತ್ತವು, ಅವ್ಯಕ್ತವು ಜಗತ್ತಿಗೆ ಬೀಜವೆಂದರೆ ಉಪಾದಾನಕಾರಣವು ಎಂದು ಅರ್ಥಮಾಡಿಕೊಳ್ಳಬೇಕಾಗಿದೆ.

ಆತ್ಮಜ್ಞಾನಕ್ಕೆ ಸಹಾಯಕವಾದ ತರ್ಕ

ಆತ್ಮನು ತರ್ಕಕ್ಕೆ ಸಿಕ್ಕುವದಿಲ್ಲ (೧-೨-೮, ೯) ಎಂದು ಹೇಳಿರುವದರಿಂದ ತರ್ಕವು ಯಾವ ಬಗೆಯಿಂದಲೂ ಇಲ್ಲಿ ಉಪಯೋಗಕ್ಕೆ ಬರುವದಿಲ್ಲವೆಂದು ಕೆಲವರು ಅಭಿಪ್ರಾಯಪಡುತ್ತಾರೆ ಇದು ಸರಿಯಲ್ಲ. ಏಕೆಂದರೆ ಈ ಉಪನಿಷತ್ತಿನಲ್ಲಿಯೇ ಆತ್ಮಸ್ವರೂಪವನ್ನು ತಿಳಿಸುವದಕ್ಕೆ ತರ್ಕವನ್ನು ಉಪಯೋಗಿಸಿರುತ್ತದೆ. ಆದ್ದರಿಂದಲೇ "ಬರಿಯ ತನ್ನ ಬುದ್ಧಿಯಿಂದ ಮಾಡಿದ ಅಭಿಮಾನದ ಊಹೆಗೆ ಆತ್ಮನು ಸಿಕ್ಕುವದಿಲ್ಲ" (೧-೨-೮) ಎಂದು ಆಚಾರ್ಯರು ಶ್ರುತಿಗೆ ಅರ್ಥವನ್ನು ಮಾಡಿರುತ್ತಾರೆ. ಸ್ವತಂತ್ರವಾದ ತರ್ಕವು ಮತ್ತೊಂದು ಪ್ರಬಲತರ್ಕದಿಂದ ಬಾಧಿತವಾಗಬಹುದು; ಆದರೆ ಶ್ರುತ್ಯುಕ್ತತರ್ಕವು ಅನುಭವಾನುಸಾರಿಯಾಗಿರುವದರಿಂದ ಅದು ಅಬಾಧ್ಯವಾಗಿರುತ್ತದೆ ಎಂಬುದೇ ಇಲ್ಲಿ ತಿಳಿಯಬೇಕಾದದ್ದು. ಆಗಮೋಪಪತ್ತಿಗಳಿಂದ ತಿಳಿದ ಅರ್ಥವು ಅಂಗೈನೆಲ್ಲಿಯಂತೆ ಸಂಪೂರ್ಣವಾಗಿ ಅನುಭವಕ್ಕೆ ಬರುತ್ತದೆ ಎಂದು ಬೃಹದಾರಣ್ಯಕ, ಮಾಂಡೂಕ್ಯ, ಬ್ರಹ್ಮಸೂತ್ರ–ಮುಂತಾದವುಗಳ ಭಾಷ್ಯದಲ್ಲಿ ಬರೆದಿರುವದಕ್ಕೆ ಇದೇ ಅಭಿಪ್ರಾಯ.

ಆತ್ಮಸ್ವರೂಪವನ್ನು ತಿಳಿಯುವದಕ್ಕೆ ಅನುಕೂಲವೆಂದು ಈ ಉಪನಿಷತ್ತಿನಲ್ಲಿ ಸೂಚಿಸಿರುವ ತರ್ಕಗಳು ಯಾವವೆಂದರೆ :—

(೧) ಇಂದ್ರಿಯ, ಮನಸ್ಸು, ಬುದ್ಧಿ, ಅವ್ಯಕ್ತ—ಇವುಗಳು ಒಂದಕ್ಕಿಂತ ಒಂದು ಸೂಕ್ಷ್ಮವಾಗಿಯೂ ವ್ಯಾಪಕವಾಗಿಯೂ ಒಳಗಿನ ಆತ್ಮನಾಗಿಯೂ ಇರುವವು; ಇವುಗಳೆಲ್ಲಕ್ಕಿಂತಲೂ ಸೂಕ್ಷ್ಮನಾಗಿ ವ್ಯಾಪಕನಾಗಿರುವ ಒಳತಿರುಳೇ ಆತ್ಮನು (೧-೩-೧೦, ೧೧; ೨-೩-೭, ೮).

(೨) ಯಾವ ಚೈತನ್ಯದಿಂದಲೇ ಹೊರಗಿನ ಶಬ್ದಾದಿಗಳನ್ನೂ ಒಳಗಿನ ದೇಹೇಂದ್ರಿಯಾದಿಗಳನ್ನೂ ಅರಿಯುವರೋ ಆ ಸ್ವರೂಪವೇ ಆತ್ಮ (೨-೧-೩).

(೩) ಎಚ್ಚರಕನಸುಗಳೆಂಬ ಅವಸ್ಥೆಗಳನ್ನು ಯಾವ ವ್ಯಾಪಕವಾದ ಚೈತನ್ಯದಿಂದ ನಾವು ಅರಿಯುತ್ತಿರುವೆವೋ ಆ ಸಾಕ್ಷಿಯೇ ಆತ್ಮ (೨-೧-೪).

(೪) ಕರ್ಮಫಲವನ್ನನುಭವಿಸುತ್ತಾ ಕಾಲತ್ರಯಕ್ಕೆ ಕಟ್ಟುಬಿದ್ದಿರುವಂತೆ ತೋರು-ವ ಭೋಕ್ತೃವಿನ ಪರಮಾರ್ಥರೂಪವೇ ಆತ್ಮನು (೨-೧-೫, ೧೩)

(೫) ಶರೀರೇಂದ್ರಿಯಪ್ರಾಣಗಳು ಒಂದಕ್ಕೊಂದು ಕೂಡಿಕೊಂಡು ಯಾರಿಗಾಗಿ, ಯಾರಿಂದ ಪ್ರೇರಿತವಾದಂತೆ, ಕೆಲಸಮಾಡುತ್ತಿರುವವೋ ಅಂಥ ಚೈತನ್ಯವೇ, ಅವುಗಳೊಡನೆ ಸೇರಿಕೊಳ್ಳದೆ ಸ್ವತಂತ್ರನಾಗಿರುವ ಸರ್ವವಿಕ್ರಿಯೆಗಳ ಆಧಾರರೂಪನೇ ಆತ್ಮನು (೨-೨-೧, ೩).

ಇವು ಆತ್ಮನಿರಬೇಕೆಂದು ಸಾಧಿಸುವ ಬರಿಯ ಅನುಮಾನಗಳಲ್ಲ, ಏಕೆಂದರೆ ತನ್ನ ಸ್ವರೂಪವನ್ನು ತರ್ಕದಿಂದ ಅಲ್ಲಗಳೆಯುವದು ಯಾರಿಂದಲೂ ಆಗಲಾರದು. (ನ ಹಾತವ್ಯಾ, ೧-೨-೯ ಭಾಷ್ಯ.) ಚೈತನ್ಯಸ್ವರೂಪವು ನಿತ್ಯಸಿದ್ಧವೆಂಬುದನ್ನು ನೆನಪುಕೊಡುವದಕ್ಕೆ ಇವು ಬಲವಾದ ಅನುಕೂಲತರ್ಕಗಳಾಗಿವೆ. ವೈದಿಕಸಂಪ್ರದಾಯಕ್ಕೆ **ಆಗಮ**ವೆಂದು ಹೆಸರು. ಈ ಆಗಮವನ್ನು ಬಿಟ್ಟು ಪ್ರತ್ಯಕ್ಷಾನುಮಾನಗಳಿಂದ ನೋಡಿ ಆತ್ಮನು ಇದ್ದಾನೆ, ಇಲ್ಲ, ಸ್ಥೂಲ, ಅಣು-ಎಂದು ಮುಂತಾಗಿ ವಿಕಲ್ಪಿಸುವ ಚಾರ್ವಾಕರು, ಕ್ಷಣಿಕವಿಜ್ಞಾನಿಗಳು ಮುಂತಾದ(೨-೧-೧೩)ಕುತಾರ್ಕಿಕರವಾದಗಳು ಅನುಭವವಿರುದ್ಧವಾಗಿವೆ, ಪರಸ್ಪರವಿರುದ್ಧವಾಗಿವೆ. ಇದನ್ನು ತಿಳಿಸುವದೇ ಆತ್ಮನು ತರ್ಕಕ್ಕೆ ನಿಲುಕುವದಿಲ್ಲವೆಂಬ ವಚನದ ಉದ್ದೇಶವು.

ಯೋಗಕ್ಕೂ ಜ್ಞಾನಕ್ಕೂ ಸಂಬಂಧ

ಅಧ್ಯಾತ್ಮಯೋಗದಿಂದ (೧-೨-೧೭) ಜ್ಞಾನವಾಗುವದೆಂದೂ ನಚಿಕೇತನು ಯೋಗವಿಧಾನವನ್ನು ತಿಳಿದುಕೊಂಡು ಬ್ರಹ್ಮಸ್ವರೂಪವನ್ನು ಹೊಂದಿದನೆಂದೂ (೨-೩-೧೪) ಹೇಳಿರುತ್ತದೆಯಷ್ಟೆ ಆತ್ಮೈಕ್ಯವನ್ನು ಸುಮ್ಮನೆ ತಿಳಿದುಕೊಂಡರೆ ಸಾಲದೆಂದೂ ಅದನ್ನು ನೇರವಾಗಿ ಕಂಡುಕೊಳ್ಳಬೇಕೆಂದೂ ಈ ವಾಕ್ಯಕ್ಕೆ ಕೆಲವರು ತಾತ್ಪರ್ಯವನ್ನು ಕಲ್ಪಿಸುತ್ತಾರೆ. "ಸಾಕ್ಷಾದ್ವಿಜಾನಾತಿ" (೧-೩-೨೦) "ಅವಗಮ್ಯ ಆತ್ಮಭಾವೇನ ಸಾಕ್ಷಾತ್" (೨-೧-೪), "ಸಾಕ್ಷಾದನುಭವನ್ತಿ" (೨-೩-೧೨) ಎಂಬ ಭಾಷ್ಯವಚನಗಳು ಈ ಅಭಿಪ್ರಾಯಕ್ಕೆ ಬೆಂಬಲವನ್ನು ಕೊಡುವಂತೆಯೂ ಕಾಣಿಸುತ್ತವೆ. ಆದರೆ ಈ ಸಾಕ್ಷಾತ್ಕಾರದ ಸ್ವರೂಪವೇನು? ಎಂಬುದನ್ನು ಸ್ವಲ್ಪವಿಚಾರ

ಸುವದು ಅವಶ್ಯ. ಏಕೆಂದರೆ ಆತ್ಮನನ್ನು ಪ್ರತ್ಯಕ್ಷಾದಿಗಳ ವಿಷಯಗಳಂತೆ ವಿಷಯವಾಗಿ ಅರಿಯುವದಕ್ಕೆ ಆಗಲಾರದೆಂದು ಭಾಷ್ಯಕಾರರೇ ಅಡಿಗಡಿಗೆ ಹೇಳುತ್ತಾ ಬಂದಿರುತ್ತಾರೆ. "ವಾಕ್ಯಾರ್ಥವನ್ನು ಅರಿತುಕೊಂಡಮೇಲೆ ಮತ್ತೇನೂ ಮಾಡಬೇಕಾದದ್ದು ಇರುವದಿಲ್ಲ." (ಮು. ಭಾ. ೧-೧-೬) ಉತ್ತಮಾಧಿಕಾರಿಗಳಿಗೆ ಒಂದು ಸಲ ವೇದಾಂತವಾಕ್ಯವನ್ನು ಶ್ರವಣಮಾಡುವದರಿಂದಲೇ ಜ್ಞಾನವಾಗಿಬಿಡುತ್ತದೆ (೪-೧-೨) ಎಂದು ಸ್ಪಷ್ಟವಾಗಿ ಹೇಳುವ ಭಾಷ್ಯವಚನಗಳೂ ಇರುತ್ತವೆ ಆದ್ದರಿಂದ ಸಾಕ್ಷಾತ್ತಾಗಿ ತಿಳಿಯುವದು ಎಂದರೆ ತನ್ನ ಸ್ವರೂಪದಲ್ಲಿಯೇ ನೆಲೆನಿಲ್ಲುವದೇ ಹೊರತು ಮತ್ತೆ ಬೇರೆಯ ಅನುಭವವನ್ನು ಪಡೆಯುವದೆಂದೇನೂ ಅಲ್ಲ ಆದ್ದರಿಂದಲೇ ಯೋಗದ ಅವಸ್ಥೆಯಲ್ಲಿ "ಅವಿದ್ಯಾಧ್ಯಾರೋಪಣವರ್ಜಿತವಾದ ಸ್ವರೂಪದಲ್ಲಿ ಆತ್ಮನು ನಿಂತಿರುತ್ತಾನೆ" (೨-೩-೧) ಎಂದು ಆಚಾರ್ಯರು ಬರೆದಿರುತ್ತಾರೆ. ಯೋಗವನ್ನು ಹೊಂದಿದಮೇಲೆ ಮತ್ತೇನೂ ಮಾಡಬೇಕಾವದ್ದಿಲ್ಲವಾದ್ದರಿಂದ ಅದನ್ನು ಪಡೆಯುವದಕ್ಕಾಗಿಯೂ ಅದು ಬಂದದ್ದು ಹೋಗದೆ ಇರುವದಕ್ಕಾಗಿಯೂ ಪ್ರಯತ್ನವನ್ನು ಮಾಡಬೇಕೆಂದು ಹೇಳುವ (೨-೩-೧) ಭಾಷ್ಯವಚನವೂ ಇವಕ್ಕೆ ಅನುಕೂಲವಾಗಿರುತ್ತದೆ "ಅಧ್ಯಾತ್ಮ ಯೋಗವೆಂದರೆ ವಿಷಯಗಳಿಂದ ಚಿತ್ತವನ್ನು ಸೆಳೆದು ಆತ್ಮನಲ್ಲಿ ನಿಲ್ಲಿಸಿಕೊಳ್ಳುವದು" (೧-೨-೧೨) ಎಂಬ ಭಾಷ್ಯಕ್ಕೆ ಏಕಾಗ್ರತೆಯಿಂದ ನೋಡಿದರ ಆತ್ಮಜ್ಞಾನವಾಗುತ್ತದೆ ಎಂದೇ ತಾತ್ಪರ್ಯ. ಆದ್ದರಿಂದ ಜ್ಞಾನಕ್ಕಾಗಿ ಯೋಗವೇ ಹೊರತು ಜ್ಞಾನವಾದ ಮೇಲೆ ಯೋಗದಿಂದ ಸಾಕ್ಷಾತ್ಕಾರವನ್ನು ಹೊಂದಬೇಕೆನ್ನುವವರ ಪಕ್ಷಕ್ಕೆ ಭಾಷ್ಯದಲ್ಲಿ ಎಲ್ಲಿಯೂ ಆಧಾರವು ದೊರಕುವದಿಲ್ಲವೆಂದು ತಿಳಿಯಬೇಕು.

ಜ್ಞಾನದಿಂದಾಗುವ ಮುಕ್ತಿ

ಮುಕ್ತಿಯನ್ನು ಪಡೆಯುವ ಅಧಿಕಾರಿಗಳನ್ನು ಎರಡು ರಾಶಿಗಳಾಗಿ ಉಪನಿಷತ್ತಿನಲ್ಲಿ ವರ್ಗೀಕರಣಮಾಡಿರುತ್ತದೆ. ಸಗುಣಬ್ರಹ್ಮವನ್ನು ಉಪಾಸನೆಮಾಡುವವರು ಮರಣಕಾಲದವರೆಗೂ ಉಪಾಸನೆಮಾಡುತ್ತಿದ್ದು ಅದೇ ತಾನೆಂಬ ಗಟ್ಟಿ ಭಾವನೆಯ ಸಾಕ್ಷಾತ್ಕಾರವನ್ನು ಪಡೆದುಕೊಂಡು (೧-೧-೧೭) ಬದುಕಿರುವಾಗಲೇ ಅಧರ್ಮ, ಅಜ್ಞಾನ–ಮುಂತಾದವುಗಳಿಂದ ಬಿಡುಗಡೆಹೊಂದಿ (೧-೧-೧೮) **ಸುಷುಮ್ನಾನಾಡಿಯ** ದ್ವಾರವಾಗಿ ಹೊರಟು ಸೂರ್ಯದ್ವಾರದಿಂದ ಬ್ರಹ್ಮಲೋಕವನ್ನು ಸೇರುವರು. ಇದು ಬಹುಕಾಲ ಇರುವ ಫಲವಾದ್ದರಿಂದ **ಆಪೇಕ್ಷಿಕವಾದ ಅಮೃತ**ವೆನಿಸುವದು. ಅಥವಾ ಬ್ರಹ್ಮಲೋಕದಲ್ಲಿ ಜ್ಞಾನವನ್ನು ಹೊಂದಿ ಕಲ್ಪಾಂತದಲ್ಲಿ ಬ್ರಹ್ಮನೊಡನೆ **ಮುಖ್ಯವಾದ ಅಮೃತತ್ವವನ್ನೇ** ಪಡೆಯುವರು. (೨-೩-೧೫).

ಹೀಗೆ ಬ್ರಹ್ಮಲೋಕಕ್ಕೆ ಹೋಗಿ ಜ್ಞಾನವನ್ನು ಪಡೆದು ಮುಕ್ತಿಯನ್ನು ಪಡೆಯುವ ದನ್ನು **ಕ್ರಮಮುಕ್ತಿ** ಎಂದು ಆಚಾರ್ಯರು ಕರೆದಿರುತ್ತಾರೆ. ಇದಕ್ಕೆ ಬದಲು ಬದುಕಿರುವಾಗ ಈ ಲೋಕದಲ್ಲಿಯೇ ಜ್ಞಾನವನ್ನು ಪಡೆದು ಮುಕ್ತಿಯನ್ನು ಹೊಂದಿದರೆ ಅದು **ಸದ್ಯೋಮುಕ್ತಿ** ಎನಿಸುವದು ಲೋಕಾಂತರದಲ್ಲಿ ಕ್ರಮಮುಕ್ತಿಯನ್ನು ಪಡೆಯುವದು ಕಷ್ಟಸಾಧ್ಯವಾದ್ದರಿಂದ ಇಲ್ಲಿಯೇ ಜ್ಞಾನದಿಂದ ಮುಕ್ತಿಯನ್ನು ಪಡೆದುಕೊಳ್ಳಬೇಕೆಂದು (೨-೩-೪; ೫) ಹೇಳಿರುವದಲ್ಲದೆ ಭಾಷ್ಯಕಾರರು **ಈ** ಸದ್ಯೋಮುಕ್ತಿಯನ್ನು ಮುಖ್ಯವೆಂದು ಒತ್ತಿ ಹಲವು ಕಡೆಗಳಲ್ಲಿ (೨-೨-೧, ೨-೩-೮, ೨-೩-೧೪, ೨-೩-೧೫) ಹೇಳಿರುತ್ತಾರಲ್ಲದೆ ಜ್ಞಾನಿಯು ದೇಹವನ್ನು ಬಿಟ್ಟಮೇಲೆ ಮತ್ತೆ ಶರೀರವನ್ನು ಧರಿಸುವದಿಲ್ಲವೆಂಬ ಕಾರಣದಿಂದ **ವಿದೇಹಮುಕ್ತಿ**ಯನ್ನೂ ಗೌಣವಾಗಿ (೨-೨-೧, ೨-೩-೮) ಒಪ್ಪಿರುತ್ತಾರೆ.

ಹೀಗಿದ್ದರೂ ಕೆಲವರು ವೇದಾಂತಿಗಳು **ಜೀವನ್ಮುಕ್ತಿಯಲ್ಲಿ** ಒಂದಿಷ್ಟು ಅವಿದ್ಯೆ ಉಳಿದುಕೊಂಡಿರುವದರಿಂದ ಅದು ಗೌಣಮುಕ್ತಿಯೆಂದೂ ವಿದೇಹ ಮುಕ್ತಿಯೇ ಮುಖ್ಯವೆಂದೂ ಅಭಿಪ್ರಾಯಪಟ್ಟಿರುತ್ತಾರೆ. ಸದ್ಯೋಮುಕ್ತಿಯೆಂದರೆ ಜ್ಞಾನವುಂಟಾದಕೂಡಲೆ ಶರೀರವು ಬಿದ್ದುಹೋಗುವದು ಎಂದೂ ಕೆಲವರು ಅಭಿಪ್ರಾಯಪಟ್ಟಿರುತ್ತಾರೆ (!). ಈ ಅಭಿಪ್ರಾಯಗಳು ಭಾಷ್ಯವಿರುದ್ಧವಾಗಿರುವದಲ್ಲದೆ ಜ್ಞಾನದಿಂದಲೇ ಮೋಕ್ಷವಾಗುವದೆಂಬ ಅದ್ವೈತದ ಮುಖ್ಯಸಿದ್ಧಾಂತಕ್ಕೂ ವಿರುದ್ಧವಾಗಿರುವವೆಂಬುದನ್ನು ಹೇಳಬೇಕಾದದ್ದಿಲ್ಲ.

ಈ ಉಪನಿಷತ್ತಿನ ಟೀಕಾಕಾರರು

ಈ ಉಪನಿಷತ್ತಿಗೆ "ಆನಂದಜ್ಞಾನ" "ಬಾಲಗೋಪಾಲೇಂದ್ರಯತೀಶ್ವರ" ಎಂಬ ಇಬ್ಬರು ವ್ಯಾಖ್ಯಾನವನ್ನು ಬರೆದಿರುತ್ತಾರೆ. ಆನಂದಜ್ಞಾನರು ಮುಂಡಕೋಪನಿಷತ್ತಿಗೆ ವ್ಯಾಖಾನವನ್ನು ಬರೆದಿರುವವರೇ ಎಂದು ತೋರುತ್ತದೆ. ಏಕೆಂದರೆ ಈ ಎರಡು ವ್ಯಾಖಾನಗಳಲ್ಲಿಯೂ "**ಪ್ರಕಟಾರ್ಥ**" ವೆಂಬ ವೇದಾಂತಗ್ರಂಥವನ್ನು ಪ್ರಮಾಣವಾಗಿ ಬರೆದುಕೊಂಡಿರುತ್ತದೆ, ಎರಡರಲ್ಲಿಯೂ ಭಾಸ್ಕರಾಚಾರ್ಯರ ಮತವನ್ನು ಖಂಡಿಸಿರುತ್ತದೆ. ಇದು ನಿಜವಾದರೆ ಬೃಹದಾರಣ್ಯಕೋಪನಿಷತ್ತಿಗೆ ವ್ಯಾಖ್ಯಾನವನ್ನು ಬರೆದಿರುವ "ಆನಂದಗಿರಿ" ಗಳೆಂಬವರು ಇವರಲ್ಲವೆಂದು ಹೇಳಬೇಕಾಗುತ್ತದೆ; ಏಕೆಂದರೆ ಬೃಹದಾರಣ್ಯಕವ್ಯಾಖ್ಯಾನಕಾರರು ಏಕಜೀವವಾದಿಗಳು; ಮುಂಡಕೋಪನಿಷತ್ತಿನ ವ್ಯಾಖ್ಯಾನಕಾರರು ನಾನಾಜೀವವಾದಿಗಳು. ಭಾಷ್ಯದಲ್ಲಿ ಈ ವಾದಗಳ ಸುಳಿವೇ ಇಲ್ಲ; ಇವು ಅವರಿಂದೀಚೆಗೆ ವೇದಾಂತಿಗಳಲ್ಲಿ ಉಂಟಾದ ಚರ್ಚೆಗೆ ಸೇರಿದ

ಪ್ರಶ್ನೆಗಳಾಗಿರುತ್ತವೆ. ವ್ಯಾಖ್ಯಾನಕಾರರುಗಳು ಭಾಷ್ಯಕಾರರಿಗಿಂತ ಬಹಳ ಈಚಿನವರಾದ್ದರಿಂದ ಇವರು ತಮ್ಮ ವ್ಯಾಖ್ಯಾನಗಳಲ್ಲಿ ಹೊಸ ವೇದಾಂತಿಗಳ ವಾದಗಳನ್ನೂ ಬೆರೆಯಿಸಿಕೊಂಡಿರುತ್ತಾರೆ. ಬಾಲಗೋಪಾಲಯತೀಶ್ವರರು ಆನಂದಜ್ಞಾನರ ವ್ಯಾಖ್ಯಾನವನ್ನು ಬಲುಮಟ್ಟಿಗೆ ಶಬ್ದಶಃ ಉಪಯೋಗಿಸಿಕೊಂಡು ಅದನ್ನು ಇನ್ನಷ್ಟು ವಿಸ್ತರಿಸಿರುತ್ತಾರೆ. ಈ ಟೀಕೆಗಳೆರಡರಲ್ಲಿಯೂ ವಿವರಣೆಗಳು ಭಾಷ್ಯದ ಅಭಿಪ್ರಾಯಕ್ಕೆ ಬಿಡುವಂತೆ ನನಗೆ ತೋರಿದ ಕಡೆಗಳಲ್ಲಿ ಅಲ್ಲಲ್ಲಿಯೇ ಅಡಿ ಟಿಪ್ಪಣಿಯಲ್ಲಿ ವಿಮರ್ಶೆಯನ್ನು ಬರೆದಿರುತ್ತೇನೆ.

ಕಠೋಪನಿಷತ್ತು ಚಿಕ್ಕದಾದರೂ ಇದರಲ್ಲಿ ಅಮೋಘವಾದ ತತ್ತ್ವಗಳು ಅಡಗಿವೆ ಎಂಬುದನ್ನು ಭಾಷ್ಯಕಾರರು ಹೃದಯಂಗಮವಾದ ರೀತಿಯಿಂದ ತೋರಿಸಿಕೊಟ್ಟಿರುತ್ತಾರೆ. ಈ ಉಪನಿಷತ್ತಿನ ಸಾರವನ್ನು ಕೊನೆಯ ಮಂತ್ರಗಳಲ್ಲಿ ಸಂಗ್ರಹಿಸಿ ಹೇಳಿರುವದೇನಂದರೆ. ಮನುಷ್ಯನ ಹೃದಯದಲ್ಲಿ ಪರಿಚ್ಛಿನ್ನನಾಗಿ ಸಂಸಾರಿಯಾಗಿರುವಂತೆ ಕಾಣುತ್ತಿರುವ ಜೀವನನ್ನು ಉಪಾಧಿಗಳಿಂದ ವಿಂಗಡಿಸಿಕೊಂಡು ಅವನೇ ನಿತ್ಯಶುದ್ಧವಾದ ಅಮೃತವಾದ ಬ್ರಹ್ಮವೆಂದು ತಿಳಿದುಕೊಳ್ಳಬೇಕು. ನಮ್ಮ ಬುದ್ಧಿಗೆ ಗಂಟುಹಾಕಿಕೊಂಡಿರುವಂತೆ ಇರುವ ತಪ್ಪುತಿಳಿವಳಿಕೆಗಳನ್ನು ಕಳೆದುಕೊಂಡು ಕಾಮಗಳೆಲ್ಲವನ್ನೂ ಸಮೂಲವಾಗಿ ನಾಶಮಾಡಿಕೊಂಡರೆ ಮರ್ತ್ಯರೆನಿಸಿರುವ ನಾವು ಅಮೃತರಾಗುವೆವು, ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳಬಹುದು. ಇದೇ ಸರ್ವವೇದಾಂತಸಾರವು ಎಂಬುದು ಉಪನಿಷತ್ತಿನ ಕೊನೆಯ ಮಾತು.

ಯು. ಸುಬ್ರಹ್ಮಣ್ಯಶರ್ಮ.

ಸಂಕೇತಗಳ ವಿವರ

ಈಶ, ಕೇನ–ಈ ಉಪನಿಷತ್ತುಗಳಂತೆಯೇ ಇಲ್ಲಿಯೂ ಉಪನಿಷತ್ತುಗಳು, ಗೀತೆ-ಇವುಗಳನ್ನು ಮೊದಲನೆಯ ಅಕ್ಷರದಿಂದಲೂ ಆಯಾ ಭಾಷ್ಯವನ್ನು ಭಾ. ಎಂಬ ಅಕ್ಷರದಿಂದಲೂ ಸೂಚಿಸಿರುತ್ತದೆ. ಕೆಲವು ಸಂಕೇತಗಳನ್ನು ಮಾತ್ರ ಕೆಳಗೆ ವಿವರಿಸಿರುತ್ತದೆ.

(ಆ॥). ಆನಂದಾಶ್ರಮಮುದ್ರಿತಪುಸ್ತಕದಲ್ಲಿರುವ ಪಾಠ. ಆನಂದಜ್ಞಾನರ ವ್ಯಾಖ್ಯಾನ

(ಆ॥ ಗೋ॥) ಆನಂದಜ್ಞಾನರ ಮತ್ತು ಬಾಲಗೋಪಾಲೇಂದ್ರಯತೀಶ್ವರರ ಕಾಠಕೋಪನಿಷದ್ವ್ಯಾಖ್ಯಾನ

ಋ. ಋಗ್ವೇದ

ತೈ. ಬ್ರಾ. ತೈತ್ತಿರೀಯಬ್ರಾಹ್ಮಣ

ತೈ. ಸಂ. ತೈತ್ತಿರೀಯಸಂಹಿತೆ

ಭಾ. ಭಾ. ಭಾಷ್ಯಭಾಗ ಈ ಉಪನಿಷತ್ತಿನ ಸಂಸ್ಕೃತಭಾಷ್ಯಭಾಗಗಳನ್ನು ತಿಳಿಸುವದಕ್ಕೆ ಉಪಯೋಗಿಸಿರುವ ಸಂಖ್ಯೆಗಳನ್ನು ಹೀಗೆ ತಿಳಿಸಿದೆ.

ಮನು. ಮನುಸ್ಮೃತಿ

(ಮೈ॥) ಮೈಸೂರಿನಲ್ಲಿ ಮುದ್ರಿತವಾದ ತೆಲುಗಕ್ಷರದ ಪಾಠ

ವಿ. ಪು ವಿಷ್ಣುಪುರಾಣ

ಶ್ವೇ. ಶ್ವೇತಾಶ್ವತರಪಾಠ

ಸೂ. ಭಾ. ಸೂತ್ರಭಾಷ್ಯ, ಬ್ರಹ್ಮಸೂತ್ರಕ್ಕೆ ಶಂಕರಾಚಾರ್ಯರ ಭಾಷ್ಯ

ವಿಷಯಾನುಕ್ರಮಣಿಕೆ

ಭಾಷ್ಯಕಾರರ ಅವತರಣಿಕೆ

ಪೀಠಿಕೆ 2

ಉಪನಿಷತ್ತೆಂದರೆ ಏನು ? (೨)—ಉಪನಿಷತ್ತಿನ ಅನುಬಂಧಚತುಷ್ಟಯ (೬) ೧-೬

ಒಂದನೆಯ ಅಧ್ಯಾಯ—ಒಂದನೆಯ ವಲ್ಲಿ

ನಚಿಕೇತನು ಯಮನ ಬಳಿಗೆ ಹೋದದ್ದು (೮)—ಯಮನು ವರಗಳನ್ನು ಕೊಟ್ಟದ್ದು. (೧೮)ಮೊದಲನೆಯ ವರ. ತಂದೆಯ ಪ್ರಸನ್ನತೆ (೧೯)-ಎರಡನೆಯ ವರ. ಅಗ್ನಿವಿದ್ಯೆ (೨೧)—ಯಮನು ತಾನಾಗಿ ಕೊಟ್ಟ ನಾಲ್ಕನೆಯ ವರ ೨೩)-ಕರ್ಮೋಪಾಸನೆಗಳ ಫಲ (೨೭) ಮೂರನೆಯ ವರ. ಆತ್ಮವಿದ್ಯೆ (೨೨)-ನಚಿಕೇತನ ಯೋಗ್ಯತಾಪರೀಕ್ಷೆ (೨೫). ೮-೪೬.

ಒಂದನೆಯ ಅಧ್ಯಾಯ—ಎರಡನೆಯ ವಲ್ಲಿ

ವಿದ್ಯಾವಿದ್ಯೆಗಳಲ್ಲಿ ವಿದ್ಯೆಯ ಹೆಚ್ಚುಗಾರಿಕೆ (೪೬) ಆತ್ಮಸ್ವರೂಪವಿಷಯದ ಪ್ರಶ್ನೆ (೬೬)-ಓಂಕಾರದ ಮೂಲಕ ಬ್ರಹ್ಮದ ಉಪದೇಶ (೬೭) ಬ್ರಹ್ಮದ ಸಾಕ್ಷಾಜ್ಞಾನ (೭೧) ಆತ್ಮಜ್ಞಾನಕ್ಕೆ ಸಾಧನ (೮೧). ೪೬-೮೫.

ಒಂದನೆಯ ಅಧ್ಯಾಯ—ಮೂರನೆಯ ವಲ್ಲಿ

ಸಂಸಾರಗತಿ, ಮೋಕ್ಷಗತಿ (೮೫)-ಆತ್ಮನು ಎಲ್ಲಿಕ್ಕೂ ಸೂಕ್ಷ್ಮನು (೯೭)-ಅಧ್ಯಾತ್ಮ ಯೋಗ (೧೦೫). ೮೫-೧೧೪.

ಎರಡನೆಯ ಅಧ್ಯಾಯ—ಒಂದನೆಯ ವಲ್ಲಿ

ವಿಷಯಗಳ ಆಸೆಯೇ ಆತ್ಮದರ್ಶನಕ್ಕೆ ಅಡ್ಡಿ (೧೦೫)-ಆತ್ಮನನ್ನು ಅರಿಯುವ ರೀತಿ (೧೨೧)—ಆತ್ಮನೂ ಹಿರಣ್ಯಗರ್ಭನೂ ಅದ್ವಿತೀಯವಾದ ಬ್ರಹ್ಮವೇ (೧೨೪)—ಬ್ರಹ್ಮದಲ್ಲಿ ಯಾವ ಭೇದವೂ ಇಲ್ಲ (೧೩೧) ಜ್ಞಾನಾಜ್ಞಾನಗಳಿಗೆ ಫಲ (೧೩೬). ೧೦೫-೧೩೯.

ಎರಡನೆಯ ಅಧ್ಯಾಯ—ಎರಡನೆಯ ವಲ್ಲಿ

ಶಾರೀರಾತ್ಮನ ನಿಜವನ್ನು ಅರಿತರೆ ಮುಕ್ತಿ (೧೩೯)-ಆತ್ಮನನ್ನು ಕಂಡುಹಿಡಿಯುವದಕ್ಕೆ ಹೆಗ್ಗುರುತುಗಳು (೧೪೪)-ಬ್ರಹ್ಮಾತ್ಮೈಕತ್ವ (೧೪೬)-ಬ್ರಹ್ಮವು ಸ್ವಪ್ರಕಾಶವು (೧೫೯) ೧೩೯-೧೬೨.

ಎರಡನೆಯ ಅಧ್ಯಾಯ–ಮೂರನೆಯ ವಲ್ಲಿ

ಜಗತ್ಕಾರಣವೇ ಬ್ರಹ್ಮ (೧೬೨)–ಜಗತ್ತಿನ ವ್ಯವಸ್ಥೆಗೆ ಕಾರಣವಾಗಿರುವದು ಬ್ರಹ್ಮ (೧೬೬)–ಬ್ರಹ್ಮವನ್ನು ಈ ಲೋಕದಲ್ಲಿಯೇ ಅರಿತುಕೊಳ್ಳಬೇಕು (೧೬೯)–ಇಂದ್ರಿಯಾದಿಗಳಿಂದ ಆತ್ಮನನ್ನು ವಿಂಗಡಿಸಿ ಅರಿತುಕೊಳ್ಳಬೇಕು (೧೭೨)–ಜ್ಞಾನಕ್ಕೆ ಸಾಧನವಾದ ಯೋಗ (೧೭೭)–ಬ್ರಹ್ಮಜ್ಞಾನವೂ ಅದರ ಫಲವೂ (೧೮೦) ಉಪಸಂಹಾರ (೧೯೦). ೬೧೨–೧೯೬.

ಉಪನಿಷತ್ತಿನ ಸಾರ	೧೯೭–೨೦೨
ಮಂತ್ರಗಳ ಅನುಕ್ರಮಣಿಕೆ	೨೦೩–೨೦೭
ಶಬ್ದಾನುಕ್ರಮಣಿಕೆ	೨೦೮–೨೧೬

॥ ಓಂ ॥

ಶ್ರೀ ಶಾಂಕರಭಾಷ್ಯಸಮೇತವಾದ

ಕಾ ಠ ಕೋ ಪ ನಿ ಷ ತ್ತು

ಭಾಷ್ಯಕಾರರ ಅವತರಣಿಕೆ

(ಭಾಷ್ಯ)

೧. ಓಂ ನಮೋ ಭಗವತೇ ವೈವಸ್ವತಾಯ ಮೃತ್ಯವೇ ಬ್ರಹ್ಮವಿದ್ಯಾಚಾರ್ಯಾಯ ನಚಿಕೇತಸೇ ಚ। ಅಥ ಕಾಠಕೋಪನಿಷದ್ವಲ್ಲೀನಾಂ ಸುಖಾರ್ಥ ಪ್ರಬೋಧನಾರ್ಥಮ್ ಅಲ್ಪಗ್ರನ್ಥಾ ವೃತ್ತಿರಾರಭ್ಯತೇ ॥

(ಭಾಷ್ಯಾರ್ಥ)

ಓಂ! ಭಗವಂತನೂ[1] ವಿವಸ್ವಂತನ ಮಗನೂ[2] ಬ್ರಹ್ಮವಿದ್ಯಾಚಾರ್ಯನೂ[3] ಆದ ಮೃತ್ಯುವಿಗೂ[4] ನಚಿಕೇತಸ್ಸಿಗೂ ನಮಸ್ಕಾರವು. ಈಗ ಕಾರಕೋಪನಿಷತ್ತಿನ[5]

---

1 ಉತ್ಪತ್ತಿಂ ಚ ವಿನಾಶಂ ಚ ಭೂತಾನಾಮಾಗತಿಂ ಗತಿಮ್। ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ॥ (ಪ್ರಾಣಿಗಳ ಉತ್ಪತ್ತಿಯನ್ನೂ ಪ್ರಲಯವನ್ನೂ ಆಗುಹೋಗುಗಳನ್ನೂ ವಿದ್ಯೆಯನ್ನೂ ಅವಿದ್ಯೆಯನ್ನೂ ಅರಿತಿರುವಾತನನ್ನು ಭಗವಂತನೆನ್ನಬೇಕು) ಎಂದು ಪುರಾಣವಾಕ್ಯ (ವಿ. ಪು ೬-೫-೭೮)

2 ಸೂರ್ಯನ ಮಗನು ಸೂರ್ಯನು ಬ್ರಹ್ಮವಿದ್ಯೆಯನ್ನು ಮನುವಿಗೆ ಹೇಳಿದನೆಂದು ಗೀತೆಯಲ್ಲಿದೆ (೪-೧).

3 ಮೂಲದಲ್ಲಿ ಈ ವಿಶೇಷಣವು ಮೃತ್ಯುವಿಗೂ ನಚಿಕೇತಸ್ಸಿಗೂ ಅನ್ವಯಿಸುವಂತೆ ಇದೆ. ಮೃತ್ಯುವೇ ಉಪನಿಷತ್ತಿನಲ್ಲಿ ಆಚಾರ್ಯನಾಗಿದ್ದರೂ ನಚಿಕೇತಸ್ಸು ಯಮನಿಂದ ಪಡೆದ ವಿದ್ಯೆಯನ್ನು ಭೂಲೋಕದಲ್ಲಿ ಹರಡಿದನು ಎಂಬ ಅರ್ಥವನ್ನು ಸೂಚಿಸುವದಕ್ಕಾಗಿ "ನಚಿಕೇತಸೇ" ಎಂಬ ಮಾತಿನ ಹಿಂದೆ ಈ ವಿಶೇಷಣವನ್ನು ಹಾಕಿರಬೇಕೆಂದು ತೋರುತ್ತದೆ.

4 "ಯಮನಿಗೂ. ಯಮನು ಜ್ಞಾನಿಯಾದರೂ ಅಧಿಕಾರಪುರುಷನಾದ್ದರಿಂದ ಪ್ರಾರಬ್ಧ ಕರ್ಮವು ಮುಗಿಯುವವರೆಗೆ ತನ್ನ ಅಧಿಕಾರದ ಕೆಲಸವನ್ನು ನಡೆಯಿಸುತ್ತಿರುವನು." (ಆ॥ ಟೀ॥) ಸೂ. ಭಾ. ೩-೩-೩೨ ನೋಡಿ.

5. ಕೃಷ್ಣಯಜುರ್ವೇದದಲ್ಲಿ ಕಾಠಕವೆಂಬುದೊಂದು ಶಾಖೆಯುಂಟು. ಈ ಉಪನಿಷತ್ತು ಅದಕ್ಕೆ ಸೇರಿದ್ದೆಂದು ಹೇಳುತ್ತಾರೆ. ಪೀಠಿಕೆಯನ್ನು ನೋಡಿ.

ವಲ್ಲಿಗಳಿಗೆ[1] ಸುಲಭವಾಗಿ ಅರ್ಥವು ತಿಳಿಯಲೆಂದು **ಸ್ವಲ್ಪಗ್ರಂಥದ ವೃತ್ತಿ**[2]ಯನ್ನು ಪ್ರಾರಂಭಿಸಿರುತ್ತದೆ.

ಉಪನಿಷತ್ತೆಂದರೆ ಏನು ?

(ಭಾಷ್ಯ)

೨. ಸದೇರ್ಧಾತೋರ್ವಿಶರಣಗತ್ಯವಸಾದನಾರ್ಥಸ್ಯ, ಉಪನಿಪೂರ್ವಸ್ಯ, ಕ್ವಿಪ್‌ಪ್ರತ್ಯಯಾನ್ತಸ್ಯ ರೂಪಮಿದಮ್[3] "ಉಪನಿಷತ್" ಇತಿ। ಉಪನಿಷಚ್ಛಬ್ದೇನ ಚ ವ್ಯಾಚಿಖ್ಯಾಸಿತಗ್ರನ್ಥಪ್ರತಿಪಾದ್ಯವೇದ್ಯವಸ್ತುವಿಷಯಾ ವಿದ್ಯಾ ಉಚ್ಯತೇ। ಕೇನಪುನರರ್ಥಯೋಗೇನ ಉಪನಿಷಚ್ಛಬ್ದೇನ ವಿದ್ಯಾ ಉಚ್ಯತ ಇತಿ? ಉಚ್ಯತೇ। ಯೇ ಮುಮುಕ್ಷವೋ ದೃಷ್ಟಾನುಶ್ರವಿಕವಿಷಯವಿತೃಷ್ಣಾಃ ಸನ್ತಃ ಉಪನಿಷಚ್ಛಬ್ದವಾಚ್ಯಾಂ ವಕ್ಷ್ಯಮಾಣಲಕ್ಷಣಾಂ ವಿದ್ಯಾಮ್ ಉಪಸದ್ಯ ಉಪಗಮ್ಯ ತನ್ನಿಷ್ಠತಯಾ ನಿಶ್ಚಯೇನ ಶೀಲಯನ್ತಿ, ತೇಷಾಮ್ ಅವಿದ್ಯಾದೇಃ ಸಂಸಾರಬೀಜಸ್ಯ ವಿಶರಣಾತ್ ಹಿಂಸನಾತ್ ವಿನಾಶನಾತ್ ಇತ್ಯನೇನ ಅರ್ಥಯೋಗೇನ ವಿದ್ಯಾ 'ಉಪನಿಷತ್' ಇತ್ಯುಚ್ಯತೇ। ತಥಾ ಚ ವಕ್ಷ್ಯತಿ "ನಿಚಾಯ್ಯ ತಂ ಮೃತ್ಯುಮುಖಾತ್ ಪ್ರಮುಚ್ಯತೇ" (೧-೩-೧೫) ಇತಿ ॥

(ಭಾಷ್ಯಾರ್ಥ)

(೧) ವಿಶರಣ, (೨) ಗತಿ, (೩) ಅವಸಾದನ–ಎಂಬ ಅರ್ಥಗಳುಳ್ಳ[4] 'ಸದ್' ಧಾತುವಿಗೆ ಹಿಂದೆ 'ಉಪ', 'ನಿ'–ಎಂಬ (ಉಪಸರ್ಗಗಳೂ) ಮುಂದೆ ಕ್ವಿಪ್[5] ಎಂಬ ಪ್ರತ್ಯಯವೂ ಬಂದು "ಉಪನಿಷದ್" ಎಂಬ ಈ ರೂಪವಾಗಿರುತ್ತದೆ. ಮತ್ತು (ಈ) "ಉಪನಿಷದ್" ಎಂಬ ಶಬ್ದದಿಂದ (ನಾವು ಈಗ) ವ್ಯಾಖ್ಯಾನಮಾಡಬೇಕೆಂದಿರುವ ಗ್ರಂಥದಲ್ಲಿ ಹೇಳಿರುವದಾಗಿಯೂ (ಮುಮುಕ್ಷುಗಳು) ತಿಳಿದುಕೊಳ್ಳಬೇಕಾದದ್ದಾಗಿಯೂ ಇರುವ ವಸ್ತುವಿನ[6] ವಿಷಯವಾದ ವಿದ್ಯೆಯು ಹೇಳಲ್ಪಡುವದು.

---

1. ಈ ಉಪನಿಷತ್ತಿನ ಅಧ್ಯಾಯದ ವಿಭಾಗಗಳಿಗೆ "ವಲ್ಲಿ"ಗಳೆಂದು ಹೆಸರು.

2. ಭರ್ತೃಪ್ರಪಂಚರು ಮೊದಲಾದವರೂ ಉಪನಿಷತ್ತಿಗೆ ವ್ಯಾಖ್ಯಾನವನ್ನು ಬರೆದಿರುವರಾದರೂ ಅವರ ಗ್ರಂಥವು ಶಬ್ದಗಳ ದೃಷ್ಟಿಯಿಂದ ದೊಡ್ಡದು, ಅರ್ಥದ ದೃಷ್ಟಿಯಿಂದ ಅದರಲ್ಲಿ ಕೊರತೆಯಿದೆ–ಎಂದು ಭಾವ. (ಗೋ॥)

3. 'ಇದಮ್' ಎಂಬ ಮಾತು (ಆ॥) ಪಾಠದಲ್ಲಿಲ್ಲ; ಇಲ್ಲದಿದ್ದರೂ ಸಾಗುತ್ತದೆ.

4. ಈ ಅರ್ಥಗಳನ್ನು ಒಂದೊಂದಾಗಿ ಮುಂದೆ ವಿವರಿಸುವರು.

5 ಕ್ವಿಪ್ ಎಂಬ ಪ್ರತ್ಯಯವು ಬಂದು ಲೋಪವಾಗಿದೆ. ಉಪ + ನಿ + ಸದ್ + ಕ್ವಿಪ್ = ಉಪನಿಷದ್.

6. ಬ್ರಹ್ಮವಸ್ತುವಿನ.

(ಪ್ರಶ್ನೆ) :—ಹಾಗಾದರೆ ಯಾವ ಅರ್ಥದ ಸಂಬಂಧದಿಂದ[1] (ಈ ಮಾತಿನಿಂದ) ವಿದ್ಯೆಯು ಹೇಳಲ್ಪಡುವದು?

(ಉತ್ತರ) :—ಹೇಳುತ್ತೀವೆ (ಕೇಳಿರಿ): ಯಾವ ಮುಮುಕ್ಷುಗಳು (ಈ ಲೋಕದಲ್ಲಿ) ಕಂಡಿರುವವುಗಳಾಗಿಯೂ (ಪರಲೋಕದಲ್ಲಿವೆಯೆಂದು) ಶ್ರುತಿಯಲ್ಲಿ (ಹೇಳಿ)ರುವವುಗಳಾಗಿಯೂ ಇರುವ ವಿಷಯಗಳಲ್ಲಿ ಬಯಕೆಯಿಲ್ಲದವರಾಗಿ ಉಪನಿಷತ್ತು ಎಂಬ ಶಬ್ದಕ್ಕೆ ವಾಚ್ಯವಾದ ಮುಂದೆ ಹೇಳುವಂಥ ವಿದ್ಯೆಯನ್ನು (ಆದರ) ಹತ್ತಿರಕ್ಕೆ ಬಂದು ('ಉಪ') ಅದರಲ್ಲಿಯೇ ತಾತ್ಪರ್ಯವುಳ್ಳವರಾಗಿ ನಿಶ್ಚಯದಿಂದ ('ನಿ') ಪರಿಶೀಲಿಸುವರೋ ಅವರ ಸಂಸಾರಕ್ಕೆ ಬೀಜವಾದ[2] ಅವಿದ್ಯೆಯೇ ಮುಂತಾದವುಗಳನ್ನು[3] ವಿಶರಣಮಾಡುವದರಿಂದ ಎಂದರೆ ಹಿಂಸೆಮಾಡುವದರಿಂದ ವಿನಾಶಗೊಳಿಸುವದರಿಂದ ('ಸದ್')[4]–ಎಂಬೀ ಅರ್ಥದ ಸಂಬಂಧದಿಂದ ವಿದ್ಯೆಯು 'ಉಪನಿಷತ್ತು' ಎನಿಸುತ್ತದೆ. ಆದ್ದರಿಂದಲೇ ಮುಂದೆ (ಶ್ರುತಿಯು) "ಅವನನ್ನು ಅರಿತುಕೊಂಡರೆ ಮೃತ್ಯುವಿನ ಬಾಯಿಯಿಂದ ಬಿಡುಗಡೆಹೊಂದುತ್ತಾನೆ" (೧-೩-೧೫) ಎಂದು ಹೇಳುವದು.

(ಭಾಷ್ಯ)

3. ಪೂರ್ವೋಕ್ತವಿಶೇಷಣಾನ್ ಮುಮುಕ್ಷೂನ್ ವಾ ಪರಂ ಬ್ರಹ್ಮ ಗಮಯತೀತಿ ಬ್ರಹ್ಮಗಮಯಿತೃತ್ವೇನ ಯೋಗಾದ್ ಬ್ರಹ್ಮವಿದ್ಯಾ ಉಪನಿಷತ್। ತಥಾ ಚ ವಕ್ಷ್ಯತಿ "ಬ್ರಹ್ಮಪ್ರಾಪ್ತೋ ವಿರಜೋಽಭೂದ್ ವಿಮೃತ್ಯುಃ" (೨-೩-೧೮) ಇತಿ ॥

(ಭಾಷ್ಯಾರ್ಥ)

ಅಥವಾ ಹಿಂದೆ ಹೇಳಿರುವ ವಿಶೇಷಣಗಳುಳ್ಳ ಮುಮುಕ್ಷುಗಳನ್ನು ಪರಬ್ರಹ್ಮ

---

1 ಕಲ್ಲು, ಮಣ್ಣು-ಮುಂತಾದ ವಸ್ತುಗಳನ್ನು ರೂಢಿಯಿಂದ ಆ ಶಬ್ದಗಳು ಹೇಳುತ್ತವೆ. ಎಳನೀರು, ಒಡನಾಡಿ-ಮುಂತಾದವುಗಳನ್ನು ಯೋಗನೃತ್ತಿಯಿಂದ ಆ ಶಬ್ದಗಳು ಹೇಳುವವು. 'ಉಪನಿಷದ್' ಎಂಬ ಶಬ್ದಕ್ಕೆ ಬ್ರಹ್ಮವಿದ್ಯೆ ಎಂಬುದು ರೂಢಿಯ ಅರ್ಥವೊ, ಯೋಗದ (ಅವಯವಾ)ರ್ಥವೊ?–ಎಂದು ಪ್ರಶ್ನೆ

2. ಕಾರಣವಾದ.

3. ಅವಿದ್ಯೆ, ಕಾಮ, ಕರ್ಮ–ಇವನ್ನು.

4 ಷದ್ಲೃ ವಿಶರಣಗತ್ಯವಸಾದನೇಷು ಎಂದು ಧಾತುವಿಗೆ ಮೂರು ಅರ್ಥಗಳನ್ನು ಕೊಟ್ಟಿತ್ತಷ್ಟೆ; ಈಗ ಮುಮುಕ್ಷುಗಳ ಸಂಸಾರಬೀಜವನ್ನು ನಾಶಪಡಿಸುತ್ತದೆ ಎಂದು ವಿಶರಣಾರ್ಥವನ್ನು ತೋರಿಸಿರುತ್ತಾರೆ. ಮುಮುಕ್ಷುಗಳ ವಿಶೇಷಣದಲ್ಲಿ ಇಹಾಮುತ್ರಫಲಭೋಗವಿರಾಗ (ವಿತೃಷ್ಣಾಃ), ಶಮಾದಿಗಳು (ನಿಶ್ಚಯೇನ), ವಿವೇಕ (ಶೀಲಯನ್ತಿ) ಎಂಬ ಸಾಧನಗಳನ್ನು ಸೂಚಿಸಿರುವದನ್ನು ಲಕ್ಷ್ಯದಲ್ಲಿಡಬೇಕು.

ವನ್ನು ಪಡೆಯಿಸುತ್ತದೆ ಎಂದು ಬ್ರಹ್ಮವನ್ನು ಪಡೆಯಿಸುವದೆಂಬ[1] ('ಸದ್') ಅರ್ಥದ ಯೋಗದಿಂದಲಾದರೂ ಬ್ರಹ್ಮವಿದ್ಯೆಯು ಉಪನಿಷತ್ತೆ(ನಿಸುವದು). ಆದ್ದರಿಂದಲೇ ಮುಂದೆ (ಶ್ರುತಿಯು) "ಬ್ರಹ್ಮವನ್ನು ಹೊಂದಿ ಕಲ್ಮಷವಿಲ್ಲದವನೂ ಮೃತ್ಯುವಿಲ್ಲದವನೂ ಆದನು" (೨-೩-೧೪) ಎಂದು ಹೇಳುವದು

(ಭಾಷ್ಯ)

೪. ಲೋಕಾದಿರ್ಬ್ರಹ್ಮಜಜ್ಞೋ ಯೋಽಗ್ನಿಃ, ತದ್ವಿಷಯಾಯಾ ವಿದ್ಯಾಯಾ ದ್ವಿತೀಯೇನ ವರೇಣ ಪ್ರಾರ್ಥ್ಯಮಾನಾಯಾಃ ಸ್ವರ್ಗಲೋಕಫಲಪ್ರಾಪ್ತಿಹೇತುತ್ವೇನ ಗರ್ಭವಾಸಜನ್ಮಜರಾದ್ಯುಪದ್ರವವೃನ್ದಸ್ಯ ಲೋಕಾನ್ತರೇ ಪೌನಃಪುನ್ಯೇನ ಪ್ರವೃತ್ತಸ್ಯ ಅವಸಾದಯಿತೃತ್ವೇನ ಶೈಥಿಲ್ಯಾಪಾದನೇನ (ಚ?) ಧಾತ್ವರ್ಥಯೋಗಾತ್, ಅಗ್ನಿವಿದ್ಯಾಪಿ "ಉಪನಿಷದ್" ಇತ್ಯುಚ್ಯತೇ। ತಥಾ ಚ ವಕ್ಷ್ಯತಿ "ಸ್ವರ್ಗಲೋಕಾ ಅಮೃತತ್ವಂ ಭಜನ್ತೇ" (೧-೧-೧೩) ಇತ್ಯಾದಿ ॥

(ಭಾಷ್ಯಾರ್ಥ)

(ಇನ್ನು) ಲೋಕಕ್ಕೆಲ್ಲ ಮೊದಲನೆಯವನಾಗಿಯೂ ಬ್ರಹ್ಮನಿಂದ ಹುಟ್ಟಿದವನಾಗಿಯೂ (ಎಲ್ಲವನ್ನೂ) ತಿಳಿಯುವಾತನಾಗಿಯೂ[2] ಇರುವ **ಅಗ್ನಿ**ಯುಂಟಷ್ಟೆ[3], (ನಚಿಕೇತನು ತನಗೆ) ಎರಡನೆಯ ವರವೆಂದು ಪ್ರಾರ್ಥಿಸಿರುವ ಆ (ಅಗ್ನಿ)ವಿಷಯವಾದ ವಿದ್ಯೆಯು[4] **ಸ್ವರ್ಗಲೋಕ**ವೆಂಬ[5] ಫಲವು ದೊರಕುವದಕ್ಕೆ ಕಾರಣವಾಗಿರುವದರಿಂದಲೂ[6] ಅದಕ್ಕಿಂತ ಬೇರೆಯಾದ (ಭೂ)ಲೋಕದಲ್ಲಿ ಮತ್ತೆ ಮತ್ತೆ ಆಗುತ್ತಿರುವ ಗರ್ಭವಾಸ, ಹುಟ್ಟು, ಮುಪ್ಪು–ಮುಂತಾದ ಸಂಕಟಗಳ ಸಮೂಹವನ್ನು ಅವಸಾದನಮಾಡುವದರಿಂದಲೂ ಎಂದರೆ ಸಡಿಲಮಾಡುವದರಿಂದಲೂ[7] (ಸದ್)

---

1. ಇದು ಧಾತುವಿನ ಎರಡನೆಯ ಅರ್ಥವಾದ ಗತಿ ಎಂಬುದನ್ನು ತೆಗೆದುಕೊಂಡು ಬ್ರಹ್ಮವಿದ್ಯೆಗೆ ಉಪನಿಷತ್ತೆಂಬ ಹೆಸರು ಬಂದಿರುವ ಪ್ರಕಾರವನ್ನು ತಿಳಿಸುವದು.

2. ಈ ವಿಶೇಷಣಗಳು ೧-೧-೧೪, ೧-೧-೧೭ ಈ ಮಂತ್ರಗಳನ್ನು ಸೂಚಿಸುವವು.

3 ಅಗ್ನಿ ಎಂದರೆ ಇಲ್ಲಿ ವಿರಾಟ್ಪುರುಷನು. ಸಮಷ್ಟಿಸ್ಥೂಲೋಪಾಧಿಯುಳ್ಳ ಅಪರ ಬ್ರಹ್ಮ.

4 ಪರಬ್ರಹ್ಮವಿದ್ಯೆಯಂತೆ ಅಪರಬ್ರಹ್ಮವಿದ್ಯೆಯಾದ ಉಪಾಸನೆಯೂ ಉಪನಿಷತ್ತೆನಿಸುತ್ತದೆ ಎಂದು ಭಾವ.

5 ಇಲ್ಲಿ ಸ್ವರ್ಗಲೋಕವೆಂದರೆ ಅಪರಬ್ರಹ್ಮಲೋಕವು.

6 ಅಗ್ನಿವಿದ್ಯೆಯು ಸ್ವರ್ಗಲೋಕಕ್ಕೆ ಕಾರಣವಾಗಿರುವದರಿಂದ ಸದ್ ಧಾತುವಿನ 'ಗತಿ' ಎಂಬರ್ಥವನ್ನು ಇಟ್ಟುಕೊಂಡರೆ ಉಪನಿಷತ್ತೆಂಬ ಹೆಸರಿಗೆ ತಕ್ಕದ್ದೆಂದಾಗುವದೆಂದು ಭಾವ.

7 ಗರ್ಭವಾಸಾದಿಗಳು ಅಗ್ನಿವಿದ್ಯೆಯಿಂದ ಅತ್ಯಂತವಾಗಿ ಹೋಗದಿದ್ದರೂ ಅವು ಒಂದು ಕಲ್ಪದವರೆಗೆ ಇಲ್ಲದಂತೆ ಆಗುವವು; ಸ್ವರ್ಗಲೋಕದಲ್ಲಿ ಈ ದುಃಖಗಳಿಲ್ಲವಾದ್ದರಿಂದ ಇವನ್ನು ಅದು ಸಡಿಲಮಾಡುವದು ಎಂದಿರುತ್ತದೆ.

ಧಾತುವಿನ ಅರ್ಥವು (ಅಗ್ನಿವಿದ್ಯೆಗೂ) ಇರುವದರಿಂದ ಅಗ್ನಿವಿದ್ಯೆಯೂ ಉಪನಿಷತ್ತು ಎನಿಸುವದು. ಆದ್ದರಿಂದಲೇ ಮುಂದೆ (ಶ್ರುತಿಯು) "ಸ್ವರ್ಗಲೋಕ(ವನ್ನು ಪಡೆದವರು) ಅಮೃತತ್ವವನ್ನು[1] ಪಡೆಯುವರು" (೧-೧-೧೩) ಎಂದು ಮುಂತಾಗಿ (ಇದನ್ನೂ) ಹೇಳುವದು.

(ಭಾಷ್ಯ)

೫ ನನು ಚ ಉಪನಿಷಚ್ಛಬ್ದೇನ ಅಧ್ಯೇತಾರೋ ಗ್ರನ್ಥಮಪ್ಯಭಿಲಪನ್ತಿ "ಉಪನಿಷದಮ್ ಅಧೀಮಹೇ," (ಇತಿ) "(ಉಪನಿಷದಮ್)[2] ಅಧ್ಯಾಪಯಾಮಃ" ಇತಿ ಚೈವಮ್ । ನೈಷ ದೋಷಃ । ಅವಿದ್ಯಾದಿಸಂಸಾರಹೇತುವಿಶರಣಾದೇಃ ಸದಿ ಧಾತ್ವರ್ಥಸ್ಯ ಗ್ರನ್ಥಮಾತ್ರೇ ಅಸಮ್ಭವಾತ್, ವಿದ್ಯಾಯಾಂ ಚ ಸಮ್ಭವಾತ್ । ಗ್ರನ್ಥಸ್ಯಾಪಿ ತಾದರ್ಥ್ಯೇನ ತಚ್ಛಬ್ದತ್ವೋಪಪತ್ತೇಃ । "ಆಯುರ್ವೈ ಘೃತಮ್" (ತೈ. ಸಂ. ೨-೩-೧೧) ಇತ್ಯಾದಿವತ್ । ತಸ್ಮಾತ್, ವಿದ್ಯಾಯಾಂ ಮುಖ್ಯಯಾ ವೃತ್ತ್ಯಾ ಉಪನಿಷಚ್ಛಬ್ದೋ ವರ್ತತೇ । ಗ್ರನ್ಥೇತು ಭಕ್ತ್ಯಾ ಇತಿ ॥

(ಭಾಷ್ಯಾರ್ಥ)

(ಶಂಕೆ) —ಅಧ್ಯಯನಮಾಡುವವರು "ಉಪನಿಷತ್ತನ್ನು ಅಧ್ಯಯನಮಾಡುತ್ತಿದ್ದೇವೆ" ಎಂದೂ "(ಉಪನಿಷತ್ತನ್ನು) ಹೇಳಿಕೊಡುತ್ತಿದ್ದೇವೆ" ಎಂದೂ ಈ ಬಗೆಯಾಗಿ "ಉಪನಿಷತ್ತು" ಎಂಬ ಶಬ್ದದಿಂದ ಗ್ರಂಥವನ್ನೂ ಹೇಳುತ್ತಿರುವರಲ್ಲ!

(ಪರಿಹಾರ).—ಇದೇನೂ ತಪ್ಪಲ್ಲ ಏಕೆಂದರೆ ಅವಿದ್ಯೆಯೇ ಮುಂತಾದ ಸಂಸಾರಹೇತುಗಳನ್ನು ನಾಶಮಾಡುವದು ಮುಂತಾದ[3] 'ಸದ್' ಧಾತುವಿನ ಅರ್ಥವು ಬರಿಯ ಗ್ರಂಥಕ್ಕೆ ಹೊಂದುವಹಾಗಿಲ್ಲ, ಮತ್ತು ವಿದ್ಯೆಗೆ ಹೊಂದುತ್ತದೆ. (ಆದ್ದರಿಂದ ವಿದ್ಯೆಯೇ ನಿಜವಾದ ಉಪನಿಷತ್ತು); ಆ (ವಿದ್ಯೆಗೆ) ಕಾರಣವಾಗಿರುವದರಿಂದ ಗ್ರಂಥವೂ ಆ (ಉಪನಿಷತ್ತೆಂಬ) ಶಬ್ದದಿಂದ (ಕರೆಯಲ್ಪಡ)ಬಹುದಾಗಿದೆ. "ತುಪ್ಪವೇ ಆಯುಸ್ಸು" (ತೈ. ಸಂ. ೨-೩-೧೧) ಮುಂತಾದ (ಪ್ರಯೋಗಗಳಂತೆಯೇ[4] (ಇದು) ಆದ್ದರಿಂದ ಉಪನಿಷತ್ತು ಎಂಬ ಶಬ್ದವು ವಿದ್ಯೆಯಲ್ಲಿ ಮುಖ್ಯ

---

1 ಇದು ಸಾಪೇಕ್ಷವಾದ ಅಮೃತತ್ವವು, ಇತರ ಲೋಕಗಳ ಮರ್ತ್ಯತ್ವಕ್ಕೆ ಹೋಲಿಸಿದರೆ ಬಹುಕಾಲ ಮರಣವಿಲ್ಲದೆ ಇರುವ ಸ್ಥಿತಿಯು.

2 ಈ ಮಾತು ವಾ॥ ಪಾಠದಲ್ಲಿ ಮಾತ್ರ ಇದೆ.

3 ಬ್ರಹ್ಮವನ್ನು ಪಡೆಯಿಸುವದು ಎಂಬರ್ಥವನ್ನು 'ಮುಂತಾದ' ಎಂಬದರಿಂದ ಗ್ರಹಿಸಬೇಕು.

4. ತುಪ್ಪವು ಆಯುಸ್ಸು ಎಂದರೆ ಆಯುಸ್ಸು ಹೆಚ್ಚುವದಕ್ಕೆ ಕಾರಣವಾಗಿರುವದು ಎಂದರ್ಥ; ಇದರಂತೆ 'ಗ್ರಂಥವು ಉಪನಿಷತ್ತು' ಎಂದರೆ ಉಪನಿಷತ್ತಿಗೆ, ವಿದ್ಯೆಗೆ, ಕಾರಣವಾದದ್ದು ಎಂದರ್ಥ.

ವೃತ್ತಿಯಿಂದ ಬಂದಿರುತ್ತದೆ; ಗ್ರಂಥದಲ್ಲಿಯೋ ಎಂದರೆ ಗೌಣವೃತ್ತಿಯಿಂದ (ಬಂದಿರುತ್ತದೆ ಎಂದು ನಿಶ್ಚಯಿಸಬೇಕು).

ಉಪನಿಷತ್ತಿನ ಅನುಬಂಧಚತುಷ್ಟಯ

(ಭಾಷ್ಯ)

೬. ಏವಮ್ ಉಪನಿಷನ್ನಿರ್ವಚನೇನೈವ ವಿಶಿಷ್ಟೋಽಧಿಕಾರೀ ವಿದ್ಯಾಯಾಮ್ ಉಕ್ತಃ। ವಿಷಯಶ್ಚ ವಿಶಿಷ್ಟ ಉಕ್ತೋ ವಿದ್ಯಾಯಾಃ ಪರಂ ಬ್ರಹ್ಮ ಪ್ರತ್ಯಗಾತ್ಮಭೂತಮ್। ಪ್ರಯೋಜನಂ ಚಾಸ್ಯಾ (ಉಪನಿಷದಃ)[1] ಅತ್ಯನ್ತಿಕೀ ಸಂಸಾರನಿವೃತ್ತಿರ್ಬ್ರಹ್ಮಪ್ರಾಪ್ತಿಲಕ್ಷಣಾ। ಸಮ್ಬನ್ಧಶ್ಚೈವಂಭೂತಪ್ರಯೋಜನೇನ ಉಕ್ತಃ। ಅತೋ ಯಥೋಕ್ತಾಧಿಕಾರಿವಿಷಯಪ್ರಯೋಜನಸಮ್ಬನ್ಧಾಯಾ ವಿದ್ಯಾಯಾಃ ಕರತಲನ್ಯಸ್ತಾಮಲಕವತ್ ಪ್ರಕಾಶಕತ್ವೇನ ವಿಶಿಷ್ಟಾಧಿಕಾರಿವಿಷಯಪ್ರಯೋಜನಸಮ್ಬನ್ಧ ಏತಾ ವಲ್ಲ್ಯೋ ಭವನ್ತಿ। ಇತ್ಯತಸ್ತಾ ಯಥಾಪ್ರತಿಭಾನಂ ವ್ಯಾಚಕ್ಷ್ಮಹೇ॥

(ಭಾಷ್ಯಾರ್ಥ)

ಈರೀತಿಯಲ್ಲಿ ಉಪನಿಷತ್ತಿಂದರೇನೆಂಬುದನ್ನು ಗೊತ್ತುಪಡಿಸಿ ಹೇಳಿದ್ದರಿಂದಲೇ ವಿದ್ಯೆಗೆ ತಕ್ಕ **ಅಧಿಕಾರಿ**[2] (ಯಾರೆಂಬುದನ್ನು) ಹೇಳಿದಂತಾಯಿತು. ಒಳಗಿನ ಆತ್ಮನಾಗಿರುವ ಪರಬ್ರಹ್ಮವೇ[3] ಇದಕ್ಕೆ ಅಸಾಧಾರಣ**ವಿಷಯ**ವೆಂದೂ ಹೇಳಿದಂತಾಯಿತು. ಈ (ಉಪನಿಷತ್ತಿಗೆ) ಬ್ರಹ್ಮಪ್ರಾಪ್ತಿರೂಪವಾದ ಆತ್ಯಂತಿಕವಾದ ಸಂಸಾರನಿವೃತ್ತಿಯೇ[4] **ಪ್ರಯೋಜನ**(ವೆಂದೂ ಹೇಳಿದಂತಾಯಿತು).[5] (ಉಪನಿಷತ್ತಿಗೂ) ಇಂಥ ಪ್ರಯೋಜನಕ್ಕೂ ಇರುವ **ಸಮ್ಬನ್ಧ**[6] ವನ್ನೂ ಹೇಳಿದಂತಾಯಿತು ಆದ್ದರಿಂದ ಹಿಂದೆ ಹೇಳಿದಂತೆ ಅಧಿಕಾರಿ, ವಿಷಯ, ಪ್ರಯೋಜನ,

---

1 ಈ ಮಾತು (ಆ॥) ಪಾಠದಲ್ಲಿ ಮಾತ್ರ ಇದೆ.

2. ಹಿಂದೆ ೨ನೇ ಭಾಷ್ಯದಲ್ಲಿ ಹೇಳಿರುವ ವಿಶೇಷಣಗಳುಳ್ಳವರೇ ಅಧಿಕಾರಿಗಳು-ಎಂದರ್ಥ.

3. ಕೇ. ಭಾ. ದ ಸಂಬಂಧಗ್ರಂಥಳವನ್ನು ನೋಡಿರಿ.

4 ಬ್ರಹ್ಮವನ್ನು ಜ್ಞಾನದಿಂದ ಪಡೆದುಕೊಂಡಲ್ಲದೆ ಸಂಸಾರವು ಮತ್ತೆ ಬರದಂತೆ ನಾಶವಾಗಲಾರದು. ಆದ್ದರಿಂದ ಬ್ರಹ್ಮವಿದ್ಯೆಗೆ ಸಂಸಾರನಿವೃತ್ತಿಯು ಅಸಾಧಾರಣಪ್ರಯೋಜನವು.

5 ಭಾ. ಭಾ. ೫ರಲ್ಲಿ ಇದನ್ನು ಹೇಳಿರುತ್ತದೆ.

6. ವಿದ್ಯೆಯು ಸಾಧನ, ಸಂಸಾರನಿವೃತ್ತಿಯು ಸಾಧ್ಯ; ಆದ್ದರಿಂದ ವಿದ್ಯೆಯೆಂಬ ಉಪನಿಷತ್ತಿಗೂ ಪ್ರಯೋಜನಕ್ಕೂ ಈ ಬಗೆಯ ಸಾಧನಸಾಧ್ಯಭಾವವು ಎಂದರೆ ಪ್ರಕಾಶಕಪ್ರಕಾಶ್ಯತ್ವ ನೆಂಬ ಸಂಬಂಧವು, ಇದೆ.

ಸಂಬಂಧ–ಇವುಗಳನ್ನುಳ್ಳ ವಿದ್ಯೆಯನ್ನು ಅಂಗೈಯಲ್ಲಿಟ್ಟ ನೆಲ್ಲಿಯಂತೆ[1] ಬೆಳಗಿಸುವದರಿಂದ ಈ ವಲ್ಲಿಗಳಿಗೆ[2] ಅಸಾಧಾರಣವಾದ ಅಧಿಕಾರಿ, ವಿಷಯ, ಪ್ರಯೋಜನ, ಸಂಬಂಧ–ಇವುಗಳು ಇದ್ದಂತಾಯಿತು. ಆದ್ದರಿಂದ[3] ಇವುಗಳನ್ನು ತಿಳಿದಮಟ್ಟಿಗೆ ವ್ಯಾಖ್ಯಾನಮಾಡುತ್ತೇವೆ.

---

1. ಪೂರ್ಣವಾಗಿ, ಸಂಶಯಕ್ಕೆ ಎಡೆಯಿಲ್ಲದಂತೆ.

2. ವಲ್ಲಿಗಳು ಕಠೋಪನಿಷತ್ತಿನ ಭಾಗಗಳು. ಗ್ರಂಥರೂಪವಾದ ಈ ಉಪನಿಷತ್ತು ವಿದ್ಯೆಯನ್ನು ತಿಳಿಸಿಕೊಡುತ್ತದೆ. ವಿದ್ಯೆಗೆ ಮೇಲೆ ಹೇಳಿದಂತೆ ಅಧಿಕಾರಿಯೇ ಮುಂತಾದ ಅನುಬಂಧಗಳಿವೆ. ಆದ್ದರಿಂದ ಗ್ರಂಥಕ್ಕೂ ಇವು ಇದ್ದಂತಾಯಿತೆಂದು ಭಾವ.

3. ಗ್ರಂಥವು ಯಾರಿಗೆ, ಏನನ್ನು ಹೇಳುವದು, ಯಾವ ಪ್ರಯೋಜನವನ್ನು ಕೊಡತಕ್ಕದ್ದು, ಗ್ರಂಥಕ್ಕೂ ಪ್ರಯೋಜನಾದಿಗಳಿಗೂ ಸಂಬಂಧವೇನು ?–ಎಂಬದನ್ನು ತಿಳಿಸುವದು ಅತ್ಯವಶ್ಯ. ಏಕೆಂದರೆ ಈ ಅನುಬಂಧಚತುಷ್ಟಯವಿಲ್ಲದಿದ್ದರೆ ಯಾರೂ ಗ್ರಂಥವನ್ನು ಓದಲಾರರು.

ಒಂದನೆಯ ಅಧ್ಯಾಯ—ಒಂದನೆಯ ವಲ್ಲಿ

ನಚಿಕೇತನು ಯಮನಬಳಿಗೆ ಹೋದದ್ದು

ಉಶನ್ ಹ ವೈ ವಾಜಶ್ರವಸಃ ಸರ್ವವೇದಸಂ ದದೌ ।
ತಸ್ಯ ಹ ನಚಿಕೇತಾ ನಾಮ ಪುತ್ರ ಆಸ ॥ ೧ ॥

೧. ಬಯಸುವವನಾಗಿ ವಾಜಶ್ರವಸನು ಸರ್ವವೇದಸವನ್ನು ಕೊಟ್ಟನಂತೆ. ಅವನಿಗೆ ನಚಿಕೇತಸ್ಸೆಂಬ ಮಗನಿದ್ದನಂತೆ.

(ಭಾಷ್ಯ)

೧. ತತ್ರ ಆಖ್ಯಾಯಿಕಾ ವಿದ್ಯಾಸ್ತುತ್ಯರ್ಥಾ । ಉಶನ್ ಕಾಮಯಮಾನಃ ಹ ವೈ ಇತಿ ವೃತ್ತಾನ್ವರ್ಥಸ್ಮರಣಾರ್ಥೌ ನಿಪಾತೌ । ವಾಜಮ್ ಅನ್ನಮ್ ತದ್ದಾನಾದಿ ನಿಮಿತ್ತಂ ಶ್ರವೋ ಯಶೋ ಯಸ್ಯ ಸ ವಾಜಶ್ರವಾಃ । ರೂಢಿತೋ ವಾ । ತಸ ಅಪತ್ಯಂ ವಾಜಶ್ರವಸಃ । ಸ ವಾಜಶ್ರವಸಃ[1] ಕಿಲ ವಿಶ್ವಜಿತಾ ಸರ್ವಮೇಧೇನ್ಯ ಈಜೇ । ತತ್ಫಲಂ ಕಾಮಯಮಾನಃ । ಸ ತಸ್ಮಿನ್ ಕ್ರತೌ ಸರ್ವವೇದಸಂ ಸರ್ವಸ್ವಂ ಧನಂ ದದೌ ದತ್ತವಾನ್ । ತಸ್ಯ ಯಜಮಾನಸ್ಯ ಹ ನಚಿಕೇತಾನಾಮ ಪುತ್ರಃ ಕಿಲ ಆಸ ಬಭೂವ ॥

(ಭಾಷ್ಯಾರ್ಥ)

ಇಲ್ಲಿ ಕಥೆ(ಯನ್ನು ಪ್ರಾರಂಭಿಸಿರುವದು) ವಿದ್ಯೆಯನ್ನು ಹೊಗಳುವದಕ್ಕೆ.[2] ಬಯಸುವವನಾಗಿ ಎಂದರೆ (ಫಲವನ್ನು) ಇಚ್ಛಿಸುವವನಾಗಿ (ಮೂಲದಲ್ಲಿ) 'ಹ', 'ವಾ'—ಎಂಬಿವೆರಡೂ ಹಿಂದೆ ನಡೆದ ವಿಷಯವನ್ನು ನೆನಪುಕೊಡುವ ನಿಪಾತಗಳು.[3] ವಾಜವೆಂದರೆ ಅನ್ನವು, ಅದನ್ನು ದಾನಮಾಡುವದೇ ಮುಂತಾದ ನಿಮಿತ್ತದಿಂದ (ಬಂದ) ಶ್ರವ ಎಂದರೆ ಹೆಸರುವಾಸಿಯನ್ನುಳ್ಳವನಾದ್ದರಿಂದ ವಾಜಶ್ರವಸ್ಸು (ಎಂದು

---

1. "ಸ ವಾಚಶ್ರವಸಃ" ಎಂಬ ಮಾತುಗಳು (ವಾ॥) ಪಾಠದಲ್ಲಿವೆ

2. ಈ ಬ್ರಹ್ಮವಿದ್ಯೆಯನ್ನು ಅಧಿಕಾರಿಕಪುರುಷನಾದ ಯಮನು ಹೇಳಿರುತ್ತಾನೆ. ಶ್ರದ್ಧಾವಂತನೂ ವಿರಕ್ತನೂ ಆದ ನಚಿಕೇತಸ್ಸು ಶ್ರವಣಮಾಡಿ ಮುಕ್ತನಾಗಿರುತ್ತಾನೆ. ಇಂಥ ಹೆಚ್ಚಿನ ಮಹಿಮೆಯದೀವಿದ್ಯೆ—ಎಂದು ವಿದ್ಯೆಯನ್ನು ಹೊಗಳುವದಕ್ಕೆ.

3. ಹ ವಾ ಎಂದಿವು ಅಂತೆ ಎಂಬರ್ಥದ ನಿಪಾತಗಳು ಎಂದರ್ಥ.

ಅವನಿಗೆ ಹೆಸರು); ಅಥವಾ ರೂಢಿಯಿಂದಲೇ[1] (ಆ ಹೆಸರು ಅವನಿಗೆ ಬಂದಿದ್ದರೂ ಇರಬಹುದು). ಅವನ ಮಗನು ವಾಜಶ್ರವಸನು.

ಆ ವಾಜಶ್ರವಸನು 'ವಿಶ್ವಜಿತ್ತು' ಎಂಬ ಸರ್ವಸ್ವದಕ್ಷಿಣೆಯ ಯಾಗವನ್ನು ಮಾಡಿದನಂತೆ. ಆ (ಯಾಗದ) ಫಲವನ್ನು ಬಯಸುವವನಾಗಿ ಅವನು ಆ ಯಜ್ಞದಲ್ಲಿ 'ಸರ್ವವೇದಸಮ್' ಎಂದರೆ ತನ್ನ ಎಲ್ಲಾ ಧನವನ್ನೂ ಕೊಟ್ಟನು, ದಾನಮಾಡಿವನಾದನು. ಆ ಯಜಮಾನನಿಗೆ[2] ನಚಿಕೇತಸ್ಸೆಂಬ ಮಗನಿದ್ದನಂತೆ.

ತಗ್ಂ ಹ ಕುಮಾರಗ್ಂ ಸನ್ತ್ಂ ದಕ್ಷಿಣಾಸು ನೀಯಮಾನಾಸು
ಶ್ರದ್ಧಾ ವಿವೇಶ ಸೋಽಮನ್ಯತ ॥ ೨ ॥

೨. ದಕ್ಷಿಣೆಗಳನ್ನು ಒಯ್ಯುತ್ತಿರುವಾಗ ಕುಮಾರನಾಗಿರುವ ಅವನಿಗೆ ಶ್ರದ್ಧೆಯು ಬಂದುಹೊಕ್ಕಿತು. ಅವನು ಯೋಚಿಸಿಕೊಂಡ(ನೇನೆಂದರೆ):

(ಭಾಷ್ಯ)

ತಂ ಹ ನಚಿಕೇತಸಂ ಕುಮಾರಂ ಪ್ರಥಮವಯಸಂ ಸನ್ತಮ್ ಅಪ್ರಾಪ್ತ ಪ್ರಜನನಶಕ್ತಿಂ ಬಾಲಮೇವ ಶ್ರದ್ಧಾ ಆಸ್ತಿಕ್ಯಬುದ್ಧಿಃ ಪಿತುರ್ಹಿತಕಾಮಪ್ರಯುಕ್ತಾ ಆವಿವೇಶ ಪ್ರವಿಷ್ಟವತೀ। ಕಸ್ಮಿನ್ ಕಾಲೇ ಇತಿ? ಆಹ--ಋತ್ವಿಗ್ಭ್ಯಃ ಸದಸ್ಯೇಭ್ಯಶ್ಚ ದಕ್ಷಿಣಾಸು ನೀಯಮಾನಾಸು ವಿಭಾಗೇನ ಉಪನೀಯಮಾನಾಸು ದಕ್ಷಿಣಾರ್ಥಾಸು ಗೋಷು। ಸ ಆವಿಷ್ಟಶ್ರದ್ಧೋ ನಚಿಕೇತಾ ಅಮನ್ಯತ ॥

(ಭಾಷ್ಯಾರ್ಥ)

ಕುಮಾರನಾಗಿರುವ ಎಂದರೆ (ಇನ್ನೂ) ಮೊದಲನೆಯ ವಯಸ್ಸಿನಲ್ಲಿಯೇ ಇರುವ, (ಮಕ್ಕಳನ್ನು) ಹಡೆಯುವ ಶಕ್ತಿ ಇನ್ನೂ ಬಂದಿಲ್ಲದ, ಬಾಲಕನೇ ಆಗಿರುವ ಆ ನಚಿಕೇತನಿಗೆ[3] ಶ್ರದ್ಧೆಯು, ತಂದೆಗೆ ಒಳ್ಳೆಯದಾಗಲೆಂಬ ಬಯಕೆಯ ನಿಮಿತ್ತದಿಂದಾದ ಆಸ್ತಿಕ್ಯಬುದ್ಧಿಯು, ಬಂದುಹೊಕ್ಕಿತು, ಸೇರಿಕೊಂಡಿತು. ಯಾವ ಕಾಲ

---

1. ವಾಜಶ್ರವಸ್ಸು ಎಂಬ ಶಬ್ದಕ್ಕೆ ಅನ್ನದಾನವೇ ಮುಂತಾದ ಕಾರಣದಿಂದ ಪ್ರಖ್ಯಾತನಾದವನು ಎಂದು ಅವಯವಾರ್ಥವಾಗುತ್ತದೆ. ಇದು ಅನ್ವರ್ಥನಾಮವಾದರೂ ಆಗಿರಬಹುದು, ಅಥವಾ ತಂದೆತಾಯಿಗಳು ಇಟ್ಟಿದ್ದ ಸಂಕೇತನಾಮವಾದರೂ ಆಗಿರಬಹುದು— ಎಂದರ್ಥ.

2. ಯಜ್ಞಮಾಡಿದ ವಾಜಶ್ರವಸನಿಗೆ.

3. 'ನಚಿಕೇತಸ್ಸು', 'ನಚಿಕೇತ'—ಎಂದು ಎರಡು ಬಗೆಯಲ್ಲಿಯೂ ಕನ್ನಡದಲ್ಲಿ ಪ್ರಯೋಗಿಸಬಹುದು. ಇನ್ನು ಮುಂದೆ 'ನಚಿಕೇತ' ಎಂದೇ ಬರೆಯುವೆವು.

ದಲ್ಲಿ?–ಎಂದರೆ (ಶ್ರುತಿಯು) ಹೇಳುತ್ತದೆ: **ಋತ್ವಿಕ್ಕರುಗಳಿಗೂ**[1] **ಸದಸ್ಯರಿಗೂ**[2] ದಕ್ಷಿಣೆಗಳನ್ನು ಒಯ್ಯುತ್ತಿರುವಾಗ, ಎಂದರೆ ದಕ್ಷಿಣೆಗಾಗಿ ಗೋವುಗಳನ್ನು (ಕೊಡುವದಕ್ಕೆಂದು ಅವರವರಿಗೆ) ಬೇರೆಬೇರೆಯಾಗಿ ಒಯ್ಯುತ್ತಿರುವಾಗ (ಶ್ರದ್ಧೆಯು ಬಂದಿತು). ಆ ಶ್ರದ್ಧೆಯಿಂದೊಡಗೂಡಿದ[3] ನಚಿಕೇತನು ಯೋಚಿಸಿಕೊಂಡದ್ದೇನೆಂದರೆ:

ಪೀತೋದಕಾ ಜಗ್ಧತೃಣಾ
ದುಗ್ಧದೋಹಾ ನಿರಿನ್ದ್ರಿಯಾಃ।
ಅನನ್ದಾ ನಾಮ ತೇ ಲೋಕಾ-
ಸ್ತಾꣳ ಸ ಗಚ್ಛತಿ ತಾ ದದತ್ ॥ ೩ ॥

೩. ನೀರುಕುಡಿದವುಗಳಾಗಿಯೂ ಹುಲ್ಲುಮೇದವುಗಳಾಗಿಯೂ ಹಾಲುಕರೆದವುಗಳಾಗಿಯೂ ಇಂದ್ರಿಯ(ಶಕ್ತಿ)ಯಿಲ್ಲದವುಗಳಾಗಿಯೂ (ಇರುವ) ಇಂಥ (ಹಸುಗಳನ್ನು) ದಾನಮಾಡುವವನು 'ಅನಂದ' ಎಂಬ ಆ ಲೋಕಗಳನ್ನು ಪಡೆಯುವನು.

(ಭಾಷ್ಯ)

೯. ಕಥಮಿತಿ? ಉಚ್ಯತೇ। "ಪೀತೋದಕಾಃ" ಇತ್ಯಾದಿನಾ ದಕ್ಷಿಣಾರ್ಥಾ ಗಾವೋ ವಿಶೇಷ್ಯನ್ತೇ। ಪೀತಮ್ ಉದಕಂ ಯಾಭಿಸ್ತಾಃ ಪೀತೋದಕಾಃ। ಜಗ್ಧಂ ಭಕ್ಷಿತಂ ತೃಣಂ ಯಾಭಿಸ್ತಾ ಜಗ್ಧತೃಣಾಃ। ದುಗ್ಧೋ ದೋಹಃ ಕ್ಷೀರಾಖ್ಯೋ ಯಾಸಾಂ ತಾಃ ದುಗ್ಧದೋಹಾಃ। ನಿರಿನ್ದ್ರಿಯಾಃ ಪ್ರಜನನಾಸಮರ್ಥಾಃ[4] ಜೀರ್ಣಾಃ ನಿಷ್ಫಲಾ ಗಾವ ಇತ್ಯರ್ಥಃ। ಯಾಸ್ತಾ ಏವಂಭೂತಾ ಋತ್ವಿಗ್ಭ್ಯೋ ದಕ್ಷಿಣಾಬುದ್ಧ್ಯಾ ದದತ್ ಪ್ರಯಚ್ಛನ್ ಅನನ್ದಾಃ ಅನಾನನ್ದಾಃ ಅಸುಖಾನಾಮ ಇತ್ಯೇತತ್। ಯೇ ತೇ ಲೋಕಾಃ ತಾꣳ ಸಃ ಯಜಮಾನಃ ಗಚ್ಛತಿ ॥

(ಭಾಷ್ಯಾರ್ಥ)

ಹೇಗೆ (ಯೋಚಿಸಿಕೊಂಡನು)? ಎಂದರೆ (ಶ್ರುತಿಯು) ಹೇಳುತ್ತದೆ:

---

1. ಯಾಗದಲ್ಲಿ ಯಜಮಾನನಿಗೆ ಸಹಾಯಮಾಡುವವರು.

2. ಯಜ್ಞವು ನಡೆಯುತ್ತಿರುವ ಸಭೆಯಲ್ಲಿ ನೋಡುತ್ತಾ ಕುಳಿತಿರುವ ವಿದ್ವಾಂಸರು. ಆ ಸಭೆಗೆ 'ಸದಸ್ಸು' ಎಂದು ಹೆಸರು.

3. ಕರ್ಮಕ್ಕೆ ಶ್ರದ್ಧೆಯು ಬಹಳ ಮುಖ್ಯ. ಇನ್ನೂ ಹುಡುಗನಾದ ನಚಿಕೇತನಿಗೆ ಕರ್ಮಶ್ರದ್ಧೆಯು ಇಷ್ಟು ಬಲವಾಗಿರುವದರಿಂದ ಅವನ ಚಿತ್ತವು ಮೇಲುಮಟ್ಟದಲ್ಲಿರುವದೆಂಬುದು ಸ್ಪಷ್ಟವಾಗುತ್ತದೆ.

4. "ಅಪ್ರಜನನಸಮರ್ಥಾಃ" ಎಂದು (ಆ॥) ಪಾಠ.

ಪೀತೋದಕಾಃ ಮುಂತಾದವು ದಕ್ಷಿಣೆಗಾಗಿ (ಒಯ್ಯುತ್ತಿದ್ದ) ಗೋವುಗಳ ವಿಶೇಷಣಗಳು. ನೀರನ್ನು ಕುಡಿದದ್ದು ಆಗಲೆ ಆಗಿಬಿಟ್ಟಿದೆ, ಅಂಥವು 'ಪೀತೋದಕಾಃ' (ಎನಿಸುವವು), ಹುಲ್ಲನ್ನು ತಿಂದದ್ದು ಮೇದದ್ದು ಆಗಲೆ ಆಗಿಬಿಟ್ಟಿದೆ, ಅಂಥವು 'ಜಗ್ಧತೃಣಾಃ', ಹಾಲೆಂಬ ಕರೆಯುವ (ವಸ್ತುವನ್ನು) ಕರೆದದ್ದು ಆಗಲೆ ಆಗಿಬಿಟ್ಟಿದೆ, ಅಂಥವು 'ದುಗ್ಧದೋಹಾಃ', 'ನಿರಿನ್ದ್ರಿಯಾಃ' ಎಂದರೆ ಕರುಹಾಕಲಾರದೆ ಮುದಿಯಾಗಿರುವವು, ಬರಡಾಗಿರುವ ಆಕಳುಗಳು ಎಂದರ್ಥ. ಯಾವ (ಹಸುಗಳು) ಇಂಥವೋ ಅವನ್ನು ಈ ಜಾತಿಯ (ಹಸುಗಳನ್ನು) ಋತ್ವಿಕ್ಕುಗಳಿಗೆ ದಕ್ಷಿಣೆಯೆಂಬ ಭಾವನೆಯಿಂದ ದಾನಮಾಡುವವನು, ಕೊಡುವವನು ಅನಂದ–ಅನಾನಂದ–ಸುಖವಿಲ್ಲದವು ಎಂಬ ಎಂದರ್ಥ. (ಈ ಹೆಸರಿನ) ಲೋಕಗಳಿವೆಯಲ್ಲ, ಅವುಗಳನ್ನು ಆ ಯಜಮಾನನು ಪಡೆಯುವನು.

ಸ ಹೋವಾಚ ಪಿತರಂ ತತ ಕಸ್ಮೈ ಮಾಂ ದಾಸ್ಯಸೀತಿ ।
ದ್ವಿತೀಯಂ ತೃತೀಯಂ ತಗ್ಂ ಹೋವಾಚ ಮೃತ್ಯವೇ ತ್ವಾ
ದದಾಮೀತಿ ॥ ೪ ॥

೪. ಅವನು "ತಂದೆಯೆ, ನನ್ನನ್ನು ಯಾರಿಗೆ ದಾನಮಾಡುತ್ತೀಯೆ? ಎಂದು ತಂದೆಯನ್ನು ಕೇಳಿದನಂತೆ. ಎರಡನೆಯ (ಸಲ)ವೂ ಕೇಳಿದನಂತೆ. ಅವನನ್ನು ಕುರಿತು "ಮೃತ್ಯುವಿಗೆ ನಿನ್ನನ್ನು ಕೊಟ್ಟೆರುತ್ತೇನೆ" ಎಂದನಂತೆ

(ಭಾಷ್ಯ)

೧೦. ತದೇವಂ ಕ್ರತ್ವಸಮ್ಪತ್ತಿನಿಮಿತ್ತಂ ಪಿತುರನಿಷ್ಟಂ ಫಲಂ ಮಯಾ ಪುತ್ರೇಣ ಸತಾ ನಿವಾರಣೀಯಮ್ ಆತ್ಮಪ್ರದಾನೇನಾಪಿ ಕ್ರತುಸಮ್ಪತ್ತಿಂ ಕೃತ್ವಾ ಇತ್ಯೇವಂ ಮತ್ವಾ[1] ಪಿತರಮ್ ಉಪಗಮ್ಯ ಸ ಹೋವಾಚ ಪಿತರಮ್ ॥

(ಭಾಷ್ಯಾರ್ಥ)

ಹೀಗೆ ಯಜ್ಞವು ಪೂರ್ಣವಾಗದೆ ಇರುವ ನಿಮಿತ್ತದಿಂದ ತಂದೆಗೆ (ಆಗಬಹುದಾದ ಅನಿಷ್ಟವಾದ ಫಲವನ್ನು[2] ಮಗನಾದ ನಾನು ನನ್ನನ್ನೇ ಆದರೂ ದಾನಮಾಡಿಕೊಂಡು ಯಜ್ಞವನ್ನು ಪರಿಪೂರ್ತಿಗೊಳಿಸಿ ನಿವಾರಿಸತಕ್ಕದ್ದು (ಯುಕ್ತವು)–ಎಂದು ಯೋಚಿಸಿಕೊಂಡು ತಂದೆಯ ಬಳಿಗೆ ಬಂದು (ಆ) ತಂದೆಯನ್ನು ಕುರಿತು ಅವನಿಂತೆಂದನು.

---

1. "ಮನ್ಯಮಾನಃ" ಎಂದು (ವಾ॥) ಪಾಠ.

2. ಕರ್ಮವು ಪರಿಪೂರ್ಣವಾಗದಿದ್ದರೆ ಅದರ ಫಲವು ದೊರಕುವದಿಲ್ಲ; ಆದರಿಂದ ಕೆಟ್ಟ ಫಲವೂ ಆಗಬಹುದು.

(ಭಾಷ್ಯ)

೧೧. ಹೇ ತತ ತಾತ ಕಸ್ಮೈ ಋತ್ವಿಗ್ವಿಶೇಷಾಯ ದಕ್ಷಿಣಾರ್ಥಂ ಮಾಂ ದಾಸ್ಯಸೀತಿ ಪ್ರಯಚ್ಛಸೀತ್ಯೇತತ್ । ಏವಮುಕ್ತೇನ ಪಿತ್ರಾ ಉಪೇಕ್ಷ್ಯಮಾಣೋಽಪಿ ದ್ವಿತೀಯಂ ತೃತೀಯಮಪಿ ಉವಾಚ "ಕಸ್ಮೈ ಮಾಂ ದಾಸ್ಯಸಿ, ಕಸ್ಮೈ ಮಾಂ ದಾಸ್ಯಸಿ ?" ಇತಿ । ನಾಯಂ ಕುಮಾರಸ್ವಭಾವ ಇತಿ ಕ್ರುದ್ಧಃ ಸ ಪಿತಾ ತಂ ಹ ಪುತ್ರಂ ಕಿಲ ಉವಾಚ "ಮೃತ್ಯವೇ ವೈವಸ್ವತಾಯ ತ್ವಾ ತ್ವಾಂ ದದಾಮಿ" ಇತಿ ॥

(ಭಾಷ್ಯಾರ್ಥ)

ಎಲೈ 'ತತ', ತಂದೆಯೆ, ಯಾವ ಗೊತ್ತಾದ ಋತ್ವಿಜನಿಗೆ ದಕ್ಷಿಣೆಗಾಗಿ ನನ್ನನ್ನು ದಾನಮಾಡುತ್ತೀಯೆ, ಎಂದರೆ ಕೊಡುತ್ತೀಯೆ ? ಎಂದರ್ಥ. ಹೀಗೆಂದ ಬಳಿಕ ತಂದೆಯು ಉಪೇಕ್ಷೆಮಾಡಿದರೂ (ಬಿಡದೆ) ಎರಡನೆಯ ಸಲವೂ ಮೂರನೆಯ ಸಲವೂ "ನನ್ನನ್ನು ಯಾರಿಗೆ ಕೊಡುವೆ, ನನ್ನನ್ನು ಯಾರಿಗೆ ಕೊಡುವೆ?" ಎಂದು (ಮತ್ತೆ ಮತ್ತೆ) ಕೇಳಿದನು. ತಂದೆಯು ಇವನು ಕುಮಾರಸ್ವಭಾವದವನಾಗಿಲ್ಲ[1] ಎಂದು ಸಿಟ್ಟಾಗಿ ಆ ಪುತ್ರನನ್ನು ಕುರಿತು "ನಿನ್ನನ್ನು ಮೃತ್ಯುವಿಗೆ ಎಂದರೆ ವಿವಸ್ವಂತನ ಮಗನಿಗೆ ಕೊಟ್ಟಿರುತ್ತೇನೆ" ಎಂದನಂತೆ

(ಭಾಷ್ಯ)

೧೩. ಸ ಏವಮುಕ್ತಃ ಪುತ್ರಃ ಏಕಾನ್ತೇ ಪರಿದೇವಯಾಂಚಕಾರ । ಕಥಮಿತಿ ? ಉಚ್ಯತೇ—

(ಭಾಷ್ಯಾರ್ಥ)

ಹೀಗೆಂದು ಹೇಳಲು ಆ ಮಗನು ಏಕಾಂತದಲ್ಲಿ (ತನ್ನಲ್ಲಿ ತಾನು) ಚಿಂತಿಸುತ್ತಿದ್ದನು. ಹೇಗೆಂದರೆ (ಮುಂತ್ರವು) ಹೇಳುತ್ತದೆ

ಬಹೂನಾಮೇಮಿ ಪ್ರಥಮೋ
ಬಹೂನಾಮೇಮಿ ಮಧ್ಯಮಃ ।
ಕಿಗ್ಂ ಸ್ವಿದ್ಯಮಸ್ಯ ಕರ್ತವ್ಯಂ
ಯನ್ಮಯಾದ್ಯ ಕರಿಷ್ಯತಿ ॥ ೫ ॥

೫. ಬಹುಜನರಲ್ಲಿ ಮೊದಲನೆಯವನಾಗಿ ಹೋಗುತ್ತಿರುವೆನು, ಬಹುಜನರಲ್ಲಿ ಮಧ್ಯಮನಾಗಿ ಹೋಗುತ್ತಿರುವೆನು. ನನ್ನಿಂದ ಈಗ (ತಾನು) ಮಾಡಿಕೊಳ್ಳಬೇಕಾಗಿರುವ ಯಮನ ಕರ್ತವ್ಯವೇನಿದ್ದೀತು ?

---

1. ಹುಡುಗನಾದ್ದರಿಂದ ತಿಳಿಯದೆ ಆಡಿದ ಮಾತೆನ್ನುವದಕ್ಕೆ ಬರುವದಿಲ್ಲವೆಂದು ಭಾವ.

(ಭಾಷ್ಯ)

೧೩. ಬಹೂನಾಂ ಶಿಷ್ಯಾಣಾಂ ಪುತ್ರಾಣಾಂ ವಾ ಏಮಿ ಗಚ್ಛಾಮಿ ಪ್ರಥಮಃ ಸನ್ ಮುಖ್ಯಯಾ ಶಿಷ್ಯಾದಿವೃತ್ತ್ಯಾ ಇತ್ಯರ್ಥಃ । ಮಧ್ಯಮಾನಾಂ ಚ ಬಹೂನಾಂ ಮಧ್ಯಮಯೈವ ವೃತ್ತ್ಯಾ ಏಮಿ । ನಾಧಮಯಾ ಕದಾಚಿದಪಿ । ತಮೇವಂ ವಿಶಿಷ್ಟ ಗುಣಮಪಿ ಪುತ್ರಂ ಮಾಮ್ " ಮೃತ್ಯವೇ ತ್ವಾ ದದಾಮಿ " ಇತ್ಯುಕ್ತವಾ ಪಿತಾ । ಸ ಕಿಂ ಸ್ವಿದ್ ಯಮಸ್ಯ ಕರ್ತವ್ಯಂ ಪ್ರಯೋಜನಂ ಮಯಾ ಪ್ರತ್ತೇನ ಕರಿಷ್ಯತಿ ಯತ್ ಕರ್ತವ್ಯಮ್ ಅದ್ಯ ? ನೂನಂ ಪ್ರಯೋಜನಮ್ ಅನಪೇಕ್ಷ್ಯೈವ ಕ್ರೋಧವಶಾದ್ ಉಕ್ತವಾ ಪಿತಾ । ತಥಾಪಿ ತತ್ ಪಿತುರ್ವಚೋ ಮೃಷಾ ಮಾ ಭೂತ್ ಇತ್ಯೇವಂ ಮತ್ವಾ ಪರಿದೇವನಾಪೂರ್ವಕಮ್ ಆಹ ಪಿತರಂ ಶೋಕಾವಿಷ್ಟಂ ಕಿಂ ಮಯಾ ಉಕ್ತಮ್ । ಇತಿ ॥

(ಭಾಷ್ಯಾರ್ಥ)

ಬಹುಜನ ಶಿಷ್ಯರಲ್ಲಿ ಅಥವಾ ಪುತ್ರರಲ್ಲಿ (ನಾನು) ಮೊದಲನೆಯವನಾಗಿ, ಎಂದರೆ ಮುಖ್ಯವಾದ ಶಿಷ್ಯರೇ ಮುಂತಾದವರ ನಡೆಯಿಂದ ನಾನು ಹೋಗುತ್ತಿರುವನು, ನಡೆಯುತ್ತಿರುವೆನು ಎಂದರ್ಥ. ನಡುತರದ ಬಹುಜನರಲ್ಲಿ ನಾನು ನಡುತರದವನಾಗಿಯೇ ನಡೆದುಕೊಳ್ಳುತ್ತಿರುವೆನು. ಅಧಮವೃತ್ತಿಯಿಂದ ಯಾವಾಗಲೂ (ನಡೆದುಕೊಂಡಿ)ಲ್ಲ. ಇಂಥ ಗುಣಗಳಿಂದೊಡಗೂಡಿದ ಪುತ್ರನಾದರೂ[1] ನನ್ನನ್ನು " ನಿನ್ನನ್ನು ಮೃತ್ಯುವಿಗೆ ಕೊಟ್ಟೆರುತ್ತೇನೆ " ಎಂದು ತಂದೆ ಹೇಳಿರುವ(ನಲ್ಲ) ! ನನ್ನನ್ನು ಯಮನಿಗೆ ಕೊಟ್ಟು ಈಗ ಆ (ನಮ್ಮ ತಂದೆಯು) ಮಾಡಬೇಕಾಗಿರುವ ಯಮನ ಕರ್ತವ್ಯವು ಎಂದರೆ (ಯಮನಿಗಾಗಬೇಕಾದ) ಪ್ರಯೋಜನವು ಯಾವದಿರಬಹುದು ?[2] ನಿಜವಾಗಿಯೂ ಪ್ರಯೋಜನವನ್ನು ಲೆಕ್ಕಿಸದೆಯೇ ಸಿಟ್ಟಿನ ವಶನಾಗಿ (ಯೇ) ತಂದೆಯು (ಹೀಗೆಂದು) ನುಡಿದಿರಬೇಕು.

---

1. ಗುರುವಿನ ಮನೋವೃತ್ತಿಯನ್ನು ಅರಿತುಕೊಂಡು ನಡೆಯುವದು ಉತ್ತಮ ಶಿಷ್ಯನ ಆಥವಾ ಪುತ್ರನ ಸ್ವಭಾವವು ; ಹೇಳಿದಂತೆ ನಡೆಯುವದು ಮಧ್ಯಮಶಿಷ್ಯನ ಆಥವಾ ಪುತ್ರನ ಸ್ವಭಾವವು ; ಹೇಳಿದರೂ ಅದರಂತೆ ನಡೆಯದಿರುವದು ಅಧಮನ ಲಕ್ಷಣವು. ನಾನು ಕೈಯ್ಯಲ್ಲಾದಮಟ್ಟಿಗೂ ಉತ್ತಮಶಿಷ್ಯನಾಗಿ, ಮಧ್ಯಮತರಗತಿಯವರ ಗುಂಪನ್ನು ಎಂದಿಗೂ ಬಿಡದೆ ನಡೆದುಕೊಳ್ಳುತ್ತಿರುವೆನಲ್ಲ ! ಯಾವಾಗಲೂ ತಂದೆಯ ಆಜ್ಞೆಯನ್ನು ಮೀರಿ ನಡೆದವನಲ್ಲವಲ್ಲ ! ಹೀಗಿದ್ದರೂ ತಂದೆ ಈರೀತಿ ನುಡಿದದ್ದೇಕಿರಬಹುದು ?" ಎಂದು ಭಾವ.

2. ಯಮನಿಗೆ ಇಂಥ ದಾನವನ್ನು ಕೊಡಬೇಕೆಂಬ ವಿಧಿಯೇನೂ ಇಲ್ಲವಲ್ಲ !—ಎಂದು ಭಾವ.

ಹೀಗಿದ್ದರೂ ಆ ತಂದೆಯ ಮಾತು ಸುಳ್ಳಾಗಬಾರದು–ಹೀಗೆಂದು ಯೋಚಿಸಿ ಚಿಂತಾಪೂರ್ವಕವಾಗಿ "ಅಯ್ಯೋ! ಏನು ಹೇಳಿಬಿಟ್ಟೆನು!" ಎಂದು ಶೋಕದಿಂದ ತುಂಬಿದ್ದ ತಂದೆಯನ್ನು ಕುರಿತು (ನಚಿಕೇತನು) ಹೇಳುತ್ತಾನೆ:

ಅನುಪಶ್ಯ ಯಥಾ ಪೂರ್ವೇ
ಪ್ರತಿಪಶ್ಯ ತಥಾ ಪರೇ।
ಸಸ್ಯಮಿವ ಮರ್ತ್ಯಃ ಪಚ್ಯತೇ
ಸಸ್ಯಮಿವಾಜಾಯತೇ ಪುನಃ ॥ ೬ ॥

೬. ಪೂರ್ವಿಕರು ಹೇಗೆಂಬುದನ್ನು ನೋಡು; ಹಾಗೂ ಉಳಿದವರು (ಹೇಗೆಂಬುದನ್ನೂ) ನೋಡು. ಮನುಷ್ಯನು ಸಸ್ಯದಂತೆ ಪಕ್ವವಾಗುತ್ತಿರುವನು, ಸಸ್ಯದಂತೆ ಮತ್ತೆ ಹುಟ್ಟುತ್ತಿರುವನು.

(ಭಾಷ್ಯ)

೧೪. ಅನುಪಶ್ಯ ಆಲೋಚಯ ನಿಭಾಲಯ ಅನುಕ್ರಮೇಣ ಯಥಾ ಯೇನ ಪ್ರಕಾರೇಣ ವೃತ್ತಾಃ ಪೂರ್ವೇ ಅತಿಕ್ರಾನ್ತಾಃ ಪಿತೃಪಿತಾಮಹಾದಯಸ್ತ್ವ। ತಾ ದೃಷ್ಟ್ವಾ ಚ ತೇಷಾಂ ವೃತ್ತಮ್ ಆಸ್ಥಾತುಮ್ ಅರ್ಹಸಿ। ವರ್ತಮಾನಾಶ್ಚ ಅಪರೇ ಸಾಧವೋ ಯಥಾ ವರ್ತನ್ತೇ ತಾಂಶ್ಚ ಪ್ರತಿಪಶ್ಯ ಆಲೋಚಯ ತಥಾ। ನ ಚ ತೇಷಾಂ ಮೃಷಾಕರಣಮ್ ವೃತ್ತಂ ವರ್ತಮಾನಂ ವಾ ಅಸ್ತಿ। ತದ್ವಿಪರೀತಮ್ ಅಸತಾಂ ಚ ವೃತ್ತಂ ಮೃಷಾಕರಣಮ್। ನ ಚ ಮೃಷಾಕೃತ್ವಾ ಕಶ್ಚಿದ್ ಅಜರಾಮರೋ ಭವತಿ। ಯತಃ ಸಸ್ಯಮಿವ ಮರ್ತ್ಯಃ ಮನುಷ್ಯಃ ಪಚ್ಯತೇ ಜೀರ್ಣೋ ಮ್ರಿಯತೇ। ಮೃತ್ವಾ ಚ ಸಸ್ಯಮಿವ ಆಜಾಯತೇ ಆವಿರ್ಭವತಿ ಪುನಃ। ಏವಮ್ ಅನಿತ್ಯೇ ಜೀವಲೋಕೇ ಕಿಂ ಮೃಷಾಕರಣೇನ? ಪಾಲಯ ಆತ್ಮನಃ ಸತ್ಯಮ್, ಪ್ರೇಷಯ ಮಾಂ ಯಮಾಯ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಪೂರ್ವಿಕರು ಎಂದರೆ ನಿನ್ನ ತಂದೆ ಅಜ್ಜ ಮೊದಲಾದ ಹಿಂದೆ ಆಗಿಹೋಗಿರುವವರು ಹೇಗೆ ಯಾವ ರೀತಿಯಿಂದ ನಡೆದುಕೊಂಡಿದ್ದರು ಎಂಬುದನ್ನು ನೋಡು, ಆಲೋಚಿಸು, ಒಬ್ಬೊಬ್ಬರಾಗಿ ಕ್ರಮದಿಂದ (ಆಲೋಚಿಸಿ) ನೋಡು. ಅವರನ್ನು ನೋಡಿ (ನೀನೂ) ಅವರ ನಡೆಯನ್ನು ಸ್ವೀಕರಿಸುವದು ಯುಕ್ತ. ಮತ್ತು ಉಳಿದವರು ಎಂದರೆ ಈಗಿರುವ ಸಜ್ಜನರು ಹೇಗೆ ನಡೆಯುತ್ತಿರುವರೋ ಅವರನ್ನೂ ನೋಡು, (ಅವರ ನಡೆಯನ್ನೂ) ಆಲೋಚಿಸು. (ಹಿಂದಿನವರಾಗಲಿ ಈಗಿನವರಾಗಲಿ) ಅವರಲ್ಲಿ ಸುಳ್ಳಾಡುವದು ಇರಲೂ ಇಲ್ಲ, ಇರುವದೂ ಇಲ್ಲ. ಇದಕ್ಕೆ ವಿರುದ್ಧವಾಗಿ

ಸುಳ್ಳಾಡುವದೆಂಬ ದುರ್ಜನರ ನಡೆಯನ್ನೂ (ನೋಡು).[1] (ಹೀಗೆ) ಸುಳ್ಳಾಡಿ ಯಾವನೂ ಮುಪ್ಪುಮರಣಗಳಿಲ್ಲದವನಾಗಲಾರನು ; ಏಕೆಂದರೆ ಮರ್ತ್ಯನು ಎಂದರೆ ಮನುಷ್ಯನು ಸಸ್ಯದಂತೆ ಪಕ್ವವಾಗುತ್ತಿರುವನು, ಮುದಿಯಾಗಿ ಸಾಯುತ್ತಿರುವನು ; ಮತ್ತು ಸತ್ತು ಸಸ್ಯದಂತೆ ಮತ್ತೆ ಹುಟ್ಟುತ್ತಿರುವನು, ಹೊರತೋರಿಕೊಳ್ಳುತ್ತಿರುವನು. ಹೀಗೆ ಜೀವಲೋಕವು ಅನಿತ್ಯವಾಗಿರುವಲ್ಲಿ ಸುಳ್ಳಾಡುವದರಿಂದೇನು (ಪ್ರಯೋಜನ)? ನಿನ್ನ ಸತ್ಯವನ್ನು ಕಾಪಾಡಿಕೊ, ನನ್ನನ್ನು ಯಮ(ನಲ್ಲಿ)ಗೆ ಕಳುಹಿಸಿಕೊಡು—ಎಂದು ಅಭಿಪ್ರಾಯ.

(ಭಾಷ್ಯ)

೧೫. ಸ ಏವಮುಕ್ತಃ ಪಿತಾ ಆತ್ಮನಃ ಸತ್ಯತಾಯೈ ಪ್ರೇಷಯಾಮಾಸ । ಸ ಚ ಯಮಭವನಂ ಗತ್ವಾ ತಿಸ್ರೋ ರಾತ್ರೀರುವಾಸ ಯಮೇ ಪ್ರೋಷಿತೇ । ಪ್ರೋಷ್ಯ ಆಗತಂ ಯಮಮ್ ಅಮಾತ್ಯಾ ಭಾರ್ಯಾ ವಾ ಊಚುರ್ಭೋ:ಥಯನ್ತ್ಃ ॥

(ಭಾಷ್ಯಾರ್ಥ)

ಹೀಗೆನ್ನಲು ಆ ತಂದೆಯು ತನ್ನ ಸತ್ಯಕ್ಕಾಗಿ (ಮಗನನ್ನು) ಕಳುಹಿಸಿ ಕೊಟ್ಟನು. ಆ (ನಚಿಕೇತ)ನು, ಯಮನ ಮನೆಗೆ ಹೋಗಿ ಯಮನು (ಎಲ್ಲಿಯೋ)[2] ಹೊರಗೆ ಹೋಗಿರಲಾಗಿ (ಅಲ್ಲಿ) ಮೂರು ರಾತ್ರಿಗಳವರೆಗೆ ಇರುತ್ತಿದ್ದನು. ಹೊರಗೆ ಹೋಗಿದ್ದು ಬಂದ ಯಮನನ್ನು ಕುರಿತು (ಅವನ) ಅಮಾತ್ಯರೋ ಹೆಂಡತಿಯೋ (ವಿಷಯವನ್ನು) ತಿಳಿಸುವದಕ್ಕಾಗಿ ಇಂತೆಂದರು :—

ವೈಶ್ವಾನರಃ ಪ್ರವಿಶ—
ತ್ಯತಿಥಿ ರ್ಬ್ರಾಹ್ಮಣೋ ಗೃಹಾ ।
ತಸ್ಯೈತಾಗ್ಂ ಶಾನ್ತಿಂ ಕುರ್ವನ್ತಿ
ಹರ ವೈವಸ್ವತೋದಕಮ್ ॥ ೭ ॥

೭. ಅತಿಥಿಯಾದ ಬ್ರಾಹ್ಮಣನು ವೈಶ್ವಾನರನಾಗಿ ಮನೆಯನ್ನು ಪ್ರವೇಶಿಸುತ್ತಾನೆ. ಆತನಿಗೆ ಈ ಶಾಂತಿಯನ್ನು ಮಾಡುತ್ತಾರೆ. ವೈವಸ್ವತನೆ, ಉದಕವನ್ನು ಒಯ್ದು ತಾ.

(ಭಾಷ್ಯ)

೧೬. ವೈಶ್ವಾನರಃ ಅಗ್ನಿರೇವ ಸಾಕ್ಷಾತ್ ಪ್ರವಿಶತಿ ಅತಿಥಿಃ ಸನ್ ಬ್ರಾಹ್ಮಣಃ

---

1. ಇದು ಮೂಲವಾಕ್ಯದಲ್ಲಿಲ್ಲದಿದ್ದರೂ ಅರ್ಥದಿಂದ ಹೊರಡುತ್ತದೆ ; ಮುಂದಿನ ಗ್ರಂಥಸಂದರ್ಭಕ್ಕೆ ಬೇಕೇ ಆಗಿದೆ.

2. ಬ್ರಹ್ಮನ ಮನೆಗೆ ಹೋಗಿದ್ದನೆಂದು (ಗೋ॥) ವ್ಯಾಖ್ಯಾನದಲ್ಲಿದೆ.

ಗೃಹಾ ದಹನ್ನಿವ । ತಸ್ಯ, ದಾಹಂ ಶಮಯನ್ತ ಇವಾಗ್ನೇಃ, ಏತಾಂ ಪಾದ್ಯಾಸ ನಾದಿ ದಾನಲಕ್ಷಣಾಮ್ ಶಾನ್ತಿಂ ಕುರ್ವನ್ತಿ ಸನ್ತಃ ಅತಿಥೇರ್ಯತಃ, ಅತಃ ಹರ ಆಹರ ಹೇ ವೈವಸ್ವತ ಉದಕಂ ನಚಿಕೇತಸೇ ಪಾದ್ಯಾರ್ಥಮ್ ॥

(ಭಾಷ್ಯಾರ್ಥ)

ಅತಿಥಿಯಾಗಿರುವ ಬ್ರಾಹ್ಮಣನು ವೈಶ್ವಾನರನಾಗಿ ಎಂದರೆ ಸಾಕ್ಷಾದಗ್ನಿಯೇ ಆಗಿ ಸುಡುವವನಂತೆ[1] ಮನೆಯನ್ನು ಪ್ರವೇಶಿಸುತ್ತಾನೆ. ಅಗ್ನಿಯ ದಾಹವನ್ನು ಶಮನಮಾಡುವವರಂತೆ, ಸತ್ಪುರುಷರು ಆ ಅತಿಥಿಗೆ ಪಾದ್ಯ, ಆಸನ–ಮುಂತಾದದ್ದನ್ನು ಕೊಡುವದೆಂಬ ಈ[2] ಶಾಂತಿಯನ್ನು ಮಾಡುತ್ತಾರೆ. ಆದ್ದರಿಂದ ಎಲೈ ವೈವಸ್ವತನೆ, (ಈ) ನಚಿಕೇತನಿಗೆ ಕಾಲುತೊಳೆದುಕೊಳ್ಳುವದಕ್ಕಾಗಿ ನೀರನ್ನು ಒಯ್ದು ತಾ, ಎಂದರೆ ತೆಗೆದುಕೊಂಡು ಬಾ.

(ಭಾಷ್ಯ)

೧೭. ಯತಶ್ಚ ಅಕರಣೇ ಪ್ರತ್ಯವಾಯಃ ಶ್ರೂಯತೇ—

(ಭಾಷ್ಯಾರ್ಥ)

ಇದೂ ಅಲ್ಲದೆ (ಹೀಗೆ ಸತ್ಕಾರ) ಮಾಡದೆ ಇದ್ದರೆ **ಪ್ರತ್ಯವಾಯ**ವನ್ನು[3] ಶ್ರುತಿಯಲ್ಲಿ ಹೇಳಿರುತ್ತದೆ. ಹೇಗೆಂದರೆ —

ಆಶಾಪ್ರತೀಕ್ಷೇ ಸಙ್ಗತಗ್ಂ ಸೂನೃತಾಂ
ಚೇಷ್ಟಾಪೂರ್ತೇ ಪುತ್ರಪಶೂಗ್ಂಶ್ಚ ಸರ್ವಾನ್ ।
ಏತದ್ವೃಙ್ಕ್ತೇ ಪುರುಷಸ್ಯಾಲ್ಪಮೇಧಸೋ
ಯಸ್ಯಾನಶ್ನನ್ ವಸತಿ ಬ್ರಾಹ್ಮಣೋ ಗೃಹೇ ॥ ೮ ॥

೮. ಆಶೆ, ಪ್ರತೀಕ್ಷೆ–ಇವುಗಳನ್ನೂ ಸಿಕ್ಕಿರುವದನ್ನೂ ಸೂನೃತವನ್ನೂ ಇಷ್ಟಾಪೂರ್ತಗಳನ್ನೂ ಎಲ್ಲ ಪುತ್ರಪಶುಗಳನ್ನೂ–ಯಾವ ಅಲ್ಪಬುದ್ಧಿಯ ಮನೆಯಲ್ಲಿ ಬ್ರಾಹ್ಮಣನು ಊಟವಿಲ್ಲದೆ ವಾಸಮಾಡುವನೋ ಆ ಪುರುಷನ ಈ (ಎಲ್ಲ)ವನ್ನೂ ಬಿಡಿಸುವನು.

---

1. ಸುಡುವವನಂತೆ ಎಂದಿರುವದರಿಂದ ಬ್ರಾಹ್ಮಣನು ಬಂದರೆ ಸುಡುವ ಅಗ್ನಿಯೇ ಬಂದಂತೆ ಎಂದು ಉಪಮಾನವನ್ನು ಸೂಚಿಸಿದಂತಾಯಿತು. ಮುಂದೆ ' ಸುಡುವ ಅಗ್ನಿಯನ್ನು ಶಮನಮಾಡುವಂತೆ ' ಎಂಬ ಉಪಮಾನವೂ ಈ ಅರ್ಥವನ್ನೇ ಪುಷ್ಟಿಗೊಳಿಸುತ್ತದೆ. ಆದ್ದರಿಂದ ' ವೈಶ್ವಾನರನೇ ಬ್ರಾಹ್ಮಣನಾಗಿ ' ಎಂದು ಕನ್ನಡಿಸುವದಕ್ಕಿಂತ ನಾವು ಕನ್ನಡಿಸಿರುವಂತೆ ಅನುವಾದಮಾಡುವದೇ ಉತ್ತಮವೆಂದು ತೋರುತ್ತದೆ.

2. ಶಾಸ್ತ್ರಪ್ರಸಿದ್ಧವಾದ.

3. ಯಾವ ಕರ್ಮವನ್ನು ಮಾಡದಿದ್ದರೆ ' ಪ್ರತ್ಯವಾಯ ' (ದೋಷ)ವನ್ನು ಶಾಸ್ತ್ರದಲ್ಲಿ ಹೇಳಿದೆಯೋ ಅದನ್ನು ಅವಶ್ಯವಾಗಿ ಮಾಡಬೇಕು.

(ಭಾಷ್ಯ)

೧೮. ಆಶಾಪ್ರತೀಕ್ಷೇ ಅನಿರ್ಜ್ಞಾತಪ್ರಾಪ್ತ್ಯೇಷ್ಟಾರ್ಥಪ್ರಾರ್ಥನಾ ಆಶಾ, ನಿರ್ಜ್ಞಾತಪ್ರಾಪ್ತ್ಯಾರ್ಥಪ್ರತೀಕ್ಷಣಂ ಪ್ರತೀಕ್ಷಾ । ತೇ ಆಶಾಪ್ರತೀಕ್ಷೇ । ತತ್ಸಂಯೋಗಜಂ ಫಲಮ್ । ಸೂನೃತಾಂ ಚ । ಸೂನೃತಾ ಪ್ರಿಯಾವಾಕ್ ತನ್ನಿಮಿತ್ತಂ ಚ । ಇಷ್ಟಾಪೂರ್ತೇ । ಇಷ್ಟಂ ಯಾಗಜಂ, ಪೂರ್ತಮ್ ಆರಾಮಾದಿಕ್ರಿಯಾಜಂ ಫಲಮ್ । ಪುತ್ರಪಶೂಂಶ್ಚ । ಪುತ್ರಾಂಶ್ಚ ಪಶೂಂಶ್ಚ, ಸರ್ವಾನ್ । ಏತತ್ಸರ್ವಂ ಯಥೋಕ್ತಂ ವೃಜ್ಜ್ಯಿತೇ ವರ್ಜಯತಿ, ವಿನಾಶಯತಿ ಇತ್ಯೇತತ್ । ಪುರುಷಸ್ಯ ಅಲ್ಪಮೇಧಸಃ ಅಲ್ಪಪ್ರಜ್ಞಸ್ಯ । ಯಸ್ಯ ಅನಶ್ನನ್ ಅಭುಞ್ಜಾನಃ ಬ್ರಾಹ್ಮಣಃ ಗೃಹೇ ವಸತಿ । ತಸ್ಮಾತ್, ಅನುಪೇಕ್ಷಣೀಯಃ ಸರ್ವಾಸ್ವವಸ್ಥಾಸ್ವಪ್ಯತಿಥಿಃ ಇತ್ಯರ್ಥಃ ॥

(ಭಾಷ್ಯಾರ್ಥ)

ಆಶಾಪ್ರತೀಕ್ಷೆಗಳನ್ನು–(ತನಗೆ) ಗೊತ್ತಿಲ್ಲದೆ ಇರುವ ಬೇಕಾಗಿರುವ ಪದಾರ್ಥಗಳು ಸಿಕ್ಕಬೇಕೆಂಬ ಬಯಕೆಯೇ **ಆಶೆ**ಯು, ಗೊತ್ತಿರುವ ಇಂಥ ಪದಾರ್ಥವು ಸಿಕ್ಕುವದೆಂದು ಎದುರುನೋಡುತ್ತಿರುವದು **ಪ್ರತೀಕ್ಷೆ**ಯು–ಈ ಆಶಾಪ್ರತೀಕ್ಷೆಗಳೆರಡನ್ನೂ ಅವು ಸಿಕ್ಕಿದ್ದರಿಂದಾಗುವ[1] ಫಲವನ್ನೂ ' **ಸೂನೃತವನ್ನೂ** ', **ಸೂನೃತ** ವೆಂದರೆ ಪ್ರಿಯವಾದ ಮಾತು, ಅದರಿಂದ ಬರುವ (ಫಲವನ್ನೂ ಎಂದರ್ಥ). ಇಷ್ಟಾಪೂರ್ತಗಳನ್ನೂ '–**ಇಷ್ಟ**ವೆಂದರೆ ಯಾಗದಿಂದ ಉಂಟಾಗುವ (ಫಲವು), **ಪೂರ್ತ** ವೆಂದರೆ (ಜನರಿಗಾಗಿ) ತೋಪು (ಮುಂತಾದದ್ದನ್ನು) (ನಿರ್ಮಿಸುವದು) ಮುಂತಾದ ಕ್ರಿಯೆಯಿಂದ ಉಂಟಾಗುವ ಫಲವು. ' ಪುತ್ರಪಶುಗಳನ್ನೂ ' ಎಂದರೆ ಪುತ್ರರನ್ನೂ ಪಶುಗಳನ್ನೂ ಎಲ್ಲರನ್ನೂ ಈ ಮೇಲೆ ಹೇಳಿದ ಎಲ್ಲವನ್ನೂ ಬಿಡಿಸುವನು[2] ಎಂದರೆ ನಾಶಗೊಳಿಸುವನು ಎಂದರ್ಥ. ಯಾವ ಅಲ್ಪಬುದ್ಧಿಯಾದ ಕಡಿಮೆಯ ತಿಳಿವಳಿಕೆಯ ಪುರುಷನ ಮನೆಯಲ್ಲಿ ಬ್ರಾಹ್ಮಣನು, ಊಟವಿಲ್ಲದೆ, ಊಟವನ್ನು ಮಾಡದೆ ವಾಸಮಾಡುವನೋ (ಅವನ ಈ ಎಲ್ಲವನ್ನೂ ನಾಶಗೊಳಿಸುವನು)[3] ಆದ್ದರಿಂದ ಯಾವ ಅವಸ್ಥೆಗಳಲ್ಲಿದ್ದರೂ[4] ಅತಿಥಿಯನ್ನು ಉಪೇಕ್ಷೆಮಾಡತಕ್ಕದ್ದಲ್ಲ ಎಂದರ್ಥ.

---

1. '' ತತ್ಸಂಯೋಗಜಮ್ '' ಎಂಬುದಕ್ಕೆ ಬದಲು '' ಸತ್ಸಂಯೋಗಜಮ್ '' (ಒಳ್ಳೆಯವರ ಸಂಬಂಧದಿಂದುಂಟಾಗುವ) ಎಂದೂ (ವಾ॥ ಮೈ॥) '' ಯೋಗಜಮ್ '' (ಯೋಗದಿಂದುಂಟಾಗುವ) ಎಂದೂ (ಗೋ॥) ಪಾಠಾಂತರಗಳಿವೆ.

2. '' ವರ್ಜಯತಿ '' ಎಂಬುದರ ಬದಲು '' ಅವರ್ಜಯತಿ '' ಎಂಬ (ಆ॥) ಪೈ॥) ಪಾಠವೂ ಉಂಟು. ' ವಶಗೊಳಿಸಿಕೊಳ್ಳುತ್ತಾನೆ ' ಎಂದು ಅದಕ್ಕೆ ಅರ್ಥ.

3. ಅತಿಥಿಸತ್ಕಾರವನ್ನು ಮಾಡದಿರುವವರಿಗೆ ಆಗುವ ಪ್ರತ್ಯವಾಯದ ಫಲವು ಇದೇ.

4. ಎಂಥ ಕಷ್ಟಕ್ಕೆ ಸಿಕ್ಕಿ ಬಿದ್ದಿದ್ದರೂ.

ಯಮನು ವರಗಳನ್ನು ಕೊಟ್ಟದ್ದು

(ಭಾಷ್ಯ)

೧೯. ಏವಮುಕ್ತೋ ಮೃತ್ಯುರುವಾಚ ನಚಿಕೇತಸಮ್ ಉಪಗಮ್ಯ ಪೂಜಾಪುರಸ್ಸರಮ್—

(ಭಾಷ್ಯಾರ್ಥ)

ಹೀಗೆಂದು ಹೇಳಲು ಮೃತ್ಯುವು ನಚಿಕೇತನ ಬಳಿಗೆ ಬಂದು ಪೂಜೆಯನ್ನು ಮಾಡಿ ಇಂತೆಂದನು:

ತಿಸ್ರೋ ರಾತ್ರೀರ್ಯದವಾತ್ಸೀರ್ಗೃಹೇ ಮೇ
ಅನಶ್ನನ್ ಬ್ರಹ್ಮನ್ನತಿಥಿರ್ನಮಸ್ಯಃ।
ನಮಸ್ತೇಽಸ್ತು ಬ್ರಹ್ಮನ್ ಸ್ವಸ್ತಿಮೇ-ಽಸ್ತು ತಸ್ಮಾತ್
ಪ್ರತಿ ತ್ರೀನ್ ವರಾನ್ ವೃಣೀಷ್ವ ॥ ೯ ॥

೯. ಬ್ರಾಹ್ಮಣನೆ, ಅತಿಥಿಯೂ ನಮಸ್ಕಾರಾರ್ಹನೂ ಆದ (ನೀನು) ಮೂರು ರಾತ್ರೆಗಳು ಊಟಮಾಡದೆ ನನ್ನ ಮನೆಯಲ್ಲಿ ವಾಸಮಾಡಿಕೊಂಡಿದ್ದೆಯಷ್ಟೆ ಆದ್ದರಿಂದ, ಬ್ರಾಹ್ಮಣನೆ, ನಿನಗೆ ನಮಸ್ಕಾರವಿರಲಿ! ಅದರಿಂದ ನನಗೆ ಸ್ವಸ್ತಿಯಾಗಲಿ! ಇದಕ್ಕಾಗಿ ಮೂರು ವರಗಳನ್ನು ಕೇಳಿಕೊ.

(ಭಾಷ್ಯ)

೨೦. ತಿಸ್ರೋ ರಾತ್ರೀಃ ಯತ್ ಯಸ್ಮಾತ್ ಅವಾತ್ಸೀಃ ಉಷಿತವಾನಸಿ ಗೃಹೇ ಮೇ ಅನಶ್ನನ್ ಹೇ ಬ್ರಹ್ಮನ್ ಅತಿಥಿಃ ಸನ್ ನಮಸ್ಯಃ ನಮಸ್ಕಾರಾರ್ಹಶ್ಚ। ತಸ್ಮಾತ್ ನಮಃ ತೇ ತುಭ್ಯಮ್ ಅಸ್ತು ಭವತು। ಹೇ ಬ್ರಹ್ಮನ್ ಸ್ವಸ್ತಿ ಬ್ರಹ್ಮನ್ ಸ್ವಸ್ತಿ ಭದ್ರಂ ಮೇ ಅಸ್ತು, ತಸ್ಮಾತ್ ಭವತೋ-ನಶನೇನ। ಮದ್ಗೃಹವಾಸ ನಿಮಿತ್ತಾದ್ ದೋಷಾತ್ ತತ್ಪ್ರಾಪ್ತ್ಯುಪಶಮನೇನ ಯದ್ಯಪಿ ಭವದನುಗ್ರಹೇಣ ಸರ್ವಂ ಮಮ ಸ್ವಸ್ತಿ ಸ್ಯಾತ್, ತಥಾಪಿ ತ್ವದಧಿಕಸಮ್ಪ್ರಸಾದನಾರ್ಥಮ್ ಅನಶನೇ ನೋಷಿತಾಮ್ ಏಕೈಕಾಂ ರಾತ್ರಿಂ ಪ್ರತಿ ತ್ರೀನ್ ವರಾನ್ ವೃಣೀಷ್ವ ಅಭಿಪ್ರೇತಾರ್ಥ ವಿಷಯಾನ್ ಪ್ರಾರ್ಥಯಸ್ವ ಮತ್ತಃ ॥

(ಭಾಷ್ಯಾರ್ಥ)

"ಎಲೈ ಬ್ರಾಹ್ಮಣನೆ, ಅತಿಥಿಯೂ 'ನಮಸ್ಯನೂ' ಎಂದರೆ ನಮಸ್ಕಾರಕ್ಕೆ ತಕ್ಕವನೂ (ಆಗಿರುವ ನೀನು) ಮೂರು ರಾತ್ರೆಗಳು ನನ್ನ ಮನೆಯಲ್ಲಿ ಊಟ ಮಾಡದೆ ವಾಸಮಾಡಿಕೊಂಡಿದ್ದೆಯಷ್ಟೆ, ಇದ್ದೆಯಷ್ಟೆ. ಆದ್ದರಿಂದ ನಿನಗೆ ನಮಸ್ಕಾರವು ಇರಲಿ! ಎಲೈ ಬ್ರಾಹ್ಮಣನೆ, ಅದರಿಂದ ಎಂದರೆ ನೀನು ಊಟಮಾಡದೆ

ನನ್ನ ಮನೆಯಲ್ಲಿ ವಾಸಮಾಡಿಕೊಂಡಿದ್ದ ಕಾರಣದಿಂದ ಆಗುವ ದೋಷದಿಂದ, ಅದು ನನಗೆ ತಗಲದಂತೆ ಪರಿಹಾರವಾಗಿ, ನನಗೆ ಸ್ವಸ್ತಿಯಾಗಲಿ, ಮಂಗಳವಾಗಲಿ![1] ನಿನ್ನ ಅನುಗ್ರಹದಿಂದಲೇ ನನಗೆ ಎಲ್ಲಾ ಸ್ವಸ್ತಿಯೂ ಆದೀತಾದರೂ ನೀನು (ಇನ್ನೂ) ಹೆಚ್ಚು ಪ್ರಸನ್ನನಾಗಲೆಂದು (ಕೇಳುತ್ತಿದ್ದೇನೆ). ಊಟವಿಲ್ಲದೆ (ಇಲ್ಲಿ) ವಾಸವಾಗಿದ್ದ ಒಂದೊಂದು ರಾತ್ರಿಗೂ (ಒಂದೊಂದರಂತೆ) ಮೂರು ವರಗಳನ್ನು ನನ್ನಿಂದ ಕೇಳಿಕೊ, ನಿನಗೆ ಬೇಕಾದ ವಿಷಯದ (ಮೂರು ವರಗಳನ್ನು) ಕೇಳಿಕೊ.

ಮೊದಲನೆಯ ವರ: ತಂದೆಯ ಪ್ರಸನ್ನತೆ

ಶಾನ್ತಸಙ್ಕಲ್ಪಃ ಸುಮನಾ ಯಥಾ ಸ್ಯಾ-
ದ್ವೀತಮನ್ಯುರ್ಗೌತಮೋ ಮಾಭಿಮೃತ್ಯೋ ।
ತ್ವತ್ಪ್ರಸೃಷ್ಟಂ ಮಾಭಿವದೇತ್ ಪ್ರತೀತ
ಏತತ್ತ್ರಯಾಣಾಂ ಪ್ರಥಮಂ ವರಂ ವೃಣೇ ॥ ೧೦ ॥

೧೦. ಮೃತ್ಯುವೆ, ಗೌತಮನು ನನ್ನ ವಿಷಯದಲ್ಲಿ ಶಾಂತಸಂಕಲ್ಪನಾಗಿ, ಒಳ್ಳೆಯ ಮನಸ್ಸುಳ್ಳವನಾಗಿ, ವೀತಮನ್ಯುವಾಗಿ ಆಗುವಂತೆಯೂ, ನಿನ್ನಿಂದ ಬೀಳ್ಕೊಂಡ ನನ್ನನ್ನು ಅರಿತುಕೊಂಡು ಮಾತನಾಡಿಸುವಂತೆಯೂ (ಆಗಲಿ)! ಮೂರು ವರಗಳಲ್ಲಿ ಈ ಮೊದಲನೆಯ ವರವನ್ನು ಬೇಡುತ್ತೇನೆ.

(ಭಾಷ್ಯ)

೨೧. ನಚಿಕೇತಾಸ್ತ್ವಾಹ—ಯದಿ ದಿತ್ಸುರ್ವರಾ ಶಾನ್ತಸಙ್ಕಲ್ಪಃ ಉಪಶಾನ್ತಃ ಸಙ್ಕಲ್ಪೋ ಯಸ್ಯ ಮಾಂ ಪ್ರತಿ ಯಮಂ ಪ್ರಾಪ್ಯ ಕಿಂ ನು ಕರಿಷ್ಯತಿ ಮಮ ಪುತ್ರ ಇತಿ ಸ ಶಾನ್ತಸಙ್ಕಲ್ಪಃ । ಸುಮನಾಃ ಪ್ರಸನ್ನಚಿತ್ತಶ್ಚ[2] ಯಥಾ ಸ್ಯಾತ್ । ವೀತಮನ್ಯುಃ ವಿಗತರೋಷಶ್ಚ । ಗೌತಮಃ ಮಮ ಪಿತಾ । ಮಾ ಅಭಿ ಮಾಂ ಪ್ರತಿ, ಹೇ ಮೃತ್ಯೋ । ಕಿಂ ಚ ತ್ವತ್ಪ್ರಸೃಷ್ಟಂ ತ್ವಯಾ ವಿನಿರ್ಮುಕ್ತಂ ಪ್ರೇಷಿತಂ ಗೃಹಂ ಪ್ರತಿ ಮಾ ಮಾಮ್ ಅಭಿವದೇತ್ ಪ್ರತೀತಃ ಲಬ್ಧಸ್ಮೃತಿಃ "ಸ ಏವಾಯಂ ಪುತ್ರೋ ಮಮಾಗತಃ" ಇತ್ಯೇವಂ ಪ್ರತ್ಯಭಿಜಾನನ್ ಇತ್ಯರ್ಥಃ । ಏತತ್ತ್ರಯೋಜನಂ ತ್ರಯಾಣಾಂ

---

1. ಯಮನು ಜ್ಞಾನಿಯೇ ಆದರೂ ಗೃಹಸ್ಥರಾದವರು ಮಾಡಬೇಕಾದದ್ದನ್ನು ತಿಳಿಸಿಕೊಡುವದಕ್ಕಾಗಿ ಹೀಗೆ ಮಾತನಾಡಿರುತ್ತಾನೆ. ನಿಜವಾಗಿ ಅವನಿಗೆ ಕರ್ಮವನ್ನು ಬಿಟ್ಟದ್ದರಿಂದ ಆಗುವ ಪ್ರತ್ಯವಾಯವೇನೂ ಇಲ್ಲ. ಗೀ. ಭಾ. ೩-೧೮, ಬೃ. ಭಾ. ೪-೪-೬ ನೋಡಿರಿ.

2 "ಮನಾಶ್ಚ" ಎಂದು (ಆ॥) ಪಾಠವು; (ವಾ॥) ಪಾಠದಲ್ಲಿ ಹೀಗಿದೆ.

ವರಾಣಾಂ ಪ್ರಥಮಮ್ ಆದ್ಯಂ ವರಂ ವೃಣೇ ಪ್ರಾರ್ಥಯೇ ಯತ್ಪಿತುಃ ಪರಿತೋಷ ಣಮ್ ॥

(ಭಾಷ್ಯಾರ್ಥ)

ನಚಿಕೇತನಾದರೋ (ಹೀಗೆ) ಹೇಳುತ್ತಾನೆ: "ಎಲೈ ಮೃತ್ಯುವೆ, (ನೀನು) ವರಗಳನ್ನು ಕೊಡಬೇಕೆಂದಿದ್ದರೆ, ನನ್ನ ತಂದೆಯಾದ **ಗೌತಮನು**[1] ಶಾಂತಸಂಕಲ್ಪ ನಾಗಿ', ಎಂದರೆ "ಯಮನ ಹತ್ತಿರಕ್ಕೆ ಹೋದ ನನ್ನ ಮಗನು ಏನು ಮಾಡು ವನೋ" ಎಂದು ನನ್ನ ವಿಷಯದಲ್ಲಿ ಸಂಕಲ್ಪವು ಶಾಂತವಾದವನಾಗಿ (ಸಂಕಲ್ಪವು) ತೊಲಗಿದವನಾಗಿ, 'ಒಳ್ಳೆಯ ಮನಸ್ಸುಳ್ಳವನಾಗಿ' ಎಂದರೆ ಪ್ರಸನ್ನವಾದ ಚಿತ್ತ ವುಳ್ಳವನಾಗಿ ಆಗುವಂತೆಯೂ ಮತ್ತು ನಿನ್ನಿಂದ ಬೀಳ್ಕೊಂಡ ನೀನು ನನ್ನನ್ನು ಬಿಟ್ಟು ಮನೆಗೆ ಕಳುಹಿಸಿದ ಮೇಲೆ ನನ್ನನ್ನು ಅರಿತುಕೊಂಡು ಎಂದರೆ "ಅದೇ ನನ್ನ ಮಗನೇ ಬಂದಿರುವನು" ಎಂದು ನೆನಪನ್ನು ಪಡೆದು ಗುರುತಿಸಿ ನನ್ನನ್ನು ಮಾತನಾಡಿಸುವಂತೆಯೂ (ಆಗಲಿ)! ಎಂದರ್ಥ. ತಂದೆಯನ್ನು ಸಂತೋಷಗೊಳಿ ಸುವದೆಂಬ ಈ ಪ್ರಯೋಜನವನ್ನೇ ಮೂರು ವರಗಳಲ್ಲಿ ಒಂದನೆಯ ವರವಾಗಿ ಮೊದಲನೆಯದನ್ನಾಗಿ ಬೇಡುತ್ತೇನೆ, ಕೇಳಿಕೊಳ್ಳುತ್ತೇನೆ.

ಯಥಾ ಪುರಸ್ತಾದ್ಭವಿತಾ ಪ್ರತೀತ
ಔದ್ದಾಲಕಿರಾರುಣಿರ್ಮತ್ಪ್ರಸೃಷ್ಟಃ ।
ಸುಖಗ್ಂ ರಾತ್ರೀಃ ಶಯಿತಾ ವೀತಮನ್ಯು-
ಸ್ತ್ವಾಂ ದದೃಶಿವಾ ಮೃತ್ಯುಮುಖಾತ್ ಪ್ರಮುಕ್ತಮ್ ॥೧೧॥

೧೧ ಔದ್ದಾಲಕಿ ಆರುಣಿಯು ನನ್ನಿಂದ ಬಿಡಲ್ಪಟ್ಟವನಾಗಿ ಮೊದಲಿನಂತೆ ಅರಿತುಕೊಂಡವನಾಗುವನು. ರಾತ್ರಿಗಳಲ್ಲಿ ಸುಖವಾಗಿ ಮಲಗಿರುವನು. ಮೃತ್ಯುಮುಖದಿಂದ ಬಿಡುಗಡೆಯಾದ ನಿನ್ನನ್ನು ಕಂಡು ವೀತಮನ್ಯು(ವೂ ಆಗುವನು).

(ಭಾಷ್ಯ)

೧೧. ಮೃತ್ಯುರುವಾಚ–ಯಥಾ ಬುದ್ಧಿಃ ತ್ವಯಿ ಪುರಸ್ತಾತ್ ಪೂರ್ವಮ್ ಆಸೀತ್ ಸ್ನೇಹಸಮನ್ವಿತಾ ಪಿತುಸ್ತವ, ಭವಿತಾ ಪ್ರೀತಿಸಮನ್ವಿತಸ್ತವಪಿತಾ ತಥೈವ ಪ್ರತೀತಃ ಪ್ರತೀತವಾ ರ್ಸ । ಔದ್ದಾಲಕಿಃ । ಉದ್ದಾಲಕ ಏವ ಔದ್ದಾಲಕಿಃ । ಅರು

1. ವಾಜಶ್ರವಸನು ಗೋತಮಗೋತ್ರದವನು.

ಣಸ್ಯ ಅಪತ್ಯಮ್ ಆರುಣಿಃ । ದ್ವ್ಯಾಮುಷ್ಯಾಯಣೋ ವಾ ಮತ್ಪ್ರಸೃಷ್ಟಃ ಮಯಾನು ಜ್ಞಾತಃ ಸನ್ । ಇತರಾ ಅಪಿ ರಾತ್ರೀಃ ಸುಖಂ ಪ್ರಸನ್ನಮನಾಃ ಶಯಿತಾ ಸ್ವಪ್ತಾ । ವೀತಮನ್ಯುಃ ವಿಗತಮನ್ಯುಶ್ಚ ಭವಿತಾ ಸ್ಯಾತ್ ತ್ವಾಂ ಪುತ್ರಂ ದದೃಶಿವಾನ್ ದೃಷ್ಟವಾನ್ ಸನ್ ಮೃತ್ಯುಮುಖಾತ್ ಮೃತ್ಯೋಃಚರಾತ್ ಪ್ರಮುಕ್ತಂ ಸನ್ತಮ್ ॥

(ಭಾಷ್ಯಾರ್ಥ)

ಮೃತ್ಯು ಹೇಳಿದನೇನೆಂದರೆ :—ನಿನ್ನಲ್ಲಿ ನಿನ್ನ ತಂದೆಯ ಬುದ್ಧಿಯು ಮೊದಲು ಹಿಂದಕ್ಕೆ ಹೇಗೆ ಪ್ರೀತಿಪೂರ್ವಕವಾಗಿದ್ದಿತೋ ಹಾಗೆಯೇ (ಇನ್ನು ಮುಂದೆಯೂ ಇರುವದು). ನಿನ್ನ ತಂದೆಯು ಅರಿತುಕೊಂಡು (ನಿನ್ನ) ಗುರುತು ಹಿಡಿದುಕೊಂಡು ಪ್ರೀತಿಯುಕ್ತನಾಗಿಯೇ ಇರುವನು. ಔದ್ದಾಲಕಿ (ಆರುಣಿಯು ಎಂಬಲ್ಲಿ) **ಔದ್ದಾಲಕಿ** ಎಂದರೆ ಉದ್ದಾಲಕನೇ [1], **ಆರುಣಿ** ಎಂದರೆ ಅರುಣನ ಮಗನು. ಅಥವಾ ಇವನು ಇಬ್ಬರಿಗೂ ಮಗನಾಗಿರಬಹುದು. [2] (ಅವನು) ನನ್ನಿಂದ ಬಿಡಲ್ಪಟ್ಟು, ಎಂದರೆ ನನ್ನಿಂದ ಅನುಜ್ಞೆಯನ್ನು ಪಡೆದು [3] ಎಂದರ್ಥ. ಉಳಿದ [4] ರಾತ್ರಿಗಳಲ್ಲಿಯೂ ಸುಖವಾಗಿ ಎಂದರೆ ಪ್ರಸನ್ನವಾದ ಮನಸ್ಸಿನಿಂದ ಮಲಗುವನು, ನಿದ್ರಿಸುವನು. ಮೃತ್ಯುಮುಖದಿಂದ ಎಂದರೆ ಮೃತ್ಯುವಿನ ಹಿಡಿತದಿಂದ ಬಿಡುಗಡೆಯಾಗಿರುವ ಪುತ್ರನಾದ ನಿನ್ನನ್ನು ಕಂಡು, ಕಂಡವನಾಗಿ ವೀತಮನ್ಯುವೂ ಆಗುವನು, ಸಿಟ್ಟಿಲ್ಲದವನೂ ಆಗುವನು.

ಎರಡನೆಯ ವರ: ಅಗ್ನಿವಿದ್ಯೆ

ಸ್ವರ್ಗೇ ಲೋಕೇ ನ ಭಯಂ ಕಿಂಚನಾಸ್ತಿ
ನ ತತ್ರ ತ್ವಂ ನ ಜರಯಾ ಬಿಭೇತಿ ।
ಉಭೇ ತೀರ್ತ್ವಾ ಅಶನಾಯಾಪಿಪಾಸೇ
ಶೋಕಾತಿಗೋ ಮೋದತೇ ಸ್ವರ್ಗಲೋಕೇ ॥ ೧೨ ॥

---

1. "ಉದ್ದಾಲಕ ಏವ ಔದ್ದಾಲಕಿಃ" ಎಂದು ಸ್ವಾರ್ಥದಲ್ಲಿ ತದ್ಧಿತಪ್ರತ್ಯಯವು ಬಂದಿದೆ ಎಂದು ಭಾವ.

2. ಒಬ್ಬನಿಗೆ ಹೊಟ್ಟೆಯಲ್ಲಿ ಹುಟ್ಟಿದವನು; ಇನ್ನೊಬ್ಬನಿಗೆ ವಾಗ್ದಾನದಂತೆ ದತ್ತಪುತ್ರನಾದವನು. ಇಂಥವನು ದ್ವ್ಯಾಮುಷ್ಯಾಯಣನೆನಿಸುವನು; ಇವನಿಗೆ ಇಬ್ಬರ ಗೋತ್ರಗಳೂ ಸೇರಿರುತ್ತವೆ.

3. 'ನನ್ನ ಅನುಗ್ರಹದಿಂದ" ಈ ವಿಶೇಷಣವನ್ನು ಮೂರು ವಾಕ್ಯಗಳಿಗೂ ಅನ್ವಯಿಸಿಕೊಳ್ಳಬಹುದು.

4. "ಉತ್ತರಾ" ಎಂಬ (ವಾ॥) ಪಾಠದಲ್ಲಿ 'ಮುಂದಿನ'.

೧೨. "ಸ್ವರ್ಗಲೋಕದಲ್ಲಿ ಸ್ವಲ್ಪವೂ ಭಯವಿರುವದಿಲ್ಲ. ಅಲ್ಲಿ ನೀನೂ (ಕೈಮಾಡು)ವದಿಲ್ಲ, (ಜನವು) ಮುಪ್ಪಿಗೂ ಹೆದರುವದಿಲ್ಲ. ಹಸಿವು ಬಾಯಾರಿಕೆ–ಈ ಎರಡನ್ನೂ ದಾಟಿ ಶೋಕವನ್ನು ಅತಿಕ್ರಮಿಸಿದವನಾಗಿ ಸ್ವರ್ಗಲೋಕದಲ್ಲಿ ಸಂತೋಷಪಡುತ್ತಾನೆ.

(ಭಾಷ್ಯ)

೨೩. ನಚಿಕೇತಾ ಉವಾಚ—ಸ್ವರ್ಗೇ ಲೋಕೇ ರೋಗಾದಿನಿಮಿತ್ತಂ ಭಯಂ ಕಿಂಚನ ಕಿಂಚಿದಪಿ ನಾಸ್ತಿ । ನ ಚ ತತ್ರ ತ್ವಂ ಮೃತ್ಯೋ ಸಹಸಾ ಪ್ರಭವಸಿ । ಅತೋ ಜರಯಾ ಯುಕ್ತ ಇಹಲೋಕವತ್ ತ್ವತ್ತೋ ನ ಬಿಭೇತಿ ಕಶ್ಚಿತ್ ತತ್ರ । ಕಿಂ ಚ ಉಭೇ ಅಶನಾಯಾಪಿಪಾಸೇ ತೀರ್ತ್ವಾ ಅತಿಕ್ರಮ್ಯ ಶೋಕಮತೀತ್ಯ ಗಚ್ಛತೀತಿ ಶೋಕಾತಿಗಃ ಸನ್ ಮಾನಸೇನ ದುಃಖೇನ ವರ್ಜಿತಃ, ಮೋದತೇ ಹೃಷ್ಯತಿ ಸ್ವರ್ಗಲೋಕೇ ದಿವಿ ॥ [1]

(ಭಾಷ್ಯಾರ್ಥ)

ನಚಿಕೇತನು ಹೇಳಿದನೇನೆಂದರೆ.—ಸ್ವರ್ಗಲೋಕದಲ್ಲಿ ರೋಗವೇಮುಂತಾದ ಕಾರಣದಿಂದ (ಯಾವ) ಭಯವೂ ಒಂದಿಷ್ಟೂ ಸ್ವಲ್ಪವೂ ಕೂಡ ಇರುವದಿಲ್ಲ. ಮೃತ್ಯುವೆ, ಅಲ್ಲಿ ನೀನೂ ತಟ್ಟನೆ (ಜನರಮೇಲೆ) ಕೈಮಾಡುವದಿಲ್ಲ. ಆದ್ದರಿಂದ ಈ ಲೋಕದಹಾಗೆ ಅಲ್ಲಿ ಯಾರೊಬ್ಬರೂ [2] ಮುಪ್ಪಿನಿಂದ ಕೂಡಿದವರಾಗಿ ನಿನಗೆ ಹೆದರಿಕೊಳ್ಳುವದಿಲ್ಲ. ಮತ್ತು ಹಸಿವು, ಬಾಯಾರಿಕೆ ಈ ಎರಡನ್ನೂ ದಾಟಿ ಎಂದರೆ ಮೀರಿ, ಶೋಕವನ್ನು ಅತಿಕ್ರಮಿಸಿ ಹೋಗುವನಾಗಿ ಎಂದರೆ ಮಾನಸದುಃಖದಿಂದ ಬಿಡುಗಡೆಯನ್ನು ಹೊಂದಿ **ಸ್ವರ್ಗಲೋಕದಲ್ಲಿ** ಎಂದರೆ ಆದಿತ್ಯಲೋಕದಲ್ಲಿ ಸಂತೋಷಪಡುತ್ತಾನೆ, ಹರ್ಷದಿಂದಿರುತ್ತಾನೆ. [3]

---

1. ಇದು (ವಾ॥) ಪಾಠ.

2. "ಕುತಶ್ಚಿತ್" (ಏತಕ್ಕು) ಎಂಬ (ಆ॥ ಮೈ॥) ಪಾರಕ್ಕಿಂತ ನಾವು ಕೊಟ್ಟಿರುವ (ವಾ॥) ಪಾಠವೇ ಮೇಲು.

3 ಇಲ್ಲಿ ಸ್ವರ್ಗಲೋಕವೆಂದರೆ ಕರ್ಮೋಪಾಸನೆಗಳಿಂದ ಪಡೆಯುವ ವಿರಾಟ್ಪುರುಷನ ಸ್ಥಾನವು. ಇಲ್ಲಿ ಹಸಿವು ಬಾಯಾರಿಕೆ, ಮುಪ್ಪು ಮರಣ, ಶೋಕ ಮೋಹ–ಇವುಗಳು ಇರುವದಿಲ್ಲವಾದರೂ ಅವುಗಳ ಅತ್ಯಂತಿಕ ನಾಶವಾಗಿರುವದಿಲ್ಲ. ಆದ್ದರಿಂದಲೇ ಇಲ್ಲಿ ಮೃತ್ಯುವು "ಸಹಸಾ" (ತಟ್ಟನೆ) ಮೇಲೆ ಬೀಳುವದಿಲ್ಲವೆಂದು ಹೇಳಿದೆ.

ಸ ತ್ವಮಗ್ನಿಗ್ಂ ಸ್ವರ್ಗ್ಯಮಧ್ಯೇಷಿ ಮೃತ್ಯೋ
ಪ್ರಬ್ರೂಹಿ ತಗ್ಂ ಶ್ರದ್ದಧಾನಾಯ ಮಹ್ಯಮ್ ।
ಸ್ವರ್ಗಲೋಕಾ ಅಮೃತತ್ವಂ ಭಜನ್ತ
ಏತದ್ದ್ವಿತೀಯೇನ ವೃಣೇ ವರೇಣ ॥ ೧೩ ॥

೧೩. ಎಲೈ ಮೃತ್ಯುವೆ, ಆ ನೀನು ಸ್ವರ್ಗ್ಯವಾದ ಅಗ್ನಿಯನ್ನು ಅಧ್ಯಯನಮಾಡಿರುತ್ತೀಯೆ. ಶ್ರದ್ಧೆಯುಳ್ಳ ನನಗೆ ಅದನ್ನು ಹೇಳಿಕೊಡು. ಸ್ವರ್ಗಲೋಕದವರು ಅಮೃತತ್ವವನ್ನು ಹೊಂದುತ್ತಾರೆ. ಇದನ್ನು ಎರಡನೆಯ ವರದಿಂದ ಬೇಡುತ್ತೇನೆ.

(ಭಾಷ್ಯ)

೨೪. ಏವಂಗುಣವಿಶಿಷ್ಟಸ್ಯ ಸ್ವರ್ಗಲೋಕಸ್ಯ ಪ್ರಾಪ್ತಿಸಾಧನಭೂತಮ್ ಅಗ್ನಿಮ್ ಸ್ವರ್ಗ್ಯಂ ಸ ತ್ವಂ ಮೃತ್ಯುಃ ಅಧ್ಯೇಷಿ ಸ್ಮರಸಿ ಜಾನಾಸಿ ಇತ್ಯರ್ಥಃ । ಹೇ ಮೃತ್ಯೋ ಯತಃ, ತಂ ಪ್ರಬ್ರೂಹಿ ಕಥಯ ಶ್ರದ್ಧಧಾನಾಯ ಶ್ರದ್ಧಾವತೇ ಮಹ್ಯಂ ಸ್ವರ್ಗಾರ್ಥಿನೇ । ಯೇನಾಗ್ನಿನಾ ಜಿತೇನ ಸ್ವರ್ಗಲೋಕಾಃ, ಸ್ವರ್ಗೋ ಲೋಕೋ ಯೇಷಾಂ ತೇ ಸ್ವರ್ಗಲೋಕಾಃ ಯಜಮಾನಾಃ ಅಮೃತತ್ವಮ್ ಅಮರಣತಾಂ ದೇವತ್ವಮ್ ಭಜನ್ತೇ ಪ್ರಾಪ್ನುವನ್ತಿ । ತದೇತದ್ ಅಗ್ನಿವಿಜ್ಞಾನಂ ದ್ವಿತೀಯೇನ ವರೇಣ ವೃಣೇ ॥

(ಭಾಷ್ಯಾರ್ಥ)

ಇಂಥ ಗುಣಗಳಿಂದೊಡಗೂಡಿರುವ ಸ್ವರ್ಗಲೋಕವನ್ನು ಹೊಂದುವದಕ್ಕೆ ಸಾಧನವಾಗಿರುವ ಅಗ್ನಿಯನ್ನು, ಆ ಮೃತ್ಯುವಾದ ನೀನು ಅಧ್ಯಯನಮಾಡಿರುತ್ತೀಯೆ, ನೆನಪಿಟ್ಟಿರುವೆ, ತಿಳಿದಿರುವೆ ಎಂದರ್ಥ. ಎಲೈ ಮೃತ್ಯುವೆ, ಹೀಗಿರುವದರಿಂದ ಶ್ರದ್ಧೆಯುಳ್ಳ ಶ್ರದ್ಧೆಯಿಂದ ಕೂಡಿರುವ ಸ್ವರ್ಗವನ್ನು ಬಯಸುವ ನನಗೆ ಆ (ಅಗ್ನಿಯನ್ನು) ಹೇಳಿಕೊಡು. ಯಾವ ಅಗ್ನಿಯನ್ನು ಚಯನಮಾಡುವದರಿಂದ[1] ಸ್ವರ್ಗಲೋಕದವರಾದವರು–ಸ್ವರ್ಗವೆಂಬ ಲೋಕವನ್ನು ಯಾರು (ಹೊಂದುವರೋ) ಅವರು ಸ್ವರ್ಗಲೋಕದವರು, (ಆ) ಯಾಚಕರು **ಅಮೃತತ್ವವನ್ನು** ಎಂದರೆ ಸಾವಿಲ್ಲದಿರುವಿಕೆಯನ್ನು ಎಂದರೆ ದೇವತ್ವವನ್ನು[2] ಹೊಂದುತ್ತಾರೋ ಪಡೆದುಕೊಳ್ಳುತ್ತಾರೋ ಅಂಥ ಈ ಅಗ್ನಿವಿದ್ಯೆಯನ್ನು ಎರಡನೆಯ ವರದಿಂದ ಬೇಡುತ್ತೇನೆ.

---

1. ಇಲ್ಲಿ ಕರ್ಮ ಮತ್ತು ಉಪಾಸನೆ ಎರಡನ್ನೂ ಗ್ರಹಿಸಬೇಕು.

2 ಕರ್ಮೋಪಾಸನೆಗಳ ಸಮುಚ್ಚಯದಿಂದ ದೇವಾತ್ಮಭಾವವೆಂಬ ಅಮೃತತ್ವವು ದೊರಕುತ್ತದೆ ಎಂದು ಈ ೧೧ರಲ್ಲಿ ಹೇಳಿರುವದನ್ನು ನೋಡಿರಿ. ಅಗ್ನಿವಿದ್ಯೆಯಿಂದಲೇ ಮುಖ್ಯವಾದ ಅಮೃತತ್ವವು ದೊರಕುವದಾದರೆ ಮುಂದಿನ ಜ್ಞಾನವಿಷಯಕವಾದ ಪ್ರಶ್ನೋತ್ತರಭಾಗವು ವ್ಯರ್ಥವಾಗುತ್ತದೆ. ಮುಕ್ತಿಯು ಸಾಧನಸಾಧ್ಯವಲ್ಲವಾದ್ದರಿಂದ ಅಗ್ನಿಯನ್ನು ಚಯನಮಾಡಿ ಉಪಾಸನೆಮಾಡಿದವರಿಗೆ ಮುಕ್ತಿಯು ದೊರಕುವದೆಂಬುದು ಯುಕ್ತಿಗೂ ವಿರುದ್ಧವಾಗಿರುತ್ತದೆ. ಆದ್ದರಿಂದ ವಿರಾಟ್ಪದವಿಯೂ ಒಂದು ಕಲ್ಪಕಾಲವಿರುವದರಿಂದ ಅಮೃತತ್ವವೆಂದು ಕರೆಯಲ್ಪಡುತ್ತದೆ ಎಂದು ತಿಳಿಯಬೇಕು. ತೈ. ಶೀಕ್ಷಾವಲ್ಲಿಯ ಉಪಸಂಹಾರ ಭಾಷ್ಯವನ್ನು ನೋಡಿ.

ಪ್ರ ತೇ ಬ್ರವೀಮಿ ತದು ಮೇ ನಿಬೋಧ
ಸ್ವರ್ಗ್ಯಮಗ್ನಿಂ ನಚಿಕೇತಃ ಪ್ರಜಾನನ್ ।
ಅನನ್ತಲೋಕಾಪ್ತಿಮಥೋ ಪ್ರತಿಷ್ಠಾಂ
ವಿದ್ಧಿ ತ್ವಮೇತಂ ನಿಹಿತಂ ಗುಹಾಯಾಮ್ ॥ ೧೪ ॥

೧೪. "ನಚಿಕೇತನೆ, ಸ್ವರ್ಗ್ಯವಾದ ಅಗ್ನಿಯನ್ನು ತಿಳಿದವನಾಗಿ ನಿನಗೆ ಹೇಳಕೊಡುತ್ತೇನೆ, ಅದನ್ನು ನನ್ನಿಂದ ತಿಳಿದುಕೊ. ಈ (ಅಗ್ನಿಯು) ಅನಂತವಾದ ಲೋಕವನ್ನು ಪಡೆಯಿಸುವದಾಗಿಯೂ ಮತ್ತು ಪ್ರತಿಷ್ಠಾ (ರೂಪ)ವಾಗಿಯೂ ಗುಹೆಯಲ್ಲಿ ಇಡಲ್ಪಟ್ಟಿರುವದೆಂದು ನೀನು ತಿಳಿ."

(ಭಾಷ್ಯ)

೨೫. ಮೃತ್ಯೋಃ ಪ್ರತಿಜ್ಞಾ ಇಯಮ್ । ತೇ ತುಭ್ಯಂ ಪ್ರಬ್ರವೀಮಿ । ಯತ್ ತ್ವಯಾ ಪ್ರಾರ್ಥಿತಂ ತತ್ ಉ ಮೇ ಮಮ ವಚಸೋ ನಿಬೋಧ ಬುಧ್ಯಸ್ವ ಏಕಾಗ್ರಮನಾಃ ಸನ್ । ಸ್ವರ್ಗ್ಯಂ ಸ್ವರ್ಗಾಯ ಹಿತಮ್, ಸ್ವರ್ಗಸಾಧನಮ್, ಅಗ್ನಿಂ ಹೇ ನಚಿಕೇತಃ । ಪ್ರಜಾನನ್ ವಿಜ್ಞಾತವಾ ಸನ್ ಅಹಮ್ ಇತ್ಯರ್ಥಃ । "ಪ್ರಬ್ರವೀಮಿ ತನ್ನಿಬೋಧ" ಇತಿ ಚ ಶಿಷ್ಯಬುದ್ಧಿಸಮಾಧಾನಾರ್ಥಂ ವಚನಮ್ । ಅಧುನಾ ಅಗ್ನಿಂ ಸ್ತೌತಿ । ಅನನ್ತಲೋಕಾಪ್ತಿಂ ಸ್ವರ್ಗಲೋಕಸಾಧನಮ್ ಇತ್ಯೇತತ್ । ಅಥೋ ಅಪಿ ಪ್ರತಿಷ್ಠಾಮ್ ಆಶ್ರಯಂ ಜಗತೋ ವಿರಾಟ್ಸ್ವರೂಪೇಣ । ತಮೇತಮ್ ಅಗ್ನಿಂ ಮಯಾ ಉಚ್ಯಮಾನಂ ವಿದ್ಧಿ ಜಾನೀಹಿ ತ್ವಂ ನಿಹಿತಂ ಸ್ಥಿತಂ ಗುಹಾಯಾಂ ವಿದುಷಾಂ ಬುದ್ಧೌ ನಿವಿಷ್ಟಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಇದು ಮೃತ್ಯುವಿನ ಮಾತು. ಯಾವದನ್ನು ನೀನು ಕೇಳಿಕೊಂಡಿರುವೆಯೋ (ಆ ಅಗ್ನಿಯನ್ನು) ನಿನಗೋಸ್ಕರ ಹೇಳಿಕೊಡುತ್ತೇನೆ ಅದನ್ನು ನನ್ನ ಮಾತಿನಿಂದ ಏಕಾಗ್ರವಾದ ಮನಸ್ಸುಳ್ಳವನಾಗಿ ತಿಳಿದುಕೊ. ಸ್ವರ್ಗ್ಯವಾದ, ಎಂದರೆ ಸ್ವರ್ಗಕ್ಕೆ ಹಿತವಾಗಿರುವ, ಸ್ವರ್ಗಕ್ಕೆ ಸಾಧನವಾದ ಅಗ್ನಿಯನ್ನು, ಎಲೈ ನಚಿಕೇತನೆ, ತಿಳಿದವನಾಗಿ ಎಂದರೆ (ಅದನ್ನು) ಅರಿತವನಾಗಿ ನಾನು (ಹೇಳಿಕೊಡುತ್ತೇನೆ) ಎಂದರ್ಥ 'ಹೇಳಿಕೊಡುತ್ತೇನೆ' (ಎಂದೂ) 'ಅದನ್ನು ತಿಳಿದುಕೊ' ಎಂದೂ ಹೇಳಿರುವದು ಶಿಷ್ಯನು ಬುದ್ಧಿಯನ್ನು ಸಮಾಧಾನ(ವಾಗಿಟ್ಟುಕೊಳ್ಳ)ಲೆಂಬುದಕ್ಕಾಗಿ. ಈಗ ಆ ಅಗ್ನಿಯನ್ನು ಹೊಗಳುತ್ತಾನೆ: ಅನಂತವಾದ ಲೋಕವನ್ನು ಪಡೆಯಿಸುವದಾಗಿಯೂ ಎಂದರೆ ಸ್ವರ್ಗಲೋಕಕ್ಕೆ[1] ಸಾಧನವಾಗಿಯೂ ಎಂದರ್ಥ. ಅಥೋ ಎಂದರೆ ಮತ್ತು ಪ್ರತಿಷ್ಠಾ(ರೂಪ)ವಾಗಿಯೂ ಎಂದರೆ ಜಗತ್ತಿಗೆ ವಿರಾಟ್ಸ್ವರೂಪದಿಂದ

1. ಅಪರಬ್ರಹ್ಮಲೋಕವೂ ಸಾಪೇಕ್ಷವಾಗಿ ಅನಂತವಾಗಿಯೇ ಇಹುತ್ತದೆ. ಅತ್ಯಂತವಾಗಿ ಅಂತವೇ ಇಲ್ಲವೆಂದರೆ ಪ್ರಕರಣಕ್ಕೆ ವಿರೋಧವಾಗುವದರಿಂದ 'ಸ್ವರ್ಗಲೋಕ' ವೆಂದು ಅರ್ಥವನ್ನು ಮಾಡಿರುತ್ತದೆ.

ಜಗತ್ತಿಗೆ ಆಶ್ರಯವಾಗಿಯೂ (ಇರುವ) ಆ ಈ ಅಗ್ನಿಯು ಗುಹೆಯಲ್ಲಿ ಎಂದರೆ ಬಲ್ಲವರ[1] ಬುದ್ಧಿಯಲ್ಲಿ ಇಡಲ್ಪಟ್ಟಿರುವದು, ಇರುತ್ತಿರುವದು, (ಹೀಗೆ) ಹೊಕ್ಕಿರುವದನ್ನು ನಾನು ಹೇಳುವೆನು, ನೀನು ತಿಳಿದುಕೊ ಎಂದರ್ಥ.

ಲೋಕಾದಿಮಗ್ನಿಂ ತಮುವಾಚ ತಸ್ಮೈ
ಯಾ ಇಷ್ಟಕಾ ಯಾವತೀರ್ವಾ ಯಥಾ ವಾ ।
ಸ ಚಾಪಿ ತತ್ಪ್ರತ್ಯವದದ್ಯಥೋಕ್ತ-
ಮಥಾಸ್ಯ ಮೃತ್ಯುಃ ಪುನರೇವಾಹ ತುಷ್ಟಃ ॥ ೧೫ ॥

೧೫. ಲೋಕಾದಿಯಾದ ಅಗ್ನಿಯನ್ನು ಅವನಿಗೆ ಹೇಳಿದನು. ಯಾವ ಇಟ್ಟಿಗೆಗಳು, ಎಷ್ಟು, ಅಥವಾ ಹೇಗೆ ಎಂಬುದನ್ನು (ಹೇಳಿದನು). ಅವನೂ ಅದನ್ನು ಹೇಳಿದಂತೆಯೇ ಮತ್ತೆ ಹೇಳಿದನು. ಆಮೇಲೆ ಮೃತ್ಯು ತುಷ್ಟನಾಗಿ ಮತ್ತೂ ಇಂತೆಂದನು.

(ಭಾಷ್ಯ)

೨೬. ಇದಂ ಶ್ರುತೇರ್ವಚನಮ್ । ಲೋಕಾದಿಂ ಲೋಕಾನಾಮಾದಿಮ್, ಪ್ರಥಮಶರೀರಿತ್ವಾತ್ । ಅಗ್ನಿಂ ತಂ ಪ್ರಕೃತಂ ನಚಿಕೇತಸಾ ಪ್ರಾರ್ಥಿತಮ್ ಉವಾಚ ಉಕ್ತವಾನ್ ಮೃತ್ಯುಃ ತಸ್ಮೈ ನಚಿಕೇತಸೇ ಕಿಂ ಚ ಯಾ ಇಷ್ಟಕಾಃ ಚೇತವ್ಯಾಃ ಸ್ವರೂಪೇಣ, ಯಾವತೀರ್ವಾ ಸಙ್ಖ್ಯಯಾ । ಯಥಾ ವಾ ಚೀಯತೇ ಅಗ್ನಿರ್ಯೇನ ಪ್ರಕಾರೇಣ । ಸರ್ವಮೇತದುಕ್ತವಾನ್ ಇತ್ಯರ್ಥಃ । ಸ ಚಾಪಿ ನಚಿಕೇತಾಃ ತತ್ ಮೃತ್ಯುನಾ ಉಕ್ತಂ ಪ್ರತ್ಯವದತ್ ಯಥಾವತ್ ಪ್ರತ್ಯಯೇನ ಅವದತ್ ಪ್ರತ್ಯುಚ್ಚಾರಿತವಾನ್ । ಅಥ ತಸ್ಯ ಪ್ರತ್ಯುಚ್ಚಾರಣೇನ ತುಷ್ಟಃ ಸ ಮೃತ್ಯುಃ ಪುನರೇವಾಹ ವರತ್ರಯವ್ಯತಿರೇಕೇಣ ಅನ್ಯಂ ವರಂ ದಿತ್ಸುಃ ॥

(ಭಾಷ್ಯಾರ್ಥ)

ಇದು ಶ್ರುತಿಯ ಮಾತು ಲೋಕಾದಿ ಎಂದರೆ ಲೋಕಗಳಿಗೆಲ್ಲ ಆದಿ. ಏಕೆಂದರೆ (ವಿರಾಜನು) ಪ್ರಥಮಶರೀರಿಯಾಗಿರುತ್ತಾನೆ.[2] ಆ ಅಗ್ನಿಯನ್ನು ಎಂದರೆ ಪ್ರಕೃತದಲ್ಲಿ ನಚಿಕೇತನು ಕೇಳಿದ್ದನಲ್ಲ, (ಆ ಅಗ್ನಿಯನ್ನು) ಮೃತ್ಯುವು ಆ ನಚಿಕೇತನಿಗೆ ಹೇಳಿದನು, ಹೇಳಿದವನಾದನು. ಮತ್ತು ಎಂಥ ಇಟ್ಟಿಗೆಗಳನ್ನು ಚಯನ

---

1. ಉಪಾಸಕರ. ಅಗ್ನಿವಿದ್ಯೆಯನ್ನು ಬಲ್ಲ ಉಪಾಸಕರ ಹೃದಯದಲ್ಲಿ ವಿರಾಟ್ಪುರುಷನ ಸಾಕ್ಷಾತ್ಕಾರವಾಗಿರುತ್ತದೆ.

2. ಸ ವೈ ಶರೀರೀ ಪ್ರಥಮಃ ಸ ವೈ ಪುರುಷ ಉಚ್ಯತೇ । ಆದಿಕರ್ತಾ ಸ ಭೂತಾನಾಂ ಬ್ರಹ್ಮಾಗ್ರೇ ಸಮವರ್ತತ ॥ ( ) ಎಂಬ ಸ್ಮೃತಿಯಲ್ಲಿ ವಿರಾಟ್ಪುರುಷನು ಸೃಷ್ಟಿಯಲ್ಲಿ ಮೊದಲು ಹುಟ್ಟಿದ ಶರೀರಿಯೆಂದು ಹೇಳಿದೆ.

ಮಾಡಬೇಕು (ಎಂದು ಇಟ್ಟಿಗೆಗಳ) ಸ್ವರೂಪವನ್ನೂ, ಎಷ್ಟು (ಇಟ್ಟಿಗೆಗಳು ಎಂಬ) ಸಂಖ್ಯೆಯನ್ನೂ, ಮತ್ತು ಹೇಗೆ (ಮಾಡಬೇಕು) ಎಂಬ ಪ್ರಕಾರವನ್ನೂ [1]–ಇದೆಲ್ಲವನ್ನೂ ಹೇಳಿದನು ಎಂದರ್ಥ. ಆ ನಚಿಕೇತನು ಕೂಡ ಅದನ್ನು ಎಂದರೆ ಮೃತ್ಯು ಹೇಳಿದ್ದನ್ನು ಹಾಗೆಯೇ ತಿಳಿದುಕೊಂಡು ಮತ್ತೆ ಹೇಳಿದನು, ಎಂದರೆ ತಿರುಗಿ ಉಚ್ಚರಿಸಿದನು. ಬಳಿಕ ಅವನು ತಿರುಗಿ ಹೇಳಿದ್ದರಿಂದ ಮೃತ್ಯುವು ತುಷ್ಟನಾಗಿ ಮೂರು ವರಗಳಲ್ಲದೆ **ಮತ್ತೊಂದು ವರವನ್ನು** ಕೊಡಬೇಕೆಂಬ ಇಚ್ಛೆಯಿಂದ ಮತ್ತು (ಹೀಗೆ) ಹೇಳುತ್ತಾನೆ :

ಯಮನು ತಾನಾಗಿ ಕೊಟ್ಟ ನಾಲ್ಕನೆಯ ವರ

ತಮಬ್ರವೀತ್ ಪ್ರೀಯಮಾಣೋ ಮಹಾತ್ಮಾ
ವರಂ ತವೇಹಾದ್ಯ ದದಾಮಿ ಭೂಯಃ ।
ತವೈವ ನಾಮ್ನಾ ಭವಿತಾಯಮಗ್ನಿಃ
ಸೃಜ್ಯಾಂ ಚೇಮಾಮನೇಕರೂಪಾಂ ಗೃಹಾಣ ॥ ೧೬ ॥

೧೬. ಸಂತೋಷಪಟ್ಟ (ಆ) ಮಹಾತ್ಮನು ಅವನನ್ನು ಕುರಿತು (ಹೀಗೆಂದು) ನುಡಿದನು. ' ನಿನಗೆ ಇಲ್ಲ ಈಗ ಮತ್ತೂ (ಒಂದು) ವರವನ್ನು ಕೊಡುತ್ತೇನೆ, ಈ ಅಗ್ನಿಯು ನಿನ್ನ ಹೆಸರಿನಿಂದಲೇ (ಪ್ರಸಿದ್ಧ) ವಾಗಿರುವದು. ಅನೇಕರೂಪವಾಗಿರುವ ಈ ಸೃಂಕೆಯನ್ನೂ ತೆಗೆದುಕೊ.

(ಭಾಷ್ಯ)

೨೭. ಕಥಮ್ ? ತಂ ನಚಿಕೇತಸಮ್ ಅಬ್ರವೀತ್ ಪ್ರೀಯಮಾಣಃ ಶಿಷ್ಯಸ್ಯ ಯೋಗ್ಯತಾಂ ಪಶ್ಯನ್ ಪ್ರೀಯಮಾಣಃ ಪ್ರೀತಿಮನುಭವನ್ ಮಹಾತ್ಮಾ ಅಕ್ಷುದ್ರಬುದ್ಧಿಃ। ವರಂ ತವ ಚತುರ್ಥಮ್ ಇಹ ಪ್ರೀತಿನಿಮಿತ್ತಮ್ ಅದ್ಯ ಇದಾನೀಮ್ ದದಾಮಿ ಭೂಯಃ ಪುನಃ ಪ್ರಯಚ್ಛಾಮಿ। ತವೈವ ನಚಿಕೇತಸಃ ನಾಮ್ನಾ ಅಭಿಧಾನೇನ ಪ್ರಸಿದ್ಧೋ ಭವಿತಾ ಮಯೋಚ್ಯಮಾನೋಽಯಮಗ್ನಿಃ। ಕಿಂ ಚ ಸೃಜ್ಯಾಂ ಶಬ್ದವತೀಂ ರತ್ನಮಯೀಂ ಮಾಲಾಮ್ ಇಮಾಮ್ ಅನೇಕರೂಪಾಂ ವಿಚಿತ್ರಾಂ ಗೃಹಾಣ ಸ್ವೀಕುರು। ಯದ್ವಾ ಸೃಜ್ಯಾಮ್ ಅಕುತ್ಸಿತಾಂ ಗತಿಂ ಕರ್ಮಮಯೀಂ ಗೃಹಾಣ। ಅನ್ಯದಪಿ ಕರ್ಮವಿಜ್ಞಾನಮ್ ಅನೇಕಫಲಹೇತುತ್ವಾತ್ ಸ್ವೀಕುರು ಇತ್ಯರ್ಥಃ ॥

---

1. ಚಯನಪ್ರಕರಣದಲ್ಲಿ ಇದನ್ನು ಹೇಳಿರುತ್ತದೆ ಎಂದು ಟೀಕೆಯಲ್ಲಿದೆ. ಈ ಉಪನಿಷತ್ತಿನ ಬ್ರಾಹ್ಮಣದಲ್ಲಿ ಇದನ್ನು ನೋಡಬೇಕಾಪದ್ದು ಯುಕ್ತ. ಅವರೆ ಕಾಠಕಸಂಹಿತೆಯು ಮುದ್ರಿತವಾಗಿದೆಯಾದರೂ ಬ್ರಾಹ್ಮಣವು ಮುದ್ರಿತವಾಗಿಲ್ಲ. ಮುದ್ರಿತವಾಗಿರುವ ತೈತ್ತಿರೀಯ ಬ್ರಾಹ್ಮಣದಲ್ಲಿ ೧೦-೧೧-೧೨ನೆಯ ಪ್ರಶ್ನೆಗಳಲ್ಲಿ ಈ ವಿಚಾರವಿವೆ. ಈ ಭಾಗವನ್ನು ಕಾಠಕವೆಂದೂ ಕರೆಯುತ್ತಾರೆ ಪೀಠಿಕೆಯನ್ನು ನೋಡಿ.

(ಭಾಷ್ಯಾರ್ಥ)

ಹೇಗೆ (ಹೇಳಿದನು)? ಎಂದರೆ: ಸಂತೋಷಪಟ್ಟ ಎಂದರ ಶಿಷ್ಯನ ಯೋಗ್ಯತೆಯನ್ನು ಕಂಡು ಸಂತೋಷಪಟ್ಟ, ಪ್ರೀತಿಯನ್ನು ಅನುಭವಿಸಿದ, (ಆ) ಮಹಾತ್ಮನು ಕ್ಷುದ್ರಬುದ್ಧಿಯಿಲ್ಲದ (ಆ ಯಮನು) ಆ ನಚಿಕೇತನನ್ನು ಕುರಿತು (ಹೀಗೆಂದು) ನುಡಿದನು. "ನಿನಗೆ ಇಲ್ಲಿ (ನನ್ನ) ಪ್ರೀತಿಯ ನಿಮಿತ್ತವಾಗಿ ಈಗ, ಈ ಕಾಲದಲ್ಲಿ, ಮತ್ತೂ ಇನ್ನೂ (ಒಂದು) **ನಾಲ್ಕನೆಯ**[1] ವರವನ್ನು ಕೊಡುತ್ತೇನೆ. ನನ್ನಿಂದ ಹೇಳಲ್ಪಡುವ ಈ ಅಗ್ನಿಯು ನಚಿಕೇತನೆಂಬ ನಿನ್ನ ಹೆಸರಿನಿಂದಲೇ (ಈ) ಅಭಿಧಾನದಿಂದಲೇ (ಮುಂದೆ) ಪ್ರಸಿದ್ಧವಾಗುವದು ಮತ್ತು ಈ ಸೃಂಕೆಯನ್ನು ಎಂದರೆ (ಝಣಝಣನೆಂದು) ಶಬ್ದಮಾಡುತ್ತಿರುವ ರತ್ನಮಯವಾದ, ಅನೇಕರೂಪವಾಗಿರುವ ಎಂದರೆ ವಿಚಿತ್ರವಾಗಿರುವ, ಮಾಲೆಯನ್ನು ತೆಗೆದುಕೊ ಸ್ವೀಕರಿಸು. ಅಥವಾ ("ಸೃಜ್ಯಾಮ್" ಎಂದರೆ) ಕೇಳ್ಪೆರದ್ದಲ್ಲದ ಕರ್ಮಮಯವಾದ ಗತಿಯನ್ನು[2] ತೆಗೆದುಕೊ. ಅನೇಕ ಫಲಗಳಿಗೆ ಕಾರಣವಾಗಿರುವದರಿಂದ (ಅನೇಕರೂಪವಾಗಿರುವ) ಬೇರೆಯ ಕರ್ಮದ ತಿಳಿವಳಿಕೆಯನ್ನೂ ಸ್ವೀಕರಿಸು ಎಂದರ್ಥ.

ಕರ್ಮೋಪಾಸನೆಗಳ ಫಲ

ತ್ರಿಣಾಚಿಕೇತಸ್ತ್ರಿಭಿರೇತ್ಯ ಸನ್ಧಿಂ
ತ್ರಿಕರ್ಮಕೃತ್ ತರತಿ ಜನ್ಮಮೃತ್ಯೂ ।
ಬ್ರಹ್ಮಜಜ್ಞಂ ದೇವಮೀಡ್ಯಂ ವಿದಿತ್ವಾ
ನಿಚಾಯ್ಯೇಮಾಗ್ಂ ಶಾನ್ತಿಮತ್ಯನ್ತಮೇತಿ ॥ ೧೭ ॥

೧೭. ತ್ರಿಣಾಚಿಕೇತನಾಗಿ ಮೂರರಿಂದ ಸಂಧಿಯನ್ನು ಪಡೆದು ಮೂರು ಕರ್ಮಗಳನ್ನು ಮಾಡಿದಾತನು ಜನ್ಮಮೃತ್ಯುಗಳೆರಡನ್ನೂ ದಾಟುತ್ತಾನೆ. ಬ್ರಹ್ಮಜಜ್ಞನೂ ಈಡ್ಯನೂ ಆಗಿರುವ ದೇವನನ್ನು ತಿಳಿದು ಅರಿತು ಈ ಶಾಂತಿಯನ್ನು ಅತ್ಯಂತವಾಗಿ ಹೊಂದುತ್ತಾನೆ.

(ಭಾಷ್ಯ)

೨೮. ಪುನರಪಿ ಕರ್ಮಸ್ತುತಿಮೇವಾಹ । ತ್ರಿಣಾಚಿಕೇತಃ ತ್ರಿಃಕೃತ್ವಃ ನಾಚಿಕೇತೋಽಗ್ನಿಃ ಚಿತಃ ಯೇನ ಸಃ ತ್ರಿಣಾಚಿಕೇತಃ । ತದ್ವಿಜ್ಞಾನಃ ತದಧ್ಯಯನಃ ತದ

---

1. ನಚಿಕೇತನಿಗೆ ಯಮನು ಕೊಟ್ಟ ವರಗಳೆಷ್ಟೆಂಬುದನ್ನು ಸೂ. ಭಾ. ೧-೪-೬ ರಲ್ಲಿ ಚರ್ಚಿಸಿದೆ.

2. ಸೃಜ್ಯಾ ಎಂಬುದಕ್ಕೆ ಗತಿ, ಮಾರ್ಗ-ಎಂದೂ ಅರ್ಥಮಾಡಬಹುದೆಂದು ಭಾವ. ಈ ಅಧ್ಯಾಯದ ೩ನೆಯ ವಲ್ಲಿಯ ೩ನೆಯ ಮಂತ್ರದ ಭಾಷ್ಯವನ್ನು ನೋಡಿರಿ.

ನುಷ್ಠಾನವಾನ್ವಾ । ತ್ರಿಭಿಃ ಮಾತೃಪಿತ್ರಾಚಾರ್ಯೈಃ ಏತ್ಯ ಪ್ರಾಪ್ಯ ಸನ್ಧಿಂ ಸನ್ಧಾನಂ ಸಮ್ಬನ್ಧಮ್ । ಮಾತ್ರಾದ್ಯನುಶಾಸನಂ ಯಥಾವತ್ ಪ್ರಾಪ್ಯ ಇತ್ಯೇತತ್ । ತದ್ಧಿ ಪ್ರಾಮಾಣ್ಯಕಾರಣಂ ಶ್ರುತ್ಯನ್ತರಾದವಗಮ್ಯತೇ, "ಯಥಾ ಮಾತೃಮಾ ಪಿತೃಮಾ" (ಬೃ. ೪-೧-೨) ಇತ್ಯಾದೇಃ । ನೇದಸ್ಮೃತಿಶಿಷ್ಟೈರ್ವಾ । ಪ್ರತ್ಯಕ್ಷಾನುಮಾನಾಗಮೈರ್ವಾ । ತೇಭ್ಯೋ ಹಿ ವಿಶುದ್ಧಿಃ ಪ್ರತ್ಯಕ್ಷಾ । ತ್ರಿಕರ್ಮಕೃತ್ ಇಜ್ಯಾಧ್ಯಯನದಾನಾನಾಂ ಕರ್ತಾ । ತರತಿ ಅತಿಕ್ರಾಮತಿ ಜನ್ಮಮೃತ್ಯೂ । ಕಿಂ ಚ ಬ್ರಹ್ಮಜಜ್ಞಮ್ ಬ್ರಹ್ಮಣೋ ಹಿರಣ್ಯಗರ್ಭಾಜ್ಜಾತೋ ಬ್ರಹ್ಮಜಃ । ಬ್ರಹ್ಮಜಶ್ಚ ಅಸೌ ಜ್ಞಶ್ಚೇತಿ ಬ್ರಹ್ಮಜಜ್ಞಃ । ಸರ್ವಜ್ಞೋ ಹ್ಯಸೌ । ತಂ ದೇವಂ ದ್ಯೋತನಾತ್, ಜ್ಞಾನಾದಿಗುಣವನ್ತಮ್ । ಈಡ್ಯಮ್ ಸ್ತುತ್ಯಮ್ । ವಿದಿತ್ವಾ ಶಾಸ್ತ್ರತಃ ನಿಚಾಯ್ಯ ದೃಷ್ಟ್ವಾ ಚಾತ್ಮಭಾವೇನ ಇಮಾಂ ಸ್ವಬುದ್ಧಿಪ್ರತ್ಯಕ್ಷಾಂ ಶಾನ್ತಿಮ್ ಉಪರತಿಮ್ ಅತ್ಯನ್ತಮೇತಿ ಅತಿಶಯೇನ ಏತಿ । ವೈರಾಜಂ ಪದಂ ಜ್ಞಾನಕರ್ಮಸಮುಚ್ಚಯಾನುಷ್ಠಾನೇನ ಪ್ರಾಪ್ನೋತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತೂ ಕರ್ಮದ[1] ಸ್ತುತಿಯನ್ನೇ ಹೇಳುತ್ತಾನೆ ತ್ರಿಣಾಚಿಕೇತನಾಗಿ ಎಂದರೆ ಮೂರುಸಲ ನಾಚಿಕೇತನೆಂಬ ಅಗ್ನಿಯನ್ನು ಚಯನಮಾಡಿದವನಾಗಿ ಅದರ ಜ್ಞಾನ, ಅದರ ಅಧ್ಯಯನ, ಅದರ ಅನುಷ್ಠಾನಮಾಡಿದವನು (ತ್ರಿಣಾಚಿಕೇತನು ಎಂದಾದರೂ ಅರ್ಥಮಾಡಬಹುದು).[2] 'ಮೂರರಿಂದ ಸಂಧಿಯನ್ನು ಪಡೆದು' (ಎಂದರೆ) ತಾಯಿ, ತಂದೆ, ಆಚಾರ್ಯ–ಎಂಬ ಮೂವರಿಂದ ಸಂಧಿಯನ್ನು ಎಂದರೆ ಸಂಧಾನವನ್ನು, ಸಂಬಂಧವನ್ನು ಪಡೆದು ಹೊಂದಿ, ತಾಯಿಯೇ ಮುಂತಾದವರ ಉಪದೇಶವನ್ನು ಸರಿಯಾಗಿ ಪಡೆದು ಎಂದರ್ಥ. ಆ (ತಾಯಿ ಮುಂತಾದವರ ಉಪದೇಶವೇ) ಪ್ರಾಮಾಣ್ಯಕ್ಕೆ[3] ಕಾರಣವಾಗುವದೆಂದು "ಹೇಗೆ ತಾಯಿಯ ಉಪದೇಶವುಳ್ಳವನೂ ತಂದೆಯ ಉಪದೇಶವುಳ್ಳವನೂ (ಆಚಾರ್ಯರ ಉಪದೇಶವುಳ್ಳವನೂ ಹೇಳಿಯಾನೋ ಹಾಗೆಯೇ ಹೇಳಿದ್ದಾನೆ)." (ಬೃ. ೪-೧-೨) ಎಂಬ ಬೇರೊಂದು ಶ್ರುತಿಯಿಂದ

---

1. ನಾಚಿಕೇತಾಗ್ನಿಯ ಚಯನ ಮತ್ತು ಉಪಾಸನೆ–ಇವೆರಡೂ ಕರ್ಮಗಳೇ.

2 ಅಗ್ನಿಯನ್ನು ಮೂರುಸಲ ಚಯನಮಾಡಿದವನು ಎಂಬುದಕ್ಕಿಂತ ಅದರ ವಿಷಯವನ್ನು ಅರಿತುಕೊಂಡು ಅಧ್ಯಯನಪೂರ್ವಕವಾಗಿ ಕರ್ಮಮಾಡಿದವನು ಎಂಬ ಮೂರನ್ನೂ ಮಾಡಿದವನು ಎಂಬ ವ್ಯಾಖ್ಯಾನವು ಹೆಚ್ಚು ಒಪ್ಪುತ್ತದೆ ಎಂದು ಭಾವ. ಇಲ್ಲಿ "ತದ್ವಿಜ್ಞಾನವಾ" ಎಂದಿಷ್ಟೇ ಇರುವ (ವಾ॥) ಪಾಠಕ್ಕಿಂತ (ಆ॥) ಪಾಠವೇ ಉತ್ತಮ. ತದ್ವಿಜ್ಞಾನತದಧ್ಯಯನತದನುಷ್ಠಾನವಾ ವಾ" ಎಂದಿದ್ದರೆ ಮತ್ತೂ ಚೆನ್ನಾಗಿರುತ್ತಿತ್ತು.

3. ತಾಯಿಯಿಂದ ತಿಳಿದದ್ದು ತಂದೆಯ ಉಪದೇಶದಿಂದ ಗಟ್ಟಿಯಾಗುವದು, ಆಚಾರ್ಯನ ಉಪದೇಶದಿಂದ ನಿಶ್ಚಿತವಾಗುವದು.

ಗೊತ್ತಾಗಿರುತ್ತದೆಯಲ್ಲವೆ? ಅಥವಾ ವೇದ, ಸ್ಮೃತಿ, ಶಿಷ್ಟರು–ಇವರಿಂದ ಎಂದಾಗಲಿ, ಪ್ರತ್ಯಕ್ಷ, ಅನುಮಾನ, ಆಗಮ–ಇವುಗಳಿಂದ ಎಂದಾಗಲಿ (ವ್ಯಾಖ್ಯಾನಮಾಡ ಬಹುದು).[1] ಏಕೆಂದರೆ ಇವುಗಳಿಂದ (ತತ್ತ್ವದ) ಶುದ್ಧಿಯಾಗುವದೆಂಬುದು ಪ್ರತ್ಯಕ್ಷ ವಾಗಿರುತ್ತದೆ.[2] ಮೂರು ಕರ್ಮಗಳನ್ನು ಮಾಡಿದವನು ಎಂದರೆ ಯಜ್ಞ, ಅಧ್ಯ ಯನ, ದಾನ-ಇವುಗಳನ್ನು ಮಾಡಿದವನು. (ಇಂಥವನು) ಹುಟ್ಟುಸಾವುಗಳೆರ ಡನ್ನೂ ದಾಟುತ್ತಾನೆ, ಎಂದರೆ ಮೀರುತ್ತಾನೆ. ಮತ್ತು ಬ್ರಹ್ಮಜಜ್ಞನೂ–ಬ್ರಹ್ಮ ನಿಂದ ಎಂದರೆ **ಹಿರಣ್ಯಗರ್ಭನಿಂದ** ಹುಟ್ಟಿದವನು[3] ಬ್ರಹ್ಮಜನು; ಬ್ರಹ್ಮಜನೂ ಜ್ಞಾತೃವೂ ಆಗಿರುವದರಿಂದ ಬ್ರಹ್ಮಜಜ್ಞನು. ಅವನು ಸರ್ವಜ್ಞನಲ್ಲವೆ?[4] (ಆದ್ದ ರಿಂದ ಜ್ಞನು ಎಂದು ಕರೆದದ್ದು ಸರಿಯೇ).—ಈಡ್ಯನೂ ಎಂದರೆ ಸ್ತುತ್ಯನಾಗಿರು ವವನೂ ಆದ ಆ ದೇವನನ್ನು ಎಂದರೆ ಜ್ಞಾನವೇ ಮುಂತಾದ ಗುಣಗಳಿಂದ[5] ಕೂಡಿ ಹೊಳೆಯುತ್ತಿರುವ (ಈ ಅಗ್ನಿಯನ್ನು) ಶಾಸ್ತ್ರದಿಂದ ತಿಳಿದುಕೊಂಡು ಅರಿತುಕೊಂಡು ಎಂದರೆ ತನ್ನ ಸ್ವರೂಪವೆಂದು ಕಂಡುಕೊಂಡು[6] ಈ ತನ್ನ ಮನಸ್ಸಿಗೇ ಪ್ರತ್ಯಕ್ಷವಾಗಿ ರುವ[7] ಶಾಂತಿಯನ್ನು ಎಂದರೆ ಉಪರತಿಯನ್ನು ಅತ್ಯಂತವಾಗಿ ಹೆಚ್ಚಾಗಿ ಹೊಂದು ತ್ತಾನೆ. ಜ್ಞಾನಕರ್ಮಗಳೆರಡನ್ನೂ ಸಮುಚ್ಚಯಮಾಡಿಕೊಂಡು ಅನುಷ್ಠಾನ ಮಾಡುವದರಿಂದ ವಿರಾಜನ ಪದವಿಯನ್ನು ಪಡೆಯುತ್ತಾನೆ ಎಂದರ್ಥ.

(ಭಾಷ್ಯ)

೨೯. ಇದಾನೀಮಗ್ನಿವಿಜ್ಞಾನಚಯನಫಲಮ್ ಉಪಸಂಹರತಿ, ಪ್ರಕರಣಂ ಚ—

---

1 "ವೇದೋಽಖಿಲಂ ಧರ್ಮಮೂಲಂ ಸ್ಮೃತಿಶೀಲೇ ಚ ತದ್ವಿದಾಮ್" (ಮನು. ೨-೬) ಪ್ರತ್ಯಕ್ಷಂ ಚಾನುಮಾನಂ ಚ ಶಾಸ್ತ್ರಂ ಚ ವಿವಿಧಾಗಮಮ್। ತ್ರಯಂ ಸುವಿದಿತಂ ಕಾರ್ಯಂ ಧರ್ಮಶುದ್ಧಿಮಭೀಪ್ಸತಾ" (ಮನು. ೧೨-೧೦೫) ಎಂಬ ಸ್ಮೃತಿಯ ಸೂಚನೆ.

2. ಅನುಭವಸಿದ್ಧವಾಗಿರುತ್ತದೆ.

3. ಬೃ. ಭಾ. ೧-೪-೪ ನೋಡಿರಿ.

4 ಹಿರಣ್ಯಗರ್ಭನು ಸರ್ವಜ್ಞನು; ಅವನ ಮಗನಾದ ವಿರಾಟ್ಪುರುಷನೂ ಹಾಗೆಯೇ.

5. ಜ್ಞಾನ, ವೈರಾಗ್ಯ, ಐಶ್ವರ್ಯ, ಧರ್ಮ-ಎಂಬ ಗುಣಗಳು ನಿರತಿಶಯವಾಗಿ ಸಹಜ ವಾಗಿಯೇ ವಿರಾಟ್ಪುರುಷನಲ್ಲಿರುವವೆಂದು ಸ್ಮೃತಿ.

6 ವಿರಾಟ್ಪುರುಷನೇ ನಾನು ಎಂದು ಸಾಕ್ಷಾತ್ಕಾರಮಾಡಿಕೊಂಡು; ಉಪಾಸನೆಗೆ ಸಾಕ್ಷಾತ್ಕಾರವಾಗುವದೂ ಅವಶ್ಯವೆಂಬುದಕ್ಕೆ ಸೂ. ಭಾ. ೪-೪-೫೯ ನೋಡಿರಿ.

7. ಸಾಕ್ಷಾತ್ಕಾರದಿಂದ ಮೊದಲೇ ಶಾಂತಿಯು ದೊರಕುವದು ಪ್ರತ್ಯಕ್ಷವಾಗಿ ತಿಳಿಯ ಬರುತ್ತದೆ, ಸತ್ರಬಳಿಕ ಕಲ್ಪಾಂತದವರೆಗೆ ಶಾಂತಿಯು ನಿಂತಿರುತ್ತದೆ.

(ಭಾಷ್ಯಾರ್ಥ)

ಈಗ ಅಗ್ನಿಯ ವಿಷಯವಾದ ಜ್ಞಾನ ಮತ್ತು ಚಯನ[1]–ಇವುಗಳ ಫಲವನ್ನೂ (ಈ) ಪ್ರಕರಣವನ್ನೂ[2] ಉಪಸಂಹಾರಮಾಡುತ್ತಾನೆ:—

ತ್ರಿಣಾಚಿಕೇತಸ್ತ್ರಯಮೇತದ್ ವಿದಿತ್ವಾ
ಯ ಏವಂ ವಿದ್ವಾಗ್ಂಶ್ಚಿನುತೇ ನಾಚಿಕೇತಮ್ ।
ಸ ಮೃತ್ಯುಪಾಶಾ ಪುರತಃ ಪ್ರಣೋದ್ಯ
ಶೋಕಾತಿಗೋ ಮೋದತೇ ಸ್ವರ್ಗಲೋಕೇ ॥ ೧೪ ॥

೧೪ ತ್ರಿಣಾಚಿಕೇತನಾಗಿ ಈ ಮೂರನ್ನೂ ತಿಳಿದುಕೊಂಡು ಯಾವನು ಈರೀತಿಯಾಗಿ ತಿಳಿದು ನಾಚಿಕೇತ ಅಗ್ನಿಯನ್ನು ಚಯನಮಾಡುತ್ತಾನೋ ಅವನು ಮೃತ್ಯುಪಾಶಗಳನ್ನು ಮೊದಲು ತೊಲಗಿಸಿಕೊಂಡು ಶೋಕಗಳನ್ನು ಅತಿಕ್ರಮಿಸಿ ಸ್ವರ್ಗಲೋಕದಲ್ಲಿ ಸುಖಪಡುವನು.

(ಭಾಷ್ಯ)

೩೦. ತ್ರಿಣಾಚಿಕೇತಃ ತ್ರಯಂ ಯಥೋಕ್ತಮ್ "ಯಾ ಇಷ್ಟಕಾಯಾ ವತೀರ್ವಾ ಯಥಾ ವಾ" ಇತ್ಯೇತದ್ ವಿದಿತ್ವಾ ಅವಗಮ್ಯ, ಯಶ್ಚ ಏವಮ್ ಆತ್ಮರೂಪೇಣ ಅಗ್ನಿಂ ವಿದ್ವಾನ್, ಚಿನುತೇ ನಿರ್ವರ್ತಯತಿ ನಾಚಿಕೇತಮಗ್ನಿಂ ಕ್ರತುಮ್ । ಸಃ ಮೃತ್ಯುಪಾಶಾ ಅಧರ್ಮಾಜ್ಞಾನರಾಗದ್ವೇಷಾದಿಲಕ್ಷಣಾ ಪುರತಃ ಅಗ್ರತಃ ಪೂರ್ವಮೇವ ಶರೀರಪಾತಾತ್ ಇತ್ಯರ್ಥಃ । ಪ್ರಣೋದ್ಯ ಅಪಹಾಯ, ಶೋಕಾತಿಗಃ ಮಾನಸೈರ್ದುಃಖೈರ್ವರ್ಜಿತಃ ಇತ್ಯೇತತ್ । ಮೋದತೇ ಸ್ವರ್ಗಲೋಕೇ ವೈರಾಜೇ ವಿರಾಡಾತ್ಮಸ್ವರೂಪಪ್ರತಿಪತ್ತ್ಯಾ ॥

(ಭಾಷ್ಯಾರ್ಥ)

ತ್ರಿಣಾಚಿಕೇತನಾಗಿ ಹಿಂದೆ[3] ಹೇಳಿರುವಂತೆ "ಎಂಥ ಇಟ್ಟಿಗೆಗಳು, ಎಷ್ಟು, ಹೇಗೆ" ಎಂಬಿದನ್ನು ತಿಳಿದುಕೊಂಡು, ಗೊತ್ತುಮಾಡಿಕೊಂಡು ಮತ್ತು ಯಾವನು **ಈ ರೀತಿಯಾಗಿ ಎಂದರೆ ತನ್ನ ಸ್ವರೂಪದಿಂದಲೇ ಅಗ್ನಿಯನ್ನು ತಿಳಿದು**[4] ನಾಚಿಕೇತ

---

1. ಬ್ರಾಹ್ಮಣದಲ್ಲಿ ಹೇಳಿರುವ ಅಗ್ನಿಚಯನರೂಪವಾದ ಕರ್ಮ ಮತ್ತು ವಿರಾಡುಪಾಸನೆ–ಇವುಗಳನ್ನು ಕೂಡಿಸಿ ಅನುಷ್ಠಾನಮಾಡಿದ್ದು.
2. ಅಗ್ನಿವಿದ್ಯೆಯ ಪ್ರಕರಣವನ್ನೂ.
3. ೧೫ನೆಯ ಮಂತ್ರದಲ್ಲಿ.
4. ವರ್ಷಕ್ಕೆ ಮುನ್ನೂರು ಅರುವತ್ತು ದಿವಸ; ಹಗಲು ರಾತ್ರಿಗಳನ್ನು ವಿಂಗಡಿಸಿದರೆ ಏಳ ನೂರ ಇಪ್ಪತ್ತು, ಇಟ್ಟಿಗೆಗಳು ಅಗ್ನಿಚಯನಕ್ಕೆ ಬೇಕಾಗುವವು. ಹಗಲು ರಾತ್ರಿಗಳೆಂಬ ಅಷ್ಟು ಇಟ್ಟಿಗೆಗಳಿಂದ ಚಯನಮಾಡಿರುವ ನಚಿಕೇತಾಗ್ನಿಯು ನಾನು ಎಂದು ಧ್ಯಾನಮಾಡಿ ಸಾಕ್ಷಾತ್ಕಾರ ಮಾಡಿದವನಿಗೆ ಈ ಫಲ.

ನೆಂಬ ಅಗ್ನಿಯನ್ನು ಎಂದರೆ ಕ್ರತುವನ್ನು ಚಯನಮಾಡುತ್ತಾನೋ ಅನುಷ್ಠಾನ ಮಾಡುತ್ತಾನೋ ಅವನು **ಮೃತ್ಯುಪಾಶಗಳನ್ನು** ಎಂದರೆ ಅಧರ್ಮ, ಅಜ್ಞಾನ, ರಾಗ, ದ್ವೇಷ–ಮುಂತಾದ ರೂಪದ (ಮೃತ್ಯುವಿನ ಹಗ್ಗದ ಕುಣಿಕೆಗಳನ್ನು) ಮೊದಲು ಎಂದರೆ ಶರೀರವು ಬಿದ್ದುಕೊಂಡು ಹೋಗುವ ಮುಂಚೆಯೇ[1] **ತೊಲಗಿಸಿಕೊಂಡು** ಬಿಡಿಸಿಕೊಂಡು ಶೋಕಗಳನ್ನು ಅತಿಕ್ರಮಿಸಿ ಎಂದರೆ ಮನಸ್ಸಿನ ದುಃಖಗಳು ಯಾವವೂ ಇಲ್ಲದೆ ಎಂದರ್ಥ. ಸ್ವರ್ಗಲೋಕದಲ್ಲಿ **ವಿರಾಜನ ಲೋಕದಲ್ಲಿ**[2] **ವಿರಾಡಾತ್ಮನ ಸ್ವರೂಪವನ್ನೇ ಪಡೆದುಕೊಂಡು**[3] ಸುಖಪಡುವನು.

ಏಷ ತೇಽಗ್ನಿರ್ನಚಿಕೇತಃ ಸ್ವರ್ಗ್ಯೋ
ಯಮವೃಣೀಥಾ ದ್ವಿತೀಯೇನ ವರೇಣ ।
ಏತಮಗ್ನಿಂ ತವೈವ ಪ್ರವಕ್ಷ್ಯನ್ತಿ ಜನಾಸ-
ಸ್ತೃತೀಯಂ ವರಂ ನಚಿಕೇತೋ ವೃಣೀಷ್ವ ॥ ೧೯ ॥

೧೯. ನಚಿಕೇತನೆ, ಯಾವದನ್ನು ಎರಡನೆಯ ವರದಿಂದ ಕೇಳಿದ್ದಿಯೋ ಇದೇ ನಿನಗೆ (ಕೊಟ್ಟಿರುವ ವರವಾದ) (ಆ) ಸ್ವರ್ಗ್ಯವಾದ ಅಗ್ನಿಯು. ಈ ಅಗ್ನಿಯನ್ನು ಜನರು ನಿನ್ನ (ಹೆಸರಿ)ನಿಂದಲೇ ಮುಂದೆ ಕರೆಯುವರು. ನಚಿಕೇತನೆ, ಮೂರನೆಯ ವರವನ್ನು ಕೇಳಿಕೊ.

(ಭಾಷ್ಯ)

೩೧. ಏಷಃ ತೇ ತುಭ್ಯಮ್ ಅಗ್ನಿಃ ವರಃ ಹೇ ನಚಿಕೇತಃ ಸ್ವರ್ಗ್ಯಃ ಸ್ವರ್ಗಸಾಧನಃ । ಯಮ್ ಅಗ್ನಿಂ ವರಮ್ ಅವೃಣೀಥಾಃ ಪ್ರಾರ್ಥಿತವಾನಸಿ ದ್ವಿತೀಯೇನ ವರೇಣ ಸೋಽಗ್ನಿರ್ವರೋ ದತ್ತಃ ಇತ್ಯುಕ್ತೋಪಸಂಹಾರಃ । ಕಿಂ ಚ ಏತಮ್ ಅಗ್ನಿಂ ತವೈವ ನಾಮ್ನಾ ಪ್ರವಕ್ಷ್ಯನ್ತಿ ಜನಾಸಃ ಜನಾ ಇತ್ಯೇತತ್ । ಏಷ ವರೋ ದತ್ತೋ ಮಯಾ ಚತುರ್ಥಸ್ತುಷ್ಟೇನ । ತೃತೀಯಂ ವರಂ ನಚಿಕೇತಃ ವೃಣೀಷ್ವ । ತಸ್ಮಿನ್ ಹಿ ಅದತ್ತೇ ಋಣವಾನೇವಾಹಮ್ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಎಲೈ ನಚಿಕೇತನೆ, ಇದು ನಿನಗೆ (ಕೊಟ್ಟಿರುವ) ಅಗ್ನಿಯೆಂಬ ಸ್ವರ್ಗ್ಯವಾದ

---

1. ಅಧರ್ಮಾದಿಗಳು ಉಪಾಸಕನಿಗೆ ಶರೀರವು ಇರುವಾಗಲೆ ಹೇಳಿಬಿಟ್ಟಿರುವವು.

2. ಈ ಲೋಕವು ಸೂರ್ಯಮಂಡಲದ ಆಚೆ ಇರುವದೆಂದು ತೈ. ಬ್ರಾ. ಪ್ರ. ೧೮–೭–೪ ರಲ್ಲಿದೆ.

3 ಯಾವ ದೇವತೆಯನ್ನು ಉಪಾಸನೆಮಾಡುವರೋ ಆ ದೇವತೆಯ ಸಾಕ್ಷಾತ್ಕಾರವನ್ನು ಹೊಂದಿ ಸತ್ತಬಳಿಕ ಅದರ ಸಾಯುಜ್ಯವನ್ನು ಹೊಂದುವರು ಎಂಬುದು ಶ್ರುತಿವಾದವು. ಬೃ. ಭಾ. ೪–೧–೨ ನೋಡಿರಿ.

ಸ್ವರ್ಗಕ್ಕೆ ಸಾಧನವಾದ ವರವು. ಯಾವ ಅಗ್ನಿ (ವಿದ್ಯೆ) ಎಂಬ ವರವನ್ನು ಎರಡನೆಯ ವರವಾಗಿ ಕೇಳಿದ್ದೆಯೋ ಪ್ರಾರ್ಥಿಸಿಕೊಂಡಿದ್ದೆಯೋ ಆ ಅಗ್ನಿ (ವಿದ್ಯೆ)ಯೆಂಬ ವರವನ್ನು ಕೊಟ್ಟಿದ್ದೇನೆ–ಎಂದು ಹಿಂದೆ ಹೇಳಿದ್ದನ್ನು ಉಪಸಂಹಾರಮಾಡಿರುತ್ತದೆ.[1] ಮತ್ತು ಈ ಅಗ್ನಿಯನ್ನು 'ಜನಾಸಃ' [ಜನಾಃ] ಜನರು ಎಂದರ್ಥ, ನಿನ್ನ ಹೆಸರಿನಿಂದಲೇ (ಇದನ್ನು) ಕರೆಯುವರು. ನಾನು ಸಂತೋಷಪಟ್ಟು ಕೊಟ್ಟ ನಾಲ್ಕನೆಯ ವರವಿದು.[2] ನಚಿಕೇತನೆ, ಮೂರನೆಯ ವರವನ್ನು[3] ಕೇಳಿಕೊ, ಏಕೆಂದರೆ ಅದನ್ನು ಕೊಡದೆ ಇದ್ದರೆ ನಾನು (ನಿನಗೆ) ಇನ್ನೂ ಋಣಿಯಾಗಿಯೇ (ಇರುವೆನು) ಎಂದಭಿಪ್ರಾಯ.

ಮೂರನೆಯ ವರ: ಆತ್ಮವಿದ್ಯೆ

(ಭಾಷ್ಯ)

೩೨. ಏತಾವದ್ ಹಿ ಅತಿಕ್ರಾನ್ತೇನ ವಿಧಿಪ್ರತಿಷೇಧಾರ್ಥೇನ ಮನ್ತ್ರಬ್ರಾಹ್ಮಣೇನ ಅವಗನ್ತವ್ಯಂ ಯದ್ ವರದ್ವಯಸೂಚಿತಂ ವಸ್ತು, ನಾತ್ಮತತ್ತ್ವವಿಷಯಯಾಥಾತ್ಮ್ಯವಿಜ್ಞಾನಮ್ । ಅತೋ ವಿಧಿಪ್ರತಿಷೇಧಾರ್ಥವಿಷಯಸ್ಯ ಆತ್ಮನಿ ಕ್ರಿಯಾಕಾರಕಫಲಾಧ್ಯಾರೋಪಣಲಕ್ಷಣಸ್ಯ ಸ್ವಾಭಾವಿಕಸ್ಯಾಜ್ಞಾನಸ್ಯ ಸಂಸಾರಬೀಜಸ್ಯ ನಿವೃತ್ತ್ಯರ್ಥಂ ತದ್ವಿಪರೀತಬ್ರಹ್ಮಾತ್ಮೈಕತ್ವವಿಜ್ಞಾನಂ ಕ್ರಿಯಾಕಾರಕಫಲಾಧ್ಯಾರೋಪಣ[4] ಶೂನ್ಯಮ್ ಅತ್ಯನ್ತಿಕನಿಶ್ರೇಯಸಪ್ರಯೋಜನಂ ವಕ್ತವ್ಯಮ್ ಇತ್ಯುತ್ತರೋ ಗ್ರನ್ಥ ಆರಭ್ಯತೇ । ತಮೇತಮ್ ಅರ್ಥಂ ದ್ವಿತೀಯವರಪ್ರಾಪ್ತ್ಯಾಪ್ಯಕೃತಾರ್ಥತ್ವಂ ತೃತೀಯವರಗೋಚರಮ್ ಆತ್ಮಜ್ಞಾನಮನ್ತರೇಣ ಇತ್ಯಾಖ್ಯಾಯಿಕಯಾ ಪ್ರಪಞ್ಚಯತಿ । ಯತಃ ಪೂರ್ವಸ್ಮಾತ್ ಕರ್ಮಗೋಚರಾತ್, ಸಾಧ್ಯಸಾಧನಲಕ್ಷಣಾತ್, ಅನಿತ್ಯಾದ್ ವಿರಕ್ತಸ್ಯ ಆತ್ಮಜ್ಞಾನೇಽಧಿಕಾರಃ ಇತಿ ತನ್ನಿರ್ದಾರ್ಥಂ ಪುತ್ರಾದ್ಯುಪನ್ಯಾಸೇನ ಪ್ರಲೋಭನಂ ಕ್ರಿಯತೇ ॥

ನಚಿಕೇತಾ ಉವಾಚ "ತೃತೀಯಂ ವರಂ ನಚಿಕೇತೋ ವೃಣೀಷ್ವ" ಇತ್ಯುಕ್ತ ಸನ್—

(ಭಾಷ್ಯಾರ್ಥ)

ವರಗಳೆರಡರಿಂದ ಸೂಚಿತವಾದ ವಸ್ತು ಯಾವದಿದೆಯೋ ಅದಿಷ್ಟೇ ವಿಧಿ, ಪ್ರತಿಷೇಧ–ಈ ಎರಡನ್ನೂ ಹೇಳುವದಕ್ಕೆ ಬಂದಿರುವ ಹಿಂದಿನ ಮಂತ್ರಬ್ರಾಹ್ಮಣರೂಪವಾದ (ಗ್ರಂಥದಿಂದ) ತಿಳಿದುಕೊಳ್ಳಬೇಕಾದದ್ದು, (ಇಷ್ಟೇ ಹೊರತು) ಆತ್ಮತತ್ತ್ವದಃ

---

1. ಹೊಸದೇನನ್ನೂ ಹೇಳಿಲ್ಲ.
2. ಆದ್ದರಿಂದ ನೀನು ಕೇಳಿಕೊಂಡಿರುವ ಮೂರು ವರಗಳಲ್ಲಿ ಇದು ಸೇರಿಲ್ಲ.
3. ಈ ವರದ ವಿಚಾರವು ಬ್ರಾಹ್ಮಣದಲ್ಲಿಲ್ಲ; ಪೀಠಿಕೆಯನ್ನು ನೋಡಿರಿ.
4. ಇಲ್ಲಿ "ಲಕ್ಷಣ" ಎಂಬ ಮಾತು (ಆಃಕಾ॥) ಪಾಠದಲ್ಲಿ ಹೆಚ್ಚಾಗಿ ಬಿದ್ದಿದೆ.

ವಿಷಯದ ಯಾಥಾತ್ಮ್ಯಜ್ಞಾನವು (ಅದರಿಂದ ಗೊತ್ತಾಗುವ)ದಿಲ್ಲ. **ಆದ್ದರಿಂದ ವಿಧಿ, ಪ್ರತಿಷೇಧ— ಇವುಗಳ ಅರ್ಥಗಳ[1] ವಿಷಯವಾಗಿರುವ, ಆತ್ಮನಲ್ಲಿ ಕ್ರಿಯಾಕಾರಕಫಲಗಳನ್ನು ಹುಟ್ಟುಗಟ್ಟುವದೆಂಬ-ಸಂಸಾರಬೀಜವಾಗಿಯೂ (ಜೀವರಿಗೆ) ಸ್ವಾಭಾವಿಕವಾಗಿಯೂ ಇರುವ-ಅಜ್ಞಾನವನ್ನು ಹೋಗಲಾಡಿಸುವದಕ್ಕಾಗಿ ಇದಕ್ಕೆ ವಿರುದ್ಧವಾಗಿರುವ ಕ್ರಿಯಾಕಾರಕಫಲಗಳ ಹುಟ್ಟುಗಟ್ಟುವದೆಂಬುದಿಲ್ಲದ ಆತ್ಯಂತಿಕವಾದ ಮುಕ್ತಿಯೆಂಬ ಪ್ರಯೋಜನವನ್ನು ಕೊಡುವ ಬ್ರಹ್ಮಾತ್ಮೈಕತ್ವದ[2] ತಿಳಿವಳಿಕೆಯನ್ನು ಹೇಳಬೇಕೆಂದು** ಮುಂದಿನ ಗ್ರಂಥವನ್ನು ಆರಂಭಿಸಿರುತ್ತದೆ. ಮೂರನೆಯ ವರಕ್ಕೆ ವಿಷಯವಾದ ಆತ್ಮಜ್ಞಾನವಿಲ್ಲದೆ ಎರಡನೆಯ ವರವನ್ನು ಪಡೆದಿದ್ದರೂ ಕೃತಕೃತ್ಯತೆಯಾಗಲಿಲ್ಲ ಎಂದು (ಮುಂದಿನ) ಕಥೆಯಿಂದ ಆ ಈ ವಿಷಯವನ್ನು ವಿವರಿಸಿರುತ್ತದೆ. (ಅದು) ಹೇಗೆ (ಗೊತ್ತೆ)ಂದರೆ ಹಿಂದೆ ಹೇಳಿದ ಕರ್ಮಕ್ಕೆ ವಿಷಯವಾದ **ಸಾಧ್ಯಸಾಧನರೂಪವಾಗಿ ಅನಿತ್ಯವಾಗಿರುವ**[3] ದಕ್ಕೆ ಬೇಸತ್ತಿರುವವನಿಗೇ ಆತ್ಮಜ್ಞಾನದಲ್ಲಿ ಅಧಿಕಾರವು- ಎಂದು ಅದನ್ನು ನಿಂದಿಸುವದಕ್ಕಾಗಿ ಪುತ್ರಾದಿಗಳನ್ನು ಹೇಳಿ (ನಚಿಕೇತನಿಗೆ) ಆಶೆಯನ್ನು ತೋರಿಸಿರುತ್ತದೆ[4]

"ನಚಿಕೇತನೆ, ಮೂರನೆಯ ವರವನ್ನು ಕೇಳಿಕೊ" ಎಂದು (ಯಮನು) ಹೇಳಲಾಗಿ ನಚಿಕೇತನು ನುಡಿದದ್ದೇನೆಂದರೆ.—

ಯೇಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇ
ಅಸ್ತೀತ್ಯೇಕೇ ನಾಯಮಸ್ತೀತಿ ಚೈಕೇ।
ಏತದ್ವಿದ್ಯಾಮನುಶಿಷ್ಟಸ್ತ್ವಯಾಹಂ
ವರಾಣಾಮೇಷ ವರಸ್ತೃತೀಯಃ ॥ ೨೦ ॥

---

1. ಪ್ರವೃತ್ತಿನಿವೃತ್ತಿಗಳ.

2. ನಮ್ಮಗಳೆಲ್ಲರ ಆತ್ಮನು ಅಸಂಸಾರಿಯಾದ ಬ್ರಹ್ಮವು, ಆ ಬ್ರಹ್ಮವು ಒಂದೇ ಎಂಬ ತಿಳಿವಳಿಕೆ.

3. ಪುತ್ರ, ಕರ್ಮ, ಉಪಾಸನೆ ಎಂಬ ಸಾಧನಗಳು, ಅವುಗಳಿಗೆ ಸಿಕ್ಕುವ ಮನುಷ್ಯಲೋಕಜಯ, ಪಿತೃಲೋಕಜಯ, ದೇವಲೋಕಜಯ ಎಂಬ ಸಾಧ್ಯಗಳು. ಬೃ. ಭಾ. ೧-೫-೧೭, ೩-೫-೧.

4. ಪುತ್ರಾದಿಫಲಗಳು ಹಿಂದೆ ಹೇಳಿದ ಕರ್ಮಕಾಂಡದ ಫಲಗಳು. ಇವುಗಳನ್ನು ಕೊಡುತ್ತೇನೆಂದರೂ ನಚಿಕೇತನು ಬೇಡವೆಂದಿರುತ್ತಾನೆ. ಆತ್ಮಜ್ಞಾನವನ್ನೇ ಕೇಳಿರುತ್ತಾನೆ. ಆದ್ದರಿಂದ ಆತ್ಮಜ್ಞಾನವಿಲ್ಲದೆ ಅವನು ಕೃತಕೃತ್ಯನಾಗಲಿಲ್ಲವೆಂದು ನಿಶ್ಚಯವಾಯಿತು.

೨೦. ಮನುಷ್ಯನು ಸತ್ತಮೇಲೆ ಇರುತ್ತಾನೆಂದು ಕೆಲವರು, ಇವನು ಇರುವದಿಲ್ಲವೆಂದು ಕೆಲವರು–ಹೀಗೆ ಈ ಸಂಶಯವುಂಟಷ್ಟೆ. ನಿನ್ನಿಂದ ಅನುಶಿಷ್ಟನಾಗಿ ನಾನು ಇದನ್ನು ತಿಳಿಯಲಿಚ್ಛಿಸುವೆನು. ವರಗಳಲ್ಲಿ ಈ ವರವೇ ಮೂರನೆಯದು.

(ಭಾಷ್ಯ)

೨೩. ಯೇಯಂ ವಿಚಿಕಿತ್ಸಾ ಸಂಶಯಃ ಪ್ರೇತೇ ಮೃತೇ ಮನುಷ್ಯೇ ಅಸ್ತೀತ್ಯೇಕೇ "ಅಸ್ತಿ ಶರೀರೇನ್ದ್ರಿಯಮನೋಬುದ್ಧಿವ್ಯತಿರಿಕ್ತೋ ದೇಹಾನ್ತರಸಮ್ಬನ್ಧ್ಯಾತ್ಮಾ" ಇತಿ ಏಕೇ। ನಾಯಮಸ್ತೀತಿ ಚೈಕೇ "ನಾಯಮ್ ಏವಂವಿಧಃ ಅಸ್ತಿ" ಇತಿ ಚ ಏಕೇ। ಅತಶ್ಚ ಅಸ್ಮಾಕಂ ನ ಪ್ರತ್ಯಕ್ಷೇಣ ನಾಪ್ಯನುಮಾನೇನ ನಿರ್ಣಯ ವಿಜ್ಞಾನಮ್, ಏತದ್ವಿಜ್ಞಾನಾಧೀನೋ ಹಿ ಪರಃ ಪುರುಷಾರ್ಥ ಇತ್ಯತಃ ಏತದ್ವಿದ್ಯಾಂ ವಿಜಾನೀಯಾಮ್ ಅಹಮ್ ಅನುಶಿಷ್ಟಃ ಜ್ಞಾಪಿತಃ ತ್ವಯಾ। ವರಾಣಾಮೇಷ ವರ ಸ್ತೃತೀಯಃ ಅವಶಿಷ್ಯತೇ ॥

(ಭಾಷ್ಯಾರ್ಥ)

(ಈ ಲೋಕವನ್ನು) ಬಿಟ್ಟುಹೋದ, ಸತ್ತ, ಮನುಷ್ಯನ ವಿಷಯದಲ್ಲಿ ಇರುತ್ತಾನೆಂದು ಕೆಲವರು, "ಶರೀರ, ಇಂದ್ರಿಯ, ಮನಸ್ಸು, ಬುದ್ಧಿ–ಇವುಗಳಿಗಿಂತ ಬೇರೆಯಾಗಿ ಮತ್ತೊಂದು ದೇಹವನ್ನು ಸೇರುವ ಆತ್ಮನು ಇರುತ್ತಾನೆ" ಎಂದು ಕೆಲವರು ಮತ್ತು ಇವನು ಇರುವದಿಲ್ಲ ಎಂದು ಕೆಲವರು; ಇವನು ಎಂದರೆ "ಇಂಥ (ಆತ್ಮನು) ಇರುವದಿಲ್ಲ" ಎಂದು ಕೆಲವರು[1]—ಹೀಗೆ ವಿಚಿಕಿತ್ಸೆ ಎಂದರೆ ಸಂಶಯವು ಉಂಟಷ್ಟೆ. ಹೀಗಿರುವದರಿಂದ[2] **ಪ್ರತ್ಯಕ್ಷದಿಂದಲಾಗಲಿ ಅನುಮಾನದಿಂದಲಾಗಲಿ ನಮಗೆ (ಈ ವಿಷಯದಲ್ಲಿ) ನಿರ್ಣಯಜ್ಞಾನವಿರುವದಿಲ್ಲ.** ಇದನ್ನರಿತು ಕೊಳ್ಳುವದನ್ನೇ ಪರಮಪುರುಷಾರ್ಥದ (ಪ್ರಾಪ್ತಿಯು)[3] ಅವಲಂಬಿಸಿರುವದು.

---

1. ದೇಹಾಂತರವನ್ನು ಪಡೆಯುವ ಆತ್ಮನೊಬ್ಬನು ಇದಾನೆ ಎಂದು ಮಿಮಾಂಸಕರೆನ್ನುವರು, ಇಲ್ಲವೆಂದು ಚಾರ್ವಾಕರ ಮತ.

2 ಸಂಶಯವಿರುವದರಿಂದ ಎಂದರ್ಥ. ಪ್ರತ್ಯಕ್ಷವಾಗಿ ನಿರ್ಣಯವಾಗಿದ್ದರೆ ಸಂಶಯವಾಗಲಾರದು. ಆದ್ದರಿಂದ ಪ್ರತ್ಯಕ್ಷವಿಂದ ಆತ್ಮಸ್ವರೂಪವನ್ನು ನಿರ್ಣಯಿಸುವದಕ್ಕೆ ಆಗುವದಿಲ್ಲ. ಆತ್ಮನ ಹೆಗ್ಗುರುತು ಯಾವಮೂ ಇಲ್ಲದ್ದರಿಂದ ಅನುಮಾನದಿಂದಲೂ ಆತ್ಮನನ್ನು ನಿಶ್ಚಯಿಸುವದಕ್ಕೆ ಬರುವದಿಲ್ಲ. ಬೃಹದಾರಣ್ಯಕದ ಸಂಬಂಧಭಾಷ್ಯವನ್ನು ನೋಡಿರಿ.

3. ಆತ್ಮನನ್ನು ಸರಿಯಾಗಿ ತಿಳಿದುಕೊಂಡರೆ ಸಂಸಾರವು ತೊಲಗಿ ಮೋಕ್ಷವು ದೊರಕುವದೆಂಬ ಪ್ರಯೋಜನವೂ ಉಂಟು. ಸಂದಿಗ್ಧವಾಗಿಯೂ ತಿಳಿದರೆ ಪ್ರಯೋಜನದಾಯಕವಾಗಿಯೂ ಇರುವದನ್ನು ಕುರಿತು ವಿಚಾರಮಾಡಬೇಕು. ಆದ್ದರಿಂದ ಆತ್ಮವಿಚಾರವನ್ನು ಮಾಡತಕ್ಕದ್ದು ಯುಕ್ತ ಎಂದು ಭಾವ. ಸೂ. ಭಾ. ದ ಉಪೋದ್ಘಾತದ ಸಾರವಿದು.

ಆದ್ದರಿಂದ ನಿನ್ನಿಂದ ಅನುಶಿಷ್ಟನಾಗಿ ಬೋಧಿತನಾಗಿ ನಾನು ಇದನ್ನು ತಿಳಿಯಲಿಚ್ಛಿಸುವೆನು. (ನಾನು ಕೇಳಿದ) ವರಗಳಲ್ಲಿ ಇದೇ ಉಳಿದಿರುವ ಮೂರನೆಯ ವರವು.

ನಚಿಕೇತನ ಯೋಗ್ಯತಾಪರೀಕ್ಷೆ

(ಭಾಷ್ಯ)

೩೪. ಕಿಮಯಮ್ ಏಕಾನ್ತತೋ ನಿಃಶ್ರೇಯಸಸಾಧನಾತ್ಮಜ್ಞಾನಾರ್ಹಃ, ನ ವಾ ಇತ್ಯೇತತ್ಪರೀಕ್ಷಣಾರ್ಥಮ್ ಆಹ--

(ಭಾಷ್ಯಾರ್ಥ)

ಇವನು ಮುಕ್ತಿಗೆ ಸಾಧನವಾದ ಆತ್ಮಜ್ಞಾನಕ್ಕೆ ಸಂಪೂರ್ಣವಾಗಿ [1] ತಕ್ಕವನೊ ಅಲ್ಲವೊ ಎಂಬುದನ್ನು ಪರೀಕ್ಷಿಸಿ (ತಿಳಿದುಕೊಳ್ಳುವದಕ್ಕೆಂದು ಯಮನು) ಹೇಳುತ್ತಾನೆ:

ದೇವೈರತ್ರಾಪಿ ವಿಚಿಕಿತ್ಸಿತಂ ಪುರಾ
ನ ಹಿ ಸುವಿಜ್ಞೇಯಮಣುರೇಷ ಧರ್ಮಃ ।
ಅನ್ಯಂ ವರಂ ನಚಿಕೇತೋ ವೃಣೀಷ್ವ
ಮಾ ಮೋಪರೋತ್ಸೀರತಿ ಮಾ ಸೃಜೈನಮ್ ॥ ೨೧ ॥

೨೧. ಪೂರ್ವದಲ್ಲಿ ದೇವತೆಗಳು ಕೂಡ ಇಲ್ಲಿ ಸಂಶಯಪಟ್ಟಿದ್ದರು. ಇದು ಸುಜ್ಞೇಯವಾದದ್ದಲ್ಲವೇ ಅಲ್ಲ. ಈ ಧರ್ಮವು ಅಣುವಾದದ್ದು. ನಚಿಕೇತನೆ, ಬೇರೊಂದು ವರವನ್ನು ಕೇಳಿಕೊ. ನನ್ನನ್ನು ನಿರ್ಬಂಧಪಡಿಸಬೇಡ, ಇದನ್ನು ನನಗೆ ಬಿಟ್ಟುಕೊಡು.

(ಭಾಷ್ಯ)

೩೫. ದೈವೈರಪಿ ಅತ್ರ ಏತಸ್ಮಿನ್ ವಸ್ತುನಿ ವಿಚಿಕಿತ್ಸಿತಂ ಸಂಶಯಿತಂ ಪುರಾ ಪೂರ್ವಮ್, ನ ಹಿ ಸುವಿಜ್ಞೇಯಂ ಸುಷ್ಠು ವಿಜ್ಞೇಯಮ್ ಶ್ರುತಮಪಿ ಪ್ರಾಕೃತೈರ್ಜನೈಃ । ಯತಃ ಅಣುಃ ಸೂಕ್ಷ್ಮಃ ಏಷಃ ಆತ್ಮಾಖ್ಯಃ **ಧರ್ಮಃ** । ಅತಃ ಅನ್ಯಮ್ ಅಸನ್ದಿಗ್ಧಫಲಂ ವರಂ ನಚಿಕೇತಃ ವೃಣೀಷ್ವ । ಮಾ ಮಾಂ ಮಾ ಉಪರೋತ್ಸೀಃ ಉಪರೋಧಂ ಮಾ ಕಾರ್ಷೀಃ ಅಧಮರ್ಣಮಿವೋತ್ತಮರ್ಣಃ । ಅತಿಸೃಜ ವಿಮುಞ್ಚ ಏನಂ ವರಂ ಮಾ ಮಾಂ ಪ್ರತಿ ॥

---

1. ಮೂಲದಲ್ಲಿ ಏಕಾಂತತಃ ಎಂದರೆ ಗೊತ್ತಾಗಿ, ನಿಯಮದಿಂದ ಎಂದರ್ಥ. ಕುತೂಹಲದಿಂದ ಕೇಳುತ್ತಾನೋ, ನಿಯಮವಾಗಿ ಆತ್ಮಜ್ಞಾನವೇ ಇವನಿಗೆ ಬೇಕಾಗಿದೆಯೋ ಎಂಬುದನ್ನು ತಿಳಿದುಕೊಳ್ಳುವದು ಯಮನ ಉದ್ದೇಶವೆಂಬುದನ್ನು ಈ ಮಾತು ಸೂಚಿಸುತ್ತದೆ.

(ಭಾಷ್ಯಾರ್ಥ)

ಇಲ್ಲಿ ಎಂದರೆ ಈ (ಆತ್ಮ) ವಸ್ತುವಿನ ವಿಷಯದಲ್ಲಿ ದೇವತೆಗಳುಕೂಡ ವಿಚಿಕಿತ್ಸೆಮಾಡಿದ್ದರು, ಸಂಶಯಪಟ್ಟಿದ್ದರು ಸಾಮಾನ್ಯ ಜನರು ಶ್ರವಣಮಾಡಿದರೂ ಅವರಿಗೆ ಇದು ಸುವಿಜ್ಞೇಯವಲ್ಲ, ಚೆನ್ನಾಗಿ ತಿಳಿಯಬರತಕ್ಕದ್ದಲ್ಲ[1], ಏಕೆಂದರೆ ಈ ಆತ್ಮನೆಂಬ ವಸ್ತು ಅಣುವಾಗಿರುವದು.[2] ಆದ್ದರಿಂದ, ನಚಿಕೇತನೆ, ಪ್ರಯೋಜನ ವಿಷಯದಲ್ಲಿ ಸಂದೇಹವಿಲ್ಲದ,[3] ಬೇರೊಂದು ವರವನ್ನು ಕೇಳಿಕೊ. ನನ್ನನ್ನು ಸಾಹುಕಾರನು ಸಾಲಗಾರನನ್ನು (ನಿರ್ಬಂಧಿಸುವಂತೆ) ನಿರ್ಬಂಧಪಡಿಸಬೇಡ, ನನಗೆ ಈ ವರವನ್ನು ಬಿಟ್ಟುಕೊಡು, (ಇದನ್ನು ಕೇಳದೆ) ಬಿಡು

(ಭಾಷ್ಯ)

೨೬. ಏವಮುಕ್ತೋ ನಚಿಕೇತಾ ಆಹ—

(ಭಾಷ್ಯಾರ್ಥ)

ಹೀಗೆನ್ನಲು ನಚಿಕೇತನು ಹೇಳುತ್ತಾನೆ:

ದೇವೈರತ್ರಾಪಿ ವಿಚಿಕಿತ್ಸಿತಂ ಕಿಲ
ತ್ವಂ ಚ ಮೃತ್ಯೋ ಯನ್ನ ಸುಜ್ಞೇಯಮಾತ್ಥ ।
ವಕ್ತಾ ಚಾಸ್ಯ ತ್ವಾದೃಗನ್ಯೋ ನ ಲಭ್ಯೋ
ನಾನ್ಯೋ ವರಸ್ತುಲ್ಯ ಏತಸ್ಯ ಕಶ್ಚಿತ್ ॥ ೨೨ ॥

೨೨. ದೇವತೆಗಳು ಕೂಡ ಇಲ್ಲಿ ಸಂಶಯಪಟ್ಟಿದ್ದರಲ್ಲವೆ? ಮೃತ್ಯುವೆ, (ಇದು) ಸುಜ್ಞೇಯವಲ್ಲವೆಂದು ನೀನೂ ಹೇಳುತ್ತಿರುವೆಯಷ್ಟೆ. ಇದನ್ನು ಹೇಳುವವನು ನಿನ್ನಂಥವನು ಮತ್ತೊಬ್ಬನು ಸಿಕ್ಕಲಾರನು. ಇದಕ್ಕೆ ಸಮಾನವಾದ ಇನ್ನೊಂದು ವರವು ಯಾವದೂ ಇಲ್ಲ.

೨೨. ದೇವೈರತ್ರಾಪಿ ವಿಚಿಕಿತ್ಸಿತಂ ಕಿಲ। ಇತಿ ಭವತ ಏವ ನಃ ಶ್ರುತಮ್। ತ್ವಂ ಚ ಮೃತ್ಯೋ ಯತ್ ಯಸ್ಮಾತ್ ನ ಸುಜ್ಞೇಯಮ್ ಆತ್ಮತತ್ತ್ವಮ್ ಆತ್ಥ ಕಥಯಸಿ। ಅತಃ ಪಣ್ಡಿತೈರಪ್ಯವೇದನೀಯತ್ವಾತ್ ವಕ್ತಾ ಚ ಅಸ್ಯ ಧರ್ಮಸ್ಯ

---

1. ಸಾಮಾನ್ಯರಿಗೆ ಹೇಳಿದರೂ ತಿಳಿಯುವಹಾಗಿಲ್ಲವೆಂಬುದೇ ಅವರಿಗೆ ಆತ್ಮಜ್ಞಾನವನ್ನು ಹೇಳಬಾರದೆನ್ನುವದಕ್ಕೆ ಕಾರಣ.

2. ಅಣು ಎಂದರೆ ಅತೀಂದ್ರಿಯವಾದದ್ದೆಂದು ಅರ್ಥ, ಪರಮಾಣುವಿನ ಪರಿಮಾಣವುಳ್ಳದ್ದೆಂದಲ್ಲ. ಬ್ರ. ಸೂ ೨-೩-೨೪ ನೋಡಿ.

3. ಸುಲಭವಾದ ಬೇರೊಂದು ವಿಷಯವನ್ನು ಕೇಳಿಕೊಂಡರೆ ನಿನಗೆ ಪ್ರಯೋಜನವಾದೀತು. ಈ ವಿಚಾರದಲ್ಲಿ ಪ್ರಯೋಜನವಾಗುವದು ಸಂದಿಗ್ಧವಾಗಿದೆ.

ತ್ವಾದೃಕ್ ತ್ವತ್ತುಲ್ಯಃ ಅನ್ಯಃ ಪಣ್ಡಿತಶ್ಚ ನ ಲಭ್ಯಃ ಅನ್ವಿಷ್ಯಮಾಣೋಽಪಿ। ಅಯಂ ತು ವರೋ ನಿಃಶ್ರೇಯಸಪ್ರಾಪ್ತಿಹೇತುಃ। ಅತಃ ನ ಅನ್ಯಃ ವರಃ ತುಲ್ಯಃ ಸದೃಶಂ ಅಸ್ತಿ ಏತಸ್ಯ ಕಶ್ಚಿದಪಿ। ಅನಿತ್ಯಫಲತ್ವಾದನ್ಯಸ್ಯ ಸರ್ವಸ್ಯೈವ ಇತ್ಯಭಿಪ್ರಾಯಃ॥

(ಭಾಷ್ಯಾರ್ಥ)

ದೇವತೆಗಳಿಗೂ ಈ ವಿಷಯದಲ್ಲಿ[1] ಸಂಶಯವುಂಟಾಗಿತ್ತಲ್ಲವೆ? ಹೀಗೆಂದು ನಿನ್ನಿಂದಲೇ ನಮಗೆ ತಿಳಿಯಿತು. ಮೃತ್ಯುವೆ, (ಈ) ಆತ್ಮತತ್ತ್ವವು ಸುಲಭವಾಗಿ ತಿಳಿಯತಕ್ಕದ್ದಲ್ಲವೆಂದು ನೀನೂ ಹೇಳುತ್ತಿರುವೆಯಷ್ಟೆ. ಆದ್ದರಿಂದ ಪಂಡಿತರಿಗೂ ತಿಳಿಯತಕ್ಕದ್ದಲ್ಲವಾದ್ದರಿಂದ ಈ (ಆತ್ಮ) ವಸ್ತುವನ್ನು ಹೇಳುವಾತನು-ಹುಡುಕಿದರೂ ನಿನ್ನಂಥ ಮತ್ತೊಬ್ಬ ಜ್ಞಾನಿಯು ಸಿಕ್ಕಲಾರನು. ಈ ವರವೋ ಎಂದರೆ ಮುಕ್ತಿ ಪ್ರಾಪ್ತಿಗೆ ಕಾರಣವಾಗಿರುತ್ತದೆ ಆದ್ದರಿಂದ ಇದಕ್ಕೆ ಸಮಾನವಾದ ಸರಿಯಾದ ವರವು ಇನ್ನೊಂದು ಯಾವದೂ ಇಲ್ಲ, ಏಕೆಂದರೆ ಮಿಕ್ಕದ್ದೆಲ್ಲವೂ ಅನಿತ್ಯಫಲವುಳ್ಳದ್ದು—ಎಂದು ಅಭಿಪ್ರಾಯ.

(ಭಾಷ್ಯ)

೨೭ (ಅ). ಏವಮುಕ್ತೋಽಪಿ ಪುನಃ ಪ್ರಲೋಭಯನ್ನಾಹ ಮೃತ್ಯುಃ—

(ಭಾಷ್ಯಾರ್ಥ)

ಹೀಗೆಂದರೂ ಮೃತ್ಯುವು ಮತ್ತೂ (ನಚಿಕೇತನನ್ನು) ಆಶೆಯನ್ನು ತೋರಿಸಿ ಹೇಳಿದನೇನೆಂದರೆ.—

ಶತಾಯುಷಃ ಪುತ್ರಪೌತ್ರಾನ್ ವೃಣೀಷ್ವ
ಬಹೂನ್ ಪಶೂನ್ ಹಸ್ತಿಹಿರಣ್ಯಮಶ್ವಾನ್।
ಭೂಮೇರ್ಮಹದಾಯತನಂ ವೃಣೀಷ್ವ
ಸ್ವಯಂ ಚ ಜೀವ ಶರದೋ ಯಾವದಿಚ್ಛಸಿ॥ ೨೩॥

೨೩. ಶತಾಯುಸ್ಸುಳ್ಳ ಮಕ್ಕಳನ್ನೂ ಮುಮ್ಮಕ್ಕಳನ್ನೂ ಕೇಳಿಕೊ; ಬಹು ಪಶುಗಳನ್ನೂ ಹಸ್ತಿಹಿರಣ್ಯವನ್ನೂ ಕುದುರೆಗಳನ್ನೂ ಭೂಮಿಯ ದೊಡ್ಡ ಆಯತನವನ್ನೂ (ಬೇಡಿಕೊ). ನೀನೂ ಎಷ್ಟು ಶರತ್ಕಾಲ ಬದುಕಿರ)ಲಿಚ್ಛಿಸುವೆಯೋ (ಅಷ್ಟುಕಾಲ) ಬದುಕಿರು.

(ಭಾಷ್ಯ)

೨೮. ಶತಾಯುಶಃ ಶತಂ ವರ್ಷಾಣಿ ಆಯೂಂಷಿ ಯೇಷಾಂ ತಾನ್ ಶತಾ

---

1. ಅತ್ರಾಪಿ'' ಎಂಬ (ವಾ॥ ಮೈ॥) ಪಾಠವು ಸಾಕಾಗಿದೆ, "ಏತಸ್ಮಿನ್ ವಸ್ತುನಿ'' ಬೇಕಿಲ್ಲ

ಯುಷಃ ಪುತ್ರಪೌತ್ರಾ ವೃಣೀಷ್ವ । ಕಿಂ ಚ ಗವಾದಿಲಕ್ಷಣಾ ಬಹೂ ಪಶೂ ಹಸ್ತಿಹಿರಣ್ಯಮ್ ಹಸ್ತೀ ಚ ಹಿರಣ್ಯಂ ಚ ಹಸ್ತಿಹಿರಣ್ಯಮ್ ಅಶ್ವಾಂಶ್ಚ ಕಿಂ ಚ ಭೂಮೇಃ ಪೃಥಿವ್ಯಾಃ ಮಹತ್ ವಿಸ್ತೀರ್ಣಮ್ ಆಯತನಮ್ ಆಶ್ರಯಂ ಮಂಡ್ಡಲಂ ರಾಜ್ಯಂ ವೃಣೀಷ್ವ । ಕಿಂ ಚ ಸರ್ವಮಸ್ಯೈತದನರ್ಘಕಂ ಸ್ವಯಂ ಚೇದಲ್ಪಾಯುಃ ಇತ್ಯತ ಆಹ-ಸ್ವಯಂ ಚ ತ್ವಂ ಜೀವ ಧಾರಯ ಶರೀರಂ ಸಮಗ್ರೇನ್ದ್ರಿಯಕಲಾಪಂ ಶರದಃ ವರ್ಷಾಣಿ ಯಾವತ್ ಇಚ್ಛಸಿ ಜೀವಿತುಮ್ ॥

(ಭಾಷ್ಯಾರ್ಥ)

'ಶತಾಯುಸ್ಸುಳ್ಳ': ನೂರುವರ್ಷಗಳು ಆಯುಸ್ಸು ಇರುವಂಥವರು ಶತಾಯುಸ್ಸಿನವರು, ಅಂಥ ಮಕ್ಕಳನ್ನೂ ಮುಮ್ಮಕ್ಕಳನ್ನೂ ಕೇಳಿಕೊ. ಹಸು ಮುಂತಾದ ರೂಪದ ಅನೇಕ ಪಶುಗಳನ್ನೂ ಹಸ್ತಿಹಿರಣ್ಯವನ್ನೂ ಎಂದರೆ ಆನೆ ಮತ್ತು ಬೆಳ್ಳಿ ಬಂಗಾರ (ಇವನ್ನೂ), ಕುದುರೆಗಳನ್ನೂ (ಕೇಳಿಕೊ), ಮತ್ತು ಭೂಮಿಯ ದೊಡ್ಡ ವಿಸ್ತೀರ್ಣವಾದ ಆಯತನವನ್ನೂ ಎಂದರೆ ಆಶ್ರಯವನ್ನೂ, ಮಂಡಲವನ್ನೂ, ರಾಜ್ಯವನ್ನೂ ಬೇಡಿಕೊ. ಮತ್ತು ತಾನೊಬ್ಬ ಅಲ್ಪಾಯುವಾದರೆ ಇದೆಲ್ಲ ನಿಷ್ಪ್ರಯೋಜನವಾಗವುದಲ್ಲ! ಎಂದರ ಹೇಳುತ್ತಾನೆ. ಮತ್ತು ನೀನು ಎಷ್ಟು ಶರತ್ಕಾಲ ಬದುಕಿರ ಲಿಚ್ಛಿಸುತ್ತೀಯೋ ಅಷ್ಟು ವರ್ಷವೂ ಬದುಕಿರು, ಇಂದ್ರಿಯಸಮೂಹವನ್ನೆಲ್ಲ ಉತ್ತಮಸ್ಥಿತಿಯಲ್ಲಿಟ್ಟುಕೊಂಡು ಶರೀರವನ್ನು ಧರಿಸಿರು.

ಏತತ್ತುಲ್ಯಂ ಯದಿ ಮನ್ಯಸೇ ವರಂ
ವೃಣೀಷ್ವ ವಿತ್ತಂ ಚಿರಜೀವಿಕಾಂ ಚ ।
ಮಹಾಭೂಮೌ ನಚಿಕೇತಸ್ತ್ವಮೇಧಿ
ಕಾಮಾನಾಂ ತ್ವಾ ಕಾಮಭಾಜಂ ಕರೋಮಿ ॥ ೨೪ ॥

೨೪. ಇದಕ್ಕೆ ಸಮಾನವಾದ ವರವೆಂದು ಎಣಿಸುವೆಯಾದರೆ (ಬೇರೆ) ವರವನ್ನು ಬೇಡಿಕೊ. ಧನವನ್ನೂ ಚಿರವಾದ ಆಯುಸ್ಸನ್ನೂ (ಬೇಡಿಕೊ). ಮಹಾಭೂಮಿಯಲ್ಲಿ, ನಚಿಕೇತನೆ, ನೀನು (ರಾಜ)ನಾಗಿರು. (ಎಲ್ಲಾ) ಕಾಮಗಳಲ್ಲಿ(ಯೂ) ನಿನ್ನನ್ನು ಕಾಮಭಾಜನನನ್ನಾಗಿ ಮಾಡುವೆನು.

(ಭಾಷ್ಯ)

೨೪. ಏತತ್ತುಲ್ಯಮ್ ಏತೇನ ಯಥೋಪದಿಷ್ಟೇನ ಸದೃಶಮ್ ಅನ್ಯಮಪಿ ಯದಿ ಮನ್ಯಸೇ ವರಮ್ ತಮಪಿ ವೃಣೀಷ್ವ । ಕಿಂ ಚ ವಿತ್ತಂ ಪ್ರಭೂತಂ ಹಿರಣ್ಯ ರತ್ನಾನಿ ಚಿರಜೀವಿಕಾಂ ಚ ಸಹ ವಿತ್ತೇನ ವೃಣೀಷ್ವ ಇತ್ಯೇತತ್ । ಕಿಂ ಬಹುನಾ? ಮಹಾಭೂಮೌ ಮಹತ್ಯಾಂ ಭೂಮೌ ರಾಜಾ ನಚಿಕೇತಃ ತ್ವಮ್ ಏಧಿ ಭವ ।

ಕಿಂ ಚಾನ್ಯತ್ । ಕಾಮಾನಾಂ ದಿವ್ಯಾನಾಂ ಮಾನುಷಾಣಾಂ ಚ ತ್ವಾ ತ್ವಾಂ ಕಾಮ ಭಾಜಂ ಕಾಮಭಾಗಿನಂ ಕಾಮಾರ್ಹಂ ಕರೋಮಿ । ಸತ್ಯಸಙ್ಕಲ್ಪೋಹ್ಯಹಂ ದೇವಃ ॥

(ಭಾಷ್ಯಾರ್ಥ)

ಮೇಲೆ ಹೇಳಿದ್ದಕ್ಕೆ ಬೇರೆ (ಯಾವದಾದರೂ) ವರವು ಸಮಾನವೆಂದು, (ಇದಕ್ಕೆ) ಸರಿಹೋಲುವದೆಂದು, ಎಣಿಸುವೆಯಾದರೆ ಅದನ್ನೂ ಬೇಡಿಕೊ. ಮತ್ತು ಹೇರಳವಾದ ಹಿರಣ್ಯ, ರತ್ನ—ಮುಂತಾದ ಧನವನ್ನೂ ದೀರ್ಘಾಯುಸ್ಸನ್ನೂ ಧನದ ಜೊತೆಗೂ[1] ಬೇಡಿಕೊ ಎಂದರ್ಥ. ಹೆಚ್ಚು ಹೇಳಿದ್ದರಿಂದೇನು? ನಚಿಕೇತನೆ, ಮಹಾಭೂಮಿಯಲ್ಲಿ, ನೀನೇ ರಾಜನಾಗಿರು. ದಿವ್ಯವಾದ ಮತ್ತು ಮಾನುಷವಾದ ಕಾಮಗಳಿಗೆಲ್ಲ ನೀನು ಕಾಮಭಾಜನನಾಗಿ ಕಾಮವನ್ನು ಪಡೆಯುವವನಾಗಿ ಕಾಮ ಗಳಿಗೆ ತಕ್ಕವನಾಗಿರುವಂತೆ ಮಾಡುವೆನು.[2] ನಾನು ಸತ್ಯಸಂಕಲ್ಪವುಳ್ಳ ದೇವತೆಯಷ್ಟೆ?

ಯೇ ಯೇ ಕಾಮಾ ದುರ್ಲಭಾ ಮರ್ತ್ಯಲೋಕೇ
ಸರ್ವಾ೯ ಕಾಮಾಗ್ಂಶ್ಛನ್ದತಃ ಪ್ರಾರ್ಥಯಸ್ವ ।
ಇಮಾ ರಾಮಾಃ ಸರಥಾಃ ಸತೂರ್ಯಾ
ನ ಹೀದೃಶಾ ಲಮ್ಭನೀಯಾ ಮನುಷ್ಯೈಃ ।
ಆಭಿರ್ಮತ್ಪ್ರತ್ತಾಭಿಃ ಪರಿಚಾರಯಸ್ವ
ನಚಿಕೇತೋ ಮರಣಂ ಮಾನುಪ್ರಾಕ್ಷೀಃ ॥ ೨೫ ॥

೨೫. ಮರ್ತ್ಯಲೋಕದಲ್ಲಿ ಯಾವಯಾವ ಕಾಮಗಳು ದುರ್ಲಭವಾಗಿರುವವೊ (ಆ) ಸರ್ವ ಕಾಮಗಳನ್ನೂ ಬೇಕಾದಂತೆ ಕೇಳಿಕೊ. ಈ ರಾಣಿಯರು, ರಥಗಳೊಡನೆಯೂ ತೂರ್ಯಗಳೊಡನೆಯೂ ಕೂಡಿರುತ್ತಾರೆ. ಇಂಥವರು ಮನುಷ್ಯರಿಗೆ ದೊರಕುವವರಲ್ಲ. ನಾನು ಕೊಡುವ ಇವರಿಂದ ಪರಿಚರ್ಯೆಯನ್ನು ಮಾಡಿಸಿಕೊ. ನಚಿಕೇತನೆ, ಮರಣವನ್ನು ಕುರಿತು ಪ್ರಶ್ನೆ ಮಾಡಬೇಡ.

(ಭಾಷ್ಯ)

೪೦. ಯೇ ಯೇ ಕಾಮಾಃ ಪ್ರಾರ್ಥನೀಯಾಃ ದುರ್ಲಭಾಶ್ಚ ಮರ್ತ್ಯಲೋಕೇ

---

1. ಆತ್ಮಜ್ಞಾನದ ಬದಲು ಪುತ್ರ, ಪಶು, ಧನ—ಮುಂತಾದವುಗಳನ್ನು ಒಂದೊಂದನ್ನಾದರೂ ಅಥವಾ ಒಟ್ಟಿಗೆ ಎಲ್ಲವನ್ನಾದರೂ ಬೇಡಿಕೊ ಎಂದಭಿಪ್ರಾಯ.

2. ಇಲ್ಲಿ ಭೋಗಪಡುವವರಲ್ಲೆಲ್ಲ ನಿನ್ನನ್ನು ಶ್ರೇಷ್ಠನಾದ ಭೋಗಿಯನ್ನಾಗಿ ಮಾಡುವೆನು ಎಂದೂ ಅರ್ಥಮಾಡಬಹುದಾಗಿದೆ.

ಸರ್ವಾನ್ ತಾನ್ ಕಾಮಾನ್ ಛನ್ದತಃ ಇಚ್ಛತಃ ಪ್ರಾರ್ಥಯಸ್ವ । ಕಾಂ ಚ ಇಮಾಃ ದಿವ್ಯಾಃ ಅಪ್ಸರಸಃ ರಮಯನ್ತಿ ಪುರುಷಾನ್ ಇತಿ ರಾಮಾಃ, ಸಹ ರಥೈರ್ವರ್ತನ್ತ ಇತಿ ಸರಥಾಃ, ಸತೂರ್ಯಾಃ ಸವಾದಿತ್ರಾಃ । ತಾಶ್ಚ ನ ಹಿ ಲಮ್ಭನೀಯಾಃ ಪ್ರಾಪಣೀಯಾಃ ಈದೃಶಾಃ ಏವಂವಿಧಾಃ ಮನುಷ್ಯೈಃ ಮರ್ತ್ಯೈರ್ಯಃ ಅಸ್ಮದಾದಿಪ್ರಸಾದಮನ್ತರೇಣ । ಅಭಿಃ ಮತ್ಪ್ರತ್ತಾಭಿಃ ಮಯಾ ಪ್ರದತ್ತಾಭಿಃ ಪರಿಚಾರಿಣೀಭಿಃ ಪರಿಚಾರಯಸ್ವ ಆತ್ಮಾನಮ್ । ಪಾದಪ್ರಕ್ಷಾಲನಾದಿಶುಶ್ರೂಷಾಂ ಕಾರಯ ಆತ್ಮನಃ ಇತ್ಯರ್ಥಃ । ಹೇ ನಚಿಕೇತಃ ಮರಣಂ ಮರಣಸಮ್ಬದ್ಧಂ ಪ್ರಶ್ನಂ ಪ್ರೇತೇ ಅಸ್ತಿ ನಾಸ್ತೀತಿ ಕಾಕದನ್ತಪರೀಕ್ಷಾರೂಪಂ ಮಾ ಅನುಪ್ರಾಕ್ಷೀಃ ವ್ಯೈವಂ ಪ್ರಷ್ಟುಮ್ ಅರ್ಹಸಿ ॥

(ಭಾಷ್ಯಾರ್ಥ)

ಮರ್ತ್ಯಲೋಕದಲ್ಲಿ ಯಾವ ಯಾವ ಕಾಮುಗಳು ಬಯಸತಕ್ಕವಾಗಿರುವವೋ ಮತ್ತು ಪಡೆಯುವದಕ್ಕೆ ಕಷ್ಟವಾಗಿರುವವೋ ಆ ಕಾಮುಗಳೆಲ್ಲವನ್ನೂ ಬೇಕಾದಂತೆ (ನಿನ್ನ) ಇಚ್ಛೆಗನುಸಾರವಾಗಿ ಕೇಳಿಕೊ. ಮತ್ತು ಈ ದಿವ್ಯ ಅಪ್ಸರಸೆಯರು, ಪುರುಷರಿಗೆ ರತಿಯನ್ನುಂಟುಮಾಡುವದರಿಂದ ರಾಮೆಯರೆನಿಸಿರುವರು, (ಇವರು) ಸರಥರು ಎಂದರೆ ರಥಗಳಿಂದ ಕೂಡಿರುವರು, ಸತೂರ್ಯರು ಎಂದರೆ ವಾದ್ಯಗಳಿಂದ ಕೂಡಿರುವರು. ಇಂಥವರು ಹೀಗಿರುವವರು ನನ್ನಂಥ (ದೇವತೆಗಳ) ಪ್ರಸಾದವಿಲ್ಲದೆ ಮನುಷ್ಯರಿಗೆ, ಮರ್ತ್ಯರಿಗೆ, ದೊರಕತಕ್ಕವರಲ್ಲ. ನಾನು ಕೊಡುವ ಈ ಪರಿಚಾರಿಣಿಯರಿಂದ ನಿನ್ನ ಪರಿಚರ್ಯೆಯನ್ನು ಮಾಡಿಸಿಕೊ, ಕಾಲುತೊಳೆಯುವದೇ ಮುಂತಾದ ಶುಶ್ರೂಷೆಯನ್ನು ಮಾಡಿಸಿಕೊ ಎಂದರ್ಥ ಎಲೈ ನಚಿಕೇತನೆ, ಮರಣವನ್ನು ಕುರಿತು, ಎಂದರೆ ಸಾವಿನ ಸಂಬಂಧವಾಗಿ ಸತ್ತಬಳಿಕ ಇರುತ್ತಾನೋ ಇಲ್ಲವೋ ಎಂದು ಕಾಗೆಯ ಹಲ್ಲುಗಳನ್ನು ಪರೀಕ್ಷೆಮಾಡುವಂತೆ[1] ಪ್ರಶ್ನೆಯನ್ನು ಪ್ರಶ್ನೆಮಾಡಬೇಡ, ಹೀಗೆ ಕೇಳದಿರು.

(ಭಾಷ್ಯ)

೪೧. ಏವಂ ಮೃತ್ಯುನಾ ಪ್ರಲೋಭ್ಯಮಾನೋಽಪಿ ನಚಿಕೇತಾ ಮಹಾಹ್ರದವದಕ್ಷೋಭ್ಯ ಆಹ—

---

1. ಕಾಗೆಯ ಹಲ್ಲುಗಳು ಎಷ್ಟು ?—ಎಂದು ಪರೀಕ್ಷಿಸುವುದರಿಂದ ಯಾವ ಪ್ರಯೋಜನವೂ ಇಲ್ಲ; ಅಂಥ ನಿರರ್ಥಕ ಪ್ರಶ್ನೆಯಿದು.

(ಭಾಷ್ಯಾರ್ಥ)

ಹೀಗೆ ಯಮನು ಆಸೆಯನ್ನು ತೋರಿಸಿದರೂ ನಚಿಕೇತನು ದೊಡ್ಡಮಡುವಿನಂತೆ[1] ಅಲುಗಾಡಿಸುವದಕ್ಕೆ ಆಗದವನಾಗಿ ಹೇಳುತ್ತಾನೆ :—

ಶ್ವೋಭಾವಾ ಮರ್ತ್ಯಸ್ಯ ಯದನ್ತಕೈತತ್
ಸರ್ವೇನ್ದ್ರಿಯಾಣಾಂ ಜರಯನ್ತಿ ತೇಜಃ ।
ಅಪಿ ಸರ್ವಂ ಜೀವಿತಮಲ್ಪಮೇವ
ತವೈವ ವಾಹಾಸ್ತವ ನೃತ್ಯಗೀತೇ ॥ ೨೬ ॥

೨೬. ಅಂತಕನೆ, ನಾಳೆಯವರೆಗೆ ಇರಬಹುದಾದಂಥ (ಈ ಭೋಗಗಳು) ಮರ್ತ್ಯನ ಸರ್ವೇಂದ್ರಿಯಗಳ ಯಾವ ಈ ತೇಜಸ್ಸನ್ನು ಜೀರ್ಣಮಾಡುವವು. ಎಲ್ಲಾ ಆಯುಸ್ಸೂ ಅಲ್ಪವೇ. (ಈ) ವಾಹನಗಳು ನಿನಗೇ (ಇರಲಿ), ನೃತ್ಯಗೀತಗಳೂ ನಿನಗೇ (ಇರಲಿ) !

(ಭಾಷ್ಯ)

೪೨ ಶ್ವೋ ಭವಿಷ್ಯನ್ತಿ ನ ವಾ[2] ಇತಿ ಸನ್ದಿಹ್ಯಮಾನ ಏವ ಯೇಷಾಂ ಭಾವೋ ತ್ವಯಾ ಉಪನ್ಯಸ್ತಾನಾಂ ಭೋಗಾನಾಂ ತೇ ಶ್ವೋಭಾವಾಃ । ಕಿಂ ಚ ಮರ್ತ್ಯಸ್ಯ ಮನುಷ್ಯಸ್ಯ ಅನ್ತಕ ಹೇ ಮೃತ್ಯೋ, ಯತ್ ಏತತ್ ಸರ್ವೇನ್ದ್ರಿಯಾಣಾಂ ತೇಜಃ ತತ್ ಜರಯನ್ತಿ ಅಪಕ್ಷ(ಪ)ಯನ್ತಿ(?) ಅಪ್ಸರಃಪ್ರಭೃತಯೋ ಭೋಗಾಃ । ಅನರ್ಥಾಯೈವೈತೇ ಧರ್ಮವೀರ್ಯಪ್ರಜ್ಞಾತೇಜೋಯಶಃಪ್ರಭೃತೀನಾಂ ಕ್ಷಪಯಿತೃತ್ವಾತ್ । ಯಾಂ ಚಾಪಿ ದೀರ್ಘಜೀವಿಕಾಂ ತ್ವಂ ದಿತ್ಸಸಿ ತತ್ರಾಪಿ ಶೃಣು । ಸರ್ವಂ ಯದ್ಬ್ರಹ್ಮಣೋಽಪಿ ಜೀವಿತಮ್ ಆಯುಃ ಅಲ್ಪಮೇವ, ಕಿಮುತ ಅಸ್ಮದಾದಿದೀರ್ಘಜೀವಿಕಾ । ಅತಃ ತವೈವ ತಿಷ್ಠನ್ತು ವಾಹಾಃ ರಥಾದಯಃ । ತಥಾ ತವ ನೃತ್ಯಗೀತೇ ಚ ॥

(ಭಾಷ್ಯಾರ್ಥ)

ನಾಳೆಯವರೆಗೆ ಇರಬಹುದಾದಂಥವು ಎಂದರೆ ನಾಳೆ ಇರುವವೋ ಇಲ್ಲವೋ ಎಂದು ಸಂದೇಹಮಾಡಬಹುದಾದಂಥ ಇರುವಿಕೆಯುಳ್ಳವು, ನೀನು ಹೇಳಿದ ಭೋಗ

---

1. ಸ್ವಲ್ಪ ನೀರು ಇರುವ ಗುಂಡಿಯ ನೀರಾದರೆ ಒಂದಿಷ್ಟು ಕಲಕಿದ ಮಾತ್ರದಿಂದ ಕದಡಿಹೋಗುವದು. ಆದರೆ ಆಳವಾಗಿ ವಿಶಾಲವಾಗಿರುವ ಮಡುವಿನ ನೀರು ಹಾಗೆ ಚಾಂಚಲ್ಯವನ್ನೂ ಹೊಂದದು, ಕದಡುವದೂ ಇಲ್ಲ. ಇದರಂತೆ ನಚಿಕೇತನು ಆಸೆಗಳೆಂಬ ಬಿರುಗಾಳಿಯಿಂದ ಅಲುಗಾಡದೆ ತನ್ನ ವರವನ್ನು ಬಿಟ್ಟು ಅತ್ತಿತ್ತ ಕದಲದೆ ಇದ್ದನು.

2. ವಾ॥ ಪಾರವಿದು.

ಗಳು. ಮತ್ತು ಅಂತಕನೆ, ಎಲೈ ಮೃತ್ಯುವೆ, ಮರ್ತ್ಯನ ಎಂದರೆ ಮನುಷ್ಯನ ಇಂದ್ರಿಯಗಳಲ್ಲೆಲ್ಲ ಇರುವ ಈ ತೇಜಸ್ಸೆಂಬುದಿದೆಯಷ್ಟೆ, ಇದನ್ನು ಜೀರ್ಣಮಾಡುವವು, ಈ ಅಪ್ಸರಸ್ತ್ರೀಯರೇ ಮುಂತಾದ ಭೋಗಗಳು ಸವೆಯಿಸುವವು. ಇವುಗಳಿಂದ ಅನರ್ಥವೇ ಆಗುವದು; ಏಕೆಂದರೆ **ಇವುಗಳು ಧರ್ಮ, ವೀರ್ಯ, ಪ್ರಜ್ಞಾ, ತೇಜಸ್ಸು, ಯಶಸ್ಸು**[1]**–ಮುಂತಾದವುಗಳನ್ನು ನಾಶಗೊಳಿಸುವವು.** ಇನ್ನು ಯಾವ ದೀರ್ಘಾಯುಸ್ಸನ್ನು ಕೊಡುವೆನೆನ್ನುವೆಯೋ ಅದರ ವಿಷಯದಲ್ಲಿಯೂ (ಹೇಳುವೆನು) ಕೇಳು ಎಲ್ಲಾ ಆಯುಸ್ಸೂ ಎಂದರೆ ಬ್ರಹ್ಮನ ಆಯುಸ್ಸು ಕೂಡ[2] ಸ್ವಲ್ಪವೇ, ಇನ್ನು ನಮ್ಮಂಥವರ ದೀರ್ಘಾಯುಸ್ಸಿನ ವಿಷಯದಲ್ಲಿ ಹೇಳತಕ್ಕದ್ದೇನಿದೆ? ಆದ್ದರಿಂದ ರಥವೇ ಮುಂತಾದ ಯಾನಗಳೂ ನಿನಗೇ (ಇರಲಿ), ಹಾಗೆಯೇ ನೃತ್ಯ ಗೀತಗಳೂ ನಿನಗೇ (ಇರಲಿ)!

ನ ವಿತ್ತೇನ ತರ್ಪಣೀಯೋ ಮನುಷ್ಯೋ
ಲಪ್ಸ್ಯಾಮಹೇ ವಿತ್ತಮದ್ರಾಕ್ಷ್ಮ ಚೇತ್ ತ್ವಾ।
ಜೀವಿಷ್ಯಾಮೋ ಯಾವದೀಶಿಷ್ಯಸಿ ತ್ವಂ
ವರಸ್ತು ಮೇ ವರಣೀಯಃ ಸ ಏವ ॥ ೨೭ ॥

೨೭. ಮನುಷ್ಯನು ವಿತ್ತದಿಂದ ತೃಪ್ತಿಹೊಂದುವಹಾಗಿಲ್ಲ. ನಿನ್ನನ್ನು ಕಂಡೆವೆಂದರೆ ವಿತ್ತವನ್ನು ಪಡೆಯುವೆವು. ನೀನು ಆಳುವವರೆಗೂ ಬದುಕಿರುವೆವು. ನಾನು ಬೇಡತಕ್ಕ ವರವಾದರೋ ಅದೇ.

(ಭಾಷ್ಯ)

೪೩. ಕಿಂ ಚ ನ ಪ್ರಭೂತೇನ ವಿತ್ತೇನ ತರ್ಪಣೀಯೋ ಮನುಷ್ಯಃ। ನ ಹಿ ಲೋಕೇ ವಿತ್ತಲಾಭಃ ಕಸ್ಯಚಿತ್ ತೃಪ್ತಿಕರೋ ದೃಷ್ಟಃ। ಯದಿ ನಾಮ ಅಸ್ಮಾಕಂ ವಿತ್ತತೃಷ್ಣಾ ಸ್ಯಾತ್ ಲಪ್ಸ್ಯಾಮಹೇ ವಿತ್ತಮ್ ಅದ್ರಾಕ್ಷ್ಮ ದೃಷ್ಟವನ್ತೋ ವಯಂ ಚೇತ್ ತ್ವಾ ತ್ವಾಮ್। ಜೀವಿತಮಪಿ ತಥೈವ। ಜೀವಿಷ್ಯಾಮಃ ಯಾವತ್ ಯಾಮ್ಯೇ ಪದೇ ತ್ವಮ್ ಈಶಿಷ್ಯಸಿ ಈಶಿಷ್ಯಸೇ ಪ್ರಭುಃ ಸ್ಯಾಃ। ಕಥಂ ಹಿ ಮರ್ತ್ಯಃ ತ್ವಯಾ ಸಮೇತ್ಯ ಅಲ್ಪಧನಾಯುರ್ಭವೇತ್? ವರಸ್ತು ಮೇ ವರಣೀಯಃ ಸ ಏವ ಯದಾತ್ಮವಿಜ್ಞಾನಮ್ ॥

---

1. ಧರ್ಮ-ಇಷ್ಟಾಪೂರ್ತಗಳು, ವೀರ್ಯ-ಸಾಮರ್ಥ್ಯ, ಪ್ರಜ್ಞಾ-ಶಾಸ್ತ್ರಾರ್ಥವನ್ನು ತಿಳಯುವ ಶಕ್ತಿ, ತೇಜಸ್ಸು-ಮೈಯ ಕಾಂತಿ, ಯಶಸ್ಸು-ಕೀರ್ತಿ (ಗೋ॥). ಛಾ.ಭಾ. ೮-೧೪-೧ ರಲ್ಲಿ "ಅದತ್ಕಮ್" ಎಂಬುದರ ವ್ಯಾಖ್ಯಾನವನ್ನು ನೋಡಿರಿ.

2. ಗೀ. ೮-೧೬ ನೋಡಿರಿ.

(ಭಾಷ್ಯಾರ್ಥ)

ಮತ್ತು ಹೇರಳವಾದ ಧನದಿಂದ ಮನುಷ್ಯನು ತೃಪ್ತಿಹೊಂದುವ ಹಾಗಿಲ್ಲ, ಲೋಕದಲ್ಲಿ ಯಾರಿಗೂ ಹಣದಿಂದ ತೃಪ್ತಿಯಾದದ್ದು ಕಂಡಿಲ್ಲವಷ್ಟೆ? ಒಂದುವೇಳೆ ನಮಗೆ ಧನದ ಆಶೆ ಬಂದರೂ ನಿನ್ನನ್ನು ನಾವು ಕಂಡೆವೆಂದರೆ (ನಿನ್ನ) ದರ್ಶನಮಾಡಿ ಕೊಂಡೆವೆಂದರೆ ಧನವನ್ನು ಪಡೆಯುವೆವು. ಆಯುಸ್ಸಿನ ವಿಷಯವೂ ಹಾಗೆಯೇ; (ಏಕೆಂದರೆ) ನೀನು ಯಾಮ್ಯಪದವಿಯಲ್ಲಿ ಎಷ್ಟುಕಾಲ ಆಳುತ್ತಿರುವೆಯೋ (ಈಶಿಷ್ಯಸಿ ಎಂಬ ಮೂಲವು ಈಶಿಷ್ಯಸೇ ಎಂಬುದಕ್ಕೆ ಬದಲು ಪ್ರಯೋಗವಾಗಿರುತ್ತದೆ), ಪ್ರಭು ವಾಗಿರುವೆಯೋ ಅಲ್ಲಿಯವರೆಗೆ ಬದುಕೆಯೇ ಇರುವೆವು. ಏಕೆಂದರೆ ಮರ್ತ್ಯನಾದ ವನು ಹೇಗೆತಾನೆ ನಿನ್ನನ್ನು ಸಂಧಿಸಿದಮೇಲೆ ಅಲ್ಪಧನವುಳ್ಳವನೂ (ಅಲ್ಪಾ)ಯು ಸ್ಸುಳ್ಳವನೂ ಆದಾನು? ಆದರೆ ನಾನು ಬೇಡತಕ್ಕ ವರವು ಮಾತ್ರ ಅದೇ, ಎಂದರೆ ಆತ್ಮಜ್ಞಾನವೇ, ಸರಿ.

ಅಜೀರ್ಯತಾಮಮೃತಾನಾಮುಪೇತ್ಯ
ಜೀರ್ಯನ್ಮರ್ತ್ಯಃ ಕ್ವಧಃಸ್ಥಃ ಪ್ರಜಾನನ್ ।
ಅಭಿಧ್ಯಾಯನ್ ವರ್ಣರತಿಪ್ರಮೋದಾ-
ನತಿದೀರ್ಘೇ ಜೀವಿತೇ ಕೋ ರಮೇತ ॥ ೨೪ ॥

೨೪. ಮುಪ್ಪಿಲ್ಲದ ಅಮೃತರ (ಸಮೀಪವನ್ನು) ಹೊಂದಿ ಮುಪ್ಪು ಳ್ಳವನಾಗಿ ಮರ್ತ್ಯನಾಗಿ ಕೆಳಗಿರುವ ಭೂಮಿಯಲ್ಲಿರುವವನು ತಿಳಿದು, ವರ್ಣ ರತಿಮೋದಗಳನ್ನು ಆಲೋಚಿಸುವ ಯಾವನುತಾನೆ ಅತಿ ದೀರ್ಘವಾದ ಜೀವಿತದಲ್ಲಿ ರತನಾದಾನು?

(ಭಾಷ್ಯ)

೪೪. ಯತಶ್ಚ ಅಜೀರ್ಯತಾಂ ವಯೋಹಾನಿಮ್ ಅಪ್ರಾಪ್ನುವತಾಮ್ ಅಮೃತಾನಾಂ ಸಕಾಶಮ್ ಉಪೇತ್ಯ ಉಪಗಮ್ಯ ಆತ್ಮನ ಉತ್ಕೃಷ್ಟಂ ಪ್ರಯೋಜ ನಾನ್ತರಂ ಪ್ರಾಪ್ತವ್ಯಂ ತೇಭ್ಯಃ ಪ್ರಜಾನನ್ ಉಪಲಭಮಾನಃ ಸ್ವಯಂ ತು ಜೀರ್ಯನ್ ಮರ್ತ್ಯಃ ಜರಾಮರಣವಾನ್ ಕ್ವಧಃಸ್ಥಃ ಕುಃ ಪೃಥಿವೀ ಅಧಶ್ಚಾಸೌ ಅನ್ತರಿಕ್ಷಾದಿ ಲೋಕಾಪೇಕ್ಷಯಾ ತಸ್ಯಾಂ ತಿಷ್ಠತೀತಿ ಕ್ವಧಃಸ್ಥಃ ಸನ್ ಕಥಮೇವಮ್ ಅವಿವೇಕಿಭಿಃ ಪ್ರಾರ್ಥನೀಯಂ ಪುತ್ರವಿತ್ತಾದ್ಯಸ್ಥಿರಂ[1] ವೃಣೀತೇ? "ಕ್ವ ತದಾಸ್ಥಃ" ಇತಿ ವಾ

---

1. 'ಪುತ್ರವಿತ್ತಹಿರಣ್ಯಾದ್ಯಸ್ಥಿರಮ್' ಎಂದು (ಆ॥) ಪಾಠ. ಹಿರಣ್ಯವೆಂಬ ಮಾತು ಇಲ್ಲದಿದ್ದರೂ ಸಾಗುತ್ತದೆ.

ಪಾಠಾನ್ತರಮ್ । ಅಸ್ಮಿನ್ ಪಕ್ಷೇ ಚ ಏವಮಪ್ಯಕ್ಷರಯೋಜನಾ –ತೇಷು ಪುತ್ರಾದಿಷ
ಆಸ್ಥಾ ಆಸ್ಥಿತಿಃ ತಾತ್ಪರ್ಯೇಣ ವರ್ತನಂ ಯಸ್ಯ ಸ ತದಾಸ್ಥಃ । ತತೋಽಧಿಕತರ
ಪುರುಷಾರ್ಥಂ ದುಷ್ಪ್ರಾಪಮಪಿ ಪ್ರಾಪಯಿಷ್ಯಃ ಕ್ವ ತದಾಸ್ಥೋ ಭವೇತ್? ನ ಕಶ್ಚಿತ
ತದಸಾರಜ್ಞಸ್ತದರ್ಥೀ ಸ್ಯಾತ್?–ಇತ್ಯರ್ಥಃ । ಸರ್ವೋ ಹಿ ಉಪರ್ಯುಪರ್ಯೇಃ
ಬುಭೂಷತಿ ಲೋಕಃ । ತಸ್ಮಾತ್, ನ ಪುತ್ರವಿತ್ತಾದಿಲೋಭೈಃ ಪ್ರಲೋಭ್ಯೋ
ಹಮ್ । ಕಿಂ ಚ ಅಪ್ಸರಃಪ್ರಮುಖಾ ವರ್ಣರತಿಪ್ರಮೋದಾ ಅನವಸ್ಥಿತರೂ
ತಯಾ ಅಭಿಧ್ಯಾಯ ನಿರೂಪಯ ಯಥಾವತ್ ಅತಿದೀರ್ಘೇ ಜೀವಿತೇ ಕ
ವಿವೇಕೀ ರಮೇತ?॥

(ಭಾಷ್ಯಾರ್ಥ)

ಮತ್ತೂ ಏಕೆಂದರೆ, ಮುಪ್ಪಿಲ್ಲದವರೂ ಎಂದರೆ ವಯಸ್ಸನ್ನು ಕಳೆದುಕೊಳ್ಳ
ದವರೂ **ಅಮರರೂ** (ಆದ ದೇವತೆಗಳ) ಬಳಿಯನ್ನು ಹೊಂದಿ, ಬಂದುಸೇರಿ, ತನಗ
ಅವರಿಂದ ಉತ್ಕೃಷ್ಟವಾದ ಇನ್ನೊಂದು ಪ್ರಯೋಜನವು ದೊರಕತಕ್ಕದ್ದಿದೆ ಎಂಬ
ದನ್ನು ತಿಳಿದು ಕಂಡುಕೊಂಡು, ತಾನೋ ಮುಪ್ಪುಳ್ಳ ಮರ್ತ್ಯನಾಗಿ ಮುಪ್ಪುಸಾಧ
ಗಳುಳ್ಳವನಾಗಿದ್ದು, "ಕ್ವಧಃಸ್ಥಃ"–'ಕು' ಎಂದರೆ ಭೂಮಿಯು, ಅದು ಅಂತರಿಕ್ಷವೆ
ಮುಂತಾದ ಲೋಕಗಳಿಗೆ ಹೋಲಿಸಿದರೆ 'ಅಧಃ' ಕೆಳಗೆ ಇರುತ್ತದೆ. ಅದರಲ್ಲಿರುವನ
ರಿಂದ 'ಕ್ವಧಃಸ್ಥ'ನೆನಿಸುವನು.–(ಕೆಳಗಿನ ಭೂಮಿಯ ಮೇಲೆ ಇರು)ವಂಥವನ
ಗಿದ್ದುಕೊಂಡು ಹೀಗೆ ಅವಿವೇಕಿಗಳು ಬಯಸುವ ಪುತ್ರ, ವಿತ್ತ–ಮುಂತಾದ ಅಸ್ಥಿರ
ವಾದ (ವಸ್ತುವನ್ನು) ಹೇಗೆ ಬೇಡಿಕೊಂಡಾನು?

ಅಥವಾ ಮೂಲದಲ್ಲಿ "ಕ್ವ ತದಾಸ್ಥಃ" ಎಂದು ಪಾರಾಂತರವುಂಟು. ಆ
ಪಕ್ಷದಲ್ಲಿ ಅಕ್ಷರಯೋಜನೆಯನ್ನು ಹೀಗೆ (ಮಾಡಬೇಕು): "ತದಾಸ್ಥಃ" ಎಂದರೆ ಆ
ಪುತ್ರಾದಿಗಳಲ್ಲಿ ಆಸ್ಥೆಯು, ನಿಲ್ಲುವಿಕೆಯು, (ಅವುಗಳಲ್ಲಿಯೇ) ತಾತ್ಪರ್ಯದಿಂದ
ಇರುವಿಕೆಯು ಯಾವನಿಗಿರುವದೋ ಅವನು. ಅವುಗಳಿಗಿಂತಲೂ ಹೆಚ್ಚಿನ ಪರ
ಯುವದಕ್ಕೆ ಕಷ್ಟವಾಗಿರುವ ಪುರುಷಾರ್ಥವನ್ನು ಪಡೆಯಬೇಕೆಂದು ಬಯಸುವವನ
ಎಲ್ಲಿ ತದಾಸ್ಥನಾದಾನು? ಅವುಗಳಲ್ಲಿ ಸಾರವಿಲ್ಲವೆಂಬುದನ್ನು ಬಲ್ಲವನು ಯಾವನೂ
ಅವುಗಳನ್ನು ಪ್ರಾರ್ಥಿಸಲಾರನು ಎಂದರ್ಥ. ಜನರೆಲ್ಲರೂ ಮೇಲೆಮೇಲಕ್ಕೇ ಹೋಗ
ಬೇಕೆಂದು ಬಯಸುವರಲ್ಲವೆ? ಆದ್ದರಿಂದ ನನಗೆ ಪುತ್ರವಿತ್ತಾದಿಗಳ ಆಸೆಯನ್ನು
ತೋರಿಸಿ ಎಳೆಯುವದು ಆಗಲಾರದು (ಎಂದು ಅಭಿಪ್ರಾಯ).

ಮತ್ತು ಅಪ್ಸರಃಸ್ತ್ರೀಯರೇ ಮುಂತಾದ ವರ್ಣರತಿಪ್ರಮೋದಗಳನ್ನು[1] (ಅವು

1. ವರ್ಣ-ಗಾನ, ರತಿ-ಕ್ರೀಡೆ, ಪ್ರಮೋದ–ಇವುಗಳಿಂದಾದ ಸುಖ (ಗೋ॥); ತೋರುವ
ವಸ್ತುಗಳಲ್ಲಿರುವ ಆಸಕ್ತಿಯಿಂದಾಗುವ ಸುಖ ಎಂದೂ ಅರ್ಥಮಾಡಬಹುದು.

ಒಂದು ವ್ಯವಸ್ಥಿತವಾದ ರೂಪದಲ್ಲಿರುವವಲ್ಲವೆಂದು ಚೆನ್ನಾಗಿ ಆಲೋಚಿಸಿ ಪರೀಕ್ಷಿಸಿ (ತಿಳಿದುಕೊಂಡಿರುವ) ಯಾವ ವಿವೇಕಿಯು ತಾನೆ ಅತಿ ದೀರ್ಘವಾದ ಜೀವಿತದಲ್ಲಿ ರತನಾದಾನು ?

ಯಸ್ಮಿನ್ನಿದಂ ವಿಚಿಕಿತ್ಸನ್ತಿ ಮೃತ್ಯೋ
ಯತ್ಸಾಮ್ಪರಾಯೇ ಮಹತಿ ಬ್ರೂಹಿ ನಸ್ತತ್ ।
ಯೋಽಯಂ ವರೋ ಗೂಢಮನುಪ್ರವಿಷ್ಟೋ,
ನಾನ್ಯಂ ತಸ್ಮಾನ್ನಚಿಕೇತಾ ವೃಣೀತೇ ॥ ೨೯ ॥

೨೯. ಮೃತ್ಯುವೆ, ಯಾವ (ವಿಷಯ)ದಲ್ಲಿ ಈ ಸಂಶಯವನ್ನು ಹೊಂದುತ್ತಿರುವರೋ ಯಾವದು ಸಾಂಪರಾಯದ ಮಹಾ (ಪ್ರಯೋಜನಕ್ಕೆ ಸಾಧನವೋ) ಅದನ್ನು ನಮಗೆ ಹೇಳು ಯಾವ ಈ ವರವು ಗೂಢವಾಗಿ ಒಳ ಹೊಕ್ಕಿರುವದೋ ಅದಕ್ಕಿಂತ ಬೇರೆಯೊಂದನ್ನು ನಚಿಕೇತನು ಬೇಡುವದಿಲ್ಲ.

(ಭಾಷ್ಯ)

೪೫. ಅತೋ ವಿಹಾಯ ಅನಿತ್ಯೈಃ ಕಾಮ್ಯೈಃ ಪ್ರಲೋಭನಮ್, ಯನ್ಮಯಾ ಪ್ರಾರ್ಥಿತಂ ಯಸ್ಮಿನ್ ಪ್ರೇತೇ ಇದಂ ವಿಚಿಕಿತ್ಸನಂ ವಿಚಿಕಿತ್ಸನ್ತಿ 'ಅಸ್ತಿ', 'ನಾಸ್ತಿ' ಇತ್ಯೇವಂಪ್ರಕಾರಮ್, ಹೇ ಮೃತ್ಯೋ, ಸಾಮ್ಪರಾಯೇ ಪರಲೋಕವಿಷಯೇ ಮಹತಿ ಮಹತ್ಪ್ರಯೋಜನನಿಮಿತ್ತೇ ಆತ್ಮನೋ ನಿರ್ಣಯವಿಜ್ಞಾನಂ ಯತ್ ತತ್ ಬ್ರೂಹಿ ಕಥಯ ನಃ ಅಸ್ಮಭ್ಯಮ್ । ಕಿಂ ಬಹುನಾ ? ಯೋಽಯಂ ಪ್ರಕೃತ ಆತ್ಮವಿಷಯಃ ವರಃ ಗೂಢಂ ಗಹನಂ ದುರ್ವಿವೇಚನಂ ಪ್ರಾಪ್ತಃ ಅನುಪ್ರವಿಷ್ಟಃ, ತಸ್ಮಾತ್ ವರಾತ್ ಅನ್ಯಮ್ ಅವಿವೇಕಿಭಿಃ ಪ್ರಾರ್ಥನೀಯಮ್ ಅನಿತ್ಯವಿಷಯಂ ವರಂ ನಚಿಕೇತಾಃ ನ ವೃಣೀತೇ ಮನಸಾಪಿ ಇತಿ ಶ್ರುತೇರ್ವಚನಮಿತಿ ॥

(ಭಾಷ್ಯಾರ್ಥ)

ಆದ್ದರಿಂದ, ಎಲೈ ಮೃತ್ಯುವೆ, ಅನಿತ್ಯವಾದ ಕಾಮಗಳಿಂದ ಆಸೆತೋರಿಸಿ (ಮನಸ್ಸನ್ನೆಳೆಯುವದನ್ನು) ಬಿಟ್ಟು, ಯಾವ ಸತ್ತ್ವನ ವಿಷಯದಲ್ಲಿ 'ಇದಾನೆ' 'ಇಲ್ಲ' ಎಂದು ಈ ಪ್ರಕಾರವಾಗಿ ಸಂಶಯವನ್ನು ಹೊಂದುತ್ತಿರುವರೋ ಮಹಾ ಪ್ರಯೋಜನಕ್ಕೆ ಕಾರಣವಾದ ಸಾಂಪರಾಯದಲ್ಲಿ ಎಂದರೆ ಪರಲೋಕವಿಷಯದಲ್ಲಿ (ಉಪಯೋಗವಾಗುವ) ಆತ್ಮಜ್ಞಾನವು ಯಾವದುಂಟೋ ಅದನ್ನು ನಮಗೆ ಹೇಳು, ತಿಳಿಸು. ಹೆಚ್ಚು ಹೇಳಿದ್ದರಿಂದೇನು? ಯಾವ ಈ ಪ್ರಕೃತವಾದ ಆತ್ಮವಿಷಯವಾದ ವರವು ಗೂಢವನ್ನು ಎಂದರೆ ಗಹನವನ್ನು, ವಿಂಗಡಿಸಿ ತಿಳಿಯುವದಕ್ಕೆ ಆಗದ ಸ್ಥಿತಿ

ಯನ್ನು, ಹೊಂದಿ ಒಳಹೊಕ್ಕಿರುವದೋ ಆ ವರಕ್ಕಿಂತ ಬೇರೆಯಾದ, ಅವಿವೇಕಿಗಳು ಕೇಳಿಕೊಳ್ಳಬಹುದಾದ ಅನಿತ್ಯವಸ್ತುವಿನ ವಿಷಯವಾದ ವರವನ್ನು ನಚಿಕೇತನು ಮನಸ್ಸಿನಲ್ಲಿಯೂ ಕೇಳಲಾರನು. ಇದು ಶ್ರುತಿಯ ವಚನವು.[1]

ಒಂದನೆಯ ಅಧ್ಯಾಯ—ಎರಡನೆಯ ವಲ್ಲಿ

ವಿದ್ಯಾವಿದ್ಯೆಗಳಲ್ಲಿ ವಿದ್ಯೆಯ ಹೆಚ್ಚುಗಾರಿಕೆ

(ಭಾಷ್ಯ)

೪೭. ಪರೀಕ್ಷ್ಯ ಶಿಷ್ಯಂ ವಿದ್ಯಾಯೋಗ್ಯತಾಂ ಚಾಸ್ಯಾವಗಮ್ಯ[1] ಆಹ—

(ಭಾಷ್ಯಾರ್ಥ)

ಶಿಷ್ಯನನ್ನು ಪರೀಕ್ಷೆಮಾಡಿ ಇವನಲ್ಲಿ ವಿದ್ಯೆಗೆ ಬೇಕಾದ ಯೋಗ್ಯತೆ ಇದೆಯೆಂದು ನಿಶ್ಚಯಿಸಿ (ಯಮನು) ಹೇಳುತ್ತಾನೆ --

ಅನ್ಯಚ್ಛ್ರೇಯೋಽನ್ಯದುತೈವ ಪ್ರೇಯ
ಸ್ತೇ ಉಭೇ ನಾನಾರ್ಥೇ ಪುರುಷಗ್ಂ ಸಿನೀತಃ ।
ತಯೋಃ ಶ್ರೇಯ ಆದದಾನಸ್ಯ ಸಾಧು
ಭವತಿ ಹೀಯತೇಽರ್ಥಾದ್ಯ ಉ ಪ್ರೇಯೋ ವೃಣೀತೇ ॥೧॥

೧. ಶ್ರೇಯಸ್ಸು ಬೇರೆ, ಮತ್ತು ಪ್ರೇಯಸ್ಸೇ ಬೇರೆ. ಅವೆರಡೂ ಬೇರೆಬೇರೆಯ ಅರ್ಥವುಳ್ಳವಾಗಿ ಪುರುಷನನ್ನು ಕಟ್ಟುವವು. ಅವೆರಡರಲ್ಲಿ ಶ್ರೇಯಸ್ಸನ್ನು ಸ್ವೀಕರಿಸುವವನಿಗೆ ಒಳ್ಳೆಯದು ಆಗುವದು, ಮತ್ತು ಯಾವನು ಪ್ರೇಯಸ್ಸನ್ನು ಆರಿಸಿಕೊಳ್ಳುವನೋ ಅವನು ಅರ್ಥದಿಂದ ತಪ್ಪಿಹೋಗುವನು.

(ಭಾಷ್ಯ)

೪೭. ಅನ್ಯತ್ ಪ್ರಥಗೇವ ಶ್ರೇಯಃ ನಿಶ್ಶ್ರೇಯಸಮ್ ತಥಾ ಅನ್ಯತ್ ಉತೈವ[2] ಅಪಿ ಚ ಪ್ರೇಯಃ ಪ್ರಿಯತರಮಪಿ । ತೇ ಶ್ರೇಯಃಪ್ರೇಯಸೀ[3] ಉಭೇ ನಾನಾರ್ಥೇ ಭಿನ್ನಪ್ರಯೋಜನೇ ಸತೀ ಪುರುಷಮ್ ಅಧಿಕೃತಂ ವರ್ಣಾಶ್ರಮಾದಿ ವಿಶಿಷ್ಟಂ ಸಿನೀತಃ ಬಧ್ನೀತಃ । ತಾಭ್ಯಾಮ್ ಆತ್ಮಕರ್ತವ್ಯತಯಾ ಪ್ರಯುಜ್ಯತೇ

---

1. "ನಚಿಕೇತನು ಕೇಳುವವನಲ್ಲ" ಎಂದು ನಚಿಕೇತನೇ ಹೇಳಿದ್ದರೂ ಹೇಳಿರಬಹುದು. ನಚಿಕೇತನು ಮತ್ತೊಂದು ವರವನ್ನು ಕೇಳಲಿಲ್ಲ ಎಂಬ ತಾತ್ಪರ್ಯದಿಂದ ಶ್ರುತಿ ಹೇಳಿದೆ ಎಂದು ಭಾಷ್ಯಕಾರರು ಬರೆದಿರುತ್ತಾರೆ.

1–3. (ವಾ॥) ಪಾಠ.

ಸರ್ವಃ ಪುರುಷಃ । ಶ್ರೇಯಃಪ್ರೇಯಸೋ ಹಿ ಅಭ್ಯುದಯಾಮೃತತ್ವಾರ್ಥೀ ಪುರುಷಃ ಪ್ರವರ್ತತೇ । ಅತಃ ಶ್ರೇಯಃಪ್ರೇಯಃಪ್ರಯೋಜನಕರ್ತವ್ಯತಯಾ ತಾಭ್ಯಾಂ ಬದ್ಧ ಇತ್ಯುಚ್ಯತೇ ಸರ್ವಃ ಪುರುಷಃ । ಯದ್ಯಪ್ಯೈಕೈಕಪುರುಷಾರ್ಥ ಸಮ್ಬನ್ಧಿನೀ ವಿದ್ಯಾವಿದ್ಯಾರೂಪತ್ವಾದ್ ವಿರುದ್ಧೇ ಇತ್ಯನ್ಯತರಾಪರಿತ್ಯಾಗೇನ ಏಕೇನ ಪುರುಷೇಣ ಸಹಾನುಷ್ಠಾತುಮ್ ಅಶಕ್ಯತ್ವಾತ್ ತಯೋಃ ಹಿತ್ವಾ ಅವಿದ್ಯಾರೂಪಂ ಪ್ರೇಯಃ ಶ್ರೇಯ ಏವ ಕೇವಲಮ್ ಆದದಾನಸ್ಯ ಉಪಾದಾನಂ ಕುರ್ವತಃ ಸಾಧು ಶೋಭನಂ ಶಿವಂ ಭವತಿ । ಯಸ್ತ್ವದೂರದರ್ಶೀ ವಿಮೂಢೋ ಹೀಯತೇ ವಿಯುಜ್ಯತೇ ಅರ್ಥಾತ್ ಪುರುಷಾರ್ಥಾತ್ ಪಾರಮಾರ್ಥಿಕಾತ್ ಪ್ರಯೋಜನಾತ್ । ನಿತ್ಯಾತ್ ಪ್ರಚ್ಯವತೇ ಇತ್ಯರ್ಥಃ । ಕೋಽಸೌ ? ಯ ಉ ಪ್ರೇಯಃ ವೃಣೀತೇ ಉಪಾದತ್ತೇ ಇತ್ಯೇತತ್ ॥

(ಭಾಷ್ಯಾರ್ಥ)

ಶ್ರೇಯಸ್ಸು ಮುಕ್ತಿ (ಸಾಧನವು) ಬೇರೆಯೇ, ಮತ್ತು ಪ್ರೇಯಸ್ಸೆಂಬುದೇ ಪ್ರಿಯತರವಾ(ಗಿ ಕಾಣುವ ಅಭ್ಯುದಯಸಾಧನವು) ಕೂಡ ಬೇರೆಯೇ. ಈ ಶ್ರೇಯಸ್ಸುಪ್ರೇಯಸ್ಸು ಎಂಬೆರಡೂ ಬೇರೆಬೇರೆಯ ಪ್ರಯೋಜನವುಳ್ಳವಾಗಿ ವರ್ಣಾಶ್ರಮಾದಿಗಳಿಂದ ಕೂಡಿ ಅಧಿಕಾರಿಯಾಗಿರುವ ಪುರುಷನನ್ನು[1] 'ಸಿನೀತಃ' ಎಂದರೆ ಕಟ್ಟುವವು. ಇವುಗಳನ್ನು ತಾನು ಮಾಡತಕ್ಕದ್ದು ಎಂದು ಪ್ರತಿಯೊಬ್ಬ ಪುರುಷನೂ ಪ್ರೇರಿತನಾಗುತ್ತಾನೆ. ಶ್ರೇಯಸ್ಸು ಪ್ರೇಯಸ್ಸು–(ಇವುಗಳಲ್ಲಿ)[2] **ಅಭ್ಯುದಯ,**[3] **ಅಮೃತತ್ವ**–ಇವುಗಳನ್ನು ಬಯಸುವ ಪುರುಷನು ತೊಡಗುತ್ತಾನಲ್ಲವೆ? ಆದ್ದರಿಂದ- ಶ್ರೇಯಸ್ಸು, ಪ್ರೇಯಸ್ಸು–ಇವುಗಳ ಪ್ರಯೋಜನವೇ (ತಾನು ಸಾಧನವನ್ನು) ಮಾಡಿ ಪಡೆಯತಕ್ಕದ್ದು ಎಂದು (ಪುರುಷನು ಪ್ರವರ್ತಿಸುವದರಿಂದ) ಇವೆರಡರಿಂದ ಪ್ರತಿಯೊಬ್ಬನೂ[4] ಕಟ್ಟುಬಿದ್ದಿರುವನು ಎಂದು (ಶ್ರುತಿಯಲ್ಲಿ) ಹೇಳಿರುತ್ತದೆ. ಇವುಗಳೆರಡೂ ಒಂದೊಂದು (ಬೇರೆಯ) ಪುರುಷಾರ್ಥಕ್ಕೆ ಸಂಬಂಧವುಳ್ಳವಾಗಿದ್ದರೂ[5]

---

1. ವರ್ಣ, ಆಶ್ರಮ–ಮುಂತಾದ ವೇದೋಕ್ತವಾದ ಅಧಿಕಾರವುಳ್ಳ ಪುರುಷನು ಅವಶ್ಯವಾಗಿ ಅಭ್ಯುದಯ, ಮುಕ್ತಿ–ಇವುಗಳಲ್ಲಿ ಒಂದಕ್ಕಾಗಿ ಪ್ರವರ್ತಿಸುತ್ತಾನೆ.–ಎಂದರ್ಥ.

2. ಇಲ್ಲಿ ಶ್ರೇಯಸ್ಸೆಂದರೆ ಮುಕ್ತಿಗೆ ಕಾರಣವಾದ ಜ್ಞಾನ, ಪ್ರೇಯಸ್ಸು ಎಂದರೆ ಅಭ್ಯುದಯಕ್ಕೆ ಕಾರಣವಾದ ಕರ್ಮ ಜ್ಞಾನದಲ್ಲಿ ತೊಡಗುವದೆಂದರೆ ಅದಕ್ಕಾಗಿ ವಿಚಾರಮಾಡುವದು.

3. ಅಭ್ಯುದಯವೆಂದರೆ ಏಳಿಗೆ, ಸ್ವರ್ಗಾದಿಫಲ; ಅಮೃತತ್ವವೆಂದರೆ ಮುಕ್ತಿ.

4. ಪ್ರತಿಯೊಬ್ಬ ಅಧಿಕಾರಿಯೂ ಎಂದೇ ಅರ್ಥ; ಅನಧಿಕಾರಿಯಾದವನಿಗೆ ಸ್ವೇಚ್ಛಾಪ್ರವೃತ್ತಿಯೇ ಉಂಟಾಗುತ್ತದೆ.

5. "ಏಕೈಕಪುರುಷಸಂಬನ್ಧಿನೀ" ಎಂದು (ಆಗಿ ಗೋಗಿ) ವ್ಯಾಖ್ಯಾನಾನುಸಾರವಾದ ಪಾಠ. ಒಬ್ಬೊಬ್ಬ ಪುರುಷನಿಗೆ ಸಂಬಂಧಪಟ್ಟದ್ದರೂ ಎಂದು ಅದಕ್ಕೆ ಅರ್ಥ. ಇಬ್ಬರು ಬೇರೆಬೇರೆಯಾಗಿ ಕರ್ಮವನ್ನೂ ವಿದ್ಯೆಯನ್ನೂ ಆರಿಸಿಕೊಳ್ಳುವದು ಸಹಜವೇ ಆಗಿರುವದರಿಂದ ಆ ಪಾಠದಲ್ಲಿ ವಿರೋಧವೇನೂ ಕಾಣುವದಿಲ್ಲ.

ವಿದ್ಯೆ, ಅವಿದ್ಯೆ–ಇವುಗಳ ರೂಪಗಳುಳ್ಳವಾಗಿರುವದರಿಂದ[1] (ಒಂದಕ್ಕೊಂದಕ್ಕೆ) ವಿರುದ್ಧವಾಗಿರುವವು; ಆದ್ದರಿಂದ (ಇವುಗಳಲ್ಲಿ) ಒಂದನ್ನೂ ಬಿಡದೆ ಒಬ್ಬನೇ ಪುರುಷನು ಒಂದೇ ಕಾಲದಲ್ಲ (ಎರಡನ್ನೂ) ಅನುಷ್ಠಾನಮಾಡುವದು ಆಗುವಹಾಗಿಲ್ಲವಾದ್ದರಿಂದ ಈ ಎರಡರಲ್ಲಿ ಅವಿದ್ಯಾರೂಪವಾಗಿರುವ ಪ್ರೇಯಸ್ಸನ್ನು ಕೈಬಿಟ್ಟು, ಬರಿಯ ಶ್ರೇಯಸ್ಸನ್ನೇ ಸ್ವೀಕರಿಸುವವರಿಗೆ ಎಂದರೆ (ಆದೊಂದನ್ನೇ) ತೆಗೆದುಕೊಳ್ಳುವವನಿಗೆ ಒಳ್ಳೆಯದು, ಶುಭವು, ಮಂಗಳವು, ಆಗುವದು. ಯಾವ ದೂರದರ್ಶಿಯಲ್ಲದ ಮೂಢನಾದರೋ ಅರ್ಥದಿಂದ ಎಂದರೆ ಪರಮಾರ್ಥವಾದ ಪುರುಷಾರ್ಥದಿಂದ ತಪ್ಪಿಹೋಗುವನು, (ಅದರಿಂದ) ಅಗಲುವನು. ನಿತ್ಯವಾದ ಪ್ರಯೋಜನದಿಂದ (ಕೆಳಕ್ಕೆ) ಜಾರುವನು ಎಂದರ್ಥ. ಇವನು ಯಾರು? ಎಂದರೆ ಯಾವನು ಪ್ರೇಯಸ್ಸನ್ನೇ ಆರಿಸಿಕೊಳ್ಳುವನೋ (ಸಾಧನವಾಗಿ) ತೆಗೆದುಕೊಳ್ಳುವನೋ (ಅವನು) ಎಂದಭಿಪ್ರಾಯ.

(ಭಾಷ್ಯ)

೫೮. ಯದ್ಯುಭೇ ಅಪಿ ಕರ್ತುಂ ಸ್ವಾಯತ್ತೇ ಪುರುಷೇಣ, ಕಿಮರ್ಥಂ ಪ್ರೇಯ ಏವ ಆದತ್ತೇ ಬಾಹುಲ್ಯೇನ ಲೋಕ ಇತಿ? ಉಚ್ಯತೇ—

(ಭಾಷ್ಯಾರ್ಥ)

ಇವೆರಡನ್ನೂ ಮಾಡುವದು ಪುರುಷನಿಗೆ ತನ್ನ ಅಧೀನದಲ್ಲಿಯೇ ಇರುವದಾದರೆ, ಜನರು ಬಹಳವಾಗಿ ಪ್ರೇಯಸ್ಸನ್ನೇ ಏಕೆ ತೆಗೆದುಕೊಳ್ಳುತ್ತಾರೆ?—ಎಂದರೆ ಹೇಳುತ್ತಾನೆ;—

ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತ
ಸ್ತೌ ಸಂಪರೀತ್ಯ ವಿವಿನಕ್ತಿ ಧೀರಃ।
ಶ್ರೇಯೋ ಹಿ ಧೀರೋಽಭಿಪ್ರೇಯಸೋ ವೃಣೀತೇ
ಪ್ರೇಯೋ ಮನ್ದೋ ಯೋಗಕ್ಷೇಮಾದ್ ವೃಣೀತೇ ॥ ೨ ॥

೨. ಶ್ರೇಯಸ್ಸೂ ಪ್ರೇಯಸ್ಸೂ ಮನುಷ್ಯನ ಬಳಿಗೆ ಬರುವವು. ಅವುಗಳನ್ನು ಚೆನ್ನಾಗಿ ಒಳಹೊಕ್ಕು ಧೀರನು ವಿವೇಚನೆಮಾಡಿಕೊಳ್ಳುತ್ತಾನೆ. ಧೀರನಾದವನು ಪ್ರೇಯಸ್ಸನ್ನು ಬಿಟ್ಟು ಶ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ. ಮೂಢನು ಯೋಗಕ್ಷೇಮಕ್ಕೆಂದು ಪ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ.

---

1. ಕರ್ಮವು ಕ್ರಿಯಾಕಾರಕಫಲಗಳನ್ನು ಬೇರೆಬೇರೆಯೆಂದು ತಿಳಿಯುವ ಅವಿದ್ಯೆಯನ್ನವಲಂಬಿಸಿ ಉಂಟಾಗುತ್ತದೆ; ಜ್ಞಾನವು ಆ ಭೇದವಿಲ್ಲದ ಆತ್ಮೈಕತ್ವವನ್ನು ತಿಳಿಸುವದು. ಆದ್ದರಿಂದ ಇವೆರಡೂ ಒಬ್ಬನಲ್ಲಿ ಏಕಕಾಲದಲ್ಲಿರುವದು ಆಗಲಾರದು. ಈ. ಭಾ. ೭, ೧೯, ೪೯ ನೋಡಿರಿ.

(ಭಾಷ್ಯ)

೪೯. ಸತ್ಯಂ ಸ್ವಾಯತ್ತೇ। ತಥಾಪಿ ಸಾಧನತಃ ಫಲತಶ್ಚ ಮನ್ದಬುದ್ಧೀನಾಂ ದುರ್ವಿವೇಕರೂಪೇ ಸತೀ ವ್ಯಾಮಿಶ್ರೀಭೂತೇ ಇವ ಮನುಷ್ಯಂ ಪುರುಷಮ್ ಆ ಇತಃ ಪ್ರಾಪ್ನುತಃ ಶ್ರೇಯಶ್ಚ ಪ್ರೇಯಶ್ಚ। ಅತೋ ಹಂಸ ಇವಾಮ್ಬುಸಃ ಪಯಃ, ತೌ ಶ್ರೇಯಃ ಪ್ರೇಯಃಪದಾರ್ಥೌ ಸಂಪರೀತ್ಯ ಸಮ್ಯಕ್ಪರಿಗಮ್ಯ ಮನಸಾ ಆಲೋಚ್ಯ ಗುರು ಲಾಘವಂ ವಿವಿನಕ್ತಿ ಪೃಥಕ್ಕರೋತಿ ಧೀರಃ ಧೀರ್ಮಾ। ವಿವಿಚ್ಯ ಚ ಶ್ರೇಯೋ ಹಿ ಶ್ರೇಯ ಏವ ಅಭಿವೃಣೀತೇ ಅಭ್ಯರ್ಹಿತತ್ವಾತ್ ಪ್ರೇಯಸಃ[1]। ಕೋಽಸೌ? ಧೀರಃ। ಯಸ್ತು ಮನ್ದಃ ಸಃ ವಿವೇಕಾಸಾಮರ್ಥ್ಯಾತ್ ಯೋಗಕ್ಷೇಮಾತ್ ಯೋಗಕ್ಷೇಮ ನಿಮಿತ್ತಂ ಶರೀರಾದ್ಯುಪಚಯರಕ್ಷಣನಿಮಿತ್ತಮ್ ಇತ್ಯೇತತ್। ಪ್ರೇಯಃ ಪಶು ಪುತ್ರಾದಿಲಕ್ಷಣಂ ವೃಣೀತೇ॥

(ಭಾಷ್ಯಾರ್ಥ)

ನಿಜ, ಇವೆರಡೂ ತನ್ನ ಅಧೀನದಲ್ಲಿಯೇ ಇರುತ್ತವೆ ಆದರೂ ಮೂಢ ಬುದ್ಧಿಯುಳ್ಳವರಿಗೆ ಸಾಧನದೃಷ್ಟಿಯಿಂದಲೂ ಫಲದ ದೃಷ್ಟಿಯಿಂದಲೂ[2] ವಿಂಗಡಿಸಿ ಕೊಳ್ಳುವದಕ್ಕೆ ಆಗದಂತೆ ಬೆರೆತುಕೊಂಡಿರುವಹಾಗೆ (ಕಾಣುತ್ತಾ) ಮನುಷ್ಯನಬಳಿಗೆ ಪುರುಷನ (ಬಳಿಗೆ) ಎಲ್ಲಾ ಕಡೆಯಿಂದಲೂ ಬರುತ್ತವೆ, ಶ್ರೇಯಸ್ಸೂ ಪ್ರೇಯಸ್ಸೂ ಬಂದು ಸೇರುತ್ತವೆ. ಆದಕಾರಣ ಹಂಸವು ನೀರಿನಿಂದ ಹಾಲನ್ನು (ವಿಂಗಡಿಸಿ ಕೊಳ್ಳುವಂತೆ) ಧೀರನು, ತಿಳಿವಳಿಕೆಯುಳ್ಳವನು, ಆ ಶ್ರೇಯಸ್ಸು, ಪ್ರೇಯಸ್ಸು– ಎಂಬ ಪದಾರ್ಥಗಳೆರಡನ್ನೂ ಚೆನ್ನಾಗಿ ಒಳಹೊಕ್ಕು ಮನಸ್ಸಿನಿಂದ ಆಲೋಚಿಸಿ ಹೆಚ್ಚಿನದು ಯಾವದು, ಕಡಿಮೆಯದು ಯಾವದು ಎಂಬುದನ್ನು ವಿವೇಚನೆಮಾಡಿ ಕೊಳ್ಳುತ್ತಾನೆ ವಿಂಗಡಿಸಿಕೊಳ್ಳುತ್ತಾನೆ. (ಹೀಗೆ) ವಿಂಗಡಿಸಿಕೊಂಡು ಪ್ರೇಯಸ್ಸಿಗಿಂತ ಶ್ರೇಯಸ್ಸೇ ಪೂಜ್ಯವಾಗಿರುವದರಿಂದ ಆ ಶ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ. ಅವನು ಯಾರು? ಎಂದರೆ ಧೀರನು. ಆದರೆ ಯಾವನು ಮೂಢನೋ, ಅಲ್ಪ ಬುದ್ಧಿಯುಳ್ಳವನೋ, ಅವನಿಗೆ (ಹೀಗೆ) ವಿಂಗಡಿಸಿಕೊಳ್ಳುವ ಸಾಮರ್ಥ್ಯ[3] ವಿಲ್ಲದ್ದರಿಂದ (ಅವನು) 'ಯೋಗಕ್ಷೇಮಕ್ಕೆಂದು' ಯೋಗಕ್ಷೇಮಗಳ ನಿಮಿತ್ತವಾಗಿ–ಎಂದರೆ ಶರೀರವೇ ಮುಂತಾದವುಗಳನ್ನು ಬೆಳೆಸಿಕೊಳ್ಳುವದು, ಕಾಪಾಡಿಕೊಳ್ಳುವದು–ಇವುಗಳ

---

1. (ವಾ॥) ಪಾಠ.

2. ಯಾವ ಸಾಧನವು ಸುಲಭ, ಯಾವ ಫಲವು ಸತ್ಯ—ಎಂಬುದು ಸಾಮಾನ್ಯ ಬುದ್ಧಿಯವರಿಗೆ ಹೊಳೆಯುವದಿಲ್ಲ.

3. "ವಿವೇಕಾಸಾಮರ್ಥ್ಯಾತ್" (ಆ॥) ಎಂಬುದೇ ಸಾಕು.

ಗಾಗಿ ಎಂದರ್ಥ—ಪಶು, ಪುತ್ರ-ಮುಂತಾದ ರೂಪದಲ್ಲಿರುವ ಪ್ರೇಯಸ್ಸನ್ನೇ[1] ಆರಿಸಿ ಕೊಳ್ಳುತ್ತಾನೆ.

ಸ ತ್ವಂ ಪ್ರಿಯಾ ಪ್ರಿಯರೂಪಾಗ್ಂಶ್ಚ ಕಾಮಾ-
ನಭಿಧ್ಯಾಯನ್ನಚಿಕೇತೋಽತ್ಯಸ್ರಾಕ್ಷೀಃ ।
ನೈತಾಗ್ಂ ಸೃಙ್ಕಾಂ ವಿತ್ತಮಯೀಮವಾಪ್ತೋ
ಯಸ್ಯಾಂ ಮಜ್ಜನ್ತಿ ಬಹವೋ ಮನುಷ್ಯಾಃ ॥ ೩ ॥

೩. ನಚಿಕೇತನೆ, ಆ ನೀನಾದರೋ ಪ್ರಿಯವಾಗಿಯೂ ಪ್ರಿಯರೂಪವಾಗಿಯೂ ಇರುವ ಕಾಮಗಳನ್ನು ಆಲೋಚಿಸಿ ಕೈಬಿಟ್ಟಿರುತ್ತೀಯೆ. ಯಾವ ದರಲ್ಲಿ ಬಹಳ ಮನುಷ್ಯರು ಮುಳುಗಿರುತ್ತಾರೋ ಅಂಥ ವಿತ್ತಮಯವಾದ ಈ ಸೃಂಕೆಯನ್ನು ಪಡೆಯಲಿಲ್ಲ.

(ಭಾಷ್ಯ)

೫೦. ಸ ತ್ವಂ ಪುನಃಪುನರ್ಮಯಾ ಪ್ರಲೋಭ್ಯಮಾನೋಽಪಿ ಪ್ರಿಯಾ ಪುತ್ರಾದೀ, ಪ್ರಿಯರೂಪಾಂಶ್ಚ ಅಪ್ಸರಃಪ್ರಭೃತಿಲಕ್ಷಣಾ ಕಾಮಾ ಅಭಿಧ್ಯಾಯ ಚಿನ್ತ್ಯ ತೇಷಾಮ್ ಅನಿತ್ಯತ್ವಾಸಾರತ್ವಾದಿದೋಷಾ ಹೇ ನಚಿಕೇತಃ, ಅತ್ಯ ಸ್ರಾಕ್ಷೀಃ ಅತಿಸೃಷ್ಟವಾ ಪರಿತ್ಯಕ್ತವಾನಸಿ । ಅಹೋ ಬುದ್ಧಿಮತ್ತಾ ತವ! ನ ಏತಾಮ್ ಅವಾಪ್ತವಾನಸಿ ಸೃಙ್ಕಾಂ ಸೃತಿಂ ಕುತ್ಸಿತಾಂ ಮೂಢಜನಪ್ರವೃತ್ತಾಂ ವಿತ್ತ ಮಯೀಂ ಧನಪ್ರಾಯಾಮ್ । ಯಸ್ಯಾಂ ಸೃತೌ ಮಜ್ಜನ್ತಿ ಸೀದನ್ತಿ ಬಹವಃ ಅನೇಕೇ ಮೂಢಾ ಮನುಷ್ಯಾಃ ॥

(ಭಾಷ್ಯಾರ್ಥ)

ಆ ನೀನಾದರೋ ಮತ್ತೆ ಮತ್ತೆ ನಾನು (ನಿನ್ನನ್ನು) ಆಸೆಗೊಳಿಸಿದರೂ ಪ್ರಿಯವಾಗಿರುವ ಪುತ್ರಾದಿಗಳು, ಪ್ರಿಯರೂಪವಾಗಿರುವ[2] ಅಪ್ಸರಃಸ್ತ್ರೀಯರೇ ಮುಂತಾದವುಗಳು ಎಂಬ ಕಾಮಗಳನ್ನು ಆಲೋಚಿಸಿ ಅವುಗಳ ಅನಿತ್ಯತ್ವ, ಅಸಾರತ್ವ-ಮುಂತಾದ ದೋಷಗಳನ್ನು ಬಗೆದು ಎಲೈ ನಚಿಕೇತನೆ, 'ಅತ್ಯಸ್ರಾಕ್ಷೀಃ' = ಅತಿಸೃಷ್ಟವಾನಸಿ (ಅವುಗಳನ್ನು) ಕೈಬಿಟ್ಟಿರುತ್ತೀಯೆ—ಅಹಾ ನಿನ್ನ ಬುದ್ಧಿಯು ಎಂಥದ್ದು! ಯಾವ ಮಾರ್ಗದಲ್ಲಿ ಅನೇಕ ಮೂಢಮನುಷ್ಯರು ಮುಳುಗಿರುವರೋ ಕುಸಿದುಕೊಂಡಿರುವರೋ ಅಂಥ ಮೂಢಜನರು ನಡೆಯುವ ವಿತ್ತಮಯವಾದ ಧನಬಾಹುಲ್ಯವುಳ್ಳ

1. ಅಭ್ಯುದಯಸಾಧನವನ್ನೇ.

2. ಸಾಮಾನ್ಯರು ಪ್ರಿಯವೆಂದು ಭಾವಿಸುವ ಎಂದರ್ಥ. ನಿಜವಾಗಿ ಆತ್ಮನೇ ಪ್ರಿಯನು. ಬೃ. ೨-೪-೫ ನೋಡಿರಿ.

ಈ ಕುತ್ಸಿತವಾದ ಸೃಂಕೆಯನ್ನು ಕುತ್ಸಿತವಾದ ಹಾದಿಯನ್ನು (ನೀನು) ಪಡೆಯಲಿಲ್ಲ (ವಲ್ಲ)!

(ಭಾಷ್ಯ)

೫೧. " ತಯೋಃ ಶ್ರೇಯ ಆದದಾನಸ್ಯ ಸಾಧು ಭವತಿ ಹೀಯತೇಽರ್ಥಾದ್ಯ ಉ ಪ್ರೇಯೋ ವೃಣೀತೇ " ಇತ್ಯುಕ್ತಮ್ । ತತ್ ಕಸ್ಮಾತ್ ? ಯತಃ—

(ಭಾವಾರ್ಥ)

" ಅವೆರಡರಲ್ಲಿ ಶ್ರೇಯಸ್ಸನ್ನು ಸ್ವೀಕರಿಸುವವನಿಗೆ ಒಳ್ಳೆಯದಾಗುವದು, ಮತ್ತು ಯಾವನು ಪ್ರೇಯಸ್ಸನ್ನು ಆರಿಸಿಕೊಳ್ಳುವನೋ ಅವನು ಅರ್ಥದಿಂದ ತಪ್ಪಿ ಹೋಗುವನು" (೧-೨-೧) ಎಂದು ಹೇಳಿತ್ತಷ್ಟೆ. ಅದು ಏಕೆಂದರೆ—

ದೂರಮೇತೇ ವಿಪರೀತೇ ವಿಷೂಚೀ
ಅವಿದ್ಯಾ ಯಾ ಚ ವಿದ್ಯೇತಿ ಜ್ಞಾತಾ ।
ವಿದ್ಯಾಭೀಪ್ಸಿನಂ ನಚಿಕೇತಸಂ ಮನ್ಯೇ
ನ ತ್ವಾ ಕಾಮಾ ಬಹವೋಽಲೋಲುಪನ್ತ ॥ ೪ ॥

೪. ಯಾವದು ಅವಿದ್ಯೆಯೆಂದು ಯಾವದು ವಿದ್ಯೆಯೆಂದು ತಿಳಿದು ಬಂದಿರುವದೋ–ಈ ಎರಡೂ ದೂರವಾಗಿ ವಿರುದ್ಧವಾಗಿರುವವು, ಬೇರೆ ಹೋಗಿರುವವು. ನಚಿಕೇತನನ್ನು ವಿದ್ಯಾಭೀಪ್ಸೆಯುಳ್ಳವನೆಂದು ಎಣಿಸುತ್ತೇನೆ. ನಿನ್ನನ್ನು ಬಹಳ ಕಾಮಗಳು ಬಿಡಿಸಿಕೊಂಡು ಹೋಗಿಲ್ಲ.

(ಭಾಷ್ಯ)

೫೨. ದೂರಂ ದೂರೇಣ ಮಹತಾನ್ತರೇಣ ಏತೇ ವಿಪರೀತೇ ಅನ್ಯೋನ್ಯ ವ್ಯಾವೃತ್ತರೂಪೇ ವಿವೇಕಾವಿವೇಕಾತ್ಮಕತ್ವಾತ್ ತಮಃಪ್ರಕಾಶಾವಿವ । ವಿಷೂಚೀ ವಿಷೂಚ್ಯೌ ನಾನಾಗತೀ ಭಿನ್ನಫಲೇ ಸಂಸಾರಮೋಕ್ಷಹೇತುತ್ವೇನ ಇತ್ಯೇತತ್ । ಕೇ ತೇ ಇತಿ ? ಉಚ್ಯತೇ । ಯಾ ಚ ಅವಿದ್ಯಾ ಪ್ರೇಯೋವಿಷಯಾ ವಿದ್ಯಾ ಇತಿ ಚ ಶ್ರೇಯೋವಿಷಯಾ ಜ್ಞಾತಾ ನಿರ್ಜ್ಞಾತಾ ಅವಗತಾ ಪಣ್ಡಿತೈಃ । ತತ್ರ ವಿದ್ಯಾಭೀಪ್ಸಿನಂ ವಿದ್ಯಾರ್ಥಿನಂ ನಚಿಕೇತಸಂ ತ್ವಾಮ್ ಅಹಂ ಮನ್ಯೇ । ಕಸ್ಮಾತ್ ? ಯಸ್ಮಾದ್ ಅವಿದ್ವದ್ಬುದ್ಧಿಪ್ರಲೋಭನಃ ಕಾಮಾ ಅಪ್ಸರಃಪ್ರಭೃತಯೋ ಬಹವೋಽಪಿ ತ್ವಾ ತ್ವಾಂ ನ ಅಲೋಲುಪನ್ತ ನ ವಿಚ್ಛೇದಂ ಕೃತವನ್ತಃ ಶ್ರೇಯೋಮಾರ್ಗಾತ್ ಆತ್ಮೋಪ ಭೋಗಾಭಿವಾಞ್ಛಾಸಮ್ಪಾದನೇನ । ಅತೋ ವಿದ್ಯಾರ್ಥಿನಂ ಶ್ರೇಯೋಭಾಜನಂ ಮನ್ಯೇ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಈ ಎರಡೂ 'ದೂರ' (ಒಂದಕ್ಕೊಂದು) ದೂರದಲ್ಲಿ(ರುವವು), ಬಹಳ ತರವುಳ್ಳವು. **ವಿರುದ್ಧವಾಗಿರುವವು, ವಿವೇಕರೂಪವಾಗಿಯೂ ಅವಿವೇಕ ರೂಪವಾಗಿಯೂ[1] ಇರುವದರಿಂದ ಕತ್ತಲೆಬೆಳಕುಗಳ ಹಾಗೆ ಒಂದಕ್ಕೊಂದು ೀರ) ಭಿನ್ನವಾದ ರೂಪವಾಗಿರತಕ್ಕವು.** 'ವಿಷೂಚೀ' = ವಿಷೂಚ್ಯೌ ಬೇರೆ ರೆ ಹೋಗಿರುವವು, (ಒಂದು) ಸಂಸಾರಕ್ಕೂ (ಇನ್ನೊಂದು) ಮೋಕ್ಷಕ್ಕೂ ಕಾರಣ ಗಿರುವದರಿಂದ ಬೇರೆಬೇರೆಯ ಫಲಗಳನ್ನು ಕೊಡತಕ್ಕವು ಎಂದರ್ಥ. ಇವೆರಡೂ ಾವವು? ಎಂದರೆ ಹೇಳುತ್ತಾನೆ: ಯಾವದು ಪ್ರೇಯಸ್ಸಿನ ವಿಷಯವಾದ ವಿದ್ಯೆಯೆಂದೂ, ಮತ್ತು (ಯಾವದು) ಶ್ರೇಯಸ್ಸಿನ ವಿಷಯವಾದ ವಿದ್ಯೆಯೆಂದೂ ದುಬಂದಿರುವವೋ ಅರಿಕೆಯಾಗಿರುವವೋ ಪಂಡಿತರಿಗೆ ನಿಶ್ಚಯವಾಗಿರುವವೋ ವು). ಇವುಗಳಲ್ಲಿ ನಚಿಕೇತನನ್ನು ಎಂದರೆ ನಿನ್ನನ್ನು ವಿದ್ಯಾಭೀಪ್ಸೆಯುಳ್ಳವ ದು ವಿದ್ಯೆಯನ್ನು ಬಯಸುವವನೆಂದು ನಾನು ಎಣಿಸುತ್ತೇನೆ. ಏಕೆ? ಏಕೆಂದರೆ ಯದವರ ಬುದ್ಧಿಯನ್ನು ಸೆಳೆಯುವಂಥ ಅಪ್ಸರಃಸ್ತ್ರೀಯರೇ ಮುಂತಾದ ಬಹಳ ನುಗಳುಕೂಡ ನಿನ್ನನ್ನು ಬಿಡಿಸಿಕೊಂಡು ಹೋಗಿಲ್ಲ, ತಮ್ಮನ್ನು ಉಪಭೋಗಿ ಸು ಇಚ್ಛೆಯನ್ನುಂಟುಮಾಡಿ ಶ್ರೇಯಸ್ಸಿನ ಮಾರ್ಗದಿಂದ ತಪ್ಪಿಸಿರುವದಿಲ್ಲ. ರಿಂದ ವಿದ್ಯೆಯನ್ನು ಬಯಸಿ ಶ್ರೇಯಸ್ಸನ್ನು ಪಡೆಯುವವನೆಂದು ಎಣಿಸುತ್ತೇನೆ ದು ಅಭಿಪ್ರಾಯ.

ಅವಿದ್ಯಾಯಾಮನ್ತರೇ ವರ್ತಮಾನಾಃ
ಸ್ವಯಂ ಧೀರಾಃ ಪಣ್ಡಿತಂ ಮನ್ಯಮಾನಾಃ ।
ದನ್ದ್ರಮ್ಯಮಾಣಾಃ ಪರಿಯನ್ತಿ ಮೂಢಾ
ಅನ್ಧೇನೈವ ನೀಯಮಾನಾ ಯಥಾನ್ಧಾಃ ॥ ೫ ॥

೫. ಅವಿದ್ಯೆಯ ನಡುವೆ ಇರುವವರಾಗಿ ತಾವೇ ಧೀರರು ಪಂಡಿತರು ದೆಣಿಸಿಕೊಂಡು ವಕ್ರವಾಗಿ ನಡೆಯುತ್ತಾ ಕುರುಡನೇ ಕರೆದುಕೊಂಡು ೀಗುತ್ತಿರುವ ಕುರುಡರಹಾಗೆ ಮೂಢರು ತೊಳಲುತ್ತಿರುವರು.

(ಭಾಷ್ಯ)

೫ಖ. ಯೇ ತು ಸಂಸಾರಭಾಜನಾಃ ಅವಿದ್ಯಾಯಾಮ್ ಅನ್ತರೇ ಮಧ್ಯೇ ೀಭೂತೇ ಇವ ತಮಸಿ ವರ್ತಮಾನಾಃ ವೇಷ್ಯಮಾನಾಃ ಪುತ್ರಪಶ್ವಾದಿತೃಷ್ಣಾ

---

1. ಇಲ್ಲಿ ಅವಿವೇಕನೆಂದರೆ ವಿಂಗಡಿಸಿ ತಿಳಿಯದೆ ಇರುವದು ಎಂದಿಷ್ಟೇ ಅರ್ಥವಲ್ಲ, ದನ್ನೊಂದೆಂದು ಕಲೆಬೆರಕೆಮಾಡಿಕೊಂಡು ತಿಳಿಯುವದು ಎಂದು ಅರ್ಥ. ಇದನ್ನೇ ಧ್ಯಾಸ" ವೆಂದು ಕರೆಯುವರು.

ಪಾಶಶತೈಃ ಸ್ವಯಂ[1] ಧೀರಾಃ ಪ್ರಜ್ಞಾನನ್ತಃ ಪಣ್ಡಿತಾಃ ಶಾಸ್ತ್ರಕುಶಲಾಶ್ಚ ಇತಿ ಮನ್ಯ ಮಾನಾಃ ತೇ ದನ್ದ್ರಮ್ಯಮಾಣಾಃ ಅತ್ಯರ್ಥಂ ಕುಟಿಲಾಮ್ ಅನೇಕಾಂ ಗತಿಂ ಗಚ್ಛನ್ತಃ ಜರಾಮರಣರೋಗಾದಿದುಃಖೈಃ ಪರಿಯನ್ತಿ ಪರಿಗಚ್ಛನ್ತಿ ಮೂಢಾ ಅವಿ ವೇಕಿನಃ ಅನ್ಧೇನೈವ ದೃಷ್ಟಿವಿಹೀನೇನೈವ ನೀಯಮಾನಾ ವಿಷಮೇ ಪಥಿ ಯಥಾ ಬಹವಃ ಅನ್ಧಾಃ ಮಹಾನ್ತಮ್ ಅನರ್ಥಮ್ ಋಚ್ಛನ್ತಿ, ತದ್ವತ್ ॥

(ಭಾಷ್ಯಾರ್ಥ)

ಆದರೆ ಯಾರು ಸಂಸಾರಕ್ಕೆ ತಕ್ಕವರಾಗಿ ದಟ್ಟವಾಗಿರುವ ಕತ್ತಲೆಯಲ್ಲಿರು (ವವ)ರಂತೆ ಅವಿದ್ಯೆಯ ನಡುವೆ ಇರುವವರಾಗಿ ಮಕ್ಕಳುಮರಿಗಳು, ದನಕರುಗಳು–ಮುಂತಾದವುಗಳ ಬಯಕೆಗಳೆಂಬ ನೂರಾರು ಹಗ್ಗಗಳಿಗೆ ಕಟ್ಟುಬಿದ್ದು ತಾವೇ ಧೀರರು ತಿಳಿವಳಿಕೆಯುಳ್ಳವರು ಮತ್ತು ಪಂಡಿತರು, ಶಾಸ್ತ್ರದಲ್ಲಿ ಜಾಣರು ಎಂದೆಣಿಸಿ ಕೊಳ್ಳುತ್ತಾ, ಅವರು 'ದನ್ದ್ರಮ್ಯಮಾಣಾಃ' ಬಹಳವಾಗಿ ಡೊಂಕುಡೊಂಕಾ ಗಿರುವ ಬಲುಬಗೆಯ (ಕರ್ಮ) ಗತಿಯಲ್ಲಿ ನಡೆಯುತ್ತಾ ಮುಪ್ಪು, ಸಾವು, ಬೇನೆ–ಮುಂತಾದ ದುಃಖಗಳಿಂದ ಮೂಢರು (ಈ) ಅವಿವೇಕಿಗಳು ತೊಳಲುತ್ತಿರುವರು, (ಸಂಸಾರದಲ್ಲಿ) ಸುತ್ತುತ್ತಿರುವರು. ತಗ್ಗುತಿಟ್ಟಿನ (ದಾರಿಯಲ್ಲಿ) ಕುರುಡನೇ, ಕಣ್ಣಿ ಲ್ಲದವನೇ, ಕರೆದುಕೊಂಡು ಹೋಗುತ್ತಿರುವ ಬಲುಮಂದಿ ಕುರುಡರು ಹೇಗೆ ಹೆಚ್ಚಿನ ಅನರ್ಥವನ್ನು ಪಡೆಯುವರೋ ಅದರಂತೆ (ಇವರೂ ತೊಳಲುತ್ತಿರುವರು).[2]

ನ ಸಾಮ್ಪರಾಯಃ ಪ್ರತಿಭಾತಿ ಬಾಲಂ
ಪ್ರಮಾದ್ಯನ್ತಂ ವಿತ್ತಮೋಹೇನ ಮೂಢಮ್ ।
ಅಯಂ ಲೋಕೋ ನಾಸ್ತಿ ಪರ ಇತಿ ಮಾನೀ
ಪುನಃ ಪುನರ್ವಶಮಾಪದ್ಯತೇ ಮೇ ॥ ೬ ॥

೬. ಪ್ರಮತ್ತನಾಗಿರುವ, ವಿತ್ತದೆ ಮೋಹದಿಂದ ಮೂಢನಾಗಿರುವ, ಬಾಲನಿಗೆ ಸಾಂಪರಾಯವು ತೋರುವದಿಲ್ಲ. ಇದೇ ಲೋಕವು, ಪರ(ಲೋಕ) ವಿಲ್ಲ–ಎಂದು ತಿಳಿದುಕೊಂಡು ಮತ್ತೆಮತ್ತೆ ನನ್ನ ವಶವನ್ನೈದುವನು.

(ಭಾಷ್ಯ)

೫೪. ಅತ ಏವ ಮೂಢತ್ವಾತ್ ನ ಸಾಮ್ಪರಾಯಃ ಪ್ರತಿಭಾತಿ । ಸಂಪರೇ ಯತೇ ಇತಿ ಸಮ್ಪರಾಯಃ ಪರಲೋಕಃ ತತ್ಪ್ರಾಪ್ತಿಪ್ರಯೋಜನಃ ಸಾಧನವಿಶೇಷಃ

---

1. (ಆ॥) ವಯಂ ಎಂಬ ಮಾತು ಹೆಚ್ಚಾಗಿದೆ ; ಅದಿಲ್ಲದಿದ್ದರೂ ಸಾಗುತ್ತದೆ.
2. ಮು. ೧-೨-೯ ರ ಭಾಷ್ಯವನ್ನು ಇಪಕ್ಕೆ ಹೋಲಿಸಿ ನೋಡಿರಿ.

ಶಾಸ್ತ್ರೀಯಃ ಸಾಮ್ಪರಾಯಃ । ಸ ಚ ಬಾಲಮ್ ಅವಿವೇಕಿನಂ ಪ್ರತಿ ನ ಭಾತಿ ನ ಪ್ರಕಾಶತೇ ನೋಪತಿಷ್ಠತೇ ಇತ್ಯೇತತ್ । ಪ್ರಮಾದ್ಯನ್ತಂ ಪ್ರಮಾದಂ ಕುರ್ವನ್ತಂ ಪುತ್ರಪಶ್ವಾದಿಪ್ರಯೋಜನೇಷು ಆಸಕ್ತಮನಸಮ್ । ತಥಾ ವಿತ್ತಮೋಹೇನ ವಿತ್ತ ನಿಮಿತ್ತೇನ ಅವಿವೇಕೇನ ಮೂಢಂ ತಮಸಾಚ್ಛನ್ನಂ ಸನ್ತಮ್ । ಅಯಮೇವ ಲೋಕಃ ಯೋಽಯಂ ದೃಶ್ಯಮಾನಃ ಸ್ತ್ರ್ಯನ್ನಪಾನಾದಿವಿಶಿಷ್ಟಃ ನಾಸ್ತಿ ಪರಃ ಅದೃಷ್ಟೋ ಲೋಕಃ ಇತಿ ಏವಂ ಮನನಶೀಲೋ ಮಾನೀ ಪುನಃ ಪುನಃ ಜನಿತ್ವಾ ವಶಮ್ ಅಧೀನತಾಮ್ ಆಪದ್ಯತೇ ಮೇ ಮೃತ್ಯೋರ್ಮಮ । ಜನನಮರಣಾದಿಲಕ್ಷಣ ದುಃಖಪ್ರಬನ್ಧಾರೂಢ ಏವ ಭವತಿ ಇತ್ಯರ್ಥಃ । ಪ್ರಾಯೇಣ ಹ್ಯೇವಂವಿಧ ಏವ ಲೋಕಃ ॥

(ಭಾಷ್ಯಾರ್ಥ)

ಹೀಗೆ ಮೂಢನಾಗಿರುವದರಿಂದಲೇ ಸಾಂಪರಾಯವು ತೋರುವದಿಲ್ಲ. "ಸಂ ಪರಾ ಈಯತೇ" ಸತ್ತಬಳಿಕ ಸರಿಯಾಗಿ ನೇರಿಕೊಳ್ಳತಕ್ಕದ್ದಾದ್ದರಿಂದ ಪರಲೋಕವು ಸಂಪರಾಯವೆನಿಸುವದು, ಅದನ್ನು ಪಡೆಯುವದಕ್ಕೆ ಕಾರಣವಾಗಿರುವ ಶಾಸ್ತ್ರದಲ್ಲಿ ಹೇಳಿರುವ ಆಯಾ ಸಾಧನವೇ **ಸಾಂಪರಾಯವು.** ಅಂಥ (ಸಾಂಪರಾಯವು) ಬಾಲನಿಗೆ ಎಂದರೆ ಅವಿವೇಕಿಯಾದವನಿಗೆ ತೋರುವದಿಲ್ಲ, (ಅವನಿಗೆ) ಬೆಳಗುವದಿಲ್ಲ, (ಅವನ) ಹತ್ತಿರ ಬರುವದಿಲ್ಲ ಎಂದರ್ಥ. ಪ್ರಮತ್ತನಾಗಿರುವ ಎಂದರೆ ಪ್ರಮಾದವನ್ನು ಮಾಡುತ್ತಿರುವ, ಮಕ್ಕಳುಮರಿಗಳು, ದನಕರುಗಳು–ಮುಂತಾದ ಪ್ರಯೋಜನಗಳಲ್ಲಿ ಆಸಕ್ತವಾಗಿರುವ ಮನಸ್ಸಿನ, ವಿತ್ತದ ಮೋಹದಿಂದ ವಿತ್ತದ ಕಾರಣದಿಂದಾಗಿರುವ ಅವಿವೇಕದಿಂದ ಮೂಢನಾಗಿರುವ, (ಅಜ್ಞಾನದ) ಮಬ್ಬು ಕವಿದಿರುವ (ಬಾಲನಿಗೆ ಪರಲೋಕಸಾಧನವು ತೋಚುವದಿಲ್ಲ). ಇದೇ, ಎಂದರೆ ಹೆಂಗಸರು, ಅನ್ನಪಾನಗಳು ಮುಂತಾದವುಗಳಿಂದ ಕೂಡಿ "ಇಗೋ ಕಾಣುತ್ತಿದೆಯಲ್ಲ, ಈ (ಲೋಕವೇ) ಲೋಕವು, ನಾವು ಕಾಣದ ಮತ್ತೊಂದು (ಪರ) ಲೋಕವೆಂಬುದಿಲ್ಲ" ಎಂದೀಪರಿಯಲ್ಲಿ ಸ್ವಭಾವದಿಂದ ಯೋಚಿಸಿಕೊಳ್ಳುತ್ತಾ (ಅವನು) ಮತ್ತೆಮತ್ತೆ ಹುಟ್ಟಿ ನನ್ನ, ಮೃತ್ಯುವಾದ ನನ್ನ, ವಶವನ್ನು ಅಧೀನತೆಯನ್ನು, ಹೊಂದುತ್ತಿರುವನು. ಹುಟ್ಟುವದು, ಸಾಯುವದು–ಮುಂತಾದ ರೂಪದ ದುಃಖದ ಸಾಲನ್ನೇರಿಕೊಂಡೇ ಇರುವನು ಎಂದರ್ಥ.

ಬಲುಮಟ್ಟಿಗೆ ಜನರು ಈ ವಿಧವಾಗಿಯೇ ಇರುತ್ತಾರೆ.[1]

---

1. ಇದು ಮುಂದಿನ ಮಂತ್ರಕ್ಕೆ ಸಂಬಂಧವನ್ನು ತೋರಿಸುವದಕ್ಕೆ ಬಂದಿದೆ.

(ಭಾಷ್ಯ)

೫೫. ಯಸ್ತು ಶ್ರೇಯೋರ್ಥೀ ಸ ಸಹಸ್ರೇಷು ಕಶ್ಚಿದೇವ ಆತ್ಮವಿದ್ ಭವತಿ ತ್ವದ್ವಿಧಃ। ಯಸ್ಮಾತ್—

(ಭಾಷ್ಯಾರ್ಥ)

ಆದರೆ ಯಾವನು ಶ್ರೇಯಸ್ಸನ್ನೇ ಬಯಸುವನೋ ಅಂಥವನು ಸಾವಿರದಲ್ಲಿ[1] ನಿನ್ನಂಥ ಯಾವನೋ ಒಬ್ಬನೇ ಆತ್ಮಜ್ಞಾನಿಯಾಗುವನು. ಏಕೆಂದರೆ :—

ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ
ಶೃಣ್ವನ್ತೋಽಪಿ ಬಹವೋ ಯಂ ನ ವಿದ್ಯುಃ।
ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ
ಆಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ ॥ ೭ ॥

೭. ಬಹು ಜನರಿಗೆ ಶ್ರವಣಕ್ಕೂ ಯಾವಾತನು ಸಿಕ್ಕುವಂತಿಲ್ಲವೋ, ಕೇಳಿದಮೇಲೂ ಯಾವಾತನನ್ನು ಬಹುಜನರು ಅರಿಯದೆ ಇರುವರೋ (ಅಂಥ) ಇವನನ್ನು ಹೇಳುವವನು ಆಶ್ಚರ್ಯರೂಪನು, ಪಡೆಯುವವನು ಕುಶಲನು, ಕುಶಲನಿಂದ ಹೇಳಿಸಿಕೊಂಡು ತಿಳಿದುಕೊಳ್ಳುವಾತನು ಆಶ್ಚರ್ಯ ರೂಪನು.

(ಭಾಷ್ಯ)

೫೬. ಶ್ರವಣಾಯಾಪಿ ಶ್ರವಣಾರ್ಥಂ ಶ್ರೋತುಮಪಿ ಯಃ ನ ಲಭ್ಯಃ ಆತ್ಮಾ ಬಹುಭಿಃ ಅನೇಕೈಃ। ಶೃಣ್ವನ್ತೋಽಪಿ ಬಹವಃ ಅನೇಕೇ ಅನ್ಯೇ ಯಮ್ ಆತ್ಮಾನಂ ನ ವಿದ್ಯುಃ ನ ವಿದನ್ತಿ ಅಭಾಗಿನಃ ಅಸಂಸ್ಕೃತಾತ್ಮಾನಃ ನ ವಿಜಾನೀಯುಃ। ಕಿಂ ಚ ಅಸ್ಯ ವಕ್ತಾಪಿ ಆಶ್ಚರ್ಯಃ ಅದ್ಭುತವದೇವ ಅನೇಕೇಷು ಕಶ್ಚಿದೇವ ಭವತಿ। ತಥಾ ಶ್ರುತ್ವಾಪಿ ಅಸ್ಯ ಆತ್ಮನಃ ಕುಶಲಃ ನಿಪುಣ ಏವ ಅನೇಕೇಷು ಲಬ್ಧಾ ಕಶ್ಚಿದೇವ ಭವತಿ। ಯಸ್ಮಾತ್ ಆಶ್ಚರ್ಯಃ ಜ್ಞಾತಾ ಕಶ್ಚಿದೇವ ಕುಶಲಾನುಶಿಷ್ಟಃ ಕುಶಲೇನ ನಿಪುಣೇನ ಆಚಾರ್ಯೇಣ ಅನುಶಿಷ್ಟಃ ಸನ್ ॥

(ಭಾಷ್ಯಾರ್ಥ)

ಶ್ರವಣಕ್ಕೆ ಕೂಡ ಎಂದರೆ ಶ್ರವಣದ ಪ್ರಯೋಜನಕ್ಕೆ, ಕೇಳುವದಕ್ಕೆ ಕೂಡ, ಯಾವ (ಈ) ಆತ್ಮನು ಬಹುಜನರಿಗೆ ಅನೇಕರಿಗೆ ಸಿಕ್ಕುವಂತಿಲ್ಲ. ಕೇಳಿದಮೇಲೂ ಬಹುಜನರು ಇನ್ನೂ ಅನೇಕರು ಯಾವ (ಈ) ಆತ್ಮನನ್ನು ಅರಿಯದೆ ಇರುವರು,

---

1. ಗೀ. ೭-೩.

ತಿಳಿಯಲಾರರು; ಮಂದಭಾಗ್ಯರಾದ (ಅವರು) **ಮನಸ್ಸಿನ ಸಂಸ್ಕಾರವಿಲ್ಲದವರಾದ್ದರಿಂದ ಅರಿಯಲಾರದೆ ಇರುವರು.** ಮತ್ತು ಈ (ಆತ್ಮನನ್ನು) ಹೇಳುವವನೂ ಆಶ್ಚರ್ಯರೂಪನು, ಅದ್ಭುತಸ್ವರೂಪನೇ ಎಂಬಂತೆ ಬಲುಮಂದಿಯಲ್ಲಿ ಯಾರೋ ಒಬ್ಬನು ಮಾತ್ರ ಇರುತ್ತಾನೆ. ಇದರಂತೆ ಕೇಳಿದಮೇಲೆಯೂ ಈ ಆತ್ಮನನ್ನು ಪಡೆಯುವವನು ಕುಶಲನು, ಜಾಣನೇ; ಅನೇಕರಲ್ಲಿ ಯಾರೋ ಒಬ್ಬನು ಮಾತ್ರ ಇರುತ್ತಾನೆ; ಏಕೆಂದರೆ ಕುಶಲನಾದ ಜಾಣನಾದ, ಗುರುವಿನಿಂದ ಹೇಳಿಸಿಕೊಂಡು ತಿಳಿದುಕೊಳ್ಳುವಾತನು ಯಾರೋ ಒಬ್ಬನು ಮಾತ್ರ.

ನ ನರೇಣಾವರೇಣ ಪ್ರೋಕ್ತ ಏಷ
ಸುವಿಜ್ಞೇಯೋ ಬಹುಧಾ ಚಿನ್ತ್ಯಮಾನಃ।
ಅನನ್ಯಪ್ರೋಕ್ತೇ ಗತಿರತ್ರ ನಾಸ್ತಿ
ಅಣೋಯಾನ್ ಹ್ಯತರ್ಕ್ಯಮಣುಪ್ರಮಾಣಾತ್ ॥ ೮ ॥

೮. ಕಡಿಮೆಯ ನರನಿಂದ ಹೇಳಲ್ಪಟ್ಟರೆ ಬಹುವಾಗಿ ಚಿಂತಿಸಲ್ಪಡುತ್ತಿರುವ ಈತನು ಸುವಿಜ್ಞೇಯನಲ್ಲ. ಅನನ್ಯಪ್ರೋಕ್ತನಾದರೆ ಈತನಲ್ಲಿ ಗತಿ ಎಂಬುದು ಇರುವದಿಲ್ಲ. ಅಣುಪ್ರಮಾಣವಾದದ್ದಕ್ಕಿಂತ ಅಣುವಾಗಿರುವ (ಈತನು) ಅತರ್ಕ್ಯನು.

(ಭಾಷ್ಯ)

೫೭. ಕಸ್ಮಾತ್? ನ ಹಿ ನರೇಣ ಮನುಷ್ಯೇಣ ಅವರೇಣ ಪ್ರೋಕ್ತಃ ಅವರೇಣ ಹೀನೇನ, ಪ್ರಾಕೃತಬುದ್ಧಿನಾ ಇತ್ಯೇತತ್। ಉಕ್ತಃ ಏಷಃ ಆತ್ಮಾ ಯಂ ತ್ವಂ ಮಾಂ ಪೃಚ್ಛಸಿ। (ಸುವಿಜ್ಞೇಯಃ) ನ ಹಿ ಸುಷ್ಠು ಸಮ್ಯಕ್ ವಿಜ್ಞೇಯಃ ವಿಜ್ಞಾತುಂ ಶಕ್ಯಃ। ಯಸ್ಮಾತ್ ಬಹುಧಾ ಅಸ್ತಿ, ನಾಸ್ತಿ, ಕರ್ತಾ, ಅಕರ್ತಾ, ಶುದ್ಧಃ, ಅಶುದ್ಧಃ— ಇತ್ಯಾದ್ಯನೇಕಧಾ ಚಿನ್ತ್ಯಮಾನಃ ವಾದಿಭಿಃ। ಕಥಂ ಪುನಃ ಸುವಿಜ್ಞೇಯ ಇತಿ? ಉಚ್ಯತೇ। ಅನನ್ಯಪ್ರೋಕ್ತೇ ಅನನ್ಯೇನ ಅಪೃಥಗ್ದರ್ಶಿನಾ ಆಚಾರ್ಯೇಣ ಪ್ರತಿಪಾದ್ಯ ಬ್ರಹ್ಮಾತ್ಮಭೂತೇನ ಪ್ರೋಕ್ತೇ ಉಕ್ತೇ ಆತ್ಮನಿ ಗತಿಃ ಅನೇಕಧಾ 'ಅಸ್ತಿ' 'ನಾಸ್ತಿ' ಇತ್ಯಾದಿಲಕ್ಷಣಾ ಚಿನ್ತಾ (ಗತಿಃ?) ಅತ್ರ ಅಸ್ಮಿನ್ನಾತ್ಮನಿ ನಾಸ್ತಿ ನ ವಿದ್ಯತೇ। ಸರ್ವವಿಕಲ್ಪ (ಗತಿ?) ಪ್ರತ್ಯಸ್ತಮಿತತ್ವಾದಾತ್ಮನಃ। ಅಥವಾ ಸ್ವಾತ್ಮಭೂತೇ ಅನನ್ಯಸ್ಮಿನ್ ಆತ್ಮನಿ ಪ್ರೋಕ್ತೇ ಅನನ್ಯಪ್ರೋಕ್ತೇ ಗತಿಃ ಅತ್ರ ಅನ್ಯಾವಗತಿಃ ನಾಸ್ತಿ। ಜ್ಞೇಯಸ್ಯ ಅನ್ಯಸ್ಯ ಅಭಾವಾತ್। ಜ್ಞಾನಸ್ಯ ಹ್ಯೇಷಾ ಪರಾ ನಿಷ್ಠಾ ಯದಾತ್ಮೈಕತ್ವವಿಜ್ಞಾನಮ್। ಅತಃ ಅವಗನ್ತವ್ಯಾಭಾವಾತ್ ನ ಗತಿರತ್ರ ಅವಶಿಷ್ಯತೇ। ಸಂಸಾರಗತಿರ್ವಾ ನಾಸ್ತಿ ಅನನ್ಯೇ ಆತ್ಮನಿ ಪ್ರೋಕ್ತೇ। ನಾನ್ತರೀಯಕತ್ವಾತ್ ತದ್ವಿಜ್ಞಾನಫಲಸ್ಯ

ಮೋಕ್ಷಸ್ಯ । ಅಥವಾ ಪ್ರೋಚ್ಯಮಾನಬ್ರಹ್ಮಾತ್ಮಭೂತೇನ ಆಚಾರ್ಯೇಣ ಅನನ್ಯತಯಾ[1] ಪ್ರೋಕ್ತೇ ಆತ್ಮನಿ ಅಗತಿಃ ಅನವಬೋಧಃ ಅಪರಿಜ್ಞಾನಮ್ ಅತ್ರ ನಾಸ್ತಿ । ಭವತ್ಯೇವ ಅವಗತಿಸ್ತದ್ವಿಷಯಾ ಶ್ರೋತುಃ "ತದನನ್ಯೋಽಹಮ್" ಇತಿ ಆಚಾರ್ಯಸ್ಯೈವ ಇತ್ಯರ್ಥಃ । ಏವಂ ಸುವಿಜ್ಞೇಯ ಆತ್ಮಾ ಆಗಮವತಾ ಆಚಾರ್ಯೇಣ ಅನನ್ಯತಯಾ ಪ್ರೋಕ್ತಃ ॥

(ಭಾಷ್ಯಾರ್ಥ)

ಏಕೆಂದರೆ[2]. ಕಡಿಮೆಯ ನರನಿಂದ ಮನುಷ್ಯನಿಂದ– ಕಡಿಮೆಯ ಎಂದರೆ ಕೇಳು ತೆರನಾದ, ಸಾಮಾನ್ಯಬುದ್ಧಿಯ ಎಂದರ್ಥ– ಹೇಳಲ್ಪಟ್ಟರೆ,[3] ನೀನು ಯಾವ (ಆತ್ಮನನ್ನು) ನನ್ನನ್ನು ಕೇಳುತ್ತಿರುವೆಯೋ ಆ ಈ ಆತ್ಮನು ಸುವಿಜ್ಞೇಯನಲ್ಲ, (ಸು ಎಂದರೆ) ಚೆನ್ನಾಗಿ ವಿಜ್ಞೇಯನಲ್ಲ, ಅರಿತುಕೊಳ್ಳುವದಕ್ಕೆ ಆಗುವವನಲ್ಲ. ಏಕೆಂದರೆ 'ಇದಾನೆ', 'ಇಲ್ಲ', 'ಕರ್ತೃ', 'ಕರ್ತೃವಲ್ಲ', 'ಶುದ್ಧನು', 'ಅಶುದ್ಧನು'–ಎಂದು ಮುಂತಾಗಿ ವಾದಿಗಳು (ಈತನನ್ನು) ಬಹುವಾಗಿ ಅನೇಕ ರೀತಿಯಲ್ಲಿ ಚಿಂತಿಸುತ್ತಿರುವರು.[4]

ಹಾಗಾದರೆ (ಈತನನ್ನು) ಸುಲಭವಾಗಿ ತಿಳಿಯುವದು ಹೇಗೆ? ಎಂದರೆ ಹೇಳುತ್ತಾನೆ (೧) ಅನನ್ಯಪ್ರೋಕ್ತನಾದರೆ, ಎಂದರೆ ಅನನ್ಯನಾದ ಎಂದರೆ ನಾನು (ಆತ್ಮನಿಗಿಂತ) ಬೇರೆಯಲ್ಲವೆಂದು ಕಂಡುಕೊಂಡಿರುವ, ಪ್ರತಿಪಾದ್ಯವಾದ ಬ್ರಹ್ಮದ ಸ್ವರೂಪವೇ ಆಗಿರುವ, ಆಚಾರ್ಯನಿಂದ ಪ್ರೋಕ್ತನಾದರೆ ಎಂದರೆ ಹೇಳಲ್ಪಟ್ಟರೆ ಇಲ್ಲಿ ಎಂದರೆ ಈ ಆತ್ಮನಲ್ಲಿ ಗತಿಯು 'ಇದಾನೆ' 'ಇಲ್ಲ'–ಮುಂತಾದ ಅನೇಕ ರೀತಿಯ ಚಿಂತೆಯು[5] ಇರುವದಿಲ್ಲ. ಏಕೆಂದರೆ ಎಲ್ಲಾ ವಿಕಲ್ಪಗಳೂ[6] ಅಡಗಿ ಹೋದ ರೂಪವೇ ಆತ್ಮನದು. (೨) ಅಥವಾ (ಅನನ್ಯಪ್ರೋಕ್ತೇ ಎಂದರೆ) ತನ್ನ

---

1. (ವಾ॥) ವಾರ
2. ಶ್ರವಣಮಾಡಿದರೂ ತಿಳಿಯುವದಿಲ್ಲವೆನ್ನುವದೇಕೆ ?–ಎಂದರೆ.
3. 'ಪ್ರೋಕ್ತಃ ಉಕ್ತಃ' ಎಂದು ಭಾಷ್ಯಕಾರರು ಬರೆದಿದ್ದರೂ ಇರಬಹುದು. ಅಥವಾ ಪ್ರೋಕ್ತಃ ಎಂಬ ಮಾತು ದೂರವಾಯಿತೆಂದು ಮತ್ತೊಂದುಸಲ ಅನ್ವಯಕ್ಕಾಗಿ ಹೀಗೆ ಬರೆದುಕೊಂಡಿದ್ದರೂ ಇರಬಹುದು.
4. ಆತ್ಮನು ಯಾವ ವಿಶೇಷವೂ ಇಲ್ಲದ ಸ್ವರೂಪದವನಾದರೂ ವಾದಿಗಳು ಅದನ್ನರಿಯದೆ ಹೀಗಿರುವನು, ಹೀಗಿಲ್ಲ ಎಂದು ವಿಕಲ್ಪಿಸುತ್ತಿರುವರು. ಐ. ಒಂದನೆಯ ಅಧ್ಯಾಯದ ಕೊನೆಯಲ್ಲಿರುವ ಚರ್ಚಾಭಾಷ್ಯದಲ್ಲಿ ಈ ವಿಕಲ್ಪಗಳನ್ನು ವಿವರಿಸಿದೆ.
5. ಪ್ರಶ್ನೆಯ ಚಿಹ್ನೆಯನ್ನು ಹಾಕಿರುವ ಕಡೆಯಲ್ಲಿ ಗತಿಶಬ್ದವು ಭಾಷ್ಯದಲ್ಲಿಲ್ಲದಿದ್ದರೂ ಸಾಗುತ್ತದೆ.
6. ಮು. ೧-೩-೪ ನೋಡಿ. ಆತ್ಮಜ್ಞಾನವಾದಮೇಲೆ ಸಂಶಯಗಳು ಉಳಿಯುವದೇ ಇಲ್ಲ.

ಆತ್ಮನೇ ಆಗಿರುವ ಅನನ್ಯನಾದ ಆತ್ಮನು ಪ್ರೋಕ್ತನಾದರೆ (ಹೇಳಲ್ಪಟ್ಟರೆ), ಇಲ್ಲಿ ಗತಿಯು ಎಂದರೆ ಮತ್ತೊಂದನ್ನು ಅರಿಯುವ (ಅವಗತಿಯು) ಇರುವುದಿಲ್ಲ, ಏಕೆಂದರೆ ತಿಳಿಯಬೇಕಾದದ್ದು ಇನ್ನೊಂದು ಇರುವುದಿಲ್ಲ.[1] ಆತನು ಒಬ್ಬನೇ ಎಂದು ತಿಳಿಯುವ ಇದೇ ಜ್ಞಾನದ ಕಡೆಯ ನಿಲುಗಡೆಯಲ್ಲವೆ? ಆದ್ದರಿಂದ ತಿಳಿಯಬೇಕಾದ ಮತ್ತೊಂದು ಇರುವದಿಲ್ಲವಾದ್ದರಿಂದ ಇಲ್ಲಿ ಗತಿಯು ಉಳಿದಿರುವದಿಲ್ಲ. (೩) ಅಥವಾ ಇಲ್ಲಿ ಸಂಸಾರಗತಿಯಿರುವದಿಲ್ಲ (ವೆಂದಾದರೂ ವ್ಯಾಖ್ಯಾನಮಾಡ ಬಹುದು). ಅನನ್ಯನಾದ ಆತ್ಮನು ಪ್ರೋಕ್ತನಾದರೆ (ಗತಿಯಿರುವದಿಲ್ಲ); ಏಕೆಂದರೆ ಆತ್ಮನನ್ನು ತಿಳಿದಿದ್ದರ ಫಲವಾದ ಮೋಕ್ಷವು ಕೂಡಲೆ ಆಗಿಯೇ ಬಿಡುತ್ತದೆ.[2] (೪) ಅಥವಾ ಹೇಳಬೇಕಾಗಿರುವ ಬ್ರಹ್ಮದ ಸ್ವರೂಪವೇ ಆಗಿರುವ ಆಚಾರ್ಯನಿಂದ ಆತ್ಮನು ಅನನ್ಯನೆಂದು ಪ್ರೋಕ್ತನಾದರೆ ಅಗತಿಯು[3] ಎಂದರೆ ತಿಳಿಯದೆ ಇರುವದೆಂಬುದು, ಗೊತ್ತಾಗದೆ ಇರುವದೆಂಬುದು ಇಲ್ಲಿ ಇರುವದಿಲ್ಲ; ಎಂದರೆ ಆಚಾರ್ಯನಿಗೆ ಹೇಗೋ ಹಾಗೆ ಶ್ರವಣ ಮಾಡಿದವನಿಗೂ "ನಾನು ಅನನ್ಯನು" ಎಂದು ಅದರ ವಿಷಯವಾದ ಅರಿವು ಆಗಿಯೇ ತೀರುವುದು ಎಂದರ್ಥ.

ಆಗನುವುಳ್ಳ[4] ಆಚಾರ್ಯನು ಅನನ್ಯವಾಗಿ ಪ್ರೋಕ್ತನಾದರೆ ಆತ್ಮನು ಹೀಗೆ ಸುವಿಜ್ಞೇಯನಾಗಿರುವನು.

(ಭಾಷ್ಯ)

೫೮ ಇತರಥಾ (ಹಿ) ಅಣೀಯಾ್ ಅಣುಪ್ರಮಾಣಾದಪಿ ಸಮ್ಪದ್ಯತ ಆತ್ಮಾ ಅತರ್ಕ್ಯಮ್ ಅತರ್ಕ್ಯಃ, ಸ್ವಬುದ್ಧ್ಯಭ್ಯೂಹೇನ ಕೇವಲೇನ ತರ್ಕೇಣ । ತರ್ಕ್ಯಮಾಣೇಽಣುಪರಿಮಾಣೇ ಕೇನಚಿತ್ ಸ್ಥಾಪಿತೇ ಆತ್ಮನಿ ತತೋ ಹ್ಯಣುತರಮನ್ಯೋಽಭ್ಯೂಹತಿ, ತತೋಽಪ್ಯನ್ಯೋಽಣುತರಮ್ ಇತಿ । ನ ಹಿ ತರ್ಕಸ್ಯ ನಿಷ್ಠಾ ಕಾಚಿದ್ ವಿದ್ಯತೇ ॥

1 ಆತ್ಮನನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆ ಆಗುವದರಿಂದ ಇನ್ನೊಂದನ್ನು ತಿಳಿದಂತೆ ಆಗುವದರಿಂದ ಇನ್ನೊಂದನ್ನು ತಿಳಿಯಬೇಕೆಂಬುದು ಉಳಿದುಕೊಳ್ಳುವದಿಲ್ಲ. ಏಕೆಂದರೆ ಆತ್ಮನೇ ಎಲ್ಲದರ ಪರಮಾರ್ಥ. ಇಲ್ಲಿ ಅನನ್ಯನಾವ ಎಂದರೆ ತನಗಿಂತ ಬೇರೆಯಾಗಿರುವ ಎರಡನೆಯದಿಲ್ಲವ ಎಂದರ್ಥ. ಮು. ೧-೧-೩, ಛಾ. ೬-೧-೩, ಬೃ. ೧-೪-೭, ೨-೪-೫.

2. ಮೋಕ್ಷವು ಆತ್ಮಸ್ವರೂಪವಾದ ಆನಂದವಾಗಿರುವದರಿಂದ ಆತ್ಮಜ್ಞಾನಿಯು ಮೋಕ್ಷಕ್ಕಾಗಿ ಮತ್ತೊಂದು ಲೋಕಕ್ಕೆ ಹೋಗಬೇಕಾದದ್ದಿರುವದಿಲ್ಲ.

3. "ಪ್ರೋಕ್ತೇ ಗತಿಃ" ಎಂದು ಪದಚ್ಛೇದವನ್ನು ಮಾಡಿ ಮೂರು ಅರ್ಥಗಳನ್ನು ಹೇಳಿತ್ತು; ಈಗ "ಪ್ರೋಕ್ತೇ + ಅಗತಿಃ" ಎಂದು ಪದಚ್ಛೇದಮಾಡಿ ಅರ್ಥಮಾಡಿರುತ್ತದೆ.

4. ಆತ್ಮನು ತನಗಿಂತ ಬೇರೆಯಲ್ಲವೆಂಬ ಗುರುಪರಂಪರೆಯ ಉಪದೇಶವೇ **ಆಗಮವು.** ಕೇ. ಪದಭಾಷ್ಯ ಭಾ. ೨೯, ೪೪ ವನ್ನು ನೋಡಿರಿ. "ಅವಗಮವತಾ" ಎಂದು (ಗೋ॥) ವ್ಯಾಖ್ಯಾನವು ತಿದ್ದಿಕೊಂಡಿದೆ.

(ಭಾಷ್ಯಾರ್ಥ)

ಹಾಗಿಲ್ಲದಿದ್ದರೆ ಆತ್ಮನು ಅಣುಪ್ರಮಾಣನಾಗಿರುವದಕ್ಕಿಂತಲೂ ಅಣುವಾಗಿ ಬಿಡುತ್ತಾನೆ. (ಅವನು) 'ಅತರ್ಕ್ಯಮ್' = 'ಅತರ್ಕ್ಯಃ' **ತನ್ನ ಬುದ್ಧಿಯಿಂದಲೇ ಅಭಿಮಾನದಿಂದ ಊಹಿಸುವದೆಂಬ ಬರಿಯ ತರ್ಕಕ್ಕೆ**[1] **ತಕ್ಕವನೇ ಅಲ್ಲ.** ತರ್ಕದಿಂದ ಊಹಿಸುವಾಗ (ಈ) ಆತ್ಮನು ಅಣುಪರಿಮಾಣನೆಂದು ಯಾವನಾದ ರೊಬ್ಬನು ನಿಶ್ಚಯಿಸಿದರೆ ಅದಕ್ಕಿಂತಲೂ ಅಣುವಾಗಿರುವನೆಂದು ಮತ್ತೊಬ್ಬನು ಊಹಿಸುತ್ತಾನೆ, ಮತ್ತೂ ಒಬ್ಬನು ಅದಕ್ಕಿಂತಲೂ ಅಣುವಾಗಿರುವನೆಂದು ಊಹಿಸುತ್ತಾನೆ, ಹೀಗಿರುವದರಿಂದ **ತರ್ಕಕ್ಕೆ ನಿಲುಗಡೆ ಯಾವದೂ ಇರುವದೇ ಇಲ್ಲ.**[2]

ನೈಷಾ ತರ್ಕೇಣ ಮತಿರಾಪನೇಯಾ
ಪ್ರೋಕ್ತಾನ್ಯೇನೈವ ಸುಜ್ಞಾನಾಯ ಪ್ರೇಷ್ಠ ।
ಯಾಂ ತ್ವಮಾಪಃ ಸತ್ಯಧೃತಿರ್ಬತಾಸಿ
ತ್ವಾದೃಙ್ ನೋ ಭೂಯಾನ್ನಚಿಕೇತಃ ಪ್ರಷ್ಟಾ ॥ ೯ ॥

೯. ಈ ಮತಿಯು ತರ್ಕದಿಂದ ಹೊಂದತಕ್ಕದ್ದಲ್ಲ, ಬೇರೊಬ್ಬನಿಂದಲೇ ಹೇಳಲ್ಪಟ್ಟರೆ, ಪ್ರೇಷ್ಠನೆ, ಸರಿಯಾದ ಜ್ಞಾನವನ್ನುಂಟುಮಾಡುವದು. ಯಾವ (ಇದನ್ನು) ನೀನು ಪಡೆದುಕೊಂಡಿರುತ್ತೀಯೆ. ಆಹ! ಸತ್ಯಧೃತಿಯಾಗಿರುವೆ. ನಚಿಕೇತನೆ, ನಿನ್ನಂಥ ಕೇಳತಕ್ಕವನು ನಮಗೆ ಉಂಟಾಗಲಿ!

(ಭಾಷ್ಯ)

೫೯. ಅತೋಽನನ್ಯಪ್ರೋಕ್ತೇ ಆತ್ಮನ್ಯತ್ಪನ್ನಾ ಯೇಯಮ್ ಆಗಮಪ್ರತಿಪಾದ್ಯಾ ಆತ್ಮಮತಿಃ ನೈಷಾ ತರ್ಕೇಣ ಸ್ವಬುದ್ಧ್ಯಭ್ಯೂಹಮಾತ್ರೇಣ ಆಪನೇಯಾ ನ ಪ್ರಾಪಣೀಯಾ ಇತ್ಯರ್ಥಃ । ನಾಪನೇತವ್ಯಾ ವಾ ನ ಹಾತವ್ಯಾ । ತಾರ್ಕಿಕೋ ಹ್ಯನಾಗಮಜ್ಞಃ ಸ್ವಬುದ್ಧಿಪರಿಕಲ್ಪಿತಂ ಯತ್ಕಿಂಚಿದೇವ ಕಥಯತಿ । ಅತ ಏವ ಚ ಯೇಯಮ್ ಆಗಮಪ್ರಭೂತಾ ಮತಿಃ ಅನ್ಯೇನೈವ ಆಗಮಾಭಿಜ್ಞೇನ ಆಚಾರ್ಯೇಣೈವ ತಾರ್ಕಿಕಾತ್ ಪ್ರೋಕ್ತಾ ಸುಜ್ಞಾನಾಯ ಭವತಿ ಹೇ ಪ್ರೇಷ್ಠ ಪ್ರಿಯತಮ । ಕಾ ಪುನಃ ಸಾ ತರ್ಕಾಗಮ್ಯಾ ಮತಿರಿತಿ? ಉಚ್ಯತೇ । ಯಾಂ ತ್ವಂ ಮತಿಂ ಮದ್ವರಪ್ರದಾನೇನ ಆಪಃ ಪ್ರಾಪ್ತವಾನಸಿ । (ಸತ್ಯಧೃತಿಃ) ಸತ್ಯಾ ಅವಿತಥವಿಷಯಾ ಧೃತಿಃ

---

1. ಅನುಭವದ ಆಧಾರವಿಲ್ಲದ ತರ್ಕವು ಬರಿಯ ತರ್ಕವು.
2. ಬ್ರ. ಸೂ. ೨-೧-೧೧ ನೋಡಿ.

ಯಸ್ಯ ತವ ಸ ತ್ವಂ ಸತ್ಯಧೃತಿಃ 'ಬತ ಅಸಿ' ಇತ್ಯನುಕಮ್ಪಯನ್ನಾಹ ಮೃತ್ಯುಃ ನಚಿಕೇತಸಂ ವಕ್ಷ್ಯಮಾಣವಿಜ್ಞಾನಸ್ತುತಯೇ। ತ್ವಾದೃಕ್ ತ್ವತ್ತುಲ್ಯಃ ನಃ ಅಸ್ಮಭ್ಯಂ ಭೂಯಾತ್ ಭವತಾತ್ ಭವತು ಅನ್ಯಃ ಪುತ್ರಃ ಶಿಷ್ಯೋ ವಾ ಪ್ರಷ್ಟಾ। ಕೀದೃಕ್? ಯಾದೃಕ್ ತ್ವಮ್। ಹೇ ನಚಿಕೇತಃ ಪ್ರಷ್ಟಾ॥

ಆದ್ದರಿಂದ ಅನನ್ಯಪ್ರೋಕ್ತನಾದ [1] ಆತ್ಮನ (ವಿಷಯದ)ಲ್ಲಿ ಉಂಟಾಗುವ ಯಾವ ಈ **ಆಗಮಪ್ರತಿಪಾದ್ಯವಾದ**[2] ಆತ್ಮಜ್ಞಾನವಿದೆಯೋ ಇದು ತರ್ಕದಿಂದ ಎಂದರೆ ತನ್ನ ಬುದ್ಧಿಯ ಬರಿಯ ಅಭಿಮಾನದ ಊಹೆಯಿಂದ ಹೊಂದತಕ್ಕದ್ದಲ್ಲ, ಪಡೆಯುವದಕ್ಕೆ ಬರುವದಲ್ಲ ಎಂದರ್ಥ. ಅಥವಾ ("ನಾಪನೇಯಾ" ಎಂಬ ಮೂಲಕ್ಕೆ) ಪರಿಹರಿಸಲಾಗದ್ದು, ನಾಶಗೊಳಿಸಲಾಗದ್ದು [3] ಎಂದಾದರೂ (ಅರ್ಥವನ್ನು ಮಾಡಬಹುದು). ಏಕೆಂದರೆ ತಾರ್ಕಿಕನು **ಆಗಮ**ವನ್ನು ಅರಿಯದೆ ತನ್ನ ಬುದ್ಧಿಯಿಂದ ಕಲ್ಪಿಸಿಕೊಂಡ ಯಾವದೋ ಒಂದನ್ನೇ ಹೇಳುತ್ತಾನೆ. ಆದ್ದರಿಂದಲೇ, ಎಲೈ ಪ್ರೇಷ್ಠನೆ, ಪ್ರಿಯತಮ (ನಾದ ನಚಿಕೇತನೆ), ಆಗಮದಿಂದುಂಟಾಗುವ ಯಾವ ಈ ಬುದ್ಧಿಯುಂಟೋ (ಇದು) **ತಾರ್ಕಿಕನಿಗಿಂತ ಬೇರೆಯವನಾದ ಆಗಮವನ್ನು ಬಲ್ಲ ಆಚಾರ್ಯನಿಂದಲೇ ಹೇಳಲ್ಪಟ್ಟರೆ ಸರಿಯಾದ ಜ್ಞಾನವನ್ನುಂಟು ಮಾಡುವದು**

ತರ್ಕಕ್ಕೆ ನಿಲುಕದ ಆ ಜ್ಞಾನವು ಯಾವದು? ಎಂದರೆ ಹೇಳುತ್ತಾನೆ, ಈ ಜ್ಞಾನವನ್ನು ನೀನು ನನ್ನ ವರಪ್ರದಾನದಿಂದ ಪಡೆದುಕೊಂಡಿರುತ್ತೀಯೆ, ಹೊಂದಿದವನಾಗಿರುತ್ತೀಯೆ. (ನೀನು) ಸತ್ಯಧೃತಿಯು–ಸತ್ಯವಾದ ಸುಳ್ಳಲ್ಲದ್ದರ ವಿಷಯವಾದ ಧೃತಿಯುಳ್ಳವನು [4] ನೀನು; ಆದ್ದರಿಂದ ಸತ್ಯಧೃತಿಯು. ಆಹಾ! (ಸತ್ಯಧೃತಿಯಾ) ಗಿರುವೆ! ಎಂದು ಮೃತ್ಯುವು (ತಾನು) ಮುಂದೆ ಹೇಳುವ ಜ್ಞಾನವನ್ನು ಹೊಗಳುವದಕ್ಕಾಗಿ [5] ನಚಿಕೇತನನ್ನು ಮುದ್ದಿನಿಂದ (ಮೆಚ್ಚಿ) ಮಾತನಾಡಿಸುತ್ತಿದ್ದಾನೆ. ನಚಿಕೇತನೆ, ನಿನ್ನಂಥವನು ನಿನಗೆ ಸಮಾನನಾದವನು ಮತ್ತೊಬ್ಬ ಪುತ್ರನೋ

---

1. ಹಿಂದೆ ಹೇಳಿದಂತೆ ಆತ್ಮನಿಗಿಂತ ಅನನ್ಯನಾದ ಆಚಾರ್ಯನು 'ನೀನು ಅನನ್ಯನು' ಎಂದು ಉಪದೇಶಿಸುವ.

2. ಗುರುಪರಂಪರೆಯ ಉಪದೇಶದಿಂದ ತಿಳಿಯುವ.

3. ಒಂದು ಸಲ ಜ್ಞಾನವುಂಟಾದರೆ ಸರಿ ಆದನ್ನು ಯಾವ ತರ್ಕವೂ ಹೊಡೆದುಹಾಕಲಾರದು. "ಏಷಾ ಮತಿಃ ತರ್ಕೇಣ ನ ಆಪನೇಯಾ" ಎಂದು ಪದಚ್ಛೇದ; ಮೊದಲನೆಯ ಅರ್ಥಕ್ಕೆ "ನ ಆಪನೇಯಾ" ಎಂದು ಪದಚ್ಛೇದ.

4. ಸತ್ಯವಾದ ಆತ್ಮವಿದ್ಯೆಯನ್ನೇ ಹಿಡಿದುಕೊಂಡವನು

5. ಇಂಥ ಆಗಮಗಮ್ಯವಿದ್ಯೆಯನ್ನು ಪಡೆದೆಯಲ್ಲ! ಎಂದು ಹೊಗಳುವದಕ್ಕಾಗಿ.

ಶಿಷ್ಯನೋ (ತತ್ತ್ವವನ್ನು) ಕೇಳುವವನು ನಮಗೆ ಉಂಟಾಗಲಿ! ಎಂಥವನು? ಎಂದರೆ ನೀನು ಹೇಗಿರುವೆಯೋ ಹಾಗೆಯೇ (ಇರುವ) ಪ್ರಶ್ನಿಗಾರನು.

(ಭಾಷ್ಯ)

೬೯. ಪುನರಪಿ ತುಷ್ಟ ಆಹ—

(ಭಾಷ್ಯಾರ್ಥ)

ಸಂತೋಷದಿಂದ ಮತ್ತು (ಹೀಗೆ) ಹೇಳುತ್ತಾನೆ—

ಜಾನಾಮ್ಯಹಗ್ಂ ಶೇವಧಿರಿತ್ಯನಿತ್ಯಂ
ನ ಹ್ಯಧ್ರುವೈಃ ಪ್ರಾಪ್ಯತೇ ಹಿ ಧ್ರುವಂ ತತ್ ।
ತತೋ ಮಯಾ ನಾಚಿಕೇತಶ್ಚಿತೋಽಗ್ನಿ-
ರನಿತ್ಯೈರ್ದ್ರವ್ಯೈಃ ಪ್ರಾಪ್ತವಾನಸ್ಮಿ ನಿತ್ಯಮ್ ॥ ೧೦ ॥

೧೦. ಶೇವಧಿಯು ಅನಿತ್ಯವೆಂದು ನಾನು ಬಲ್ಲೆನು; ಏಕೆಂದರೆ ಅಧ್ರುವವಾದವುಗಳಿಂದ ಧ್ರುವವಾದ ಅದು ಪಡೆಯತಕ್ಕದ್ದಲ್ಲ. ಆದ್ದರಿಂದ ನಾಚಿಕೇತ ಅಗ್ನಿಯು ನನ್ನಿಂದ ಚಿತವಾಯಿತು; ಅನಿತ್ಯವಾದ ದ್ರವ್ಯಗಳಿಂದ ನಿತ್ಯವಾದದ್ದನ್ನು ಪಡೆದುಕೊಂಡಿರುತ್ತೇನೆ.

(ಭಾಷ್ಯ)

೬೧. ಜಾನಾಮಿ ಅಹಂ ಶೇವಧಿಃ ನಿಧಿಃ ಕರ್ಮಫಲಲಕ್ಷಣಃ ನಿಧಿರಿವ ಪ್ರಾರ್ಥ್ಯತ ಇತಿ । ಅಸೌ ಅನಿತ್ಯಮ್ ಅನಿತ್ಯಃ ಇತಿ ಜಾನಾಮಿ । ನ ಹಿ ಯಸ್ಮಾತ್ ಅನಿತ್ಯೈಃ ಅಧ್ರುವೈಃ ನಿತ್ಯಂ ಧ್ರುವಂ ತತ್ ಪ್ರಾಪ್ಯತೇ ಪರಮಾತ್ಮಾಖ್ಯಃ ಶೇವಧಿಃ । ಯಸ್ತು ಅನಿತ್ಯಸುಖಾತ್ಮಕಃ ಶೇವಧಿಃ ಸ ಏವ ಅನಿತ್ಯೈಃ ದ್ರವ್ಯೈಃ ಪ್ರಾಪ್ಯತೇ । ಹಿ ಯತಃ ತತಃ ತಸ್ಮಾತ್ ಮಯಾ ಜಾನತಾಪಿ ನಿತ್ಯಮ್ ಅನಿತ್ಯಸಾಧನೈಃ ನ ಪ್ರಾಪ್ಯತ ಇತಿ ನಾಚಿಕೇತಃ ಚಿತಃ ಅಗ್ನಿಃ । ಅನಿತ್ಯೈಃ ದ್ರವ್ಯೈಃ ಪಶ್ವಾದಿಭಿಃ ಸ್ವರ್ಗಸಾಧನ ಭೂತೋಽಗ್ನಿಃ ನಿರ್ವರ್ತಿತಃ ಇತ್ಯರ್ಥಃ । ತೇನ ಅಹಮ್ ಅಧಿಕಾರಾಪನ್ನೋ ನಿತ್ಯಂ ಯಾವ್ಯಂ ಸ್ಥಾನಂ ಸ್ವರ್ಗಾಖ್ಯಂ ನಿತ್ಯಮ್ ಅಪೇಕ್ಷಿಕಂ ಪ್ರಾಪ್ತವಾನ್ ಅಸ್ಮಿ ॥

(ಭಾಷ್ಯಾರ್ಥ)

ಶೇವಧಿಯು ಎಂದರೆ ಕರ್ಮಫಲವೆಂಬ ನಿಧಿಯು; ಏಕೆಂದರೆ (ಅದನ್ನು) ನಿಧಿಯನ್ನು (ಬಯಸುವಂತೆ ಜನರು) ಬಯಸುತ್ತಾರೆ. ಇದು (' ಅನಿತ್ಯಮ್ = ಅನಿತ್ಯಃ) ಅನಿತ್ಯವೆಂದು ನಾನು ಬಲ್ಲೆನು. ಏಕೆಂದರೆ **ಅಧ್ರುವವಾದ ಎಂದರೆ ಅನಿತ್ಯವಾದ ವಸ್ತುಗಳಿಂದ ಆ ಧ್ರುವವಾದದ್ದು ಎಂದರೆ ನಿತ್ಯವಾದದ್ದು**

ಪರಮಾತ್ಮನೆಂಬ ಶೇವಧಿಯು ಪಡೆಯತಕ್ಕದ್ದೇ ಅಲ್ಲ. ಯಾವದಾದರೆ ಅನಿತ್ಯ ಸುಖರೂಪವಾದ ಶೇವಧಿಯುಂಟೋ ಅದೇ ಅನಿತ್ಯವಾದ ದ್ರವ್ಯಗಳಿಂದ ಪಡೆಯುವದಕ್ಕೆ ಬರುತ್ತದೆ. ಹೀಗಿರುತ್ತದೆಯಲ್ಲವೆ ? ಆದ್ದರಿಂದ ಈ ಕಾರಣದಿಂದ[1] ನಿತ್ಯವಾದದ್ದು ಅನಿತ್ಯವಾದ ಸಾಧನಗಳಿಂದ ಪಡೆಯುವದಕ್ಕಾಗಲಾರದೆಂದು[2] ತಿಳಿದು ತಿಳಿದೂ ನನ್ನಿಂದ ನಾಚಿಕೇತಾಗ್ನಿಯು ಚಿತವಾಯಿತು. ಅದರ ಅನುಷ್ಠಾನವು ಮಾಡಲ್ಪಟ್ಟಿತು ಎಂದರ್ಥ. ಆದ್ದರಿಂದ ನಾನು (ಈ) ಅಧಿಕಾರವನ್ನು[3] ಪಡೆದು ನಿತ್ಯವನ್ನು–ಸ್ವರ್ಗವೆಂಬ ಯಾವ್ಯಸ್ಥಾನವನ್ನು–ಅಪೇಕ್ಷಿಕ ನಿತ್ಯ[4] (ಪದವಿಯನ್ನು) ಪಡೆದುಕೊಂಡಿರುತ್ತೇನೆ.

ಕಾಮಸ್ಯಾಪ್ತಿಂ ಜಗತಃ ಪ್ರತಿಷ್ಠಾಂ
ಕ್ರತೋರಾನನ್ತ್ಯಮಭಯಸ್ಯ ಪಾರಮ್ ।
ಸ್ತೋಮಮಹದುರುಗಾಯಂ ಪ್ರತಿಷ್ಠಾಂ ದೃಷ್ಟ್ವಾ
ಧೃತ್ಯಾ ಧೀರೋ ನಚಿಕೇತೋ-ತ್ಯಸ್ರಾಕ್ಷೀಃ ॥ ೧೧ ॥

೧೧. ಕಾಮದ ಆಪ್ತಿ, ಜಗತ್ತಿನ ಪ್ರತಿಷ್ಠೆ, ಯಜ್ಞದ ಕೊನೆಗಾಣುವ (ಫಲ) ಅಭಯದ ಪಾರ, ಸ್ತೋಮವಾಗಿರುವ ದೊಡ್ಡದಾಗಿರುವ ಹೆಚ್ಚಿನ ಗತಿ, ಪ್ರತಿಷ್ಠೆ–(ಇದೆಲ್ಲವನ್ನೂ) ಕಂಡು ಧೀರನಾಗಿ, ನಚಿಕೇತನೆ, ಧೈರ್ಯದಿಂದ ಕೈಬಿಟ್ಟಿದ್ದೀಯೆ.

(ಭಾಷ್ಯ)

೬೨. ತ್ವಂ ತು ಕಾಮಸ್ಯ ಆಪ್ತಿಂ ಸಮಾಪ್ತಿಮ್ । ಅತ್ರ ಹಿ ಸರ್ವೇ ಕಾಮಾಃ ಪರಿಸಮಾಪ್ತಾಃ । ಜಗತಃ ಸಾಧ್ಯಾತ್ಮಾಧಿಭೂತಾಧಿದೈವಾದೇಃ ಪ್ರತಿಷ್ಠಾಮ್ ಆಶ್ರಯಮ್, ಸರ್ವಾತ್ಮಕತ್ವಾತ್ । ಕ್ರತೋಃ ಉಪಾಸನಾಯಾಃ ಫಲಂ ಹೈರಣ್ಯಗರ್ಭಂ ಪದಮ್ ಅನನ್ಯಮ್ ಆನನ್ತ್ಯಮ್ । ಅಭಯಸ್ಯ ಚ ಪಾರಂ ಪರಾಂ ನಿಷ್ಠಾಮ್ । ಸ್ತೋಮಂ ಸ್ತುತ್ಯಮ್ । ಮಹತ್ ಅಣಿಮಾದ್ಯೈಶ್ವರ್ಯಾದ್ಯನೇಕ

---

1. ಅನಿತ್ಯದಿಂದ ನಿತ್ಯವು ದೊರಕದೆಂದು ತಿಳಿದೂ ನಾನು ನಾಚಿಕೇತಾಗ್ನಿಯನ್ನು ಸೇವಿಸಿ ಈ ಯಾವ್ಯಪದವಿಯನ್ನು ಪಡೆದೆನು. ನೀನು ನಾನು ಕೊಡುತ್ತೇನೆಂದರೂ ಇಂಥ ಪದವಿಯನ್ನು ಒಲ್ಲದೆ ಅದನ್ನು ಮೀರುವ ಆತ್ಮಜ್ಞಾನವನ್ನೇ ಕೇಳಿದೆಯಲ್ಲ !—ಎಂದು ಮೆಚ್ಚಿ ಹೇಳಿದ ಮಾತಿದು.

2. ಮು. ೨-೧-೧೨.

3. ಜ್ಞಾನಿಗಳಾಗಿ ಅಧಿಕಾರಪುರುಷರಾದವರ ವಿಷಯವನ್ನು ಸೂ ಭಾ. ೩-೩-೩೨ರಲ್ಲಿ ಚರ್ಚಿಸಿದೆ.

4. ಸ್ವರ್ಗಸುಖವು ಮಿಕ್ಕ ಸುಖಗಳಿಗೆ ಹೋಲಿಸಿದರೆ ನಿತ್ಯವು.

ಗುಣಸಹಿತಮ್ । ಸ್ತೋಮಂ ಚ ತತ್ ಮಹಚ್ಚ ನಿರತಿಶಯತ್ವಾತ್ ಸ್ತೋಮ ಮಹತ್ । ಉರುಗಾಯಂ ವಿಸ್ತೀರ್ಣಾಂ ಗತಿಮ್ । ಪ್ರತಿಷ್ಠಾಂ ಸ್ಥಿತಿಮ್ ಆತ್ಮನೋ ಽನುತ್ತಮಾಮಪಿ ದೃಷ್ಟ್ವಾ ಧೃತ್ಯಾ ಧೈರ್ಯೇಣ ಧೀರಃ ಧೀರ್ಮಾ ಸ್ಯ ನಚಿಕೇತಃ ಅತ್ಯಸ್ರಾಕ್ಷೀಃ ಪರಮೇವಾಕಾಙ್ಕ್ಷ್ಯಾ ಅತಿಸೃಷ್ಟವಾನಸಿ ಸರ್ವಮೇತತ್ ಸಂಸಾರಭೋಗ ಜಾತಮ್ । ಅಹೋ ಬತ ಅನುತ್ತಮಗುಣೋಽಸಿ ॥

(ಭಾಷ್ಯಾರ್ಥ)

ಆದರೆ ನೀನು ಕಾಮದ ಆಪ್ತಿ ಎಂದರೆ ಸಮಾಪ್ತಿ, ಏಕೆಂದರೆ ಈ (ಹಿರಣ್ಯಗರ್ಭಪದವಿಯಲ್ಲಿ) ಎಲ್ಲಾ ಕಾಮಗಳೂ ಪರಿಸಮಾಪ್ತವಾಗಿರುವುವು. ಅಧ್ಯಾತ್ಮ, ಅಧಿಭೂತ, ಅಧಿದೈವ–ಮುಂತಾದ (?) ಜಗತ್ತಿನ ಪ್ರತಿಷ್ಠೆ ಎಂದರೆ ಆಶ್ರಯ, ಏಕೆಂದರ (ಹಿರಣ್ಯಗರ್ಭನು) **ಇದೆಲ್ಲದರ ರೂಪವಾಗಿಯೂ ಇರುತ್ತಾನೆ.** ಕ್ರತುವಿನ ಎಂದರೆ ಉಪಾಸನೆಯ ಅನಿತ್ಯವು ಎಂದರೆ ಕೊನೆಗಾಣದ ಫಲ, ಎಂದರೆ **ಹಿರಣ್ಯಗರ್ಭದ** ಸ್ಥಾನ[1] ಅಭಯದ ಪಾರ, ಎಂದರೆ, ಕೊನೆಯ ನಿಲುಗಡೆ– ಸ್ತೋಮ ಎಂದರೆ ಹೊಗಳತಕ್ಕದ್ದು, ಮಹತ್ ಎಂದರೆ ಅಣಿಮಾದ್ಯೈಶ್ವರ್ಯವೇ ಮುಂತಾದ ಅನೇಕ ಗುಣಗಳಿಂದ ಕೂಡಿರುವದು, ಸ್ತೋಮವೂ ಎಲ್ಲಕ್ಕೂ ಮಿಗಿಲಾ ದ್ದರಿಂದ ಮಹತ್ತು ಆಗಿರುವದರಿಂದ ಸ್ತೋಮ ಮಹತ್ತು. ಉರುಗಾಯವೆಂದರೆ ವಿಸ್ತೀರ್ಣವಾದ ಗತಿ. ಪ್ರತಿಷ್ಠೆ ಎಂದರೆ ನಿನಗೆ ಸಿಕ್ಕಬಹುದಾದ ಉತ್ತಮ ಸ್ಥಿತಿ. (ಇದೆಲ್ಲವನ್ನೂ) ನೋಡಿ ಧೃತಿಯಿಂದ ಧೀರನಾಗಿ ಎಂದರೆ ತಿಳಿವಳಿಕೆಯುಳ್ಳವನಾಗಿ, ನಚಿಕೇತನೆ, ಕೈಬಿಟ್ಟರುತ್ತೀಯೆ, ಪರತತ್ತ್ವವನ್ನೇ ಬಯಸಿ ಈ ಸಂಸಾರಭೋಗ ಸಮೂಹವನ್ನೆಲ್ಲ ತ್ಯಜಿಸಿರುತ್ತೀಯೆ ಆಹಾ! ಎಂಥ ಗುಣವುಳ್ಳವನಾಗಿರುವೆ!

ತಂ ದುರ್ದರ್ಶಂ ಗೂಢಮನುಪ್ರವಿಷ್ಟಂ
ಗುಹಾಹಿತಂ ಗಹ್ವರೇಷ್ಠಂ ಪುರಾಣಮ್ ।
ಅಧ್ಯಾತ್ಮಯೋಗಾಧಿಗಮೇನ ದೇವಂ
ಮತ್ವಾ ಧೀರೋ ಹರ್ಷ ಶೋಕೌ ಜಹಾತಿ ॥ ೧೨ ॥

---

1 ಹಿಂದಿನ ವಲ್ಲಿಯಲ್ಲಿ ೧೪ನೆಯ ಮಂತ್ರದಲ್ಲಿ ಹೇಳಿದ್ದನ್ನು ಇಲ್ಲಿ ಅನುವಾದಮಾಡಿ ಕೊಂಡಿದೆ. ನಾಚಿಕೇತಾಗ್ನಿಯಿಂದ ವಿರಾಟ್ಪುರುಷನ ಸ್ಥಾನವು ದೊರಕುವದೆಂದು ಹಿಂದೆ ಹೇಳಿದ್ದರೂ ಕೇವಲ ಸ್ಥೂಲೋಪಾಧಿಯಾವ ಪುರುಷನೆಂದೇ ಅರ್ಥವನ್ನು ಮಾಡಬೇಕಾದದ್ದಿಲ್ಲ. ಉಪಾಸನೆಯಿಂದ ಪಡೆಯುವ ಹಿರಣ್ಯಗರ್ಭಪದವಿಯ ಪ್ರಾಪ್ತಿಯವರೆಗೂ ಹಿಂದಿನ ವರದ ವಿಷಯವು ಹೋಗಿರುತ್ತದೆ ಇದನ್ನು ತಿಳಿಸುವದಕ್ಕೆ ಇಲ್ಲಿ "ಹಿರಣ್ಯಗರ್ಭ" ಎಂಬ ಮಾತನ್ನು ಪ್ರಚುರವಾಗಿ ಉಪಯೋಗಿಸಿದೆ. ನಚಿಕೇತನು ವರದ್ವಯದಿಂದ ಅಕೃತಾರ್ಥನಾಗಿ ಪರಮಾತ್ಮ ತತ್ತ್ವವನ್ನೇ ಕೇಳಿದ್ದರಿಂದ ಅವನಿಗೆ "ಇಹಾಮುತ್ರಫಲಭೋಗವಿರಾಗ"ವೆಂಬ ಸಾಧನವೂ ಮುಮುಕ್ಷುತೆಯೂ ಪರಿಪೂರ್ಣವಾಗಿದ್ದವೆಂದು ಹೇಳಿದಂತೆ ಆಯಿತು.

೧೨. ಆ ದುರ್ಧರ್ಷನಾದ, ಗೂಢವನ್ನು ಹೊಕ್ಕಿರುವ, ಗುಹಾಹಿ
ನಾದ, ಗಹ್ವರದಲ್ಲಿರುವ ಪುರಾಣನಾದ ದೇವನನ್ನು ಅಧ್ಯಾತ್ಮಯೋಗ
ಪ್ರಾಪ್ತಿಯಿಂದ ತಿಳಿದುಕೊಂಡ ಧೀರನು ಹರ್ಷಶೋಕಗಳನ್ನು ಬಿಡುತ್ತಾನೆ.

(ಭಾಷ್ಯ)

೬೩. ಯಂ ತ್ವಂ ಜ್ಞಾತುಮಿಚ್ಛಸ್ಯಾತ್ಮಾನಮ್, ತಂ ದುರ್ದರ್ಶ
ದುಃಖೇನ ದರ್ಶನಮ್ ಅಸ್ಯ ಇತಿ ದುರ್ದರ್ಶಃ, ಅತಿಸೂಕ್ಷ್ಮತ್ವಾತ್ । ಗೂಢಂ ಗ
ನಮ್ ಅನುಪ್ರವಿಷ್ಟಮ್ ಪ್ರಾಕೃತವಿಷಯವಿಜ್ಞಾನೈಃ[1] ಪ್ರಚ್ಛನ್ನಮ್ ಇತ್ಯೇತತ್
ಗುಹಾಹಿತಂ ಗುಹಾಯಾಂ ಬುದ್ಧೌ ಹಿತಂ ನಿಹಿತಂ ಸ್ಥಿತಮ್ । ತತ್ಪ್ರೋಪಲಭ
ಮಾನತ್ವಾತ್ । ಗಹ್ವರೇಷ್ಠಂ ಗಹ್ವರೇ ವಿಷಮೇ ಅನೇಕಾನರ್ಥಸಙ್ಕಟೇ ತಿಷ್ಠತಿ ಇ
ಗಹ್ವರೇಷ್ಠಮ್ । ಯತ ಏವಂ ಗೂಢಮನುಪ್ರವಿಷ್ಟೋ ಗುಹಾಹಿತಶ್ಚ ಅತೋ ಗಹ
ರೇಷ್ಠಃ । ಅತೋ ದುರ್ದರ್ಶಃ । ತಂ ಪುರಾಣಂ ಪುರಾತನಮ್ । ಅಧ್ಯಾತ್ಮಯೋಗ
ಧಿಗಮೇನ । ವಿಷಯೇಭ್ಯಃ ಪ್ರತಿಸಂಹೃತ್ಯ ಚೇತಸ ಆತ್ಮನಿ ಸಮಾಧಾನಮ್ ಅಧ್ಯಾತ್ಮ
ಯೋಗಃ । ತಸ್ಯಾಧಿಗಮಃ ಪ್ರಾಪ್ತಿಃ ತೇನ ಮತ್ವಾ ದೇವಮ್ ಆತ್ಮಾನಂ ಧೀರ
ಧೀರ್ಮಾ ಹರ್ಷಶೋಕೌ ಆತ್ಮನ ಉತ್ಕರ್ಷಾಪಕರ್ಷಯೋರಭಾವಾತ್ ಜಹಾತಿ ॥

(ಭಾಷ್ಯಾರ್ಥ)

ಯಾವ ಆತ್ಮನನ್ನು ನೀನು ಅರಿಯಲಿಚ್ಛಿಸಿರುವೆಯೋ ಅವನು ದುರ್ದರ್ಶನು-
ಕಷ್ಟದಿಂದ (ಮಾತ್ರವೇ) ಅವನನ್ನು ನೋಡಲಾಗುವದು. ಆದ್ದರಿಂದ ದುರ್ದರ್ಶನು
ಏಕೆಂದರೆ (ಅವನು) ಅತಿಸೂಕ್ಷ್ಮನಾಗಿರುತ್ತಾನೆ. ಗೂಢವನ್ನು ಎಂದರೆ ಗೊತ್ತು
ಹಿಡಿಯುವದಕ್ಕಾಗದ ಸ್ಥಳವನ್ನು ಹೊಕ್ಕಿರುವನು; ಪ್ರಾಕೃತವಿಷಯಗಳ ಅರಿವು
ಗಳಿಂದ[2] ಮುಚ್ಚಿಹೋಗಿರುತ್ತಾನೆ ಎಂದರ್ಥ. ಗುಹಾಹಿತನು ಗುಹೆಯಲ್ಲಿ ಎಂದರೆ
ಬುದ್ಧಿಯಲ್ಲಿ ಹಿತನು ಎಂದರೆ ಇಡಲ್ಪಟ್ಟವನು, ಇರುವವನು, ಏಕೆಂದರೆ ಅಲ್ಲಿಯೇ
ಕಾಣಬರುತ್ತಾನೆ.[3] ಗಹ್ವರೇಷ್ಠನು, ಗಹ್ವರದಲ್ಲಿ ಎಂದರೆ ಕಷ್ಟವಾದ ಅನೇಕ ಅನರ್ಥ
ಗಳ ಗುಂಪಿನಲ್ಲಿ, ಇದ್ದುಕೊಂಡಿರುವವನು, ಹೀಗೆ (ಇವನು) ಗೂಢವನ್ನು ಹೊಕ್ಕು
ಗುಹಾಹಿತನಾಗಿರುವದರಿಂದ ಗಹ್ವರೇಷ್ಠನಾಗಿರುತ್ತಾನೆ, ಆದ್ದರಿಂದಲೇ ದುರ್ದರ್ಶನಾಗಿ
ರುತ್ತಾನೆ.[4] ಆ ಪುರಾಣನಾದ ಹಳಬನಾದ ದೇವನನ್ನು ಎಂದರೆ ಆತ್ಮನನ್ನು

---

1. (ವಾ॥) ಪಾಠ.
2. "ಪ್ರಾಕೃತವಿಷಯವಿಕಾರವಿಜ್ಞಾನೈಃ" ಎಂಬ (ಆ॥) ಪಾಠದಲ್ಲಿ "ವಿಕಾರ" ಹೆಚ್ಚು. ವಿಷಯಗಳ ಕಡೆಗೆ ತಿರುಗಿರುವದೆಂಬ ಕಾಮನೇ ಜ್ಞಾನಕ್ಕೆ ಅಡ್ಡಿ ಎಂದು ಭಾವ.
3. ತೈ. ಭಾ. ೨-೧ರಲ್ಲಿ "ನಿಹಿತಂ ಗುಹಾಯಾಮ್" ಎಂಬುದರ ಭಾಷ್ಯವನ್ನು ನೋಡಿರಿ.
4. ಅವಿದ್ಯಾಕಾಮಗಳು ಆತ್ಮನ ದರ್ಶನಕ್ಕೆ ಅಡ್ಡಿಯಾಗಿವೆ.

'ಅಧ್ಯಾತ್ಮಯೋಗಾಧಿಗಮೇನ' (ಅಧ್ಯಾತ್ಮಯೋಗದ ಅಧಿಗಮದಿಂದ)–**ವಿಷಯಗಳಿಂದ ಈಚೆಗೆ ಮನಸ್ಸನ್ನು ಎಳೆದುಕೊಂಡು ಆತ್ಮನಲ್ಲಿಯೇ ನಿಲ್ಲಿಸುವದು ಅಧ್ಯಾತ್ಮಯೋಗವು;** ಅದರ ಅಧಿಗಮವೆಂದರೆ ಪ್ರಾಪ್ತಿಯು. ಅದರಿಂದ ದೇವನನ್ನು ಎಂದರೆ ಆತ್ಮನನ್ನು ತಿಳಿದುಕೊಂಡ ಧೀರನು ಬುದ್ಧಿವಂತನು ಹರ್ಷಶೋಕಗಳನ್ನು–ಆತ್ಮನಿಗೆ ಹೆಚ್ಚಾಗಲಿ ಕಡಿಮೆಯಾಗಲಿ ಇಲ್ಲದ್ದರಿಂದ (ಈತತ್ತ್ವವನ್ನರಿತು ಹರ್ಷ ಶೋಕಗಳನ್ನು)–ಬಿಡುತ್ತಾನೆ.

ಏತಚ್ಛ್ರುತ್ವಾ ಸಮ್ಪರಿಗೃಹ್ಯ ಮರ್ತ್ಯಃ
ಪ್ರವೃಹ್ಯ ಧರ್ಮ್ಯಮಣುಮೇತಮಾಪ್ಯ ।
ಸ ಮೋದತೇ ಮೋದನೀಯಗ್ಂ ಹಿ ಲಬ್ಧ್ವಾ
ವಿವೃತಗ್ಂ ಸದ್ಮ ನಚಿಕೇತಸಂ ಮನ್ಯೇ ॥ ೧೩ ॥

೧೩. ಮರ್ತ್ಯನು, ಇದನ್ನು ಕೇಳಿ ಚೆನ್ನಾಗಿ ಪರಿಗ್ರಹಿಸಿ ಮೇಲಕ್ಕೆತ್ತಿ ಧರ್ಮ್ಯನಾಗಿಯೂ ಅಣುವಾಗಿಯೂ ಇರುವ ಈತನನ್ನು ಹೊಂದಿದರೆ, ಆತನು ಮೋದನೀಯವನ್ನು ಪಡೆದುಕೊಂಡು ಮೋದಪಡುತ್ತಿರುವನು. ನಚಿಕೇತನಿಗೆ ಮನೆಯು ತೆರೆದುಕೊಂಡಿರುವದೆಂದು ಎಣಿಸುವೆನು.

(ಭಾಷ್ಯ)

೬೪. ಕಿಂ ಚ ಏತದಾತ್ಮತತ್ತ್ವಂ ಯದಹಂ ವಕ್ಷ್ಯಾಮಿ ತತ್ ಶ್ರುತ್ವಾ ಆಚಾರ್ಯಸಕಾಶಾತ್[1] ಸಮ್ಯಕ್ ಆತ್ಮಭಾವೇನ ಪರಿಗೃಹ್ಯ ಉಪಾದಾಯ ಮರ್ತ್ಯಃ ಮರಣದರ್ಮಾ ಧರ್ಮಾದನಪೇತಂ ಧರ್ಮ್ಯಂ ಪ್ರವೃಹ್ಯ ಉದ್ಯಮ್ಯ ಪೃಥಕ್ಕೃತ್ಯ ಶರೀರಾದೇಃ ಅಣುಂ ಸೂಕ್ಷ್ಮಮ್ ಏತಮ್ ಆತ್ಮಾನಮ್ ಆಪ್ಯ ಪ್ರಾಪ್ಯ ಸ ಮರ್ತ್ಯಃ ವಿದ್ವಾನ್ ಮೋದತೇ ಮೋದನೀಯಂ ಹರ್ಷಣೀಯಮ್ ಆತ್ಮಾನಂ ಲಬ್ಧ್ವಾ । ತದೇತತ್ ಏವಂವಿಧಂ ಬ್ರಹ್ಮ ಸದ್ಮ ಭವನಂ ನಚಿಕೇತಸಂ ತ್ವಾಂ ಪ್ರತಿ ಅಪಾವೃತದ್ವಾರಂ ವಿವೃತಮ್ ಅಭಿಮುಖೀಭೂತಂ ಮನ್ಯೇ । ಮೋಕ್ಷಾರ್ಹಂ ತ್ವಾಂ ಮನ್ಯೇ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಮತ್ತು ಮುಂದೆ (೧೪ನೆಯ ಮಂತ್ರದಿಂದ ಹಿಡಿದು) ನಾನು ಹೇಳುವ ಈ ತತ್ತ್ವವಿದೆಯಲ್ಲ, ಇದನ್ನು ಆಚಾರ್ಯರಿಂದ[1] ಕೇಳಿ, "ಸಂಪರಿಗೃಹ್ಯ" (ಸಮ್)

1. "ಆಚಾರ್ಯಪ್ರಸಾದಾತ್" ಎಂಬ (ಆ॥) ಪಾಠಕ್ಕೆ 'ಆಚಾರ್ಯರ ಅನುಗ್ರಹದಿಂದ ಎಂದರ್ಥ.

ಚೆನ್ನಾಗಿ, ತನ್ನ ಸ್ವರೂಪದಿಂದಲೇ ಪರಿಗ್ರಹಿಸಿ ತೆಗೆದುಕೊಂಡು, ಧರ್ಮವಾಗಿಯೂ ಎಂದರೆ ಧರ್ಮಕ್ಕೆ ಹೊಂದಿರುವದಾಗಿಯೂ ಅಣುವಾಗಿಯೂ ಎಂದರೆ ಸೂಕ್ಷ್ಮವಾಗಿಯೂ[1] ಇರುವ ಈತನನ್ನು (ಈ) ಆತ್ಮನನ್ನು, ಮರ್ತ್ಯನು ಎಂದರೆ ಮರಣಸ್ವಭಾವವುಳ್ಳ (ಮನುಷ್ಯನು) 'ಪ್ರವೃಹ್ಯ' ಮೇಲಕ್ಕೆತ್ತಿ, ಶರೀರಾದಿಗಳಿಂದ ವಿಂಗಡಿಸಿಕೊಂಡು ಹೊಂದಿದರೆ ಪಡೆದುಕೊಂಡರೆ, ಆತನು (ಆ) ಮರ್ತ್ಯನಾದ ಜ್ಞಾನಿಯು ಮೋದನೀಯವನ್ನು ಹರ್ಷವನ್ನುಂಟುಮಾಡುವ ಆತ್ಮನನ್ನು ಪಡೆದುಕೊಂಡು ಮೋದಪಡುತ್ತಿರುವನು. ಇಂಥ ಈ ವಿಧವಾದ ಬ್ರಹ್ಮವೆಂಬ ಸದ್ಮವು ಮನೆಯು ನಚಿಕೇತನಿಗೆ, ನಿನಗೆ, ಬಾಗಿಲುತೆರೆದುಕೊಂಡು ಎದುರಿಗೆ ಇರುವದು ಎಂದು ಎಣಿಸಿರುವೆನು, ನೀನು ಮೋಕ್ಷಕ್ಕೆ ತಕ್ಕವನೆಂದು ಎಣಿಸಿರುವೆನು ಎಂದು ಅಭಿಪ್ರಾಯ.

ಆತ್ಮಸ್ವರೂಪವಿಷಯದ ಪ್ರಶ್ನೆ

ಅನ್ಯತ್ರ ಧರ್ಮಾದನ್ಯತ್ರಾಧರ್ಮಾ-
ದನ್ಯತ್ರಾಸ್ಮಾತ್ ಕೃತಾಕೃತಾತ್ ।
ಅನ್ಯತ್ರ ಭೂತಾಚ್ಚ ಭವ್ಯಾಚ್ಚ
ಯತ್ತತ್ಪಶ್ಯಸಿ ತದ್ವದ ॥ ೧೪ ॥

೧೪. ಧರ್ಮಕ್ಕಿಂತ ಬೇರೆಯಾಗಿ, ಅಧರ್ಮಕ್ಕಿಂತ ಬೇರೆಯಾಗಿ, ಈ ಕೃತಾಕೃತಕ್ಕಿಂತ ಬೇರೆಯಾಗಿ, ಭೂತಕ್ಕಿಂತಲೂ ಭವ್ಯಕ್ಕಿಂತಲೂ ಬೇರೆಯಾಗಿ (ಇರುವ) ಯಾವದನ್ನು ನೀನು ಕಂಡಿರುವೆಯೋ ಅದನ್ನು ಹೇಳು.

(ಭಾಷ್ಯ)

೬೫. ಏತಚ್ಛ್ರುತ್ವಾ ನಚಿಕೇತಾಃ ಪುನರಾಹ[2] । ಯದ್ಯಹಂ ಯೋಗ್ಯಃ ಪ್ರಸನ್ನಶ್ಚಾಸಿ, ಭಗವನ್, ಮಾಂ ಪ್ರತಿ ಅನ್ಯತ್ರ ಧರ್ಮಾತ್ ಶಾಸ್ತ್ರೀಯಾತ ಧರ್ಮಾನುಷ್ಠಾನಾತ್, ತತ್ಫಲಾತ್, ತತ್ಕಾರಕೇಭ್ಯಶ್ಚ ಪೃಥಗ್ಭೂತಮ್ । ತಥಾ ಅನ್ಯತ್ರ ಅಧರ್ಮಾತ್ ವಿಹಿತಾಕರಣರೂಪಾತ್ ಪಾಪಾತ್ । ತಥಾ ಅನ್ಯತ್ರ ಅಸ್ಮಾತ ಕೃತಾಕೃತಾತ್ । ಕೃತಂ ಕಾರ್ಯಮ್, ಅಕೃತಂ ಕಾರಣಮ್, ಅಸ್ಮಾದನ್ಯತ್ರ । ಕಿಂ ಚ ಅನ್ಯತ್ರ ಭೂತಾಚ್ಚ ಅತಿಕ್ರಾನ್ತಾತ್ ಕಾಲಾತ್ ಭವ್ಯಾಚ್ಚ ಭವಿಷ್ಯತಶ್ಚ ತಥಾ ವರ್ತಮಾನಾತ್ । ಕಾಲತ್ರಯೇಣ ಯತ್ ನ ಪರಿಚ್ಛಿದ್ಯತೇ ಇತ್ಯರ್ಥಃ । ಯದೀದೃಶಂ ವಸ್ತು ಸರ್ವವ್ಯವಹಾರಗೋಚರಾತೀತಂ ಪಶ್ಯಸಿ ಜಾನಾಸಿ ತದ್ವದ ಮಹ್ಯಮ್ ॥

---

1. ಅಣುಪರಿಮಾಣವೆಂದು ಅರ್ಥವಲ್ಲ.
2. (ವಾ॥ ಮೈ॥) ಪಾಠಗಳಲ್ಲಿ ಮಾತ್ರ ಈ ವಾಕ್ಯವಿದೆ.

(ಭಾಷ್ಯಾರ್ಥ)

ಇದನ್ನು ಕೇಳಿ ನಚಿಕೇತನು ಮತ್ತೂ ಹೇಳುತ್ತಾನೆ: ನಾನು ಯೋಗ್ಯನಾಗಿರುವದಾದರೆ, ಪೂಜ್ಯನೆ, (ನೀನು) ನನ್ನಲ್ಲಿ ಪ್ರಸನ್ನನೂ ಆಗಿರುವೆಯಾದರೆ ನನಗೆ ಧರ್ಮಕ್ಕಿಂತ ಬೇರೆಯಾಗಿ, ಎಂದರ **ಶಾಸ್ತ್ರದಲ್ಲಿ ವಿಧಿಸಿರುವ ಧರ್ಮವನ್ನು ಮಾಡುವದು,**[1] **ಅದರ ಫಲ, ಅದರ ಕಾರಕಗಳು–ಇವು (ಗಳೆಲ್ಲಕ್ಕೂ) ಬೇರೆಯಾಗಿ** ಎಂದರ್ಥ. ಮತ್ತು ಅಧರ್ಮಕ್ಕಿಂತ ಬೇರೆಯಾಗಿ, ಎಂದರೆ ವಿಹಿತವಾದದ್ದನ್ನು ಮಾಡದೆ ಇರುವ ಪಾಪಕ್ಕಿಂತ[2] (ಬೇರೆಯಾಗಿ), ಈ ಕೃತಾಕೃತಕ್ಕಿಂತ ಬೇರೆಯಾಗಿ–ಕೃತವೆಂದರೆ ಕಾರ್ಯವು, ಅಕೃತವೆಂದರೆ ಕಾರಣವು–**ಈ (ಕಾರ್ಯಕಾರಣಕ್ಕಿಂತ) ಬೇರೆಯಾಗಿ**[3] ಮತ್ತು ಭೂತ ಎಂದರೆ ಆಗಿಹೋಗಿರುವ ಕಾಲಕ್ಕಿಂತಲೂ ಭವ್ಯ ಎಂದರೆ ಮುಂದೆ ಆಗುವದಕ್ಕಿಂತಲೂ ಮತ್ತು ಈಗ ಇರುವ (ಕಾಲ) ಕ್ಕಿಂತಲೂ ಬೇರೆಯಾಗಿ, ಎಂದರೆ **ಮೂರು ಕಾಲದಿಂದಲೂ ಯಾವದು ಕಟ್ಟುವಡೆಯದೆ ಇರುವದೋ ಎಂದರ್ಥ.**[4] **ಯಾವ ವಸ್ತು ಹೀಗೆ ವ್ಯವಹಾರಕ್ಕೆ ಗೋಚರವಾಗಿರುವದೆಲ್ಲವನ್ನೂ ಮಿಾರಿರುವದೆಂದು (ನೀನು) ಕಂಡಿರುವೆಯೋ ತಿಳಿದಿರುವೆಯೋ ಅದನ್ನು ನನಗೆ ಹೇಳು.**[5]

ಓಂಕಾರದಮೂಲಕ ಬ್ರಹ್ಮದ ಉಪದೇಶ

(ಭಾಷ್ಯ)

೬೬. ಇತ್ಯೇವಂ ಪೃಷ್ಟವತೇ ಮೃತ್ಯುರುವಾಚ ಪೃಷ್ಟಂ ವಸ್ತು ವಿಶೇಷಣಾನ್ತರಂ ಚ ವಿವಕ್ಷ್ಯ—

---

1. ಧರ್ಮವೆಂದರೆ ಪುಣ್ಯವಲ್ಲ, ಶಾಸ್ತ್ರದಲ್ಲಿ ಹೇಳಿರುವ ಪುಣ್ಯಕರ್ಮ.

2 ಅವಿಹಿತವಾದದ್ದನ್ನು ಮಾಡುವದು ಎಂದೂ ಸೇರಿಸಿಕೊಳ್ಳಬೇಕು. ಈ ವಾಕ್ಯವು (ವಾ॥) ಪಾಠದಲ್ಲಿ ಮಾತ್ರ ಇದೆ.

3 ಕ್ರಿಯಾಕಾರಕಫಲಗಳಿಗಿಂತ ಬೇರೆಯಾಗಿರುವದು ಕಾರ್ಯವೂ ಅಲ್ಲ, ಕಾರಣವೂ ಅಲ್ಲ.

4 ಕಾರ್ಯಕಾರಣವಾದದ್ದು ಕಾಲಕ್ಕೆ ಕಟ್ಟುವಡೆದೇ ಇರುತ್ತದೆ. ಬ್ರಹ್ಮವು ಅಂಥದ್ದಲ್ಲ ಭೂತ ಭವಿಷ್ಯತ್ತುಗಳೆರಡನ್ನೇ ಉಪನಿಷತ್ತಿನಲ್ಲಿ ಹೇಳಿದ್ದರೂ ವರ್ತಮಾನವನ್ನೂ ಸೇರಿಸಿಕೊಳ್ಳಬೇಕು; ಏಕೆಂದರೆ ಭೂತಭವಿಷ್ಯತ್ತುಗಳಿಲ್ಲದೆ ವರ್ತಮಾನವೆಂಬುದೂ ಇರುವದಿಲ್ಲ.

5 ದೇಶಕಾಲವಸ್ತುಪರಿಚ್ಛೇದವಿಲ್ಲದ ವಸ್ತುವನ್ನು ಕುರಿತು ಇಲ್ಲಿ ಪ್ರಶ್ನೆಮಾಡಿರುತ್ತದೆ. ಇದು ಹೊಸ ಪ್ರಶ್ನೆಯಲ್ಲ; ಹಿಂದೆ ಕೇಳಿರುವ ಪ್ರಶ್ನೆಯ ವಿಶೇಷವೇ. ಸೂ. ಭಾ. ೧–೪–೬ ನೋಡಿ.

(ಭಾಷ್ಯಾರ್ಥ)

ಇಂತೀಪರಿಯಲ್ಲಿ[1] ಕೇಳಿದ ನಚಿಕೇತನಿಗೆ (ಅವನು) ಕೇಳಿದ ವಸ್ತುವನ್ನೂ (ಅದರ) ಬೇರೆಯ ವಿಶೇಷಣಗಳನ್ನೂ[2] ಹೇಳಬೇಕೆಂದು ಯಮನು ಹೇಳುತ್ತಾನೆ.

ಸರ್ವೇ ವೇದಾ ಯತ್ಪದಮಾಮನನ್ತಿ
ತಪಾಗ್ಂಸಿ ಸರ್ವಾಣಿ ಚ ಯದ್ವದನ್ತಿ ।
ಯದಿಚ್ಛನ್ತೋ ಬ್ರಹ್ಮಚರ್ಯಂ ಚರನ್ತಿ
ತತ್ತೇ ಪದಗ್ಂ ಸಙ್ಗ್ರಹೇಣ ಬ್ರವೀಮ್ಯೋಮಿತ್ಯೇತತ್ ॥

೧೫. ಎಲ್ಲಾ ವೇದಗಳೂ ಯಾವ ಸ್ಥಾನವನ್ನು ತಿಳಿಸುತ್ತವೆಯೊ ಎಲ್ಲಾ ತಪಸ್ಸುಗಳೂ ಯಾವದನ್ನು ಹೇಳುತ್ತಿವೆಯೋ, ಯಾವದನ್ನು ಬಯಸಿ ಬ್ರಹ್ಮಚರ್ಯವನ್ನು ಮಾಡುವರೋ, ಆ ಪದವನ್ನು ನಿನಗೆ ಸಂಗ್ರಹವಾಗಿ ಹೇಳುವೆನು. ಇದೇ ಓಂ ಎಂಬುದು.

(ಭಾಷ್ಯ)

೬೭ ಸರ್ವೇ ವೇದಾಃ ಯತ್ಪದಂ ಪದನೀಯಂ ಗಮನೀಯಮ್ ಅವಿಭಾಗೇನ ಆಮನನ್ತಿ ಪ್ರತಿಪಾದಯನ್ತಿ । ತಪಾಂಸಿ ಸರ್ವಾಣಿ ಚ ಯದ್ವದನ್ತಿ ಯತ್ಪ್ರಾಪ್ತ್ಯರ್ಥಾನಿ ಇತ್ಯರ್ಥಃ । ಯದಿಚ್ಛನ್ತೋ ಬ್ರಹ್ಮಚರ್ಯಂ ಗುರುಕುಲವಾಸಲಕ್ಷಣಮ ಅನ್ಯದ್ವಾ ಬ್ರಹ್ಮಪ್ರಾಪ್ತ್ಯರ್ಥಂ ಚರನ್ತಿ । ತತ್ ತೇ ತುಭ್ಯಂ ಪದಂ ಯಜ್ಜಿಜ್ಞಾಸ ಮಿಚ್ಛಸಿ ಸಙ್ಗ್ರಹೇಣ ಸಙ್ಕ್ಷೇಪತಃ ಬ್ರವೀಮಿ । ಓಮಿತ್ಯೇತತ್ । ತದೇತತ್ಪದ ಯದ್ ಬುಭುತ್ಸಿತಂ ತ್ವಯಾ ಯದೇತದ್ ಓಮಿತಿ । ಓಂಶಬ್ದವಾಚ್ಯಮ್ ಓ ಪ್ರತೀಕಂ ಚ ॥

(ಭಾಷ್ಯಾರ್ಥ)

ಎಲ್ಲಾ **ವೇದಗಳೂ**[3] ಯಾವ ಪದವನ್ನು ಪಡೆಯಬೇಕಾದ, ಹೋಗಿ ಸೇರಬೇಕಾದ ಸ್ಥಾನವನ್ನು ಒಕ್ಕೊರಲಿನಿಂದ[4] ತಿಳಿಸುತ್ತಿವೆಯೋ (ತಾತ್ಪರ್ಯದಿಂದ

---

1. ಇತಿ ಎಂಬುದು ಹಿಂದಿನ ಭಾಷ್ಯಕ್ಕೇ ಸೇರಿದ್ದರೂ ಇರಬಹುದು.

2. ಧರ್ಮಾಧರ್ಮಗಳನ್ನೂ ಕಾರ್ಯಕಾರಣಗಳನ್ನೂ ಕಾಲತ್ರಯವನ್ನೂ ಮೀರಿರುವದೆಂಬ ಮೂರು ವಿಶೇಷಣಗಳಲ್ಲದೆ ಬೇರೆಯ ವಿಶೇಷಣಗಳನ್ನೂ.

3. ಉಪನಿಷದ್ಭಾಗವಾದ ವೇದಗಳೆಲ್ಲವೂ ಬ್ರಹ್ಮವನ್ನೇ ತಾತ್ಪರ್ಯದಿಂದ ತಿಳಿಸುತ್ತವೆ ಮಂತ್ರಬ್ರಾಹ್ಮಣರೂಪವಾದ ವೇದಭಾಗವು ಫಲಾಂತರವನ್ನು ಕೊಡುವ ವಿಧಿನಿಷೇಧಗಳನ್ನು ಹೇಳಿದರೂ ನಿಷ್ಕಾಮರಿಗೆ ಚಿತ್ತಶುದ್ಧಿಯಮೂಲಕ ಬ್ರಹ್ಮಜ್ಞಾನಕ್ಕೇ ಕಾರಣವಾಗಿರುತ್ತದೆ. ಪದಭಾಷ್ಯ.

4. 'ಅವಿಭಾಗೇನ' ಎಂಬ (ಆ॥) ಪಾಠಕ್ಕಿಂತ 'ಅವಿಗಾನೇನ' ಎಂಬ ವಾ॥ ಪಾಠವೇ ಮೇಲು; (ಆ॥) ಪಾಠದಲ್ಲಿ 'ಅವಿಭಾಗೇನ ಗಮನೀಯಮ್' ಎಂದು ಅನ್ವಯಮಾಡಬೇಕು ಅದು ಪ್ರಕೃತೋಪಯುಕ್ತವಲ್ಲ.

ಹೇಳುತ್ತಿವೆಯೋ; ಎಲ್ಲಾ **ತಪಸ್ಸುಗಳೂ** ಯಾವದನ್ನು ಹೇಳುತ್ತಿವೆಯೋ ಎಂದರೆ ಯಾವದನ್ನು ಪಡೆಯುವದಕ್ಕಾಗಿ (ಮಾಡಲ್ಪಡುತ್ತಿರುವವೋ) ಎಂದರ್ಥ, ಗುರು ಕುಲವಾಸರೂಪವಾದ ಅಥವಾ ಬೇರೆ ಬಗೆಯ ಬ್ರಹ್ಮವನ್ನು–ಪಡೆಯುವದಕ್ಕಾಗಿ ಮಾಡುವ[1] **ಬ್ರಹ್ಮಚರ್ಯ**ವನ್ನು ಆಚರಿಸುವರೋ; ಆ ಪದವನ್ನು ನಿನಗೆ ನಿನ ಗಾಗಿ–ನೀನು ತಿಳಿಯಲಿಚ್ಛಿಸುತ್ತಿರುವೆಯಲ್ಲ, (ಆ ಪದವನ್ನು) ಸಂಗ್ರಹವಾಗಿ, ಸಂಕ್ಷೇಪವಾಗಿ ಹೇಳುತ್ತೇನೆ. ಇದೇ ಓಂ ಎಂಬುದು, ನೀನು ತಿಳಿದುಕೊಳ್ಳಬೇಕೆಂದು ಅಪೇಕ್ಷಿಸಿದೆಯಲ್ಲ, ಅದೇ ಈ ಓಂ ಎಂಬುದು, ಎಂದರೆ ಓಂಶಬ್ದವಾಚ್ಯವಾಗಿಯೂ[2] ಓಂಶಬ್ದವನ್ನು **ಪ್ರತೀಕ**ವಾಗಿ ಉಳ್ಳದ್ದಾಗಿಯೂ[3] ಇರುವ (ವಸ್ತು).

ಏತದ್ಧ್ಯೇವಾಕ್ಷರಂ ಬ್ರಹ್ಮ
ಏತದ್ಧ್ಯೇವಾಕ್ಷರಂ ಪರಮ್ ।
ಏತದ್ಧ್ಯೇವಾಕ್ಷರಂ ಜ್ಞಾತ್ವಾ
ಯೋ ಯದಿಚ್ಛತಿ ತಸ್ಯ ತತ್ ॥ ೧೬ ॥

೧೬. ಈ ಅಕ್ಷರವೇ ಬ್ರಹ್ಮವು, ಈ ಅಕ್ಷರವೇ ಪರವು. ಈ ಅಕ್ಷರವನ್ನೇ ತಿಳಿದುಕೊಂಡರ ಯಾವನು ಏನನ್ನು ಬಯಸುತ್ತಾನೋ ಅವನಿಗೆ ಅದು (ಆಗುವದು).

(ಭಾಷ್ಯ)

೧೮ ಅತಃ ಏತತ್ ಹಿ ಏವ ಅಕ್ಷರಂ ಬ್ರಹ್ಮ ಅಪರಮ್ ಪರಂ ಚ । ತಯೋ ರ್ಹಿ ಪ್ರತೀಕಮ್ ಏತದಕ್ಷರಮ್ । ಏತತ್ ಹಿ ಏವ ಅಕ್ಷರಂ ಜ್ಞಾತ್ವಾ ಉಪಾಸ್ಯ ಯೋ ಯತ್ ಇಚ್ಛತಿ ಪರಮ್ ಅಪರಂ ವಾ ತಸ್ಯ ತತ್ ಭವತಿ । ಪರಂ ಚೇತ್ ಜ್ಞಾತವ್ಯಮ್, ಅಪರಂ ಚೇತ್ ಪ್ರಾಪ್ತವ್ಯಮ್ ॥

(ಭಾಷ್ಯಾರ್ಥ)

ಆದ್ದರಿಂದ ಈ ಅಕ್ಷರವೇ ಅಪರಬ್ರಹ್ಮವು, (ಮತ್ತು ಈ ಅಕ್ಷರವೇ) ಪರ ಬ್ರಹ್ಮವೂ (ಆಗಿರುತ್ತದೆ). ಏಕೆಂದರೆ ಇವೆರಡಕ್ಕೂ ಈ ಅಕ್ಷರವು **ಪ್ರತೀಕ**[3] ವಾಗಿರು

---

1. ನೈಷ್ಠಿಕಬ್ರಹ್ಮಚರ್ಯ, ಉಪಕುರ್ವಾಣನ ಬ್ರಹ್ಮಚರ್ಯ–ಎಂದು ಬ್ರಹ್ಮಚರ್ಯವು ಎರಡುಬಗೆ; ಮೊದಲನೆಯದು ಸಾಯುವವರೆಗೂ ಗುರುಕುಲವಾಸವನ್ನು ಮಾಡುವದು, ಎರಡನೆಯದು ಅಧ್ಯಯನಕ್ಕಾಗಿ ಛಾ. ಭಾ. ೨-೨೩-೧ ನೋಡಿರಿ. ಬ್ರಹ್ಮಚರ್ಯವು ಬ್ರಹ್ಮಪ್ರಾಪ್ತಿಗೂ ಅಂಗವೆಂಬುದನ್ನು ಛಾ. ೮-೧೨-೩ರಿಂದ ತಿಳಿಯಬಹುದು.

2. ಓಂಕಾರವು ಬ್ರಹ್ಮದ ವಾಚಕವು ಎಂದರೆ ಅದನ್ನು ತಿಳಿಸುವ ಹೆಸರು; ಪ್ರತೀಕವು ಎಂದರೆ ಅವರ ಸ್ಥಾನದಲ್ಲಿ ಉಪಾಸ್ಯವಾಗಿರುವದು, ಸಾಲಗ್ರಾಮವನ್ನು ವಿಷ್ಣು ವೆಂದು ಧ್ಯಾನಿಸುವಂತೆ ಓಂಕಾರವನ್ನೇ ಬ್ರಹ್ಮವೆಂದು ಧ್ಯಾನಿಸುವದು.

3. ನಿರ್ಗುಣವನ್ನೂ ಈ ಪ್ರತೀಕದ ಮೂಲಕವಾಗಿ ಧ್ಯಾನಿಸಬಹುದು. ಪ್ರ. ಭಾ. ೫-೫, ಗೀ. ಭಾ. ೮-೧೨, ಸೂ. ಭಾ ೧-೩-೧೩. ಈ ಧ್ಯಾನಕ್ಕೆ ಕ್ರಮಮುಕ್ತಿಯು ಫಲವು.

ವದು. ಈ ಅಕ್ಷರವನ್ನೇ ತಿಳಿದುಕೊಂಡರೆ ಎಂದರೆ ಉಪಾಸನೆಮಾಡಿದರೆ ಯಾವನು ಏನನ್ನು ಎಂದರೆ (ಯಾವ ಬ್ರಹ್ಮವನ್ನು) ಪರವನ್ನು ಅಥವಾ ಅಪರವನ್ನು ಬಯಸುತ್ತಾನೋ ಅವನಿಗೆ ಅದು ಆಗುತ್ತದೆ. ಪರವಾದರೆ ತಿಳಿಯತಕ್ಕದ್ದು, ಅಪರವಾದರೆ ಪಡೆಯತಕ್ಕದ್ದು.[1]

ಏತದಾಲಮ್ಬನಗ್ಂ ಶ್ರೇಷ್ಠ-
ಮೇತದಾಲಮ್ಬನಂ ಪರಮ್ ।
ಏತದಾಲಮ್ಬನಂ ಜ್ಞಾತ್ವಾ
ಬ್ರಹ್ಮಲೋಕೇ ಮಹೀಯತೇ ॥ ೧೭ ॥

೧೭. ಈ ಆಲಂಬನವು ಶ್ರೇಷ್ಠವಾದದ್ದು, ಈ ಆಲಂಬನವು ಪರವು. ಈ ಆಲಂಬನವನ್ನು ತಿಳಿದುಕೊಂಡರೆ ಬ್ರಹ್ಮಲೋಕದಲ್ಲಿ ಮಹಿಮೆಯನ್ನು ಪಡೆಯುವನು.

(ಭಾಷ್ಯ)

೧೯. ಯತ ಏವಮ್ ಅತಃ ಏತತ್ ಬ್ರಹ್ಮಪ್ರಾಪ್ತ್ಯಾಲಮ್ಬನಾನಾಂ ಶ್ರೇಷ್ಠಂ ಪ್ರಶಸ್ಯತಮಮ್ । ಏತತ್ ಆಲಮ್ಬನಂ ಪರಮ್, ಅಪರಂ ಚ । ಪರಾಪರಬ್ರಹ್ಮವಿಷಯತ್ವಾತ್ । ಏತತ್ ಆಲಮ್ಬನಂ ಜ್ಞಾತ್ವಾ ಬ್ರಹ್ಮಲೋಕೇ ಮಹೀಯತೇ, ಪರಸ್ಮಿನ್ ಬ್ರಹ್ಮಣಿ ಅಪರಸ್ಮಿಂಶ್ಚ । ಬ್ರಹ್ಮಭೂತೋ ಬ್ರಹ್ಮವದುಪಾಸ್ಯೋ ಭವತೀತ್ಯರ್ಥಃ ॥

(ಭಾಷ್ಯಾರ್ಥ)

ಹೀಗಿರುವದರಿಂದ ಈ ಆಲಂಬನವು ಬ್ರಹ್ಮವನ್ನು ಪಡೆಯುವದಕ್ಕೆ (ಬೇಕಾದ) ಆಲಂಬನಗಳಲ್ಲೆಲ್ಲ[2] ಶ್ರೇಷ್ಠವಾದದ್ದು, ಅತ್ಯುತ್ತಮವಾದದ್ದು. ಈ ಆಲಂಬನವು ಪರವೂ ಅಪರವೂ(ಆಗಿರುತ್ತದೆ), ಏಕೆಂದರೆ ಇದು ಪರಾಪರಬ್ರಹ್ಮಗಳೆ (ರಡನ್ನೂ) ಕುರಿತ (ಆಲಂಬನ) ವಾಗಿರುತ್ತದೆ. ಈ ಆಲಂಬವನ್ನು ತಿಳಿದುಕೊಂಡರೆ[3] ಬ್ರಹ್ಮಲೋಕದಲ್ಲಿ ಎಂದರೆ ಪರಬ್ರಹ್ಮದಲ್ಲಿಯೂ ಅಪರಬ್ರಹ್ಮದಲ್ಲಿಯೂ[4]

1, ಅಪರಬ್ರಹ್ಮವನ್ನು ಬ್ರಹ್ಮಲೋಕಕ್ಕೆ ಹೋಗಿ ಪಡೆದುಕೊಳ್ಳಬೇಕು; ಪರಬ್ರಹ್ಮವನ್ನು ಈಗಲೋ ಕಾಲಾಂತರದಲ್ಲಿಯೋ ತಿಳಿದುಕೊಂಡೇ ಪಡೆಯಬೇಕು. ಏಕೆಂದರೆ ಅದು ನಿತ್ಯಪ್ರಾಪ್ತವಾದ ಆತ್ಮನಾಗಿದೆ ಸೂ ಭಾ. ೪-೩-೭ರಿಂದ ೧೪.

2. ಆಕಾಶ, ಆದಿತ್ಯ, ಮನಸ್ಸು, ನಾಮ–ಮುಂತಾದ ಆಲಂಬನಗಳನ್ನು ಬ್ರಹ್ಮಕ್ಕೆ ಶಾಸ್ತ್ರದಲ್ಲಿ ಹೇಳಿರುತ್ತದೆ. ಅವುಗಳಲ್ಲೆಲ್ಲ ಇದೇ ಹೆಚ್ಚಿನದು.

3. ಉಪಾಸನೆಮಾಡಿದರೆ.

4. ಅಪರಬ್ರಹ್ಮವನ್ನು ಉಪಾಸನೆಮಾಡಿದವನು ಅದರ ಸಾಯುಜ್ಯವನ್ನು ಪಡೆದುಕೊಳ್ಳುತ್ತಾನೆ. ಪರಬ್ರಹ್ಮವನ್ನು ಉಪಾಸನೆಮಾಡಿದವನು ಜ್ಞಾನವನ್ನು ಪಡೆದು ಕ್ರಮಮುಕ್ತಿಯನ್ನು ಹೊಂದುತ್ತಾನೆ.

ಮಹಿಮೆಯನ್ನು ಪಡೆಯುವನು, ಬ್ರಹ್ಮವೇ ಆಗಿ ಬ್ರಹ್ಮದಂತೆ ಉಪಾಸ್ಯನಾಗುತ್ತಾನೆ ಎಂದರ್ಥ.

ಬ್ರಹ್ಮದ ಸಾಕ್ಷಾಜ್ಜ್ಞಾನ

(ಭಾಷ್ಯ)

೭೦. "ಅನ್ಯತ್ರ ಧರ್ಮಾತ್" ಇತ್ಯಾದಿನಾ ಪೃಷ್ಟಸ್ಯ ಆತ್ಮನೋಽಶೇಷ ವಿಶೇಷರಹಿತಸ್ಯ ಆಲಮ್ಬನತ್ವೇನ (ಪ್ರತೀಕತ್ವೇನ ?) ಜ್ಞೋಽಂಕಾರೋ ನಿರ್ದಿಷ್ಟಃ। ಅಪರಸ್ಯ ಚ ಬ್ರಹ್ಮಣಃ, ಮನ್ದಮಧ್ಯಮಪ್ರತಿಪತ್ತೃ ಪ್ರತಿ। ಅಥ ಇದಾನೀಂ ತಸ್ಯ ಓಂಕಾರಾಲಮ್ಬನಸ್ಯ ಆತ್ಮನಃ ಸಾಕ್ಷಾತ್ ಸ್ವರೂಪನಿರ್ದಿಧಾರಯಿಷಯಾ ಇದಮುಚ್ಯತೇ—

(ಭಾಷ್ಯಾರ್ಥ)

"ಧರ್ಮಕ್ಕಿಂತ ಬೇರೆಯಾಗಿ" (೧–೨–೧೪) ಎಂದು ಮುಂತಾಗಿ (ನಚಿಕೇತನು) ಕೇಳಿದ ಯಾವ ವಿಶೇಷವೂ ಇಲ್ಲದ ಆತ್ಮನಿಗೆ ಆಲಂಬನವಾಗಿ (ಯೂ ಪ್ರತೀಕವಾಗಿಯೂ ?)[1] ಓಂಕಾರವನ್ನು ತಿಳಿಸಿದ್ದಾಯಿತು. ಅಪರಬ್ರಹ್ಮಕ್ಕೂ (ಆಲಂಬನವಾಗಿ ಹೇಳಲ್ಪಟ್ಟಿತು), ಇದು ಕೇಳುತರದ ಮತ್ತು ನಡುತರದ[2] ಜಿಜ್ಞಾಸುಗಳಿಗಾಗಿ (ಹೇಳಿದ್ದು), ಇನ್ನು ಈಗ ಆ ಓಂಕಾರವೆಂಬ ಆಲಂಬನವುಳ್ಳ ಆತ್ಮನ ಸ್ವರೂಪವನ್ನು ನೇರಾಗಿಯೇ[3] ಗೊತ್ತುಮಾಡಿ (ತಿಳಿಸು)ವದಕ್ಕಾಗಿ ಈ (ಮಂತ್ರವನ್ನು) ಹೇಳಲಾಗುತ್ತದೆ :—

ನ ಜಾಯತೇ ಮ್ರಿಯತೇ ವಾ ವಿಪಶ್ಚಿ-
ನ್ನಾಯಂ ಕುತಶ್ಚಿನ್ನ ಬಭೂವ ಕಶ್ಚಿತ್।
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ ॥ ೧೪ ॥

೧೪. ತಿಳಿದಂಥವನು ಹುಟ್ಟುವದೂ ಇಲ್ಲ ಸಾಯುವದೂ ಇಲ್ಲ. ಈತನು ಏತರಿಂದಲೂ ಹುಟ್ಟಲಿಲ್ಲ (ಈತನಿಂದ) ಯಾರೂ ಹುಟ್ಟಲಿಲ್ಲ.

---

1 ಇಲ್ಲಿ ಓಂಕಾರವು ಬ್ರಹ್ಮವಾಚಕವೆಂದೂ ಪ್ರತೀಕವೆಂದೂ ಎರಡು ಬಗೆಯಿಂದ ಹೇಳಿ ಈ ಓಂಕಾರವು ಉತ್ತಮವಾದ ಆಲಂಬನವೆಂದು ೧೭ನೆಯ ಮಂತ್ರದಲ್ಲಿ ಹೇಳಿರುವ ದನ್ನು ನೋಡಿದರೆ ಆಲಂಬನವೆಂಬ ಶಬ್ದದಲ್ಲಿಯೇ ಪ್ರತೀಕವೂ ಅಡಕವಾಗಿರುವಂತೆ ಕಾಣುತ್ತದೆ. ಸೂ. ಭಾ. ೧–೩–೧೩ರಲ್ಲಿ ಪ್ರತೀಕವೆಂಬರ್ಥದಲ್ಲಿ ಈ ಶಬ್ದವನ್ನು ಪ್ರಯೋಗಮಾಡಿಯೂ ಇರುತ್ತದೆ. ಮಾ. ಭಾ. ೧೩ನ್ನೂ ನೋಡಿ. ಆದ್ದರಿಂದ ಇಲ್ಲಿ 'ಪ್ರತೀಕ'ವೆಂಬ ಮಾತು ಹೆಚ್ಚಿಂದು ತೋರುತ್ತದೆ.

2 ಕರ್ಮದೊಡನೆ ಅಥವಾ ಅದಿಲ್ಲದೆ ಉಪಾಸನೆಮಾಡುವರಿಗಾಗಿ ಮಾ. ಕಾ. ಭಾ. ೩–೧೬,

3. ಯಾವ ಆಲಂಬನದ ಉಪಾಧಿಯೂ ಇಲ್ಲದೆ.

ಈತನು ಅಜನು, ನಿತ್ಯನು, ಶಾಶ್ವತನು, ಪುರಾಣನು; ಶರೀರವು ಕೊಲ್ಲಲ್ಪಟ್ಟರೂ ಕೊಲ್ಲಲ್ಪಡುವದಿಲ್ಲ.

(ಭಾಷ್ಯ)

೭೧. ನ ಜಾಯತೇ ನೋತ್ಪದ್ಯತೇ ಮ್ರಿಯತೇ ವಾ ನ ಮ್ರಿಯತೇ ಚ। ಉತ್ಪತ್ತಿಮತೋ ವಸ್ತುನೋಽನಿತ್ಯಸ್ಯ ಅನೇಕಾ ವಿಕ್ರಿಯಾಃ। ತಾಸಾಮ್ ಆದ್ಯನ್ತೇ ಜನ್ಮವಿನಾಶಲಕ್ಷಣೇ ವಿಕ್ರಿಯೇ ಇಹ ಆತ್ಮನಿ ಪ್ರತಿಷಿಧ್ಯೇತೇ ಪ್ರಥಮಂ ಸರ್ವ ವಿಕ್ರಿಯಾಪ್ರತಿಷೇಧಾರ್ಥಮ್, "ನ ಜಾಯತೇ ಮ್ರಿಯತೇ ವಾ" ಇತಿ। ವಿಪಶ್ಚಿತ್ ಮೇಧಾವೀ, ಅಪರಿಲುಪ್ತಚೈತನ್ಯಸ್ವಭಾವತ್ವಾತ್। ಕಿಂ ಚ ನಾಯಮ್ ಆತ್ಮಾ ಕುತಶ್ಚಿತ್ ಕಾರಣಾನ್ತರಾದ್ ಬಭೂವ ನ ಪ್ರಭೂತಃ[1]। ಅಸ್ಮಾಚ್ಚ ಆತ್ಮನೋ ನ ಬಭೂವ ಕಶ್ಚಿತ್ ಅರ್ಥಾನ್ತರಭೂತಃ। ಅತೋಽಯಮ್ ಆತ್ಮಾ ಅಜಃ ನಿತ್ಯಃ ಶಾಶ್ವತಃ ಅಪಕ್ಷಯವರ್ಜಿತಃ। ಯೋ ಹಿ ಅಶಾಶ್ವತಃ ಸೋಽಪಕ್ಷೀಯತೇ। ಅಯಂ ತು ಶಾಶ್ವತಃ। ಅತ ಏವ ಪುರಾಣಃ ಪುರಾಪಿ ನವ ಏವೇತಿ। ಯೋ ಹಿ ಅವಯವೋಪಚಯದ್ವಾರೇಣ ಅಭಿನಿರ್ವರ್ತ್ಯತೇ ಸ ಇದಾನೀಂ ನವಃ। ಯಥಾ ಕುಮ್ಭಾದಿಃ। ತದ್ವಿಪರೀತಸ್ತ್ವಾತ್ಮಾ। ಪುರಾಣಃ ವೃದ್ಧಿವಿವರ್ಜಿತಃ ಇತ್ಯರ್ಥಃ। ಯತ ಏವಮ್ ಅತೋ ನ ಹನ್ಯತೇ ನ ಹಿಂಸ್ಯತೇ ಹನ್ಯಮಾನೇ ಶಸ್ತ್ರಾದಿಭಿಃ ಶರೀರೇ, ತತ್ರೋಽಪಿ। ಆಕಾಶವದೇವ ॥

(ಭಾಷ್ಯಾರ್ಥ)

ಹುಟ್ಟುವದಿಲ್ಲ ಉಂಟಾಗುವದಿಲ್ಲ, ಸಾಯುವದಾಗಲಿ ಇಲ್ಲ, ಸಾಯುವದು ಕೂಡ ಇಲ್ಲ. ಹುಟ್ಟುವಿಕೆಯಿರುವ ಅನಿತ್ಯವಾದ ವಸ್ತುವಿಗೆ ಅನೇಕ ವಿಕಾರಗಳು (ಇರುತ್ತವೆ). (ಆ) ಯಾವ ವಿಕಾರಗಳೂ ಆತ್ಮನಲ್ಲಿ ಇಲ್ಲವೆನ್ನುವದಕ್ಕಾಗಿ,[2] ಅವುಗಳಲ್ಲಿ ಹುಟ್ಟು, ಹೊಂದು ಎಂಬ ಮೊದಲನೆಯ ಕೊನೆಯ[3] ವಿಕಾರಗಳನ್ನು "ಹುಟ್ಟುವದೂ ಇಲ್ಲ, ಸಾಯುವದೂ ಇಲ್ಲ" ಎಂದು ಅಲ್ಲಗಳೆದಿರುತ್ತದೆ. ತಿಳಿದಂಥವನು ಎಂದರೆ ಜ್ಞಾನಿಯು; ಏಕೆಂದರೆ (ಎಂದಿಗೂ) ನಾಶವಾಗದ ಚೈತನ್ಯವೇ (ಅವನ)

---

1. (ವಾ॥) ಪಾಠ.

2 ಆತ್ಮನಲ್ಲಿ ಹುಟ್ಟು ಹೊಂದು-ಎಂಬ ವಿಕಾರಗಳು ಮಾತ್ರ ಇಲ್ಲವೆಂದು ತಾತ್ಪರ್ಯವಲ್ಲ ಯಾವ ವಿಕಾರವೂ ಇಲ್ಲವೆನ್ನುವದೇ ತಾತ್ಪರ್ಯ. ಗೀ. ಭಾ. ೨-೨೦ ನೋಡಿ

3. ಹುಟ್ಟು, ಇರವು, ಬೆಳವಳಿಗೆ, ಮಾರ್ಪಾಡು, ಸೊರಗುವಿಕೆ, ಹಾಳಾಗುವದು-ಎಂಬ ಆರೂ ಭಾವರೂಪವಾದ ವಸ್ತುಗಳ ವಿಕಾರಗಳೆಂದು ಯಾಸ್ಕರು ನಿರುಕ್ತದಲ್ಲಿ ಬರೆದಿರುತ್ತಾರೆ. ನಡುವಿನ ವಿಕಾರಗಳಾದ ಯೌವನ, ರೋಗ, ಮುಪ್ಪು-ಮುಂತಾದವುಗಳೂ ಇವುಗಳಲ್ಲಿ ಸೇರಿರುತ್ತವೆ. ವಿಕಾರಗಳ ಪಟ್ಟಿಯಲ್ಲಿ ಹುಟ್ಟು ಮೊದಲನೆಯದು, ಹಾಳಾಗುವದು ಕಡೆಯದು.

ಸ್ವಭಾವವಾಗಿರುತ್ತದೆ.[1] ಮತ್ತು ಈ ಆತ್ಮನು ಮತ್ತೇತರಿಂದಲೂ (ಯಾವ) ಬೇರೆಯ ಕಾರಣದಿಂದಲೂ ಹುಟ್ಟಲಿಲ್ಲ, ಉಂಟಾಗಿರುವದಿಲ್ಲ. ಈ ಆತ್ಮನಿಂದಲೂ ಮತ್ತೆ ಯಾರೂ ಬೇರೆಯಾಗಿರುವನಾಗಿ[2] ಹುಟ್ಟಿರುವದಿಲ್ಲ. ಆದ್ದರಿಂದ ಈ ಆತ್ಮನು ಅಜನು,[3] ನಿತ್ಯನು, ಶಾಶ್ವತನು ಎಂದರೆ ಅಪಕ್ಷಯವಿಲ್ಲದವನು.[4] ಯಾವದು ಶಾಶ್ವತವಲ್ಲವೋ ಅದೇ ಸವೆಯುತ್ತಿರುವದು, ಆದರೆ ಈ (ಆತ್ಮನು) ಶಾಶ್ವತನು. (ಆದ್ದರಿಂದ ಸವೆಯುವದಿಲ್ಲ). ಆದ್ದರಿಂದಲೇ ಪುರಾಣನು, ಎಂದರೆ ಹಿಂದೆಯೂ ಹೊಸಬನೇ. ಯಾವನು ಅವಯವಗಳು ಕೂಡಿಕೊಳ್ಳುವದರಿಂದ ಉಂಟಾಗಿರುವನೋ ಅವನು ಈಗ ಹೊಸಬನಾಗಿರುತ್ತಾನೆ, ಉದಾಹರಣೆಗೆ ಗಡಿಗೆ ಮುಂತಾದದ್ದು[5] (ಈಗ ಹೊಸದು ಎನ್ನಿಸಿಕೊಳ್ಳುವದು). ಆದರೆ ಆತ್ಮನು ಇದಕ್ಕೆ ವಿರುದ್ಧ(ಸ್ವಭಾವ) ದವನಾಗಿರುವದರಿಂದ ಪುರಾಣನು, ಎಂದರೆ ವೃದ್ಧಿಯಿಲ್ಲದವನು ಎಂದರ್ಥ. ಹೀಗಿರುವದರಿಂದ ಶರೀರವು ಶಸ್ತ್ರಾದಿಗಳಿಂದ ಕೊಲ್ಲಲ್ಪಟ್ಟರೂ ಆ (ಶರೀರ)ದಲ್ಲಿದ್ದರೂ ಆಕಾಶದಂತೆಯೇ[6] (ಈ ಆತ್ಮನು) ಕೊಲ್ಲಲ್ಪಡದೆ ಹಿಂಸೆಮಾಡಲ್ಪಡದೆ ಇರುವನು.

ಹನಸ್ತಾ ಚೇನ್ಮನ್ಯತೇ ಹನ್ತುಗ್ಂ
ಹತಶ್ಚೇನ್ಮನ್ಯತೇ ಹತಮ್ ।
ಉಭೌ ತೌ ನ ವಿಜಾನೀತೋ
ನಾಯಗ್ಂ ಹನ್ತಿ ನ ಹನ್ಯತೇ ॥ ೧೯ ॥

---

1. ಬೃ. ೪-೩-೨೩ರ ಸೂಚನೆ. ಚೈತನ್ಯವೇ ಎಲ್ಲವನ್ನೂ ಅರಿಯುವದಾದ್ದರಿಂದ ಅದರ ನಾಶವಿದೆ ಎಂಬುದಕ್ಕೆ ಯಾವ ಪ್ರಮಾಣವೂ ಇಲ್ಲ; ಈ ಚೈತನ್ಯಸ್ವಭಾವವೇ ಇಲ್ಲಿ ವಿಪಶ್ಚಿತ್–ತಿಳಿದವನು, ಪಂಡಿತನು ಎಂಬ ಶಬ್ದದಿಂದ ಹೇಳಲ್ಪಟ್ಟಿದೆ. ತೈ. ಭಾ ೨-೧ ರಲ್ಲಿ 'ವಿಪಶ್ಚಿತಾ' ಎಂಬುವರ ಭಾಷ್ಯವನ್ನು ನೋಡಿ

2. ಆತ್ಮನಿಗಿಂತ ಬೇರೆಯಾದ ಕಾರಣವಾಗಲಿ ಕಾರ್ಯವಾಗಲಿ ಇಲ್ಲ; ಏಕೆಂದರೆ ಆತ್ಮನು ಅದ್ವಿತೀಯನು.

3. ಹುಟ್ಟಿಲ್ಲದ ಸ್ವಭಾವದವನು.

4. ಸೊರಗುವಿಕೆ ಎಂಬ ವಿಕಾರವಿಲ್ಲದವನು.

5. 'ಕುಂಭಾದಿಃ' ಎಂಬ (ಆಗಿ) ಪಾಠದ ಅನುವಾದವಿದು. 'ಕುಡ್ಯಾದಿಃ' ಗೋಡೆ ಮುಂತಾದದ್ದು (ವಾಗಿ) 'ಅಙ್ಕುರಾದಿಃ' ಮೊಳಕೆ ಮುಂತಾದದ್ದು–ಎಂಬ ಪಾಠಗಳೂ ಇವೆ.

6. ಗಡಿಗೆಗೆ ಯಾವ ವಿಕಾರವಾದರೂ ಯಾವ ಸಂಸ್ಪರ್ಶವೂ ಇಲ್ಲದ ಆದರೊಳಗಿನ ಆಕಾಶದಂತೆ.

೧೯, ಕೊಲ್ಲುವಾತನು ಕೊಲ್ಲುವದಕ್ಕೆ ಎಣಿಸಿದರೆ, ಕೊಲ್ಲಲ್ಪಟ್ಟವನು ಕೊಲ್ಲಲ್ಪಟ್ಟನೆಂದು ಎಣಿಸಿದರೆ, ಅವರಿಬ್ಬರೂ ಅರಿಯರು; ಇವನು ಕೊಲ್ಲುವದಿಲ್ಲ, ಕೊಲ್ಲಲ್ಪಡುವದಿಲ್ಲ.

(ಭಾಷ್ಯ)

೨೨. ಏವಂಭೂತಮಪ್ಯಾತ್ಮಾನಂ ಶರೀರಮಾತ್ಮಾತ್ಮದೃಷ್ಟಿಃ ಹನ್ತಾ ಚೇತ್ ಯದಿ ಮನ್ಯತೇ ಚಿನ್ತಯತಿ ಹನ್ತುಂ "ಹನಿಷ್ಯಾಮಿ ಏನಮ್" ಇತಿ, ಯೋಽಪ್ಯನ್ಯೋ ಹತಃ ಸೋಽಪಿ ಚೇತ್ ಮನ್ಯತೇ ಹತಮ್ ಆತ್ಮಾನಂ "ಹತೋಽಹಮ್" ಇತಿ, ಉಭಾವಪಿ ತೌ ನ ವಿಜಾನೀತಃ ಸ್ವಮ್ ಆತ್ಮಾನಮ್। ಯತಃ ನಾಯಂ ಹನ್ತಿ, ಅವಿಕ್ರಿಯತ್ವಾದಾತ್ಮನಃ । ತಥಾ ನ ಹನ್ಯತೇ, ಆಕಾಶವದವಿಕ್ರಿಯತ್ವಾದೇವ । ಅತೋಽನಾತ್ಮಜ್ಞವಿಷಯ ಏವ ಧರ್ಮಾಧರ್ಮಾದಿಲಕ್ಷಣಃ ಸಂಸಾರಃ ನಾತ್ಮಜ್ಞಸ್ಯ।[1] ಶ್ರುತಿಪ್ರಾಮಾಣ್ಯಾತ್, ನ್ಯಾಯಾಚ್ಚ ಧರ್ಮಾಧರ್ಮಾದ್ಯನುಪಪತ್ತೇಃ ॥

(ಭಾಷ್ಯಾರ್ಥ)

ಹೀಗಿರುವ ಆತ್ಮನನ್ನು ಕೂಡ ಶರೀರವೇ ಆತ್ಮನೆಂದು[2] ತಿಳಿದಿರುವ ಕೊಲ್ಲುವಾತನು ಕೊಲ್ಲುವದಕ್ಕೆ, "ಇವನನ್ನು ಕೊಲ್ಲುವೆನು" ಎಂದು, ಎಣಿಸಿದರೆ ಯೋಚಿಸಿದರೆ, ಮತ್ತು (ಆ) ಇನ್ನೊಬ್ಬನು ಕೊಲ್ಲಲ್ಪಟ್ಟವನು ಆತ್ಮನನ್ನು ಕೊಲ್ಲಲ್ಪಟ್ಟನೆಂದು, "ನಾನು ಕೊಲ್ಲಲ್ಪಡುತ್ತಿದ್ದೇನೆ" ಎಂದು, ಎಣಿಸಿದರೆ ಅವರಿಬ್ಬರೂ ತಮ್ಮ ಆತ್ಮನನ್ನು[3] ಅರಿಯರು. ಏಕೆಂದರೆ ಆತನು ವಿಕಾರವಿಲ್ಲದವನಾದ್ದರಿಂದ ಇವನು ಕೊಲ್ಲುವದಿಲ್ಲ, ಮತ್ತು ಆಕಾಶದಂತೆ ವಿಕಾರವಿಲ್ಲದವನಾಗಿರುವದರಿಂದಲೇ ಕೊಲ್ಲಲ್ಪಡುವದೂ ಇಲ್ಲ.

ಆದ್ದರಿಂದ ಧರ್ಮ, ಅಧರ್ಮ–ಮುಂತಾದ[4] ಸಂಸಾರವು[5] ಆತ್ಮನನ್ನು ಅರಿಯದವನಿಗೆ ಮಾತ್ರ ಸೇರಿರುವವೇ ಹೊರತು ಆತ್ಮಜ್ಞಾನಿಗೆ ಸೇರಿದ್ದಲ್ಲ. (ಈ)

---

1. "ನ ಬ್ರಹ್ಮಜ್ಞಸ್ಯ" ಎಂಬ (ಆ॥) ಪಾಠಕ್ಕೂ ಇದೇ ಅರ್ಥವಾದರೂ ಈ (ವಾ॥) ಪಾರವು ಉತ್ತಮ.

2. ತನ್ನ ಸ್ವರೂಪವೆಂದು.

3. ತಮ್ಮ ನಿಜವಾದ ಸ್ವರೂಪವನ್ನು.

4. ಅವುಗಳ ಫಲಗಳು ಮುಂತಾದ.

5. ಕೊಲ್ಲುವದಿಲ್ಲ ಎಂದು ಹೇಳಿರುವದು ಉಪಲಕ್ಷಣ; ಯಾವ ಕ್ರಿಯೆಯ ಕರ್ತೃತ್ವವೂ ಕರ್ಮತ್ವವೂ ಆತ್ಮನಿಗಿಲ್ಲವಾದ್ದರಿಂದ ಆತ್ಮಜ್ಞಾನಿಗೂ ಇಲ್ಲ ಎಂದು ಭಾವ. ಗೀ. ಭಾ. ೨-೨೧ ನೋಡಿ.

ಶ್ರುತಿಯು (ಇದಕ್ಕೆ) ಪ್ರಮಾಣವಾಗಿರುತ್ತದೆ. ಯುಕ್ತಿಯಿಂದ ನೋಡಿದರೂ[1] ಆತ್ಮನಲ್ಲಿ ಧರ್ಮಾಧರ್ಮಗಳು ಹೊಂದುವದಿಲ್ಲ.

(ಭಾಷ್ಯ)

೭೩. ಕಥಂ ಪುನರಾತ್ಮಾನಂ ಜಾನಾತೀತಿ? ಉಚ್ಯತೇ—

(ಭಾಷ್ಯಾರ್ಥ)

ಹಾಗಾದರೆ ಆತ್ಮನನ್ನು ಹೇಗೆ (ಸರಿಯಾಗಿ) ತಿಳಿದುಕೊಳ್ಳುವನು? ಎಂದರೆ ಹೇಳುತ್ತಾನೆ:—

ಅಣೋರಣೀಯಾನ್ ಮಹತೋ ಮಹೀಯಾ
ಆತ್ಮಾಸ್ಯ ಜನ್ತೋರ್ನಿಹಿತೋ ಗುಹಾಯಾಮ್।
ತಮಕ್ರತುಃ ಪಶ್ಯತಿ ವೀತಶೋಕೋ
ಧಾತುಪ್ರಸಾದಾನ್ಮಹಿಮಾನಮಾತ್ಮನಃ ॥ ೨೦ ॥

೨೦. ಅಣುವಿಗಿಂತ ಅಣುವಾಗಿ, ಮಹತ್ತಿಗಿಂತ ಮಹತ್ತಾಗಿ, ಇರುವ ಆತ್ಮನು ಈ ಜಂತುವಿನ ಗುಹೆಯಲ್ಲಿ ಇಡಲ್ಪಟ್ಟಿರುವನು. ಅಕ್ರತುವಾದವನು ಕಂಡುಕೊಳ್ಳುವನು. ಧಾತುಪ್ರಸಾದದಿಂದ ಆತ್ಮನ ಮಹಿಮೆಯನ್ನು (ಕಂಡುಕೊಂಡು) ಶೋಕವಿಲ್ಲದವನಾಗುವನು.

(ಭಾಷ್ಯ)

೭೪. ಅಣೋಃ ಸೂಕ್ಷ್ಮತ್ ಅಣೀಯಾನ್ ಶ್ಯಾಮಾಕಾದೇರಣುತರಃ। ಮಹತೋ ಮಹತ್ಪರಿಣಾಮಾತ್ ಮಹೀಯಾನ್ ಮಹತ್ತರಃ ಪೃಥಿವ್ಯಾದೇಃ। ಅಣು ಮಹದ್ ವಾ ಯದಸ್ತಿ ಲೋಕೇ ವಸ್ತು, ತತ್ ತೇನೈವ ಆತ್ಮನಾ ನಿತ್ಯೇನ ಆತ್ಮವತ್ಸಮ್ಬವತಿ। ತದ್ ಆತ್ಮನಾ ವಿನಿರ್ಮುಕ್ತಮ್ ಅಸತ್ ಸಮ್ಪದ್ಯತೇ। ತಸ್ಮಾತ್ ಅಸಾವೇವಾತ್ಮಾ ಅಣೋರಣೀಯಾನ್ ಮಹತೋ ಮಹೀಯಾನ್, ಸರ್ವನಾಮರೂಪವಸ್ತೂಪಾಧಿಕತ್ವಾತ್। ಸ ಚ ಆತ್ಮಾ ಅಸ್ಯ ಜನ್ತೋಃ ಬ್ರಹ್ಮಾದಿಸ್ತಮ್ಬಪರ್ಯನ್ತಸ್ಯ ಪ್ರಾಣಿಜಾತಸ್ಯ ಗುಹಾಯಾಂ ಹೃದಯೇ ನಿಹಿತಃ ಆತ್ಮಭೂತಃ ಸ್ಥಿತ ಇತ್ಯರ್ಥಃ। ತಮ್ ಆತ್ಮಾನಂ ದರ್ಶನಶ್ರವಣಮನನವಿಜ್ಞಾನಲಿಙ್ಗಮ್ ಅಕ್ರತುಃ ಅಕಾಮಃ, ದೃಷ್ಟಾದೃಷ್ಟಬಾಹ್ಯವಿಷಯೇಭ್ಯ ಉಪರತಬುದ್ಧಿಃ ಇತ್ಯರ್ಥಃ। ಯದಾ ಚೈವಂ ತದಾ ಮನಆದೀನಿ ಕರಣಾನಿ ಧಾತವಃ ಶರೀರಸ್ಯ ಧಾರಣಾತ್ ಪ್ರಸೀದನ್ತೀತಿ ಏಷಾಂ

---

1 ಸೂ. ಭಾ. ೧-೧-೪ "ತತ್ಕೃತಧರ್ಮಾಧರ್ಮನಿಮಿತ್ತಂ ಸಶರೀರತತ್ವಮ್" ಎಂಬ ಭಾಷ್ಯದ ಮುಂದೆ ನೋಡಿರಿ.

2 (ವಾ॥).

ಧಾತೂನಾಂ ಪ್ರಸಾದಾತ್ ಆತ್ಮನೋ ಮಹಿಮಾನಂ ಕರ್ಮನಿಮಿತ್ತವೃದ್ಧಿಕ್ಷಯ ರಹಿತಂ ಪಶ್ಯತಿ "ಅಯಮಹಮಸ್ಮಿ" ಇತಿ ಸಾಕ್ಷಾದ್ವಿಜಾನಾತಿ ತತೋ (ವೀತ ಶೋಕಃ) ವಿಗತಶೋಕೋಭವತಿ ॥

(ಭಾಷ್ಯಾರ್ಥ)

ಅಣುವಿಗಿಂತ ಎಂದರೆ ಸಣ್ಣದಾಗಿರುವ ಸಾವೆಯ ಕಾಳು ಮುಂತಾದವುಗಳಿಗಿಂತ[1] ಅಣುವಾಗಿರುವನು. ಮಹತ್ತಿಗಿಂತ ಎಂದರೆ ದೊಡ್ಡ ಪರಿಮಾಣದ ಪೃಥಿವಿಯೇ ಮುಂತಾದದ್ದಕ್ಕಿಂತ ಮಹತ್ತಾಗಿರುವನು, ದೊಡ್ಡದಾಗಿರುವನು. ಲೋಕದಲ್ಲಿ ಅಣುವಾಗಲಿ, ಮಹತ್ತಾಗಲಿ, ಯಾವ ವಸ್ತುವಿದ್ದರೂ ಅದು ಆ ನಿತ್ಯನಾದ ಆತ್ಮನಿಂದಲೇ ಸ್ವರೂಪವುಳ್ಳದ್ದಾಗಿರುವದೆಂದು[2] ಹೊಂದುಗಡೆಯಾಗಿರುತ್ತದೆ; **ಅದು ಆತ್ಮನನ್ನು ಬಿಟ್ಟರೆ ಇಲ್ಲದ್ದೇ ಆಗಿಬಿಡುವದು.** ಹೀಗಿರುವದರಿಂದ ಈ ಆತ್ಮನೇ ಅಣುವಿಗಿಂತ ಅಣುವೂ ಮಹತ್ತಿಗಿಂತ ಮಹತ್ತೂ ಆಗಿರುತ್ತಾನೆ, ಏಕೆಂದರೆ **ನಾಮರೂಪವುಳ್ಳ ಯಾವ ವಸ್ತುವಾದರೂ**[3] **ಇವನಿಗೆ ಉಪಾಧಿಯಾಗಿರುತ್ತದೆ.** ಅಂಥ ಆತ್ಮನು ಈ ಜಂತುವಿನ ಎಂದರೆ ಬ್ರಹ್ಮನು ಮೊದಲಾಗಿ ಸ್ತಂಬದವರೆಗಿನ[4] ಪ್ರಾಣಿಸಮೂಹದ ಗುಹೆಯಲ್ಲಿ ಎಂದರೆ ಹೃದಯದಲ್ಲಿ[5] ಇಡಲ್ಪಟ್ಟಿರುವನು, (ಅದರ) ಆತ್ಮನಾಗಿ ಇರುತ್ತಿರುವನು ಎಂದರ್ಥ. **ನೋಡುವದು, ಕೇಳುವದು, ಯೋಚಿಸುವದು, ಅರಿಯುವದು–ಎಂಬ ಗುರುತುಗಳುಳ್ಳ**[6] ಆ ಆತ್ಮನನ್ನು

---

1. ಭಾಂ. ೩-೧೪-೩ ರ ಸೂಚನೆ ಆ ಶ್ರುತಿಯಲ್ಲಿ ಭತ್ತ, ಜವೆ, ಸಾಸುವೆ, ಸಾನೆ–ಎಂಬ ಸಣ್ಣ ವಸ್ತುಗಳನ್ನು ಪೃಥ್ವಿ, ಅಂತರಿಕ್ಷ, ಸ್ವರ್ಗಲೋಕ–ಎಂಬ ದೊಡ್ಡ ವಸ್ತುಗಳನ್ನೂ ಉದಾಹರಿಸಿದೆ.

2. ಆ ವಸ್ತುವಿನ ಪರಮಾರ್ಥರೂಪವು ಆತ್ಮನೇ.

3. ವಸ್ತುವೆಂದರೆ ಕರ್ಮ ಎಂದು ಅರ್ಥಮಾಡಬೇಕೆಂತ (ಗೋ॥) ವ್ಯಾಖ್ಯಾನಕಾರರು ಹೇಳುತ್ತಾರೆ ಅದೇನೂ ಅವಶ್ಯವಿಲ್ಲ; ರೂಪವೆಂಬ ಮಾತಿನಲ್ಲಿ ಕರ್ಮವನ್ನೂ ಅಡಕಮಾಡುವದು ಭಾಷ್ಯಕಾರರ ಶೈಲಿಯಾಗಿದೆ. ಅಣುವಸ್ತುವಿನ ಉಪಾಧಿಯಿಂದ ಅಣುವೆಂದೂ ಮಹಾವಸ್ತುವಿನ ಉಪಾಧಿಯಿಂದ ಮಹತ್ತೆಂದೂ ಬ್ರಹ್ಮಕ್ಕೆ ವ್ಯವಹಾರವು ಬರಬಹುದು ಎಂಬುದು ಭಾಷ್ಯದ ಭಾವ.

4. ಸ್ತಂಬವೆಂಬುದು ಒಂದು ಬಗೆಯ ಹುಲ್ಲು. ಸ್ಥಾವರಪ್ರಾಣಿಗಳಲ್ಲಿ ತೀರ ಕಡಿಮೆಯ ತರದ ಪ್ರಾಣಿಯವರೆಗಿನ ಎಂದರ್ಥ.

5. ಹಿಂದೆ ೧೩ರಲ್ಲಿ ಗುಹಾಹಿತಮ್ ಎಂಬುದಕ್ಕೆ ಬರೆದಿರುವ ಭಾಷ್ಯವನ್ನು ನೋಡಿ.

6. ಇಲ್ಲಿ ಲಿಂಗವೆಂಬ ಮಾತಿಗೆ ಶ್ರವಣಮಾನನನಿದಿಧ್ಯಾಸನರೂಪವಾದ ' ಸಾಧನ ' ಎಂದು (ಗೋ॥) ವ್ಯಾಖ್ಯಾನದಲ್ಲಿದೆ. ನಮ್ಮ ಅನುವಾದಕ್ಕೆ ಪ್ರ. ಭಾ. ೪-೯, ೩. ೧೩ನೆಯ ಅಧ್ಯಾಯದ ಉಪಸಂಹಾರ ಭಾಷ್ಯ, ಸೂ. ಭಾ. ೧-೩-೧೯ ಮುಂತಾದ ಭಾಷ್ಯವಾಕ್ಯಗಳು ಬೆಂಬಲವಾಗಿವೆ.

ಅಕ್ರತುವಾದವನು ಎಂದರೆ ಕಾಮಗಳಿಲ್ಲದವನು, ಕಂಡಿರುವ (ಈ ಲೋಕದ) ಮತ್ತು ಕಾಣದೆ ಇರುವ (ಪರಲೋಕದ) ಹೊರಗಿನ ವಿಷಯಗಳಿಂದ ಹಿಂತೆಗೆದಿರುವ ಬುದ್ಧಿಯುಳ್ಳವನು ಎಂದರ್ಥ. ಯಾವಾಗ ಹೀಗೆ (ಆಗುವನೋ) ಆಗ ಮನಸ್ಸೇ ಮುಂತಾದ ಕರಣಗಳೆಂಬ ಧಾತುಗಳು–(ಇವು) ಶರೀರವನ್ನು ಧರಿಸಿರುವದರಿಂದ ಧಾತುಗಳೆನಿಸಿರುತ್ತವೆ (ಈ ಧಾತುಗಳು)–ಪ್ರಸನ್ನವಾಗುತ್ತವೆ. **ಈ ಧಾತುಗಳ ಪ್ರಸನ್ನತೆಯಿಂದ**[1] **ಕರ್ಮದಿಂದ ವೃದ್ಧಿಯಾಗಲಿ ಕ್ಷಯವಾಗಲಿ ಆಗುವದಿಲ್ಲ ವೆಂಬ**[2] **ಆತ್ಮನ ಮಹಿಮೆಯನ್ನು ಕಂಡುಕೊಳ್ಳುವನು.** "ಇವನೇ ನಾನಾಗಿರುವೆನು" ಎಂದು ನೇರಾಗಿ ತಿಳಿದುಕೊಳ್ಳುವನು.[3] ಅದರಿಂದ (ಶೋಕವಿಲ್ಲದವನಾಗುವನು) ಶೋಕವನ್ನು ನೀಗಿಕೊಂಡವನಾಗುವನು.[4]

(ಭಾಷ್ಯ)

೭೫. ಅನ್ಯಥಾ ದುರ್ವಿಜ್ಞೇಯೋಽಯಮಾತ್ಮಾ ಕಾಮಿಭಿಃ ಪ್ರಾಕೃತ ಪುರುಷೈಃ ಯಸ್ಮಾತ್—

(ಭಾಷ್ಯಾರ್ಥ)

ಹಾಗಿಲ್ಲದಿದ್ದರೆ ಕಾಮಿಗಳಾದ ಸಾಮಾನ್ಯ ಜನರಿಗೆ ಈ ಆತ್ಮನನ್ನು ತಿಳಿಯುವದು ಕಷ್ಟ. ಏಕೆಂದರೆ :—

ಆಸೀನೋ ದೂರಂ ವ್ರಜತಿ
ಶಯಾನೋ ಯಾತಿ ಸರ್ವತಃ ।
ಕಸ್ತಂ ಮದಾಮದಂ ದೇವಂ
ಮದನ್ಯೋ ಜ್ಞಾತುಮರ್ಹತಿ ॥ ೨೧ ॥

---

1. ಇಂದ್ರಿಯಗಳೂ ಮನಸ್ಸೂ ಪ್ರಸನ್ನನಾದವನಿಗೆ ಮಾತ್ರವೇ ಆತ್ಮನಿಗೆ ಧರ್ಮಾಧರ್ಮಗಳ ಸಂಬಂಧವಿಲ್ಲವೆಂಬ ತತ್ತ್ವವು ಮನಸ್ಸಿನಲ್ಲಿ ಮಿಂಚುವದು–ಎಂದು ಧಾವ.

2. ಆತ್ಮನು ನಿರ್ವಿಕಾರಿ, ಅವನಲ್ಲಿ ಹೆಚ್ಚುಕಡಿಮೆಗಳು ಆಗುವದಿಲ್ಲ. ತೈ. ಬ್ರಾ. ೧೨-೯-೭ ಬೃ. ೪-೪-೨೨, ೨೩.

3. ಜ್ಞಾನದಿಂದ ಹೀಗೆ ತಿಳಿದುಕೊಳ್ಳುವದನ್ನೇ ಆತ್ಮನ ಸಾಕ್ಷಾತ್ಕಾರವೆಂದು ತಿಳಿಯಬೇಕು.

4. ಇಲ್ಲಿ "ವೀತಶೋಕೋ ಭವತಿ" ಎಂದಿಷ್ಟೇ (ಆ।।) ಪಾಠದಲ್ಲಿದೆ; "ವಿಗತ ಶೋಕೋ ಭವತಿ" ಎಂಬ (ವಾ।।) ಪಾಠದ ವಾಕ್ಯವು ಅರ್ಥಮಾತ್ರವಾಗುವದರಿಂದ "ವೀತ ಶೋಕಃ" ಎಂಬ ಮಾತು ಲೇಖಕರ ಪ್ರಮಾದದಿಂದ ಬಿಟ್ಟುಹೋಗಿದೆ ಎಂದು ಕಲ್ಪಿಸಬೇಕಾಗುವದು.

೨೧. ಕೂತುಕೊಂಡು ದೂರ ಹೋಗುತ್ತಿರುವನು; ಮಲಗಿಕೊಂಡು ಎಲ್ಲಾ ಕಡೆಯಲ್ಲಿಯೂ ಹೋಗಿರುತ್ತಾನೆ. ಮದಾಮದಸ್ವರೂಪನಾದ ಆ ದೇವನನ್ನು ನನಗಿಂತ ಬೇರೆಯವನು ಯಾವನು ತಿಳಿದಾನು?

(ಭಾಷ್ಯ)

೨೬. ಆಸೀನಃ ಅವಸ್ಥಿತಃ ಅಚಲ ಏವ ಸ್ಯ ದೂರಂ ವ್ರಜತಿ । ಶಯಾನಃ ಯಾತಿ ಸರ್ವತಃ । ಏವಮಸೌ ಆತ್ಮಾ ದೇವೋ ಮದಾಮದಃ ಸಮದೋಽಮದಶ್ಚ, ಸಹರ್ಷೋ-ಽಹರ್ಷಶ್ಚ ವಿರುದ್ಧಧರ್ಮವಾ । ಅತೋಽಶಕ್ಯತ್ವಾತ್ ಜ್ಞಾತುಂ ಕಃ ತಂ ಮದಾಮದಂ ದೇವಂ ಮದನ್ಯಃ ಜ್ಞಾತುಮ್ ಅರ್ಹತಿ? ಅಸ್ಮದಾದೇರೇವ ಸೂಕ್ಷ್ಮ ಬುದ್ಧೇಃ ಪಣ್ಡಿತಸ್ಯ ಸುವಿಜ್ಞೇಯೋಽಯಮಾತ್ಮಾ ಸ್ಥಿತಿಗತಿನಿತ್ಯಾನಿತ್ಯಾದಿವಿರುದ್ಧಾನೇಕಧರ್ಮೋಪಾಧಿಕತ್ವಾತ್ ವಿರುದ್ಧಧರ್ಮವಾ[1] ವಿಶ್ವರೂಪ ಇವ ಚಿನ್ತಾಮಣಿವತ್ ಅವಭಾಸತೇ । ಅತೋ ದುರ್ವಿಜ್ಞೇಯತ್ವಂ ದರ್ಶಯತಿ " ಕಸ್ತಂ ಮದನ್ಯೋ ಜ್ಞಾತುಮರ್ಹತಿ " ಇತಿ । ಕರಣಾನಾಮುಪಶಮಃ ಶಯನಮ್ । ಕರಣಜನಿತಸ್ಯ ಏಕದೇಶವಿಜ್ಞಾನಸ್ಯ ಉಪಶಮಃ ಶಯಾನಸ್ಯ ಭವತಿ । ಯದಾ ಚೈವಂ ಕೇವಲ ಸಾಮಾನ್ಯವಿಜ್ಞಾನತ್ವಾತ್ ಸರ್ವತೋ ಯಾತೀವ । ಯದಾ ವಿಶೇಷವಿಜ್ಞಾನಸ್ಥಃ ಸ್ವೇನ ರೂಪೇಣ ಸ್ಥಿತ ಏವ ಸ್ಯ ಮನಆದಿಗತಿಷು ತದುಪಾಧಿಕತ್ವಾದ್ ದೂರಂ ವ್ರಜತೀವ । ಸ ಚ ಇಹೈವ ವರ್ತತೇ ॥

(ಭಾಷ್ಯಾರ್ಥ)

ಕೂತುಕೊಂಡು ಅಲುಗಾಡದೆ (ಇದ್ದಲ್ಲಿಯೇ) ಇದ್ದುಕೊಂಡು ದೂರ ಹೋಗುತ್ತಿರುವನು, ಮಲಗಿಕೊಂಡು ಎಲ್ಲಾ ಕಡೆಯಲ್ಲಿಯೂ ಹೋಗಿರುತ್ತಾನೆ. ಹೀಗೆ ಈ ಆತ್ಮನೆಂಬ ದೇವನು ಮದಾಮದಸ್ವರೂಪನು, ಎಂದರೆ ಹರ್ಷದಿಂದ ಕೂಡಿರುವವನೂ ಹರ್ಷವಿಲ್ಲದವನೂ (ಆಗಿರುತ್ತಾನೆ), ವಿರುದ್ಧವಾದ ಧರ್ಮಗಳುಳ್ಳವನಾಗಿರುತ್ತಾನೆ. ಆದ್ದರಿಂದ ತಿಳಿಯುವದಕ್ಕೆ ಅಶಕ್ಯನಾಗಿರುವದರಿಂದ ಆ ಮದಾಮದಸ್ವರೂಪನಾದ ದೇವನನ್ನು ನನಗಿಂತ ಬೇರೆಯವನು ಯಾವನು ತಿಳಿದಾನು? ನನ್ನಂಥ ಸೂಕ್ಷ್ಮ ಬುದ್ಧಿಯ ಜ್ಞಾನಿಗೇ ಈ ಆತ್ಮನನ್ನು ಸುಲಭವಾಗಿ ತಿಳಿಯುವದಕ್ಕೆ ಆಗುತ್ತದೆ. ನಿಂತಿರುವದು (ಆಗಲೇ) ಓಡಾಡುತ್ತಿರುವದು; ನಿತ್ಯವಾಗಿರುವದು ಅನಿತ್ಯವಾಗಿರುವದು– ಮುಂತಾದ ಪರಸ್ಪರವಿರುದ್ಧವಾದ ಅನೇಕ ಧರ್ಮಗಳು (ಇವನಿಗೆ) ಉಪಾಧಿಯಾಗಿರುವದರಿಂದ ಇವನು ವಿರುದ್ಧವಾದ ಧರ್ಮಗಳುಳ್ಳವನಾಗಿ ಚಿಂತಾಮಣಿಯ ಹಾಗೆ

1. (ವಾ॥) ಪಾಠ.

ಎಲ್ಲಾ ರೂಪಗಳನ್ನೂ ಉಳ್ಳವನಂತೆ[1] ತೋರುತ್ತಿರುವನು. ಆದ್ದರಿಂದ ಇವನನ್ನು ತಿಳಿದುಕೊಳ್ಳುವದು (ಅಜ್ಞಾನಿಗಳಿಗೆ ಬಲು) ಕಷ್ಟ–(ಎಂದು) ತಿಳಿಸುವದಕ್ಕೆ "ಆವನನ್ನು ನನಗಿಂತ ಬೇರೆಯವನು ಯಾವನು ತಿಳಿದಾನು?" ಎಂದು ಹೇಳಿರುತ್ತಾನೆ.

ಕರಣಗಳು ಉಪಶಾಂತಿಯಾಗುವದೇ ಶಯನವು. ಕರಣಗಳಿಂದ ಉಂಟಾಗುವ ಒಂದಂಶದ ವಿಜ್ಞಾನವು ಮುಗಿದಾತನಿಗೆ ಹೋಗಿಬಿಡುತ್ತದೆ. ಹೀಗೆ (ವಿಶೇಷ ಜ್ಞಾನವು ಹೋಗಿ) ರುವಾಗ (ಆತ್ಮನು) ಬರಿಯ **ಸಾಮಾನ್ಯವಿಜ್ಞಾನರೂಪ**[2] ನಾಗಿರುವದರಿಂದ ಎಲ್ಲಾ ಕಡೆಯಲ್ಲಿಯೂ ಹೋಗಿರುವಂತಿರುವನು, ಯಾವಾಗ **ವಿಶೇಷ ವಿಜ್ಞಾನ**ದಲ್ಲಿರುವನೋ[3] (ಆಗ) ತನ್ನ ರೂಪದಲ್ಲಿ ಇದ್ದುಕೊಂಡೇ ಇದ್ದರೂ ಮನಸ್ಸೇ ಮುಂತಾದವುಗಳ ಚಲನೆಗಳಾಗುವಾಗ ಅವುಗಳೇ (ಆತ್ಮನಿಗೆ) ಉಪಾಧಿಯಾಗಿರುವದರಿಂದ[4] (ಇವನೂ(ದೂರವಾಗಿ ಹೋಗುತ್ತಿರುವಂತಿರುವನು. ಆದರೆ ಅವನು (ನಿಜವಾಗಿ) ಇಲ್ಲಿಯೇ[5] ಇರುತ್ತಾನೆ.

(ಭಾಷ್ಯ)

೭೭. ತದ್ವಿಜ್ಞಾನಾಚ್ಚ ಶೋಕಾತ್ಯಯ ಇತ್ಯಪಿ ದರ್ಶಯತಿ—

(ಭಾಷ್ಯಾರ್ಥ)

ಮತ್ತು ಆ (ಆತ್ಮನನ್ನು) ಅರಿಯುವದರಿಂದ ಶೋಕವನ್ನೂ ದಾಟಬಹುದು ಎಂಬುದನ್ನೂ[6] ತೋರಿಸಿಕೊಡುತ್ತಾನೆ—

---

1. (ಆ॥ ಗೋ॥) ವ್ಯಾಖ್ಯಾನಕಾರರು ವಿಶ್ವರೂಪವೆಂಬುದೂ ಒಂದು ರತ್ನವೆಂದು ಬರೆದಿದ್ದಾರೆ. ಆದರೆ ಪ್ರಕರಣವನ್ನು ನೋಡಿದರೆ ಈ ಮಾತು ಆತ್ಮವಿಶೇಷಣವಾಚಕವೆಂದೇ ತೋರುತ್ತದೆ.

2. ಆತ್ಮನು ಅರಿವಿನರೂಪದಿಂದ ಎಲ್ಲಾ ಉಪಾಧಿಗಳಲ್ಲಿಯೂ ತೋರಿಕೊಳ್ಳುತ್ತಲೇ ಇರುವನು, ಉಪಾಧಿಗಳಿಲ್ಲದಾಗಲೂ ಆ ರೂಪದಿಂದ ಇರುವನು. ಈ ಅರಿವಿಗೆ ಸಾಮಾನ್ಯ ಜ್ಞಾನವೆಂದು ಹೆಸರು

3. ಇದು ಮನೆ, ಇದು ಬಾಗಿಲು–ಎಂದು ಆಗುವ ಬಿಡಿಯರಿವಿಗೆ ವಿಶೇಷಜ್ಞಾನವೆಂದು ಹೆಸರು. ಎಚ್ಚರಕನಸುಗಳಲ್ಲಿ ಮಾತ್ರ ಈ ಜ್ಞಾನವು ಇರುತ್ತದೆ.

4. ಆತ್ಮನಿಗೆ ಮನೆಯ ಜ್ಞಾನವಾಯಿತು, ಬಾಗಿಲ ಜ್ಞಾನವಾಯಿತು ಎಂಬಾಗ ಮನಸ್ಸು, ಇಂದ್ರಿಯ–ಮುಂತಾದವುಗಳಲ್ಲಿ ಆಗುವ ಮಾರ್ಪಾಡೆಂಬ ಉಪಾಧಿಯಿಂದ ಆತ್ಮನಲ್ಲಿಯೇ ಮಾರ್ಪಾಡು ಆದಂತೆ ಸಾಮಾನ್ಯರಿಗೆ ತೋರುವದು.

5. ತಾನು ಇದ್ದ ಸ್ವರೂಪದಲ್ಲಿಯೇ.

6. ಆಕಾಮನು ಮಾತ್ರ ತಿಳಿದುಕೊಳ್ಳುತ್ತಾನೆ ಎಂಬುದೊಂದು, ತಿಳಿದವನು ಶೋಕವಿಲ್ಲದವನಾಗುತ್ತಾನೆ ಎಂಬುದೊಂದು–ಹೀಗೆ ಎರಡು ವಿಷಯಗಳನ್ನು ೨೦ನೆಯ ಮಂತ್ರದಲ್ಲಿ ಹೇಳಿತ್ತಷ್ಟೆ. ೨೧ನೆಯ ಮಂತ್ರದಲ್ಲಿ ಮೊದಲನೆಯ ವಿಷಯವನ್ನು ವಿವರಿಸಿದ್ದಾಯಿತು. ಈಗ ಎರಡನೆಯದನ್ನು ವಿವರಿಸುವನು–ಎಂದು ಭಾವ.

ಅಶರೀರಗ್ಂ ಶರೀರೇಷು
ಅನವಸ್ಥೇಷ್ವವಸ್ಥಿತಮ್ ।
ಮಹಾನ್ತಂ ವಿಭುಮಾತ್ಮಾನಂ
ಮತ್ವಾ ಧೀರೋ ನ ಶೋಚತಿ ॥ ೨೨ ॥

೨೨. ಅನವಸ್ಥವಾದ ಶರೀರಗಳಲ್ಲಿ ಅಶರೀರನಾಗಿ ಅವಸ್ಥಿತನಾಗಿರುವವನಾಗಿಯೂ ದೊಡ್ಡವನಾಗಿಯೂ ವಿಭುವಾಗಿಯೂ ಇರುವ ಆತ್ಮನನ್ನು ತಿಳಿದುಕೊಂಡರೆ ಧೀರನು ಶೋಕಿಸುವದಿಲ್ಲ.

(ಭಾಷ್ಯ)

೨೮. ಅಶರೀರಃ ಸ್ವೇನ ರೂಪೇಣ ಆಕಾಶಕಲ್ಪಃ ಆತ್ಮಾ । ತಮ್ ಅಶರೀರಮ್ । ಶರೀರೇಷು ದೇವಪಿತೃಮನುಷ್ಯಾದಿಶರೀರೇಷು ಅನವಸ್ಥೇಷು ಅವಸ್ಥಿತಿರಹಿತೇಷು, ಅನಿತ್ಯೇಷು । ಅವಸ್ಥಿತಂ ನಿತ್ಯಮ್ ಅವಿಕೃತಮ್ ಇತ್ಯೇತತ್ । ಮಹಾನ್ತಮ್ । ಮಹತ್ತ್ವಸ್ಯ ಆಪೇಕ್ಷಿಕತ್ವಶಙ್ಕ್ಯಾಯಾಮ್ ಆಹ–ವಿಭುಂ ವ್ಯಾಪಿನಮ್ । ಆತ್ಮಾನಮ್ । ಆತ್ಮಗ್ರಹಣಂ ಸ್ವತೋಽನನ್ಯತ್ವಪ್ರದರ್ಶನಾರ್ಥಮ್ । ಆತ್ಮಶಬ್ದಃ ಪ್ರತ್ಯಗಾತ್ಮವಿಷಯ ಏವ ಮುಖ್ಯಃ । ತಮ್ ಈದೃಶಮ್ ಆತ್ಮಾನಮ್ । ಮತ್ವಾ "ಅಯಮಹಮ್" ಇತಿ । ಧೀರಃ ಧೀಮಾ ನ ಶೋಚತಿ । ನ ಹ್ಯೇವಂವಿಧ ಸ್ವಾತ್ಮವಿದಃ ಶೋಕೋಪಪತ್ತಿಃ ॥

(ಭಾಷ್ಯಾರ್ಥ)

ಅಶರೀರನು ಎಂದರೆ ತನ್ನ ರೂಪದಿಂದ ಆಕಾಶದಂತೆ (ಶರೀರವಿಲ್ಲದ)[1] ಆತ್ಮನು ಹಾಗೆ ಅಶರೀರನಾಗಿರುವ ಆ (ಆತ್ಮನನ್ನು) ಅನವಸ್ಥವಾದ ಎಂದರೆ ನಿಲುಗಡೆ ಇಲ್ಲದ, ಅನಿತ್ಯವಾದ ಶರೀರಗಳಲ್ಲಿ ದೇವತೆಗಳು, ಪಿತೃಗಳು, ಮನುಷ್ಯರು–ಮೊದಲಾದವರ ಶರೀರಗಳಲ್ಲಿ[2] ಅವಸ್ಥಿತನಾಗಿರುವ ಎಂದರೆ ನಿತ್ಯನಾಗಿ ಯಾವ ವಿಕಾರವೂ ಇಲ್ಲದಿರುವ[3] ಎಂದರ್ಥ. ದೊಡ್ಡವನಾಗಿಯೂ–ದೊಡ್ಡದೆಂಬುದು ಮತ್ತೊಂದರ ಹೋಲಿಕೆಯಿಂದ ಹೇಳಿದ್ದಿರಬಹುದೆಂಬ ಶಂಕೆ (ಬಂದೀತೆಂದು)–ವಿಭುವಾಗಿಯೂ, ವ್ಯಾಪಿಯಾಗಿಯೂ[4]

---

1. ಆತ್ಮನಿಗೆ ಶರೀರವು ಇಲ್ಲವೇ ಇಲ್ಲ, ಏಕೆಂದರೆ ಅಳತೆಗೆ ಸಿಕ್ಕಿರುವ ವಸ್ತುವಿಗೆ ಮಾತ್ರ ಶರೀರವಿರಬಹುದು.

2. ಬ್ರಹ್ಮನು ಮೊದಲುಗೊಂಡು ಸ್ಥಾವರದವರೆಗಿನ ಪ್ರಾಣಿಗಳ ಶರೀರಗಳೆಲ್ಲವೂ ಇಲ್ಲಿ ವಿವಕ್ಷಿತವೆಂದು ಭಾವ.

3. ದೇವಶರೀರದಿಂದ ಹೆಚ್ಚಿಗೆಯಾಗಲಿ ಮನುಷ್ಯಾದಿ ಶರೀರದಿಂದ ಆಗುವ ಕಡಿಮೆಯಾಗಲಿ ಆತ್ಮನಿಗೆ ಇರುವದಿಲ್ಲ. ಮಾ. ಕಾ. ಭಾ. ೩-೧೦ ನೋಡಿ.

4. ಆತ್ಮನು ಅಶರೀರನು, ನಿತ್ಯನು–ಎಂಬುದಕ್ಕೆ ಕಾರಣವನ್ನು ಹೇಳುವ ಮಾತಿದು.

(ಎಂಬ ವಿಶೇಷಣವನ್ನು ಜೋಡಿಸಿರುತ್ತದೆ). ಇಂಥ ಆತ್ಮನನ್ನು–(ಇಲ್ಲಿ) **ಆತ್ಮ ಎಂಬ ಮಾತನ್ನು ತೆಗೆದುಕೊಂಡಿರುವದು ತನಗಿಂತ ಬೇರೆಯಲ್ಲವೆಂದು ತಿಳಿಸುವ ದಕ್ಕೆ. ಆತ್ಮಶಬ್ದಕ್ಕೆ (ನಮ್ಮ) ಒಳಗಿರುವ ಆತ್ಮ ಎಂಬುದೇ ಮುಖ್ಯವಾದ ಅರ್ಥವು.**[1] ಆ (ಇಂಥ ಆತ್ಮನನ್ನು)–ನಾನೇ ಇವನು ಎಂದು[2] ತಿಳಿದುಕೊಂಡ ಧೀರನು ಎಂದರೆ ಬುದ್ದಿವಂತನು ಶೋಕಿಸುವದಿಲ್ಲ. ಏಕೆಂದರೆ ಈ ವಿಧವಾದ ಆತ್ಮನನ್ನು[3] ಅರಿತುಕೊಂಡವನಿಗೆ ಶೋಕವು ಉಂಟಾಗಲಾರದು

ಆತ್ಮಜ್ಞಾನಕ್ಕೆ ಸಾಧನ

(ಭಾಷ್ಯ)

೭೯. ಯದ್ಯಪಿ ದುರ್ವಿಜ್ಞೇಯೋಽಯಮಾತ್ಮಾ ತಥಾಪಿ ಉಪಾಯೇನ ಸುವಿಜ್ಞೇಯ ಏವ ಇತ್ಯಾಹ—

(ಭಾಷ್ಯಾರ್ಥ)

ಈ ಆತ್ಮನನ್ನು ತಿಳಿಯುವದು ಬಲು ಕಷ್ಟವಾಗಿರುವದಾದರೂ (ಸರಿಯಾದ) ಸಾಧನದಿಂದ (ಇವನನ್ನು) ಸುಲಭವಾಗಿ ತಿಳಿಯಲೇ ಬಹುದು ಎಂದು ಹೇಳುತ್ತಾನೆ:–

ನಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾ ಶ್ರುತೇನ ।
ಯಮೇವೈಷ ವೃಣುತೇ ತೇನ ಲಭ್ಯ-
ಸ್ತಸ್ಯೈಷ ಆತ್ಮಾ ವಿವೃಣುತೇ ತನೂಗ್ಂ ಸ್ವಾಮ್ ॥೨೩॥

೨೩. ಈ ಆತ್ಮನು ಪ್ರವಚನದಿಂದ ದೊರೆಯತಕ್ಕವನಲ್ಲ; ಮೇಧಾ (ಶಕ್ತಿ)ಯಿಂದ (ದೊರೆಯುವವ)ನಲ್ಲ, ಬಹಳವಾದ ಶ್ರವಣದಿಂದಲೂ (ದೊರೆಯುವವ)ನಲ್ಲ. ಯಾವನನ್ನೇ ಈತನು ಬೇಡುವನೋ ಅವನಿಂದ ದೊರೆಯುವವನಾಗಿರುವನು. ಅವನಿಗೆ ಈ ಆತ್ಮನು ತನ್ನ ತನುವನ್ನು ಬಿಚ್ಚಿ ತೋರಿಸುವನು.

---

1. ಆತ್ಮ ಎಂದರೆ ಸ್ವರೂಪವು ತಾನು ಎಂಬ ಅರ್ಥದಲ್ಲಿ ಮುಖ್ಯವಾಗಿರುವ ಈ ಶಬ್ದವನ್ನು ತಾನಲ್ಲದ ಪ್ರಧಾನ, ತನಗಿಂತ ಬೇರೆಯಾದ ತಟಸ್ಥೇಶ್ವರ–ಮುಂತಾದವುಗಳಿಗೆ ಉಪಯೋಗಿಸಿದರೆ ಮುಖ್ಯಾರ್ಥವನ್ನು ಬಿಟ್ಟಂತೆ ಆಗುತ್ತದೆ ಎಂದು ಭಾವ.

2. ಬೃ. ೪-೪-೧೨.

3. "ಏವಂವಿಧಸ್ಯಾತ್ಮವಿದಃ" ಎಂಬ (ವಾ॥ ಮೈ॥) ಪಾಠವನ್ನು ಇಟ್ಟುಕೊಂಡಿದೆ. "ಏವಂವಿಧಸ್ಯಾತ್ಮವಿದಃ" ಎಂಬ (ಆ॥) ಪಾಠದಲ್ಲಿ ಇಂಥ ಆತ್ಮಜ್ಞಾನಿಗೆ ಎಂದರ್ಥ. ಹೀಗೆ ಈ ಆತ್ಮನು ನಾನೇ ಎಂದು ತಿಳಿದುಕೊಂಡಂಥ ಅಪರೋಕ್ಷಜ್ಞಾನಿಗೆ ಎಂಬುದು ವಾಕ್ಯದ ಅಭಿಪ್ರಾಯವಾಗುವದು.

(ಭಾಷ್ಯ)

೮೦. ನಾಯಮಾತ್ಮಾ ಪ್ರವಚನೇನ ಅನೇಕವೇದಸ್ವೀಕರಣೇನ ಲಭ್ಯಃ ಜ್ಞೇಯಃ । ನಾಪಿ ಮೇಧಯಾ ಗ್ರನ್ಥಾರ್ಥಧಾರಣಶಕ್ತ್ಯಾ । ನ ಬಹುನಾ ಶ್ರುತೇನ ಕೇವಲೇನ । ಕೇನ ತರ್ಹಿ ಲಭ್ಯಃ ಇತಿ ? ಉಚ್ಯತೇ । ಯಮೇವ ಸ್ವಮಾತ್ಮಾನಮ್ ಏಷ ಸಾಧಕೋ ವೃಣುತೇ ಪ್ರಾರ್ಥಯತೇ ತೇನೈವ ಆತ್ಮನಾ ವರಿತ್ರಾ ಸ್ವಯಮ್ ಆತ್ಮಾ ಲಭ್ಯಃ ಜ್ಞಾಯತೇ ಇತ್ಯೇತತ್ । ನಿಷ್ಕಾಮಸ್ಯ[1] ಆತ್ಮಾನಮೇವ ಪ್ರಾರ್ಥಯತಃ ಆತ್ಮನೈವ ಆತ್ಮಾ ಲಭ್ಯತೇ ಇತ್ಯರ್ಥಃ । ಕಥಂ ಲಭ್ಯತ ಇತಿ ? ಉಚ್ಯತೇ । ತಸ್ಯ ಆತ್ಮಕಾಮಸ್ಯ ಏಷ ಆತ್ಮಾ ವಿವೃಣುತೇ ಪ್ರಕಾಶಯತಿ ಪಾರಮಾರ್ಥಿಕೀಂ ತನೂಂ ಸ್ವಾಂ ಸ್ವಕೀಯಾಮ್, ಸ್ವಯಾಥಾತ್ಮ್ಯಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಈ ಆತ್ಮನು ಪ್ರವಚನದಿಂದ ಎಂದರೆ ಅನೇಕ ವೇದಗಳನ್ನು (ಕಲಿತು) ಕೊಂಡ (ಮಾತ್ರ) ದಿಂದ ದೊರೆಯತಕ್ಕವನಲ್ಲ, ತಿಳಿಯಬರುವದಿಲ್ಲ. ಮೇಧಾಶಕ್ತಿಯಿಂದಲೂ ಎಂದರೆ ಗ್ರಂಥಗಳ ಅರ್ಥವನ್ನು ನೆನಪಿನಲ್ಲಿಡುವ ಶಕ್ತಿಯಿಂದಲೂ (ದೊರೆಯುವವ) ನಲ್ಲ. ಸುಮ್ಮನೆ[2] ಬಹಳ ಶ್ರವಣಮಾಡುವದರಿಂದಲೂ (ದೊರೆಯುವವ) ನಲ್ಲ ಹಾಗಾದರೆ ಏತರಿಂದ ದೊರೆಯುವನು ? ಎಂದರೆ ಹೇಳುತ್ತಾನೆ–ಯಾವ ತನ್ನ ಆತ್ಮನನ್ನೇ ಈತನು ಎಂದರೆ (ಈ) ಸಾಧಕನು ಬೇಡುವನೋ ಬೇಕೆನ್ನುತ್ತಿರುವನೋ ಆ ಬೇಡುವವನಾದ[3] ಆತ್ಮನಿಂದಲೇ ಆತ್ಮನು ದೊರೆಯುವನು ತಿಳಿಯಬರುವನು ಎಂದರ್ಥ. ನಿಷ್ಕಾಮನಾಗಿ ಆತ್ಮನೇ ಬೇಕೆನ್ನುತ್ತಿರುವವನಿಗೆ ಆತ್ಮನಿಂದಲೇ ಆತ್ಮನು ದೊರೆಯುವನು ಎಂದರ್ಥ. ಹೇಗೆ ದೊರೆಯುವನು ? ಎಂದರೆ ಹೇಳುತ್ತಾನೆ: ಅವನಿಗೆ ಎಂದರೆ ಆತ್ಮನನ್ನೇ ಬಯಸುತ್ತಿರುವವನಿಗೆ[4] ಈ ಆತ್ಮನು ತನ್ನ, ತನಗೆ ಸೇರಿದ,

---

1. "ನಿಷ್ಕಾಮಶ್ಚ ಆತ್ಮಾನಮೇವ ಪ್ರಾರ್ಥಯತೇ" ಎಂಬ (ವಾ॥) ಪಾರ ಅಗತ್ಯವಿಲ್ಲ.

2. ಮನನನಿದಿಧ್ಯಾಸನಗಳ ಸಹಾಯವಿಲ್ಲದೆ.

3. ಆತ್ಮನಿಗಿಂತ ಬೇರೆಯಾದದ್ದೆಲ್ಲವೂ ಅನಾತ್ಮವಾದದ್ದರಿಂದ ಅದು ನೇರಾಗಿ ಆತ್ಮ ಜ್ಞಾನಕ್ಕೆ ಸಾಧನವಾಗಲಾರದು, ಅನಾತ್ಮತಿರಸ್ಕಾರದಿಂದ ಆ ಆತ್ಮನೇ ನಾನು ಎಂಬುದನ್ನು ತಿಳಿಯಬೇಕೆಂಬ ಉತ್ಕಟೇಚ್ಛೆಯಿರುವವನಿಗೆ ಮಾತ್ರವೇ ಆತ್ಮಜ್ಞಾನವುಂಟಾಗುತ್ತದೆ. ಈ ಮಂತ್ರದಲ್ಲಿ 'ತೇನ' ಎಂಬ ಶಬ್ದದ ವ್ಯಾಖ್ಯಾನಾಂತರವನ್ನು ಮು. ಭಾ. ೩-೨-೩ರಲ್ಲಿ ನೋಡಿ.

4. ಆತ್ಮನನ್ನು ಬಿಟ್ಟು ಅನಾತ್ಮಭೋಗಕ್ಕಾಗಿ ಜನ್ಮಾಂತರಲೋಕಾಂತರಗಳನ್ನು ಪಡೆಯುತ್ತಿರುವದಕ್ಕೆ ಕಾಮವಿರುವದೇ ಕಾರಣವು; ಆತ್ಮನನ್ನು ಬಯಸುವವನಿಗೆ ಈ ತೊಂದರೆಯಿಲ್ಲವಾದ್ದರಿಂದ ಅವನಿಗೆ ಆತ್ಮಜ್ಞಾನದಿಂದ ಆತ್ಮಪ್ರಾಪ್ತಿಯಾಗುತ್ತದೆ. ಮು. ೩-೨-೩, ಬೃ. ೪-೪-೬.

ಪಾರಮಾರ್ಥಿಕವಾದ, ಶರೀರವನ್ನು ಎಂದರೆ ತನ್ನ ನಿಜವಾದ ತತ್ತ್ವವನ್ನು ಎಂದರ್ಥ; (ಅದನ್ನು) ಬಿಚ್ಚಿ ತೋರಿಸುವನು, ಬೆಳಗಿಸುತ್ತಾನೆ.

ನಾವಿರತೋ ದುಶ್ಚರಿತಾ-
ನ್ನಾ ಶಾನ್ತೋ ನಾಸಮಾಹಿತಃ ।
ನಾಶಾನ್ತಮಾನಸೋ ವಾಪಿ
ಪ್ರಜ್ಞಾನೇನೈನಮಾಪ್ನುಯಾತ್ ॥ ೨೪ ॥

೨೪. ದುರಾಚಾರವನ್ನು ಬಿಡದಿರುವವನು, ಶಾಂತನಲ್ಲದವನು, ಸಮಾಧಾನವಿಲ್ಲದವನು, ಮನಶ್ಶಾಂತಿಯಿಲ್ಲದವನು (ಇವರು ಯಾರೂ, ಪ್ರಜ್ಞಾನದಿಂದ ಇವನನ್ನು ಪಡೆಯಲಾರರು.

(ಭಾಷ್ಯ)

೮೧. ಕಿಂಚಾನ್ಯತ್ । ನ ದುಶ್ಚರಿತಾತ್ ಪ್ರತಿಷಿದ್ಧಾತ್ ಶ್ರುತಿಸ್ಮೃತ್ಯವಿಹಿತಾತ್ ಪಾಪಕರ್ಮಣಃ ಅವಿರತಃ ಅನುಪರತಃ । ನಾಪಿ ಇನ್ದ್ರಿಯಲೌಲ್ಯಾತ್ ಅಶಾನ್ತಃ ಅನುಪರತಃ । ನಾಪಿ ಅಸಮಾಹಿತಃ ಅನೇಕಾಗ್ರಮನಾಃ ವಿಕ್ಷಿಪ್ತಚಿತ್ತಃ । ಸಮಾಹಿತಚಿತ್ತೋಽಪಿ ಸ್ಯ ಸಮಾಧಾನಫಲಾರ್ಥಿತ್ವಾತ್ ನಾಪಿ ಅಶಾನ್ತಮಾನಸಃ ವ್ಯಾಪೃತಚಿತ್ತಃ । ಪ್ರಜ್ಞಾನೇನ ಬ್ರಹ್ಮವಿಜ್ಞಾನೇನ ಏನಂ ಪ್ರಕೃತಮ್ ಆತ್ಮಾನಮ್ ಆಪ್ನುಯಾತ್ । ಯಸ್ತು ದುಶ್ಚರಿತಾತ್ ವಿರತಃ, ಇನ್ದ್ರಿಯಲೌಲ್ಯಾಚ್ಚ, ಸಮಾಹಿತಚಿತ್ತಃ, ಸಮಾಧಾನಫಲಾದಪಿ ಉಪಶಾನ್ತಮಾನಸಶ್ಚ, ಆಚಾರ್ಯವಾ ಪ್ರಜ್ಞಾನೇನ ಯಥೋಕ್ತಮಾತ್ಮಾನಂ ಪ್ರಾಪ್ನೋತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತು ಏನೆಂದರೆ ದುರಾಚಾರವನ್ನು ಎಂದರೆ ಶ್ರುತಿಸ್ಮೃತಿಗಳಿಲ್ಲಿ ವಿಧಿಸದೆ ಇರುವ ಬೇಡವೆಂದು ಹೇಳಿರುವ[1] ಪಾಪಕರ್ಮವನ್ನು ಬಿಡದಿರುವವನು (ಅದನ್ನು) ಬಿಟ್ಟಿರದವನಾಗಲಿ, ಇಂದ್ರಿಯಗಳ ಲೋಲತೆಯನ್ನು (ಬಿಡದೆ) ಅಶಾಂತನಾಗಿರುವವನಾಗಲಿ ಎಂದರೆ (ಅದನ್ನು) ಬಿಟ್ಟಿರದವನಾಗಲಿ, ಸಮಾಧಾನವಿಲ್ಲದವನಾಗಲಿ ಎಂದರೆ ಏಕಾಗ್ರವಾದ ಮನಸ್ಸಿಲ್ಲದ ಚೆಲ್ಲಾಡುವ ಚಿತ್ತದವನಾಗಲಿ (ಎಂದರ್ಥ) ಸಮಾಧಾನದ ಚಿತ್ತವುಳ್ಳವನಾದರೂ (ಆ) ಸಮಾಧಾನದ ಫಲವನ್ನು ಬಯಸುವದರಿಂದ ಮನ

---

1. 'ವಿಧಿಸದೆ ಇರುವ' ಎಂದದ್ದರಿಂದ ವಿಧಿಸಿರುವ ದುಶ್ಚರಿತಗಳೂ ಉಂಟೆಂದು ಶಂಕಿಸಿ ಯಾರೆಂದು ಈ ಮಾತನ್ನುಪಯೋಗಿಸಿದೆ.

ಶ್ಯಾಂತಿಯಿಲ್ಲದವನು ಎಂದರೆ ಮನಸ್ಸು ಯಾವಾಗಲೂ ವ್ಯಾಪಾರಮಾಡುತ್ತಲೇ ಇರುವವನಾಗಲಿ ಪ್ರಜ್ಞಾನದಿಂದ ಎಂದರೆ ಬ್ರಹ್ಮವಿಜ್ಞಾನದಿಂದ ಇವನನ್ನು, ಪ್ರಕೃತನಾಗಿರುವ ಆತ್ಮನನ್ನು, ಪಡೆಯಲಾರನು. ಯಾವನಾದರೆ ದುರಾಚಾರವನ್ನು ಬಿಟ್ಟು, ಇಂದ್ರಿಯತಾಲ್ಯವನ್ನೂ ಬಿಟ್ಟು, ಚಿತ್ತಸಮಾಧಾನವನ್ನು ಹೊಂದಿ, ಸಮಾಧಾನದ ಫಲದಲ್ಲಿಯೂ ಬಯಕೆಯಿಲ್ಲದೆ[1] ಮನಶ್ಶಾಂತಿಯನ್ನು ಹೊಂದಿ (ಉತ್ತಮವಾದ) ಆಚಾರ್ಯನನ್ನು ಳ್ಳವನಾಗಿರುವನೋ[2] (ಅವನು) ಪ್ರಜ್ಞಾನದಿಂದ ಮೇಲೆ ಹೇಳಿದ ಆತ್ಮನನ್ನು ಪಡೆಯುವನು ಎಂದರ್ಥ.

ಯಸ್ಯ ಬ್ರಹ್ಮ ಚ ಕ್ಷತ್ರಂ ಚ
ಉಭೇ ಭವತ ಓದನಃ ।
ಮೃತ್ಯುರ್ಯಸ್ಯೋಪಸೇಚನಂ
ಕ ಇತ್ಥಾ ವೇದ ಯತ್ರ ಸಃ ॥ ೨೫ ॥

೨೫. ಯಾವನಿಗೆ ಬ್ರಹ್ಮವೂ ಕ್ಷತ್ರವೂ ಎರಡೂ ಅನ್ನವಾಗಿರುವವೋ, ಯಾವನಿಗೆ ಮೃತ್ಯುವು ಉಪ್ಪಿನಕಾಯಿಯಾಗಿರುವನೋ ಅವನು ಎಲ್ಲಿ ಎಂಬುದನ್ನು ಹೀಗೆ ಯಾವನು ಅರಿತಾನು?

(ಭಾಷ್ಯ)

೨೨. ಯಸ್ತ್ವನೇವಂಭೂತಃ, ಯಸ್ಯ ಆತ್ಮನಃ ಬ್ರಹ್ಮ ಚ ಕ್ಷತ್ರಂ ಚ ಬ್ರಹ್ಮಕ್ಷತ್ರೇ ಸರ್ವಧರ್ಮವಿಧಾರಕೇ ಅಪಿ ಸರ್ವತ್ರಾಣಭೂತೇ ಉಭೇ ಓದನಃ ಅಶನಂ ಭವತಃ ಸ್ಯಾತಾಮ್ ! ಸರ್ವಹರೋಽಪಿ ಮೃತ್ಯುಃ ಯಸ್ಯ ಉಪಸೇಚನಮಿವ ಓದನಸ್ಯ ಅಶನತ್ವೇಽಸ್ಯಪರ್ಯಾಪ್ತಃ ತಂ ಪ್ರಾಕೃತಬುದ್ಧಿಃ ಯಥೋಕ್ತಸಾಧನರಹಿತಃ ಸ್ಕಃ ಇತ್ಥಾ ಇತ್ಥಮ್ ಏವಮ್ । ಯಥೋಕ್ತಸಾಧನವಾನಿವ ಇತ್ಯರ್ಥಃ । ವೇದ ವಿಜಾನಾತಿ ಯತ್ರ ಸಃ ಆತ್ಮಾ ಇತಿ ॥

(ಭಾಷ್ಯಾರ್ಥ)

ಆದರೆ ಯಾವನು ಹೀಗೆ ಇರುವದಿಲ್ಲವೋ[3] ಅಂಥ ಪ್ರಾಕೃತಬುದ್ಧಿಯುಳ್ಳ, ಮೇಲೆ ಹೇಳಿದ ಸಾಧನಗಳಿಲ್ಲದ ಯಾವನು ತಾನೆ (ಈ ಆತ್ಮನನ್ನು ಅರಿತು

---

1. ಮೂ. ಕಾ. ೩-೩೩, ೪೪.

2. ಛಾ. ೬-೧೪-೨.

3 ಆತ್ಮನನ್ನೇ ಬಯಸುವದು, ದುರಾಚಾರವನ್ನು ಬಿಟ್ಟಿರುವದು-ಮುಂತಾದ ಗುಣಗಳಿಂದ ಕೂಡಿರುವದು ಈ ವಿಶೇಷಣಗಳಿಂದೊಡಗೂಡಿರುವದಿಲ್ಲವೋ.

ಕೊಂಡಾನು ?) ಎಲ್ಲಾ ಧರ್ಮವನ್ನೂ ನಿಲ್ಲಿಸಿಕೊಂಡಿರುವವುಗಳೂ, ಎಲ್ಲವನ್ನೂ ಕಾಪಾಡುತ್ತಿರುವವುಗಳೂ ಆದ ಬ್ರಹ್ಮ, ಕ್ಷತ್ರ—ಎಂಬೆರಡೂ[1] ಯಾವ ಆತ್ಮನಿಗೆ ಅನ್ನವಾಗಿರುವವೋ ಊಟವಾಗಿರುವವೋ (ಅಷ್ಟು ಮಾತ್ರ) ವಾದಾವೋ, ಎಲ್ಲವನ್ನೂ ಅಪಹರಿಸುವ[2] ಮೃತ್ಯುವು ಕೂಡ ಯಾವನಿಗೆ ಅನ್ನಕ್ಕೆ ಉಪ್ಪಿನಕಾಯಿಯಂತೆ ಅನ್ನವಾಗುವದಕ್ಕೂ ಸಾಲದೆ ಇರುವನೋ ಅಂಥ ಆತ್ಮನು ಎಲ್ಲಿ (ರುತ್ತಾನೆಂ)ಬುದನ್ನು ಹೀಗೆ ಎಂದರೆ ಮೇಲೆ ಹೇಳಿದ ಸಾಧನಗಳನ್ನುಳ್ಳವನಂತೆ (ಸಾಧನರಹಿತನಾದವನು ಯಾವನು ತಾನೆ)[3] ಅರಿತಾನು, ತಿಳಿದುಕೊಳ್ಳುವನು ?

ಒಂದನೆಯ ಅಧ್ಯಾಯ—ಮೂರನೆಯ ವಲ್ಲಿ

ಸಂಸಾರಗತಿ, ಮೋಕ್ಷಗತಿ

(ಭಾಷ್ಯ)

೮೩. " ಋತಂ ಪಿಬನ್ತೌ " ಇತ್ಯಸ್ಯಾ ವಲ್ಲ್ಯಾಃ ಸಮ್ಬನ್ಧಃ । ವಿದ್ಯಾವಿದ್ಯೇ ನಾನಾ ವಿರುದ್ಧಫಲೇ ಇತ್ಯುಪನ್ಯಸ್ತೇ, ನ ತು ಸಫಲೇ ತೇ ಯಥಾವನ್ನಿರ್ಣೀತೇ । ತನ್ನಿರ್ಣಯಾರ್ಥಾ ರಥರೂಪಕಕಲ್ಪನಾ । ತಥಾ ಚ ಪ್ರತಿಪತ್ತಿಸೌಕರ್ಯಮ್ । ಏವಂ ಚ ಪ್ರಾಪ್ತ್ಯಪ್ರಾಪ್ತ್ಯಗನ್ತೃಗನ್ತವ್ಯವಿವೇಕಾರ್ಥಂ ರಥರೂಪಕದ್ವಾರಾ ದ್ವಾವಾತ್ಮಾನೌ ಉಪನ್ಯಸ್ಯೇತೇ—

(ಭಾಷ್ಯಾರ್ಥ)

" ಋತಂ ಪಿಬನ್ತೌ " ಎಂದು (ಪ್ರಾರಂಭವಾಗಿರುವ) ಈ (ಮೂರನೆಯ)

---

1. ಬೃ. ೧-೪-೧೧, ಗೀ. ಭಾ. ೪-೧. ಇಲ್ಲಿ ಬ್ರಹ್ಮಕ್ಷತ್ರವೆಂಬುದು ಉಪಲಕ್ಷಣ ಚರಾಚರಪ್ರಾಣಿಗಳೆಲ್ಲವೂ ಅನ್ನವೇ.

2. ಸರ್ವಹರಮೃತ್ಯುವೆಂದರೆ ಧನಧಾನ್ಯಾದಿಗಳನ್ನು ನಾಶಗೊಳಿಸುವ ಮೃತ್ಯುವಲ್ಲ, ಮರಣರೂಪವಾದ ಮೃತ್ಯು. ಗೀ. ಭಾ. ೧೦-೩೪. ಮತ್ಯುವನ್ನೂ ತಿನ್ನುವವನು ಎಂಬ ಗುರುತಿನಿಂದ ಇಲ್ಲಿ ಹೇಳಿದ ಆತ್ಮನು ಪರಮಾತ್ಮನೇ ಎಂದು ಬ್ರ ಸೂ. ೧-೨-೯ರಲ್ಲಿ ನಿರ್ಣಯಿಸಿರುತ್ತದೆ.

3. ಅಧರ್ಮವನ್ನು ಮೀರದವನು ಧರ್ಮಕ್ಕೂ ಅಚೆ ಇರುವ ಆತ್ಮತತ್ತ್ವವನ್ನು ಎಂದಿಗೂ ತಿಳಿಯಲಾರನು ; ಮೃತ್ಯುವಿನ ಬಾಯಿಗೊಡ್ಡುವ ದುರಾಚಾರವುಳ್ಳವನು ಮೃತ್ಯುವಿಗೂ ಮೃತ್ಯುವಾದ ತತ್ತ್ವವನ್ನು ಅರಿತುಕೊಳ್ಳಲಾರನು—ಎಂದು ಭಾವ.

ವಲ್ಲಿಯ ಸಂಬಂಧವು ಏನೆಂದರೆ: ವಿದ್ಯೆಯೂ ಅವಿದ್ಯೆಯೂ ಬೇರೆಬೇರೆಯಾಗಿ ವಿರುದ್ಧವಾದ ಫಲವುಳ್ಳವು ಎಂದು ಉಪಕ್ರಮದಲ್ಲಿ ಹೇಳಿರುತ್ತದೆ; ಆದರೆ ಅವು ಗಳೆರಡನ್ನೂ (ಅವುಗಳ) ಫಲಗಳ ಸಮೇತವಾಗಿ ಇದ್ದದ್ದು ಇದ್ದಂತೆ ನಿರ್ಣಯ ಮಾಡಿರುವದಿಲ್ಲ. ಅದನ್ನು ನಿರ್ಣಯಮಾಡುವದಕ್ಕಾಗಿ (ಈ ವಲ್ಲಿಯಲ್ಲಿ) ರಥದ ರೂಪಕವನ್ನು ಕಲ್ಪಿಸಿರುತ್ತದೆ. ಇದರಿಂದ (ವಿಷಯವನ್ನು) ತಿಳಿದುಕೊಳ್ಳುವದಕ್ಕೆ ಅನುಕೂಲವಾಗುತ್ತದೆ. ಈ ಪ್ರಕಾರದಿಂದ ಪಡೆಯುವವನು, ಪಡೆಯಲ್ಪಡತಕ್ಕವನು, ಹೋಗುವವನು (ಅವನು) ಯಾವನಲ್ಲಿಗೆ ಹೋಗುತ್ತಾನೋ ಅವನು[1]–(ಇವರಿಬ್ಬರನ್ನೂ) ವಿಂಗಡಿಸಿ ತಿಳಿಸುವದಕ್ಕಾಗಿ ರಥದ ರೂಪಕದ ಮೂಲಕ ಇಬ್ಬರು ಆತ್ಮರನ್ನು (ಈಗ) ಹೇಳಲಾಗುವದು.—

ಋತಂ ಪಿಬನ್ತೌ ಸುಕೃತಸ್ಯ ಲೋಕೇ
ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ।
ಛಾಯಾತಪೌ ಬ್ರಹ್ಮವಿದೋ ವದನ್ತಿ
ಪಞ್ಚಾಗ್ನಯೋ ಯೇ ಚ ತ್ರಿಣಾಚಿಕೇತಾಃ ॥ ೧ ॥

೧ ಸುಕೃತದ ಋತವನ್ನು ಪಾನವನ್ನು ಮಾಡುತ್ತಾ ಲೋಕದಲ್ಲಿ ಹೆಚ್ಚಿನ ಪರಾರ್ಧವಲ್ಲಿ ಗುಹೆಯನ್ನು ಹೊಕ್ಕಿರುವ (ಇಬ್ಬರನ್ನು) ನರಳುಬಿಸಿಲು ಗಳೆಂದು ಬ್ರಹ್ಮವಿದರೂ, ಪಂಚಾಗ್ನಿಗಳಾಗಿ ತ್ರಿಣಾಚಿಕೇತರೂ ಹೇಳುವರು

(ಭಾಷ್ಯ)

೪೪. ಋತಂ ಸತ್ಯಮ್ ಅವಶ್ಯಂಭಾವಿತ್ವಾತ್ ಕರ್ಮಫಲಂ ಪಿಬನ್ತೌ। ಏಕಸ್ತತ್ರ ಕರ್ಮಫಲಂ ಪಿಬತಿ ಭುಙ್ಕ್ತೇ ನೇತರಃ। ತಥಾಪಿ ಪಾತೃಸಮ್ಬನ್ಧಾತ್. "ಪಿಬನ್ತೌ" ಇತ್ಯುಚ್ಯತೇ ಛತ್ರಿನ್ಯಾಯೇನ। ಸುಕೃತಸ್ಯ ಸ್ವಯಂಕೃತಸ್ಯ ಕರ್ಮಣಃ "ಋತಮ್" ಇತಿ ಪೂರ್ವೇಣ ಸಮ್ಬನ್ಧಃ। ಲೋಕೇ ಅಸ್ಮಿನ್ ಶರೀರೇ। ಗುಹಾಯಾಂ ಬುದ್ಧೌ ಪ್ರವಿಷ್ಟೌ। ಪರಮೇ ಬಾಹ್ಯಪುರುಷಾಕಾಶಸಂಸ್ಥಾನಾಪೇಕ್ಷಯಾ ಪರಮಮ್। ಪರಸ್ಯ ಬ್ರಹ್ಮಣೋ ಅರ್ಧಃ ಸ್ಥಾನಂ ಪರಾರ್ಧಂ ಹಾರ್ದಾಕಾಶಮ್। ತಸ್ಮಿನ್ ಹಿ ಪರಂ ಬ್ರಹ್ಮ ಉಪಲಭ್ಯತೇ। ಅತಸ್ತಸ್ಮಿನ್ ಪರಮೇ ಪರಾರ್ಧೇ ಹಾರ್ದಾಕಾಶೇ ಪ್ರವಿಷ್ಟೌ ಇತ್ಯರ್ಥಃ। ತೌ ಚ ಛಾಯಾತಪಾವಿವ ವಿಲಕ್ಷಣೌ ಸಂಸಾರಿತ್ವಾಸಂಸಾರಿತ್ವೇನ ಬ್ರಹ್ಮವಿದೋ ವದನ್ತಿ ಕಥಯನ್ತಿ। ನ ಕೇವಲಮ್

1. ಸಂಸಾರಮೋಕ್ಷಗಳನ್ನು ಪಡೆಯಬೇಕಾಗಿರುವ ಜೀವನ ಸ್ವರೂಪ, ಜ್ಞಾನಿಯು ಮುಟ್ಟಬೇಕಾದ ಪರಮಾತ್ಮನ ಸ್ವರೂಪ–ಇವುಗಳನ್ನು.

ಅಕರ್ಮಿಣ ಏವ ವದನ್ತಿ । ಪಞ್ಚಾಗ್ನಯಃ ಗೃಹಸ್ಥಾಃ । ಯೇ ಚ ತ್ರಿಣಾಚಿಕೇತಾಃ ತ್ರಿಃ ಕೃತ್ವೋ ನಾಚಿಕೇತೋಽಗ್ನಿಶ್ಚಿತೋ ಯೈಸ್ತೇ ತ್ರಿಣಾಚಿಕೇತಾಃ ॥

(ಭಾಷ್ಯಾರ್ಥ)

ಋತವನ್ನು ಎಂದರೆ ಅವಶ್ಯವಾಗಿ ಆಗಿಯೇ ತೀರುವದರಿಂದ ಸತ್ಯವಾದ[1] ಕರ್ಮಫಲವನ್ನು ಪಾನಮಾಡುತ್ತಾ-(ಇವರಿಬ್ಬ)ರಲ್ಲಿ ಒಬ್ಬನು ಕರ್ಮಫಲವನ್ನು ಪಾನಮಾಡುತ್ತಿರುವನು, ಎಂದರೆ ಅನುಭವಿಸುತ್ತಿರುವನು, ಇನ್ನೊಬ್ಬನು (ಅನುಭವಿಸು)ವದಿಲ್ಲ. ಆದರೂ ಪಾನಮಾಡುವವನ ಸಂಬಂಧವು (ಪರಮಾತ್ಮನಿಗೂ) ಇರುವದರಿಂದ ಛತ್ರಿನ್ಯಾಯದಿಂದ[2] (ಇಬ್ಬರೂ) ಪಾನಮಾಡುತ್ತಿರುವರೆಂದು ಹೇಳಿರುತ್ತದೆ.[3] ಸುಕೃತದ ಎಂದರೆ ತಾನೇಮಾಡಿರುವ 'ಋತವನ್ನು' ಎಂದು (ಮೂಲದಲ್ಲಿ) ಹಿಂದಿರುವ (ಮಾತಿಗೆ) ಸೇರಿಸಿಕೊಳ್ಳಬೇಕು.[4] ಲೋಕದಲ್ಲಿ ಎಂದರೆ ಈ ಶರೀರದಲ್ಲಿ ಗುಹೆಯನ್ನು ಎಂದರೆ ಗುಹೆಯೊಳಗೆ ಬುದ್ಧಿಯಲ್ಲಿ (ಎಂದರ್ಥ). "ಹೆಚ್ಚಿನ" ಹೊರಗಿನ ಮತ್ತು ಶರೀರದ ಆಕಾಶದ ಆಕಾರಕ್ಕೆ ಹೋಲಿಸಿದರೆ[5] ಹೆಚ್ಚಿನದಾಗಿರುವದು, ಪರ (ಹೆಚ್ಚಿನ) ಎಂದರೆ ಬ್ರಹ್ಮದ ಅರ್ಧವು ಎಂದರೆ ಸ್ಥಾನವಾಗಿರುವದರಿಂದ ಪರಾರ್ಧವು. ಏಕೆಂದರೆ ಅಲ್ಲಿಯೇ ಬ್ರಹ್ಮವು ತಿಳಿಯಬರುವದು. ಆದ್ದರಿಂದ ಆ ಹೆಚ್ಚಿನ ಪರಾರ್ಧದಲ್ಲಿ, ಹಾರ್ದಾಕಾಶದಲ್ಲಿ, ಹೊಕ್ಕಿರುವ (ಇಬ್ಬರನ್ನು)

---

1. ಫಲವು ಸತ್ಯವೆಂದರೆ ನಿಜವಾಗಿರುವ ಪರಮಾರ್ಥವೆಂದು ಅಭಿಪ್ರಾಯವಲ್ಲ; ಕರ್ಮದಿಂದ ಅವಶ್ಯವಾಗಿ ಆಗುವದೆಂಬ ಕಾರಣದಿಂದ ಸತ್ಯವು. ಹೀಗೆಯೇ ಕರ್ಮವು ಸತ್ಯವೆಂದರೆ ಅವಶ್ಯವಾಗಿ ಫಲವನ್ನು ಕೊಡುವದು ಎಂದೇ ಅರ್ಥ. ಮು. ಭಾ. ೧-೨-೧ ರಲ್ಲಿ ಸತ್ಯವೆಂಬ ಮಾತಿನ ವ್ಯಾಖ್ಯಾನವನ್ನು ನೋಡಿರಿ.

2. ಒಂದು ಗುಂಪಿನಲ್ಲಿ ಒಬ್ಬನೇ ಕೊಡೆಯನ್ನು ಹಿಡಿದುಕೊಂಡಿದ್ದರೂ "ಕೊಡೆಯವರು ಹೋಗುತ್ತಿದಾರೆ" ಎಂದು ಹೇಳಬಹುದಲ್ಲವೆ? ಅದರಂತೆ ಒಬ್ಬನು ಪಾನಮಾಡಿದರೂ ಇಬ್ಬರೂ ಶರೀರದಲ್ಲಿರುವದರಿಂದ "ಪಿಬನ್ತೌ" (ಕುಡಿಯುತ್ತಿರುವವರು) ಎಂದಿದೆ– ಎಂದು ಭಾವ

3. ಇಲ್ಲಿ "ನ ಹಿ ಕೇವಲಸ್ಯಾತ್ಮನೋ ಭೋಕ್ತೃತ್ವಮಸ್ತಿ । ಬುದ್ಧ್ಯುಪಾಧಿಕೃತಮೇವ ಭೋಕ್ತೃತ್ವಮ್ । ಏವಂ ಚ ಸತಿ ವಕ್ಷ್ಯಮಾಣರಥಕಲ್ಪನಯಾ ವೈಷ್ಣವಸ್ಯ ಪದಸ್ಯಾತ್ಮತಯಾ ಪ್ರತಿಪತ್ತಿರುಪಪದ್ಯತೇ ನಾನ್ಯಥಾ" (ಬರಿಯ ಆತ್ಮನಿಗೆ ಭೋಕ್ತೃತ್ವವಿಲ್ಲವೇ ಇಲ್ಲ; ಬುದ್ಧಿಯೆಂಬ ಉಪಾಧಿಯಿಂದಲೇ ಭೋಕ್ತೃತ್ವವಾಗಿರುವದು. ಹೀಗಾದರೆ ಮುಂದೆ ರಥಕಲ್ಪನೆಯಿಂದ ವೈಷ್ಣವಪದವು ಆತ್ಮನು, ತನ್ನ ಸ್ವರೂಪವು, ಎಂದು ಅರಿತುಕೊಳ್ಳಬೇಕೆಂದಿರುವದು ಸರಿಯಾಗುತ್ತದೆ, ಇಲ್ಲದಿದ್ದರೆ ಇಲ್ಲ) ಎಂಬ ಹೆಚ್ಚಿಗೆಯ ವಾಕ್ಯವು ಕೆಲವು ಪುಸ್ತಕಗಳಲ್ಲಿದೆ.

4. "ಸುಕೃತಸ್ಯ ಋತಮ್" ಎಂದು ಅನ್ವಯ; ಸುಕೃತಸ್ಯ ಲೋಕೇ ಎಂದಲ್ಲ.

5. ಛಾ. ೩-೧೨ ರ ೭, ೮, ೯ನೆಯ ಮಂತ್ರಗಳನ್ನು ನೋಡಿರಿ.

ಎಂದರ್ಥ. ಅವರಿಬ್ಬರೂ ನೆರಳುಬಿಸಿಲುಗಳಂತೆ,[1] ಒಬ್ಬನು ಸಂಸಾರಿ, ಇನ್ನೊಬ್ಬನು ಅಸಂಸಾರಿ–ಹೀಗೆ (ಪರಸ್ಪರ) ವಿಲಕ್ಷಣಸ್ವರೂಪರು ಎಂದು ಬ್ರಹ್ಮಜ್ಞಾನಿಗಳು ಹೇಳುತ್ತಾರೆ, ತಿಳಿಸಿಕೊಡುತ್ತಾರೆ. ಅಕರ್ಮಿ(ಗಳಾದ ಜ್ಞಾನಿಗಳು) ಮಾತ್ರವೇ ಅಲ್ಲ, ಪಂಚಾಗ್ನಿಗಳಾದ ಗೃಹಸ್ಥರು,[2] ಮತ್ತು ಯಾರು ತ್ರಿಣಾಚಿಕೇತರಾಗಿರುವರೋ –ಮೂರು ಸಲ ನಾಚಿಕೇತನೆಂಬ ಅಗ್ನಿಯನ್ನು ಯಾರು ಚಯನಮಾಡಿರುವರೋ ಅವರು ತ್ರಿಣಾಚಿಕೇತರು[3]–(ಅವರೂ ಹೇಳುತ್ತಾರೆ).

ಯಃ ಸೇತುರೀಜಾನಾನಾ-
ಮಕ್ಷರಂ ಬ್ರಹ್ಮ ಯತ್ ಪರಮ್ ।
ಅಭಯಂ ತಿತೀರ್ಷತಾಂ ಪಾರಂ
ನಾಚಿಕೇತಗ್ಂ ಶಕೇಮಹಿ ॥ ೨ ॥

೨. ಯಾವನು ಯಾಗಮಾಡುವವರಿಗೆ ಸೇತುವಾಗಿರುವನೋ (ಅಂಥ) ನಾಚಿಕೇತನನ್ನು (ಸೇವಿಸಲು) ಶಕ್ತರಾಗಿರುವೆವು. ದಾಟಲಿಚ್ಛಿಸುವವರಿಗೆ ಅಭಯವಾದ ಪಾರವನ್ನು (ಅರಿಯಲು ಶಕ್ತರಾಗಿರುವೆವು).

(ಭಾಷ್ಯ)

೨೫. ಯಃ ಸೇತುರಿವ ಸೇತುಃ ಈಜಾನಾನಾಂ ಯಜಮಾನಾನಾಂ ಕರ್ಮಿಣಾಮ್, ದುಃಖಸಂತರಣಾರ್ಥತ್ವಾತ್, ನಾಚಿಕೇತೋಽಗ್ನಿಃ ತಂ ವಯಂ ಜ್ಞಾತುಂ ಚೇತುಂ ಚ ಶಕೇಮಹಿ ಶಕ್ನುವನ್ತಃ । ಕಿಂ ಚ ಯಚ್ಚ ಅಭಯಂ ಭಯಶೂನ್ಯಂ ಸಂಸಾರಸ್ಯ ಪಾರಮ್ ತಿತೀರ್ಷತಾಂ ತರ್ತುಮಿಚ್ಛತಾಮ್ । ಬ್ರಹ್ಮವಿದಾಂ ಯತ್ಪರಮಾಶ್ರಯಮ್ ಅಕ್ಷರಮ್ ಆತ್ಮಾಖ್ಯಂ ಬ್ರಹ್ಮ ತಚ್ಚ ಜ್ಞಾತುಂ ಶಕೇಮಹಿ । ಪರಾಪರೇ ಬ್ರಹ್ಮಣೀ ಕರ್ಮಿಬ್ರಹ್ಮವಿದಾಶ್ರಯೇ ವೇದಿತವ್ಯೇ ಇತಿ ವಾಕ್ಯಾರ್ಥಃ । ತಯೋರೇವ ಹಿ ಉಪನ್ಯಾಸಃ ಕೃತಃ “ ಋತಂ ಪಿಬನ್ತೌ ” ಇತಿ ॥

---

1. ಜೀವಾತ್ಮರೂಪವು ಅವಿದ್ಯಾಕಲ್ಪಿತವಾಗಿರುವದರಿಂದ ನೆರಳಿನಂತೆ ಇದೆ; ಪರಮಾತ್ಮರೂಪವು ಪರಮಾರ್ಥವಾಗಿ ಶುದ್ಧಚೈತನ್ಯಸ್ವರೂಪವಾಗಿರುವದರಿಂದ ಬಿಸಿಲಿನಂತೆ ಇದೆ. ಸೂ. ಭಾ. ೨-೩-೩೦.

2. ದ್ಯುಲೋಕ, ಪರ್ಜನ್ಯ, ಪೃಥಿವಿ, ಪುರುಷ, ಸ್ತ್ರೀ–ಎಂಬ ಐದನ್ನು ಅಗ್ನಿಯೆಂದು ಉಪಾಸನೆಮಾಡುವವರು. ಗೃಹಸ್ಥರಾದರೂ ಇವರಿಗೆ ದೇವಯಾನದಿಂದ ಸಗುಣಬ್ರಹ್ಮಪ್ರಾಪ್ತಿಯಾಗುವದೆಂದು ಛಾ. ೫-೯-೧, ೩ರಲ್ಲಿ ಹೇಳಿದೆ. ಅಲ್ಲಿಯ ಭಾಷ್ಯದಲ್ಲಿರುವ ಚರ್ಚೆಯನ್ನು ನೋಡಿರಿ.

3. ಈ ಶಬ್ದದ ವ್ಯಾಖ್ಯಾನವನ್ನು ಹಿಂದೆ ೨ಲರಲ್ಲಿ ಮಾಡಿದೆ. ತ್ರಿಣಾಚಿಕೇತರಿಗೆ ಅಪರಬ್ರಹ್ಮಪ್ರಾಪ್ತಿಯನ್ನೂ ಅಲ್ಲಿ ಹೇಳಿದೆ.

(ಭಾಷ್ಯಾರ್ಥ)

ಯಾವನು (ಯಾವ) ನಾಚಿಕೇತಾಗ್ನಿಯು "ಈಜಾನಾನಾಮ್" ಎಂದರೆ ಯಾಗ ಮಾಡುವವರಿಗೆ, ಕರ್ಮಿಗಳಿಗೆ, ಸೇತುವಾಗಿರುವನೋ, ದುಃಖವನ್ನು ದಾಟುವದೆಂಬ ಪ್ರಯೋಜನವನ್ನುಂಟುಮಾಡುವದರಿಂದ ಸೇತುವಿನಂತೆ ಇರುವನೋ, ಆ (ನಾಚಿಕೇತನನ್ನು)[1] ನಾವು ತಿಳಿದುಕೊಳ್ಳುವದಕ್ಕೂ ಚಯನಮಾಡುವದಕ್ಕೂ[2] "ಶಕೇಮಹಿ" ಶಕ್ತರಾಗಿರುವೆವು. ಮತ್ತು ಯಾವದು "ತಿತೀರ್ಷತಾಮ್" (ಸಂಸಾರವನ್ನು) ದಾಟಲಿಚ್ಛಿಸುವವರಿಗೆ ಅಭಯವಾದ ಅಂಜಿಕೆಯಿಲ್ಲದಂಥ ಸಂಸಾರದ ಆಚೆಯ ದಡವಾಗಿರುವದೋ, ಯಾವದು ಬ್ರಹ್ಮಜ್ಞಾನಿಗಳಿಗೆ ಉತ್ತಮವಾದ ಆಶ್ರಯವಾಗಿರುವದೋ, ನಾಶವಿಲ್ಲದ ಆತ್ಮನೆಂಬ ಹೆಸರಿನ ಆ ಬ್ರಹ್ಮವನ್ನೂ[3] ಅರಿತುಕೊಳ್ಳುವದಕ್ಕೆ ಶಕ್ತರಾಗಿರುವೆವು

ಕರ್ಮವನ್ನು ಬಲ್ಲವರು, ಬ್ರಹ್ಮವನ್ನು ಬಲ್ಲವರು–ಇವರುಗಳಿಗೆ ಆಶ್ರಯವಾಗಿರುವ ಪರ ಮತ್ತು ಅಪರ **ಈ ಎರಡು ಬ್ರಹ್ಮಗಳನ್ನೂ ತಿಳಿದುಕೊಳ್ಳಬೇಕು.** ಎಂಬುದು ವಾಕ್ಯದ (ಒಟ್ಟು) ಅರ್ಥವು. ಇವೆರಡನ್ನು ಕುರಿತೇ "ಋತಂ ಪಿಬನ್ತೌ" ಎಂಬ (೧ ನೆಯ) ಮಂತ್ರದಲ್ಲಿ ಉಪಕ್ರಮಮಾಡಿ (ಹೇಳಿ) ರುತ್ತದೆ[4]

(ಭಾಷ್ಯ)

೬. ತತ್ರ ಯ ಉಪಾಧಿಕೃತಃ ಸಂಸಾರೀ ವಿದ್ಯಾವಿದ್ಯಯೋರಧಿಕೃತಃ ಮೋಕ್ಷಗಮನಾಯ ಸಂಸಾರಗಮನಾಯ ಚ, ತಸ್ಯ ತದುಭಯಗಮನಸಾಧನೋ ರಥಃ ಕಲ್ಪ್ಯತೇ—

(ಭಾಷ್ಯಾರ್ಥ)

ಅವರಿಬ್ಬರಲ್ಲಿ[5] **ಉಪಾಧಿಯಿಂದ ಆಗಿ**[6] ವಿದ್ಯೆ ಅವಿದ್ಯೆ–ಈ ಎರಡಕ್ಕೂ ಮೋಕ್ಷವನ್ನು ಹೊಂದುವದು, ಸಂಸಾರವನ್ನು ಹೊಂದುವದು–ಈ ಎರಡಕ್ಕೂ ತಕ್ಕವ

---

1. ನಾಚಿಕೇತಾಗ್ನಿಯೆಂದರೆ ವಿರಾಟ್ಪುರುಷನೇ.

2 ಅಗ್ನಿಯನ್ನು ಚಯನಮಾಡಿ ಉಪಾಸನೆಮಾಡುವದು ಈಗಿನವರಿಗೂ ಸಾಧ್ಯ ಎಂದರ್ಥ.

3 ಪರಬ್ರಹ್ಮವನ್ನೂ. ಇದನ್ನು ಅರಿತುಕೊಳ್ಳುವದೂ ಈಗಿನವರಿಗೆ ಸಾಧ್ಯ.

4. ಉಪಾಸನೆಗಾಗಿ ಹೇಳಿರುವದು ಅಪರಬ್ರಹ್ಮವು, ಜ್ಞಾನಕ್ಕಾಗಿ ಹೇಳಿರುವದು ಪರಬ್ರಹ್ಮವು. ಹೃದಯಗುಹೆಯಲ್ಲಿರುವದೆಂದು ಹಿಂದಿನ ಮಂತ್ರದಲ್ಲಿ ಜೀವನ ಜೊತೆಗೆ ಹೇಳಿರುವದು ಬ್ರಹ್ಮವೇ. ಈ ಬ್ರಹ್ಮವನ್ನು ಅಪರಬ್ರಹ್ಮರೂಪದಿಂದ ಉಪಾಸನೆಮಾಡುವವರೂ ಪಂಚಾಗ್ನಿವಿದರೂ ಬ್ರಹ್ಮಲೋಕದಲ್ಲಿ ಪಡೆಯುವರು; ಪರಬ್ರಹ್ಮರೂಪದಿಂದ ಅರಿತುಕೊಂಡವರು ಇಲ್ಲಿಯೇ ಮುಕ್ತರಾಗುವರು. ಈ ಎರಡು ಬ್ರಹ್ಮಗಳನ್ನೂ ಉಪಕ್ರಮದಲ್ಲಿ ಹೇಳಿರುವದರಿಂದ ಇವೆರಡನ್ನೂ ತಿಳಿದುಕೊಳ್ಳಬೇಕು, ಎಂದರೆ ಉಪಾಸನೆಮಾಡಬೇಕು ಅಥವಾ ಅರಿತುಕೊಳ್ಳಬೇಕು ಎಂದರ್ಥ.

5. ಜೀವ, ಬ್ರಹ್ಮ–ಇಬ್ಬರಲ್ಲಿ.

6 ಸಂಸಾರಿತ್ವವು ಆತ್ಮನಿಗೆ ಸ್ವತಃ ಇಲ್ಲ, ಉಪಾಧಿಯಿಂದ ಆಗಿದೆ. ಗೀ. ಭಾ ೧೫-೮೧.

ನಾಗಿರುವ ಸಂಸಾರಿಯಿರುವನಷ್ಟೆ ; ಅವನಿಗೆ ಆ ಎರಡನ್ನೂ ಹೊಂದುವದಕ್ಕೆ ಸಾಧನವಾದ ರಥವನ್ನು (ಈಗ) ಕಲ್ಪಿಸಲಾಗುತ್ತದೆ :—

ಆತ್ಮಾನಗ್ಂ ರಥಿನಂ ವಿದ್ಧಿ
ಶರೀರಗ್ಂ ರಥಮೇವ ತು ।
ಬುದ್ಧಿಂ ತು ಸಾರಥಿಂ ವಿದ್ಧಿ
ಮನಃ ಪ್ರಗ್ರಹಮೇವ ಚ ॥ ೩ ॥

೩. ಆತ್ಮನನ್ನು ರಥಿಯೆಂದು ತಿಳಿ, ಶರೀರವನ್ನಾದರೆ ರಥವೆಂದು ತಿಳಿ ; ಬುದ್ಧಿಯನ್ನಾದರೆ ಸಾರಥಿಯೆಂದು ತಿಳಿ, ಮತ್ತು ಮನಸ್ಸನ್ನು ಹಗ್ಗವೆಂದು (ತಿಳಿ).

(ಭಾಷ್ಯ)

೩೭. ತತ್ರ ಆತ್ಮಾನಮ್ ಋತಪಂ ಸಂಸಾರಿಣಂ ರಥಿನಂ ರಥಸ್ವಾಮಿನಂ ವಿದ್ಧಿ ಜಾನೀಹಿ । ಶರೀರಂ ರಥಮೇವ ತು । ರಥಬದ್ಧಹಯಸ್ಥಾನೀಯೈರಿನ್ದ್ರಿಯೈರಾಕೃಷ್ಯಮಾಣತ್ವಾತ್ ಶರೀರಸ್ಯ । ಬುದ್ಧಿಂ ತು ಅಧ್ಯವಸಾಯಲಕ್ಷಣಾಂ ಸಾರಥಿಂ ವಿದ್ಧಿ । ಬುದ್ಧಿನೇತೃಪ್ರಧಾನತ್ವಾತ್ ಶರೀರಸ್ಯ । ಸಾರಥಿನೇತೃಪ್ರಧಾನ ಇವ ರಥಃ । ಸರ್ವಂ ಹಿ ದೇಹಗತಂ ಕಾರ್ಯಂ ಬುದ್ಧಿಕರ್ತವ್ಯಮೇವ ಪ್ರಾಯೇಣ । ಮನಃ ಸಙ್ಕಲ್ಪವಿಕಲ್ಪಾದಿಲಕ್ಷಣಂ ಪ್ರಗ್ರಹಂ ರಶನಾಮ್ ಏವ ಚ ವಿದ್ಧಿ । ಮನಸಾ ಹಿ ಪ್ರಗೃಹೀತಾನಿ ಶ್ರೋತ್ರಾದೀನಿ ಕರಣಾನಿ ಪ್ರವರ್ತನ್ತೇ ರಶನಯಾ ಇವಾಶ್ವಾಃ ॥

(ಭಾಷ್ಯಾರ್ಥ)

ಅವರಿಬ್ಬರಲ್ಲಿ ಆತ್ಮನನ್ನು ಎಂದರೆ ಋತವನ್ನು ಪಾನಮಾಡುತ್ತಿರುವ ಸಂಸಾರಿಯನ್ನು ರಥಿಯು ಎಂದರೆ ಗಾಡಿಯ ಒಡೆಯನು ಎಂದು ತಿಳಿ, ಅರಿತುಕೊ. ಶರೀರವನ್ನಾದರೆ ರಥವೆಂದು ತಿಳಿ. ಏಕೆಂದರೆ ಗಾಡಿಗೆ ಕಟ್ಟಿದ ಕುದುರೆಗಳಂತಿರುವ ಇಂದ್ರಿಯಗಳಿಂದ (ಅತ್ತಿತ್ತ) ಶರೀರವು ಜಗ್ಗಾಡಲ್ಪಡುತ್ತಿರುವದು. ನಿಶ್ಚಯಮಾಡುವ ರೂಪದ ಬುದ್ಧಿಯನ್ನಾದರೋ ಸಾರಥಿಯೆಂದು ತಿಳಿ, ಏಕೆಂದರೆ ಮುಖ್ಯವಾಗಿ ಸಾರಥಿಯು ಒಯ್ದಲ್ಲಿಗೇ ಗಾಡಿಯು (ಹೋಗುತ್ತಿರು)ವಂತೆ, ಶರೀರವು ಮುಖ್ಯವಾಗಿ ಬುದ್ಧಿಯು ಒಯ್ದಲ್ಲಿಗೇ ಹೋಗುತ್ತಿರುವದು. ದೇಹದಲ್ಲಿರುವ ಕಾರ್ಯವೆಲ್ಲವೂ ಬಲುಮಟ್ಟಿಗೆ[1] ಬುದ್ಧಿಯಿಂದಲೇ ಮಾಡತಕ್ಕದ್ದಾಗಿದೆ. ಸಂಕಲ್ಪ, ವಿಕಲ್ಪ–ಮುಂತಾದ ರೂಪದಲ್ಲಿರುವ

1. ಉಸಿರುಬಿಡುವದು, ರಕ್ತಚಲನೆ–ಮುಂತಾದ ಕೆಲವು ಕಾರ್ಯಗಳು ಬುದ್ಧಿಯ ನಿಶ್ಚಯವನ್ನು ಬಯಸುವದಿಲ್ಲವಾದ್ದರಿಂದ 'ಬಲುಮಟ್ಟಿಗೆ' ಎಂದು ಹೇಳಿದೆ.

ಮನಸ್ಸನ್ನು ಹಗ್ಗವೆಂದೇ, ಕಡಿವಾಣವೆಂದೇ, ತಿಳಿ. ಏಕೆಂದರೆ ಕಡಿವಾಣದಿಂದ ಕುದುರೆಗಳು (ಮುನ್ನಡೆಯುವ ಹಾಗೆ) ಮನಸ್ಸಿನ ಹಿಡಿತದಿಂದಲೇ ಶ್ರೋತ್ರವೇ ಮುಂತಾದ ಕರಣಗಳು ಮುಂಬರಿಯುತ್ತಿರುವವು.

ಇನ್ದ್ರಿಯಾಣಿ ಹಯಾನಾಹು-
ರ್ವಿಷಯಾಂಸ್ತೇಷು ಗೋಚರಾನ್ ।
ಆತ್ಮೇನ್ದ್ರಿಯಮನೋಯುಕ್ತಂ
ಭೋಕ್ತೇತ್ಯಾಹುರ್ಮನೀಷಿಣಃ ॥ ೪ ॥

೪. ಮನೀಷಿಗಳು ಇಂದ್ರಿಯಗಳನ್ನು ಕುದುರೆಗಳೆನ್ನುತ್ತಾರೆ; ವಿಷಯಗಳನ್ನು ಅವುಗಳ ಗೋಚರ (ಎನ್ನುತ್ತಾರೆ). ಆತ್ಮ, ಇಂದ್ರಿಯ, ಮನಸ್ಸು-ಇವುಗಳಿಂದ ಕೂಡಿದಾತನನ್ನು ಭೋಕ್ತ ಎಂದು ಕರೆಯುತ್ತಾರೆ.

(ಭಾಷ್ಯ)

೪೪. ಇನ್ದ್ರಿಯಾಣಿ ಚಕ್ಷುರಾದೀನಿ ಹಯಾ ಆಹುಃ ರಥಕಲ್ಪನಾಕುಶಲಾಃ । ಶರೀರರಥಾಕರ್ಷಣಸಾಮಾನ್ಯಾತ್ । ತೇಷು[1] ಇನ್ದ್ರಿಯೇಷು ಹಯತ್ವೇನ ಪರಿಕಲ್ಪಿತೇಷು ಗೋಚರಾ ಮಾರ್ಗಾ ರೂಪಾದೀ ವಿಷಯಾ (ವಿದ್ಧಿ ?)। ಆತ್ಮೇನ್ದ್ರಿಯಮನೋಯುಕ್ತಂ ಶರೀರೇನ್ದ್ರಿಯಮನೋಭಿಃ ಸಹಿತಮ್ ಸಂಯುಕ್ತಮ್ ಆತ್ಮಾನಂ ಭೋಕ್ತಾ ಇತಿ ಸಂಸಾರೀತಿ ಆಹುಃ ಮನೀಷಿಣಃ ವಿವೇಕಿನಃ । ನ ಹಿ ಕೇವಲಸ್ಯ ಆತ್ಮನೋ ಭೋಕ್ತೃತ್ವಮ್ ಅಸ್ತಿ । ಬುದ್ಧ್ಯಾದ್ಯುಪಾಧಿಕೃತಮೇವ ತಸ್ಯ ಭೋಕ್ತೃತ್ವಮ್ । ತಥಾ ಚ ಶ್ರುತ್ಯನ್ತರಂ ಕೇವಲಸ್ಯ ಅಭೋಕ್ತೃತ್ವಮೇವ ದರ್ಶಯತಿ-"ಧ್ಯಾಯತೀವ ಲೇಲಾಯತೀವ" (ಬೃ. ೪-೩-೭) ಇತ್ಯಾದಿ । ಏವಂ ಚ ಸತಿ ವಕ್ಷ್ಯಮಾಣರಥಕಲ್ಪನಯಾ(?) ವೈಷ್ಣವಸ್ಯ ಪದಸ್ಯ ಆತ್ಮತಯಾ ಪ್ರತಿಪತ್ತಿರುಪಪದ್ಯತೇ ನಾನ್ಯಥಾ । ಸ್ವಭಾವಾನತಿಕ್ರಮಾತ್ ॥

(ಭಾಷ್ಯಾರ್ಥ)

ರಥಕಲ್ಪನೆಯಲ್ಲಿ ಕುಶಲರಾದವರು ಇಂದ್ರಿಯಗಳನ್ನು ಎಂದರೆ ಚಕ್ಷುಸ್ಸು ಮುಂತಾದವುಗಳನ್ನು ಕುದುರೆಗಳೆನ್ನುತ್ತಾರೆ, ಏಕೆಂದರೆ ಶರೀರವೆಂಬ ರಥವನ್ನು ಎಳೆಯುತ್ತವೆ ಎಂಬ ಹೋಲಿಕೆಯು (ಇರುತ್ತದೆ). ಅವುಗಳ ಎಂದರೆ ಕುದುರೆಗಳೆಂದು ಕಲ್ಪಿಸಿದ ಆ ಇಂದ್ರಿಯಗಳ ಗೋಚರಗಳು ಎಂದರೆ ಮಾರ್ಗಗಳು ಎಂದು

1. 'ತೇಷ್ವೇವ' ಎಂದು ಏವಶಬ್ದವು ಬೇಕಿಲ್ಲ.

ರೂಪಾದಿವಿಷಯಗಳನ್ನು ಕರೆಯುತ್ತಾರೆ.[1] ಆತ್ಮ, ಇಂದ್ರಿಯ, ಮನಸ್ಸು–ಇವುಗಳಿಂದ ಕೂಡಿದಾತನನ್ನು ಎಂದರೆ ಶರೀರ, ಇಂದ್ರಿಯ, ಮನಸ್ಸು–ಇವುಗಳನ್ನೊಡನಿರುವ, ಇವುಗಳು ಸೇರಿಕೊಂಡಿರುವ ಆತ್ಮನನ್ನು ಭೋಕ್ತನು ಎಂದು, ಸಂಸಾರಿ ಎಂದು, ಮನೀಷಿಗಳು ವಿವೇಕಿಗಳು ಕರೆಯುತ್ತಾರೆ. ಏಕೆಂದರೆ **ಬರಿಯ ಆತ್ಮನಿಗೆ ಭೋಕ್ತೃತ್ವವು ಇರುವದಿಲ್ಲ; ಬುದ್ಧಿಯೇ ಮುಂತಾದ ಉಪಾಧಿಗಳಿಂದಲೇ ಅವನಿಗೆ ಭೋಕ್ತೃತ್ವವುಂಟಾಗಿರುವದು.**[2] ಆದ್ದರಿಂದಲೇ ಬೇರೊಂದು ಶ್ರುತಿಯು "ಧ್ಯಾನಮಾಡುವಂತೆ ಇರುತ್ತಾನೆ, ಚಲಿಸುವಂತೆ ಇರುತ್ತಾನೆ" (ಬೃ. ೪-೩-೭) ಎಂದು ಬರಿಯ ಆತ್ಮನು ಭೋಕ್ತೃವಲ್ಲವೆಂದೇ[3] ತಿಳಿಸುತ್ತದೆ. ಮತ್ತು ಹೀಗೆ (ಸ್ವತಃ ಭೋಕ್ತೃವಲ್ಲವೆಂಬುದು ನಿಜ)ವಾದರೇ ವಿಷ್ಣುವಿನ ಸ್ಥಾನವು ತನ್ನ ಆತ್ಮನೇ ಎಂದು ತಿಳಿದುಕೊಳ್ಳುವನೆಂದು ರಥಿಕಲ್ಪನೆಯಿಂದ[4] ಮುಂದೆ ಹೇಳಿರುವದು ಹೊಂದುತ್ತದೆಯೇ ಹೊರತು ಬೇರೆ ರೀತಿಯಿಂದ ಹೊಂದುವದಿಲ್ಲ. ಏಕೆಂದರೆ ಸ್ವಭಾವವನ್ನು ದಾಟುವದು (ಯಾವ ವಸ್ತುವಿಗೂ) ಆಗಲಾರದು.[5]

ಯುಕ್ತ್ವಾವಿಜ್ಞಾನವಾ೯ ಭವ-
ತ್ಯಯುಕ್ತೇನ ಮನಸಾ ಸದಾ ।
ತಸ್ಯೇನ್ದ್ರಿಯಾಣ್ಯವಶ್ಯಾನಿ
ದುಷ್ಟಾಶ್ವಾ ಇವ ಸಾರಥೇಃ ॥ ೫ ॥

---

1 'ವಿದ್ಧಿ' ಎಂಬ ಭಾಷ್ಯವು ವಿದುಃ' ಎಂದೋ 'ಆಹುಃ' ಎಂದೋ ಇರಬೇಕು. ಹಿಂದಿನ ಮಂತ್ರದಲ್ಲಿ 'ವಿದ್ಧಿ' ಎಂಬ ಮಾತನ್ನು ನೋಡಿದ ವಾಸನೆಯಿಂದ ಲೇಖಕರು ಇಲ್ಲಿ ಅದನ್ನು ತಪ್ಪಿ ಬರೆದಿರಬಹುದೆಂದು ತೋರುವದು

2 ಆಪಂಪ್ರತ್ಯಯವಿಷಯನಾದ ಆತ್ಮನೇ ಭೋಕ್ತೃ, ಶುದ್ಧಾತ್ಮನಲ್ಲ. ಸೂ ಭಾ. ೧-೧-೪ರಲ್ಲಿ ಆತ್ಮನು ಸಂಸ್ಕಾರ್ಯನಲ್ಲವೆಂದು ಬರೆದಿರುವ ಭಾಷ್ಯವನ್ನು ಓದಿರಿ. ಸೂ. ಭಾ; ೨-೩-೩೯.

3 ಶ್ರುತಿಯಲ್ಲಿ 'ಅಂತೆ" ಎಂಬ ಮಾತು ಬುದ್ಧಿಯ ಸಂಬಂಧದಿಂದ ಆತ್ಮನಲ್ಲಿ ತೋರುವ ಜ್ಞಾನಕ್ರಿಯಾಕರ್ತೃತ್ವವು ಪರಮಾರ್ಥವಲ್ಲವೆಂದು ಸೂಚಿಸುತ್ತದೆ ಎಂದು ಅಭಿಪ್ರಾಯ.

4 "ವಕ್ಷ್ಯಮಾಣರಥಕಲ್ಪನಯಾ" ಎಂಬ ಮಾತು ಇಲ್ಲಿಗೆ ಅಷ್ಟು ಹೊಂದುಗೆಯಾಗಿಲ್ಲ; ಏಕೆಂದರೆ ರಥಕಲ್ಪನೆಯನ್ನು ಆಗಲೆ ಹೇಳಿದ್ದಾಗಿದೆ, ಇದನ್ನು ಬಿಟ್ಟರೂ ಸಾಗುತ್ತದೆ; ಅಥವಾ 'ರಥಿಕಲ್ಪನಯಾ' ಎಂದಿದ್ದರೆ ಹೇಗೋ ಹೊಂದಿಸಿಕೊಳ್ಳಬಹುದು. ಳಳನೆಯ ಭಾಷ್ಯ ಭಾಗದಲ್ಲಿ ಅಧಿಕವಾಗಿರುವ ಪಾರಾಂತರವಾಕ್ಯವು ಇಲ್ಲಿಂದ ತೆಗೆದುಕೊಂಡದ್ದೆಂಬುದು ಸ್ಪಷ್ಟವಾಗಿದೆ. ಪುಟ ೮೭, ಟಿಪ್ಪಣಿ 3 ನೋಡಿ.

5 ಆತ್ಮನು ನಿಜವಾಗಿ ಭೋಕ್ತೃವಾಗಿದ್ದಿದ್ದರೆ ಅವನು ವಿಷ್ಣು (ಪರಮಾತ್ಮ) ಸ್ವರೂಪವನ್ನು ಪಡೆಯುವದಕ್ಕಾಗಿ ಭೋಕ್ತೃಸ್ವಭಾವವನ್ನು ಬಿಡಬೇಕಾಗುತ್ತಿತ್ತು. ಅದರೆ ಸ್ವಭಾವವನ್ನು ಬಿಡುವಪು ಸಾಧ್ಯವಲ್ಲ

೫. ಯಾವನು ಯಾವಾಗಲೂ ಅಯುಕ್ತವಾದ ಮನಸ್ಸಿನಿಂದ ಕೂಡಿ, ತಿಳಿವಳಿಕೆಯಿಲ್ಲದವನಾಗಿರುವನೋ ಅವನ ಇಂದ್ರಿಯಗಳು ಸಾರಥಿಯ ತುಂಟ ಕುದುರೆಗಳ ಹಾಗೆ ವಶವಾಗದೆ ಇರುವವು.

(ಭಾಷ್ಯ)

೬೯. ತತ್ರೈವಂ ಸತಿ ಯಸ್ತು ಬುದ್ಧ್ಯಾಖ್ಯಃ ಸಾರಥಿಃ ಅವಿಜ್ಞಾನವಾನ್ ಅನಿಪುಣಃ, ಅವಿವೇಕೀ ಪ್ರವೃತ್ತೌ ನಿವೃತ್ತೌ ಚ ಭವತಿ, ಯಥಾ ಇತರೋ ರಥಚರ್ಯಾಯಾಮ್, ಅಯುಕ್ತೇನ ಅಪ್ರಗೃಹೀತೇನ ಅಸಮಾಹಿತೇನ ಮನಸಾ ಪ್ರಗ್ರಹಸ್ಥಾನೀಯೇನ ಸದಾ ಯುಕ್ತೋ ಭವತಿ, ತಸ್ಯ ಅಕುಶಲಸ್ಯ ಬುದ್ಧಿಸಾರಥೇಃ ಇನ್ದ್ರಿಯಾಣಿ ಅಶ್ವಸ್ಥಾನೀಯಾನಿ ಅವಶ್ಯಾನಿ ಅಶಕ್ಯನಿವಾರಣಾನಿ ದುಷ್ಟಾಶ್ವಾಃ ಅದಾನ್ತಾಶ್ವಾ ಇವ ಇತರಸಾರಥೇಃ ಭವನ್ತಿ ॥

(ಭಾಷ್ಯಾರ್ಥ)

ಇದು ಹೀಗಿರುವಲ್ಲಿ[1] ಯಾವನು ಎಂದರೆ ಯಾವ ಬುದ್ಧಿಯೆಂಬ ಸಾರಥಿಯು ತಿಳಿವಳಿಕೆಯಿಲ್ಲದವನಾಗಿ ಹೆಡ್ಡನಾಗಿ, ಪ್ರವೃತ್ತಿಯಲ್ಲಾಗಲಿ ನಿವೃತ್ತಿಯಲ್ಲಾಗಲಿ ವಿವೇಕವಿಲ್ಲದವನಾಗಿ[2] ಇರುವನೋ, ಗಾಡಿಯನ್ನು ನಡೆಯಿಸುವುದರಲ್ಲಿ (ತಿಳಿವಳಿಕೆಯಿಲ್ಲದ ಬೇರೆಯ ದೃಷ್ಟಾಂತದ) ಸಾರಥಿ (ಯಂತೆ ಇರುವನೋ) ಅಯುಕ್ತವಾದ ಎಂದರೆ ಬಿಗಿಹಿಡಿಯದ ಸಮಾಧಾನದಲ್ಲಿಟ್ಟುಕೊಳ್ಳದ ಕಡಿವಾಣದಂತಿರುವ ಮನಸ್ಸಿನಿಂದ ಯಾವಾಗಲೂ ಕೂಡಿರುವನಾಗಿರುವನೋ, ಅವನ, (ಆ) ಕೌಶಲವಿಲ್ಲದ ಬುದ್ಧಿಯೆಂಬ ಸಾರಥಿಯ, ಇಂದ್ರಿಯಗಳು ಕುದುರೆಗಳಂತಿರುವ (ಇಂದ್ರಿಯಗಳು ದೃಷ್ಟಾಂತದ) ಬೇರೆಯ ಸಾರಥಿಯ ತುಂಟ ಕುದುರೆಗಳಂತೆ, ಪಳಗಿಸದ ಕುದುರೆಗಳಂತೆ ವಶವಾಗದೆ ಇರುವವು, ತಡೆಮಾಡುವದಕ್ಕೆ ಆಗದೆ (ಇರುವವು).

ಯಸ್ತು ವಿಜ್ಞಾನವಾನ್ ಭವತಿ
ಯುಕ್ತೇನ ಮನಸಾ ಸದಾ ।
ತಸ್ಯೇನ್ದ್ರಿಯಾಣಿ ವಶ್ಯಾನಿ
ಸದಶ್ವಾ ಇವ ಸಾರಥೇಃ ॥ ೬ ॥

೬ ಯಾವನಾದರೆ ಯಾವಾಗಲೂ ಯುಕ್ತವಾದ ಮನಸ್ಸಿನಿಂದ

---

1 ಆತ್ಮನೇ ರಥಿ, ಶರೀರವೇ ರಥ, ಬುದ್ಧಿಯೇ ಸಾರಥಿ, ಮನಸ್ಸು ಲಗಾಮು, ಇಂದ್ರಿಯಗಳು ಕುದುರೆಗಳು, ವಿಷಯಗಳು ಹಾದಿಗಳು, ಶರೀರೇಂದ್ರಿಯಮನಸ್ಸುಗಳಿಂದೊಡಗೂಡಿದ ಆತ್ಮನು ಭೋಕ್ತೃ—ಹೀಗೆ ರಥರೂಪಕಕಲ್ಪನೆಯಿರುವಲ್ಲಿ

2 ಗೀ. ೧೬-೭.

ಕೂಡಿ ತಿಳಿವಳಿಕೆಯುಳ್ಳವನಾಗಿರುವನೋ ಅವನಿಗೆ ಇಂದ್ರಿಯಗಳು ಸಾರಥಿಯ ಒಳ್ಳೆಯ ಕುದುರೆಗಳ ಹಾಗೆ ವಶವಾಗಿರುವವು.

೯೦. ಯಸ್ತು ಪುನಃ ಪೂರ್ವೋಕ್ತವಿಪರೀತಃ ಸಾರಥಿರ್ಭವತಿ ವಿಜ್ಞಾನವಾ ಪ್ರಗೃಹೀತಮನಾಃ ಸಮಾಹಿತಚಿತ್ತಃ ಸದಾ ತಸ್ಯ ಅಶ್ವಸ್ಥಾನೀಯಾನಿ ಇನ್ದ್ರಿಯಾಣಿ ಪ್ರವರ್ತಯಿತುಂ ವಾ ಶಕ್ಯಾನಿ ದಾನ್ತಾಃ ಸದಶ್ವಾ ಇವ ಇತರಸಾರಥೇಃ ॥

(ಭಾಷ್ಯಾರ್ಥ)

ಆದರೆ ಯಾವನು, ಹಿಂದೆ ಹೇಳಿದ್ದಕ್ಕೆ ವಿರುದ್ಧವಾಗಿರುವ (ಯಾವ) ಸಾರಥಿಯು, ತಿಳಿವಳಿಕೆಯುಳ್ಳವನಾಗಿ ಯಾವಾಗಲೂ ಮನಸ್ಸನ್ನು ಬಿಗಿಹಿಡಿದುಕೊಂಡು ಚಿತ್ತವನ್ನು ಸಮಾಧಾನಗೊಳಿಸಿಕೊಂಡು ಇರುವನೋ ಅವನ ಕುದುರೆಗಳಂತಿರುವ ಇಂದ್ರಿಯಗಳು ಮಿಕ್ಕ (ದೃಷ್ಟಾಂತದ) ಸಾರಥಿಯ ಪಳಗಿಸಿದ ಒಳ್ಳೆಯ ಕುದುರೆಗಳಂತೆ, ಮುಂದಕ್ಕೆ ನಡೆಯಿಸುವದಕ್ಕಾಗಲಿ ಹಿಂದಕ್ಕೆಳೆಯುವದಕ್ಕಾಗಲಿ ಬರುವಂತಿರುತ್ತವೆ.

(ಭಾಷ್ಯ)

೯೧. ತತ್ರ ಪೂರ್ವೋಕ್ತಸ್ಯ ಅವಿಜ್ಞಾನವತೋ ಬುದ್ಧಿಸಾರಥೇರಿದಂ ಫಲಮಾಹ—

(ಭಾಷ್ಯಾರ್ಥ)

ಇವರಿಬ್ಬರಲ್ಲಿ[1] ಮೊದಲು ಹೇಳಿದ ತಿಳಿವಳಿಕೆಯಿಲ್ಲದ ಬುದ್ಧಿಸಾರಥಿಯಿಂದ[2] ಈ ಫಲವೆಂದು ಹೇಳುತ್ತಾನೆ.—

ಯಸ್ತ್ವವಿಜ್ಞಾನವಾನ್ ಭವ-
ತ್ಯಮನಸ್ಕಃ ಸದಾಶುಚಿಃ ।
ನ ಸ ತತ್ಪದಮಾಪ್ನೋತಿ
ಸಗ್ಂಸಾರಂ ಚಾಧಿಗಚ್ಛತಿ ॥ ೭ ॥

೭. ಯಾವನು ತಿಳಿವಳಿಕೆಯಿಲ್ಲದವನಾಗಿ, ಮನಸ್ಸಿಲ್ಲದವನಾಗಿ ಯಾವಾಗಲೂ ಅಶುಚಿಯಾಗಿ ಇರುವನೋ ಅವನು ಆ ಸ್ಥಾನವನ್ನು ಹೊಂದುವದಿಲ್ಲ, ಸಂಸಾರವನ್ನೂ ಪಡೆಯುತ್ತಾನೆ.

---

1. "ತಸ್ಯ" ಎಂಬ (ಆ॥) ಪಾಠಕ್ಕಿಂತ "ತತ್ರ" ಎಂಬ (ವಾ॥ ಮೈ॥) ಪಾಠವೇ ಮೇಲು.

2 ಇಂಥ ಸಾರಥಿಯಿಂದ ಸಾರಥಿಯಾದ ಆತ್ಮನಿಗೆ ಈ ಫಲವೆಂದು ಹೇಳುತ್ತಾನೆ-ಎಂದರ್ಥ.

(ಭಾಷ್ಯ)

ಯಸ್ತು ಅವಿಜ್ಞಾನವಾ೯ ಭವತಿ, ಅಮನಸ್ಕಃ ಅಪ್ರಗೃಹೀತಮನಸ್ಕಃ ಸ ತತ ಏವ ಅಶುಚಿಃ ಸದೈವ । ನ ಸಃ ರಥೀ ತತ್ ಪೂರ್ವೋಕ್ತಮ್ ಅಕ್ಷರಂ ಯತ್ ಪರಂ ಪದಮ್ ಆಪ್ನೋತಿ ತೇನ ಸಾರಥಿನಾ । ನ ಕೇವಲಂ ತನ್ನಾಪ್ನೋತಿ ಸಂಸಾರಂ ಚ ಜನ್ಮಮರಣಲಕ್ಷಣಮ್ ಅಧಿಗಚ್ಛತಿ ॥

(ಭಾಷ್ಯಾರ್ಥ)

ಯಾವನು ತಿಳಿವಳಿಕೆಯಿಲ್ಲದವನಾಗಿ, ಮನಸ್ಸಿಲ್ಲದವನಾಗಿ ಎಂದರೆ ಮನಸ್ಸನ್ನು ಬಿಗಿಹಿಡಿಯದವನಾಗಿರುವನೋ ಅವನು ಆ (ಕಾರಣ) ದಿಂದಲೇ ಯಾವಾಗಲೂ ಅಶುಚಿಯಾಗಿರುತ್ತಾನೆ ಆ ರಥಿಕನು ಆ ಹಿಂದೆ ಹೇಳಿದ ನಾಶರಹಿತವಾದ ಪರಮಸ್ಥಾನವುಂಟಲ್ಲ, ಅದನ್ನು ಆ ಸಾರಥಿಯಿಂದ ಹೊಂದುವದಿಲ್ಲ. ಆ (ಸ್ಥಾನ) ವನ್ನು ಹೊಂದುವುದಿಲ್ಲವೆಂಬುದೊಂದೇ ಅಲ್ಲ, ಹುಟ್ಟುಹೊಂದುಗಳ ರೂಪದಲ್ಲಿರುವ ಸಂಸಾರವನ್ನೂ ಪಡೆಯುತ್ತಾನೆ.

ಯಸ್ತು ವಿಜ್ಞಾನವಾನ್ ಭವತಿ
ಸಮನಸ್ಕಃ ಸದಾ ಶುಚಿಃ ।
ಸ ತು ತತ್ ಪದಮಾಪ್ನೋತಿ
ಯಸ್ಮಾದ್ ಭೂಯೋ ನ ಜಾಯತೇ ॥ ೮ ॥

೮. ಯಾವನಾದರೆ ತಿಳಿವಳಿಕೆಯುಳ್ಳವನಾಗಿ ಮನಸ್ಸುಳ್ಳಾತನಾಗಿ ಯಾವಾಗಲೂ ಶುಚಿಯಾಗಿರುವನೋ ಅವನು ಮಾತ್ರ ಆ ಸ್ಥಾನವನ್ನು ಹೊಂದುವನು, ಅದರಿಂದ (ಅವನು) ಮತ್ತೆ ಹುಟ್ಟುವದಿಲ್ಲ.

(ಭಾಷ್ಯ)

೯. ಯಸ್ತು ದ್ವಿತೀಯೋ ವಿಜ್ಞಾನವಾ೯ ಭವತಿ ವಿಜ್ಞಾನವತ್ಸಾರಥ್ಯುಪೇತೋ ರಥೀ, ವಿದ್ವಾ೯, ಇತ್ಯೇತತ್, ಯುಕ್ತಮನಾಃ ಸಮನಸ್ಕಃ ಸ ತತ ಏವ ಸದಾ ಶುಚಿಃ । ಸ ತು ತತ್ಪದಮಾಪ್ನೋತಿ ಯಸ್ಮಾದ್ ಆಪ್ತಾತ್ ಪದಾತ್ ಅಪ್ರಚ್ಯುತಃ ಸ೯ ಭೂಯಃ ಪುನಃ ನ ಜಾಯತೇ ಸಂಸಾರೇ ॥

(ಭಾಷ್ಯಾರ್ಥ)

ಆದರೆ ಇನ್ನೊಬ್ಬನು ತಿಳಿವಳಿಕೆಯುಳ್ಳವನಿದಾನಷ್ಟೆ, ತಿಳಿವಳಿಕೆಯುಳ್ಳ ಸಾರಥಿಯನ್ನುಳ್ಳ ರಥಿಕನು, ಜ್ಞಾನಿಯು (ಉಂಟಷ್ಟೆ) ಎಂದರ್ಥ. ಮನಸ್ಸುಳ್ಳಾತನಾಗಿ, ಮನಸ್ಸನ್ನು ಬಿಗಿಹಿಡಿದುಕೊಂಡು (ಇರುವನಷ್ಟೆ); ಅವನು ಆ (ಕಾರಣ) ದಿಂದಲೇ ಯಾವಾಗಲೂ ಶುಚಿಯಾಗಿರುತ್ತಾನೆ. ಅವನು ಮಾತ್ರ ಆ ಸ್ಥಾನವನ್ನು ಹೊಂದುತ್ತಾನೆ;

ಆ ಹೊಂದಿದ ಸ್ಥಾನದಿಂದ (ಅವನು) ಜಾರಿಬೀಳದೆ ಇರುವದರಿಂದ ಮತ್ತೆ, ಇನ್ನೊಂದು ಸಲ, ಸಂಸಾರದಲ್ಲಿ ಹುಟ್ಟುವದಿಲ್ಲ.

೯. ಕಿಂ ತತ್ ಪದಮ್ ಇತಿ? ಆಹ—

ಆ ಪದವು ಯಾವದು? ಎಂದರೆ ಹೇಳುತ್ತಾನೆ:—

ವಿಜ್ಞಾನಸಾರಥಿರ್ಯಸ್ತು
ಮನಃಪ್ರಗ್ರಹವಾನ್ ನರಃ ।
ಸೋಽಧ್ವನಃ ಪಾರಮಾಪ್ನೋತಿ
ತದ್ವಿಷ್ಣೋಃ ಪರಮಂ ಪದಮ್ ॥ ೯ ॥

೯. ಯಾವ ಮನುಷ್ಯನಾದರೆ ವಿಜ್ಞಾನವೆಂಬ ಸಾರಥಿಯುಳ್ಳವನೂ ಮನಸ್ಸೆಂಬ ಹಗ್ಗವುಳ್ಳವನೂ (ಆಗಿರುವನೋ) ಅವನು ದಾರಿಯ ಕೊನೆಯಾದ ಆ ವಿಷ್ಣುವಿನ ಪರಮಪದವನ್ನು ಹೊಂದುತ್ತಾನೆ.

(ಭಾಷ್ಯ)

೯ಖ. ವಿಜ್ಞಾನಸಾರಥಿಃ ಯಸ್ತು ಯೋ ವಿವೇಕಬುದ್ಧಿಸಾರಥಿಃ ಪೂರ್ವೋಕ್ತಃ ಮನಃ ಪ್ರಗ್ರಹವಾ ಪ್ರಗೃಹೀತಮನಾಃ ಸಮಾಹಿತಚಿತ್ತಃ ಸ ಶುಚಿರ್ನರಃ ವಿದ್ವಾ ಸಃ ಅಧ್ವನಃ ಸಂಸಾರಗತೇಃ ಪಾರಮ್ ಪರಮೇವ ಅಧಿಗನ್ತವ್ಯಮ್ ಇತ್ಯೇತತ್ । ಆಪ್ನೋತಿ ಮುಚ್ಯತೇ ಸರ್ವಸಂಸಾರಬನ್ಧನೈಃ । ತತ್ ವಿಷ್ಣೋಃ ವ್ಯಾಪನಶೀಲಸ್ಯ ಬ್ರಹ್ಮಣಃ ಪರಮಾತ್ಮನೋ ವಾಸುದೇವಾಖ್ಯಸ್ಯ ಪರಮಂ ಪ್ರಕೃಷ್ಟಂ ಪದಂ ಸ್ಥಾನಮ್ ಸತತ್ತ್ವಮ್ ಇತ್ಯೇತತ್ ಯದ್ ಅಸೌ ಆಪ್ನೋತಿ ವಿದ್ವಾ ॥

(ಭಾಷ್ಯಾರ್ಥ)

ಯಾವ (ಮನುಷ್ಯನಾದರೆ) ವಿಜ್ಞಾನವೆಂಬ ಸಾರಥಿಯುಳ್ಳವನಾಗಿರುವನೋ ಎಂದರೆ ಯಾವನು ಹಿಂದೆ ಹೇಳಿದ ವಿವೇಕಬುದ್ಧಿಯೆಂಬ ಸಾರಥಿಯುಳ್ಳವನಾಗಿರುವನೋ, ಮನಸ್ಸೆಂಬ ಹಗ್ಗವುಳ್ಳವನಾಗಿರುವನೋ ಎಂದರೆ ಮನಸ್ಸನ್ನು ಬಿಗಿಹಿಡಿದು ಚಿತ್ತಸಮಾಧಾನವನ್ನು ಹೊಂದಿ ಶುಚಿಯಾಗಿರುವನೋ (ಯಾವ) ಮನುಷ್ಯನು ಎಂದರೆ ಜ್ಞಾನಿಯು[1] (ಹೀಗಿರುವನೋ) ಅವನು ದಾರಿಯ ಎಂದರೆ ಸಂಸಾರಗತಿಯ ಕೊನೆಯನ್ನು ಎಂದರೆ ಪಡೆಯಬೇಕಾದ ಪರ(ಬ್ರಹ್ಮವನ್ನೇ)[2] ಎಂದರ್ಥ. (ಅದನ್ನು)

---

1. ಜ್ಞಾನಿಗೆ ಮಾತ್ರ ಇಂಥ ವಿಜ್ಞಾನಾದಿಗಳು ಇರುವದರಿಂದ 'ನರಃ' ಎಂದರೆ ಜ್ಞಾನಿಯೆಂದೇ ಅರ್ಥಮಾಡಬೇಕೆಂದು ಭಾವ.

2. 'ಪರಮೇವ ಪಾರಂ' (ಆಚೆಯ ದಡವೇ) ಎಂದೂ ಬೇಕಾದರೆ ಅನ್ವಯಿಸಬಹುದು. ಪ್ರ. ೬-೮; ನಾವು ಮಾಡಿರುವ ಅರ್ಥವು ಪ್ರಕೃತಕ್ಕೆ ಒಳ್ಳುತ್ತದೆ.

ಹೊಂದುತ್ತಾನೆ, ಸಂಸಾರದ ಎಲ್ಲಾ ಬಂಧನಗಳಿಂದಲೂ ಬಿಡುಗಡೆ ಹೊಂದುತ್ತಾನೆ.[1] ಅದು **ವಿಷ್ಣು**ವಿನ ಎಂದರೆ (ಎಲ್ಲೆಲ್ಲಿಯೂ) ಹಬ್ಬಿಕೊಂಡಿರುವ ಸ್ವಭಾವದ ಬ್ರಹ್ಮದ **ವಾಸುದೇವನೆಂಬ ಹೆಸರಿನ** ಪರಮಾತ್ಮನ ಪರಮವಾದ ಉತ್ತಮವಾದ ಪದವು ಎಂದರೆ ಸ್ಥಾನವು, ತತ್ತ್ವವು ಎಂದರ್ಥ. ಯಾವ (ಆ ಸ್ಥಾನವನ್ನು) ಈ ಜ್ಞಾನಿಯು ಪಡೆದುಕೊಳ್ಳುವನು.

ಆತ್ಮನು ಎಲ್ಲಕ್ಕೂ ಸೂಕ್ಷ್ಮನು

(ಭಾಷ್ಯ)

೯೭. ಅಥುನಾ ಯತ್ ಪದಂ ಗನ್ತವ್ಯಂ ತಸ್ಯ ಇನ್ದ್ರಿಯಾಣಿ ಸ್ಥೂಲಾನ್ಯಾರಭ್ಯ ಸೂಕ್ಷ್ಮತಾರತಮ್ಯಕ್ರಮೇಣ ಪ್ರತ್ಯಗಾತ್ಮತಯಾ ಅಧಿಗಮಃ ಕರ್ತವ್ಯಃ ಇತ್ಯೇವಮರ್ಥಮ್ ಇದಮಾರಭ್ಯತೇ—

(ಭಾಷ್ಯಾರ್ಥ)

ಈಗ ಸ್ಥೂಲವಾಗಿರುವ ಇಂದ್ರಿಯಗಳನ್ನು ಮೊದಲುಮಾಡಿಕೊಂಡು ಹೆಚ್ಚು ಹೆಚ್ಚು ಸೂಕ್ಷ್ಮವಾಗಿರುವವುಗಳನ್ನು ಕ್ರಮವಾಗಿ ತಿಳಿಸಿ, ಯಾವ ಸ್ಥಾನವನ್ನು (ಮುಮುಕ್ಷುವಾದವನು) ಪಡೆಯಬೇಕಾಗಿರುವದೋ (ಅದು ನಮ್ಮ) ಒಳಗಿನ ಆತ್ಮನೇ ಎಂದು ತಿಳಿಸುವದಕ್ಕಾಗಿ ಇದನ್ನು ಆರಂಭಿಸಿರುತ್ತದೆ :—

ಇನ್ದ್ರಿಯೇಭ್ಯಃ ಪರಾಹ್ಯರ್ಥಾ
ಅರ್ಥೇಭ್ಯಶ್ಚ ಪರಂ ಮನಃ ।
ಮನಸಸ್ತು ಪರಾ ಬುದ್ಧಿ-
ರ್ಬುದ್ಧೇರಾತ್ಮಾ ಮಹಾನ್ ಪರಃ ॥ ೧೦ ॥

೧೦. ಇಂದ್ರಿಯಗಳಿಗಿಂತ ಅರ್ಥಗಳು ಹೆಚ್ಚಿನವು; ಅರ್ಥಗಳಿಗಿಂತ ಮನಸ್ಸು ಹೆಚ್ಚಿನದು; ಮನಸ್ಸಿಗಿಂತ ಬುದ್ಧಿ ಹೆಚ್ಚು; ಬುದ್ಧಿಗಿಂತ ಮಹಾನ್ ಎಂಬ ಆತ್ಮನು ಹೆಚ್ಚು.

(ಭಾಷ್ಯ)

೯೭. ಸ್ಥೂಲಾನಿ ತಾವದಿನ್ದ್ರಿಯಾಣಿ। ತಾನಿ ಯೈರರ್ಥೈರಾತ್ಮಪ್ರಕಾಶನಾಯ ಆರಬ್ಧಾನಿ ತೇಭ್ಯಃ ಇನ್ದ್ರಿಯೇಭ್ಯಃ ಸ್ವಕಾರ್ಯೇಭ್ಯಃ ತೇ ಪರಾ ಹಿ

---

1. ಅಜ್ಞಾನಾದಿಬಂಧಗಳಿಂದ ಬಿಡುಗಡೆಯಾಗುವದೇ ಪರಮಾತ್ಮಪ್ರಾಪ್ತಿ ಎಂದು ಭಾವ.

ಅರ್ಥಾಃ, ಸೂಕ್ಷ್ಮಾ ಮಹಾನ್ತಶ್ಚ ಪ್ರತ್ಯಗಾತ್ಮಭೂತಾಶ್ಚ । ತೇಭ್ಯೋಽಪಿ ಅರ್ಥೇಭ್ಯಶ್ಚ ಪರಂ ಸೂಕ್ಷ್ಮತರಂ ಮಹತ್ ಪ್ರತ್ಯಗಾತ್ಮಭೂತಂ ಚ ಮನಃ ಮನಃಶಬ್ದವಾಚ್ಯಂ ಮನಸ ಆರಮ್ಭಕಂ ಭೂತಸೂಕ್ಷ್ಮಮ್ । ಸಙ್ಕಲ್ಪವಿಕಲ್ಪಾದ್ಯಾರಮ್ಭಕತ್ವಾತ್ । ಮನಸೋಽಪಿ ಪರಾ ಸೂಕ್ಷ್ಮತರಾ ಮಹತ್ತರಾ ಪ್ರತ್ಯಗಾತ್ಮಭೂತಾ ಚ ಬುದ್ಧಿಃ ಬುದ್ಧಿಶಬ್ದವಾಚ್ಯಮ್ ಅಧ್ಯವಸಾಯಾದ್ಯಾರಮ್ಭಕಂ ಭೂತಸೂಕ್ಷ್ಮಮ್ । ಬುದ್ಧೇಃ ಆತ್ಮಾ ಸರ್ವಪ್ರಾಣಿಬುದ್ಧೀನಾಂ ಪ್ರತ್ಯಗಾತ್ಮಭೂತತ್ವಾದಾತ್ಮಾ ಮಹಾ ಸರ್ವಮಹತ್ತ್ವಾತ್, ಅವ್ಯಕ್ತಾದ್ ಯತ್ ಪ್ರಥಮಂ ಜಾತಂ ಹೈರಣ್ಯಗರ್ಭಂ ತತ್ತ್ವಂ ಬೋಧಾಬೋಧಾತ್ಮಕಂ ಮಹಾ ಆತ್ಮಾ ಬುದ್ಧೇಃ ಪರ ಇತ್ಯುಚ್ಯತೇ ॥

(ಭಾಷ್ಯಾರ್ಥ)

ಇಂದ್ರಿಯಗಳು ಸ್ಥೂಲವಾಗಿರುವವಷ್ಟೆ ತಮ್ಮನ್ನು ಬೆಳಗುವದಕ್ಕಾಗಿ ಇವು ಯಾವ ಅರ್ಥಗಳಿಂದ ಉಂಟುಮಾಡಲ್ಪಟ್ಟಿರುವವೋ[1] ಆ ಅರ್ಥಗಳು[2] ತಮ್ಮ ಕಾರ್ಯಗಳಾದ ಈ ಇಂದ್ರಿಯಗಳಿಗಿಂತ ಹೆಚ್ಚಿನವು, ಎಂದರೆ ಸೂಕ್ಷ್ಮವಾಗಿಯೂ[3] ದೊಡ್ಡವಾಗಿಯೂ[4] ಒಳಗಿನ ಆತ್ಮನಾಗಿಯೂ[5] ಇರುವವು. ಆ ಅರ್ಥಗಳಿಗಿಂತಲೂ ಮನಸ್ಸು, ಎಂದರೆ ಮನಸ್ಸಿಗೆ ಕಾರಣವಾದ[6] ಮನಸ್ಸೆಂಬ ಹೆಸರಿನಿಂದ ಕರೆಯಲ್ಪಡುವ ಭೂತಸೂಕ್ಷ್ಮವು[7] ಹೆಚ್ಚಿನದು, ಎಂದರೆ ಇನ್ನೂ ಸೂಕ್ಷ್ಮವಾಗಿಯೂ ದೊಡ್ಡ

---

1. ಆರಬ್ಧ, ಆರಂಭಕ ಎಂಬ ಮಾತುಗಳನ್ನು ಕಾರ್ಯ, ಕಾರಣ_ಎಂಬರ್ಥದಲ್ಲಿ ಭಾಷ್ಯಕಾರರು ಉಪಯೋಗಿಸಿರುತ್ತಾರಾದರೂ ವೈಶೇಷಿಕರ ಆರಂಭವಾದವನ್ನು ಅವರು ಒಪ್ಪಿರುವದಿಲ್ಲ. ಸೂ. ಭಾ. ೨-೨-೧೨.

2. ಶಬ್ದಸ್ಪರ್ಶಾದಿಗಳು

3. ಅರ್ಥಶಬ್ದವಾಚ್ಯವಾದ ಭೂತಸೂಕ್ಷ್ಮಗಳು ಕಾರಣವೆಂಬ ಅಭಿಪ್ರಾಯದಿಂದ ಸೂಕ್ಷ್ಮವೆಂದು ಹೇಳಿರಬಹುದೆಂದು ತೋರುತ್ತದೆ; ಅವುಗಳು ಸ್ಥೂಲವಾದಾಗ ಅವನ್ನು ಇಂದ್ರಿಯಗಳು ಬೆಳಗುವವು.

4. ವ್ಯಾಪಕವಾಗಿಯೂ.

5. ಈ ಶಬ್ದಕ್ಕೆ 'ಸ್ಥಿರ' ಎಂಬರ್ಥವನ್ನು ವ್ಯಾಖ್ಯಾನದಲ್ಲಿ ಮಾಡಿದೆ; ಆದರೆ ಅದಕ್ಕೆ ಭಾಷ್ಯದ ಆಧಾರವಿಲ್ಲ.

6. "ಮನಸ ಆರಮ್ಭಕಮ್" ಎಂಬುದರ ಅನುವಾದವಿದು; ಈ ಭಾಗವು ಇಲ್ಲದಿದ್ದರೂ ಆಗುತ್ತದೆ.

7. ಭೂತಗಳ ಸೂಕ್ಷ್ಮರೂಪವು ಮನಸ್ಸು, ಬುದ್ಧಿ_ಮುಂತಾದ ಹೆಸರನ್ನು ಪಡೆಯುವದಕ್ಕೆ ಆಯಾ ಕ್ರಿಯೆಯನ್ನುಂಟುಮಾಡುವದೇ ಕಾರಣ. ಇಂದ್ರಿಯಗಳೂ ಮನೋಬುದ್ಧಿಗಳೂ ಭೌತಿಕವೆಂಬ ಬಗ್ಗೆ ಸೂ. ಭಾ. ೨-೪-೧೫ ನೋಡಿ.

ದಾಗಿಯೂ ಒಳಗಿನ ಆತ್ಮನಾಗಿಯೂ[1] ಇರುತ್ತದೆ; ಏಕೆಂದರೆ ಇದು ಸಂಕಲ್ಪ, ವಿಕಲ್ಪ–ಮುಂತಾದವುಗಳಿಗೆ ಕಾರಣವಾಗಿರುವದು. ಮನಸ್ಸಿಗಿಂತಲೂ ಬುದ್ಧಿಯು ಎಂದರೆ ನಿಶ್ಚಯವೇ ಮುಂತಾದದ್ದಕ್ಕೆ ಕಾರಣವಾಗಿರುವ ಬುದ್ಧಿ ಎಂಬ ಹೆಸರಿನಿಂದ ಕರೆಯಲ್ಪಡುವ ಭೂತಸೂಕ್ಷ್ಮವು ಹೆಚ್ಚಿನದು, ಇನ್ನೂ ಸೂಕ್ಷ್ಮವಾಗಿ ಇನ್ನೂ ದೊಡ್ಡದಾಗಿ ಒಳಗಿನ ಆತ್ಮನಾಗಿಯೂ ಇರುವದು. ಬುದ್ಧಿಗಿಂತ 'ಮಹಾ ಆತ್ಮನು' ಹೆಚ್ಚಿನವನು. ಎಲ್ಲಾ ಪ್ರಾಣಿಗಳ ಬುದ್ಧಿಗಳಿಗೂ ಒಳಗಿನ ಆತ್ಮನಾಗಿರುವದರಿಂದ[2] ಅದು ಆತ್ಮನು, ಎಲ್ಲಕ್ಕೂ ದೊಡ್ಡದಾಗಿರುವದರಿಂದ 'ಮಹಾ' ಎನ್ನಿಸಿಕೊಂಡಿದೆ. **ಅವ್ಯಕ್ತದಿಂದ ಯಾವದು ಮೊದಲು ಹುಟ್ಟಿರುವದೋ (ಆ) ಜ್ಞಾನಾಜ್ಞಾನ ರೂಪ[3] ವಾಗಿರುವ ಹಿರಣ್ಯಗರ್ಭನ ಸಂಬಂಧವಾದ ತತ್ತ್ವವನ್ನೇ (ಇಲ್ಲಿ) 'ಮಹಾ ಆತ್ಮನು' ಬುದ್ಧಿಗಿಂತ ಹೆಚ್ಚಿನದು ಎಂದು ಹೇಳಿರುತ್ತದೆ.**[4]

ಮಹತಃ ಪರಮವ್ಯಕ್ತ-
ಮವ್ಯಕ್ತಾತ್ ಪುರುಷಃ ಪರಃ ।
ಪುರುಷಾನ್ನ ಪರಂ ಕಿಂಚಿತ್
ಸಾ ಕಾಷ್ಠಾ ಸಾ ಪರಾ ಗತಿಃ ॥ ೧೧ ॥

೧೧. ಮಹತ್ತಿಗಿಂತ ಅವ್ಯಕ್ತವು ಹೆಚ್ಚು; ಅವ್ಯಕ್ತಕ್ಕಿಂತ ಪುರುಷನು ಹೆಚ್ಚು; ಪುರುಷನಿಗಿಂತ ಹೆಚ್ಚಿನದು ಯಾವದೂ ಇಲ್ಲ; ಇದೇ ಕೊನೆ, ಇದೇ ಹೆಚ್ಚಿನ ಗತಿ.

---

1. 'ಸೂಕ್ಷ್ಮ'ವೆಂದರೆ ಅದಕ್ಕೆ ಸಿಕ್ಕದೆ ಇರುವ ಸ್ವರೂಪವು; ಇಂದ್ರಿಯಗಳೂ ವಿಷಯಗಳೂ ಮನಸ್ಸಿಗೆ ಸಿಕ್ಕಿ ವ್ಯವಹಾರಗೋಚರವಾಗುತ್ತವೆ, ಅವಕ್ಕೆ ಮನಸ್ಸು ಗೋಚರವಾಗದು 'ದೊಡ್ಡದು' ಎಂದರೆ ವ್ಯಾಪಕವು; ಮನಸ್ಸು ಎಲ್ಲಾ ಇಂದ್ರಿಯಗಳ ವ್ಯಾಪಾರಕ್ಕೂ ಸಹಾಯವಾಗಿದ್ದು ಅವುಗಳಿಂದಾಗದ ತನ್ನ ವ್ಯಾಪಾರವನ್ನು ಮಾಡುವದರಿಂದ ಅವಕ್ಕಿಂತ ವ್ಯಾಪಕ. 'ಆತ್ಮ'ನೆಂದರೆ ಆತ್ಮನೆಂದು ಭಾವಿಸಲ್ಪಡುವದು. ಇಂದ್ರಿಯಗಳ ಧರ್ಮವು ತಮ್ಮದಲ್ಲವೆಂದು ತಿಳಿದುಕೊಂಡವರೂ ಮನಸ್ಸನ್ನು ಆತ್ಮನೆಂದು ಭಾವಿಸಿಕೊಂಡು ಅದರ ಧರ್ಮವನ್ನು ತಮ್ಮದೆಂದೆಣಿಸುವರು. ಸೂಕ್ಷ್ಮ, ದೊಡ್ಡದು, ಆತ್ಮ–ಎಂಬ ಮಾತುಗಳನ್ನು ಮುಂದೂ ಹೀಗೆಯೇ ಅರ್ಥಮಾಡಿಕೊಳ್ಳಬೇಕು.

2. ಹಿರಣ್ಯಗರ್ಭನ ಬುದ್ಧಿಯಲ್ಲಿ ಎಲ್ಲಾ ಬುದ್ಧಿಗಳೂ ಅಡಕವಾಗಿವೆ.

3. ಜ್ಞಾನಕ್ರಿಯಾಶಕ್ತಿಗಳ ಒಟ್ಟು.

4. ಮಹಾ ಆತ್ಮಾ–ಎಂಬುದಕ್ಕೆ ಜೀವ ಎಂಬ ಮತ್ತೊಂದು ಅರ್ಥವನ್ನು ಸೂ. ಭಾ. ೧-೪-೪ರಲ್ಲಿ ಮಾಡಿದೆ.

(ಭಾಷ್ಯ)

೯೮. ಮಹತೋಽಪಿ ಪರಂ ಸೂಕ್ಷ್ಮತರಂ ಪ್ರತ್ಯಗಾತ್ಮಭೂತಂ ಸರ್ವಮಹತ್ತರಂ ಚ ಅವ್ಯಕ್ತಂ ಸರ್ವಸ್ಯ ಜಗತೋ ಬೀಜಭೂತಮ್ ಅವ್ಯಾಕೃತನಾಮರೂಪ ಸತತ್ತ್ವಂ ಸರ್ವಕಾರ್ಯಕಾರಣಶಕ್ತಿಸಮಾಹಾರರೂಪಮ್ ಅವ್ಯಕ್ತಾವ್ಯಾಕೃತಾ ಕಾಶಾದಿನಾಮವಾಚ್ಯಂ ಪರಮಾತ್ಮನ್ಯೋತಪ್ರೋತಭಾವೇನ ಸಮಾಶ್ರಿತಂ ವಟಕಣಿ ಕಾಯಾಮಿವ ವಟವೃಕ್ಷಶಕ್ತಿಃ। ತಸ್ಮಾದ್ ಅವ್ಯಕ್ತಾತ್ ಪರಃ ಸೂಕ್ಷ್ಮತರಃ ಸರ್ವಕಾರಣಕಾರಣತ್ವಾತ್ ಪ್ರತ್ಯಗಾತ್ಮತ್ವಾಚ್ಚ ಮಹಾಂಶ್ಚ। ಅತ ಏವ ಪುರುಷಃ ಸರ್ವಪೂರಣಾತ್। ತತೋಽನ್ಯಸ್ಯ ಪರಸ್ಯ ಪ್ರಸಙ್ಗಂ ನಿವಾರಯ್ಯ ಆಹ—"ಪುರುಷಾನ್ನ ಪರಂ ಕಿಂಚಿತ್" ಇತಿ। ಯಸ್ಮಾನ್ನಾಸ್ತಿ ಪುರುಷಾತ್ ಚಿನ್ಮಾತ್ರಘನಾತ್ ಪರಂ ಕಿಂಚಿದಪಿ ವಸ್ತ್ವನ್ತರಮ್ ತಸ್ಮಾತ್ ಸೂಕ್ಷ್ಮತ್ವಮಹತ್ತ್ವಪ್ರತ್ಯಗಾತ್ಮತ್ವಾನಾಂ ಸಾ ಕಾಷ್ಠಾ ನಿಷ್ಠಾ ಪರ್ಯವಸಾನಮ್। ಅತ್ರ ಹಿ ಇನ್ದ್ರಿಯೇಭ್ಯ ಆರಭ್ಯ ಸೂಕ್ಷ್ಮತ್ವಾದಿ ಪರಿಸಮಾಪ್ತಮ್। ಅತ ಏವ ಚ ಗನ್ತೃಣಾಂ ಸರ್ವಗತಿಮತಾಂ ಸಂಸಾರಿಣಾಂ ಸಾ ಪರಾ ಪ್ರಕೃಷ್ಟಾ ಗತಿಃ। "ಯದ್ ಗತ್ವಾ ನ ನಿವರ್ತನ್ತೇ" (ಗೀ ೧೫-೬) ಇತಿ ಸ್ಮೃತೇಃ॥

(ಭಾಷ್ಯಾರ್ಥ)

ಮಹತ್ತಿಗಿಂತಲೂ ಹೆಚ್ಚಿನದು, ಎಂದರೆ ಇನ್ನೂ ಸೂಕ್ಷ್ಮವಾಗಿ, (ಇನ್ನೂ) ಒಳಗಿನ ಆತ್ಮನಾಗಿ ಇನ್ನೂ ದೊಡ್ಡದಾಗಿರುವದು **ಅವ್ಯಕ್ತವು**, ಜಗತ್ತಿಗೆಲ್ಲ ಬೀಜವಾಗಿರುವ **ಅವ್ಯಾಕೃತವೆಂಬ**[1] **ನಾಮರೂಪಗಳ ತತ್ತ್ವವು**; (ಇದು) **ಎಲ್ಲಾ ಕಾರ್ಯಕಾರಣಗಳ ಶಕ್ತಿಗಳ ಒಟ್ಟಿನ ರೂಪವಾಗಿರುತ್ತದೆ.** (ಇದಕ್ಕೆ) ಅವ್ಯಕ್ತ, ಅವ್ಯಾಕೃತ, ಆಕಾಶ—ಮುಂತಾದ[2] ಹೆಸರುಗಳಿರುವವು. **ಇದು ಆಲದ ಬೀಜದಲ್ಲಿ ಆಲದಮರದ ಶಕ್ತಿಯಂತೆ ಪರಮಾತ್ಮನಲ್ಲಿ ಹಾಸುಹೊಕ್ಕಾಗಿ**[3] **ಆಶ್ರಯಿಸಿಕೊಂಡಿರುವದು.** ಈ ಅವ್ಯಕ್ತಕ್ಕಿಂತ[4] (ಆತ್ಮನು) ಹೆಚ್ಚು, ಎಂದರೆ ಇನ್ನೂ ಸೂಕ್ಷ್ಮವಾಗಿರುವನು, ಏಕೆಂದರೆ (ಅವನು) ಕಾರಣಗಳಿಗೆಲ್ಲ ಕಾರಣನಾಗಿರು

1. ನಾಮರೂಪಗಳು ವ್ಯಾಕೃತವಾಗಿದ್ದರೆ, ಬಿಡಿಯಾಗಿದ್ದರೆ, ಅದಕ್ಕೆ ಜಗತ್ತು ಎಂದು ಹೆಸರು. ಅವ್ಯಾಕೃತವಾಗಿದ್ದರೆ ಅದೇ ಅವ್ಯಕ್ತವೆನಿಸುವದು.

2. ಬೀಜ, ಶಕ್ತಿ, ಮಾಯೆ, ಪ್ರಕೃತಿ—ಮುಂತಾದ. ಸೂ. ಭಾ. ೧-೪-೩, ೧-೪-೯, ೨-೧-೧೪.

3. ಬೃ. ೩-೪-೭, ೮.

4. ಅವ್ಯಕ್ತವೆಂಬುದಕ್ಕೆ 'ಅವಿದ್ಯೆ' ಎಂಬ ಮತ್ತೊಂದು ಅರ್ಥವನ್ನು, ಸೂ. ಭಾ. ೧-೪-೩ರಲ್ಲಿ ಮಾಡಿದೆ.

ತ್ತಾನೆ,[1] ಮತ್ತು (ಎಲ್ಲಕ್ಕೂ) ಒಳಗಿನ ಪ್ರತ್ಯಗಾತ್ಮನಾಗಿರುತ್ತಾನೆ.[2] ಮತ್ತು (ಇವನು ಇನ್ನೂ) ದೊಡ್ಡವನು, ಆದ್ದರಿಂದಲೇ **ಪುರುಷನು**; ಏಕೆಂದರೆ ಎಲ್ಲವನ್ನೂ ತುಂಬಿಕೊಂಡಿರುತ್ತಾನೆ.[3]

ಈ (ಪುರುಷ)ನಿಗಿಂತ ಹೆಚ್ಚಾದದ್ದು ಮತ್ತೊಂದು ಇದ್ದೀತೆಂದು (ಶಂಕಿಸಿಯಾರೆಂದು ಅಂಥ ಶಂಕೆಯನ್ನು) ಪರಿಹರಿಸುವದಕ್ಕಾಗಿ "ಪುರುಷನಿಗಿಂತ ಹೆಚ್ಚಿನದು ಯಾವದೂ ಇಲ್ಲ" ಎಂದು ಹೇಳಿರುತ್ತಾನೆ. (ಹೀಗೆ) ಬರಿಯರಿವಿನ ಗಟ್ಟಿಯಾಗಿರುವ ಪುರುಷನಿಗಿಂತ ಹೆಚ್ಚಿನದಾದ ಯಾವ ವಸ್ತುವೂ ಇಲ್ಲದಿರುವದರಿಂದ ಸೂಕ್ಷ್ಮವಾಗಿರುವಿಕೆ, ದೊಡ್ಡದಾಗಿರುವಿಕೆ, ಒಳಗಿನ ಆತ್ಮನಾಗಿರುವಿಕೆ (ಈ ಮೂರ)ಕ್ಕೂ ಇದೇ ಕೊನೆ ಎಂದರೆ ನಿಲುಗಡೆ, ಮುಗಿಯುವದು ಏಕೆಂದರೆ ಇಂದ್ರಿಯಗಳಿಂದ ಮೊದಲು ಮಾಡಿಕೊಂಡು (ನೋಡುವಾಗ) ಸೂಕ್ಷ್ಮತ್ವವೇ ಮುಂತಾದದ್ದು ಇಲ್ಲಿಯೇ ಮುಗಿಯುತ್ತದೆ. ಆದ್ದರಿಂದಲೇ ಎಲ್ಲಾ ಬಗೆಯ ಗತಿಗಳುಳ್ಳ[4] ಸಂಸಾರಿಗಳೆಂಬ ಗಂತೃಗಳಿಗೆ ಇದೇ ಹೆಚ್ಚಿನ ಉತ್ತಮವಾದ ಗತಿಯು. "ಯಾವದನ್ನು ಪಡೆದುಕೊಂಡರೆ (ಜನರು) ಹಿಂತಿರುಗುವದಿಲ್ಲವೋ" (ಅದೇ ನನ್ನ ಪರಮ ಧಾಮವು) (ಗೀ ೧೫-೬) ಎಂಬ **ಸ್ಮೃತಿ**ಯು ಇದಕ್ಕೆ ಪ್ರಮಾಣವು.[5]

(ಭಾಷ್ಯ)

೯. ನನು ಗತಿಶ್ಚೇತ್ ಆಗತ್ಯಾಪಿ ಭವಿತವ್ಯಮ್, ಕಥಂ "ಯಸ್ಮಾದ್ ಭೂಯೋ ನ ಜಾಯತೇ" (೧-೩-೮) ಇತಿ? ನೈಷ ದೋಷಃ। ಸರ್ವಸ್ಯ ಪ್ರತ್ಯಗಾತ್ಮ

---

1. ಭೂತಗಳು ಒಂದಕ್ಕೊಂದು ಕಾರಣವೆಂದು ಶ್ರುತಿ ಹೇಳುವಾಗಲೂ ಸದ್ರೂಪನಾಗಿರುವ ಪರಮಾತ್ಮನೇ ಆ ರೂಪದಿಂದ ಕಾರಣನಾಗಿರುತ್ತಾನೆ. ಛಾ. ಭಾ. ೬-೩-೩, ೬-೩-೪ ನೋಡಿರಿ. ಅಥವಾ ಅವ್ಯಕ್ತವು ಪರಮಾತ್ಮನ ಅಧೀನವಾಗಿದ್ದುಕೊಂಡೇ ಮಿಕ್ಕ ಕಾರ್ಯಗಳಿಗೆ ಕಾರಣವಾಗಿರುವದರಿಂದ ಆತ್ಮನು ಎಲ್ಲಕ್ಕೂ ಕಾರಣನೆನಿಸುವನು ಸೂ. ಭಾ. ೧-೪-೩ ನೋಡಿ.

2. ನಿಜವಾಗಿ ಅವನೇ ಪ್ರತ್ಯಗಾತ್ಮನು, ಮಿಕ್ಕ ಆತ್ಮಾಭಾಸರು ಇವನ ಹೊರಗೆ ಇರುವ ಅನಾತ್ಮರೇ

3. ಎಲ್ಲವನ್ನೂ ತುಂಬಿಕೊಂಡಿರುವ ವ್ಯಾಪಕನೆಂಬುದನ್ನು 'ಪುರುಷ'ನೆಂಬ ಮಾತು ಸೂಚಿಸುವದೆಂದು ಭಾವ. ಶ್ವೇ ೩-೯.

4. ಪಿತೃಯಾನ, ದೇವಯಾನ, ಅಧೋಗತಿ—ಎಂಬ ಗತಿಗಳುಳ್ಳ.

5. ಏಕೆಂದರೆ ಇದನ್ನು ಪಡೆದಮೇಲೆ ಸಂಸಾರಕ್ಕೆ ಮರಳುವದಿಲ್ಲ.

6. ಇಂದ್ರಿಯಾದಿಗಳು ಒಂದಕ್ಕಿಂತ ಒಂದು ಹೆಚ್ಚೆಂದು ತಿಳಿಸುವದರಲ್ಲಿ ಶ್ರುತಿಯ ತಾತ್ಪರ್ಯವಿಲ್ಲ; ಜ್ಞಾನದಿಂದ ಆತ್ಮನನ್ನು ಪಡೆಯುವದೇ ಉತ್ತಮ ಗತಿ ಎಂಬುದನ್ನು ತಿಳಿಸುವದರಲ್ಲಿಯೇ ಅದಕ್ಕೆ ತಾತ್ಪರ್ಯವೆಂಬುದನ್ನು ಸೂ. ಭಾ. ೩-೩-೧೪ರಲ್ಲಿ ನಿರ್ಣಯಿಸಿದೆ.

ತ್ವಾತ್ ಅವಗತಿರೇವ ಗತಿರಿತ್ಯುಪಚರ್ಯತೇ । ಪ್ರತ್ಯಗಾತ್ಮತ್ವಂ ಚ ದರ್ಶಿತಮ್ ಇನ್ದ್ರಿಯಮನೋಬುದ್ಧಿಪರತ್ವೇನ । ಯೋ ಹಿ ಗನ್ತಾ ಸೋಽಯಮ್ ಅಪ್ರತ್ಯಗ್ರೂಪಂ ಗಚ್ಛತ್ಯನಾತ್ಮಭೂತಮ್ ನ ವಿಪರ್ಯಯೇಣ । ತಥಾ ಚ ಶ್ರುತಿಃ "ಅನಧ್ವಗಾ ಅಧ್ವಸು ಪಾರಯಿಷ್ಣವಃ" (?) ಇತ್ಯಾದ್ಯಾ । ತಥಾ ಚ ದರ್ಶಯತಿ ಪ್ರತ್ಯಗಾತ್ಮತ್ವಂ ಸರ್ವಸ್ಯ ॥

(ಭಾಷ್ಯಾರ್ಥ)

(ಆಕ್ಷೇಪ):—ಹೋಗುವದೆಂದಮೇಲೆ ಹಿಂತಿರುಗಿ ಬರಲೂ ಬೇಕು. ಹೀಗಿರುವಲ್ಲಿ "ಅದರಿಂದ (ಅವನು) ಮತ್ತೆ ಹುಟ್ಟುವದಿಲ್ಲ" ಎಂದು (ಯಮನೆಯ ಮಂತ್ರದಲ್ಲಿ ಹೇಳಿರುವದು) ಹೇಗೆ (ಸರಿ)?

(ಪರಿಹಾರ) —ಇದರಲ್ಲೇನೂ ತಪ್ಪಿಲ್ಲ. ಏಕೆಂದರೆ (ಆತ್ಮನು) ಎಲ್ಲಕ್ಕೂ ಒಳಗಿರುವ ಆತ್ಮನಾಗಿರುವದರಿಂದ (ಅವನನ್ನು) ಅರಿಯುವದನ್ನೇ (ಇಲ್ಲಿ) ಗತಿ[1] ಎಂದು ಉಪಚಾರಕ್ಕೆ ಕರೆದಿರುತ್ತದೆ. ಇಂದ್ರಿಯ, ಮನಸ್ಸು, ಬುದ್ಧಿ–ಇವುಗಳಿಗಿಂತ ಹೆಚ್ಚಿನವನೆಂದು ತಿಳಿಸುವದರ ಮೂಲಕ (ಆತ್ಮನು ಎಲ್ಲಕ್ಕೂ) ಒಳಗಿನ ಆತ್ಮನೆಂಬುದು (ಹೇಗೆಂಬ)ದನ್ನು ತೋರಿಸಿಕೊಟ್ಟದ್ದಾಗಿದೆ ಯಾವನು (ಎಲ್ಲಿಗಾದರೂ) ಹೋಗಬೇಕಾಗಿರುವದೋ ಅವನು[2] ತನ್ನ ಒಳಗಿಲ್ಲದ ರೂಪದ ಅನಾತ್ಮವಾದದ್ದನ್ನು (ಕುರಿತೇ) ಹೋಗುತ್ತಾನೆ. (ಇದಕ್ಕೆ) ವಿರುದ್ಧವಾಗಿ (ತನ್ನ ಸ್ವರೂಪಕ್ಕೇ ತಾನು ಹೋಗುವದಿಲ್ಲ). ಆದ್ದರಿಂದಲೇ "ದಾರಿಯನ್ನು ನಡೆಯದೆ ದಾರಿಗಳನ್ನು ದಾಟುವರು"(?) ಎಂದು ಶ್ರುತಿಯು[3] ಹೇಳುತ್ತದೆ ಆದ್ದರಿಂದಲೇ (ಆತ್ಮನು) ಎಲ್ಲರಿಗೂ ಒಳಗಿರುವ ಆತ್ಮನೆಂಬುದನ್ನು (ಈ ಮುಂದಿನ ಮಂತ್ರವು) ತಿಳಿಸುತ್ತದೆ:—

ಏಷ ಸರ್ವೇಷು ಭೂತೇಷು
ಗೂಢೋಽತ್ಮಾ ನ ಪ್ರಕಾಶತೇ ।
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ
ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ ॥ ೧೨ ॥

---

1. ಗತಿ ಎಂದರೆ ಹೋಗುವದು ಎಂಬರ್ಥವುಳ್ಳ ಸಂಸ್ಕೃತ ಧಾತುಗಳಿಗೆ ಜ್ಞಾನವೆಂಬರ್ಥವೂ ಉಂಟು. ಆದ್ದರಿಂದ ಆತ್ಮನನ್ನು ಅರಿಯುವದೇ ಆತ್ಮಪ್ರಾಪ್ತಿ. ಆತ್ಮನಿಂದ ಮತ್ತೆ ಬರುವದೆಂದರೆ ಅರ್ಥವಿಲ್ಲ.

2. "ಅಗತಮ್" (ಇನ್ನೂ ಹೋಗಿಲ್ಲದ) ಎಂಬ (ಆ॥) ಪಾಠದ ಮಾತು ಬೇಕಿಲ್ಲ.

3. ಈ ಶ್ರುತಿಯು ಯಾವದೆಂಬುದು ತಿಳಿಯದು; ಮುಂ. ಭಾ. ೩-೨-೫ ರಲ್ಲಿಯೂ ಇದು ಉದಾಹೃತವಾಗಿದೆ.

೧೫ ಎಲ್ಲಾ ಭೂತಗಳಲ್ಲಿಯೂ ಅಡಗಿರುವ ಈ ಆತ್ಮನು ಬೆಳಗುವದಿಲ್ಲ. ಆದರೆ ಸೂಕ್ಷ್ಮದರ್ಶಿಗಳಾದವರಿಗೆ ಅಗ್ರ್ಯವಾದ ಸೂಕ್ಷ್ಮವಾದ ಬುದ್ಧಿಗೆ ಕಾಣಿಸುತ್ತಾನೆ.

(ಭಾಷ್ಯ)

೧೦೦. ಏಷ ಪುರುಷಃ ಸರ್ವೇಷು ಬ್ರಹ್ಮಾದಿಸ್ತಮ್ಬಪರ್ಯನ್ತೇಷು ಭೂತೇಷು ಗೂಢಃ ಸಂವೃತಃ ದರ್ಶನಶ್ರವಣಾದಿಕರ್ಮಾ ಅವಿದ್ಯಾಮಾಯಾಚ್ಛನ್ನಃ ಅತ ಏವ ಆತ್ಮಾ ನ ಪ್ರಕಾಶತೇ ಆತ್ಮತ್ವೇನ ಕಸ್ಯಚಿತ್ । ಅಹೋ ಅತಿಗಮ್ಭೀರಾ ದುರವಗಾಹ್ಯಾ ವಿಚಿತ್ರಾ ಚೇಯಂ ಮಾಯಾ[1] ಯದಯಂ ಸರ್ವೋ ಜನ್ತುಃ ಪರಮಾರ್ಥತಃ ಪರಮಾರ್ಥಸತ್ತೊ್ವೇಽಪಿ ಏವಂ ಚೋಧ್ಯಮಾನಃ "ಅಹಂ ಪರಮಾತ್ಮಾ" ಇತಿ ನ ಗೃಹ್ಣಾತಿ, ಅನಾತ್ಮಾನಂ ದೇಹೇನ್ದ್ರಿಯಾದಿಸಙ್ಘಾತಮ್ ಆತ್ಮನೋ ದೃಶ್ಯಮಾನಮಪಿ ಘಟಾದಿವತ್ ಆತ್ಮತ್ವೇನ "ಅಹಮಮುಷ್ಯ ಪುತ್ರಃ" ಇತ್ಯನುಚ್ಯಮಾನೋಽಪಿ ಗೃಹ್ಣಾತಿ । ನೂನಂ ಪರಸ್ಯೈವ ಮಾಯಯಾ ಮೋಮುಹ್ಯಮಾನಃ ಸರ್ವೋ ಲೋಕೋಽಯಂ ಬನ್ಧ್ಯತಿ । ತಥಾ ಚ ಸ್ಮರಣಮ್ "ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ" (ಗೀ. ೭-೨೫) ಇತ್ಯಾದಿ ॥

(ಭಾಷ್ಯಾರ್ಥ)

ಈ ಪುರುಷನು ಬ್ರಹ್ಮನು ಮೊದಲಾಗಿ ಸ್ತಂಬದವರೆಗಿನ ಎಲ್ಲಾ ಭೂತಗಳಲ್ಲಿಯೂ[2] ಅಡಗಿರುವನು, ಮುಸುಕಿಟ್ಟುಕೊಂಡಿರುವನು, **ನೋಡುವದು, ಕೇಳುವದು ಮುಂತಾದ ಕೆಲಸಗಳನ್ನು ಮಾಡುತ್ತಾ**[3] **ಅವಿದ್ಯಾಮಾಯೆ** ಯಿಂದ ಮರೆಯಾಹಿರುವನು.[4] ಆದ್ದರಿಂದಲೇ (ಈ) ಆತ್ಮನು "ನನ್ನ ಆತ್ಮನು" ಎಂದು ಯಾರಿಗೂ ಬೆಳಗುವದಿಲ್ಲ.[5] ಅಹಾ! ಅತಿಗಂಭೀರವಾದ ತಿಳಿಯಲಸದಳ

---

1. ವಾ॥

2. ಬ್ರಹ್ಮನಿಂದ ಹಿಡಿದು ಸ್ಥಾವರಪ್ರಾಣಿಯವರೆಗೆ ಶರೀರವು ಬೇರೆಬೇರೆಯಾದರೂ ಆತ್ಮನು ಒಬ್ಬನೇ.

3. ನೋಡುವದು–ಮುಂತಾದ ವ್ಯಾಪಾರಗಳಲ್ಲಿ ಇಂದ್ರಿಯವೃತ್ತಿಯು ಬೇರೆಬೇರೆಯಾದರೂ ಅರಿವು, ಚೈತನ್ಯವು, ಒಂದೇ. ಇದನ್ನು ಮೂಢರು ಅರಿಯರು. ಗೀ. ಭಾ. ೧೫-೧೦, ಭಾ. ಭಾ. ೭ಳರಲ್ಲಿ "ದರ್ಶನಶ್ರವಣಮನನವಿಜ್ಞಾನಲಿಙ್ಗಮ್" ಎಂಬುದಕ್ಕೂ ಇದೇ ಅರ್ಥ.

4 ಅವಿದ್ಯೆ ಎಂದರೆ ಶರೀರ, ಇಂದ್ರಿಯ, ಮನಸ್ಸು–ಮುಂತಾದವುಗಳ ಧರ್ಮವನ್ನು ಹುಟ್ಟುಗಟ್ಟುವ ತಪ್ಪು ತಿಳಿವಳಿಕೆ. ಮಾಯೆ ಎಂದರೆ ಅಧ್ಯಾಸದಿಂದ ತೋರುವ ಶರೀರಾದಿಗಳು. ಆತ್ಮನು ಶುದ್ಧಚೈತನ್ಯಸ್ವರೂಪನೇ ಆಗಿದ್ದರೂ ಅವಿದ್ಯಾಮಾಯೆಯಿಂದ ಮರೆಯಾಗಿರುವನು.

5. ಒಬ್ಬ ಆತ್ಮನೇ ನಮ್ಮಗಳೆಲ್ಲರ ಆತ್ಮನು ಎಂದು ತೋರುವದಿಲ್ಲ.

ವಾದ ಮತ್ತು ವಿಚಿತ್ರವಾದ ಮಾಯೆಯಿದು! ಏಕೆಂದರೆ ಈ ಪ್ರತಿಯೊಬ್ಬ ಜೀವನೂ ನಿಜವಾಗಿ (ತಾನು) ಪರಮಾರ್ಥತತ್ತ್ವವೇ ಆಗಿದ್ದರೂ ಹೀಗೆಂದು ಹೇಳಿಕೊಟ್ಟರೂ "ನಾನು ಪರಮಾತ್ಮನು" ಎಂದು ತಿಳಿಯುವದಿಲ್ಲವಲ್ಲ! ಅನಾತ್ಮವಾದ ದೇಹ, ಇಂದ್ರಿಯಗಳು–ಮುಂತಾದವುಗಳ ಸೇರುವೆಯ ಗುಂಪನ್ನು (ಅದು) ಗಡಿಗೆಯೇ ಮುಂತಾದದ್ದರಂತೆ ತನಗೆ (ಬೇರೆಯಾಗಿ) ಕಾಣುತ್ತಿದ್ದರೂ ತಾವೆಂದು(ಕೊಂಡು) ಯಾರೂ ಹೇಳಿಕೊಡದಿದ್ದರೂ "ನಾನು ಇಂಥವನ ಮಗನು" ಎಂದು ಗ್ರಹಿಸಿಕೊಳ್ಳುತ್ತಿರುವರಲ್ಲ! ನಿಜವಾಗಿಯೂ ಈ ಜನವೆಲ್ಲ ಪರ(ಮಾತ್ಮ)ನ ಮಾಯೆಯಿಂದಲೇ ಮತ್ತೆಮತ್ತೆ ಮೋಹಿತರಾಗಿ (ಸಂಸಾರದಲ್ಲಿ) ತೊಳಲುತ್ತಿರುವರೆನ್ನಬೇಕು. ಆದ್ದರಿಂದಲೇ "ಯೋಗಮಾಯೆಯಿಂದ ಮುಸುಕಿಟ್ಟುಕೊಂಡಿರುವದರಿಂದ ನಾನು ಎಲ್ಲಾ ಜನರಿಗೂ ತೋರುವದಿಲ್ಲ" (ಗೀ. ೭-೨೫) ಎಂದು **ಸ್ಮೃತಿಯೂ** ಹೇಳುತ್ತಿದೆ.

(ಭಾಷ್ಯ)

೧೦೧. ನನು ವಿರುದ್ಧಮಿದಮುಚ್ಯತೇ "ಮತ್ವಾ ಧೀರೋ ನ ಶೋಚತಿ" (೧-೨-೨೨) "ನ ಪ್ರಕಾಶತೇ" (೧-೩-೧೨) ಇತಿ ಚ। ನೈತದೇವಮ್। ಅಸಂಸ್ಕೃತ ಬುದ್ಧೇರವಿಜ್ಞೇಯತ್ವಾತ್ "ನ ಪ್ರಕಾಶತೇ" ಇತ್ಯುಕ್ತಮ್। ದೃಶ್ಯತೇ ತು ಸಂಸ್ಕೃತಯಾ ಅಗ್ರ್ಯಯಾ ಅಗ್ರಮಿವಾಗ್ರ್ಯಯಾ। ಏಕಾಗ್ರತಯೋಪೇತಯಾ ಇತ್ಯೇತತ್। ಸೂಕ್ಷ್ಮಯಾ ಸೂಕ್ಷ್ಮವಸ್ತುನಿರೂಪಣಪರಯಾ। ಕೈಃ? ಸೂಕ್ಷ್ಮದರ್ಶಿಭಿಃ "ಇನ್ದ್ರಿಯೇಭ್ಯಃ ಪರಾಹ್ಯರ್ಥಾಃ" ಇತ್ಯಾದಿಪ್ರಕಾರೇಣ ಸೂಕ್ಷ್ಮತಾಪಾರಮ್ಪರ್ಯದರ್ಶನೇನ ಪರಂ ಸೂಕ್ಷ್ಮಂ ದ್ರಷ್ಟುಂ ಶೀಲಂ ಯೇಷಾಂ ತೇ ಸೂಕ್ಷ್ಮದರ್ಶಿನಃ, ತೈಃ ಸೂಕ್ಷ್ಮದರ್ಶಿಭಿಃ। ಪಣ್ಡಿತೈಃ ಇತ್ಯೇತತ್॥

(ಭಾಷ್ಯಾರ್ಥ)

(ಆಕ್ಷೇಪ):—"ತಿಳಿದುಕೊಂಡರೆ ಧೀರನು ಶೋಕಿಸುವದಿಲ್ಲ" (೧-೨-೨೨) ಎಂದೂ ಹೇಳಿ (ಈಗ) "(ಇವನು) ಬೆಳಗುವದಿಲ್ಲ" ಎಂದು ಹೇಳಿರುವದು (ಒಂದಕ್ಕೊಂದು) ವಿರುದ್ಧವಲ್ಲವೆ?

(ಪರಿಹಾರ):—ಹಾಗಲ್ಲ. ಬುದ್ಧಿಯ ಸಂಸ್ಕಾರವಿಲ್ಲದವರಿಗೆ ತಿಳಿಯುವದಕ್ಕೆ ಬರುವದಿಲ್ಲವಾದ್ದರಿಂದ "ಬೆಳಗುವದಿಲ್ಲ" ಎಂದು ಹೇಳಿರುತ್ತದೆ. ಆದರೆ ಅಗ್ರ್ಯವಾದ–ಮೊನೆಯಂತೆ (ಚೂಪಾಗಿರುವದು) ಅಗ್ರ್ಯವು ಅಂಥ (ಬುದ್ಧಿಯಿಂದ)–ಎಂದರೆ ಏಕಾಗ್ರತೆಯಿಂದ ಕೂಡಿರುವ ಎಂದರ್ಥ. ಸೂಕ್ಷ್ಮವಾದ ಎಂದರೆ ಸೂಕ್ಷ್ಮವಾದ

ವಸ್ತುವನ್ನು ಪರೀಕ್ಷಿಸುವದರಲ್ಲಿಯೇ ಆಸಕ್ತಿಯುಳ್ಳ ಬುದ್ಧಿಗೆ[1] ಕಾಣಿಸುತ್ತಾನೆ. ಯಾರಿಗೆ (ಕಾಣಿಸುತ್ತಾನೆ)? ಎಂದರೆ ಸೂಕ್ಷ್ಮದರ್ಶಿಗಳಾದವರಿಗೆ. " ಇಂದ್ರಿಯಗಳಿಗಿಂತ ಅರ್ಥಗಳು ಹೆಚ್ಚಿನವು " (೧-೩-೧೦) ಎಂದು ಮುಂತಾಗಿ (ಹೇಳಿರುವ) ರೀತಿಯಿಂದ ಒಂದಕ್ಕಿಂತ ಒಂದು ಸೂಕ್ಷ್ಮವಾಗಿರುವ (ವಸ್ತುಗಳನ್ನು) ನೋಡಿ ಅತ್ಯಂತ ಸೂಕ್ಷ್ಮವಾಗಿರುವ ವಸ್ತುವನ್ನು[2] ಕಂಡುಕೊಳ್ಳುವ ಸ್ವಭಾವವುಳ್ಳವರು ಸೂಕ್ಷ್ಮದರ್ಶಿಗಳು, ಅಂಥ ಸೂಕ್ಷ್ಮದರ್ಶಿಗಳಾದ ಪಂಡಿತರಿಗೆ ಎಂದರ್ಥ.

ಅಧ್ಯಾತ್ಮಯೋಗ

ಯಚ್ಛೇದ್ವಾಙ್ಮನಸೀ ಪ್ರಾಜ್ಞ-
ಸ್ತದ್ಯಚ್ಛೇಜ್ಜ್ಞಾನ ಆತ್ಮನಿ ।
ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್
ತದ್ಯಚ್ಛೇಚ್ಛಾನ್ತ ಆತ್ಮನಿ ॥ ೧೩ ॥

೧೩. ಪ್ರಾಜ್ಞನು ವಾಕ್ಕನ್ನು ಮನಸ್ಸಿನಲ್ಲಿ ಹಿಡಿದಿಡಬೇಕು, ಅದನ್ನು ಜ್ಞಾನವೆಂಬ ಆತ್ಮನಲ್ಲಿ ಹಿಡಿದಿಡಬೇಕು. ಜ್ಞಾನವನ್ನು ಮಹಾನ್ ಎಂಬ ಆತ್ಮನಲ್ಲಿ ಹಿಡಿದಿಡಬೇಕು, ಅದನ್ನು ಶಾಂತನಾದ ಆತ್ಮನಲ್ಲಿ ಹಿಡಿದಿಡಬೇಕು.

ಭಾಷ್ಯ)

೧೦೨. ತತ್ಪ್ರತಿಪತ್ತ್ಯುಪಾಯಮಾಹ–ಯಚ್ಛೇತ್, ಉಪಸಂಹರೇತ್ ಪ್ರಾಜ್ಞಃ ವಿವೇಕೀ । ಕಿಮ್? ವಾಕ್ ವಾಚಮ್ । ವಾಗತ್ರ ಉಪಲಕ್ಷಣಾರ್ಥಾ ಸರ್ವೇಷಾಮಿನ್ದ್ರಿಯಾಣಾಮ್ । ಕ್ವ? ಮನಸೀ ಮನಸಿ । ಛಾನ್ದಸಂ ದೈರ್ಘ್ಯಮ್ । ತಚ್ಚ ಮನಃ ಯಚ್ಛೇತ್ ಜ್ಞಾನೇ ಪ್ರಕಾಶಸ್ವರೂಪೇ ಬುದ್ಧಾ ಆತ್ಮನಿ । ಬುದ್ಧಿರ್ಹಿ ಮನ ಆದಿಕರಣಾನ್ಯಾಪ್ನೋತೀತ್ಯಾತ್ಮಾ ಪ್ರತ್ಯಕ್ ತೇಷಾಮ್ । ಜ್ಞಾನಂ ಬುದ್ಧಿಮ್

---

1. ನಿದಿಧ್ಯಾಸನದ ಅಭ್ಯಾಸಾತಿಶಯದಿಂದ ಏಕಾಗ್ರ್ಯವಾದ ಅಂತಃಕರಣದ ಸಹಾಯದಿಂದ ಮಹಾವಾಕ್ಯದಿಂದುಂಟಾಗುವ ಬುದ್ಧಿವೃತ್ತಿಯಲ್ಲಿ ಅಭಿವ್ಯಕ್ತನಾಗುತ್ತಾನೆ ಎಂದು (೪॥ ಗೋ॥) ವ್ಯಾಖ್ಯಾನಗಳು. ಇಲ್ಲಿ ನಿದಿಧ್ಯಾಸನವು ಏಕಾಗ್ರತೆಗೆ ಮಾತ್ರ ಕಾರಣವೆಂದು ಇಟ್ಟುಕೊಂಡಿರುವದಕ್ಕೆ ಭಾಷ್ಯಾಧಾರವೇನೋ ತಿಳಿಯದು.

2. ಸೂಕ್ಷ್ಮನಾದ ಆತ್ಮನನ್ನು ಸೂಕ್ಷ್ಮವಾದ ಮನೋವೃತ್ತಿಯಿಂದಲೇ ಕಂಡುಕೊಳ್ಳಬೇಕೆಂದು ಭಾವ ಗೀ. ಭಾ ೧೪-೫೦. " ಕಥಂ ತರ್ಹ್ಯಾತ್ಮನೋ ಜ್ಞಾನಮ್ " ಎಂಬ ಭಾಷ್ಯಭಾಗವನ್ನು ನೋಡಿ.

ಆತ್ಮನಿ ಮಹತಿ ಪ್ರಥಮಜೇ ನಿಯಚ್ಛೇತ್ । ಪ್ರಥಮಜವತ್ ಸ್ವಚ್ಛಸ್ವಭಾವಕಮ್ ಆತ್ಮನೋ ವಿಜ್ಞಾನಮಾಪಾದಯೇತ್ ಇತ್ಯರ್ಥಃ । ತಂ ಚ ಮಹಾನ್ತಮಾತ್ಮಾನಂ ಯಚ್ಛೇತ್ ಶಾನ್ತೇ ಸರ್ವವಿಶೇಷಪ್ರತ್ಯಸ್ತಮಿತಸ್ವರೂಪೇ, ಅವಿಕ್ರಿಯೇ, ಸರ್ವಾನ್ತರೇ, ಸರ್ವಬುದ್ಧಿಪ್ರತ್ಯಯಸಾಕ್ಷಿಣಿ ಮುಖ್ಯೇ ಆತ್ಮನಿ ॥

(ಭಾಷ್ಯಾರ್ಥ)

ಅದನ್ನು ಅರಿಯುವದಕ್ಕೆ ಸಾಧನವನ್ನು ಹೇಳುತ್ತಾನೆ: ಪ್ರಾಜ್ಞನು ಎಂದರೆ ವಿವೇಕಿಯು ಹಿಡಿದಿಡಬೇಕು, ಹಿಡಿದು ನಿಲ್ಲಿಸಬೇಕು, ಉಪಸಂಹಾರಮಾಡಿಕೊಳ್ಳಬೇಕು.[1] ಏನನ್ನು? ವಾಕ್ (ಎಂಬ ಮೂಲವನ್ನು) ವಾಚಮ್ (ಎಂದು ಮಾರ್ಪಡಿಸಿಕೊಳ್ಳಬೇಕು). ಮಾತನ್ನು, ಇಲ್ಲಿ ವಾಕ್ ಎಂಬುದನ್ನು ಎಲ್ಲ ಇಂದ್ರಿಯಗಳಿಗೂ ಉಪಲಕ್ಷಣವಾಗಿ (ಉಪಯೋಗಿಸಿದೆ).[2] ಎಲ್ಲಿ (ಉಪಸಂಹಾರಮಾಡಿಕೊಳ್ಳಬೇಕು)? ಮನಸ್ಸಿನಲ್ಲಿ. 'ಮನಸೀ' ಎಂಬ ದೀರ್ಘವು ವೈದಿಕಪ್ರಯೋಗವು. ಆ ಮನಸ್ಸನ್ನು ಜ್ಞಾನವೆಂಬ ಆತ್ಮನಲ್ಲಿ ಎಂದರೆ ಪ್ರಕಾಶಸ್ವರೂಪನಾದ ಆತ್ಮನಲ್ಲಿ (ಉಪಸಂಹಾರಮಾಡಿಕೊಳ್ಳಬೇಕು ಎಂದರ್ಥ). ಏಕೆಂದರೆ ಬುದ್ಧಿಯು ಮನಸ್ಸೇ ಮುಂತಾದ ಕರಣಗಳನ್ನು ವ್ಯಾಪಿಸಿಕೊಂಡಿರುವದರಿಂದ[3] ಅದು ಅವುಗಳಿಗೆ ಒಳಗಿನ ಆತ್ಮವು.[4] ಜ್ಞಾನವನ್ನು ಎಂದರೆ (ಈ) ಬುದ್ಧಿಯನ್ನು ಮಹಾನ್ ಎಂಬ ಆತ್ಮನಲ್ಲಿ ಮೊದಲು ಹುಟ್ಟಿದ (ಹಿರಣ್ಯಗರ್ಭಬುದ್ಧಿಯಲ್ಲಿ)[5] ಹಿಡಿದು ನಿಲ್ಲಿಸಬೇಕು, ಎಂದರೆ

---

1. ಲಯಮಾಡಿಕೊಳ್ಳಬೇಕು ಎಂದರ್ಥ. ಸ್ಥೂಲವಾದದ್ದನ್ನು ಸೂಕ್ಷ್ಮವಾದ ತತ್ತ್ವದಲ್ಲಿ ಲಯಮಾಡಿಕೊಳ್ಳುತ್ತಾ ಹೋದರೆ ಕೊನೆಗೆ ಅತ್ಯಂತ ಸೂಕ್ಷ್ಮವಾದ ಪ್ರತ್ಯಗಾತ್ಮನ ಅರಿವು ಆಗುತ್ತದೆ.

2. ಆದ್ದರಿಂದ ಇಂದ್ರಿಯಗಳೆಲ್ಲವನ್ನೂ ಮನಸ್ಸಿನಲ್ಲಿ ಲಯಮಾಡಿಕೊಳ್ಳಬೇಕು ಎಂದು ಅರ್ಥ.

3. ಆಪ್ನೋತೀತಿ ಆತ್ಮಾ ಎಂದು ಆತ್ಮಶಬ್ದಕ್ಕೆ ವ್ಯುತ್ಪತ್ತಿಯನ್ನು ಮಾಡಿರುತ್ತದೆ. ಇಂದ್ರಿಯಾದಿಗಳು ಒಂದಕ್ಕಿಂತ ಒಂದು ಸೂಕ್ಷ್ಮವಾಗಿರುವವು, ವ್ಯಾಪಕವಾಗಿರುವವು, ಒಳಗಿನ ಆತ್ಮನಾಗಿರುವವು ಎಂದು ಹಿಂದೆ ೧೦, ೧೧ರಲ್ಲಿ ಹೇಳಿದೆ.

4. "ಪ್ರತ್ಯಕ್ಷ" ಎಂಬ (ವಾ॥) ಪಾರದಲ್ಲಿ ಆತ್ಮನೂ ಒಳಗಿರುವದೂ ಆಗಿದೆ ಎಂದು ಕನ್ನಡಿಸಬೇಕು. ಆಗ ಆತ್ಮಾ ಎಂಬುದಕ್ಕೆ ವ್ಯಾಪಕವೆಂದು ಮಾತ್ರ ಅರ್ಥ.

5. ಭೋಕ್ತೃವಿನಲ್ಲಿ ಎಂದೂ ಸೂ. ಭಾ. ೧-೪-೧೭ರಲ್ಲಿ ಅರ್ಥವನ್ನು ಮಾಡಿದೆ. ಹಿರಣ್ಯಗರ್ಭನು ಮೊದಲು ಹುಟ್ಟಿದವನೆಂಬುದಕ್ಕೆ "ಮಹದ್ಯಕ್ಷಂ ಪ್ರಥಮಜಮ್" ಎಂಬ ಬೃ. ೫-೪-೧೧ನ್ನು ಇಲ್ಲಿ ಪ್ರಮಾಣವಾಗಿ ಸೂಚಿಸಿದೆ.

ಮೊದಲು ಹುಟ್ಟಿದ (ಹಿರಣ್ಯಗರ್ಭನ ಬುದ್ಧಿಯಂತೆ) ತನ್ನ ಬುದ್ಧಿಯನ್ನು ಸ್ವಚ್ಛವಾಗಿ[1] ಮಾಡಿಕೊಳ್ಳಬೇಕು ಎಂದರ್ಥ. ಆ ಮಹಾನ್ ಎಂಬ ಆತ್ಮನನ್ನು ಶಾಂತನಾದ ಎಂದರೆ ಎಲ್ಲಾ ವಿಶೇಷಗಳೂ ಅಡಗಿರುವ ಸ್ವರೂಪವುಳ್ಳ,[2] ಮಾರ್ಪಾಡಿಲ್ಲದ ಎಲ್ಲದಕ್ಕೂ ಒಳಗಿನ, ಎಲ್ಲಾ ಬುದ್ಧಿಪ್ರತ್ಯಯಗಳಿಗೂ ಸಾಕ್ಷಿಯಾಗಿರುವ ಮುಖ್ಯನಾದ ಆತ್ಮನಲ್ಲಿ ಹಿಡಿದಿಡಬೇಕು.

(ಭಾಷ್ಯ)

೧೦೩. ಏವಂ ಪುರುಷೇ ಆತ್ಮನಿ ಸರ್ವಂ ಪ್ರವಿಲಾಪ್ಯ ನಾಮರೂಪ ಕರ್ಮತ್ರಯಂ ಯನ್ಮಿಥ್ಯಾಜ್ಞಾನವಿಜೃಂಭಿತಂ ಕ್ರಿಯಾಕಾರಕಫಲಲಕ್ಷಣಂ ಸ್ವಾತ್ಮ ಯಾಥಾತ್ಮ್ಯಜ್ಞಾನೇನ ಮರೀಚ್ಯುದಕರಜ್ಜುಸರ್ಪಗಗನಮಲಾನೀವ ಮರೀಚಿರಜ್ಜು ಗಗನಸ್ವರೂಪದರ್ಶನೇನೈವ ಸ್ವಸ್ಥಃ ಪ್ರಶಾನ್ತಾತ್ಮಾ ಕೃತಕೃತ್ಯೋ ಭವತಿ ಯತಃ, ಅತಃ—

(ಭಾಷ್ಯಾರ್ಥ)

ಹೀಗೆ ಮಿಥ್ಯಾಜ್ಞಾನದಿಂದ ಹಬ್ಬಿರುವ ಕ್ರಿಯೆ, ಕಾರಕ, ಫಲ–ಇವುಗಳ ರೂಪವಾದ ನಾಮರೂಪಕರ್ಮಗಳೆಂಬ ಮೂರಾಗಿರುವದೆಲ್ಲವನ್ನೂ[3]– ಬಿಸಿಲುಕುದುರೆಯ ನೀರು, ಹಗ್ಗದ ಹಾವು, ಆಕಾಶದ ಕಶ್ಮಲ–ಇವುಗಳನ್ನು ಬಿಸಿಲು, ಹಗ್ಗ, ಆಕಾಶ ಇವುಗಳ ಸ್ವರೂಪವನ್ನು ಕಂಡುಕೊಳ್ಳುವ (ಮಾತ್ರ) ದಿಂದಲೇ (ಲಯಮಾಡುವಂತೆ)[4]–ತನ್ನ ಆತ್ಮನ ನಿಜವನ್ನು ಅರಿತುಕೊಳ್ಳುವದರಿಂದ(ಲೇ) ಪುರುಷನೆಂಬ ಆತ್ಮನಲ್ಲಿ ಲಯಮಾಡಿಕೊಂಡು[5] ತನ್ನಲ್ಲಿ ತಾನು ನಿಂತು[6] ಅಂತಃ

---

1. ಹಿರಣ್ಯಗರ್ಭನ ಬುದ್ಧಿಯು ಶುದ್ಧಸಾತ್ತ್ವಿಕವಾಗಿರುತ್ತದೆ. ಸಾಮಾನ್ಯರ ಬುದ್ಧಿಯಲ್ಲಿ ರಜಸ್ತಮೋಗುಣಗಳ ಸಂಪರ್ಕವೂ ಇರುತ್ತದೆ.

2. ಯಾವ ವಿಶೇಷವೂ ಇಲ್ಲದ, ನಿರ್ಗುಣವಾದ. ಮಹತ್ತತ್ತ್ವವನ್ನು ಅವ್ಯಕ್ತದಲ್ಲಿ ಲಯಮಾಡಿದ ಬಳಿಕ ಶುದ್ಧಾತ್ಮನಲ್ಲಿ ಲಯಮಾಡಬೇಕು ಎಂದು ಇಲ್ಲಿ ಅರ್ಥಮಾಡಿಕೊಳ್ಳಬೇಕು.

3. ಬೃ. ೧-೬-೩ ರಲ್ಲಿ ಹೇಳಿರುವಂತೆ ಜಗತ್ತೆಲ್ಲವೂ ಈ ಮೂರರಲ್ಲಿ ಅಡಕ. ವ್ಯಾಕೃತ ಪ್ರಪಂಚದಲ್ಲಿ ಇವೇ ಕ್ರಿಯಾಕಾರಕಫಲರೂಪವಾಗಿ ಕಾಣಿಸಿಕೊಳ್ಳುವವು.

4. ತೋರಿಕೆಗಳನ್ನು ಲಯಮಾಡುವದಕ್ಕೆ ಅಧಿಷ್ಠಾನದ ಜ್ಞಾನವಲ್ಲದೆ ಮತ್ತೇನೂ ಬೇಕಿಲ್ಲವೆಂಬುದಕ್ಕೆ ಈ ದೃಷ್ಟಾಂತವನ್ನು ಕೊಟ್ಟಿದೆ.

5 ಪ್ರಪಂಚಲಯವೆಂಬುದು ಒಂದು ಬಗೆಯ ಧ್ಯಾನವಿಶೇಷದಿಂದ ಮಾಡುವ ಕಾರ್ಯವೆಂದು ಕೆಲವರು ಭಾವಿಸಿದ್ದರು. ಇದು ತಪ್ಪೆಂದೂ ಜ್ಞಾನದಿಂದಲೇ ಅವಿದ್ಯಾಕೃತಪ್ರಪಂಚದ ಲಯವಾಗುವದೆಂದೂ ಸೂ. ಭಾ. ೩-೨-೨೧ರಲ್ಲಿ ತೋರಿಸಿರುತ್ತದೆ.

6 ರೋಗವನ್ನು ಕಳೆದುಕೊಂಡ ಪುರುಷನು ಸ್ವಸ್ಥನಾಗುವಂತೆ ಪ್ರಪಂಚಲಯವಾಗುತ್ತಲೂ ಆತ್ಮಸ್ವರೂಪದಲ್ಲಿ ನಿಲ್ಲುತ್ತಾನೆ. ಮಾ. ಭಾ. ಅವತರಣಿಕೆಯಲ್ಲಿ ಪ್ರಯೋಜನಭಾಷ್ಯವನ್ನು ನೋಡಿ.

ಕರಣದಲ್ಲಿ ಹೆಚ್ಚಿನ ಶಾಂತಿಯನ್ನು ಹೊಂದಿ ಕೃತಕೃತ್ಯನಾಗುತ್ತಾನಲ್ಲವೆ? ಆದ ಕಾರಣ—

ಉತ್ತಿಷ್ಠತ ಜಾಗ್ರತ
ಪ್ರಾಪ್ಯ ವರಾನ್ ನಿಬೋಧತ ।
ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ
ದುರ್ಗಂ ಪಥಸ್ತತ್ಕವಯೋ ವದನ್ತಿ ॥ ೧೪ ॥

೧೪. ಏಳಿರಿ, ಎಚ್ಚರವಾಗಿರಿ, ಶ್ರೇಷ್ಠರನ್ನು ಸೇರಿ ತಿಳಿದುಕೊಳ್ಳಿರಿ. ಆ ಹಾದಿಯನ್ನು ಕ್ಷುರದ ಕತ್ತಿಯ ಸಾಣೆ ಹಿಡಿದ ಅಲುಗಿನಂತೆ ದಾಟಲಶಕ್ಯವಾದದ್ದು, ದುರ್ಗಮವಾದದ್ದು–ಎಂದು ಕವಿಗಳು ಹೇಳುತ್ತಾರೆ.

(ಭಾಷ್ಯ)

೧೦೪. ತದ್ದರ್ಶನಾರ್ಥಮ್, ಅನಾದ್ಯವಿದ್ಯಾಪ್ರಸುಪ್ತಾಃ ಉತ್ತಿಷ್ಠತ, ಹೇ ಜನ್ತವಃ ಆತ್ಮಜ್ಞಾನಾಭಿಮುಖಾ ಭವತ। ಜಾಗ್ರತ ಅಜ್ಞಾನನಿದ್ರಾಯಾಃ ಘೋರ ರೂಪಾಯಾಃ ಸರ್ವಾನರ್ಥಬೀಜಭೂತಾಯಾಃ ಕ್ಷಯಂ ಕುರುತ । ಕಥಮ್? ಪ್ರಾಪ್ಯ ಉಪಗಮ್ಯ ವರಾನ್ ಪ್ರಕೃಷ್ಟಾನಾಚಾರ್ಯಾನ್, ತತ್ತ್ವವಿದಃ ತದುಪದಿಷ್ಟಂ ಸರ್ವಾನ್ತರಮಾತ್ಮಾನಮ್ "ಅಹಮಸ್ಮಿ" ಇತಿ ನಿಬೋಧತ ಅವಗಚ್ಛತ । ನ ಹಿ ಉಪೇಕ್ಷಿತವ್ಯಮ್–ಇತಿ ಶ್ರುತೇಃ ಅನುಕಮ್ಪಯಾ ಅಹ ಮಾತೃವತ್ । ಅತಿಸೂಕ್ಷ್ಮ ಬುದ್ಧಿವಿಷಯತ್ವಾಜ್ಜ್ಞೇಯಸ್ಯ । ಕಿಮಿವ ಸೂಕ್ಷ್ಮಬುದ್ಧಿರಿತಿ? ಉಚ್ಯತೇ। ಕ್ಷುರಸ್ಯ ಧಾರಾ ಅಗ್ರಂ ನಿಶಿತಾ ತೀಕ್ಷ್ಣೀಕೃತಾ ದುರತ್ಯಯಾ ದುಃಖೇನ ಅತ್ಯಯೋ ಯಸ್ಯಾಃ ಸಾ ದುರತ್ಯಯಾ। ಯಥಾ ಸಾ ಪದ್ಭ್ಯಾಂ ದುರ್ಗಮನೀಯಾ ತಥಾ ದುರ್ಗಂ ದುಸ್ಸಮ್ಪಾದ್ಯಮ್ ಇತ್ಯೇತತ್। ಪಥಃ ಪನ್ಥಾನಂ ತತ್ ತಂ ಜ್ಞಾನಲಕ್ಷಣಂ ಮಾರ್ಗಂ ಕವಯಃ ಮೇಧಾವಿನಃ ವದನ್ತಿ । ಜ್ಞೇಯಸ್ಯ ಅತಿಸೂಕ್ಷ್ಮತ್ವಾತ್ ತದ್ವಿಷಯಸ್ಯ ಜ್ಞಾನಮಾರ್ಗಸ್ಯ ದುಸ್ಸಮ್ಪಾದ್ಯತ್ವಂ ವದನ್ತಿ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

"ಎಲೈ, **ಅನಾದಿಯಾದ ಅವಿದ್ಯೆಯಿಂದ** ನಿದ್ರೆಮಾಡುತ್ತಿರುವ[1] ಜೀವರುಗಳಿರ, ಆತನನ್ನು ಕಂಡುಕೊಳ್ಳುವದಕ್ಕಾಗಿ ಏಳಿರಿ, ಆತ್ಮಜ್ಞಾನದ ಕಡೆಗೆ ತಿರುಗಿರಿ[2], ಎಚ್ಚರಗೊಳ್ಳಿರಿ. **ಎಲ್ಲಾ ಅನರ್ಥಗಳಿಗೂ ಬೀಜವಾಗಿರುವ[3] ಭಯಂಕರ**

1. ಮಾ. ಕಾ. ೧-೧೬.
2. ಜ್ಞಾನಸಾಧನವನ್ನು ಕೈಕೊಳ್ಳಿರಿ.
3. ತಪ್ಪು ತಿಳಿವಳಿಕೆಯಿಂದಾಗುವ ಕ್ರಿಯಾಕಾರಕಫಲರೂಪವಾದ ಸಂಸಾರಕ್ಕೆ ಕಾರಣವಾಗಿರುವ.

ವಾದ ಅಜ್ಞಾನನಿದ್ರೆಯನ್ನು ನಾಶಮಾಡಿಕೊಳ್ಳಿರಿ. ಹೇಗೆ? (ಎಂದರೆ) ಶ್ರೇಷ್ಠರನ್ನು ಎಂದರೆ ತತ್ತ್ವವನ್ನು ಬಲ್ಲ ಉತ್ತಮರಾದ **ಆಚಾರ್ಯರನ್ನು** ಸೇರಿ ಬಳಿಸಂದು ಅವರು ಉಪದೇಶಮಾಡುವ ಸರ್ವಾಂತರನಾದ ಆತ್ಮನು "(ಆತನೇ) ನಾನಾಗಿರುವೆನು" ಎಂದು ತಿಳಿದುಕೊಳ್ಳಿರಿ, ನಿಶ್ಚಯಿಸಿಕೊಳ್ಳಿರಿ, ಉಪೇಕ್ಷೆಮಾಡಲೇ ಬಾರದು" ಎಂದು ಶ್ರುತಿಯು ತಾಯಿಯಂತೆ ಮರುಕದಿಂದ ತಿಳಿಸುತ್ತಿರುವದು. ಏಕೆಂದರೆ ತಿಳಿಯಬೇಕಾಗಿರುವ (ಆತ್ಮನು) ಬಲು ಸೂಕ್ಷ್ಮವಾದ ಬುದ್ಧಿಗೆ ಮಾತ್ರ ಗೋಚರನಾಗುತ್ತಾನೆ.

ಬುದ್ಧಿಯು ಏತರಂತೆ ಸೂಕ್ಷ್ಮವಾ(ಗಿರಬೇಕು)[1] ? ಎಂದರೆ ಹೇಳುತ್ತಾನೆ. ಕ್ಷೌರದ ಕತ್ತಿಯ ಅಲಗು ಎಂದರೆ ಮೊನೆಯು ಸಾಣೆಹಿಡಿದು ಹರಿತಮಾಡಿದ್ದು ; ಅದನ್ನು ದಾಟುವದು ಬಲು ಕಷ್ಟವಾಗಿರುತ್ತದೆ. ಅದರ ಮೇಲೆ ಕಾಲುಗಳಿಂದ ನಡೆಯುವದು ಹೇಗೆ ಕಷ್ಟವಾಗಿರುವದೋ ಹಾಗೆ ದುರ್ಗಮವಾಗಿರುವದು ಎಂದರೆ ಆ ಹಾದಿಯನ್ನು (' ಪಥಃ ' - ಪನ್ಥಾನಮ್) ಆ ಜ್ಞಾನವೆಂಬ ಮಾರ್ಗವನ್ನು (ದುರ್ಗಮವಾದದ್ದೆಂದು) ಸಂಪಾದಿಸಿಕೊಳ್ಳುವದು ಕಷ್ಟವೆಂದು ಕವಿಗಳು ಬಲ್ಲವರು ಹೇಳುತ್ತಾರೆ. ಜ್ಞೇಯನಾದ (ಆತ್ಮನು) ಬಲು ಸೂಕ್ಷ್ಮನಾಗಿರುವದರಿಂದ ಅವನ ವಿಷಯವಾದ ಜ್ಞಾನಮಾರ್ಗವು ಸಂಪಾದಿಸುವದಕ್ಕೆ ಬಲು ಕಷ್ಟವಾಗಿರುವದೆಂದು ಹೇಳುವರು ಎಂದು ಅಭಿಪ್ರಾಯ.

(ಭಾಷ್ಯ)

೧೦೫. ತತ್ಕಥಮ್ ಅತಿಸೂಕ್ಷ್ಮತ್ವಂ ಜ್ಞೇಯಸ್ಯೇತಿ ? ಉಚ್ಯತೇ । ಸ್ಥೂಲಾ ತಾವದಿಯಂ ಮೇದಿನೀ ಶಬ್ದಸ್ಪರ್ಶರೂಪರಸಗನ್ಧೋಪಚಿತಾ ಸರ್ವೇನ್ದ್ರಿಯವಿಷಯ ಭೂತಾ । ತಥಾ ಶರೀರಮ್ । ತತ್ರ ಏಕೈಕಗುಣಾಪಕರ್ಷೇಣ ಗನ್ಧಾದೀನಾಂ ಸೂಕ್ಷ್ಮತ್ವ ಮಹತ್ತ್ವವಿಶುದ್ಧತ್ವ ನಿತ್ಯತ್ವಾದಿತಾರತಮ್ಯಂ ದೃಷ್ಟವಮಬಾದಿಷು ಯಾವದಾಕಾಶಮ್ ಇತಿ ತೇ ಗನ್ಧಾದಯಃ ಸ್ಥೂಲತ್ವಾದಿಕಾರಣಾಃ[2] ಶಬ್ದಾನ್ತಾಃ ಯತ್ರ ನ ಸನ್ತಿ ಕಿಮ್ನು ತಸ್ಯ ಸ್ಥೂಲತ್ವಾದಿ ನಿರತಿಶಯತ್ವಂ ವಕ್ತವ್ಯಮ್ ಇತ್ಯೇತದ್ ದರ್ಶಯತಿ ಶ್ರುತಿಃ—

(ಭಾಷ್ಯಾರ್ಥ)

ಹಾಗಾದರೆ ಜ್ಞೇಯವು ಬಲು ಸೂಕ್ಷ್ಮವಾಗಿರುವದೆಂಬುದು ಹೇಗೆ ? ಎಂದರೆ ಹೇಳುತ್ತಾನೆ. ಈ ಪೃಥ್ವಿಯು ಶಬ್ದ, ಸ್ಪರ್ಶ, ರೂಪ, ರಸ, ಗಂಧ–ಇವುಗಳ

---

1. ' ಸೂಕ್ಷ್ಮಬುದ್ಧಿಃ ' ಎಂಬುದಕ್ಕೆ ಬದಲು ಸೂಕ್ಷ್ಮಾಬುದ್ಧಿಃ ಎಂದಿದ್ದರೆ ಚೆನ್ನಾಗಿರುತ್ತಿತ್ತು.

2. (ಗೋ॥) ವ್ಯಾಖ್ಯಾನದ ಪಾಠ.

(ಸೇರುವೆಯಿಂದ) ದಪ್ಪನಾಗಿ ಎಲ್ಲಾ ಇಂದ್ರಿಯಗಳಿಗೂ ವಿಷಯವಾಗಿರುವದರಿಂದ ಸ್ಥೂಲವಾಗಿರುವದಷ್ಟೆ, ಶರೀರವೂ ಹಾಗೆಯೇ (ಇರುವದಷ್ಟೆ)[1]; ಹೀಗಿರುವದರಿಂದ ಗಂಧ ಮುಂತಾದವುಗಳಲ್ಲಿ ಒಂದೊಂದು ಗುಣವು ಕಡಿಮೆಯಾದ ಹಾಗೆಲ್ಲ ಅಪ್ಪು ಮೊದಲಾಗಿ ಆಕಾಶದವರೆಗೂ (ಇರುವ ವಸ್ತುಗಳು) ಒಂದಕ್ಕಿಂತ ಒಂದು ಹೆಚ್ಚು ಸೂಕ್ಷ್ಮವಾಗಿಯೂ ಹೆಚ್ಚು ವ್ಯಾಪಕವಾಗಿಯೂ ಹೆಚ್ಚು ಶುದ್ಧವಾಗಿಯೂ ಹೆಚ್ಚು ನಿತ್ಯವಾಗಿಯೂ (ಇವೇ) ಮುಂತಾದವುಗಳಲ್ಲಿ ತಾರತಮ್ಯ (ವುಳ್ಳವಾಗಿರುವದು) ಕಂಡುಬಂದಿರುತ್ತದೆ.[2] ಆದ್ದರಿಂದ ಸ್ಥೂಲತ್ವವೇ ಮುಂತಾದವುಗಳಿಗೆ ಕಾರಣವಾದ[3] ಆ ಗಂಧವು ಮೊದಲಾಗಿ ಶಬ್ದದವರೆಗಿನ (ಗುಣಗಳು ಒಂದೂ) ಯಾವ (ಆತ್ಮವ ಸ್ತುವಿ) ನಲ್ಲಿಲ್ಲವೋ ಅದು ಸೂಕ್ಷ್ಮತ್ವವೇ ಮುಂತಾದವುಗಳಲ್ಲಿ[4] ಮಿಗಿಲಿಲ್ಲದಿರುವದು ಎಂದು ಹೇಳುವದೇನಿದೆ?–ಎಂಬುದನ್ನು (ಈ ಮುಂದಿನ) ಶ್ರುತಿಯು ತಿಳಿಸುತ್ತದೆ:—

ಅಶಬ್ದಮಸ್ಪರ್ಶಮರೂಪಮವ್ಯಯಂ
ತಥಾರಸಂ ನಿತ್ಯಮಗನ್ಧವಚ್ಚ ಯತ್ ।
ಅನಾದ್ಯನನ್ತಂ ಮಹತಃ ಪರಂ ಧ್ರುವಂ
ನಿಚಾಯ್ಯ ತನ್ಮೃತ್ಯುಮುಖಾತ್ ಪ್ರಮುಚ್ಯತೇ ॥ ೧೫ ॥

೧೫. ಯಾವದು ಶಬ್ದವಿಲ್ಲದ, ಸ್ಪರ್ಶವಿಲ್ಲದ, ರೂಪವಿಲ್ಲದ, ಅವ್ಯಯವಾದ, ಹಾಗೂ ರಸವಿಲ್ಲದ, ನಿತ್ಯವಾದ, ಮತ್ತು ಗಂಧವಿಲ್ಲದ ಅನಾದಿಯೂ ಅನಂತವಾಗಿರುವ ಮಹತ್ತಿಗಿಂತ ಪರವಾದ, ಧ್ರುವವಾದ, (ವಸ್ತುವೋ) ಅದನ್ನು ಅರಿತುಕೊಂಡರೆ ಮೃತ್ಯುಮುಖದಿಂದ ಬಿಡುಗಡೆಯಾಗುವದು.

(ಭಾಷ್ಯ)

೧೦೬. ಅಶಬ್ದಮಸ್ಪರ್ಶಮರೂಪಮವ್ಯಯಂ ತಥಾರಸಂ ನಿತ್ಯಮಗನ್ಧವಚ್ಚ ಯತ್ ಏತದ್ವ್ಯಾಖ್ಯಾತಂ ಬ್ರಹ್ಮ । ಅವ್ಯಯಮ್ । ಯದ್ಧಿ ಶಬ್ದಾದಿಮತ್ **ತದ್**

---

1. ಶರೀರವು ಅತ್ಯಂತ ಸ್ಥೂಲವಾಗಿದೆ, ಇಂದ್ರಿಯ, ಮನಸ್ಸು, ಬುದ್ಧಿ, ಅವ್ಯಕ್ತ–ಇವುಗಳು ಒಂದಕ್ಕಿಂತ ಒಂದು ಸೂಕ್ಷ್ಮವಾಗಿದೆ

2. ಇದಕ್ಕೆ ಗುಣಗಳು ಬರುಬರುತ್ತಾ ಕಡಿಮೆಯಾಗುತ್ತಾ ಬಂದಿರುವದೇ ಕಾರಣ.

3. "ಸ್ಥೂಲತ್ವಾದ್ ವಿಕಾರಾಃ" ಎಂದೇ ಪ್ರಕಟಿತಪುಸ್ತಕಗಲ್ಲಿದೆಯಾದರೂ (ಗೋ॥) ವ್ಯಾಖ್ಯಾನವನ್ನನುಸರಿಸಿ 'ಸ್ಥೂಲತ್ವಾದಿಕಾರಣಾಃ" ಎಂಬ ಪಾಠವನ್ನು ಇಟ್ಟುಕೊಂಡಿದೇವೆ. ಸ್ಥೂಲತ್ವ, ಅಲ್ಪತ್ವ, ಅಶುದ್ಧತ್ವ, ಅನಿತ್ಯತ್ವ–ಇವುಗಳು ಹೆಚ್ಚುವದಕ್ಕೆ ಗುಣಗಳೇ ಕಾರಣವೆಂದು ಭಾವ.

4. ಮುಂತಾದವುಗಳೆಂದರೆ ವ್ಯಾಪಕತ್ವ, ಶುದ್ಧತ್ವ, ನಿತ್ಯತ್ವ.

ವ್ಯೇತಿ। ಇದಂ ತು ಅಶಬ್ದಾದಿಮತ್ತ್ವಾತ್ ಅವ್ಯಯಂ ನ ವ್ಯೇತಿ ನ ಕ್ಷೀಯತೇ। ಅತ ಏವ ಚ ನಿತ್ಯಮ್। ಯದ್ಧಿ ವ್ಯೇತಿ ತದನಿತ್ಯಮ್। ಇದಂ ತು ನ ವ್ಯೇತಿ। ಅತೋ ನಿತ್ಯಮ್ ಇತಶ್ಚ। ನಿತ್ಯಮ್। ಅನಾದಿ ಅವಿದ್ಯಮಾನಃ ಆದಿಃ ಕಾರಣಮ್ ಅಸ್ಯ ತದಿದಮ್ ಅನಾದಿ। ಯದ್ ಹಿ ಆದಿಮತ್ ತತ್ ಕಾರ್ಯತ್ವಾತ್ ಅನಿತ್ಯಮ್ ಕಾರಣೇ ಪ್ರಲೀಯತೇ ಯಥಾ ಪೃಥಿವ್ಯಾದಿ। ಇದಂ ತು ಸರ್ವಕಾರಣತ್ವಾತ್ ಅಕಾರ್ಯಮ್, ಅಕಾರ್ಯತ್ವಾನ್ನಿತ್ಯಮ್। ನ ತಸ್ಯ ಕಾರಣಮ್ ಅಸ್ತಿ ಯಸ್ಮಿನ್ ಪ್ರಲೀಯತೇ। ತಥಾ ಅನನ್ತಮ್ ಅವಿದ್ಯಮಾನಃ ಅನ್ತಃ ಕಾರ್ಯಮ್ ಅಸ್ಯ ತ(ದಿ)ದಮನನ್ತಮ್। ಯಥಾ ಕದಲ್ಯಾದೇಃ ಫಲಾದಿಕಾರ್ಯೋತ್ಪಾದನೇನಾಪಿ ಅನಿತ್ಯತ್ವಂ ದೃಷ್ಟಮ್। ನ ಚ ತಥಾಸ್ಯನ್ತವತ್ತ್ವಂ ಬ್ರಹ್ಮಣಃ। ಅತೋಽಪಿ ನಿತ್ಯಮ್। ಮಹತಃ ಮಹತ್ತತ್ತ್ವಾತ್ ಬುದ್ಧ್ಯಾಖ್ಯಾತ್ ಪರಂ ವಿಲಕ್ಷಣಮ್। ನಿತ್ಯವಿಜ್ಞಪ್ತಿಸ್ವರೂಪತ್ವಾತ್। ಸರ್ವಸಾಕ್ಷಿ ಹಿ ಸರ್ವಭೂತಾತ್ಮತ್ವಾದ್ ಬ್ರಹ್ಮ। ಉಕ್ತಂ ಹಿ "ಏಷ ಸರ್ವೇಷು ಭೂತೇಷು" (೧೩-೩೩) ಇತ್ಯಾದಿ। ಧ್ರುವಂ ಚ ಕೂಟಸ್ಥಂ ನಿತ್ಯಮ್, ನ ಪೃಥಿವ್ಯಾದಿವದಾಪೇಕ್ಷಿಕಂ ನಿತ್ಯ(ತ್ವ)ಮ್। ತತ್ ಏವಂಭೂತಂ ಬ್ರಹ್ಮ ಆತ್ಮಾನಂ ನಿಚಾಯ್ಯ ಅವಗಮ್ಯ ತಮ್ ಆತ್ಮಾನಮ್ ಮೃತ್ಯುಮುಖಾತ್ ಮೃತ್ಯೋಗೋಚರಾದ್ ಅವಿದ್ಯಾಕಾಮಕರ್ಮಲಕ್ಷಣಾತ್ ಪ್ರಮುಚ್ಯತೇ ವಿಯುಜ್ಯತೇ ॥

(ಭಾಷ್ಯಾರ್ಥ)

ಯಾವದು ಎಂದರೆ ಈ ಮೇಲೆ ವಿವರಿಸಿರುವ ಬ್ರಹ್ಮವು "ಶಬ್ದವಿಲ್ಲದ್ದು, ಸ್ಪರ್ಶವಿಲ್ಲದ್ದು, ರೂಪವಿಲ್ಲದ್ದು, ಅವ್ಯಯವಾದದ್ದು, ಹಾಗೂ ರಸವಿಲ್ಲದ್ದು, ನಿತ್ಯವಾದದ್ದು, ಮತ್ತು ಗಂಧವಿಲ್ಲದ್ದು." ಅವ್ಯಯವಾದದ್ದು (ಹೇಗೆಂದರೆ) ಯಾವದು ಶಬ್ದಾದಿಗಳುಳ್ಳದ್ದೋ ಅದು ವ್ಯಯವಾಗುತ್ತದೆ, ಸವೆಯುತ್ತದೆ. ಆದರೆ ಇದರಲ್ಲಿ ಶಬ್ದಾದಿಗಳು ಇಲ್ಲದಿರುವದರಿಂದ (ಇದು) ವ್ಯಯವಾಗುವದಿಲ್ಲ, ಸವೆಯುವದಿಲ್ಲ. ಆದ್ದರಿಂದಲೇ ನಿತ್ಯವೂ (ಆಗಿರುತ್ತದೆ). ಯಾವದು ವ್ಯಯವಾಗುತ್ತದೆಯೋ ಅದು ಅನಿತ್ಯವಾಗಿರುವದು; ಆದರೆ ಇದು ವ್ಯಯವಾಗುವದಿಲ್ಲ, ಆದ್ದರಿಂದ ನಿತ್ಯವು. ಈ ಕಾರಣದಿಂದಲೂ (ಇದು) ನಿತ್ಯವು, ಏಕೆಂದರೆ (ಇದು) ಅನಾದಿ. ಆದಿ ಎಂದರೆ ಕಾರಣವು ಇದಕ್ಕೆ ಇರುವದಿಲ್ಲವಾದ್ದರಿಂದ ಇದು ಅನಾದಿ. ಯಾವದು ಆದಿಯುಳ್ಳದ್ದೋ ಅದು ಕಾರ್ಯವಾಗಿರುವದರಿಂದ ಅನಿತ್ಯವಾಗಿದ್ದು ತನ್ನ ಕಾರಣದಲ್ಲಿ ಲಯವಾಗುತ್ತದೆ. ಉದಾಹರಣೆಗೆ ಪೃಥ್ವಿ ಮುಂತಾದದ್ದು [1] (ಕಾರ್ಯವಾಗಿರುವದರಿಂದ ತನ್ನ

1. ಪೃಥ್ವಿ ಅಪ್ಪಿನಲ್ಲಿ, ಅಪ್ಪು ವಾಯುವಿನಲ್ಲಿ, ವಾಯು ಆಕಾಶದಲ್ಲಿ.

ಕಾರಣದಲ್ಲಿ ಲಯವಾಗುತ್ತದೆ). ಆದರೆ ಇದು ಎಲ್ಲಕ್ಕೂ ಕಾರಣವಾಗಿರುವದರಿಂದ[1] ಕಾರ್ಯವಲ್ಲ, ಕಾರ್ಯವಲ್ಲದ್ದರಿಂದ ನಿತ್ಯವಾಗಿರುತ್ತದೆ. ಇದಕ್ಕೆ ಕಾರಣವೇ ಇಲ್ಲದ್ದರಿಂದ (ಕಾರಣ)ದಲ್ಲಿ ಲಯವಾಗುತ್ತದೆಂಬುದೂ ಇಲ್ಲ. ಹಾಗೂ ಅನಂತವು. ಬಾಳೆ ಮುಂತಾದದ್ದು ಹಣ್ಣೇ ಮುಂತಾದ ಕಾರ್ಯವನ್ನುಂಟುಮಾಡಿದ ಮೇಲೆ (ನಾಶವಾಗುವದರಿಂದ)ಲೂ ಅನಿತ್ಯವಾಗಿರುವದು ಕಂಡಿದೆಯಷ್ಟೆ. ಆದರೆ ಬ್ರಹ್ಮಕ್ಕೆ ಹಾಗೂ ಅಂತವಿಲ್ಲ[2]. ಆದ್ದರಿಂದಲೂ (ಇದು) ನಿತ್ಯವಾಗಿದೆ. ಮಹತ್ತಿಗಿಂತ ಎಂದರೆ **ಬುದ್ಧಿ ಎಂಬ ಹೆಸರಿನ ಮಹತ್ತತ್ವಕ್ಕಿಂತ**[3] ಪರವಾಗಿರುತ್ತದೆ, ಎಂದರೆ ಬೇರೆಯ ಸ್ವರೂಪದ್ದು. ಏಕೆಂದರೆ ನಿತ್ಯವಾದ ಜ್ಞಾನದ ಸ್ವರೂಪವುಳ್ಳದ್ದಾಗಿರುತ್ತದೆ, ಬ್ರಹ್ಮವು ಎಲ್ಲಾ ಭೂತಗಳಿಗೂ ಆತ್ಮನಾಗಿರುವದರಿಂದ ಎಲ್ಲಕ್ಕೂ ಸಾಕ್ಷಿಯಾಗಿರುತ್ತದೆ.[4] " ಈ ಆತ್ಮನು ಎಲ್ಲಾ ಭೂತಗಳಲ್ಲಿಯೂ, (ಅಡಗಿರುವನು) " (೧-೩-೧೨) ಎಂದು ಹಿಂದೆ ಹೇಳಿಯೇ ಇರುತ್ತದೆ. ಮತ್ತು (ಇದು) ಧ್ರುವವಾಗಿರುತ್ತದೆ, ಎಂದರೆ **ಕೂಟಸ್ಥ ನಿತ್ಯವಾಗಿ**ರುತ್ತದೆ,[5] ಪೃಥಿವ್ಯಾದಿಗಳಂತೆ (ಮತ್ತೊಂದಕ್ಕೆ) ಹೋಲಿಸಿದರೆ ನಿತ್ಯವಾಗಿರುವದಲ್ಲ. ಅದನ್ನು ಎಂದರೆ ಈ ಪ್ರಕಾರದ ಬ್ರಹ್ಮವನ್ನು ಆತ್ಮನೆಂದು ಅರಿತುಕೊಂಡರೆ, ಅದೇ ತನ್ನ ಆತ್ಮನೆಂದು ನಿಶ್ಚಯಿಸಿಕೊಂಡರೆ **ಮೃತ್ಯುವಿನ ಮುಖದಿಂದ ಎಂದರೆ ಮೃತ್ಯುವಿಗೆ ವಿಷಯವಾಗಿರುವ ಅವಿದ್ಯೆ, ಕಾಮ, ಕರ್ಮ,** ಎಂಬ (ಮೃತ್ಯುವಿನ ಬಾಯಿಯಿಂದ) ಬಿಡುಗಡೆಯಾಗುತ್ತಾನೆ, ತಪ್ಪಿಸಿಕೊಳ್ಳುತ್ತಾನೆ.

ಆತ್ಮಜ್ಞಾನದ ಪ್ರಶಂಸೆ

ನಾಚಿಕೇತಮುಪಾಖ್ಯಾನಂ
ಮೃತ್ಯುಪ್ರೋಕ್ತಗ್ಂ ಸನಾತನಮ್ ।
ಉಕ್ತ್ವಾ ಶ್ರುತ್ವಾ ಚ ಮೇಧಾವೀ
ಬ್ರಹ್ಮಲೋಕೇ ಮಹೀಯತೇ ॥ ೧೬ ॥

---

1 ಇಲ್ಲಿ ಕಾರಣವೆಂದರೆ ಕಾರ್ಯರೂಪದಿಂದ ಪರಿಣಮಿಸುವದೆಂದು ಅರ್ಥವಲ್ಲ, ತಾನೇ ಕಾರ್ಯದಂತೆ ತೋರುವದು ಎಂದರ್ಥ.

2. ಏಕೆಂದರೆ ಅದು ನಿಜವಾಗಿ ಕಾರ್ಯವನ್ನುಂಟುಮಾಡುವದಲ್ಲ.

3. ಸಮಷ್ಟಿಬುದ್ಧಿಗೆ, ಬಿಡಿಬಿಡಿಯಾಗಿರುವ ಬುದ್ಧಿಗಳ ಒಟ್ಟಿಗೆ ಮಹತ್ತತ್ತ್ವವೆಂಬ ಹೆಸರಿದೆ.

4 ಬುದ್ಧಿಯು ವಿಷಯಾಕಾರವಾಗಿ ವೃತ್ತಿಗಳನ್ನು ತಳೆಯುತ್ತಿರುವಲ್ಲಿ ಆತ್ಮನು ಅದನ್ನು ಸಾಕ್ಷಿರೂಪದಿಂದ ಬೆಳಗುತ್ತಾ ಒಂದೇ ಸ್ವರೂಪದಲ್ಲಿರುವನು.

5 ಮಾರ್ಪಾಡುಗಳಿಲ್ಲದೆ ನಿತ್ಯವಾಗಿರುವದು ಕೂಟಸ್ಥನಿತ್ಯವು; ಪೃಥಿವಿ ಮುಂತಾದವು ನಿತ್ಯವೆಂದು ಕೆಲವರು ಹೇಳುವರು. ಆದರೆ ಅವು ಮಾರ್ಪಡುತ್ತಲೇ ಇದ್ದರೂ ಅದೇ ಇದು ಎಂಬ ಬುದ್ಧಿಯುಂಟಾಗುವದರಿಂದ ಪರಿಣಾಮಿನಿತ್ಯವೆನಿಸುವವು. ಇವು ನಿಜವಾಗಿ ನಿತ್ಯವಲ್ಲ, ಆಪೇಕ್ಷಿಕನಿತ್ಯ; ಅನಿತ್ಯವಾದ ಇತರ ವಸ್ತುಗಳಿಗೆ ಹೋಲಿಸಿದರೆ ನಿತ್ಯ.

೧೫. ಮೃತ್ಯು ಹೇಳಿದ ಸನಾತನವಾದ ನಾಚಿಕೇತೋಪಾಖ್ಯಾನವನ್ನು ಹೇಳಿದ ಮತ್ತು ಕೇಳಿದ ಪಂಡಿತನು ಬ್ರಹ್ಮಲೋಕದಲ್ಲಿ ದೊಡ್ಡವನೆನಿಸುವನು.

(ಭಾಷ್ಯ)

೧೭. ಪ್ರಸ್ತುತವಿಜ್ಞಾನಸ್ತುತ್ಯರ್ಥಮ್ ಆಹ ಶ್ರುತಿಃ । ನಾಚಿಕೇತಂ ನಚಿಕೇತಸಾ ಪ್ರಾಪ್ತಮ್ ನಾಚಿಕೇತಮ್ ಮೃತ್ಯುನಾ ಪ್ರೋಕ್ತಂ ಮೃತ್ಯುಪ್ರೋಕ್ತಮ್ ಇದಮ್ ಆಖ್ಯಾನಮ್ ಉಪಾಖ್ಯಾನಂ ವಲ್ಲೀತ್ರಯಲಕ್ಷಣಂ ಸನಾತನಂ ಚಿರನ್ತನಂ ವೈದಿಕತ್ವಾತ್ ಉಕ್ತ್ವಾ ಬ್ರಾಹ್ಮಣೇಭ್ಯಃ ಶ್ರುತ್ವಾ ಆಚಾರ್ಯೇಭ್ಯೋ ಮೇಧಾವೀ (ಬ್ರಹ್ಮಲೋಕೇ) ಬ್ರಹ್ಮೈವ ಲೋಕೋ ಬ್ರಹ್ಮಲೋಕಃ ತಸ್ಮಿನ್ ಮಹೀಯತೇ ಆತ್ಮಭೂತಃ ಉಪಾಸ್ಯೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಪ್ರಾರಂಭಮಾಡಿರುವ ವಿಜ್ಞಾನವನ್ನು ಹೊಗಳುವದಕ್ಕಾಗಿ ಶ್ರುತಿಯು (ಹೀಗೆಂದು) ಹೇಳುತ್ತದೆ. ನಾಚಿಕೇತವೆಂದರೆ ನಚಿಕೇತನು ಪಡೆದುಕೊಂಡದ್ದು; ಮೃತ್ಯುಪ್ರೋಕ್ತವೆಂದರೆ ಮೃತ್ಯು ಹೇಳಿದ್ದು. (ಸಂವಾದರೂಪದಲ್ಲಿರುವ) ಈ ಕಥೆಯು (ಈವರೆಗಿನ) ಮೂರು ವಲ್ಲಿಗಳ ರೂಪವಾಗಿರುವ ಉಪಾಖ್ಯಾನವು ಸನಾತನವು, ವೈದಿಕವಾದದ್ದರಿಂದ[1] ಬಲು ಪುರಾತನವಾದದ್ದು. (ಇದನ್ನು) ಬ್ರಾಹ್ಮಣರಿಗೆ[2] ಹೇಳಿದ ಮತ್ತು ಆಚಾರ್ಯರಿಂದ ಕೇಳಿದ ಪಂಡಿತನು **ಬ್ರಹ್ಮಲೋಕದಲ್ಲಿ–ಬ್ರಹ್ಮವೆಂಬ ಲೋಕವು**[3] **ಬ್ರಹ್ಮಲೋಕವು** ಅದರಲ್ಲಿ–ದೊಡ್ಡವನೆನಿಸುವನು ಎಂದರೆ ಆತ್ಮನಾಗಿ ಉಪಾಸ್ಯನಾಗುವನು.

ಯ ಇಮಂ ಪರಮಂ ಗುಹ್ಯಂ
ಶ್ರಾವಯೇದ್ಬ್ರಹ್ಮಸಂಸದಿ ।
ಪ್ರಯತಃ ಶ್ರಾದ್ಧಕಾಲೇ ವಾ
ತದಾನನ್ತ್ಯಾಯ ಕಲ್ಪತ ಇತಿ ॥ ೧೭ ॥

---

1. ವೇದವು ಅಪೌರುಷೇಯವಾದದ್ದರಿಂದ ಅನಾದಿ ಎಂದು ವೈದಿಕರ ನಂಬಿಕೆ

2. ಬ್ರಾಹ್ಮಣರಿಗೇ ವೇದದ ಮೂಲಕ ತತ್ತ್ವವನ್ನು ಶ್ರವಣಮಾಡುವ ಮುಖ್ಯಾಧಿಕಾರವಿರುವದು; ದ್ವಿಜರಿಗೆಲ್ಲರಿಗೂ ಈ ಅಧಿಕಾರವುಂಟು. ಶೂದ್ರರಿಗೆ ಇತಿಹಾಸಪುರಾಣಾದಿಗಳ ಮೂಲಕ ಅಧಿಕಾರವಿದೆ ಎಂದು ಸೂ. ಭಾ. ೧-೩-೩೮ರಲ್ಲಿ ಹೇಳಿರುತ್ತದೆ.

3. ತಾನು ಶ್ರವಣಮನನಗಳನ್ನು ಮಾಡಿ ತಿಳಿದುಕೊಂಡು ಮತ್ತೊಬ್ಬರಿಗೆ ತಿಳಿಸಿದರೆ ಜ್ಞಾನದಿಂದ ಬ್ರಹ್ಮಸ್ವರೂಪವೇ ಆಗಿಬಿಡುತ್ತಾನೆ.

೧೭. ಯಾವನು ಈ ಪರಮಗುಹ್ಯವನ್ನು ಬ್ರಹ್ಮಸಭೆಯಲ್ಲಿ ಅಥವಾ ಶ್ರಾದ್ಧಕಾಲದಲ್ಲಿ ಪ್ರಯತನಾಗಿ ಶ್ರವಣಮಾಡಿಸುತ್ತಾನೋ ಅದು ಅನಂತವಾಗುವದು, ಅದು ಅನಂತವಾಗುವದು.

(ಭಾಷ್ಯ)

೧೦೮. ಯಃ ಕಶ್ಚಿದಿಮಂ ಗ್ರನ್ಥಂ ಪರಮಂ ಪ್ರಕೃಷ್ಟಂ ಗುಹ್ಯಂ ಗೋಪ್ಯಂ ಶ್ರಾವಯೇತ್ ಗ್ರನ್ಥತೋಽರ್ಥತಶ್ಚ ಬ್ರಾಹ್ಮಣಾನಾಂ ಸಂಸದಿ ಬ್ರಹ್ಮಸಂಸದಿ ಪ್ರಯತಃ ಶುಚಿರ್ಭೂತ್ವಾ ಶ್ರಾದ್ಧಕಾಲೇ ವಾ ಶ್ರಾವಯೇತ್ ಭುಞ್ಜಾನಾನ್ ತತ್ ಶ್ರಾದ್ಧಮ್ ಅಸ್ಯ ಅನನ್ತ್ಯಾಯ ಅನನ್ತಫಲಾಯ ಕಲ್ಪತೇ ಸಮ್ಪದ್ಯತೇ । ದ್ವಿರ್ವಚನಮ್ ಅಧ್ಯಾಯಪರಿಸಮಾಪ್ತ್ಯರ್ಥಮ್ ॥

(ಭಾಷ್ಯಾರ್ಥ)

ಯಾವನೇ ಆಗಲಿ ಪರಮವಾದ ಉತ್ತಮ ಗುಹ್ಯವನ್ನು ಎಂದರೆ ಗೋಪ್ಯವಾದ ಈ ಗ್ರಂಥವನ್ನು ಬ್ರಹ್ಮ ಸಂಸತ್ತಿನಲ್ಲಿ ಅಂದರೆ ಬ್ರಾಹ್ಮಣರ ಸಭೆಯಲ್ಲಿ ಪ್ರಯತನಾಗಿ ಎಂದರೆ ಶುಚಿಯಾಗಿ, ಅಥವಾ ಶ್ರಾದ್ಧಕಾಲದಲ್ಲಿ ಭೋಜನಮಾಡುತ್ತಿರುವ ಬ್ರಾಹ್ಮಣರನ್ನು, ಗ್ರಂಥರೂಪದಿಂದಲೂ ಅರ್ಥರೂಪದಿಂದಲೂ ಶ್ರವಣಮಾಡಿಸುವನೋ (ಅವನು ಮಾಡಿದ) ಆ ಶ್ರಾದ್ಧವು ಅನಂತವಾಗುವದು ಎಂದರೆ ಅನಂತ ಫಲವನ್ನು ಕೊಡುವದಕ್ಕೆ ಸಮರ್ಥವಾಗುತ್ತದೆ.[1] "ತದಾನನ್ತ್ಯಾಯ ಕಲ್ಪತೇ" ಎಂಬುದನ್ನು ಎರಡು ಸಲ ಹೇಳಿರುವದು ಅಧ್ಯಾಯವು ಮುಗಿಯಿತೆಂಬುದನ್ನು ತಿಳಿಸುವದಕ್ಕೆ.

1. ಬ್ರಾಹ್ಮಣರು ಮುಖ್ಯಾಧಿಕಾರಿಗಳಾದ್ದರಿಂದ ಅವರ ಸಭೆಯಲ್ಲಿ ಇದನ್ನು ಅಧ್ಯಯನ ಮಾಡಿದ್ದು, ಮತ್ತು ಅರ್ಥವನ್ನು ಹೇಳಿದ್ದು ಉತ್ತಮಫಲವನ್ನು ಕೊಡುವದು. ಶ್ರಾದ್ಧಕಾಲದಲ್ಲಿ ಹೇಳಿದ್ದು ಶ್ರಾದ್ಧಕರ್ಮಕ್ಕೆ ಸಾದ್ಗುಣ್ಯವನ್ನುಂಟುಮಾಡುವದು.

ಎರಡನೆಯ ಅಧ್ಯಾಯ—ಒಂದನೆಯ ವಲ್ಲಿ

ವಿಷಯಗಳ ಆಸೆಯೇ ಆತ್ಮದರ್ಶನಕ್ಕೆ ಅಡ್ಡಿ

(ಭಾಷ್ಯ)

೧೦೯. "ಏಷ ಸರ್ವೇಷು ಭೂತೇಷು ಗೂಢೋಽತ್ಮಾ ನ ಪ್ರಕಾಶತೇ। ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ" (೧-೩-೧೨) ಇತ್ಯುಕ್ತಮ್। ಕಃ ಪುನಃ ಪ್ರತಿಬನ್ಧೋಽಗ್ರ್ಯಯಾ ಬುದ್ಧೇಃ, ಯೇನ ತದಭಾವಾದ್ ಆತ್ಮಾ ನ ದೃಶ್ಯತ ಇತಿ। ತದದರ್ಶನಕಾರಣಪ್ರದರ್ಶನಾರ್ಥಾ ವಲ್ಲೀ ಆರಭ್ಯತೇ। ವಿಜ್ಞಾತೇ ಹಿ ಶ್ರೇಯಃಪ್ರತಿಬನ್ಧಕಾರಣೇ ತದಪನಯನಾಯ ಯತ್ನ ಆರಬ್ಧುಂ ಶಕ್ಯತೇ ನಾನ್ಯಥಾ ಇತಿ॥

(ಭಾಷ್ಯಾರ್ಥ)

"ಈ ಆತ್ಮನು ಸರ್ವಭೂತಗಳಲ್ಲಿಯೂ ಗೂಢನಾಗಿರುವದರಿಂದ ಬೆಳಗುವದಿಲ್ಲ, ಆದರೆ ಅಗ್ರ್ಯವಾದ ಬುದ್ಧಿಗೆ ಕಾಣಿಸುತ್ತಾನೆ" (೧--೩೧೨) ಎಂದು ಹೇಳಿದೆಯಷ್ಟೆ. ಈ ಅಗ್ರ್ಯವಾದ ಬುದ್ಧಿಯುಂಟಾಗುವದಕ್ಕೆ ಯಾವ ಅಡ್ಡಿ[1] ಇರುವದರಿಂದ ಈ (ಬುದ್ಧಿ) ಯಿಲ್ಲದೆ ಆತ್ಮನು ಕಾಣಿಸದೆ ಇರುವನು? ಎಂದು (ಕೇಳಬಹುದು. ಆದ್ದರಿಂದ) ಅವನು ಕಾಣದಿರುವದಕ್ಕೆ ಕಾರಣವನ್ನು ತೋರಿಸುವದಕ್ಕಾಗಿ (ಈ) ವಲ್ಲಿಯನ್ನು ಪ್ರಾರಂಭಿಸಿರುತ್ತದೆ. ಏಕೆಂದರೆ ಶ್ರೇಯಸ್ಸಿಗೆ ಅಡ್ಡಿಯಾದ ಕಾರಣವನ್ನು ತಿಳಿದಿದ್ದರೆ ಅದನ್ನು ಹೋಗಲಾಡಿಸುವದಕ್ಕೆ ಪ್ರಯತ್ನವನ್ನು ಮಾಡಬಹುದೇ ಹೊರತು ಇಲ್ಲದಿದ್ದರೆ ಆಗುವದಿಲ್ಲ.

ಪರಾಞ್ಚಿ ಖಾನಿ ವ್ಯತೃಣತ್ ಸ್ವಯಮ್ಭೂ-
ಸ್ತಸ್ಮಾತ್ ಪರಾಙ್ ಪಶ್ಯತಿ ನಾನ್ತರಾತ್ಮನ್।
ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷ-
ದಾವೃತ್ತಚಕ್ಷುರಮೃತತ್ವಮಿಚ್ಛನ್॥ ೧॥

---

1. ಹಿಂದೆ ಹೇಳಿದ್ದು ಅನಾತ್ಮವಿಷ್ಯೆ ಎಂಬ ಅಡ್ಡಿ, ಈಗ ಹೇಳುವದು ಅಗಂತುಕೀ ಪ್ರತಿಬಂಧ ಎಂದು (ಆ॥ ಗಿರಿ॥) ವ್ಯಾಖ್ಯೆಯಲ್ಲಿದೆ

೧. ಸ್ವಯಂಭುವು ಇಂದ್ರಿಯಗಳನ್ನು ಹೊರಗಡೆಗೆ ಕೊರೆದಿರುವನು. ಆದ್ದರಿಂದ (ಮನುಷ್ಯನು) ಹೊರಕ್ಕೆ ನೋಡುತ್ತಾನೆ, ಅಂತರಾತ್ಮನನ್ನು ನೋಡುವದಿಲ್ಲ. ಯಾವನೋ ಒಬ್ಬ ಧೀರನು ಅಮೃತತ್ವವನ್ನು ಬಯಸಿದವನಾಗಿ ಚಕ್ಷುಸ್ಸನ್ನು ಹಿಂತಿರುಗಿಸಿಕೊಂಡು ಪ್ರತ್ಯಗಾತ್ಮನನ್ನು ನೋಡುತ್ತಾನೆ.

(ಭಾಷ್ಯ)

೧೧೦. ಪರಾಞ್ಚಿ ಪರಾಕ್ ಅಞ್ಚನ್ತಿ ಗಚ್ಛನ್ತೀತಿ। ಖಾನಿ ಖೋಪಲಕ್ಷಿತಾನಿ[1] ಶ್ರೋತ್ರಾದೀನ್ಯಿನ್ದ್ರಿಯಾಣಿ ಖಾನಿ ಇತ್ಯುಚ್ಯನ್ತೇ। ತಾನಿ ಪರಾಞ್ಚ್ಯೇವ ಶಬ್ದಾದಿವಿಷಯಪ್ರಕಾಶನಾಯ ಪ್ರವರ್ತನ್ತೇ। ಯಸ್ಮಾತ್ ಏವಂಸ್ವಭಾವಕಾನಿ ತಾನಿ ವ್ಯತೃಣತ್ ಹಿಂಸಿತವಾ ಹನನಂ ಕೃತವಾ ಇತ್ಯರ್ಥಃ। ಕೋಽಸೌ? ಸ್ವಯಮ್ಭೂಃ ಪರಮೇಶ್ವರಃ। ಸ್ವಯಮೇವ ಸ್ವತನ್ತ್ರೋ ಭವತಿ ಸರ್ವದಾ ನ ಪರತನ್ತ್ರ ಇತಿ। ತಸ್ಮಾತ್ ಪರಾಙ್ ಪರಾಗ್ರೂಪಾನ್ ಅನಾತ್ಮಭೂತಾನ್ ಶಬ್ದಾದೀನ್ ಪಶ್ಯತಿ ಉಪಲಭತೇ ಉಪಲಬ್ಧಾ ನಾನ್ತರಾತ್ಮನ್ ನಾನ್ತರಾತ್ಮಾನಮ್ ಇತ್ಯರ್ಥಃ। ಏವಂಸ್ವಭಾವೇಽಪಿ ಸತಿ ಲೋಕಸ್ಯ ಕಶ್ಚಿತ್ ನದ್ಯಾಃ ಪ್ರತಿಸ್ರೋತಃಪ್ರವರ್ತನಮಿವ ಧೀರಃ ಧೀರ್ಮಾ ವಿವೇಕೀ ಪ್ರತ್ಯಗಾತ್ಮಾನಂ ಪ್ರತ್ಯಕ್ ಚ ಅಸೌ ಆತ್ಮಾ ಜೇತಿ ಪ್ರತ್ಯಗಾತ್ಮಾ। ಪ್ರತೀಚ್ಯೇವ ಆತ್ಮಶಬ್ದೋ ರೂಢೋ ಲೋಕೇ ನಾನ್ಯಸ್ಮಿನ್। ವ್ಯುತ್ಪತ್ತಿಪಕ್ಷೇಽಪಿ ತತ್ರೈವ ಆತ್ಮಶಬ್ದೋ ವರ್ತತೇ। "ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ। ಯಚ್ಚಾಸ್ಯ ಸನ್ತತೋ ಭಾವಸ್ತಸ್ಮಾದಾತ್ಮೇತಿ ಕೀರ್ತ್ಯತೇ"॥ (?) ಇತ್ಯಾತ್ಮಶಬ್ದವ್ಯುತ್ಪತ್ತಿಸ್ಮರಣಾತ್। ತಂ ಪ್ರತ್ಯಗಾತ್ಮಾನಂ ಸ್ವಂ ಸ್ವಭಾವಮ್ ಐಕ್ಷತ್ ಅಪಶ್ಯತ್ ಪಶ್ಯತಿ ಇತ್ಯರ್ಥಃ। ಛನ್ದಸಿ ಕಾಲಾನಿಯಮಾತ್। ಕಥಂ ಪಶ್ಯತೀತಿ? ಉಚ್ಯತೇ। ಆವೃತ್ತಚಕ್ಷುಃ ಆವೃತ್ತಂ ವ್ಯಾವೃತ್ತಂ ಚಕ್ಷುಃಶ್ರೋತ್ರಾದಿಕಮ್ ಇನ್ದ್ರಿಯಜಾತಮ್ ಅಶೇಷವಿಷಯಾತ್, ಯಸ್ಯ ಸ ಆವೃತ್ತಚಕ್ಷುಃ। ಸ ಏವಂ ಸಂಸ್ಕೃತಃ ಪ್ರತ್ಯಗಾತ್ಮಾನಂ ಪಶ್ಯತಿ। ನ ಹಿ ಬಾಹ್ಯವಿಷಯಾಲೋಚನಪರತ್ವಂ ಪ್ರತ್ಯಗಾತ್ಮೀಕ್ಷಣಂ ಚ ಏಕಸ್ಯ ಸಮ್ಭವತಿ। ಕಿಮರ್ಥಂ ಪುನರಿತ್ಥಂ ಮಹತಾ ಪ್ರಯಾಸೇನ ಸ್ವಭಾವಪ್ರವೃತ್ತಿನಿರೋಧಂ ಕೃತ್ವಾ ಧೀರಃ ಪ್ರತ್ಯಗಾತ್ಮಾನಂ ಪಶ್ಯತೀತಿ? ಉಚ್ಯತೇ। ಅಮೃತತ್ವಮ್ ಅಮರಣಧರ್ಮತ್ವಂ ನಿತ್ಯಸ್ವಭಾವತಾಮ್ ಇಚ್ಛನ್ ಆತ್ಮನಃ ಇತ್ಯರ್ಥಃ॥

1. (ವಾ॥) ಪಾಠ.

(ಭಾಷ್ಯಾರ್ಥ)

'ಪರಾಞ್ಚಿ' ಎಂದರೆ ಹೊರಕ್ಕೆ ಚಲಿಸುವವು ಹೋಗುವಂಥವು. 'ಖಾನಿ' ಆಕಾಶವೆಂಬ ಉಪಲಕ್ಷಣದಿಂದ[1] ತಿಳಿಯಬೇಕಾದ ಶ್ರೋತ್ರವೇ ಮುಂತಾದ ಇಂದ್ರಿಯಗಳು 'ಖ' ಎನಿಸುವವು, ಆ (ಇಂದ್ರಿಯ) ಗಳು ಶಬ್ದವೇ ಮುಂತಾದ ವಿಷಯಗಳನ್ನು ಬೆಳಗುವದಕ್ಕೇ ಹೊರಕ್ಕೇ ಹೊರಡುತ್ತಿರುವವು. ಏಕೆಂದರೆ ಅವುಗಳನ್ನು ಈ ಸ್ವಭಾವವುಳ್ಳವಾಗಿಯೇ ಕೊರೆದಿರುತ್ತಾನೆ, ಹಿಂಸೆಮಾಡಿರುತ್ತಾನೆ, ಹಾಳುಮಾಡಿರುತ್ತಾನೆ. ಯಾರು? ಸ್ವಯಂಭು ಎಂದರೆ ಪರಮೇಶ್ವರನು. ಯಾವಾಗಲೂ ತಾನೇ (ಸ್ವಯಂ) ಸ್ವತಂತ್ರನಾಗಿರುತ್ತಾನೆಯೇ ಹೊರತು, ಪರತಂತ್ರನಾಗಿರುವದಿಲ್ಲವಾದ್ದರಿಂದ (ಪರಮೇಶ್ವರನಿಗೆ 'ಸ್ವಯಂಭು'[2] ಎಂದು ಹೆಸರು). ಆದ್ದರಿಂದ ಅರಿಯುವಾತನು ಹೊರಕ್ಕೆ ಎಂದರೆ ಹೊರಗೆ ಇರುವಂಥ ಅನಾತ್ಮವಾಗಿರುವ ಶಬ್ದಾದಿಗಳನ್ನು ನೋಡುತ್ತಾನೆ, ಅರಿಯುತ್ತಾನೆ "ಅನ್ತರಾತ್ಮನ್" = "ಅನ್ತರಾತ್ಮಾನಮ್" ಅಂತರಾತ್ಮನನ್ನು ಅರಿಯುವದಿಲ್ಲ ಎಂದರ್ಥ.

ಜನರದು ಇದೇ ಸ್ವಭಾವವಾಗಿದ್ದರೂ ನದಿಯ ಪ್ರವಾಹವನ್ನು ಹಿಂತಿರುಗಿಸುವ[3] ಹಾಗೆ ಯಾವನೋ ಒಬ್ಬ ಧೀರನು ಎಂದರೆ ಬುದ್ಧಿವಂತನು ವಿವೇಕಿಯು ಪ್ರತ್ಯಗಾತ್ಮನನ್ನು–ಒಳಗೆ ಇರುವ **ಆತ್ಮನಾದ್ದರಿಂದ ಪ್ರತ್ಯಗಾತ್ಮನೆಂದು (ಹೆಸರು. ಆತ್ಮಶಬ್ದವು) ವ್ಯುತ್ಪನ್ನಶಬ್ದವೆಂಬ ಪಕ್ಷದಲ್ಲಿಯೂ ಆತ್ಮಶಬ್ದವು ಈ(ಆತ್ಮ)ನಲ್ಲಿಯೇ ವೃತ್ತಿಯುಳ್ಳದ್ದಾಗಿರುವದು;** ಏಕೆಂದರೆ ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ। ಯಚ್ಚಾಸ್ಯ ಸನ್ತತೋ ಭಾವಸ್ತಸ್ಮಾದಾತ್ಮೇತಿ ಕೀರ್ತ್ಯತೇ ॥[4] (ಇಲ್ಲಿರುವ ವಿಷಯಗಳನ್ನು ವ್ಯಾಪಿಸಿಕೊಂಡಿರುವರಿಂದಲೂ ತೆಗೆದುಕೊಳ್ಳುವದರಿಂದಲೂ ಅವುಗಳನ್ನು ತಿನ್ನುತ್ತಿರುವದರಿಂದಲೂ ಇವನ ಸ್ವರೂಪವು ಕಡಿವಡೆಯದೆ ಇರುವದರಿಂದಲೂ ಆತ್ಮನೆನಿಸಿಕೊಂಡಿರುತ್ತಾನೆ) ಎಂದು ಆತ್ಮಶಬ್ದದ ವ್ಯುತ್ಪತ್ತಿಯನ್ನು ಹೇಳುವ **ಸ್ಮೃತಿಯಿರುತ್ತದೆ.** ಆ ಪ್ರತ್ಯಗಾತ್ಮನನ್ನು ಎಂದರೆ ತನ್ನ ಸ್ವಭಾವವನ್ನು[5] ಐಕ್ಷತ್ = ಅಪಶ್ಯತ್,

---

1. ಉಪಲಕ್ಷಣವೆಂದರೆ ಗುರುತು. ಬಿಲ್ಲುಗಾರರು ಎಂಬಲ್ಲಿ ಬಾಣವೇ ಮುಂತಾದವುಗಳಿಗೂ ಗುರುತಾಗಿರುವಂತೆ ಖ (ಆಕಾಶವೆಂಬುದು) ಆಕಾಶದಿಂದಾಗಿರುವ ಶ್ರೋತ್ರೇಂದ್ರಿಯವೇ ಅಲ್ಲದೆ ಮಿಕ್ಕ ಇಂದ್ರಿಯಗಳನ್ನೂ ತಿಳಿಸುವದು ಎಂದು ಭಾವ.

2. ಈ. ಭಾ. ಭಾ. ೧೭ ನೋಡಿರಿ.

3. 'ನದಿಗೆ ಎದುರಾಗಿ ಹೋಗುವ' ಎಂದೂ ಕನ್ನಡಿಸಬಹುದು.

4. ಇದು ಯಾವ ಸ್ಮೃತಿಯೋ ತಿಳಿಯದು. ಬೃ. ವಾ. ೧-೪-೭೭ ವ್ಯಾಖ್ಯಾನದಲ್ಲಿ ಇದನ್ನು ವ್ಯಾಸವಾಕ್ಯವೆಂದಿದೆ. 'ಕಥ್ಯತೇ' ಎಂದು ಅಲ್ಲಿಯ ಪಾಠ.

5. ಪರಮಾತ್ಮನು ತನ್ನ ಸ್ವರೂಪಕ್ಕಿಂತ ಬೇರೆ ಅಲ್ಲ.

ನೋಡುತ್ತಾನೆ ಎಂದರ್ಥ. (ಐಕ್ಷತ್ ಎಂಬುದಕ್ಕೆ ನೋಡಿದನೆಂದು ಅರ್ಥವಾದರೂ) ವೇದದಲ್ಲಿ ಕಾಲದ ನಿಯಮವಿಲ್ಲವಾದ್ದರಿಂದ (ನೋಡುತ್ತಾನೆ (ಎಂದೇ ಅರ್ಥ). ಹೇಗೆ ನೋಡುತ್ತಾನೆ? ಎಂದರೆ ಹೇಳುತ್ತಾನೆ. 'ಆವೃತ್ತಚಕ್ಷುಃ' ಆವೃತ್ತ ಎಂದರೆ ವಿಷಯಗಳೆಲ್ಲದರಿಂದಲೂ ಇಂದ್ರಿಯಸಮೂಹವನ್ನು ಹಿಂತಿರುಗಿಸಿದ ಚಕ್ಷು ಎಂದರೆ ಶ್ರೋತ್ರವೇ ಮುಂತಾದ ಇಂದ್ರಿಯಸಮೂಹವುಳ್ಳವನಾಗಿ (ಎಂಥರ್ಥ). **ಹೀಗೆ ಸಂಸ್ಕಾರವನ್ನು ಹೊಂದಿ ಪ್ರತ್ಯಗಾತ್ಮನನ್ನು ನೋಡುತ್ತಾನೆ.** ಏಕೆಂದರೆ ಹೊರಗಿನ ವಿಷಯಗಳನ್ನು ನೋಡುತ್ತಿರುವದೂ ಒಳಗಿನ ಆತ್ಮನನ್ನು ಕಾಣುವದೂ ಒಬ್ಬನಿಗೇ ಆಗುವಹಾಗಿಲ್ಲ. ಹೀಗೆ ಬಹಳ ಕಷ್ಟದಿಂದ ಸ್ವಭಾವದ ಪ್ರವೃತ್ತಿಯನ್ನು ತಡೆದುಕೊಂಡು ಧೀರನಾದವನು ಪ್ರತ್ಯಗಾತ್ಮನನ್ನು ನೋಡುತ್ತಾನೆ. ಎಂದರೆ ಹೇಳುತ್ತಾನೆ. **ಅಮೃತತ್ವವನ್ನು ಬಯಸಿ ಎಂದರೆ ಮರಣವಿಲ್ಲದ್ದೆಂಬ ಧರ್ಮವಾದ ತನ್ನ ಸ್ವಭಾವವನ್ನು[1] ತನಗೆ (ಆಗಬೇಕೆಂದು) ಬಯಸಿ** (ಹೀಗೆ ಮಾಡುತ್ತಾನೆ)—ಎಂದರ್ಥ.

(ಭಾಷ್ಯ)

೧೧೧ ಯತ್ ತಾವತ್ ಸ್ವಾಭಾವಿಕಂ ಪರಾಗೇವಾನಾತ್ಮದರ್ಶನಮ್ ತದಾತ್ಮದರ್ಶನಸ್ಯ ಪ್ರತಿಬನ್ಧಕಾರಣಮವಿದ್ಯಾ ತತ್ಪ್ರತಿಕೂಲತ್ವಾತ್ ಯಾ ಚ ಪರಾಕ್ಷ್ವೇವ ಅವಿದ್ಯೋಪಪ್ರದರ್ಶಿತೇಷು ದೃಷ್ಟಾದೃಷ್ಟೇಷು ಭೋಗೇಷು ತೃಷ್ಣಾ | ತಾಭ್ಯಾಮ್ ಅವಿದ್ಯಾತೃಷ್ಣಾಭ್ಯಾಂ ಪ್ರತಿಬದ್ಧಾತ್ಮದರ್ಶನಾಃ—

(ಭಾಷ್ಯಾರ್ಥ)

ಹೊರಗೇ ಇರುವ ಅನಾತ್ಮವನ್ನು ಸ್ವಭಾವದಿಂದ[2] ಕಾಣುತ್ತಿರುವದುಂಟಷ್ಟೆ, (ಆ) ಅವಿದ್ಯೆಯೂ[2] ಮತ್ತು (ಆ) ಅವಿದ್ಯೆಯು ತೋರುವ ದೃಷ್ಟವಾದ ಮತ್ತು ಅದೃಷ್ಟವಾದ[3] ಹೊರಗೇ ಇರುವ ಭೋಗಗಳಲ್ಲಿರುವ ಬಯಕೆಯುಂಟಷ್ಟೆ, ಅದೇ ಆತ್ಮದರ್ಶನಕ್ಕೆ ಅಡ್ಡಿಯಾಗಿರುವ ಕಾರಣವು. ಆ ಅವಿದ್ಯೆ, ಬಯಕೆ—ಎಂಬಿವೆರಡರಿಂದ ಆತ್ಮದರ್ಶನಕ್ಕೆ ಅಡ್ಡಿಯನ್ನುಂಟುಮಾಡಿಕೊಂಡಿರುವವರು—

---

1. ಅಮೃತತ್ವವು ತನ್ನ ಸ್ವಭಾವವು, ಎಂದರೆ ಸ್ವರೂಪವೇ.

2. ವಿಚಾರಮಾಡದೆ ಇರುವ ಸ್ವಭಾವದಿಂದ ಆತ್ಮವಸ್ತುವಿಗಿಂತ ಬೇರೆಯಾಗಿ ಅನಾತ್ಮವನ್ನು ಕಾಣುವದೇ ಅವಿದ್ಯೆ.

3. ಈ ಲೋಕದ ಮತ್ತು ಪರಲೋಕದ.

ಪರಾಚಃ ಕಾಮಾನನುಯನ್ತಿ ಬಾಲಾ-
ಸ್ತೇ ಮೃತ್ಯೋರ್ಯನ್ತಿ ವಿತತಸ್ಯ ಪಾಶಮ್ ।
ಅಥ ಧೀರಾ ಅಮೃತತ್ವಂ ವಿದಿತ್ವಾ
ಧ್ರುವಮಧ್ರುವೇಷ್ವಿಹ ನ ಪ್ರಾರ್ಥಯನ್ತೇ ॥ ೨ ॥

೨. ಪರಾಕ್ಕಾಗಿರುವ ಕಾಮುಗಳನ್ನು ಬಾಲರು ಅನುಸರಿಸುತ್ತಿರುವರು. ಅವರು ಹರಡಿಕೊಂಡಿರುವ ಮೃತ್ಯುವಿನ ಪಾಶವನ್ನು ಪಡೆಯುತ್ತಾರೆ. ಇನ್ನು ಧೀರರಾದವರು ಅಮೃತತ್ವವನ್ನು ಅರಿತುಕೊಂಡು ಅಧ್ರುವವಾದವುಗಳಲ್ಲಿ ಧ್ರುವವೆಂದು ತಿಳಿದುಕೊಂಡು, ಬಯಸದೆ ಇರುತ್ತಾರೆ.

(ಭಾಷ್ಯ)

೧೧೨. ಪರಾಚಃ ಬಹಿರ್ಗತಾನೇವ ಕಾರ್ಮಾ ಕಾಮ್ಯಾ ವಿಷಯಾ ಅನುಯನ್ತಿ ಅನುಗಚ್ಛನ್ತಿ ಬಾಲಾಃ ಅಲ್ಪಪ್ರಜ್ಞಾಃ ತೇ ತೇನ ಕಾರಣೇನ ಮೃತ್ಯೋಃ ಅವಿದ್ಯಾಕಾಮಕರ್ಮಸಮುದಾಯಸ್ಯ ಯನ್ತಿ ಗಚ್ಛನ್ತಿ ವಿತತಸ್ಯ ವಿಸ್ತೀರ್ಣಸ್ಯ ಸರ್ವತೋ ವ್ಯಾಪ್ತಸ್ಯ ಪಾಶಂ ಪಾಶ್ಯತೇ ಬಧ್ಯತೇ ಯೇನ ತಂ ಪಾಶಂ ದೇಹೇನ್ದ್ರಿಯಾದಿಸಂಯೋಗವಿಯೋಗಲಕ್ಷಣಮ್ । ಅನವರತಂ ಜನ್ಮಮರಣಜರಾರೋಗಾದ್ಯನೇಕಾನರ್ಥವ್ರಾತಂ ಪ್ರತಿಪದ್ಯನ್ತೇ ಇತ್ಯರ್ಥಃ । ಯತ ಏವಮ್ ಅಥ ತಸ್ಮಾತ್ ಧೀರಾಃ ವಿವೇಕಿನಃ ಪ್ರತ್ಯಗಾತ್ಮಸ್ವರೂಪಾವಸ್ಥಾನಲಕ್ಷಣಮ್ ಅಮೃತತ್ವಂ ಧ್ರುವಂ ವಿದಿತ್ವಾ । ದೇವಾದ್ಯಮೃತತ್ವಂ ಹಿ ಅಧ್ರುವಮ್ । ಇದಂ ತು ಪ್ರತ್ಯಗಾತ್ಮಸ್ವರೂಪಾವಸ್ಥಾನ ಲಕ್ಷಣಂ “ ನ ಕರ್ಮಣಾ ವರ್ಧತೇ ನೋ ಕನೀಯಾ ” ಇತಿ (ಶ್ರುತೇಃ) ಧ್ರುವಮ್ । ತದೇವಂ ಭೂತಂ ಕೂಟಸ್ಥಮವಿಚಾಲ್ಯಮಮೃತತ್ವಂ ವಿದಿತ್ವಾ ಅಧ್ರುವೇಷು ಸರ್ವಪದಾರ್ಥೇಷು ಅನಿತ್ಯೇಷು ನಿರ್ಧಾರ್ಯ ಬ್ರಾಹ್ಮಣಾ ಇಹ ಸಂಸಾರೇ ಅನರ್ಥಪ್ರಾಯೇ ನ ಪ್ರಾರ್ಥಯನ್ತೇ ಕಿಂಚಿದಪಿ । ಪ್ರತ್ಯಗಾತ್ಮದರ್ಶನಪ್ರತಿಕೂಲತ್ವಾತ್ । ಪುತ್ರವಿತ್ತಲೋಕೈಷಣಾಭ್ಯೋ ವ್ಯುತ್ತಿಷ್ಠನ್ತ್ಯೇವ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಪರಾಕ್ಕಾಗಿರುವ ಎಂದರೆ ಹೊರಗೇ ಇರುವ ಕಾಮುಗಳನ್ನು ಎಂದರೆ ಕಾಮಿಸುವ ವಿಷಯಗಳನ್ನು ಬಾಲರು ಎಂದರೆ ಅಲ್ಪಬುದ್ಧಿಯುಳ್ಳ (ಜನ)ರು ಅನುಸರಿಸುತ್ತಿರುವರು, ಹಿಂಬಾಲಿಸುತ್ತಿರುವರು. ಅವರು ಈ ಕಾರಣದಿಂದ ಹರಡಿಕೊಂಡಿರುವ ಎಂದರೆ ವಿಸ್ತಾರವಾಗಿರುವ, ಎಲ್ಲೆಲ್ಲಿಯೂ ಹಬ್ಬಿಕೊಂಡಿರುವ **ಮೃತ್ಯುವಿನ ಪಾಶ**

ವನ್ನು ಎಂದರೆ ಅವಿದ್ಯೆ, ಕಾಮ, ಕರ್ಮ-ಇವುಗಳ ಸಮುದಾಯದ[1] ಪಾಶವನ್ನು–ಯೇನ ಪಾಶ್ಯತೇ ಎಂದರೆ ಯಾವದರಿಂದ ಕಟ್ಟುಬೀಳುವರೋ ಅದು ಪಾಶವು; **ಆ ದೇಹೇಂದ್ರಿಯಾದಿಗಳನ್ನು ಕೂಡುವದು, (ಅವುಗಳನ್ನು) ಬಿಟ್ಟಗಲುವದು ಎಂಬ ಆ ಪಾಶವನ್ನು** ಪಡೆಯುತ್ತಾರೆ. ಎಡೆಬಿಡದೆ ಹುಟ್ಟುವದು, ಸಾಯುವದು, ಮುಪ್ಪು, ಬೇನೆ–ಮುಂತಾದ ಅನೇಕ ಅನರ್ಥಗಳ ಸಮೂಹವನ್ನು ಹೊಂದುತ್ತಾರೆ[2] ಎಂದರ್ಥ.

ಹೀಗಿದೆಯಷ್ಟೆ. ಇನ್ನು ಆ ಕಾರಣದಿಂದ ಧೀರರಾದವರು ವಿವೇಕಿಗಳು ಪ್ರತ್ಯಗಾತ್ಮನ ಸ್ವರೂಪದಿಂದ ನೆಲೆನಿಲ್ಲುವದೆಂಬ ಅಮೃತತ್ವವನ್ನು ನಿತ್ಯವೆಂದು ತಿಳಿದು ಕೊಂಡು–ದೇವತೆಗಳ (ಸ್ಥಾನವೇ) ಮುಂತಾದ ಅಮೃತವು ಅನಿತ್ಯವಾಗಿರುತ್ತದೆ.[3] ಪ್ರತ್ಯಗಾತ್ಮಸ್ವರೂಪದಿಂದ ನೆಲೆನಿಲ್ಲುವದೆಂಬ ಇದಾದರೋ " ಕರ್ಮದಿಂದ ಬೆಳೆಯುವದಿಲ್ಲ, ಸಣ್ಣಗಾಗುವದೂ ಇಲ್ಲ "[4] ವಾದ್ದರಿಂದ ನಿತ್ಯವು. ಹೀಗೆ ಇರುವ **ಕೂಟಸ್ಥವಾದ ಚಲಿಸದ ಅಮೃತತ್ವವನ್ನು**[5] ಅಧ್ರುವವಾದ ಎಂದರೆ ಅನಿತ್ಯವಾದ ಪದಾರ್ಥಗಳಲ್ಲಲ್ಲ (ನಿತ್ಯವೆಂದು)[6] ತಿಳಿದುಕೊಂಡು ನಿಶ್ಚಯಿಸಿಕೊಂಡು ಬ್ರಾಹ್ಮಣರು ಈ ಅನರ್ಥಬಹುಲವಾದ ಸಂಸಾರವಲ್ಲ ಯಾವದೊಂದನ್ನೂ ಬೇಡುವದಿಲ್ಲ; ಏಕೆಂದರೆ (ಅಂಥ ಬಯಕೆಯು) ಪ್ರತ್ಯಗಾತ್ಮನನ್ನು ಕಾಣುವದಕ್ಕೆ ಪ್ರತಿಕೂಲವಾಗಿರುತ್ತದೆ. ಮಕ್ಕಳು, ವಿತ್ತ, ಲೋಕ–ಎಂಬಿವುಗಳ ಬಯಕೆಗಳನ್ನು ಬಿಟ್ಟು ಹೋಗಿಯೇ ತೀರುತ್ತಾರೆ[7] ಎಂದರ್ಥ.

---

1. ಅವಿದ್ಯಾಕಾಮಕರ್ಮಗಳಿಂದ-ದೇಹೇಂದ್ರಿಯಗಳನ್ನು ಪಡೆಯುವ ಜನ್ಮ, ಅವನ್ನು ಬಿಟ್ಟಗಲುವ ಮರಣ–ಇವುಗಳಾಗುತ್ತಿರುವವರಿಂದ ಅವಿದ್ಯಾಸಮುದಾಯವೇ ಮೃತ್ಯು

2. ಜನ್ಮಮರಣಗಳನ್ನು ಮತ್ತೆಮತ್ತೆ ಹೊಂದುತ್ತಿರುವ ಅವಿದ್ಯಾಕಾಮಕರ್ಮಗಳೆಂಬ ಮೃತ್ಯುವಿನ ಬಲೆಗೆ ಬೀಳುತ್ತಿರುವರು

3. ಕಲ್ಪವು ಮುಗಿಯುತ್ತಲೂ ಈ ಸ್ಥಾನಗಳು ಲಯವಾಗುವವು. ಆದ್ದರಿಂದ ಅನಿತ್ಯ.

4. ಬೃ (೪-೪-೨೩), ತೈ. ಬ್ರಾ. ೧೨-೯-೭

5 ಯಾವಾಗಲೂ ಒಂದೇರೂಪವಾಗಿರುವ, ಕಾಲದ ಹೊಡೆತವಿಲ್ಲದ, ಮಾರ್ಪಡದೆ ಇರುವದು ಕೂಟಸ್ಥ, ಸ್ಥಲದಿಂದ ಸ್ಥಲಕ್ಕೆ ಹೋಗದೆ ಇರುವದು ಅವಿಚಾಲಿ.

6. ಗೀ. ೧೩-೨೭, ಶ್ವೇ ೬-೧೩.

7 ಬೃ. ೪-೪-೨೭. ಏಷಣಾತ್ರಯವನ್ನು ಬಿಡುವದಕ್ಕೆ ಆತ್ಮಪ್ರಾಪ್ತಿಯು ನಿತ್ಯನೆಂಬ ಜ್ಞಾನವು ಕಾರಣವಾಗುವದೆಂದು ಭಾವ. ಏಷಣಾತ್ರಯತ್ಯಾಗವು ಜ್ಞಾನಕ್ಕೆ ಸಾಧನವು, ಜ್ಞಾನದಿಂದ ಅದು ನಿತ್ಯಸಿದ್ಧವಾಗುವದು. ಬೃ ೩-೫-೧, ಗೀ. ಭಾ. ೧೪-೨೫.

ಆತ್ಮನನ್ನು ಅರಿಯುವ ರೀತಿ

(ಭಾಷ್ಯ)

೧೧೩. ಯದ್ವಿಜ್ಞಾನಾನ್ನ ಕಿಂಚಿದನ್ಯತ್ ಪ್ರಾರ್ಥಯನ್ತ್ಯೇ ಬ್ರಾಹ್ಮಣಾಃ ಕಥಂ ತದಧಿಗಮ ಇತಿ ? ಉಚ್ಯತೇ—

(ಭಾಷ್ಯಾರ್ಥ)

ಯಾವ (ಆತ್ಮನನ್ನು) ಅರಿತುಕೊಂಡಿರುವದರಿಂದ ಬ್ರಾಹ್ಮಣರು ಮತ್ತೊಂದನ್ನೂ ಬಯಸದೆ ಇರುವರೋ ಅವನನ್ನು ಹೇಗೆ ಅರಿಯಬೇಕು ?—ಎಂಬುದನ್ನು ಹೇಳುತ್ತಾರೆ :—

ಯೇನ ರೂಪಂ ರಸಂ ಗನ್ಧಂ
ಶಬ್ದಾನ್ ಸ್ಪರ್ಶಾಗ್ಂಶ್ಚ ಮೈಥುನಾನ್ ।
ಏತೇನೈವ ವಿಜಾನಾತಿ
ಕಿಮತ್ರ ಪರಿಶಿಷ್ಯತೇ । ಏತದ್ವೈ ತತ್ ॥ ೩ ॥

೩. ಯಾವ ಇದರಿಂದಲೇ ರೂಪವನ್ನೂ ರಸವನ್ನೂ ಗಂಧವನ್ನೂ ಶಬ್ದಗಳನ್ನೂ ಸ್ಪರ್ಶಗಳನ್ನೂ ಮೈಥುನಗಳನ್ನೂ ಚೆನ್ನಾಗಿ ಅರಿತುಕೊಳ್ಳುತ್ತಿರುವನೋ (ಆ ಆತ್ಮನಿಗೆ) ಇಲ್ಲಿ ಏನು ಉಳಿದಿರುವದು ? ಇದೇ ಅದು.

(ಭಾಷ್ಯ)

೧೧೪. ಯೇನ ವಿಜ್ಞಾನಸ್ವಭಾವೇನ ಆತ್ಮನಾ ರೂಪಂ ರಸಂ ಗನ್ಧಂ ಶಬ್ದಾನ್ ಸ್ಪರ್ಶಾಂಶ್ಚ ಮೈಥುನಾನ್ ಮೈಥುನನಿಮಿತ್ತಾನ್ ಸುಖಪ್ರತ್ಯಯಾನ್ ವಿಜಾನಾತಿ ವಿಸ್ಪಷ್ಟಂ ಜಾನಾತಿ ಸರ್ವೋ ಲೋಕಃ । ನನು ನೈವಂ ಪ್ರಸಿದ್ಧಿರ್ಲೋಕಸ್ಯ "ಆತ್ಮನಾ ದೇಹಾದಿವಿಲಕ್ಷಣೇನ ಅಹಂ ವಿಜಾನಾಮಿ" ಇತಿ । "ದೇಹಾದಿಸಙ್ಘಾತೋಽಹಂ ವಿಜಾನಾಮಿ" ಇತಿ ತು ಸರ್ವೋ ಲೋಕೋಽವಗಚ್ಛತಿ । ನ ಶ್ವೇವಮ್ । ದೇಹಾದಿಸಙ್ಘಾತಸ್ಯಾಪಿ ಶಬ್ದಾದಿಸ್ವರೂಪತ್ವಾವಿಶೇಷಾತ್ ವಿಜ್ಞೇಯತ್ವಾವಿಶೇಷಾಚ್ಚ ನ ಯುಕ್ತಂ ವಿಜ್ಞಾತೃತ್ವಮ್ । ಯದಿ ಹಿ ದೇಹಾದಿಸಙ್ಘಾತೋ ರೂಪಾದ್ಯಾತ್ಮಕಃ ಸ್ಯಾತ್ ರೂಪಾದೀನ್ ವಿಜಾನೀಯಾತ್, ತರ್ಹಿ ಬಾಹ್ಯಾ ಅಪಿ ರೂಪಾದಯೋಽನ್ಯೋನ್ಯಂ ಸ್ವಂ ಸ್ವಂ ರೂಪಂ ಚ ವಿಜಾನೀಯುಃ । ನ ಚೈತದಸ್ತಿ । ತಸ್ಮಾತ್, ದೇಹಾದಿಲಕ್ಷಣಾಂಶ್ಚ ರೂಪಾದೀನ್ ಏತೇನೈವ ದೇಹಾದಿವ್ಯತಿರಿಕ್ತೇನೈವ ವಿಜ್ಞಾನಸ್ವಭಾವೇನಾತ್ಮನಾ ವಿಜಾನಾತಿ ಲೋಕಃ । ಯಥಾ "ಯೇನ ಲೋಹೋ ದಹತಿ ಸೋಽಗ್ನಿಃ"

ಇತಿ ತದ್ವತ್ । ಆತ್ಮನೋ ಅವಿಜ್ಞೇಯಂ ಕಿಮ್ ಅತ್ರ ಅಸ್ತಿ ಲೋಕೇ ಪರಿಶಿಷ್ಯತೇ ನ ಕಿಂಚಿತ್ ಪರಿಶಿಷ್ಯತೇ । ಸರ್ವಮೇವ ತ್ವಾತ್ಮನಾ ವಿಜ್ಞೇಯಮ್। ಯಸ್ಯಾತ್ಮನೋಽವಿಜ್ಞೇಯಂ ನ ಕಿಂಚಿತ್ ಪರಿಶಿಷ್ಯತೇ ಸ ಆತ್ಮಾ ಸರ್ವಜ್ಞಃ । ಏತದ್ವೈ ತತ್ । ಕಿಂ ತತ್ ? ಯನ್ನಚಿಕೇತಸಾ ಪೃಷ್ಟಂ ದೇವಾದಿಭಿರಪಿ ವಿಚಿಕಿತ್ಸಿತಂ, ಧರ್ಮಾದಿಭ್ಯೋಽನ್ಯತ್, ವಿಷ್ಣೋಃ ಪರಮಂ ಪದಂ ಯಸ್ಮಾತ್ಪರಂ ನಾಸ್ತಿ ತದ್ವೈ ಏತತ್ ಅಧಿಗತಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಅರಿವಿನ ಸ್ವಭಾವವೇ ಆಗಿರುವ ಯಾವ ಆತ್ಮನಿಂದ ರೂಪವನ್ನೂ ರಸವನ್ನೂ ಗಂಧವನ್ನೂ ಶಬ್ದಗಳನ್ನೂ ಸ್ಪರ್ಶಗಳನ್ನೂ ಮೈಥುನಗಳನ್ನೂ ಎಂದರೆ ಮೈಥುನದಿಂದ ಆಗುವ ಸುಖದ ಅರಿವುಗಳನ್ನೂ ಪ್ರತಿಯೊಬ್ಬ ಮನುಷ್ಯನೂ "ವಿಜಾನಾತಿ" ವಿಸ್ಪಷ್ಟವಾಗಿ ಅರಿಯುವನೋ.

(ಆಕ್ಷೇಪ):—"ದೇಹವೇ ಮುಂತಾದವುಗಳಿಂದ ಬೇರೆಯ ಸ್ವಭಾವದವನಾದ ಆತ್ಮನಿಂದ ನಾನು ಅರಿಯುತ್ತಿದ್ದೇನೆ" ಎಂಬೀ ಪರಿಯಲ್ಲಿ ಜನರಿಗೆ ಗೊತ್ತಿರುವದಿಲ್ಲವಲ್ಲ! "ದೇಹವೇ ಮುಂತಾದವುಗಳ ಗುಂಪೇ ಆಗಿರುವ ನಾನು ಅರಿಯುತ್ತಿದ್ದೇನೆ" ಎಂದೇ ಪ್ರತಿಯೊಬ್ಬನೂ ತಿಳಿದುಕೊಂಡಿರುತ್ತಾನಲ್ಲವೆ?

(ಪರಿಹಾರ):— ಹಾಗಲ್ಲ. (ಏಕೆಂದರೆ) ದೇಹವೇ ಮುಂತಾದವುಗಳ ಗುಂಪು ಕೂಡ ಶಬ್ದಾದಿಗಳ ಸ್ವರೂಪವೇ ಆಗಿರುವದರಿಂದಲೂ ಅದು ವಿಜ್ಞೇಯವೇ ಎಂಬುದು ಸಮಾನವಾಗಿರುವದರಿಂದಲೂ ಅದು (ಮತ್ತೊಂದನ್ನು) ಅರಿಯುವದೆಂಬುದು ಸರಿಯಲ್ಲ. ದೇಹಾದಿಗಳ ಗುಂಪು ರೂಪಾದಿಗಳ ಸ್ವರೂಪವೇ ಆಗಿದ್ದರೂ ರೂಪಾದಿಗಳನ್ನು ಅರಿಯಬಹುದಾದರೆ[1] ಹೊರಗಿನ ರೂಪಾದಿಗಳೂ ಒಂದನ್ನೊಂದು (ಅರಿಯಬಹುದು), ತಮ್ಮ ತಮ್ಮ ರೂಪವನ್ನೂ ಅರಿತುಕೊಳ್ಳಬಹುದೆಂದಾಗುವದು.[2] ಆದರೆ ಹೀಗಿಲ್ಲ. ಆದ್ದರಿಂದ ದೇಹವೇ ಮುಂತಾದ ರೂಪದಲ್ಲಿರುವ ರೂಪಾದಿಗಳನ್ನೂ ದೇಹಾದಿಗಳಿಗಿಂತ ಬೇರೆಯೇ ಆಗಿರುವ ಈ ಚೈತನ್ಯಸ್ವರೂಪನಾದ ಆತ್ಮನಿಂದಲೇ ಜನರು ಅರಿತುಕೊಳ್ಳುತ್ತಿರುವರು (ಎಂದಾಯಿತು). ಹೇಗೆ "ಯಾವದರಿಂದ ಕಬ್ಬಿ

---

1. ಜಡವಾಗಿರುವ ರೂಪಾದಿಗಳ ಗುಂಪು ರೂಪಾದಿಗಳನ್ನು ನೋಡಬಹುದೆಂದರೆ.

2. ರೂಪವು ಶಬ್ದಾದಿಗಳನ್ನೂ ತನ್ನ ಸ್ವರೂಪವೇ ಆದ ರೂಪವನ್ನೂ ಅರಿಯಬಹುದೆಂದಾಗುವದು; ಹೀಗೆಯೇ ರಸವೇ ಮುಂತಾದವುಗಳೂ ಮಿಕ್ಕ ಜಡವಿಷಯಗಳನ್ನೂ ತಮ್ಮ ತಮ್ಮ ಸ್ವರೂಪವನ್ನೂ ಅರಿಯಬಹುದೆಂದಾಗುವದು.

3. ಬೆಂಕಿಯಲ್ಲಿ ಸ್ವಭಾವವಾಗಿ ಬಿಸಿಯಿದೆ, ಕಬ್ಬಿಣದಲ್ಲಿ ತೋರುತ್ತದೆ; ಇದರಂತೆ ಆತ್ಮನ ಸ್ವಭಾವವಾದ ಜ್ಞಾನವು ಅನಾತ್ಮದಲ್ಲಿರುವಂತೆ ಅಜ್ಞರಿಗೆ ತೋರುತ್ತದೆ.

ಣವು ಸುಡುತ್ತದೆಯೋ ಅದೇ ಬೆಂಕಿಯು "ಎನ್ನುವೆವೋ [3] ಹಾಗೆಯೇ (ಇದು). ಆತ್ಮನ ಅರಿವಿಗೆ ವಿಷಯವಾಗದೆ ಇರುವದು ಇಲ್ಲಿ ಎಂದರೆ ಈ ಲೋಕದಲ್ಲಿ ಯಾವದು ಉಳಿದಿರುವದು? ಯಾವದೊಂದೂ ಉಳಿದಿರುವದಿಲ್ಲ. ಎಲ್ಲವೂ ಆತ್ಮನ ಅರಿವಿಗೆ ವಿಷಯವೇ ಆಗಿರುತ್ತದೆ. ಯಾವ ಆತ್ಮನ ಅರಿವಿಗೆ ವಿಷಯವಾಗದೆ ಇರುವದು ಮತ್ತೆ ಯಾವದೊಂದೂ ಉಳಿದಿರುವದಿಲ್ಲವೋ ಆ **ಸರ್ವಜ್ಞನೇ** [1] ಆತ್ಮನು, ಇದೇ ಅದು. ಅದು ಎಂದರೆ ಯಾವದು? ಎಂದರೆ ದೇವತೆಗಳೇ ಮುಂತಾದವರಿಗೂ ಸಂಶಯವನ್ನುಂಟುಮಾಡಿರುವದಾಗಿಯೂ ಧರ್ಮವೇ ಮುಂತಾದವುಗಳನ್ನು [2] ಮೀರಿರುವದಾಗಿಯೂ ತನಗಿಂತ ಹೆಚ್ಚಿನದು ಇನ್ನೊಂದಿಲ್ಲದ ವಿಷ್ಣುವಿನ ಪರಮಪದವಾಗಿಯೂ [3] ಇರುವ ಯಾವದನ್ನು ನಚಿಕೇತನು ಕೇಳಿದ್ದನೋ ಅದು ಇದು, (ಈಗ) ತಿಳಿದದ್ದು [4] ಎಂದರ್ಥ.

(ಭಾಷ್ಯ)

೧೧೫. ಅತಿಸೂಕ್ಷ್ಮತ್ವಾದ್ದುರ್ವಿಜ್ಞೇಯಮ್ ಇತಿ ಮತ್ವಾ ಏತಮೇವಾರ್ಥಂ ಪುನಃ ಪುನರಾಹ—

(ಭಾಷ್ಯಾರ್ಥ)

ಬಹಳ ಸೂಕ್ಷ್ಮವಾಗಿರುವದರಿಂದ (ಇದನ್ನು) ತಿಳಿಯುವದು ಬಲು ಕಷ್ಟ ಎಂಬ ಅಭಿಪ್ರಾಯದಿಂದ ಇದೇ ವಿಷಯವನ್ನೇ ಮತ್ತೆ ಮತ್ತೆ ಹೇಳುತ್ತಾನೆ:—

ಸ್ವಪ್ನಾನ್ತಂ ಜಾಗರಿತಾನ್ತಂ-
ಚೋಭೌ ಯೇನಾನುಪಶ್ಯತಿ ।
ಮಹಾನ್ತಂ ವಿಭುಮಾತ್ಮಾನಂ
ಮತ್ವಾ ಧೀರೋ ನ ಶೋಚತಿ ॥ ೪ ॥

೪. ಸ್ವಪ್ನಾಂತವನ್ನೂ ಜಾಗರಿತಾಂತವನ್ನೂ ಎರಡನ್ನೂ ಯಾವನಿಂದ ಕಂಡುಕೊಳ್ಳುತ್ತಾನೋ ದೊಡ್ಡವನಾದ ವಿಭುವಾದ (ಆ) ಆತ್ಮನನ್ನು ತಿಳಿದುಕೊಂಡ ಧೀರನು ಶೋಕಿಸುವದಿಲ್ಲ.

---

1. ಎಲ್ಲವನ್ನೂ ಸ್ವಭಾವವಾದ ಚೈತನ್ಯದಿಂದ ಬೆಳಗುತ್ತಿರುವ ಸಾಕ್ಷಿಯೇ ಆತ್ಮನು.
2. ಧರ್ಮ ಅಧರ್ಮ, ಕೃತ ಅಕೃತ, ಭೂತ ಭವ್ಯ—ಇವುಗಳನ್ನು (೧-೨-೧೪).
3. ೧-೩-೯.
4. ಯಾವದರಿಂದ ಹೊರಗಿನ ಶಬ್ದಸ್ಪರ್ಶರೂಪರಸಗಂಧಗಳನ್ನೂ ಅವುಗಳ ಸಂಘಾತವಾದ ಒಳಗಿನ ದೇಹಾದಿಗಳನ್ನೂ ನೋಡುತ್ತಾರೋ ಆ ಸಾಕ್ಷಿಚೈತನ್ಯವೇ ಬ್ರಹ್ಮವು ಎಂದರ್ಥ.

(ಭಾಷ್ಯ)

೧೧೬. ಸ್ವಪ್ನಾನ್ತಂ ಸ್ವಪ್ನಮಧ್ಯಮ್ । ಸ್ವಪ್ನವಿಜ್ಞೇಯಮ್ ಇತ್ಯೇತತ್ । ತಥಾ ಜಾಗರಿತಾನ್ತಂ ಜಾಗರಿತಮಧ್ಯಂ ಜಾಗರಿತವಿಜ್ಞೇಯಂ ಚ । ಉಭೌ ಸ್ವಪ್ನ ಜಾಗರಿತಾನ್ತೌ । ಯೇನ ಆತ್ಮನಾ ಅನುಪಶ್ಯತಿ ಲೋಕಃ ಇತಿ ಸರ್ವಂ ಪೂರ್ವವತ್ । ತಂ ಮಹಾನ್ತಂ ವಿಭುಮ್ ಆತ್ಮಾನಂ ಮತ್ವಾ ಅವಗಮ್ಯ ಆತ್ಮಭಾವೇನ ಸಾಕ್ಷಾತ್ "ಅಹಮಸ್ಮಿ ಪರಮಾತ್ಮಾ" ಇತಿ ಧೀರಃ ನ ಶೋಚತಿ ॥

(ಭಾಷ್ಯಾರ್ಥ)

ಸ್ವಪ್ನಾಂತವನ್ನು ಎಂದರೆ ಸ್ವಪ್ನದಲ್ಲಿರುವದನ್ನು, ಕನಸಿನಲ್ಲಿ ಜ್ಞಾನಕ್ಕೆ ವಿಷಯವಾಗಿರುವದನ್ನು ಎಂದರ್ಥ. ಹಾಗೂ ಜಾಗರಿತಾಂತವನ್ನೂ ಎಂದರೆ ಜಾಗರಿತದಲ್ಲಿರುವದನ್ನೂ, ಎಚ್ಚರದಲ್ಲಿ ಜ್ಞಾನಕ್ಕೆ ವಿಷಯವಾಗಿರುವದನ್ನೂ (ಎಂದರ್ಥ). ಸ್ವಪ್ನಾಂತ, ಜಾಗರಿತಾಂತ-(ಈ) ಎರಡನ್ನೂ "ಯಾವ ಆತ್ಮನಿಂದ ಮನುಷ್ಯನು ಕಂಡುಕೊಳ್ಳುತ್ತಾನೋ" ಎಂಬುದನ್ನೆಲ್ಲ ಹಿಂದಿನ ಮಂತ್ರದಂತೆಯೇ[1] ತಿಳಿಯಬೇಕು. ಆ ದೊಡ್ಡ ವಿಭುವಾದ[2] ಆತ್ಮನನ್ನು ತಿಳಿದುಕೊಂಡ, **ನೇರಾಗಿ "ನಾನು ಪರಮಾತ್ಮನಾಗಿರುವೆನು" ಎಂದು ತನ್ನ ಸ್ವರೂಪದಿಂದಲೇ ನಿಶ್ಚಯಿಸಿಕೊಂಡ**[3] ಧೀರನು ಶೋಕಿಸುವದಿಲ್ಲ

ಆತ್ಮನೂ ಹಿರಣ್ಯಗರ್ಭನೂ ಅದ್ವಿತೀಯವಾದ ಬ್ರಹ್ಮವೇ

ಯ ಇಮಂ ಮಧ್ವದಂ ವೇದ
ಆತ್ಮಾನಂ ಜೀವನುನ್ತಿಕಾತ್ ।
ಈಶಾನಂ ಭೂತಭವ್ಯಸ್ಯ
ನ ತತೋ ವಿಜುಗುಪ್ಸತೇ । ಏತದ್ವೈ ತತ್ ॥ ೫ ॥

೫. ಯಾವನು ಈ ಜೀನುತುಪ್ಪವನ್ನು ತಿನ್ನುವ ಜೀವನನ್ನು ಹತ್ತಿರವಿರುವ ಹಿಂದುಮುಂದಿನ ಒಡೆಯನಾದ ಆತ್ಮನೆಂದು ಅರಿತುಕೊಳ್ಳುವನೋ (ಅವನು) ಆಮೇಲೆ ಕಾಪಾಡಿಕೊಳ್ಳುವದಕ್ಕೆ ಇಚ್ಛಿಸುವದಿಲ್ಲ. ಇದೇ ಅದು.

1. ಎಚ್ಚರವನ್ನೂ ಕನಸನ್ನೂ ವಿಷಯವಾಗಿ ಮಾಡಿಕೊಂಡು ಅರಿಯುವದು ಜಡವಾದ ಅಂತಃಕರಣವಲ್ಲ, ಸಾಕ್ಷಿಚೈತನ್ಯನೇ-ಎಂದು ಅರ್ಥಮಾಡಿಕೊಳ್ಳಬೇಕು ಎಂದು ಭಾವ

2 ಅವಸ್ಥೆಗಳ ವಿಷಯಗಳು ಆಯಾ ಅವಸ್ಥೆಗೆ ಕಟ್ಟುಬಿದ್ದಿರುವದರಿಂದ ಅಲ್ಪವಾಗಿರುವವು. ಎರಡನ್ನೂ ನೋಡುವ ಆತ್ಮನು ಮಹಾ, ಎಲ್ಲವನ್ನೂ ಅರಿಯುವ ಚೈತನ್ಯರೂಪನಾದ್ದರಿಂದ ವ್ಯಾಪಿಯು

3. ತನ್ನ ಸಂಸಾರಿಸ್ವರೂಪವು ಮಿಥ್ಯೆಯೆಂದೂ ಪರಮಾತ್ಮನೇ ತಾನೆಂದೂ ನಿಶ್ಚಯಿಸಿಕೊಂಡ

(ಭಾಷ್ಯ)

೧೧೭. ಕಿಂ ಚ ಯಃ ಕಶ್ಚಿತ್ ಇಮಂ ಮಧ್ವಾದಂ ಕರ್ಮಫಲಭುಜಂ ಜೀವಂ ಪ್ರಾಣಾದಿಕಲಾಪಸ್ಯ ಧಾರಯಿತಾರಮ್ ಆತ್ಮಾನಂ ವೇದ ವಿಜಾನಾತಿ ಅನ್ತಿಕಾತ್ ಅನ್ತಿಕೇ ಸಮೀಪೇ ಈಶಾನಮ್ ಈಶಿತಾರಂ ಭೂತಭವ್ಯಸ್ಯ ಕಾಲತ್ರಯಸ್ಯ। ತತಃ ತದ್ವಿಜ್ಞಾನಾದೂರ್ಧ್ವಮ್ ಆತ್ಮಾನಂ ನ ವಿಜುಗುಪ್ಸತೇ ನ ಗೋಪಾಯಿತುಮಿಚ್ಛತಿ। ಅಭಯಪ್ರಾಪ್ತತ್ವಾತ್। ಯಾವದ್ ಹಿ ಭಯಮಧ್ಯಸ್ಥೋಽನಿತ್ಯಮಾತ್ಮಾನಂ ಮನ್ಯತೇ ತಾವದ್ ಗೋಪಾಯಿತುಮಿಚ್ಛತ್ಯಾತ್ಮಾನಮ್। ಯದಾ ತು ನಿತ್ಯಮದ್ವೈತಮಾತ್ಮಾನಂ ವಿಜಾನಾತಿ ತದಾ ಕಃ ಕಂ ಕುತೋ ವಾ ಗೋಪಾಯಿತುಮಿಚ್ಛೇತ್? ಏತದ್ವೈ ತದಿತಿ ಪೂರ್ವವತ್ ॥

(ಭಾಷ್ಯಾರ್ಥ)

ಮತ್ತು ಯಾವನೇ ಆಗಲಿ ಈ ಜೇನುತುಪ್ಪವನ್ನು ತಿನ್ನುವ ಎಂದರೆ ಕರ್ಮಫಲವನ್ನು [1] ಅನುಭವಿಸುತ್ತಿರುವ ಜೀವನನ್ನು ಎಂದರೆ ಪ್ರಾಣಾದಿಗಳ ಸಮೂಹವನ್ನು ಧರಿಸಿರುವ (ಜೀವನನ್ನು) ಅನ್ತಿಕಾತ್= ಅನ್ತಿಕೇ ಹತ್ತಿರದಲ್ಲಿ ಬಳಿಯಲ್ಲಿರುವ ಹಿಂದುಮುಂದಿನ ಎಂದರೆ ಮೂರು ಕಾಲಕ್ಕೂ ಒಡೆಯನಾದ [2] (ಅದನ್ನು) ಆಳುತ್ತಿರುವ ಆತ್ಮನೆಂದು ಅರಿತುಕೊಳ್ಳುವನೋ (ಅವನು) ಆಮೇಲೆ ಎಂದರೆ ಅರಿವುಂಟಾದ ಬಳಿಕ ತನ್ನನ್ನು ಕಾಪಾಡಿಕೊಳ್ಳುವದಕ್ಕೆ ಇಚ್ಛಿಸುವದಿಲ್ಲ, ಏಕೆಂದರೆ (ಅವನು) ಅಭಯವನ್ನು ಹೊಂದಿರುತ್ತಾನೆ. ಎಲ್ಲಿಯವರೆಗೆ ತಾನು ಹೆದರಿಕೆಯಲ್ಲಿದ್ದುಕೊಂಡು [3] ತಾನು ಅನಿತ್ಯನೆಂದುಕೊಂಡಿರುವನೋ ಅಲ್ಲಿಯವರೆಗೆ ತನ್ನನ್ನು ಕಾಪಾಡಿಕೊಳ್ಳುವದಕ್ಕೆ ಇಚ್ಛಿಸುತ್ತಾನೆ ಆದರೆ ಯಾವಾಗ ತಾನು ನಿತ್ಯವಾಗಿರುವ ಅದ್ವೈತನೆಂದು ಅರಿತುಕೊಳ್ಳುವನೋ ಆಗ ಯಾವನು ಏನನ್ನು ಏತರಿಂದ ಕಾಪಾಡಿಕೊಳ್ಳಲೆಳಸಬೇಕು? [4] "ಏತದ್ವೈತ ತದ್" ಎಂಬ ವಾಕ್ಯಕ್ಕೆ ಹಿಂದಿನ (ಮಂತ್ರ) ದಂತೆ (ವ್ಯಾಖ್ಯಾನಮಾಡಿಕೊಳ್ಳಬೇಕು).

---

1. 'ಮಧು' ಎಂಬ ಶಬ್ದಕ್ಕೆ ಕರ್ಮಫಲವೆಂಬ ಅರ್ಥವನ್ನು ಮಾಡುವದಕ್ಕೆ ಆಧಾರ, ಋ. ವೇ. ೧-೩೨-೧೬೪-೩೨

2 ಭೂತಭವ್ಯಗಳಿಗೆ ಹೊರತಾಗಿರುವವನು ಎಂದು ಕೇಳಿದ್ದಕ್ಕೆ ಉತ್ತರವಿದು.

3 ಛಾ ೬-೮-೬ "ತೇಜಃ ಪರಸ್ಯಾಂ ದೇವತಾಯಾಮ್" ಎಂಬುದರ ಭಾಷ್ಯವನ್ನು ನೋಡಿ ತೈ. ಭಾ ೨-೭. ಜನನಮರಣವೆಂಬುದೇ ಭಯವು. ಛಾ. ಭಾ. ೧-೩-೧

4. ಈ. ೬, ಬೃ. ೪-೪-೧೫.

(ಭಾಷ್ಯ)

೧೧೮. ಯಃ ಪ್ರತ್ಯಗಾತ್ಮಾ ಈಶ್ವರಭಾವೇನ ನಿರ್ದಿಷ್ಟಃ ಸ ಸರ್ವಾತ್ಮಾ ಇತ್ಯೇತದ್ ದರ್ಶಯತಿ—

(ಭಾಷ್ಯಾರ್ಥ)

ಯಾವ ಪ್ರತ್ಯಗಾತ್ಮನನ್ನು ಈಶ್ವರಸ್ವರೂಪನೆಂದು ತಿಳಸಲಾಯಿತೋ ಅವನು ಸರ್ವಾತ್ಮನು ಎಂಬದನ್ನು ತಿಳಿಸುತ್ತಾನೆ:—

ಯಃ ಪೂರ್ವಂ ತಪಸೋ ಜಾತ-
ಮದ್ಭ್ಯಃ ಪೂರ್ವಮಜಾಯತ।
ಗುಹಾಂ ಪ್ರವಿಶ್ಯ ತಿಷ್ಠನ್ತಂ
ಯೋ ಭೂತೇಭಿರ್ವ್ಯಪಶ್ಯತ। ಏತದ್ವೈತತ್ ॥ ೬ ॥

೬. ಯಾವನು ನೀರಿಗಿಂತ ಮೊದಲು ತಪಸ್ಸಿನಿಂದ ಹುಟ್ಟಿರುವವನನ್ನು ಗುಹೆಯನ್ನು ಹೊಕ್ಕು ಭೂತಗಳೊಡನೆ ಇರುವವನನ್ನಾಗಿ ಕಾಣುತ್ತಾನೋ (ಅವನಿಗೆ) ಇದೇ ಅದು.

(ಭಾಷ್ಯ)

೧೧೯. ಯಃ ಕಶ್ಚಿನ್ಮುಮುಕ್ಷುಃ ಪೂರ್ವಂ ಪ್ರಥಮಂ ತಪಸಃ ಜ್ಞಾನಾದಿ ಲಕ್ಷಣಾತ್ ಬ್ರಹ್ಮಣ ಇತ್ಯೇತತ್। ಜಾತಮ್ ಉತ್ಪನ್ನಂ ಹಿರಣ್ಯಗರ್ಭಮ್। ಕಿಮಪೇಕ್ಷ್ಯ ಪೂರ್ವಮಿತಿ? ಆಹ—ಅದ್ಭ್ಯಃ ಪೂರ್ವಮ್ ಅಪ್ಸಹಿತೇಭ್ಯಃ ಪಞ್ಚ ಭೂತೇಭ್ಯಃ ನ ಕೇವಲಾಭ್ಯೋಽದ್ಭ್ಯ ಇತ್ಯಭಿಪ್ರಾಯಃ। ಅಜಾಯತ ಉತ್ಪನ್ನಃ ಯಃ ತಂ ಪ್ರಥಮಜಂ ದೇವಾದಿಶರೀರಾಣ್ಯುತ್ಪಾದ್ಯ ಸರ್ವಪ್ರಾಣಿಗುಹಾಂ ಹೃದಯಾಕಾಶಂ ಪ್ರವಿಶ್ಯ ತಿಷ್ಠನ್ತಂ ಶಬ್ದಾದೀನುಪಲಭಮಾನಂ ಭೂತೇಭಿಃ ಭೂತೈಃ ಕಾರ್ಯಕರಣಲಕ್ಷಣೈಃ ಸಹ ತಿಷ್ಠನ್ತಂ ಯೋ ವ್ಯಪಶ್ಯತ ಯಃ ಪಶ್ಯತಿ ಇತ್ಯೇತತ್। ಯ ಏವಂ ಪಶ್ಯತಿ ಸ ಏತದೇವ ಪಶ್ಯತಿ ಯತ್ ತತ್ ಪ್ರಕೃತಂ ಬ್ರಹ್ಮ ॥

(ಭಾಷ್ಯಾರ್ಥ)

ಯಾವ ಮುಮುಕ್ಷುವೇ ಆಗಲಿ ತಪಸ್ಸಿನಿಂದ ಎಂದರೆ ಬ್ರಹ್ಮದ ಜ್ಞಾನವೇ ಮುಂತಾದ ರೂಪದ (ತಪಸ್ಸಿನಿಂದ) ಎಂದರ್ಥ. ಮೊದಲು ಹುಟ್ಟಿದ—ಯಾವದಕ್ಕಿಂತ ಮೊದಲು? ಎಂದರೆ ಹೇಳುತ್ತಾನೆ. ನೀರಿಗಿಂತ ಮೊದಲು. ನೀರಿನೊಡನೆ

ಇರುವ ಪಂಚಭೂತಗಳಿಗಿಂತ[1] (ಎಂದರ್ಥ), ಬರಿಯ ನೀರಿಗಿಂತ ಎಂದಭಿಪ್ರಾಯವಲ್ಲ. ಹೀಗೆ ನೀರಿಗಿಂತ ಮೊದಲು) ಹುಟ್ಟಿದವನು ಯಾವನೋ **ಆ ಪ್ರಥಮಜನಾದ ಹಿರಣ್ಯಗರ್ಭನನ್ನು** ದೇವಾದಿಶರೀರಗಳನ್ನು ಉಂಟುಮಾಡಿ ಎಲ್ಲಾ ಪ್ರಾಣಿಗಳ ಗುಹೆಯನ್ನು ಎಂದರೆ ಹೃದಯಾಕಾಶವನ್ನು ಹೊಕ್ಕು[2] ಇರುವವನನ್ನಾಗಿ ಶಬ್ದವೇ ಮುಂತಾದವುಗಳನ್ನು ಅರಿಯುವವನನ್ನಾಗಿಯೂ[3] **ಭೂತೇಭಿಃ = ಭೂತೈಃ ಕಾರ್ಯಕರಣಗಳ ರೂಪವಾದ ಭೂತಗಳೊಡನೆ** ಇರುವವನನ್ನಾಗಿ ಯಾವನು ವ್ಯಪಶ್ಯತ = ಪಶ್ಯತಿ ಕಾಣುತ್ತಾನೋ ಎಂದರ್ಥ ಯಾವನು ಹೀಗೆ ಕಾಣುತ್ತಾನೋ ಅವನು ಇದನ್ನೇ, ಎಂದರೆ ಯಾವದು ಆ ಪ್ರಕೃತವಾದ ಬ್ರಹ್ಮವೋ (ಇದನ್ನೇ) ಕಾಣುತ್ತಾನೆ.

ಯಾ ಪ್ರಾಣೇನ ಸಮ್ಭವ-
ತ್ಯದಿತಿ ರ್ದೇವತಾಮಯೀ।
ಗುಹಾಂ ಪ್ರವಿಶ್ಯ ತಿಷ್ಠನ್ತೀಂ
ಯಾ ಭೂತೇಭಿರ್ವ್ಯಜಾಯತ। ಏತದ್ವೈ ತತ್ ॥ ೭ ॥

೭. ದೇವತಾಮಯವಾದ ಯಾವ ಅದಿತಿಯು ಪ್ರಾಣ(ರೂಪ)ದಿಂದ ಉಂಟಾಗುವದೋ, (ಯಾವದು) ಗುಹೆಯನ್ನು ಹೊಕ್ಕು ಇರುವದೋ, ಯಾವದು ಭೂತಗಳೊಡನೆ ಹುಟ್ಟಿರುವದೋ ಇದೇ ಅದು.

(ಭಾಷ್ಯ)

೧೧೯. ಕಿಂ ಚ ಯಾ (ಸರ್ವ)ದೇವತಾಮಯೀ ಸರ್ವದೇವತಾತ್ಮಿಕಾ ಪ್ರಾಣೇನ ಹಿರಣ್ಯಗರ್ಭರೂಪೇಣ ಪರಸ್ಮಾದ್ ಬ್ರಹ್ಮಣಃ ಸಮ್ಭವತಿ ಶಬ್ದಾದೀನಾಮ್ ಅದನಾತ್ ಅದಿತಿಃ। ತಾಂ ಪೂರ್ವವದ್ ಗುಹಾಂ ಪ್ರವಿಶ್ಯ ತಿಷ್ಠನ್ತೀಮ್ ಅದಿತಿಮ್। ತಾಮೇವ ವಿಶಿನಷ್ಟಿ–ಯಾ ಭೂತೇಭಿಃ ಭೂತೈಃ ಸಮನ್ವಿತಾ ವ್ಯಜಾಯತ ಉತ್ಪನ್ನಾ ಇತ್ಯೇತತ್ ॥

---

1. ಐ. ಭಾ. ೧-೧-೩, ಬೃ. ಭಾ. ೫-೫-೧, ಸೂ. ಭಾ. ೩-೧-೩–ಇವುಗಳಲ್ಲಿ 'ಅಪ್' ಶಬ್ದದ ಅರ್ಥವನ್ನು ನೋಡಿರಿ.

2. ತೈ. ಭಾ. ೨-೬.

3. ಜೀವನು ಶಬ್ದಾದಿಗಳನ್ನು ಅರಿಯುತ್ತಾನಷ್ಟೆ, ಇವನ ಆತ್ಮನಾದ ಚೈತನ್ಯಕ್ಕೂ ಹಿರಣ್ಯಗರ್ಭನಾದ ಆತ್ಮನ ಚೈತನ್ಯಕ್ಕೂ ಯಾವ ಭೇದವೂ ಇಲ್ಲ.

(ಭಾಷ್ಯಾರ್ಥ)

ಮತ್ತು ಯಾವ (ಸರ್ವ)[1] ದೇವತಾಮಯವಾದ ಸರ್ವದೇವತಾರೂಪವಾದ ಅದಿತಿಯು–ಶಬ್ದಾದಿಗಳನ್ನು ತಿನ್ನುವದರಿಂದ 'ಅದಿತಿ' ಯು–ಪರಬ್ರಹ್ಮದಿಂದ ಪ್ರಾಣ (ರೂಪ) ದಿಂದ ಎಂದರೆ ಹಿರಣ್ಯಗರ್ಭರೂಪದಿಂದ ಉಂಟಾಗುವದೋ ಆ ಹಿಂದೆ (೬ನೆಯ ಮಂತ್ರದಲ್ಲಿ) ಹೇಳಿದಂತೆ ಗುಹೆಯನ್ನು ಹೊಕ್ಕು ಇರುವದೋ (ಆ) ಅದಿತಿಯನ್ನು, ಆ ಅದಿತಿಗೇ ವಿಶೇಷಣವನ್ನು ಹೇಳುತ್ತಾನೆ: ಯಾವ (ಅದಿತಿಯು) ಭೂತೇಭಿಃ = ಭೂತೈಃ ಭೂತಗಳೊಡನೆ ಕೂಡಿಕೊಂಡು ಹುಟ್ಟಿರುವದೋ ಉಂಟಾಗಿರುವದೋ ಎಂದರ್ಥ.[2]

ಅರಣ್ಯೋರ್ನಿಹಿತೋ ಜಾತವೇದಾ
ಗರ್ಭ ಇವ ಸುಭೃತೋ ಗರ್ಭಿಣೀಭಿಃ।
ದಿವೇ ದಿವ ಈಡ್ಯೋ ಜಾಗೃವದ್ಭಿ-
ರ್ಹವಿಷ್ಮದ್ಭಿರ್ಮನುಷ್ಯೇಭಿರಗ್ನಿಃ। ಏತದ್ವೈ ತತ್ ॥ ೯ ॥

೯. ಗರ್ಭಿಣಿಯರಿಂದ ಗರ್ಭವು ಹೇಗೋ ಹಾಗೆ ಅರಣಿಗಳೆರಡರಲ್ಲಿಯೂ ಇಡಲ್ಪಟ್ಟು ಚೆನ್ನಾಗಿ ಧರಿಸಲ್ಪಟ್ಟಿರುವ ಜಾತವೇದನು, ಎಚ್ಚರವಾಗಿರುವ ಹವಿಷ್ಮಂತರಾದ ಮನುಷ್ಯರಿಂದ ದಿನದಿನವೂ ಸ್ತೋತ್ರಮಾಡಲ್ಪಡುವ ಅಗ್ನಿಯು, ಇದೇ ಅದು.

(ಭಾಷ್ಯ)

೧೦. ಕಿಂ ಚ ಯಃ ಅಧಿಯಜ್ಞಂ ಉತ್ತರಾಧರಾರಣ್ಯೋಃ ನಿಹಿತಃ ಸ್ಥಿತಃ ಜಾತವೇದಾ ಅಗ್ನಿಃ ಪುನಃ ಸರ್ವಹವಿಷಾಂ ಭೋಕ್ತಾ ಅಧ್ಯಾತ್ಮಂ ಚ ಯೋಗಿಭಿಃ ಗರ್ಭ ಇವ ಗರ್ಭಿಣೀಭಿಃ ಅನ್ತರ್ವತ್ನೀಭಿಃ ಅಗರ್ಹಿತಾನ್ನಭೋಜನಾದಿನಾ ಯಥಾ ಗರ್ಭಃ ಸುಭೃತಃ ಸುಷ್ಠು ಸಮ್ಯಕ್ ಭೃತೋ ಲೋಕೇ ಇತ್ಥಮೇವ ಋತ್ವಿಗ್ಭಿಃ ಯೋಗಿಭಿಶ್ಚ ಸುಭೃತಃ ಇತ್ಯೇತತ್। ಕಿಂ ಚ ದಿವೇ ದಿವೇ ಅಹನ್ಯಹನಿ ಈಡ್ಯಃ ಸ್ತುತ್ಯೋ ವನ್ದ್ಯಶ್ಚ ಕರ್ಮಿಭಿರ್ಯೋಗಿಭಿಶ್ಚ ಅಧ್ವರೇ ಹೃದಯೇ ಚ ಜಾಗೃವದ್ಭಿಃ ಜಾಗರಣಶೀಲೈಃ ಅಪ್ರಮತ್ತೈಃ ಇತ್ಯೇತತ್। ಹವಿಷ್ಮದ್ಭಿಃ ಆಜ್ಯಾದಿಮದ್ಭಿಃ ಧ್ಯಾನಭಾವನಾವದ್ಭಿಶ್ಚ ಮನುಷ್ಯೇಭಿಃ ಮನುಷ್ಯೈಃ ಅಗ್ನಿಃ। ಏತದ್ವೈ ತತ್ ತದೇವ ಪ್ರಕೃತಂ ಬ್ರಹ್ಮ ॥

1. "ಸರ್ವ" ಎಂಬ ಮಾತು ಭಾಷ್ಯದಲ್ಲಿ ಬರೆದವರು ಸೇರಿಸಿದ್ದೆಂದು ತೋರುತ್ತದೆ.

2. ಇದೇ ಅದು ಎಂಬ ವಾಕ್ಯದ ಅರ್ಥವನ್ನು ಇದಕ್ಕೆ ಸೇರಿಸಿಕೊಂಡು ಅನ್ವಯ ಮಾಡಿಕೊಳ್ಳಬೇಕು.

(ಭಾಷ್ಯಾರ್ಥ)

ಇದೂ ಅಲ್ಲದೆ ಅಧಿಯಜ್ಞದಲ್ಲಿ ಯಾವ ಜಾತವೇದನು ಎಂದರೆ ಅಗ್ನಿಯು ಮೇಲಿನ ಅರಣಿ, ಕೆಳಗಿನ ಅರಣಿ–ಇವೆರಡರಲ್ಲಿಯೂ ಇಡಲ್ಪಟ್ಟು ಎಂದರೆ ಇದ್ದು ಕೊಂಡು ಆಮೇಲೆ ಎಲ್ಲಾ ಹವಿಸ್ಸುಗಳನ್ನು ಭೋಗಿಸುವನೋ, ಅಧ್ಯಾತ್ಮವಾಗಿ ಯೋಗಿಗಳಿಂತಲೂ–ಗರ್ಭಿಣಿಯರಿಂದ ಗರ್ಭವು ಹೇಗೋ ಹಾಗೆ, ಲೋಕದಲ್ಲಿ ಬಸುರಿಯರಾದವರಿಂದ ಶುದ್ಧವಾದ ಅನ್ನವನ್ನುಣ್ಣುವುದೇ–ಮುಂತಾದವುಗಳಿಂದ ಹೇಗೆ ಗರ್ಭವು ಚೆನ್ನಾಗಿ ಧರಿಸಲ್ಪಟ್ಟಿರುವದೋ, ಸರಿಯಾಗಿ ಉತ್ತಮರೀತಿಯಲ್ಲಿ ಪೋಷಿಸಲ್ಪಡುವದೋ, ಹಾಗೆಯೇ–ಋತ್ವಿಕ್ಕರುಗಳಿಂದಲೂ ಯೋಗಿಗಳಿಂದಲೂ [1] (ಯಾವ ಅಗ್ನಿಯು) ಚೆನ್ನಾಗಿ ಪೋಷಿಸಲ್ಪಡುವನೋ ಎಂದರ್ಥ ಮತ್ತು ದಿನದಿನವೂ ಪ್ರತಿದಿನವೂ ಎಚ್ಚರವಾಗಿರುವ ಎಚ್ಚರದಿಂದಿರುವ ಸ್ವಭಾವದವರಾದ, ಅವಧಾನತಪ್ಪದೇ ಇರುವ ಎಂದರ್ಥ, ಹವಿಷ್ಕ್ರಂತರಾದ ಆಜ್ಯವೇ ಮುಂತಾದವುಗಳನ್ನು ತೆಗೆದುಕೊಂಡು ಬಂದಿರುವ ಮತ್ತು ಧ್ಯಾನ, ಭಾವನೆ–ಇವುಗಳಿಂದ ಕೂಡಿರುವ ಮನುಷ್ಯೇಭಿಃ= ಮನುಷ್ಯೈಃ ಮನುಷ್ಯರಿಂದ ಎಂದರೆ ಕರ್ಮಿಗಳಿಂದಲೂ ಯೋಗಿಗಳಿಂದಲೂ ಯಜ್ಞದಲ್ಲಿಯೂ ಹೃದಯದಲ್ಲಿಯೂ ಈಡ್ಯನಾಗಿರುವ ಎಂದರೆ ಸ್ತೋತ್ರಮಾಡುತ್ತಲೂ ನಮಸ್ಕರಿಸಲ್ಪಡುತ್ತಲೂ ಇರುವ (ಯಾವ) ಅಗ್ನಿಯು (ಇರುವನೋ) ಅದು ಇದೇ, (ಅವನು) ಪ್ರಕೃತವಾದ ಬ್ರಹ್ಮವೇ. [2]

ಯತಶ್ಚೋದೇತಿ ಸೂರ್ಯೋಽ
ಸ್ತಂ ಯತ್ರ ಚ ಗಚ್ಛತಿ।
ತಂ ದೇವಾಃ ಸರ್ವೇ ಅರ್ಪಿತಾ
ಸ್ತದು ನಾತ್ಯೇತಿ ಕಶ್ಚನ। ಏತದ್ವೈ ತತ್ ॥ ೯ ॥

೯. ಯಾವನಿಂದ ಸೂರ್ಯನು ಉದಯಿಸುವನೋ ಮತ್ತು ಯಾವನಲ್ಲಿ ಅಸ್ತವನ್ನು ಹೊಂದುವನೋ ಅವನನ್ನು ಎಲ್ಲಾ ದೇವತೆಗಳೂ ಸೇರಿಕೊಂಡಿರುವರು. ಅದನ್ನು ಯಾರೂ ಮೀರಲರಿಯರು. ಇದೇ ಅದು.

---

1. ಮೂಲದಲ್ಲಿ ಅಧಿಯಜ್ಞವನ್ನು ಮಾತ್ರ ಕೊಟ್ಟಿದ್ದರೂ ಅದು ಉಪಲಕ್ಷಣವು. ಅದ್ದರಿಂದ ಅಗ್ನಿಯನ್ನು ಯಜ್ಞದಲ್ಲಿಯೂ ಹೃದಯದಲ್ಲಿಯೂ ಆರಾಧಿಸುವ ಕರ್ಮಿಗಳೂ ಉಪಾಸಕರೂ ನಿಜವಾಗಿ ಬ್ರಹ್ಮವನ್ನೇ ಉಪಾಸನೆಮಾಡುತ್ತಾರೆ–ಎಂದರ್ಥ. ವಿರಾಡ್ರೂಪನಾದ ಅಗ್ನಿಯ ಚಯನವೂ ಉಪಾಸನೆಯೂ ಬ್ರಹ್ಮಜ್ಞಾನದಲ್ಲಿ ಅಡಕವಾಗಿವೆ ಎಂದು ಭಾವ

2. ಋ. ೩-೨-೨೯-೩ರಲ್ಲಿ ಈ ಮಂತ್ರವಿದೆ. ಆದರೆ ಅಲ್ಲಿ ಕೇವಲ ಅಗ್ನಿಸ್ತೋತ್ರವಿ

(ಭಾಷ್ಯ)

೧೨೧ ಕೆಂ ಚ ಯತಶ್ಚ ಯಸ್ಮಾತ್ ಪ್ರಾಣಾತ್ ಉದೇತಿ ಉತ್ತಿಷ್ಠ
ಸೂರ್ಯಃ। ಅಸ್ತಂ ನಿಮ್ಲೋಚನಂ ತಿರೋಧಾನಂ[1] ಯತ್ರ ಯಸ್ಮಿನ್ನೇವ ಕ
ಪ್ರಾಣೇ ಅಹನ್ಯಹನಿ ಗಚ್ಛತಿ ತಂ ಪ್ರಾಣಮಾತ್ಮಾನಂ ದೇವಾಃ ಸರ್ವೇ[2] ಅಗ್ನಾ
ದಯಃ ಅಧಿದೈವಂ ವಾಗಾದಯಶ್ಚ ಅಧ್ಯಾತ್ಮಂ ಸರ್ವೇ ವಿಶ್ವೇ ಅರಾ ಇವ ರಥನಾಭ
ಅರ್ಪಿತಾಃ ಸಂಪ್ರವೇಶಿತಾಃ ಸ್ಥಿತಿಕಾಲೇ। ಸೋಽಪಿ ಬ್ರಹ್ಮೈವ। ತತ್ ಏತತ
ಸರ್ವಾತ್ಮಕಂ ಬ್ರಹ್ಮ ಉ ನಾತ್ಯೇತಿ ನಾತೀತ್ಯ ತದಾತ್ಮಕತಾಂ ತದನ್ಯತ್ವಂ ಗಚ್ಛ
ಕಶ್ಚನ ಕಶ್ಚಿದಪಿ। ಏತದ್ವೈ ತತ್ ॥

(ಭಾಷ್ಯಾರ್ಥ)

ಮತ್ತು ಯಾವನಿಂದ, ಯಾವ ಪ್ರಾಣನಿಂದ[3] ಸೂರ್ಯನು ಉದಯಿಸ
ವನೋ ಹೊರಕ್ಕೆ ಬರುವನೋ, ಮತ್ತು ಯಾವನಲ್ಲಿ ಎಂದರೆ ಯಾವ ಪ್ರಾಣ
ಲ್ಲಿಯೇ ಅಸ್ತವನ್ನು ಎಂದರೆ ಮುಳುಗುವಿಕೆಯನ್ನು ಮರೆಯಾಗುವಿಕೆಯನ್ನು ದಿ
ದಿನವೂ ಹೊಂದುತ್ತಿರುವನೋ ಅಂಥ ಪ್ರಾಣನೆಂಬ ಆತ್ಮನನ್ನು ಅಗ್ನಿಯೇ ಮುಂತಾ
ಅಧಿದೈವ (ದೇವತೆಗಳು) ವಾಕ್ಕು ಮುಂತಾದ ಅಧ್ಯಾತ್ಮ (ದೇವತೆಗಳು) ಎಲ್ಲ
(ದೇವತೆಗಳೂ) ಹಾರೆಕೋಲುಗಳು ಗುಂಬದಲ್ಲಿ ಹೇಗೋ ಹಾಗೆ ಸ್ಥಿತಿಕಾಲದಲ್ಲಿ ಸೇ
ಕೊಂಡಿರುವರು ಒಳಸೇರಿಕೊಂಡಿರುವರು[4] ಆ (ಪ್ರಾಣನೂ) ಬ್ರಹ್ಮವೇ, ಆ ಕ
ಸರ್ವಾತ್ಮಕವಾದ ಬ್ರಹ್ಮವನ್ನು ಯಾರು ಯಾರೊಬ್ಬರೂ ಮೀರಲರಿಯರು, ಅದ
ಸ್ವರೂಪವನ್ನು ಮೀರಿ[5] ಅದಕ್ಕಿಂತ ಬೇರೆಯ ಸ್ವರೂಪವನ್ನು ಯಾರೂ ಪಡೆಯ
ಲಾರರು.[6] ಇದೇ ಅದು[7]

1-2. (ವಾ॥).

3. ಹಿರಣ್ಯಗರ್ಭನಿಂದ.

4. ವಾಕ್ಕೇ ಮುಂತಾದ ಇಂದ್ರಿಯಗಳು ಅಧ್ಯಾತ್ಮದೇವತೆಗಳು, ಈ ಇಂದ್ರಿಯಗ
ಅಭಿಮಾನದೇವತೆಗಳಾದ ಅಗ್ನಿಯೇ ಮುಂತಾದವರು ಅಧಿದೈವದೇವತೆಗಳು. ತೈ.ಭಾ. ೨-೪

4. ಪ್ರ ೨-೬.

5. ಸುಷುಪ್ತಿಯಲ್ಲಿ ಆತ್ಮಸ್ವರೂಪವನ್ನೂ ಜಾಗ್ರತ್ಸ್ವಪ್ನಗಳಲ್ಲಿ ತತ್ಸಂಬಂಧವನ್ನು
ಹೊಂದುತ್ತಾರೆ ಎಂದು (ಗೌ॥) ವ್ಯಾಖ್ಯಾನದಲ್ಲಿದೆ. ಬ್ರಹ್ಮವನ್ನು ಬಿಟ್ಟು ಹಿರಣ್ಯಗರ್ಭ
ಮುಂತಾಗಿ ಯಾವದೊಂದೂ ಬೇರೆ ಇರುವದಿಲ್ಲ ಎಂಬುದು ಪ್ರಕೃತ

6. ಅಥರ್ವವೇದ ೧೦-೫-೩೬ ರಲ್ಲಿ ಈ ಮಂತ್ರವಿದೆ, ಅಲ್ಲಿ ಸ್ವಲ್ಪರೂಪಭೇದದಿಂ
ಕಾಣಬರುತ್ತದೆ. ಬೃ. ೧-೫-೨೩ ರಲ್ಲಿ ಈ ಮಂತ್ರದ ಅರ್ಥವನ್ನು ಕೊಟ್ಟಿದೆ.

7. ಆ ಬ್ರಹ್ಮವೇ ಈ ಪ್ರಾಣವಾಗಿ ಕಾಣುತ್ತಿರುವದು.

ಬ್ರಹ್ಮದಲ್ಲಿ ಯಾವ ಭೇದವೂ ಇಲ್ಲ

(ಭಾಷ್ಯ)

೧೦೨. ಯದ್ ಬ್ರಹ್ಮಾದಿಸ್ತಾವರಾನ್ತೇಷು ವರ್ತಮಾನಂ ತತ್ತದುಪಾಧಿತ್ವಾದಬ್ರಹ್ಮವದವಭಾಸಮಾನಂ ಸಂಸಾರಿ ಅನ್ಯತ್ ಪರಸ್ಮಾದ್ ಬ್ರಹ್ಮಣ ಇತಿ ಮಾ ಭೂತ್ ಕಸ್ಯಚಿದಾಶಙ್ಕಾ ಇತೀದಮಾಹ—

(ಭಾಷ್ಯಾರ್ಥ)

ಯಾವದು ಬ್ರಹ್ಮನು ಮೊದಲುಗಿ ಸ್ತಾವರ (ಪ್ರಾಣಿಗಳ) ವರೆಗೂ ಇದ್ದು ಕೊಂಡು ಆಯಾ ಉಪಾಧಿಯಿಂದ ಬ್ರಹ್ಮವಲ್ಲದಂತೆ ತೋರಿಕೊಳ್ಳುತ್ತಿರುವದೋ[1] (ಆ) ಸಂಸಾರಿಯು ಪರಬ್ರಹ್ಮಕ್ಕಿಂತ ಬೇರೆಯೇ (ಆಗಿರಬೇಕು)–ಎಂದು ಯಾರಿಗೂ ಶಂಕೆ ಬರದೆ ಇರಲೆಂದು ಈ (ಮಾತನ್ನು) ಹೇಳುತ್ತಾನೆ :—

ಯದೇವೇಹ ತದಮುತ್ರ
ಯದಮುತ್ರ ತದನ್ವಿಹ ।
ಮೃತ್ಯೋಃ ಸ ಮೃತ್ಯುಮಾಪ್ನೋತಿ
ಯ ಇಹ ನಾನೇವ ಪಶ್ಯತಿ ॥ ೧೦ ॥

೧೦. ಯಾವದು ಇಲ್ಲಿ(ರುವ)ದೋ ಅದೇ ಅಲ್ಲಿ; ಯಾವದು ಅಲ್ಲಿ (ರುವ)ದೋ ಅದೇ ಇಲ್ಲಿಯೂ ಅನುಸರಿಸಿರುವದು. ಇಲ್ಲಿ ಬೇರೆ ಬೇರೆ ಯಾಗಿರುವಂತೆ ಯಾವನು ಕಾಣುವನೋ ಅವನು ಮೃತ್ಯುವಿನಿಂದ ಮೃತ್ಯು ವನ್ನು ಪಡೆಯುವನು.

(ಭಾಷ್ಯ)

೧೦೩. ಯದೇವೇಹ ಕಾರ್ಯಕರಣೋಪಾಧಿಸಮನ್ವಿತಂ ಸಂಸಾರಧರ್ಮವದವಭಾಸಮಾನಮ್ ಅವಿವೇಕಿನಾಮ್, ತದೇವ ಸ್ವಾತ್ಮಸ್ಥಮ್ ಅಮುತ್ರ ನಿತ್ಯವಿಜ್ಞಾನಘನಸ್ವಭಾವಂ ಸರ್ವಸಂಸಾರಧರ್ಮವರ್ಜಿತಂ ಬ್ರಹ್ಮ । ಯಚ್ಚ ಅಮುತ್ರ ಅಮುಷ್ಮಿನ್ನಾತ್ಮನಿ ಸ್ಥಿತಮ್ ತದನು ಇಹ ತದೇವ ಇಹ ಕಾರ್ಯಕರಣನಾಮರೂಪೋಪಾಧಿಕಮ್ ಅನು ವಿಭಾವ್ಯಮಾನಂ ನಾನ್ಯತ್ । ತತ್ರೈವಂ ಸತಿ ಉಪಾಧಿಸ್ವಭಾವಭೇದದೃಷ್ಟಿಲಕ್ಷಣಯಾ ಅವಿದ್ಯಯಾ ಮೋಹಿತಃ ಸನ್ ಯ ಇಹ ಬ್ರಹ್ಮಣಿ

1. ಉಪಾಧಿವಶದಿಂದ ಅಬ್ರಹ್ಮವಾಗಿ ತೋರಿದರೂ ಅದು ನಿಜವಾಗಿ ಬ್ರಹ್ಮವೇ. ಇದನ್ನು ಅರಿತುಕೊಳ್ಳಬೇಕು, ಅಷ್ಟೆ. ಬೃ. ಭಾ. ೧-೪-೧೦.

ಅನಾನಾಭೂತೇ " ಪರಸ್ಮಾದನ್ಯೋಽಹಮ್, ಮತ್ತೋಽನ್ಯತ್ ಪರಂ ಬ್ರಹ್ಮ " ಇತಿ ನಾನೇವ ಭಿನ್ನಮಿವ ಪಶ್ಯತಿ ಉಪಲಭತೇ ಸಃ ಮೃತ್ಯೋಃ ಮರಣಾತ್ ಮೃತ್ಯುಂ ಮರಣಂ ಪುನಃ ಪುನಃ ಜನನಮರಣಭಾವಮ್ ಆಪ್ನೋತಿ ಪ್ರತಿಪದ್ಯತೇ। ತಸ್ಮಾತ್ ತಥಾ ನ ಪಶ್ಯೇತ್ । "ವಿಜ್ಞಾನೈಕರಸಂ ನ್ಯೈರನ್ತರ್ಯೇಣ ಆಕಾಶವತ್ ಪರಿಪೂರ್ಣಂ ಬ್ರಹ್ಮೈವಾಹಮಸ್ಮಿ " ಇತಿ ಪಶ್ಯೇತ್ ಇತಿ ವಾಕ್ಯಾರ್ಥಃ ॥

(ಭಾಷ್ಯಾರ್ಥ)

ಇಲ್ಲಿ ಕಾರ್ಯಕರಣಗಳೆಂಬ[1] ಉಪಾಧಿಯಿಂದ ಕೂಡಿಕೊಂಡು ಸಂಸಾರ ಧರ್ಮಗಳನ್ನುಳ್ಳ (ಜೀವ)ನಂತೆ ಅವಿವೇಕಿಗಳಿಗೆ ಯಾವದು ತೋರುತ್ತಿರುವದೋ ಅದೇ ನನ್ನ ಸ್ವರೂಪದಲ್ಲಿದ್ದುಕೊಂಡು ಅಲ್ಲಿ ನಿತ್ಯವಿಜ್ಞಾನದ ಗಟ್ಟಿಯ ಸ್ವಭಾವದ್ದಾಗಿ ಯಾವ ಸಂಸಾರದ ಧರ್ಮವೂ ಇಲ್ಲದ ಬ್ರಹ್ಮ(ವಾಗಿರುವದು). ಮತ್ತು ಯಾವದು ಅಲ್ಲಿ ಎಂದರೆ ಆ ಆತ್ಮನಲ್ಲಿ ಇರುವದೋ ಅದೇ ಇಲ್ಲಿ ಕಾರ್ಯಕರಣಗಳೆಂಬ ನಾಮ ರೂಪಗಳ ಉಪಾಧಿಯನ್ನು ಅನುಸರಿಸಿಕೊಂಡು ತೋರುತ್ತಿರುವದೇ ಹೊರತು[2] ಬೇರೆಯಲ್ಲ.

ಇದು ಹೀಗಿರುವದರಿಂದ **ಉಪಾಧಿಯ ಸ್ವಭಾವದಿಂದಾದ ಭೇದದೃಷ್ಟಿಯ ಸ್ವರೂಪವಾದ ಅವಿದ್ಯೆಯಿಂದ ಮೋಹಿತನಾಗಿ** ಯಾವನು ಇಲ್ಲಿ ಬೇರೆ ಬೇರೆಯಾಗಿರದ ಈ ಬ್ರಹ್ಮದಲ್ಲಿ " ಪರಮಾತ್ಮನಿಗಿಂತ ನಾನು ಬೇರೆ, ನನಗಿಂತ ಪರಬ್ರಹ್ಮ ವೆಂಬುದು ಬೇರೆ " ಎಂದು ಬೇರೆಬೇರೆಯಾಗಿರುವಂತೆ ಭಿನ್ನವಾಗಿರುವಂತೆ ಕಾಣುವನೋ ಅವನು ಮೃತ್ಯುವಿನಿಂದ ಎಂದರೆ ಮರಣದ ಬಳಿಕ ಮೃತ್ಯುವನ್ನು ಎಂದರೆ ಮರಣವನ್ನು, ಮತ್ತೆ ಮತ್ತೆ ಹುಟ್ಟುವದು ಸಾಯುವದು ಎಂಬ ಧರ್ಮವನ್ನು, ಹೊಂದುತ್ತಿರುವನು ಆದ್ದರಿಂದ ಹಾಗೆಂದು ತಿಳಿಯಬಾರದು ' ಒಂದೇ ರೂಪವಾದ ಬರಿಯ ವಿಜ್ಞಾನವೂ, ಕಡಿವಡೆಯದೆ ಆಕಾಶದಂತೆ[3] (ಎಲ್ಲೆಲ್ಲಿಯೂ) ತುಂಬಿಕೊಂಡಿರುವ ಬ್ರಹ್ಮವೇ ನಾನಾಗಿರುವೆನು " ಎಂದು ತಿಳಿಯಬೇಕು ಎಂಬುದು (ಈ) ವಾಕ್ಯದ (ಒಟ್ಟು) ಅರ್ಥವು.

1 ಕಾರ್ಯಕರಣವೆಂಬ ಪಾರತೇ ಉತ್ತಮವೆಂಬುದು ಬೇರೆಕಡೆಯ ಭಾಷ್ಯವಾಕ್ಯಗಳಿಂದ ಗೊತ್ತಾಗುವದು.

2. ಸಂಸಾರಿಯಾಗಿ ತೋರುತ್ತಿರುವದು, ಆದರೆ ಆಗಲೂ ನಿಜವಾಗಿ ಬ್ರಹ್ಮವೇ.

3. ಗಡಿಗೆ, ಮಡಕೆ, ಕುಡಿಕೆ_ಮುಂತಾದ ಉಪಾಧಿಗಳಿಂದ ಬೇರೆಬೇರೆಯಾಗಿ ತೋರಿದರೂ ಅಖಂಡವಾಗಿರುವ ಆಕಾಶದಂತೆ. ಮುಂ. ಕಾ. ೩-೩, ೩-೬.

ಮನಸೈವೇದಮಾಪ್ತವ್ಯಂ
ನೇಹ ನಾನಾಸ್ತಿ ಕಿಂಚನ ।
ಮೃತ್ಯೋಃ ಸ ಮೃತ್ಯುಂ ಗಚ್ಛತಿ
ಯ ಇಹ ನಾನೇವ ಪಶ್ಯತಿ ॥ ೧೧ ॥

೧೧. ಇದು ಮನಸ್ಸಿನಿಂದಲೇ ಪಡೆಯಲ್ಪಡತಕ್ಕದ್ದು, ಇಲ್ಲಿ ಸ್ವಲ್ಪವೂ ಭೇದವಿರುವದಿಲ್ಲ. ಯಾವನು ಇಲ್ಲಿ ಬೇರೆಬೇರೆಯಾಗಿದ್ದಂತೆ ಕಾಣುವನೋ ಅವನು ಮೃತ್ಯುವಿನಿಂದ ಮೃತ್ಯುವನ್ನು ಪಡೆಯುತ್ತಾನೆ.

(ಭಾಷ್ಯ)

೧೦೩ ಪ್ರಾಗೇಕತ್ವವಿಜ್ಞಾನಾತ್ ಆಚಾರ್ಯಾಗಮಸಂಸ್ಕೃತೇನ ಮನಸೈವ ಇದಂ ಬ್ರಹ್ಮ ಏಕರಸಮ್ ಆಪ್ತವ್ಯಮ್ "ಆತ್ಮೈವ ನಾನ್ಯದಸ್ತಿ" ಇತಿ। ಆಪ್ತೇ ಚ ನಾನಾತ್ವಪ್ರತ್ಯುಪಸ್ಥಾಪಿಕಾಯಾ ಅವಿದ್ಯಾಯಾ ನಿವೃತ್ತತ್ವಾತ್ ಇಹ ಬ್ರಹ್ಮಣಿ ನಾನಾ ನಾಸ್ತಿ ಕಿಞ್ಚನ ಅಣುಮಾತ್ರಮಪಿ। ಯಸ್ತು ಪುನರವಿದ್ಯಾತಿಮಿರದೃಷ್ಟಿಂ ನ ಮುಞ್ಚತಿ ನಾನಾ ಇವ ಪಶ್ಯತಿ ಸಃ ಮೃತ್ಯೋಃ ಮೃತ್ಯುಂ ಗಚ್ಛತ್ಯೇವ ಸ್ವಲ್ಪಮಪಿ ಭೇದಮಧ್ಯಾರೋಪಯನ್ ಇತ್ಯರ್ಥಃ ॥

(ಭಾಷ್ಯಾರ್ಥ)

(ಇದು) ಒಂದೇ ಎಂದು ಅರಿತುಕೊಳ್ಳುವದಕ್ಕೆ ಮುಂಚೆ[1] **ಆಚಾರ್ಯ, ಶಾಸ್ತ್ರ-ಇವುಗಳಿಂದ ಸಂಸ್ಕಾರವನ್ನು ಹೊಂದಿದ[2] ಮನಸ್ಸಿನಿಂದಲೇ** ಒಂದೇ ರೂಪವಾಗಿರುವ ಈ ಬ್ರಹ್ಮವು "(ಇದು) ಆತ್ಮನೇ, (ಇದಕ್ಕಿಂತ) ಬೇರೊಂದಿಲ್ಲ" ಎಂದು ಪಡೆಯಲ್ಪಡಬೇಕು. **ಹಾಗೆ ಪಡೆದುಕೊಂಡಮೇಲೆ ಭೇದವನ್ನು ಕಲ್ಪಿಸುವ ಅವಿದ್ಯೆಯು ಹೋಗಿಬಿಟ್ಟಿರುವದರಿಂದ ಈ ಬ್ರಹ್ಮದಲ್ಲಿ ಸ್ವಲ್ಪವೂ ಅಣುಮಾತ್ರವೂ ಭೇದವಿರುವದಿಲ್ಲ.**[3]

1. ಬ್ರಹ್ಮವನ್ನು ಅರಿಯುವ ಮುಂಚೆ ಅರಿಯುವವನು, ಅರಿಯುವ ಸಾಧನ, ಅರಿಯಲ್ಪಡಬೇಕಾದ ಬ್ರಹ್ಮ ಎಂಬ ಭೇದವಿರುತ್ತದೆ. ಇದು ವ್ಯಾವಹಾರಿಕ ಭೇದ, ಪರಮಾರ್ಥವಲ್ಲ.

2. ಇಲ್ಲಿ ಆಗಮವೆಂದರೆ ಶಾಸ್ತ್ರವೇ. "ಮನಸೈವಾನುದ್ರಷ್ಟವ್ಯಮ್" ಎಂಬ ವಾಕ್ಯಕ್ಕೆ ಗೀ. ಭಾ. ೨-೨೧, ಬೃ. ಭಾ. ೪-೪-೧೯ರಲ್ಲಿ ಕೊಟ್ಟಿರುವ ವಿವರವನ್ನು ಹೋಲಿಸಿ.

3. ಅವಿದ್ಯೆಯಿಂದ ತೋರುತ್ತಿದ್ದ ಭೇದವು ಹೋಗಿಬಿಟ್ಟಿರುತ್ತದೆ, ಪಡೆಯತಕ್ಕವನೂ ಪಡೆಯಲ್ಪಡತಕ್ಕದ್ದೂ ಒಂದಾಗಿರುತ್ತವೆ. ಸೂ. ಭಾ. ೧-೧-೪ ರ ಕೊನೆಯಲ್ಲಿರುವ ಶ್ಲೋಕವನ್ನು ನೋಡಿ.

ಆದರೆ ಯಾವನು ಅವಿದ್ಯೆಯೆಂಬ ಕಣ್ಣುಪರೆಯ ದೃಷ್ಟಿಯನ್ನು ಬಿಟ್ಟುಕಳೆಯದೆ ಭೇದವಿದ್ದಂತೆ ಕಾಣುತ್ತಿರುವನೋ ಅವನು ಮೃತ್ಯುವಿನಮೇಲೆ ಮೃತ್ಯುವನ್ನು ಹೊಂದುತ್ತಲೇ ಇರುವನು, ಒಂದಿಷ್ಟು ಭೇದವನ್ನು ಕಲ್ಪಿಸಿಕೊಂಡರೂ (ಅಷ್ಟು ಮಾತ್ರದಿಂದಲೇ ಸಾವಿನಮೇಲೆ ಸಾವನ್ನು ಪಡೆಯುತ್ತಿರುವನು) ಎಂದರ್ಥ.

(ಭಾಷ್ಯ)

೧೨೪. ಪುನರಪಿ ತದೇವ ಪ್ರಕೃತಂ ಬ್ರಹ್ಮಾಹ—

(ಭಾಷ್ಯಾರ್ಥ)

ಮತ್ತೂ ಅದೇ ಪ್ರಕೃತವಾದ[1] ಬ್ರಹ್ಮವನ್ನು ಹೇಳುತ್ತಾನೆ —

ಅಙ್ಗುಷ್ಠಮಾತ್ರಃ ಪುರುಷೋ
ಮಧ್ಯ ಆತ್ಮನಿ ತಿಷ್ಠತಿ।
ಈಶಾನಂ ಭೂತಭವ್ಯಸ್ಯ
ನ ತತೋ ವಿಜುಗುಪ್ಸತೇ। ಏತದ್ವೈ ತತ್ ॥ ೧೨ ॥

೧೨. ಅಂಗುಷ್ಠಮಾತ್ರನಾದ ಪುರುಷನು ಆತ್ಮದ ಮಧ್ಯದಲ್ಲಿರುತ್ತಿರುವನು. ಭೂತಕ್ಕೂ ಭವಿಷ್ಯತ್ತಿಗೂ ಇವನು ಒಡೆಯನು (ಎಂದು ತಿಳಿದರೆ) ಆಮೇಲೆ ಕಾಪಾಡಿಕೊಳ್ಳುವದಕ್ಕೆ ಇಚ್ಛಿಸುವದಿಲ್ಲ. ಇದೇ ಅದು.

(ಭಾಷ್ಯ)

೧೨೫. ಅಙ್ಗುಷ್ಠಮಾತ್ರಃ ಅಙ್ಗುಷ್ಠಪರಿಮಾಣಃ। ಅಙ್ಗುಷ್ಠಪರಿಮಾಣಂ ಹೃದಯಪುಣ್ಡರೀಕಮ್। ತಚ್ಛಿದ್ರವರ್ತ್ಯನ್ತಃಕರಣೋಪಾಧಿರಙ್ಗುಷ್ಠಮಾತ್ರಃ। ಅಙ್ಗುಷ್ಠಮಾತ್ರವಂಶಪರ್ವಮಧ್ಯವರ್ತ್ಯಂಬರವತ್। ಪುರುಷಃ ಪೂರ್ಣಮನೇನ ಸರ್ವಮಿತಿ। ಮಧ್ಯೇ ಆತ್ಮನಿ ಶರೀರೇ ತಿಷ್ಠತಿ ಯಃ ತಮ್ ಆತ್ಮಾನಮ್ ಈಶಾನಂ ಭೂತಭವ್ಯಸ್ಯ ವಿದಿತ್ವಾ "ನ ತತಃ" ಇತ್ಯಾದಿ ಪೂರ್ವವತ್ ॥

---

1. ಇಲ್ಲಿ ೧೩ ಮತ್ತು ೧೫ ನೆಯ ಮಂತ್ರಗಳಲ್ಲಿ ಆತ್ಮನನ್ನು ಅಂಗುಷ್ಠಮಾತ್ರನೆಂದು ಹೇಳಿದ್ದರೂ ಆತ್ಮನ ಗಾತ್ರವನ್ನು ಹೇಳುವದಕ್ಕೆ ಬಂದ ಶ್ರುತಿಯಿದಲ್ಲ; ಪ್ರಕೃತವಾದ ಬ್ರಹ್ಮವನ್ನು ತಿಳಿಸುವದಕ್ಕೆಂದೇ ಬಂದಿದೆ. ನಮ್ಮ ಆತ್ಮನು ಉಪಾಧಿಯಿಂದ ಚಿಕ್ಕವನಾಗಿ ತೋರಿದರೂ ಪರಮಾರ್ಥವಾಗಿ ತ್ರಿಕಾಲಾತೀತನಾದ ಪರಮಾತ್ಮನೇ ಎಂಬುದನ್ನು ತಿಳಿಸುವದೇ ವಾಕ್ಯದ ಅರ್ಥ. ಸೂ. ಭಾ. ೧-೩-೨೪, ೨೫ ನೋಡಿರಿ.

(ಭಾಷ್ಯಾರ್ಥ)

ಅಂಗುಷ್ಠಮಾತ್ರನು ಎಂದರೆ ಹೆಬ್ಬೆರಳಿನ ಗಾತ್ರದವನು. ಹೃದಯಕಮಲವು ಹೆಬ್ಬೆರಳಿನ ಗಾತ್ರವಾಗಿರುವದು, ಅದರ ಪೊಳ್ಳಿನಲ್ಲಿರುವ ಅಂತಃಕರಣವೆಂಬ ಉಪಾಧಿಯುಳ್ಳ ಆತ್ಮನು ಅಂಗುಷ್ಠಮಾತ್ರದವನು ಹೆಬ್ಬೆರಳಿನ ಪರಿಮಾಣದ ಬಿದಿರಿನ ಗೆಣ್ಣಿನ ಒಳಗಿರುವ ಆಕಾಶವು ಹೇಗೆ (ಅಷ್ಟೇ ಪರಿಮಾಣದ್ದೆಂದು ಭಾವಿಸಲ್ಪಡುವದೋ ಅದ) ರಂತೆಯೇ[1] (ಇದು). **ಎಲ್ಲವನ್ನೂ ತುಂಬಿಕೊಂಡಿರುವದರಿಂದ (ಇವನು) ಪುರುಷ (ನೆನಿಸುವ)ನು.** ಆತ್ಮದ ಎಂದರೆ ಶರೀರದ ಮಧ್ಯದಲ್ಲಿ ಇರುತ್ತಿರುವನಲ್ಲ, ಆ ಆತ್ಮನನ್ನು ಭೂತಭವಿಷ್ಯತ್ತುಗಳ ಒಡೆಯನು ಎಂದು ತಿಳಿದುಕೊಂಡರೆ "ಆಮೇಲೆ (ಕಾಪಾಡಿಕೊಳ್ಳುವದಕ್ಕೆ ಇಚ್ಛಿಸುವ)ದಿಲ್ಲ" ಎಂಬುದೇ ಮುಂತಾದ ವಾಕ್ಯದ ಅಭಿಪ್ರಾಯವನ್ನು ಹಿಂದಿನಂತೆಯೇ[2] (ಅರಿಯಬೇಕು)

ಅಙ್ಗುಷ್ಠಮಾತ್ರಃ ಪುರುಷೋ
ಜ್ಯೋತಿರಿವಾಧೂಮಕಃ ।
ಈಶಾನೋ ಭೂತಭವ್ಯಸ್ಯ
ಸ ಏವಾದ್ಯ ಸ ಉ ಶ್ವಃ । ಏತದ್ವೈ ತತ್ ॥ ೧೩ ॥

೧೩. ಅಂಗುಷ್ಠಮಾತ್ರನಾವ ಪುರುಷನು ಹೊಗೆಯಿಲ್ಲದ ಜ್ಯೋತಿಯಂತೆ (ಇರುವನು). ಭೂತಕ್ಕೂ ಭವಿಷ್ಯತ್ತಿಗೂ ಒಡೆಯನು ಈಗಲೂ ಆತನೇ ನಾಳೆಯೂ ಆತನೇ. ಇದೇ ಅದು.

(ಭಾಷ್ಯ)

೧೩. ಕಿಂ ಚ ಅಙ್ಗುಷ್ಠಮಾತ್ರಃ ಪುರುಷಃ **ಜ್ಯೋತಿರಿವ ಅಧೂಮಕಃ** ಅಧೂಮಕಮ್ ಇತಿ ಯುಕ್ತಂ ಜ್ಯೋತಿಃಪರತ್ವಾತ್। ಯಸ್ತ್ವೇವಂ ಲಕ್ಷಿತೋ ಯೋಗಿಭಿರ್ಹೃದಯೇ ಈಶಾನಃ ಭೂತಭವ್ಯಸ್ಯ ಸ ಏವ ನಿತ್ಯಃ ಕೂಟಸ್ಥಃ ಅದ್ಯ ಇದಾನೀಂ ಪ್ರಾಣೇಷು ವರ್ತಮಾನಃ ಸ ಉ ಶ್ವೋಽಪಿ ವರ್ತಿಷ್ಯತೇ ನಾನ್ಯಸ್ತತ್ಸಮೋಽನ್ಯಶ್ಚ ಜನಿಷ್ಯತೇ ಇತ್ಯರ್ಥಃ। ಅನೇನ "ನಾಯಮುಸ್ತೀತಿ ಚೈಕೇ" (೧-೧-೨೦) ಇತ್ಯಯಂ ಪಕ್ಷೋ ನ್ಯಾಯತೋಽಪ್ರಾಪ್ತೋಽಪಿ ಸ್ವವಚನೇನ ಶ್ರುತ್ಯಾ ಪ್ರತ್ಯುಕ್ತಃ। ತಥಾ ಕ್ಷಣಭಙ್ಗವಾದಶ್ಚ ॥

---

1. ಉಪಾಧಿಯಿಂದ ಪರಿಮಾಣವುಳ್ಳದ್ದಾಗಿ ತೋರಿದರೂ ಅನಂತವಾಗಿರುವಂತೆಯೇ.
2. ೨-೧-೫ ರ ಭಾಷ್ಯದಲ್ಲಿ ವಿವರಿಸಿರುವಂತೆಯೇ.

(ಭಾಷ್ಯಾರ್ಥ)

ಮತ್ತು ಅಂಗುಷ್ಠಮಾತ್ರನಾದ (ಈ) ಪುರುಷನು ಹೊಗೆಯಿಲ್ಲದ ಜ್ಯೋತಿಯಂತೆ (ಇರುವನು). 'ಅಧೂಮಕಃ' ಎಂಬುದು ಅಧೂಮಕಮ್ ಎಂದಿರಬೇಕು; ಏಕೆಂದರೆ (ಇದು) ಜ್ಯೋತಿ (ಎಂಬ ನಪುಂಸಕಲಿಂಗದ ಶಬ್ದಕ್ಕೆ) ವಿಶೇಷಣವಾಗಿರುತ್ತದೆ. ಯಾವನು ಈ ರೂಪದಲ್ಲಿ ಯೋಗಿಗಳಿಗೆ ಹೃದಯದಲ್ಲಿ ಕಾಣಿಸಿಕೊಳ್ಳುತ್ತಾನೋ ಆತನೇ ಭೂತಭವಿಷ್ಯತ್ತಿಗೂ ಒಡೆಯನು, ಕೂಟಸ್ಥನಿತ್ಯನಾದ ಅವನೇ ಈಗಲೂ ಇಂದೂ ಪ್ರಾಣಿಗಳಲ್ಲಿ ಇರುವವನು. ಅವನೇ ನಾಳೆಯೂ ಇರುವನೇ ಹೊರತು ಅವನಂಥವನು ಮತ್ತೊಬ್ಬನು ಹುಟ್ಟುವದಿಲ್ಲ ಎಂದರ್ಥ.[1]

ಈ (ಮಂತ್ರ) ದಿಂದ "ಇವನು ಇರುವದಿಲ್ಲವೆಂದು ಕೆಲವರು (ಹೇಳುತ್ತಾರೆ)," (೧-೧-೨೦) ಎಂಬ ಪಕ್ಷವು ಯುಕ್ತಿಗೆ ಹೊಂದುವದಿಲ್ಲವಾದರೂ[2] ಅದನ್ನು ಶ್ರುತಿಯು ತನ್ನ ಮಾತಿನಿಂದಲೇ ತಿರಸ್ಕಾರಮಾಡಿದಂತಾಯಿತು. ಹೀಗೆಯೇ ಕ್ಷಣಭಂಗವಾದವನ್ನೂ (ತಿರಸ್ಕಾರಮಾಡಿದಂತಾಯಿತು).[3]

ಜ್ಞಾನಾಜ್ಞಾನಗಳಿಗೆ ಫಲ

ಯಥೋದಕಂ ದುರ್ಗೇ ವೃಷ್ಟಂ
ಪರ್ವತೇಷು ವಿಧಾವತಿ।
ಏವಂ ಧರ್ಮಾನ್ ಪೃಥಕ್ಪಶ್ಯಂ-
ಸ್ತಾನೇವಾನುವಿಧಾವತಿ ॥ ೧೪ ॥

೧೪. ದುರ್ಗದಲ್ಲಿ ಮಳೆ ಹುಯ್ದು ನೀರು ಪರ್ವತಗಳಲ್ಲಿಯೇ ಹೇಗೆ ಹರಿದು ಹೋಗುತ್ತದೆಯೋ ಇದರಂತೆ ಧರ್ಮರುಗಳನ್ನು ಬೇರೆಯೆಂದು ಕಾಣುವಾತನು ಅವರನ್ನೇ ಅನುಸರಿಸಿ ಓಡುತ್ತಿರುವನು.

---

1. ಅವನೇ ಇಂದು, ಅವನೇ ನಾಳೆ—ಎಂದು ಅವಧಾರಣೆಮಾಡಿದ್ದರಿಂದ ನಿನ್ನೆ ಇದ್ದ ಆತ್ಮನು ಬೇರೆ, ಇಂದು ಇರುವವನು ಬೇರೆ—ಎಂಬ ಮತವು ಅಯಕ್ತವೆಂದು ಹೇಳಿದಂತಾಯಿತು—ಎಂದು ಭಾವ.

2. ಆತ್ಮನು ಇರುವದಿಲ್ಲ ಎಂಬ ಪಕ್ಷದಲ್ಲಿ ಶರೀರಕ್ಕಿಂತ ಬೇರೆ ಆತ್ಮನಿಲ್ಲವೆಂಬ ಚಾರ್ವಾಕವಾದ, ಯಾವದೊಂದಕ್ಕೂ ಹುರುಳಿಲ್ಲವೆಂಬ ಶೂನ್ಯವಾದ, ಕ್ಷಣಕ್ಕೊಂದು ವಿಜ್ಞಾನವು ಹುಟ್ಟುತ್ತದೆ ಎಂಬ ಬೌದ್ಧವಾದ—ಈ ಮೂರೂ ಸೇರಿಕೊಂಡಿವೆ. ನಿಸ್ಸಾಕ್ಷಿಕವಾಗಿ ಯಾವದೊಂದೂ ಸಿದ್ಧವಾಗುವದಿಲ್ಲವಾದ್ದರಿಂದಲೂ ಅವನೇ ನಾನು ಎಂಬ ಪ್ರತ್ಯಭಿಜ್ಞೆ ಇರುವದರಿಂದಲೂ ಇವುಗಳೆಲ್ಲವೂ ಯುಕ್ತಿವಿರುದ್ಧವಾಗಿವೆ.

3. ಯುಕ್ತಿವಿರುದ್ಧವಾದದ್ದನ್ನು ಶ್ರುತಿಯು ತಾನು ಸ್ಪಷ್ಟವಾಗಿ ತಿರಸ್ಕರಿಸಿದೆ ಎಂದು ಭಾವ.

(ಭಾಷ್ಯ)

೧೨೭. ಪುನರಪಿ ಭೇದದರ್ಶನಾಪವಾದಂ ಬ್ರಹ್ಮಣ ಆಹ–ಯಥಾ ಉದಕೇ ದುರ್ಗೇ ದುರ್ಗಮೇ ದೇಶೇ ಉಚ್ಚ್ರಿತೇ ವೃಷ್ಟಂ ಸಿಕ್ತಂ ಪರ್ವತೇಷು ಪರ್ವತ್ಸು ನಿಮ್ನಪ್ರದೇಶೇಷು ವಿಧಾವತಿ ವಿಕೀರ್ಣಂ ಸದ್ ವಿನಶ್ಯತಿ ಏವಂ ಧರ್ಮಾನ್ ಆತ್ಮನಃ ಭಿನ್ನಾನ್ ಪೃಥಕ್ ಪಶ್ಯನ್ ಪೃಥಗೇವ ಪ್ರತಿಶರೀರಂ ಪಶ್ಯನ್ ತಾನೇವ ಶರೀರಭೇದಾನುವರ್ತಿನಃ ಅನುವಿಧಾವತಿ । ಶರೀರಭೇದಮೇವ ಪೃಥಕ್ ಪುನಃ ಪುನಃ ಪ್ರತಿಪದ್ಯತೇ ಇತ್ಯರ್ಥಃ ॥

(ಭಾಷ್ಯಾರ್ಥ)

ಬ್ರಹ್ಮದಲ್ಲಿ ಭೇದವನ್ನು ಕಾಣಬಾರದೆಂಬುದನ್ನು ಮತ್ತೂ ಹೇಳುತ್ತಿದಾನೆ. ಹೇಗೆ ದುರ್ಗದಲ್ಲಿ ಎಂದರೆ ದುರ್ಗಮವಾದ ಎತ್ತರವಾದ ಸ್ಥಳದಲ್ಲಿ ಮಳೆಹುಯ್ದು, ಸುರಿದ ನೀರು ಪರ್ವತಗಳಲ್ಲಿ ಎಂದರೆ ಪರ್ವತಗಳಿರುವ ತಗ್ಗಾದ ತಪ್ಪಲುಗಳಲ್ಲಿ ಹರಿದು ಹೋಗುತ್ತದೆಯೋ ಎಂದರೆ ಚದರಿ ನಾಶವಾಗುತ್ತದೆಯೋ, ಇದರಂತೆ **ಧರ್ಮರುಗಳನ್ನು** ಎಂದರೆ ಆತ್ಮರುಗಳನ್ನು ಬೇರ ಎಂದು[1] ಪೃಥಕ್ಕಾಗಿ ಕಾಣುವವನು ಒಂದೊಂದು ಶರೀರಕ್ಕೂ ಬೇರೆಬೇರೆಯಾಗಿರುವರು ಎಂದು ತಿಳಿದವನು ಅವರನ್ನೇ ಎಂದರೆ ಬೇರೆಬೇರೆಯ ಶರೀರವನ್ನನುಸರಿಸಿರುವವರನ್ನೇ ಅನುಸರಿಸಿ ಓಡುತ್ತಿರುವನು. ಮತ್ತೂ ಮತ್ತೂ ಬೇರೆಬೇರೆಯ ಶರೀರವನ್ನೇ[2] ಹೊಂದುತ್ತಿರುವನು ಎಂದರ್ಥ.

(ಭಾಷ್ಯ)

೧೨೮. ಅಸ್ಯ ಪುನರ್ವಿದ್ಯಾವತೋ ವಿಧ್ವಸ್ತೋಪಾಧಿಕೃತಭೇದದರ್ಶನಸ್ಯ ವಿಶುದ್ಧವಿಜ್ಞಾನೈಕರಸಮದ್ವಯಮಾತ್ಮಾನಂ ಪಶ್ಯತೋ ವಿಜಾನತೋ ಮುನೇರ್ಮನನಶೀಲಸ್ಯ ಆತ್ಮಸ್ವರೂಪಂ ಕಥಂ ಸಂಭವತೀತಿ ? ಉಚ್ಯತೇ—

(ಭಾಷ್ಯಾರ್ಥ)

ಆದರೆ ಉಪಾಧಿಯಿಂದಾಗಿರುವ ಭೇದಗಳ ಜ್ಞಾನವನ್ನು ನಾಶಪಡಿಸಿಕೊಂಡು ಅತಿಶುದ್ಧವಾದ ಬರಿಯ ವಿಜ್ಞಾನವೆಂಬ ಒಂದೇ ರೂಪಲ್ಲಿರುವ ತನಗೆರಡನೆಯದಿ

---

1. " ಆತ್ಮನೋಽಭಿನ್ನಾನ್ " ಎಂದರೆ ತನಗಿಂತ ಬೇರೆಯಿಲ್ಲದವನು ಎಂದರ್ಥವಾಗುವದು. ಈ (ವಾ॥) ಪಾಠಕ್ಕಿಂತ ನಾವು ಇಟ್ಟುಕೊಂಡಿರುವ (ಆ॥) ಪಾಠದಲ್ಲಿ " ಆತ್ಮರುಗಳು ಒಬ್ಬರಿಗಿಂತ ಒಬ್ಬರು ಬೇರೆಯಾಗಿಯೂ ಬೇರೆಬೇರೆ ಸ್ವಭಾವದವರೂ ಆಗಿರುವರೆಂದು ತಿಳಿದವನು " ಎಂಬ ವಿಶೇಷಾರ್ಥವು ಹೊರಡುತ್ತದೆ.

2. ಶರೀರಗಳೆಂಬ ಉಪಾಧಿಯ ಕಡೆಗೆ ಹೆಚ್ಚಿನ ಲಕ್ಷ್ಯವನ್ನಿಟ್ಟಿದ್ದರ ಫಲವಾಗಿ ಬೇರೆಬೇರೆಯ ಶರೀರಗಳನ್ನೇ ಪಡೆಯುತ್ತಿರುವನು ಎಂದು ಭಾವ.

ಲ್ಲದ ಆತ್ಮನನ್ನು ಕಂಡು ಅರಿತುಕೊಂಡು ಮುನಿಯಾಗಿ ಎಂದರೆ ಮನನಶೀಲನಾಗಿರುವ ಈ ಜ್ಞಾನಿಗೆ[1] ಆತ್ಮಸ್ವರೂಪವು ಹೇಗಾಗುವದು[2]? ಎಂದರೆ ಹೇಳುತ್ತಾನೆ:–

ಯಥೋದಕಂ ಶುದ್ಧೇ ಶುದ್ಧ-
ಮಾಸಿಕ್ತಂ ತಾದೃಗೇವ ಭವತಿ ।
ಏವಂ ಮುನೇರ್ವಿಜಾನತ
ಆತ್ಮಾ ಭವತಿ ಗೌತಮ ॥ ೧೫ ॥

೧೫. ಹೇಗೆ ಶುದ್ಧವಾದ (ನೀರಿನಲ್ಲಿ) ಚೆಲ್ಲಿದ ಶುದ್ಧವಾದ ನೀರು ಅದರಂತೆಯೇ ಆಗುವದೋ ಇದರಂತೆಯೇ, ಎಲೈ ಗೌತಮನೆ, ತಿಳಿದ ಮುನಿಯ ಆತ್ಮನೂ ಆಗುವನು.

(ಭಾಷ್ಯ)

೧೧೯ ಯಥಾ ಉದಕಂ ಶುದ್ಧೇ ಪ್ರಸನ್ನೇ ಶುದ್ಧಂ ಪ್ರಸನ್ನಂ ಆಸಿಕ್ತಂ ಪ್ರಕ್ಷಿಪ್ತಂ ಏಕರಸಮೇವ ನಾನ್ಯಥಾ ತಾದೃಗೇವ ಭವತಿ । ಆತ್ಮಾಪ್ಯೇವಮೇವ ಭವತಿ ಏಕತ್ವಂ ವಿಜಾನತೋ ಮುನೇಃ ಮನನಶೀಲಸ್ಯ ಹೇ ಗೌತಮ । ತಸ್ಮಾತ್ ಕುತಾರ್ಕಿಕಭೇದದೃಷ್ಟಿಂ ನಾಸ್ತಿಕಕುದೃಷ್ಟಿಂ ಚೋಜ್ಝಿತ್ವಾ ಮಾತೃಪಿತೃಸಹಸ್ರೇಭ್ಯೋಽಪಿ ಹಿತೈಷಿಣಾ ವೇದೇನೋಪದಿಷ್ಟಮ್ ಆತ್ಮೈಕತ್ವಂ ಶಾನ್ತದರ್ಪೈರಾದರಣೀಯಮಿತ್ಯರ್ಥಃ ॥

(ಭಾಷ್ಯಾರ್ಥ)

ಹೇಗೆ ಶುದ್ಧವಾದ ತಿಳಿಯಾದ (ನೀರಿನಲ್ಲಿ) ಶುದ್ಧವಾದ ತಿಳಿಯಾದ ನೀರನ್ನು ಚೆಲ್ಲಿದರೆ ಹಾಕಿದರೆ ಒಂದೇ ರೂಪವಾಗಿರುವದೋ ಬೇರೆಯಾಗದೆ ಇರುವದೋ ಅದರಂತೆಯೇ ಆಗಿಬಿಡುವದೋ, ಎಲೈ ಗೌತಮನೆ, ಏಕತ್ವವನ್ನು ಅರಿತು ಮನನಮಾಡುತ್ತಿರುವ[3] ಮುನಿಯ ಆತ್ಮನೂ ಇದರಂತೆಯೇ ಆಗಿರುವನು.

---

1. ಅಸ್ಯ ಎಂಬುದರ ಬದಲು ಯಸ್ಯ ಎಂಬ (ಆ॥) ಪಾಠವಿರುವಾಗ "ಯಾವ ಜ್ಞಾನಿಯು ಮನನಶೀಲನಾಗಿರುವನೋ" ಅವನಿಗೆ (ತಸ್ಯ) ಎಂದು ಕನ್ನಡಿಸಬೇಕು

2. ಜ್ಞಾನದಿಂದ ನೋಡಿದಾಗ ಹೇಗೆ ಕಾಣುವದು? ಎಂದು ಅರ್ಥ.

3. ನೀರಿನಲ್ಲಿ ನೀರನ್ನು ಸುರಿಯುವಂತೆ ಜೀವಾತ್ಮನ್ನು ಪರಮಾತ್ಮನಲ್ಲಿ ಸೇರಿಸಬೇಕಾದದ್ದೇನೂ ಇರುವದಿಲ್ಲ ಸಂಸಾರಿಯಾಗಿ ತೋರುತ್ತಿರುವ ಈಗಿನ ರೂಪವು ಮಿಥ್ಯೆಯೆಂತಲೂ ನಿಜವಾಗಿರುವ ರೂಪವು ಬ್ರಹ್ಮವೇ ಎಂತಲೂ ತಿಳಿದುಕೊಳ್ಳುವದೇ ಸಾಯುಜ್ಯವು. ಭೇದವಿರುವದಿಲ್ಲವೆಂದು ತಿಳಿಸುವಮಟ್ಟಿಗೆ ದೃಷ್ಟಾಂತವನ್ನು ಅನ್ವಯಿಸಿಕೊಳ್ಳಬೇಕು.

ಆದ್ದರಿಂದ ಕೆಟ್ಟ ತಾರ್ಕಿಕರ[1] ಭೇದ ದೃಷ್ಟಿಯನ್ನೂ ನಾಸ್ತಿಕರ ಕುದೃಷ್ಟಿಯನ್ನೂ[2] ಬಿಟ್ಟು ಸಾವಿರ ತಂದೆತಾಯಿಗಳಿಗಿಂತಲೂ ಹೆಚ್ಚಾಗಿ ನಮಗೆ ಹಿತವನ್ನು ಬಯಸುತ್ತಿರುವ ವೇದವು ಉಪದೇಶಮಾಡುತ್ತಿರುವ ಆತ್ಮೈಕತ್ವದರ್ಶನವನ್ನೇ ಶಾಂತದರ್ಪರಾಗಿ ಆದರಿಸಬೇಕು ಎಂದು ಅರ್ಥ.[3]

ಎರಡನೆಯ ಅಧ್ಯಾಯ—ಎರಡನೆಯ ವಲ್ಲಿ

(ಭಾಷ್ಯ)

೧೩೦. ಪುನರಪಿ ಪ್ರಕಾರಾನ್ತರೇಣ ಬ್ರಹ್ಮತತ್ತ್ವನಿರ್ಧಾರಣಾರ್ಥೋಽಯಮಾರಮ್ಭಃ। ದುರ್ವಿಜ್ಞೇಯತ್ವಾದ್ ಬ್ರಹ್ಮಣಃ॥

(ಭಾವಾರ್ಥ)

ಬ್ರಹ್ಮವನ್ನು ಅರಿತುಕೊಳ್ಳುವದು ಕಷ್ಟವಾದ್ದರಿಂದ ಮತ್ತೂ ಬೇರೊಂದು ಪ್ರಕಾರದಿಂದ ಬ್ರಹ್ಮತತ್ತ್ವವನ್ನು ಗೊತ್ತುಪಡಿಸಬೇಕೆಂದು (ಈ ವಲ್ಲಿಯನ್ನು) ಆರಂಭಿಸಿರುತ್ತದೆ.

ಶಾರೀರಾತ್ಮನ ನಿಜವನ್ನು ಅರಿತರೆ ಮುಕ್ತಿ

ಪುರಮೇಕಾದಶದ್ವಾರ-
ಮಜಸ್ಯಾವಕ್ರಚೇತಸಃ।
ಅನುಷ್ಠಾಯ ನ ಶೋಚತಿ
ವಿಮುಕ್ತಶ್ಚ ವಿಮುಚ್ಯತೇ। ಏತದ್ವೈ ತತ್॥ ೧॥

೧. ಹನ್ನೊಂದು ಬಾಗಿಲಿನ ಪುರವು ಅಜನೂ ವಕ್ರವಲ್ಲದ ಚೇತಸ್ಸುಳ್ಳವನೂ (ಆದ ಆತ್ಮನ)ದು. ಅನುಷ್ಠಾನಮಾಡಿದರೆ ಶೋಕಿಸುವದಿಲ್ಲ. ವಿಮುಕ್ತನಾಗಿ ವಿಮುಕ್ತನಾಗುವನು ಇದೇ ಅದು.

---

1. ಒಂದೊಂದು ಶರೀರಕ್ಕೂ ಒಬ್ಬೊಬ್ಬ ಆತ್ಮನು ಬೇರೆಬೇರೆಯಾಗಿರಬೇಕೆಂದು ಊಹಿಸುವುದು ಕೆಟ್ಟತರ್ಕವು. ಏಕೆಂದರೆ ಆತ್ಮನಿಗೆ ಶರೀರಸಂಬಂಧವಿರುವದೆಂಬುದಕ್ಕೆ ಪ್ರಮಾಣವಿಲ್ಲ

2. ಚಾರ್ವಾಕರ, ಕ್ಷಣಿಕವಾದಿಗಳ ಮತ್ತು ಶೂನ್ಯವಾದಿಗಳ ಮತವು ವೇದವಿರುದ್ಧವಾದ್ದರಿಂದ ಕುದೃಷ್ಟಿ ಮನು. ೧೨-೯೫

3 ದರ್ಪವು ಆತ್ಮದರ್ಶನಕ್ಕೆ ಅಡ್ಡಿ.

(ಭಾಷ್ಯ)

೧೩೧. ಪುರಂ ಪುರಮಿವ ಪುರಮ್ । ದ್ವಾರದ್ವಾರಪಾಲಾಧಿಷ್ಠಾತ್ರಾದ್ಯನೇಕ ಪುರೋಪಕರಣಸಮ್ಪತ್ತಿದರ್ಶನಾತ್ ಶರೀರಂ ಪುರಮ್ । ಪುರಂ ಚ ಸೋಪಕರಣಂ ಸ್ವಾತ್ಮನಾಸಂಹತಸ್ವತನ್ತ್ರಸ್ವಾಮ್ಯರ್ಥಂ ದೃಷ್ಟಮ್ । ತಥೇದಂ ಪುರಸಾಮಾನ್ಯಾತ್ ಅನೇಕೋಪಕರಣಸಂಹತಂ ಶರೀರಂ ಸ್ವಾತ್ಮನಾ ಅಸಂಹತರಾಜಸ್ಥಾನೀಯ ಸ್ವಾಮ್ಯರ್ಥಂ ಭವಿತುಮರ್ಹತಿ । ತಚ್ಚೈತದಂ ಶರೀರಾಖ್ಯಂ ಪುರಮ್ ಏಕಾದಶ ದ್ವಾರಮ್ ಏಕಾದಶದ್ವಾರಾಣ್ಯಸ್ಯ ಸಪ್ತ ಶೀರ್ಷಣ್ಯಾನಿ, ನಾಭ್ಯಾ ಸಹಾವಾರ್ಞ್ಚಿ ತ್ರೀಣಿ ಶಿರಸ್ಯೇಕಮ್ । ತೈರೇಕಾದಶದ್ವಾರಂ ಪುರಮ್ । ಕಸ್ಯ ? ಅಜಸ್ಯ ಜನ್ಮಾದಿ ವಿಕ್ರಿಯಾರಹಿತಸ್ಯ ಆತ್ಮನೋ ರಾಜಸ್ಥಾನೀಯಸ್ಯ ಪುರಧರ್ಮವಿಲಕ್ಷಣಸ್ಯ । ಅವಕ್ರ ಚೇತಸಃ ಅವಕ್ರಮ್ ಅಕುಟಿಲಮ್ ಆದಿತ್ಯಪ್ರಕಾಶವನ್ನಿತ್ಯಮೇವಾವಸ್ಥಿತಮ್ ಏಕ ರೂಪಂ ಚೇತೋ ವಿಜ್ಞಾನಮ್ ಅಸ್ಯ ಇತ್ಯವಕ್ರಚೇತಾಃ । ತಸ್ಯ ಅವಕ್ರಚೇತಸಃ ರಾಜಸ್ಥಾನೀಯಸ್ಯ ಬ್ರಹ್ಮಣಃ ಯಸ್ಯೇದಂ ಪುರಂ ತಂ ಪರಮೇಶ್ವರಂ ಪುರಸ್ವಾಮಿ ನಮ್ । ಅನುಷ್ಠಾಯ ಧ್ಯಾತ್ವಾ । ಧ್ಯಾನಂ ಹಿ ತಸ್ಯಾನುಷ್ಠಾನಂ ಸಮ್ಯಗ್ವಿಜ್ಞಾನ ಪೂರ್ವಕಮ್ । ತಂ ಸರ್ವೈಷಣಾವಿನಿರ್ಮುಕ್ತಃ ಸನ್ ಸಮಂ ಸರ್ವಭೂತಸ್ಥಂ ಧ್ಯಾತ್ವಾ ನ ಶೋಚತಿ । ತದ್ವಿಜ್ಞಾನಾದಭಯಪ್ರಾಪ್ತೇಃ ಶೋಕಾವಸರಾಭಾವಾತ್ ಕುತೋ ಭಯೇಕ್ಷಾ ? ಇಹೈವಾವಿದ್ಯಾಕೃತಕಾಮಕರ್ಮಬನ್ಧನೈರ್ವಿಮುಕ್ತೋ ಭವತಿ । ವಿಮುಕ್ತಶ್ಚ ಸನ್ ವಿಮುಚ್ಯತೇ ಪುನಃ ಶರೀರಂ ನ ಗೃಹ್ಣಾತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಪುರದಂತಿರುವದರಿಂದ ಪುರವು, ಬಾಗಿಲುಗಳು, ಬಾಗಿಲು ಕಾಯುವವರು, ಅವರ ಮೇಲಿನ ದಣಿಗಳು ಮುಂತಾದ [1] ಪುರಕ್ಕೆ ಬೇಕಾದ ಅನೇಕ ಪುರದ ಉಪ ಕರಣಗಳು ಸೇರಿರುವದು ಕಂಡುಬರುವದರಿಂದ ಶರೀರವು ಪುರವು. ಉಪಕರಣಗಳಿಂ ದೊಡಗೂಡಿದ ಪುರವು ತನ್ನೊಡನೆ ಸೇರಿಕೊಳ್ಳದೆ ಇರುವ ಸ್ವತಂತ್ರನಾದ ಸ್ವಾಮಿ ಗೋಸ್ಕರವಾಗಿರುವದೆಂದು [2] ಕಂಡಿದೆಯಷ್ಟೆ, ಅದರಂತೆ ಪುರದ ಹಾಗೆ ಅನೇಕ ಉಪ

---

1 ಮುಂತಾದ ಎಂದರೆ ಮಂತ್ರಿ, ಹೊಗಳುಭಟ್ಟರು-ಮುಂತಾದವರು, ಯಂತ್ರಗಳು ಕೋಟೆಕೊತ್ತಲು, ಮುಂತಾದದ್ದು-ಇವುಗಳನ್ನೂ ಗ್ರಹಿಸಬೇಕು (ಗೋ॥)

2. ಸಂಹತವಾದದ್ದು ಅಸಂಹತನಾವ ಬೇರೊಬ್ಬನಿಗೋಸ್ಕರವಿರುವದೆಂಬ ಸಾಂಖ್ಯ ಯುಕ್ತಿಯು ಭಾಷ್ಯದಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ಪ್ರ.ಭಾ. ೩-೧, ೪-೧, ಐ.ಭಾ. ೧-೩, ಕೇ. ಭಾ. ೧-೩.

ಕರಣಗಳಿಂದ[1] ಕೂಡಿಕೊಂಡಿರುವ ಈ ಶರೀರವು ತನ್ನೊಡನೆ ಸೇರಿಕೊಳ್ಳದೆ (ತನಗೆ) ರಾಜನಂತಿರುವ (ಒಬ್ಬ) ಒಡೆಯನಿಗೋಸ್ಕರ ಇರಬೇಕು ಅಂಥ ಈ ಶರೀರವೆಂಬ ಪುರವು ಹನ್ನೊಂದು ಬಾಗಿಲುಗಳುಳ್ಳದ್ದೂ, ತಲೆಯಲ್ಲಿ ಏಳು, ಹೊಕ್ಕಳೂ ಸೇರಿ ಕೆಳಗಿರುವವು ಮೂರು, ತಲೆಯಮೇಲೆ ಒಂದು–ಹೀಗೆ ಇದಕ್ಕೆ ಹನ್ನೊಂದು ಬಾಗಿಲುಗಳಿರುವವು. ಈ ಹನ್ನೊಂದು ಬಾಗಿಲುಗಳ ಪುರವು ಯಾರದು? ಎಂದರೆ, ಅಜನಾಗಿರುವ ಎಂದರೆ ಹುಟ್ಟು ಮುಂತಾದ ಮಾರ್ಪಾಡುಗಳಿಲ್ಲದ[2] (ದೃಷ್ಟಾಂತದ) ರಾಜನಂತೆ ಪುರದ ಧರ್ಮಗಳಿಗಿಂತ ಬೇರೆಯ ಸ್ವಭಾವದವನಾದ ವಕ್ರವಲ್ಲದ ಜ್ಞೇತಸ್ಸುಳ್ಳ ವಕ್ರವಲ್ಲದ್ದೆಂದರೆ ಕೊಂಕಿಲ್ಲದ್ದೂ, ಸೂರ್ಯನ ಬೆಳಕಿನಂತೆ ಯಾವಾಗಲೂ ಇರುವ ಏಕರೂಪವಾಗಿರುವ ಜ್ಞೇತಸ್ಸು ಎಂದರೆ ಚೈತನ್ಯವು ಇವನಿಗಿರುವದರಿಂದ (ಇವನು) ವಕ್ರವಲ್ಲದ ಜ್ಞೇತಸ್ಸುಳ್ಳವನು. ಹೀಗೆ ವಕ್ರವಲ್ಲದ ಜ್ಞೇತಸ್ಸುಳ್ಳ–ರಾಜನಂತಿರುವ ಬ್ರಹ್ಮವ್ದು (ಈ ಪುರವು).

ಇದು ಯಾವಾತನ ಪುರವೋ ಆ ಪುರದೊಡೆಯನಾದ ಪರಮೇಶ್ವರನನ್ನು ಅನುಷ್ಠಾನಮಾಡಿದರ ಎಂದರೆ ಧ್ಯಾನಮಾಡಿದರೆ–**ಚೆನ್ನಾಗಿ ಅರಿತುಕೊಂಡು ಧ್ಯಾನಮಾಡುವದಲ್ಲವೆ, ಆತನ ಅನುಷ್ಠಾನವು?**[3] ಆ ಸಮನೂ ಸರ್ವಭೂತಗಳಲ್ಲಿರುವವನೂ[4] ಆದ (ಪರಮಾತ್ಮನನ್ನು) ಎಲ್ಲಾ ಏಷಣೆಗಳನ್ನೂ ಬಿಟ್ಟು ಧ್ಯಾನಿಸಿದರೆ–ಶೋಕಿಸುವದಿಲ್ಲ. ಏಕೆಂದರೆ ಆತನನ್ನು ಅರಿತುಕೊಳ್ಳುವದರಿಂದ ಅಭಯವು ಸಿಕ್ಕುವದರಿಂದ[5] ಶೋಕಕ್ಕೆ ಅವಕಾಶವಿರುವದಿಲ್ಲ. (ಹೀಗಿರುವಲ್ಲ ಹೆದರಿಕೆಯನ್ನು

---

1 ನೆತ್ತಿ, ಬಾಯಿ, ಹೊಕ್ಕಳು, ಕಣ್ಣು, ಕಿವಿ, ಮೂಗು, ಬಾಯಿ, ಕೆಳಗಿನ ರಂಧ್ರಗಳು–ಇವು ದ್ವಾರಗಳು, ಇಂದ್ರಿಯಗಳು ದ್ವಾರಪಾಲಕರು, ದಿಗ್ದೇವತೆಗಳು ಮೇಲಿನ ಧಣಿಗಳು. ಚರ್ಮ, ಮಾಂಸ, ರಕ್ತ, ಮೇದಸ್ಸು, ಮಜ್ಜ, ಅಸ್ಥಿ, ನರಗಳು–ಎಂಬ ಕೋಟೆಯ ಸುತ್ತುಗಳನ್ನೂ ಮೂಲಾಧಾರದಿಂದ ಹಿಡಿದು ಆಜ್ಞಾ ಚಕ್ರದವರೆಗಿನ ಕೊತ್ತಲುಗಳನ್ನೂ ಕೀಲುಗಳೆಂಬ ಯಂತ್ರಗಳನ್ನೂ ಕೂವಲುಗಳೆಂಬ ಗೋಪುರಗಳನ್ನೂ ಗ್ರಹಿಸಬೇಕು. (ಗೋ॥).

2 ಚೈತನ್ಯವು ವೃತ್ತಿಜ್ಞಾನದಂತೆ ನಾನಾರೂಪವಾಗಿ ಅನಿತ್ಯವಾಗಿರುವದಿಲ್ಲ.

3. ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಧ್ಯಾನಮಾಡುವದು ಎಂಬ (ಗೋ॥) ವ್ಯಾಖ್ಯಾನವು ಭಾಷ್ಯಕ್ಕೆ ಸ್ವರಸವಲ್ಲ; ಜ್ಞಾನಿಯು ಆತ್ಮಚಿಂತನೆಯಲ್ಲಿಯೇ ಇರುವನು ಎಂಬುದು ಸರಳವಾದ ಅರ್ಥ.

4. ಗೀ. ೧೩-೨೭.

5. ಅಜ್ಞಾನದಿಂದ ಉಂಟಾಗಿರುವ ಸಂಸಾರಭಯವು ಜ್ಞಾನವುಂಟಾದಮೇಲೆ ಇರಲಾರದು.

ಕಾಣುವದೆಲ್ಲಿ ಬಂತು ?)[1] **ಅವಿದ್ಯೆಯಿಂದಾಗಿರುವ ಕಾಮುಕರ್ಮಗಳೆಂಬ ಬಂಧನಗಳಿಂದ ಇಲ್ಲಿಯೇ ಬಿಡುಗಡೆ ಹೊಂದುತ್ತಾನೆ.** ಹಾಗೆ ಬಿಡುಗಡೆ ಹೊಂದಿದವನಾಗಿ ವಿಮುಕ್ತನಾಗುತ್ತಾನೆ ಎಂದರೆ ಬಿಡುಗಡೆ ಹೊಂದುತ್ತಾನೆ, ಮತ್ತೆ ಶರೀರವನ್ನು ಧರಿಸುವದಿಲ್ಲ ಎಂದರ್ಥ.[2]

(ಭಾಷ್ಯ)

೧೩೨. ಸ ತು ನೈಕಪುರವರ್ತ್ಯೇವಾತ್ಮಾ, ಕಿಂ ತರ್ಹಿ ಸರ್ವಪುರವರ್ತೀ। ಕಥಮ್ ?

(ಭಾಷ್ಯಾರ್ಥ)

ಅದರೆ ಆ ಆತ್ಮನು ಒಂದೇ ಪುರದಲ್ಲಿರುವವನಲ್ಲ, ಮತ್ತೇನೆಂದರೆ ಎಲ್ಲಾ ಪುರಗಳಲ್ಲಿಯೂ ಇರುವವನು, ಹೇಗೆಂದರೆ :—

ಹಗ್ಂಸಃ ಶುಚಿಷದ್ವಸುರನ್ತರಿಕ್ಷಸದ್
ಹೋತಾ ವೇದಿಷದತಿಥಿರ್ದುರೋಣಸತ್ ।
ನೃಷದ್ವರಸದೃತಸದ್ವ್ಯೋಮಸ-
ದಬ್ಜಾ ಗೋಜಾ ಋತಜಾ ಅದ್ರಿಜಾ ಋತಂ ಬೃಹತ್ ॥ ೨ ॥

೨. ಹಂಸನು, ಶುಚಿಸದನು ; ವಸು, ಅಂತರಿಕ್ಷಸದನು ; ಹೋತೃ, ವೇದಿಷದನು ; ಅತಿಥಿ, ದುರೋಣಸದನು ; ನೃಷದನು, ವರಸದನು, ಋತಸದನು, ವ್ಯೋಮಸದನು, ಅಬ್ಜನು, ಗೋಜನು, ಋತಜನು, ಅದ್ರಿಜನು ; ಋತವು, ದೊಡ್ಡದು.

(ಭಾಷ್ಯ)

೧೩೩. ಹಂಸಃ ಹನ್ತ್ಯಗಚ್ಛತೀತಿ। ಶುಷಿಷತ್ ಶುಚೌದಿವಿ ಆದಿತ್ಯಾತ್ಮನಾ ಸೀದತೀತಿ। ವಸುಃ ವಾಸಯತಿ ಸರ್ವಾನ್ ಇತಿ। ವಾಯ್ವಾತ್ಮನಾ ಅನ್ತರಿಕ್ಷೇ ಸೀದತೀತಿ ಅನ್ತರಿಕ್ಷಸತ್। ಹೋತಾ ಅಗ್ನಿಃ। "ಅಗ್ನಿರ್ವೈ ಹೋತಾ" (?) ಇತಿ ಶ್ರುತೇಃ। ವೇದ್ಯಾಂ ಪೃಥಿವ್ಯಾಂ ಸೀದತೀತಿ ವೇದಿಷತ್। "ಇಯಂ ವೇದಿಃ ಪರೋಽನ್ತಃ ಪೃಥಿವ್ಯಾಃ" (ಋ. ಮಂ. ೧-೨೨-೧೬೪-೩೪) ಇತಿ ಮನ್ತ್ರವರ್ಣಾತ್ ಅತಿಥಿಃ ಸೋಮಃ ಸನ್ ದುರೋಣೇ ಕಲಶೇ ಸೀದತೀತಿ ದುರೋಣಸತ್। ಬ್ರಾಹ್ಮ

---

1. "ಕುತೋ ಭಯೇಕ್ಷಾ" ಎಂಬ ವಾಕ್ಯದ ಅನುವಾದವಿದು. ಶೋಕಿಸುವದಿಲ್ಲ ಎಂದಿಷ್ಟೇ ಮೂಲದಲ್ಲಿರುವದರಿಂದ ಭಾಷ್ಯದಲ್ಲಿ ಈ ವಾಕ್ಯವು ಹೆಚ್ಚಾಗಿರುವಂತೆ ತೋರುತ್ತದೆ. ಆದರೆ ಮುದ್ರಿತಪುಸ್ತಕಗಳಲ್ಲೆಲ್ಲ ಇದು ಇದೆ.

2. ಮತ್ತೆ ಶರೀರಧಾರಣೆಯಿಲ್ಲವೆಂಬುದು ಗೌಣಮುಕ್ತಿ ಎಂಬ ವಿಷಯಕ್ಕೆ ಬೃ. ಭಾ. ೪-೪-೬ ರಲ್ಲಿ "ಬ್ರಹ್ಮಾಪ್ಯೇತಿ" ಎಂಬುದರ ವಾಖ್ಯಾನವನ್ನು ನೋಡಿ.

ಣೋಽತಿಥಿರೂಪೇಣ ವಾ ದುರೋಣೇಷು ಗೃಹೇಷು ಸೀದತೀತಿ ದುರೋಣಸತ್ । ನೃಷತ್ ನೃಷು ಮನುಷ್ಯೇಷು ಸೀದತೀತಿ (ನೃಷತ್) । ವರಸತ್ ವರೇಷು ದೇವೇಷು ಸೀದತೀತಿ । ಋತಸತ್ । ಋತಂ ಸತ್ಯಂ ಯಜ್ಞೋ ವಾ । ತಸ್ಮಿನ್ ಸೀದತೀತಿ ಋತ ಸತ್ । ವ್ಯೋಮಸತ್ ವ್ಯೋಮ್ನಿ ಆಕಾಶೇ ಸೀದತೀತಿ । ಅಬ್ಜಾಃ ಅಪ್ಸು ಶಙ್ಖಶುಕ್ತ್ಯಾದಿರೂಪೇಣ ಜಾಯತ ಇತಿ । ಗೋಜಾಃ । ಗವಿ ಪೃಥಿವ್ಯಾಂ ವ್ರೀಹಿಯವಾದಿ ರೂಪೇಣ ಜಾಯತ ಇತಿ । ಋತಜಾಃ ಯಜ್ಞಾಙ್ಗರೂಪೇಣ ಜಾಯತ ಇತಿ । ಅದ್ರಿಜಾಃ ಪರ್ವತೇಭ್ಯೋ ನದ್ಯಾದಿರೂಪೇಣ ಜಾಯತ ಇತಿ । ಸರ್ವಾತ್ಮಾಪಿ ಸನ್ ಋತಮ್ ಅವಿತಥಸ್ವಭಾವ ಏವ । ಬೃಹತ್ ಮಹಾನ್ । ಸರ್ವಕಾರಣತ್ವಾತ್ । ಯದಾಪ್ಯಾದಿತ್ಯ ಏವ ಮನ್ತ್ರೇಣೋಚ್ಯತೇ ತದಾಪ್ಯಾತ್ಮಸ್ವರೂಪತ್ವಮಾದಿತ್ಯಸ್ಯಾಜ್ಞೀಕೃತಮ್ ಇತಿ ಬ್ರಾಹ್ಮಣವ್ಯಾಖ್ಯಾನೇಽಸ್ಯವಿರೋಧಃ । ಸರ್ವವ್ಯಾಪೇಕ ಏವಾತ್ಮಾ ಜಗತೋ ನಾತ್ಮ ಭೇದಃ ಇತಿ ಮನ್ತ್ರಾರ್ಥಃ ॥

(ಭಾಷ್ಯಾರ್ಥ)

(ಅವನು) **ಹಂಸನು,** ಹನ್ತಿ–ಹೋಗುತ್ತಾನೆ, ಆದ್ದರಿಂದ (ಹಂಸನೆನಿಸಿ) **ಶುಚಿ-ಸದನು,** ಶುಚಿಯಲ್ಲಿ ಎಂದರೆ ಆಕಾಶದಲ್ಲಿ ಆದಿತ್ಯರೂಪದಿಂದ ಇರುವನು ವಸುವಾಗಿ ಎಂದರೆ ಎಲ್ಲವನ್ನೂ ಮುಚ್ಚಿಕೊಂಡಿರುವವನಾಗಿ ವಾಯುರೂಪದಿಂದ ಅಂತರಿಕ್ಷದಲ್ಲಿರುವನು, ಆದ್ದರಿಂದ **ಅಂತರಿಕ್ಷಸದನು.** ಹೋತೃವಾಗಿ ಎಂದರೆ "ಅಗ್ನಿಯೇ ಹೋತೃವು" (?) ಎಂಬ ಶ್ರುತಿಪ್ರಮಾಣದಿಂದ ಅಗ್ನಿಯ ರೂಪದಲ್ಲಿ ವೇದಿಯಲ್ಲಿ ಎಂದರೆ ಪೃಥಿವಿಯಲ್ಲಿರುವನು, ಆದ್ದರಿಂದ **ವೇದಿಷದನು.** "ಪೃಥ್ವಿಯ ಉತ್ಕೃಷ್ಟವಾದ ಸ್ವಭಾವವೇ ಈ ವೇದಿಯು" (ಋ. ಮಂ. ೧–೨೨–೧೬೪–೩೫) ಎಂಬ ಮಂತ್ರವರ್ಣದ ಪ್ರಮಾಣವಿರುವದರಿಂದ (ವೇದಿಯೆಂದರೆ ಪೃಥಿವಿಯು) ಅತಿಥಿಯಾಗಿ ಎಂದರೆ ಸೋಮವಾಗಿ ಕಲಶದಲ್ಲಿರುವನಾದ್ದರಿಂದ **ದುರೋಣಸದನು,** ಅಥವಾ ಬ್ರಾಹ್ಮಣನಾದ ಅತಿಥಿಯ ರೂಪದಿಂದ ದುರೋಣಗಳಲ್ಲಿ ಎಂದರೆ ಮನೆಗಳಲ್ಲಿ ಇರುವನಾದ್ದರಿಂದ **ದುರೋಣಸದನು** ನರರಲ್ಲಿ ಎಂದರೆ ಮನುಷ್ಯರಲ್ಲಿ ಇರುವನಾದ್ದರಿಂದ **ನೃಷದನು,** ವರರಾದವರಲ್ಲಿ ಎಂದರೆ (ಶ್ರೇಷ್ಠರಾದ) ದೇವತೆಗಳಲ್ಲಿ ಇರುವನಾದ್ದರಿಂದ **ವರಸದನು.** ಋತಸದನು · ಋತವೆಂದರೆ ಸತ್ಯವು ಅಥವಾ ಯಜ್ಞವು; ಅದರಲ್ಲಿರುವನಾದ್ದರಿಂದ **ಋತಸದನು.** ವ್ಯೋಮದಲ್ಲಿ ಎಂದರೆ ಆಕಾಶದಲ್ಲಿ ಇರುವನಾದ್ದರಿಂದ **ವ್ಯೋಮಸದನು.** ನೀರಿನಲ್ಲಿ ಶಂಖ, ಚಿಪ್ಪು, ಮೊಸಳೆ–ಮುಂತಾದ ರೂಪದಿಂದ ಹುಟ್ಟುವದರಿಂದ **ಅಬ್ಜನು.** ಗೋವಿನಲ್ಲಿ ಎಂದರೆ ಭೂಮಿಯಲ್ಲಿ[1] ಭತ್ತ, ಜವೆ–

1. ಗೋ ಎಂಬ ಮಾತಿಗೆ ಸ್ವರ್ಗ, ಬಾಣ–ಮುಂತಾದ ಅನೇಕ ಅರ್ಥಗಳುಂಟು; ಇಲ್ಲಿ ಭೂಮಿ ಎಂದು ಅರ್ಥ.

ಮುಂತಾದ ರೂಪದಿಂದ ಹುಟ್ಟುವದರಿಂದ **ಗೋಜನು.** ಯಜ್ಞದ ಅಂಗಗಳ ರೂಪ
ದಿಂದ ಹುಟ್ಟುವದರಿಂದ **ಋತಜನು.** ಪರ್ವತಗಳಿಂದ ನದಿಯೇ ಮುಂತಾದ ರೂಪ
ದಿಂದ ಹುಟ್ಟುವದರಿಂದ **ಅದ್ರಿಜನು.** (ಹೀಗೆ) ಎಲ್ಲಾ ರೂಪಗಳಿಂದಲೂ ಇರುತ್ತಿ
ದ್ದರೂ **ಋತವು** ಎಂದರೆ ಸತ್ಯರೂಪನೇ ಆಗಿರುತ್ತಾನೆ **ದೊಡ್ಡದು** ಎಂದರೆ
ವ್ಯಾಪಕನು, ಏಕೆಂದರೆ (ಅವನು) ಎಲ್ಲಕ್ಕೂ ಕಾರಣವಾಗಿರುವದರಿಂದ ದೊಡ್ಡವನು.
(**ಈ**) ಮಂತ್ರವು ಆದಿತ್ಯನನ್ನೇ ಹೇಳುತ್ತದೆ ಎಂಬ ಪಕ್ಷದಲ್ಲಿಯೂ ಆದಿತ್ಯನೂ ಆತ್ಮ
ಸ್ವರೂಪನೇ ಎಂದು ಅಂಗೀಕರಿಸಿರುವದರಿಂದ **ಬ್ರಾಹ್ಮಣರೀತಿ** ಯಿಂದ [1] ವ್ಯಾಖ್ಯಾನ
ಮಾಡಿದರೂ ವಿರೋಧವಿಲ್ಲ ಎಲ್ಲವನ್ನೂ ವ್ಯಾಪಿಸಿಕೊಂಡಿರುವ **ಈತನೊಬ್ಬನೆ**
ಜಗತ್ತಿಗೆಲ್ಲ ಆತ್ಮನು, ಆತ್ಮರು ಬೇರೆಬೇರೆಯಲ್ಲ ಎಂಬುದು ಮಂತ್ರದ (ಒಟ್ಟು)
ಅರ್ಥವು.

ಆತ್ಮನನ್ನು ಕಂಡು ಹಿಡಿಯುವದಕ್ಕೆ ಹೆಗ್ಗುರುತುಗಳು

(ಭಾಷ್ಯ)

೧೩೪. ಆತ್ಮನಃ ಸ್ವರೂಪಾಧಿಗಮೇ ಲಿಙ್ಗಮುಚ್ಯತೇ—

(ಭಾಷ್ಯಾರ್ಥ)

ಆತ್ಮನ ಸ್ವರೂಪವನ್ನು ಅರಿತುಕೊಳ್ಳುವದಕ್ಕೆ ಗುರುತನ್ನು [2] ಹೇಳುತ್ತಾನೆ :-

ಊರ್ಧ್ವಂ ಪ್ರಾಣಮುನ್ನಯ-
ತ್ಯಪಾನಂ ಪ್ರತ್ಯಗಸ್ಯತಿ ।
ಮಧ್ಯೇ ವಾಮನಮಾಸೀನಂ
ವಿಶ್ವೇ ದೇವಾ ಉಪಾಸತೇ ॥ ೩ ॥

೩. ಪ್ರಾಣವನ್ನು ಮೇಲಕ್ಕೆ ಎತ್ತುವನು, ಅಪಾನವನ್ನು ಕೆಳಕ್ಕೆ
ಎಸೆಯುವನು. ನಡುವೆ ಕುಳಿತಿರುವ ವಾಮನನನ್ನು ಎಲ್ಲಾ ದೇವತೆಗಳೂ
ಉಪಾಸನೆಮಾಡುತ್ತಿರುವರು.

---

1. ಬ್ರಾಹ್ಮಣದಲ್ಲಿ "ಅಸೌ ವಾ ಆದಿತ್ಯೋ ಹಂಸಃ ಶುಚಿಷತ್" ಎಂದು ಇದೇ
ಮಂತ್ರವನ್ನು ಆದಿತ್ಯನ ಪರವಾಗಿ ವ್ಯಾಖ್ಯಾನಮಾಡಿರುತ್ತದೆ. (೪೫) ಅಲ್ಲಿ ಸೂರ್ಯನೇ ಸ್ಥಾವರ
ಜಂಗಮಗಳಿಗೆ ಆತ್ಮನು ಎಂದಿರುವದರಿಂದ ಆತ್ಮನು ಸರ್ವವ್ಯಾಪಿ ಎಂಬ ವ್ಯಾಖ್ಯಾನಕ್ಕೆ ಅಧಿಕ
ಯಿಲ್ಲ. ಏಕೆಂದರೆ ಆತ್ಮರೂಪದಿಂದಲೇ ಆದಿತ್ಯನನ್ನು ಸರ್ವರೂಪನಾಗಿರುವನೆಂದು ಬ್ರಾಹ್ಮಣ
ದಲ್ಲಿಯೂ ವರ್ಣಿಸಿರುತ್ತದೆ.

2. ಹೊಗೆಯು ಬೆಂಕಿಗೆ ಗುರುತಾಗಿರುವಂತೆ ಆತ್ಮನನ್ನು ಅರಿಯುವದಕ್ಕೆ ಗುರುತು.

(ಭಾಷ್ಯ)

೧೩೫. ಊರ್ಧ್ವಂ ಹೃದಯಾತ್ ಪ್ರಾಣಂ ಪ್ರಾಣವೃತ್ತಿಂ ವಾಯುಮ್ ಉನ್ನಯತಿ ಊರ್ಧ್ವಂ ಗಮಯತಿ। ತಥಾ ಅಪಾನಂ ಪ್ರತ್ಯಕ್ ಅಧಃ ಅಸ್ಯತಿ ಕ್ಷಿಪತಿ। ಯಃ ಇತಿ ವಾಕ್ಯಶೇಷಃ। ತಂ ಮಧ್ಯೇ ಹೃದಯಪುಂಡರೀಕಾಕಾಶೇ ಆಸೀನಂ ಬುದ್ಧಾವಭಿವ್ಯಕ್ತಂ ವಿಜ್ಞಾನಪ್ರಕಾಶಂ ವಾಮನಂ ವನನೀಯಂ ಸಮ್ಭಜನೀಯಂ ವಿಶ್ವೇ ಸರ್ವೇ ದೇವಾಃ ಚಕ್ಷುರಾದಯಃ ಪ್ರಾಣಾಃ ರೂಪಾದಿವಿಜ್ಞಾನಂ ಬಲಿಮ್ ಉಪಹರನ್ತೋ ವಿಶ ಇವ ರಾಜಾನಮ್ ಉಪಾಸತೇ ತಾದರ್ಥ್ಯೇನ ಅನುಪರತವ್ಯಾಪಾರಾ ಭವನ್ತಿ ಇತ್ಯರ್ಥಃ। ಯದರ್ಥಾ ಯತ್ಪ್ರಯುಕ್ತಾಶ್ಚ ಸರ್ವೇ ವಾಯುಕರಣವ್ಯಾಪಾರಾಃ ಸೋಽನ್ಯಃ ಸಿದ್ಧಃ ಇತಿ ವಾಕ್ಯಾರ್ಥಃ॥

(ಭಾಷ್ಯಾರ್ಥ)

ಹೃದಯದಿಂದ ಮೇಲಕ್ಕೆ ಪ್ರಾಣವನ್ನು ಎಂದರೆ ಪ್ರಾಣವೃತ್ತಿಯ ವಾಯುವನ್ನು ಎತ್ತುವನು, ಮೇಲಕ್ಕೆ ಹೋಗುವಂತೆ ಮಾಡುವನು. ಹಾಗೂ ಅಪಾನವನ್ನು ಕೆಳಕ್ಕೆ ಎಸೆಯುವನು. (ಹೀಗಿರುವನು) ಯಾವನೋ ಎಂದು ವಾಕ್ಯಕ್ಕೆ ಸೇರಿಸಿಕೊಳ್ಳಬೇಕು. ನಡುವೆ ಎಂದರೆ ಹೃದಯಪುಂಡರೀಕದ ಆಕಾರದಲ್ಲಿ ಕುಳಿತಿರುವ, ಎಂದರೆ ಬುದ್ಧಿಯಲ್ಲಿ ಹೊರ ತೋರಿಕೊಳ್ಳುವ,[1] ಚೈತನ್ಯಪ್ರಕಾಶನಾದ ಆ ವಾಮನನನ್ನು ಪ್ರಾರ್ಥಿಸುವದಕ್ಕೆ ತಕ್ಕ, ಭಜಿಸುವದಕ್ಕೆ ತಕ್ಕ (ಆತ್ಮನನ್ನು), ಎಲ್ಲಾ ದೇವತೆಗಳೂ ಎಂದರೆ ಎಲ್ಲಾ ಚಕ್ಷುರಾದಿಪ್ರಾಣಗಳೂ[2] ರೂಪಾದಿಗಳ ಅರಿವೆಂಬ ಕಾಣಿಕೆಯನ್ನು[3] ತಂದೊಪ್ಪಿಸುತ್ತಾ ಪ್ರಜೆಗಳು ಅರಸನನ್ನು ಸೇವಿಸುವಂತೆ ಉಪಾಸನೆಮಾಡುತ್ತಿರುವರು, ಎಂದರೆ ಆತನಿಗಾಗಿಯೇ ಎಡೆಬಿಡದೆ ಕೆಲಸಮಾಡುತ್ತಿರುವವು ಎಂದರ್ಥ. ಪ್ರಾಣಕರಣಗಳ ವ್ಯಾಪಾರಗಳೆಲ್ಲವೂ ಯಾರಿಗೋಸ್ಕರವೋ[4] ಯಾರಿಂದ ಪ್ರೇರಿತವಾಗಿರುವವೋ[5] ಆ (ಇವುಗಳಿಂದ) ಬೇರೆಯಾದ (ಆತ್ಮನು ಇದಾನೆಂದು) ಸಿದ್ಧವಾದಂತೆ (ಆಯಿತು) ಎಂಬುದು (ಈ) ವಾಕ್ಯದ ಒಟ್ಟು ಅರ್ಥವು.

---

1 ತೈ. ೨-೧ ರ 'ಪರಮೇ ವ್ಯೋಮನ್' ಎಂಬುದರ ವ್ಯಾಖ್ಯಾನವನ್ನು ನೋಡಿ.

2. ತೈ. ೨-೫ ರಲ್ಲಿ 'ದೇವಾಃ' ಎಂಬುದರ ವ್ಯಾಖ್ಯಾನವನ್ನು ನೋಡಿ.

3. ಒಂದೊಂದು ಕರಣದ ಅರಿವೂ ಆತ್ಮನಿಗೇ ಸಲ್ಲತಕ್ಕದ್ದು.

4. ಸಂಹತವಾದದ್ದು ಅಸಂಹತನಾದ ಆತ್ಮನಿಗಾಗಿರುವದು ಎಂದರ್ಥ. ೨-೨-೧ ರ ಭಾಷ್ಯವನ್ನು ನೋಡಿ. ಗೀ. ೧೫-೧೦.

5. ಕೇ. ಭಾ. ೧ ರ ಸೂಚನೆ

ಅಸ್ಯ ವಿಸ್ರಂಸಮಾನಸ್ಯ
ಶರೀರಸ್ಥಸ್ಯ ದೇಹಿನಃ ।
ದೇಹಾದ್ವಿಮುಚ್ಯಮಾನಸ್ಯ
ಕಿಮತ್ರ ಪರಿಶಿಷ್ಯತೇ । ಏತದ್ವೈ ತತ್ ॥ ೪ ॥

೪. ಶರೀರದಲ್ಲಿ ಈ ದೇಹಿಯು ಸಡಿಲವಾಗಿ ದೇಹದಿಂದ ಕಳಚುವಾಗ ಇಲ್ಲಿ ಏನು ಉಳಿಯುತ್ತದೆ? ಇದೇ ಅದು

(ಭಾಷ್ಯ)

೧೩೬. ಕಿಂ ಚ ಅಸ್ಯ ಶರೀರಸ್ಥಸ್ಯ ಆತ್ಮನಃ ವಿಸ್ರಂಸಮಾನಸ್ಯ ಭ್ರಶ್ಯಮಾನಸ್ಯ ದೇಹಿನಃ ದೇಹವತಃ । ವಿಸ್ರಂಸನಶಬ್ದಾರ್ಥಮಾಹ–ದೇಹಾದ್ ವಿಮುಚ್ಯಮಾನಸ್ಯ ಇತಿ । ಕಿಮತ್ರ ಪರಿಶಿಷ್ಯತೇ? ಪ್ರಾಣಾದಿಕಲಾಪೇ ನ ಕಿಂಚನ ಪರಿಶಿಷ್ಯತೇ ಅತ್ರ ದೇಹೇ । ಪುರಸ್ವಾಮಿವಿದ್ರವಣೇ ಇವ ಪುರವಾಸಿನಾಂ ಯಸ್ಯಾತ್ಮನೋಽಪಗಮೇ ಕ್ಷಣಮಾತ್ರಾತ್ ಕಾರ್ಯಕರಣಕಲಾಪರೂಪಂ ಸರ್ವಮಿದಂ ಹತಬಲಂ ವಿಧ್ವಸ್ತಂ ಭವತಿ ವಿನಷ್ಟಂ ಭವತಿ ಸೋಽನ್ಯಃ ಸಿದ್ಧಃ ॥

(ಭಾಷ್ಯಾರ್ಥ)

ಮತ್ತು ಈ ಶರೀರದಲ್ಲಿದ್ದು ಸಡಿಲವಾಗುವ ಎಂದರೆ ಬಿಟ್ಟು ಹೋಗುವ ದೇಹಿಯ ದೇಹವಂತನಾದ (ಆತ್ಮನು), ಸಡಿಲವಾಗಿ ಎಂಬ ಮಾತಿಗೆ ಅರ್ಥವನ್ನು (ಶ್ರುತಿಯು) 'ದೇಹದಿಂದ ಕಳಚುವಾಗ' ಎಂದು (ತಾನೇ) ಹೇಳಿರುತ್ತದೆ. (ಆಗ) ಇಲ್ಲಿ ಏನು ಉಳಿಯುತ್ತದೆ? ಇಲ್ಲಿ ಎಂದರೆ (ಈ) ಪ್ರಾಣಾದಿಗಳ ಸಮೂಹವಾದ (ದೇಹದಲ್ಲಿ)[1] ಏನೇನೂ ಉಳಿಯುವದಿಲ್ಲ. ಪುರದ ಸ್ವಾಮಿಯು ಓಡಿಹೋದರೆ ಪುರದಲ್ಲಿ ವಾಸವಾಗಿರುವವರು ಹೇಗೆ (ಬಲಗುಂದುವರೋ) ಹಾಗೆ ಯಾವ ಆತ್ಮನು ಬಿಟ್ಟು ಹೋಗುತ್ತಲೂ ಕ್ಷಣಮಾತ್ರದಿಂದ ಕಾರ್ಯಕರಣಗಳ ಗುಂಪಿನ ರೂಪದಲ್ಲಿರುವ ಇದೆಲ್ಲವೂ ಬಲಗುಂದಿ ಧ್ವಂಸವಾಗಿ ಹೋಗುವದೋ ನಾಶವಾಗಿಬಿಡುವದೋ ಅಂಥ ಆತ್ಮನು ಬೇರೊಬ್ಬನು (ಇದಾನೆಂದು) ಸಿದ್ಧವಾಯಿತು.

---

1. "ಪ್ರಾಣಾದಿಕಲಾಪೇ" ಎಂಬ ಪಾಠದಲ್ಲಿ ಪ್ರಾಣಾದಿಗಳ ಸಮೂಹವು ಯಾವದು ಉಳಿಯುತ್ತದೆ?–ಎಂದು ಕನ್ನಡಿಸಬೇಕಾಗುವದು.

(ಭಾಷ್ಯ)

೧೩೭. ಸ್ಯಾನ್ಮೃತಮ್–ಪ್ರಾಣಾಪಾನಾದ್ಯಪಗಮಾದೇವೇದಂ ವಿಧ್ವಸ್ತಂ ಭವತಿ ನ ತು ತದ್ವ್ಯತಿರಿಕ್ತಾತ್ಮಾಪಗಮಾತ್ । ಪ್ರಾಣಾದಿಭಿರೇವ ಹಿ ಮರ್ತ್ಯೋ ಜೀವತೀತಿ । ನೈತದಸ್ತಿ—

(ಭಾಷ್ಯಾರ್ಥ)

ಪ್ರಾಣ, ಅಪಾನ-ಮುಂತಾದದ್ದು ಬಿಟ್ಟು ಹೋಗುವದರಿಂದ ಈ (ಶರೀರವು) ಧ್ವಂಸವಾಗುವದೇ ಹೊರತು ಅದಕ್ಕಿಂತ ಬೇರೆಯಾಗಿರುವ ಆತ್ಮನು ಬಿಟ್ಟು ಹೋಗುವದರಿಂದಲ್ಲ. ಪ್ರಾಣವೇ ಮುಂತಾದವುಗಳಿಂದಲೇ ಅಲ್ಲವೆ, ಮನುಷ್ಯನು ಜೀವಿಸಿರುತ್ತಾನೆ? ಎಂದು (ಯಾರಾದರೂ) ಅಭಿಪ್ರಾಯಪಡಬಹುದು (ಆದರೆ) ಇದು (ಹೀಗಿ)ಲ್ಲ. ಏಕೆಂದರೆ —

ನ ಪ್ರಾಣೇನ ನಾಪಾನೇನ
ಮರ್ತ್ಯೋ ಜೀವತಿ ಕಶ್ಚನ ।
ಇತರೇಣ ತು ಜೀವನ್ತಿ
ಯಸ್ಮಿನ್ನೇತಾವುಪಾಶ್ರಿತೌ ॥ ೫ ॥

೫. ಪ್ರಾಣದಿಂದಲಾಗಲಿ ಅಪಾನದಿಂದಲಾಗಲಿ ಯಾವ ಮರ್ತ್ಯನೂ ಜೀವಿಸಿರುವದಿಲ್ಲ. ಯಾವನಲ್ಲಿ ಇವೆರಡೂ ಆಶ್ರಯಿಸಿಕೊಂಡಿರುವವೋ ಅಂಥ ಇನ್ನೊಬ್ಬನಿಂದಲೇ ಜೀವಿಸಿರುತ್ತಾರೆ.

(ಭಾಷ್ಯ)

೧೩೮. ನ ಪ್ರಾಣೇನ ನಾಪಾನೇನ ಚಕ್ಷುರಾದಿನಾ ವಾ ಮರ್ತ್ಯಃ ಮನುಷ್ಯೋ ದೇಹವಾ ಕಶ್ಚನ ಜೀವತಿ । ನ ಕೋಽಪಿ ಜೀವತಿ । ನ ಹ್ಯೇಷಾಂ ಪರಾರ್ಥಾನಾಂ ಸಂಹತ್ಯಕಾರಿತ್ವಾತ್ ಜೀವನಹೇತುತ್ವಮುಪಪದ್ಯತೇ । ಸ್ವಾರ್ಥೇನ ಅಸಂಹತೇನ ಪರೇಣ ಕೇನಚಿದಪ್ರಯುಕ್ತಂ ಸಂಹತಾನಾಮವಸ್ಥಾನಂ ನ ದೃಷ್ಟಂ ಗೃಹಾದೀನಾಂ ಲೋಕೇ । ತಥಾ ಪ್ರಾಣಾದೀನಾಮಪಿ ಸಂಹತತ್ವಾದ್ ಭವಿತುಮರ್ಹತಿ । ಅತ ಇತರೇಣೈವ ಸಂಹತಪ್ರಾಣಾದಿವಿಲಕ್ಷಣೇನ ತು ಸರ್ವೇ ಸಂಹತಾಃ ಸನ್ತೋ ಜೀವನ್ತಿ ಪ್ರಾಣಾ ಧಾರಯನ್ತಿ । ಯಸ್ಮಿನ್ ಸಂಹತವಿಲಕ್ಷಣೇ ಆತ್ಮನಿ ಸತಿ ಪರಸ್ಮಿನ್ ಏತೌ ಪ್ರಾಣಾಪಾನೌ ಚಕ್ಷುರಾದಿಭಿಃ ಸಂಹತೌ ಉಪಾಶ್ರಿತೌ, ಯಸ್ಯ ಅಸಂಹತಸ್ಯಾರ್ಥೇ ಪ್ರಾಣಾಪಾನಾದಿಃ ಸ್ವವ್ಯಾಪಾರಂ ಕುರ್ವನ್ ವರ್ತತೇ ಸಂಹತಃ ಸ ಸತತೋಽನ್ಯಃ ಸಿದ್ಧಃ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಪ್ರಾಣದಿಂದಲಾಗಲಿ ಅಪಾನದಿಂದಲಾಗಲಿ ಚಕ್ಷುಸ್ಸೇ ಮುಂತಾದ (ಇಂದ್ರಿಯ)ದಿಂದಲಾಗಲಿ ಯಾವ ಮರ್ತ್ಯನೂ ಬದುಕಿರುವದಿಲ್ಲ, ಯಾವ ದೇಹಿಯಾದ ಮನು

ಷ್ಯನೂ ಬದುಕಿರುವೆದಿಲ್ಲ. ಏಕೆಂದರೆ (ಒಂದಕ್ಕೊಂದು) ಸೇರಿಕೊಂಡು ಕೆಲಸ ಮಾಡುತ್ತಿರುವ ಇವು ಪರಾರ್ಥವಾಗಿರುವದರಿಂದ[1] ಬದುಕಿರುವದಕ್ಕೆ (ಇವು) ಕಾರಣವೆಂಬುದು ಹೊಂದುವದಿಲ್ಲ.[2] ಒಂದಕ್ಕೊಂದು ಸೇರಿಕೊಂಡಿರುವ ಮನೆಯೇ ಮುಂತಾದವು ತನಗಾಗಿ ತಾನು ಇದ್ದುಕೊಂಡಿರುವ ಯಾವದೊಂದರೊಡನೆಯೂ ಸೇರಿಕೊಳ್ಳದೆ ಇರುವ, ಬೇರೆಯೊಬ್ಬನಿಂದ ಪ್ರೇರಿತವಾಗದೆ ಇರುವದು[3] ಲೋಕದಲ್ಲಿ ಕಂಡು ಬಂದಿಲ್ಲ. ಅದರಂತೆ ಪ್ರಾಣಾದಿಗಳೂ ಒಂದಕ್ಕೊಂದು ಸೇರಿಕೊಂಡಿರುವದರಿಂದ (ಮತ್ತೊಬ್ಬನಿಂದ ಪ್ರೇರಿತನಾಗಿ ಆತನಿಗಾಗಿ)ರಬೇಕೆಂದು (ನಿಶ್ಚಯವಾಗುತ್ತದೆ). ಆದ್ದರಿಂದ ಒಂದಕ್ಕೊಂದು ಸೇರಿಕೊಂಡಿರುವ ಪ್ರಾಣವೇ ಮುಂತಾದವುಗಳಿಗಿಂತ ಬೇರೆಯಾದ ಇನ್ನೊಬ್ಬನಿಂದಲೇ ಎಲ್ಲರೂ ಸೇರಿಸಲ್ಪಟ್ಟು ಜೀವಿಸಿರುತ್ತಾರೆ. ಪ್ರಾಣವನ್ನು ಧರಿಸಿರುತ್ತಾರೆ. ಸೇರಿಕೊಂಡಿರುವ (ವಸ್ತುಗಳಿ)ಗಿಂತ ಬೇರೆಯಾದ ಇನ್ನೊಬ್ಬ ಯಾವ ಆತ್ಮನಿರುವದರಿಂದ ಈ ಪ್ರಾಣಾಪಾನಗಳು ಚಕ್ಷುಸ್ಸು ಮುಂತಾದ ಇಂದ್ರಿಯಗಳೊಡನೆ ಸೇರಿಕೊಂಡು ಆಶ್ರಯಿಸಿಕೊಂಡಿರುವವೋ, ಯಾವದರೊಡನೆಯೂ ಸೇರಿಕೊಳ್ಳದಿರುವ ಯಾವನಿಗೋಸ್ಕರ ಪ್ರಾಣಾಪಾನಾದಿಗಳು ತಮ್ಮ ತಮ್ಮ ಕೆಲಸವನ್ನು ಒಂದಕ್ಕೊಂದು ಸೇರಿಕೊಂಡು ಮಾಡುತ್ತಿರುವವೋ ಅಂಥ ಅವುಗಳಿಂದ ಬೇರೆಯಾದ (ಆತ್ಮನು) ಇದಾನೆಂದು ಸಿದ್ಧವಾಯಿತು–ಎಂದಭಿಪ್ರಾಯ

ಬ್ರಹ್ಮಾತ್ಮೈಕತ್ವ

ಹನ್ತ ತ ಇದಂ ಪ್ರವಕ್ಷ್ಯಾಮಿ
ಗುಹ್ಯಂ ಬ್ರಹ್ಮ ಸನಾತನಮ್ ।
ಯಥಾ ಚ ಮರಣಂ ಪ್ರಾಪ್ಯ
ಆತ್ಮಾ ಭವತಿ ಗೌತಮ ॥ ೬ ॥

೬. ಗೌತಮನೆ, ಇಗೊ ಈ ಗುಹ್ಯವಾದ ಸನಾತನ ಬ್ರಹ್ಮವನ್ನು ಹೇಳುವೆನು. ಮರಣವನ್ನು ಹೊಂದಿ ಆತ್ಮನು ಹೇಗೆ ಆಗುವನೋ (ಅದನ್ನೂ ಹೇಳುವೆನು, ಕೇಳು).

---

1 ಮತ್ತೊಂದರ ಉಪಯೋಗಕ್ಕಾಗಿರುವದರಿಂದ. ೧೪೦ನೆಯ ಪುಟದ 1 ನೆಯ ಟಿಪ್ಪಣಿಯನ್ನು ನೋಡಿ.

2. ಶರೀರವೂ ಪ್ರಾಣವೂ ಸೇರಿಕೊಂಡಿರುವದೆಂಬ ಕಾರ್ಯವು ಸ್ವಭಾವದಿಂದ ಆಗಲಾರದು. ಇವೆರಡಕ್ಕಿಂತ ಬೇರೆಯಾಗಿರುವ ಚೇತನದಿಂದಲೇ ಈ ಕಾರ್ಯವಾದೀತು–ಎಂದು ಭಾವ.

3. ಬೇರೊಬ್ಬನ ಪ್ರಯೋಜನಕ್ಕಾಗಿಯಲ್ಲದೆ ತನಗೋಸ್ಕರವಾಗಿಯೇ ಇದ್ದುಕೊಂಡಿರುವದು.

(ಭಾಷ್ಯ)

೧೩೯. ಹನ್ತ ಇದಾನೀಂ ಪುನರಪಿ ತೇ ತುಭ್ಯಮ್ ಇದಂ ಗುಹ್ಯಂ ಗೋಪ್ಯಂ ಬ್ರಹ್ಮ ಸನಾತನಂ ಚಿರನ್ತನಂ ಪ್ರವಕ್ಷ್ಯಾಮಿ। ಯದ್ವಿಜ್ಞಾನಾತ್ ಸರ್ವ ಸಂಸಾರೋಪರಮೋ ಭವತಿ ಅವಿಜ್ಞಾನಾಚ್ಚ ಯಸ್ಯ ಮರಣಂ ಪ್ರಾಪ್ಯ ಯಥಾ ಚೇತ್ಯಾ ಭವತಿ ಯಥಾ ಸಂಸರತಿ ತಥಾ ಶೃಣು ಹೇ ಗೌತಮ ॥

(ಭಾಷ್ಯಾರ್ಥ)

ಅಯ್ಯಾ ಗೌತಮ, ಇಗೋ ಈಗ ಮತ್ತೊಂದು ಸಲವೂ ನಿನಗೆ ನಿನಗೋಸ್ಕರ ಈ ಗುಹ್ಯವಾದ ಗುಟ್ಟಾದ ಸನಾತನವಾದ ಬಹುಕಾಲದಿಂದಿರುವ ಬ್ರಹ್ಮವನ್ನು ತಿಳಿಸುವೆನು. ಯಾವ ಇದನ್ನು ಅರಿತುಕೊಂಡರೆ ಸಂಸಾರವೆಲ್ಲವೂ ನಾಶವಾಗುವದೋ ಅರಿತುಕೊಳ್ಳದೆ ಇರುವದರಿಂದ ಮರಣವನ್ನು ಹೊಂದಿ ಹೇಗೆ ಆಗುವನೋ ಎಂದರೆ (ಹೇಗೆ ಹೇಗೆ) ಸಂಸಾರದಲ್ಲಿ ತೊಳಲುವನೋ ಅದನ್ನು ಕೇಳು

ಯೋನಿಮನ್ಯೇ ಪ್ರಪದ್ಯನ್ತೇ
ಶರೀರತ್ವಾಯ ದೇಹಿನಃ।
ಸ್ಥಾಣುಮನ್ಯೇಽನುಸಂಯನ್ತಿ
ಯಥಾಕರ್ಮ ಯಥಾಶ್ರುತಮ್ ॥ ೭ ॥

• ೭ ಕೆಲವರು ದೇಹಿಗಳು ಶರೀರಕ್ಕಾಗಿ ಯೋನಿಯನ್ನು ಸೇರುವರು. ಮತ್ತೆ ಕೆಲವರು ಕರ್ಮಕ್ಕನುಸಾರವಾಗಿಯೂ ಶ್ರುತಕ್ಕೆ ಅನುಸಾರವಾಗಿಯೂ ಸ್ಥಾಣುವನ್ನು ಹೊಂದುವರು.

(ಭಾಷ್ಯ)

೧೪೦. ಯೋನಿಂ ಯೋನಿದ್ವಾರಂ ಶುಕ್ರಬೀಜಸಮನ್ವಿತಾಃ ಸನ್ತಃ ಅನ್ಯೇ ಕೇಚಿತ್ ಅವಿದ್ಯಾವನ್ತೋ ಮೂಢಾಃ ಪ್ರಪದ್ಯನ್ತೇ ಶರೀರತ್ವಾಯ ಶರೀರಗ್ರಹಣಾರ್ಥಂ ದೇಹಿನಃ ದೇಹವನ್ತಃ। ಯೋನಿಂ ಪ್ರವಿಶನ್ತಿ ಇತ್ಯರ್ಥಃ। ಸ್ಥಾಣುಂ ವೃಕ್ಷಾದಿಸ್ಥಾವರಭಾವಮ್ ಅನ್ಯೇ ಅತ್ಯನ್ತಾಧಮಾಃ ಮರಣಂ ಪ್ರಾಪ್ಯ ಅನುಸಂಯನ್ತಿ ಅನುಗಚ್ಛನ್ತಿ। ಯಥಾಕರ್ಮ ಯದ್ಯಸ್ಯ ಕರ್ಮ ತದ್ ಯಥಾಕರ್ಮ। ಯೈಃ ಯಾದೃಶಂ ಕರ್ಮ ಇಹ ಜನ್ಮನಿ ಕೃತಂ ತದ್ವಶೇನ ಇತ್ಯೇತತ್। ತಥಾ ಯಥಾ ಶ್ರುತಮ್। ಯಾದೃಶಂ ಚ ವಿಜ್ಞಾನಮ್ ಉಪಾರ್ಜಿತಂ ತದನುರೂಪಮೇವ ಶರೀರಂ ಪ್ರತಿಪದ್ಯನ್ತೇ ಇತ್ಯರ್ಥಃ। "ಯಥಾಪ್ರಜ್ಞಂ ಹಿ ಸಮ್ಭವಾಃ" (ಐ. ಆ. ೨-೩-೨) ಇತಿ ಶ್ರುತ್ಯನ್ತರಾತ್ ॥

(ಭಾಷ್ಯಾರ್ಥ)

ಕೆಲವರು ದೇಹಿಗಳು ದೇಹವಂತರಾದ ಅಜ್ಞಾನಿಗಳಾದ ಮೂಢರು[1] ಶರೀರ ಕ್ಕಾಗಿ ಎಂದರೆ ಶರೀರವನ್ನು ಧರಿಸುವದಕ್ಕಾಗಿ ಶುಕ್ರದ ಬೀಜದೊಡನೆ ಯೋನಿಯನ್ನು ಸೇರುವರು. ಯೋನಿದ್ವಾರವನ್ನು ಹೊಗುತ್ತಾರೆ ಎಂದರ್ಥ. ಅತ್ಯಂತ ಅಧಮ ರಾದ ಇನ್ನೂ ಕೆಲವರು ಸ್ಥಾಣುವನ್ನು ಎಂದರೆ ವೃಕ್ಷವೇ ಮುಂತಾದ ಸ್ಥಾವರಜನ್ಮ ವನ್ನು ಸತ್ತಮೇಲೆ ಹೊಂದುತ್ತಾರೆ ಯಾವನಿಗೆ ಯಾವದು ಕರ್ಮವೋ ಅದು ಯಥಾಕರ್ಮವು. ಕರ್ಮಕ್ಕನುಸಾರವಾಗಿ, ಎಂದರೆ ಈ ಜನ್ಮದಲ್ಲಿ ಎಂಥ ಕರ್ಮ ವನ್ನು ಮಾಡಿರುತ್ತಾನೋ ಅದಕ್ಕೆ ವಶರಾಗಿ ಎಂದರ್ಥ. ಮತ್ತು ಯಥಾಶ್ರುತವಾಗಿ ಶ್ರುತಕ್ಕೆ ಅನುಸಾರವಾಗಿ ಎಂದರೆ ಎಂಥ ತಿಳಿವಳಿಕೆಯನ್ನು[1] (ಇಲ್ಲಿ) ಸಂಪಾದಿಸಿರು ವರೋ ಅದಕ್ಕನುಗುಣವಾಗಿಯೇ ಶರೀರವನ್ನು ಹೊಂದುವರು ಎಂದರ್ಥ. "ತಿಳಿ ವಳಿಕೆಗೆ[2] ಅನುಸಾರವಾಗಿಯೇ ಜನ್ಮಗಳು ಆಗುವವು" (ಐ. ಆ. ೨-೩-೨) ಎಂಬ ಬೇರೊಂದು ಶ್ರುತಿಯೂ (ಇದನ್ನು ಹೇಳುತ್ತದೆ).

(ಭಾಷ್ಯ)

೨೪೧. ಯತ್ ಪ್ರತಿಜ್ಞಾತಂ "ಗುಹ್ಯಂ ಬ್ರಹ್ಮ ಪ್ರವಕ್ಷ್ಯಾಮಿ" ಇತಿ ತದಾಹ—

(ಭಾಷ್ಯಾರ್ಥ)

ಗುಹ್ಯವಾದ ಬ್ರಹ್ಮವನ್ನು ಹೇಳುತ್ತೇನೆ ಎಂದು ಮೊದಲು ಹೇಳಿದ್ದನಷ್ಟೆ. (ಈಗ) ಅದನ್ನು ಹೇಳುತ್ತಾನೆ —

ಯ ಏಷು ಸುಪ್ತೇಷು ಜಾಗರ್ತಿ
ಕಾಮಂ ಕಾಮಂ ಪುರುಷೋ ನಿರ್ಮಿಮಾಣಃ ।
ತದೇವ ಶುಕ್ರಂ ತದ್ಬ್ರಹ್ಮ
ತದೇವಾಮೃತಮುಚ್ಯತೇ ।
ತಸ್ಮಿಲ್ಲೋಕಾಃ ಶ್ರಿತಾಃ ಸರ್ವೇ
ತದು ನಾತ್ಯೇತಿ ಕಶ್ಚನ । ಏತದ್ವೈ ತತ್ ॥ ೮ ॥

೮. ಇವು ನಿದ್ರಿಸುತ್ತಿರುವಾಗ ಬೇರೆ ಬೇರೆ ಕಾಮವನ್ನು ನಿರ್ಮಿ ಸುತ್ತಾ ಯಾವ ಈ ಪುರುಷನು ಎಚ್ಚತ್ತಿರುವನೋ ಅದೇ ಶುಕ್ರವು, ಅದು

---

1. ಪರಮಾರ್ಥದೃಷ್ಟಿಯಿಂದ ಯಾರಿಗೂ ಶರೀರವಿಲ್ಲವಾದರೂ ಅಜ್ಞಾನಿಗಳ ದೃಷ್ಟಿ ಯಿಂದ ಶರೀರಪ್ರಾಪ್ತಿಯೆಂಬ ಸಂಸಾರವು ಇದ್ದೇ ಇರುವದು.

2. ಇಲ್ಲಿ ತಿಳಿವಳಿಕೆ ಎಂದರೆ ಶಾಸ್ತ್ರೀಯವಾದ ಅಥವಾ ಲೌಕಿಕವಾದ ಜ್ಞಾನ, ಮನಸ್ಸಿನ ಭಾವನೆ. ಬೃ. ೪-೪-೫ರಲ್ಲಿ ಪೂರ್ವಪ್ರಜ್ಞೆ ಎಂದು ಹೇಳಿರುವದು ಇದನ್ನೇ.

ಬ್ರಹ್ಮವು, ಅದೇ ಅಮೃತವೆನಿಸುತ್ತದೆ. ಅದರಲ್ಲಿ ಲೋಕಗಳೆಲ್ಲವೂ ಆಶ್ರಯಿಸಿಕೊಂಡಿರುವವು, ಮತ್ತು ಅದನ್ನು ಯಾರೂ ಮೀರಲಾರರು. ಇದೇ ಅದು.

(ಭಾಷ್ಯ)

೧೪೨. ಯ ಏಷ ಸುಪ್ತೇಷು ಪ್ರಾಣಾದಿಷು ಜಾಗರ್ತಿ ನ ಸ್ವಪಿತಿ । ಕಥಮ್? ಕಾಮಂ ಕಾಮಂ ತಂ ತಮಭಿಪ್ರೇತಂ ಸ್ತ್ರ್ಯಾದ್ಯರ್ಥಮ್ ಅವಿದ್ಯಯಾ ನಿರ್ಮಿಮಾಣಃ ನಿಷ್ಪಾದಯನ್ ಜಾಗರ್ತಿ ಪುರುಷಃ ಯಃ, ತದೇವ ಶುಕ್ರಂ ಶುಭ್ರಂ ಶುದ್ಧಮ್ ತದ್ ಬ್ರಹ್ಮ ನಾನ್ಯದ್ ಗುಹ್ಯಂ ಬ್ರಹ್ಮಾಸ್ತಿ। ತದೇವ ಅಮೃತಮ್ ಅವಿನಾಶಿ ಉಚ್ಯತೇ ಸರ್ವಶಾಸ್ತ್ರೇಷು । ಕಿಂ ಚ ಪೃಥಿವ್ಯಾದಯೋ ಲೋಕಾಃ ತಸ್ಮಿನ್ನೇವ ಸರ್ವೇ ಬ್ರಹ್ಮಣಿ ಶ್ರಿತಾಃ ಆಶ್ರಿತಾಃ ಸರ್ವಲೋಕಕಾರಣತ್ವಾತ್ ತಸ್ಯ । "ತದು ನಾತ್ಯೇತಿ ಕಶ್ಚನ" ಇತ್ಯಾದಿ ಪೂರ್ವವದೇವ ॥

(ಭಾಷ್ಯಾರ್ಥ)

ಪ್ರಾಣಗಳೇ ಮುಂತಾದವು[1] ನಿದ್ರಿಸುತ್ತಿರುವಾಗ ಯಾವ ಈ ಪುರುಷನು ಎಚ್ಚತ್ತಿರುವನೋ ನಿದ್ರಿಸದೆ ಇರುವನೋ ಹೇಗೆ (ಎಚ್ಚರದಿಂದಿರುವನು)? ಎಂದರೆ (ಹೇಳುತ್ತಾನೆ) ಬೇರೆಬೇರೆ ಕಾಮವನ್ನು ಎಂದರೆ (ತನಗೆ) ಬೇಕಾಗಿರುವ ಹೆಂಗಸರು ಮುಂತಾದ ಆಯಾ ಪದಾರ್ಥಗಳನ್ನು ಅವಿದ್ಯೆಯಿಂದ ನಿರ್ಮಿಸಿಕೊಳ್ಳುತ್ತಾ ಉಂಟುಮಾಡಿಕೊಳ್ಳುತ್ತಾ (ಯಾವ ಪುರುಷನು ಎಚ್ಚರವಾಗಿರುವನೋ) ಅವನೇ ಶುಕ್ರವು, ಶುಭ್ರವು ಶುದ್ಧವಾದ (ತತ್ತ್ವವು) ಅದೇ ಬ್ರಹ್ಮವು. ಗುಹ್ಯವಾದ ಬ್ರಹ್ಮವೆಂಬುದು ಬೇರೆಯಿಲ್ಲ[2] ಶಾಸ್ತ್ರಗಳಲ್ಲೆಲ್ಲ ಅದೇ ಅಮೃತವು ಎಂದರೆ ನಾಶವಿಲ್ಲದ್ದು ಎಂದು ಹೇಳಲ್ಪಟ್ಟಿರುತ್ತದೆ. ಮತ್ತು ಪೃಥಿವಿಯೇ ಮುಂತಾದ ಲೋಕಗಳೆಲ್ಲ ಆ ಬ್ರಹ್ಮದಲ್ಲಿಯೇ ಆಶ್ರಯಿಸಿಕೊಂಡಿರುವವು; ಏಕೆಂದರೆ ಅದು ಎಲ್ಲಾ ಲೋಕಗಳಿಗೂ ಕಾರಣವಾಗಿರುತ್ತದೆ. "ಅದನ್ನು ಯಾರೂ ಮೀರಲಾರರು" ಮುಂತಾದದ್ದಕ್ಕೆ ಹಿಂದಿನಂತೆಯೇ[3] ಅರ್ಥಮಾಡಿಕೊಳ್ಳಬೇಕು

---

1. ಇಂದ್ರಿಯವೇ ಮುಂತಾದವುಗಳು. ಆದರೆ ಅಂತಃಕರಣವು ಆಯಾ ಕಾಮ್ಯವಸ್ತುಗಳನ್ನು ಕಾಣುತ್ತಿರುವದು.

2. ಕನಸಿನಲ್ಲಿ ಅವಿದ್ಯೆಯಿಂದ ಬೇರೆಬೇರೆಯ ಕಾಮ್ಯವಸ್ತುಗಳನ್ನು ಕಾಣುತ್ತಿರುವ ಜೀವನ ಪರಮಾರ್ಥರೂಪವೇ ಬ್ರಹ್ಮವು. ಆ ಪರಮಾರ್ಥವಾದ ಸಾಕ್ಷಿರೂಪದಿಂದ ಎಲ್ಲವನ್ನೂ ಅವನು ಬೆಳಗುತ್ತಿರುತ್ತಾನೆ.

3. ಹಿಂದಿನ ವಲ್ಲಿಯ ೯ನೆಯ ಮಂತ್ರದಂತೆ.

(ಭಾಷ್ಯ)

೧೪೩. ಅನೇಕತಾರ್ಕಿಕಬುದ್ಧಿವಿಚಾಲಿತಾನ್ತಃಕರಣಾನಾಂ ಪ್ರಮಾಣೋಪಪನ್ನ ಮಪ್ಯಾತ್ಮೈಕತ್ವವಿಜ್ಞಾನಮ್ ಅಸಕೃದುಚ್ಯಮಾನಮಪಿ ಅನೃಜುಬುದ್ಧೀನಾಂ ಬ್ರಾಹ್ಮಣಾನಾಂ ಚೇತಸಿ ನಾಧೀಯತ ಇತಿ ತತ್ಪ್ರತಿಪಾದನೇ ಆದರವತೀ ಪುನಃ ಪುನ ರಾಹ ಶ್ರುತಿಃ—

(ಭಾಷ್ಯಾರ್ಥ)

ಆತ್ಮನು ಒಬ್ಬನೇ ಎಂಬ ಜ್ಞಾನವು ಪ್ರಮಾಣಕ್ಕೆ ಹೊಂದುಗಡೆಯಾಗಿದ್ದರೂ (ಇನ್ನೂ) ಸರಿಯಾದ ಬುದ್ಧಿಯುಂಟಾಗದೆ ಇರುವ ಬ್ರಾಹ್ಮಣರಿಗೆ[1] ಅನೇಕ **ತಾರ್ಕಿಕರ** ಕುಬುದ್ಧಿಯಿಂದ ಅಂತಃಕರಣವು ಕದಡಿಹೋಗಿರುವದರಿಂದ ಎಷ್ಟು ಸಲ ಹೇಳಿದರೂ ಮನಸ್ಸಿನಲ್ಲಿ ನಿಲ್ಲದೆ ಇರುವದು. ಆದ್ದರಿಂದ ಇದನ್ನು ತಿಳಿಸುವದರಲ್ಲಿ (ಹೆಚ್ಚಿನ) ಆದರವುಳ್ಳ ಶ್ರುತಿಯು ಮತ್ತೆ ಮತ್ತೆ (ದೃಷ್ಟಾಂತಗಳ ಮೂಲಕ ಇದನ್ನೇ) ಹೇಳುತ್ತದೆ:—

ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ
ರೂಪಂ ರೂಪಂ ಪ್ರತಿರೂಪೋ ಬಭೂವ ।
ಏಕಸ್ತಥಾ ಸರ್ವಭೂತಾನ್ತರಾತ್ಮಾ
ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥ ೯ ॥

೯. ಒಂದೇ ಬೆಂಕಿಯು ಹೇಗೆ ಭುವನವನ್ನು ಹೊಕ್ಕು ರೂಪ ರೂಪಕ್ಕೂ ಪ್ರತಿರೂಪವಾಗಿರುವದೋ ಹಾಗೆ ಸರ್ವಭೂತಾಂತರಾತ್ಮನಾದ ಒಬ್ಬನೇ ರೂಪರೂಪಕ್ಕೂ ಪ್ರತಿರೂಪನಾಗಿರುವನು, ಹೊರಗೂ ಇರುವನು.

(ಭಾಷ್ಯ)

೧೪೪. ಅಗ್ನಿಃ ಯಥಾ ಏಕ ಏವ ಪ್ರಕಾಶಾತ್ಮಾ ಸ್ಸ ಭುವನಮ್ ಭವನ್ತ್ಯ ಸ್ಮಿನ್ ಭೂತಾನಿ ಇತಿ ಭುವನಮ್ ಅಯಂ ಲೋಕಃ ತಮಿಮಂ ಪ್ರವಿಷ್ಟಃ ಅನು ಪ್ರವಿಷ್ಟಃ । ರೂಪಂ ರೂಪಂ ಪ್ರತಿ ದಾರ್ವಾದಿದಾಹ್ಯಭೇದಂ ಪ್ರತಿ ಇತ್ಯರ್ಥಃ । ಪ್ರತಿ ರೂಪಃ ತತ್ರ ತತ್ರ ಪ್ರತಿರೂಪವಾ ದಾಹ್ಯಭೇದೇನ ಬಹುವಿಧೋ ಬಭೂವ । ಏಕ ಏವ ತಥಾ ಸರ್ವಭೂತಾನ್ತರಾತ್ಮಾ ಸರ್ವೇಷಾಂ ಭೂತನಾಮಭ್ಯನ್ತರ ಆತ್ಮಾ ಅತಿ ಸೂಕ್ಷ್ಮತ್ವಾತ್ ದಾರ್ವಾದಿಷ್ವಿವ ರೂಪಂ ರೂಪಂ ಸರ್ವದೇಹಂ ಪ್ರತಿ ಪ್ರವಿಷ್ಟತ್ವಾತ್ ಪ್ರತಿರೂಪೋ ಬಭೂವ ಬಹಿಶ್ಚ ಸ್ವೇನ ಅವಿಕೃತೇನ ರೂಪೇಣ ಆಕಾಶವತ್ ॥

1. ಅಧಿಕಾರಿಗಳಿಗೆ.

(ಭಾಷ್ಯಾರ್ಥ)

ಬೆಂಕಿಯು ಹೇಗೆ ಒಂದೇ ಬೆಳಕಿನ ರೂಪವಾಗಿದ್ದುಕೊಂಡು ಭುವನವನ್ನು – ಇದರಲ್ಲಿ ಪ್ರಾಣಿಗಳು ಉಂಟಾಗುತ್ತಿರುವದರಿಂದ ಈ ಲೋಕವು ಭುವನವೆನಿಸುವದು. ಆ ಈ (ಭುವನವನ್ನು)–ಹೊಕ್ಕು ರೂಪರೂಪಕ್ಕೂ ಎಂದರೆ (ತಾನು) ಸುಡುವ ಕಟ್ಟಿಗೆಯೇ ಮುಂತಾದ ಬೇರೆ ಬೇರೆಯ ವಸ್ತುವಿಗೂ ಎಂದರ್ಥ. (ಒಂದೊಂದಕ್ಕೂ) ಪ್ರತಿರೂಪವಾಗಿ ಅಲ್ಲಲ್ಲಿ ಪ್ರತಿರೂಪವುಳ್ಳದ್ದಾಗಿ[1] ಸುಡತಕ್ಕ (ವಸ್ತುಗಳ) ಭೇದವನ್ನು ಅನುಸರಿಸಿ (ತಾನೂ) ಹೇಗೆ ಬಹುವಿಧವಾಗಿರುವದೋ ಹಾಗೆಯೇ ಸರ್ವಭೂತಾಂತರಾತ್ಮನಾದ ಎಂದರೆ ಎಲ್ಲಾ ಭೂತಗಳಿಗೂ ಒಳಗಿರುವ ಆತ್ಮನು ಒಬ್ಬನೇ ಬಲು ಸೂಕ್ಷ್ಮನಾಗಿರುವದರಿಂದ[2] ಕಟ್ಟಿಗೆಯೇ ಮುಂತಾದವುಗಳಲ್ಲಿ (ಬೆಂಕಿಯು ಹೊಕ್ಕಿರುವ) ಹಾಗೆ ರೂಪರೂಪಕ್ಕೂ ಎಲ್ಲ ದೇಹಗಳಲ್ಲಿಯೂ ಹೊಕ್ಕಿರುವದರಿಂದ (ಅವುಗಳಿಗೆ) ಪ್ರತಿರೂಪನಾಗಿರುವನು, ಹೊರಗೂ[3] ತನ್ನದಾದ, ಆಕಾಶದಂತೆ ವಿಕಾರವಿಲ್ಲದ, ರೂಪದಿಂದ ಇರುವನು.

ವಾಯುರ್ಯಥೈಕೋ ಭುವನಂ ಪ್ರವಿಷ್ಟೋ
ರೂಪಂ ರೂಪಂ ಪ್ರತಿರೂಪೋ ಬಭೂವ ।
ಏಕಸ್ತಥಾ ಸರ್ವಭೂತಾನ್ತರಾತ್ಮಾ
ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥ ೧೦ ॥

೧೦. ವಾಯುವು ಒಂದೇ ಹೇಗೆ ಭುವನವನ್ನು ಹೊಕ್ಕು ರೂಪ ರೂಪಕ್ಕೂ ಪ್ರತಿರೂಪವಾಗಿರುವದೋ ಹಾಗೆ ಸರ್ವಭೂತಾಂತರಾತ್ಮನಾದ ಒಬ್ಬನೇ ರೂಪರೂಪಕ್ಕೂ ಪ್ರತಿರೂಪನಾಗಿರುವನು, ಹೊರಗೂ ಇರುವನು.

(ಭಾಷ್ಯ)

೧೪೪. ತಥಾನ್ಯೋ ದೃಷ್ಟಾನ್ತಃ । " ವಾಯುರ್ಯಥೈಕಃ " ಇತ್ಯಾದಿ । ಪ್ರಾಣಾತ್ಮನಾ ದೇಹೇಷ್ವನುಪ್ರವಿಷ್ಟಃ । " ರೂಪಂ ರೂಪಂ ಪ್ರತಿರೂಪೋ ಬಭೂವ " ಇತ್ಯಾದಿ ಸಮಾನಮ್ ॥

1. ಆಯಾ ವಸ್ತುವಿನ ಆಕಾರಕ್ಕೆ ತಕ್ಕ ರೂಪವನ್ನು ತಳೆದಂತೆ ಆಗಿ.

2. ಸೂಕ್ಷ್ಮವಾದದ್ದು ಸ್ಥೂಲವಾದದ್ದನ್ನು ವ್ಯಾಪಿಸಿಕೊಳ್ಳುವದು.

3. ಉಪಾಧಿಯಿಂದ ತೋರುವ ಕಲ್ಪಿತರೂಪವಾದ ಜೀವರೂಪದಿಂದಲ್ಲದೆ ಉಪಾಧಿಗೆ ಅಧೀನವಾಗದ ಸ್ವತಂತ್ರವಾದ ಶುದ್ಧ ಚಿನ್ಮಾತ್ರವಾದ ತನ್ನ ರೂಪದಿಂದಲೂ ಇರುತ್ತಾನೆಂದು ಅರ್ಥ.

(ಭಾಷ್ಯಾರ್ಥ)

ಮತ್ತೂ ಒಂದು ದೃಷ್ಟಾಂತ: "ವಾಯು ಒಂದೇ ಹೇಗೆ" ಇತ್ಯಾದಿ. (ವಾಯು) ಪ್ರಾಣರೂಪದಿಂದ ದೇಹಗಳಲ್ಲಿ ಹೊಕ್ಕಿರುತ್ತದೆ "ರೂಪರೂಪಕ್ಕೂ ಪ್ರತಿರೂಪವಾಗಿರುವದು" ಎಂದು ಮುಂತಾಗಿರುವದು (ಹಿಂದಿನ ಮಂತ್ರಕ್ಕೂ ಇದಕ್ಕೂ) ಸಮಾನವಾಗಿರುತ್ತದೆ.

(ಭಾಷ್ಯ)

೧೪೬ ಏಕಸ್ಯ ಸರ್ವಾತ್ಮತ್ವೇ ಸಂಸಾರದುಃಖಿತ್ವಂ ಪರಸ್ಯೈವ ಸ್ಯಾತ್ ಇತಿ ಪ್ರಾಪ್ತಮ್ । ಅತ ಇದಮುಚ್ಯತೇ--

(ಭಾಷ್ಯಾರ್ಥ)

ಒಬ್ಬನೇ ಎಲ್ಲರಿಗೂ ಆತ್ಮನಾದರೆ ಸಂಸಾರದ ದುಃಖವನ್ನು ಅನುಭವಿಸುವದೆಂಬುದು ಪರಮಾತ್ಮನಿಗೇ[1] ಎಂದಾಯಿತು ಆದ್ದರಿಂದ ಈ (ವಾಕ್ಯವನ್ನು) ಹೇಳಲಾಗುವದು ---

ಸೂರ್ಯೋ ಯಥಾ ಸರ್ವಲೋಕಸ್ಯ ಚಕ್ಷು-
ರ್ನ ಲಿಪ್ಯತೇ ಚಾಕ್ಷುಷೈರ್ಬಾಹ್ಯದೋಷೈಃ ।
ಏಕಸ್ತಥಾ ಸರ್ವಭೂತಾನ್ತರಾತ್ಮಾ
ನ ಲಿಪ್ಯತೇ ಲೋಕದುಃಖೇನ ಬಾಹ್ಯಃ ॥ ೧೧ ॥

೧೧. ಸೂರ್ಯನು ಎಲ್ಲಾ ಜನರಿಗೂ ಕಣ್ಣಾದರೂ ಹೇಗೆ ಕಣ್ಣಿನ (ಮತ್ತು) ಹೊರಗಿನ ದೋಷಗಳಿಂದ ಲಿಪ್ತನಾಗದೆ ಇರುವನೋ ಹಾಗೆ ಸರ್ವಭೂತಾಂತರಾತ್ಮನಾದ ಒಬ್ಬನೇ (ಆತ್ಮನು) ಜನರ ದುಃಖದಿಂದ ಲಿಪ್ತನಾಗದೆ ಹೊರಗೆ ಇರುತ್ತಾನೆ.

(ಭಾಷ್ಯ)

೧೪೭. ಸೂರ್ಯೋ ಯಥಾ ಚಕ್ಷುಷ ಆಲೋಕೇನೋಪಕಾರಂ ಕುರ್ವನ್ ಮೂತ್ರಪುರೀಷಾದ್ಯಶುಚಿಪ್ರಕಾಶನೇನ ತದ್ದರ್ಶಿನಃ ಸರ್ವಲೋಕಸ್ಯ ಚಕ್ಷುರಪಿ ಸನ್ ನ ಲಿಪ್ಯತೇ ಚಾಕ್ಷುಷೈಃ ಅಶುಚ್ಯಾದಿದರ್ಶನನಿಮಿತ್ತೈಃ ಆಧ್ಯಾತ್ಮಿಕೈಃ ಪಾಪದೋಷೈಃ ಬಾಹ್ಯೈಶ್ಚಾಶುಚ್ಯಾದಿಸಂಸರ್ಗದೋಷೈಃ । ಏಕಃ ಸನ್ ತಥಾ ಸರ್ವಭೂತಾನ್ತರಾತ್ಮಾ ನ ಲಿಪ್ಯತೇ ಲೋಕದುಃಖೇನ ಬಾಹ್ಯಃ ॥

1. ನೀ. ಭಾ. ೧೩-೨; ಸೂ. ಭಾ. ೧-೨-೮, ೨-೩-೪೬ ರಲ್ಲಿ ಈ ವಿಷಯವನ್ನು ಚರ್ಚಿಸಿವೆ.

(ಭಾಷ್ಯಾರ್ಥ)

ಸೂರ್ಯನು ಹೇಗೆ ಬೆಳಕಿನಿಂದ ಕಣ್ಣಿಗೆ ಸಹಾಯಮಾಡುತ್ತಾ ಮಂತ್ರ, ಮಲ-ಮುಂತಾದ ಅಶುಚಿಯಾದ (ಪದಾರ್ಥಗಳನ್ನು) ತೋರಿಸುವದರಿಂದ ಅದನ್ನು ಕಾಣುವ ಜನರಿಗೆಲ್ಲಾ ಕಣ್ಣಾಗಿದ್ದರೂ ಅಶುಚಿಯಾದ (ಪಥಾರ್ಥ)ವೇ ಮುಂತಾದದ್ದನ್ನು ನೋಡಿದ್ದರಿಂದ ಉಂಟಾಗಬಹುದಾದ ಒಳಗಿನ ದೋಷಗಳಿಂದಲೂ ಹೊರಗಿನ ಅಶುಚಿ (ಪದಾರ್ಥ)ಗಳ ಸಂಬಂಧದಿಂದ ಉಂಟಾಗುವ ದೋಷಗಳಿಂದಲೂ ಲಿಪ್ತನಾಗದೆ ಇರುವನೋ, ಅದರಂತೆ ಎಲ್ಲಾ ಪ್ರಾಣಿಗಳ ಅಂತರಾತ್ಮನಾದ (ಆತ್ಮನು) ಒಬ್ಬನೇ ಆದರೂ ಜನರ ದುಃಖದಿಂದ ಲಿಪ್ತನಾಗದೆ (ಅದಕ್ಕೆ) ಹೊರಚ್ಚಾಗಿರುವನು.

(ಭಾಷ್ಯ)

೧೪೮. ಲೋಕೋ ಹಿ ಅವಿದ್ಯಯಾ ಸ್ವಾತ್ಮನ್ಯಧ್ಯಸ್ತಯಾ ಕಾಮಕರ್ಮೋದ್ಭವಂ ದುಃಖಮ್ ಅನುಭವತಿ । ನ ತು ದುಃಖಮ್ ಅನುಭವತಿ । ನ ತು ಸಾ ಪರಮಾರ್ಥತಃ ಸ್ವಾತ್ಮನಿ । ಯಥಾ ರಜ್ಜುಶುಕ್ತಿಕೋಷರಗಗನೇಷು ಸರ್ಪರಜತೋದಕಮಲಾನಿ ನ ರಜ್ಜ್ವಾದೀನಾಂ ಸ್ವತೋ ದೋಷರೂಪಾಣಿ ಸನ್ತಿ ಸಂಸರ್ಗಿಣಿ ವಿಪರೀತಬುದ್ಧ್ಯಧ್ಯಾಸನಿಮಿತ್ತಾತ್ತು ತದ್ದೋಷವದ್ ವಿಭಾವ್ಯನ್ತೇ । ನ ತದ್ದೋಷೈಸ್ತೇಷಾಂ ಲೇಪಃ ವಿಪರೀತಬುದ್ಧ್ಯಧ್ಯಾಸಬಾಹ್ಯಾ ಹಿ ತೇ । ತಥಾ ಆತ್ಮನಿ ಸರ್ವೋ ಲೋಕಃ ಕ್ರಿಯಾಕಾರಕಫಲಾತ್ಮಕಂ ವಿಜ್ಞಾನಂ ಸರ್ಪಾದಿಸ್ಥಾನೀಯಂ ವಿಪರೀತಮ್ ಅಧ್ಯಸ್ಯ ತನ್ನಿಮಿತ್ತಂ ಜನ್ಮಜರಾಮರಣಾದಿದುಃಖಮನುಭವತಿ । ನ ತ್ವಾತ್ಮಾ ಸರ್ವಲೋಕಾತ್ಮಾಪಿ ಸ್ವ ವಿಪರೀತಾಧ್ಯಾರೋಪನಿಮಿತ್ತೇನ ಲಿಪ್ಯತೇ ಲೋಕದುಃಖೇನ । ಕುತಃ ? ಬಾಹ್ಯಃ । ರಜ್ಜ್ವಾದಿವದೇವ ವಿಪರೀತಬುದ್ಧ್ಯಧ್ಯಾಸಬಾಹ್ಯೋ ಹಿ ಸ ಇತಿ ॥

(ಭಾಷ್ಯಾರ್ಥ)

ಇದು ಹೇಗೆಂದರೆ **ಜನರು ತಮ್ಮ ಸ್ವರೂಪದಲ್ಲಿ ಆರೋಪಿಸಿಕೊಂಡಿರುವ ಅವಿದ್ಯೆ**[1] **ಯಿಂದ ಕಾಮಕರ್ಮಗಳಿಂದುಂಟಾಗುವ ದುಃಖವನ್ನು ಅನುಭವಿಸುವರು. ಆದರೆ ಆ (ಅವಿದ್ಯೆಯು) ನಿಜವಾಗಿಯೂ ಅವರ ಆತ್ಮನಲ್ಲಿರುವದಿಲ್ಲ.**[2] ಹೇಗೆ ಹಗ್ಗ, ಕಪ್ಪೆಯಚಿಪ್ಪು, ಮರುಭೂಮಿ, ಆಕಾಶ-ಇವುಗಳಲ್ಲಿ

---

1 ಅವಿದ್ಯೆ ಎಂದರೆ ತಪ್ಪು ತಿಳಿವಳಿಕೆ. ಇದು ಪರಮಾರ್ಥವಾಗಿ ಆತ್ಮನಲ್ಲಿಲ್ಲ; ಜನರು ಹುಟ್ಟುಗಟ್ಟಿಕೊಂಡಿರುತ್ತಾರೆ

2. ಗೀ. ಭಾ ೧೩-೨ "ಅವಿದ್ಯಾವತ್ತ್ವಾತ್ ಕ್ಷೇತ್ರಜ್ಞಸ್ಯ ಸಂಸಾರಿತ್ವಮ್"; ತೈ. ಭಾ. ೨-೮ "ವಿದ್ಯಾವಿದ್ಯಯೋಸ್ತದ್ಧರ್ಮತ್ವಮ್"; ಬೃ ಭಾ ೪-೪-೬ "ಅವಿದ್ಯಾನಿವೃತ್ತೇಃ ನಿವೃತ್ತಿಕೃತೋ ವಿಶೇಷ ಆತ್ಮನಃ ಸ್ಯಾತ್ ॥ ಈ ಭಾಷ್ಯಗಳನ್ನು ಹೋಲಿಸಿರಿ

ಹಾವು, ಬೆಳ್ಳಿ, ನೀರು, ಮಸಕು–ಇವು ಹಗ್ಗ ಮುಂತಾದವುಗಳಿಗೆ ಸ್ವಭಾವದಿಂದಲೇ (ಅವುಗಳ) ದೋಷವಾಗಿರುವದಿಲ್ಲವೋ (ಆಯಾ) ಸಂಬಂಧವುಳ್ಳ (ಪದಾರ್ಥದಲ್ಲಿ) ಅದಕ್ಕೆ ವಿರುದ್ಧವಾದ ಬುದ್ಧಿಯನ್ನು ಆರೋಪಮಾಡುವ ಕಾರಣದಿಂದ ಮಾತ್ರ ಅದರ ದೋಷವೆಂದು ಎಣಿಸಲ್ಪಡುವವೋ, (ಆದರೆ) ವಿರುದ್ಧವಾದ ಬುದ್ಧಿಯ ಆರೋಪಕ್ಕೆ ಅವು ಹೊರಚ್ಚಾಗಿಯೇ ಇರುವದರಿಂದ ಆ (ಹುಟ್ಟುಗಟ್ಟಿದ) ದೋಷಗಳಿಂದ ಅವುಗಳಿಗೆ ಹೇಗೆ ಲೇಪವಿರುವದಿಲ್ಲವೋ, ಅದರಂತೆ ಜನರೆಲ್ಲರೂ ಹಗ್ಗದ ಹಾವೇ ಮುಂತಾದವುಗಳಂತೆ (ಆತ್ಮಸ್ವಭಾವಕ್ಕೆ) ವಿರುದ್ಧವಾದ ಕ್ರಿಯೆ, ಕಾರಕ, ಫಲ–ಎಂಬ ತಿಳಿವಳಿಕೆಯನ್ನು ಆತ್ಮನಲ್ಲಿ ಹುಟ್ಟುಗಟ್ಟಿಕೊಂಡು ಆ ಕಾರಣದಿಂದ ಹುಟ್ಟು ಹೊಂದು–ಮುಂತಾದ ದುಃಖವನ್ನು ಹೊಂದುವರು. ಆತ್ಮನು ಮಾತ್ರ ಎಲ್ಲಾ ಜನರ ಆತ್ಮನಾಗಿದ್ದರೂ (ಅದಕ್ಕೆ) ವಿರುದ್ಧವಾದ ಆರೋಪದ ನಿಮಿತ್ತದಿಂದಾಗುವ ಜನರ ದುಃಖದಿಂದ ಲೇಪವನ್ನು ಹೊಂದದೆ ಇರುವನು ಏಕೆಂದರೆ ಅವನು ಹೊರಗೆ ಇರುತ್ತಾನೆ, ಎಂದರೆ ಹಗ್ಗವೇ ಮುಂತಾದವುಗಳಂತೆಯೇ (ತನ್ನ ಸ್ವಭಾವಕ್ಕೆ) ವಿರುದ್ಧವಾದ ಬುದ್ಧಿಯ ಅಧ್ಯಾಸಕ್ಕೆ ಅವನು ಹೊರಚ್ಚಾಗಿಯೇ [1] ಇರುತ್ತಾನೆ

ಏಕೋ ವಶೀ ಸರ್ವಭೂತಾನ್ತರಾತ್ಮಾ
ಏಕಂ ರೂಪಂ ಬಹುಧಾ ಯಃ ಕರೋತಿ ।
ತಮಾತ್ಮಸ್ಥಂ ಯೇ ಽನುಪಶ್ಯನ್ತಿ ಧೀರಾ-
ಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್ ॥ ೧೨ ॥

೧೨. ವಶಿಯಾಗಿಯೂ ಸರ್ವಭೂತಾಂತರಾತ್ಮನಾಗಿಯೂ ಇರುವ ಯಾವನೊಬ್ಬನೇ ಒಂದು ರೂಪವನ್ನು ಬಹುವಿಧವಾಗಿ ಮಾಡಿಕೊಂಡಿರುವನೋ (ತಮ್ಮ) ಆತ್ಮದಲ್ಲಿರುವ ಆತ್ಮನನ್ನು ಯಾವ ಧೀರರು (ಉಪದೇಶವಾದ) ಬಳಿಕ ಕಾಣುವರೋ ಅವರಿಗೇ ಶಾಶ್ವತವಾದ ಸುಖವು ಉಳಿದವರಿಗಲ್ಲ.

(ಭಾಷ್ಯ)

೧೪. ಕಿಂಚ ಸ ಹಿ ಪರಮೇಶ್ವರಃ ಸರ್ವಗತಃ ಸ್ವತನ್ತ್ರ ಏಕಃ ನ ತತ್ಸಮೋ ಽಭ್ಯಧಿಕೋ ವಾ ಅನ್ಯೋ ಽಸ್ತಿ । ವಶೀ ಸರ್ವಂ ಹ್ಯಸ್ಯ ಜಗದ್ವಶೇ ವರ್ತತೇ । ಕುತಃ ? ಸರ್ವಭೂತಾನ್ತರಾತ್ಮಾ । ಯತ ಏಕಮೇವ ಸದೇಕರಸಮ್ ಆತ್ಮಾನಂ ವಿಶುದ್ಧ ವಿಜ್ಞಾನಘನರೂಪಂ ನಾಮರೂಪಾದ್ಯಶುದ್ಧೋಪಾಧಿಭೇದವಶೇನ ಬಹುಧಾ ಅನೇಕ

1. ಅಧ್ಯಸ್ತವಾದ ಕೋರಿಕೆಯ ಸಂಬಧವು ಅವರಿಗಿಲ್ಲವೇಇಲ್ಲ

ಪ್ರಕಾರೇಣ ಯಃ ಕರೋತಿ ಸ್ವಾತ್ಮಸತ್ತಾಮಾತ್ರೇಣ ಅಚಿನ್ತ್ಯಶಕ್ತಿತ್ವಾತ್ । ತಮ್ ಆತ್ಮಸ್ಥಂ ಸ್ವಶರೀರಹೃದಯಾಕಾಶೇ ಬುದ್ಧಾ ಚೈತನ್ಯಾಕಾರೇಣಾಭಿವ್ಯಕ್ತಮ್ ಇತ್ಯೇತತ್ । ನ ಹಿ ಶರೀರಸ್ಯ ಆಧಾರತ್ವಮಾತ್ಮನಃ । ಆಕಾಶವದಮೂರ್ತತ್ವಾತ್ । ಆದರ್ಶಸ್ಥಂ ಮುಖಮ್ ಇತಿ ಯದ್ವತ್ । ತಮೇತಂ ಈಶ್ವರಮ್ ಆತ್ಮಾನಂ ಯೇ ನಿವೃತ್ತಬಾಹ್ಯವೃತ್ತಯಃ ಅನುಪಶ್ಯನ್ತಿ ಆಚಾರ್ಯಾಗಮೋಪದೇಶಮನು ಸಾಕ್ಷಾದನುಭವನ್ತಿ ಧೀರಾ ವಿವೇಕಿನಃ ತೇಷಾಂ ಪರಮೇಶ್ವರಭೂತಾನಾಂ ಶಾಶ್ವತಂ ನಿತ್ಯಂ ಸುಖಮ್ ಆತ್ಮಾನನ್ದಲಕ್ಷಣಂ ಭವತಿ । ನೇತರೇಷಾಂ ಬಾಹ್ಯಾಸಕ್ತಬುದ್ಧೀನಾಮ್ ಅವಿವೇಕಿನಾಂ ಸ್ವಾತ್ಮಭೂತಮಪಿ ಅವಿದ್ಯಾವ್ಯವಧಾನಾತ್ ॥

(ಭಾಷ್ಯಾರ್ಥ)

ಮತ್ತು ಆ (ಆತ್ಮನೇ) ಪರಮೇಶ್ವರನು, ಎಲ್ಲೆಲ್ಲಿಯೂ ಹಬ್ಬಿಕೊಂಡಿರುವವನು, (ಅವನು) ಒಬ್ಬನೇ. ಅವನಿಗೆ ಸಮನಾದ ಅಥವಾ ಹೆಚ್ಚಾದ ಬೇರೊಬ್ಬನು ಇರುವದಿಲ್ಲ [1] ಅವನು ವಶಿಯು, ಏಕೆಂದರೆ ಜಗತ್ತೆಲ್ಲವೂ ಇವನ ವಶದಲ್ಲಿರುತ್ತದೆ. ಅವನೇ? ಎಂದರೆ ಇವನು ಎಲ್ಲಾ ಪ್ರಾಣಿಗಳಿಗೂ ಒಳಗಿನ ಆತ್ಮನು. ಅದು ಹೇಗೆಂದರೆ ಒಂದೇ ಆಗಿರುವ ಎಂದರೆ ಸದ್ರೂಪವೊಂದೇ ಆಗಿರುವ ಅತಿಶುದ್ಧವಾದ ಅರಿವಿನ ಗಟ್ಟಿಯಾಗಿರುವ ಆತ್ಮನೊ (ಬ್ಬನನ್ನೇ) ನಾಮ, ರೂಪ - ಮುಂತಾದ ಅಶುದ್ಧವಾದ [2] ಉಪಾಧಿಗಳು ಬೇರೆಬೇರೆಯಾಗಿರುವ ಕಾರಣದಿಂದ ಬಹು ವಿಧವಾಗಿ ಅನೇಕ ಪ್ರಕಾರವಾಗಿ ಯಾವನು ಅಚಿಂತ್ಯವಾದ ಶಕ್ತಿಗಳುಳ್ಳವನಾಗಿರುವದರಿಂದ [3] ತನ್ನ ಇರುವಿಕೆಯ ಮಾತ್ರದಿಂದಲೇ [4] ಯಾವನು ಮಾಡಿಕೊಂಡಿರುವನೋ (ತಮ್ಮ) ಆತ್ಮದಲ್ಲಿರುವ ಎಂದರೆ ಶರೀರದ ಹೃದಯಾಕಾಶದಲ್ಲಿರುವ, ಬುದ್ಧಿಯಲ್ಲಿ ಚೈತನ್ಯರೂಪದಿಂದ ತೋರಿಕೊಳ್ಳುತ್ತಿರುವ ಎಂದರ್ಥ ಏಕೆಂದರೆ ಆಕಾಶದಂತೆ ಅಮೂರ್ತನಾಗಿರುವದರಿಂದ ಆತ್ಮನಿಗೆ ಶರೀರವು (ನಿಜವಾಗಿಯೂ) ಆಧಾರವೆನ್ನುವದು ಹೊಂದುವದಿಲ್ಲ. [5] (ಆದ್ದರಿಂದ) ಕನ್ನಡಿಯಲ್ಲಿ ಮುಖವಿದೆ ಎಂಬ ಪ್ರಯೋಗದಂತೆ [6] ಇದನ್ನು

1 ಗೀ ೧೧-೪೩. ಶ್ವೇ ೬-೮ ಸಮನಿಲ್ಲ' ಎಂಬುದರಿಂದ ಆತ್ಮಾನೇಕತ್ವವನ್ನೂ 'ಅಧಿಕನಿಲ್ಲ' ಎಂಬುದರಿಂದ ಆತ್ಮೇಶ್ವರಭೇದವನ್ನೂ ನಿರಾಕರಿಸುತ್ತದೆ.

2. ರಾಗದ್ವೇಷಗಳಿಗೂ ಕಾರಣವಾಗಿರುವದರಿಂದ ನಾನಾರೂಪಗಳು ಅಶುದ್ಧ ಅವನ ಸ್ವರೂಪದಲ್ಲಿ ಆರೋಪಿಸಿದ ದೋಷವು ನಿಜವಾಗಿರುವದೇ ಇಲ್ಲ.

3. ಈ ಶಕ್ತಿಗಳೂ ಅವಿದ್ಯಾಕಲ್ಪಿತ ಸೂ. ಭಾ. ೪-೩-೧೪ ನೋಡಿ.

4. ಸ್ವಪ್ರಯತ್ನವೇನೂ ಇಲ್ಲದೆಯೇ, ಏಕೆಂದರೆ ಸೃಷ್ಟಿ ಪರಮಾರ್ಥವಲ್ಲ.

5 ಮು. ಭಾ. ೨-೨-೭ "ಬ್ರಹ್ಮಪುರೇ" ಎಂಬುದರ ವ್ಯಾಖ್ಯಾನವನ್ನು ನೋಡಿ.

6. 'ಕನ್ನಡಿಯಲ್ಲಿ ಮುಖವಿದೆ' ಎಂದರೆ ತೋರಿಕೊಳ್ಳುತ್ತಿದೆ ಎಂದೇ ಅರ್ಥ; ಅದರಂತೆ ಬುದ್ಧಿಯಲ್ಲಿ ತೋರಿಕೊಳ್ಳುತ್ತಿರುವ ಎಂದೇ ವ್ಯಾಖ್ಯಾನಮಾಡಬೇಕು.

ಅರಿಯಬೇಕು. ಹಾಗೆ (ಶರೀರದಲ್ಲಿರುವ) ಈಶ್ವರನಾದ **ಈ ಆತ್ಮನನ್ನು ಯಾರು ಹೊರಗಿನ ವೃತ್ತಿಗಳನ್ನು ಹಿಂತಿರುಗಿಸಿಕೊಂಡು ಯಾವ ಧೀರರು ಎಂದರೆ ವಿವೇಕಿಗಳು "ಅನುಪಶ್ಯನ್ತಿ" ಎಂದರೆ ಆಚಾರ್ಯನ ಮತ್ತು ಶಾಸ್ತ್ರದ ಉಪದೇಶವನ್ನು ಅನುಸರಿಸಿ**[1] **ನೇರಾಗಿ ಅನುಭವಿಸುವರೋ** ಆ ಪರಮೇಶ್ವರಸ್ವರೂಪರಿಗೇ[2] ಶಾಶ್ವತವಾದ ನಿತ್ಯವಾದ ಆತ್ಮಾನಂದರೂಪವಾದ ಸುಖವು ಆಗುವದು, ಹೊರಗೇ ಆಸಕ್ತಿಯನ್ನಿಟ್ಟುಕೊಂಡಿರುವ ಬುದ್ಧಿಯುಳ್ಳ ಅವಿವೇಕಿಗಳಾದ ಇತರರಿಗೆ ಅವರ ಆತ್ಮವೇ[3] ಆಗಿದ್ದರೂ (ಈ ಸುಖವು) ಉಂಟಾಗಲಾರದು. ಏಕೆಂದರೆ ಅವಿದ್ಯೆಯೇ ಇದಕ್ಕೆ ಮರೆಯಾಗಿರುವದು.[4]

ನಿತ್ಯೋಽನಿತ್ಯಾನಾಂ ಚೇತನಶ್ಚೇತನಾನಾ-
ಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್ ।
ತಮಾತ್ಮಸ್ಥಂ ಯೇಽನುಪಶ್ಯನ್ತಿ ಧೀರಾ-
ಸ್ತೇಷಾಂ ಶಾನ್ತಿಃ ಶಾಶ್ವತೀ ನೇತರೇಷಾಮ್ ॥ ೧೩ ॥

೧೩. ಅನಿತ್ಯವಾದವುಗಳಲ್ಲಿ ನಿತ್ಯನಾಗಿ ಚೇತನರುಗಳಿಗೆ ಚೇತನನಾಗಿ ಒಬ್ಬನೇ ಬಹು.(ಜೀವ)ರಿಗೆ ಯಾವನು ಕಾಮಗಳನ್ನು ವಿಧಾನಮಾಡುತ್ತಿರುವನೋ (ತಮ್ಮ) ಆತ್ಮದಲ್ಲಿರುವ ಆತನನ್ನು ಯಾವ ಧೀರರು (ಉಪದೇಶವಾದ) ಬಳಿಕ ಕಾಣುವರೋ ಅವರಿಗೇ ಶಾಶ್ವತವಾದ ಶಾಂತಿಯು, ಉಳಿದವರಿಗಲ್ಲ.

(ಭಾಷ್ಯ)

೧೫೦. ಕಿಂ ಚ ನಿತ್ಯಃ ಅವಿನಾಶೀ ಅನಿತ್ಯಾನಾಂ ವಿನಾಶಿನಾಮ್ । ಚೇತನಃ ಚೇತನಾನಾಂ ಚೇತಯಿತೄಣಾಂ ಬ್ರಹ್ಮಾದೀನಾಂ ಪ್ರಾಣಿನಾಮ್ ಅಗ್ನಿನಿಮಿತ್ತಮಿವ ದಾಹಕತ್ವಮನಗ್ನೀನಾಮ್ ಉದಕಾದೀನಾಮ್ ಆತ್ಮಚೈತನ್ಯನಿಮಿತ್ತಮೇವ ಚೇತಯಿತೃತ್ವಮನ್ಯೇಷಾಮ್। ಕಿಂ ಚ ಸ ಸರ್ವಜ್ಞಃ ಸರ್ವೇಶ್ವರಃ ಕಾಮಿನಾಂ ಸಂಸಾರಿಣಾಂ

---

1. ಜ್ಞಾನಿಗಳಾದವರು ತಮ್ಮ ಆತ್ಮನನ್ನು ನೇರಾಗಿ ಅನುಭವಿಸುವಂತೆ ಪ್ರಮಾಣಗಳ ವ್ಯವಧಾನವಿಲ್ಲದೆ.

2. ಜ್ಞಾನದಿಂದ ಪರಮಾತ್ಮಸ್ವರೂಪರೇ ಆದವರಿಗೆ ಪರಮಾತ್ಮನ ಸ್ವರೂಪವಾದ ನಿತ್ಯ ಸುಖವು ದಕ್ಕುತ್ತದೆ.

3. ಸ್ವರೂಪವೇ ಆಗಿದ್ದರೂ.

4. ತಪ್ಪುತಿಳಿವಳಿಕೆಯು ಮಾತ್ರ ಮರೆಯಾಗಿರುವ ಆನಂದವು ಸರಿಯಾದ ತಿಳಿವಳಿಕೆಯಿಂದಲೇ ತೋರಿಕೊಳ್ಳಬೇಕಾಗಿರುವದು.

ಕರ್ಮಾನುರೂಪಂ ಕಾಮಾ೯ ಕರ್ಮಫಲಾನಿ ಸ್ವಾನುಗ್ರಹನಿಮಿತ್ತಾಂಶ್ಚ ಕಾಮಾ೯ ಯಃ ಏಕೋ ಬಹೂನಾಮ್ ಅನೇಕೇಷಾಮ್ ಅನಾಯಾಸೇನ ವಿದಧಾತಿ ಪ್ರಯಚ್ಛತಿ ಇತ್ಯೇತತ್। ತಮ್ ಆತ್ಮಸ್ಥಂ ಯೇ ಅನುಪಶ್ಯನ್ತಿ ಧೀರಾಃ ತೇಷಾಂ ಶಾನ್ತಿಃ ಉಪರತಿಃ ಶಾಶ್ವತೀ ನಿತ್ಯಾ ಸ್ವಾತ್ಮಭೂತೈವ ಸ್ಯಾತ್ । ನ ಇತರೇಷಾಮ್ ಅನೇವಂ ವಿಧಾನಾಮ್ ॥

(ಭಾಷ್ಯಾರ್ಥ)

ಮತ್ತು ಅನಿತ್ಯವಾದವುಗಳಲ್ಲಿ [1] ಎಂದರೆ ವಿನಾಶವಾಗುತ್ತಿರುವ (ಪ್ರಾಣಿ)ಗಳಲ್ಲಿ ನಿತ್ಯನು ಎಂದರೆ ನಾಶವಾಗದೆ ಇರುವನು ಚೇತನರುಗಳಿಗೆ ಎಂದರೆ ಅರಿಯುವ ಬ್ರಹ್ಮನೇ ಮೊದಲಾದ ಪ್ರಾಣಿಗಳಿಗೆ ಚೇತನನಾಗಿರುವನು. ಬೆಂಕಿಯಲ್ಲದ ನೀರು ಮುಂತಾದವುಗಳಿಗೆ ಸುಡುವಿಕೆಯು ಬೆಂಕಿಯ ನಿಮಿತ್ತದಿಂದ ಆಗುವಂತೆ ಆತ್ಮನ ಚೈತನ್ಯದ ನಿಮಿತ್ತದಿಂದಲೇ ಮಿಕ್ಕವರಿಗೆ ಅರಿವುಉಂಟಾಗುವದು. ಮತ್ತು ಆ ಸರ್ವಜ್ಞನಾದ ಸರ್ವೇಶ್ವರನು ಕಾಮಿಗಳಾದ ಸಂಸಾರಿಗಳಿಗೆ ಕರ್ಮಗಳಿಗೆ ಅನುಗುಣವಾಗಿ ಕಾಮಗಳನ್ನು ಎಂದರೆ ಕರ್ಮಕ್ಕೆ ಫಲಗಳೂ ತನ್ನ ಅನುಗ್ರಹದಿಂದ ಉಂಟಾಗುವವೂ [2] ಆಗಿರುವ ಕಾಮಗಳನ್ನು ಯಾವನೊಬ್ಬನೇ ಅನೇಕರಿಗೆ ಆಯಾಸವಿಲ್ಲದೆ [3] ವಿಧಾನಮಾಡುತ್ತಿರುವನೋ ಎಂದರೆ ಕೊಡುತ್ತಿರುವನೋ ಎಂದರ್ಥ. ತಮ್ಮ ಶರೀರದಲ್ಲಿರುವ ಆತನನ್ನು ಯಾವ ಧೀರರು (ಉಪದೇಶ) ವನ್ನನುಸರಿಸಿ ಕಂಡುಕೊಳ್ಳುವರೋ, ಅವರಿಗೇ ಶಾಶ್ವತವಾದ ನಿತ್ಯವಾದ ಶಾಂತಿಯು ಉಪರತಿಯು, ತಮ್ಮ ಸ್ವರೂಪವೇ ಆಗಿ (ರುವ ಉಪರತಿಯು) ಉಂಟಾಗುವದು, ಹೀಗಿಲ್ಲದ ಉಳಿದವರಿಗೆ ಆಗದು.

ಬ್ರಹ್ಮವು ಸ್ವಪ್ರಕಾಶವು

ತದೇತದಿತಿ ಮನ್ಯನ್ತೇಽ
ನಿರ್ದೇಶ್ಯಂ ಪರಮಂ ಸುಖಮ್ ।
ಕಥಂ ನು ತದ್ವಿಜಾನೀಯಾಂ
ಕಿಮು ಭಾತಿ ವಿಭಾತಿ ವಾ ॥ ೧೪ ॥

---

1. "ನಿತ್ಯಾನಾಮ್" ಎಂಬ (ವಾ॥) ಪಾಠದಲ್ಲಿ ನಿತ್ಯವಾದ ಆಕಾಶಾದಿಗಳ ನಿತ್ಯತ್ವವು ಆತ್ಮನಿಮಿತ್ತನಾಗಿರುವದು ಎಂದು ಅಭಿಪ್ರಾಯ.

2. ಕರ್ಮಕ್ಕೆ ಫಲವು ಈಶ್ವರನಿಂದಲೇ ಆಗುವದು. ಸೂ. ಭಾ. ೩-೨-೪೮, ೪೧.೦

3. ಸರ್ವಶಕ್ತಿತ್ವವನ್ನು ಸೂಚಿಸುವ ವಿಶೇಷಣವಿದು.

೧೪. ಅನಿರ್ದೇಶ್ಯವಾದ ಪರಮ ಸುಖವನ್ನು ಅದು ಇದೇ ಎಂದ ಅರಿಯುತ್ತಾರೆ. ಅದನ್ನು ಹೇಗೆ ತಿಳಿದುಕೊಳ್ಳಲಿ? ಅದು ಬೆಳಗುವದೊ ಅಥವಾ ಚೆನ್ನಾಗಿ ಕಾಣುವದೊ?

(ಭಾಷ್ಯ)

೧೫೧ ಯತ್ ತದಾತ್ಮವಿಜ್ಞಾನಸುಖಮ್ ಅನಿರ್ದೇಶ್ಯಂ ನಿರ್ದೇಷ್ಟುವ ಶಕ್ಯಂ ಪರಮಂ ಪ್ರಕೃಷ್ಟಂ ಪ್ರಾಕೃತಪುರುಷವಾಙ್ಮನಸಯೋರಗೋಚರಮಪಿ ಸತ ನಿವೃತ್ತೈಷಣಾ ಯೇ ಬ್ರಾಹ್ಮಣಾಃ ತೇ ತದೇತತ್ ಪ್ರತ್ಯಕ್ಷಮೇವ ಇತಿ ಮನ್ಯನ್ತೇ ಕಥಂ ನು ಕೇನ ಪ್ರಕಾರೇಣ ತತ್ ಸುಖಮ್ ಅಹಂ ವಿಜಾನೀಯಾಮ್ "ಇದಮ್ ಇತ್ಯಾತ್ಮಬುದ್ಧಿವಿಷಯಮ್ ಆಪಾದಯೇಯಮ್ ಯಥಾ ನಿವೃತ್ತವಿಷಯೈಷಣ ಯತಯಃ। ಕಿಮು ತತ್ ಭಾತಿ ದೀಪ್ಯತೇ? ಪ್ರಕಾಶಾತ್ಮಕಂ ತತ್ ಯತೋಽಸ್ ದ್ಬುದ್ಧಿಗೋಚರತ್ವೇನ ವಿಭಾತಿ ವಿಸ್ಪಷ್ಟಂ ದೃಶ್ಯತೇ ಕಿಂ ವಾ ನೇತಿ ॥

(ಭಾಷ್ಯಾರ್ಥ)

ಆತ್ಮಜ್ಞಾನದಿಂದುಂಟಾಗುವ ಸುಖವಿದೆಯಲ್ಲ, ಅದು ಅನಿರ್ದೇಶ್ಯವು ಎಂದ (ಇಂಥದ್ದೆಂದು) ತೋರಿಸಿ ತಿಳಿಸುವದಕ್ಕೆ ಆಗದೆ ಇರುವದು, ಪರಮವು ಎಂದ ಹೆಚ್ಚಿನದು, ಸಾಮಾನ್ಯ ಜನರ ಮಾತಿಗಾಗಲಿ ಮನಸ್ಸಿಗಾಗಲಿ ಗೋಚರವಾಗುಃ ದಿಲ್ಲ. ಆದರೂ ಇದನ್ನು ಏಷಣೆಗಳನ್ನು ತೊರೆದ ಬ್ರಾಹ್ಮಣರು ಯಾರೋ ಅವರ "ಇದೇ ಅದು" ಎಂದು ಪ್ರತ್ಯಕ್ಷವೇ ಆಗಿ ಎಣಿಸುಸಿರುವರು. ಆ ಸುಖವನ್ನು ನಾನ ಹೇಗೆ ತಾನೆ ಎಂದರೆ ಯಾವ ಪ್ರಕಾರದಿಂದ, ನಾನು ತಿಳಿದುಕೊಳ್ಳಲಿ? (ಯಾಃ ಪ್ರಕಾರದಿಂದ) "ಇದೇ (ಆ ಸುಖವು)" ಎಂದು ವಿಷಯಗಳ ಬಯಕೆಯನ್ನು ತೊರೆ ಯತಿಗಳಂತೆ ನನ್ನ ಬುದ್ಧಿಗೆ ವಿಷಯವಾಗಿಮಾಡಿಕೊಳ್ಳಲಿ? ಅದೇನು ಬೆಳಗ ವದೊ ತೋರಿಕೊಳ್ಳುವದೊ, ಇಲ್ಲವೋ? ಅದು ಪ್ರಕಾಶರೂಪವಾಗಿದ್ದರೆ ನಮ್ಮ ಥವರ[1] ಬುದ್ಧಿಗೆ ಗೋಚರವಾಗಿ ಚೆನ್ನಾಗಿ ಕಾಣುವದೊ, ಇಲ್ಲವೋ?

ನ ತತ್ರ ಸೂರ್ಯೋ ಭಾತಿ ನ ಚನ್ದ್ರತಾರಕಂ
ನೇಮಾ ವಿದ್ಯುತೋ ಭಾನ್ತಿ ಕುತೋಽಯಮಗ್ನಿಃ।
ತಮೇವ ಭಾನ್ತಮನುಭಾತಿ ಸರ್ವಂ
ತಸ್ಯ ಭಾಸಾ ಸರ್ವಮಿದಂ ವಿಭಾತಿ ॥ ೧೫ ॥

---

1. ಆತ್ಮನು ಪ್ರಕಾಶರೂಪನಾಗಿರಬಹುದು, ಸಾಮಾನ್ಯರಾದ ನಮ್ಮಂಥವರಿಗೆ ಅವ ಆಗುವಾದೀತೊ? ಬೃ. ಭಾ. ೧-೪-೧೦ "ತದಿದಮಪ್ಯೇತರ್ಹಿ" ಎಂಬ ವಾಕ್ಯದ ವ್ಯಾಖ್ಯಾ ವನ್ನು ನೋಡಿರಿ

೧೫. ಅಲ್ಲಿ ಸೂರ್ಯನು ಬೆಳಗುವದಿಲ್ಲ, ಚಂದ್ರನಕ್ಷತ್ರಗಳು (ಬೆಳಗುವದಿಲ್ಲ); ಈ ಮಿಂಚುಗಳೂ ಬೆಳಗುವದಿಲ್ಲ; ಈ ಅಗ್ನಿಯು (ಬೆಳಗುವ)ದೆಲ್ಲಿ ಬಂತು? ಬೆಳಗುತ್ತಿರುವ ಅವನನ್ನೇ ಅನುಸರಿಸಿ ಎಲ್ಲವೂ ಬೆಳಗುತ್ತಿರುವದು. ಅವನ ಬೆಳಕಿನಿಂದಲೇ ಎಲ್ಲವೂ ತೋರುತ್ತಿರುವದು.

(ಭಾಷ್ಯ)

೧೫. ಅತ್ರೋತ್ತರಮಿದಮ್ ಭಾತಿ ಚ ವಿಭಾತಿ ಚ ಇತಿ। ಕಥಮ್? ನ ತತ್ರ ತಸ್ಮಿನ್ ಸ್ವಾತ್ಮಭೂತೇ ಬ್ರಹ್ಮಣಿ ಸರ್ವಾವಭಾಸಕೋಽಪಿ ಸೂರ್ಯಃ ಭಾತಿ। ತದ್ಬ್ರಹ್ಮ ನ ಪ್ರಕಾಶಯತಿ ಇತ್ಯರ್ಥಃ। ತಥಾ ನ ಚನ್ದ್ರತಾರಕಮ್। ನೇಮಾ ವಿದ್ಯುತೋ ಭಾನ್ತಿ। ಕುತಃ ಅಯಮ್ ಅಸ್ಮದ್ದೃಷ್ಟಿಗೋಚರಃ ಅಗ್ನಿಃ। ಕಿಂ ಬಹುನಾ? ಯದಿದಮ್ ಆದಿತ್ಯಾದಿಕಂ ಭಾತಿ ತತ್ ತಮೇವ ಪರಮೇಶ್ವರಂ ಭಾನ್ತಂ ದೀಪ್ಯಮಾನಮ್ ಅನು ಭಾತಿ ಅನುದೀಪ್ಯತೇ। ಯಥಾ ಜಲೋಲ್ಮುಕಾದಿ ಅಗ್ನಿಸಂಯೋಗಾದಗ್ನಿಂ ದಹನ್ತಮ್ ಅನು ದಹತಿ ನ ಸ್ವತಃ, ತದ್ವತ್। ತಸ್ಯೈವ ಭಾಸಾ ದೀಪ್ತ್ಯಾ ಸರ್ವಮಿದಂ ಸೂರ್ಯಾದಿ ವಿಭಾತಿ। ಯತ ಏವಂ ತದೇವ ಬ್ರಹ್ಮ ಭಾತಿ ಚ ವಿಭಾತಿ ಚ ಕಾರ್ಯಗತೇನ ವಿವಿಧೇನ ಭಾಸಾ। (ಅತಃ) ತಸ್ಯ ಬ್ರಹ್ಮಣೋ ಭಾರೂಪತ್ವಂ ಸ್ವತೋಽವಗಮ್ಯತೇ। ನ ಹಿ ಸ್ವತೋಽವಿದ್ಯಮಾನಂ ಭಾಸನಮನ್ಯಸ್ಯ ಕರ್ತುಂ ಶಕ್ಯಮ್। ಘಟಾದೀನಾಮನ್ಯಾವಭಾಸಕತ್ವಾದರ್ಶನಾತ್, ಭಾರೂಪಾಣಾಂ ಚಾದಿತ್ಯಾದೀನಾಂ ತದ್ದರ್ಶನಾತ್॥

(ಭಾಷ್ಯಾರ್ಥ)

ಈ (ಮೇಲಿನ ಪ್ರಶ್ನೆಗೆ) ಇದು ಉತ್ತರ ಅದು ಬೆಳಗಿಯೂ ಬೆಳಗುತ್ತದೆ. ಕಂಡೂ ಕಾಣುತ್ತದೆ. ಹೇಗೆಂದರೆ ಅಲ್ಲಿ ತನಗೆ ಆತ್ಮನಾಗಿರುವ[1] ಆ ಬ್ರಹ್ಮದಲ್ಲಿ ಸೂರ್ಯನು, ಎಲ್ಲವನ್ನೂ ಬೆಳಗುವನಾದರೂ, ಬೆಳಗುವದಿಲ್ಲ, ಎಂದರೆ ಆ ಬ್ರಹ್ಮವನ್ನು ತೋರಿಸಿಕೊಡುವದಿಲ್ಲ ಎಂದರ್ಥ. ಇದರಂತೆ ಚಂದ್ರನಕ್ಷತ್ರಗಳೂ ಈ ಮಿಂಚುಗಳೂ ಬೆಳಗುವದಿಲ್ಲ. ನಮ್ಮ ಕಣ್ಣಿಗೆ ಕಾಣುವ ಈ ಬೆಂಕಿಯು (ಅದನ್ನು ಬೆಳಗುವ)ದೆಲ್ಲಿ ಬಂತು? ಹೆಚ್ಚು ಹೇಳಿದ್ದರಿಂದೇನು? ಬೆಳಗುವ ಈ ಸೂರ್ಯನೇ ಮುಂತಾದ ಸರ್ವಜಗತ್ತೂ ಆ ಪರಮೇಶ್ವರನು ಬೆಳಗುತ್ತಿರುವದನ್ನು ಹೊಳೆಯುತ್ತಿರುವದನ್ನು ಅನುಸರಿಸಿ ಬೆಳಗುತ್ತಿರುವದು, ಅನುಸರಿಸಿಯೇ ಹೊಳೆಯುತ್ತಿರುವದು. ಹೇಗೆ ನೀರು, ಕೊಳ್ಳಿ–ಮುಂತಾದದ್ದು ಬೆಂಕಿಯ ಸಂಬಂಧದಿಂದ ಬೆಂಕಿಯು ಸುಡು

1. ಎಲ್ಲಕ್ಕೂ ಆತ್ಮನಾಗಿರುವಂತೆ ಬ್ರಹ್ಮವು ಸೂರ್ಯನಿಗೂ ಆತ್ಮನಾಗಿದೆ.

ವದನ್ನನುಸರಿಸಿ ಸುಡುವದೇ ಹೊರತು ತಾನೇ (ಸುಡುವ)ದಿಲ್ಲವೋ ಅದರಂತೆಯೆ (ಇದು). ಆ (ಬ್ರಹ್ಮದ) ಬೆಳಕಿನಿಂದಲೇ ಹೊಳಪಿನಿಂದಲೇ ಈ ಸೂರ್ಯ ಮುಂತಾದದ್ದೆಲ್ಲವೂ ಬೆಳಗುತ್ತಿರುವದು. ಹೀಗೆ ಅದೇ ಬ್ರಹ್ಮವೇ (ತಾನೂ) ಬೆಳ ತ್ತಲೂ ಕಾರ್ಯಗಳಲ್ಲಿರುವ ಬಗೆಬಗೆಯ ಬೆಳಕಿನಿಂದಲೂ ಬೆಳಗುತ್ತಲೂ[1] ಇರುತ್ತ ಯಾದ್ದರಿಂದ ಆ ಬ್ರಹ್ಮವು ಸ್ವತಃ ಬೆಳಕಿನ ರೂಪವಾಗಿರುವದೆಂದು ನಿಶ್ಚಯವಾ ತ್ತದೆ. ತನ್ನಲ್ಲಿಲ್ಲದ ಬೆಳಕನ್ನು ಮತ್ತೊಂದಕ್ಕೆ ಉಂಟುಮಾಡುವದು ಆಗ ಆರದು, ಏಕೆಂದರೆ ಗಡಿಗೆಯೇ ಮುಂತಾದವುಗಳು ಮತ್ತೊಂದನ್ನು ಬೆಳಗುವ ಕಂಡುಬರುವದಿಲ್ಲ, ಮತ್ತು ಬೆಳಕಿನ ರೂಪದಲ್ಲಿರುವ ಸೂರ್ಯನೇ ಮುಂತಾದ ಗಳು ಹಾಗೆ (ಬೆಳಗುವದು) ಕಂಡುಬಂದಿರುತ್ತದೆ.

ಎರಡನೆಯ ಅಧ್ಯಾಯ—ಮೂರನೆಯ ವಲ್ಲಿ

(ಭಾಷ್ಯ)

೧೫೩. ತೂಲಾವಧಾರಣೇನೈವ ಮೂಲಾವಧಾರಣಂ ವೃಕ್ಷಸ್ಯ ಕ್ರಿಯ ಲೋಕೇ ಯಥಾ, ಏವಂ ಸಂಸಾರಕಾರ್ಯವೃಕ್ಷಾವಧಾರಣೇನ ತನ್ಮೂಲಸ್ಯ ಬ್ರಹ್ಮ ಸ್ವರೂಪಾವದಿಧಾರಯಿಷಯಾ ಇಯಂ ಷಷ್ಠೀ ವಲ್ಲೀ ಆರಭ್ಯತೇ ॥

(ಭಾಷ್ಯಾರ್ಥ)

ಬುಡದ (ಸ್ವರೂಪವನ್ನು) ನಿಶ್ಚಯಿಸುವದರಿಂದಲೇ ಲೋಕದಲ್ಲಿ ಹೇಗೆ ಮರ ಬೇರಿನ (ಸ್ವರೂಪವನ್ನು) ಗೊತ್ತುಪಡಿಸುತ್ತಾರೋ ಅದರಂತೆ ಸಂಸಾರವೆಂಬ ಕಾಯ ರೂಪವಾದ ಮರದ (ಸ್ವರೂಪವನ್ನು) ನಿಶ್ಚಯಿಸುವದರಿಂದ ಅದರ ಮೂಲವಾ ಬ್ರಹ್ಮದ ಸ್ವರೂಪವನ್ನು ಗೊತ್ತುಪಡಿಸುವದಕ್ಕಾಗಿ **ಈ ಆರನೆಯ ವಲ್ಲಿಯು** ಆರಂ ವಾಗಿರುತ್ತದೆ :—

ಜಗತ್ಕಾರಣವೇ ಬ್ರಹ್ಮ

ಊರ್ಧ್ವಮೂಲೋಽವಾಕ್ ಶಾಖ
ಏಷೋಽಶ್ವತ್ಥಃ ಸನಾತನಃ ।

---

1. ಕಾರ್ಯವಾದ ಸೂರ್ಯನೇ ಮುಂತಾದವುಗಳ ಬೆಳಕೂ ಇದರದೇ, ಸ್ವಾಭಾ ರೂಪದಿಂದಲೂ ವಿಶೇಷರೂಪದಿಂದಲೂ ಬೆಳಗುತ್ತಿರುವದು ಎಂದರ್ಥ. ಈ ಮಂತ್ರದ ಭಾ ವನ್ನು ಮುಂ. ಭಾ. ೨-೨-೧೦ಕ್ಕೆ ಹೋಲಿಸಿ ನೋಡಿರಿ.

ತದೇವ ಶುಕ್ರಂ ತದ್ಬ್ರಹ್ಮ
ತದೇವಾಮೃತಮುಚ್ಯತೇ ।
ತಸ್ಮಿಲ್ಲೋಕಾಃ ಶ್ರಿತಾಃ ಸರ್ವೇ
ತದು ನಾತ್ಯೇತಿ ಕಶ್ಚನ । ಏತದ್ವೈ ತತ್ ॥ ೧ ॥

೧. ಮೇಲುಗಡೆ ಬೇರೂ ಕೆಳಗಡೆ ಕೊಂಬೆಗಳೂ ಇರುವ ಈ ಅಶ್ವತ್ಥವು ಬಹುಕಾಲದ್ದು. ಅದೇ ಶುಕ್ರವು, ಅದೇ ಬ್ರಹ್ಮವು, ಅದೇ ಅಮೃತ ವೆನಿಸುವದು. ಅದರಲ್ಲಿ ಸರ್ವಲೋಕಗಳೂ ಆಶ್ರಯಿಸಿಕೊಂಡಿರುವವು. ಮತ್ತು ಅದನ್ನು ಯಾರೂ ಮೀರಲಾರರು. ಇದೇ ಅದು.

(ಭಾಷ್ಯ)

೧೫೪. ಊರ್ಧ್ವಮೂಲಃ ಊರ್ಧ್ವಂ ಮೂಲಂ ಯತ್ತದ್ವಿಷ್ಣೋಃ ಪರಮಂ ಪದಮ್ ಅಸ್ಯ ಇತಿ ಸೋಽಯಮ್ ಅವ್ಯಕ್ತಾದಿಸ್ಥಾವರಾನ್ತಃ ಸಂಸಾರವೃಕ್ಷಃ ಊರ್ಧ್ವಮೂಲಃ । ವೃಕ್ಷಶ್ಚ ವ್ರಶ್ಚನಾತ್ ವಿನಶ್ವರತ್ವಾತ್ । ಅವಿಚ್ಛಿನ್ನಜನ್ಮಜರಾಮರಣಶೋಕಾದ್ಯನೇಕಾನರ್ಥಾತ್ಮಕಃ, ಪ್ರತಿಕ್ಷಣಮನ್ಯಥಾಸ್ವಭಾವೋ ಮಾಯಾಮರೀಚ್ಯುದಕಗನ್ಧರ್ವನಗರಾದಿವದ್ ದೃಷ್ಟನಷ್ಟಸ್ವರೂಪತ್ವಾತ್, ಅವಸಾನೇ ಚ ವ್ಯಕ್ತವದಭಾವಾತ್ಮಕಃ, ಕದಲೀಸ್ತಮ್ಭವುವನ್ನಿಸ್ಸಾರಃ, ಅನೇಕಶತಪಾಷಣ್ಡಬುದ್ಧಿವಿಕಲ್ಪಾಸ್ಪದಃ ತತ್ತ್ವವಿಜಿಜ್ಞಾಸುಭಿರನಿರ್ಧಾರಿತೇದಂತತ್ತ್ವಃ, ವೇದಾನ್ತನಿರ್ಧಾರಿತಪರಬ್ರಹ್ಮಮೂಲಸಾರಃ, ಅವಿದ್ಯಾಕಾಮಕರ್ಮಾವ್ಯಕ್ತಬೀಜಪ್ರಭವಃ, ಅಪರಬ್ರಹ್ಮವಿಜ್ಞಾನಕ್ರಿಯಾಶಕ್ತಿದ್ವಯಾತ್ಮಕಹಿರಣ್ಯಗರ್ಭಾಙ್ಕುರಃ, ಸರ್ವಪ್ರಾಣಿಲಿಙ್ಗಭೇದಸ್ಕನ್ಧಃ, ತತ್ತತ್ತೃಷ್ಣಾಜಲಸೇಕೋದ್ಭೂತದರ್ಪಃ, ಬುದ್ಧೀನ್ದ್ರಿಯವಿಷಯಪ್ರವಾಲಾಙ್ಕುರಃ, ಶ್ರುತಿಸ್ಮೃತಿನ್ಯಾಯವಿದ್ಯೋಪದೇಶಪಲಾಶಃ, ಯಜ್ಞದಾನತಪಆದ್ಯನೇಕಕ್ರಿಯಾಸುಪುಷ್ಪಃ, ಸುಖದುಃಖವೇದನಾನೇಕರಸಪ್ರಾಣ್ಯುಪಜೀವ್ಯಾನನ್ತಫಲಃ, ತತ್ತೃಷ್ಣಾಸಲಿಲಾವಸೇಕಪ್ರರೂಢಜಡೀಕೃತದೃಢಬದ್ಧಮೂಲಃ, ಸತ್ಯನಾಮಾದಿಸಪ್ತಲೋಕಬ್ರಹ್ಮಾದಿಭೂತಪಕ್ಷಿಕೃತನೀಡಃ, ಪ್ರಾಣಿಸುಖದುಃಖೋದ್ಭೂತಹರ್ಷಶೋಕಜಾತನೃತ್ಯಗೀತವಾದಿತ್ರಕ್ಷ್ವೇಲಿತಾಸ್ಫೋಟಿತಹಸಿತಾಕ್ರನ್ದರುದಿತಹಾಹಾಮುಞ್ಚಮುಞ್ಚೇತ್ಯಾದ್ಯನೇಕಶಬ್ದಕೃತತುಮುಲೀಭೂತಮಹಾರವಃ, ವೇದಾನ್ತವಿಹಿತಬ್ರಹ್ಮಾತ್ಮದರ್ಶನಾಸಙ್ಗಶಸ್ತ್ರಕೃತೋಚ್ಛೇದಃ ಏಷಃ ಸಂಸಾರವೃಕ್ಷಃ ಅಶ್ವತ್ಥಃ ಅಶ್ವತ್ಥವತ್ ಕಾಮಕರ್ಮವಾತೇರಿತನಿತ್ಯಪ್ರಚಲಿತಸ್ವಭಾವಃ । ಸ್ವರ್ಗನರಕತಿರ್ಯಕ್ಪ್ರೇತಾದಿಭಿಃ ಶಾಖಾಭಿಃ ಅವಾಕ್ಶಾಖಃ ಅವಾಞ್ಚಃ ಶಾಖಾ ಯಸ್ಯ ಸಃ । ಸನಾತನಃ ಅನಾದಿತ್ವಾತ್ ಚಿರಂ ಪ್ರವೃತ್ತಃ ॥

(ಭಾಷ್ಯಾರ್ಥ)

ಮೇಲುಗಡೆ ಬೇರುಳ್ಳದ್ದು, ಮೇಲೆನಿಸಿದ ಆ ವಿಷ್ಣುವಿನ ಪರಮಪದವೆಂಬುದಿದೆಯಲ್ಲ, ಅದೇ ಇದಕ್ಕೆ ಬೇರಾಗಿರುವದರಿಂದ ಈ ಅವ್ಯಕ್ತಾದಿಯಾಗಿ ಸ್ಥಾವರದವರೆಗಿರುವ ಸಂಸಾರವೃಕ್ಷವು ಮೇಲುಗಡೆ ಬೇರುಳ್ಳದ್ದೆನಿಸಿರುವದು. ಇದು ಕಡಿದುಹಾಕಲ್ಪಡತಕ್ಕದ್ದಾದ್ದರಿಂದ ನಾಶವಾಗುವದಾದ್ದರಿಂದ ವೃಕ್ಷವು ಎಡೆಬಿಡದೆ ಆಗುತ್ತಿರುವ ಹುಟ್ಟು, ಮುಪ್ಪು, ಸಾವು, ಶೋಕ–ಮುಂತಾದ ಅನೇಕ ಅನರ್ಥಗಳ ರೂಪವಾಗಿರುವದಾಗಿಯೂ ಮಾಯೆ, ಬಿಸಿಲುಕುದುರೆಯ ನೀರು, ಗಂಧರ್ವನಗರ–ಮುಂತಾದವುಗಳಂತೆ ತೋರಿ ಹಾರುವ ಸ್ವರೂಪದ್ದಾಗಿರುವದರಿಂದ ಪ್ರತಿಕ್ಷಣವೂ ಬೇರೆಬೇರೆಯ ಸ್ವಭಾವವನ್ನು ಪಡೆಯುತ್ತಿರುವದಾಗಿಯೂ, ಕೊನೆಗೆ ವೃಕ್ಷದಂತೆ ಇಲ್ಲವೆನಿಸುವದಾಗಿಯೂ, ಬಾಳೆಯ ಕಂಬದಂತೆ ಸಾರವಿಲ್ಲದ್ದಾಗಿಯೂ, ಎಷ್ಟೋ ನೂರುಗಟ್ಟಲೆಯ ಪಾಷಂಡಮತಗಳವರ[1] ಬುದ್ಧಿಯ ವಿಧವಿಧವಾದ ಕಲ್ಪನೆಗೆ ಅವಕಾಶವನ್ನು ಕೊಡುತ್ತಿರುವದಾಗಿಯೂ, ತತ್ತ್ವವನ್ನು ತಿಳಿಯಬೇಕೆಂದೆಳಸುವವರಿಗೆ ಇದೇ ತತ್ತ್ವವೆಂದು ನಿರ್ಣಯಿಸುವದಕ್ಕೆ ಆಗದಿರುವದಾಗಿಯೂ,[2] ವೇದಾಂತಗಳಲ್ಲಿ ಪರಬ್ರಹ್ಮವೇ ಇದಕ್ಕೆ ಮೂಲವೆಂದು ನಿಶ್ಚಯಿಸಿರುವ ಸಾರವುಳ್ಳದ್ದಾಗಿಯೂ,[3] ಅವಿದ್ಯಾಕಾಮಕರ್ಮಗಳ ಅವ್ಯಕ್ತಬೀಜದಿಂದ[4] ಹುಟ್ಟಿದ್ದಾಗಿಯೂ, ವಿಜ್ಞಾನಶಕ್ತಿಕ್ರಿಯಾಶಕ್ತಿಗಳೆಂಬ ಎರಡು ಶಕ್ತಿಗಳುಳ್ಳ ಅಪರ ಬ್ರಹ್ಮವಾದ **ಹಿರಣ್ಯಗರ್ಭ**ನೆಂಬ ಮೊಳಕೆಯುಳ್ಳದ್ದಾಗಿಯೂ, ಎಲ್ಲಾ ಪ್ರಾಣಿಗಳ ಬೇರೆಬೇರೆಯ **ಲಿಂಗಶರೀರ**ಗಳೆಂಬ ಹೊಡೆಯುಳ್ಳದ್ದಾಗಿಯೂ, ಅವುಗಳ 'ಆಸೆಯೆಂಬ ನೀರು ಹುಯ್ದು ಉಬ್ಬಿ ಹುಲಸಾಗಿರುವದಾಗಿಯೂ, ಬುದ್ಧಿಯ ವಿಷಯಗಳೆಂಬ ಮತ್ತು ಇಂದ್ರಿಯಗಳ ವಿಷಯಗಳೆಂಬ ಚಿಗುರುಗಳುಳ್ಳದ್ದಾಗಿಯೂ, ಶ್ರುತಿಸ್ಮೃತಿನ್ಯಾಯಗಳಿಂದ ಮಾಡಿದ ವಿದ್ಯೋಪದೇಶವೆಂಬ ಎಲೆಗಳುಳ್ಳದ್ದಾಗಿಯೂ, ಯಜ್ಞ, ದಾನ, ತಪಸ್ಸು–ಮುಂತಾದ ಕರ್ಮಗಳೆಂಬ ಸೊಗಸಾದ ಬಹಳ ಹೂಗಳುಳ್ಳದ್ದಾಗಿಯೂ, ಸುಖದುಃಖಗಳ ಅನುಭವವೆಂಬ ಅನೇಕ ರಸಗಳುಳ್ಳವಾಗಿಯೂ ಪ್ರಾಣಿ

---

1 ತಪ್ಪುದಾರಿಯ ವೇದವಿರುದ್ಧವಾದ ನಾಸ್ತಿಕಮತದವರ.

2 ಈ ಜಗತ್ತಿನ ತತ್ತ್ವವನ್ನು ಜನರು ಸ್ವಬುದ್ಧಿಯಿಂದ ವಿಚಾರಮಾಡಿದಷ್ಟೂ ಇದರ ಒಗಟುಗಳು ಬಿಚ್ಚುವದಕ್ಕೆ ಆಗದಷ್ಟು ಬಿಗಿಯಾಗುವವು.

3. ವೇದಾಂತದ ಕ್ರಮದಲ್ಲಿ ವಿಚಾರಮಾಡಿದರೆ ಯಾವ ಆಯಾಸವೂ ಇಲ್ಲದೆ ಇದರ ತತ್ತ್ವವಾದ ಬ್ರಹ್ಮವನ್ನು ಗೊತ್ತುಪಡಿಸಿಕೊಳ್ಳಬಹುದು.

4. ಅವಿದ್ಯಾಕಾಮಕರ್ಮಗಳು ವ್ಯಾಕೃತರೂಪದಲ್ಲಿಯೂ ಅವ್ಯಾಕೃತರೂಪದಲ್ಲಿಯೂ ಸ್ಥಿತಿಕಾಲದಲ್ಲಿಯೂ ಪ್ರಲಯಕಾಲದಲ್ಲಿಯೂ ತೋರಿಕೊಳ್ಳುತ್ತಿರುವವು. ಹೀಗೆ ತೋರುವದೂ ಅವಿದ್ಯೆಯಿಂದಲೇ.

ಗಳು ಆಶ್ರಯಿಸಿಕೊಂಡು ಜೀವಿಸುವದಕ್ಕೆ ತಕ್ಕವಾಗಿಯೂ ಇರುವ ಲೆಕ್ಕವಿಲ್ಲದಷ್ಟು ಫಲಗಳುಳ್ಳದ್ದಾಗಿಯೂ, ಆಯಾ ಫಲಗಳ ಆಸೆಯೆಂಬ ನೀರನ್ನು ಹುಯ್ಯುವದರಿಂದ ಊರಿಕೊಂಡು ಬಲವಾಗಿಬಿಟ್ಟಿರುವ ಗಟ್ಟಿಯಾದ ಕಿರುಬೇರುಗಳುಳ್ಳದ್ದಾಗಿಯೂ, **ಸತ್ಯಲೋಕ**ವೇ ಮುಂತಾದ ಹೆಸರಿನ **ಏಳುಲೋಕ**ಗಳಲ್ಲಿ ಬ್ರಹ್ಮನೇ ಮುಂತಾದ ಹಕ್ಕಿಗಳು ಮಾಡಿಕೊಂಡಿರುವ ಗೂಡುಗಳುಳ್ಳದ್ದಾಗಿಯೂ, ಪ್ರಾಣಿಗಳ ಸುಖದುಃಖ ಗಳಿಂದುಂಟಾಗುವ ಹರ್ಷದಿಂದಲೂ ಶೋಕದಿಂದಲೂ ಉಂಟಾದ **ಕುಣಿತ, ಹಾಡು,** ವಾದ್ಯಗಳು, ಹಾರಿ ಮೇಲೆ ಬೀಳುವದು, (ತೋಳುಗಳಿಂದ) ಪಟ್ಟು ಹಿಡಿಯುವದು, ನಗುವದು, ಹಿಡಿದೆಳೆಯುವದು, ಅಳುವದು, " ಹಾಹಾ ! ಬಿಡು ಬಿಡು ! " ಎನ್ನುವದು ಇವೇ ಮುಂತಾದ ಅನೇಕ ವಿಧವಾದ ಶಬ್ದಗಳಿಂದ ಗದ್ದಲವಾಗಿರುವ ಮಹಾಧ್ವನಿ ಯುಳ್ಳದ್ದಾಗಿಯೂ, ವೇದಾಂತಗಳಲ್ಲಿ ಹೇಳಿರುವ **ಬ್ರಹ್ಮಾತ್ಮದರ್ಶನವೆಂಬ ಅಸಂಗ ಶಸ್ತ್ರದಿಂದ**[1] ಕಡಿಯತಕ್ಕದ್ದಾಗಿಯೂ ಇರುವ ಈ ಸಂಸಾರವೃಕ್ಷವು ಅಶ್ವತ್ಥವು ಎಂದರೆ ಅಶ್ವತ್ಥದಂತೆ ಕಾಮಕರ್ಮಗಳೆಂಬ ಗಾಳಿಗಳಿಂದ ಯಾವಾಗಲೂ ಅಲುಗಾ ಡುವ ಸ್ವಭಾವವುಳ್ಳದ್ದು. ಸ್ವರ್ಗ, ನರಕ, ತಿರ್ಯಗ್ಜನ್ಮ, ಪ್ರೇತಜನ್ಮ–ಮುಂತಾದ ಕೊಂಬೆಗಳಿಂದ ಕೂಡಿ ಕೆಳಗಡೆ ಕೊಂಬೆಗಳಿರುವಂಥದ್ದು. (ಇದು) ಬಹುಕಾಲದ್ದು ಎಂದರೆ ಅನಾದಿಯಾಗಿರುವದರಿಂದ[2] ಬಹುಕಾಲದಿಂದಲೂ ನಡೆದುಕೊಂಡು ಬಂದಿ ರುವದು

(ಭಾಷ್ಯ)

೧೫೫ ಯದಸ್ಯ ಸಂಸಾರವೃಕ್ಷಸ್ಯ ಮೂಲಂ ತದೇವ ಶುಕ್ರಂ ಶುಭ್ರಂ ಶುದ್ಧಂ ಜ್ಯೋತಿಷ್ಮತ್ ಜ್ಯೈತನ್ಯಾತ್ಮಜ್ಯೋತಿಃಸ್ವಭಾವಮ್ । ತದೇವ ಬ್ರಹ್ಮ । ಸರ್ವ ಮಹತ್ತ್ವಾತ್ । ತದೇವ ಅಮೃತಮ್ ಅವಿನಾಶಸ್ವಭಾವಮ್ ಉಚ್ಯತೇ ಕಥ್ಯತೇ । ಸತ್ಯತ್ವಾತ್ । ವಾಚಾರಮ್ಭಣಂ ವಿಕಾರೋ ನಾಮಧೇಯಮ್ ಅನೃತಮನ್ಯತ್, ಅತೋ ಮರ್ತ್ಯಮ್ । ತಸ್ಮಿನ್ ಪರಮಾರ್ಥಸತ್ಯೇ ಬ್ರಹ್ಮಣಿ ಲೋಕಾಃ ಗನ್ಧರ್ವನಗರ ಮರೀಚ್ಯುದಕಮಾಯಾಸಮಾಃ ಪರಮಾರ್ಥದರ್ಶನಾಭಾವಾವಗಮನಾಃ ಶ್ರಿತಾಃ ಆಶ್ರಿತಾಃ ಸರ್ವೇ ಸಮಸ್ತಾಃ ಉತ್ಪತ್ತಿಸ್ಥಿತಿಲಯೇಷು । ತದು ತದ್ ಬ್ರಹ್ಮ ನಾತ್ಯೇತಿ ನಾತಿವರ್ತತೇ ಮೃದಾದಿಕಮಿವ ಘಟಾದಿಕಾರ್ಯಂ ಕಶ್ಚನ ಕಶ್ಚಿದಪಿ ವಿಕಾರಃ । ಏತದ್ವೈ ತತ್ ॥

---

1 ಗೀ ೧೫-೩

2. ಸೂ. ಭಾ. ೩-೧-೪೬ ಸಂಸಾರವು ಅನಾದಿಯಾದರೂ ಅಸತ್ಯವಾಗಿರುವದರಿಂದ ಜ್ಞಾನವಾಗುತ್ತದೆ ಎಂದು ಭಾವ.

(ಭಾಷ್ಯಾರ್ಥ)

ಈ ಸಂಸಾರವೃಕ್ಷದ ಬೇರುಂಟಪ್ಪೆ, ಅದೇ ಶುಕ್ರವು ಶುಭ್ರವಾಗಿ ಶುದ್ಧವಾಗಿರುವಂಥದ್ದು; ಬೆಳಕುಳ್ಳದ್ದು, ಚೈತನ್ಯವೆಂಬ ಆತ್ಮಜ್ಯೋತಿಯ ಸ್ವರೂಪವುಳ್ಳದ್ದು. ಅದೇ ಬ್ರಹ್ಮವು, ಏಕೆಂದರೆ ಅದು ಎಲ್ಲಕ್ಕಿಂತಲೂ ದೊಡ್ಡದಾಗಿರುತ್ತದೆ.[1] ಅದೇ ಅಮೃತವು ನಾಶವಿಲ್ಲದ ಸ್ವಭಾವವುಳ್ಳದ್ದು ಎನಿಸಿರುತ್ತದೆ ಎಂದು ಹೇಳಲ್ಪಡುತ್ತದೆ. ಏಕೆಂದರೆ ಅದು (ನಿಜವಾಗಿಯೂ) ಸತ್ಯವಾಗಿರುತ್ತದೆ. ಅದಕ್ಕಿಂತ ಬೇರೆಯಾದ ಕಾರ್ಯವು ಬರಿಯ ಮಾತಿನಿಂದಾಗಿರುವ ಹೆಸರು,[2] ಸಟೆಯಾದದ್ದು, ನಾಶವುಳ್ಳದ್ದು,[3] ಗಂಧರ್ವನಗರ, ಬಿಸಿಲುಕುದುರೆಯ ನೀರು, ಮಾಯೆ–ಇವುಗಳಂತಿರುವ[4] ಪರಮಾರ್ಥವನ್ನು ಕಂಡುಕೊಳ್ಳದೆ ಇರುವದರಿಂದ ತೋರುತ್ತಿರುವ[5] ಸರ್ವಲೋಕಗಳೂ ಎಲ್ಲಾ ಲೋಕಗಳೂ ಆ **ಪರಮಾರ್ಥಸತ್ಯವಾಗಿರುವ** ಬ್ರಹ್ಮವನ್ನು ಉತ್ಪತ್ತಿ, ಸ್ಥಿತಿ, ಲಯ (ಎಂಬ ಮೂರು) ಕಾಲಗಳಲ್ಲಿಯೂ ಆಶ್ರಯಿಸಿಕೊಂಡಿರುವವು. ಮತ್ತು ಅದನ್ನು ಎಂದರೆ ಆ ಬ್ರಹ್ಮವನ್ನು–ಗಡಿಗೆಯೇ ಮುಂತಾದ ಕಾರ್ಯವು ಮಣ್ಣು ಮುಂತಾದ (ಕಾರಣ) ವನ್ನು ಹೇಗೆ ಮೀರಿರಲಾರದೋ ಹಾಗೆ–ಯಾವದು ಎಂದರೆ ಯಾವದೊಂದು ಕಾರ್ಯವೂ ಮೀರಲಾರದು ಇದೇ ಅದು

ಜಗತ್ತಿನ ವ್ಯವಸ್ಥೆಗೆ ಕಾರಣವಾಗಿರುವದು ಬ್ರಹ್ಮ

(ಭಾಷ್ಯ)

೧೫೬. ಯದ್ವಿಜ್ಞಾನಾದಮೃತಾ ಭವನ್ತಿ ಇತ್ಯುಚ್ಯತೇ ಜಗತೋ ಮೂಲಮ್, ತದೇವ ನಾಸ್ತಿ ಬ್ರಹ್ಮ। ಅಸತ ಏವೇದಂ ನಿಸ್ಸೃತಮಿತಿ। ತನ್ನ—

(ಭಾಷ್ಯಾರ್ಥ)

ಯಾವದನ್ನು ಅರಿತುಕೊಳ್ಳುವದರಿಂದ ಅಮೃತರಾಗುವರು ಎಂದು ಹೇಳುತ್ತೀರೋ ಆ ಜಗತ್ತಿನ ಮೂಲವಾದ ಬ್ರಹ್ಮವೆಂಬುದೇ ಇಲ್ಲ ಏಕೆಂದರೆ ಈ (ಜಗತ್ತು)

---

1. ಬ್ರಹ್ಮವೆಂಬ ಮಾತು ಎಲ್ಲಕ್ಕೂ ದೊಡ್ಡದು ಎಂಬರ್ಥವುಳ್ಳದ್ದು.

2. ಛಾ. ೬-೪-ಲರಲ್ಲಿ ಕಾರ್ಯವು ಅನೃತವು, ಕಾರಣಕ್ಕಿಂತ ಬೇರೆಯಿಲ್ಲ ಎಂದು ಹೇಳಿದೆ.

3. ಯಾವದು ಪರಿಚ್ಛಿನ್ನವಾದದ್ದೋ ಅದು ಮರ್ತ್ಯವು, ನಾಶವಾಗತಕ್ಕದ್ದು ಎಂದು ಛಾ. ೭-೩೪-೧ರಲ್ಲಿ ಹೇಳಿರುವದರ ಸೂಚನೆ.

4. ಮರಗಳು ಭೂಮಿಯನ್ನಾಶ್ರಯಿಸಿರುವಂತೆ ನಿಜವಾಗಿ ಬ್ರಹ್ಮವನ್ನು ಆಧಾರಾಧೇಯ ಭಾವದಿಂದ ಆಶ್ರಯಿಸಿಲ್ಲವೆಂಬುದನ್ನು ತೋರಿಸುವದಕ್ಕೆ ಗಂಧರ್ವನಗರಾದಿಗಳ ಹೋಲಿಕೆಯನ್ನು ಕೊಟ್ಟದೆ.

5. ಆರೋಪಿತವಾದದ್ದು ಅಧಿಷ್ಠಾನವನ್ನು ಕಂಡುಕೊಳ್ಳುವವರೆಗೆ ತೋರುತ್ತಿರುವದು.

ಅಸತ್ತಿನಿಂದಲೇ ಹುಟ್ಟಿರುತ್ತದೆ–ಎಂದು (ಯಾರಾದರೂ ಶಂಕಿಸಬಹುದು). ಆದರೆ ಇದು ಸರಿಯಲ್ಲ:—

ಯದಿದಂ ಕಿಂ ಚ ಜಗತ್ಸರ್ವಂ
ಪ್ರಾಣ ಏಜತಿ ನಿಸ್ಸೃತಮ್ ।
ಮಹದ್ಭಯಂ ವಜ್ರಮುದ್ಯತಂ
ಯ ಏತದ್ವಿದುರಮೃತಾಸ್ತೇ ಭವನ್ತಿ ॥ ೨ ॥

೨. ಈ ಜಗತ್ತೆಲ್ಲವೂ ಪ್ರಾಣನಿದ್ದರೇ ಹೊರಕ್ಕೆ ಬಂದು ನಡುಗುತ್ತಿರುವದು. ಎತ್ತಿದ ವಜ್ರವಾಗಿರುವ (ಇವನು) ದೊಡ್ಡ ಭಯವು. ಯಾರು ಇದನ್ನು ಅರಿತುಕೊಳ್ಳುವರೋ ಅವರು ಅಮೃತರಾಗುವರು.

(ಭಾಷ್ಯ)

೧೫೭. ಯದಿದಂ ಕಿಂ ಚ ಯತ್ಕಿಂಚೇದಂ ಜಗತ್ ಸರ್ವಂ ಪ್ರಾಣೇ ಪರಸ್ಮಿನ್ ಬ್ರಹ್ಮಣಿ ಸತಿ ಏಜತಿ ಕಮ್ಪತೇ ತತ ಏವ ನಿಸ್ಸೃತಂ ನಿರ್ಗತಂ ಸತ್ ಪ್ರಚಲತಿ ನಿಯಮೇನ ಚೇಷ್ಟತೇ । ಯದೇವಂ ಜಗದುತ್ಪತ್ತ್ಯಾದಿಕಾರಣಂ ಬ್ರಹ್ಮ ತತ್ ಮಹದ್ಭಯಮ್ । ಮಹಚ್ಚ ತದ್ ಭಯಂ ಚ ಬಿಭೇತಿ ಅಸ್ಮಾತ್ ಇತಿ ಮಹದ್ಭಯಮ್ ।ವಜ್ರಮುದ್ಯತಮ್ ಉದ್ಯತಮಿವ ವಜ್ರಮ್ । ಯಥಾ ವಜ್ರೋದ್ಯತಕರಂ ಸ್ವಾಮಿನಮ್ ಅಭಿಮುಖೀಭೂತಂ ದೃಷ್ಟ್ವಾ ಭೃತ್ಯಾ ನಿಯಮೇನ ತಚ್ಛಾಸನೇ ವರ್ತನ್ತೇ । ತಥೇದಂ ಚನ್ದ್ರಾದಿತ್ಯಗ್ರಹನಕ್ಷತ್ರತಾರಕಾದಿಲಕ್ಷಣಂ ಜಗತ್ ಸೇಶ್ವರಂ ನಿಯಮೇನ ಕ್ಷಣಮಪ್ಯವಿಶ್ರಾನ್ತಂ ವರ್ತತೇ ಇತ್ಯುಕ್ತಂ ಭವತಿ । ಯೇ ಏತತ್ ವಿದುಃ ಸ್ವಾತ್ಮ ಪ್ರವೃತ್ತಿಸಾಕ್ಷಿಭೂತಮೇಕಂ ಬ್ರಹ್ಮ ಅಮೃತಾಃ ಅಮರಣಧರ್ಮಾಣಃ ತೇ ಭವನ್ತಿ ॥

(ಭಾಷ್ಯಾರ್ಥ)

ಈ ಜಗತ್ತೆಲ್ಲವೂ ಪ್ರಾಣನು ಎಂದರೆ ಪರಬ್ರಹ್ಮವು[1] ಇದ್ದರೇ ನಡುಗುತ್ತಿರುವದು ಅದರಿಂದಲೇ ಹೊರಕ್ಕೆ ಬಂದು ಓಡಾಡುತ್ತಿರುವದು, ನಿಯಮದಿಂದ ಕೆಲಸಮಾಡುತ್ತಿರುವದು. ಯಾವದು ಹೀಗೆ ಜಗತ್ತಿನ ಉತ್ಪತ್ತಿಯೇ ಮುಂತಾದದ್ದಕ್ಕೆ ಕಾರಣವಾಗಿರುವದೋ ಆ ಬ್ರಹ್ಮವು ದೊಡ್ಡ ಭಯವು; ದೊಡ್ಡದೂ ಭಯವೂ ಆಗಿರುವದು; ಯಾವದಕ್ಕೆ ಹೆದರುತ್ತಾರೋ ಅದು ಭಯವು. (ಹೀಗೆ) ದೊಡ್ಡ ಭಯವಾಗಿರುವದು. ಎತ್ತಿದ ವಜ್ರವು, ಎಂದರೆ ಎತ್ತಿದ ವಜ್ರಾಯುಧದಂತೆ ಇರುವದು. ಹೇಗೆ ವಜ್ರಾಯುಧವನ್ನು ಎತ್ತಿ ಹಿಡಿದುಕೊಂಡಿರುವ ರಾಜನು ಎದುರಿಗೆ ಇರುವದನ್ನು ಕಂಡು

ಭೃತ್ಯರು ನಿಯಮದಿಂದ ಆತನ ಅಪ್ಪಣೆಯಂತೆ ನಡೆದುಕೊಳ್ಳುತ್ತಿರುವರೋ ಹಾಗೆಯೇ ಈ ಚಂದ್ರ, ಸೂರ್ಯ, ಗ್ರಹಗಳು, ನಕ್ಷತ್ರಗಳು, ತಾರಕೆಗಳು–ಮುಂತಾದ ರೂಪದಲ್ಲಿರುವ ಜಗತ್ತು ಈಶ್ವರನಿರುವದರಿಂದಲೇ ನಿಯಮದಿಂದ ಕ್ಷಣವೂ ಬಿಡುವಿಲ್ಲದೆ ಕೆಲಸಮಾಡುತ್ತಿರುವದು ಎಂದು ಹೇಳಿದಂತೆ ಆಯಿತು. ಯಾರು ತಮ್ಮ ಪ್ರವೃತ್ತಿಗೂ ಸಾಕ್ಷಿಯಾದ, ಒಂದೇ ಆದ, ಈ ಬ್ರಹ್ಮವನ್ನು ಅರಿತುಕೊಳ್ಳುವರೋ ಅವರು ಅಮೃತರಾಗುವರು, ಸಾವೆಂಬ ಧರ್ಮವಿಲ್ಲದವರಾಗುವರು.

(ಭಾಷ್ಯ)

೧೫೮. ಕಥಂ ತದ್ಭಯಾಜ್ಜಗದ್ವರ್ತತೇ ಇತಿ ? ಉಚ್ಯತೇ—

(ಭಾಷ್ಯಾರ್ಥ)

ಆತನ ಹೆದರಿಕೆಯಿಂದಲೇ ಜಗತ್ತು (ಕೆಲಸ) ಮಾಡುತ್ತಿರುವದೆಂಬುದು ಹೇಗೆ? ಎಂದರೆ ಹೇಳುತ್ತಾನೆ —

ಭಯಾದಸ್ಯಾಗ್ನಿಸ್ತಪತಿ
ಭಯಾತ್ ತಪತಿ ಸೂರ್ಯಃ।
ಭಯಾದಿನ್ದ್ರಶ್ಚ ವಾಯುಶ್ಚ
ಮೃತ್ಯುರ್ಧಾವತಿ ಪಞ್ಚಮಃ ॥ ೩ ॥

೩. ಈತನ ಭಯದಿಂದ ಅಗ್ನಿಯು ಸುಡುತ್ತಾನೆ ; (ಈತನ) ಭಯದಿಂದ ಸೂರ್ಯನು ಕಾಯುತ್ತಾನೆ. ಭಯದಿಂದಲೇ ಇಂದ್ರನೂ ವಾಯುವೂ (ಕೆಲಸಮಾಡುತ್ತಾರೆ). ಐದನೆಯವನಾದ ಮೃತ್ಯು ಓಡುತ್ತಾನೆ.

(ಭಾಷ್ಯ)

೧೫೯. ಭಯಾತ್ ಭೀತ್ಯಾ ಅಸ್ಯ ಪರಮೇಶ್ವರಸ್ಯ ಅಗ್ನಿಃ ತಪತಿ। ಭಯಾತ್ ತಪತಿ ಸೂರ್ಯಃ। ಭಯಾದಿನ್ದ್ರಶ್ಚ ವಾಯುಶ್ಚ। ಮೃತ್ಯುರ್ಧಾವತಿ ಪಞ್ಚಮಃ। ನ ಹಿ ಈಶ್ವರಾಣಾಂ ಲೋಕಪಾಲಾನಾಂ ಸಮರ್ಧಾನಾಂ ಸತಾಂ ನಿಯನ್ತೃ ಚೇದ್ ವಜ್ರೋದ್ಯತಕರವನ್ನ ಸ್ಯಾತ್, ಸ್ವಾಮಿಭಯಭೀತಾನಾಮಿವ ಭೃತ್ಯಾನಾಂ ನಿಯತಾ ಪ್ರವೃತ್ತಿರುಪಪದ್ಯತೇ ॥

(ಭಾಷ್ಯಾರ್ಥ)

ಈ ಪರಮೇಶ್ವರನ ಭಯದಿಂದ, ಹೆದರಿಕೆಯಿಂದ, ಅಗ್ನಿಯು ಸುಡುತ್ತಾನೆ ; (ಈತನ) ಭಯದಿಂದ ಸೂರ್ಯನು ಕಾಯುತ್ತಾನೆ, (ಈತನ) ಭಯದಿಂದ ಇಂದ್ರನೂ

ವಾಯುವೂ (ಕೆಲಸ ಮಾಡುತ್ತಾರೆ), ಐದನೆಯವನಾದ ಮೃತ್ಯುವೂ (ಈತನ) ಭಯದಿಂದಲೇ ಓಡುತ್ತಾನೆ. ತಾವು ಸ್ವತಂತ್ರರಾಗಿ ಸಮರ್ಥರಾಗಿರುವ **ಲೋಕಪಾಲಕ**ರಾಗಿರುವವರನ್ನು ವಜ್ರಾಯುಧವನ್ನು ಎತ್ತಿ ಹಿಡಿದವನಂತೆ ಕಟ್ಟುಮಾಡುವವನೊಬ್ಬನು ಇಲ್ಲದೆ ಇದ್ದರೆ ಒಡೆಯನ ಹೆದರಿಕೆಯಿಂದ ಅಂಜಿದ ಭೃತ್ಯರಂತೆ ನಿಯತವಾಗಿ ಕೆಲಸದಲ್ಲಿ ತೊಡಗಿರುವದೆಂಬುದು ಹೊಂದಲೇ ಆರದು.

ಬ್ರಹ್ಮವನ್ನು ಈ ಲೋಕದಲ್ಲಿಯೇ ಅರಿಯಬೇಕು

ಇಹ ಚೇದಶಕದ್ಬೋದ್ಧುಂ
ಪ್ರಾಕ್ಶರೀರಸ್ಯ ವಿಸ್ರಸಃ ।
ತತಃ ಸರ್ಗೇಷು ಲೋಕೇಷು
ಶರೀರತ್ವಾಯ ಕಲ್ಪತೇ ॥ ೪ ॥

೪. ಶರೀರವು ಸಡಿಲವಾಗುವದಕ್ಕೆ ಮುಂಚೆ ಇಲ್ಲಿಯೇ ತಿಳಿದುಕೊಳ್ಳಲು ಶಕ್ತನಾದರೆ (ಸರಿ, ಹಾಗಿಲ್ಲದಿದ್ದರೆ) ಅದರಿಂದ ಸರ್ಗ ಲೋಕಗಳಲ್ಲಿ ಶರೀರಕ್ಕೆ ತಕ್ಕವನಾಗುವನು.

(ಭಾಷ್ಯ)

೧೬೦. ತಚ್ಚ ಇಹ ಜೀವನ್ನೇವ ಚೇತ್ ಯದ್ಯಶಕತ್ ಶಕ್ನೋತಿ, ಶಕ್ತಃ ಸನ್ ಜಾನಾತಿ ಇತ್ಯೇತತ್ । ಭಯಕಾರಣಂ ಬ್ರಹ್ಮ ಬೋದ್ಧುಮ್ ಅವಗನ್ತುಮ್ ಪ್ರಾಕ್ ಪೂರ್ವಂ ಶರೀರಸ್ಯ ವಿಸ್ರಸಃ, ಅವಸ್ರಂಸನಾತ್, ಪತನಾತ್ । ಸಂಸಾರಬನ್ಧನಾತ್ ವಿಮುಚ್ಯತೇ । ನ ಚೇದಶಕತ್ ಬೋದ್ಧುಮ್ ತತಃ ಅನವಬೋಧಾತ್ ಸರ್ಗೇಷು ಸೃಜ್ಯನ್ತೇ ಯೇಷು ಸ್ರಷ್ಟವ್ಯಾಃ ಪ್ರಾಣಿನಃ ಇತಿ ಸರ್ಗಾಃ ಪೃಥಿವ್ಯಾದಯೋ ಲೋಕಾಃ । ತೇಷು ಸರ್ಗೇಷು ಲೋಕೇಷು ಶರೀರತ್ವಾಯ ಶರೀರಭಾವಾಯ ಕಲ್ಪತೇ ಸಮರ್ಥೋ ಭವತಿ । ಶರೀರಂ ಗೃಹ್ಣಾತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತು ಆ ಭಯಕಾರಣವಾದ ಬ್ರಹ್ಮವನ್ನು ಇಲ್ಲಿ ಎಂದರೆ ಬದುಕಿರುವಾಗಲೇ ತಿಳಿಯುವದಕ್ಕೆ (ಅಶಕತ್=ಶಕ್ನೋತಿ) ಶಕ್ತನಾಗಿರುತ್ತಾನಾದರೆ, ಶಕ್ತನಾಗಿದ್ದು ತಿಳಿದುಕೊಳ್ಳುತ್ತಾನಾದರೆ ಎಂದರ್ಥ. (ಬ್ರಹ್ಮವನ್ನು) ತಿಳಿದುಕೊಳ್ಳಲು ಅರಿತುಕೊಳ್ಳಲು (ಶಕ್ತನಾದರೆ), ಶರೀರವು ಸಡಿಲವಾಗುವದಕ್ಕೆ ಎಂದರೆ ಕಳಚುವದಕ್ಕೆ ಬಿದ್ದುಹೋಗು

ವದಕ್ಕೆ ಮುಂಚೆ–ಮೊದಲು (ಅರಿತುಕೊಂಡರೆ), ಸಂಸಾರಬಂಧದಿಂದ ಬಿಡುಗಡೆ ಹೊಂದುತ್ತಾನೆ. ತಿಳಿದುಕೊಳ್ಳುವದಕ್ಕೆ ಶಕ್ತನಾಗಿಲ್ಲವಾದರೆ, ಅದರಿಂದ ಎಂದರೆ ಅಜ್ಞಾನದಿಂದ, ಸರ್ಗಲೋಕಗಳಲ್ಲಿ–ಸೃಷ್ಟಿಯಾಗುವ ಪ್ರಾಣಿಗಳು ಎಲ್ಲಿ ಸೃಷ್ಟಿಯಾಗುವವೋ ಆ ಪೃಥಿವಿ ಮುಂತಾದ ಲೋಕಗಳು ಸರ್ಗಲೋಕಗಳು. ಆ ಸರ್ಗಲೋಕಗಳಲ್ಲಿ–ಶರೀರಕ್ಕೆ ಎಂದರೆ ಶರೀರವನ್ನು ಪಡೆಯುವದಕ್ಕೆ ತಕ್ಕವನಾಗುವನು, ಯೋಗ್ಯನಾಗುವನು, ದೇಹವನ್ನು ಧರಿಸುತ್ತಾನೆ ಎಂದರ್ಥ.

(ಭಾಷ್ಯ)

೧೬೧. ತಸ್ಮಾತ್ ಶರೀರವಿಸ್ರಂಸನಾತ್ ಪ್ರಾಕ್ ಆತ್ಮಾವಬೋಧಾಯ ಯತ್ನ ಆಸ್ಥೇಯಃ । ಯಸ್ಮಾತ್ ಇಹೈವ ಆತ್ಮನೋ ದರ್ಶನಮ್ ಆದರ್ಶಸ್ಥಸ್ಯೇವ ಮುಖಸ್ಯ ಸ್ಪಷ್ಟಮುಪಪದ್ಯತೇ ನ ಲೋಕಾನ್ತರೇಷು ಬ್ರಹ್ಮಲೋಕಾದನ್ಯತ್ರ । ಸ ಚ ದುಷ್ಪ್ರಾಪಃ! ಕಥಮಿತಿ ? ಉಚ್ಯತೇ—

(ಭಾಷ್ಯಾರ್ಥ)

ಆದ್ದರಿಂದ ಶರೀರವು ಸಡಿಲಿಸುವ ಮುಂಚೆಯೇ ಆತ್ಮನನ್ನು ಅರಿತುಕೊಳ್ಳುವದಕ್ಕೆ ಯತ್ನವನ್ನು ಮಾಡಬೇಕು. ಏಕೆಂದರೆ ಇಲ್ಲಿ ಮಾತ್ರ ಕನ್ನಡಿಯಲ್ಲಿ ಮುಖವನ್ನು ಕಾಣುವಂತೆ ಆತ್ಮನನ್ನು ಸ್ಪಷ್ಟವಾಗಿ ಕಾಣಬಹುದೇ ಹೊರತು ಮಿಕ್ಕ ಲೋಕಗಳಲ್ಲಿ–ಬ್ರಹ್ಮಲೋಕವೊಂದನ್ನು ಬಿಟ್ಟರೆ–(ಎಲ್ಲಿಯೂ ಕಾಣುವದಾಗುವ) ಹಾಗಿಲ್ಲ. ಆ (ಬ್ರಹ್ಮಲೋಕವೆಂಬುದನ್ನು) ಪಡೆಯುವದು ಕಷ್ಟವಾಗಿರುತ್ತದೆ. ಅದು ಹೇಗೆಂದರೆ ಹೇಳುತ್ತಾನೆ :—

ಯಥಾದರ್ಶೇ ತಥಾತ್ಮನಿ
ಯಥಾ ಸ್ವಪ್ನೇ ತಥಾ ಪಿತೃಲೋಕೇ ।
ಯಥಾಪ್ಸು ಪರೀವ ದದೃಶೇ
ತಥಾ ಗನ್ಧರ್ವಲೋಕೇ ಛಾಯಾತಪಯೋರಿವ ಬ್ರಹ್ಮಲೋಕೇ ॥

೫. ಕನ್ನಡಿಯಲ್ಲಿ ಹೇಗೋ ಹಾಗೆ ಆತ್ಮದಲ್ಲಿ, ಸ್ವಪ್ನದಲ್ಲಿ ಹೇಗೋ ಹಾಗೆ ಪಿತೃಲೋಕದಲ್ಲಿ, ನೀರಿನಲ್ಲಿ ಹೇಗೆ ಕಾಣುವರೋ ಹಾಗೆ ಗಂಧರ್ವಲೋಕದಲ್ಲಿ, ನೆರಳುಬಿಸಿಲುಗಳಂತೆ ಬ್ರಹ್ಮಲೋಕದಲ್ಲಿ.

(ಭಾಷ್ಯ)

೧೬೨. ಯಥಾ ಆದರ್ಶೇ ಪ್ರತಿಬಿಮ್ಬಭೂತಮ್ ಆತ್ಮಾನಂ ಪಶ್ಯತಿ ಲೋಕಃ ಅತ್ಯನ್ತವಿವಿಕ್ತಮ್, ತಥಾ ಇಹ ಆತ್ಮನಿ ಸ್ವಬುದ್ಧೌ ಆದರ್ಶವನ್ನಿರ್ಮಲೀ

ಭೂತಾಯಾಂ ವಿವಿಕ್ತಮಾತ್ಮನೋ ದರ್ಶನಂ ಭವತಿ ಇತ್ಯರ್ಥಃ। ಯಥಾ ಸ್ವಪ್ನೇ ಅವಿವಿಕ್ತಂ ಜಾಗ್ರದ್ವಾಸನೋದ್ಭೂತಮ್ ತಥಾ ಪಿತೃಲೋಕೇ ಅವಿವಿಕ್ತಮೇವ ದರ್ಶನಮಾತ್ಮನಃ। ಕರ್ಮಫಲೋಪಭೋಗಾಸಕ್ತತ್ವಾತ್। ಯಥಾ ಚ ಅಪ್ಸು ಅವಿಭಕ್ತಾವಯವಮ್ ಆತ್ಮರೂಪಂ ಪರೀವ ದದೃಶೇ ಪರಿದೃಶ್ಯತ ಇವ ತಥಾ ಗನ್ಧರ್ವಲೋಕೇ ಅವಿವಿಕ್ತಮೇವ ದರ್ಶನಮಾತ್ಮನಃ। ಏವಂ ಲೋಕಾನ್ತರೇಷ್ವಪಿ ಇತಿ ಶಾಸ್ತ್ರಪ್ರಾಮಾಣ್ಯಾದವಗಮ್ಯತೇ। ಛಾಯಾತಪಯೋರಿವ ಅತ್ಯನ್ತವಿವಿಕ್ತಂ ಬ್ರಹ್ಮಲೋಕೇ ಏವೈಕಸ್ಮಿ। ಸ ಚ ದುಷ್ಪ್ರಾಪಃ, ಅತ್ಯನ್ತವಿಶಿಷ್ಟಕರ್ಮಜ್ಞಾನಸಾಧ್ಯತ್ವಾತ್। ತಸ್ಮಾತ್ ಆತ್ಮದರ್ಶನಾಯ ಇಹೈವ ಯತ್ನಃ ಕರ್ತವ್ಯಃ ಇತ್ಯಭಿಪ್ರಾಯಃ॥

(ಭಾಷ್ಯಾರ್ಥ)

ಕನ್ನಡಿಯಲ್ಲಿ ಪ್ರತಿಬಿಂಬವಾಗಿರುವ ತಮ್ಮನ್ನು ಹೇಗೆ ಅತ್ಯಂತ ವಿಂಗಡವಾಗಿ ಜನರು ಕಾಣುವರೋ ಹಾಗೆ ಇಲ್ಲಿ ಆತ್ಮದಲ್ಲಿ ಎಂದರೆ ಕನ್ನಡಿಯಂತೆ ನಿರ್ಮಲವಾಗಿರುವ ತಮ್ಮ ಬುದ್ಧಿಯಲ್ಲಿ ವಿಂಗಡವಾಗಿ ಆತ್ಮನ ದರ್ಶನವು ಆಗುತ್ತದೆ ಎಂದು ಅರ್ಥ. ಕನಸಿನಲ್ಲಿ[1] ಜಾಗ್ರದ್ವಾಸನೆಯಿಂದುಂಟಾಗಿರುವ (ದರ್ಶನವು) ಹೇಗೆ (ಸ್ಫುಟವಾಗಿರುವದಿಲ್ಲ) ವೋ ಹಾಗೆ **ಪಿತೃಲೋಕ**ದಲ್ಲಿ ಆತ್ಮನ ದರ್ಶನವು ವಿಂಗಡವಾಗಿ ಆಗದೆ ಇರುವದು. ಏಕೆಂದರೆ (ಅಲ್ಲಿ) ಕರ್ಮಫಲವನ್ನು ಅನುಭವಿಸುವದರಲ್ಲಿ ಆಸಕ್ತರಾಗಿರುವರು. ಮತ್ತು ಹೇಗೆ ನೀರಿನಲ್ಲಿ ಅವಯವಗಳು ಚೆನ್ನಾಗಿ ಬೇರ್ಪಡದೆ ತನ್ನ ರೂಪವು ಕಾಣುವದೋ (ಪರೀವ ದದೃಶೇ=ಪರಿದಶ್ಯತೇ ಇವ) ಹಾಗೆ **ಗಂಧರ್ವ ಲೋಕ**ದಲ್ಲಿ ಆತ್ಮದರ್ಶನವು ವಿಂಗಡವಾಗಿ ಕಾಣದೆ ಇರುವದು. ಇದರಂತೆಯೇ ಲೋಕಾಂತರಗಳಲ್ಲಿಯೂ (ಆತ್ಮನನ್ನು ಸ್ಫುಟವಾಗಿ ಕಾಣುವದಾಗುವದಿಲ್ಲ) ಎಂದು ಶಾಸ್ತ್ರಪ್ರಾಮಾಣ್ಯದಿಂದ[2] ನಿಶ್ಚಯಿಸಬೇಕು ಬ್ರಹ್ಮಲೋಕವೊಂದರಲ್ಲಿ ಮಾತ್ರ ನೆರಳುಬಿಸಿಲುಗಳಂತೆ ಅತ್ಯಂತವಾಗಿ ವಿಂಗಡವಾಗಿ (ಕಾಣಬಹುದು). ಆದರೆ ಆ ಲೋಕವನ್ನು ಹೊಂದುವುದೆಂಬುದು ಕಷ್ಟ; ಏಕೆಂದರೆ (ಅದು) ಅತ್ಯಂತವಾಗಿ

---

1. ವಾಸನಾಕಲ್ಪಿತವಾದ ಭೋಗಗಳಲ್ಲಿ ಆಸಕ್ತನಾಗಿರುವದರಿಂದ ಕನಸಿನಲ್ಲಿ ಆತ್ಮನ ಕಡೆಗೆ ಮನಸ್ಸು ತಿರುಗುವದಿಲ್ಲ.

2. ಆತ್ಮನ ದರ್ಶನವನ್ನು ಇಲ್ಲಿಯೇ ಮಾಡಿಕೊಳ್ಳಬೇಕು ಎಂದು ಹೇಳಿ ಮಿಕ್ಕ ಲೋಕಗಳಲ್ಲಿ ದರ್ಶನವು ದುರ್ಲಭವೆಂಬುದನ್ನು ತಿಳಿಸುವದಕ್ಕೆ ಪಿತೃಲೋಕಗಂಧರ್ವಲೋಕಗಳನ್ನು ಉದಾಹರಿಸಿದೆ. ಇದು ಉಪಲಕ್ಷಣವೆಂದೂ ಬೇರೆ ಯಾವ ಲೋಕಗಳಲ್ಲಿಯೂ ಆತ್ಮದರ್ಶನವು ಸ್ಪಷ್ಟವಾಗುವದಿಲ್ಲವೆಂದೂ ಅವುಗಳೆಲ್ಲ ಭೋಗಭೂಮಿಗಳೆಂದೂ ಶಾಸ್ತ್ರಹ ತಾತ್ಪರ್ಯವನ್ನು ಕಲ್ಪಿಸಬೇಕು.

ಅಸಾಧಾರಣವಾದ ಕರ್ಮ ಮತ್ತು ಜ್ಞಾನ[1]–ಇವುಗಳ (ಅನುಷ್ಠಾನದಿಂದ) ಪಡೆಯ ತಕ್ಕದ್ದಾಗಿರುತ್ತದೆ.[2] ಆದ್ದರಿಂದ ಆತ್ಮದರ್ಶನಕ್ಕಾಗಿ ಇಲ್ಲಿಯೇ ಯತ್ನವನ್ನು ಮಾಡ ಬೇಕು ಎಂದಭಿಪ್ರಾಯ.

ಇಂದ್ರಿಯಾದಿಗಳಿಂದ ಆತ್ಮನನ್ನು ವಿಂಗಡಿಸಿ ಅರಿಯಬೇಕು

(ಭಾಷ್ಯ)

೧೬೩. ಕಥಮಸೌ ಬೋದ್ಧವ್ಯಃ, ಕಿಂ ವಾ ತದವಬೋಧೇ ಪ್ರಯೋಜನ ಮಿತಿ? ಉಚ್ಯತೇ—

(ಭಾಷ್ಯಾರ್ಥ)

ಇವನನ್ನು ತಿಳಿದುಕೊಳ್ಳುವುದು ಹೇಗೆ? ಇವನನ್ನು ತಿಳಿದುಕೊಂಡರೆ (ಆಗುವ) ಪ್ರಯೋಜನವಾದರೂ ಏನು?–ಎಂದರೆ ಹೇಳುತ್ತಾನೆ:

ಇನ್ದ್ರಿಯಾಣಾಂ ಪೃಥಗ್ಭಾವ-
ಮುದಯಾಸ್ತಮಯೌ ಚ ಯತ್ ।
ಪೃಥಗುತ್ಪದ್ಯಮಾನಾನಾಂ
ಮತ್ವಾ ಧೀರೋ ನ ಶೋಚತಿ ॥ ೬ ॥

೬. ಬೇರೆ ಬೇರೆ ಹುಟ್ಟುವ ಇಂದ್ರಿಯಗಳ, ಬೇರೆಯ ಸ್ವಭಾವ ವನ್ನೂ ಉದಯಾಸ್ತಮಯಗಳನ್ನೂ ಯಾವದರಿಂದ (ವಿಂಗಡಿಸಿ) ತಿಳಿದರೆ ಧೀರರು ಶೋಕಿಸುವದಿಲ್ಲ.

(ಭಾಷ್ಯ)

೧೬೪. ಇನ್ದ್ರಿಯಾಣಾಂ ಶ್ರೋತ್ರಾದೀನಾಂ ಸ್ವಸ್ವವಿಷಯಗ್ರಹಣಪ್ರಯೋ ಜನೇನ ಸ್ವಕಾರಣೇಭ್ಯ ಆಕಾಶಾದಿಭ್ಯಃ ಪೃಥಗುತ್ಪದ್ಯಮಾನಾನಾಮ್ ಅತ್ಯನ್ತ ವಿಶುದ್ಧಾತ್ ಕೇವಲಾತ್ ಚಿನ್ಮಾತ್ರಸ್ವರೂಪಾತ್ ಪೃಥಗ್ಭಾವಂ ಸ್ವಭಾವವಿಲಕ್ಷಣಾತ್ಮ ಕತಾಮ್, ತಥಾ ತೇಷಾಮೇವೇನ್ದ್ರಿಯಾಣಾಮ್ ಉದಯಾಸ್ತಮಯೌ ಚ ಉತ್ಪತ್ತಿಪ್ರಲಯೌ ಜಾಗ್ರತ್ಸ್ವಾಪಾವಸ್ಥಾಪೇಕ್ಷಯಾ ನಾತ್ಮನ ಇತಿ ಮತ್ವಾ ಜ್ಞಾತ್ವಾ ವಿವೇಕತೋ ಧೀರಃ ಧೀಮಾನ್ ನ ಶೋಚತಿ । ಆತ್ಮನೋ ನಿತ್ಯೈಕಸ್ವಭಾವಸ್ಯಾ

---

1. ಅಶ್ವಮೇಧದಂಥ ಉತ್ಕೃಷ್ಟಕರ್ಮ, ಸಗುಣಬ್ರಹ್ಮೋಪಾಸನೆಯಂಥ ಉತ್ಕೃಷ್ಟ ಜ್ಞಾನ–ಇವುಗಳಿಂದಮಾತ್ರ ದೊರೆಯತಕ್ಕದ್ದು.

2. ಅಂಥ ಉತ್ಕೃಷ್ಟಸಾಧನವು ಎಲ್ಲರಿಗೂ ದಕ್ಕತಕ್ಕದ್ದಲ್ಲ.

ವ್ಯಭಿಚಾರಾತ್ ಶೋಕಕಾರಣತ್ವಾನುಪಪತ್ತೇಃ । ತಥಾ ಚ ಶ್ರುತ್ಯನ್ತರಮ್ " ತರತಿ ಶೋಕಮಾತ್ಮವಿತ್ " (ಛಾ. ೭-೧-೩) ಇತಿ ॥

(ಭಾಷ್ಯಾರ್ಥ)

ಬೇರೆಬೇರೆ ಹುಟ್ಟುವ ಇಂದ್ರಿಯಗಳು ಎಂದರೆ ತಮ್ಮ ತಮ್ಮ ವಿಷಯವನ್ನು ಅರಿಯುವ ಪ್ರಯೋಜನಕ್ಕಾಗಿ ಆಕಾಶವೇ ಮುಂತಾದ ತಮ್ಮ ಕಾರಣಗಳಿಂದ ಹುಟ್ಟುವ ಕಿವಿಯೇ ಮುಂತಾದವು. ಇವುಗಳ ಬೇರೆಯ ಸ್ವಭಾವವನ್ನೂ ಎಂದರೆ, ಅತ್ಯಂತ ವಿಶುದ್ಧವಾಗಿಯೂ ತಾನೊಂದೇ ಇರುವದಾಗಿಯೂ ಬರಿಯ ಜ್ಞಾನದ ಸ್ವರೂಪಕ್ಕೆಂತ[1] (ಇವು) ಬೇರೆಯ ಸ್ವಭಾವವುಳ್ಳವುಗಳಾಗಿರುವದೆಂಬುದನ್ನೂ ಉದಯಾಸ್ತಮಯಗಳನ್ನೂ ಎಂದರೆ ಎಚ್ಚರನಿದ್ರೆಗಳೆಂಬ ಅವಸ್ಥೆಗಳ ವಶದಿಂದ ಆಗುವ ಹುಟ್ಟುಹೊಂದುಗಳು (ಆ ಇಂದ್ರಿಯಗಳಿಗೇ ಹೊರತು) ಆತ್ಮನಿಗೆ (ಆಗುವ)ದಿಲ್ಲ ಎಂದು ತಿಳಿದರೆ ವಿಂಗಡಿಸಿ ತಿಳಿದುಕೊಂಡರೆ[2] (ಅಂಥ) ಧೀರನು, ಬುದ್ಧಿವಂತನು ಶೋಕಿಸುವದಿಲ್ಲ, ಏಕೆಂದರೆ ಯಾವಾಗಲೂ ಒಂದೇ ಸ್ವಭಾವದವನಾದ ಆತ್ಮನು ಹೆಚ್ಚುಕಡಿಮೆಯಾಗದೆ ಇರುವದರಿಂದ ಶೋಕಕ್ಕೆ ಕಾರಣವಿರುವದಿಲ್ಲ. ಆದ್ದರಿಂದಲೇ "ಆತ್ಮನನ್ನು ತಿಳಿದವನು ಶೋಕಿಸುವದಿಲ್ಲ," (ಛಾ. ೭-೧-೩) ಎಂದು ಬೇರೊಂದು ಶ್ರುತಿಯಲ್ಲಿ ಹೇಳಿರುತ್ತದೆ.

(ಭಾಷ್ಯ)

೧೬೫. ಯಸ್ಮಾದಾತ್ಮನ ಇನ್ದ್ರಿಯಾಣಾಂ ಪೃಥಗ್ಭಾವ ಉಕ್ತಃ, ನಾಸೌ ಬಹಿರಧಿಗನ್ತವ್ಯಃ ಯಸ್ಮಾತ್ ಪ್ರತ್ಯಗಾತ್ಮಾ ಸ ಸರ್ವಸ್ಯ । ತತ್ಕಥಮಿತಿ ? ಉಚ್ಯತೇ–

(ಭಾಷ್ಯಾರ್ಥ)

ಯಾವ ಆತ್ಮನಿಗಿಂತ ಇಂದ್ರಿಯಗಳು ಬೇರೆಯ ಸ್ವಭಾವದವೆಂದು ಹೇಳಿದೆಯೋ ಅವನನ್ನು (ನಮ್ಮ) ಹೊರಗೆ (ಇರುವನೆಂದು) ಅರಿಯತಕ್ಕದ್ದಲ್ಲ, ಏಕೆಂದರೆ ಅವನು ಎಲ್ಲಕ್ಕೂ ಒಳಗಿನ ಆತ್ಮನು. ಅದು ಹೇಗೆ ? ಎಂದರೆ ಹೇಳುತ್ತಾನೆ :—

---

1. ಯತ್ ಎಂಬ ಮಾತು ಭಾಷ್ಯದಲ್ಲಿ ಬಿಟ್ಟಿದೆ. ಯತ್=ಯಸ್ಮಾತ್ (ಯಾವ ಆತ್ಮನಿಗಿಂತ) ಎಂಬುದಕ್ಕೆ ಅತ್ಯಂತ ವಿಶುದ್ಧಾತ್ ಮುಂತಾದವು ವಿಶೇಷಣಗಳು.

2 (೧) ಇಂದ್ರಿಯಗಳು ಅಶುದ್ಧ, ಅನೇಕ, ಜಡ; ಆತ್ಮನು ಶುದ್ಧ, ಅದ್ವಿತೀಯ, ಚಿನ್ಮಾತ್ರನು (೨) ಇಂದ್ರಿಯಗಳ ಅರಿವು ಎಚ್ಚರದಲ್ಲಿ ಹುಟ್ಟಿ, ನಿದ್ರೆಯಲ್ಲಿ ಮರೆಯಾಗುವದು; ಆತ್ಮನ ಅರಿವು ನಿತ್ಯ, ಸ್ವತಂತ್ರ-ಎಂದು ಇಂದ್ರಿಯಗಳನ್ನೂ ಆತ್ಮನನ್ನೂ ವಿಂಗಡಿಸಿ ತಿಳಿದುಕೊಂಡರೆ ಎಂದರ್ಥ. ಇಂದ್ರಿಯ ಎಂಬ ಮಾತು ಅನಾತ್ಮಕ್ಕೆ ಉಪಲಕ್ಷಣವು.

ಇನ್ದ್ರಿಯೇಭ್ಯಃ ಪರಂ ಮನೋ
ಮನಸಃ ಸತ್ತ್ವಮುತ್ತಮಮ್ ।
ಸತ್ತ್ವಾದಪಿ ಮಹಾನಾತ್ಮಾ
ಮಹತೋಽವ್ಯಕ್ತಮುತ್ತಮಮ್ ॥ ೭ ॥

೭. ಇಂದ್ರಿಯಗಳಿಗಿಂತ ಮನಸ್ಸು ಹೆಚ್ಚಿನದು; ಮನಸ್ಸಿಗಿಂತ ಸತ್ತ್ವವು ಉತ್ತಮ; ಸತ್ತ್ವಕ್ಕಿಂತ ಮಹಾ ಎಂಬ ಆತ್ಮವು ಹೆಚ್ಚು; ಮಹತ್ತಿಗಿಂತ ಅವ್ಯಕ್ತವು ಉತ್ತಮವು.

(ಭಾಷ್ಯ)

೧೬೬. "ಇನ್ದ್ರಿಯೇಭ್ಯಃ ಪರಂ ಮನಃ" ಇತ್ಯಾದಿ। ಅರ್ಥಾನಾಮ್ ಇಹ ಇಂದ್ರಿಯಸಮಾನಜಾತೀಯತ್ವಾತ್ ಇನ್ದ್ರಿಯಗ್ರಹಣೇನೈವ ಗ್ರಹಣಮ್। ಪೂರ್ವವದನ್ಯತ್। ಸತ್ತ್ವಶಬ್ದಾದ್ ಬುದ್ಧಿರಿಹೋಚ್ಯತೇ ॥

(ಭಾಷ್ಯಾರ್ಥ)

"ಇಂದ್ರಿಯೇಭ್ಯಃ ಪರಂ ಮನಃ" ಎಂದು ಮೊದಲಾಗಿರುವ (ವಾಕ್ಯವು ಈ ಪ್ರಶ್ನೆಗೆ ಉತ್ತರವು). (ಅರ್ಥಗಳು) ಇಂದ್ರಿಯಗಳ ಜಾತಿಯವೇ ಆಗಿರುವದರಿಂದ ಅದನ್ನೂ ಇಂದ್ರಿಯ ಎಂಬ ಮಾತಿನಿಂದಲೇ ಇಲ್ಲಿ ಗ್ರಹಿಸಬೇಕು. ಮಿಕ್ಕದ್ದನ್ನು ಹಿಂದೆ (೧-೩-೧೦) ರಲ್ಲಿ ಹೇಳಿದಂತೆ (ತಿಳಿಯಬೇಕು). ಸತ್ತ್ವವೆಂಬ ಮಾತಿನಿಂದ ಇಲ್ಲಿ ಬುದ್ಧಿಯನ್ನು[2] ಹೇಳಿದೆ.

ಅವ್ಯಕ್ತಾತ್ತು ಪರಃ ಪುರುಷೋ
ವ್ಯಾಪಕೋಽಲಿಙ್ಗ ಏವ ಚ ।
ಯಂ ಜ್ಞಾತ್ವಾ ಮುಚ್ಯತೇ ಜನ್ತು-
ರಮೃತತ್ವಂ ಚ ಗಚ್ಛತಿ ॥ ೮ ॥

೮. ಆದರೆ ಅವ್ಯಕ್ತಕ್ಕಿಂತ ವ್ಯಾಪಕನಾಗಿಯೂ ಅಲಿಂಗನಾಗಿಯೂ ಇರುವ ಪುರುಷನೇ ಹೆಚ್ಚು. ಈ (ಪುರುಷನನ್ನು) ಅರಿತುಕೊಂಡರೆ ಪ್ರಾಣಿಯು ಮುಕ್ತನಾಗುವನು, ಅಮೃತತ್ವವನ್ನೂ ಹೊಂದುವನು.

---

1. ಆತ್ಮನು ಬಲು ಸೂಕ್ಷ್ಮನಾದ್ದರಿಂದ ಸೂಕ್ಷ್ಮ ದರ್ಶಿಗಳಿಗೆ ಮಾತ್ರ ಅವನ ಜ್ಞಾನವಾಗುವದು ಎಂದು ಹಿಂದೆ ತಿಳಿಸಿತ್ತು; ಆತ್ಮನನ್ನು ನಮ್ಮ ಒಳಗೇ ಅರಿತುಕೊಳ್ಳಬೇಕು, ನಮಗಿಂತ ಬೇರೆಯಾಗಿ ಹೊರಗೆ ಅರಿತುಕೊಳ್ಳತಕ್ಕದ್ದಲ್ಲ ಎಂಬುದನ್ನು ತಿಳಿಸುವದಕ್ಕೆ ಮಂತ್ರವು ಬಂದಿದೆ.

2. ಬರಿಯ ಅಂತಃಕರಣವಲ್ಲ.

(ಭಾಷ್ಯ)

೧೬೭. ಅವ್ಯಕ್ತಾತ್ತು ಪರಃ ಪುರುಷಃ ವ್ಯಾಪಕಃ ವ್ಯಾಪಕಸ್ಯಾಪ್ಯಾಕಾಶಾದೇಃ ಸರ್ವಸ್ಯ ಕಾರಣತ್ವಾತ್ । ಅಲಿಙ್ಗಃ ಲಿಙ್ಗ್ಯತೇ ಗಮ್ಯತೇ ಯೇನ ತಲ್ಲಿಙ್ಗಂ ಬುದ್ಧ್ಯಾದಿ ತದವಿದ್ಯಮಾನಮ್ ಅಸ್ಯ ಸೋಽಯಮ್ ಅಲಿಙ್ಗ ಏವ ಚ । ಸರ್ವಸಂಸಾರಧರ್ಮವರ್ಜಿತ ಇತ್ಯೇತತ್ । ಯಂ ಜ್ಞಾತ್ವಾ ಆಚಾರ್ಯತಃ ಶಾಸ್ತ್ರತಶ್ಚ ಮುಚ್ಯತೇ ಜನ್ತುಃ, ಅವಿದ್ಯಾದಿಹೃದಯಗ್ರನ್ಥಿಭಿರ್ಜೀವನ್ನೇವ । ಪತಿತೇಽಪಿ ಶರೀರೇ ಅಮೃತತ್ವಂ ಚ ಗಚ್ಛತಿ । ಸೋಽಲಿಙ್ಗಃ ಪರೋಽವ್ಯಕ್ತಾತ್ ಪುರುಷಃ ಇತಿ ಪೂರ್ವೇಣೈವ ಸಮ್ಬನ್ಧಃ ॥

(ಭಾಷ್ಯಾರ್ಥ)

ಆದರೆ ಅವ್ಯಕ್ತಕ್ಕಿಂತ ಪುರುಷನು ಹೆಚ್ಚು. (ಇವನು) ವ್ಯಾಪಕನು, ಏಕೆಂದರೆ ವ್ಯಾಪಕವಾದ ಆಕಾಶವೇ ಮುಂತಾದದ್ದೆಲ್ಲಕ್ಕೂ ಕಾರಣನಾಗಿರುತ್ತಾನೆ. (ಇವನು) ಅಲಿಂಗನು, ಯಾವ (ಗುರುತಿ)ನಿಂದ ಅರಿಯುತ್ತಾರೋ ಅದು ಲಿಂಗವು, ಅಂಥ ಬುದ್ಧಿಯೇ ಮುಂತಾದ ಲಿಂಗವು ಇವನಿಗೆ ಇರುವದಿಲ್ಲವಾದ್ದರಿಂದ[1] ಇವನು ಅಲಿಂಗನೇ ಎಂದರೆ–ಯಾವ ಸಂಸಾರಧರ್ಮವೂ ಇಲ್ಲದವನು ಎಂದಭಿಪ್ರಾಯ. ಯಾವ ಆತ್ಮನನ್ನು ಆಚಾರ್ಯರಿಂದಲೂ **ಶಾಸ್ತ್ರದಿಂದಲೂ ಅರಿತುಕೊಂಡರೆ**[2] **ಜೀವನು ಬದುಕಿರುವಾಗಲೇ ಅವಿದ್ಯೆಯೇ ಮುಂತಾದ ಹೃದಯದ ಗ್ರಂಥಿಗಳಿಂದ**[3] **ಮುಕ್ತನಾಗುವನೋ, ಶರೀರವು ಬಿದ್ದು ಹೋದ ಮೇಲೆಯೂ**[4] **ಅಮೃತತ್ವವನ್ನು ಹೊಂದುವನೋ** "ಆ ಅಲಿಂಗನಾದ ಪುರುಷನು ಅವ್ಯಕ್ತಕ್ಕಿಂತಲೂ ಹೆಚ್ಚು" ಎಂದು ಹಿಂದಕ್ಕೇ ಸಂಬಂಧಮಾಡಿಕೊಳ್ಳಬೇಕು.

---

1. ಅಂತಃಕರಣದಿಂದಲೂ ಇಂದ್ರಿಯಗಳಿಂದಲೂ ಆತ್ಮನು ಅರಿಯುತ್ತಾನೆಂದು ಆ ಅರಿವಿನ ಗುರುತಿನಿಂದ ಅವನನ್ನು ಊಹಿಸಬಹುದೆಂದು ನಾವು ತಿಳಿಯುತ್ತೇವೆ. ವ್ಯವಹಾರ ದೃಷ್ಟಿಯಿಂದ ಇದು ಸರಿಯಾದರೂ ನಿಜವಾಗಿ ಆತ್ಮನಿಗೆ ಯಾವ ಗುರುತೂ ಇಲ್ಲ.

2. ಆಚಾರ್ಯರ ಮತ್ತು ಶಾಸ್ತ್ರದ ಉಪದೇಶದಿಂದ ಮನಸ್ಸಿಗೆ ಸಂಸ್ಕಾರವಾಗಿ ಆತ್ಮ ಜ್ಞಾನವಾಗುವದೆಂಬುದು ಭಾಷ್ಯಕಾರರ ಮತವು. ಈ ಉಪನಿಷತ್ತಿನ ೨-೯-೧೧, ೨-೨-೧೨ ನೋಡಿ.

3. ಹೃದಯಕ್ಕೆ ಗಂಟುಹಾಕಿದಂತೆ ಇರುವ ಅವಿದ್ಯೆಯೂ ಕಾಮವೇ ಮುಂತಾದವೂ ಜ್ಞಾನದಿಂದ ಸಂಪೂರ್ಣವಾಗಿ ಬಿಟ್ಟುಹೋಗುವವು. ಮುಂ. ಭಾ. ೨-೨-೮ ನೋಡಿ.

4. ಶರೀರವು ಬಿದ್ದು ಮೇಲೆ ಮತ್ತೆ ಅಜ್ಞರಂತೆ ಜನ್ಮವನ್ನು ಹೊಂದುವದಿಲ್ಲ ಎಂದು ಮಾತ್ರ ಅರ್ಥ. ಬದುಕಿರುವಾಗ ಪಡೆಯದೆ ಇದ್ದ ಅಮೃತತ್ವವನ್ನು ಹೊಂದುವನೆಂದಲ್ಲ. ಬೃ. ಭಾ. ೪-೪-೬, ಈ ಉಪನಿಷತ್ತಿನ ೨-೨-೧೨ರ ಭಾಷ್ಯ-ಇವನ್ನು ನೋಡಿ.

(ಭಾಷ್ಯ)

೧೬೮. ಕಥಂ ತರ್ಹಿ ತಸ್ಯ ಅಲಿಙ್ಗಸ್ಯ ದರ್ಶನಮ್ ಉಪಪದ್ಯತ ಇತಿ ? ಉಚ್ಯತೇ—

(ಭಾಷ್ಯಾರ್ಥ)

ಹಾಗಾದರೆ ಯಾವ ಗುರುತೂ ಇಲ್ಲದ ಈ (ಆತ್ಮನನ್ನು) ಕಾಣುವದೆನ್ನುವದು ಹೇಗೆ? ಎಂದರೆ ಹೇಳುತ್ತಾನೆ:—

ನ ಸನ್ದೃಶೇ ತಿಷ್ಠತಿ ರೂಪಮಸ್ಯ
ನ ಚಕ್ಷುಷಾ ಪಶ್ಯತಿ ಕಶ್ಚನೈನಮ್ ।
ಹೃದಾ ಮನೀಷಾ ಮನಸಾಭಿಕ್ಲೃಪ್ತೋ
ಯ ಏತದ್ವಿದುರಮೃತಾಸ್ತೇ ಭವನ್ತಿ ॥ ೯ ॥

೯. ಈತನ ರೂಪವು ದರ್ಶನದಲ್ಲಿರುವದಿಲ್ಲ. ಯಾವನೂ ಈತನನ್ನು ಕಣ್ಣಿನಿಂದ ನೋಡಲಾರನು. ಮನಸ್ಸನ್ನಾಳುವ ಹೃದಯದಿಂದ ಮನಸ್ಸಿನಿಂದ ಗೊತ್ತುಪಡಿಸಲ್ಪಟ್ಟರೆ (ತೋರಿಕೊಳ್ಳುತ್ತಾನೆ). ಯಾರು ಇದನ್ನು ಅರಿತುಕೊಳ್ಳುವರೋ ಅವರು ಅಮೃತರಾಗುವರು.

(ಭಾಷ್ಯ)

೧೬೯. ನ ಸನ್ದೃಶೇ ಸನ್ದರ್ಶನವಿಷಯೇ ನ ತಿಷ್ಠತಿ ಪ್ರತ್ಯಗಾತ್ಮನಃ ಅಸ್ಯ ರೂಪಮ್ । ಅತಃ ನ ಚಕ್ಷುಷಾ ಸರ್ವೇನ್ದ್ರಿಯೇಣ । ಚಕ್ಷುರ್ಗ್ರಹಣಸ್ಯೋಪಲಕ್ಷಣಾರ್ಥತ್ವಾತ್ । ಪಶ್ಯತಿ ನೋಪಲಭತೇ ಕಶ್ಚನ ಕಶ್ಚಿದಪಿ ಏನಂ ಪ್ರಕೃತಮ್ ಆತ್ಮಾನಮ್ । ಕಥಂ ತರ್ಹಿ ತಂ ಪಶ್ಯೇತ್ ಇತಿ? ಉಚ್ಯತೇ । ಹೃದಾ ಹೃತ್ಸ್ಥಯಾ ಬುದ್ಧ್ಯಾ । ಮನೀಷಾ ಮನಸಃ ಸಙ್ಕಲ್ಪಾದಿರೂಪಸ್ಯ ಈಷ್ಟೇ ನಿಯನ್ತೃತ್ವೇನ ಇತಿ ಮನೀಟ್, ತಯಾ ಹೃದಾ ಮನೀಷಾ ಅವಿಕಲ್ಪಯಿತ್ರ್ಯಾ । ಮನಸಾ ಮನನರೂಪೇಣ ಸಮ್ಯಗ್ದರ್ಶನೇನ ಅಭಿಕ್ಲೃಪ್ತಃ ಅಭಿಸಮರ್ಧಿತಃ ಅಭಿಪ್ರಕಾಶಿತಃ ಇತ್ಯೇತತ್ । ಆತ್ಮಾ ಜ್ಞಾತುಂ ಶಕ್ಯತೇ ಇತಿ ವಾಕ್ಯಶೇಷಃ । ತಮ್ ಆತ್ಮಾನಂ ಬ್ರಹ್ಮ ಏತತ್ ಯೇ ವಿದುಃ ಅಮೃತಾಃ ತೇ ಭವನ್ತಿ ॥

(ಭಾಷ್ಯಾರ್ಥ)

ಈ ಒಳಗಿನ ಆತ್ಮನ ರೂಪವು ದರ್ಶನದಲ್ಲಿ ಎಂದರೆ ದರ್ಶನಕ್ಕೆ ವಿಷಯವಾಗಿ ಇರುವದಿಲ್ಲ. ಆದ್ದರಿಂದ ಕಣ್ಣಿನಿಂದ–ಕಣ್ಣು ಎಂದು ಹೇಳಿರುವದು ಉಪಲಕ್ಷಣಕ್ಕೆ; ಆದ್ದರಿಂದ (ಕಣ್ಣಿನಿಂದ ಎಂದರೆ)–ಯಾವ ಇಂದ್ರಿಯದಿಂದಲೂ ಯಾವನೂ ಯಾವ

ನೊಬ್ಬನೂ ಈ ಪ್ರಕೃತನಾದ ಆತ್ಮನನ್ನು ನೋಡಲಾರನು, ಎಂದರೆ ತಿಳಿಯಲಾರನು. ಹಾಗಾದರೆ ಆತನನ್ನು ಹೇಗೆ ತಿಳಿಯಬೇಕು ?–ಎಂದರೆ ಹೇಳುತ್ತಾನೆ : ಹೃದಯದಿಂದ ಎಂದರೆ ಹೃದಯದಲ್ಲಿರುವ ಬುದ್ಧಿಯಿಂದ (ಮೂಲದಲ್ಲಿ) ಮನೀಷಾ (ಎಂದಿದೆಯಷ್ಟೆ,) ಸಂಕಲ್ಪವೇ ಮುಂತಾದ[1] ರೂಪದ ಮನಸ್ಸನ್ನು ಬಿಗಿಯಲ್ಲಿಟ್ಟು ಆಳುವದರಿಂದ (ಬುದ್ಧಿಗೆ) 'ಮನೀಟ್' ಎಂದು ಹೆಸರು. ಹೀಗೆ ಮನಸ್ಸನ್ನಾಳುತ್ತಾ[2] ಯಾವ ವಿಕಲ್ಪವನ್ನೂ ಮಾಡದಿರುವ ಹೃದಯದಿಂದ, ಮನಸ್ಸಿನಿಂದ ಮನನರೂಪವಾದ ಸರಿಯಾದ ಜ್ಞಾನದಿಂದ ಗೊತ್ತುಪಡಿಸಲ್ಪಟ್ಟರೆ, ಎಂದರೆ ಎಲ್ಲಾ ವಿಧದಿಂದಲೂ ನಿರ್ಣಯಿಸಲ್ಪಟ್ಟರೆ, ಚೆನ್ನಾಗಿ ಬೆಳಗಿಸಲ್ಪಟ್ಟರೆ ಎಂದರ್ಥ "(ಆಗ) ಆತ್ಮನನ್ನು ಅರಿಯುವದಕ್ಕಾಗುವದು" ಎಂದು ವಾಕ್ಯಕ್ಕೆ ಸೇರಿಸಿಕೊಳ್ಳಬೇಕು. ಆ ಆತ್ಮನನ್ನು ಈ ಬ್ರಹ್ಮವೆಂದು ಯಾರು ಅರಿಯುವರೋ ಅವರು ಅಮೃತರಾಗುವರು.

ಜ್ಞಾನಕ್ಕೆ ಸಾಧನವಾದ ಯೋಗ

(ಭಾಷ್ಯ)

೧೭೦. ಸಾ ಹೃನ್ಮನೀಟ್ ಕಥಂ ಪ್ರಾಪ್ಯತ ಇತಿ? ತದರ್ಥೋ ಯೋಗ ಉಚ್ಯತೇ—

(ಭಾಷ್ಯಾರ್ಥ)

ಆ ಮನೀಟ್ (ಎಂಬ ಮನಸ್ಸನ್ನಾಳುವ) ಬುದ್ಧಿಯು ದೊರಕುವದು ಹೇಗೆ?–ಎಂದರೆ ಅದಕ್ಕಾಗಿ ಯೋಗವನ್ನು[3] ಹೇಳುತ್ತಾನೆ —

---

1 ಸಂಕಲ್ಪವೆಂದರೆ ಪ್ರವೃತ್ತಿಗೆ ಬೇಕಾದ ಮೊದಲನೆಯ ಕಲ್ಪನೆ. ಮುಂತಾದದ್ದು ಎಂದರೆ ವಿಕಲ್ಪವು, ಇಂಥಿಂಥದ್ದೆಂದು ತಿಳಿಯುವದು

2. ಹೊರಗಿನ ಇಂದ್ರಿಯಗಳನ್ನು ತಡೆದುಕೊಂಡಿರುವಾಗಲೂ ಮನಸ್ಸು ವಿಷಯಗಳನ್ನು ಕಲ್ಪಿಸಿಕೊಳ್ಳುತ್ತಿರುವದು. ಆಗ ಮುಮುಕ್ಷುವಿನ ಬುದ್ಧಿಯು ಅದನ್ನು ತಡೆದು "ಎಲೈ ಮನಸ್ಸೆ, ಏತಕ್ಕೆ ಪಿಶಾಚಿಯಂತೆ ಓಡಾಡುತ್ತಿರುವೆ ? ನಿನ್ನ ಪ್ರಯೋಜನಕ್ಕಂತೂ ಅಲ್ಲ. ಏಕೆಂದರೆ ಜಡವಾಗಿರುವ ನಿನಗೆ ಯಾವ ಪ್ರಯೋಜನವೂ ಸಿಗುವಂತಿಲ್ಲ ವಿಷಯಗಳು ನಾಶವಾಗುತ್ತಿರುವದರಿಂದ ಅವುಗಳಿಂದ ಪ್ರಯೋಜನವಾದೀತೆಂಬುದು ಹೊಂದುವ ಹಾಗೂ ಇಲ್ಲ ಚೇತನಕ್ಕಾಗಿ ಓಡಾಡುತ್ತೇನೆಂಬುನೂ ಸರಿಯಲ್ಲ; ಏಕೆಂದರೆ ಚೇತನವು ಅಸಂಗವಾಗಿ ಪರಮಾನಂದ ಸ್ವಭಾವವಾಗಿಯೇ ಇರುವದು" ಎಂದು ಅವನ್ನು ಬಿಗಿಹಿಡಿಯುತ್ತದೆ. ಆದ್ದರಿಂದ ಹೀಗೆ ಮನಸ್ಸನ್ನು ಆಳುವ ಬುದ್ಧಿಗೆ ಮನೀಟ್ ಎಂದು ಹೆಸರು (ಗೊ॥)

3. ಹಿಂದೆ ೧-೩-೧೩ ರಲ್ಲಿ ಹೇಳಿದ ಅಧ್ಯಾತ್ಮಯೋಗವೇ ಇದು

ಯದಾ ಪಞ್ಚಾವತಿಷ್ಠನ್ತೇ
ಜ್ಞಾನಾನಿ ಮನಸಾ ಸಹ ।
ಬುದ್ಧಿಶ್ಚ ನ ವಿಚೇಷ್ಟತಿ
ತಾಮಾಹುಃ ಪರಮಾಂ ಗತಿಮ್ ॥ ೧೦ ॥

೧೦. ಯಾವಾಗ ಐದು ಜ್ಞಾನಗಳೂ ಮನಸ್ಸಿನೊಡನೆ ನಿಲುಗಡೆಗೆ ಬರುವವೋ ಬುದ್ಧಿಯು ಅಲುಗಾಡುವದಿಲ್ಲವೋ ಅದನ್ನು ಪರಮಗತಿ ಎಂದು ಹೇಳುತ್ತಾರೆ.

(ಭಾಷ್ಯ)

೧೭೧. ಯಾದಾ ಯಸ್ಮಿನ್ ಕಾಲೇ ಸ್ವವಿಷಯೇಭ್ಯೋ ನಿವರ್ತಿತಾನಿ ಆತ್ಮನ್ಯೇವ ಪಞ್ಚ ಜ್ಞಾನಾನಿ-ಜ್ಞಾನಾರ್ಥತ್ವಾತ್ ಶ್ರೋತ್ರಾದೀನೀನ್ದ್ರಿಯಾಣಿ ಜ್ಞಾನಾನ್ಯುಚ್ಯನ್ತೇ-ಅವತಿಷ್ಠನ್ತೇ ಸಹ ಮನಸಾ ಯದನುಗತಾನಿ ತೇನ ಸಙ್ಕಲ್ಪಾದಿವ್ಯಾವೃತ್ತೇನ ಅನ್ತಃಕರಣೇನ । ಬುದ್ಧಿಶ್ಚ ಅಧ್ಯವಸಾಯಲಕ್ಷಣಾ ನ ವಿಚೇಷ್ಟತಿ ಸ್ವವ್ಯಾಪಾರೇಷು ನ ವಿಚೇಷ್ಟತೇ ನ ವ್ಯಾಪ್ರಿಯತೇ ತಾಮ್ ಆಹುಃ ಪರಮಾಂ ಗತಿಮ್ ॥

(ಭಾಷ್ಯಾರ್ಥ)

ಯಾವಾಗ ಎಂದರೆ ಯಾವ ಕಾಲದಲ್ಲಿ ತಮ್ಮ ತಮ್ಮ ವಿಷಯಗಳಿಂದ ಹಿಂತಿರುಗಿಸಿದ ಐದು ಜ್ಞಾನಗಳು–ಶ್ರೋತ್ರವೇ ಮುಂತಾದ ಇಂದ್ರಿಯಗಳು ಜ್ಞಾನಕ್ಕೋಸ್ಕರ ಉಪಯೋಗವಾಗುವದರಿಂದ (ಅವನ್ನು) 'ಜ್ಞಾನಗಳು' ಎಂದು ಕರೆದಿದೆ. (ಅವು)–ಮನಸ್ಸಿನೊಡನೆ ಎಂದರೆ ಯಾವ ಅಂತಃಕರಣದೊಡನೆ ಸೇರಿಕೊಂಡೇ ನಿಂತಿರುವವೋ ಆ ಸಂಕಲ್ಪಾದಿಗಳನ್ನು ಬಿಟ್ಟ ಅಂತಃಕರಣದೊಡನೆ ಆತ್ಮನಲ್ಲಿಯೇ ನಿಲುಗಡೆಗೆ ಬರುವವೋ, ಮತ್ತು ನಿಶ್ಚಯರೂಪವಾದ ಬುದ್ಧಿಯೂ ಅಲುಗಾಡುವದಿಲ್ಲವೋ (ನ ವಿಚೇಷ್ಟತಿ=ನ ವಿಚೇಷ್ಟತೇ) ತನ್ನ ವ್ಯಾಪಾರಗಳಲ್ಲಿ ತೊಡಗದೆ ಇರುವದೋ,[1] ಅದನ್ನೇ ಉತ್ತಮಗತಿ ಎನ್ನುವರು.

ತಾಂ ಯೋಗಮಿತಿ ಮನ್ಯನ್ತೇ
ಸ್ಥಿರಾಮಿನ್ದ್ರಿಯಧಾರಣಾಮ್ ।
ಅಪ್ರಮತ್ತಸ್ತದಾ ಭವತಿ
ಯೋಗೋ ಹಿ ಪ್ರಭವಾಪ್ಯಯೌ ॥ ೧೧ ॥

---

1. ಗೌ. ಕಾ ೩-೪೦ ರಿಂದ ೪೬ ರವರೆಗಿನ ಕಾರಿಕೆಗಳನ್ನು ನೋಡಿರಿ.

೧೧. ಸ್ಥಿರವಾದ ಇಂದ್ರಿಯಧಾರಣೆ ಎಂಬ ಇದನ್ನೇ ಯೋಗವೆಂದು ತಿಳಿಯುವದು. ಆಗ ಅಪ್ರಮತ್ತನಾಗಿರುತ್ತಾನೆ, ಏಕೆಂದರೆ ಯೋಗವು ಪ್ರಭವಾಪ್ಯಯಗಳು.

(ಭಾಷ್ಯ)

೧೭೨. ತಾಮ್ ಈದೃಶೀಮ್ ಅವಸ್ಥಾಂ ಯೋಗಮ್ ಇತಿ ಮನ್ಯನ್ತೇ ವಿಯೋಗಮೇವ ಸನ್ತಮ್ । ಸರ್ವಾನರ್ಥಸಂಯೋಗವಿಯೋಗಲಕ್ಷಣಾ ಹಿ ಇಯಮ್ ಅವಸ್ಥಾ ಯೋಗಿನಃ । ಏತಸ್ಯಾಂ ಹಿ ಅವಸ್ಥಾಯಾಮ್ ಅವಿದ್ಯಾಧ್ಯಾರೋಪಣ ವರ್ಜಿತಸ್ವರೂಪಪ್ರತಿಷ್ಠ ಆತ್ಮಾ । ಸ್ಥಿರಾಮ್ ಇನ್ದ್ರಿಯಧಾರಣಾಮ್ । ಸ್ಥಿರಾಮ್ ಅಚಲಾಮ್ ಇನ್ದ್ರಿಯಧಾರಣಾಮ್ । ಬ್ಯಾಹ್ಯಾನ್ತಃಕರಣಾನಾಂ ಧಾರಣಾಮ್ ಇತ್ಯರ್ಥಃ । ಅಪ್ರಮತ್ತಃ ಪ್ರಮಾದವರ್ಜಿತಃ ಸಮಾಧಾನಂ ಪ್ರತಿ ನಿತ್ಯಂ ಯತ್ನವಾ ತದಾ ತಸ್ಮಿನ್ ಕಾಲೇ ಯದೈವ ಪ್ರವೃತ್ತಯೋಗೋ ಭವತಿ ಇತಿ ಸಾಮರ್ಥ್ಯಾತ್ ಅವಗಮ್ಯತೇ । ನ ಹಿ ಬುದ್ಧ್ಯಾದಿಚೇಷ್ಟಾಭಾವೇ ಪ್ರಮಾದಸಮ್ಭವೋಽಸ್ತಿ । ತಸ್ಮಾತ್ ಪ್ರಾಗೇವ ಬುದ್ಧ್ಯಾದಿಚೇಷ್ಟೋಪರಮಾತ್ ಅಪ್ರಮಾದೋ ವಿಧೀಯತೇ ॥

(ಭಾವಾರ್ಥ)

ಇಂಥ ಈ ಅವಸ್ಥೆಯನ್ನು–ಇದು ವಿಯೋಗವೇ ಆಗಿದ್ದರೂ–ಯೋಗವೆಂದು ತಿಳಿಯುತ್ತಾರೆ. ಯೋಗಿಯ ಈ ಅವಸ್ಥೆ ಎಲ್ಲಾ ಬಗೆಯ ಅನರ್ಥದ ಸಂಬಂಧವೂ ಇಲ್ಲ ವಾಗುವಂಥದ್ದೇ[1], ಏಕೆಂದರೆ **ಈ ಅವಸ್ಥೆಯಲ್ಲಿ ಅವಿದ್ಯೆಯ ಆರೋಪಣೆಯಿಂದ ಬಿಡಲ್ಪಟ್ಟ ತನ್ನ ರೂಪದಲ್ಲಿಯೇ ಆತ್ಮನು** ಇದ್ದುಕೊಂಡಿರುತ್ತಾನೆ.[2] ಸ್ಥಿರ ವಾದ ಇಂದ್ರಿಯಧಾರಣೆಯನ್ನು ಎಂದರೆ, ಸ್ಥಿರವಾದ ಅಲುಗಾಡದ ಇಂದ್ರಿಯಧಾರ ಣೆಯನ್ನು, ಹೊರಗಿನ ಮತ್ತು ಒಳಗಿನ ಕರಣಗಳನ್ನು ಬಿಗಿಹಿಡಿದುಕೊಂಡಿರುವದನ್ನು ಯೋಗವೆನ್ನುತ್ತಾರೆ) ಎಂದರ್ಥ. ಆಗ ಎಂದರೆ ಆ ಕಾಲದಲ್ಲಿ, ಯಾವಾಗ, ಯೋಗದಲ್ಲಿ ಪ್ರವೃತ್ತನಾಗುತ್ತಾನೋ ಆಗ ಎಂದು ಶಬ್ದ ಸಾಮರ್ಥ್ಯದಿಂದ ಗೊತ್ತುಮಾಡ ಬೇಕಾಗಿದೆ ಏಕೆಂದರೆ ಬುದ್ಧಿಯೇ ಮುಂತಾದವು ಅಲುಗಾಡದೆ ಇರುವಲ್ಲಿ ಎಚ್ಚರಿಕೆ ತಪ್ಪುವ ಸಂಭವವೇ ಇರುವದಿಲ್ಲ[3] ಆದ್ದರಿಂದ ಅಪ್ರಮತ್ತನಾಗಿ ಎಂದರೆ ಪ್ರಮಾದ

---

1 ಗೀ ೬-೨೩ ದುಃಖಗಳ ಸಂಬಂಧವು ಇಲ್ಲವಾಗುವದೆಂಬ ವಿಯೋಗವನ್ನೇ ಯೋಗ ವೆಂದು ಕರೆಯುವರು ವಿಯೋಗವನ್ನು ಯೋಗವೆಂದು ಕರೆಯುವದು ಅಮಂಗಳವಾದ ವಾರವನ್ನು ಮಂಗಳವಾರವೆಂದು ಕರೆಯುವಂತೆ ವಿಪರೀತಲಕ್ಷಣೆಯಿಂದ.

2 ಮಾಂ ಕಾ ೩-೬ರಲ್ಲಿ ಹೇಳಿರುವ ಅವಸ್ಥೆಯಿದು ಗೀ ೬-೨೮ ನೋಡಿರಿ

3 ಸಮಾಧಿಯು ಬಂದಾಗ ಮಾಡಬೇಕಾದದ್ದೇನೂ ಇರುವದಿಲ್ಲವಾದ್ದರಿಂದ ಆಗ ಪ್ರಮಾದವಾಗಲಿ ಅಪ್ರಮಾದವಾಗಲಿ ಇವಲಾರದು ಆದ್ದರಿಂದ ಸಮಾಧಿಯುಂಟಾಗುವ ಪೂರ್ವದಲ್ಲಿ ಎಚ್ಚರಿಕೆಯಿಂದಿರಬೇಕು ಎಂದು ಭಾವ

ವಿಲ್ಲದವನಾಗಿ ಸಮಾಧಾನದಿಂದಿರುವ ವಿಷಯದಲ್ಲಿ ಯಾವಾಗಲೂ ಯತ್ನವುಳ್ಳವನಾಗಿರುತ್ತಾನೆ–ಎಂದರೆ **ಬುದ್ಧಿಯೇ ಮುಂತಾದವುಗಳ ವ್ಯಾಪಾರವು ನಿಲ್ಲುವ ಮುಂಚೆಯೇ ಎಚ್ಚರತಪ್ಪದೆ** ಇರಬೇಕು ಎಂದು ವಿಧಿಸಿರುತ್ತದೆ.

(ಭಾಷ್ಯ)

೧೭೩. ಅಥವಾ ಯದೈವ ಇನ್ದ್ರಿಯಾಣಾಂ ಸ್ಥಿರಾ ಧಾರಣಾ ತದಾನೀಮೇವ ನಿರಙ್ಕುಶಮ್ ಅಪ್ರಮತ್ತತ್ವಮ್ ಇತ್ಯತೋಽಭಿಧೀಯತೇ "ಅಪ್ರಮತ್ತಸ್ತದಾ ಭವತಿ" ಇತಿ । ಕುತಃ ? ಯೋಗೋ ಹಿ ಪ್ರಭವಾಪ್ಯಯೌ ಉಪಜನಾಪಾಯಧರ್ಮಕಃ ಇತ್ಯರ್ಥಃ । ಅತಃ ಅಪಾಯಪರಿಹಾರಾಯ ಅಪ್ರಮಾದಃ ಕರ್ತವ್ಯಃ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಅಥವಾ ಯಾವಾಗ ಇಂದ್ರಿಯಗಳನ್ನು ಸ್ಥಿರವಾಗಿ ಧರಿಸಿರುತ್ತಾನೋ ಆಗಲೇ ಯಾವ ಅಡ್ಡಿಯೂ ಇರುವದಿಲ್ಲ, ಆದ್ದರಿಂದ ಈಗ "ಅಪ್ರಮತ್ತನಾಗಿರುತ್ತಾನೆ" ಎಂದು ಹೇಳಿರುತ್ತದೆ[1] (ಎಂದಾದರೂ ಈ ವಾಕ್ಯಕ್ಕೆ ಅರ್ಥವನ್ನು ಮಾಡಬಹುದು). ಅದೇಕೆ ?[2] ಎಂದರೆ ಯೋಗವು ಪ್ರಭವಾಪ್ಯಯಗಳು, ಎಂದರೆ ಹುಟ್ಟುವದು ನಾಶವಾಗುವದು ಎಂಬ ಸ್ವಭಾವವುಳ್ಳದ್ದು ಎಂದರ್ಥ. ಆದ್ದರಿಂದ (ಅದು) ನಾಶವಾಗುವದನ್ನು ತಪ್ಪಿಸಿಕೊಳ್ಳುವದಕ್ಕಾಗಿ ಎಚ್ಚರಿಕೆಯನ್ನು ಕೈಕೊಳ್ಳಬೇಕು ಎಂದು ಅಭಿಪ್ರಾಯ.

ಬ್ರಹ್ಮಜ್ಞಾನವೂ ಅದರ ಫಲವೂ

(ಭಾಷ್ಯ)

೧೭೪. ಬುದ್ಧ್ಯಾದಿಚೇಷ್ಟಾವಿಷಯಂ ಚೇತ್ ಬ್ರಹ್ಮ ಇದಂ ತತ್ ಇತಿ ವಿಶೇಷತೋ ಗೃಹ್ಯೇತ । ಬುದ್ಧ್ಯಾದ್ಯುಪರಮೇ ಚ ಗ್ರಹಣಕಾರಣಾಭಾವಾತ್ ಅನುಪಲಭ್ಯಮಾನಂ ನಾಸ್ತ್ಯೇವ ಬ್ರಹ್ಮ । ಯದ್ಧಿ ಕರಣಗೋಚರಂ ತದಸ್ತಿ ಇತಿ ಪ್ರಸಿದ್ಧಂ ಲೋಕೇ ವಿಪರೀತಂ ಚ ಅಸತ್ ಇತಿ । ಅತಶ್ಚ ಅನರ್ಥಕೋ ಯೋಗಃ, ಅನುಪಲಭ್ಯಮಾನತ್ವಾದ್ವಾ ನಾಸ್ತೀತ್ಯುಪಲಬ್ಧವ್ಯಂ ಬ್ರಹ್ಮ ಇತ್ಯೇವಂ ಪ್ರಾಪ್ತೇ ಇದ ಮುಚ್ಯತೇ—

---

1. ಯೋಗದ ಫಲವಾದ ಸಮಾಧಿಯಿರುವಾಗ ಮಾತ್ರ ಅಪ್ರಮತ್ತನಾಗಿರುತ್ತಾನೆ. ಮಿಕ್ಕ ವೇಳೆಗಳಲ್ಲಿ ಎಚ್ಚರಿಕೆಯಿಲ್ಲದೆ ಬಹಿರ್ಮುಖವಾಗುವ ಸಂಭವವೂ ಇದೆ ಎಂದು ಭಾವ.

2. ಯೋಗದ ಫಲವಾದ ಸಮಾಧಿಯು ಬರುವದಕ್ಕೂ ಅದು ದೀರ್ಘಕಾಲವಿದ್ದು ಬ್ರಹ್ಮಜ್ಞಾನಕ್ಕೆ ಸಹಾಯವಾಗುವದಕ್ಕೂ ಎಚ್ಚರಿಕೆಯಿರಬೇಕಾದದ್ದೇಕೆ ?

(ಭಾಷ್ಯಾರ್ಥ)

(ಆಕ್ಷೇಪ) :— ಬ್ರಹ್ಮವು ಬುದ್ಧಿಯೇ ಮುಂತಾದವುಗಳ ವ್ಯಾಪಾರಕ್ಕೆ ವಿಷಯವಾಗಿದ್ದರೆ ಅದು ಇಂಥದ್ದು ಎಂದು ವಿಶೇಷರೂಪದಿಂದ ಗ್ರಹಿಸಬಹುದಾಗಿತ್ತು. ಬುದ್ಧಿಯೇ ಮುಂತಾದವು ಕೆಲಸಮಾಡದೆ ಇರುವಾಗ (ಅದನ್ನು) ತಿಳಿಯುವದಕ್ಕೆ ಕರಣವೇ[1] ಇಲ್ಲದ್ದರಿಂದ ಅದಕ್ಕೆ ಕಾಣದೆ ಇರುವ (ಬ್ರಹ್ಮವು) ಇಲ್ಲವೇ ಇಲ್ಲ. ಏಕೆಂದರೆ ಯಾವದು ಕರಣಗಳಿಗೆ ಗೋಚರವಾಗಿರುವದೋ ಅದು ಇದೆಯೆಂದೂ ಹಾಗಿಲ್ಲದಿರುವದು ಇಲ್ಲವೆಂದೂ[2] ಲೋಕದಲ್ಲಿ ಪ್ರಸಿದ್ಧವಾಗಿರುತ್ತದೆ. ಆದ್ದರಿಂದಲೇ ಯೋಗವು ವ್ಯರ್ಥವು.[3] ಅಥವಾ ಬ್ರಹ್ಮವು ಕಾಣದೆ ಇರುವದರಿಂದ ಅದು ಇಲ್ಲವೆಂದೇ ತಿಳಿಯಬೇಕು.[4]

ಹೀಗೆಂದು ಒದಗಿದ (ಆಕ್ಷೇಪಕ್ಕೆ) ಈ (ಪರಿಹಾರವನ್ನು) ಹೇಳಿರುತ್ತದೆ:—

ನೈವ ವಾಚಾ ನ ಮನಸಾ
ಪ್ರಾಪ್ತುಂ ಶಕ್ಯೋ ನ ಚಕ್ಷುಷಾ ।
ಅಸ್ತೀತಿ ಬ್ರುವತೋಽನ್ಯತ್ರ
ಕಥಂ ತದುಪಲಭ್ಯತೇ ॥ ೧೨ ॥

೧೨. ಮಾತಿನಿಂದಲಾಗಲಿ ಮನಸ್ಸಿನಿಂದಲಾಗಲಿ ಕಣ್ಣಿನಿಂದಲಾಗಲಿ ಹೊಂದುವದಕ್ಕೆ ಆಗುವವನಲ್ಲ. 'ಇದಾನೆ' ಎಂದು ಹೇಳುವವನನ್ನು ಬಿಟ್ಟು ಬೇರೆಯಾಗಿ ಅದು ಹೇಗೆ ಕಂಡುಬಂದೀತು?

(ಭಾಷ್ಯ)

೧೨ಎ. ಸತ್ಯಮ್ । ನೈವ ವಾಚಾ ನ ಮನಸಾ ನ ಚಕ್ಷುಷಾ ನಾನ್ಯೈರಪಿ ಇನ್ದ್ರಿಯೈಃ ಪ್ರಾಪ್ತುಂ ಶಕ್ಯತೇ ಇತ್ಯರ್ಥಃ । ತಥಾಪಿ ಸರ್ವವಿಶೇಷರಹಿತೋಽಪಿ

---

1. ಕರಣವಿಲ್ಲದಾಗ ಏತ್ತರಿಂದ ನೋಡಬೇಕು? ಎಂದು ಭಾವ.

2. ಪ್ರಮಾಣ ಗೋಚರವಾದದ್ದೇ ಸತ್ಯವೆಂಬ ಅಭಿಪ್ರಾಯದಿಂದ ಹೊರಟಿರುವ ಶಂಕೆಯಿದು. ಕೇ. ಭಾ. ೧-೩, ೩-೧ ; ತೈ. ಭಾ ೨-೬.

3. ಯೋಗವೆಂದರೆ ಬುದ್ಧ್ಯಾದಿಗಳು ಯಾವವೂ ಕೆಲಸಮಾಡದಂತೆ ಮಾಡುವ ಸಾಧನವು, ಬುದ್ಧ್ಯಾದಿಗಳು ಕೆಲಸಮಾಡದಿರುವಾಗ ತಿಳಿಯುವದಾದರೂ ಏನಿರುತ್ತದೆ?—ಎಂದು ಭಾವ.

4. ದೃಶ್ಯವಾದದ್ದು ಇದೆ; ಆದರೆ ಬ್ರಹ್ಮವು ದೃಶ್ಯವಲ್ಲವಲ್ಲ!—ಎಂದು ಆಕ್ಷೇಪ. ಚಾರ್ವಾಕರೂ ಶೂನ್ಯವಾದಿಗಳೂ ಮಾಡುವ ಆಕ್ಷೇಪವಿದು. ವಿಜ್ಞಾನವಾದಿಗಳು ಹೇಳುವ ವಿಜ್ಞಾನವು ತನಗೆತಾನೇವಿಷಯವಾಗಿರುವದರಿಂದ ಅವರೂ ಈ ಆಕ್ಷೇಪವನ್ನು ಮಾಡಬಹುದು. ಆತ್ಮನು ಜ್ಞಾನಕ್ಕೆ ವಿಷಯನೆಂಬ ಅಸ್ತಿಕದರ್ಶನದವರೂ ಈ ಆಕ್ಷೇಪಕರಲ್ಲಿ ಸೇರುವರು.

ಜಗತೋ ಮೂಲಮ್ ಇತ್ಯವಗತತ್ವಾತ್, ಅಸ್ತ್ಯೇವ । ಕಾರ್ಯಪ್ರವಿಲಾಪನಸ್ಯ ಅಸ್ತಿತ್ವನಿಷ್ಠತ್ವಾತ್, ತಥಾ ಹಿ ಇದಂ ಕಾರ್ಯಂ ಸೂಕ್ಷ್ಮತಾರತಮ್ಯಪಾರಮ್ಪರ್ಯೇಣ ಅನುಗಮ್ಯಮಾನಂ ಸದ್ಬುದ್ಧಿನಿಷ್ಠಾಮೇವ ಅವಗಮಯತಿ । ಯದಾಪಿ ವಿಷಯಪ್ರವಿಲಾಪನೇನ ಪ್ರವಿಲಾಪ್ಯಮಾನಾ ಬುದ್ಧಿಃ, ತದಾಪಿ ಸಾ ಸತ್ಪ್ರತ್ಯಯಗರ್ಭೈವ ವಿಲೀಯತೇ । ಬುದ್ಧಿರ್ಹಿ ನಃ ಪ್ರಮಾಣಂ ಸದಸತೋರ್ಯಾಥಾತ್ಮ್ಯಾವಗಮೇ। ಮೂಲಂ ಚೇಜ್ಜಗತೋ ನ ಸ್ಯಾತ್, ಅಸದನ್ವಿತಮೇವೇದಂ ಕಾರ್ಯಮ್ 'ಅಸತ್' ಇತ್ಯೇವಂ ಗೃಹ್ಯೇತ । ನ ತ್ವೇತದಸ್ತಿ । 'ಸತ್' 'ಸತ್' ಇತ್ಯೇವ ತು ಗೃಹ್ಯತೇ । ಯಥಾ ಮೃದಾದಿಕಾರ್ಯಂ ಘಟಾದಿ ಮೃದಾದ್ಯನ್ವಿತಮ್ । ತಸ್ಮಾತ್ ಜಗತೋ ಮೂಲಮ್ ಆತ್ಮಾ 'ಅಸ್ತಿ' ಇತ್ಯೇವೋಪಲಬ್ಧವ್ಯಃ । ಕಸ್ಮಾತ್ ? 'ಅಸ್ತಿ' ಇತಿ ಬ್ರುವತಃ ಅಸ್ತಿತ್ವವಾದಿನಃ ಆಗಮಾರ್ಥಾನುಸಾರಿಣಃ ಶ್ರದ್ಧಾನಾತ್ ಅನ್ಯತ್ರ ನಾಸ್ತಿಕವಾದಿನಿ "ನಾಸ್ತಿ ಜಗತೋ ಮೂಲಮ್ ಆತ್ಮಾ, ನಿರನ್ವಯಮೇವೇದಂ ಕಾರ್ಯಮ್ ಅಭಾವಾಸ್ತಂ ಪ್ರವಿಲೀಯತೇ" ಇತಿ ಮನ್ಯಮಾನೇ ವಿಪರೀತದರ್ಶಿನಿ ಕಥಂ ತದ್ಬ್ರಹ್ಮ ತತ್ತ್ವತ ಉಪಲಭ್ಯತೇ ? ನ ಕಥಂಚನೋಪಲಭ್ಯತೇ ಇತ್ಯರ್ಥಃ ॥

(ಭಾಷ್ಯಾರ್ಥ)

ನಿಜ, ಮಾತಿನಿಂದಾಗಲಿ, ಮನಸ್ಸಿನಿಂದಾಗಲಿ, ಚಕ್ಷುಸ್ಸಿನಿಂದಾಗಲಿ, ಮಿಕ್ಕ ಇಂದ್ರಿಯಗಳಿಂದಾಗಲಿ[1] (ಇದನ್ನು) ಪಡೆಯುವದಕ್ಕೆ ಆಗುವದಿಲ್ಲ ಎಂದರ್ಥ.[2] ಹೀಗೆ ಯಾವ ವಿಶೇಷವೂ ಇಲ್ಲದಿದ್ದರೂ ಜಗತ್ತಿಗೆ ಕಾರಣವೆಂದು ಗೊತ್ತಾಗಿರುವದರಿಂದ ಇದ್ದೇ ಇರುವದು ಏಕೆಂದರೆ ಕಾರ್ಯವು ನಷ್ಟವಾಯಿತೆಂದು (ಕಲ್ಪಿಸುವಾಗ) ಇದೆ ಎಂಬ ಧರ್ಮದಲ್ಲಿಯೇ ಕೊನೆಗಾಣುವದು. ಹೇಗೆಂದರೆ ಈ ಕಾರ್ಯವು ಒಂದಕ್ಕಿಂತ ಒಂದು ಸೂಕ್ಷ್ಮವಾಗಿರುವ ಪರಂಪರೆಯಿಂದ[3] ಅನುಗತವಾಗಿ[4] ಸದ್ಬುದ್ಧಿಯಲ್ಲಿಯೇ ನಿಲುಗಡೆಯಾಗಿದೆ ಎಂದು ನಿಶ್ಚಯವನ್ನುಂಟುಮಾಡುತ್ತಿರುವದು[5] (ಇನ್ನು) ವಿಷಯವನ್ನು ಲಯಗೊಳಿಸಿ ಬುದ್ಧಿಯು ತಾನೂ ಲಯವಾದಾಗಲೂ ಆ ಬುದ್ಧಿಯು ಇದೆ ಎಂಬ

---

1 ವಾಕ್ಕು, ಮನಸ್ಸು-ಎಂದು ಹೇಳಿರುವದು ಎಲ್ಲಾ ಇಂದ್ರಿಯಗಳಿಗೂ ಉಪಲಕ್ಷಣವು

2 'ಇತ್ಯರ್ಥಃ' ಎಂಬ ಮಾತು ಭಾಷ್ಯದಲ್ಲಿಲ್ಲದಿದ್ದರೂ ಸಾಗುತ್ತದೆ

3 ಕಾರ್ಯವಾದ ಜಗತ್ತು ಭೂತಗಳು, ತನ್ಮಾತ್ರೆಗಳು ಮುಂತಾದ ಸೂಕ್ಷ್ಮಪರಂಪರೆಯಿಂದಲೂ ಕೂಡಿಕೊಂಡಿರುತ್ತದೆ.

4 ಸೂಕ್ಷ್ಮವಾದದ್ದು ಸ್ಥೂಲವಾದದ್ದನ್ನು ಹಿಂಬಾಲಿಸಿಕೊಂಡೇ ಇರುತ್ತದೆ

5 ಯಾವ ಸೂಕ್ಷ್ಮವಾದ ಕಾರಣವನ್ನು ನೋಡಿದರೂ ಅದು 'ಇದೆ' ಎಂದೇ ತೋರುತ್ತಿರುವದರಿಂದ ಕೊನೆಗೆ ಇದು ಇರವಿನಲ್ಲಿಯೇ ನಿಲುಗಡೆಯಾಗಬೇಕೆಂದು ನಿಶ್ಚಯಿಸಬಹುದಾಗಿದೆ.

ಅರಿವನ್ನೊಳಕೊಂಡೇ ಲಯವಾಗುತ್ತದೆ.[1] **ಸತ್ತು, ಅಸತ್ತು ಎಂಬಿವೆರಡರ ನಿಜವನ್ನು ನಿಶ್ಚಯಿಸುವದಕ್ಕೆ ಬುದ್ಧಿಯೇ ಅಲ್ಲವೆ, ನಮಗೆ ಪ್ರಮಾಣವಾಗಿರುವದು?** ಜಗತ್ತಿಗೆ ಕಾರಣವೇ ಇಲ್ಲದಿದ್ದರೆ ಈ ಕಾರ್ಯವು ಅಸತ್ತಿನಿಂದಲೇ ಅನುಗತವಾಗಿ 'ಇಲ್ಲ' ಎಂದೇ ತಿಳಿಯಬೇಕಾಗಿತ್ತು[2] ಆದರೆ ಹಾಗಿರುವದಿಲ್ಲ, 'ಇದೆ' 'ಇದೆ' ಎಂದೇ ತಿಳಿಯಬರುತ್ತಿದೆ.[3] ಮಣ್ಣು ಮುಂತಾದವುಗಳ ಕಾರ್ಯವಾದ ಗಡಿಗೆಯೇ ಮುಂತಾದದ್ದು ಮಣ್ಣಿನಿಂದಲೇ ಕೂಡಿಕೊಂಡು ಇರುವಂತೆ (ಇದು ಸತ್ತಿನ ಕಾರ್ಯವಾದ್ದರಿಂದ 'ಇದೆ' 'ಇದೆ' ಎಂದೇ ತೋರುತ್ತಿದೆ). ಆದ್ದರಿಂದ ಜಗತ್ತಿಗೆ ಮೂಲವಾದ ಆತ್ಮನು ಇದಾನೆಂದೇ ತಿಳಿಯಬೇಕು. ಏಕೆ? ಎಂದರೆ ಇದಾನೆ ಎಂದು ಹೇಳುವವನನ್ನು ಎಂದರೆ **ಆಗಮದ**[4] ಅರ್ಥವನ್ನು ಅನುಸರಿಸುವ ಶ್ರದ್ಧೆಯುಳ್ಳ ಆಸ್ತಿಕನನ್ನು ಬಿಟ್ಟು ಬೇರೆಯಾಗಿ ಎಂದರೆ ನಾಸ್ತಿಕವಾದಿಯಲ್ಲಿ "ಜಗತ್ತಿಗೆ ಮೂಲವಾದ ಆತ್ಮನಿಲ್ಲ, ಈ ಕಾರ್ಯವು[5] ಯಾವದರಿಂದಲೂ ಅನುಗತವಾಗಿರುವದಿಲ್ಲ, ಆದು ಅಭಾವವನ್ನೇ ಕೊನೆಗೆ ಉಳಿಸಿ ಲಯವಾಗುತ್ತದೆ" ಎಂದು ಭಾವಿಸಿರುವ ವಿರುದ್ಧದರ್ಶಿಯಾದವನಲ್ಲಿ ಆ ಬ್ರಹ್ಮವು ಹೇಗೆ ಇದ್ದದ್ದು ಇದ್ದಂತೆ ಕಂಡು ಬಂದೀತು? ಹೇಗೂ ಕಂಡು ಬರುವದಿಲ್ಲ ಎಂದರ್ಥ.[6]

ಅಸ್ತೀತ್ಯೇವೋಪಲಬ್ಧವ್ಯ-
ಸ್ತತ್ತ್ವಭಾವೇನ ಚೋಭಯೋಃ।
ಅಸ್ತೀತ್ಯೇವೋಪಲಬ್ಧಸ್ಯ
ತತ್ತ್ವಭಾವಃ ಪ್ರಸೀದತಿ ॥ ೧೩ ॥

---

1. ಬುದ್ಧಿಗೆ ವಿಷಯವಾದದ್ದೆಲ್ಲವೂ ಅಸತ್ತೇ, ಕನಸಿನ ವಸ್ತುಗಳು ಇದಕ್ಕೆ ಉದಾಹರಣೆ ಎಂದು ವಿಷಯವನ್ನು ಅಲ್ಲಗಳೆಯುವಾಗ ಬುದ್ಧಿಯೂ ಅಸತ್ತಾಗುವದಲ್ಲ!-ಎಂದು ಶಂಕಿಸಬಾರದು, ಏಕೆಂದರ ಅಸತ್ತು ಇದು ಎಂಬ ಬುದ್ಧಿಯಾದರೂ ಕೊನೆಗೆ ಇರಬೇಕಾಗುವದು ಬೃ ಭಾ ೧-೨-೧.

2 ಛಾ ಭಾ ೬-೨-೨, ಸೂ ಭಾ ೨-೨-೨೬

3 ಸತ್ತಿನಿಂದ ಬಂದಿರುವ ಜಗತ್ತಿನಲ್ಲಿ 'ಸತ್' ಎಂಬ ಬುದ್ಧಿಯು ಕಾಣುವದು ಯುಕ್ತವಾಗಿದೆ ಎಂದು ಭಾವ.

4 ಶಾಸ್ತ್ರದ, ವೇದದ. ವೇದದಲ್ಲಿ ಜಗತ್ತಿಗೆ ಜನ್ಮಕಾರಣವಾದ ಆತ್ಮನು ಇದಾನೆಂದು ಹೇಳಿದೆ ಎಂದು ನಂಬುವ ಆಸ್ತಿಕನು ಮುಂದೆ ಆತ್ಮನ ತತ್ತ್ವವನ್ನು ಕಾಣುವನು ಎಂದು ಭಾವ. ಮಾ. ಕಾ. ಭಾ. ೪-೪೨.

5. "ಇದೆ" ಎಂಬ ಅರಿವಿನಿಂದೊಡಗೂಡಿ ನಾಶವಾಗುತ್ತದೆ ಎಂಬ ನಾಸ್ತಿಕವಾದವು ಸಾನ್ವಯನಾಶವನ್ನು ಹೇಳುವದು ವಸ್ತುನಾಶವಾದರೆ ಅಭಾವವೇ ಉಳಿಯುವದು ಎಂಬ ಬೌದ್ಧರ ವಾದವು ನಿರನ್ವಯನಾಶವನ್ನು ಹೇಳುವದು

6 ಅಸದ್ವಾದಿಗೆ ಬ್ರಹ್ಮದ ಅರಿವು ಆಗುವ ಸಂಭವವೇ ಇಲ್ಲ

೧೩. "ಇದಾನೆ" ಎಂದೇ ತಿಳಿಯಬೇಕು, ತತ್ತ್ವಭಾವದಿಂದಲೂ (ತಿಳಿಯಬೇಕು). ಇವೆರಡರಲ್ಲಿ ಇದಾನೆ ಎಂದೇ ತಿಳಿಯಲ್ಪಟ್ಟವನ ತತ್ತ್ವ ಭಾವವು ಪ್ರಸನ್ನವಾಗುವದು.

(ಭಾಷ್ಯ)

೧೩.೬. ತಸ್ಮಾತ್ ಅಪೋಹ್ಯ ಅಸದ್ವಾದಿಪಕ್ಷಮಾಸುರಮ್ "ಅಸ್ತಿ" ಇತ್ಯೇವ ಆತ್ಮಾ ಉಪಲಬ್ಧವ್ಯಃ, ಸತ್ಕಾರ್ಯಬುದ್ಧ್ಯಾದ್ಯುಪಾಧಿಃ। ಯದಾ ತು ತದ್ರಹಿತೋಽವಿಕ್ರಿಯ ಆತ್ಮಾ, ಕಾರ್ಯಂ ಚ ಕಾರಣವ್ಯತಿರೇಕೇಣ ನಾಸ್ತಿ "ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್" (ಛಾ. ೬-೧-೪) ಇತಿ ಶ್ರುತೇಃ ತದಾ ಅಸ್ಯ ನಿರುಪಾಧಿಕಸ್ಯ, ಅಲಿಙ್ಗಸ್ಯ, ಸದಸದಾದಿಪ್ರತ್ಯಯವಿಷಯತ್ವವರ್ಜಿತಸ್ಯ ಆತ್ಮನಃ ತತ್ತ್ವಭಾವಃ ಭವತಿ। ತೇನ ಚ ರೂಪೇಣ ಆತ್ಮಾ ಉಪಲಬ್ಧವ್ಯಃ" ಇತ್ಯನುವರ್ತತೇ ॥

(ಭಾಷ್ಯಾರ್ಥ)

ಆದ್ದರಿಂದ ಅಸದ್ವಾದಿಗಳ ಆಸುರಪಕ್ಷವನ್ನು[1] ಬಿಟ್ಟು ಸತ್ಕಾರ್ಯವಾದ[2] ಬುದ್ಧಿಯೇ ಮುಂತಾದ ಉಪಾಧಿಗಳಿಂದೊಡಗೂಡಿದ ಆತ್ಮನು ಇದಾನೆಂದೇ ತಿಳಿಯಬೇಕು. ಆದರೆ ಯಾವಾಗ ಈ ಉಪಾಧಿಗಳಿಲ್ಲದೆ ಇರುವದರಿಂದ ಆತ್ಮನು ಅವಿಕ್ರಿಯನೆಂದೂ (ಗಡಿಗೆ ಮುಂತಾದ) "ವಿಕಾರವೆಂಬುದು ಮಾತುಗಳಿಂದ ಉಂಟಾದ ಬರಿಯ ಹೆಸರು, ಮಣ್ಣೆಂಬುದೇ ಸತ್ಯವು" (ಛಾ ೬-೧-೪) ಎಂಬ ಶ್ರುತಿಯ ಪ್ರಮಾಣದಿಂದ ಕಾರ್ಯವು ಕಾರಣಕ್ಕಿಂತ ಬೇರೆಯಾಗಿಲ್ಲವೆಂದೂ ಆಗುವದೋ ಆಗ ಯಾವ ಉಪಾಧಿಗಳೂ ಇಲ್ಲದ, ಅಲಿಂಗನಾದ,[3] 'ಇದೆ' 'ಇಲ್ಲ' ಮುಂತಾದ ಯಾವ ಪ್ರತ್ಯಯಕ್ಕೂ ವಿಷಯನಾಗದೆ ಇರುವ ಈ ಆತ್ಮನ ತತ್ತ್ವಭಾವವು ಇರುವದು[3] ಆ ರೂಪದಿಂದಲೂ ಆತ್ಮನನ್ನು "ತಿಳಿಯಬೇಕು" ಎಂದು ಸೇರಿಸಿಕೊಳ್ಳಬೇಕು.

---

1. ಗೀ. ೧೬-೮.

2. ಬುದ್ಧಿಯೇ ಮುಂತಾದವುಗಳಲ್ಲಿ 'ಇದೆ' 'ಇದೆ' ಎಂದು ತೋರುವದು. ಆತ್ಮನ ಅಸ್ತಿಭಾವ.

3. ಯಾವದೊಂದು ಗುರುತಿನಿಂದಲೂ ಅರಿಯುವಕ್ಕೆ ಬರದ.

4. ಯಾವ ಉಪಾಧಿಗಳೂ ಇಲ್ಲದಿರುವ ತನ್ನ ರೂಪದಿಂದ ಸುಷುಪ್ತಿ, ಸಮಾಧಿ ಮುಂತಾದ ಅವಸ್ಥೆಗಳಲ್ಲಿ ಆತ್ಮನು ತೋರುತ್ತಿರುವನು. ಅದೇ ಅವನ ತತ್ತ್ವಭಾವವೆಂದು ತಿಳಿಯಬೇಕು.

(ಭಾಷ್ಯ)

೧೭೭. ತತ್ರಾಪಿ ಉಭಯೋಃ ಸೋಪಾಧಿಕನಿರುಪಾಧಿಕಯೋಃ ಅಸ್ತಿತ್ವ ತತ್ತ್ವಭಾವಯೋಃ। ನಿರ್ಧಾರಣಾರ್ಥಾ ಷಷ್ಠೀ। ಪೂರ್ವಮ್ "ಅಸ್ತಿ" ಇತ್ಯೇ ವೋಪಲಬ್ಧಸ್ಯ ಆತ್ಮನಃ। ಸತ್ಕಾರ್ಯೋಪಾಧಿಕೃತಾಸ್ತಿತ್ವಪ್ರತ್ಯಯೇನೋಪಲಬ್ಧಸ್ಯ ಇತ್ಯರ್ಥಃ। ಪಶ್ಚಾತ್ ಪ್ರತ್ಯಸ್ತಮಿತಸರ್ವೋಪಾಧಿರೂಪಃ ಆತ್ಮನಃ ತತ್ತ್ವಭಾವಃ ವಿದಿತಾವಿದಿತಾಭ್ಯಾಮನ್ಯಃ, ಅದ್ವಯಸ್ವಭಾವಃ, "ನೇತಿ ನೇತಿ" (ಬೃ. ೨-೩-೬) "ಅಸ್ಥೂಲಮನಣ್ವಹ್ರಸ್ವಮ್" (ಬೃ ೩-೮-೮), "ಅದೃಶ್ಯೇಽನಾತ್ಮ್ಯೇ ನಿರುಕ್ತೇ ನಿಲಯನೇ" (ತೈ. ೨-೭) ಇತ್ಯಾದಿಶ್ರುತಿನಿರ್ದಿಷ್ಟಃ ಪ್ರಸೀದತಿ ಅಭಿಮುಖೀಭವತಿ ಆತ್ಮಪ್ರಕಾಶನಾಯ। ಪೂರ್ವಮ್ "ಅಸ್ತಿ" ಇತ್ಯುಪಲಬ್ಧವತಃ ಇತ್ಯೇತತ್ ॥

(ಭಾಷ್ಯಾರ್ಥ)

ಅದರಲ್ಲಿಯೂ ಉಪಾಧಿಗಳಿಂದ ಕೂಡಿದ ಅಸ್ತಿಭಾವ, ಉಪಾಧಿಗಳಿಲ್ಲದ ತತ್ತ್ವ ಭಾವ ಈ ಎರಡರಲ್ಲಿ—ಉಭಯೋಃ ಎಂಬ ಷಷ್ಠಿಯು (ಎರಡರೊಳಗೆ ಇಂಥದ್ದೆಂದು) ಗೊತ್ತುಮಾಡುವದಕ್ಕಾಗಿ ಬಂದಿರುತ್ತದೆ—ಮೊದಲು "ಇದಾನೆ" ಎಂದು ತಿಳಿಯಲ್ಪಟ್ಟವನ, ಸತ್ಕಾರ್ಯವಾದ ಉಪಾಧಿಗಳಿಂದಾಗಿರುವ ಇರುವನೆಂಬ ಪ್ರತ್ಯಯದಿಂದ ತಿಳಿಯಲ್ಪಟ್ಟ ಆತ್ಮನ ಎಂದರ್ಥ. ಆಮೇಲೆ ಯಾವ ಉಪಾಧಿಗಳೂ ಇಲ್ಲವಾದ ಆತ್ಮನ ತತ್ತ್ವಭಾವವು, ತಿಳಿಯತಕ್ಕದ್ದು ತಿಳಿಯುವದಕ್ಕೆ ಬಾರದೆ ಇರುವದು—ಇವುಗಳಿಗಿಂತ ಬೇರೆಯಾದ,[2] ಅದ್ವಯಸ್ವಭಾವವಾದ, "ಇದಲ್ಲ ಇದಲ್ಲ" (ಬೃ. ೨-೩-೬), "ಸ್ಥೂಲವಲ್ಲ, ಅಣುವಲ್ಲ, ಹ್ರಸ್ವವಲ್ಲ" (ಬೃ ೩-೮-೮), "ಅದೃಶ್ಯವಾದ, ಅನಾತ್ಮವಾದ, ಅನಿರುಕ್ತವಾದ, ಅನಿಲಯನವಾದ" (ತೈ. ೨-೭) ಮುಂತಾದ ಶ್ರುತಿಗಳಿಂದ ತಿಳಿಸಿರುವದಾದ (ಆತ್ಮನ ತತ್ತ್ವಭಾವವು) ಪ್ರಸನ್ನವಾಗುವದು, ತಾನೇ ತೋರಿಕೊಳ್ಳುವದಕ್ಕೆ ಅಭಿಮುಖವಾಗುವದು. ಮೊದಲು ಇದಾನೆ ಎಂದು ತಿಳಿದುಕೊಂಡವನಿಗೆ (ಈ ಭಾವವು ಪ್ರಸನ್ನವಾಗುವದು) ಎಂದರ್ಥ.

ಯದಾ ಸರ್ವೇ ಪ್ರಮುಚ್ಯನ್ತೇ
ಕಾಮಾ ಯೇಽಸ್ಯ ಹೃದಿ ಶ್ರಿತಾಃ।

---

1. ಸತ್ತೆಂದರೆ ಬ್ರಹ್ಮವು, ಅದರಿಂದುಂಟಾಗಿರುವ ಬುದ್ಧಿಯೇ ಮುಂತಾದ ಉಪಾಧಿಗಳಿಂದ ಕೂಡಿದ ರೂಪವು 'ಇದಾನೆ' ಎಂದೇ ತಿಳಿದುಬರುತ್ತದೆ.

2. ಕೇ. ೧-೪. ಸೋಪಾಧಿಕವಾದ ಅಸ್ತಿಭಾವವು ಅರಿವಿಗೆ ವಿಷಯ, ನಿರುಪಾಧಿಕವಾದ ತತ್ತ್ವಭಾವವು ಅನುಭವೈಕಗಮ್ಯ.

ಅಥ ಮರ್ತ್ಯೋಽಮೃತೋ ಭವ-
ತ್ಯತ್ರ ಬ್ರಹ್ಮ ಸಮಶ್ನುತೇ ॥ ೧೪ ॥

೧೪. ಯಾವಾಗ ಈತನ ಹೃದಯದಲ್ಲಿ ಆಶ್ರಯಿಸಿಕೊಂಡಿದ್ದ ಕಾಮಗಳು ಬಿಡುಗಡೆಯಾಗುವವೋ ಆಗ ಮರ್ತ್ಯನಾಗಿದ್ದವನು ಅಮೃತನಾಗುವನು, ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ.

(ಭಾಷ್ಯ)

೧೬೮. ಏವಂ ಪರಮಾರ್ಥಾತ್ಮದರ್ಶಿನೋ ಯದಾ ಯಸ್ಮಿನ್ ಕಾಲೇ ಸರ್ವೇ ಕಾಮಾಃ ಕಾಮಯಿತವ್ಯಸ್ಯ ಅನ್ಯಸ್ಯ ಅಭಾವಾತ್ ಪ್ರಮುಚ್ಯನ್ತೇ ವಿಶೀರ್ಯನ್ತೇ ಯೇ ಅಸ್ಯ ಪ್ರಾಕ್ ಪ್ರತಿಬೋಧಾತ್ ವಿದುಷೋ ಹೃದಿ ಬುದ್ಧೌ ಶ್ರಿತಾಃ ಆಶ್ರಿತಾಃ । ಬುದ್ಧಿರ್ಹಿ ಕಾಮಾನಾಮ್ ಆಶ್ರಯಃ ನಾತ್ಮಾ । "ಕಾಮಃ ಸೆಬ್ಜಲ್ಪಃ" (ಬೃ. ೧-೫-೩) ಇತ್ಯಾದಿಶ್ರುತ್ಯನ್ತರಾಚ್ಚ । ಅಥ ತದಾ ಮರ್ತ್ಯಃ ಪ್ರಾಕ್‌ಪ್ರಬೋಧಾದಾಸೀತ್ ಸಃ ಪ್ರಬೋಧೋತ್ತರಕಾಲಮ್ ಅವಿದ್ಯಾಕಾಮಕರ್ಮಲಕ್ಷಣಸ್ಯ ಮೃತ್ಯೋರ್ವಿನಾಶಾತ್ ಅಮೃತೋ ಭವತಿ । ಗಮನಪ್ರಯೋಜಕಸ್ಯ ಮೃತ್ಯೋರ್ವಿನಾಶಾದ್ಗಮನಾನುಪಪತ್ತೇಃ । ಇಹೈವ ಪ್ರದೀಪನಿರ್ವಾಣವತ್ ಸರ್ವಬನ್ಧನೋಪಶಮನಾತ್ ಬ್ರಹ್ಮ ಸಮಶ್ನುತೇ । ಬ್ರಹ್ಮೈವ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಹೀಗೆ ಪರಮಾರ್ಥವಾದ ಆತ್ಮನನ್ನು [1] ಕಂಡುಕೊಂಡ ಈ ಜ್ಞಾನಿಗೆ ಜ್ಞಾನವಾಗುವದಕ್ಕೆ ಮೊದಲು ಹೃದಯವನ್ನು ಎಂದರೆ ಬುದ್ಧಿಯನ್ನು ಆಶ್ರಯಿಸಿಕೊಂಡಿದ್ದ ಕಾಮಗಳೆಲ್ಲ–ಬುದ್ಧಿಯೇ ಕಾಮಗಳಿಗೆ ಆಶ್ರಯವಲ್ಲದೆ ಆತ್ಮನಲ್ಲ; [2] "ಕಾಮ, ಸಂಕಲ್ಪ (ಮುಂತಾದದ್ದೆಲ್ಲ ಬುದ್ಧಿಯೇ)" (ಬೃ. ೧-೫-೩) ಎಂಬ ಬೇರೆಯ ಶ್ರುತಿಯೂ ಇದಕ್ಕೆ ಪ್ರಮಾಣವು (ಈ ಕಾಮಗಳು)–ಯಾವಾಗ ಬಯಸತಕ್ಕ ಮತ್ತೊಂದು ಪದಾರ್ಥವೇ ಇಲ್ಲದ್ದರಿಂದ [3] ಬಿಡುಗಡೆಯಾಗುವವೋ ಎಂದರೆ ನಾಶವಾಗಿಬಿಡುವವೋ ಆಗ **ಜ್ಞಾನಕ್ಕಿಂತ ಮೊದಲು ಮರ್ತ್ಯನಾಗಿದ್ದನಲ್ಲ, ಅವನು ಜ್ಞಾನ**

---

1. ತತ್ತ್ವಭಾವವನ್ನು, ಆತ್ಮನ ನಿರುಪಾಧಿಕರೂಪವನ್ನು.

2 ಬೃ ೪-೪-೨೨, ೪-೪-೬ ರ ಭಾಷ್ಯವನ್ನು ನೋಡಿರಿ. ಕಾಮವು ಆತ್ಮನ ಧರ್ಮ ವೆಂಬ ವೈಶೇಷಿಕರ ಮತ್ತು ಕೆಲವರು ವೇದಾಂತಿಗಳ ವಾದವನ್ನು ಇಲ್ಲಿ ತಿರಸ್ಕರಿಸಿದೆ.

3. ಅವಿದ್ಯೆಯಿಂದ ಕಾಮಗಳು ತೋರುವವು, ಅವು ಜ್ಞಾನದಿಂದ ಅವಿದ್ಯೆಯು ನಾಶವಾದಾಗ ಇರುವದಿಲ್ಲ. ಬೃ. ಭಾ. ೪-೪-೨೧.

ವುಂಟಾದ ಬಳಿಕ ಅವಿದ್ಯೆ, ಕಾಮ, ಕರ್ಮ,–ಎಂಬ ಮೃತ್ಯುವು ನಾಶವಾದ ದ್ದರಿಂದ ಅಮೃತನಾಗುವನು. (ದೇಹವನ್ನು ಬಿಟ್ಟು) ಹೊರಟುಹೋಗುವದಕ್ಕೆ ಕಾರಣವಾದ ಮೃತ್ಯುವೇ ನಾಶವಾಗಿರುವದರಿಂದ (ದೇಹವನ್ನು) ಬಿಟ್ಟು ಹೋಗುವ ದೆಂಬುದು ಇವನಿಗೆ ಹೊಂದುವದಿಲ್ಲ [1] **ಇಲ್ಲಿಯೇ ದೀಪವು ಆರಿಹೋದಂತೆ** [2] **ಎಲ್ಲಾ ಬಂಧಗಳೂ ನಾಶವಾಗಿಬಿಡುವದರಿಂದ, ಬ್ರಹ್ಮವನ್ನು ಪಡೆದುಕೊಳ್ಳು ತ್ತಾನೆ, ಎಂದರೆ ಬ್ರಹ್ಮವೇ ಆಗುತ್ತಾನೆ** ಎಂದರ್ಥ.

ಯದಾ ಸರ್ವೇ ಪ್ರಭಿದ್ಯನ್ತೇ
ಹೃದಯಸ್ಯೇಹ ಗ್ರನ್ಥಯಃ ।
ಅಥ ಮರ್ತ್ಯೋ೯ಮೃತೋ ಭವ-
ತ್ಯೇತಾವದ್ಧ್ಯನುಶಾಸನಮ್ ॥ ೧೫ ॥

೧೫. ಯಾವಾಗ ಹೃದಯದ ಗ್ರಂಥಿಗಳೆಲ್ಲ ಇಲ್ಲಿಯೇ ಭಿನ್ನವಾಗು ವವೋ ಆಗ ಮರ್ತ್ಯನು ಅಮೃತನಾಗುವನು. ಇಷ್ಟೇ ಅನುಶಾಸನವು.

(ಭಾಷ್ಯ)

೧೫ ಕದಾ ಪುನಃ ಕಾಮಾನಾಂ ಮೂಲತೋ ವಿನಾಶ ಇತಿ? ಉಚ್ಯತೇ– ಯದಾ ಸರ್ವೇ ಪ್ರಭಿದ್ಯನ್ತೇ ಭೇದಮ್ ಉಪಯಾನ್ತಿ ವಿನಶ್ಯನ್ತಿ ಹೃದಯಸ್ಯ ಬುದ್ಧೇಃ ಇಹ ಜೀವತ ಏವ ಗ್ರನ್ಥಯೋ ಗ್ರನ್ಥಿವದ್ ದೃಢಬನ್ಧನರೂಪಾ ಅವಿದ್ಯಾ ಪ್ರತ್ಯಯಾಃ ಇತ್ಯರ್ಥಃ । "ಅಹಮಿದಂ ಶರೀರಮ್", "ಮಮೇದಂ ಧನಮ್", "ಸುಖೀ ದುಃಖೀ ಚಾಹಮ್" ಇತ್ಯೇವಮಾದಿಲಕ್ಷಣಾಃ ತದ್ವಿಪರೀತಾತ್ ಬ್ರಹ್ಮಾತ್ಮ ಪ್ರತ್ಯಯೋಪಜನನಾತ್ "ಬ್ರಹ್ಮೈವಾಹಮಸ್ಮಿ ಅಸಂಸಾರೀ" ಇತಿ ವಿನಷ್ಟೇಷು ಅವಿದ್ಯಾಗ್ರನ್ಥಿಷು ತನ್ನಿಮಿತ್ತಾಃ ಕಾಮಾ ಮೂಲತೋ ವಿನಶ್ಯನ್ತಿ। ಅಥ ಮರ್ತ್ಯೋ೯ಮೃತೋ ಭವತಿ । ಏತಾವದ್ ಹಿ ಏತಾವದೇವ ಏತಾವನ್ಮಾತ್ರಂ ನಾಧಿಕಮಸ್ತೀತ್ಯಾಶಙ್ಕಾ ಕರ್ತವ್ಯಾ । ಅನುಶಾಸನಮ್ ಅನುಶಿಷ್ಟಿಃ ಉಪದೇಶಃ ಸರ್ವವೇದಾನ್ತಾನಾಮ್ ಇತಿ ವಾಕ್ಯಶೇಷಃ ॥

---

1 ಬ್ರಹ್ಮವನ್ನು ಪಡೆಯುವದಕ್ಕೆ ಹೋಗಬೇಕಾದದ್ದಿಲ್ಲ, ಸೂ. ಭಾ. ೪-೪-೧೪, ಅಕಾಮಿಯಾದ ಜ್ಞಾನಿಗೆ ಗತಿಯಾಗಲಿ ಉತ್ಕ್ರಾಂತಿಯಾಗಲಿ ಇಲ್ಲ. ಬೃ. ಭಾ. ೪-೪-೬, ಸೂ. ಭಾ. ೪-೩-೧೨, ೧೩, ೧೪.

2 ವ್ಯಕ್ತವಾಗಿದ್ದ ದೀಪವು ಅವ್ಯಕ್ತವಾದ ತೇಜಸ್ಸಿನಲ್ಲಿ ಸೇರಿಹೋಗುವಂತೆ, ಮು. ಭಾ. ೩-೨-೬, ಬೃ. ೩-೨ರ ಸಂಬಂಧಭಾಷ್ಯ.

(ಭಾಷ್ಯಾರ್ಥ)

ಹಾಗಾದರೆ ಕಾಮಗಳು ಬೇರುಸಹಿತ ಯಾವಾಗ ನಾಶವಾಗುವವು? ಎಂದರೆ ಹೇಳುತ್ತಾನೆ ಯಾವಾಗ ಹೃದಯದ ಎಂದರೆ ಬುದ್ಧಿಯ ಗ್ರಂಥಿಗಳೆಲ್ಲ, ಗಂಟುಗಳಂತೆ ಗಟ್ಟಿಯಾಗಿ ಕಟ್ಟು ಬಿದ್ದಿರುವ ಅವಿದ್ಯೆಯ ಪ್ರತ್ಯಯಗಳೆಲ್ಲ ಎಂದರ್ಥ. 'ನಾನು ಈ ಶರೀರವು', 'ನನ್ನದೀ ಧನವು', 'ನಾನು ಸುಖಿಯು, ದುಃಖಿಯು– ಎಂದು ಮುಂತಾಗಿರುವ (ಅರಿವುಗಳೆಲ್ಲ) ಇದಕ್ಕೆ ವಿರುದ್ಧವಾಗಿರುವ 'ಅಸಂಸಾರಿಯಾದ ಬ್ರಹ್ಮವೇ ನಾನು' ಎಂಬ **ಬ್ರಹ್ಮಾತ್ಮಪ್ರತ್ಯಯವು ಹುಟ್ಟಿ ಅವಿದ್ಯಾಗ್ರಂಥಿಗಳು ಯಾವಾಗ ಭಿನ್ನವಾಗುವವೋ ಎಂದರೆ ಭೇದವನ್ನು ಹೊಂದುವವೋ ನಾಶವಾಗುವವೋ, ಆಗ ಆ (ಗ್ರಂಥಿ)ಗಳಿಂದ ಆಗಿದ್ದ ಕಾಮಗಳು ಬೇರು ಸಹಿತವಾಗಿ**[1] **ನಾಶವಾಗುತ್ತವೆ.** ಆಗ ಮರ್ತ್ಯನು ಅಮೃತನಾಗುವನು. ಇಷ್ಟೇ ಅನುಶಾಸನವು. ಇಷ್ಟೇ ಇಷ್ಟುಮಟ್ಟಿಗೇ ಹೊರತು ಇನ್ನೂ ಹೆಚ್ಚಾಗಿ (ತಿಳಿಯತಕ್ಕದ್ದು) ಇದೆ ಎಂದು ಶಂಕಿಸಬಾರದು. ಅನುಶಾಸನವೆಂದರೆ ತಿಳಿಸಿಕೊಡುವದು, ಉಪದೇಶವು. 'ಎಲ್ಲಾ ವೇದಾಂತಗಳೂ' (ತಿಳಿಸಿಕೊಡುವದು ಇಷ್ಟೇ)[2] ಎಂದು ಈ ವಾಕ್ಯಕ್ಕೆ ಸೇರಿಸಿಕೊಳ್ಳಬೇಕು.

(ಭಾಷ್ಯ)

೧೪೦ ನಿರಸ್ತಾಶೇಷವಿಶೇಷವ್ಯಾಪಿಬ್ರಹ್ಮಾತ್ಮಪ್ರತಿಪತ್ತ್ಯಾ ಪ್ರಭಿನ್ನಸಮಸ್ತಾವಿದ್ಯಾಗ್ರನ್ಥೇಃ ಜೀವತ ಏವ ಬ್ರಹ್ಮಭೂತಸ್ಯ ವಿದುಷೋ ನ ಗತಿರ್ವಿದ್ಯತೇ ಇತ್ಯುಕ್ತಮ್ "ಅತ್ರ ಬ್ರಹ್ಮ ಸಮಶ್ನುತೇ" (೨-೩-೧೪) ಇತ್ಯುಕ್ತತ್ವಾತ್, "ನ ತಸ್ಯ ಪ್ರಾಣಾ ಉತ್ಕ್ರಾಮನ್ತಿ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ" (ಬೃ. ೪-೪-೬) ಇತಿ ಶ್ರುತ್ಯನ್ತರಾಚ್ಚ। ಯೇ ಪುನರ್ಮನ್ದಬ್ರಹ್ಮವಿದೋ ವಿದ್ಯಾನ್ತರಶೀಲಿನಶ್ಚ ಬ್ರಹ್ಮಲೋಕಭಾಜೋ ಯೇ ಚ ತದ್ವಿಪರೀತಾಃ ಸಂಸಾರಭಾಜಃ, ತೇಷಾಮೇಷ ಗತಿವಿಶೇಷ ಉಚ್ಯತೇ ಪ್ರಕೃತೋತ್ಕೃಷ್ಟಬ್ರಹ್ಮವಿದ್ಯಾಫಲಸ್ತುತಯೇ। ಕಿಂ ಚಾನ್ಯತ್–ಅಗ್ನಿವಿದ್ಯಾಪೃಷ್ಟಾ ಪ್ರತ್ಯುಕ್ತಾ ಚ। ತಸ್ಯಾಶ್ಚ ಫಲಪ್ರಾಪ್ತಿಪ್ರಕಾರೋ ವಕ್ತವ್ಯಃ ಇತಿ ಮನ್ತ್ರಾರಮ್ಭಃ ॥

(ಭಾಷ್ಯಾರ್ಥ)

ಯಾವ ವಿಶೇಷಗಳೂ ಇಲ್ಲದೆ ವ್ಯಾಪಿಯಾಗಿರುವ **ಬ್ರಹ್ಮಾತ್ಮನ ಜ್ಞಾನದಿಂದ ಅವಿದ್ಯೆಯೇ ಮುಂತಾದ ಎಲ್ಲಾ ಗ್ರಂಥಿಗಳನ್ನೂ ಬಿಚ್ಚಿಕೊಂಡು ಬದುಕಿರು**

---

1 ಅವಿದ್ಯೆಯೇ, ಆತ್ಮನಾತ್ಮಾಧ್ಯಾಸವೇ, ಕಾಮಗಳಿಗೆ ಬೇರು. ಮು. ಭಾ. ೨-೨-೮. ಈ ಅವಿದ್ಯೆಯು ಮರೆಯಾದರೆ ಸಾಲದು, ಜ್ಞಾನದಿಂದ ಬಾಧಿತವಾಗಬೇಕು.

2 ಅವಿದ್ಯಾಕಾಮಗಳು ಹೋದರೆ ಜೀವನು ತನ್ನ ನಿತ್ಯವಾದ ಬ್ರಹ್ಮಸ್ವಭಾವವನ್ನು ಕಂಡುಕೊಳ್ಳುವನು ಎಂಬುದೇ ಎಲ್ಲಾ ಉಪನಿಷತ್ತುಗಳ ಉಪದೇಶವು. ಪ್ರ. ೬-೭. ಬ್ರಹ್ಮಜ್ಞಾನವಾದಮೇಲೆ ಮಾಡತಕ್ಕದ್ದಾಗಲಿ ತಿಳಿಯತಕ್ಕದ್ದಾಗಲಿ ಇರುವದಿಲ್ಲ. ಗೀ. ೧೫-೨೦

ವಾಗಲೇ ಬ್ರಹ್ಮವಾಗಿರುವ ಜ್ಞಾನಿಗೆ (ಶರೀರವನ್ನು ಬಿಟ್ಟು) ಹೋಗುವ ದೆಂಬುದು ಇಲ್ಲ–ಎಂದು ಮೇಲೆ ಹೇಳಿರುತ್ತದೆ ಏಕೆಂದರೆ "ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ" (೨-೩-೧೪) ಎಂದು (ಈ ಮೊದಲೇ) ಹೇಳಿರುತ್ತದೆ. "ಅವನ ಪ್ರಾಣಗಳು (ಶರೀರವನ್ನು ಬಿಟ್ಟು) ಹೋಗುವದಿಲ್ಲ, ಬ್ರಹ್ಮವೇ ಆಗಿದ್ದು ಬ್ರಹ್ಮದಲ್ಲಿ ಲಯವಾಗುವನು" (ಬೃ. ೪-೪-೬) ಎಂಬು ಬೇರೊಂದು ಶ್ರುತಿಯ ಪ್ರಮಾಣವಿರುವದರಿಂದಲೂ (ಇದೇ ನಿರ್ಣಯವಾಗಿರುತ್ತದೆ).

ಆದರೆ ಯಾರು ಕಡಿಮೆಯ ಬ್ರಹ್ಮವನ್ನು [1] ತಿಳಿದವರಾಗಿರುವರೋ ಬೇರೆ ಬಗೆಯ ವಿದ್ಯೆಯನ್ನು [2] ಅನುಷ್ಠಾನಮಾಡುತ್ತಿದ್ದು ಬ್ರಹ್ಮಲೋಕವನ್ನು ಪಡೆಯುವವರಾಗಿರುತ್ತಾರೋ ಮತ್ತು ಯಾರು ಅವರಿಗೆ ವಿರುದ್ಧವಾಗಿ ಸಂಸಾರವನ್ನು ಹೊಂದುವವರಾಗಿರುವರೋ [3] ಅವರಿಗೆ (ಆಗುವ) ಗತಿ ಎಂಥದ್ದೆಂಬುದನ್ನು (ಇಲ್ಲಿ) ಪ್ರಕೃತವಾಗಿರುವ ಪರಬ್ರಹ್ಮವಿದ್ಯೆಯ ಫಲವನ್ನು ಹೊಗಳುವದಕ್ಕಾಗಿ (ಮುಂದಿನ ಮಂತ್ರದಲ್ಲಿ) ಹೇಳಲಾಗುತ್ತದೆ. ಇದೂ ಅಲ್ಲದೆ ಹಿಂದೆ ಅಗ್ನಿವಿದ್ಯೆಯನ್ನು ಕೇಳಿದ್ದಾಗಿದೆ, ಅದಕ್ಕೆ ಉತ್ತರವನ್ನು ಹೇಳಿದ್ದೂ ಆಗಿದೆಯಷ್ಟೆ. ಅದರ ಫಲವನ್ನು ಹೊಂದುವ ಪ್ರಕಾರವನ್ನೂ [4] ಹೇಳಬೇಕಾಗಿದೆ ಆದ್ದರಿಂದಲೂ (ಈ ಮುಂದಿನ) ಮಂತ್ರವು ಆರಂಭವಾಗಿರುತ್ತದೆ

ಶತಂ ಚೈಕಾ ಚ ಹೃದಯಸ್ಯ ನಾಡ್ಯ
ಸ್ತಾಸಾಂ ಮೂರ್ಧಾನಮಭಿನಿಸ್ಸೃತೈಕಾ ।
ತಯೋರ್ಧ್ವಮಾಯನ್ನಮೃತತ್ವಮೇತಿ
ವಿಷ್ವಙ್ಙನ್ಯಾ ಉತ್ಕ್ರಮಣೇ ಭವನ್ತಿ ॥ ೧೬ ॥

೧೬. ಹೃದಯಕ್ಕೆ ನೂರು ಮತ್ತೊಂದು ನಾಡಿಗಳಿವೆ. ಅವುಗಳಲ್ಲಿ ಒಂದು ನೆತ್ತಿಯ (ಆ) ಕಡೆಗೆ ಹೊರಟಿರುವದು. ಅದರಿಂದ ಮೇಲಕ್ಕೆ ಹೋಗುವವನು ಅಮೃತತ್ವವನ್ನು ಹೊಂದುತ್ತಾನೆ. ಎಲ್ಲಾ ಕಡೆಗೂ ಹೋಗಿರುವ ಉಳಿದವು ಉತ್ಕ್ರಮಣಕ್ಕೆ ಆಗುವವು.

---

1 ಉಪಾಸನೆಮಾಡಬೇಕಾಗಿರುವ ಬ್ರಹ್ಮವು ಅಪರಬ್ರಹ್ಮ, ಕಡಿಮೆಯ ಬ್ರಹ್ಮ. ಪ್ರ ಭಾ. ೫, ಸೂ. ಭಾ ೪-೩-೧೪

2 ಪಂಚಾಗ್ನಿವಿದ್ಯೆಯೇ ಮುಂತಾದವುಗಳನ್ನು ಅಭ್ಯಾಸಮಾಡಿದವರಿಗೂ ಬ್ರಹ್ಮಲೋಕ ಪ್ರಾಪ್ತಿಯುಂಟೆಂದು ಶಾಸ್ತ್ರದಲ್ಲಿ ಹೇಳಿದೆ, ಛಾ. ೫-೧೦-೩ ಸೂ. ಭಾ. ೪-೩-೧೫.

3. ಬರಿಯ ಪುಣ್ಯಕರ್ಮವನ್ನು ಮಾಡಿದವರು ಕರ್ಮಫಲವನ್ನೂ ಅನುಭವಿಸಿ ಸಂಸಾರಕ್ಕೆ ಹಿಂತಿರಳುವರು; ಪಾಪಕರ್ಮವನ್ನು ಮಾಡಿದವರು ಅಧೋಗತಿಗೆ ಹೋಗುವರು.

4 ಅಗ್ನಿವಿದ್ಯೆಗೆ ವಿರಾಟ್ಪುರುಷನ ಲೋಕವೇ ಫಲವು; ಆದರೆ ಆ ಫಲವನ್ನು ಉಪಾಸಕನು ಹೊಂದುವ ಪ್ರಕಾರವು ಯಾವದು ?–ಎಂಬುದನ್ನು ಇಲ್ಲಿ ಹೇಳಲಾಗುತ್ತದೆ.

(ಭಾಷ್ಯ)

೧೪೧. ತತ್ರ ಶತಂ ಚ ಶತಸಙ್ಖ್ಯಾಕಾಃ ಏಕಾ ಚ ಸುಷುಮ್ನಾ ನಾಮ ಪುರುಷಸ್ಯ ಹೃದಯಾದ್ವಿನಿಸ್ಸೃತಾಃ ನಾಡ್ಯಃ ಸಿರಾಃ । ತಾಸಾಂ ಮಧ್ಯೇ ಮೂರ್ಧಾನಂ ಭಿತ್ತ್ವಾ ಅಭಿನಿಸ್ಸೃತಾ ನಿರ್ಗತಾ ಏಕಾ ಸುಷುಮ್ನಾ ನಾಮ । ತಯಾ ಅನ್ತಕಾಲೇ ಹೃದಯೇ ಆತ್ಮಾನಂ ವಶೀಕೃತ್ಯ ಯೋಜಯೇತ್ । ತಯಾ ನಾಡ್ಯಾ ಊರ್ಧ್ವಮ್ ಉಪರಿ ಆರ್ಯ ಗಚ್ಛನ್ ಆದಿತ್ಯದ್ವಾರೇಣ ಅಮೃತತ್ವಮ್ ಅಮರಣಧರ್ಮತ್ವಮ್ ಆಪೇಕ್ಷಿಕಮ್ । “ ಆಭೂತಸಮ್ಪ್ಲವಂ ಸ್ಥಾನಮಮೃತತ್ವಂ ಹಿ ಭಾಷ್ಯತೇ ” (ವಿ. ಪು. ೨-೮-೭೭) ಇತಿ ಸ್ಮೃತೇಃ । ಬ್ರಹ್ಮಣಾ ವಾ ಸಹ ಕಾಲಾನ್ತರೇಣ ಮುಖ್ಯಮ್ ಅಮೃತತ್ವಮ್ ಏತಿ ಭುಕ್ತ್ವಾ ಭೋಗಾನನುಪರ್ಮಾ ಬ್ರಹ್ಮಲೋಕಗತಾ । ವಿಷ್ವಙ್ ನಾನಾವಿಧಗತಯಃ ಅನ್ಯಾ ನಾಡ್ಯಃ ಉತ್ಕ್ರಮಣೇ ಉತ್ಕ್ರಮಣನಿಮಿತ್ತಂ ಭವನ್ತಿ ಸಂಸಾರಪ್ರತಿಪತ್ತ್ಯರ್ಥಾ ಏವ ಭವನ್ತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಅಲ್ಲಿ ನೂರು, ಎಣಿಸಿದರೆ ನೂರಾಗುವಷ್ಟು[1] ಮತ್ತು ಮೇಲೆ ಒಂದು ಎಂದರೆ **‘ಸುಷುಮ್ನೆ’** ಎಂಬ ಹೆಸರಿನದು. ಮನುಷ್ಯನ ಹೃದಯದಿಂದ ಹೊರಟೆರುವ ನಾಡಿಗಳು ಎಂದರೆ ನರಗಳು. ಅವುಗಳಲ್ಲಿ ನೆತ್ತಿಯನ್ನು ಒಡೆದುಕೊಂಡು ಹೊರಟೆರುವದು ಆಚೆಗೆ ಬಂದಿರುವದು ಒಂದು, **‘ಸುಷುಮ್ನೆ’**[2] ಎಂಬುದು. ಅದರ ಮೂಲಕ ಅವಸಾನಕಾಲದಲ್ಲಿ ಹೃದಯದಲ್ಲಿ ಮನಸ್ಸನ್ನು ಅಳವಡಿಸಿಕೊಂಡು ಇಟ್ಟುಕೊಳ್ಳಬೇಕು. ಆ ನಾಡಿಯ ಮೂಲಕ ಮೇಲಕ್ಕೆ ಮೇಲುಗಡೆಗೆ ಹೋಗುವವನು ತೆರಳುವವನು **ಆದಿತ್ಯನ ಮೂಲಕವಾಗಿ**[3] ಅಮೃತತ್ವವನ್ನು ಹೊಂದುತ್ತಾನೆ, **ಆಪೇಕ್ಷಿಕವಾದ ಅಮರಣಧರ್ಮತ್ವವನ್ನು** (ಹೊಂದುತ್ತಾನೆ ಎಂದರ್ಥ). ಏಕೆಂದರೆ “ ಆಭೂತ ಸಂಪ್ಲವಂ ಸ್ಥಾನಮಮೃತತ್ವಂ ಹಿ ಭಾಷ್ಯತೇ” (ಭೂತಗಳೆಲ್ಲ ಪ್ರಲಯವಾಗುವವರೆಗೆ ಇರುವ ಸ್ಥಾನವನ್ನು ಅಮೃತತ್ವವೆಂದೇ ಕರೆಯುತ್ತಾರೆ) ಎಂಬ (ವಿ ಪು. ೨-೮-೭೭) ಎಂದು **ಸ್ಮೃತಿ**[4] ಇದೆ. ಅಥವಾ ಎಣೆಯಿಲ್ಲದ ಭೋಗಗಳನ್ನು ಬ್ರಹ್ಮಲೋಕದಲ್ಲಿ

---

1 ಅನೇಕ ಸಂಖ್ಯೆಯ. ಛಾ ಭಾ ೮-೬-೬.

2 ಯೋಗದಲ್ಲಿ ಈ ನಾಡಿಯು ಪ್ರಸಿದ್ಧ. ಪ್ರ. ಭಾ. ೩-೭, ತೈ. ಭಾ. ೧-೬, ಛಾ. ಭಾ ೮-೬-೧, ಗೀ. ಭಾ ೮-೧೦.

3. ಛಾ. ೮-೬ ಖಂಡ, ತೈ. ೧-೬, ಈ. ೧೬, ಬೃ. ೫-೧೫-೧.

4. ಇತರ ಗತಿಗಳಿಗೆ ಹೋಲಿಸಿದರೆ ಬಹುಕಾಲವಿರುವದರಿಂದ ಇದನ್ನು ಅಮೃತತ್ವವೆಂದು ಕರೆಯುವರು ಎಂದು ವಚನದ ಅಭಿಪ್ರಾಯ. ಈ ವಚನವು ಪುರಾಣದ್ದೆಂದು ಭಾ. ಭಾ. ೫-೧೦-೨ರಲ್ಲಿ ಸ್ಪಷ್ಟವಾಗಿ ಹೇಳಿದೆ. “ ಹಿ ಭಾಷ್ಯತೇ ” ಎಂಬುದರ ಬದಲು ‘ ವಿಭಾವ್ಯತೇ ’ ಎಂದು ಪಾಠಾಂತರವೂ ಕಾಣಬರುತ್ತದೆ.

ಅನುಭವಿಸಿದ ಬಳಿಕ ಬ್ರಹ್ಮನೊಡನೆ[1] ಮತ್ತೊಂದು ಕಾಲದಲ್ಲಿ[2] ಮುಖ್ಯವಾದ ಅಮೃತತ್ವವನ್ನೇ[3] ಪಡೆಯುತ್ತಾನೆ (ಎಂದೂ ಅರ್ಥವನ್ನು ಮಾಡಬಹುದು). ಎಲ್ಲಾ ಕಡೆಯಲ್ಲಿಯೂ ಸಿಕ್ಕಸಿಕ್ಕ ಹಾಗೆ ಹೋಗಿರುವ ಉಳಿದ ನಾಡಿಗಳು ಉತ್ಕ್ರಮಣಕ್ಕೆ, ಕಾರಣವಾಗಿ, ಆಗುವವು; ಸಂಸಾರವನ್ನು ಪಡೆಯುವದಕ್ಕೇ ಕಾರಣವಾಗುವವು ಎಂದರ್ಥ.

ಉಪಸಂಹಾರ

(ಭಾಷ್ಯ)

೧೮೨. ಇದಾನೀಂ ಸರ್ವವಲ್ಲ್ಯರ್ಥೋಪಸಂಹಾರಾರ್ಥಮಾಹ—

(ಭಾಷ್ಯಾರ್ಥ)

ಈಗ (ಈ) ಎಲ್ಲಾ ವಲ್ಲಿಗಳ ಅರ್ಥವನ್ನೂ ಉಪಸಂಹಾರಮಾಡಬೇಕೆಂದು ಹೇಳುತ್ತಾನೆ:—

ಅಙ್ಗುಷ್ಠಮಾತ್ರಃ ಪುರುಷೋಽನ್ತರಾತ್ಮಾ
ಸದಾ ಜನಾನಾಂ ಹೃದಯೇ ಸಂನಿವಿಷ್ಟಃ ।
ತಂ ಸ್ವಾಚ್ಛರೀರಾತ್ ಪ್ರವೃಹೇ-
ನ್ಮುಞ್ಜಾದಿವೇಷೀಕಾಂ ಧೈರ್ಯೇಣ ।
ತಂ ವಿದ್ಯಾಚ್ಛುಕ್ರಮಮೃತಂ
ತಂ ವಿದ್ಯಾಚ್ಛುಕ್ರಮಮೃತಮಿತಿ ॥ ೧೭ ॥

೧೭. ಅಂತರಾತ್ಮನಾದ ಪುರುಷನು ಅಂಗುಷ್ಠಮಾತ್ರನಾಗಿ ಜನಗಳ ಹೃದಯದಲ್ಲಿ ಯಾವಾಗಲೂ ಇದ್ದುಕೊಂಡಿರುತ್ತಾನೆ. ನೊಸೆಯ ಹುಲ್ಲಿನಿಂದ ದಂಟನ್ನು (ತೆಗೆಯುವಂತೆ) ಧೈರ್ಯದಿಂದ ಆತನನ್ನು ತನ್ನ ಶರೀರದಿಂದ ಹಿರಿದುಕೊಳ್ಳಬೇಕು. ಅವನನ್ನು ಶುಕ್ರನೆಂದೂ ಅಮೃತನೆಂದೂ ತಿಳಿದುಕೊಳ್ಳಬೇಕು. ಅವನನ್ನು ಶುಕ್ರನೆಂದೂ ಅಮೃತನೆಂದೂ ತಿಳಿದುಕೊಳ್ಳಬೇಕು. ಹೀಗೆ (ಉಪನಿಷತ್ತು ಮುಗಿಯಿತು).

---

1. ಬ್ರಹ್ಮಲೋಕದ ಭೋಗಗಳ ವರ್ಣನೆಯನ್ನು ಛಾ. ೮-೫-೩, ೪ರಲ್ಲಿ ನೋಡಿರಿ. ಈ ಗತಿಯು ಅನಿತ್ಯವಾದರೂ ಜ್ಞಾನದಿಂದ ಕ್ರಮಮುಕ್ತಿಯೂ ಆಗುವದೆಂಬ ಬಗ್ಗೆ ಸೂ.ಛಾ. ೪-೩-೧೦, ೧೧ ನೋಡಿರಿ.

2. ಬ್ರಹ್ಮಲೋಕವು ಪ್ರಲಯವಾದ ಬಳಿಕ.

3. ಆತ್ಮಸ್ವರೂಪವೇ ಆಗಿರುವ ನಿರಪೇಕ್ಷವಾದ ಅಮೃತತ್ವವನ್ನೇ, ಮುಕ್ತಿಯನ್ನೇ.

(ಭಾಷ್ಯ)

೧೮೩. ಅಙ್ಗುಷ್ಠಮಾತ್ರಃ ಪುರುಷಃ ಅನ್ತರಾತ್ಮಾ ಸದಾ ಜನಾನಾಂ ಸಮ್ಬನ್ಧಿನಿ ಹೃದಯೇ ಸಂನಿವಿಷ್ಟಃ ಯಥಾವ್ಯಾಖ್ಯಾತಃ । ತಂ ಸ್ವಾತ್ ಆತ್ಮೀಯಾತ್ ಶರೀರಾತ್ ಪ್ರವೃಹೇತ್ ಉದ್ಯಚ್ಛೇತ್ ನಿಷ್ಕರ್ಷೇತ್ ಪೃಥಕ್ಕುರ್ಯಾತ್ ಇತ್ಯರ್ಥಃ । ಕಿಮಿವೇತಿ ? ಉಚ್ಯತೇ । ಮುಞ್ಜಾದಿವ ಇಷೀಕಾಮ್ ಅನ್ತಃಸ್ಥಾಂ ಧೈರ್ಯೇಣ ಅಪ್ರಮಾದೇನ । ತಂ ಶರೀರಾನ್ನಿಷ್ಕೃಷ್ಟಂ ಚಿನ್ಮಾತ್ರಂ ವಿದ್ಯಾತ್ ವಿಜಾನೀಯಾತ್ ಶುಕ್ರಂ ಶುದ್ಧಮ್ ಅಮೃತಂ ಯಥೋಕ್ತಂ ಬ್ರಹ್ಮ ಇತಿ । ದ್ವಿರ್ವಚನಮ್ ಉಪನಿಷತ್ಪರಿಸಮಾಪ್ತ್ಯರ್ಥಮ್, ಇತಿಶಬ್ದಶ್ಚ ॥

(ಭಾಷ್ಯಾರ್ಥ)

ಅಂತರಾತ್ಮನಾದ ಪುರುಷನು ಜನಗಳಿಗೆ ಸೇರಿರುವ ಹೃದಯದಲ್ಲಿ[1] ಅಂಗುಷ್ಠಮಾತ್ರನಾಗಿ ಯಾವಾಗಲೂ ಇದ್ದುಕೊಂಡಿರುತ್ತಾನೆ. ಇದನ್ನು ಹಿಂದೆ ವ್ಯಾಖ್ಯಾನ ಮಾಡಿರುವಂತೆ (ತಿಳಿದುಕೊಳ್ಳಬೇಕು). ಆತನನ್ನು ತನ್ನ ಶರೀರದಿಂದ[2] ಹಿರಿದುಕೊಳ್ಳಬೇಕು, ಎತ್ತಿಕೊಳ್ಳಬೇಕು, ಎಳೆದುಕೊಳ್ಳಬೇಕು, ಬೇರ್ಪಡಿಸಿಕೊಳ್ಳಬೇಕು ಎಂದರ್ಥ. ಏತರ ಹಾಗೆ? ಎಂದರೆ ಹೇಳುತ್ತಾನೆ: ನೊಸೆಯ ಹುಲ್ಲಿನಿಂದ[3] ಒಳಗಿರುವ ದಂಟನ್ನು (ಹಿರಿದುಕೊಳ್ಳುವಂತೆ) ಧೈರ್ಯದಿಂದ ಎಂದರೆ ಎಚ್ಚರಿಕೆಯಿಂದ (ಬಿಡಿಸಿಕೊಳ್ಳಬೇಕು). ಹಾಗೆ ಶರೀರದಿಂದ ಎಳೆದುಕೊಂಡ ಚಿನ್ಮಾತ್ರ ಸ್ವರೂಪವನ್ನು ಶುಕ್ರನೆಂದೂ ಎಂದರೆ ಶುಭ್ರನೆಂದೂ ಅಮೃತವೆಂದೂ ಹಿಂದೆ ಹೇಳಿರುವ ಬ್ರಹ್ಮವೇ ಎಂದೂ ತಿಳಿಯಬೇಕು, ಅರಿತುಕೊಳ್ಳಬೇಕು. (ಅವನನ್ನು ಶುಕ್ರನೆಂದೂ ಅಮೃತನೆಂದೂ ತಿಳಿಯಬೇಕು ಎಂಬ ವಾಕ್ಯವನ್ನು) ಎರಡು ಸಲ ಹೇಳಿರುವದೂ ಕೊನೆಯಲ್ಲಿ ಹೀಗೆ('ಇತಿ') ಎಂಬ ಶಬ್ದವನ್ನು (ಉಪಯೋಗಿಸಿರುವದೂ) ಉಪನಿಷತ್ತು ಮುಗಿಯಿತೆಂದು (ಸೂಚಿಸುವದಕ್ಕೆ).

(ಭಾಷ್ಯ)

೧೮೪. ವಿದ್ಯಾಸ್ತುತ್ಯರ್ಥೋಽಯಮಾಖ್ಯಾಯಿಕಾರ್ಥೋಽಪಸಂಹಾರಃ ಅಧುನಾ ಉಚ್ಯತೇ—

---

1. ೨-೧-೧೨ ರಲ್ಲಿ.
2. ಸ್ಥೂಲಶರೀರ, ಮತ್ತು ಸೂಕ್ಷ್ಮಶರೀರ_ಎರಡರಿಂದಲೂ.
2. ಇದನ್ನು ನೊದೆಯ ಹುಲ್ಲು ಎಂದೂ ಕರೆಯುತ್ತಾರೆ.

(ಭಾಷ್ಯಾರ್ಥ)

ವಿದ್ಯೆಯನ್ನು ಹೊಗಳುವದಕ್ಕಾಗಿ[1] ಕಥೆಯಲ್ಲಿ ಹೇಳಿದ ವಿಷಯವನ್ನು ಈಗ ಉಪಸಂಹಾರಮಾಡಿ ಹೇಳಲಾಗುತ್ತದೆ —

ಮೃತ್ಯುಪ್ರೋಕ್ತಾಂ ನಚಿಕೇತೋಽಥ ಲಬ್ಧ್ವಾ
ವಿದ್ಯಾಮೇತಾಂ ಯೋಗವಿಧಿಂ ಚ ಕೃತ್ಸ್ನಮ್ ।
ಬ್ರಹ್ಮಪ್ರಾಪ್ತೋ ವಿರಜೋಽಭೂದ್ವಿಮೃತ್ಯು-
ರನ್ಯೋಽಪ್ಯೇವಂ ಯೋ ವಿದಧ್ಯಾತ್ಮಮೇವ ॥ ೧೪ ॥

೧೪. ಮೃತ್ಯುವು ಹೇಳಿದ ಈ ವಿದ್ಯೆಯನ್ನೂ ಯೋಗದ ವಿಧಾನವೆಲ್ಲವನ್ನೂ ನಚಿಕೇತನು ಪಡೆದುಕೊಂಡು ಬ್ರಹ್ಮವನ್ನು ಹೊಂದಿದನು, ವಿರಜನಾದನು, ವಿಮೃತ್ಯುವಾದನು. ಇನ್ನೊಬ್ಬನೂ ಯಾವನು ಅಧ್ಯಾತ್ಮವನ್ನೇ ಹೀಗೆ ತಿಳಿದುಕೊಳ್ಳುವನೋ (ಅವನೂ ಆಗುವನು).

(ಭಾಷ್ಯ)

೧೪ಚ. ಮೃತ್ಯುಪ್ರೋಕ್ತಾಮ್ ಯಥೋಕ್ತಾಮ್ ಏತಾಂ ಬ್ರಹ್ಮವಿದ್ಯಾಂ ಯೋಗವಿಧಿಂ ಚ ಕೃತ್ಸ್ನಂ ಸಮಸ್ತಂ ಸೋಪಕರಣಂ ಸಫಲಮ್ ಇತ್ಯೇತತ್ । ನಾಚಿಕೇತಃ ಅಥ ವರಪ್ರದಾನಾತ್ ಮೃತ್ಯೋಃ ಲಬ್ಧ್ವಾ ಪ್ರಾಪ್ಯ ಇತ್ಯರ್ಥಃ । ಕಿಮ್ ? ಬ್ರಹ್ಮ ಪ್ರಾಪ್ತೋಽಭೂತ್ ಮುಕ್ತೋಽಭವತ್ ಇತ್ಯರ್ಥಃ । ಕಥಮ್ ? ವಿದ್ಯಾಪ್ರಾಪ್ತ್ಯಾ ವಿರಜಃ ವಿಗತರಜಾಃ ವಿಗತಧರ್ಮಾಧರ್ಮಃ । ವಿಮೃತ್ಯುಃ ವಿಗತಕಾಮಾ ವಿದ್ಯಶ್ಚ ಸ್ಯ ಪೂರ್ವಮ್ ಇತ್ಯರ್ಥಃ । ನ ಕೇವಲಂ ನಾಚಿಕೇತ ಏವ । ಅನ್ಯೋಽಪಿ ಯ ಏವಂ ನಾಚಿಕೇತವತ್ ಆತ್ಮವಿತ್ ಅಧ್ಯಾತ್ಮಮೇವ ನಿರುಪಚರಿತಂ ಪ್ರತ್ಯಕ್ಸ್ವರೂಪಂ ಪ್ರಾಪ್ಯತತ್ತ್ವಮೇವ ಇತ್ಯಭಿಪ್ರಾಯಃ । ನಾನ್ಯದ್ರೂಪಮಪ್ರತ್ಯಗ್ರೂಪಮ್ । ತದೇವಮ್ ಅಧ್ಯಾತ್ಮಮ್ ಏವಮ್ ಉಕ್ತೇನ ಪ್ರಕಾರೇಣ ವೇದ ವಿಜಾನಾತಿ ಇತಿ ಏವಂವಿತ್ । ಸೋಽಪಿ ವಿರಜಾಃ ಸ್ಯ ಬ್ರಹ್ಮ ಪ್ರಾಪ್ಯ ವಿಮೃತ್ಯುರ್ಭವತಿ ಇತಿ ವಾಕ್ಯಶೇಷಃ ॥

(ಭಾಷ್ಯಾರ್ಥ)

ಮೃತ್ಯುವು ಹೇಳಿರುವ ಹಿಂದೆ ವರ್ಣಿಸಿರುವ ಈ ಬ್ರಹ್ಮವಿದ್ಯೆಯನ್ನೂ ಮತ್ತು ಯೋಗವಿಧಾನವೆಲ್ಲವನ್ನೂ ಸಮಸ್ತವನ್ನೂ ಎಂದರೆ ಉಪಕರಣಗಳೊಡನೆ, ಫಲದೊ

1. ತತ್ತ್ವದರ್ಶಿಯಾದ ಗುರುವು ಉಪದೇಶಿಸಿದರೆ ಶಿಷ್ಯನು ಯೋಗ್ಯನಾಗಿಯೂ ಇದ್ದರೆ ಫಲವು ಆಗಿಯೇ ಆಗುತ್ತದೆ, ವೈದ್ಯಾದಿಗಳಂತೆ ವಿದ್ಯೆಯ ಫಲವು ಸಂದಿಗ್ಧವಲ್ಲ ಎಂದು ತಿಳಿಸುವದಕ್ಕಾಗಿ ವಿದ್ಯೆಯನ್ನು ಹೊಗಳಿದೆ.

ಡನೆ[1] ಎಂದರ್ಥ. ನಚಿಕೇತನು[2] ಇನ್ನು ಎಂದರೆ ಮೃತ್ಯುವಿನ ವರಪ್ರದಾನದಿಂದ ಪಡೆದುಕೊಂಡು ದೊರಕಿಸಿಕೊಂಡು ಎಂದರ್ಥ. (ಪಡೆದುಕೊಂಡು) ಏನಾದನು? ಎಂದರೆ, ಬ್ರಹ್ಮವನ್ನು ಪಡೆದವನಾದನು, ಮುಕ್ತನಾದನು ಎಂದರ್ಥ. ಹೇಗೆ (ಮುಕ್ತನಾದನು)?—ಎಂದರೆ ವಿದ್ಯೆಯನ್ನು ಪಡೆದುಕೊಂಡದ್ದರಿಂದ ವಿರಜನೂ ಎಂದರೆ ಧೂಳಿಲ್ಲದವನೂ ಧರ್ಮಾಧರ್ಮಗಳ (ಸೋಂಕು) ಇಲ್ಲದವನೂ ಮೃತ್ಯುವಿಲ್ಲದವನೂ ಎಂದರೆ ಕಾಮ, ಅವಿದ್ಯೆ—ಇವುಗಳಿಲ್ಲದವನೂ ಮೊದಲು[3] ಆಗಿ (ಮುಕ್ತನಾದನು ಎಂದರ್ಥ.

ನಚಿಕೇತನೊಬ್ಬನೇ ಅಲ್ಲ, ಇನ್ನೂ ಯಾವನು ಹೀಗೆ ಎಂದರೆ ನಚಿಕೇತನಂತೆ ಆತ್ಮನನ್ನರಿಯುವನೋ ಅಧ್ಯಾತ್ಮವನ್ನೇ ಎಂದರೆ ಗೌಣವಲ್ಲದ ಒಳಗಿನ (ಆತ್ಮ ಸ್ವರೂಪವನ್ನೇ ಪಡೆದುಕೊಳ್ಳಬೇಕಾಗಿರುವ (ಆತ್ಮ) ತತ್ತ್ವವನ್ನೇ[4] ಒಳಗಿನದಲ್ಲದ ಮತ್ತೊಂದು ರೂಪವನ್ನಲ್ಲ ಎಂದಭಿಪ್ರಾಯ ಇಂತೀಪರಿಯಲ್ಲಿ ಅಧ್ಯಾತ್ಮವನ್ನೆ ಹೀಗೆ ಎಂದರೆ ಹಿಂದೆ ಹೇಳಿರುವ ಪ್ರಕಾರದಿಂದ ತಿಳಿಯುವವನು 'ಏವಂವಿತ್'[5] ಎನಿಸುವನು. ಅವನೂ ವಿರಜನಾಗಿ ಬ್ರಹ್ಮವನ್ನು ಪಡೆದುಕೊಂಡು ವಿಮೃತ್ಯುವಾಗುವನು ಎಂದು ವಾಕ್ಯಕ್ಕೆ ಸೇರಿಸಿಕೊಳ್ಳಬೇಕು.

(ಭಾಷ್ಯ)

೧೪೬. ಅಥ ಶಿಷ್ಯಾಚಾರ್ಯಯೋಃ ಪ್ರಮಾದಕೃತಾನ್ಯಾಯೇನ ವಿದ್ಯಾ ಗ್ರಹಣಪ್ರತಿಪಾದನನಿಮಿತ್ತದೋಷಪ್ರಶಮನಾರ್ಥಾ ಇಯಂ ಶಾನ್ತಿರುಚ್ಯತೇ—

(ಭಾಷ್ಯಾರ್ಥ)

ಈಗ ಶಿಷ್ಯನೂ ಆಚಾರ್ಯನೂ ಪ್ರಮಾದದಿಂದ ಅನ್ಯಾಯವಾಗಿ[6] ವಿದ್ಯೆ

---

1. ಕರ್ಮ, ಯೋಗ—ಎಂಬಿವು ಉಪಕರಣಗಳು, ಶೋಕನಿವೃತ್ತಿಯು ಫಲ.

2. ಮೂಲದಲ್ಲಿ 'ನಾಚಿಕೇತಃ' ಎಂಬ ಮಾತಿರುತ್ತದೆ, ನಚಿಕೇತನೆಂದೇ ಅದಕ್ಕೆ ಅರ್ಥ.

3. ಮೊದಲು ಅವಿದ್ಯಾಕಾಮಗಳು ಹೋಗಿ ಆಮೇಲೆ ಕರ್ಮಮಯವಾದ ಸಂಸಾರದಿಂದ ಮುಕ್ತನಾದನು ಎಂದರ್ಥ

4. ಯಾವ ಆತ್ಮನನ್ನು ಪಡೆಯಬೇಕಾಗಿದೆಯೋ ಆ ಆತ್ಮನೇ ತಾನೆಂದು ತಿಳಿಯಬೇಕೆಂದು ಭಾವ. ೧-೩-೩೬ ರ ಭಾಷ್ಯವನ್ನು ನೋಡಿರಿ.

5. ಏವಮ್ ವಿತ್ ಎಂಬ ಮಾತುಗಳು ಬೇರೆಬೇರೆಯಿವೆ. ಇವೆರಡಕ್ಕೂ ಸಂಬಂಧವನ್ನು ಮಾಡಿಕೊಂಡು ಅರ್ಥಮಾಡಬೇಕು ಎಂದು ಅಭಿಪ್ರಾಯ.

6. ಶಾಸ್ತ್ರದಲ್ಲಿ ವಿಧಿಸಿರುವ ಕ್ರಮವನ್ನು ಮೀರಿ ಪಾಠಪ್ರವಚನಗಳನ್ನು ಮಾಡಿರಬಹುದಾದ್ದರಿಂದ ಆವ ದೋಷವನ್ನು ಎಂದರ್ಥ. ಈ ವಿದ್ಯೆಯನ್ನು ಗುರುಶಿಷ್ಯಭಾವದಿಂದಲೆ ಹೇಳಬೇಕು, ಕಲಿಯಬೇಕು—ಎಂದಭಿಪ್ರಾಯ.

ಯನ್ನು ಸ್ವೀಕರಿಸುವದು, ಹೇಳಿಕೊಡುವದು, ಎಂಬೀ ಕಾರಣದಿಂದ ಆಗಬಹುದಾದ ದೋಷವನ್ನು ಶಾಂತಿಗೊಳಿಸುವದಕ್ಕಾಗಿ ಈ ಶಾಂತಿಯನ್ನು [1] ಹೇಳಲಾಗುತ್ತದೆ :—

ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ ಕರವಾವಹೈ । ತೇಜಸ್ವಿ ನಾವಧೀತಮಸ್ತು ಮಾ ವಿದ್ವಿಷಾವಹೈ । ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥ ೧೯ ॥

೧೯. ನಮ್ಮಿಬ್ಬರನ್ನೂ ಜೊತೆಯಲ್ಲಿ ಕಾಪಾಡಲಿ! ನಮ್ಮಿಬ್ಬರನ್ನೂ ಜೊತೆಯಲ್ಲಿ ಪೋಷಿಸಲಿ! (ನಾವಿಬ್ಬರೂ) ಜೊತೆಯಲ್ಲಿ ವೀರ್ಯವನ್ನುಂಟು ಮಾಡುವಂತಾಗಲಿ! ನಾವು ಅಧ್ಯಯನಮಾಡಿದ್ದು ತೇಜಸ್ವಿಯಾಗಲಿ! (ಒಬ್ಬರನ್ನೊಬ್ಬರು) ದ್ವೇಷಮಾಡದೆ ಇರುವಂತಾಗಲಿ! ಓಂ ಶಾಂತಿ, ಶಾಂತಿ, ಶಾಂತಿ!

(ಭಾಷ್ಯ)

೧೯೭. ಸಹ ನೌ ಆವಾಮ್ ಅವತು ಪಾಲಯತು ವಿದ್ಯಾಸ್ವರೂಪಪ್ರಕಾಶನೇನ। ಕಃ? ಸ ಏವ ಪರಮೇಶ್ವರಃ ಉಪನಿಷತ್ಪ್ರಕಾಶಿತಃ। ಕಿಂ ಚ ಸಹ ನೌ ಭುನಕ್ತು ತತ್ಫಲಪ್ರಕಾಶನೇನ ನೌ ಪಾಲಯತು। ಸಹೈವ ಆವಾಂ ವಿದ್ಯಾಕೃತಂ ವೀರ್ಯಂ ಸಾಮರ್ಥ್ಯಂ ಕರವಾವಹೈ ನಿಷ್ಪಾದಯಾವಹೈ। ಕಿಂ ಚ ತೇಜಸ್ವಿನೌ ತೇಜಸ್ವಿನೋಃ ಆವಯೋಃ ಯದಧೀತಂ ತತ್ ಸ್ವಧೀತಮಸ್ತು। ಅಥವಾ ತೇಜಸ್ವಿ ನೌ ಆವಾಭ್ಯಾಂ ಯತ್ ಅಧೀತಂ ತತ್ ಅತೀವ ತೇಜಸ್ವಿ ವೀರ್ಯವತ್ ಅಸ್ತು ಇತ್ಯರ್ಥಃ। ಮಾ ವಿದ್ವಿಷಾವಹೈ ಶಿಷ್ಯಾಚಾರ್ಯೌ ಅನ್ಯೋನ್ಯಂ ಪ್ರಮಾದಕೃತಾ ನ್ಯಾಯಾಧ್ಯಯನಾಧ್ಯಾಪನದೋಷನಿಮಿತ್ತಂ ದ್ವೇಷಂ ಮಾ ಕರವಾವಹೈ ಇತ್ಯರ್ಥಃ। ಶಾನ್ತಿಃ ಶಾನ್ತಿಃ ಶಾನ್ತಿಃ ಇತಿ ತ್ರಿರ್ವಚನಂ ಸರ್ವದೋಷೋಪಶಮನಾರ್ಥಮ್ ॥

(ಭಾಷ್ಯಾರ್ಥ)

ನಮ್ಮಿಬ್ಬರನ್ನೂ ಜೊತೆಯಲ್ಲಿಯೇ ವಿದ್ಯಾಸ್ವರೂಪವನ್ನು ತೋರಿಸಿಕೊಟ್ಟು ಕಾಪಾಡಲಿ ಪಾಲಿಸಲಿ! [2] ಯಾರು? ಎಂದರೆ ಉಪನಿಷತ್ತಿನಲ್ಲಿ ತಿಳಿಸಿರುವ ಆ ಪರ

---

1. ಕೆಲವು ಪುಸ್ತಕಗಳಲ್ಲಿ ಈ ಶಾಂತಿಯು "ಇತಿ ದ್ವಿತೀಯಾಧ್ಯಾಯಃ" ಎಂಬ ಮಾತುಗಳಾವಮೇಲೆ ಇರುತ್ತದೆ. ಕೆಲವು ಪುಸ್ತಕಗಳಲ್ಲಿ "ಸಹನಾವತಿ ಶಾನ್ತಿಃ" ಎಂದಿಷ್ಟೇ ಇದೆ. ಈ ಶಾಂತಿಯೂ ಭಾಷ್ಯವೂ ಮೂಲದಲ್ಲಿ ಹೇಗಿದ್ದವೆಂಬುದನ್ನು ನಿಶ್ಚಯಿಸುವದಕ್ಕೆ ಇನ್ನೂ ಕೆಲವು ಹಸ್ತಪ್ರತಿಗಳನ್ನು ಹೋಲಿಸುವದು ಅವಶ್ಯವಾಗಿದೆ. ತೈ. ಭಾ. ೩-೧ ನೋಡಿರಿ.

2. ಈಶ್ವರನ ಅನುಗ್ರಹದಿಂದಲೇ ವಿದ್ಯೆಯೂ ಅದರ ಫಲವೂ ದೊರಕುವವು; ಆದ್ದರಿಂದ ಈಶ್ವರಭಕ್ತಿಯು ಅವಶ್ಯವಾದ ಸಾಧನವು ಎಂದು ಭಾವ.

ಮೇಶ್ವರನೇ. ಮತ್ತು ಆ (ವಿದ್ಯೆಯ) ಫಲವನ್ನು ತೋರಿಸಿಕೊಟ್ಟು ನಮ್ಮಿಬ್ಬರನ್ನೂ ಜೊತೆಯಲ್ಲಿಯೇ ಪೋಷಿಸಲಿ ಪಾಲಿಸಲಿ! ವಿದ್ಯೆಯಿಂದಾದ ವೀರ್ಯವನ್ನು ಎಂದರೆ ಸಾಮರ್ಥ್ಯವನ್ನು ನಾವಿಬ್ಬರೂ ಜೊತೆಯಲ್ಲಿಯೇ ಉಂಟುಮಾಡುವವರಾಗೋಣ, ಏರ್ಪಡಿಸುವವರಾಗೋಣ! ಮತ್ತು [ತೇಜಸ್ವಿನೌ = ತೇಜಸ್ವಿನೋಃ] ತೇಜಸ್ವಿಗಳಾದ ನಮ್ಮಿಬ್ಬರ ಅಧ್ಯಯನವಿದೆಯಲ್ಲ, ಅದು ಸರಿಯಾದ ಅಧ್ಯಯನವಾಗಲಿ! ಅಥವಾ[1] [ನೌ = ಆವಾಭ್ಯಾಮ್] ನಮ್ಮಿಬ್ಬರಿಂದ ಅಧ್ಯಯನವಾದದ್ದು ಯಾವದಿದೆಯೋ ಅದು ಬಹಳವಾಗಿ ತೇಜಸ್ವಿಯಾಗಲಿ ಎಂದರೆ ವೀರ್ಯವುಳ್ಳದ್ದಾಗಲಿ! ಎಂದರ್ಥ (ಎಂದಾದರೂ ವ್ಯಾಖ್ಯಾನಮಾಡಬಹುದು). ಶಿಷ್ಯಾಚಾರ್ಯರಾದ (ನಾ)ವಿಬ್ಬರೂ ಒಬ್ಬರನ್ನೊಬ್ಬರು ದ್ವೇಷಮಾಡದೆ ಇರುವಂತಾಗಲಿ! ಎಂದರೆ ಪ್ರಮಾದದಿಂದ ಅನ್ಯಾಯವಾಗಿ ಅಧ್ಯಯನಮಾಡಿದ ಅಧ್ಯಯನಮಾಡಿಸಿದ ದೋಷದ ಕಾರಣದಿಂದ (ಒಬ್ಬರನ್ನೊಬ್ಬರು) ದ್ವೇಷವನ್ನು ಮಾಡದೆ ಇರುವಂತಾಗಲಿ! ಎಂದರ್ಥ. "ಶಾಂತಿಃ ಶಾಂತಿಃ ಶಾಂತಿಃ" ಎಂದು ಮೂರುಸಲ ಹೇಳಿರುವದು ಎಲ್ಲಾ ದೋಷಗಳೂ[2] ಪರಿಹಾರವಾಗುವದಕ್ಕೆ.[3]

ಓಂ ತತ್ ಸತ್

---

1. ತೇಜಸ್ವಿ ನೌ ಅಧೀತಮ್ ಅಸ್ತು_ಎಂದು ಈ ವ್ಯಾಖ್ಯಾನದಲ್ಲಿ ಪದಚ್ಛೇದ.

2. ಅಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ_ಎಂಬ ಮೂರು ದೋಷಗಳೂ.

3. "ಇತ್ಯೋಮಿತಿ" ಎಂಬ ಆ॥ ಪಾಠದಲ್ಲಿ ಓಂ ಎಂಬುದು ಮಂಗಲವನ್ನೂ ಇತಿ ಎಂಬುದು ಭಾಷ್ಯದ ಪರಿಸಮಾಪ್ತಿಯನ್ನೂ ಸೂಚಿಸುತ್ತದೆ.

ಉಪನಿಷತ್ತಿನ ಸಾರ

ಒಂದನೆಯ ಅಧ್ಯಾಯ—ಒಂದನೆಯ ವಲ್ಲಿ

೧–೯. ವಾಜಶ್ರವಸನೆಂಬಾತನು ಸರ್ವಸ್ವವನ್ನೂ ದಕ್ಷಿಣೆಯಾಗಿ ಕೊಡಬೇಕಾದ ವಿಶ್ವಜಿತ್ತು ಎಂಬ ಯಾಗವನ್ನು ಮಾಡಿ ಯೋಗ್ಯವಲ್ಲದ ಬರಡು ಹಸುಗಳನ್ನು ದಕ್ಷಿಣೆಗೆಂದು ಒಯ್ಯುತ್ತಿರಲು ಅವನ ಮಗನಾದ ನಚಿಕೇತನೆಂಬ ಹುಡುಗನು "ಅಯ್ಯೋ! ಇಂಥ ದಾನವನ್ನು ಕೊಟ್ಟರೆ ನಮ್ಮ ತಂದೆಗೆ ದುರ್ಗತಿಯುಂಟಾಗುವದಲ್ಲ!" ಎಂದು ಯೋಚಿಸಿ "ಅಪ್ಪ, ನನ್ನನ್ನು ಯಾರಿಗೆ ದಕ್ಷಿಣೆಯಾಗಿ ಕೊಡುತ್ತೀಯೆ?" ಎಂದು ತಂದೆಯನ್ನು ಕೇಳಿದನು. "ನನ್ನನ್ನು ಯಾರಿಗೆ ಕೊಡುತ್ತೀಯ?" ಎಂದು ಮತ್ತೆ ಮತ್ತೆ ಮಗನು ತನ್ನನ್ನು ನಿರ್ಬಂಧಿಸುವದನ್ನು ಕಂಡು ಸಿಟ್ಟುಗೊಂಡ ತಂದೆಯು "ನಿನ್ನನ್ನು ಯಮನಿಗೆ ಕೊಟ್ಟಿದ್ದೇನೆ" ಎಂದನು. ತಂದೆಯು ಯಜ್ಞಭೂಮಿಯಲ್ಲಿ ಆಡಿದ ಮಾತು ಸುಳ್ಳಾಗಬಾರದೆಂದು ತಿಳಿದ ನಚಿಕೇತನು "ಆಯ್ಯೋ! ಏನೋ ಹೇಳಿಬಿಟ್ಟಿನಲ್ಲ!" ಎಂದು ಪೇಚಾಡುತ್ತಿದ್ದ ಅವನನ್ನು ಕುರಿತು "ನಿನ್ನ ವಚನದಂತೆ ನಡೆದುಕೊ; ಇದರಿಂದ ನಿನಗೆ ಒಳ್ಳೆಯವಾಗಬಹುದು. ಮಗನ ಮೋಹದಿಂದ ಆಡಿದ ಮಾತನ್ನು ಸುಳ್ಳುಮಾಡದಿರು" ಎಂದು ಒಪ್ಪಿಸಿ ತಂದೆಯ ಅನುಜ್ಞೆಯನ್ನು ಹೊಂದಿ ಯಮಲೋಕಕ್ಕೆ ಹೋದನು. ಯಮನು ಈ ವೇಳೆಗೆ ಮನೆಯಲ್ಲಿಲ್ಲದೆ ಬೇರೆ ಎಲ್ಲಿಗೋ ಹೋಗಿದ್ದನು; ನಚಿಕೇತನು ಬಂದು ಮೂರುದಿನಗಳಾದ ಮೇಲೆ ತಿರುಗಿಬಂದನು. ತನ್ನ ಮನೆಯ ಮುಂದೆ ಮೂರು ದಿನ ಉಪವಾಸವಿದ್ದ ವಟುವಿಗೆ ಅತಿಥಿಸತ್ಕಾರವಿಲ್ಲದೆ ತಾನು ಅನಾದರಮಾಡಿದ ದೋಷದ ಪರಿಹಾರಕ್ಕೆಂದು ಯಮನು "ಮೂರು ವರಗಳನ್ನು ಬೇಡಿಕೊ, ಕೊಡುತ್ತೇನೆ" ಎಂದು ಹೇಳಿದನು.

೧೦–೧೯. ಆಗ ನಚಿಕೇತನು "ನಾನು ಹಿಂತಿರುಗಿ ಹೋದರೆ ನನ್ನ ತಂದೆಯು ನನ್ನ ವಿಷಯದಲ್ಲಿ ಪ್ರಸನ್ನನಾಗಿರಬೇಕು. ಇದು ಮೊದಲನೆಯ ವರವು. ವಿರಾಟ್ಪುರುಷನನ್ನು ಪಡೆಯುವದಕ್ಕೆ ಸಾಧನವಾದ ಅಗ್ನಿವಿದ್ಯೆಯನ್ನು ನನಗೆ ತಿಳಿಸು. ಇದು ಎರಡನೆಯ ವರವು" ಎಂದು ಕೇಳಿಕೊಂಡನು. ಯಮನು ಈ ಎರಡು ವರಗಳನ್ನೂ ಕೊಟ್ಟು "ಕರ್ಮೋಪಾಸನೆಗಳ ಫಲವಾದ ವಿರಾಟ್ಪ್ರಾಪ್ತಿಯನ್ನು ಕೊಡುವ ಈ ಅಗ್ನಿವಿದ್ಯೆಯಲ್ಲಿ ಉಪಯೋಗಿಸುವ ಅಗ್ನಿಗೆ ನಚಿಕೇತನೆಂಬ ನಿನ್ನ ಹೆಸರೇ ಬರಲಿ!" ಎಂದು ಹೆಚ್ಚಿಗೆಯ ವರವನ್ನು ತಾನಾಗಿಯೇ ಕೊಟ್ಟನು. ಯಾವನು ಈ ನಾಚಿಕೇತಾಗ್ನಿಯನ್ನು ಉಪಾಸನೆಮಾಡುವನೋ ಅವನು ಬದುಕಿರುವಾಗಲೇ ಅಧರ್ಮ, ಅಜ್ಞಾನ—ಮುಂತಾದವುಗಳಿಂದ ಬಿಡುಗಡೆಯನ್ನು ಹೊಂದಿ ಸತ್ತಮೇಲೆ ವಿರಾಡಾತ್ಮನಾಗಿ ದುಃಖವರ್ಜಿತನಾಗುವನು. ಈ ಉಪಾಸನಾಕ್ರಮವನ್ನು ಹೇಳಿಕೊಟ್ಟದ್ದೇ ಯಮನು ಕೊಟ್ಟ ಎರಡನೆಯ ವರವು.

೨೦-೨೯ ಆಮೇಲೆ "ದೇಹಾಂತರವನ್ನು ಹೊಂದುವ, ಶರೀರೇಂದ್ರಿಯಾದಿಗಳಿಗಿಂತ ತೀರ ಬೇರೆಯಾಗಿರುವ ಆತ್ಮನೊಬ್ಬನು ಇದಾನೆಂದು ಕೆಲವರೂ ಇಲ್ಲವೆಂದು ಕೆಲವರೂ ಹೇಳುತ್ತಿರುವರು ಪ್ರತ್ಯಕ್ಷಾನುಮಾನಗಳಿಗೆ ನಿಲುಕದ ಈ ಆತ್ಮತತ್ತ್ವವನ್ನು ನನಗೆ ಹೇಳಿಕೊಡು" ಎಂದು ನಚಿಕೇತನು ಮೂರನೆಯ ವರವನ್ನು ಬೇಡಿಕೊಂಡನು. ನಚಿಕೇತನು ಜ್ಞಾನಕ್ಕೆ ತಕ್ಕವನೋ ಅಲ್ಲವೋ ಎಂದು ಪರೀಕ್ಷಿಸುವದಕ್ಕಾಗಿ ಯಮನು "ನಚಿಕೇತನೆ, ಇದನ್ನು ತಿಳಿಯುವದು ದೇವತೆಗಳಿಗೂ ಕಷ್ಟವಾಗಿರುವದು. ಇದಲ್ಲದೆ ಈ ಜ್ಞಾನದಿಂದ ನಿನಗೇನಾಗಬೇಕು? ಆಯುಸ್ಸು, ಪ್ರಜಾಸಂತತಿ, ಪಶುವಿತ್ತಕ್ಷೇತ್ರಾದಿಗಳು, ಸಾಮ್ರಾಜ್ಯ--ಇಂಥ ವರಗಳನ್ನು ಬೇಡಿಕೊ. ನಿನಗೆ ಬೇಕಾದ ಅನುಕೂಲ್ಯಗಳನ್ನೆಲ್ಲ ಕಲ್ಪಿಸಿಕೊಡುತ್ತೇನೆ" ಎಂದನು. ಆದರೆ ನಚಿಕೇತನು ಇಂದ್ರಿಯಗಳನ್ನು ಸವೆಯಿಸುವ ಆ ಭೋಗಗಳು ಯಾವವನ್ನೂ ಒಲ್ಲದೆ ತನಗೆ ಆತ್ಮತತ್ತ್ವವನ್ನೇ ತಿಳಿಸಿಕೊಡಬೇಕೆಂದು ಪಟ್ಟುಹಿಡಿದು ಕೇಳಿಕೊಂಡನು.

ಒಂದನೆಯ ಅಧ್ಯಾಯ—ಎರಡನೆಯ ವಲ್ಲಿ

೧-೬ ನಚಿಕೇತನ ಉತ್ತಮವಾದ ಯೋಗ್ಯತೆಯನ್ನು ಕಂಡ ಯಮನು ಇವನಿಗೆ ಆತ್ಮವಿದ್ಯೆಯನ್ನು ಉಪದೇಶಿಸಿದನು. ಅವನು ಮೊದಲು ನಚಿಕೇತನ ವೈರಾಗ್ಯವನ್ನು ಮೆಚ್ಚಿ ಹೊಗಳಿದ್ದು ಹೇಗೆಂದರೆ—"ನಚಿಕೇತನೆ, ಪ್ರಿಯವಾದದ್ದು, ಹಿತವಾದದ್ದು-ಎಂದು ಎರಡು ಬಗೆಯ ಸಾಧನಗಳು ಮನುಷ್ಯನಿಗೆ ದೊರೆಯಬಹುದಾಗಿವೆ. ಅವುಗಳಲ್ಲಿ ಹಿತವನ್ನು ಆರಿಸಿಕೊಂಡರೆ ಉತ್ತಮ ಫಲವಾಗುವದು, ಪ್ರಿಯವಾದದ್ದನ್ನು ಆರಿಸಿಕೊಂಡವರಿಗೆ ಪರಮಪುರುಷಾರ್ಥವು ದೂರವಾಗುತ್ತದೆ ಆದ್ದರಿಂದ ವಿವೇಕಿಯಾದವನು ಹಿತವನ್ನೇ ಆರಿಸಿಕೊಳ್ಳಬೇಕು ನೀನು ಮಿಕ್ಕ ಯಾವ ಭೋಗಗಳನ್ನೂ ಒಲ್ಲದೆ ಆತ್ಮತತ್ತ್ವವನ್ನೇ ಕೇಳಿಕೊಂಡದ್ದು ನೀನು ವಿವೇಕಿಯೆಂಬುದನ್ನು ತೋರಿಸುತ್ತದೆ.

೭-೧೩. "ಈ ಆತ್ಮತತ್ತ್ವವು ಎಷ್ಟೋ ಜನರಿಗೆ ಕಿವಿಗೇ ಬೀಳುವದಿಲ್ಲ; ಕೆಲವರಿಗೆ ಕಿವಿಗೆ ಬಿದ್ದರೂ ಅದು ತಿಳಿಯುವದೇ ಇಲ್ಲ ಇದನ್ನು ತಿಳಿಸಿಕೊಡುವ ಗುರುವೂ ತಿಳಿಯುವ ಶಿಷ್ಯನೂ ಅದ್ಭುತಪ್ರಜ್ಞರಾಗಿರಬೇಕು. ಸಂಪ್ರದಾಯವನ್ನು ಬಲ್ಲ ಆಚಾರ್ಯನು ಹೇಳಿದ ಮಾತಿನಿಂದ ಆತ್ಮತತ್ತ್ವವು ತಿಳಿದೀತೇ ಹೊರತು ಬರಿಯ ತರ್ಕಕ್ಕೆ ಎಂದಿಗೂ ಗೋಚರವಾಗದು ಈ ಸೂಕ್ಷ್ಮತತ್ತ್ವವನ್ನು ತಿಳಿಯುವದಕ್ಕೆಂದು ನೀನು ಬ್ರಹ್ಮಪದವಿಯನ್ನು ಕೂಡ ಕಡೆಗಣಿಸಿದೆಯಲ್ಲ! ಇದು ನಿನ್ನ ಉತ್ತಮ ಯೋಗ್ಯತೆಯನ್ನು ತೋರಿಸುತ್ತದೆ ಪ್ರಾಣಿಗಳ ಹೃದಯದಲ್ಲಿಯೇ ಇದ್ದರೂ ಈ ತತ್ತ್ವವು ಅಧ್ಯಾತ್ಮಯೋಗವನ್ನು ಬಲ್ಲವರಿಗೆ ಮಾತ್ರ ಗೊತ್ತಾಗುವದು. ಶ್ರವಣಮನನಗಳಿಂದ ಇದನ್ನು ವಿವೇಚನೆಮಾಡಿ ತಿಳಿದುಕೊಂಡವರಿಗೆ ಪರಮಾನಂದವೇ ಪ್ರಾಪ್ತಿಯಾಗುತ್ತದೆ ಇವನ್ನು ನೀನು ಬಯಸಿದ್ದು ನಿನಗೆ ಬ್ರಹ್ಮಪ್ರಾಪ್ತಿಯಾಗುವದೆಂಬುದಕ್ಕೆ ಸೂಚನೆಯಾಗಿದೆ"

೧೪-೧೭ ಹೀಗೆಂದು ತನ್ನಲ್ಲಿ ಪ್ರಸನ್ನನಾಗಿ ನುಡಿದ ಯಮನನ್ನು ನಚಿಕೇತನು "ಹಾಗಾದರೆ ನಾನು ಕೇಳಿರುವಂತೆ ಧರ್ಮಾಧರ್ಮಗಳನ್ನೂ ಕ್ರಿಯಾಕಾರಕಫಲಗಳನ್ನೂ ಕಾಲತ್ರಯವನ್ನೂ ಮೀರಿರುವ ಈ ಆತ್ಮತತ್ತ್ವವನ್ನು ಹೇಳು"/ ಎಂದು ಮತ್ತೆ ಬೇಡಿಕೊಂಡನು. ಆಗ

ಯಮನು ಹೇಳುತ್ತಾನೆ. "ನಚಿಕೇತನೆ, ವೇದಪ್ರತಿಪಾದ್ಯವಾಗಿ ಬ್ರಹ್ಮಚರ್ಯಾದಿಸಾಧನ ಗಳಿಂದ ಪಡೆಯಬೇಕಾಗಿರುವ ಈ ಆತ್ಮನಿಗೆ ಓಂಕಾರವು ವಾಚಕವೂ ಪ್ರತೀಕವೂ ಆಗಿರುವದು. ಓಂಕಾರವು ಪರಾಪರಬ್ರಹ್ಮಗಳೆರಡಕ್ಕೂ ಪ್ರತೀಕವಾಗಿರುವದರಿಂದ ಇದನ್ನು ಬ್ರಹ್ಮ ವೆಂದು ಉಪಾಸನೆಮಾಡಿದರೆ ಆ ಎರಡನ್ನೂ ಪಡೆಯಬಹುದು

೧೪-೨೨. "ಈ ಓಂಕಾರದ ಮೂಲಕವಾಗಿ ತಿಳಿಯುವ ಬ್ರಹ್ಮದ ಸಾಕ್ಷಾತ್ಸ್ವರೂಪವನ್ನು ಹೇಳುವೆನು ಕೇಳು. ಇದಕ್ಕೆ ಹುಟ್ಟುವದು, ಬೆಳೆಯುವದು ಮುಂತಾದ ವಿಕಾರಗಳಿಲ್ಲ. ಶರೀರದಲ್ಲಿಯೇ ಇರುತ್ತಿದ್ದರೂ ಶರೀರದ ವಿಕಾರಗಳು ಯಾವವೂ ಇದಕ್ಕಿಲ್ಲವಾಗಿ ಇದು ಧರ್ಮಾಧರ್ಮಾದಿಗಳನ್ನು ಮೀರಿರುವದು ಎಲ್ಲಾ ನಾಮರೂಪಗಳೂ ಇದಕ್ಕೆ ಉಪಾಧಿ ಯಾಗಿರುತ್ತವೆ, ಇದು ಅಣುವಿಗಿಂತ ಅಣು, ಮಹತ್ತಿಗಿಂತ ಮಹತ್ತು ವಿಜ್ಞಾನಸ್ವರೂಪದಲಿ ರುವ ಇದಕ್ಕೆ ಯಾವ ವಿಕಾರವೂ ನಿಜವಾಗಿರುವದಿಲ್ಲ. ವಿಶೇಷಜ್ಞಾನದ ಅಂತಃಕರಣದಲ್ಲಿದ್ದು ಕೊಂಡು ನಾನಾಚಲನೆಗಳನ್ನು ಪಡೆಯುವಂತೆ ತೋರಿಕೊಳ್ಳುತ್ತಿರುವದು. ನಿಶ್ಚಯವಾಗಿ ಇದಕ್ಕೆ ಶರೀರವೇ ಇಲ್ಲದ್ದರಿಂದ ಸರ್ವವ್ಯಾಪಿಯೂ ಕೂಟಸ್ಥಜ್ಞಾನರೂಪವೂ ಆಗಿರುತ್ತದೆ. ಇದೇ ನಾನೆಂದು ಅರಿತುಕೊಂಡವನಿಗೆ ಶೋಕವು ಇಲ್ಲವಾಗುತ್ತದೆ

೨೩-೨೫ "ನಿಷ್ಕಾಮನಾಗಿ ಆತ್ಮನನ್ನೇ ಬಯಸುವದೇ ಆತ್ಮಜ್ಞಾನಕ್ಕೆ ಮುಖ್ಯ ಸಾಧ ನವು ಕೆಟ್ಟ ನಡತೆಯನ್ನು ಬಿಟ್ಟು ಮನಸ್ಸಮಾಧಾನವನ್ನು ಹೊಂದಿ ಗುರುವಿನ ಮೂಲಕ ತಿಳಿದುಕೊಳ್ಳುವವನಿಗೆ ಬ್ರಹ್ಮದ ಯಾಥಾತ್ಮ್ಯವು ತಿಳಿಯುವದು ಯಾವ ಧರ್ಮಕ್ಕೂ ನಿಲುಕದೆ ನಿತ್ಯವಾಗಿರುವ ಈ ಬ್ರಹ್ಮತತ್ತ್ವವು ಇಂಥ ಅಧಿಕಾರಿಗೊಬ್ಬನಿಗೇ ತಿಳಿಯುವದು.

ಒಂದನೆಯ ಅಧ್ಯಾಯ—ಮೂರನೆಯ ವಲ್ಲಿ

೧-೨. "ಈ ಶರೀರದಲ್ಲಿ ಇಬ್ಬರು ಆತ್ಮರಿರುವರು. ಇವರಲ್ಲಿ ಒಬ್ಬನು ನಾವುಗಳು ಕಲ್ಪಿಸಿಕೊಂಡಿರುವ ಸಂಸಾರಿಯು, ಇನ್ನೊಬ್ಬನು ಪರಮಾರ್ಥವಾಗಿರುವ ಅಸಂಸಾರಿಯು. ಜ್ಞಾನಿಗಳೂ ಪಂಚಾಗ್ನಿವಿದ್ಯೆ, ನಾಚಿಕೇತಾಗ್ನಿವಿದ್ಯೆ–ಇವುಗಳನ್ನು ಬಲ್ಲವರೂ ಅಸಂಸಾರಿಯಾದ ಬ್ರಹ್ಮವನ್ನು ಹೊಂದುವರು.

೩-೯. "ಶರೀರನೆಂಬುದೊಂದು ರಥವು, ಆತ್ಮನೇ ರಥಿ, ಬುದ್ಧಿಯು ಸಾರಥಿ; ಮನಸ್ಸು ಕಡಿವಾಣವು, ಇಂದ್ರಿಯಗಳು ಕುದುರೆಗಳು, ಶಬ್ದಾದಿವಿಷಯಗಳು ಆ ಕುದುರೆಗಳು ನಡೆಯುವ ರಸ್ತೆಗಳು. ಶರೀರೇಂದ್ರಿಯಮನಸ್ಸುಗಳಿಂದೊಡಗೂಡಿರುವ ಜೀವನು ಈ ರಥ ದಲ್ಲಿ ಪ್ರಯಾಣಮಾಡುತ್ತಾ ಸಂಸಾರವನ್ನೂ ಮೋಕ್ಷವನ್ನೂ ಪಡೆಯತ್ತಿರುವನು. ಬುದ್ಧಿಯೆಂಬ ಸಾರಥಿಯು ಅವಿವೇಕಿಯಾಗಿದ್ದರೆ ಕುದುರೆಗಳನ್ನು ಮನಬಂದ ದಾರಿಯಲ್ಲಿ ಕೈಬಿಡುತ್ತಾನೆ; ರಥಿಕನಾದ ಜೀವನು ಆಗ ಸಂಸಾರದಲ್ಲಿ ತೊಳಲಬೇಕಾಗುವದು. ಆದರೆ ಆ ಸಾರಥಿಯು ವಿವೇಕಿಯಾಗಿದ್ದರೆ ಕುದುರೆಗಳನ್ನು ಹತೋಟಯಲ್ಲಿಟ್ಟುಕೊಂಡು ಮತ್ತೆ ಸಂಸಾರಕ್ಕೆ ಹಿಂತಿ ರುಗುವ ಸಂಭವವಿಲ್ಲದ ವಿಷ್ಣುಪದವಿಯನ್ನೇ ಮುಟ್ಟಿಸುತ್ತಾನೆ.

೧೦-೧೧. "ಈ ಪರಮಾತ್ಮಸ್ಥಾನವನ್ನು ವಿವೇಕದಿಂದ ಸೇರುವ ಬಗೆ ಹೇಗೆಂದರೆ ಇಂದ್ರಿಯ, ವಿಷಯ, ಮನಸ್ಸು, ಬುದ್ಧಿ, ಮಹತ್ತು, ಅವ್ಯಾಕೃತ–ಇವು ಒಂದಕ್ಕಿಂತ ಒಂದು

ಸೂಕ್ಷ್ಮವಾಗಿರುವವು. ಇವುಗಳೆಲ್ಲವೂ ಆತ್ಮನಲ್ಲಿ ಕಲ್ಪಿತವಾಗಿರುವದರಿಂದ ಇವೆಲ್ಲವನ್ನೂ ತುಂಬಿಕೊಂಡಿರುವ ಆತ್ಮನೇ ಕೊನೆಯ ತತ್ತ್ವ. ಈ ಆತ್ಮತತ್ತ್ವವನ್ನು ಮೇಲೆ ಹೇಳಿದಂತೆ ಸ್ಥೂಲಸೂಕ್ಷ್ಮತಾರತಮ್ಯದಿಂದ ಅರಿತುಕೊಂಡರೆ ಇನ್ನೇನೂ ಅರಿಯಬೇಕಾದದ್ದಿರುವದಿಲ್ಲ ವಾದಕಾರಣ ಅದೇ ಕೊನೆಯ ಗತಿಯಾಗಿರುತ್ತದೆ

೧೨-೧೫. " ಈ ಆತ್ಮನು ಎಲ್ಲರಲ್ಲಿಯೂ ಇರುತ್ತಿದ್ದರೂ ಸ್ಥೂಲಬುದ್ಧಿಗಳಿಗೆ ಗೊತ್ತಾಗುವದಿಲ್ಲ. ಸೂಕ್ಷ್ಮವಾಗಿ ನೋಡುವವರಿಗೆ ಮಾತ್ರ ಕಾಣುತ್ತಾನೆ. ಇಂದ್ರಿಯಗಳನ್ನು ಮನಸ್ಸಿನಲ್ಲಿ ಲಯಗೊಳಿಸಿ, ಆ ಮನಸ್ಸನ್ನು ಬುದ್ಧಿಯಲ್ಲಿ ಲಯಿಸಿಕೊಂಡು, ಆ ಬುದ್ಧಿಯನ್ನು ಹಿರಣ್ಯಗರ್ಭನ ಬುದ್ಧಿಯಲ್ಲಿಟ್ಟು ಅತ್ಯಂತವಾಗಿ ನಿರ್ಮಲಗೊಳಿಸಿಕೊಂಡು ಕೊನೆಗೆ ಬುದ್ಧಿಯಲ್ಲಿ ಆಗುವ ಎಲ್ಲಾ ಅರಿವುಗಳಿಗೂ ಸಾಕ್ಷಿಯಾದ ಕೂಟಸ್ಥನಾದ ಆತ್ಮನಲ್ಲಿ ಆ ಬುದ್ಧಿಯನ್ನೂ ಲಯಮಾಡಿಕೊಳ್ಳಬೇಕು. ಇದನ್ನು ಅರಿಯುವ ದಾರಿಯು ಕ್ಷುರಕತ್ತಿಯ ಅಲುಗಿನ ಮೇಲೆ ನಡೆಯುವಷ್ಟು ಎಚ್ಚರಿಕೆಯಿಂದ ಹೋಗತಕ್ಕದ್ದಾದ್ದರಿಂದ ವಿವೇಕದಿಂದಲೂ ಸದ್ಗುರುವಿನ ಉಪದೇಶದಿಂದಲೂ ಇದನ್ನು ಅರಿತುಕೊಳ್ಳಬೇಕು. ಈ ಆತ್ಮನು ಬಲು ಸೂಕ್ಷ್ಮವಾಗಿರುವನು ಈ ಆತ್ಮತತ್ತ್ವಕ್ಕೆ ಶಬ್ದವಿಲ್ಲ, ಸ್ಪರ್ಶವಿಲ್ಲ, ರೂಪವಿಲ್ಲ, ರಸವಿಲ್ಲ, ಗಂಧವಿಲ್ಲ, ಆದಿಯಿಲ್ಲ, ಅಂತ್ಯವಿಲ್ಲ; ಇದು ಎಲ್ಲಕ್ಕೂ ವ್ಯಾಪಕವಾಗಿ ಅಲುಗಾಡದೆ, ಸವೆಯದೆ, ಒಂದೇ ರೂಪದಲ್ಲಿರುವದು "

೧೬-೧೭. ನಚಿಕೇತನಿಗೆ ಯಮನು ಹೇಳಿರುವ ಈ ಉಪಾಖ್ಯಾನವನ್ನು ಯೋಗ್ಯರಿಂದ ಕೇಳಿ ಯೋಗ್ಯರಿಗೆ ಉಪದೇಶಮಾಡಿದವನಿಗೆ ಉತ್ತಮಗತಿಯಾಗುತ್ತದೆ ಬ್ರಹ್ಮಸಭೆಯಲ್ಲಾಗಲಿ, ಶ್ರಾದ್ಧಕಾಲದಲ್ಲಿ ಭೋಜನಮಾಡುತ್ತಿರುವ ಬ್ರಾಹ್ಮಣರೆದುರಿಗೇ ಆಗಲಿ ಇದನ್ನು ಶ್ರವಣಮಾಡಿಸಿದರೆ ಅನಂತಫಲವುಂಟು.

ಎರಡನೆಯ ಅಧ್ಯಾಯ—ಒಂದನೆಯ ವಲ್ಲಿ

೧-೩. " ಇಂದ್ರಿಯಗಳಿಗೆ. ಸ್ವಭಾವದಿಂದ ಹೊರನೋಟವೇ ಇರುತ್ತದೆ. ಆದ್ದರಿಂದ ಇಂದ್ರಿಯಗಳಿಗೆ ವಶನಾದವನು ವಿಷಯಗಳನ್ನು ಕಂಡಾನೇ ಹೊರತು ಒಳಗಿನ ಆತ್ಮನನ್ನು ನೋಡಲಾರನು. ಇಂದ್ರಿಯಗಳಿಂದಾಗುವ ವಿಷಯಸುಖವು ಅನಿತ್ಯವೆಂಬುದನ್ನು ತಿಳಿದುಕೊಂಡವನು ಆ ಇಂದ್ರಿಯಗಳನ್ನು ಬಿಗಿಹಿಡಿದು ಒಳಗಿನ ಆತ್ಮನನ್ನೇ ನೋಡುವನು.

೪-೧೦ " ಇಂದ್ರಿಯಗಳಿಂದ ವಿಷಯಗಳನ್ನು ತಿಳಿಯುವಾಗ ನಮಗೆ ಉಂಟಾಗುವಂತೆ ತೋರುವ ಅರಿವೇ ನಮ್ಮ ಆತ್ಮನು. ಕರ್ಮಫಲವನ್ನು ಅನುಭವಿಸುವಂತಿರುವ ನಮ್ಮ ಆತ್ಮನೂ ಕರ್ಮೋಪಾಸನೆಗಳಿಗೆ ಗುರಿಯಾಗಿರುವ ಸಮಸ್ತಜಗತ್ತಿನ ಸೃಷ್ಟಿಕರ್ತನಾದ ಈಶ್ವರನೂ ಬೇರೆಯಲ್ಲ. ಯಾವ ಸಂಸಾರವೂ ಇಲ್ಲದ ಒಬ್ಬ ಆತ್ಮನೇ ಈ ಎರಡು ಬಗೆಯಲ್ಲಿಯೂ ತೋರಿಕೊಳ್ಳುತ್ತಿರುವನು.

೧೧-೧೫. " ನಮ್ಮ ಆತ್ಮನು ಹೃದಯವೇ ಮುಂತಾದ ಆಳತೆಗೆ ಕಟ್ಟುಬಿದ್ದಿರುವಂತೆ ಅವಿದ್ಯೆಯ ದೃಷ್ಟಿಯಿಂದ ಕಾಣುತ್ತಿದ್ದರೂ ಸರಿಯಾಗಿ ನೋಡಿದರೆ ಇವನೇ ಅನಂತವಾದ ಬ್ರಹ್ಮವಾಗಿರುವನು. ಇವನಲ್ಲಿ ಭೇದವನ್ನು ಕಂಡಾತನಿಗೆ ಸಂಸಾರವೂ ಅಭೇದವನ್ನು ಕಂಡಾತನಿಗೆ ಬ್ರಹ್ಮಸಾಯುಜ್ಯವೂ ದೊರೆಯುವವು.

ಎರಡನೆಯ ಅಧ್ಯಾಯ—ಎರಡನೆಯ ವಲ್ಲಿ

೧-೨. " ಈ ನಮ್ಮ ಶರೀರದಲ್ಲಿರುವ ಆತ್ಮನೇ ಬ್ರಹ್ಮವಾದ್ದರಿಂದ ಇವನ ಸ್ವರೂಪವನ್ನು ಅರಿತರೆ ಸಂಸಾರದ ಕಟ್ಟು ಕಳಚಿಕೊಳ್ಳುವದು. ಮುಂದಕ್ಕೆಂದಿಗೂ ಸಂಸಾರದಲ್ಲಿ ಕಾಲಿಡದೆ ಇರುವನು. ಎಲ್ಲಾ ಶರೀರಗಳಲ್ಲಿ ಈ ಒಬ್ಬ ಆತ್ಮನೇ ಇರುವನೆಂದು ತಿಳಿಯಬೇಕು.

೩-೭. " ಇಂದ್ರಿಯಗಳ ಕಾರ್ಯವೂ ಪ್ರಾಣನೃತ್ತಿಗಳೂ ಈ ಆತ್ಮನಿಗಾಗಿಯೇ ನಡೆಯುತ್ತಿರುವವು. ಈ ಆತ್ಮನೇ ಕಾರ್ಯಕರಣಗಳಿಗೆಲ್ಲ ಬಲವನ್ನು ಕೊಟ್ಟಿರುವವನು ; ಇವನಿಂದಲೇ ಪ್ರೇರಿತವಾಗಿ ಅವು ಒಂದರೊಡನೊಂದು ಸೇರಿಕೊಂಡು ಕೆಲಸಮಾಡುತ್ತಿರುವವು. ಹೀಗೆ ನಾನಾವಿಧದಿಂದ ಸಿದ್ಧವಾಗಿರುವ ಆತ್ಮನನ್ನು ಬ್ರಹ್ಮವೆಂದು ಅರಿಯಬೇಕು, ಇಲ್ಲದಿದ್ದರೆ ಸ್ಥಾವರಜಂಗಮರೂಪವಾದ ನಾನಾಶರೀರಗಳನ್ನು ಪಡೆಯುತ್ತಿರುವದೇ ಗತಿಯಾಗುವದು

೮-೧೧. " ಇಂದ್ರಿಯಾದಿಗಳು ತಮ್ಮ ಕೆಲಸವನ್ನು ಮಾಡದೆ ಇರುವ ಕನಸಿನಲ್ಲಿಯೂ ಈ ಆತ್ಮನು ಬೇರೆ ಬೇರೆ ವಸ್ತುಗಳನ್ನು ಬೇಕಾದಂತೆ ನಿರ್ಮಿಸಿಕೊಂಡು ಇರುವನು. ಇವನೇ ಬ್ರಹ್ಮವು. ಸಮಸ್ತ ಲೋಕಗಳೂ ಇವನನ್ನೇ ಆಶ್ರಯಿಸಿಕೊಂಡಿರುವವು ; ಇವನನ್ನು ಮೀರಿ ಯಾವದೂ ಇರಲಾರದು ಬೆಂಕಿಯು ತಾನು ಸುಡುವ ಕಟ್ಟಿಗೆಯೇ ಮುಂತಾದವುಗಳನ್ನು ಹೊಕ್ಕು ಆಯಾ ಆಕಾರಗಳನ್ನು ಹೊಂದುವಂತೆಯೂ, ವಾಯುವು ಕೊಳಲು ಮುಂತಾದವುಗಳನ್ನು ಹೊಕ್ಕು ಬೇರೆ ಬೇರೆ ಸ್ವಭಾವವನ್ನು ಹೊಂದುವಂತೆಯೂ ಕಂಡರೂ ಅವೆರಡೂ ತಮ್ಮ ತಮ್ಮ ರೂಪದಿಂದ ಶುದ್ಧವಾಗಿ ಬೇರೆ ಇದ್ದುಕೊಂಡೇ ಇರುವಂತೆ ಆತ್ಮನು ಎಲ್ಲಾ ಶರೀರಗಳಲ್ಲಿಯೂ ಬೇರೆಬೇರೆಯಾಗಿ ಭೋಕ್ತೃವಾಗಿ ಕಾಣುತ್ತಿದ್ದರೂ ನಿಜವಾಗಿ ತಾನು ಆ ಶರೀರಗಳಿಗಿಂತ ಬೇರೆಯಾಗಿಯೇ ತನ್ನ ಶುದ್ಧವಾದ ರೂಪದಲ್ಲಿ ಇರುತ್ತಿರುವನು. ಸೂರ್ಯನು ಎಲ್ಲಾ ಪದಾರ್ಥಗಳನ್ನೂ ಬೆಳಗುತ್ತಿದ್ದರೂ ಆಯಾ ವಸ್ತುಗಳನ್ನು ನೋಡಿದ ಪುಣ್ಯಾಪುಣ್ಯಗಳಿಗೆ ಹೊರಬ್ಟಾಗಿರುವಂತೆಯೇ ಈ ಆತ್ಮನು ಎಲ್ಲರ ಅಂತರಾತ್ಮನಾಗಿರುತ್ತಿದ್ದರೂ ಅವಿದ್ಯೆಯಿಂದ ಜೀವರು ಕಲ್ಪಿಸಿಕೊಳ್ಳುತ್ತಿರುವ ಸಂಸಾರದೋಷಗಳಿಗೆ ಹೊರಬ್ಟಾಗಿಯೇ ಇರುವನು.

೧೨-೧೫. " ಹೀಗೆ ಎಲ್ಲಾ ಶರೀರಗಳಲ್ಲಿಯೂ ಒಬ್ಬನೇ ಆತ್ಮನು ಕಾರ್ಯಕಾರಣಸಂಘಾತಗಳಿಗೆಲ್ಲ ಚೇತನನಾಗಿ ಅವುಗಳನ್ನು ಆಯಾ ಕರ್ಮಗಳಲ್ಲಿ ಪ್ರೇರಿಸುತ್ತಾ ಫಲದಾತೃವಾಗಿರುತ್ತಿದ್ದರೂ ತಾನು ಯಾವ ವಿಕಾರವೂ ಇಲ್ಲದೆ ತನ್ನ ನಿತ್ಯಶುದ್ಧಸ್ವರೂಪದಲ್ಲಿಯೇ ಇರುವನೆಂದು ಯಾರು ಗುರುವಿನ ಉಪದೇಶವನ್ನು ಹೊಂದಿ ಅರಿತುಕೊಳ್ಳುವರೋ ಅವರಿಗೆ ಮಾತ್ರ ಶಾಶ್ವತ ಸುಖವಾದ ಮೋಕ್ಷವು ದಕ್ಕುವದು.

೧೪-೧೫. " ಈ ಆತ್ಮವಸ್ತುವು ನಮ್ಮಂಥ ಅಜ್ಞರಿಗೂ ತೋರೀತೆ ?—ಎಂದು ಸಂದೇಹ ಪಡಲು ಕಾರಣವಿಲ್ಲ, ಏಕೆಂದರೆ ಅದು ಸ್ವಪ್ರಕಾಶವಾದ ನಮ್ಮ ಸ್ವರೂಪವೇ ಆಗಿರುತ್ತದೆ.

ಎರಡನೆಯ ಅಧ್ಯಾಯ—ಮೂರನೆಯ ವಲ್ಲಿ

೧-೪. " ಅನಾದಿಯಾಗಿ ಅನಂತವಾಗಿರುವಂತೆ ತೋರುತ್ತಿರುವ ಈ ಸಂಸಾರವೆಂಬ ವೃಕ್ಷಕ್ಕೆ ಬೇರಿನಂತೆ ಆಧಾರವಾಗಿರುವದೇ ಬ್ರಹ್ಮವು. ಅದರ ಕಟ್ಟಲೆಯಿಂದಲೋ ಎಂಬಂತೆ ಸೂರ್ಯ, ಚಂದ್ರ, ಅಗ್ನಿ, ವಾಯು—ಮೊದಲಾದವರು ವ್ಯವಸ್ಥೆಯಿಂದ ಕೆಲಸ ಮಾಡುತ್ತಿರುವರು.

೫. " ಸರಿಯಾಗಿ ವಿಚಾರಮಾಡಿದರೆ ಈ ಲೋಕದಲ್ಲಿಯೇ ನಮ್ಮ ಅಂತಃಕರಣದಲ್ಲಿಯೆ ಆತ್ಮನ ನಿಜವು ಸ್ಫುಟವಾಗಿ ತೋರುವದು; ಲೋಕಾಂತರದಲ್ಲಿ ಇಷ್ಟು ಸ್ಪಷ್ಟವಾಗಿ ತೋರಲಾರದು. ಬ್ರಹ್ಮಲೋಕದಲ್ಲಿ ಚೆನ್ನಾಗಿ ವಿಂಗಡವಾಗಿ ತಿಳಿಯಬರುವದೆಂದು ಶಾಸ್ತ್ರದಲ್ಲಿ ಹೇಳಿದೆ, ನಿಜ; ಆದರೆ ಆ ಲೋಕವನ್ನು ಪಡೆಯುವದಕ್ಕೆ ಉತ್ಕೃಷ್ಟವಾದ ಕರ್ಮೋಪಾಸನೆಗಳು ಬೇಕಾಗುವದರಿಂದ ಅದು ಸಿಕ್ಕುವದು ಬಲು ಕಷ್ಟ. ಆದ್ದರಿಂದ ಈ ಲೋಕದಲ್ಲಿಯೆ ಆತ್ಮತತ್ತ್ವವನ್ನು ತಿಳಿದುಕೊಳ್ಳಬೇಕು.

೬-೧೧. "ಇಂದ್ರಿಯಾದಿಗಳಲ್ಲಿ ಜ್ಞಾನವುಉಂಟಾಗಲಿ ಹೋಗಲಿ, ಆತ್ಮನು ತನ್ನ ಸ್ವರೂಪದಿಂದಲೇ ಇರುವನೆಂತಲೂ ಇಂದ್ರಿಯ, ಮನಸ್ಸು, ಬುದ್ಧಿ, ಅಹಂಕಾರ_ಮುಂತಾದವುಗಳೆನ್ನೆಲ್ಲ ಮೀರಿ ಯಾವ ಸಂಸಾರಧರ್ಮವೂ ಇಲ್ಲದವನಾಗಿರುವನೆಂತಲೂ ಅರಿತುಕೊಂಡಾತನು ಮೋಕ್ಷವನ್ನು ಹೊಂದುವನು. ಈ ಆತ್ಮನನ್ನು ಇಂದ್ರಿಯಗಳಿಂದ ನೋಡುವದಕ್ಕೆ ಆಗುವದಿಲ್ಲ ಮನಸ್ಸಿನಲ್ಲಿಯೇ ವಿಚಾರಮಾಡಿ ಅರಿತುಕೊಳ್ಳಬೇಕು. ಇಂದ್ರಿಯಾದಿಗಳ ವ್ಯಾಪಾರವಿಲ್ಲದಂಥ ಅವುಗಳನ್ನು ನಿಲ್ಲಿಸಿಕೊಳ್ಳುವ ಅವಸ್ಥೆಗೆ ಯೋಗವೆಂದು ಹೆಸರು, ಆ ಅವಸ್ಥೆಯಲ್ಲಿ ಆತ್ಮನು ತನ್ನ ಸ್ವರೂಪದಲ್ಲಿಯೇ ಇರುವನು. ಆದ್ದರಿಂದ ಅಂಥ ಯೋಗವನ್ನು ಅಭ್ಯಾಸಮಾಡುವದು ಆತ್ಮಜ್ಞಾನಕ್ಕೆ ಸಾಧಕವಾಗಿರುವದು.

೧೨-೧೬. " ಆತ್ಮನು ಇಂದ್ರಿಯಗಳಿಗಾಗಲಿ ಮನಸ್ಸಿಗಾಗಲಿ ಗೋಚರವಾಗುವವನಲ್ಲವಾದರೂ ಸಮಸ್ತಜಗತ್ತಿಗೂ ಆಧಾರವಾಗಿರುವದರಿಂದ ಅವನು ಇದಾನೆಂಬುದೇ ಸರಿಯಾದ ತಿಳಿವಳಿಕೆ. ಅವನು ಇರುವದರಿಂದಲೇ ಈ ಜಗತ್ತೆಲ್ಲ 'ಇದೆ' ಎಂಬ ಅರಿವಿಗೆ ಗೋಚರವಾಗುತ್ತದೆ. ಆದರೆ 'ಇದೆ' ಎಂಬುದೂ ಒಂದು ಉಪಾಧಿಯಿಂದ ತಿಳಿದ ಸ್ವರೂಪವು; ಆದ್ದರಿಂದ ಯಾವ ಉಪಾಧಿಯೂ ಇಲ್ಲದಿರುವ ಆತ್ಮನನ್ನು ಇರುವನೆಂದಾಗಲಿ ಇಲ್ಲವೆಂದಾಗಲೀ ಹೇಳುವದಕ್ಕಿಲ್ಲ. ಇರುವಿಕೆಯೇ ಮುಂತಾದ ಯಾವ ವಿಶೇಷವೂ ಆತ್ಮನಲ್ಲಿಲ್ಲವೆಂಬುದೇ ಸರಿಯಾದ ತಿಳಿವು. ನಮ್ಮ ಬುದ್ಧಿಯಲ್ಲಿ ಗಂಟುಹಾಕಿಕೊಂಡಿರುವ ತಪ್ಪು ತಿಳಿವುಗಳೆಲ್ಲ ಹೋದರೆ ಆ ತಪ್ಪು ತಿಳಿವಿನಿಂದ ಆಗಿರುವ ಕಾಮಗಳೆಲ್ಲ ತೊಲಗುವವು; ಕಾಮಗಳೆಲ್ಲ ಹೋದರೆ ಕಾಮದಿಂದಾಗಿರುವ ಜನನಮರಣಸಂಸಾರವೂ ಹೋಗಿ ನಾಶವಿಲ್ಲದ ಬ್ರಹ್ಮಸ್ವರೂಪವೇ ಪ್ರಾಪ್ತವಾಗುವದು. ಈ ಸ್ವರೂಪವನ್ನು ಇಲ್ಲಿಯೇ ಕಂಡುಕೊಳ್ಳಬಹುದು ಆದರೆ ಬ್ರಹ್ಮೋಪಾಸನೆಯನ್ನು ಮಾಡುವವರು ಉಪಾಸನೆಯ ಬಲದಿಂದ ಸುಷುಮ್ನಾನಾಡಿಯ ಮಾರ್ಗವಾಗಿ ಬ್ರಹ್ಮಲೋಕಕ್ಕೆ ಹೋಗಿ ಬಹುಕಾಲವಿರುವ ಅಪೇಕ್ಷಿಕವಾದ ಅಮೃತತ್ವವನ್ನು ಪಡೆಯುವರು, ಅಲ್ಲಿಯೂ ಜ್ಞಾನವುಂಟಾದರೆ ಮಾತ್ರ ಮುಖ್ಯವಾದ ಅಮೃತತ್ವವೂ ದೊರಕುತ್ತದೆ. ಆದ್ದರಿಂದ ಇಲ್ಲಿಯೇ ಜ್ಞಾನದಿಂದ ಮುಕ್ತರಾಗಲು ಯತ್ನಿಸಬೇಕು.

೧೭-೧೮. ಒಟ್ಟು ಸಾರಾಂಶವೇನೆಂದರೆ, ಜನರ ಹೃದಯದಲ್ಲಿರುವ ಆತ್ಮನ ಸ್ವರೂಪವು ಈಗ ಸಂಸಾರಿಯಾದ ಸಣ್ಣ ಆತ್ಮನೆಂದು ತೋರುತ್ತಿದ್ದರೂ ಚೆನ್ನಾಗಿ ಆನಾತ್ಮಗಳಿಂದ ಬಿಡಿಸಿ ತಿಳಿದುಕೊಂಡರೆ ಅವೇ ಆತ್ಮನೇ ನಿಜವಾಗಿ ನಿತ್ಯಶುದ್ಧವಾಗಿ ಯಾವ ಸಂಸಾರಧರ್ಮವೂ ಇಲ್ಲದಿರುವ ಬ್ರಹ್ಮವೆಂದು ಗೊತ್ತಾಗುತ್ತದೆ. ಮೃತ್ಯುವು ಉಪದೇಶಿಸಿದ ಈ ಬ್ರಹ್ಮವಿದ್ಯೆಯನ್ನೂ ಯೋಗಮಾರ್ಗವನ್ನೂ ಅರಿತುಕೊಂಡು ನಚಿಕೇತನು ಬ್ರಹ್ಮವನ್ನು ಪಡೆದು ಪರಿಶುದ್ಧವಾದ ಸಂಸಾರವರ್ಜಿತವಾದ ಬ್ರಹ್ಮವಾದನು. ಇದರಂತೆ ಯಾರುಯಾರು ಈ ವಿದ್ಯೆಯನ್ನು ತಿಳಿದುಕೊಳ್ಳುವರೋ ಅವರೆಲ್ಲ ಅಂಥ ಬ್ರಹ್ಮಸ್ವರೂಪವನ್ನೇ ಪಡೆದುಕೊಂಡು ಮುಕ್ತರಾಗುವರು.

ಮಂತ್ರಗಳ ಅನುಕ್ರಮಣಿಕೆ

ಮಂತ್ರಗಳ ಪ್ರತೀಕ	ಅ.	ವ.	ಮಂ.	ಪುಟ
ಅಗ್ನಿರ್ಯಥೈಕೋ . .	೨	೨	೯	೧೫೨
ಅಜ್ಯುಷ್ಮಮಾತ್ರಃ ಪುರುಷೋ . .	೨	೧	೧೨	೧೩೪
,, ,, . .	೨	೧	೧೩	೧೩೫
,, ,, . .	೨	೩	೧೭	೧೯೧
ಅಜೀರ್ಯತಾಮಮೃತಾನಾಮ್ . .	೧	೧	೨೮	೪೩
ಅಣೋರಣೀರ್ಯಾ ಮಹತೋ . .	೧	೨	೨೦	೭೫
ಅನುಪಶ್ಯ ಯಥಾ ಪೂರ್ವೇ . .	೧	೧	೬	೧೪
ಅನ್ಯಚ್ಛ್ರೇಯೋಽನ್ಯದುತೈವ . .	೧	೨	೧	೪೬
ಅನ್ಯತ್ರ ಧರ್ಮಾದನ್ಯತ್ರಾಧರ್ಮಾತ್ .	೧	೨	೧೪	೬೬
ಅರಣ್ಯೋರ್ನಿಹಿತೋ . .	೨	೧	೮	೧೨೮
ಅವಿದ್ಯಾಯಾಮನ್ತರೇ . .	೧	೨	೫	೫೨
ಅವ್ಯಕ್ತಾತ್ತು ಪರಃ . . .	೨	೩	೮	೧೭೪
ಅಶಬ್ದಮಸ್ಪರ್ಶಮ್ . . .	೧	೩	೧೫	೧೧೦
ಅಶರೀರಗ್ಂ ಶರೀರೇಷು . .	೧	೨	೨೨	೮೦
ಅಸ್ತೀತ್ಯೇವೋಪಲಬ್ಧವ್ಯಃ . .	೨	೩	೧೩	೧೮೩
ಅಸ್ಯ ವಿಸ್ರಂಸಮಾನಸ್ಯ . .	೨	೨	೪	೧೪೬
ಆತ್ಮಾನಗ್ಂ ರಥಿನಂ ವಿದ್ಧಿ . .	೧	೩	೩	೯೦
ಆಶಾಪ್ರತೀಕ್ಷೇ ಸಙ್ಗತಗ್ಂ . .	೧	೧	೮	೧೬
ಆಸೀನೋ ದೂರಂ ವ್ರಜತಿ . .	೧	೨	೨೧	೭೭
ಇನ್ದ್ರಿಯಾಣಾಂ ಪೃಥಗ್ಭಾವಮ್ .	೨	೩	೬	೧೭೨
ಇನ್ದ್ರಿಯಾಣಿ ಹಯಾನಾಹುಃ . .	೧	೩	೪	೯೧
ಇನ್ದ್ರಿಯೇಭ್ಯಃ ಪರಂ ಮನೋ . .	೨	೩	೭	೧೭೪
ಇನ್ದ್ರಿಯೇಭ್ಯಃ ಪರಾ ಹ್ಯರ್ಥಾಃ .	೧	೩	೧೦	೯೭
ಇಹ ಚೇದಶಕದ್ಬೋದ್ಧುಮ್ . .	೨	೩	೪	೧೬೯

ಮಂತ್ರಗಳ ಪ್ರತೀಕ	ಅ.	ವ.	ಮಂ.	ಪುಟ
ಉತ್ತಿಷ್ಠತ ಜಾಗ್ರತ . . .	೧	೩	೧೪	೧೦೮
ಉಶ್ಶ ಹ ವೈ ವಾಜಶ್ರವಸಃ . .	೧	೧	೧	೮
ಊರ್ಧ್ವಮೂಲೋಽವಾಕ್ಶಾಖಃ . .	೨	೩	೧	೧೬೨
ಊರ್ಧ್ವಂ ಪ್ರಾಣಮುನ್ನಯತಿ . .	೨	೨	೩	೧೪೪
ಋತಂ ಪಿಬನ್ತೌ ಸುಕೃತಸ್ಯ . .	೧	೩	೧	೪೬
ಏಕೋ ವಶೀ ಸರ್ವಭೂತಾನ್ತರಾತ್ಮಾ .	೨	೨	೧೨	೧೫೬
ಏತಚ್ಛ್ರುತ್ವಾ ಸಮ್ಪರಿಗೃಹ್ಯ . .	೧	೨	೧೩	೬೫
ಏತತ್ತುಲ್ಯಂ ಯದಿ ಮನ್ಯಸೇ .	೧	೧	೨೪	೩೪
ಏತದಾಲಮ್ಬನಂ ಶ್ರೇಷ್ಠಮ್ . .	೧	೨	೧೭	೭೦
ಏತದ್ಧ್ಯೇವಾಕ್ಷರಂ ಬ್ರಹ್ಮ .	೧	೨	೧೬	೬೯
ಏಷ ತೇಽಗ್ನಿರ್ನಚಿಕೇತಃ .	೧	೧	೧೯	೩೧
ಏಷ ಸರ್ವೇಷು ಭೂತೇಷು . .	೧	೩	೧೨	೧೦೨
ಕಾಮಸ್ಯಾಪ್ತಿಂ ಜಗತಃ .	೧	೨	೧೧	೬೨
ಜಾನಾಮ್ಯಹಂ ಶೇವಧಿಃ . .	೧	೨	೧೦	೬೧
ತಂ ಹ ಕುಮಾರಂ ಸನ್ತ್ಯಮ್ .	೧	೧	೨	೯
ತದೇತದಿತಿ ಮನ್ಯನ್ತೇ . .	೨	೨	೧೪	೧೫೯
ತಂ ದುರ್ದರ್ಶಂ ಗೂಢಮ್ . .	೧	೨	೧೨	೬೩
ತಮಬ್ರವೀತ್ ಪ್ರೀಯಮಾಣೋ . .	೧	೧	೧೬	೨೬
ತಾಂ ಯೋಗಮಿತಿ ಮನ್ಯನ್ತೇ . .	೨	೩	೧೧	೧೩೮
ತಿಸ್ರೋ ರಾತ್ರೀರ್ಯದವಾತ್ಸೀಃ . .	೧	೧	೯	೧೪
ತ್ರಿಣಾಚಿಕೇತಸ್ತ್ರಯಮ್ . .	೧	೧	೧೪	೩೦
ತ್ರಿಣಾಚಿಕೇತಸ್ತ್ರಿಭಿರೇತ್ಯ . .	೧	೧	೧೭	೨೭
ದೂರಮೇತೇ ವಿಪರೀತೇ . .	೧	೨	೪	೫೧
ಧೈರ್ಯೇರತ್ರಾಪಿ ವಿಚಿಕಿತ್ಸಿತಮ್ . .	೧	೧	೨೧	೩೫
,, ,, . .	೧	೧	೨೨	೩೬
ನ ಜಾಯತೇ ಮ್ರಿಯತೇ ವಾ . .	೧	೨	೧೪	೭೧
ನ ತತ್ರ ಸೂರ್ಯೋ ಭಾತಿ . .	೨	೨	೧೫	೧೬೦
ನ ನರೇಣಾವರೇಣ . . .	೧	೨	೪	೫೬
ನ ಪ್ರಾಣೇನ ನಾಪಾನೇನ . .	೨	೨	೫	೧೪೭

ಮಂತ್ರಗಳ ಪ್ರತೀಕ	ಅ.	ವ	ಮಂ.	ಪುಟ
ನ ವಿತ್ತೇನ ತರ್ಪಣೀಯೋ	೧	೧	೨೭	೪೨
ನ ಸಂದೃಶೇ ತಿಷ್ಠತಿ	೨	೩	೯	೧೭೬
ನ ಸಾಮ್ಪರಾಯಃ ಪ್ರತಿಭಾತಿ	೧	೨	೬	೫೩
ನಾಚಿಕೇತಮುಪಾಖ್ಯಾನಮ್	೧	೩	೧೬	೧೧೨
ನಾಯಮಾತ್ಮಾ ಪ್ರವಚನೇನ	೧	೨	೨೩	೪೧
ನಾವಿರತೋ ದುಶ್ಚರಿತಾತ್	೧	೨	೨೪	೪೩
ನಿತ್ಯೋಽನಿತ್ಯಾನಾಮ್	೨	೨	೧೩	೧೫೪
ನೈವ ವಾಚಾ ನ ಮನಸಾ	೨	೩	೧೨	೧೪೧
ನೈಷಾ ತರ್ಕೇಣ ಮತಿರಾಪನೇಯಾ	೧	೨	೯	೫೯
ಪರಾಚಃ ಕಾಮಾನನುಯನ್ತಿ	೨	೧	೨	೧೧೯
ಪರಾಞ್ಚಿ ಖಾನಿ ವ್ಯತೃಣತ್	೨	೧	೧	೧೧೫
ಪೀತೋದಕಾ ಜಗ್ಧತೃಣಾಃ	೧	೧	೩	೧೦
ಪುರಮೇಕಾದಶದ್ವಾರಮ್	೨	೨	೧	೧೩೯
ಪ್ರ ತೇ ಬ್ರವೀಮಿ ತದು	೧	೧	೧೪	೨೪
ಬಹೂನಾಮೇವಿ ಪ್ರಥಮೋ	೧	೧	೫	೧೨
ಭಯಾದಸ್ಯಾಗ್ನಿಸ್ತಪತಿ	೨	೩	೩	೧೬೮
ಮನಸೈವೇದಮಾಪ್ತವ್ಯಮ್	೨	೧	೧೧	೧೩೩
ಮಹತಃ ಪರಮವ್ಯಕ್ತಮ್	೧	೩	೧೧	೯೯
ಮನಸೈವೇದಮಾಪ್ತವ್ಯಮ್	೨	೧	೧೧	೧೩೩
ಮಹತಃ ಪರಮವ್ಯಕ್ತಮ್	೧	೩	೧೧	೯೯
ಮೃತ್ಯುಪ್ರೋಕ್ತಾಂ ನಾಚಿಕೇತೋಽಥ	೨	೩	೧೦	೧೯೩
ಯ ಇಮಂ ಪರಮಮ್	೧	೩	೧೭	೧೧೩
ಯ ಇಮಂ ಮಧ್ವದಮ್	೨	೧	೫	೧೨೪
ಯ ಏಷ ಸುಪ್ತೇಷು ಜಾಗರ್ತಿ	೨	೨	೮	೧೫೦
ಯಚ್ಛೇದ್ವಾಙ್ಮನಸೀ ಪ್ರಾಜ್ಞಃ	೧	೩	೧೩	೧೦೫
ಯತಶ್ಚೋದೇತಿ ಸೂರ್ಯೋ	೨	೧	೯	೧೨೯
ಯಥಾದರ್ಶೇ ತಥಾ	೨	೩	೫	೧೭೦
ಯಥಾ ಪುರಸ್ತಾದ್ಭವಿತಾ	೧	೧	೧೧	೨೦
ಯಥೋದಕಂ ದುರ್ಗೇ ವೃಷ್ಟಮ್	೨	೧	೧೪	೧೩೬

ಮಂತ್ರಗಳ ಪ್ರತೀಕ	ಅ.	ವ.	ಮಂ.	ಪುಟ
ಯಚ್ಛೋದಕಂ ಶುದ್ಧೇ ಶುದ್ಧಮ್ . .	೨	೧	೧೫	೧೩೮
ಯದಾ ಪಞ್ಚಾವತಿಷ್ಠನ್ತೇ . .	೨	೩	೧೦	೧೭೮
ಯದಾ ಸರ್ವೇ ಪ್ರಭಿದ್ಯನ್ತೇ . .	೨	೩	೧೫	೧೮೭
ಯದಾ ಸರ್ವೇ ಪ್ರಮುಚ್ಯನ್ತೇ . .	೨	೩	೧೪	೧೮೫
ಯದಿದಂ ಕಿಂ ಚ ಜಗತ್ಸರ್ವಮ್ .	೨	೩	೨	೧೭೭
ಯದೇವೇಹ ತದಮುತ್ರ . .	೨	೧	೧೦	೧೩೧
ಯಸ್ತು ವಿಜ್ಞಾನವಾ೯ ಭವತಿ . .	೧	೩	೬	೯೩
,, ,, ,, . .	೧	೩	೮	೯೫
ಯಸ್ತ್ವ ವಿಜ್ಞಾನವಾ೯ . .	೧	೩	೫	೯೨
,, ,, . .	೧	೩	೭	೯೪
ಯಸ್ಮಿನ್ನಿದಂ ವಿಚಿಕಿತ್ಸನ್ತಿ . .	೧	೧	೨೯	೪೫
ಯಸ್ಯ ಬ್ರಹ್ಮಚ ಕ್ಷತ್ರಂ ಚ . .	೧	೨	೨೫	೪೪
ಯಃ ಪೂರ್ವಂ ತಪಸೋ . .	೨	೧	೬	೧೨೬
ಯಃ ಸೇತುರೀಜಾನಾನಾಮ್ . .	೧	೩	೨	೪೮
ಯಾ ಪ್ರಾಣೇನ ಸಮ್ಭವತಿ . .	೨	೧	೭	೧೨೭
ಯೇನ ರೂಪಗ್ಂ ರಸಂ ಗನ್ಧಮ್ .	೨	೧	೩	೧೨೧
ಯೇಯಂ ಪ್ರೇತೇ ವಿಚಿಕಿತ್ಸಾ . .	೧	೧	೨೦	೩೩
ಯೇ ಯೇ ಕಾಮಾ ದುರ್ಲಭಾಃ . .	೧	೧	೨೫	೩೯
ಯೋನಿಮನ್ಯೇ ಪ್ರಪದ್ಯನ್ತೇ . .	೨	೨	೭	೧೪೯
ಲೋಕಾದಿಮಗ್ನಿಮ್ . .	೧	೧	೧೫	೨೫
ವಾಯುರ್ಯಥೈಕೋ ಭುವನಮ್ .	೨	೨	೧೦	೧೫೩
ವಿಜ್ಞಾನಸಾರಥಿರ್ಯಸ್ತು . .	೧	೩	೯	೯೬
ವೈಶ್ವಾನರಃ ಪ್ರವಿಶತ್ಯತಿಥಿಃ . .	೧	೧	೭	೧೫
ಶತಂ ಚೈಕಾ ಚ ಹೃದಯಸ್ಯ . .	೨	೩	೧೬	೧೮೯
ಶತಾಯುಷಃ ಪುತ್ರಪೌತ್ರಾ . .	೧	೧	೨೩	೩೭
ಶಾನ್ತಸಙ್ಕಲ್ಪಃ ಸುಮನಾಃ . .	೧	೧	೧೦	೧೯
ಶ್ರವಣಾಯಾಪಿ ಬಹುಭಿಃ . .	೧	೨	೭	೫೫
ಶ್ರೇಯಶ್ಚ ಪ್ರೇಯಶ್ಚ . .	೧	೨	೨	೪೮
ಷ್ಟೋಭಾವಾ ಮರ್ತ್ಯಸ್ಯ .	೧	೧	೨೬	೪೧

ಮಂತ್ರಗಳ ಪ್ರತೀಕ	ಅ.	ವ.	ಮಂ.	ಪುಟ
ಸ ತ್ವಮಗ್ನಿಗ್ಂ ಸ್ವರ್ಗ್ಯಮ್ . .	೧	೧	೧೩	೨೩
ಸ ತ್ವಂ ಪ್ರಿಯಾ . . .	೧	೨	೩	೫೦
ಸರ್ವೇ ವೇದಾ ಯತ್ಪದಮ್ .	೧	೨	೧೫	೬೮
ಸಹ ನಾವವತು . .	೨	೩	೧೯	೧೯೫
ಸ ಹೋವಾಚ ಪಿತರಮ್ . .	೧	೧	೪	೧೧
ಸೂರ್ಯೋ ಯಥಾ ಸರ್ವಲೋಕಸ್ಯ .	೨	೨	೧೧	೧೫೪
ಸ್ವಪ್ನಾನ್ತಂ ಜಾಗರಿತಾನ್ತಂ ಚ . .	೨	೧	೪	೧೨೩
ಸ್ವರ್ಗೇ ಲೋಕೇ ನ ಭಯಮ್ . .	೧	೧	೧೨	೧೫೪
ಹಗ್ಂಸಃ ಶುಚಿಷದ್ .	೨	೨	೨	೧೪೨
ಹನ್ತ ತ ಇದಂ ಪ್ರವಕ್ಷ್ಯಾಮಿ . .	೨	೨	೬	೧೪೮
ಹನ್ತಾ ಜೇನ್ಮನ್ಯತೇ . .	೧	೨	೧೯	೬೩

ಶಬ್ದಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಸಂಸ್ಕೃತಭಾಷ್ಯದಲ್ಲಿ ಯಾವ ಭಾಗದಲ್ಲಿ ಶಬ್ದವು ಬಂದಿದೆ ಎಂಬುದನ್ನು ಸೂಚಿಸುವವು.

೧ **ಅಗ್ನಿಃ**—
ವಿರಾಟ್ಪುರುಷ. ನಾಚಿಕೇತಾಗ್ನಿಯೂ ವಿರಾಟ್ಪುರುಷನೂ ಒಂದೇ ೪,೨೪, ೨೫, ೨೬, ೨೭, ೩೧, ೩೨, ೬೧

೨. **ಅಗ್ನಿವಿದ್ಯಾ** -
ನಾಚಿಕೇತಾಗ್ನಿಯ ಚಯನ ಮತ್ತು ವಿರಾಟ್ಪುರುಷನ ಉಪಾಸನೆ, ೪,೨೪

೩. **ಅಚಿನ್ತ್ಯಶಕ್ತಿಃ**—
ಇಂಥದ್ದೆಂದು ಯೋಚಿಸುವದಕ್ಕೂ ಸಾಧ್ಯವಾಗದ ಶಕ್ತಿಯುಳ್ಳ, ೧೪೯.

೪. **ಅಜ್ಞಾನನಿದ್ರಾ**—
ತತ್ತ್ವವನ್ನು ತಿಳಿಯದೆ ಇರುವದೆಂಬ ನಿದ್ರೆ, ೧೦೪.

೫. **ಅಣುಃ**—
ಇಂದ್ರಿಯಗಳಿಗೆ ಸಿಲುಕದ, ಸೂಕ್ಷ್ಮ ನಾದ, ೩೫. ೫೮, ೬೪, ೭೪

೬. **ಅಧಿಕಾರೀ** —
ವಿದ್ಯೆಗೆ ತಕ್ಕವನು, ೬

೭. **ಅಧಿದೈವಮ್**—
ದೇವತೆಗಳ ವಿಷಯದಲ್ಲಿ, ೧೨೧

೮. **ಅಧಿಯಜ್ಞಮ್**—
ಯಜ್ಞದ ವಿಷಯದಲ್ಲಿ, ೧೨೦

೯. **ಅಧ್ಯಾತ್ಮಮ್**—
ಶರೀರದೊಳಗಿನ ವಿಷಯದಲ್ಲಿ, ೧೨೦, ೧೨೧; ತನ್ನ ಸ್ವರೂಪವನ್ನೇ ೧೮೫.

೧೦. **ಅಧ್ಯಾತ್ಮಯೋಗಃ**—
ಮನಸ್ಸನ್ನು ವಿಷಯಗಳಿಂದ ಹಿಂದಕ್ಕೆ ಳೆದುಕೊಂಡು ಆತ್ಮನಲ್ಲಿಡುವದು, ೬೩.

೧೧. **ಅಧ್ಯಾರೋಪಣಮ್**—
ಹುಟ್ಟುಗಟ್ಟುವದು, ಕಲ್ಪಿಸುವದು, ೩೨.

೧೨. **ಅಧ್ಯಾಸಃ**—
ಹುಟ್ಟುಗಟ್ಟುವದು, ಕಲ್ಪಿ ಸುವದು, ೧೪೮

೧೩. **ಅನಾದ್ಯವಿದ್ಯಾ**—
ಎಂದುಂಟಾಯಿತೆಂದು ತಿಳಿಯುವದಕ್ಕೆ ಆಗದಿರುವ ತಪ್ಪುತಿಳಿವಳಿಕೆ, ಆತ್ಮಾನಾತ್ಮರ ಅಧ್ಯಾಸ, ೧೦೪.

೧೪. **ಅಪರಬ್ರಹ್ಮ**—
ಕಡಿಮೆಯ ಬ್ರಹ್ಮ, ಧ್ಯಾನಕ್ಕೆ ಇಟ್ಟು ಕೊಳ್ಳುವ ಸಗುಣಬ್ರಹ್ಮ, ೮೫,೧೫೪

೧೫. **ಅಭ್ಯುದಯಃ**—
ಸಾಧನದಿಂದ ಪಡೆಯುವ ಸುಖ, ೪೭.

೧೬. **ಅಮೃತತ್ವಮ್**—
ಮರಣವಿಲ್ಲದಿರುವದು, ದೇವತ್ವ, ೨೪, ೧೪೧; ಪ್ರತ್ಯಗಾತ್ಮಸ್ವರೂಪದಿಂದ ನಿಲ್ಲುವ ಮುಕ್ತಿ, ೪೭, ೧೨೨, ೧೪೧.

೧೭. **ಅಮೃತಾಃ**—
ದೇವತೆಗಳು, ೨೪, ೪೪, ೧೫೭, ೧೬೯.

೧೮. **ಅವಿದ್ಯಾ**—
ಅಜ್ಞಾನ, ತಪ್ಪುತಿಳಿವಳಿಕೆ, ಆತ್ಮಾನಾತ್ಮ

ರನ್ನು ಪರಸ್ಪರವಾಗಿ ಕಲ್ಪಿಸುವದು, ೪೭, ೫೨, ೫೩, ೬೩, ೬೬, ೧೧೧, ೧೨೨, ೧೨೩, ೧೪೦, ೧೪೨, ೧೪೪.

೧೯. ಅವಿದ್ಯಾಕೃತಕಾಮಕರ್ಮ ಬನ್ಧನಮ್—
ಅವಿದ್ಯೆಯಿಂದ ಆಗಿರುವ ಕಾಮಕರ್ಮ ಗಳೆಂಬ ಬಂಧ, ೧೩೧, ೧೭೮.

೨೦. ಅವಿದ್ಯಾದಿಃ—
ಅವಿದ್ಯೆ, ಕಾಮ, ಕರ್ಮ—ಇವು, ೨, ೫.

೨೧. ಅವಿದ್ಯಾಗ್ರನ್ಥಯಃ—
ಅವಿದ್ಯೆಯಿಂದ ಗಂಟುಹಾಕಿಕೊಂಡಿರುವ ಕಲ್ಪನೆಗಳು, ೧೭೯, ೧೮೦.

೨೨. ಅವಿದ್ಯಾದಿಹೃದಯಗ್ರನ್ಥಯಃ
ಅವಿದ್ಯೆಯಿಂದ ಗಂಟುಹಾಕಿಕೊಂಡಿರು ವಂತೆ ಇರುವ, ಅವಿದ್ಯೆ, ಕಾಮ— ಮುಂತಾದವುಗಳು, ೧೬೭.

೨೩. ಅವಿದ್ಯಾಧ್ಯಾರೋಪಣಮ್—
ತಪ್ಪುತಿಳಿವಳಿಕೆಯನ್ನು ಆತ್ಮನಲ್ಲಿ ಹುಟ್ಟುಗಟ್ಟುವದು, ೧೭೨.

೨೪. ಅವಿದ್ಯಾಮಾಯಾಚ್ಛನ್ನತಾ—
ಅವಿದ್ಯೆಯಿಂದಾದ ಹುಸಿತೋರಿಕೆಯಿಂದ ಮರೆಯಾಗಿರುವ, ೧೦೦.

೨೫. ಅವ್ಯಕ್ತಬೀಜಮ್—
ಜಗತ್ತಿಗೆ ಕಾರಣವಾಗಿರುವ ನಾಮರೂಪ ಗಳ ಸೂಕ್ಷ್ಮಾವಸ್ಥೆ, ೧೫೪.

೨೬. ಅವ್ಯಕ್ತಮ್—
ಇಂದ್ರಿಯಗಳಿಗೆ ಗೋಚರವಾಗದ ಸೂಕ್ಷ್ಮವಾದ ಜಗತ್ತಿನ ಕಾರಣ ರೂಪ, ಅವ್ಯಾಕೃತ, ೯೮.

೨೭. ಅವ್ಯಕ್ತಾದಿಸ್ಥಾವರಾನ್ತಃ—
ಅವ್ಯಕ್ತದಿಂದ ಹಿಡಿದು ಮರಗಿಡಗಳ ವರೆಗೆ ಹಬ್ಬಿರುವ ಸಂಸಾರ, ೧೫೪.

೨೮. ಅವ್ಯಾಕೃತಮ್—
ಬಿಡಿಬಿಡಿಯಾಗಿಲ್ಲದ ನಾಮರೂಪಗಳ ತತ್ತ್ವ, ೯೮.

೨೯. ಅಸಂಸ್ಕೃತಬುದ್ಧಿಃ—
ಆಚಾರ್ಯರ ಮತ್ತು ಶಾಸ್ತ್ರದ ಉಪ ದೇಶ, ಶಮಾದಿಗಳು—ಇವುಗಳಿಂದ ಸಂಸ್ಕಾರವನ್ನು ಹೊಂದದ ಅಂತಃ ಕರಣ, ೧೦೧.

೩೦. ಅಸಂಹತಃ—
ಮತ್ತೆ ಯಾವದೊಂದರೊಡನೆಯೂ ಸೇರಿಕೊಳ್ಳದೆ ಸ್ವತಂತ್ರನಾಗಿರು ವವನು, ೧೩೧.

೩೧. ಆಕಾಶಃ—
ಪಂಚಭೂತಗಳಲ್ಲಿ ಮೊದಲು ಸೃಷ್ಟಿ ಯಾಗುವ ಭೂತ, ೭೧, ೭೨, ೭೮. ೧೦೫, ೧೨೨, ೧೪೯, ೧೬೪; ಅವ್ಯಾಕೃತ, ೯೮.

೩೨. ಆಗಮಃ—
ಗುರುಪರಂಪರೆಯಿಂದ ಬಂದಿರುವ ತತ್ತ್ವೋಪದೇಶ, ೫೭, ೫೯; ವೇದ, ೧೭೫.

೩೩. ಆಚಾರ್ಯಾಗಮಸಂಸ್ಕೃತಮ್—
ಗುರುಗಳ ಉಪದೇಶದಿಂದಲೂ ಶಾಸ್ತ್ರ ದಿಂದಲೂ ಸಂಸ್ಕಾರವನ್ನು ಹೊಂದಿ ರುವ ಅಂತಃಕರಣ, ೧೨೩.

೩೪. ಆತ್ಮದರ್ಶನಮ್—
ಆತ್ಮನನ್ನು ಅರಿತುಕೊಳ್ಳುವದು, ೬, ೧೧೧, ೧೬೨.

೩೫. ಆತ್ಮಜ್ಞಾನಮ್—
ಆತ್ಮನ ನಿಜವಾದ ಅರಿವು, ೭೨, ೪೩, ೧೦೪.

೩೬. ಆತ್ಮಭಾವಃ—
ತಾನೆಂಬ ಭಾವನೆ, ೨೮; ತಾನೆಂಬ ತಿಳಿವಳಿಕೆ, ೬೪.

೩೭. ಆತ್ಮಾ—
ತಾನು, ಜೀವನ ನಿಜವಾದ ಸ್ವರೂಪವಾಗಿರುವ ಪರಮಾತ್ಮ, ೩೨, ೩೩, ೩೫, ೩೭, ೩೮, ೩೮, ೩೮, ೩೯, ೪೧, ೪೩, ೪೪, ೪೭, ೪೮, ೪೯, ೫೫, ೫೫, ೫೬, ೫೭, ೫೮, ೫೮, ೫೮, ೫೯, ೬೦, ೬೧, ೬೨, ೬೩, ೬೪, ೬೫, ೬೬, ೬೭, ೬೭, ೬೭

೫೫. **ಕಾರ್ಯಪ್ರವಿಲಾಪನಮ್**—
ಕಾರ್ಯಗಳನ್ನೆಲ್ಲ ತಮ್ಮ ತಮ್ಮ ಕಾರಣಕ್ಕಿಂತ ಬೇರೆಯಲ್ಲವೆಂದು ಚಿಂತಿಸುವದು, ೧೭೫.

೫೬. **ಕುತಾರ್ಕಿಕಭೇದದೃಷ್ಟಿ**—
ವೈದಿಕೋಪದೇಶಕ್ಕೆ ವಿರುದ್ಧವಾದ ಕೆಟ್ಟ ತರ್ಕದಿಂದ ಭೇದವನ್ನು ಕಾಣುವ ದೃಷ್ಟಿ, ೧೨೯.

೫೭. **ಕುದೃಷ್ಟಿ**—
ಇರುವದನ್ನು ಇಲ್ಲವೆನ್ನುವ ವೇದವಿರುದ್ಧವಾದ ತಪ್ಪುತಿಳಿವಳಿಕೆ, ೧೨೯.

೫೮. **ಕೂಟಸ್ಥಮ್**—
ಯಾವ ವಿಕಾರವೂ ಇಲ್ಲದ ಆತ್ಮತತ್ತ್ವ, ೧೧೮.

೫೯. **ಕ್ರಿಯಾಕಾರಕಫಲಾನಿ**—
ಕ್ರಿಯೆ, ಅದನ್ನುಂಟುಮಾಡುವದಕ್ಕೆ ಬೇಕಾದ ಸಾಮಗ್ರಿಗಳು, ಅವರ ಫಲ—ಈ ರೂಪವಾರ ಸಂಸಾರ, ೩೨, ೧೦೩, ೧೪೮

೬೦. **ಕ್ಷಣಭಙ್ಗವಾದಃ**—
ಒಂದೊಂದು ಕ್ಷಣಕ್ಕೂ ಜ್ಞಾನವು ನಾಶವಾಗಿ ಹುಟ್ಟುವದೆಂಬ ಬೌದ್ಧರವಾದ ೧೨೬.

೬೧. **ಖಾನಿ**—
ಆಕಾಶದಿಂದ ಆಗಿರುವ ಶ್ರೋತ್ರವೇ ಮುಂತಾದ ಇಂದ್ರಿಯಗಳು, ೧೧೦.

೬೨ **ಗನ್ಧರ್ವನಗರಮ್**—
ಆಕಾಶದಲ್ಲಿ ಕಲ್ಪಿತವಾಗಿ ತೋರಿ ಹಾರುವ ನೋಟ, ೧೫೪.

೬೩. **ಗುಹಾ**—
ಹೃದಯ, ಬುದ್ಧಿ, ೨೫, ೬೩, ೧೧೪.

೬೪. **ಗ್ರನ್ಥಯಃ**—
ಗಂಟುಹಾಕಿಕೊಂಡಂತೆ ಬಲವಾಗಿರುವ ಅವಿದ್ಯಾಪ್ರತ್ಯಯಗಳು, ೧೭೯.

೬೫. **ಚಿನ್ಮಾತ್ರಘನಃ**—
ಬರಿಯರಿವಿನ ಗಟ್ಟಿ, ೯೪.

೬೬. **ಚಿನ್ಮಾತ್ರಸ್ವರೂಪಮ್**—
ಬರಿಯರಿವಿನರೂಪದ ಆತ್ಮತತ್ತ್ವ, ೧೬೪.

೬೭. **ಜ್ಞಾನಕರ್ಮಸಮುಚ್ಚಯಃ**—
ಉಪಾಸನೆಯನ್ನೂ ಕರ್ಮವನ್ನೂ ಕೂಡಿಸಿ ಅನುಷ್ಠಾನಮಾಡುವದು, ೨೪.

೬೮. **ತರ್ಕಃ**—
ತನ್ನ ಬುದ್ಧಿಯಿಂದಲೇ ಊಹಿಸುವದು, ೫೮, ೫೯.

೬೯. **ತ್ರಿಣಾಚಿಕೇತಾಃ**—
ನಾಚಿಕೇತಾಗ್ನಿಯನ್ನು ಮೂರುಸಲ ಚಯನಮಾಡಿದವರು, ಅಥವಾ ಅದನು ಅರಿತು ಅಧ್ಯಯನಮಾಡಿ ಅನುಷ್ಠಾನಮಾಡಿದವರು, ೨೮, ೪೪.

೭೦. **ದರ್ಶನಶ್ರವಣಮನನವಿಜ್ಞಾನಾದಿಲಿಙ್ಗಾಃ**—
ನೋಡುವದು, ಕೇಳುವದು, ಯೋಚಿಸುವದು, ಅರಿಯುವದು ಎಂಬ ವೃತ್ತಿಗಳಿಂದ ಊಹಿಸಿ ತಿಳಿದು ಕೊಳ್ಳಬೇಕಾಗಿರುವ ಆತ್ಮ, ೭೪.

೭೧ **ದೃಷ್ಟಾದೃಷ್ಟವಿಷಯಾಃ**—
ಈ ಲೋಕದ ಮತ್ತು ಪರಲೋಕದ ವಿಷಯಗಳು, ೭೪; ಇವನ್ನು "ದೃಷ್ಟಾನುಶ್ರವಿಕವಿಷಯಾಃ"—ಎಂದೂ ಕರೆಯುವದುಂಟು, ೨.

೭೨. **ದೇವಃ**—
ದೇವತೆ, ೪೯, ೧೧೪, ೧೧೪; ಕರಣ, ೧೪೫; ವಿರಾಟ್ಪುರುಷ, ೨೪; ಪರಮಾತ್ಮ, ೬೩, ೭೬.

೭೩ **ದೇಹಾದಿಸಙ್ಘಾತಃ**—
ದೇಹ, ಇಂದ್ರಿಯಗಳು, ಪ್ರಾಣ, ಮನಸ್ಸು—ಇವುಗಳು ಒಟ್ಟುಗೂಡಿ ಕೆಲಸಮಾಡುವ ಗುಂಪು, ೧೦೦, ೧೧೪

೪. ಧರ್ಮಃ—
ಆತ್ಮ, ೩೫, ೩೭, ೧೨೭.

೫. ನಾಮರೂಪಕರ್ಮತ್ರಯಮ್
ನಾಮ, ರೂಪ, ಕರ್ಮ ಎಂಬ ಮೂರರ ರೂಪದಲ್ಲಿ ತೋರಿಕೊಳ್ಳುವ ಜಗತ್ತು, ೧೦೩.

೬. ನಿತ್ಯವಿಜ್ಞಪ್ತಿಸ್ವರೂಪಮೆ—
ಯಾವಾಗಲೂ ಇರುವ ಅರಿವಿನ ಸ್ವರೂಪವಾದ ಬ್ರಹ್ಮ, ೧೦೬.

೭. ನಿತ್ಯವಿಜ್ಞಾನಘನಸ್ವಭಾವಮ್—
ನಿತ್ಯವಾದ ಅರಿವಿನ ಗಟ್ಟಿಯ ಸ್ವರೂಪವಾದ ಬ್ರಹ್ಮ, ೧೨೨.

೮. ನಿರನ್ವಯಂ ಪ್ರವಿಲೀಯತೇ
ಕಾರಣಸಹಿತವಾಗಿ ನಾಶವಾಗುತ್ತದೆ ಎಂಬ ನಾಸ್ತಿಕರ ಮತ, ೧೭೫.

೯. ನಿರುಪಾಧಿಕಮ್—
ಉಪಾಧಿಯಿಲ್ಲದ ಬರಿಯ ಆತ್ಮ ೧೭೬, ೧೭೭.

೧೦. ನಿಶ್ರೇಯಸಮ್—
ಎಲ್ಲಕ್ಕೂ ಹೆಚ್ಚಿನ ಹಿತ, ಮುಕ್ತಿ, ೩೭, ೪೭.

೧೧. ನಿವೃತ್ತಿಃ—
ಕರ್ಮಗಳನ್ನು ಬಿಡುವದು, ಜ್ಞಾನಮಾರ್ಗ, ೮೯.

೧೨. ಪಞ್ಚಾಗ್ನಯಃ—
ಛಾಂದೋಗ್ಯದಲ್ಲಿ ಹೇಳಿರುವ ಪಂಚಾಗ್ನಿವಿದ್ಯೆಯನ್ನು ಬಲ್ಲವರು, ೮೪.

೧೩. ಪರಂ ಬ್ರಹ್ಮ—
ವೇದಾಂತದಲ್ಲಿ ತಿಳಿಯಬೇಕೆಂದು ಹೇಳಿರುವ ಬ್ರಹ್ಮ, ೧, ೮೪, ೮೫, ೧೫೪, ೧೫೭.

೧೪. ಪರಃ ಪುರುಷಾರ್ಥಃ—
ಪುರುಷನು ಬಯಸುವ ಮಹಾಫಲಗಳಲ್ಲಿ ಮುಖ್ಯವಾದ ಮೋಕ್ಷ, ೩೩, ೪೪.

೧೫. ಪರಮಾತ್ಮಾ—
ಆತ್ಮನೆಂದು ನಾವು ತಿಳಿದುಕೊಂಡಿರುವವುಗಳೆಲ್ಲಕ್ಕೂ ಆತ್ಮನು, ೯೫.

೧೬. ಪರಮಾರ್ಥಸತ್ಯಮ್—
ನಿಜವಾಗಿಯೂ ಸತ್ಯವಾಗಿರುವದು, ಬ್ರಹ್ಮ, ೧೫೫..

೧೭. ಪರಾರ್ಥಃ—
ಮತ್ತೊಬ್ಬನ ಪ್ರಯೋಜನಕ್ಕಾಗಿರುವ ಅಧೀನದ ವಸ್ತು, ೧೩೮.

೧೮ ಪಾಷಣ್ಡಿಃ—
ಅಥವಾ 'ಪಾಖಣ್ಡಿಃ'; ಅವೈದಿಕ ಮತದವನು, ೧೫೪.

೧೯. ಪುರುಷಃ—
ಮನುಷ್ಯ, ೧೮, ೪೭; ಎಲ್ಲವನ್ನೂ ತುಂಬಿಕೊಂಡಿರುವ ಪರಮಾತ್ಮ ೯೮, ೧೦೦, ೧೨೫, ೧೨೬.

೨೦. ಪುರುಷಾರ್ಥಃ—
ಪುರುಷನು ಬಯಸುವದು, ೪೪, ೪೭.

೨೧. ಪ್ರತೀಕಮ್ —
ಉಪಾಸನೆಗೆಂದು ಇಟ್ಟುಕೊಳ್ಳುವ ಗುರುತಿನ ವಸ್ತು; ಉದಾಹರಣೆಗೆ ಓಂಕಾರವು ಬ್ರಹ್ಮಕ್ಕೆ ಪ್ರತೀಕವು, ೬೮.

೨೨. ಪ್ರತ್ಯಗಾತ್ಮಾ—
ಒಳಗಿನ ತಿರುಳಾಗಿರುವದು, ಆತ್ಮ, ೭೮, ೯೬, ೯೭, ೯೯, ೧೧೦, ೧೧೫.

೨೩. ಪ್ರತ್ಯವಾಯಃ—
ಕರ್ಮವನ್ನು ಬಿಟ್ಟದ್ದರಿಂದ ಆಗುವ ದೋಷ, ೧೭.

೯೪. ಪ್ರಥಮಜಃ—
ಅವ್ಯಕ್ತದಿನದ ಮೊದಲು ಹುಟ್ಟುವ ಹಿರಣ್ಯಗರ್ಭ, ೧೦೨, ೧೧೮.

೯೫. ಪ್ರಥಮಶರೀರೀ—
ಹಿರಣ್ಯಗರ್ಭನಿಂದ ಮೊದಲು ಶರೀರಿಯಾಗಿ ಹುಟ್ಟುವ ವಿರಾಟ್ಪುರುಷ, ೨೬.

೯೬. ಪ್ರಯೋಜನಮ್—
ನಮಗೆ ಆಗಬೇಕಾದ ಫಲ, ಗ್ರಂಥದ ನಾಲ್ಕು ಅನುಬಂಧಗಳಲ್ಲಿ ಒಂದು, ೪೫, ೪೭.

೯೭. ಪ್ರವೃತ್ತಿಃ—
ಕರ್ಮಗಳಲ್ಲಿ ತೊಡಗುವದು, ಕರ್ಮಮಾರ್ಗ, ೮೯

೯೮. ಪ್ರಾಕೃತಃ—
ಪ್ರಕೃತಿಯಿಂದಾಗಿರುವ ದೇಹಾದಿಗಳಲ್ಲಿ ಅಭಿಮಾನವಿರುವ, ೪೫, ೫೭, ೮೨, ೧೫೧

೯೯. ಪ್ರಾಣಃ—
ಪ್ರಾಣವೇ ಮುಂತಾದ ವೃತ್ತಿಯುಳ್ಳ ವಾಯು, ೧೩೮, ೧೪೨; ಪರಮಾತ್ಮ, ೧೨೧, ೧೫೭.

೧೦೦. ಬುದ್ಧಿಃ—
ನಿಶ್ಚಯಾತ್ಮಕವಾದ ಅಂತಃಕರಣವೃತ್ತಿ, ಈ ಮಾತನ್ನು ಅಂತಃಕರಣವೆಂಬರ್ಥದಲ್ಲಿಯೂ ಉಪಯೋಗಿಸುವದುಂಟು, ೮೭, ೮೮, ೯೫, ೧೦೨, ೧೦೪, ೧೭೧, ೧೭೪ ; ಮುಪತ್ತತ್ತ್ವ, ೧೦೬

೧೦೧. ಬೋಧಾಬೋಧಾತ್ಮಕಂ ತತ್ತ್ವಮ್—
ಜ್ಞಾನರೂಪವಾಗಿಯೂ ಜಡರೂಪವಾಗಿಯೂ ಇರುವ ಮುಪತ್ತತ್ತ್ವ, ೯೭

೧೦೨. ಬ್ರಹ್ಮ—
ಬ್ರಾಹ್ಮಣ, ೮೨, ೧೦೮ ; ಎಲ್ಲಕ್ಕೂ ಹೆಚ್ಚಿನ ತತ್ತ್ವ, ಪರಮಾತ್ಮತತ್ತ್ವ, ೩, ೬೪, ೮೪, ೮೫, ೧೦೬, ೧೨೦, ೧೨೧, ೧೨೩, ೧೨೭, ೧೫೯, ೧೪೨, ೧೫೫, ೧೬೯, ೧೭೪.

೧೦೩. ಬ್ರಹ್ಮಚರ್ಯಮ್—
ಗುರುವಿನ.ಬಳಿಯಲ್ಲಿದ್ದು ಶಾಸ್ತ್ರಾಭ್ಯಾಸ, ಬ್ರಹ್ಮವಿಚಾರವೇ ಮುಂತಾದದ್ದನ್ನು ಮಾಡುವದು, ಮೈಥುನವನ್ನು ಬಿಟ್ಟಿರುವದು.

೧೦೪. ಬ್ರಹ್ಮಜಜ್ಞ—
ಹಿರಣ್ಯಗರ್ಭನಿಂದ ಹುಟ್ಟಿದ ಸರ್ವಜ್ಞನಾದ ವಿರಾಟ್ಪುರುಷ, ೪.

೧೦೫. ಬ್ರಹ್ಮವಿದ್ಯಾ—
ಬ್ರಹ್ಮವನ್ನು ಅರಿತುಕೊಳ್ಳುವದು, ೩, ೧೪೫.

೧೦೬. ಬ್ರಹ್ಮಲೋಕಃ—
ಬ್ರಹ್ಮ ೬೯, ೧೦೭, ಬ್ರಹ್ಮನ ಲೋಕ, ೬೯, ೧೬೧, ೧೬೨.

೧೦೭. ಬಹ್ಮವಿದ್ಯಾಚಾರ್ಯಃ—
ಬ್ರಹ್ಮವಿದ್ಯೆಯನ್ನು ತಿಳಿದುಕೊಂಡು ಮತ್ತೊಬ್ಬರಿಗೂ ತಿಳಿಸುವ ಗುರು, ೧.

೧೦೮. ಬ್ರಹ್ಮಾ—
ಬ್ರಹ್ಮನು, ಹಿರಣ್ಯಗರ್ಭ, ೨೪, ೪೨, ೧೪೧

೧೦೯ ಬ್ರಹ್ಮಾತ್ಮದರ್ಶನಮ್—
ಬ್ರಹ್ಮವು ನಮ್ಮ ಆತ್ಮನೆಂಬ ತಿಳಿವಳಿಕೆ ೧೫೪.

೧೧೦. ಬ್ರಹ್ಮಾತ್ಮಪ್ರತ್ಯಯಃ—
ಬ್ರಹ್ಮವು ನಮ್ಮ ಆತ್ಮನೆಂಬ ತಿಳಿವಳಿಕೆ ೧೭೯.

೧೧೧. ಬ್ರಹ್ಮಾತ್ಮೈಕತ್ವವಿಜ್ಞಾನಮ್—
ಬ್ರಹ್ಮವೂ ನಮ್ಮ ಆತ್ಮನೂ ಒಬ್ಬನೇ ಎಂಬ ತಿಳಿವಳಿಕೆ, ೩೨, ೧೭೯.

೧೧೨. ಬ್ರಹ್ಮಾದಯಃ—
ಬ್ರಹ್ಮನೇ ಮೊದಲಾದ ಜೀವರು, ೧೫೦

೧೧೩. ಬ್ರಹ್ಮಾದಿಸ್ತಮ್ಬಪರ್ಯನ್ತಾನಿ—
"ಬ್ರಹ್ಮಾದಿಸ್ಥಾವರಾನ್ತಾನಿ". ಬ್ರಹ್ಮನಿಂದ ಹಿಡಿದು ಸ್ಥಾವರ ಪ್ರಾಣಿಯವರೆಗಿನವು, ೭೪, ೧೦೦, ೧೨೨.

೧೧೪. ಭಗವಾನ್—
ಸೂಕ್ಷ್ಮವಿಚಾರಗಳನ್ನು ಬಲ್ಲ ಪೂಜ್ಯನು ೧, ೬೫.

೧೧೫. ಭೂತಸೂಕ್ಷ್ಮಮ್—
ಭೂತಗಳ ಸೂಕ್ಷ್ಮರೂಪ, ೯೭.

೧೧೬. ಭೋಕ್ತಾ—
ಶರೀರ, ಇಂದ್ರಿಯಗಳು, ಮನಸ್ಸು—ಇವುಗಳಿಂದ ವಿಷಯಗಳನ್ನು ಅನುಭವಿಸುವ ಆತ್ಮ, ೮೮.

೧೧೭. ಮನಃ—
ಸಂಕಲ್ಪವಿಕಲ್ಪಗಳನ್ನು ಮಾಡುವ ಅಂತಃಕರಣವೃತ್ತಿ; ಅಂತಃಕರಣವೆಂಬ ಅರ್ಥದಲ್ಲಿಯೂ ಈ ಶಬ್ದದ ಪ್ರಯೋಗವಾಗುತ್ತದೆ, ೮೭, ೮೮, ೮೯, ೧೨೬.

೧೧೮. ಮನ್ದಬ್ರಹ್ಮವಿದಃ—
ಬ್ರಹ್ಮನನ್ನು ಚೆನ್ನಾಗಿ ಅರಿಯದವರು, ಅಪರಬ್ರಹ್ಮನನ್ನು ಉಪಾಸನೆ ಮಾಡುವವರು, ೧೪೦.

೧೧೯. ಮಹಾನ್ ಆತ್ಮಾ—
ಅವ್ಯಕ್ತದಿಂದಾಗಿರುವ ಚಿದ್ರೂಪಜಡರೂಪಗಳ ಒಟ್ಟು, ಹಿರಣ್ಯಗರ್ಭನ ಬುದ್ಧಿ, ೯೭, ೧೦೨, ೧೫೬.

೧೨೦. ಮಾಯಾ—
ಕಣ್ಣುಕಟ್ಟಿನಿಂದ ತೋರುವ ವಸ್ತು, ೧೫೪, ೧೫೫; ಪರಮೇಶ್ವರನ ಮಾಯಾಶಕ್ತಿ, ೧೦೦; ಅವಿದ್ಯಾರೂಪದಿಂದ ತೋರಿಕೊಳ್ಳುವ ಮಾಯೆ, ೧೦೦.

೧೨೧. ಮಿಥ್ಯಾಜ್ಞಾನವಿಜೃಮ್ಭಿತಮ್—
ತಪ್ಪುತಿಳಿವಳಿಕೆಯಿಂದ ತೋರುವ ಭೇದ, ೧೦೩.

೧೨೨. ಮೃತ್ಯುಃ—
ಯಮ, ೨೪, ೨೫, ೨೬, ೪೧, ೪೫, ೧೪೫; ಅವಿದ್ಯಾಕಾಮಕರ್ಮಗಳು ೧೦೬, ೧೧೨, ೧೭೪; ಮರಣ, ೧೨೨, ೧೩೩.

೧೨೩. ಮೃತ್ಯುಪಾಶಃ—
ಅಧರ್ಮ, ಅಜ್ಞಾನ, ರಾಗ, ದ್ವೇಷ—ಮುಂತಾದವು, ೩೦, ಜನನಮರಣಗಳು, ೧೪೨.

೧೨೪. ಯೋಗಃ—
ಆತ್ಮನನ್ನು ತಿಳಿಯುವದಕ್ಕೆ ಬೇಕಾದ ಸಾಧನ, ೬೩, ಇಂದ್ರಿಯಗಳನ್ನು ಸ್ಥಿರವಾಗಿ ಹಿಡಿದಿಟ್ಟುಕೊಳ್ಳುವದು, ೧೭೨

೧೨೫. ಯೋಗಕ್ಷೇಮೌ—
ಬೇಕಾದದ್ದನ್ನು ಸಂಪಾದಿಸಿಕೊಳ್ಳುವದು, ಆದನ್ನು ಕಾಪಾಡಿಕೊಳ್ಳುವದು, ೪೯.

೧೨೬. ಲಿಙ್ಗಮ್—
ಗುರುತು, ಆತ್ಮನನ್ನರಿತುಕೊಳ್ಳುವದಕ್ಕೆ ಬೇಕಾದದ್ದು, ೨೦, ೧೪೪.

೧೨೭. ವಾಸುದೇವಾಖ್ಯಃ—
ಪರಮಾತ್ಮನು, ೯೫.

೧೨೮. ವಿಜ್ಞಾನಕ್ರಿಯಾಶಕ್ತಿದ್ವಯಮ್—
ಅರಿಯುವ ಶಕ್ತಿ, ಕೆಲಸಮಾಡುವ ಶಕ್ತಿ—ಎಂಬ ಎರಡು ಹಿರಣ್ಯಗರ್ಭನ ಶಕ್ತಿಗಳು

೧೨೯. ವಿಜ್ಞಾನಸ್ವಭಾವಃ—
ಅರಿವಿನ ಸ್ವರೂಪವೇ ಆಗಿರುವ ಆತ್ಮನು ೧೧೪.

೧೩೦. ವಿಜ್ಞಾನೈಕರಸಮ್—
ಅರಿವೆಂಬ ಒಂದೇ ಜಾತಿಯ ಬ್ರಹ್ಮ, ೧೩೨;

"ವಿಶುದ್ಧವಿಜ್ಞಾನಘನಸ್ವಭಾವಮ್" ವಿಷಯದ ಕಲಂಕವಿಲ್ಲದ ಬರಿಯ ರಿವೇ ಆಗಿರುವ ಬ್ರಹ್ಮ, ೧೩೮.

೧೩೧. ವಿದ್ಯಾ—
ಬ್ರಹ್ಮದ ಉಪಾಸನೆ ಅಥವಾ ಅರಿವು, ೨, ೪, ೫, ೬, ೪೭, ೬೩, ೬೬.

೧೩೨. ವಿಶೇಷರಹಿತಃ—
ಇಂಥದ್ದೆಂದು ಹೇಳುವದಕ್ಕೆ ಆಗುವ ವಿಕಲ್ಪವಿಲ್ಲದವ, ೧೭೫

೧೩೩. ವಿಶೇಷವಿಜ್ಞಾನಮ್ —
ಗಡಿಗೆ, ಬಟ್ಟೆ, ಕಲ್ಲು ಎಂದು ಬಿಡಿ ಬಿಡಿಯಾಗಿ ಆಗುವ ಅರ್ಥವು, ೭೬.

೧೩೪. ವೃತ್ತಿಃ—
ಗ್ರಂಥದ ವಿವರಣೆ, ೧, ಶಬ್ದದ ವ್ಯಾಪಾರ ೪; ನಡತೆ, ೧೩.

೧೩೫. ವೈರಾಜಂ ಪದಮ್—
ವಿರಾಟ್ಪುರುಷನ ಸ್ಥಾನ, ೨೪, ೩೦.

೧೩೬. ಶಾಶ್ವತಂ ಸುಖಮ್—
ನಿತ್ಯವಾದ ಆತ್ಮಸ್ವರೂಪವೇ ಆಗಿರುವ ಸುಖ,

೧೩೭. ಸಂಸಾರಃ—
ಹುಟ್ಟುಹೊಂದುಗಳನ್ನು ಪಡೆಯುವದು ೬೨, ೬೬, ೯೨.

೧೩೮. ಸಂಸಾರಿಣಃ—
ಸಂಸಾರವನ್ನು ಹೊಂದುವ ಜೀವರು, ೯೪.

೧೩೯. ಸಂಸಾರಬೀಜಮ್—
ಸಂಸಾರಕ್ಕೆ ಕಾರಣವಾದ ಅಜ್ಞಾನ, ಕಾಮ, ಕರ್ಮ, ೨, ೩೨.

೧೪೦. ಸಂಸಾರಹೇತುಃ—
ಸಂಸಾರಕ್ಕೆ ಕಾರಣವಾದ ಅಜ್ಞಾನ, ಕಾಮ, ಕರ್ಮ, ೨೪.

೧೪೧. ಸಂಸ್ಕೃತಬುದ್ಧಿಃ —
ಶಾಸ್ತ್ರಾಚಾರ್ಯರಿಂದ ಸಂಸ್ಕಾರವನ್ನು ಹೊಂದಿದ ಬುದ್ಧಿ, ೧೦೧.

೧೪೨. ಸಂಸ್ಕೃತಾತ್ಮ—
ಸಂಸ್ಕಾರವನ್ನು ಹೊಂದಿದ ಬುದ್ಧಿಯುಳ್ಳವ, ೫೬.

೧೪೩. ಸಂಹತಾಃ—
ಒಟ್ಟುಗೂಡಿ ಮತ್ತೊಂದಕ್ಕಾಗಿ ಕೆಲಸ ಮಾಡುವ ವಸ್ತುಗಳು, ೧೩೮.

೧೪೪. ಸಙ್ಕಲ್ಪವಿಕಲ್ಪಾದ್ಯಾರಮ್ಭಕರ್ಮ—
ಸಂಕಲ್ಪ, ವಿಕಲ್ಪ—ಮುಂತಾದವುಗಳಿಗೆ ಕಾರಣವಾದ, ೯೭.

೧೪೫. ಸಙ್ಕಲ್ಪವಿಕಲ್ಪಾದಿಲಕ್ಷಣಮ್
ಹೀಗೆ ಮಾಡುನೆನೆಂದು ಕಲ್ಪಿಸುವದು, ಇದು ಇಂಥದ್ದೆಂದು ಕಲ್ಪಿಸುವದು ಮುಂತಾದ ವ್ಯಾಪಾರವುಳ್ಳ ಮನಸ್ಸು, ೪೭.

೧೪೬. ಸಙ್ಕಲ್ಪಾದಿರೂಪಮ್—
ಸಂಕಲ್ಪವೇ ಮುಂತಾದದ್ದನ್ನು ಮಾಡುವ ಮನಸ್ಸು, ೧೬೯.

೧೪೭. ಸಙ್ಕಲ್ಪಾದಿವ್ಯಾವೃತ್ತಮ್—
ಸಂಕಲ್ಪವೇ ಮುಂತಾದ ವ್ಯಾಪಾರಗಳಿಂದ ಹಿಂತಿರುಗಿದ ಮನಸ್ಸು, ೧೬೧

೧೪೮. ಸತ್ಯಮ್—
ಅವಶ್ಯವಾಗಿ ಆಗುವ ಕರ್ಮಫಲ.

೧೪೯. ಸತ್ತ್ವಮ್—
ಅಂತಃಕರಣ, ೬, ಬುದ್ಧಿ, ೧೬೬.

೧೫೦. ಸದೇಕರಸಮ್—
ಸದ್ರೂಪವೆಂಬ ಒಂದೇ ರೂಪವುಳ್ಳ ಬ್ರಹ್ಮ, ೧೪೯.

೧೫೧. ಸಮಾಧಾನಮ್—
ಮನಸ್ಸನ್ನು ಅಲುಗಾಡಿಸದೆ ಇಟ್ಟುಕೊಳ್ಳುವ ಯೋಗ, ೧೭೨.

೧೫೨. ಸಮಾಹಿತಚಿತ್ತಃ—
ಚಿತ್ತವನ್ನು ಏರುಪೇರಿಲ್ಲದಂತೆ ನಿಲ್ಲಿಸಿಕೊಂಡವನು, ೪೧.

೧೫೩. ಸರ್ವಕಾರಣಮ್—
ಎಲ್ಲಕ್ಕೂ ಕಾರಣವಾದ, ಮಾಯೆಯಿಂದ ಎಲ್ಲಾರೂಪವನ್ನೂ ತಳೆಯುವ ಬ್ರಹ್ಮ, ೧೦೬.

೧೫೪. **ಸರ್ವಕಾರಣಕಾರಣಮ್**— ಕಾರಣಗಳಿಗೆಲ್ಲ ಮಹತ್ತತ್ತ್ವವೇ ಮುಂತಾದವುಗಳಿಗೂ ಕಾರಣವಾಗಿರುವ ಅವ್ಯಾಕೃತ, ೯೮.

೧೫೫ **ಸರ್ವಬುದ್ಧಿಪ್ರತ್ಯಯಸಾಕ್ಷೀ** ಅಂತಃಕರಣದ ಪ್ರತ್ಯಯಗಳಿಗೆಲ್ಲ ಸಾಕ್ಷಿ, ಅವುಗಳು ಬೇರ್ಪಟ್ಟರೂ ಒಂದೇ ರೂಪದಿಂದ ಅವನ್ನು ನೋಡುತ್ತಿರುವ ಆತ್ಮ, ೧೦೨.

೧೫೬. **ಸರ್ವಭೂತಾನ್ತರಾತ್ಮಾ**— ಎಲ್ಲಾ ಪ್ರಾಣಿಗಳಿಗೂ ಒಳಗಿರುವ ಆತ್ಮನಾದ ಪರಮಾತ್ಮನು, ೧೪೪, ೧೪೭, ೧೪೯.

೧೫೭. **ಸರ್ವವಿಶೇಷಪ್ರತ್ಯಸ್ತಮಿತಸ್ವರೂಪಃ**— ಯಾವ ವಿಶೇಷವೂ ಇಲ್ಲದ ಸ್ವರೂಪದ ಆತ್ಮ, ೧೦೨.

೧೫೮. **ಸರ್ವಾನರ್ಥಬೀಜಮ್**— ಎಲ್ಲಾ ಅನರ್ಥಗಳಿಗೂ ಕಾರಣವಾಗಿರುವ ಅಜ್ಞಾನ, ೧೦೪.

೧೫೯. **ಸಾಕ್ಷಾದನುಭವಃ ಸಾಕ್ಷಾದ್ವಿಜ್ಞಾನಮ್**— ಬ್ರಹ್ಮವನ್ನು ನಾನೇ ಎಂದು ನೇರಾಗಿ ತಿಳಿದುಕೊಳ್ಳುವದು, ೨೪, ೧೧೬, ೧೪೯.

೧೬೦. **ಸಾಧ್ಯಸಾಧನಲಕ್ಷಣಮ್**— ಕರ್ಮಕ್ಕೆ ವಿಷಯವಾದ ಮನುಷ್ಯ ಪಿತೃಬ್ರಹ್ಮಲೋಕರೂಪವಾದ ಅನಿತ್ಯ ಸಂಸಾರ, ೩೨

೧೬೧. **ಸಾಮಾನ್ಯವಿಜ್ಞಾನಮ್**— ಸಾಮಾನ್ಯವಾಗಿ ಎಲ್ಲವನ್ನೂ ಬೆಳಗುವ ಚಿನ್ಮಾತ್ರರೂಪ, ೭೬.

೧೬೨. **ಸುಷುಮ್ನಾ**— ಒಂದು ನಾಡಿ ; ಇದರಮೂಲಕ ಉಪಾಸಕರು ಹೊರಟು ಬ್ರಹ್ಮಲೋಕವನ್ನು ಸೇರುವರೆಂದು ಶಾಸ್ತ್ರಪ್ರಸಿದ್ಧಿ, ೧೪೧.

೧೬೩. **ಸೋಪಾಧಿಕಃ**— ಉಪಾಧಿಯಿಂದ ಕೂಡಿರುವ ಆತ್ಮ, ೧೭೭.

೧೬೪. **ಸ್ವಭಾವಃ**— ಸ್ವರೂಪ, ೪೮, ೧೧೧, ೧೬೪.

೧೬೫. **ಸ್ವರ್ಗಲೋಕಃ**— ವಿರಾಡುಪಾಸನೆಯಿಂದ ಪಡೆಯುವ ಉತ್ತಮಲೋಕ, ೨೩, ೨೫, ೬೧.

೧೬೬ **ಸ್ವಾತ್ಮಪ್ರವೃತ್ತಿಸಾಕ್ಷಿಭೂತಮ್**— ತನ್ನ ಅಂತಃಕರಣದ ವ್ಯಾಪಾರಕ್ಕೆ ಸಾಕ್ಷಿಯಾಗಿರುವ ಆತ್ಮತತ್ತ್ವ ೧೫೭

೧೬೭. **ಸ್ವಾಭಾವಿಕಮ್**— ಅವಿಚಾರದೆಸೆಯಲ್ಲಿರುವ ೩೨, ೧೧೧.

೧೬೮. **ಸ್ವಾರ್ಥಃ**— ಸ್ವತಂತ್ರನಾಗಿರುವವನು, ತನಗಾಗಿರುವವನು, ೧೩೮

೧೬೯. **ಹಾರ್ದಾಕಾಶಃ**— ಹೃದಯದಲ್ಲಿರುವ ಆಕಾಶ, ಚೈತನ್ಯರೂಪಬ್ರಹ್ಮ, ೪೪.

೧೭೦. **ಹಿರಣ್ಯಗರ್ಭಃ**— ಜ್ಞಾನಕ್ರಿಯಾಶಕ್ತಿಗಳ ಸಮಷ್ಟಿಯ ಅಭಿಮಾನಿಯಾದ ಬ್ರಹ್ಮ, ೨೪, ೧೧೪, ೧೧೯, ೧೫೬.

೧೭೧ **ಹೃದಯಪುಣ್ಡರೀಕಾಕಾಶಃ। ಹೃದಯಾಕಾಶಃ**— ಹೃದಯದಲ್ಲಿರುವ ಆಕಾಶ, ಬ್ರಹ್ಮವು ತೋರುವ ಬುದ್ಧಿ, ೧೩೫, ೧೪೯.

೧೭೨. **ಹೈರಣ್ಯಗರ್ಭಂ ತತ್ತ್ವಮ್**— ಮಹತ್ತತ್ತ್ವವೆಂಬ ಹೆಸರಿನ ಸಮಷ್ಟಿಬುದ್ಧಿ, ೯೭.

೧೭೩ **ಹೈರಣ್ಯಗರ್ಭಂ ಪದಮ್**— ಹಿರಣ್ಯಗರ್ಭನ ಸ್ಥಾನ, ೬೨.

ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳಲ್ಕೆರೆಪುರ.

(ಸ್ಥಾಪಿತವಾದದ್ದು ೧೯೨೦)

ಅಧ್ಯಾತ್ಮವಿದ್ಯೆಯಲ್ಲಿ ಜನರಿಗೆ ಹೆಚ್ಚಿನ
ಆದರವನ್ನುಂಟುಮಾಡಬೇಕೆಂಬ **ಉದ್ದೇಶವುಳ್ಳ** ಈ ಸಂಸ್ಥೆಯು

೧ ಕನ್ನಡ,ಸಂಸ್ಕೃತ,ಇಂಗ್ಲಿಷು ಭಾಷೆಗಳಲ್ಲಿ **ಅನೇಕಗ್ರಂಥಗಳನ್ನು ಪ್ರಕಟಿಸಿರುತ್ತದೆ.** ಇವುಗಳಲ್ಲಿ ಭಾಷ್ಯ, ಟಿಪ್ಪಣಿ, ಪರಿಶಿಷ್ಟ- ಮುಂತಾದವುಗಳೊಡನೆ ಹೊರಕ್ಕೆ ಬಂದಿರುವ ಉಪನಿಷತ್ತುಗಳು,ಭಗವದ್ಗೀತೆ, ಬ್ರಹ್ಮಸೂತ್ರ- ಇವೂ ಸೇರಿವೆ.

ಈಗ ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲೆಗೆ ಸೇರಿದಂತೆ ಶ್ರೀಶಂಕರಾಚಾರ್ಯರವರ ಸಂಪೂರ್ಣ ಗ್ರಂಥರತ್ನಗಳನ್ನು ಸಮೂಲವಾಗಿ ಟಿಪ್ಪಣಿ ಮುಂತಾದ ಸೌಕರ್ಯಗಳೊಡನೆ ಕನ್ನಡಿಸಿ ಒಂದೊಂದಾಗಿ ಬೆಳಕಿಗೆ ಹಿಡಿಯುತ್ತಲಿದೆ.

೨. ಅಧ್ಯಾತ್ಮಸಂಬಂಧವಾದ **ಗ್ರಂಥಕಾಲಕ್ಷೇಪ, ಉಪನ್ಯಾಸಗಳು, ಪುರಾಣಶ್ರವಣ, ಅನುಷ್ಠಾನ, ಉತ್ಸವಗಳು-** ಇವುಗಳನ್ನು ಏರ್ಪಡಿಸುತ್ತಿದೆ.

ಪ್ರತಿದಿನವೂ ಗ್ರಂಥಕಾಲಕ್ಷೇಪವಾಗುತ್ತಿರುತ್ತದೆ. ಪುರಾಣಶ್ರವಣವಾಗುತ್ತಿರುತ್ತದೆ. ಪ್ರತಿ ಭಾನುವಾರವೂ ಉಪನ್ಯಾಸಗಳು ಆಗುತ್ತಿರುವವು; ಪ್ರತಿವರ್ಷವೂ ಒಂದೆರಡು ಅನುಷ್ಠಾನಗಳನ್ನು ಏರ್ಪಡಿಸಲಾಗುತ್ತಿದೆ, ಶಂಕರಸಪ್ತಾಹವೆಂಬ ತತ್ತ್ವಪ್ರಚಾರಣೆಯ ಉತ್ಸವವು ಈಗ ಹದಿನೈದು ವರ್ಷಗಳಿಂದ ವರ್ಷಕ್ಕೊಂದುಸಲ ಕರ್ನಾಟಕದ ದೇರೆದೇರೆಯ ಸ್ಥಳಗಳಲ್ಲಿ ನಡೆಯುತ್ತಿದೆ. ಹಲವು ವಿದ್ವಾಂಸರುಗಳೂ ವೈದಿಕಶಿಖಾಮಣಿಗಳೂ ಈ ಕಾರ್ಯಗಳಲ್ಲಿ ಭಾಗವನ್ನು ವಹಿಸುತ್ತಿರುವರು.

೩ ಜನರ ಉಪಯೋಗಕ್ಕೆ ಒಂದು **ಅಧ್ಯಾತ್ಮಪುಸ್ತಕಭಂಡಾರವನ್ನೂ** ಒಂದು **ವಾಚನಾಲಯವನ್ನೂ** ಇಟ್ಟುಕೊಂಡಿದೆ.

ಪುಸ್ತಕಭಂಡಾರದಲ್ಲಿ ಕನ್ನಡ, ಸಂಸ್ಕೃತ, ಇಂಗ್ಲಿಷು, ಹಿಂದಿ- ಮುಂತಾದ ಭಾಷೆಗಳ ಅಧ್ಯಾತ್ಮಗ್ರಂಥಗಳು ಇರುತ್ತವೆ. ಕಾರ್ಯಾಲಯದಲ್ಲಿ ಬಂದು ಇವುಗಳನ್ನು ಓದುವವರಿಗೆ ಸೌಕರ್ಯವನ್ನು ಕಲ್ಪಿಸುವೆವು

೪. **ಅಧ್ಯಾತ್ಮವಿದ್ಯಾನಿಲಯವೊಂದನ್ನು** ಸ್ಥಾಪಿಸಿದೆ. ಇಲ್ಲಿ ಐದುವರ್ಷಗಳ ಪಾಠಕ್ರಮವನ್ನು ಏರ್ಪಡಿಸಿದೆ. ವೇದಾಂತದ **ಸಿದ್ಧಾಂತತ್ರಯಗಳಲ್ಲಿಯೂ** ಪ್ರಪಂಚದ ಬೇರೆಬೇರೆಯ **ಮತಾಚಾರ್ಯರುಗಳ ಜೀವನಚರಿತ್ರೆ, ಉಪದೇಶಗಳು,** ಮತ್ತು ಪರಮಾರ್ಥಸಾಧನಕ್ರಮ-. ಇವುಗಳ ವಿಷಯದಲ್ಲಿಯೂ ಶಿಕ್ಷಣವನ್ನು ಕೊಡಿಸಲಾಗುವದು.

ಯೋಗ್ಯರಾದ ವಿದ್ಯಾರ್ಥಿಗಳಿಗೆ ಊಟಕ್ಕೂ ವಸತಿಗೂ ಏರ್ಪಾಡುಮಾಡುವ ಸಂಕಲ್ಪವಿದೆ

೫. **ಕಾರ್ಯಾಲಯದ ಕಟ್ಟಿಡವು** ಸಿದ್ಧವಾಗಬೇಕಾಗಿದೆ. **ಈಗ್ಗೆ** ಒಂದು ಕುಟೀರವನ್ನು ಕಟ್ಟಿಸಿದೆ; ಒಂದು ಬಾವಿಯನ್ನೂ ತೋಡಿಸಿದೆ.

ಸಂಭಾಗಣಕ್ಕೆ ಕಬ್ಬಿಣದ ತೊಲೆಗಳನ್ನು ತರಿಸಿಟ್ಟಿದೆ. ಉದಾರಮಹಾಶಯರುಗಳ ಕೆಲವರು ಸಹಾಯದ ವಾಗ್ದಾನವನ್ನೂ ಮಾಡಿರುತ್ತಿರೆ. ಸಂಸ್ಕೃತಪಾಠಶಾಲೆ, ವಿದ್ಯಾರ್ಥಿಗಳಿಗೆ

ನೀತಿಪುಸ್ತಕವೋಧೆಯ'ತರಗತಿಗಳು-ಮುಂತಾದ ಕಾರ್ಯಗಳಿಗೆ ಕಟ್ಟಡವು ಬೇಗನೆ ನಿರ್ಮಾಣ ವಾಗುವದು ಅವಶ್ಯಕವಾಗಿರುತ್ತದೆ.

೬. **ಅಧ್ಯಾತ್ಮಪ್ರಕಾಶವೆಂಬ ಮಾಸಪತ್ರಿಕೆಯು** ಹದಿನೈದು ವರ್ಷಗಳಿಂದ ನಡೆದು ಮುದ್ರಣಾಲಯದ ಸೌಕರ್ಯವಿಲ್ಲದೆ ಸದ್ಯಕ್ಕೆ ನಿಂತಿರುತ್ತದೆ. ಇದನ್ನು ಸಮಯವರಿತು ಮತ್ತೆ ಉಜ್ಜೀವನಗೊಳಿಸಬೇಕಾಗಿದೆ.

೭. **ಅಧ್ಯಾತ್ಮವಿಚಾರದ ಧರ್ಮಾರ್ಥವಾಜ್ಮಯದ ಕರಪತ್ರಗಳು** ಹಲವನ್ನು ಜನರಲ್ಲಿ ಹಂಚಲಾಗಿದೆ.

೮. ಇಲ್ಲಿ ನಡೆಯುವ ಕೆಲಸವು ಧರ್ಮಾರ್ಥವಾಗಿರುತ್ತದೆ; ಬಂದ ಹಣವೆಲ್ಲ ಧಾರ್ಮಿಕಕಾರ್ಯಕ್ಕೇ ವಿನಿಯೋಗವಾಗುತ್ತಿದೆ.

ಜನರು ಮಾಡಬಹುದಾದ ಸಹಾಯ

(ಅ) **ಪುಸ್ತಕಪ್ರಕಟನೆಗೆ:** ೨೫೦ ರೂ. ಅಥವಾ ಹೆಚ್ಚಾಗಿ ಕೊಟ್ಟವರನ್ನು **ಆಶ್ರಯದಾತರೆಂದೂ** ೧೦೦ ರೂ. ಅಥವಾ ಹೆಚ್ಚಾಗಿ ಕೊಟ್ಟವರನ್ನು **ಮಹಾಪೋಷಕರೆಂದೂ** ೫೦ ರೂ. ಅಥವಾ ಹೆಚ್ಚಿಗೆ ಕೊಟ್ಟವರನ್ನು **ಪೋಷಕರೆಂದೂ** ಕರೆಯುವೆವು **ಪೋಷಕರೂ ಮಹಾಪೋಷಕರೂ** ಇಚ್ಛಿಸಿದಲ್ಲಿ ತಾವು ಕೊಡುವಷ್ಟೂ ಹಣದ ಬೆಲೆಯ ಗ್ರಂಥಗಳನ್ನು **ಕಾರ್ಯಾಲಯದಿಂದ** ಪಡೆದುಕೊಳ್ಳಬಹುದು **ಆಶ್ರಯದಾತರಿಗೆ** ನಮ್ಮ ಗ್ರಂಥಗಳನ್ನೆಲ್ಲ **ಕಾಣಿಕೆಯಾಗಿ** ಸಮರ್ಪಿಸುವೆವು.

(ಆ) **ಕಟ್ಟಡಕ್ಕೆ:** ೫೦೦೦ ರೂ ಕೊಟ್ಟವರನ್ನು **ಮಹಾಶ್ರಯದಾತರೆಂದೂ** ೩೦೦೦ ರೂ. ಕೊಟ್ಟವರನ್ನು **ಆಶ್ರಯದಾತರೆಂದೂ** ೧೫೦೦ ರೂ ಕೊಟ್ಟವರನ್ನು **ಮಹಾಪೋಷಕರೆಂದೂ** ೬೫೦ ರೂ ಗಳನ್ನು ಕೊಟ್ಟವರನ್ನು **ಪೋಷಕರೆಂದೂ** ೧೦೦ ರೂ ಕೊಟ್ಟವರನ್ನು **ಪ್ರೋತ್ಸಾಹಕರೆಂದೂ** ಸಂಭಾವಿಸಲಾಗುವುದು ಸಹಾಯದ್ರವ್ಯವನ್ನು ಒಂದು ರಿಜಿಸ್ಟರಿನಲ್ಲಿ ಕ್ರಮವಾಗಿ ಬರೆದಿಟ್ಟಿರುತ್ತದೆ

ಕೃತಜ್ಞತಾ ಪ್ರದರ್ಶನ

ಮುಂದೆ ತೋರಿಸಿರುವ ಆಶ್ರಯದಾತರುಗಳು ಮತ್ತು ಪೋಷಕರ ಪಟ್ಟಿಯಲ್ಲಿ ಮುಖ್ಯವಾಗಿ ಕಾರ್ಯಾಲಯದ ಪ್ರಕಟನೆಗಳಿಗೆ ಉಪಹಾರ ಪತ್ರಿಕೆಗೆ ಪ್ರೋತ್ಸಾಹವನ್ನು ಕೊಟ್ಟವರು, **ಪುಸ್ತಕಭಂಡಾರಕ್ಕೆ** ಪುಸ್ತಕಗಳನ್ನು ಕೊಟ್ಟವರು, ಕಾರ್ಯಾಲಯಕ್ಕೆ ನೆಲಗಟ್ಟನ್ನು ದಾನನೀಡಿರುವವರು- ಇವರ ಹೆಸರನ್ನು ಮುಖ್ಯವಾಗಿ ಸೇರಿಸಿರುತ್ತದೆ ಕಾರ್ಯಾಲಯವು ಕಟ್ಟಡಕ್ಕೆ ಧನಸಹಾಯ ನೀಡಿರುವವರ ಹೆಸರನ್ನು ಬೇರೆಯಾಗಿ ಸಿದ್ಧವಾಗುವ ವರದಿಯಲ್ಲಿ ಪ್ರಕಟಿಸಲಾಗುವದು.

ಕಟ್ಟಡ, ವಿದ್ಯಾಲಯ, ಪುಸ್ತಕಪ್ರಕಟನೆ, ಪುಸ್ತಕಭಂಡಾರ, ಮಾಸಪತ್ರಿಕೆ, ಧರ್ಮಾರ್ಥವಾಜ್ಮಯ- ಇವುಗಳಲ್ಲಿ ಯಾವದೊಂದಕ್ಕೆ ಕಳುಹಿಸುವ ಸಹಾಯ ಧನವನ್ನೂ ಅದು ಎಷ್ಟೇ ಅಲ್ಪವಾಗಿದ್ದರೂ ಮಾಸಪತ್ರಿಕೆಯಲ್ಲಿ ಪ್ರಕಟಿಸಿ ಒಂದು ರಿಜಿಸ್ಟರಿನಲ್ಲಿ ಬರೆದಿಟ್ಟಿರುತ್ತದೆ. ಕಾರ್ಯಾಲಯಕ್ಕೆ ಹಣವನ್ನು ಕಳುಹಿಸುವವರು ತಮ್ಮ ಸಹಾಯವನ್ನು ಯಾವ ಭಾಗಕ್ಕೆ ಉಪಯೋಗಿಸಬೇಕೆಂಬುದನ್ನು ದಯವಿಟ್ಟು ತಿಳಿಸಬೇಕಾಗಿ ಕೋರಿದೆ ಅನಿರ್ದಿಷ್ಟವಾಗಿ ಬರುವ ಹಣವನ್ನು ಕಾರ್ಯಾಲಯದ ಅಧ್ಯಕ್ಷರು ಸೂಕ್ತವೆಂದು ತೋರುವ ರೀತಿಗೆ ಉಪಯೋಗಿಸುವರು.

ಕಾರ್ಯಾಲಯದ ಆಶ್ರಯದಾತರುಗಳು*

೧. ರಾಜಧರ್ಮಪ್ರಸಕ್ತ ಏ.ಆರ್. ನಾಗೇಶ್ವರ ಅಯ್ಯರ್‌ರವರು, ಬಿ.ಎ.,ಬಿ.ಎಲ್., ಹೈಕೋರ್ಟು ಜಡ್ಜ್, ಬೆಂಗಳೂರು ಸಿಟಿ.
೨. ಶ್ರೀಯುತ ಬಿ ನಂಜುಂಡಯ್ಯನವರು ಬಿ.ಎ.,ಬಿ.ಎಲ್., ಅಡ್ವೊಕೇಟ್, ಬೆಂಗಳೂರು ಸಿಟಿ.
೩. ,, ಪಿ. ಎನ್. ನರಸಿಂಹಯ್ಯನವರು, ಪ್ಲೀಡರ್, ಹೊಳೆನರಸೀಪುರ.
೪. ,, ಗರಡಿ ರಾಜಪ್ಪನವರು, ಬೆಂಗಳೂರು.
೫. ,, ಅರಕಲಗೂಡು ಶ್ರೀಕಂಠಯ್ಯನವರು, ಪ್ಲೀಡರ್, ಹೊಳೆನರಸೀಪುರ.
೬. ,, ವೈ. ಎಸ್ ಹರಿಯಣ್ಣಯ್ಯನವರು, ಗೌ॥ ಕಂಟ್ರಾಕ್ಟರು.
೭. ,, ಪಿ.ಎಸ್. ಸೂರ್ಯನಾರಾಯಣಪ್ಪನವರು, ಸರ್ವೆಯರ್, ಬೆಂಗಳೂರು.
೮. ,, ಎಚ್. ವಿ ರಂಗರಾವ್, ಜಮೀನುದಾರರು, ಹೊಳಲುಕೆರೆ.
೯. ದಿವಂಗತ ಆರ್. ಎಸ್ ಶ್ರೀನಿವಾಸಯ್ಯನವರು, ಪ್ಲೀಡರ್, ಹೊಳೆನರಸೀಪುರ.

ಮಹಾಪೋಷಕರುಗಳು

೧. ಶ್ರೀಯುತ ಆರ್. ರಾಮಸ್ವಾಮಯ್ಯನವರು, ಪ್ಲೀಡರ್, ಹೊಳೆನರಸೀಪುರ.
೨. ,, ಕೆ. ಶ್ರೀಕಂಠಯ್ಯನವರು, ಸ್ಟಾಪ್ಟಿಸ್ಟಿಕಲ್ ಆಫೀಸರ್, ಬಂಗಾಳ ನಾಗಪುರ ರೈಲ್ವೆ, ಕಲಕತ್ತ.
೩. ,, ಕೆ. ನಾರಾಯಣಸ್ವಾಮಿ, ಬಿ ಇ., ಆ॥ ಇಂಜನಿಯರ್.
೪. ,, ಜಿ. ಕೃಷ್ಣಸ್ವಾಮಿ, ಮ್ಯಾನೇಜಿಂಗ್ ಏಜೆಂಟ್, ಸಿಲ್ಕ್ ಫಿಲೇಚರ್ಸ್

ಪೋಷಕರುಗಳು

೧. ವೇ॥ ಬ್ರ॥ ಶ್ರೀ ಎಸ್. ವಿರಬದ್ರಾಸ್ತ್ರಿಗಳು, ವೇದಾಂತಶಿರೋಮಣಿ, ವೇದಾಂತಪ್ರಶಾರದ, ವಿದ್ಯಾವಾಚಸ್ಪತಿ, ಮೈಸೂರು.
೨. ಮೇ॥ ಡಿ. ಸಂಜುಂಡಶಾಸ್ತ್ರಿಗಳು, ದೊಡ್ಡಹೆಜ್ಜಾಜಿ, ದೊಡ್ಡಬಳ್ಳಾಪುರ ತಾ॥
೩. ಶ್ರೀಯುತ ಗುರುಮೂರ್ತಿಸ್ವನವರು, ನಾಟಕಮಂಡಲಿ.
೪ ,, ಎಸ್ ಪಿ ವೆಂಕಟಸುಬ್ಬಯ್ಯನವರು, ರಿ॥ ಕನ್ನಡ ಪಂಡಿತರು, ಹರಪನಹಳ್ಳಿ, ಬಳ್ಳಾರಿ.
೫. ,, ಓಂಕಾರಪ್ಪ ವೀರಭದ್ರಪ್ಪ, ಅರಳಿಕಟ್ಟಿ, ಇಲಕಲ್ಲ, ಬಿಜಾಪುರ.
೬. ,, ಶ್ರೀಗುರುಶಂಕರಾಚಾರ್ಯ ಆಶ್ರಮ, ಮಾಟಲದಿಣ್ಣೆ, ರಾಯಚೂರು ಜಿಲ್ಲಾ, ಹೈದರಾಬಾದ್ ದಖನ್.
೭. ,, ಎಸ್. ವಿ ಗಣಪತಿ, ಎ.ಎಮ್.ಐ.ಇ.ಇ., ಕನ್ಸಲ್ಟಿಂಗ್ ಇಂಜನಿಯರ್, ಮದರಾಸು.
೮ ,, ಧರ್ಮವಾಲಯ್ಯನವರು, ಮಂಗಳೂರು.
೯ ,, ಬಿ. ಹೆಚ್. ಮುನಿಸ್ವಾಮಿರಾವ್, ಬೆಂಗಳೂರು.
೧೦. ,, ಕೃಷ್ಣಗೌಡ ಹನುಮಂತಗೌಡ ಅದಪ್ಪಗೌಡರು, ಹುಲಕೋಟಿ.
೧೧ ಶ್ರೀಮತಿ ಸರೋಜಮ್ಮನವರು, ಹೊಳೆನರಸೀಪುರ.

* ಈ ಸಂಸ್ಥೆಯ ಪ್ರಸಿದ್ಧ ಆರಂಭಿಕ ಸದಸ್ಯರಾಗಿದ್ದ ಕೈಲಾಸವಾಸಿ ಮೂಗಾಸಹಳ್ಳಿ ಚೆನ್ನಬಸಪ್ಪನವರು ಮೊಟ್ಟಮೊದಲು ಆಶ್ರಯದಾತರಾಗಿ ಹೆಸರಿಸಲ್ಪಟ್ಟಿದ್ದರು.

ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ದೊರಕುವ

ಅಗ್ಗವಾದ ಮೇಲ್ತರದ ಗ್ರಂಥಗಳ ಬೆಲೆಪಟ್ಟಿ

ಅ ಧ್ಯಾ ತ್ಮ ಗ್ರಂ ಥಾ ವ ಳಿ

ಉಪನಿಷತ್ತುಗಳು

(ಸಂಸ್ಕೃತಮೂಲ, ಅರ್ಥ, ಶಂಕರಭಾಷ್ಯಾನುವಾದ, ಟಿಪ್ಪಣಿ, ಸಾರ, ಕ್ಲಿಷ್ಟಪದಗಳ ಅರ್ಥ, ವಿಷಯವಿವೇಚಕಪೀಠಿಕೆ-ಮುಂತಾದ ವಿವರಗಳೊಡನೆ)

	ಪುಸ್ತಕ	ಬೆಲೆ ರೂ ಆ ಪೈ.	ಅಂ ಹಾ ರೂ ಆ ಪೈ
೦.	ಈಶಾವಾಸ್ಯೋಪನಿಷತ್ತು (ಸಂಹಿತೋಪನಿಷತ್ತು)	೦-೬-೦	೦-೦-೯
೨.	ಕೇನೋಪನಿಷತ್ತು (ತಲವಕಾರೋಪನಿಷತ್ತು)	೦-೯-೦	೦-೧-೩
೩.	ಕಠೋಪನಿಷತ್ತು (ಕಾರಕೋಪನಿಷತ್ತು)	೧-೨-೦	೦-೧-೯
೪.	ಮುಂಡಕೋಪನಿಷತ್ತು	೦-೧೪-೦	೦-೧-೩
೫.	ಈಶ ಮತ್ತು ಮುಂಡಕ	೧-೪-೦	೦-೧-೯
೬.	ಪ್ರಶ್ನೋಪನಿಷತ್ತು	೧-೩-೦	೦-೧-೯
೭.	ಮಾಂಡೂಕ್ಯೋಪನಿಷತ್ತು (ಆಗಮಪ್ರಕರಣಸಹಿತ)	೦-೯-೦	೦-೦-೯
೮.	ಅಲಾಂತಶಾಂತಿಪ್ರಕರಣ (ಸಾದ)	೧-೨-೦	೦-೧-೯
೯.	,, (ದಪ್ಪರಟ್ಟು)	೧-೪-೦	೦-೧-೯

ಭಗವದ್ಗೀತೆ

೧೦.	ಗೀತೆ ಮೂಲ (ಪಾರಾಯಣಕ್ಕೆ)	೦-೩-೦	೦-೧-೩
೧೧.	ಗೀತೆ ಸಾರ್ಥ (ಕ್ಯಾಲಿಕೊ)	೦-೮-೦	೦-೨-೩
೧೨.	ಗೀತೆ ಸಭಾಷ್ಯ (ಅರ್ಧ ಕ್ಯಾಲಿಕೊ) ೪ ರಿಂದ ೧೨ ಅಧ್ಯಾಯಗಳು	೨-೧೨-೦	೦-೪-೩
೧೩.	ಗೀತೆ ಸಭಾಷ್ಯ (ಪೂರ ಕ್ಯಾಲಿಕೊ) ,,	೪-೮-೦	೦-೬-೦
೧೪.	ಗೀತೆ ಸಭಾಷ್ಯ (೧೩ನೆಯ ಅಧ್ಯಾಯದಿಂದ ಕೊನೆಯವರೆಗೆ)	೩-೦-೦	೦-೩-೩

ಬ್ರಹ್ಮಸೂತ್ರ

೧೫.	ಬ್ರಹ್ಮ-ಸೂತ್ರ ಸಭಾಷ್ಯ (ಅಧಿಕರಣ ೫ ಪೂರ) ಅರ್ಧಕ್ಯಾಲಿಕೊ	೪-೪-೦	೦-೬-೦
೧೬.	,, ಪೂರಕ್ಯಾಲಿಕೊ	೪-೮-೦	೦-೬-೦
೧೭.	,, ಉತ್ತಮಪ್ರತಿ	೭-೦-೦	೦-೧೦-೦

ಅಂ ಹಾ. = ಆಯಾ ಪುಸ್ತಕದ ಅಂಚೆಹಾಸಲು.

ಪ್ರಸ್ಥಾನತ್ರಯ ವಿವರಣೆ

ಪುಸ್ತಕ	ಬೆಲೆ ರೂ. ಆ. ಪೈ.	ಅಂ ಹಾ ರೂ ಆ ಪೈ.
೧೮. ಕೇನೋಪನ್ಯಾಸಮಂಜರಿ	೦-೬-೦	೦-೧-೩
೧೯. ಮುಂಡಕೋಪನ್ಯಾಸಮಂಜರಿ	೦-೧೦-೦	೦-೧-೩
೨೦. ಕೇನೋಪನ್ಯಾಸ ಮತ್ತು ಮುಂಡಕೋಪನ್ಯಾಸಮಂಜರಿ	೧-೦-೦	೦-೧ ೬
೨೧. ವೇದಾಂತದರ್ಶನ (ಬ್ರಹ್ಮಸೂತ್ರದ ಪರಿಚಯ)	೦-೫-೦	೦-೦-೯
ಪ್ರಕರಣಗಳು		
೨೨. ಉಪದೇಶಸಾಹಸ್ರಿ ಗದ್ಯಭಾಗ (ಸಾಧಾರಣ)	೧-೦-೦	೦-೧-೯
೨೩. ಉಪದೇಶಸಾಹಸ್ರಿ ಗದ್ಯ (ಅರ್ಧಕ್ಯಾಲಿಕೊ)	೧-೪-೦	೦-೨-೩
೨೪. ಉಪದೇಶಸಾಹಸ್ರಿ ಪದ್ಯ (ಅರ್ಧಕ್ಯಾಲಿಕೊ)	೧-೮-೦	೦-೨-೯
೨೫. ಉಪದೇಶಸಾಹಸ್ರಿ ಪದ್ಯ (ಪೂರಕ್ಯಾಲಿಕೊ)	೨-೦-೦	೦-೬-೦
೨೬. ಪರಮಾರ್ಥಚಿಂತಾಮಣಿ (ಅರ್ಧಕ್ಯಾಲಿಕೊ)	೩-೪-೦	೦-೬-೦
೨೭. ಪರಮಾರ್ಥಚಿಂತಾಮಣಿ (ಪೂರಕ್ಯಾಲಿಕೊ)	೪-೪-೦	೦-೬-೦
೨೮. ಉಪನಿಷತ್ತುಗಳ ಮೊದಲನೆಯ ಪರಿಚಯ	೦-೬-೦	೦-೧-೩
೨೯. ಶಂಕರಸಿದ್ಧಾಂತ (ಸಾಧಾರಣ)	೦-೮-೦	೦-೧-೩
೩೦. ಶಂಕರಸಿದ್ಧಾಂತ (ದಪ್ಪರಟ್ಟು)	೦-೧೦-೦	೦-೧-೯
೩೧. ವೇದಾಂತಬಾಲಬೋಧೆ (ಪ್ರಾತಃಸ್ಮರಣಸ್ತೋತ್ರವಿವರಣ)	೦-೫-೦	೦-೦-೯
೩೨. ವೇದಾಂತಪ್ರವೇಶಿಕೆ (ಅದ್ವೈತಪಂಚರತ್ನದ ವಿವರಣ)	೦-೬-೦	೦-೦-೯
೩೩. ಲಕ್ಷ್ಮೀನರಸಿಂಹಪಂಚರತ್ನ (ಅರ್ಥವಿವರಣಸಹಿತ)	೦-೪-೦	೦-೦-೯
೩೪. ಮೋಹಮುದ್ಗರ (ಭಜಗೋವಿಂದಸ್ತೋತ್ರ)	೦-೧-೬	೦-೦-೯
೩೫. ಸವಾರ್ತಿಕಪಂಚೀಕರಣ (ಸಾರ್ಥ)	೦-೬-೦	೦-೦-೯
೩೬. ಆತ್ಮಬೋಧೆ (ಭಾವಾರ್ಥ, ಟಿಪ್ಪಣಿ, ಪರಿಶಿಷ್ಟ)	೦-೩-೦	೦-೦-೯
೩೭. ದೃಗ್ದೃಶ್ಯವಿವೇಕ (ಅರ್ಥವಿವರಣೆಗಳೊಡನೆ)	೦-೩-೦	೦-೦-೯
೩೮. ವಾಕ್ಯವೃತ್ತಿ (ಮೂಲ. ಅರ್ಥ, ಟಿಪ್ಪಣಿ, ಪರಿಶಿಷ್ಟಸಹಿತ)	೦-೪-೦	೦-೧-೯
೩೯. ಸ್ವಾತ್ಮಪ್ರಕಾಶಿಕೆ (,, ,,)	೦-೩-೦	೦-೦-೯
೪೦. ಶಂಕರಮಹಾಮನನ	೦-೨ ೬	೦-೦ ೯
೪೧. ವೇದಾಂತಡಿಂಡಿಮ (ಭಾವಾರ್ಥಸಹಿತ)	೦-೪-೦	೦-೦-೯
೪೨. ಅಪರೋಕ್ಷಾನುಭೂತಿ (ಭಾವಾರ್ಥ, ವಿವರಣಸಹಿತ)	೦-೧೨-೦	೦-೧-೯
೪೩. ಅಪರೋಕ್ಷಾನುಭೂತಿ (ದಪ್ಪರಟ್ಟು)	೦-೧೫-೦	೦-೨-೩
೪೪. ಆತ್ಮವಿದ್ಯಾವಿಲಾಸ (ಭಾವಾರ್ಥಸಹಿತ)	೦-೪-೬	೦-೦-೯
೪೫. ಶ್ರೀರಾಮಹೃದಯ (ಅರ್ಥ- ಸಾರಸಹಿತ)	೦-೧-೬	೦-೦-೯
೪೬. ಅಧ್ಯಾತ್ಮವೆಂದರೇನು ?	೦-೧-೬	೦-೨-೯
೪೭. ವೇದಾಂತವಿಚಾರದ ಇತಿಹಾಸ	೧-೧೨-೦	೦-೨-೯

ಪುಸ್ತಕಕ್ಕೆ ಮೊಬಲಗು ಕಳುಹಿಸುವವರು ಮರೆಯದೆ ಅಂಚೆಯಹಾಸಲನ್ನೂ ಸೇರಿಸಿ ಕಳುಹಿಸಬೇಕು.

ಮ್ಯಾನೇಜರ್, ಅಧ್ಯಾತ್ಮಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ.

ಪ್ರಕರಣಗಳು

ಪುಸ್ತಕ	ಬೆಲೆ ರೂ. ಆ. ಪೈ.	ಆಂ. ಹಾ. ರೂ. ಆ. ಪೈ
೪೮. ಸಮ್ಮರುಷಿನ ಅನುಗ್ರಹ	೦-೫-೦	೦-೦-೯
೪೯ ಸನೆಗಪ್ಪಿಸಿದ್ದಿ (ತಿದ್ದಿದ ಆವೃತ್ತಿಯ ಸಂಸ್ಕರಣ)	೦-೬-೦	೦-೦-೯

ಸ್ತೋತ್ರ, ಪದ, ಪದ್ಯ.

೫೦. ವಾಗ್ದೇವೀಸ್ತೋತ್ರ (ಭಜನೆ)	(ಪ್ರತಿಗಳು ಮುಗಿದಿವೆ)	
೫೧. ಗಣೇಶಾಷ್ಟಕ (ಭಾವಾರ್ಥವುಳ್ಳದ್ದು)	೦-೩-೦	೦-೦-೯
೫೨. ಭೆಗವಚ್ಛರಣಸ್ತೋತ್ರ (ಭಾವಾರ್ಥವಿವರಣೆಗಳೊಡನೆ)	೦ ೫-೦	೦-೦-೯
೫೩. ಶಿವಕರಣಾಷ್ಟಕ (ಭಾವಾರ್ಥವಿವರಣೆಗಳೊಡನೆ	೦-೩-೦	೦-೦-೯
೫೪. ಪುಂಡರೀಂಡಿವಪಾಲಾಷ್ಟಕ (ಭಾವಾರ್ಥ ಸಹಿತ)	೦ ೩-೬	೦-೦-೯
೫೫. ಭೀಷ್ಮಸ್ತವರಾಜ (ಭಾವಾರ್ಥವಿವರಣೆಗಳ ಸಹಿತ)	೦-೪-೦	೦-೦-೯
೫೬. ಶ್ರೀಮದ್ ಭಗವದ್ಗೀತಾ (ಭಾವಾರ್ಥವಿವರಣೆಗಳ ಸಹಿತ)	೧-೩-೦	೦-೦-೯
೫೭. ಶಿವಾಪರಾಧಕ್ಷಮಾಪಣಸ್ತೋತ್ರ (ಭಾವಾರ್ಥವಿವರಣೆಗಳೊಡನೆ)	೦-೪ ೦	೦-೦-೯
೫೮. ಶಿವ [illegible] (ಭಾವಾರ್ಥವಿವರಣೆಗಳೊಡನೆ)	೦-೪ ೬	೦ ೦-೯
೫೯. [illegible] (ಭಾವಾರ್ಥವಿವರಣೆಯ ವಿಸ್ತರಣೆಯಲ್ಲಿ)	೦-೫-೦	೦-೦-೯
೬೦. ಅಧ್ಯಾತ್ಮಕೀರ್ತನಾವಳಿ (ಹಾಡುಗಬ್ಬಿನ)	೦-೪-೦	೦-೦-೯
೬೧. ಲಘುಪ್ರಾರ್ಥನೆಗಳು (ಪ್ರಿಸ್ಕೂಲ್ ಬಳಕೆ)	೦-೨-೦	೦-೦-೯
೬೨. ಏಕಾತ್ಮಸಂಪನ್ನಾಯ (ಭಾವಾರ್ಥ ಸಹಿತ)	೦-೪-೦	೦-೦-೯

ಕಥೆಗಳು

೬೩. ಪರಿಪೂರ್ಣತೆಯ ಕಥಾವಳಿ (ಸ್ಕೂಲ್ ಪಠ್ಯಕ್ರಮಕ್ಕೆ ತಕ್ಕಂತೆ ಕಂಪ್ಯೂಟರೀಕರಣ)	೧ ೫-೦	೦-೦-೯
೬೪. ವಿಲಕ್ಷಣರಾಮಾಯಣ (ಸಂಕ್ಷಿಪ್ತ)	೦-೩-೦	೦-೦-೯
೬೫. ಅಷ್ಟಾವಕ್ರ ಮಹರ್ಷಿ ಮತ್ತು ಜನಕ ಮಹಾರಾಜ (ಅಧ್ಯಾತ್ಮ ಸಂಬಂಧಿ)	೦-೨ ೬	೦-೦-೯
೬೬. ಸಮಾಧಿಮಂದಿರ (ಸಮಾಧಿ ಮಂದಿರ)	೦ ೫-೦	೦-೦-೯

ಪ್ರೌಢಶಾಲೆ ಕಾಲೇಜು ವಿದ್ಯಾರ್ಥಿಗಳಿಗೆ ಉಪನ್ಯಾಸಗಳು

೬೭. ವಿದ್ಯಾರ್ಥಿಜೀವನಕ್ಕೆ ಸ್ಫೂರ್ತಿಯ ಚಿಲುಮೆ (ಚಿತ್ರಲಿಪಿ)	೦-೫-೬	೦-೧-೩
೬೮. ಸಂಸ್ಕೃತಭಾಷೆಯ ಮಹತ್ವ (ಸಂಸ್ಕೃತಭಾಷೆಯ)	೦-೮-೦	೦-೧-೩
೬೯. ಯುವಜನತೆಯ ಕರ್ತವ್ಯಗಳು (ಯುವಜನತೆ)	(ಪ್ರತಿಗಳು ಮುಗಿದಿವೆ)	
೭೦. ಸ್ಫೂರ್ತಿಯ ಚಿಲುಮೆ (ಸ್ಫೂರ್ತಿಯ ಚಿಲುಮೆ)	೦-೧೦-೦	೦-೧-೩
೭೧. ಜೀವನಸೌಧಕ್ಕೆ ನಾಲ್ಕು ಮೂಲೆಗಲ್ಲುಗಳು	೦-೧೦-೦	೦-೧-೯
೭೨. ಸ್ಫೂರ್ತಿಯ ಚಿಲುಮೆ (ಸ್ಫೂರ್ತಿಯ ಚಿಲುಮೆ)	೦-೧೦-೦	೦-೧-೯
೭೩. ಶಿಸ್ತು ಮತ್ತು ಸಂಸ್ಕಾರ	೦-೧೪-೦	೦-೨-೩

[illegible] ಪ್ರಕಟಿಸಲು ಪತ್ರವ್ಯವಹಾರ ಮಾಡಿ

ಮೈಸೂರು, ಬೆಂಗಳೂರು ಮತ್ತು ಕಾಲೇಜುಗಳಲ್ಲಿ ಮಾರಾಟಕ್ಕಿವೆ.

ಇತರ ಪುಸ್ತಕಗಳು

೭೪.	ಧರ್ಮಪದ (ಬುದ್ಧ ಗೀತೆ)	೦ ೧೦-೦	೦-೧-೯
೭೫.	ತತ್ತ್ವಸಮಾಸ (ಸಾಂಖ್ಯಸೂತ್ರಗಳ ವಿವರಣ)	೦-೪-೬	೦-೧-೯
೭೬	ಅಧ್ಯಾತ್ಮಸೂಕ್ತಿಮಂಜರಿ ಪ್ರೌಢಾನುವಾದಸಂಸ್ಕೃತ ಪದ್ಯಗಳು	೦ ೮-೦	೦-೧ ೯
೭೭.	ಅಧ್ಯಾತ್ಮಸೂಕ್ತಿಮಂಜರಿ (ಪದ್ಯಗಳು)	೦ ೬-೦	೦-೧-೯
೭೮	ಅಧ್ಯಾತ್ಮಸೂಕ್ತಿಮಂಜರಿ ಭಾಗ ೨	೦-೪-೦	೦-೧ ೩

संस्कृत

೮೯.	मूलविद्यानिरास (श्रीशङ्करहृदयम्)	೨-೮-೦	೦-೯-೮
೮೦.	" पूर्णमयखण्डिदो	೮-೪-೦	೦-೬-೮
೮೧.	ईशावास्योपनिषत् (शांकरभाष्यसहिता)		
	सटिप्पणी मैत्रवर्णिन टिप्पणीसमेता	೦-೧-೦	೦-೦-೮
೮೨	वेदान्तडिण्डिम (भाष्यसेश्वरीसहित.)	೦-೮-೦	೦-೧-೦

English

83	**Words of Wisdom** By Sri Swami Rajeswarananda WRAPPER EDN	0 14 0	0-1-6
84	" CLOTH EDN.	1 8 0	0-6-0
85	**Narada's Aphorisms on Bhakti** With Translation and Notes	0 5 0	0-0-9
86.	**Avasthatraya or the Unique Method of Vedanta**	0 4 0	0-0-3
87.	**Minor Works of Sri Sankaracharya**	0 10 0	0-1-3
88.	**Vedanta or the Science of Reality** By. K.A. Krishnaswami Iyer B.A.	12 0 0	0-10-0

ಇತರರ ಗ್ರಂಥಗಳು

೧.	ಅದ್ವೈತಸಿದ್ಧಾಂತ	೦ ೧-೦	೦-೦-೯
೨	ಜಿಜ್ಞಾಸುಗಳ ಪೊಡಕು	೦-೪-೦	೦-೦-೯

ಮೇಲಿನ ಗ್ರಂಥಗಳ ಮಿಂಚಿನ ಹೆಚ್ಚಳವನ್ನು ಜಿಲೆಯು ತಪ್ಪಿಸಲ್ಪಟ್ಟಿದೆ

ಗ್ರಂಥಗಳಿಗೆ ಆರ್ಡರ್ ಕಳುಹಿಸುವಾಗ ಪೋಸ್ಟೇಜ್ ಮತ್ತು ರಿಜಿಸ್ಟ್ರೇಷನ್ ಫೀಜುಗಳನ್ನು ಕಳುಹಿಸಿ ಕಳುಹಿಸಲಾಗುವುದು

ನೀವು ಕೇಳುವ ರೀತಿಯ ಪುಸ್ತಕವನ್ನು ಎಷ್ಟೆ ಬೆಲೆಯ ರೀತಿಯ ಪುಸ್ತಕವನ್ನು ಕಳುಹಿಸಲೆ,

ಬೇಡವೆ? ತಪ್ಪದೆ ತಿಳಿಸಿ. ವಿಳಾಸವನ್ನು ಹೆಸರು, ಊರು, ಪೋಸ್ಟ್‌ಆಫೀಸು,

ತಾಲ್ಲೂಕು, ಜಿಲ್ಲೆ– ಇವುಗಳನ್ನು ಹುಟ್ಟಿಸಬಹುದಲ್ಲಿ ಸ್ಪಷ್ಟವಾಗಿ ಬರೆಯಿರಿ

POSTAGE & REGISTRATION EXTRA

FOR DETAIL PRICE LIST APPLY TO THE MANAGER,

THE ADHYATMA PRAKASHA OFFICE,

HOLENARSIPUR, Mysore Railway, INDIA.

ಅಧ್ಯಾತ್ಮ ಪ್ರಕಾಶ ಮುದ್ರಣಾಲಯ, ಹೊಳೆನರಸೀಪುರ

ಅಚ್ಚಿಗೆ ಸಿದ್ಧವಾಗಿರುವ ಪುಸ್ತಕಗಳು.

ಕನ್ನಡ

೧. **ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ**

ಇದರ ಎರಡನೆಯ ಸಂಪುಟ.

೨. **ನೈಷ್ಕರ್ಮ್ಯಸಿದ್ಧಿ:** ಅನುವಾದ, ಟಿಪ್ಪಣಿ, ಕನ್ನಡ ಸಾರ –ಮುಂತಾದವುಗಳೊಡನೆ

೩. **ಉಪದೇಶಸಾಹಸ್ರಿ** (ಪದ್ಯಭಾಗ):- ೧೪ನೆಯ ಪ್ರಕರಣದಿಂದ ೧೭ನೆಯ ಪ್ರಕರಣ ಪೂರ

೪. **ವಿವೇಕಚೂಡಾಮಣಿ:** ಅನುವಾದ, ಟಿಪ್ಪಣಿ, ಸಾರ, ಮುಂತಾದವುಗಳೊಡನೆ.

೫. **ಭಗವದ್ಗೀತಾರ್ಥಸರ್ವಸ್ವ:** ಗೀತೆಯ ನಾನಾವಿಚಾರಗಳ ಚರ್ಚೆಯನ್ನೊಳಗೊಂಡದ್ದು.

೬. **ನಾರದಭಕ್ತಿಸೂತ್ರ:** ಮೂಲ, ಭಾವಾರ್ಥ, ಸಂಕ್ಷಿಪ್ತ ಟಿಪ್ಪಣಿಗಳೊಡನೆ.

೭ **ತೈತ್ತಿರೀಯೋಪನಿಷತ್ತು:** ಭಾಷ್ಯ, ವಾರ್ತಿಕ, ಟಿಪ್ಪಣಿ, ಸಾರ–ಮುಂತಾದವುಗಳೊಡನೆ

೮ **ಐತರೇಯೋಪನಿಷತ್ತು:** ತೈತ್ತಿರೀಯದಂತೆ.

ಸಂಸ್ಕೃತ

೧ **ಸುಗಮಾ:** ಅಧ್ಯಾತ್ಮಭಾಷ್ಯದ ಹೊಸ ಸಂಸ್ಕೃತವ್ಯಾಖ್ಯಾನ.

೨. **ಮಾಂಡೂಕ್ಯರಹಸ್ಯವಿವೃತಿ:** ಉಪನಿಷತ್ತಿನ ಮತ್ತು ಆಗಮಪ್ರಕರಣದ ವ್ಯಾಖ್ಯಾನ.

೩. **ಕ್ಲೇಶಾಪಹಾರಿಣಿ:** ನೈಷ್ಕರ್ಮ್ಯಸಿದ್ಧಿಯ ವ್ಯಾಖ್ಯಾನ.

೪. **ವೇದಾಂತಬಾಲಬೋಧಿನೀ:** ಶ್ರೀ ಶಂಕರಾಚಾರ್ಯಕೃತ ಪ್ರಾತಃಸ್ಮರಣಸ್ತೋತ್ರದ ವ್ಯಾಖ್ಯಾನ

೫. **ಸಭಾಷ್ಯಾ ಕೇನೋಪನಿಷತ್:** ಈಶಾವ್ಯಾಸದಂತೆ ಟಿಪ್ಪಣ್ಯಾದಿಗಳೊಡನೆ.

ಇಂಗ್ಲಿಷ್

Knowledge and Ignorance

: ಅಧ್ಯಾತ್ಮಭಾಷ್ಯದ ಇಂಗ್ಲಿಷ್ ಅನುವಾದ, ಟಿಪ್ಪಣಿ ಮುಂತಾದವುಗಳೊಡನೆ

ಹಲವು ಕನ್ನಡ, ಸಂಸ್ಕೃತ, ಇಂಗ್ಲಿಷು ಪುಸ್ತಕಗಳು ಅಚ್ಚಿಗೆ ಸಿದ್ಧವಾಗುತ್ತಿವೆ.

ಭಕ್ತಚಂದ್ರಿಕೆ, ರಾಜಯೋಗ, ಕರ್ಮಯೋಗ, ವೈಶಿಷ್ಟ್ಯಪ್ರಕರಣ, ಅದ್ವೈತಪ್ರಕರಣ ಮುಂತಾದ ಗ್ರಂಥಗಳ ಎರಡನೆಯ ಮುದ್ರಣವು ಆಗಬೇಕಾಗಿದೆ.

ಹೆಚ್ಚು ತಿಳಿವಳಿಕೆ ಸಿಕ್ಕುವ ವಿಳಾಸ:—

ಮ್ಯಾನೇಜರ್, ಅಧ್ಯಾತ್ಮಪ್ರಕಾಶ ಕಾರ್ಯಾಲಯ,

ಹೊಳೆನರಸೀಪುರ ಕ.